ಚಂದಾ ನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0 [illegible] ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾಗರದ ಮಥಿಸಲು ಸುರನಿಗದವಿಂ ತಣಿಸದಾಯಿತೆ! ಮತ್ತೆ ವಿಷದ ಸುಡುತ ಬರುತಿರುವ ।
ಗರಲಕವರಂಜ್ಜದರೆ! ಸುಧೆಯನು ಮಥಿಸಿ [illegible] ಬಲ್ಲರೆ! ತೊರೆಯರು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೬ನೇ ಶುಕ್ರವಾರ ಮೇ ೧೯೩೨ (6-5-'32.) ಸಂಚಿಕೆ ೧೯

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**
ಹೆಡ್ ಆಫೀಸು:— ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರು

Authorised Capital Rs 3,50,000 Subscribed & Called up Rs 2,25,000
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000

NOTICE.

The rate of interest allowed on the undermentioned deposits will be as follows with effect from 15-4-1932.

Fixed deposits 3 months 4½ 6 and 9 months 5 1 year and above 5½ and 2 years 6 p. c.

Short term deposits 4 p. c.

(By order)

Udipi, [illegible] 4-'32 **N. ANANDA RAO**
Secretary & Manager



(Regd

ಅಮೃತಾಂಜನ.

ಶೀತ, [illegible] ತಲೆನೋವು, ವಾತ, ಸುಟ್ಟುಹೋಗುವಿಕೆ [illegible] ವೆಯೊಡನೆ ಅವುಗಳನ್ನು ಓಡಿಸುತ್ತದೆ. ಈ ಬೇನೆಗಳನ್ನು ಅಮೃತಾಂಜನವು ಅಲ್ಪ ಸಮಯದಲ್ಲಿ ಗುಣಪಡಿಸುತ್ತದೆ [illegible] ಈ ಬೇನೆಗಳ [illegible] ಎಲ್ಲಾ ಅಂಗಡಿಗಳಲ್ಲಿ ದೊರಕುತ್ತದೆ

ಗಜಕರ್ಣ ಮುಲಾಮು—(ರಾಜ ಮುದ್ರೆ [illegible]) ಗಜಕರ್ಣ ಮತ್ತು [illegible] ಅತ್ಯುತ್ತಮ ಮದ್ದು. [illegible] ಹಳೇ ಮತ್ತು ಬಹಳ ಸಮಯ [illegible] ತೆಗೆದು ಬಿಡುತ್ತದೆ [illegible]

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜಂಟರು— ಪಾ ಕಂಪೆನಿ, ಮಂಗಳೂರು

REGD.
The Popular Insurance Co. Ltd
Head Office MANGALORE S. India
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT FULLY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT
MEN

For further particulars apply to the Head Office

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ್ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್
ಬೇಂಕ್, ಲಿಮಿಟೆಡ್.
(ಜರ್ಮನಿಯಲ್ಲಿ ಸನ್ ೧೮೪೯ರಲ್ಲಿ ಸ್ಥಾಪಿಸಲ್ಪಟ್ಟುದು)

ಒಟ್ಟು ವಿಮಾ ಹಣವು ೨೮೯ ಕೋಟಿ ರೂ ಗಳಿಗಿಂತ ಹೆಚ್ಚಾಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಾಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿರುವುದು

ವಿಮಾ ಪತ್ರಿಕೆಗಳ ಮೇಲಿನ ಕಾಯ್ದೆಕಟ್ಟಳೆಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ ಬೆಳಗಾಂವ, ಕಾರವಾರ, ಸೊಲ್ಲಾಪುರ ಬಳ್ಳಾರಿ ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ಸದ್ಗುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ [illegible] ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured

PLACE YOUR LIFE ASSURANCE WITH
THE SOUTH INDIAN
Securing for your clients -
1 Low rates of Premium
2. Liberal Policy Conditions
AND FOR YOURSELF
An Agency with attractive Terms
of Commission and Salary in
The South Indian
General Assurance Co, Ltd.,
Any where in CANARA DISTRICTS &
HYDERABAD STATE
For terms of Agency please apply to —
H R K IYENGAR
Chief Agent
The S I G A Co, Ltd,
Sanyasiguddy MANGALORE
Managing Agents -
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್
ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ
ಮತ್ತು ಸೌಕರ್ಯಗಳಿವೆ!
ಪ್ರೀಮಿಯಂ ದರಗಳು ಕಡಿಮೆ!
ಶರ್ತಗಳ ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ
ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ
ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್ ಕೆ ಅಯ್ಯಂಗಾರ್
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ,
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೈ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ ಶೀತ ನೆಗಡಿ ಕೆಮ್ಮು ಅಜೀರ್ಣ ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ
(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀ ವಿಲಾಸ ರಸ
(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಗ್ರಂಥಿಗಳಿಗೂ ಗಡ್ಡೆಗೂ ಶಿಕ್ಷಿತ ಔಷಧ ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಕ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್ ಸೀತಾರಾಘವ ವೈದ್ಯ ಶಾಲಾ ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟಿವಿಗಿ ಮಾರ್ಕೆ

ಮೈಸೂರು ಸರ್ಕಾರದ ವಿದ್ಯಾ ಇಲಾಖೆ ಮತ್ತು ಕೆಲವು ಸೊಸೈಟಿಗಳಿಂದ ಶಿಫಾರಸು ಹೊಂದಿದೆ

ವೈದಿಕ ಧರ್ಮಾಭಿಮಾನಿಗಳೂ ಕನ್ನಡ ಭಾಷಾಭಿಮಾನಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ [ವರ್ಷಾರಂಭ
ಸದ್ಬೋಧ ಚಂದ್ರಿಕೆ.
೧೯೦೮ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ತಿಳಿಗನ್ನಡ
ಮಾಸ ಪತ್ರಿಕೆಯು.
ವಾ. ಚಂದಾ ರೂ. ೩] [ಸೆಂಪ್ಲ್ ಪ್ರತಿಗಳಿಗೆ

ಆಗಡಿ ಆನಂದವನದಲ್ಲಿ ಈಗ ೨೫ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠ ಶಾಲೆಗೇ ಇದರ ಆದಾಯವೆಲ್ಲ ವಿನಿಯೋಗಿಸಲ್ಪಡುತ್ತಿರುವುದು ಅಲ್ಲದೆ ಅನೇಕ ಸದ್ಬೋಧ ಪೂರ್ಣವಾದ ಲೇಖಗಳಿಂದಲೂ ಮನೋರಂಜಕ, ಸಾಮಾಜಿಕ, ಧಾರ್ಮಿಕ ಐತಿಹಾಸಿಕ [illegible] ಕರ್ನಾಟಕದ ಸಮಾಜ ಬಾಂಧವರ ಸೇವೆಯನ್ನು ಮಾಡುತ್ತಿರುವದು ನಮ್ಮಲ್ಲಿ ಶ್ರೀ ಶೇ [illegible] ಪುಸ್ತಕಗಳೂ ದೊರೆಯುತ್ತವೆ

ಮ್ಯಾನೇಜರ ಆಫೀಸು,
ಪೋ ಆನಂದವನ ಜಿ ಧಾರವಾಡ

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಠ್ಯಪಟ್ಟಿಯನುಸಾರವಾಗಿ [illegible] ಗಣಪತಿರಾವ್ ಐಗಳವರಿಂದ ಬರೆಯಲ್ಪಟ್ಟ ಎಲಿಮೆಂಟರಿ ಶಾಲಾ ಪಠ್ಯಪುಸ್ತಕಗಳು—

[illegible] ನೇ ವರ್ಷದ, [illegible] ನೇ ಮತ್ತು [illegible] ನೇ ದರ್ಜೆಯ [illegible] ನೀತಿಬೋಧೆ

[illegible] ನೇ ಮತ್ತು [illegible] ನೇ ದರ್ಜೆಯ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ಶಿಕ್ಷಣ

[illegible] ನೇ, [illegible] ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

[illegible] ನೇ ಮತ್ತು ನೇ ಸಂಖ್ಯೆಯ [illegible] ಚರಿತ್ರ ಮತ್ತು [illegible], ಹೊಸಕನ್ನಡ (೧ನೇ ೨ನೇ ಭಾಗ)— ಇವುಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಜ್ಡ ಸಾರ್ಸಪರಿಲಾ
ಶುದ್ಧ ರಕ್ತಕ್ಕೆ ರಾಮೌಷಧ ೪೫ ವರ್ಷದ ಅನುಭವ ಉಪಯೋಗಿಸಿ ನೀವೇ ಹೇಳಿದ್ದೀರಿ
ಡಾಕ್ಟರ್ ಗೌತಮರಾವ್
ಕೇಶವರವರ
ಫ್ರೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾ ಗೌತಮರಾವ್ ಕೇಶವ ಆಂಡ್ ಸನ್ಸ್,
ಧಾಕುರದ್ವಾರ ಮುಂಬಾಯಿ ೨ ಸ್ಟೋಕಿಸ್ಟ್ ಪಾ ಕಂಪೆನಿ
ರಕ್ತವ್ಯವಹಾರ ಸ್ಟ್ರೀಟ್ ಆಫೀಸು ಮೊದಲಿಯಲ್ಲಿ ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!
ಕಾಫಿ ಪ್ಲಾಂಟರರಿಗೂ ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V S KAMATH AT M T A SHARADA PRESS, MANGALORE

ಚಂದಾ ನಿರ್ಣಯ:—ವರ್ಷಕ್ಕೆ ಒಂದಕ್ಕೆ ರೂಪಾಯಿ 2-0-0 [illegible] ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾಗರವ ಮಥಿಸಲು ಸುರನಿಗರದಿಂ [illegible] ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕ್ಕಂಜಿದರೆ ಸುಧೆಯನು [illegible] ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೬ನೇ ಶುಕ್ರವಾರ ಮೇ ೧೯೩೨ (6-5-'32.) ಸಂಚಿಕೆ ೧೯

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**
ಹೆಡ್ ಆಫೀಸು:—ಉಡುಪಿ ಶಾಖೆ – ಕುಂದಾಪುರ, ಮ. ಮಂಗಳೂರು.

Authorised Capital Rs 3,50,000 Subscribed & Called up Rs 2,25,000
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅರ್ಪಿಸಿದ [illegible] ಮೂಲಧನ ರೂ 2,25,000

NOTICE.

The rate of interest allowed on the undermentioned deposits will be as follows with effect from 15-4-1932.

Fixed deposits 3 months 4½ 6 and 9 months 5 1 year and above 5½ and 2 years 6 p a

Short term deposits 4 p a

(By order)

Udipi, [illegible] 4-'32 **N. ANANDA RAO**
Secretary & Manager



ಅಮೃತಾಂಜನ.

[illegible]

ಗಜಕರ್ಣ ಮುಲಾಮು — [illegible]

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು
ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು — ಪಾ ಕಂಪೆನಿ, ಮಂಗಳೂರು

[illegible]
The Popular Insurance Co. Ltd.
Head Office MANGALORE [illegible]
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office

ನಿಮ್ಮ ಮನೆಯಲ್ಲಿನ ಆರೋಗ್ಯಕ್ಕಾಗಿ
ಈ ಅಸದೃಶವಾದ ಪಾನೀಯವನ್ನು ಸೇವಿಸಿರಿ

ದೈಹಿಕ ಮತ್ತು ಮಾನಸಿಕ ಶಕ್ತಿಯುಂದಿರಲು ನಮ್ಮ ಸಾಮಾನ್ಯ ಮತ್ತು ನಿತ್ಯದ ಆಹಾರಗಳು ಬೇಕಾದಷ್ಟು ಪರಿಪೋಷಿಸುವುದಿಲ್ಲವೆಂದು ನಿಮಗೆ ಗೊತ್ತಿರುವುದೇ? ಅಲ್ಲದೆ ನಮ್ಮ ಸಾಮಾನ್ಯ ಊಟೋಪಚಾರಗಳಿಂದಲೂ ನಮಗೆ ಸರಿಯಾದ ಪೋಷಣೆಯೂ ಸಿಗುವುದಿಲ್ಲ.

ಸ್ತ್ರೀಪುರುಷ ಬಾಲಕಾದಿಗಳ ಸದಾರೋಗ್ಯವು ಹೆಚ್ಚಾಗಿ ಅವರ ಸರಿಯಾದ ಮತ್ತು ಪರಿಮಾಣಕ್ಕೆ ತಕ್ಕ ಪೋಷಣೆಯ ಮೇಲೆ ಹೊಂದಿಕೊಂಡಿರುತ್ತದೆ. ನಮ್ಮ ಹವಾಗುಣವು ನಮ್ಮ ಶಕ್ತಿ ಮತ್ತು ಚೈತನ್ಯದ ಮೇಲೆ ವಿಶೇಷ ಪರಿಣಾಮಕಾರಿಯಾಗಿರುವಾಗ, ನಾವು ದಿನಂಪ್ರತಿ ಹೊರಗೂ ಒಳಗೂ ಆರೋಗ್ಯದಿಂದಿರಬೇಕಾದರೆ, ದೇಹ ಮೆದುಳು ಮತ್ತು ಸ್ನಾಯುಗಳು ಸರಿಯಾದ ಪೋಷಣೆಯಲ್ಲಿರಬೇಕು.

ಆದುದರಿಂದ ನಿಮ್ಮ ಅನುನಿತ್ಯದ ಸಾಧಾರಣವಾದ ಆಹಾರದೊಡನೆ 'ಓವಲ್‌ಟಿನ್'ನನ್ನು ಸೇವಿಸಿರಿ. ಇದು ನಿಸರ್ಗಸಿದ್ಧವಾದ ಆಹಾರ ಅಲ್ಲದೆ ಸಂಪೂರ್ಣವಾದ ಆಹಾರವೂ ಆಗಿರುತ್ತದೆ. ಇದು ಸ್ವಚ್ಛವಾದ ಮತ್ತು ಅತೀ ಶುದ್ಧವಾದ ಆಹಾರವನ್ನು ಧಾರಾಳವಾಗಿ ಒದಗಿಸಿಕೊಡುತ್ತದೆ. ಅಸಮಾನವೂ ಅತ್ಯುತ್ತಮವೂ ಆಗಿರುವ ಈ ಪಾನೀಯವನ್ನು ಕ್ರಮಪ್ರಕಾರ ಸೇವಿಸುತ್ತಾ ಬಂದರೆ ನೀವೂ ನಿಮ್ಮ ಕುಟುಂಬವೂ ದೃಢಕಾಯರಾಗಿ ಆರೋಗ್ಯದಿಂದಿರುವಿರಿ. ಸರಿಯಾದ ಶಾಂತವಾದ ನಿದ್ರೆಹತ್ತಲು ನಿದ್ರಿಸಹೋಗುವ ಮೊದಲು ಇದನ್ನು ಸೇವಿಸಿರಿ.

ಅತೀ ಉತ್ತಮವಾಗಿರುವ 'ಓವಲ್‌ಟಿನ್'ಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಅನುಕರಣೀಯವಾದ ಬರೇ ಮಿಶ್ರಣದ ಮತ್ತು ಸರಿಸಮ ತೂಕದಿಂದಿದ ಆಹಾರಗಳನ್ನು ತಿರಸ್ಕರಿಸಿರಿ.

OVALTINE
TONIC FOOD BEVERAGE

ಅತೀ ಶುದ್ಧ ಮತ್ತು ಅತ್ಯುತ್ತಮ—ಕೈಸೋಂಕದಿರುವಂತಹದ್ದು
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ
ಏಜಂಟರು ಜೇಮ್ಸ ರೈಟ್ ೩೦ ರಿಪನ್ ಸ್ಟ್ರೀಟ್ ಕಲ್ಕತ್ತಾ
ಮತ್ತು ಮುಂಬಾಯಿ, ಮದ್ರಾಸ್, ರಂಗೂನು ಇಲ್ಲಿ

'ಓವಲ್‌ಟಿನ್ ರಸ್ಕ'ಗಳನ್ನೂ ನಿಮ್ಮ 'ಓವಲ್‌ಟಿನ್'ನೊಡನೆ ತಿನ್ನಿರಿ. ಬಿಸ್ಕುಟುಗಳಿಗಿಂತಲೂ ಅದು ನಿಮಗೆ ಒಳ್ಳೇಯದು. ಬಹಳ ಪರಿಮಳಯುಕ್ತ ವಸ್ತು. ಸುಲಭದಲ್ಲಿ ಜೀರ್ಣವಾಗುತ್ತದೆ. ಸಂಪೂರ್ಣತೆಯುಳ್ಳದ್ದು. ಹಲ್ಲುಗಳಿಗೂ 'ಓವಲ್‌ಟಿನ್' ರಸ್ಕು ಒಳ್ಳೇಯದು. ಅದು ಹಲ್ಲುಗಳನ್ನು ಹಾಳಾಗದಂತಿರಿಸಲು ಸಹಾಯಕವಾಗುತ್ತದೆ.

OV/91

ಈಗ ತಾನೇ ಅಚ್ಚಾಗಿ
ಬಿಕರಿಗೆ ಸಿದ್ಧವಾಗಿದೆ

ಕಾಮದ ಗುಟ್ಟು

ಸುಂದರ
ಚಿತ್ರಗಳ ಸಹಿತ

ಲೇಖಕರು – ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ – ಪಂಡಿತ ತಾರಾನಾಥರವರ ಮುನ್ನುಡಿಯೊಡನೆ.

ದಾಂಪತ್ಯದ ಸರ್ವಾಂಗ ಸುಖಗಳನ್ನೂ ಭೋಗಿಸಬೇಕಾದರೆ ಇದನ್ನು ಓದಲೇ ಬೇಕು. ವಿವಾಹಿತರಿಗೂ, ಅವಿವಾಹಿತರಿಗೂ, ಗಂಡಸರಿಗೂ, ಹೆಂಗಸರಿಗೂ ಅವಶ್ಯಕವಾಗಿ ಬೇಕಾಗಿರುವ ಪ್ರಶ್ನೆಗಳ ಮತ್ತು ಉತ್ತರಗಳ ಪುಸ್ತಕ. ಬ್ರಹ್ಮಚಾರಿಗಳಿಗೂ ಉತ್ತಮ ಕೈದೀವಿಗೆ. ಅಂತರಂಗದಲ್ಲಿ ಕೊರಗಿಸುತ್ತಿರುವ ಗುಪ್ತವ್ಯಾಧಿಗಳಿಗೆ ಪಾಶ್ಚಿಮಾತ್ಯ ಪೌರ್ವಾತ್ಯ ದೃಷ್ಟಿಗಳಿಂದ ಚಿಕಿತ್ಸೆ ಮಾಡುವ ಸುಲಭ ವೈದ್ಯ. ಇಂಥಾ ಪುಸ್ತಕವನ್ನು ಇದುವರೆಗೂ ಯಾರೂ ಬರೆದೇ ಇಲ್ಲ.

ಫಲವಿಷ್ಟಿದ್ದರೂ ಬಹುಜನರಿಗೆ ಪ್ರಯೋಜನವಾಗಲೆಂದು ಬೆಲೆಯೋ ಕೇವಲ ೧೨ ಆಣೆ ಮಾತ್ರವೆ

ಅಂಚೆವೆಚ್ಚ ಪ್ರತ್ಯೇಕ

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಶನ ದೊರೆಯುತ್ತದೆ

ಬೇಗನೇ ಬರೆದು ತರಿಸಿಕೊಳ್ಳಿರಿ!

ವಿ. ಜಿ. ಪೈ. ಜನರಲ್ ಏಜನ್ಸಿ, ಬಳೇಪೇಟೆ, ಬೆಂಗಳೂರು ಸಿಟಿ.

ಪತ್ರವ್ಯವಹಾರ.

[ಪತ್ರವ್ಯವಹಾರದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.—ಸಂ. ಸ್ವ.]

ಜಿಲ್ಲಾ ಬೋರ್ಡಿನವರ ಅಂದಾಜು ಪಟ್ಟಿಯೋ ದಿವಾಳಿ ಪಟ್ಟಿಯೋ?

(ಲೇಖಕರು ಶ್ರೀ ಶಿವರಾಮ ಕಾರಂತ, ಕೋಟ)

ಇಡೀ ಪ್ರಪಂಚವು ಇಂದು ತೀರ ಹೆಚ್ಚಿನ ಆರ್ಥಿಕ ಹೋರಾಟದಲ್ಲಿ ಸಿಲುಕಿದೆ. ಅಮೇರಿಕ, ಜರ್ಮನಿ, ಇಂಗ್ಲಾಂಡು ಮೊದಲಾದ ದೇಶಗಳೂ ಸಹ ತಮ್ಮ ಖರ್ಚಿಗೆ ಸರಿಯಾದ ಹುಟ್ಟುವಳಿ ಇಲ್ಲದೆ, ಖರ್ಚನ್ನು ಬಲವಂತದಿಂದ ಕಡಿಮೆಮಾಡಬೇಕಾಗಿದೆ. ಹಾಗೆಯೇ ಮಾಡುವುದನ್ನು ಕಾಣುತ್ತಿದ್ದೇವೆ. ಇದೇ ಪರಿಸ್ಥಿತಿಯು ನಮ್ಮ ಕೇಂದ್ರಸರಕಾರಕ್ಕೂ ಮದ್ರಾಸು ಪ್ರಾಂತೀಯ ಸರಕಾರಕ್ಕೂ ಪ್ರಾಪ್ತಿಸಿದೆ. ಆದರಿಂದಾಗಿ ಅವರು ತಾವು ಸ್ಥಳೀಯ ಬೋರ್ಡುಗಳಿಗೆ ಕೊಡತಕ್ಕಂತಹ ಧನಸಹಾಯವನ್ನು ಕಡಿಮೆಮಾಡಿರುತ್ತಾರೆ. ಆದರೆ ಈ ರೀತಿಯ ಅಡಚಣೆಯು ನಮ್ಮ ದಕ್ಷಿಣ ಜಿಲ್ಲಾ ಬೋರ್ಡಿಗೆ ಮಾತ್ರ ಬಂದಿಲ್ಲವೆಂದು ಅವರ ವರ್ತನೆಯಿಂದ ತಿಳಿಯುತ್ತದೆ. ನಿಜವಾಗಿಯೂ ಸಂಗತಿಯು ಹೀಗಿದೆಯೋ ಅಥವಾ ಈ ಬೋರ್ಡನ್ನು ಅಲಂಕರಿಸುವ ಮಹಾಶಯರ ಖಾಸಗಿ ಕಿಸೆಗೆ ಅಡಚಣೆ ಬಾರದಿದ್ದುದರಿಂದ ಹೀಗಾಯಿತೋ ಎಂದು ಸಂಶಯಪಡಬೇಕಾಗಿದೆ. ಅದಕ್ಕಾಗಿ ನಮ್ಮ ಬೋರ್ಡಿನ ಈ ವರ್ಷದ ಅಂದಾಜು (?) ಪಟ್ಟಿಯನ್ನು ಪರಿಶೀಲಿಸುವ.

ನಮ್ಮ ಜಿಲ್ಲೆಯ ಸಾಮಾನ್ಯ ಆದಾಯವು ೧೯೩೧—೩೨ನೇ ಸಾಲಿಗೆ ಈ ರೀತಿಯಾಗಿತ್ತು. (ಇದರಲ್ಲಿ ವಿಶೇಷ ಗ್ರಾಂಟುಗಳೂ ಸೇರಿವೆ) ಆದಾಯ ರೂ ೫,೮೦,೨೯೦ ಖರ್ಚು ರೂ ೬,೦೧,೬೦೫. ಸುಮಾರು ೨೦ ಸಾವಿರ ರೂಪಾಯಿಗಳಷ್ಟು ಹಣವನ್ನು ಹುಟ್ಟುವಳಿಗೂ ಜಾಸ್ತಿಯಾಗಿ ವ್ಯಯಿಸಿರುತ್ತಾರೆ. ಆದರೆ ಈ ವರ್ಷಕ್ಕೆ ಮಾಡಿದ ಅಂದಾಜು ಇನ್ನೂ ವಿಚಿತ್ರವಾಗಿರುತ್ತದೆ (೧೯೩೨—೩೩ರ ಅಂದಾಜು)

ಸಾಮಾನ್ಯ ಆಯ ರೂ ೫,೩೨,೦೯೦ ಖರ್ಚು ರೂ ೫,೯೫,೪೮೦ ಅಂದರೆ ೬೩,೩೯೦ ರೂಪಾಯಿಗಳು ಕಡಿಮೆಬೀಳುತ್ತವೆ. ಮೊದಲಿನ ವರ್ಷಕ್ಕೆ ಜಾಸ್ತಿಯಾಗಿ ನಷ್ಟ ಕಾಣುತ್ತದೆ.

ಇದರಿಂದ ಬೋರ್ಡಿನವರ ಶಿಲ್ಕು ಪಟ್ಟಿಯ ಅವಸ್ಥೆಯನ್ನು ನೋಡಿರಿ.

೧೯೩೧ರಲ್ಲಿ ಶಿಲ್ಕು ರೂ, ೧,೯೭,೮೩೧ ಇತ್ತು. ೧೯೩೨ನೇ ಅಂತ್ಯಕ್ಕೆ ಅದು ರೂ ೧,೭೩,೦೦೧ಕ್ಕೆ ಇಳಿಯಿತು. ಅದು ೧೯೩೩ನೇ ಇಸವಿಯ ಪ್ರಾರಂಭದ ಶಿಲ್ಕು ದ್ರವ್ಯವಾಯಿತು. ಆದರೆ ಈ ಅಂದಾಜಿನ ಬೆಸೆಯಿಂದ ವರುಷಾಂತ್ಯಕ್ಕೆ ಉಳಿಯುವ ಶಿಲ್ಕು ರೂಪಾಯಿ ೧೧೪೪೧.

ಮುಂದಿನ ವರ್ಷಕ್ಕೆ ಇವರು ಬರೇ ೧೧೪೪೧ ಶಿಲ್ಕಿನಿಂದ ತೊಡಗುತ್ತಾರೆ. ಪ್ರತಿಯೊಂದು ವರುಷಾಂತ್ಯಕ್ಕೆ ಇದೇ ಖರ್ಚಿನ ಧೋರಣೆ ತೊಡಗಿದರೆ, ದೇವರ ದಯೆಯಿಂದ ೧,೨೦,೦೦೦ ರೂಪಾಯಿ ಸಾಲವೂ ಮಾಡಬಹುದು. ಹೆಚ್ಚು ಜನರ ಹಣ ಸಾಲ. ಆದರೆ ತೊಂದರೆ ಇಲ್ಲ. ಮುಂದೆ ಬಡಜನರ ಮೇಲೆ ತೆರಿಗೆ ಹೇರಿಸಿ ಭರ್ತಿ ಮಾಡಬಹುದು. ಇಲ್ಲದಿದ್ದರೆ ಮೋಟಾರು ಕಂಪೆನಿಯವರು ಇದ್ದಾರೆ. ಅವರ ಮೇಲೆ! ಈಗ ಡಿಸ್ಟ್ರಿಕ್ಟ್ ಬೋರ್ಡು ಗೌಳಿಗನ ಕೈಗೆ ಆದೊಂದು ದನ ಸಿಕ್ಕಿದೆ. ಅದನ್ನು ಹಿಂಡಿ, ಮುಂದೆ ಕೆಚ್ಚಲನ್ನು ಕೊಯ್ದು ಏನು ಮಾಡುವರೆಂದು ನೋಡಬೇಕು. ಈ ಮೋಟಾರು ಕಂಪೆನಿಯವರ ಮೇಲೆ ಹೊರಿಸುವ ತೆರಿಗೆಯು ಕಡೆಗೆ ಪ್ರಯಾಣಿಕರಾದ ನಮ್ಮ ಮೇಲೆ ಬೀಳುತ್ತದೆಂದು ಮರೆಯಬಾರದು.

ಈ ಪರಿಸ್ಥಿತಿಯನ್ನು, ಒಬ್ಬರು ಮೆಂಬರರು ಸೂಚಿಸಿ ೧೯೩೧ನೇ ಇಸವಿ ಸೆಪ್ಟೆಂಬರದಲ್ಲಿ ಒಂದು ರಿಟ್ರೆಂಚುಮೆಂಟ್ ಕಮಿಟಿಯ ನೇಮಕವಾಯಿತು. ಶ್ರೀಗಳಾದ ಚವ್ವಾಡ್ ಸಾಹೇಬರು, ಶಿವರಾಯ, ಸದಾಶಿವಭಟ್ಟರು, ಇವರುಗಳು ಅದರ ಸದಸ್ಯರು. ಆದರೆ ಅವರಿಗೆ ತೊಂದರೆ ಬರಲಿಲ್ಲ. ಇಂಥಾ ಅಡಚಣೆ ಪ್ರಸಂಗದಲ್ಲೂ ಈ ಸಭೆಯನ್ನು ಕರೆಯಬೇಕೆಂದು ನಮ್ಮ ಅಧ್ಯಕ್ಷರಿಗೆ ತೋರಲಿಲ್ಲ. ಅಂತಹ ಕಾಗದಗಳನ್ನೂ ಮೋಜಣಿ ಮೇಲೆರಿಸುವುದು ನೌಕರರ ದರ್ಜೆಗೆ ಸರಿಬೀಳಲಿಲ್ಲ. ಈ ರೀತಿಯಿಂದ ಅದರ ಕಾರಣವನ್ನು ಊಹಿಸಬೇಕಾಗುತ್ತದೆ. ಈ ಕಮಿಟಿಯ ನಿರ್ಣಯವಾಗುವಾಗಲೇ, ಒಬ್ಬರು ಅಸಿಸ್ಟೆಂಟ್ ಇಂಜಿನಿಯರ ಸ್ಥಾನ, ಹೆಡ್ ಓವರ್‌ಸಿಯರ ಗುಮಾಸ್ತರ ಸ್ಥಾನಗಳನ್ನು ತೆಗೆಯಬೇಕೆಂಬಿವೇ ಮೊದಲಾದ ಸೂಚನೆಗಳಿದ್ದುವು. ಈ ಕಮಿಟಿಯ ನಿರ್ಣಯದಿಂದ, ತಮ್ಮ ಆಪ್ತರಿಗೆ ಅಪಾಯಬಂದೀತೆಂದು ಸಂಬಂಧಪಟ್ಟವರು ಕಣ್ಣುಮುಚ್ಚಿರಬೇಕು. ನಮಗೆ ಬೇರೆ ಅರ್ಥವು ಈ ಅನ್ಯಾಯಕ್ಕೆ ಕಾಣುವುದಿಲ್ಲ. ತೆರಿಗೆದಾರರ ಕ್ಷೇಮವು ಇಷ್ಟಾದರೂ ಇದ್ದರೆ ಅವರು ಈ ಉದಾಸೀನವನ್ನು ಖಂಡಿತವಾಗಿಯೂ ತೋರಿಸುತ್ತಿರಲಿಲ್ಲ.

ಖರ್ಚಿನ ಒಂದೆರಡು ಚಿತ್ರವನ್ನು ತೋರಿಸುತ್ತೇನೆ. ಇಂತಹ ದುರ್ಭಿಕ್ಷ ಕಾಲದಲ್ಲಿ ನಮ್ಮ ಬೋರ್ಡಿನವರಿಗೆ ಹೊಸ ಯೋಜನೆಗಳು ಉಂಟಾಗಿವೆ. ಕಾರ್ಕಳ ಶಾಲಾ ಕಟ್ಟಡಕ್ಕೆ ರೂ ೧೫,೦೦೦ ಖರ್ಚು ಮಾಡಲು ನಿರ್ಣಯವಾಗಿದೆ. ಮುಹೂರ್ತವೇನೋ ಚೆನ್ನಾಗಿದೆ.

೬ನೇ ಪುಟಕ್ಕೆ ಮುಂದುವರಿಸಿಯದೆ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ — ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು ಅಷ್ಟಾಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡತಕ್ಕದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ — ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ
ದಶಮೂಲ ಸುಖಪ್ರದಔಷಧಿ

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧಕ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

[illegible] 'ಆರೋಗ್ಯರಹಸ್ಯ' ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು.

ಹೆಗಲಿಗೆ ಹಾಕುವ ಬೆಳೆ ಒಸ್ತ್ರ ಕಾಶೀ ಸಿಲ್ಕುಗಳು 6 ಮೊಳ ಉದ್ದ — ಮೊಳ ಅಗಲ ರೂ [illegible] ಲಿಂಗಾಯಿತು ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಮಫ್ಲರ್ ಎಲವಸ್ತ್ರ, ಹಿತ್ತಾಳೆ ಪೇಟ ಇತ್ಯಾದಿ ಉತ್ತಮ ಶಾಲು, ಬಿಸ್ಮರ್ ವಡಿ, ಧಾವಳಿ, ಕಸ್ತೂರಿ, ಕೇಸರಿ,-ಪಚ್ಚಕರ್ಪೂರ ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಜರಿ ಉಪ್ಪಿ ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ —

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ದಶಾಶ್ವಮೇಧ್ ಘಾಟ್ ಕಾಶೀ ಬನಾರಸ್ ಸಿಟಿ

* * *

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುಂಫಂಡುಗಳೂ ನಡೆಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ್

Canara Bank Limited.
ಕೆನರಾ ಬ್ಯಾಂಕ್ ಲಿಮಿಟಡ್.

Head Office — **MANGALORE**

Established July 1906 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal Kasargod Cochin Udipi Gangolli Coondapur Bombay Puttur Calicut & Alleppey

ಬ್ರಾಂಚುಗಳು —
ಕಾರ್ಕಳ, ಕಾಸರಗೋಡು ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲಪೆ

Authorised and fully paid up Capital Rs 300 000 – 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ 30 [illegible]
Reserve and other sinking Funds Rs 26 [illegible]00 – 0 – 0	ರಿಸರ್ವ ಮತ್ತು ಇತರ ಫಂಡುಗಳು ರೂ [illegible]
Amount Invested on G P Notes Rs 81[illegible] 092 – 12 0	ಗವರ್ನ್ಮೆಂಟ್ ಪ್ರಾಮಿಸರಿ ನೋಟು ಗಳಲ್ಲಿ [illegible] –12–
Rates of interest on fixed deposits at Head Office and Branches are [illegible] for [illegible] Year [illegible] Year	[illegible]

Current Account Deposits received and interest allowed [illegible] balance [illegible] and above that on multiple of Rs [illegible] from 1st Janua[illegible] to [illegible]th J[illegible] and [illegible] from 1st July to 31st December No interest will be allowed unless the deposit [illegible] less than Rs [illegible] during a period of [illegible] month ending either 30th June or 31st December in any year

Except by special arrangement no interest is allowed on [illegible] exceeding R[illegible] [illegible]0 000 in the case of Head Office and Cochin Branch and on sum[illegible] exceeding [illegible] [illegible]000 in the case of Bombay Branch [illegible] the Branches

For further particulars please apply to

Office of the Bank,
Mangalore 1 [illegible]-4—1932

K. Venkat Rao
Secretary [illegible]

The Pangal Nayak Bank, Ltd.

Head Office
Udipi

Established 19[illegible]

Branch Office
Mangalore

Authorised Capital Rs 2 00 000
Issued Capital Rs 1 75,000
Paid up Capital Rs 1 75 000
Reserve and other Funds Rs 1,80 000

NOTICE.

The rate of interest allowed on the under mentioned deposits will be as follows with effect from 19 4—1932.

Fixed Deposits 3 [illegible] 4 [illegible] 1
[illegible] 5 [illegible] 2 [illegible]

Short term deposits 4 [illegible]

Office of the Bank
Udipi [illegible] 4 32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ದುಡುಕು
ಮೂವತ್ತು	[illegible]	ಮುಗ್ಗಟ
ನಲವತ್ತು	[illegible]	ನರಳುವದು
ಐವತ್ತು	[illegible]	ಆಲಸ್ಯ
ಅರುವತ್ತು	ಹೋದಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಕು

ಉಪಯೋಗಿಸಿ ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿರಿ

ಮದನಮಂಜರಿ ಫಾರ್ಮಸಿ, 1 94 ಚೀನಾ ಬಜಾರ್ ಮದ್ರಾಸ್

ಮದನಮಂಜರಿ ಔಷಧಿಗಳ ಏಜಂಟರು — ವಿ ಜಿ ಚಂದರಾನಾ ಮಿಶನ್ ಬೀದಿ ಮಂಗಳೂರು

ಶ್ರೀಮದುಡುಪಿ ಅಷ್ಟಮಠಾಧೀಶರುಗಳವರ ಸನ್ನಿಧಿಯಲ್ಲಿ—ವಿಜ್ಞಪ್ತಿಗಳು.

ಈ ಕೆಳಗೆ ವಿವರಿಸಿರುವ ಪ್ರಾರ್ಥನೆಗಳನ್ನು ಚಿತ್ತಕ್ಕೆ ತಂದು ಅವುಗಳು ನೆರವೇರುವಂತೆ ಯುಕ್ತ ವ್ಯವಸ್ಥೆಗಳನ್ನು ಮಾಡಬೇಕಾಗಿ ಸವಿನಯ ವಿನಂತಿಯೊಡನೆ ಈ ಮೂಲಕ ನಾನು ತಮ್ಮಗಳ ಬಳಿಯಲ್ಲಿ ಬೇಡಿಕೊಳ್ಳುತ್ತೇನೆ. ಇಂದಿನಿಂದ ೬ ದಿವಸದೊಳಗೆ ನನ್ನ ಈ ಕೋರಿಕೆಗೆ ಪ್ರತ್ಯುತ್ತರವು ದೊರಕಲಾರದಷ್ಟು ನಾನು ಹತಭಾಗ್ಯನಾಗಿ ಹೋದ ಸಂದರ್ಭದಲ್ಲಿ ನನ್ನ ಹಿಂದೂಮತವು ಸತ್ಯಾಗ್ರಹ ತೊಡಗುವಂತೆ ನನ್ನನ್ನು ಪ್ರೇರೇಪಿಸುತ್ತದೆ

ಜನತೆಯ ಸಲುವಾಗಿ ಮಠಾಧಿಪತಿಗಳು ಈ ಕೆಳಗಿನವುಗಳನ್ನು ನೆರವೇರಿಸುತ್ತೇವೆಂದು ವಾಗ್ದಾನ ಮಾಡತಕ್ಕದ್ದು

೧ ಉಪವಾಸ ದಿನಗಳನ್ನು ಬಿಟ್ಟು ಉಳಿದ ಪ್ರತಿಯೊಂದು ದಿವಸದಲ್ಲಿಯೂ 'ಹಿಂದೂ ಸನಾತನ ಧರ್ಮ'ವನ್ನು ಕುರಿತು ತಮ್ಮಗಳ ಸನ್ನಿಧಿಯಲ್ಲಿ ಬೋಧನೆಗಳನ್ನು ಕೊಡುವಂತೆಯೂ ಹಿಂದೂಮತದ ವಿವಿಧ ಶಾಖೆಯ ಮತ್ತು ವಿವಿಧ ತತ್ವಾನುಯಾಯಿಗಳ ಸಂಯೋಜನೆಯಾಗಲನುಕೂಲವಾಗುವಂತಹ ವಿಷಯಗಳನ್ನೆತ್ತಿ ಉಪನ್ಯಾಸಗಳು ನಡೆಯುವಂತೆಯೂ ಬೇರೆ ಬೇರೆ ಕಡೆಯ ಹಿಂದೂಮತ ಪ್ರಚಾರಕರನ್ನು ಇಲ್ಲಿಗೆ ಆಮಂತ್ರಿಸಿ ಪ್ರಚಾರ ಕಾರ್ಯ ನೆರವೇರುವಂತೆಯೂ, ಅವಶ್ಯಕವಾದ ವ್ಯವಸ್ಥೆಯನ್ನು ಮಾಡತಕ್ಕದ್ದು

೨ ನೈತಿಕ ಬೆಂಗೋಲುಬಲವಾಗಿದ್ದ ವಿದ್ವಾಂಸರನ್ನು ಚುನಾಯಿಸಿ ಮತಪ್ರಚಾರ ಕಾರ್ಯಕ್ಕಾಗಿ ತಕ್ಕ ತರಬೇತಿಯನ್ನು ಕೊಟ್ಟು ಅವರು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಹಿಂದೂಮತ ಪ್ರಚಾರ ಮಾಡುವಂತೆ ವ್ಯವಸ್ಥೆಯಾಗಬೇಕು,

೩. ವಿಧ ವಿಧ ಮತ ಗ್ರಂಥಗಳ ಪುಸ್ತಕ ಭಂಡಾರವನ್ನೂ ವಾಚನ ಮಂದಿರವನ್ನೂ ತೆರೆಯಬೇಕು

೪ ಕನ್ನಡ ಮತ್ತು ತುಳು ಭಾಷೆಗಳಲ್ಲಿ ಭಗವದ್ಗೀತೆಯ ಭಾಷಾಂತರವನ್ನು ಸಂಧ್ಯಾವಂದನಾದಿ ಇತರ ಆಹ್ನಿಕ ಪುಸ್ತಕಗಳನ್ನೂ ಸಮೂಹಲಾಭಾರ್ಥವಾಗಿ ಬರೆಯಿಸಿ, ಜನರಿಗೆ ಧರ್ಮಾರ್ಥವಾಗಿಯಾಗಲೀ ಅತ್ಯಲ್ಪ ಮೌಲ್ಯ ಪಡೆದಾಗಲೀ ಹಂಚತಕ್ಕದ್ದು.

೫. ಜನಸಾಮಾನ್ಯದ ಪ್ರಯೋಜನಾರ್ಥವಾಗಿ ಪ್ರಾಣಾಯಾಮ ಶಿಕ್ಷಣ ಕ್ಲಾಸುಗಳನ್ನು ತೆರೆದು ಪ್ರತಿ ದಿನವೂ ಪ್ರತ್ಯಕ್ಷ ರೀತಿಯಿಂದ ಆಸನಾದಿ ಕ್ರಮಗಳನ್ನು ತೋರಿಸುತ್ತಾ, ಜನರು ಕ್ರಮವಾಗಿ ಬರುವಂತೆ ಪ್ರೋತ್ಸಾಹಿಸಬೇಕು.

೬ ತಮ್ಮ ನೈತಿಕ ನಡತೆಯೂ, ಬಾಳಿನ ಚಾಳಿಯೂ ಉತ್ತಮ ತರವಾಗಿ ಬರುವಂತೆ ಯತ್ನಿಸುವುದಾಗಿಯೂ, ತಮ್ಮ ಆಶ್ರಮ ಧರ್ಮವನ್ನು ನಿಷ್ಠೆಯಿಂದಲೂ ಶ್ರದ್ಧೆಯಿಂದಲೂ ಪರಿಪಾಲಿಸುತ್ತಾ ಬರುವುದಾಗಿಯೂ ದೃಢ ಸಂಕಲ್ಪ ಮಾಡಿಕೊಳ್ಳಬೇಕು

೭ ಮಠಗಳ ಸಾಂಪತ್ತಿಕ ವಿನಿಯೋಗದ ಕುರಿತು ತಕ್ಕ ನಿಬಂಧನೆಗಳನ್ನು ಮೊದಲಾಗಿ ನಿಶ್ಚಯಮಾಡಿಕೊಳ್ಳಬೇಕು.

೮ ಮಠದ ಆಯವ್ಯಯದ ಲೆಕ್ಕಪತ್ರಗಳನ್ನು ಮಾನ್ಯತೆ ಹೊಂದಿದ ವಿಚಕ್ಷಣರಾದ ಲೆಕ್ಕಪರಿಶೋಧಕರ (ಒಡಿಟರ) ಪರೀಕ್ಷೆಗೆ ಕೊಟ್ಟು ಅವರಿಂದ ಪರಿಶೀಲಿತವಾದ ಆಯವ್ಯಯದ ವರದಿಯನ್ನು ಜನತಾಭಿಪ್ರಾಯಕ್ಕಾಗಿ ಪ್ರಕಟಿಸಬೇಕು

೯ ಈಗ ಇರುವ ಸಂಸ್ಕೃತ ಕಾಲೇಜನ್ನು ಅದರ ಆಡಳಿತ ಬೋರ್ಡಿನವರು ತೋರಿಸಿಕೊಡುವ ರೀತಿಯಲ್ಲಿ ವೇದಾಂತ ವಿಶ್ವವಿದ್ಯಾನಿಲಯವಾಗಿ ಮಾರ್ಪಡಿಸಿ ಅದರಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳಲ್ಲದವರಿಗೂ ಪ್ರವೇಶ ಕೊಡಬೇಕು.

೧೦. ಕೆಳಗಿನ ಮತ್ತು ಮೇಲಿನ ತರಗತಿಯ ಬಡವಿದ್ಯಾರ್ಥಿಗಳಿಗಾಗಿ ಮುಖ್ಯ ಬಡವಿದ್ಯಾರ್ಥಿ ವೇತನ ನಿಧಿ ಯೊಂದನ್ನು ಸ್ಥಾಪಿಸಬೇಕು

ಇತಿ ತಮ್ಮಗಳ ಅತ್ಯಂತ ವಿಧೇಯ ಸೇವಕ

ಮೊಕ್ಕಾಂ ಉಡುಪಿ, (Sd) A Subbaraya Sarma,
೧೯—೪—೩೨. ಹಿಂದೂ ಮತೋಪದೇಶಿ

ಯಾರ್ಕ್ಸವರು ತಪಸೀಲು [illegible] ರಿಜಿಸ್ಟರ್ ವಗೈರೆಯ ಮಾಹಿತಿಯನ್ನು ಮಂಗಳೂರು [illegible] ಲೇನಿನಲ್ಲಿರುವ ನನ್ನ ಮನೆಯಲ್ಲಿ ಏಲಮಿನ ತಾರೀಕಿನ 2 ದಿವಸಗಳ ಮುಂಚಿತ ವರೆಗೆ ಪಡೆಯಬಹುದು

ಫಳ್ನೀರು, ಮಂಗಳೂರು, M S. Pais.
ತಾ ೨೦—೪—೧೯೩೨ LIQUIDATOR

ಕಲಿಯುವವರಿಗೂ ಕಲಿಸುವವರಿಗೂ ಮನೋರಂಜಕವಾದ

ಪದ್ಯ ಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

(ಶ್ರೀ ಟಿ ಎನ್ ಲಕ್ಷ್ಮಣ ಪೈ ವಿರಚಿತ)

ಕ್ರಯ: ೦—೩—೬

ಮಕ್ಕಳ ಮೆಚ್ಚಿನ ಕಥೆಗಳನ್ನೂ, ನೀತಿಪಾಠಗಳನ್ನೂ ಲಲಿತವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಒಳಗೊಂಡ ಕವಿತಾಗ್ರಂಥ!

ಮದರಾಸು, ಮುಂಬಾಯಿ ಸರಕಾರದವರು ಇದನ್ನು ಪಠ್ಯಪುಸ್ತಕವಾಗಿ ಮಂಜೂರು ಮಾಡಿದ್ದಾರೆ

ಹೆಚ್ಚಿನ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳ ಕಮಿಷನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—

ಹರಿಹರ ಛಾಪಖಾನೆ, ಪುತ್ತೂರು. (ದ. ಕ)
ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು.

ನೋಟೀಸು

ಮಂಗಳೂರು ಸ್ಮಾಲ್ ಕಾಸ್ ಕೋರ್ಟಿನಲ್ಲಿರುವ [illegible] ಅಲ್ಬುಕರ್ಕ [illegible] (1) ಪಿ ಎಸ್ ಪಿ ಅಲ್ಬುಕರ್ಕ, (2) ಜೆ ಪಿಟ್ಟ ಎಸ್ ಅಲ್ಬುಕರ್ಕ, 3) ಜೆ [illegible] ಅಲ್ಬುಕರ್ಕ ವ ತ್ತು (4) 3ನೇ [illegible] ಅಲ್ಬುಕರ್ಕರ ಹೆಂಡತಿ ಹಿಲ್ಡಾ ಅಲ್ಬುಕರ್ಕ ಎಂಬ 4 ಜನರು ತಮ್ಮ ಹೆಸರಿನ ಆಸ್ತಿಗಳನ್ನು ವಗೈರೆ ಮಾರ್ಟ್‌ಗೇಜ್ ಮಾಡಿ ತಮ್ಮ ಸಾಲಗಳನ್ನು [illegible] ಮಾಡುವ [illegible] ಅಲೆಕ್ಸ್ ಅಲ್ಬುಕರ್ಕರ ಮಗ [illegible] ಪಿ ಎಸ್ ಅಲ್ಬುಕರ್ಕ ನಿಕೊಲಸ್ [illegible] 1 ಗ್ರೀನ್ ಫ್ರೆಂಡ್ [illegible] ಸಿಟ್ರಿಯನ್ [illegible] ವ ನಾನು [illegible] ನನ್ನ [illegible] ಟ್ರಸ್ಟಿಯಾಗಿ ನೇಮಿಸಿ ತಾರೀಕು 17—2—193[illegible] ರಲ್ಲಿ [illegible] ನಂಬ್ರ 549 ನೇಗೆ ರೆಜಿಸ್ಟ್ರಿ [illegible] ಕಂಪೋಜಿಶನ್ ಡೀಡನ್ನು ಆದರೆ [illegible] ತೋಟ [illegible] ತಾರೀಕು 16, 17 [illegible] ನಿಶ್ಚಯಿಸಿರುವುದರಿಂದ [illegible] ಪಡಕೊಳ್ಳುವುದಕ್ಕೆ ಅಪೇಕ್ಷೆ,

೩ನೇ ಪುಟದಿಂದ ಮುಂದುವರಿಸಿದುದು

ಇನ್ನು ಹೈಸ್ಕೂಲ್ ವಿದ್ಯಾಭ್ಯಾಸದ ಸ್ಥಿತಿಯನ್ನು ವಿಚಾರಿಸುವ ಶಾಲೆಯಿಂದ ಹೊರಗೆ ಬರುವವರಿಗೆ ಭಿಕ್ಷಾಪಾತ್ರೆಯೇ ಗತಿ. ಇದರೂ ಶಾಲೆಗೆ ಸೇರಿಸುವ ಮಕ್ಕಳ ಸಂಖ್ಯೆಯನ್ನು ಮಿತಪಡಿಸುವ ಹಾಗಿಲ್ಲ. ಅವರಿಗೆ ಕೊಡುವ ಹೆಚ್ಚಿನ ಉಪಾಧ್ಯಾಯರ ಸಂಖ್ಯೆಗೂ ಮಿತಿಯಿಲ್ಲ. ಅವುಗಳ ಅಂದಾಜು ಪಟ್ಟಿಯನ್ನು ನೋಡಿರಿ ೧೯೩೩ ೩೪ನೇ ಸಾಲಿಗೆ ಬೋರ್ಡಿಗೆ ವಿದ್ಯೆಯ ಬಾಬತು ಹುಟ್ಟುವಳ ರೂಪಾಯಿ ೫೩,೬೦೦. (ಇದರಲ್ಲಿ ೪೫,೦೦೦ದಷ್ಟು ಮುನಿಸಿಪಾಲಿಟಿಯಿಂದ) ಆದರೆ ಖರ್ಚು ರೂಪಾಯಿ ೧,೧೫,೫೧೦ ಅಂದರೆ ಅರ್ಧ ಲಕ್ಷಕ್ಕೆ ಮಿಕ್ಕಿ ಸಾರ್ವಜನಿಕ ಫಂಡುಗಳಿಂದ ಸೇರಿಸುತ್ತಾರೆ. ಬರೇ ಒಂದು ಲಕ್ಷ ರೂಪಾಯಿ ಸೋಲುವ ಬ್ಯಾಂಕಿನಿಂದ ಲಾಭವಿದೆ. ಏಕೆ ಈ ಕೆಲಸ ಮಾಡಬಾರದು? ಆದರೆ—ಶಾಲೆಯಲ್ಲಿ ಔದ್ಯೋಗಿಕ ಶಿಕ್ಷಣ ಕೊಡಬೇಕೆಂಬುವ ವಿಚಾರದಲ್ಲಿ ಮಾತ್ರ ಅವರ ಸೂಕ್ಷ್ಮ ಬುದ್ಧಿಯು ಹರಿಯದು. ಹೈಸ್ಕೂಲುಗಳಲ್ಲಿ ಔದ್ಯೋಗಿಕ ಶಿಕ್ಷಣವು ಜಿಡ್ಡು ಹಿಡಿದುದಾಗಿದೆ. ಅದರ ಕಲಿಸುವ ಏರ್ಪಾಡಿಲ್ಲ. ಇದರ ಬಗ್ಗೆ ಒಂದು ಕಮಿಟಿಯು ನೇಮಿಸಿಯಾಗಿ, ಅದರ ಸೂಚನೆಯಂತೆ ೬ ತಿಂಗಳ ಕಟ್ಟು ಎಲ್ಲಾ ಕರಡು ದಪ್ತರದಲ್ಲಿ ಸೇರಿರಬೇಕು. [illegible] ದೇವತೆಗಳ ಕಣ್ಣಿಗೆ ಅದು ಸರಿ ಬೀಳಲಿಲ್ಲ. ಇನ್ನು ಹಾಗೆಯೇ [illegible] ವಿಚಾರ

ಇನ್ನೊಂದು ಬಗ್ಗೆ ಮಾಡಿದ ಲಾಭಕಾರಿ ಸಂಸ್ಥೆಗಳೆಂದು ಉಮೇದಿನ ಗಳಿಗೆಯಲ್ಲಿ ಅಲ್ಲಲ್ಲಿ ತೆಂಗಿನ ತೋಟಗಳನ್ನು ಮಾಡಿದರು. ೧೦ ವರುಷದಿಂದ ಅಲ್ಲಲ್ಲಿ ಹಣ ಸುರಿದು ಈಗ ಎಷ್ಟಷ್ಟೇ ಬಿಟ್ಟುಬಿಟ್ಟರೂ ಈ ವರುಷವು ೧೩೦೦ ರೂಪಾಯಿಯ ಲುಕ್ಸಾನು ಎಂಬುದು! ಇದು ನಿಲ್ಲುವುದಕ್ಕೆ ಇನ್ನೂ ಈ ತೋಟಗಳ ತೆಂಗಿನ ಸಸಿಗಳು ಪೂರ್ಣ ಬೆಳೆಯಬೇಕು.

ಇದರಿಂದೆಲ್ಲ ನೋಡುವಾಗ ನಮ್ಮ ಬೋರ್ಡಿನ ಆಡಳಿತೆಯು ಹೊರೆದು ಕಾಣುತ್ತದೆ. ಅನ್ಯ ದೇಶಗಳಲ್ಲಾಗಿದ್ದರೆ ಮತದಾರರು 'ದಯವಿಟ್ಟು ನಿಮ್ಮ ಸದಸ್ಯತನಕ್ಕೆ ರಾಜೀನಾಮೆ ಕೊಡಿರಿ' ಅನ್ನುತ್ತಿದ್ದರು. ಆದರೆ ನಮ್ಮದು 'ಕುರಿ ಜನರ' ನಾಡು.

ಎರಡು ಬಾರಿ ನಾನೂ ಈ ಬೋರ್ಡು ಸಭೆಗೆ ಹೋಗಿದ್ದೆ. ಹಿಂದಿನ ಮೆಂಬರರಲ್ಲಿ ಮುಖ್ಯಲು ಮೂರು [illegible] ಗಳೇ ಪ್ರತಿಬಾರಿಯೂ ಎದೆಗುಂದದೆ ೧೧—೧೨ ರ ವರೆಗೆ ಬೈದಾಡುತ್ತಿರುತ್ತಾರೆ. ಅವು ಎರಡು ಗಂಟೆಗಳಲ್ಲಿ ಧ್ವನಿ! ಇದರೊಳಗೆ, [illegible] ಕೆಲವರಿಗೆ ಹಸ್ತಾಂತರಿಸಿದ್ದೂ ಆಗಿರುತ್ತವೆ. 'ಇಂತಹ [illegible], ಸಾರ್ವಜನಿಕ ಪ್ರಶ್ನೆ ವಿಷಯವಾಗಿ ಆಗುವಾಗ ಯಾರೂ ಗಮನಿಸುವುದಿಲ್ಲವೆಂದು ಕಂಡು ವ್ಯಸನವಾಗುತ್ತದೆ. ದೊಡ್ಡ ಸದಸ್ಯರು, ನಮ್ಮ ಮೆಂಬರರೀಚಿತ್ತು!' ಆದರೆ ಹೋದೊಡನೆ ಗಡಿಯಾರದ ಮುಳ್ಳು ನೋಡುತ್ತ ಕುಳಿತಿರುವುದರಿಂದ ಇಂತಹ ವಿಷಯಗಳು ಇವರ ಕಣ್ಣಿಗೆ ಕಾಣುವುದಿಲ್ಲ

ನಮ್ಮ ಜಿಲ್ಲಾ ಆಡಳಿತೆಯನ್ನು ಸ್ವಲ್ಪ ತಿದ್ದಿದರೆ ಸಾಕಷ್ಟೇ ಹೊರಟೀತೆಂದು ನನಗೆ ಸಂಶಯ. ಊರಲ್ಲಿ ಬರಗಾಲವಿದ್ದು ತೆರಿಗೆ ದಾರರು ಉಪವಾಸವಿದ್ದರೂ, ಮಾನ್ಯ ಮೆಂಬರರು ಕ್ಷೇಮದಲ್ಲಿದ್ದಾರಷ್ಟೆ — ಸಂತೋಷ. ಮುಂದಿನ ಚುನಾವಣೆಗೆ ಇವರೇ ಓಟನ್ನು ಬೇಡಲು ಬಂದಾರು

* * *

ENCOURAGE INDIAN COMPANIES & INDUSTRIES
SWADESHI MEANS PROVIDING FOOD FOR STARVING MILLIONS
DEAL IN INDIAN GOODS AND KEEP INDIAN MONEY IN INDIA

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.

(REGISTERED UNDER COMPANY'S ACT [illegible])
ಕಾಸರಗೋಡು, ದ ಕನ್ನಡ

ಮೂಲಧನ ರೂಪಾಯಿ ೫೦,೦೦೦ [illegible] ರೂ ೧೦ ರಂತೆ ೫೦೦೦ ಷೇರುಗಳು
ಸ್ವದೇಶವಾಸಿ ದೇಶವನ್ನು ವೃದ್ಧಿಗೊಳಿಸುವ ತೆ [illegible] ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ, ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯ ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿದ ಒಂದು ಕಂಪೆನಿಯು ಇಲ್ಲವೆಂದು ಇಷ್ಟು ಮುಂಚೆ ಯಾರೂ ಹೇಳಬೇಕಾಗಿಲ್ಲ. ಸ್ವದೇಶಿ ಸ್ಟೋರುಗಳು ಆಭಿಮಾನವುಳ್ಳ ವ್ಯಕ್ತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ. ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ. ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗುವ ಸಾಮಾನುಗಳಲ್ಲಿ ವ್ಯಾಪಾರ ಮಾಡುವುದೆಂದು ನಿಜವಾಗಿ [illegible]
ಖಾದಿ ಮತ್ತು ಸ್ವದೇಶಿ ಸಾಮಾನುಗಳ ರಖಂ ಮತ್ತು ಚಿಲ್ಲರೆ ವ್ಯಾಪಾರಕ್ಕೆ ಸಿದ್ಧವಿದೆ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ ಮೆನೇಜಿಂಗ್ ಡೈರೆಕ್ಟರ್
ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್, ಕಾಸರಗೋಡು, ದ ಕ



ಆಶ್ಚರ್ಯವಲ್ಲ — ಮೋಸವಿಲ್ಲ ಬರೇ ರೂ ೩—೧೪—೦ಕ್ಕೆ

ಈ ಕೆಳಗಿನ ಸಾಮಾನುಗಳನ್ನು ಇನ್ನು ತರ ಸಾಮಾನುಗಳನ್ನು ಕೊಡುತ್ತೇವೆ ೬ ಬಾಟ್ಲಿ ನಮ್ಮ ಪ್ರಸಿದ್ಧ [illegible] ೩—೪ [illegible] ದಿನ ಸುಗಂಧವನ್ನೀಯುತ್ತದೆ ೧ ಪೆಟ್ಟಿಗೆ [illegible] ೧ ಪೆಟ್ಟಿಗೆ [illegible] ೧ ಪೆಕೆಟ್ [illegible] (ಕತ್ತಿ), ೧ ಪೆನ್ಸಿ ಫೌಂಟನ್ ಪೆನ್ನು ೧ ಜೋಡು [illegible] ೧ ಜರ್ಮನ್ [illegible] ೧ ಡಜನ್ [illegible] ವಾಚ್ (ಸರಪಳಿ ಸಮೇತ) ಅಥವಾ ನಿಕ್ಕಲ್ [illegible] ನೆಪೋಲಿಯನ್ [illegible] ವಾಚ್ ಎಲ್ಲಾ ಸಾಮಾನುಗಳಿಗೆ ಒಟ್ಟು ರೂಪಾಯಿ ೩—೧೪—೦ ಮಾತ್ರ ಪೇಕಿಂಗ್ ಮತ್ತು ಪೋಸ್ಟೇಜ್ ೧ ರೂಪಾಯಿ ಪ್ರತ್ಯೇಕ

ಸೂ —ಆರ್ಡರ್ ಕೊಡುವಾಗ ನಿಮ್ಮ ಪೂರ್ಣ ವಿಳಾಸ ಕೊಡಿರಿ ಎಲ್ಲಾ ನಿಜವಾದ ವಾಚುಗಳಿಗೆ ೫ ವರ್ಷ ಗ್ಯಾರಂಟೀ—ನಿಮಗೆ ಭರವಸೆ ಕೊಡುತ್ತೇವೆ

ಕೂಡಲೇ ಈ ವಿಳಾಸಕ್ಕೆ ಬರೆಯಿರಿ— ಆರ್. ಎನ್. ಬ್ರದರ್ಸ್ ಎಂಡ್ ಕೊ.
ಟಪ್ಪಾಲ್ ಪೆಟ್ಟಿಗೆ ನಂಬ್ರ 6712, S. B. ಕಲ್ಕತ್ತಾ.

1. Good Riding Quality.
2. Gripping Tread
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE
Seiberling's Exclusive Quality.



TRIED & PROVED.

USE A Seiberling Tube
IN
A Seiberling Tire.

You cannot find a better combination.

ಕರಣೀಕರಿಗೆ ಒಂದೇ ಸ್ವರ!

ಪಾರ್ಲಿಮೆಂಟಿನ ಮೆಂಬರ ಮಹಾಶಯರಿಗೆ ಅತಿಪ್ರಿಯವಾಗಿರುವ ಸ್ವರವೆಂದರೆ, ಭೋಜನಸೂಚಕ ಗಂಟೆಯ ಧ್ವನಿ. ಇನ್ನು ಅದಕ್ಕೆ ಬದಲಾಗಿ ಸರ್ ಸಾಮುವೇಲ್ ಹೋರರು ಇಂಡಿಯಾ ವಿಷಯವಾಗಿ ಭಾಷಣಮಾಡುವಾಗ [illegible]ಡುವ ಅವರ ಕೊರಲಸ್ವರವೂ ಅಷ್ಟೇ ಇಂಪಾಗಿ ಹೃದಯಾನಂದಕರವಾಗಿರಬೇಕೆಂದು ಊಹಿಸಬೇಕಾಗಿದೆ. ಎಷ್ಟು ಸಲ ಬಾರಿಸಿದರೂ ಈ ಧ್ವನಿಯೊಂದೇ, ಕನ್‌ಸರ್ವೇಟಿವರೇ ಬಹಳವಾಗಿರುವಾಗ ಅವರ ಕಿವಿಗೊಪ್ಪುವ ವಚನಗಳೇ ಅವರ ನಾಲಗೆಯಿಂದ ಹೊರಡುವುವು. 'ಇಂಡಿಯಾದ ಜನರಲ್ಲಿ ಸರಕಾರದ ಮೇಲೆ ವಿಶ್ವಾಸವು ಪ್ರಬಲವಾಗಿ ಎಂದಿನಂತೆ ಇದೆ, ಆರ್ಡಿನೆನ್ಸುಗಳು ಅಗತ್ಯವಿರುವಷ್ಟು ದಿನ ಇರುವುವು, ಕಾಂಗ್ರೆಸ್ಸಿನವರೊಡನೆ ಒಪ್ಪಂದ ಮಾಡುವವರು ನಾವಲ್ಲ, ನಮ್ಮೊಡನೆ ಸಹಕರಿಸುವವರೊಡನೆ ನಾವು ಸಹಕರಿಸುವೆವು, ನಡೆಸುವೆವೆಂದು ಕೊಟ್ಟ ಮಾತಿನ ಹಿಂತೆಗೆವವರಲ್ಲ, ಇಂಡಿಯಾದವರ ಪಕ್ಷವಾಗಿ ನಿಂತು ಮಾತಾಡುವವರು ತಮ್ಮ ಇಷ್ಟು ಸಹಾನುಭೂತಿಯನ್ನು ಅಲ್ಲಿನ ಕ್ರಾಂತಿಕಾರರ ಕೊಂದಿಕ್ಕಿದ ಆಫೀಸರುಗಳ ಹೆಂಡಿರುಮಕ್ಕಳ ಕಡೆಗೆ ಕೊಂಚ ತೋರಲೂ ಇಟ್ಟುಕೊಳ್ಳಲಿ, ಪೋಲೀಸರೇ ಮೊದಲಾದವರು ಎಷ್ಟೋ ದೂರುವವರಿದ್ದರೂ, ವಿವೇಕದಿಂದಲೇ ವರ್ತಿಸುತ್ತಿದ್ದಾರೆ' ಎಂದರು. ಇವೇ ಅಭಿಪ್ರಾಯಗಳು ತಿಂಗಳು ತಿಂಗಳೂ ಹೊರಬೀಳುತ್ತಿವೆ. ಕಾರಣಪುರುಷರಾದ ಕರಣೀಕರು ಇನ್ನೆಂತು ನುಡಿವವರಂತೆ!

ಬಂಗಾಳದಲ್ಲೂ ಗುಂಡಿಗೆ ಒಂದೇ ಧ್ವನಿ.

ಇದು ವಿಪರೀತ. ಹೋರರ ಬಾಣಗಳನ್ನು ಸೈರಿಸಬಹುದು, ಸಹಿಸಬಹುದು. ಈ ಬಂಗಾಳೀ ಗುಂಡುಗಳನ್ನು ಸೈರಿಸುವುದು ಸುಲಭವಾಗಿಲ್ಲ. ಆರ್ಡಿನೆನ್ಸು ಜ್ಯಾರಿಗೆ ಬಂದು, ಸಂಶಯವಿಟ್ಟವರನ್ನೆಲ್ಲ ಕೈದುಮಾಡಿದರೂ ಆಗಾಗ ಈ ಕ್ರಾಂತಿಕಾರರು ಗುಂಡಿಕ್ಕಿ ಒಬ್ಬೊಬ್ಬ ಉಚ್ಚ ಆಫೀಸರರನ್ನು ಕೊಂದಿಕ್ಕುತ್ತಾರಲ್ಲ! ಕಾಂಗ್ರೆಸ್ಸಿನವರೂ ಇತರರೂ ಎಷ್ಟೋ ನಿವೇದಿಸಿ ನಿಂದಿಸಿ ಬಹಿಷ್ಕರಿಸಿ ಖಂಡಿಸಿದರೂ, ಗುಂಡು ಹಾರುವುದು ತಡೆದಿಲ್ಲ. ಶಾಂತ ವಾತಾವರಣವಿರಲಿ, ಅಹಿಂಸೆಯೇ ಪ್ರಬಲ ಉಪಾಯವಿರಲಿ ಎಂದೆಷ್ಟು ಬೋಧಿಸಿ ಸಾಧಿಸಿದರೂ ಗುಂಡು ಹಾರುವುದೆಂದು, ಇದಕ್ಕೆ ಕಾರಣಗಳೇ ಬೇರೆ ಇರಬೇಕು. ಇತ್ತಕಡೆ [illegible] ಮಾಡಬಲ್ಲ ಹೊಸ ಗವರ್ನರರು ಬಂಗಾಳಕ್ಕೆ ಕಳಿಸಿರುವರು. ಅವರು ಈ ಗುಂಡಿನಾಟ ಅರಿಯದವರಲ್ಲ. ಹಾಗಂತ, ಕ್ರಾಂತಿಕಾರರಂತೆ ಇವರು ಗುಂಡಿಗೂ ಇನ್ನು ದಂಡನೀತಿಗೂ ಕೈಹಚ್ಚದೆ, ದೃಢನಿಶ್ಚಿತರಂತೆ ಶಾಂತಿಯಿಂದ [illegible] ಜನಾಂಗವನ್ನೂ ದೇಶವನ್ನೂ ನಡೆಸುವರು. ಇವರಲ್ಲಿ ಜನರಿಗೆ ವಿಶ್ವಾಸವಿದೆ, ಪಾರ್ಲಿಮೆಂಟಿಗೆ [illegible] ಸ್ವರದಲ್ಲಿ ಕ್ರಾಂತಿಕಾರರ ಯಾವ ಉದ್ದೇಶಗಳೂ ಈಡೇರುವಂತೆ, ಪೂರ್ಣ ವಿಚಾರ ನಡೆಸಿ ಇವರು ಜನಾಂಗಕ್ಕೆ ಶಾಂತಿಯನ್ನೂ ಜೀವನವನ್ನೂ ಪಾಲಿಸುವರಾಗಿಯೂ, ಇಂಡಿಯಾದ ಹೆಸರಿಗೆ ಈ ಗುಂಡಿನ ಹಾಗಿಯೂ ಒಡೆಯುವಂತೆ ಇವರಾದರೂ ಶಾಸನ ಮಾಡಿ ಕೀರ್ತಿ ತರುವರೆಂದೂ ನಂಬಬೇಕಾಗಿದೆ.

ಲೆನ್ಸಬರಿಯವರದೂ ಅದೇ ಮಾತು.

'ಗದ್ದುಗೆ ಪ್ರಜೆಗಳಿಗೆ ಕೊಡಬಹುದಾಗಿರುವ ಬಹುಮಾನ ದಾನಾದಿಗಳಲ್ಲಿ — ಪ್ರಜೆಗಳು ತಮ್ಮ ಸ್ವಯಂ ನಿರ್ಧಾರದ ಮೂಲಕ ತಮಗೇ ಬೇಕಾದುದನ್ನು ಆರಿಸಿಕೊಳ್ಳಲು ಬಿಡುವಷ್ಟು ಉಚ್ಚ ಬಹುಮಾನವು ಬೇರೊಂದಿಲ್ಲ. ಬ್ರಿಟಿಷರವರಲ್ಲಿ ಸೇರಿರುವ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳ ಸಾಲಿನಲ್ಲಿ ಇಂಡಿಯವು ತನಗೆ ಬೇಕಾಗಿರುವುದನ್ನು ಸ್ವೇಚ್ಛೆಯಾಗಿ ವರಿಸಬಲ್ಲದೆ? ಅಲ್ಲಿ ಮುಂಬರಿಗುವ ನಿರ್ಣಯಗಳನ್ನು ಅಸೆಂಬ್ಲಿಯಲ್ಲಿ ಚರ್ಚೆಗೊಳಪಡಿಸಿ, ವಿನ್ ಸರಕಾರೀ ಮತ್ತು ಚುನಾಯಿತ ಮೆಂಬರರ ವೋಟುಗಳ ಆಧಾರದಿಂದ ಮಾತ್ರ ಪುನಃ ನಿರ್ಧರಿಸಿಕೊಳ್ಳುವುದು ಅಗತ್ಯ. ಹೋರರ ರಾಜತಂತ್ರವು ಜಯಹೊಂದದು, ಭಾರತೀಯರು ಒಂದೂ ಆಯುಧವಿಲ್ಲದೆ ಸೈರಿಸಿದರಷ್ಟು. ಸಾಮಾನ್ಯವಾಗಿ ಹಿಂಸೆಗೆ ತೊಡಗದೆ ಹೇಗೆ ಸಹಿಸಿಕೊಂಡಿರುವರು, ಅವರನ್ನು ಕೊಂಡಾಡಬೇಕು. ಮುಂದೆ ತಮ್ಮ ಸರಕಾರವು ಎಂತಹದಿರಬೇಕೆಂದು ಅವರೇ ಮಾತ್ರ ನಿರ್ಧರಿಸಿಕೊಳ್ಳಬಲ್ಲರಲ್ಲದೆ ಇತರರಲ್ಲ.'—ಇವರಿಗೆ ಸೇರಿಸಿ ಹೇಳಿದ ಮೆ| ಮೆಕ್ಸ್ಟನರು, 'ಸ್ತ್ರೀಯರನ್ನು ಜೈಲಿನಲ್ಲಿ ಬಂಧಿಸಿ, ೧೫ ವರ್ಷದ ಹುಡುಗರನ್ನು ಚಡಿ ಹೊಡೆಸಿದುದೂ ಬ್ರಿಟಿಷರಿಗೆ ಗೌರವಕರವಲ್ಲ; ಮೀರತ್ತಿನ ಕೈದಿಗಳನ್ನು ಮೂರು ವರ್ಷ ತನಿಖೆ ನಡೆಸುತ್ತಿರುವುದೂ ನ್ಯಾಯವಲ್ಲ' ಎಂದರು. ಆದರೆ ಹೋರರು ಉತ್ತರ ಕೊಟ್ಟ ಕೂಡಲೆ, ಇವರು ಮೌನ ಧರಿಸಿ ಆಡಿದುದೇ ವ್ಯರ್ಥವಾಯಿತೆಂದು ಕೊರಗಿರಬೇಕು. ಏಕೆ? ಕೇಳುವವರೇ ಅಲ್ಲಿ ಕಡಿಮೆ.

ಈ ಶಿಫಾರಸುಗಳಿಂದ ಫಲವೇನು?

ಕ್ರೈಸ್ತ ಗುರುಗಳಲ್ಲಿ ಮುಖ್ಯರೆನಿಸಿದವರಷ್ಟೋ ಮಂದಿ ಎಲ್ಲೆಲ್ಲಿಂದಲೂ, ಯಥಾರ್ಥ ಕ್ರೈಸ್ತರಾಗಿ ಈಗ ಜೀವಿತರಾಗಿರುವ ಕೆಲವರಲ್ಲಿ ಗಾಂಧೀಜೀಯವರೊಬ್ಬರು ಎಂದು ಘೋಷಿಸಿರುವುದು ಪ್ರಕಟವಾಗಿದೆ. ಬೇಗಮ್ ಫತ್ಮಾ ಶರೀಫಾ ಇಜ್ಜತ್ ಶಾಹಾ ಎಂಬ ಮುಸ್ಲಿಮ ಮಹಿಳೆಯು ಈಗ ಮುಂಬಾಯಿಯಲ್ಲಿದ್ದು, ಮುಸ್ಲಿಮ ಧರ್ಮದ ಮುಖ್ಯ ಮೂಲ ತತ್ವಗಳನ್ನು ಅನುಸರಿಸಿ ಬಾಳಿರುವವರಲ್ಲಿ ಗಾಂಧೀಜೀಯವರೇ ಅಗ್ರಗಣ್ಯರು ಎಂದಿರುವರು. ಕ್ರೈಸ್ತ ಅಥವಾ ಮುಸ್ಲಿಮ ಧರ್ಮ ತತ್ವಗಳನ್ನು ಗಾಂಧೀಜಿಯವರು ಅನುಸರಿಸುವರೆಂದ ಕಾರಣ, ಅವೆರಡು ಧರ್ಮಗಳು ಸಮಾನವಾಗಿ ಉತ್ತಮ ತತ್ವಗಳನ್ನು ಒಳಗೊಂಡಿವೆ ಎಂದರ್ಥವಾಗುವುದೇ ವಿನಾ, — ಸದ್ಧರ್ಮವನ್ನೇ ಕೈಕೊಂಡು ಸಾಧುಜೀವನ ನಡೆಸುವ ಅಪ್ರತಿಮ ಪುರುಷನು, ರಾಜಕಾರಣ ಬಲ್ಲವನೆಂದು ಅರ್ಥವಾಗುವುದಿಲ್ಲ ಎಂದೇ ಸಲವರ ಟೀಕೆಯಾಗಿದೆ.

ಬ್ರಿಟಿಷರಲ್ಲಿ ಸ್ವದೇಶೀ ಪ್ರಚಾರ

ನಮ್ಮಲ್ಲಿನ ಸ್ವದೇಶೀ ಪ್ರಚಾರಕರು ಇಂಗ್ಲಂಡಿನ ರೀತಿಯನ್ನು ತಿಳಿಯುವುದು ಮಾರ್ಗದರ್ಶಕವಾಗಿರಿದು. ಅಲ್ಲಿ 'ಎಂಪಾಯರ್ ಮಾರ್ಕೆಟಿಂಗ್ ಬೋರ್ಡ್' ಎಂಬ ಬ್ರಿಟಿಷ ಸಾಮ್ರಾಜ್ಯದ ಸರಕುಗಳನ್ನು ಜಾಹೀರು ಮಾಡಿ ಪ್ರಕಟಿಸಿ ವ್ಯಾಪಾರಾನುಕೂಲತೆಯ ಗೊತ್ತು ಹಚ್ಚುವ ಒಂದು ಖಾತೆಯೇ ಸರಕಾರದ ಅಂಗವಾಗಿದೆ. ಸರಕಾರದ ಎಲ್ಲ ಇಲಾಖೆಗಳೂ ಇತರ ಸಂಸ್ಥೆಗಳೂ ಇದನ್ನು ಪ್ರೋತ್ಸಾಹಿಸುತ್ತಿವೆ. ಎಲ್ಲ ಮ್ಯುನಿಸಿಪಾಲಿಟಿಗಳೂ ಬೋರ್ಡುಗಳೂ ಅವುಗಳ ಮೆಂಬರರೇ ಮೊದಲಾದುವೂ ವರ್ತಕ ಸಂಘಗಳೂ ಬಾಯ್‌ಸ್ಕೌಟರೂ ಗರ್ಲ್ ಗೈಡ್ಸ್ ಸಂಸ್ಥೆಯೂ ಶಾಲಾಧಿಕಾರಿಗಳೂ ಎಲ್ಲರೂ ಈ ಸ್ವದೇಶೀ ವಸ್ತುಪ್ರಚಾರಕ್ಕೆ ಸಹಾಯಮಾಡುವವರಾಗಿದ್ದಾರೆ. ಬೇರೆ ಬೇರೆ ಪರಿಮಾಣದ ನಲ್ವತ್ತು ಲಕ್ಷ ದೊಡ್ಡ ಪ್ರಕಟಣಗಳನ್ನು ಛಾಪಿಸಿ, ದೇಶದ ಪ್ರತಿ ಮೂಲೆಯಲ್ಲೂ ಸಂದುಗೊಂದುಗಳಲ್ಲೂ ಸರಕಾರದ ಆಫೀಸುಗಳಲ್ಲೂ ಟಪ್ಪಾಲುಕಚ್ಚೇರಿ ನಾಟಕಶಾಲೆ ರೈಲ್ವೆ ಸ್ಟೇಶನು ಬಸ್ ಮತ್ತು ಟ್ರೇಮ್ ಗಾಡಿಗಳು ಎಲ್ಲ ಮುಖ್ಯ ಕಟ್ಟಡಗಳು ಮೊದಲಾದುವಲ್ಲೂ ಬಹಿರಂಗವಾಗಿ ಪ್ರದರ್ಶಿಸಿರುವರು. ಸರಕಾರವೂ ಅರ್ಧ ಸರಕಾರೀ ಸಂಸ್ಥೆಗಳೆಲ್ಲವೂ ಈ ಪ್ರಚಾರಕ್ಕೆ ಬೆಂಬಲವಾಗಿವೆ, ಮಾತ್ರವಲ್ಲದೆ, ತಾವೇ ಈ ಪ್ರಚಾರಕಾರ್ಯ ಮಾಡುತ್ತಲಿವೆ.

ದೇಶಭಾಷೆಗಳ ಕಡೆಗೆ ಲಕ್ಷ್ಯ.

ಎಸ್ ಎಸ್ ಎಲ್ ಸೀ ಪರೀಕ್ಷೆಯು ಇಂಗ್ಲಿಷ ಅಲ್ಲದೆ ಇತರ ವಿಷಯಗಳನ್ನು ವಿದ್ಯಾರ್ಥಿಯು ತನ್ನ ಮಾತೃಭಾಷೆಯಲ್ಲಿಯೇ ಲಿಖಿತ ಉತ್ತರಿಸಬಹುದು ಎಂಬ ಸೂತ್ರವನ್ನು ಮದ್ರಾಸು ಸರಕಾರವು ಹಾಕಿಕೊಟ್ಟಿದೆ. [illegible]ರಲ್ಲಿ ಎರಡು ಶಾಲೆಗಳಿಂದ ಮಾತ್ರ ಈ ರೀತಿಯಲ್ಲಿ ಮಾತೃಭಾಷೆಯಲ್ಲೇ ಪರೀಕ್ಷೆ ಕೊಟ್ಟರು. ಇದಿಷ್ಟಾಗ, [illegible]ರಲ್ಲಿ [illegible] ಶಾಲೆಗಳು ಮಿಕ್ಕ ವಿಷಯಗಳಿಗೆ ಇಂಗ್ಲಿಷನ್ನು ತೊರೆದಿವೆ ಎಂಬುದು ತೃಪ್ತಿಕರವಾಗಿದೆ. ಸುಮಾರು ೬೦೦ ಹೈಸ್ಕೂಲುಗಳಿವೆ, ಇವುಗಳೆಲ್ಲ ಅಥವಾ ಹಲವು ಶಾಲೆಗಳಲ್ಲದರೂ ದೇಶಭಾಷೆಗಳ ಕಡೆಗೆ ಲಕ್ಷ್ಯ ಹರಿಸಲಿ, ಇದೇ ರಾಮಾಶಾಯದಲ್ಲಿ ಇನ್ನು ಹತ್ತು ವರ್ಷಗಳಲ್ಲಿ ದೇಶದ ವಿದ್ಯಾಭ್ಯಾಸದ ಸ್ಥಿತಿಯು ಉತ್ತಮವಾಗುವುದಲ್ಲದೆ, ವಿದ್ಯಾರ್ಥಿಗಳಿಗೂ ಪರೀಕ್ಷೆಯ ಗಂಡಾಂತರಮಯ ಅಭ್ಯಾಸವು ಸುಲಭವಾಗುವುದು. ನಮ್ಮ ಜಿಲ್ಲೆಯ [illegible] ಸೆಕೆಂಡರಿ ಶಾಲೆಗಳಲ್ಲಿ ಈಗನಿಂದಲೂ ದೇಶಭಾಷೆಯಲ್ಲೇ ಶಿಕ್ಷಣ ಕೊಡಲು ಪ್ರಯತ್ನಗಳೇಕೆ ಸಾಗುವುದಿಲ್ಲ? ಒಂದು ತಾಸಿನಲ್ಲಿ ಇಂಗ್ಲಿಷಿನಲ್ಲಿ ಅರ್ಥಸ್ಪರ್ಶ ಹೇಳಿಕೊಡಬಹುದಾದ ಪಾಠವನ್ನು ೧೫ ನಿಮಿಷಗಳಲ್ಲೇ ಪೂರ್ಣ ಅರ್ಥವಾಗುವ ಹಾಗೆ ಕಲಿಸಲೂ ಕಲಿತುಕೊಳ್ಳಲೂ ದೇಶಭಾಷೆಗಳು ಉಪಯೋಗವಾಗಿವೆ. ವಿದ್ಯಾಧಿಕಾರಿಗಳು ಈ ಕಡೆಗೆ ವಿಚಾರವಿಟ್ಟಾರೆ? ಅಥವಾ ಇನ್ನೊಂದು ಸರಕಾರೀ ಬಾತ್ಮಿಯದ ಫರ್ಮಾನು ಬೇಕೆ?

* * *

ನೋಟಗಳು

NOTES

ಪ್ರಪಂಚವೆಲ್ಲವೂ ಮಾಯೆ ಎಂಬುದಕ್ಕೆ ಶ್ರೀ ಶಂಕರಾಚಾರ್ಯರೇ ಕೊಟ್ಟಿರುವ ಉಪಮೆಗಳು ವ್ಯರ್ಥ. ಮಿಥ್ಯಾ ಪ್ರಪಂಚದ ಉತ್ಕೃಷ್ಟ ಉದಾಹರಣೆಗಳನ್ನು ಈ ಯುಗದಲ್ಲಿ ಸರಿಯಾಗಿ ಹೇಳಬಲ್ಲವರು ಶ್ರೀ ಸಾಂಕೀ ಆಚಾರ್ಯರು. ಅವರ ಹೇಳಿಕೆ ಅಷ್ಟು ಸತ್ಯ.

• • • •

ಇವರ ಸಹಾಧ್ಯಾಯಿಗಳೂ ಸಹಯೋಗಿಗಳೂ ನಮ್ಮ ಕರಣೀಕ ಹೋರರು. ಇವರು ಸಾಂಕೀಯವರಂತೆ ಆಯನದ ಬಣ್ಣವನ್ನು ನುಡಿಯುವವರಲ್ಲ. ಪ್ರತಿ ಸಲ ನುಡಿವುದೇ ಮಿಥ್ಯಾ ಪ್ರಪಂಚದ ವಿಷಯ.

• • • •

ಕ್ರಮ ವ್ಯವಸ್ಥೆ ಪ್ರಗತಿ ಇವುಗಳ ಸಲುವಾಗಿ ಆರ್ಡಿನೆನ್ಸುಗಳು ಜ್ಯಾರಿಗೆ ಬಂದಿವೆ. ಪತ್ರಿಕೆಗಳು ೫೦,೦೦೦ ಮಂದಿ ಜೈಲು ಸೇರಿರುವಾಗ ಯಾವ ಕ್ರಮ ಸ್ಥಾಪನೆಹೊಂದಿದೆ? ಎಂಥ ಪ್ರಗತಿಗೆ ಇವು ಸಹಾಯವನ್ನಿತ್ತಿವೆ?

• • • •

ಹೋರರು ಧರ್ಮ ಬಂತ್ಯದಲ್ಲಿ ೫೩,೦೦೦ ಮಂದಿ ಜೈಲು ಸೇರಿದರೆನ್ನುತ್ತಾರೆ. ಕ್ರಮ ಸ್ಥಾಪನೆಯಾಗದೆ ಪ್ರಗತಿ ಸಾಧ್ಯವಲ್ಲ, ಪ್ರಗತಿ ಸ್ಥಾಪನೆಯಾಗದೆ ಕ್ರಮವಿಲ್ಲ — ಈ ಚಕ್ರತರ್ಕವೂ ತರ್ಕ-ಕ್ರಮವೂ ಪಾರ್ಲಿಮೆಂಟಿನ ಮೆಂಬರರ ತಲೆ ತಿರುಗುತ್ತಲೇ ಇದೆ.

• • • •

ಇಂಡಿಯಾದ ಪ್ರತಿನಿಧಿಯಾಗಿ ಲೇನ್ಸಬರಿಯವರು ಬಹಳ ವಾದಿಸಿದರು. ಇವರಿಗೆ ಸಮಾಧಾನ—ನೀವೇ ಮಂತ್ರಿಕೂಟದಲ್ಲಿದ್ದಾಗ ಇದಕ್ಕೆ ಒಂದು ಸಂಖ್ಯೆಯ ಜನರು ಜೈಲಿನಲ್ಲಿದ್ದರಲ್ಲ! ಎಂದ ಹೋರರು ಚಪ್ಪನೆ ಉತ್ತರ ಒಪ್ಪಿಸಿಬಿಟ್ಟರು.

• • • •

ಮಹಾತ್ಮಾಜೀಯವರನ್ನು ಫಕೀರನೆ ಎನ್ನುಗಡೆ ಮಾಡುವ ರೀತಿ ಎಂದು ಬ್ರಿಟಿಷ ಪತ್ರಿಕೆಗಳು ಬೆದರಿವೆ. ಅವರೊಡನೆ ಸಂಧಾನ ಮಾಡ ಮಾಡಿ ಎಂದು ಇಷ್ಟರ ಭ್ರಾಂತಿ. ಸರಕಾರವು ಎಲ್ಲ ಕಡೆ [illegible] ತಪ್ಪದೆ ನಡೆಯುವಂತೆ ಚಾರ್ಜುಹಿಲ್ಲರು ಮಾಡಿದರೆಂದು ಅವರ ಕೂಂಪಾಟ—ಎಂದರೆ, ಈ ವಿಚಾರಗಳನ್ನು ಹೋರರ ಗೋಚರಕ್ಕೆ ಇಟ್ಟಿದ್ದಾರೆ?

• • • •

ಮದ್ರಾಸ ಸರಕಾರವೂ—"ಕಾಂಗ್ರೆಸ್ ಚಟುವಟಿಕೆಯು ಶಾಂತ ಹೆಸರಿಗೆ ತಕ್ಕಷ್ಟು ಇಲ್ಲ ಎನ್ನುವುದು ತೈಲಗೆ ಹೇಳಿಸಿರುವರು [illegible]. ಹೋದ ವರ್ಷದ ದುಬಾರಿಯೋ, ಅರ್ಧವೋ.

• • • •

ಕಾಂಗ್ರೆಸ್ ಚಟುವಟಿಕೆಯು ಪಾಸು?' ಎಂದು ಸ್ಟೇಟ್ಸ್‌ಮನ್ ಪತ್ರಿಕೆಯು ಪಂಜಾಬಿಯಲ್ಲಿ ಬರೆದಿದೆ. ಹೆದ್ದಾರಿಗಳಲ್ಲೂ ಪಾರ್ಲಿಮೆಂಟುಗಳಲ್ಲೂ ನಾಟಕಗಳಾಗುವಾಗ, ನೋಟಕರ ತೃಪ್ತಿಗೆ ಪಾತ್ರಗಳೂ ಬೇಕಾಗುವುದೆಂದು ಮುಂಬಾಯಿ ಅನುಭವದ ಉತ್ತರ.

• • • •

ಸುಮ್ಮನೆ ಕಾಂಗ್ರೆಸ್ ಹೂಡುವುದೆಂದು ಪೋಲೀಸರ ಒಂದೊಂದು ಬಗೆಯಿಂದ ಕಾದಿದ್ದೂ ಸಾಗಲೇ ಇಲ್ಲ. ಇಂತಹ ತಮಾಷೆಗಳಿಗಾಗಿ ಇನ್ನೂ ಸಮಯ ವ್ಯಯಿಸದೆ ತಲೆ ಸರಿಯುದ್ಧ ನಾಯಕರು ಮುಂದೆ ಬಂದು ಅವಿವೇಕಿಗಳನ್ನೂ ಹಾನಿಕಾರಿಗಳನ್ನೂ ಎದುರಿಸಬೇಕು' ಎಂದೂ ಸ್ಟೇಟ್ಸ್‌ಮನ ಆಮಂತ್ರಣವಿದೆ.

• • • •

ತಲೆ ಸರಿಯಿರುವ ನಾಯಕರು ಹೊರಗೆ ಬಹಳವಾಗಿಲ್ಲ. ಇದ್ದರೂ ಮುಂದೆ ಬಂದು ಅವಿವೇಕಿಗಳನ್ನೂ ಹಾನಿಕಾರಿಗಳನ್ನೂ ಎದುರಿಸುವುದಿರಲಿ, ಹಾಗೆ ಎದುರಿಸುವ ವಿಚಾರ ಆಲೋಚನೆ ಮಾಡಿದರೂ ದೋಷಹೋಗುವರೆಂಬ ಅಂಜಿಕೆ ಅವರಿಗೂ ಇದೆ.

• • • •

ಡಿವೆಲರರು ಬ್ರಿಟಿಷ ಸರಕಾರಕ್ಕೆ ಬರೆದ ಲೇಖ ನೋಡಿದರೆ ಐರ್ಲಂಡು ಮತ್ತೊಂದು ಇಂಡಿಯವೇ ಆಗಿದೆಯೋ ಎನ್ನುವಂತಿದೆ.

* * *

ಹಿಂದೂದೇಶದ ನಿಜವಾದ ಪರಿಸ್ಥಿತಿ.

ಒಬ್ಬ ಆಂಗ್ಲೇಯನ ನಿಷ್ಪಕ್ಷಪಾತ ಅಭಿಪ್ರಾಯ

ಹಿಂದೀಯರನ್ನು ಬ್ರಿಟಿಷರು ಯಾವ ದೃಷ್ಟಿಕೋನದಿಂದ ನೋಡುತ್ತಿರುವರೆಂದು ಈ ಕೆಳಗಿನ ಲೇಖದಿಂದ ಅರಿಯಬಹುದು

(ಹಿಂದೂದೇಶದಲ್ಲಿರುವ ಒಬ್ಬ ಆಂಗ್ಲೇಯನು ಬರೆದುದು)

ಹಿಂದೂದೇಶದ ನಿಜವಾದ ಪರಿಸ್ಥಿತಿಯು [illegible] ಬ್ರಿಟಿಷ ಜನಾಂಗವು ಸಂಪೂರ್ಣ ಅಜ್ಞಾತದಲ್ಲಿದೆ. ಈ ಲೇಖನದ ಮೂಲಕ ಈ ಸಂಗತಿಯನ್ನು ದೃಢೀಕರಿಸಿ ಬ್ರಿಟಿಷರ ಅಂತಹ ಅಜ್ಞಾತ ಸ್ಥಿತಿಗೆ ಮುಖ್ಯ ಕಾರಣವೇನೆಂದೂ ಅದರ ಪರಿಣಾಮವೇನೆಂದೂ ಹೇಳುವೆನು.

ಸಾಧಾರಣವಾದ ಬ್ರಿಟಿಷರಿಗೆ ಎರಡು [illegible] ಪ್ರಸಂಗಗಳು ಜರಗಿದುವೆಂದೂ ರಾಜ್ಯಾಂಗ[illegible] ಸಂಬಂಧವಾಗಿ ಅದರ ಎರಡು ಮೂರು ಸಮಿತಿಗಳು ಹಿಂದೂದೇಶದಲ್ಲಿ ಸಂಚರಿಸುತ್ತಿವೆಯೆಂದೂ ಗೊತ್ತಿದೆ. ಗಾಂಧಿಯವರು ಲಂಡನಿಗೆ ಹೋದ ಸಂಗತಿಯೂ ಅವನಿಗೆ ತಿಳಿದಿದೆ, ಅಲ್ಲದೆ [illegible] ವರ ಲಂಡನ್ ಪ್ರವಾಸದ ಅನಂತರ ಹಿಂದೂಗಳ [illegible] ಚಳವಳಿವು ಪ್ರಾರಂಭವಾಯಿತೆಂದೂ [illegible] ಗಳಿಂದ ಆಂದೋಲನವು ಮೊದಲಾಯಿತೆಂದೂ ಅವನಿಗೆ ಗೊತ್ತು. ಮತ್ತು ಅವನು, ಸರಕಾರವು ಮುಂದಿಟ್ಟ ಧೋರಣೆಯು ಸರಿಯಾದುದೆಂದೂ ಕೊಂಗ್ರೆಸ್ಸು [illegible] ವುದೆಂದೂ ಅಲ್ಲದೆ, ಅದು ಇಷ್ಟರಲ್ಲೇ ಮುರಿದು ಬಿದ್ದಿದೆಯೆಂದೂ [illegible] ಅಭಿಪ್ರಾಯ ಪಡುತ್ತಾನೆ. ಅಂತೂ, ಇಂತೂ ಮುಂದೆ [illegible] ಮುಂದಿನ ದಿನವು ನಿಶ್ಚಿಂತವಾಗಿ [illegible] ವುದೆಂದು [illegible] ಅರಿತಿದ್ದಾನೆ.

ನಮ್ಮ ಆಂಗ್ಲೇಯ ಬಾಂಧವರು ಈಗಿನ [illegible] ನೋಡುವ ದೃಷ್ಟಿಕೋನವೆಂದರೆ [illegible] ನಂಬಿರುತ್ತಾರೆ.

ಸಾಮಾನ್ಯವಾಗಿ ಬ್ರಿಟಿಷರಿಗೆ [illegible] ವಾಣಿಜ್ಯ, ಕೈಗಾರಿಕ [illegible] ಜೀವಿಸುವ [illegible] ಕೊಂಗ್ರೆಸ್ಸು [illegible] ದನೆ ಸ್ವಾತಂತ್ರ್ಯಾಪೇಕ್ಷಿತರ [illegible] ಗುಂಪು [illegible] ಸ್ವರಾಜ್ಯ, ರಾಷ್ಟ್ರೀಯವಾದಿ ಮತ್ತು [illegible] ಸಂಕೇತದ ಅರ್ಥವು [illegible] ಗಾಗಿ—ಸಾಮಾನ್ಯ ಬ್ರಿಟಿಷ [illegible] ದಿವಂಗತ ಸಿ. ಆರ್. ದಾಸ್ [illegible] ಗಳೊಳಗಿನ ವ್ಯತ್ಯಾಸವನ್ನು [illegible] ಕಾರವನ್ನು [illegible] ಕೊಂಗ್ರೆಸ್‌ವಾಲಾ [illegible] ದ್ರೋಹಿಗಳ [illegible] ದ್ರೋಹಿಗಳು.

ಸ್ವತಃ ತನ್ನ ಸ್ವತಃ ವ್ಯಾಪಾರದ [illegible] ಕೊಂಗ್ರೆಸ್ ಬಹಿಷ್ಕಾರವು ಇರುವುದರ [illegible] ಸ್ತ್ರೀ ಪುರುಷರು [illegible] ಧಂಗವಾದ ಶಿಕ್ಷೆಯುವುದೂ ಅಂತಹ ಶಿಕ್ಷೆಗಳನ್ನು [illegible] ಬ್ರಿಟಿಷನು ಮಾತ್ರ ಕೊಂಗ್ರೆಸ್ಸು ದೇಶದ ಜನಾಂಗದ ಒಂದು ತುಂಡನ್ನು ಮಾತ್ರ ಪ್ರತಿನಿಧಿಸುತ್ತದೆಂದೂ, [illegible] ಗಳೆಯಬಹುದೆಂದೂ [illegible] ನಿರ್ಧಾರವು ಇಂತಹ ಮಾದರಿಯ. ಇನ್ನಿತರ ಯಾವ ಸಮಸ್ಯೆಯನ್ನೂ ಸರಿಯಾಗಿ ಪರ್ಯಾಲೋಚಿಸಿ [illegible] ನಿರ್ಧಾರವಲ್ಲ, ಕಾರಣ ಅಂತಹ ಪರ್ಯಾಲೋಚನೆ ವಿರೋಧನೆಯನ್ನು ತೂರಿಡುವ ಗೋಜಿಗೆ ಬ್ರಿಟಿಷ [illegible] ಹೋಗುವುದಿಲ್ಲ. ಕೊಂಗ್ರೆಸ್ಸಿಗೆ ಒಂದೇ ಸಣ್ಣ ಪಂಗಡದ ಬೆಂಬಲವು ಮಾತ್ರ ಇದ್ದಿತೆಂದೂ, ಅಂತಹ ಅಲ್ಪ ಬೆಂಬಲವೇ ಈಗಲೂ ಅದಕ್ಕಿದೆಯೆಂದೂ ಅವನ ದೃಢ ಮಾತು. ಅವನ ಸರಿಯಾಗಿ ಪರಿಶೀಲಿಸುತ್ತಾ ಹೋದರೆ, ಹೆಚ್ಚಿನ ಹಿಂದೀಯ ಪತ್ರಿಕೆಗಳಲ್ಲಿ ಕೊಂಗ್ರೆಸ್ ಧೋರಣೆಯನ್ನು ಸಮರ್ಥಿಸುವ ಸಂಗತಿಯು ವಿದಿತವಾಗುವುದು, ಅಲ್ಲದೆ, ದೇಶದ ಕೆಲವು ವಾರ್ತೆಗಳಲ್ಲದೆ, ಮಿಕ್ಕವರೆಲ್ಲಾ ಕೊಂಗ್ರೆಸ್ಸನ್ನೇ ಪುಷ್ಟೀಕರಿಸುವುದು ಕಂಡುಬರುವುದು. ಅನೇಕ ಕಡೆಗಳಲ್ಲಿ ರಾಷ್ಟ್ರೀಯ ಧ್ವಜಾರೋಹಣವಾಗುವುದೂ, ಕೊಂಗ್ರೆಸ್‌ವಾಲಾರನ್ನು [illegible] ಒಂದಿಸಲ್ಪಟ್ಟವರಿಗೆ ಪರಿಹಾಸ್ಯವಾದದೆ ಪೋಲೀಸರಿಗೆ ಹಾಸ್ಯಮಾಡುವುದ ಕಂಡುಬರುವುದ. ಇಂತಹ ಸಾರ್ವಜನಿಕ ಮನೋಭಾವನೆಯಿಂದ [illegible] ವುದೇನೆಂದರೆ—ಒರ್ಡಿನನ್ಸುಗಳನ್ನು ಜಾರಿಗೆ ತರುವ ಮೊದಲು ಸರಕಾರಕ್ಕೆ [illegible] ಮತ್ತು ಸರಕಾರವು [illegible] ತಿಳಿದಿಲ್ಲ [illegible] ಮಾಡುವುದರೊಡನೆ ಅಂತಹ ವಿಧೇಯ ಮಂತ್ರ [illegible] ತನ್ನ ವಿಧೇಯತ್ವವನ್ನು ಪ್ರದರ್ಶಿಸಲು ಹೆಚ್ಚಿನ [illegible]

[illegible] ಹಿಂದೀಯ [illegible] ಪರಿಣಾಮ [illegible] ಸರಿಯಾಗಿ ಶೋಧಿಸಿನೋಡಿದರೆ ದೇಶದಲ್ಲಿ ಅನೇಕರು [illegible] ತಮ್ಮ [illegible] ವರ್ತಿಸುವುದರಲ್ಲಿ [illegible] ಅಧಿಕಾರ [illegible] ಪರೀಕ್ಷಿಸಿದರೆ ಹಿಂದೀಯ [illegible] ವಿದ್ಯಾರ್ಥಿ ಕೊಂಗ್ರೆಸ್ಸಿನ [illegible] ಭಾರತೀಯ [illegible] ಈ ವಿದ್ಯಾರ್ಥಿಗಳ ದೇಶಪ್ರೇಮವು ಅಂದ [illegible] ತಿಂಗಳಲ್ಲಿ ನಮ್ಮ ಪಟ್ಟಣ [illegible] ವಿದ್ಯಾಲಯದ [illegible] ತೋರಿದ್ದು ಬರುತ್ತದೆ.

ಹಿಂದೀಯ ಸ್ನೇಹಿತರನ್ನು ಸಂಪಾದಿಸಿ ಅವರೊಡನೆ ಹೆಚ್ಚಾಗಿ [illegible] ಅಂತಹ ಸ್ನೇಹಿತ [illegible] ಬ್ರಿಟಿಷ [illegible] ಅಂತಹ ತನ್ನ [illegible] ಈ ಸ್ನೇಹ ಸಂಭಾಷಣೆ [illegible] ಹಿಂದೀಯ ಸ್ನೇಹಿತರ ಮನೋಪರಿವರ್ತನೆಯು [illegible] ಬಿಡುವರು. ಈ ಓರ್ಡಿನೆನ್ಸುಗಳು—ಪೋಲೀಸರು ತಮ್ಮ ಕೆಲಸದಲ್ಲಿ ತೋರಗೊಡುವ ವರ್ತನೆಗಳು—ರಾಷ್ಟ್ರದ ಸಂಘಟನೆ ಅಥವಾ ಏಕೀಕರಣಕ್ಕೆ ಅಪರಿಮಿತ ಸಹಾಯವನ್ನಿತ್ತಿವೆ. [illegible] ಬ್ರಿಟಿಷ ಸಾಮ್ರಾಜ್ಯವು [illegible] ಉದ್ದೇಶಗಳಾಗಿ [illegible] ಕೊಂಗ್ರೆಸ್ಸನ್ನು ನೋಡಿ ಅಟ್ಟಹಾಸದಿಂದ [illegible] ರಾಷ್ಟ್ರೀಯ ಸಮಸ್ಯೆಯ ಸಂಪೂರ್ಣ [illegible] ಕೊಂಗ್ರೆಸ್ಸು [illegible] ಈ ಪಕ್ಷದ [illegible] ವಿಶ್ವಾಸವನ್ನೇ [illegible]

ಹಿಂದೀಯ ಬ್ರಿಟಿಷ ಜನಾಂಗವು ಈ ವಿಷಯದ [illegible] ಅಜ್ಞಾತದಲ್ಲಿದೆ. ಆದರೆ ಈಗ ದೇಶವು ಕೊಂಗ್ರೆಸ್ಸಿನ ಉಪದ್ರವದಿಂದ ನೋಡಿದ [illegible] ಕೊಂಗ್ರೆಸ್ಸಿನ [illegible] ಬೇಕನ್ನುತ್ತಿದೆ. ಇಂಗ್ಲೆಂಡಿನಲ್ಲೂ ಹಿಂದೂಸ್ಥಾನದಲ್ಲೂ [illegible] ಉದ್ಯೋಗಿಗಳು ಸಮಿತಿ ರಾಜ್ಯಾಂಗ [illegible] ಕಾರ್ಯಕ್ಕೆ ಹಚ್ಚುವ [illegible] ಮಾಡುವರು [illegible] ಸ್ವೈರ [illegible] ಹೋಗಿ [illegible] ಇದೆ, [illegible] ಯಾರಿಗೂ ಸಲ್ಲದು [illegible] ನೆಲಸಮವಾಗುತ್ತವೆ. ಬ್ರಿಟಿಷ ಜನಾಂಗವು ಕೊಂಗ್ರೆಸ್ಸನ್ನು [illegible] ತೋರಿಸುವ ಮನೋಭಾವನೆಯ [illegible] ಜನರ ವಿಶ್ವಾಸ [illegible] ಪರಿಣಾಮವಾಗಿ ಅಲ್ಲ [illegible] ಪೋಲೀಸ ಕಲ್ಪನಾಶಕ್ತಿಯ [illegible] ಕಾರಣದಿಂದ ಹಿಂದೀಯರಲ್ಲಿ ಹೆಚ್ಚಿನವರಿಗೆ ಸ್ವಾತಂತ್ರ್ಯ [illegible] ಲಭ್ಯವಾಗಬೇಕೆಂದ ಕಾಂಕ್ಷೆಯಿದೆಯೆಂದು ನಾವು ಯೋಚಿಸಿಕೊಳ್ಳಲಾರೆವು. ಆಂಗ್ಲೇಯರ ಭದ್ರತೆಯ ಧೋರಣೆಯನ್ನು ಈಗ ಹಿಂದೀಯರು [illegible] ವುದಿಲ್ಲವೆಂದು ನಾವು ತಿಳಿದುಕೊಳ್ಳಲಾರೆವು. ಆದರೆ ನಾವು ಮಾತ್ರ ಸ್ವಾತಂತ್ರ್ಯವನ್ನೇ ಅಪೇಕ್ಷಿಸುವವರಿದ್ದೇವೆ. ಇದೇ ರೀತಿಯಲ್ಲಿ ನಾವು ಹಿಂದೂದೇಶದಲ್ಲಿನ ಪ್ರಕೃತ ದಾರಿದ್ರ್ಯವನ್ನು ಅರಿತುಕೊಳ್ಳಲಾರೆವು. ಹೆಚ್ಚಿನ ಹಿಂದೀಯರು [illegible] ಸಂಕಟದಲ್ಲಿದ್ದಾರೆಂದೂ ನಮಗೆ ಗೊತ್ತಿದೆ. ಅಲ್ಲದೆ ಹೆಚ್ಚಿನವರು ನಿರುದ್ಯೋಗಿಗಳಾಗಿರುವರು [illegible] ತಿಳಿದಿದೆ. ಆದರೆ ಅದಕ್ಕೋಸ್ಕರ [illegible] ನಾವು [illegible] ಬಾಧಿಸಿ [illegible] ಹಿಂದೂ [illegible] ದಲ್ಲಿ [illegible] ಸಾಧಿಸಿ [illegible] ನಾವು [illegible]

ಇದೇ ರೀತಿ ಪೋಲೀಸ್ [illegible] ನಮ್ಮ [illegible] ಬ್ರಿಟಿಷರಲ್ಲಿ [illegible] ನಾವು [illegible] ಪೋಲೀಸ [illegible] ಸಂಗತಿ [illegible] ಪೋಲೀಸ [illegible] ವರ್ತನೆಯಲ್ಲಿ [illegible] ದೀರ್ಘ [illegible] ಪೋಲೀಸ [illegible] ಇದೇ ರೀತಿ [illegible]

[illegible] ನಮ್ಮ [illegible] ಕೊಂಗ್ರೆಸ್ಸಿನ [illegible] ನಾವು [illegible] ಕೊಳ್ಳುವುದನ್ನು [illegible] ಮಾಡಿ [illegible] ನಾವು [illegible]

[illegible] ಬ್ರಿಟಿಷ ಜನ [illegible] ನಿವೇದಿತವಾಗುವ [illegible]

[illegible] ದೊಡ್ಡ [illegible] (ದೊಡ್ಡದು [illegible]) ಇಂಗ್ಲೆಂಡಿನಲ್ಲಿ [illegible] ಹಿಂದೀಯ [illegible] ಅವರ [illegible] ಅವರ [illegible] ವಿಷಯವು [illegible] ತನ್ನ [illegible] ಧೋರಣೆ [illegible] ಈ ಕಥೆಯ ನಿಜವಾಗಿಯೂ ಸತ್ಯವಾದುದು. ಅದು ಇದೇ [illegible]

(೯ನೇ ಪುಟಕ್ಕೆ ಮುಂದರಿಸಿಯದ)

ಅನುಕ್ರಮಣಿಕೆ.

ಅಗ್ರಲೇಖ

ಈಗಿನ ರಾಜನೀತಿಯಲ್ಲಿ ಬ್ರಿಟಿಷ ಧುರೀಣರು . ೮
ಸ್ಫುಟವಿಚಾರಗಳು . . [illegible]
ನೋಟಗಳು . [illegible]

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . ೮
ಒಳದೇಶ ವರ್ತಮಾನ ೮
ದಕ್ಷಿಣ ಕನ್ನಡ — ಮಂಗಳೂರು ಉಡುಪಿ, ಕಾರ್ಕಳ
ಕಾಸರಗೋಡು ಕಿನ್ನಿಕಂಬಳ, ಕುಂಬಳೆ ೯
ವಿವಿಧ ಸಮಾಚಾರಗಳು . ೧೧
ಪತ್ರವ್ಯವಹಾರ ೨೪
ಪಂಡಿತ ಮಾಲವೀಯರನ್ನು ಬಿಟ್ಟರು ೧೬
ಶ್ರೀಮದುಡುಪಿ ಅಷ್ಟ ಮಠಾಧೀಶರುಗಳವರ ಸನ್ನಿಧಿಯಲ್ಲಿ
ವಿಜ್ಞಾಪ್ತಿಗಳು ೪
ದ. ಕ. ಜಿಲ್ಲೆಯ ಖಾಸಗಿ ಶಾಲೆಗಳ ಮೆನೇಜರರ ಮತ್ತು
ಅಧ್ಯಾಪಕರಲ್ಲಿ ನಮ್ಮ ವಿನಂತಿ ೧೫

ಸ್ವದೇಶಾಭಿಮಾನಿ.

ತಾ ೬ನೇ ಶುಕ್ರವಾರ ಎಪ್ರಿಲ್ ೧೯೩೧

ಈಗಿನ ರಾಜನೀತಿಯಲ್ಲಿ ಬ್ರಿಟಿಷ ಧುರೀಣರು.

ಯಾವುದೊಂದು ವಿಶಾಲ ಸಮಾಜದ ಅಥವಾ ಜನಾಂಗದ ಗತಿ ಕ್ರಮವು ಹೇಗೆ ಬರೀ ಕೆಲವರ ಕೈಯಲ್ಲಿರುಇದೆಯೆಂಬುದು ಹಿಂದೀ ರಾಜಕಾರಣದ ವಿಷಯದಲ್ಲಿ ಬ್ರಿಟಿಷರಲ್ಲಿ ಉಂಟಾದ ಬದಲಾವಣೆಗಳನ್ನು ನೋಡಿದರೆ ತಿಳಿಯಬರುತ್ತದೆ. ಡೆಮೊಕ್ರಸಿ ಪ್ರಜಾಪ್ರಭುತ್ವ ಇತ್ಯಾದಿ ಬರೀ ಹೆಸರುಗಳು, ಹೊರಗಿನ ಡಂಭಾಚಾರಗಳ ಮಾತ್ರ. ಅದರಲ್ಲಿ ಪ್ರಮುಖರೆಂದು ಅನ್ನಿಸಿಕೊಂಡವರೇ ಸ್ವೇಚ್ಛೆಯಂತೆ ನಡಕೊಳ್ಳಬಲ್ಲವರೆಂಬುದು. ಹಿಂದಿನ ಲೇಬರ್ ಸರಕಾರದ ಸಮಯದಲ್ಲಿ ಬ್ರಿಟಿಷ ಪತ್ರಿಕೆಗಳೂ ಪ್ರಮುಖರೂ ಆಡಿದ್ದನ್ನೂ, ಈಗಿನ ಸರಕಾರದ ಸಮಯದಲ್ಲಿ ಅವರೇ ಆಡಿಕೊಳ್ಳುವುದನ್ನೂ ಪರಿಶೀಲಿಸಿದರೆ ತಿಳಿಯುವುದು.

ದಬ್ಬಾಳಿಕೆಯ ವಿಷಯವಾಗಿ ಇದೇ ರಾಮ್ಸೆ ಮೆಕ್ಡೊನಾಲ್ಡರು ಆಗಿನ ಸಮಯದಲ್ಲಿ ದಬ್ಬಾಳಿಕೆಯಿಂದ ಏನೂ ಲಾಭವಿಲ್ಲವೆಂದೂ ಸ್ತ್ರೀ ಬಾಲ್ಯಂದಾದಿ ಎಲ್ಲರನ್ನೂ ಪೀಡಿಸಿದವೆಂಬ ಅಪವಾದಕ್ಕೆ ಗುರಿಯಾಗಬೇಕಾದೀತೆಂದೂ ಸೈನ್ಯಗಳನ್ನು ಕನ್ಯಾಕುಮಾರಿಯಿಂದ ಹಿಮಾಚಲದವರೆಗೆ ನಡಿಸಬೇಕಾಗುವುದೆಂದೂ ಹಿಂದೀಯರ ಸ್ವಾತಂತ್ರ್ಯದ ಆಶಯಗಳನ್ನು ಪೂರೈಸಲೇಬೇಕೆಂದೂ Federal ಸರಕಾರವು ಏರ್ಪಡುವಾಗ ಉಂಟುಮಾಡುವ ನಿರ್ಬಂಧಗಳ ಉದ್ದೇಶವು ಹಿಂದೀಯರ ಹಿತವಾಗಬೇಕಲ್ಲದೆ ಬ್ರಿಟಿಷ ಹಿತವಾಗಬಾರದೆಂದೂ ಹೇಳಿದರು. ಆದರೆ ಅದೇ ಮೆಕ್ಡೊನಾಲ್ಡರು ಈಗ ಸರ್ ಸಾಮುವೇಲರ ಒತ್ತಾಯದಲ್ಲಿ ಅದಕ್ಕೆ ತೀರಾ ವಿರೋಧವಾದ ವರ್ತನದಲ್ಲಿರುವರು.

ಮೇಲೆ ಕಾಣಿಸಿದ ಉದಾರ ಧೋರಣವನ್ನು ಉತ್ಸಾಹದಿಂದ ಮುಂದವರಿಸಿದ ಮಿ. ವೆಜ್‍ವುಡ್ ಬೆನ್ನರ ಮಾತೇ ಈಗ ಇಲ್ಲ. ಲೋರ್ಡ್ ಪೀಲ, ಏಕೆ? ಈಗಿನ ಸರ್ ಸಾಮುವೇಲ್ ಹೋರರು ಕೂಡ ಆ ಉದಾರ ಧೋರಣೆಕ್ಕೆ ಬಹಿರಂಗವಾಗಿ ವಿರೋಧವೆತ್ತಿಸಲು ತಯಾರಿರಲಿಲ್ಲ. ಕನ್ಸರ್ವೇಟಿವ್ ಪಕ್ಷದ ಮುಖ್ಯಸ್ಥರಾಗಿರುವ ಮಿ. ಬಾಲ್ಡ್ವಿನ್ನರೇ ಮಿ. ರಾಮ್ಸೆ ಮೆಕ್ಡೊನಾಲ್ಡರಿಗೂ ಲೋರ್ಡ್ ಇರ್ವಿನರಿಗೂ ಅವರ ಉದಾರ ಧೋರಣದಲ್ಲಿ ಪ್ರೋತ್ಸಾಹವೀಯುತ್ತಿದ್ದರು. ಆದರ ಅಧಿಕಾರ ಬದಲಾವಣೆಯೊಡನೆ ಕ್ಷಣಮಾತ್ರದಲ್ಲಿ ಇದೀ ಧೋರಣವು ಕುಸಿದು ಹೋಯಿತು.

ಈ ಉದಾರ ಧೋರಣಕ್ಕೆ ಕಾರಣವಾದ ಲೋರ್ಡ್ ಇರ್ವಿನರ ಈಗಿನ ಅಭಿಪ್ರಾಯವಾದರೂ ಹೇಗೆ? ಸೌಹಾರ್ದದ ಆ ಧೋರಣಕ್ಕೆ ಅವರೇ ಕಾರಣರೆನ್ನಬಹುದು. "ಸತ್ಯಾಗ್ರಹನಾರಂಭವಾದಾಗ ದಬ್ಬಾಳಿಕೆಯನ್ನು ಜೋರಾಗಿ ಆರಂಭಿಸಬೇಕಾಗಿ ಮೊದಲೆಣಿಸಿದೆನು; ಈ ವಿಷಯದಲ್ಲಿ ಹಲವನ್ನು ಕರೆದು ವಾದಿಸಿದೆನು, ಆದರೆ ಇವೆಲ್ಲ ಪ್ರಯೋಜನವಿಲ್ಲವೆಂದು ನನಗನ್ನಿಸಿತು" ಎಂದು ಲೋರ್ಡ್ಸ್ ಪಾರ್ಲಿಮೆಂಟಿನಲ್ಲಿ ಆ ಹಿಂದಿನ ಉದಾರ ಧೋರಣವನ್ನು ಸಮರ್ಥಿಸಿದ ಲೋರ್ಡ್ ಇರ್ವಿನರು, ಜೈಲಿನೊಳಗಿಂದ ಎಲ್ಲರನ್ನೂ ಹೊರಗೆ ಬಿಟ್ಟು, "ಅರ್ಧ ನಗ್ನ ಫಕೀರ" (ಚರ್ಚಿಲ್ ಸಾಹೇಬರೆಂದಂತೆ) ನಾದ ಮಹಾತ್ಮಾಜೀಯವರನ್ನು ಕರೆಕಳುಹಿಸಿ ಅವರೊಡನೆ ರಾಜಿಯನ್ನು ರಚಿಸಿದ ಮಾಜಿ ವೈಸರಾಯರು ಈಗ ಒಮ್ಮಿಂದೊಮ್ಮೆ ಬದಲಾಗಿ ಹೋದುದು ಇನ್ನೂ ಆಶ್ಚರ್ಯ. ನಿಜವಾಗಿ ಎಣಿಸಿದರೆ ಲೋರ್ಡ ಇರ್ವಿನರ ಅಭಿಪ್ರಾಯಗಳು ವೈಸರಾಯ ಸ್ಥಾನದಲ್ಲಿರುವಾಗ ಹೆಚ್ಚು ಸಂಕುಚಿತವಿರಬೇಕಿದ್ದುವು. ಏಕೆಂದರೆ ಆಗ ಅವರಿಗೆ ಅವರ ಸ್ಥಾನದ ಜವಾಬ್ದಾರಿ ಇದ್ದಿತು. ಆದರೆ ಆ ಜವಾಬ್ದಾರಿ ತಪ್ಪಿದ ಮೇಲೆ ಅವರ ಲಕ್ಷ್ಯವು ಸಂಕುಚಿತವಾದುದು ಆಶ್ಚರ್ಯಕರ. ಆಳಲ್ಪಡುವವರ ಒಪ್ಪಿಗೆಯೇ ಆಳುವವರ ಆಧಾರವೆಂದ ಒಪ್ಪಿದರೂ ಎರಡನೆಯ ಸತ್ಯಾಗ್ರಹವು ಆರಂಭವಾದುದರ ಜವಾಬ್ದಾರಿಯನ್ನು ಲೋರ್ಡ್ ಇರ್ವಿನರು ಮಹಾತ್ಮಾ ಗಾಂಧಿಜಿಯವರ ಮೇಲೆ ಹೊರಿಸಿದುದು ಆಶ್ಚರ್ಯಕರ. ತಾನು ಲೋರ್ಡ್ ವಿಲ್ಲಿಂಗ್ಡನ್ನರ ಸ್ಥಾನದಲ್ಲಿದ್ದುದಾದರೆ ತಾನೂ ಹಾಗೆಯೇ ಮಾಡುತ್ತಿದ್ದೆ ಎಂದು ಅವರು ಈಗ ಅನ್ನುತ್ತಾರೆ!

ಇತ್ತ ರೌಂಡ್‍ಟೇಬಲ್ ಕೊನ್ಫರೆನ್ಸಿನ ಫೆಡರಲ್ ಕಮಿಟಿಯ ಚೆಯರ್ಮನರಾಗಿ ಹಿಂದೀ ಸ್ವಾತಂತ್ರ್ಯದ ವಿಷಯದಲ್ಲಿ ಅತ್ಯಂತ ಉದಾತ್ತ ತತ್ವಗಳನ್ನು ಸಾರಿ ಉದಾರಮತವಾದಿಗಳೂ, ಮನಸ್ಸಾಕ್ಷಿಗೆ ಸರಿಯಾಗಿ ನುಡಿಯುವವರೂ ಎಂದೆನ್ನಿಸಿದ ಲೋರ್ಡ್ ಸಾಂಕಿಯವರ ಈಗಿನ ಪರಿವರ್ತನಕ್ಕೇನೆನ್ನಬೇಕು? ಅವರೂ ಸರ್ ಸಾಮುವೇಲ್ ಹೋರರ ಪಲ್ಲವಿಯನ್ನೇ ಎತ್ತಿದ್ದಾರೆ. ಒಂದು ಸಮಯದಲ್ಲಿ ಹಿಂದೀ ದಬ್ಬಾಳಿಕೆಯನ್ನು ನೋಡಿ ಲೋರ್ಡ್ ಸಾಂಕಿಯವರು ತಮ್ಮ ಕೆಲಸಕ್ಕೆ ರಾಜಿ ಕೊಡುವರೆಂಬ ವರ್ತಮಾನ ಸಹ ಇತ್ತು, ಅವರ ಉದಾರತೆಯ ಮೇಲೆ ಜನರಿಗೆ ಅಷ್ಟು ವಿಶ್ವಾಸವಿತ್ತು. ಅವರು ರಾಜೀನಾಮೆ ಕೊಡುವುದು ಬಿಟ್ಟು ಈಗ ಸರಕಾರಕ್ಕೆ ಬೆನ್ನು ತಟ್ಟುತ್ತಿದ್ದಾರೆ.

ಮುಖ್ಯವಾಗಿ ಯಾವ ಬ್ರಿಟಿಷನಾದರೂ, ಆ ಸಾಮ್ರಾಜ್ಯವಾದವು ಅವನ ರಕ್ತಬಿಂದುಗಳಲ್ಲಿ ಸೇರಿಹೋದುದು, ಅದನ್ನು ದೂರಪಡಿಸಲಾರನು. ಆದರೂ ನಮ್ಮಲ್ಲಿ ಆಶಾವಾದಿಗಳಿದ್ದು ಅವರ ಮೋರೆಯನ್ನು ನೋಡುತ್ತ ಇರುವುದ ಆಶ್ಚರ್ಯ.

ವಿದೇಶ ವರ್ತಮಾನ.

— ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲು ಬ್ರಿಟನಿಗೂ ಮನಸ್ಸಿಲ್ಲವೆಂದೂ ದಬ್ಬಾಳಿಕೆಯು ಖಂಡಿತವಾಗಿಯೂ ನಿರರ್ಥಕವೆಂದೂ ಸರಕಾರವು ಅದನ್ನು ಬಿಡಬೇಕೆಂದೂ, ಗಾಂಧಿಯವರ ನೈತಿಕ ಬಲದೆದುರು ಯಾವ ನೀತಿಯೂ ಸರಿಸಮಾನವಾದುದಿಲ್ಲವೆಂದೂ ಬ್ರೈಲ್ಸ್‍ಫೋರ್ಡ್ ಎಂಬ ಸುಪ್ರಸಿದ್ಧ ಯುರೋಪ್ಯರು ಬರೆಯುತ್ತಾರೆ.

— ಬ್ರಿಟನಿಗೆ ಇಷ್ಟು ಸಮಯವೂ ಕೊಡುತ್ತಿದ್ದ ನೆಲರಾಯವನ್ನು ಇನ್ನು ಐರ್ಲೇಂಡು ಕೊಡಲು ಸಿದ್ಧವಾಗಿಲ್ಲವೆಂದು ಐರ್ಲೇಂಡಿನ ಅಧ್ಯಕ್ಷರಾದ ಡಿ ವೆಲರಾರವರು ಬ್ರಿಟಿಷ ಸರಕಾರಕ್ಕೆ ಬರೆದ ಪತ್ರಗಳೂ ಅವಕ್ಕೆ ಬ್ರಿಟಿಷ ಸರಕಾರವು ಕೊಟ್ಟ ಉತ್ತರಗಳೂ ಪ್ರಕಟವಾಗಿವೆ. ಐರ್ಲೆಂಡು ತನ್ನ ನಿರ್ಧಾರದಲ್ಲಿ ನಿಶ್ಚಲವಾಗಿ ನಿಂತಂತೆ ಕಾಣುತ್ತದೆ.

— ಪ್ರಧಾನ ಮಂತ್ರಿಯವರಾದ ಮೆಕ್‍ಡೊನಾಲ್ಡರ ನೇತ್ರರೋಗದಿಂದಾಗಿ ಅವರಿಗೆ ಹೆಚ್ಚಿನ ಕೆಲಸವನ್ನು ಮಾಡಲು ಸಾಧ್ಯವಿಲ್ಲವೆಂದಾಗಿದೆ. ಅವರು ಸ್ವಲ್ಪ ಸಮಯ ವಿಶ್ರಾಂತಿಯಿಂದಿರಬೇಕೆಂದು ಡಾಕ್ಟರರ ಅಭಿಪ್ರಾಯ.

— ಹಿಂದೂದೇಶಕ್ಕೆ ಏನೆಲ್ಲ ಕೊಡಬೇಕೆಂಬುದಾಗಿ ಆಲೋಚಿಸಲು ರೌಂಡ್‍ಟೇಬಲ್ ಪರಿಷತ್ತಿನ ಮಂತ್ರಾಲೋಚನೆ ಸಭೆಯು ಲಂಡನಲ್ಲಿ ಮೇ ೨೩ರಲ್ಲಿ ಜರಗಲಿರುವುದಾಗಿ ಸರ್ ಹೋರರು ಪ್ರಕಟಿಸಿದ್ದಾರೆ.

ಶಿಂಘೈಯಲ್ಲಿ ಜಾಪಾನಿನ ಹತ್ತಿಪ್ಪತ್ತು ಮಂದಿ ಸರಕಾರೀ ಮುಖ್ಯಸ್ಥರ ಮೇಲೆ ಬೊಂಬು ಬಿತ್ತು. ಒಬ್ಬರು ಮಡಿದರು. ಒಬ್ಬ ಕಮಾಂಡರ್ ಇನ್ ಚೀಫರ ಕಾಲನ್ನು ತುಂಡು ಮಾಡಿದರು. ಬೊಂಬು ಹಾಕಿದವನು ಜಪಾನನೇ ಎಂದು ತಿಳಿದುಬಂದಿದೆ. ಜಪಾನಿನಲ್ಲಿ ಹಾಹಾಕಾರವೆದ್ದಿದೆ.

ಒಳದೇಶ ವರ್ತಮಾನ.

ಮದುರೆಯ ಕರ್ಪೂರಪುರಂ ಎಂಬಲ್ಲಿನ ವೈ. ಎಂ. ಸಿ. ಎ. ರಾತ್ರಿಶಾಲೆಯಲ್ಲಿ ಕೆಲವು ಶಾಲಾ ಮಕ್ಕಳು ಕೂಡಿ "ಕಣ್ಣಾಮುಚ್ಚಿ" ಆಡುತ್ತಿದ್ದರು. ಆಲ್ಬರ್ಟ್ ಬಿಕ್ಸರ್ ಎಂಬ [illegible] ವರ್ಷ ಪ್ರಾಯದ ಹುಡುಗನು ತಾನು ಹುಡುಕುವವನಿಗೆ ಸಿಗಬಾರದೆಂದು ಅಲ್ಲೇ ಇದ್ದ ಒಂದು ಪೆಟ್ಟಿಗೆಯೊಳಗೆ ಅಡಗಿ ಕೂತನು. ಅದರ ಮುಚ್ಚಳವನ್ನು ಮೆಲ್ಲನೆ ಮುಚ್ಚಿಕೊಂಡನು. ಒಡನೆ ಅದರ ಹೊರ ಚಿಲಕವೂ ಬಿದ್ದುಬಿಟ್ಟಿತು, ಬೀಗ ಹಾಕಿದ ಹಾಗಾಯಿತು. ಹುಡುಗರು ಕಣ್ಣಾಮುಚ್ಚಿ ಆಡಿ ಕ್ಲಾಸಿಗೆ ಹೋಗಲು ವಿಳಂಬಿಸಿರಲಿಲ್ಲ. ಅಷ್ಟರಲ್ಲಿ ಒಬ್ಬ ಹುಡುಗನು ತಾನು ಅದೇ ಪೆಟ್ಟಿಗೆಯಲ್ಲಿಟ್ಟಿದ್ದ ಪುಸ್ತಕವನ್ನು ತೆಗೆಯಬೇಕೆಂದು ಬಾಗಿಲು ತೆರೆದನು. ಒಳಗೆ ಪ್ರಾಣಬಿಟ್ಟು ಮಲಗಿದ್ದ ಹುಡುಗನ ಶವವನ್ನು ನೋಡಿ ಬೆರಗುಗೊಂಡನು. ಅಧ್ಯಾಪಕರಿಗೂ ತಿಳುಹಿಸಲಾಯಿತು. ಹುಡುಗನ ತಂದೆ ತಾಯಿಗಳೂ ಬಂದರು. ಪರೀಕ್ಷಿಸಲಾಗಿ ಪೆಟ್ಟಿಗೆಯೊಳಗೆ ತುಂಬಿದ ಶ್ವಾಸೋಚ್ಛ್ವಾಸದ ವಿಷಗಾಳಿಯಿಂದಾಗಿ ಮರಣವಾಯಿತೆಂದು ತಿಳಿದುಬಂತು.

— ಮನ್ನಾರ್ಗುಡಿಯಲ್ಲಿ ಕಿಸ್ತು ರೂಪಾಯಿಯನ್ನು ಕೊಡದಿದ್ದ ಸಲುವಾಗಿ ಅಲ್ಲಿಯ ರೆವೆನ್ಯೂ ಖಾತೆಯವರು ಗೋಪಿನಾಥ ಸ್ವಾಮಿ ದೇವಸ್ಥಾನದ ವಿಗ್ರಹ ಪೂಜಾದಿ ಸಲಕರಣೆಗಳನ್ನು ಹೊತ್ತುಕೊಂಡು ಹೋದರು.

— ಕರಾಚಿ ಕೊಂಗ್ರೆಸ್ಸಿನ ಪ್ರಥಮ ಡಿಕ್ಟೇಟರರಾಗಿದ್ದ ಶ್ರೀ ನಾರಾಯಣದಾಸ್ ಬೆಚಾರ ಎಂಬವರ ಮುದಿ ತಾಯಿಯು ತೀರಿಕೊಂಡಿತು. ಶ್ರಾದ್ಧಾದಿ ಕರ್ಮಗಳನ್ನು ಮಾಡಿ ಮುಗಿಸಲಿಕ್ಕಾಗಿ ಶ್ರೀಯುತರನ್ನು ಪೋಲೀಸ್ ಛೀಟಿಯ ಕರಾರ ಮೇಲೆ ಬಿಟ್ಟಿರುವರು.

— ಪಂಜಾಬ ಗವರ್ನರರು ಕಂಗ್ರಾ [illegible] ಕೆಲಸವನ್ನು ನೋಡಿ ಮೆಚ್ಚಿ ಅದರ ಸಹಾಯಾರ್ಥವಾಗಿ ೫೦ ರೂಪಾಯಿಗಳನ್ನು ಸಂತೋಷದಿಂದ ಕೊಟ್ಟಿರುವರು.

ಕ್ರಾಂತಿಕಾರಕ ಚಳವಳಿಗಾರರ ಕೈಯಿಂದ ಪೆಟ್ಟು ತಿಂದು ಮರಣಹೊಂದಿ ಕಷ್ಟಕ್ಕೆ ಗುರಿಯಾದ ಉದ್ಯೋಗಸ್ಥರ ಕುಟುಂಬಗಳಿಗೆ ಪ್ರಾಂತಿಕ ಸರಕಾರಗಳು ಇದೇ ಸ್ಪೆಶಲ್ ಪೆನ್ಶನ್ ಮೊದಲಾದುವುಗಳನ್ನು ಒದಗಿಸುತ್ತಿದ್ದವು. ಈಗ ಅವುಗಳ ಅಂತಹ ಕ್ರಮವನ್ನು ಭಾರತ ಸರಕಾರವು ತನ್ನ ಕೈವಶ ತೆಗೆದುಕೊಂಡಿರುವರು.

— ಖಿಲಾಫತ್ ಕೊನ್ಫರೆನ್ಸು [illegible] ತನ್ನಷ್ಟಕ್ಕೆ ಶೌಕತಾಲಿಯವರ ವಿಚಾರವು ನಡೆದುಹೋಯಿತು. ಬ್ರಿಟಿಷ ಸರಕಾರವು ಮುಸ್ಲಿಮರಿಗೆ ಏನನ್ನು ಕೊಡುತ್ತದೆ ನೋಡಿಕೊಳ್ಳಬೇಕೆಂಬ ಇರಾದೆಯಿಂದ ಆ ಪರಿಷತ್ತು [illegible] ಸರಕಾರವು ತನ್ನನ್ನು ಸ್ಪಷ್ಟಪಡಿಸದಿದ್ದರೆ [illegible] ಮುಸ್ಲಿಮರಿಗೆ ತಾನೇ ದಾರಿ ತೋರಿಸುವೆನೆಂದೂ ಶೌಕತಾಲಿಯವರ ಪ್ರಕಟಣೆ.

— ವಿಧವೆಯಾದ ತನ್ನ ತಂಗಿಗೆ ಮದುವೆ ಮಾಡಿ ಮಹಾ ಗೃಹಸ್ಥರಾದ ಸ್ವಜಾತಿಯವರೊಡನೆ ಸೇರಿ ನಡೆದರೆಂಬ ಆರೋಪಣೆಯ ಮೇಲೆ ಅಲಹಾಬಾದಿನಲ್ಲಿ ಚಂದ್ರಪ್ರಕಾಶರೆಂಬ ಹಿಂದೂಮಹಸ್ಥರನ್ನು ಸ್ವಜಾತಿಯವರು ಬಹಿಷ್ಕರಿಸಿರುವರು. ಚಂದ್ರಪ್ರಕಾಶರು ತಮ್ಮ ದೇವಸ್ಥಾನವನ್ನು ಪ್ರವೇಶಿಸಬಾರದಾಗಿ ಈ ಬಹಿಷ್ಕಾರ ಆಜ್ಞೆ.

— ರೌಂಡ್‍ಟೇಬಲ್ ಉಪಸಮಿತಿಯಾಗಿ ಹಿಂದೂದೇಶಕ್ಕೆ ಬಂದು ಇಲ್ಲಿ ತಿರುಗಾಡಿ ಸಭೆ ಮಾಡಿ ಒಂದು ರಿಪೋರ್ಟು ಬರೆದುಕೊಂಡ ಲೋರ್ಡ್ ಲೋಥಿಯನ್ನರವರು ಲಂಡನಿಗೆ ಬೇಗನೇ ಹೋಗಿರುವರು.

— ಅಲಹಾಬಾದ ಲಾಹೋರ ಮದರಾಸು ದೆಹಲಿ ಕೆಲವು ಕಡೆಯ ಟಪ್ಪಾಲು ಪೆಟ್ಟಿಗೆಗಳಲ್ಲಿದ್ದ ಕಾಗದ ಪತ್ರಗಳನ್ನು ಪುಂಡರು ಸುಟ್ಟು ಹಾಕಿರುತ್ತಾರೆ.

— ಮದ್ರಾಸಿನಲ್ಲಿ ಒಬ್ಬ ವರ್ತಕನು ಬಂಗಾರದ ಕೊರಡನ್ನು ಟ್ರಾಮಿನ ಮೇಲೆ ಹಾಕಿಕೊಂಡು ಹೋಗುವಾಗ ಅವನದನ್ನು ಮರೆತನು. ಟ್ರಾಮಿನವನು ಅದನ್ನು ಪೋಲೀಸರಿಗೊಪ್ಪಿಸಿದನು. ೧೦,೦೦೦ ರೂಪಾಯಿಯ ತನ್ನ ಬಂಗಾರವು ಕಳೆದು ಹೋದುದು ತಿಳಿದೊಡನೆ ಸಾಹುಕಾರನು ರೈಲ್ವೇ ಸ್ಟೇಷನಿನಲ್ಲಿ ಸ್ಮೃತಿ ತಪ್ಪಿ ಬಿದ್ದನು. ಕೊನೆಗೆ ಹೇಗೂ ಕಳೆದುಹೋದ ಬಂಗಾರವು ಸಿಕ್ಕಿತು.

ಹತ್ತಿಯ ವ್ಯಾಪಾರಸ್ಥರಿಂದ ಹಣಪಡೆದು ಸಂಬಳದ ಮೇಲೊಂದು ಗಿಂಬಳವನ್ನು ಹೊಡೆದು ಇಷ್ಟು ಕಾಲವೂ ಸುಖಿಸುತ್ತಿದ್ದ ೩೪ ಮಂದಿಗಳನ್ನು ಮುಂಬಾಯಿಯಲ್ಲಿ ನಡೆದ ಒಂದು ಜಪ್ತಿಯಲ್ಲಿ ಹಿಡಿದರು. ಇವರಲ್ಲೊಬ್ಬನು ಡಬ್ಲ್ಯೂ ಬರ್ಡ್ ಎಂಬ ಆಂಗ್ಲ ಮಹಾಶಯನು.

— ಕಲ್ಕತ್ತಾದಲ್ಲಿ ಕಾನೂನುಬಾಹಿರ ಮೆರವಣಿಗೆ ಸಭೆಗಳನ್ನು ಜರಗಿಸಿದುದಕ್ಕಾಗಿ ೧೫ ಮಂದಿಗಳು (೮ ಮಂದಿ ಸ್ತ್ರೀಯರು ಕೂಡಿ) ವಿವಿಧಾವಧಿಯ ಶಿಕ್ಷೆಗೊಳಗಾದರು.

ದಕ್ಷಿಣ ಕನ್ನಡ

ಮಂಗಳೂರು:— ತಾ. ೩ನೇ ದಿನ ಶನಿವಾರ ಇಲ್ಲಿಯ ಮುಸ್ಲಿಂ ಟೀಚರ್ಸ್ ಸಂಘದ ಮಾಸಿಕ ಸಭೆಯು ರಾ। ಉಳ್ಳಾಲ ಮಂಗೇಶರಾವ್, ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪಟ್ಟಣದ ಮುಖಂಡರಲ್ಲನೇಕರು ಕೂಡಿಕೊಂಡು ಜಿಲ್ಲೆಯಲ್ಲಿ ನಡೆದ ಪೋಲೀಸ್ ಅತಿರೇಕದ ಕುರಿತು ಒಂದು ಮನವಿಯನ್ನು ಕಲೆಕ್ಟರರವರ ಸನ್ನಿಧಿಗೆ ಮಾಡಿಕೊಂಡರು

ಶ್ರೀ ಕೈದೇಲು ತಿಮ್ಮಪ್ಪ ಶೆಟ್ಟರ ವಿಚಾರಣೆಯು ತಾ ೯ನೇ ದಿನ ಆಗಲಿರುವುದು.—

ಬಿಜಯಿಯಲ್ಲಿರುವ ದಿ ಪೂವರ್ ಸರ್ವಿಸ್ ಲೀಗ್ ಎಂಬುದರ ೧೭ನೇ ವಾರ್ಷಿಕೋತ್ಸವವು ತಾ, ೮ನೇ ದಿನ ಮುನಿಸಿಪಲ್ ಕೌನ್ಸಿಲು ಚೇಯರ್‌ಮೇನರಾದ ಡಾ। ವಿಕ್ಟರ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಉಳ್ಳಾಲ ಅದ್ವೈತಾಶ್ರಮದಲ್ಲಿ ಸಂಸ್ಕೃತ ಪಾಠಶಾಲಾರಂಭ

ಈ ಮೊದಲು ಪ್ರಕಟಿಸಿದಂತೆ ಉಳ್ಳಾಲ ಅದ್ವೈತಾಶ್ರಮದಲ್ಲಿ ಪ್ರಾರಂಭಿಸಲ್ಪಡಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಯನ ಮಾಡಬಯಸುವರು ನಿವೇದನ ಪತ್ರಿಕೆಗಳನ್ನು ಕಳುಹಿದ ವಿದ್ಯಾರ್ಥಿಗಳು ಇದೇ ಬರುವ ತಾ ೧೦ನೇ ಮಂಗಳವಾರ ಜರಗಲಿಕ್ಕಿರುವ ಶ್ರೀ ಶಂಕರ ಜಯಂತ್ಯುತ್ಸವ ದಿವಸ ಆಶ್ರಮದಲ್ಲಿ ಉಪಸ್ಥಿತರಾಗಬೇಕು ಅಲ್ಲಿ ಅವರನ್ನು ತಾತ್ಕಾಲಿಕವಾಗಿ ನಿಯಮಿಸಲ್ಪಡುವ ಒಂದು ಉಪಸಮಿತಿಯ ಸದಸ್ಯರಿಂದ ಪರೀಕ್ಷಿಸಲ್ಪಟ್ಟ ನಂತರ ಶಾಲೆಗೆ ಸೇರಿಸಿಕೊಳ್ಳುವರೇ ನಿರ್ಣಯ ಮಾಡಲಾಗುವುದೆಂದು ಈ ಮೂಲಕ ತಿಳಿಸಿರುತ್ತದೆ ಎಂದು ಆ. ಸಮಿತಿಯ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ

ಇಲ್ಲಿಯ ಕೆನರಾ ಬ್ಯಾಂಕ್ ಲಿಮಿಟೆಡ್, ಇವರ ಅಧ್ಯಕ್ಷರಾದ ಎ. ಶ್ರೀನಿವಾಸ ಪೈಗಳ ೬೦ನೇ ವರ್ಧಂತ್ಯುತ್ಸವವು ತಾ ೪ನೇ ದಿನ ಡಾಕ್ಟರ್ ಸುಬ್ಬರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಬೇಂಕಿನ ಉದ್ಯೋಗಸ್ಥರ ಮೂಲಕವಾಗಿ ಬಹು ವಿಜೃಂಭಣೆಯಿಂದ ಜರಗಿತು ಬಹು ಮಂದಿ ಪಾಲುಗಾರರೂ ಸಭಿಕರೂ ನೆರೆದಿದ್ದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ಶ್ರೀನಿವಾಸ ಪೈಗಳವರ ಗುಣಕಥನ ಸಮಾಜಸೇವಾತತ್ಪರತೆಗಳನ್ನು ಹೃದಯಂಗಮವಾಗಿ ವಿವರಿಸಿದರು ಮ. ರಾ। ಬಂಟ್ವಾಳ ನಾರಾಯಣ ಚಡ್ಡ ಬಾಳಿಗರೂ, ಕುಂಬಳೆ ಸುಬ್ರಾಯ ನಾಯಕರೂ ಬಹಳ ಶ್ಲಾಘನೀಯವಾಗಿ ಮಾತನಾಡಿದರು ಸತ್ಕಾರಗಳು ನಡೆದ ನಂತರ ಸಭೆಯು ಮುಕ್ತಾಯವಾಯಿತು

ನಿನ್ನೆ ಸಂಜೆ ಕೂಡಾ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಯವರ ೬೦ನೇ ವಾರ್ಷಿಕೋತ್ಸವದ ಬಗ್ಗೆ ಕೆನರಾ ಬೇಂಕ್ ಲಿಮಿಟೆಡ್, ಇವರ ಪಾಲುಗಾರರ ಟೀಪಾರ್ಟಿ ಸತ್ಕಾರವು ಮಾನ್ಯ ಕಾರ್ಕಳ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಸಭೆಯೂ ವಿಜೃಂಭಣೆಯಿಂದ ಜರಗಿತು. ಅಧ್ಯಕ್ಷರು ಶ್ರೀ ಶ್ರೀನಿವಾಸ ಪೈಗಳ ಸದ್ಗುಣ ಪ್ರತಿಭೆ, ಸೇವಾಧುರಂಧರತೆಯನ್ನು ಕುರಿತು ಶ್ಲಾಘನೀಯವಾಗಿ ಮಾತನಾಡಿದರು ಅದೇ ವಿಷಯದ ಕುರಿತು ಶ್ರೀ ಎಂ ಮಾಧವರಾಯರೂ ಮಾತನಾಡಿದರು ಶ್ರೀಯುತರಿಗೆ ದೀರ್ಘಾಯುರಾರೋಗ್ಯವನ್ನು ಬಯಸಿದ ನಂತರ ಸಭಾವಿಸರ್ಜನೆಯಾಯಿತು

ಉಡುಪಿಯಲ್ಲಿ ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಇವರ ಶಾಖೆಯಲ್ಲಿ ಏಜಂಟರಾಗಿರುವ ಶ್ರೀ ಪಾಂಗಾಳ ಸರ್ವೋತ್ತಮ ನಾಯಕ್, ಬಿ. ಎ ಬಿ. ಎಲ್ ಇವರು ಬೇಂಕ್ ವಹಿವಾಟಿನ ತನ್ನ ಮುಂದಿನ ಮಾಹಿತಿ ಸಂಪಾದನೆಗಾಗಿ ಬೇಗನೇ ಮುಂಬಯಿಗೆ ಹೋಗಿ ಅಲ್ಲಿ ೩ ತಿಂಗಳ ತನಕ ಸೆಂಟ್ರಲ್ ಬೇಂಕಿನಲ್ಲಿ ಪ್ರೊಬೇಶನರಿ ಕೆಲಸ ಮಾಡಿ, ಅದೇ ಬಗ್ಗೆ ಅಲ್ಲಿಂದ ಇಂಗ್ಲಾಂಡಿಗೆ ಪ್ರವಾಸ ಬೆಳಸಲಿರುವರೆಂದು ತಿಳಿಸಲು ಸಂತೋಷಗೊಳ್ಳುತ್ತೇವೆ ಇವರು ವಿಜಯಿಗಳಾಗಿ ಬಂದು ಕೆನರಾ ಬೇಂಕನ್ನು ಅತ್ಯೂರ್ಜಿತಕ್ಕೆ ತರಲೆಂದು ಹಾರೈಕೆ.

ಬೊಂಬಾಯಿಯಿಂದ ಪ್ರಸಿದ್ಧ ಪ್ರಭಾತ ಸಂಗೀತ ಮಂಡಳಿಯವರು ತಮ್ಮ ನಾಟಕಗಳನ್ನು ಹಿಂದೂಸ್ಥಾನ ಸಿನೆಮಾ ಮಂದಿರದಲ್ಲಿ ಆರಂಭಿಸುವರು ನಾಳೆ ರಾತ್ರಿ 'ಸಂಶಯ ಕಲ್ಲೋಲ' ಎಂಬ ಜನಪ್ರಿಯ ನಾಟಕವನ್ನೂ, ಆ ಮೇಲೆ ರವಿವಾರ, ಸೋಮವಾರ ಎರಡು ನಾಟಕಗಳನ್ನೂ ಆಡಿ, ಬೊಂಬಾಯಿಗೆ ತೆರಳುವರು. ಸಂಗೀತಮಣಿ ಜಾವಡೆಕಾರ್ ಮತ್ತು ಶ್ರೀ ನಮಿಶೇಕರ್ ಇವರ ಗಾಯನಪಟುತ್ವವು ಪ್ರೋತ್ಸಾಹಾರ್ಹವೇ.

ಇಲ್ಲಿನ ಕೆನರಾ ಬೇಂಕಿನ ರಜತೋತ್ಸವ ಸಮಾರಂಭವು ಇದೇ ಬರುವ ೨೮ನೇ ಬುಧವಾರ ದಿನ ಜರಗಿಸಲ್ಪಡುವುದಾಗಿ ತಿಳಿದುಬರುತ್ತದೆ.

ಗಾಂಧೀ ದಿನಾಚರಣೆ.

ತಾ, ೪ ೫ — ೩೦ನೇ ಬೆಳಗ್ಗೆ ಪ್ರಭಾತಫೇರಿಯೊಂದು ಸುಮಾರು ೨೦ ಜನರಿದ್ದು ಪೇಟೆಯ ಮುಖ್ಯ ಬೀದಿಗಳನ್ನೆಲ್ಲಾ ಪ್ರಾತಃ ಗಂಟೆ ೬॥ ಒಳಗೆ ಸುತ್ತಾಡಿತು. ಬೆಳಿಗ್ಗೆ ಸುಮಾರು ೯ ಘಂಟೆಗೆ ಹಂಪನಕಟ್ಟೆಯಲ್ಲಿ ಡಿ. ಕಾಣ್ಣಿಯವರಲ್ಲಿ ಶ್ರೀಮತಿ ಸಂಜೀವಿಬಾಯಿ ಮತ್ತು ಶ್ರೀಮತಿ ಜಲಜಾಬಾಯಿ (ಇಬ್ಬರೂ ವಿದ್ಯಾರ್ಥಿನಿಯರು) ಪಹರೆಗೆ ನಿಂತರು. ಸ್ವಲ್ಪ ಸಮಯದಲ್ಲಿ ಅವರನ್ನು ಕೈದುಮಾಡಿ ಸ್ಟೇಷನಿಗೆ ಕೊಂಡೊಯ್ದರು ಅನಂತರ ಶ್ರೀಮತಿ ಕೃಷ್ಣೀಬಾಯಿ ಮತ್ತು ಶ್ರೀಮತಿ ಸುಶೀಲಾಬಾಯಿಯವರು ಅದೇ ರೀತಿ ಅಲ್ಲೇ ಪಹರೆ ಮಾಡಿದರು, ಅವರನ್ನೂ ಕೈದುಮಾಡಿ ಕೊಂಡೊಯ್ದರು, ಆ ಮೇಲೆ ಇಬ್ಬಿಬ್ಬರೇ ಸ್ವಯಂಸೇವಕರು ಒಂದರ ಮೇಲೊಂದು ತಂಡವಾಗಿ ಅಲ್ಲೇ ಪಹರೆ ನಡೆಸಲಾರಂಭಿಸಿದರು. '೧೩ ಘಂಟೆ ಒಳಗೆ ಹೀಗೆ ೭ ತಂಡ ಸ್ವಯಂಸೇವಕರ ಪಹರೆಯಾಯಿತು. ಅಲ್ಲೇ ಬಂದು ನಿಂತಿದ್ದ ಪೋಲೀಸರು ಅವರನ್ನು ಬೆತ್ತಗಳಿಂದ ಹೊಡೆದು ದೂಡಿ ಚದರಿಸಿದರು ಈ ಪೈಕಿ ೫ ಮಂದಿಗಳನ್ನು ಕೈದುಮಾಡಿ ಸ್ಟೇಶನಿಗೆ ಕೊಂಡೊಯ್ದರು ಈ ಮಧ್ಯೆ ೩ ಮಂದಿ ಸ್ವಯಂಸೇವಕರು ರಥಬೀದಿಯಲ್ಲಿ ಸ್ವದೇಶಿ ಉಪ್ಪಿನ ಮಾರಾಟವನ್ನು ಮಾಡುತ್ತಾ ಧ್ವಜವನ್ನು ಹಿಡಿದುಕೊಂಡು ಹೋದರು. ಅವರನ್ನು ಕೈದುಮಾಡಿ ಸ್ಟೇಷನಿಗೆ ಕೊಂಡೊಯ್ದರು.

ಮಧ್ಯಾಹ್ನದ ಮೇಲೆ ಶ್ರೀ ಕಾಣ್ಣಿಯವರ ಅಂಗಡಿಗೆ ಬಾಗಿಲು ಹಾಕಿದ್ದರು ಸುಮಾರು ೩॥ ಘಂಟೆಗೆ ಇಬ್ಬರು ಸ್ವಯಂಸೇವಕರು ರಥಬೀದಿಯಲ್ಲಿ ಮೂಲ್ಕಿಕಾರರ ಅಂಗಡಿಯಲ್ಲಿ ಪಹರೆ ನಡೆಸಲು ಅವರು ಅಂಗಡಿಗೆ ಬಾಗಿಲು ಹಾಕಿದರು ಈ ಸ್ವಯಂಸೇವಕರು ಅಲ್ಲಿಂದ ಮಾರ್ಕೆಟು ರಸ್ತೆಯ ಸೂಜಿಕಾರ್ ಎಂಡ್ ಸನ್ಸರ ಅಂಗಡಿಯಲ್ಲಿ ಪಹರೆಗೆ ನಿಂತರು ಮಾರ್ಕೆಟು ರಸ್ತೆಯಲ್ಲಿ ಯಾವಾಗಲೂ ಪಹರೆ ಮಾಡಲ್ಪಡುತ್ತಿದ್ದ ಆರ್ ಬಿ ವಸಂತರ ಅಂಗಡಿಯನ್ನು ಮಧ್ಯಾಹ್ನ ಮುಚ್ಚಿದ್ದರು. ಪಹರೆಯವರು ನಿಂತೊಡನೆ ಸೂಜಿಕಾರರು ಅಂಗಡಿಯನ್ನು ಮುಚ್ಚಿದರು ಆ ಮೇಲೆ ಅವರು ಮೈದಾನಿನ ಸಮೀಪವಿರುವ ಸಾಲಿ ಮಹಮ್ಮದರ ಅಂಗಡಿಯ ಮುಂದೆ ಪಹರೆಗೆ ನಿಂತರು ಅಲ್ಲಿಯೂ ಪೋಲೀಸರು ಹೊಡೆದು ಅವರನ್ನು ಚದರಿಸಿದರು ಆ ಮೇಲೆ ಸಂಜೆಯವರೆಗೆ ಆ ಅಂಗಡಿಯಲ್ಲಿ ಎರಡೆರಡರ ಐದಾರು ತಂಡಗಳು ಇದೇ ರೀತಿ ಪಹರೆ ಮಾಡಲಾಯಿತು. ಪೋಲೀಸರು ಇವರನ್ನೆಲ್ಲಾ ಹೊಡೆದು ಚದರಿಸಿದರು. ಕೆಲವರನ್ನು ಕೈದುಮಾಡಿ ಕೊಂಡುಹೋದರು ಇಲ್ಲಿ ಪಹರೆ ನಡೆಯುವಾಗ ಮೈದಾನಿನಿಂದ ಮತ್ತು ಇತರ ದೂರದ ಸ್ಥಳಗಳಿಂದ ಹಲವರು ನಿಂತು ನೋಡುತ್ತಿದ್ದರು ಪೋಲೀಸರು ಅವರಲ್ಲಿಯೂ ಹಲವರಿಗೆ ಹೊಡೆದು ದೂರ ಓಡಿಸಿದರು ಕೃಷ್ಣ ಸಿನೆಮಾ ಹಾಗೂ ತಾಜಮಹಾಲ್ ಹೋಟೇಲುಗಳ ಬಳಿಯಲ್ಲಿ ಕೆಲವರಿಗೆ ಹೊಡೆತವಾಯಿತು. ಮೈದಾನಿನಲ್ಲಿದ್ದವರ ಪೈಕಿ ಶ್ರೀ ವಿಟ್ಠಲ ಪ್ರಭು ಎಂಬವರನ್ನು ರಸ್ತೆಗೆ ತಂದು ಪೋಲೀಸರು ಬಲವಾಗಿ ಹೊಡೆಯುತ್ತಾ ಸ್ಟೇಷನಿಗೆ ಕೊಂಡೊಯ್ದರು ಇದೇ ಸಮಯದಲ್ಲಿ ಮಾರ್ಕೆಟು ರಸ್ತೆಯಲ್ಲಿ ಲೂಯಿಸರ ಅಂಗಡಿಯಲ್ಲಿ ಇಬ್ಬರು ಸ್ವಯಂಸೇವಕರು ಪಹರೆ ಮಾಡಿ ಹೊಡೆತಕ್ಕೆ ಗುರಿಯಾದರು

ಇತ್ತ ಬಂದರದಲ್ಲಿ ಪೋಲೀಸ ಸ್ಟೇಷನಿನ ಬಳಿಯಿರುವ ಪಿಟ್ಕಲಜೀ ಮಾಧವಜೀ ಇವರಲ್ಲಿ ಪಹರೆ ನಡೆಯಿತು ಎರಡೆರಡರ ೪ ತಂಡ ಸ್ವಯಂಸೇವಕರು ಒಂದರ ಮೇಲೊಂದಾಗಿ ಪಹರೆ ನಡೆಸಿ ಹೊಡೆತದಿಂದ ಚದರಿಸಲ್ಪಟ್ಟರು ಅವರಲ್ಲಿ ಹಲವರನ್ನು ಕೈದುಮಾಡಿದರು. ಪಾಂಗಾಳ ನಾಯಕ್ ಬೇಂಕಿನ ಬಳಿ ನಿಂತಿದ್ದ ೭ ಮಂದಿ ಸ್ವಯಂಸೇವಕರನ್ನು ಹೊಡೆದು ಚದರಿಸಿದರು. ಪಿಟ್ಕಲಜೀಯವರಲ್ಲಿ ಪಹರೆ ನಡೆಯುವಾಗ ದೂರ ನೋಡನಿಂತವರನ್ನು ಹೊಡೆದು ಇನ್ನೂ ದೂರಕ್ಕಟ್ಟಿದರು. ಈ ಮಧ್ಯೆ ರಸ್ತೆಯಲ್ಲಿ ಹೋಗುತ್ತಿದ್ದ ಶ್ರೀ ತಿಮ್ಮಪ್ಪ ಶೇಣವ ಮತ್ತು ಬೆಳ್ಳಿಪ್ಪಾಡಿ ವೆಂಕಪ್ಪ ರೈಯವರ ಮಗ ರಘುರಾಮ ರೈ ಇವರನ್ನೂ ಕೈದುಮಾಡಿ ಸ್ಟೇಷನಿಗೊಯ್ದರು

ರಾತ್ರೆ ಸುಮಾರು ೭॥ ಘಂಟೆಗೆ ಶ್ರೀಮತಿ ಸುಶೀಲಾಬಾಯಿ ಮತ್ತು ಸಂಜೀವಿಬಾಯಿ ಮತ್ತು ಇಬ್ಬರು ಸ್ವಯಂಸೇವಕರನ್ನು ಸ್ಟೇಶನಿನಿಂದ ಬಿಟ್ಟರು ಸುಮಾರು ೯ ಘಂಟೆಗೆ ಸುಮಾರು ೨೩ ಮಂದಿ ಸ್ವಯಂಸೇವಕರನ್ನು ಬಿಟ್ಟರು ವಿಟ್ಠಲ ಪ್ರಭು ಮತ್ತಿಬ್ಬರು ಸ್ವಯಂಸೇವಕರನ್ನು ಪೋಲೀಸರು ವೆನ್ಲಾಕ್ ಆಸ್ಪತ್ರೆಗೆ ರಾತ್ರೆ ಕಳುಹಿದರು ಅವರು ಅಲ್ಲಿ ಮಲಗಿಸಲ್ಪಟ್ಟಿರುತ್ತಾರೆ ಬೆಳಿಗ್ಗೆ ೧೩ ಘಂಟೆ ಒಳಗೆ ಶ್ರೀ ರಾಮಕೃಷ್ಣ ನರ್ಸಿಂಗ್ ಹೋಮಿನಲ್ಲಿ ೭ ಮಂದಿ ಸ್ವಯಂಸೇವಕರಿಗೆ ಚಿಕಿತ್ಸೆ ನಡೆಸಲಾಯಿತು ಮಧ್ಯಾಹ್ನದ ಮೇಲೆ ೮ ಮಂದಿಗಳು ಚಿಕಿತ್ಸೆ ಹೊಂದಿದರು ಮಧ್ಯಾಹ್ನದವರ ಪೈಕಿ ಪಾಣೆಮಂಗಳೂರು ಮಾಧವ ಕುಡ್ವರು ಈ ಆಸ್ಪತ್ರೆಯಲ್ಲಿ ಮಲಗಿದ್ದಾರೆ ಅವರಿಗೆ ಬಿದ್ದ ಅನೇಕ ಪೆಟ್ಟುಗಳಲ್ಲಿ ಒಂದು ಅವರ ಬಲದ ಕಣ್ಣಿನ ಬಳಿ ಬಿದ್ದ 'ಚಿಹ್ನೆ'ಯಿದೆ

ನಿನ್ನೆ ಉಳಿದಿಬ್ಬರು ದೇಶಸೇವಕರನ್ನು ಬಿಟ್ಟರು ಶ್ರೀಯುತ ತಿಮ್ಮಪ್ಪ ಶೇಣವ ಮತ್ತು ರಘುರಾಮ ರೈ ಮಾತ್ರ ಸ್ಟೇಶನಿನಲ್ಲಿರಿಸಲ್ಪಟ್ಟರು ಇವರಿಬ್ಬರ ತನಿಖೆಯು ಡೆಪ್ಯೂಟಿ ಕಲೆಕ್ಟರರ ಮುಂದೆ ನಿನ್ನೆ ನಡೆಯಿತು "ಪಿಕೆಟಿಂಗ್ ಆರ್ಡಿನೆನ್ಸಿನ ಚಾರ್ಜು — ಸ್ವಯಂಸೇವಕರು ತನಿಖೆಯಲ್ಲಿ ಭಾಗವಹಿಸಲಿಲ್ಲ ಪ್ರತಿಯೊಬ್ಬರಿಗೆ ೩ ತಿಂಗಳಂತೆ ಕಠಿಣ ಸಜೆ ಮತ್ತು ೧೦ ರೂಪಾಯಿಗಳಂತೆ ಜುರುಮಾನೆ ಜುರುಮಾನೆ ಕೊಡದಿದ್ದರೆ ೩ ವಾರಗಳ ಹೆಚ್ಚಿನ ಶಿಕ್ಷೆ ಇಬ್ಬರಿಗೂ 'ಸಿ' ಕ್ಲಾಸು

ಉಡುಪಿ: — ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಶ್ರೀಯುತ ಅಂಕುರಾಜು ಸುಬ್ರಾಯ ಶರ್ಮರ ಧರ್ಮಜಾಗೃತಿಯ ವ್ಯಾಖ್ಯಾನಗಳ ನಂಬ್ರವು ಮೇಜಿಸ್ಟ್ರೇಟರು ತಪ್ಪಿ ನಡೆಸಿ, ಶ್ರೀಯುತ ಶರ್ಮರು ಇನ್ನು ೬ ತಿಂಗಳ ವರೆಗೆ ಉಡುಪಿಯಲ್ಲಿ ಯಾವುದೇ ತರದ ವ್ಯಾಖ್ಯಾನಗಳನ್ನು ಕೊಡಬಾರದಾಗಿ ತೀರ್ಪನ್ನು ಕೊಟ್ಟರು, ಈ ರೀತಿಯಾಗಿ ಮೆರೆದವರು ಗೆದ್ದರು— ಶರ್ಮರು ಸೋತರು. ಆದರೂ, ಶರ್ಮರು ಅಪೀಲು ಮಾಡಿರುವರಂತೆ— ಸತ್ಯಶೀಲರು, ಧಾರ್ಮಿಕರೂ ಎಂದು ಕೀರ್ತಿಗೊಂಡಿರುವ ಶ್ರೀ ಕಾಣೆಯೂರು ಮತ್ತು ಪ್ರಕೃತಿಗೆ ಮೆರೆದ ವಯೋವೃದ್ಧರಾದ್ಯ ಶ್ರೀ ಪಾದಂಗಳವರ್ಗೆ ಸಾಕ್ಷಿಯಾಗಿ ಸರಕಾರದಿಂದ ವಿಚಾರಣೆಯಾಗಬೇಕಾಗಿ ಶರ್ಮರು ಅಪೇಕ್ಷಿಸುತ್ತಾರಂತೆ' ಇರಲಿ, ಇಷ್ಟಾದರೂ ಶರ್ಮರು ಉಡುಪಿಯನ್ನು ಬಿಟ್ಟುಹೋಗಲು ಇಷ್ಟಪಡುವುದಿಲ್ಲ. ಮೆರೆದವರು ತನಗೂ ಧರ್ಮದ ಮೇಲೂ ಉಪಕಾರ ಮಾಡಿರುವರೆಂದೂ — ಉಡುಪಿಯ ಕೆಲ ಸ್ವಾಮಿಯರ ನಡತೆಯು ಉಡುಪಿ ವಾಸಿಗಳಿಗೆ ಚೆನ್ನಾಗಿ ವಿದಿತವಾಗಿರುವುದರಿಂದ, ತಾಲೂಕಿನ ಹಾಗೂ ಜಿಲ್ಲೆಯ ಇತರ ಭಾಗಗಳಲ್ಲಿ ಸಂಚರಿಸಿ ವ್ಯಾಖ್ಯಾನಗಳನ್ನು ಕೊಟ್ಟು ಎರಡು ತಿಂಗಳ ವರೆಗೆ ಸಂಚರಿಸಲು ತನಗೆ ಸುಸಂದರ್ಭ ಒದಗಿತೆಂದೂ ಹೇಳುತ್ತಿರುವರು. ಕೀರ್ತಿಯು ಊರಿಗಿಂತಲೂ ಪರವೂರಿನಲ್ಲಿ ಹಬ್ಬಿದಷ್ಟು ಶ್ರೇಯಸ್ಕರಲ್ಲವೇ?

ಇಲ್ಲಿಯ ಸ್ಟೇಷನರಿ ಸೆಕೆಂಡ್ ಕ್ಲಾಸ್ ಮೆಜಿಸ್ಟ್ರೇಟ್ ತಹಶೀಲ್ದಾರ ಇವರಿಗೆ ಮಂಗಳೂರಿಗೆ ವರ್ಗವಾಗಿ ಇವರ ಬದಲಿಗೆ ಬೇರೆ ಆಫೀಸರರು ನಿಯಮಿಸಲ್ಪಟ್ಟಿರುವರು ಹಾಗೂ ಇಲ್ಲಿಯ ಹೆಸರುವಾಸಿಯಾದ ಸಬ್ ಇನ್ಸ್‌ಪೆಕ್ಟರ ಸಾಲ್ಡಾನರಿಗೆ ಕುಂದಾಪುರ ತಾಲೂಕಿನ ಬೈಂದೂರಿಗೆ ವರ್ಗವಾಗಿ ಅಲ್ಲಿಗೆ ಹೋಗಿರುವರು.

ಕಳೆದ ವಾರದಲ್ಲಿ ರಾಮ ಬಾಣ ಬುಲೇಟಿನ ಮುದ್ರಿಸಲುಪಯೋಗಿಸುವ ಶಿಲಾಯಂತ್ರವನ್ನು ಜಪ್ತಿ ಮಾಡಲು ಕುಂಜಿಬೆಟ್ಟಿನಲ್ಲಿರುವ ಕಲ್ಲುಗುತ್ತಿಗೆಯೊಂದನ್ನು ಪೋಲೀಸರು ಸೂರ್ಯೋದಯದ ಮೊದಲು— ಮುತ್ತಿ ಪರಿಶೋಧಿಸಿದರಂತೆ ಶಿಲಾಯಂತ್ರದ ಬದಲಾಗಿ ಹೆಂಡದ ಗಡಿಗೆಗಳೂ ಬಾಟ್ಲಿಗಳೂ ಮಾತ್ರ ದೃಷ್ಟಿಗೆ ಬಿದ್ದುವಂತೆ' ಸ್ಟ್ರೈಟ್ ಕ್ಯಾಂಪ್ ಕಲ್ಲುಗುತ್ತಿಗೆಯೇ

ಎಂದಿನಂತೆ ಆಗಾಗ್ಗೆ ರಾಷ್ಟ್ರೀಯ ಧ್ವಜಗಳು ಪ್ರತ್ಯಕ್ಷವಾದ [illegible] ತುದಿಯಿಂದ ಸ್ವಾತಂತ್ರ್ಯದ ಪದಗಳನ್ನು ಬೀಸುತ್ತಲೇ ಇವೆ ಪೋಲೀಸರ ದೃಷ್ಟಿಗೆ ಬಿದ್ದಾಗ ಅವುಗಳು ತೆಗೆಯಲ್ಪಡುತ್ತವೆ

[illegible] ಸಿನೇಮಾ ಕಂಪೆನಿಯವರು ಇಲ್ಲಿಂದ ಹೊರಟುಹೋದ ನಂತರ ಜಯಲಕ್ಷ್ಮೀ ಸಿನೆಮಾ ಕಂಪೆನಿಯು ಟೆಂಟಿನ [illegible] ಹೊಸ ಫಿಲ್ಮುಗಳು ಬಂದವು ಕೊನೆಯ ಫಿಲ್ಮು [illegible] ಈ ಫಿಲ್ಮು ತೋರಿಸಿದ ನಂತರ ಕಂಪೆನಿಯು [illegible]

ತಾ ೩ರಂದು ರಾಷ್ಟ್ರಧ್ವಜದೊಡನೆ ಶ್ರೀ ಬಿ ನಾರಾಯಣ ನಾಯಕರ ನಾಯಕತ್ವದಿಂದ ಚಿಕ್ಕ ಮೆರವಣಿಗೆ ಬಂದಿತ್ತು

ತಾ ೪ರಂದು ಸ್ವಯಂಸೇವಕರ ಚಿಕ್ಕ ಮೆರವಣಿಗೆಯೊಂದು ಕೆಲ ಮುಖ್ಯ ಬೀದಿಗಳನ್ನು ಸುತ್ತಾಡಿತು.

ಇದೇ ತಾರೀಖು ೪ನೇ ದಿನ ಸುಮಾರು ೪ ಘಂಟೆಗೆ ಶ್ರೀಮತಿ ಮನೋರಮಾ ಬಾಯಿ, ಶ್ರೀ ಪಾಂಗಾಳ ಮಂಜುನಾಥ ನಾಯಕರ (ಧರ್ಮಪತ್ನಿ) ಇವರ ಚಿಕ್ಕ ಮಗ ಶ್ರೀ ಬಿ ನಾರಾಯಣ ನಾಯಕ ಮತ್ತು ಶ್ರೀ ಕೆ ಗೋಪಾಲಕೃಷ್ಣ [illegible] ಇವರು ಧ್ವಜ ಸಮೇತವಾಗಿ ಜಯಕಾರಗಳೊಡನೆ ಬ್ರಿಟಿಷ ವಸ್ತುಗಳನ್ನು ಬಹಿಷ್ಕರಿಸಿರೆಂದು ಹೇಳುತ್ತಾ ಕಲ್ಸಂಕ, [illegible] ರಥಬೀದಿ ಬಂದು, ಹಿಂಬಾಲಿಸಿದ್ದ ಸುಮಾರು ೨೦೦ ಜನರೆದುರು ರಾಷ್ಟ್ರಗೀತ ಹಾಡಿ ಮೆರವಣಿಗೆ ಮುಗಿಸಿದರು ಇದಾದ ಸ್ವಲ್ಪ ಸಮಯದಲ್ಲಿ ರಿಜರ್ವ್ ಪೋಲೀಸರು ಕಾದಿದ್ದ ಬಸ್ಸು ಒಂದು ಸುಮ್ಮನೆ ಹಿಂತಿರುಗಿತು.

ಸುಮಾರು ೫ ಘಂಟೆಗೆ ಶ್ರೀ ಗೋಪಾಲ ಜನಾರ್ದನ [illegible] ನಾಯಕ [illegible] ಮತ್ತು ವಾಮನದೇವ ಪ್ರಭು ಇವರು ಶ್ರೀ ಕುಂಬಳೆಯವರ ಅಂಗಡಿಯೆದುರಾಗಿ ತಾಲೂಕು ಕಚೇರಿಯನ್ನು ರಾಷ್ಟ್ರಧ್ವಜದೊಡನೆ ಜಯಕಾರ ಮಾಡುತ್ತಾ ನೇರವಾಗಿ ಹೋಗುತ್ತಿದ್ದು ಮುನ್ಸೀಫ ಕೋರ್ಟಿನ ಬಳಿ ಇವರನ್ನು ಪೋಲೀಸರು ಹಿಡಿದು ಸ್ಟೇಶನಿಗೊಯ್ದರು ರಾತ್ರೆ ಅಲ್ಲೇ ಇದ್ದರು ಇಂದು ಮಧ್ಯಾಹ್ನ ಮಲ್ಪೆಯಲ್ಲಿ ಶ್ರೀ ಗೋಪಾಲ ಕೇಶವ ಕಿಣಿ ಅಚ್ಯುತರಾಯ ಕಿಣಿ ಮಾಲಿಂಗ ಮರಕಾಲ, ತೋಮ ಮರಕಾಲ, ಮೊದಲಾದವರು ಉಪ್ಪು ತಯಾರಿಸುತ್ತಾರೆ ಪೋಲೀಸರು ಕೇಳ್ಕೆ ಮೇರೆಗೆ ಅಲ್ಲಿಗೆ ಹೋಗುವಾಗ ಎಲ್ಲ ಮುಗಿದುಹೋಗಿತ್ತು.

ಕಾಸರಗೋಡು — ಇಲ್ಲಿ ಪೋಲೀಸರು ಇಬ್ಬರು ಸ್ವಯಂಸೇವಕರು ಪಿಕೆಟ್ ಮಾಡಿದರೂ ಹೊಡೆಯುವರೆಂದೂ ಪೋಲೀಸರ ಅಪ್ಪಣೆಯನ್ನು ಮೀರಿದ ಕುಮಾರಿ ಗಾಡಿಯವರ ಕುದುರೆ ಜೀನನ್ನು ಕಡಿದರೆಂದೂ ಸ್ವಯಂಸೇವಕರಿಗೆ ಕೂರಿಗನೆಂಬವನು ಪೆಟ್ಟಿನಿಂದ ಹೊಡೆದರೂ ಪೋಲೀಸರು ಕೇಳುವುದಿಲ್ಲವೆಂದೂ ಘಾಯಗೊಂಡ ಸ್ವಯಂಸೇವಕರನ್ನು ಆಸ್ಪತ್ರೆಗೂ ಮನೆಗೂ ಮುಟ್ಟಿಸದೆ ಅಲ್ಲಲ್ಲೇ ಬಿಟ್ಟುಬಿಡುತ್ತಿರುವರೆಂದೂ ಹೇಳಿ ಕೆಲವು ವಿಸ್ಮಯಗಳ ವಿವರವನ್ನು ಕೊಟ್ಟು ಕಾಸರಗೋಡಿನ ಮುಖಂಡರು ಕಲೆಕ್ಟರರಿಗೊಂದು ಮನವಿಯನ್ನು ಮಾಡಿರುವರು.

In the Court of the District Judge of Coorg.

CIVIL ORIGINAL SUIT NO. 3 OF 1931.

Plaintiff P. B. AIYAMMA vs. **Defendant A. A. NANJAPPA.**

NOTICE is hereby given that in the above said suit a preliminary decree has been passed by this court for the sale of the properties-movables and immovables of the partnership concern known as Sri Cauvery Bus Service which has been since dissolved as per order of the court.

The sale will be by public auction and the properties will be put up for sale either in one lot or by separate lots in the premises of the court of the subordinate Judge of Coorg on the 6th day of June 1932 at 12 noon.

At the sale, the public generally and either of the parties are invited to bid, either personally or by duly auhorised agent.

Conditions of Sale.

1. The particulars specified in the schedule below have been stated to the best of the information of the court but the court will not be answerable for any error, misstatement or omission in the proclamation.

2. The amount by which the biddings to be increased shall be determined by the officer conducting the sale. In the event of any dispute, arising as to the amount bid or as to the bidder, the lot shall atonce be again put up to auction.

3. The highest bidder shall be declared to be the purchaser of any lot, provided always that he is legally qualified to bid and provided that it shall be in the discretion of the court or officer holding the sale to decline acceptance of the highest bid when the price offerered appears so clearly inadequate as to make it advisable to do so.

4. For reasons recorded, it shall be in the discretion of the officer conducting the sale to adjourn it subject always to the provisions of rule 69 of order XXI.

5. The person declared to be the purchaser shall pay immediately after such declaration a deposit of 25 per cent on the amount of his purchase money to the officer conducting the sale and in default of such deposit the property shall forthwith be put up again and resold.

6. The full amount of purchase money shall be paid by the purchaser before the court closes, on the 15th day after the sale of property, exclusive of such day, or if the 15th day be a Sunday or other holiday, then on the first office day after the 15th day.

7. In default of payment of the balance of purchase money within the period allowed, the property will be resold after the issue of a fresh notification of sale. The deposit after defraying the expenses of the sale, may, if the court thinks fit, be forfeited to Government and the defaulting purchaser shall forfeit all claim to the property or to any part of the sum for which it may be subsequently sold.

8. The purchaser shall get the possession of all the properties sold as soon as the full purchase money is paid.

Given under my hand and the seal of the court this 9th day of April 1932

(Sd.) **L. J. MacIver,**
District Judge.

SCHEDULE 1.

Immovable Property.

No. of lot	Description of property to be sold	Municipal block No. & Survey No.	Area	Assessment	Name of owner	Remarks
				Rs A P		
1	Tiled house	Block No. 11 Mercara Municipality Sy. No. 22	0 07	11 4 0	Director of Sri Cauvery Bus Service	The property is estimated at Rs 10,000—0—0
2	do	do Sy. No. 23	0 16	32 8 0		
3	Hithlu	do Sy. No. 28 1	1 20	0 0 0		
4	Site	do Sy. No. 24	0 01	0 10 0		

9—4—1932

(Sd.) **L. J. MacIver,**
District Judge.

SCHEDULE II.

Movable Property

No. of lot	Description of property	Approximate value	Remarks
		R A P	
1	*Ten buses	11,000 0 0	*6 Chevarolet buses 2 Ford buses 2 Willeys Buses
2	One Chevarolet car	300 0 0	
3	Chevarolet parts etc	645 0 0	
4	Dodge parts	264 0 0	
5	Ford parts	23 0 0	
6	Reo parts	94 0 0	
7	Furniture	64 0 0	
8	Shed tools	370 0 0	
9	Old Model Ford	10 0 0	
	Total	12,710 0 0	

Sd.) **L. J. MacIver,**
District Judge

ವಿವಿಧ ಸಮಾಚಾರಗಳು.

ಪ್ರಧಾನ ಮಂತ್ರಿಯವರು ನಿವೃತ್ತಿ ಹೊಂದುತ್ತಾರೆ?

ಬ್ರಿಟಿಷ ಸಾಮ್ರಾಜ್ಯದ ಪ್ರಧಾನ ಸಚಿವರಾದ ಮೆಕ್ಡೊನಾಲ್ಡರು ತನ್ನ ಪದವಿಯಿಂದ ನಿವೃತ್ತಿ ಹೊಂದಲಿರುತ್ತಾರೆಂದು ಸುದ್ದಿಯೆದ್ದಿದೆ ಅವರ ಅನಾರೋಗ್ಯ ಸ್ಥಿತಿಯು ಇದಕ್ಕೆ ಕಾರಣವಂತೆ ಅವರ ಬದಲಿಗೆ ಸರ್ ಜೋನ್ ಸ್ಯಾಮುಸನೋ ಅಥವಾ ಬಾಲ್ಡವಿನರೋ ಪದವಿಗೆ ಬರಲಿರುವರು ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ ಅರ್ಲ್ ವಿಂಟರ್‌ಟನ್‌ರವರು "ಸರ್ ಸಾಮುವೇಲ್ ಹೋರರನ್ನು ಡಿಸ್ಮಿಸ್ ಮಾಡಬೇಕೆ"ಂದರು ಹಾಗೂ ಇಷ್ಟರ ತನಕ ಯಾವುದೂ ಇತ್ಯರ್ಥವಾಗಲಿಲ್ಲ ಸೈಮನರು ಪದವಿಗೆ ಬಂದರೆ ಏನಾಗುವುದೋ ಎಂದು ಕೆಲವು ಪತ್ರಿಕೆಗಳೆನ್ನುತ್ತಿವೆ

* * *

ಎಡದಿಂದ ಬಲಕ್ಕೆ ಬರೆಯುವುದು

ಲಂಡನಿನ ಡಿವೊನ್‌ಶಯರ್ ಎಂಬಲ್ಲಿ ಒಬ್ಬ ಹೆಂಗುಸು ಇವಳಿಗೆ ಕೆಲ ಸಮಯದಿಂದೀಚೆಗೆ ಸ್ವಪ್ನದಲ್ಲಿ ಒಬ್ಬ ಒಬ್ಬ [illegible] ಯಿತು ಆಗ ಕೋಣೆಯಲ್ಲಿ ಇವಳು ಎತ್ತಿಹಿಡಿದ ಪಾತ್ರೆಗಳೆಲ್ಲವೂ ಕೆಳಗೆ ಬಿದ್ದು ಹುಡಿಹುಡಿಯಾಗುತ್ತಿದ್ದುವು ಇತ್ತೀಚೆಗೆ ಅವಳು ಕೆಲಸ ಬಿಟ್ಟಳು ಕೆಲವು ದಿವಸಗಳು ಕಳೆಯುತ್ತಲೇ ಅವಳಿಗೆ ಜ್ವರ ಬಂತು ಸ್ವಸ್ಥವಾದಳು ಆದರೆ ಜ್ವರದಿಂದೆದ್ದ ಮರುದಿವಸದಿಂದ ಅವಳು ಬರೆಯುವುದು ಎಡದಿಂದ ಬಲಕ್ಕೆ Poli en[illegible] ಎಂಬ ಶಬ್ದವನ್ನು ಅವಳು ಬರೆಯುವುದು [illegible] ಎಂದು ಈಗ ಇವಳನ್ನು ಇಂದ್ರಜಾಲದಿಂದ ಗುಣಪಡಿಸುತ್ತಿದ್ದಾರೆ

* * *

'ಬ್ರಿಟಿಷ ಅಥವಾ ವಿದೇಶೀ ಬಹಿಷ್ಕಾರವು ತಕ್ಸೀರಲ್ಲ

ನಾನು ಅಭಿಪ್ರಾಯ ಪಡುವಷ್ಟು ಮಟ್ಟಿಗೆ ಬ್ರಿಟಿಷ ಅಥವಾ ವಿದೇಶೀ ಸಾಮಾನು ಬಹಿಷ್ಕಾರ ಉಪದೇಶವು ತಕ್ಸೀರೆನ್ನುವುದಕ್ಕೆ ಯಾವ ಕಾನೂನೂ ಇಲ್ಲ ಎಂದು ಹೇಳಿ ಅಹ್ಮದಾಬಾದ [illegible] ಜಡ್ಜರು ಪತ್ರಪತ್ರಿಕೆಗಳನ್ನು ಮಾರಿ ಪೋಲೀಸರ [illegible] ಶಿಕ್ಷೆಗೆ ಗುರಿಯಾದ ೪ ಮಂದಿ ಹುಡುಗರನ್ನು ಬಿಟ್ಟುಬಿಟ್ಟರು ಇದೇ ರೀತಿಯ ತಕ್ಸೀರುಗಳಿಗಾಗಿ ಶಿಕ್ಷೆಯನ್ನು ಹೊಂದಿದ ಇನ್ನೂ [illegible] ಮಂದಿ ಹುಡುಗರನ್ನು ಇದೇ ಜಡ್ಜರು ಬಿಡುಗಡೆ ಮಾಡಿದ್ದಾರೆ ಕೆಲವರು ಇದೊಂದು ವಿಚಿತ್ರವೆನ್ನುತ್ತಾರೆ

* * *

ಮಗನ ಹಕ್ಕು ತಂದೆಗೋ ಅಜ್ಜನಿಗೋ?

ಲಾಹೋರ್ ಕೋರ್ಟಿನಲ್ಲೊಂದು ವಿಚಿತ್ರ [illegible] ರಹಿಮ್ ಎಂಬವನು ಮೊದಲು ಎಂದೂ ಆಗಿದ್ದ [illegible] ಮಹಮ್ಮದೀಯ ಮತಕ್ಕೆ ಸೇರಿದ [illegible] ಮಗನಿದ್ದ ತಂದೆಯು ಮಗನನ್ನು ಇಸ್ಲಾಂ ಮತಕ್ಕೆ ಸೇರಿಸಿದ [illegible] ಎರಡು ದಿನ ಹುಡುಗನನ್ನು [illegible] ಕೊಂಡು ಹೋಗಿ [illegible] ಕೊಂಡ ಮತ್ತು [illegible] ರಕ್ಷಕನೆಂದು ತನ್ನನ್ನು ನೇಮಿಸಬೇಕೆಂದು [illegible] "ಕೈಸ್ತಪ್ಪಲಿಲ್ಲ [illegible] ತನಗೆ ಜಯವು ದೊರೆಯಬಹುದೆಂದು [illegible] ಆದರೆ [illegible] ಹುಡುಗನ ತಂದೆಯು ಜೀವಂತನಾಗಿರುವುದರಿಂದಲೂ ಹುಡುಗನು ತಂದೆಯಂತೆಯೇ [illegible] ಹೇಳಿ ಮುದುಕನ ಮನವಿಯನ್ನು ತಳ್ಳಿಹಾಕಿದರು ಮಗನಿಗೆ ತಂದೆಯೇ ರಕ್ಷಕನಲ್ಲದೆ ಅವನು ಜೀವಂತನಾಗಿರುವಷ್ಟು ಕಾಲ ಮತ್ತೊಬ್ಬರಾಗಲು ಎಡೆಯಿಲ್ಲ ಎಂದರು

* * *

"ಹಿಂದೂದೇಶದಲ್ಲಿ ಏನೂ ಗಲಾಟೆಯಿಲ್ಲ"

ಸರ್ ಸಾಮುವೇಲ್ ಹೋರರು ಪಾರ್ಲಿಮೆಂಟಿನಲ್ಲಿ ಒಂದು ಮಹತ್ವದ ಭಾಷಣವನ್ನು ಮಾಡಿಬಿಟ್ಟರು 'ಸರಕಾರವು ತನ್ನ ಪ್ರಕೃತ ಧೋರಣೆಯನ್ನು ಬದಲಾಯಿಸುವುದಿಲ್ಲ ಸರಕಾರವು ತನ್ನ ಮುಂಚಿನ ಘೋಷಣೆಯ ಪ್ರಕಾರವೇ ನಡೆಯುತ್ತಿದೆ ನಮ್ಮ ರೀತಿಯಲ್ಲಿ ಅಲ್ಲಿ ದೇಶವನ್ನು ಇಷ್ಟು ತಣ್ಣಗೆ ಇಡಲು/ಮತ್ತಾರಿಂದಲೂ ಸಾಧ್ಯವಿಲ್ಲವೆಂದು ನೃಥವಾಗಿ ಹೇಳಬಲ್ಲೆ ಹಿಂದೂದೇಶದಲ್ಲಿ ಏನೂ ಗಲಾಟೆಯಿಲ್ಲ ಈಗ ಎಲ್ಲವೂ ಸಮಾಧಾನವಾಗುತ್ತಿದೆ ಪೆನ್ಶನ್ ತಿನ್ನುವ ಕಾಲವು ಸಮೀಪಿಸಿದೆಯಾದರೂ ಅಂತಹ ತನ್ನ ಮುಳೇ ವಯಸ್ಸಿನಲ್ಲೂ ಬ್ರಿಟಿಷರಾಯರು ತೋರಿಸುವ ಸಾಹಸವೂ ಚೈತನ್ಯವೂ ಸರ್ವ ಶ್ಲಾಘನೀಯವಿವೆ ಅವರ ಈ ಶಕ್ತಿಯನ್ನು ನೋಡಿ ಇನ್ನಿತರರು ಮತ್ಸರಗೊಳ್ಳಬೇಕು ಅಂತಹ ಶಕ್ತಿಯಿಂದ ಅವರು ಕೆಲಸ ಮಾಡುತ್ತಿದ್ದಾರೆ. ಅಲ್ಲಿಲ್ಲಿ ಅಲ್ಪ ಸ್ವಲ್ಪ ಗಲಾಟೆಯಿದ್ದರೂ, ಜರಗಿದ ಕೆಲಸಗಳು ನಿಜವಾಗಿಯೂ ಹೊಗಳಲ್ಪಡುವಂತಹುಗಳೇ ಹಿಂದೂ ದೇಶದ ಸಾಂಪತ್ತಿಕ ಸ್ಥಿತಿಯು ಉತ್ತಮವಿರುತ್ತದೆ ಅದರ ಸ್ಥಿತಿಯು ಹಾಳಾಗಿರುತ್ತಿದ್ದರೆ ನಮ್ಮೆಡುರು ಸಂಕಷ್ಟದ ಸಾಗರವೇ ಹರಿದಾಡುತ್ತಿದ್ದಿತು ಹಿಂದೂದೇಶದಲ್ಲಿ ಶಾಂತಿಯಿರುವುದರಿಂದಲೇ ನಾವು ಇಷ್ಟು ಒಳ್ಳೇ ಸ್ಥಿತಿಯಲ್ಲಿದ್ದೇವೆ ಸಾಮಾನುಗಳ ಬೆಲೆಯು ಏರುತ್ತಾ ಹೋಗುತ್ತಿದೆ , ಕರಿಗೆ ವಸೂಲಿ ಕ್ರಮದಿಂದಾಗುತ್ತದೆ ಇದರಿಂದಾಗಿ ಹಿಂದೂದೇಶವು ಸುಸ್ಥಿತಿಯಿಂದಿರುತ್ತದೆಂದು ತಿಳಿಯಲಾಗುವುದಿಲ್ಲವೇ? ' ಎಂದರು ರಾಜಕೀಯ ಆಂದೋಲನದ ಕುರಿತು ವಿಸ್ತರಿಸುತ್ತಾ ಅವರು, "ಹಿಂದೂದೇಶದಲ್ಲಿ ಕೆಲ ಸ್ತ್ರೀಪುರುಷರು ಕೈದುಮಾಡಲ್ಪಟ್ಟಿರುವರೆಂದೊಡನೆ ದೇಶವು ಬಳಲುತ್ತಿದೆಯೆಂದು ಹೇಳಲು ಸಾಧ್ಯವಿಲ್ಲ ಈಗ ಜೈಲಿನೊಳಗೆ ಇರುವುದು ಬರೇ ೩೬೦೦೦ ಮಂದಿ ಲಾನ್ಸ್‌ಬರಿ ದೊರೆಯವರು ಸರಕಾರದ ಸದಸ್ಯರಾಗಿದ್ದಾಗ ಈ ಸಂಖ್ಯೆಯ ದ್ವಿಗುಣಿತ ಜನರು ಸೆರೆಮನೆಗೆ ಹೋದರು ಎಂದು ಹೇಳಿದರು ಪೋಲೀಸರ ನಡತೆಯ ಕುರಿತು ವಿವರಿಸುತ್ತಾ ಪೋಲೀಸರ ಅತ್ಯಾಚಾರ ನಡೆದಿದೆಯೆಂದು ಕೇಳಿ ನಾನು [illegible] ನಡೆಸಿದೆ ಆದರೆ ನನಗೇನೂ ಅವರು ಅತ್ಯಾಚಾರ ನಡೆಸಿದಂತೆ ತೋರಿಬರಲಿಲ್ಲ [illegible] ಪದರನ್ನು ಸರಕಾರದಧಿಕಾರಿಗಳು [illegible] [illegible]ಸಿದ್ದಾರೆಂದು ನನಗೆ ತಿಳಿದು ಬಂದಿದೆ ಎಂದರು [illegible] ಹೇಳಿ [illegible] ಸಾಮುವೇಲ್ ಹೋರರು ಬ್ರಿಟನಿನಲ್ಲೂ [illegible] ಹಿಂದೂದೇಶದಲ್ಲೂ ಬ್ರಿಟಿಷ ಸಾಮ್ರಾಜ್ಯಕ್ಕೆ ವಿರೋಧವಾಗಿ ಪ್ರಚಾರಕಾರ್ಯವನ್ನು ಮಾಡುತ್ತಿದ್ದರೆ ಅಂತಹ ಪ್ರಚಾರಕರು ಹಿಂದೂದೇಶದ ಕ್ರಾಂತಿಕಾರರ ಕೈಯಿಂದ ಕೊಲ್ಲಲ್ಪಟ್ಟ ಬ್ರಿಟಿಷ ಬಂಧುಜನಗಳ ಮೇಲೆ ಸ್ವಲ್ಪ [illegible] ಇಡಲಿ ಅಂತಹ ಪ್ರಚಾರ ಕಾರ್ಯದಿಂದಾಗಿ ಸರಕಾರವು ಒಂದ [illegible] ಕೂಡ [illegible] ಧಾವಿಸುವುದು [illegible] ನಾವೇನೋ [illegible] ನಿಯನ್ನು [illegible] ಅದರಿಂದ [illegible] ಒಂದು ಕಾಳಕರು ಕೈಚಪ್ಪಾಳೆಯಾಯಿತು

* * *

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರನ್ನು ಕೊಂದರು

ಕೆಲವು ತಿಂಗಳು ಹಿಂದೆ ಮಿದ್ನಾಪುರದ ಡಿ ಮೆಜಿಸ್ಟ್ರೇಟರಾದ ಪೆಡ್ಡಿಯೆಂಬವರನ್ನು [illegible] ಕೊಂದರಷ್ಟೆ ಅದೇ [illegible] ವ್ಯಕ್ತರ ಸ್ಥಾನಕ್ಕೆ ನಿಯಮಿಸಲ್ಪಟ್ಟ ಡಿ ಮೇಜಿಸ್ಟ್ರೇಟರಾದ ಡೊಗ್ಲಸ್ ಎಂಬವರನ್ನು [illegible] ಒಬ್ಬನು [illegible] ಹೊಡೆದು [illegible] ಕೊಂದನು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾದ ಡಗ್ಲಸರು [illegible] ಕೆಲವು ಪತ್ರಗಳಿಗೆ ಸಹಿಹಾಕುತ್ತಿದ್ದರು ಆಗಿನಲ್ಲಿ ಪ್ರದ್ಯೋಧನು ದಿವ್ಯ [illegible] ಬಂದು ಅವರ ಮೇಲೆ ಎರಡು [illegible] ಬಿಟ್ಟು [illegible] ತ್ತಿದ್ದನು ಅವನನ್ನು [illegible] ಹಿಡಿದರು ಪ್ರದ್ಯೋಧನು ಅದೇ ಆಫೀಸಿನಲ್ಲಿ ಟೈಪ್‌ರೈಟಿಂಗ್ ಕಲಿಯುತ್ತಿದ್ದ [illegible] ಅವನ [illegible] ಜಿಲ್ಲಾ [illegible] ವ್ಯಕ್ತಿಯಲ್ಲವೆಂದು [illegible] ಈ ಕೊಲೆಯಲ್ಲಿ [illegible] ಇದೆಯೆಂದು ತಿಳಿದುಬಂದಿದೆ ಮೆಜಿಸ್ಟ್ರೇಟರ ಹೊಟ್ಟೆ ಕರುಳುಗಳಲ್ಲ ಪಿಸ್ತೂಲಿನ ಗುಂಡು [illegible] [illegible] ದಿಂದ ಹೊರತೂ [illegible] ಕೊಲೆಗಾರನ [illegible] ಒಂದು ಚೂರು [illegible] ಅದರಲ್ಲಿ [illegible] ಘಟನೆಗಾಗಿ [illegible] ಆ ದಿನ [illegible] [illegible] ತಕ್ಷೀರಿನ ತನಿಖೆಯನ್ನು [illegible] ಮಾಡಿದ್ದರು ವ್ಯಕ್ತರ ಆತ್ಮಕ್ಕೆ ಶಾಂತಿಯನ್ನು ಬಯಸಿ ಪ್ರಾರ್ಥನೆಯು [illegible] ಮೊದಲಾದವರು ಮೃತರ ಕುಟುಂಬಕ್ಕೆ ತಾರು ಕಳುಹಿಸಿರುವರು

ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತ್ಯುತ್ಸವ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯರಾದ ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತ್ಯುತ್ಸವವು ಇದೇ ಬರುವ ವೈಶಾಖ ಶು॥ ಪಂಚಮಿಗೆ ಸರಿಯಾದ ಮೇ ತಿಂಗಳ ೩೧ನೇ ಮಂಗಳವಾರದ ಪುಣ್ಯದಿವಸಕ್ಕೆ ಬೀಳುವುದು ಶ್ರೀಮದಾದಿ ಶಂಕರಾಚಾರ್ಯರ ಜಯಂತ್ಯುತ್ಸವ ಆಚರಣೆಯ ಕುರಿತು ಸರ್ವಸಾಮಾನ್ಯರಲ್ಲರಿಗೂ ತಿಳಿದಿರುವ ಕಾರಣ ಇಲ್ಲ ಆ ವಿಷಯ ಹೆಚ್ಚಿಗೆ ಬರೆಯುವ ಆವಶ್ಯಕತೆ ಕಾಣುವುದಿಲ್ಲವಾದರೂ ಪ್ರಸಂಗವಶಾತ್ ಒಂದೆರಡು ಮಾತನ್ನು ಬರೆದರೆ ಅತಿಶಯೋಕ್ತಿಯಾಗಲಿಕ್ಕಿಲ್ಲವೆಂದ ನಂಬಿ ಈ ಪುಟ್ಟ ಲೇಖನವನ್ನು ಬರೆಯತೊಡಗಿರುವೆನು

ಮಹಾನುಭಾವರೇ ಮುಖ್ಯವಾಗಿ ಮಹಾ ಮಹಾ ಮಹಿಮರುಗಳ ಜನ್ಮದಿನಾಚರಣೆಯು ಸಂದರ್ಭದಲ್ಲಿ ಅವರುಗಳ ಸಚ್ಚರಿತ್ರೆ ಧರ್ಮೋಪದೇಶ ಹಿತೋಪದೇಶ ಮತ್ತು ಅವರುಗಳು ಈ ಲೋಕದಲ್ಲಿ ಮಾಡಿದ ಆಚಂದ್ರಾರ್ಕವಾಗಿರುವ ಕಾಣಕ ಹೊಳೆಯುವ ಸತ್ಕಾರ್ಯ ವಗೈರೆಗಳನ್ನು ನಾವು ತಿಳಿದುಕೊಳ್ಳುವರೇ ಪ್ರಯತ್ನಿಸಬಹುದು ಹಾಗೆ ತಿಳಿಕೊಂಡು ನಮ್ಮ ಕೈಲಾದ ಮಟ್ಟಿಗೆ ಅವರು ಹೇಳಿದ ತತ್ವಗಳ ಶ್ರವಣ, ಮನನ, ನಿಧಿಧ್ಯಾಸನಾದಿಗಳಲ್ಲಿ ನಮ್ಮಗಳ ಮನಸ್ಸನ್ನು ಪ್ರೇರೇಪಿಸಲಿಕ್ಕಿಸ ಬಹುದು ಆ ಮಹಾತ್ಮರ ಜನ್ಮದ ಪೂರ್ವ ನಮ್ಮ ದೇಶದಲ್ಲಿ ಆಸ್ತಿಕ ಜ್ಞಾನವು ಹೇಗಿತ್ತೆಂಬುದನ್ನು ಮತ್ತು ಅವರ ಅವತಾರದ ನಂತರ ಹೇಗೆ ಪರಿವರ್ತನೆಯಾಯಿತೆಂದೂ ಚರಿತ್ರೆಯಿಂದಲಾದರೂ ತಿಳಿಯಬಹುದಾಗಿರುತ್ತದೆ ಆದ ಪ್ರಯುಕ್ತ ಅವತಾರದಂತಿರುವ ಆ ಶ್ರೇಷ್ಠ ಮಹಾಪುರುಷರ ಜನ್ಮದಿನಾಚರಣೆಯನ್ನು ಯಾರು ಮತ್ತು ಎಲ್ಲಿ ಇನ್ನೇ ಆಚರಿಸದೆ ಇರುವುದಿಲ್ಲ' ಆದ್ದರಿಂದ ಪ್ರತಿಯೊಬ್ಬ ಆಸ್ತಿಕನು ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತ್ಯುತ್ಸವವನ್ನು ಯಥಾ ಸೌಕರ್ಯ ನಗರ ಸಂಕೀರ್ತನೆ, ಉಪನ್ಯಾಸ ಹರಿಕೀರ್ತನೆ ವಗೈರೆಯ ಕಾರ್ಯಕ್ರಮಗಳಿಂದ ಯೋಗ್ಯ ರೀತಿಯಲ್ಲಿ ಆಚರಿಸುವುದು ಮಾತ್ರವಲ್ಲದೆ ಹಾಗೂ ಆ ದಿವಸ ಅವರ ಅದ್ವೈತ ವೇದಾಂತ ತತ್ವದ ಪ್ರಚಾರದ ಸಂಸ್ಥೆಗಳಿಗೆ ಯಥಾಶಕ್ತಿ ಧನಸಹಾಯ ವಗೈರೆಮಾಡಿ ಶ್ರೀ ಶಂಕರನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಕೃತಾರ್ಥರಾಗುವಂತೆ ಎಲ್ಲರನ್ನೂ ಸಾಕ್ಷಾತ್ ಶ್ರೀ ಶಂಕರನೇ ಪ್ರೇರೇಪಿಸಲೆಂದು ಪ್ರಾರ್ಥಿಸುವ

I K P Sharma,

ಅದ್ವೈತ ಸಮಿತಿಯ ಗೌರವ ಕಾರ್ಯದರ್ಶಿ

ಛ ಸ ಕಾರ್ಯಾಲಯ [illegible] ಮಂಗಳೂರು.

The Canara Bank, Ltd Mangalore
ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು

NOTICE

[illegible]

[illegible]

[illegible]

[illegible]

[illegible] —1932 M M [illegible] K [illegible]

ನೋಟೀಸು

ಉಡುಪಿ [illegible] ಕೋರ್ಟಿನಲ್ಲಿ

O P [illegible]

[illegible]

1 [illegible] 2 [illegible] 3 [illegible] 1 [illegible] 1ನೇ [illegible]

[illegible] 16—6—32ರಲ್ಲಿ [illegible] 11 [illegible] ಕೋರ್ಟಿನಲ್ಲಿ [illegible] ಸರ್ವ ಜನರಿಗೆ ತಿಳಿಸಲಾಗುತ್ತದೆ

ಉಡುಪಿ
[illegible] ೧೯೩೨ K Ramanath Pai,

[illegible]

[illegible] ಅಂಗೀರಸ ಸಂವತ್ಸರದ ವೈಶಾಖ ಶು॥ ೨ ಶನಿವಾರದಿಂದ ಅಂಗೀರಸ ಸಂವತ್ಸರದ ವೈಶಾಖ ಶು॥ ೮ ಶುಕ್ರವಾರದ ವರೆಗಿನ ಪಂಚಾಂಗ

(ಗಣಿತರೀತ್ಯಾ ಮೇಷ—ವೃಷಭ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ. ಉ	ಅಸ್ತ
7	ಶನಿ	೨	೫೪.೩೨	ಕೃತ್ತಿಕಾ	೧೩.೩೨	೩೫	6.10	6.46
8	ರವಿ	೩	೫೭.೧೬	ರೋಹಿಣೀ	೧೮.೧೬	೩೬	6 10	6.45
9	ಸೋಮ	೪	೫೮.೪೨	ಮೃಗಶಿರಾ	೨೨.೧೪	೩೭	6. 9	6 46
10	ಮಂಗಳ	೫	೫೯ ೨	ಆರ್ದ್ರಾ	೨೪.೪೬	೩೮	6. 9	6.46
11	ಬುಧ	೬	೫೭.೪೬	ಪುನರ್ವಸು	೨೬, ೨	೩೯	6. 9	6.46
12	ಗುರು	೭	೫೫.೩೦	ಪುಷ್ಯಾ	೨೬.೧೪	೪೦	6.18	6.46
13	ಶುಕ್ರ	೮	೫೨.೧೬	ಆಶ್ಲೇಷಾ	೨೫.೧೬	೪೦	6'18	6.46

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ(ಕಾವು) Maximum ಹೆಚ್ಚಾದದ್ದು	Minimum ಕಡಿಮೆಯಾದದ್ದು	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
29	89— 8	79— 6	0—05	—
30	90— 7	78— 0	—	—
1	91— 3	75— 9	0—08	—
2	90— 7	81— 2	—	—
3	91— 5	79— 6	—	—
14	90 — 7	77- 9	—	—
5	90— 7	78— 1	0—03	0—50

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ	ವರೆಗೆ ರೂ. ಆ
ಹೊಸ ರಾಶಿ ಅಕ್ಕಿ	3—12	4— 2
ಹೊಸ ಮಸ್ಕತಿ	4— 0	4—12
ಹೊಸ ಗುಡ್ಡೆ	4— 0	4 4
ಹೊಸ ಸುಗ್ಗಿ	3—12	4— 4
ಊರ ಅವ್ವಲ್ ಬೆಳ್ತಿಗೆ	4— 8	5— 0
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	7—14	8—
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4—10	4—12
ಗೋಧಿ ಗೋಣಿ ೧ಕ್ಕೆ	9— 8	12— 8
ತೊಗರಿ ಗೋಣಿ ೧ಕ್ಕೆ	12— 0	12— 8
ಹುರುಳಿ ಗೋಣಿ ೧ಕ್ಕೆ	6— 2	7— 4
ಕಡಲೆ ಗೋಣಿ ೧ಕ್ಕೆ	8— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	13— 8	21— 0
ಉದ್ದು ಗೋಣಿ ೧ಕ್ಕೆ	11— 8	13— 0
ಹೆಸರು ಗೋಣಿ ೧ಕ್ಕೆ	10— 4	11—
ಊರು ಬೆಲ್ಲ ಖಂಡಿ ೧ಕ್ಕೆ	27— 8	30— 0
ಉಪ್ಪು ಗೋಣಿ ೧ಕ್ಕೆ	5— 0	5— 4
ಕೊಬ್ಬರಿ ಖಂಡಿ ೧ಕ್ಕೆ	60—	62—
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	23— 0	23— 8
ಎಳ್ಳಿಂಡಿ ಖಂಡಿ ೧ಕ್ಕೆ	26— 4	26— 8
ಕೊಬ್ಬರಿ ಎಣ್ಣೆ ಮಣ ೧ಕ್ಕೆ	5— 4	6— 8
ಎಳ್ಳೆಣ್ಣೆ ಮಣ ೧ಕ್ಕೆ	6—12	7— 0
[illegible] ೧ಕ್ಕೆ	4— 7	8—12
[illegible] ಸಕ್ಕರೆ ಮಣ ೧ಕ್ಕೆ	4— 0	4— 1
[illegible]	4— 0	6— 0
ಸಾಸಿವೆ ಮುಡಿ ೧ಕ್ಕೆ	5— 4	6— 0
ನೇಟಿವ್ ಕಾಫಿ ಖಂಡಿ ೧ಕ್ಕೆ	217— 8	226—
ಕಾಳುಮೆಣಸು ಖಂಡಿ ೧ಕ್ಕೆ	170— 0	180—
ಯೇಲಕ್ಕಿ ಮಣ ೧ಕ್ಕೆ	27— 0	28—
ಗೇರುಬೀಜ ಮುಡಿ ೧ಕ್ಕೆ	3— 2	—
ಕಬ್ಬಿಣ ಖಂಡಿ ೧ಕ್ಕೆ	35—0	35 8
ತಾಮ್ರ ತಗಡು ಮಣ ೧ಕ್ಕೆ	12 8	13 9
ತಾಮ್ರ ಪಾತ್ರೆಗಳು ಮಣ ೧ಕ್ಕೆ	15— 0	16—0
[illegible] ಸೇರು ೧ಕ್ಕೆ	14—10	14—12
ಹಿತ್ತಾಳೆ ತಗಡು ಮಣ ೧ಕ್ಕೆ	12— 0	12— 8
ಪವನು ೧ಕ್ಕೆ	17—14	17—14
[illegible] ಹುರಿ ಖಂಡಿ ೧ಕ್ಕೆ	35—	—
ಫಿಬೇರಿ ಕಾಫಿ ಖಂಡಿ ೧ಕ್ಕೆ	375—	400—
ಹಳೆ ಅಡಿಕೆ	150—	205—
ಹೊಸ ಅಡಿಕೆ	140	145—

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗಡಿಗೆ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೆ ಸುಮಾರು 2 ಗಂಟೆಗೆ ಮೂಡಗೆರೆಗೂ, ೪ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದೆ. ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಢರಪುರ, ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಲೋರಡೂನ್ ಸೋರಾಬ್, ಕೆ ಸೂರಪ್ಪ ಸೆಟ್ಟಿ.

ಪ್ರೊಪ್ರೈಟರ್ಸ್

THE CANARA PUBLIC CONVEYANCE CO, LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್.

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'**ಸುಬ್ರಹ್ಮಣ್ಯ**'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ 'ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೈದು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. **ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.**

Secretary,

The Canara Public Conveyance Company Ltd., Mangalore

ಪಂಡಿತ ಮಾಲವೀಯರನ್ನು ಬಿಟ್ಟರು.

(೭ನೇ ಪುಟದಿಂದ ಮುಂದುವರಿಸಿದ್ದು)

ನಾನೇನು ಇನ್ನೊಬ್ಬ ಐ. ಸಿ. ಎಸ್ ರವರಿಗೆ ಇದನ್ನು ಹೇಳಿದಾಗ ಅವರು ಏನನ್ನೂ ಹೇಳಲಿಲ್ಲ.

'ನಾನು ಹೀಗೆಂದ ಮಾತ್ರಕ್ಕೆ ಐ. ಸಿ. ಎಸ್. ಪದವೀಧರರೆಲ್ಲ ಕಲ್ಪನಾಶಕ್ತಿರಹಿತರೆನ್ನಲಾಗುವುದಿಲ್ಲ. ಕೆಲವರು ಚತುರರಿದ್ದಾರೆ. ಅವರಲ್ಲಿ ಕಲ್ಪನಾಶಕ್ತಿಯಿಲ್ಲದಿದ್ದರೂ ಅವರ ಮಾರ್ಗಕ್ರಮಣಕ್ಕೆ ಅವರಿಗೆ ತೊಂದರೆಯಾಗುವುದಿಲ್ಲ.

ಧೋತ್ರದ ಕಥೆಯನ್ನು ಸ್ಮರಿಸಿಕೊಂಡು ಹೋದಷ್ಟಕ್ಕೆ ಒಬ್ಬನಿಗೆ ಬೇಸರವು ಹುಟ್ಟುತ್ತದೆ. ಕೆಲವು ಜನರ ಮನೋಭಾವನೆಯು ಎಷ್ಟು ಸಂಕುಚಿತ! ಅವರ ಪ್ರತಿ ಕೆಲಸವೂ ಅಪಾಯಕರ ಧೋರಣೆಯನ್ನೇ ಹೊರಗೆಡಹುತ್ತದೆ' ಇದರಲ್ಲೇನು ಆಶ್ಚರ್ಯ?

ನನ್ನ ದೇಶವು ಹಿಂದೂದೇಶದಂತಹ ದುಃಸ್ಥಿತಿಯಲ್ಲಿರುವುದಾದರೆ ಒಬ್ಬ ಬ್ರಿಟಿಷನು ಈ ಸಮಯದಲ್ಲಿ ತಾನೇನು ಮಾಡುತ್ತಿದ್ದನೆಂದು ಆಲೋಚಿಸುವುದು ಲೇಸು. ಅವನು ತಾನು ಪಂಡಿತನಾಗಿಯೂ ಕಾಂಗ್ರೆಸ್ಸಿಗೆ ಸಹಾಯಮಾಡುತ್ತಿದ್ದೆನೆನ್ನುತ್ತಿದ್ದನು. ಈ ಸಂಗತಿಯು ನಿಜವೆಂದು ಕಾಣಬಹುದು. ಆದರೆ ಅದನ್ನು ಬ್ರಿಟಿಷನು ಒಪ್ಪುವುದಿಲ್ಲ. ತಾನು ಹಾಗೆ ಮಾಡುತ್ತಿದ್ದಿದ್ದಿಲ್ಲವೆಂದೇ ನೆನಸುತ್ತಾನೆ, ಮತ್ತು ಈ ಕುರಿತು ಆಲೋಚಿಸುವುದೂ ಇಲ್ಲ.

ಬ್ರಿಟಿಷನು ಹಿಂದೂದೇಶದ ಸ್ಥಿತಿಯನ್ನು ಹಿಂದೀಯದೃಷ್ಟಿಕೋನದಿಂದ ಕಾಣದಿರಲು ಆಂಗ್ಲ ಮತ್ತು ಹಿಂದೀಯರೊಳಗೆ ಪರಸ್ಪರ ಜಾತೀಯ ಐಕ್ಯಮತ್ಯವು ಇಲ್ಲದಿರುವುದೊಂದು ಕಾರಣವು—ಈ ವಿಷಯದಲ್ಲಿ ಬ್ರಿಟಿಷರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಾರೆ. ಉದಾ—ವಿವಿಧ ಆಚಾರ ವಿಚಾರಗಳು, ಪರ್ದಾಪದ್ಧತಿ ಇತ್ಯಾದಿ. ಇದು ನಿಜವಾಗಿಯೂ ಒಂದು ಸುಳ್ಳು ನೆಪ. ಕಾರಣವೇನೆಂದರೆ ಬ್ರಿಟಿಷ ಜಾತಿಯು ಹಿಂದೀಯರೊಡನೆ ಸೇರಿಕೊಳ್ಳಬಾರದೆಂದು ಇದಷ್ಟು ಯತ್ನವು ನಡೆಯುತ್ತಲಿದೆ.

ಹಿಂದೀಯರೊಡನೆ ಸ್ನೇಹಾಚಾರವನ್ನು ಬೆಳೆಸಿ ಅವರೊಡನೆ ಸಹಕರಿಸಿ ಒಬ್ಬ ಯುರೋಪಿಯನನು ನಡೆದರೆ ಅಂತಹನನ್ನು ಇವನ ಯುರೋಪಿಯನ್ ಜಾತೀಯವರೆಲ್ಲರೂ "ಮಾತೃದೇಶದ್ರೋಹಿ" ಎನ್ನುವರು. ಪರಿಹಾಸ್ಯ ಮಾಡುವರು. ಅವನು ಒಬ್ಬ ಕಾಂಗ್ರೆಸ್‌ವಾಲನ ಸ್ನೇಹವನ್ನು ಮಾಡಿದನೆಂದಾದರೆ ಅವನಿಗೆ ಉಳಿಗಾಲವಿಲ್ಲ. ಒಂದೋ ಅವನು ತನ್ನ ಮಿತ್ರತ್ವವನ್ನು ರಹಸ್ಯವಾಗಿಡಬೇಕು, ಒಂದೋ ತನ್ನ ದೇಶಿಗರ ದುರ್ವಾಕ್ಯಗಳಿಗೊಳಗಾಗಬೇಕು.

ನಾನು ಹಿಂದೂದೇಶದಲ್ಲಿಳಿದೊಡನೆ ಹಿಂದೀಯ ಸ್ನೇಹಿತರೊಬ್ಬರು ನನ್ನ ಬೆನ್ನ ಮೇಲೆ ಕೈಹಾಕಿ ತಟ್ಟಿ ಸಂತೋಷದಿಂದ ಮಾತನಾಡಿದರು. ಇದನ್ನು ಕಂಡ ನನ್ನ ಮೇಲಾಧಿಕಾರಿ ಒಡನಾಡಿಗಳೊಬ್ಬರು ನನ್ನನ್ನು ತನ್ನ ಬಳಿಗೆ ಕರೆದು, ಹಿಂದೀಯರನ್ನು ಅಷ್ಟು ಸಲಿಗೆಯಿಂದ ಕಾಣಬಾರದು, ಎಂದು ಸಮಾಧಾನದಿಂದೆಂದರು. ಅಲ್ಲದೆ ಹಿಂದೀಯರಿಗೆ ಒಂದು ಅಂಗುಲದಷ್ಟು ಸ್ಥಳಕೊಟ್ಟರೆ ಅವರು ಒಂದು ಗಜ ಸ್ಥಳವನ್ನು ಕ್ರಮಿಸುವರು ಎಂದರು. ಮತ್ತು ನಾನು ಬ್ರಿಟಿಷ ಗೌರವವನ್ನು ರಕ್ಷಿಸಿಕೊಳ್ಳಬೇಕೆಂದೂ ಹೇಳಿದರು. ಇದು ೧೦ ವರ್ಷಗಳ ಮೊದಲಿನ ವಿಚಾರ. ಇಂತಹ ವಿಚಾರತರಂಗಗಳನ್ನೇ ಇಂಗ್ಲೆಂಡಿನಿಂದ ಇಲ್ಲಿಗೆ ಬರುವ ಯುವಕರಿಗೆ ಬೋಧಿಸಲಾಗುತ್ತದೆ.

ತಮ್ಮ ದೇಶಿಗರ ದೂಷಣೆಯ ಭಯದಿಂದಾಗಿ ಬ್ರಿಟಿಷರನ್ನು ಹಿಂದೀಯರೊಡನೆ ಸೇರಲು ಬಿಡೋಣಾಗುವುದಿಲ್ಲವೆಂದು ನಿಶ್ಶಂಕೆಯ ವಿಷಯ. 'ಇಂತಹ ಭಯವು ತಮ್ಮ ತಮ್ಮ ಗೌರವೋನ್ನತ್ಯದಿಂದಾಗಿ ಉಂಟಾಗುತ್ತದೆ. ಮರ್ಯಾದೆಯು ಅತಿಯಿರುವುದರಿಂದಾಗಿ ಉತ್ಪನ್ನವಾಗುತ್ತದೆ. ಉದಾ.—ಇಂದು ಗಾಂಧಿಯವರು ಲಾರ್ಡ ಅರ್ವಿನರನ್ನು ಸಂದರ್ಶಿಸಲು ಹೋದಾಗ ಅವರು ತನ್ನ ನಿತ್ಯದ ಉಡುಪಿನಿಂದಲೇ ಹೋದುದು ಒಂದು ಗೌರವ ವಿಹೀನ ಸಂಗತಿಯಾಗಿ ಬ್ರಿಟಿಷನಿಗೆ ಕಾಣುತ್ತದೆ.

ಇದರಿಂದಾಗಿ ಬ್ರಿಟಿಷ ಮತ್ತು ಹಿಂದೀಯರೊಳಗೆ ಕಲಹ-ವಿರುದ್ಧಾಭಿಪ್ರಾಯ. ಬ್ರಿಟಿಷರು ಹಿಂದೀಯರನ್ನು ನಂಬುವುದಿಲ್ಲ. ಹಿಂದೀಯರು ಬ್ರಿಟಿಷರನ್ನು ನಂಬುವುದಿಲ್ಲ. ಹೀಗಾಗಿ ತಮ್ಮ ತಮ್ಮ ಅಂತರ್ಯವನ್ನು ಶಾಂತಚಿತ್ತದಿಂದರಿಯಲು ಇಂಬು ಸಿಗುವುದಿಲ್ಲ.

ಹಿಂದೂದೇಶದವರ ಮೇಲೆ ಅಮೇರಿಕದವರಿಗೆ ಕರುಣೆಯಿದೆಯೇ?

ನ್ಯೂಯೊರ್ಕಿನ "ದಿವರ್ಲ್ಡ್ ಟುಮಾರೋ" ಎಂಬ ಉಜ್ವಲ ಪತ್ರಿಕೆಯೊಂದು ಬರೆಯುತ್ತಾ 'ನಮ್ಮ ಪತ್ರಿಕೆಯು ಬ್ರಿಟಿಷರ ವಿರುದ್ಧವಾಗಿ ಬರೆಯುತ್ತದೆಂದೂ ನಾವು ಬ್ರಿಟಿಷರೊಡನೆ ಸಹಕಾರದಲ್ಲಿಲ್ಲವೆಂದೂ ಹೊರಗೆ ಕೆಲವರ ಅಭಿಪ್ರಾಯವಿದೆ. ಕೆಲವರು ನಮಗೆ ಅಹಿಂಸಾಮಯ ಅಸಹಕಾರದಲ್ಲಿ ಭರವಸೆ ಇಲ್ಲ ಎನ್ನುತ್ತಾರೆ. ಈ ಅಭಿಪ್ರಾಯಗಳ ಕುರಿತು ನಮ್ಮ ಮತವೇನೆಂದರೆ ಬ್ರಿಟಿಷ ರಾಜ್ಯಭಾರದಿಂದಾಗಿ ಹಿಂದೂದೇಶಕ್ಕೆ ಬಹಳ ಪ್ರಯೋಜನವಾಗಿದೆ ಎಂಬುದೇನೋ ನಿಸ್ಸಂದೇಹ. ಅದು ಮಾಡಿದ ಎಲ್ಲಾ ಕೆಲಸಗಳ ನಿಜಾಂಶಗಳನ್ನು ಸಮದೃಷ್ಟಿಯಿಂದ ತುಲನೆ ಮಾಡಿದರೆ ಬ್ರಿಟಿಷ್ ಅಧಿಪತ್ಯದಿಂದ ಹೇಳಿ ಪ್ರಯೋಜನವಾಗಿದೆ ಎಂದು ತಿಳಿದುಬರುವುದು. ನಮ್ಮ ಅಭಿಪ್ರಾಯದ ಮೇರೆಗೆ ಹಿಂದೂದೇಶವು ಸದ್ಯಕ್ಕೆ ಬ್ರಿಟಿಷ್ ಸಾಮ್ರಾಜ್ಯಾಂತರ್ಗತವಾಗಿರುವುದು ಲೇಸು. ಇದರಿಂದ ಪೂರ್ವ, ಪಶ್ಚಿಮ ದೇಶೀಯರೊಳಗೆ ಪರಸ್ಪರ ಐಕ್ಯಮತ್ಯವು ಸನ್ನಿಹಿತವಾಗುವುದು. ಹಿಂದೂದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡುವುದನ್ನು ನೋಡಿ ನಮಗೆ ಅವರೊಡನೆ ಸಹಾನುಭೂತಿಯನ್ನು ತೋರಿಸಲೇ ಬೇಕಾಗುತ್ತದೆ. ಈಗ ಒಬ್ಬ ಜನಾಂಗವು ಮಾತ್ರ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಎದ್ದು ನಿಂತಿರುತ್ತದ ಎಂಬ ಮಾತಿರುತ್ತದೆ. ಅದಕ್ಕೆ ನಮ್ಮ ಹೇಳಿಕೆಯೇನೆಂದರೆ—ಯಾವ ದೇಶದ ಚರಿತ್ರೆಯನ್ನೂ ಕಂಡರೂ ಅಲ್ಪಸಂಖ್ಯಾತರಿಂದಲೇ ಮಹತ್ತಾದ ಸುಧಾರಣೆಗಳಾಗಿವೆ. ಈಗ ಬ್ರಿಟಿಷ ಅಧಿಕಾರಿಗಳು ಹಿಂದೂದೇಶದ ವಿಚಾರವಾದಿಗಳ ವಿರುದ್ಧ ವರ್ತನೆಯು [illegible] ನಿಂತಿದೆ. ಹಿಂದೂದೇಶವನ್ನು ಬ್ರಿಟಿಷರು ಶಾಂತಿಯಿಂದಲೂ ಸಮಾಧಾನದಿಂದಲೂ ಆಳಬಹುದೆಂಬ ಆ ಮಾತಿನ ದಿನವು ಹೋಯಿತು. ಹಿಂದೀಯರ ತೀವ್ರ ಹೆಣಗಾಟವಿಲ್ಲದೆ ಗ್ರೇಟು ಬ್ರಿಟನ ಹಿಂದೂದೇಶವನ್ನು ಬಿಟ್ಟುಕೊಡಲಿಕ್ಕಿಲ್ಲ. ಹಿಂದೀಯರಿಗೆ ಡೊಮಿನಿಯನ್ ಸ್ಟೇಟಸ್ಸನ್ನು ಕೊಡುತ್ತೇವೆಂದು ಬ್ರಿಟಿಷರು ಬಾಯಿಮಾತಿನಲ್ಲಿ ಮಾತ್ರ ಹೇಳಿದ್ದಲ್ಲದೆ ಅದನ್ನು ಕೆಲವು ಕಾಲಾಂತರಗಳ ಮೇಲೆ ಕೊಡುವ ಯೋಜನೆಯಲ್ಲೂ ಕೊಡಲು ಸಿದ್ಧರಾಗಿಲ್ಲ.

ಮಹಾತ್ಮಾ ಗಾಂಧಿಯವರ ಅಹಿಂಸಾತ್ಮಕ ಅಸಹಕಾರ ಚಳವಳವು ಬಹಳ ಆದರ್ಶವಾಯಿ ಮತ್ತು ಪರಿಣಾಮಕಾರಿ ಚಳವಳವು. ಈ ಚಳವಳಕ್ಕಿಂತ ಉತ್ತಮವಾದ್ದು ಹಿಂದೀಯರಿಗೆ ಸಿಗಲಿಕ್ಕಿಲ್ಲ. ಇದನ್ನು ಸಮಷ್ಟಿ ವರ್ಗವು ಪುಷ್ಟೀಕರಿಸಿದರೆ, ಇದು ವಿಜಯಿಯಾಗುವುದೇ ಸರಿ. ಅಹಿಂಸಾತ್ಮಕ ಚಳವಳದಲ್ಲಿ ಪ್ರದರ್ಶಿಸಿದ ಧೈರ್ಯ ಸ್ಥೈರ್ಯ ಆತ್ಮತ್ಯಾಗಾದಿಗಳಿಂದ ಕ್ರಾಂತಿಕಾರಕ ಸಮರದ ಪರಿಣಾಮಕ್ಕಿಂತಲೂ ದ್ವಿಗುಣಿತ ಪರಿಣಾಮವಿದೆ ಎಂದಿದೆ.

ನಮ್ಮೊಳಗೂ ಹಿಂದೀಯರೊಳಗೂ ಇರುವ ಅಭಿಪ್ರಾಯದ ಸಂಶಯವು ಕಡಿಮೆಹೋಗದಿರುತ್ತದೆ. ಕಾಂಗ್ರೆಸ್ಸಿಗೆ ಸಮಷ್ಟಿ ವರ್ಗದ ಒತ್ತಾಸೆಯು ಬಹುಶೀಘ್ರವಾಗಿ ಸಿಗಲಿರುತ್ತದೆ.

ಇಷ್ಟು ತಡವಾಗಿದ್ದರೂ ನಾವು ದೂರ ಉಳಿದಿದ್ದೇವೆ. ಕಳೆದ ೧೦ ವರ್ಷಗಳಲ್ಲಿ ನಾವು ಮಾತ್ರ ನಮ್ಮ ಭಾಷೆಯಲ್ಲಿ ಸಿಕ್ಕಲಿರಾಗಿರುತ್ತಿದ್ದರೆ, ಫಲಕಾರಿಯಾದ ರಚನೆಯನ್ನು ಮಾಡುತ್ತಿದ್ದರೆ ಒಳ್ಳೇದಿತ್ತು. ನಮ್ಮ ತರುಣರು ಹಿಂದೀಯ ಯುವಕರೊಡನೆ ಕೂಲಂಕುಶವಾಗಿ ಚರ್ಚಿಸಿ ಪರಸ್ಪರ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಬಹುದಾಗಿತ್ತು. ಈಗ ಪ್ರಾಯಸ್ಥರೂ, ಅಪ್ರಾಯಸ್ಥರೂ ಹಿಂದೀಯ ಭಾಷೆ, ಆಚಾರ ವಿಚಾರಗಳನ್ನು ಕಲಿಯಬಹುದಿತ್ತು. ನಮ್ಮ ಸ್ತ್ರೀಯರು ಹಿಂದೀಯ ಸ್ತ್ರೀಯರೊಡನೆ ಕಲೆತಿರಬಹುದಾಗಿತ್ತು.' ಹೀಗಿದ್ದರೆ ಇಂತಹ ಸಮಯದಲ್ಲಿ ನಮಗೆ ಆಲೋಚನೆ ಮಾಡಲು ಸಹಾಯವು ದೊರೆಯುತ್ತಿದ್ದಿತು. ಆದರ ಇಷ್ಟರ ತನಕ ನಾವೇನೂ ಮಾಡಲಿಲ್ಲ. ಗಾಳಿ ಇಲ್ಲದ ಹೋಣೆಯಲ್ಲಿರುವವರಂತಿದ್ದೇವೆ.

ಈಗ ಹೊತ್ತಾಯಿತು. 'ಆದರೂ ಹೊತ್ತು ದಾಟಿ ಹೋಗಲಿಲ್ಲ' ಹಿಂದೂಸ್ಥಾನವನ್ನು ಬ್ರಿಟಿಷ ಸಾಮ್ರಾಜ್ಯಾಂತರ್ಗತವಾಗಿಟ್ಟುಕೊಳ್ಳಲು ನಮಗೆ ಸಮಯವಿದೆ. ಇದನ್ನು ನಾವು ಮಾಡುವೆವೋ ಅಥವಾ ನಾವು ನಮ್ಮ ನಿತ್ಯದ ಕಠೋರತೆಯನ್ನು ತೋರಿಸುವೆವೋ ತಿಳಿಯದು.

* * *

ಪಂಡಿತ ಮದನಮೋಹನ ಮಾಲವೀಯ ಅವರ ಮಗ ಪಂಡಿತ ಗೋವಿಂದಕಾಂತ ಮಾಲವೀಯ, ಅವರ ಮೊಮ್ಮಗ ಶ್ರೀಧರ ಮಾಲವೀಯರನ್ನು ಬಿಡುಗಡೆ ಮಾಡಿ ರೈಲು ಹತ್ತಿಸಿ ಮನೆಗೆ ಹೋಗ ಬಿಟ್ಟರು. ೧೩ ಮಂದಿ ಸ್ತ್ರೀಯರನ್ನೂ ೬೫ ಮಂದಿ ಪುರುಷರನ್ನೂ ಬಿಟ್ಟಿರುವರು.

೬೦೦

ಕಲ್ಕತ್ತದಲ್ಲಿ ಒಟ್ಟು ೬೦೦ ಸಂಸ್ಥೆಗಳನ್ನು ಕಾಯಿದೆ ವಿರೋಧವಾಗಿ ಮಾಡಿದರು. ತಾ ೫ನೇ ದಿನವೂ ಒಂದನ್ನು ನಿಷಿದ್ಧಪಡಿಸಿದರು.

ಕೈದು.

೪೭ನೇ ಕಾಂಗ್ರೆಸ್ ಮಹಾಸಭೆಯ ಸ್ವಾಗತ ಸಮಿತಿಯ ಚೆಯರ್‌ಮೆನರಾದ ಪಂಡಿತ್ ಶ್ಯಾಮಲಾಲರು ಕಾನೂನು ಉಲ್ಲಂಘಿಸಿದುದಕ್ಕಾಗಿ ಕೈದುಮಾಡಲ್ಪಟ್ಟರು.

ಗೋಡೆಯಲ್ಲಿ ಬರೆದುದಕ್ಕೆ ಶಿಕ್ಷೆ

ಮದ್ರಾಸಿನಲ್ಲಿ ಇಬ್ಬರು ಸ್ವಯಂಸೇವಕರು ಕಾಂಗ್ರೆಸ ಕಾರ್ಯಕ್ರಮವನ್ನು ಗೋಡೆಯ ಮೇಲೆ ಬರೆದುದಕ್ಕಾಗಿ ಶಿಕ್ಷಿಸಲ್ಪಟ್ಟರು.

ರಥದಲ್ಲಿ ಬಾವುಟ

ತಿನ್ನೆವೆಲ್ಲಿಯ ಒಂದು ದೇವ[illegible] ಎಂಬಲ್ಲಿ ರಥೋತ್ಸವವು ಜರಗಿತು. ರಥವನ್ನು ಎಳೆಯುವಾಗ ಅಲ್ಲಿದ್ದ ಪೋಲೀಸರು ಒಂದು ರಥದ ಮೇಲೆ ಹಾರಾಡುತ್ತಿದ್ದ ರಾಷ್ಟ್ರೀಯ ಬಾವುಟವನ್ನು ತೆಗೆಯಬೇಕೆಂದರು. ಜನರು ರಥವನ್ನು ಬಿಟ್ಟು ಹೋದರು. ಮಾರ್ಗದ ಮಧ್ಯದಲ್ಲಿ ರಥವನ್ನು ನಾಲ್ಕು ದಿನಗಳ ನಂತರ ತೆಗೆಯಲಾಯಿತು.

[illegible] ಪತ್ರಿಕೆಯ ಸಂಪಾದಕನನ್ನು ಕೈದುಮಾಡಿದ್ದರ ಪ್ರಯಾಗ ಅಡ್ವಾನ್ಸ್ ಪತ್ರಿಕೆಯ ಉಪಸಂಪಾದಕರಾದ [illegible] ಎಂಬವರನ್ನು ಕೈದುಮಾಡಲಾಗಿದೆ.

ಜಮೀನ್ದಾರರು ಪೋಲೀಸರಾಗಬೇಕಂತೆ.

ಕಲ್ಕತ್ತದ [illegible] ಜಮೀನ್ದಾರರೂ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರೂ ಆಗಿರುವ ಶ್ರೀ ನರೇಂದ್ರನಾಥ ಬೋಸ್ ಎಂಬವರು ತನ್ನ ಕೋವಿಯನ್ನು ಸರಕಾರಕ್ಕೆ ಒಪ್ಪಿಸಬೇಕೆಂದೂ ಮತ್ತು ಅವರು ಸ್ಪೆಶಲ್ ಪೋಲೀಸರಾಗಿ ಕೆಲಸಕ್ಕೆ ಬರಬೇಕೆಂದೂ ಅಲ್ಲಿ ಕಲೆಕ್ಟರ ಹುಕುಂ ಒಂದನ್ನು ಶ್ರೀ ಬೋಸರಿಗೆ ಕಳುಹಿಸಿದ್ದಾರೆ. ಆದರವರು ತನ್ನ ಬಿಲ್ಲೆಯನ್ನು ಹಿಂದಿರುಗಿಸಬೇಕಾಗಿ ಮನವಿಮಾಡಿಕೊಂಡಿದ್ದಾರೆ.

ಆಸ್ತಿ ಏಲಂ.

ನಾಗಪುರದಲ್ಲಿ ಶ್ರೀ ಅಭ್ಯಂಕರರ ಮೋಟರ್ ಎಂಬುದು ಏಲಂ ಮಾಡಲ್ಪಟ್ಟಿತು. [illegible] ಹೋಗಲಿಲ್ಲ. ಅವರ ಮೇಲಿನ [illegible] ವಸೂಲಿಗಾಗಿ ಅವರ ಆಸ್ತಿಗಳಿಂದ [illegible] ಹರಾಜಿಗೆ ಇಡಲ್ಪಟ್ಟಿವೆ.

ಸೀರೆಯ ಏಲಂ.

ದಿಲ್ಲಿಯಲ್ಲಿ ಸಂದ್‌ಚಂದ್ ಮೇಧಾ ಎಂಬವರ ಪತ್ನಿಯನ್ನು ೬ ತಿಂಗಳ ಸಜೆ ೫೦೦ ರೂಪಾಯಿ ದಂಡಕ್ಕೆ ಗುರಿಪಡಿಸಿದ್ದರು. ಆ ದಂಡವನ್ನು ವಸೂಲು ಮಾಡುವುದಕ್ಕಾಗಿ ಶ್ರೀಮತಿಯವರ ಗಂಡನ ಆಸ್ತಿಗಳು ಜಪ್ತಿಮಾಡಲ್ಪಟ್ಟವು. ಮೇಧಾರು ಅದು ಸರಿಯಲ್ಲವೆಂದು ಅರ್ಜಿಮಾಡಿಕೊಂಡರು. ಆ ಮೇಲೆ ಸ್ಪೆಟರು ಆಸ್ತಿಗಳನ್ನು ಹಿಂದೆ ಕೊಡಿಸಿದರು. ಶ್ರೀಮತಿಯವರ ದಂಡವನ್ನು ಅವರ ೬ ಸೀರೆಗಳ ಏಲಮಿನಿಂದಾಗಿ ಪಡೆಯಲಾಯಿತು.

ಮುಂಬಯಿಯ ಒಂದು ಮುದ್ರಣಾಲಯದಲ್ಲಿ ಪ್ರಕಟಿಸಲ್ಪಟ್ಟ 'ಕ್ರಾಂತಿಕಾರ ಚೀನ' ಎಂಬ ಪುಸ್ತಕವನ್ನು ನಿಷಿದ್ಧಪಡಿಸಿ, ಅದನ್ನು ಹುಡುಕಿದರು. ಈ ಪುಸ್ತಕದ ಲೇಖಕನ ಹೆಸರು 'ವಿದ್ಯಾರ್ಥಿ' ಎಂಬುದಾಗಿದೆ. ಚಕ್ರವರ್ತಿಗಳ ಮೇಲೆ ಯುದ್ಧ ನಡೆಸಲು ಯತ್ನಿಸಿದ ಶ್ರೀ ಎಮ್. ಎನ್. ರೋಯ್ ಇವರ ಲೇಖನವಿದೆಯೆಂದು ಸಂಶಯಿಸಲಾಗಿದೆ. ಅನೇಕ ಪುಸ್ತಕಗಳು ದೊರೆತಿವೆ.

* * *

ನೆಕ್ಕಿಸ್ಸಿರಿ ಶಾಸ್ತ್ರೀಯವಾಗುವದು॥

ಕಿಮ್ಮತ್ತು ಅಗ್ಗ ಫಲಶ್ರುತಿ ಶ್ರೇಷ್ಠ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

- + -

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಶಾಸ್ತ್ರಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ '**ಧನ್ವ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ**' ಅವರ ಶಿಷ್ಯರಿಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ಕರೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಭಸ್ಮಗಳು, ಚೂರ್ಣ, ವಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧ ಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಗುತ್ತವೆ. ತಯಾರ ಇರುವವು ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ವಯಸ್ಸು, ನಿತ್ಯ ಆಹಾರದ ಕ್ರಮ, ವೃತ್ತಿ ತಿಗರೆಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಸಹಿತ ಇವರ [illegible] ಸಂಗತಿಗಳಲ್ಲಿ ಎಷ್ಟು ಕ್ರಮವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಇದ್ದು ಬಂದ. ಸಂದರ್ಭಬೇಕಾದ ಸಂಗತಿಗಳಿಗೆ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ [illegible] ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿಗೆ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ವಿಶಾರದರುಗಳ ಇವೆ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದ

ಬಾರದ ವ್ಯತಿ ಶನಿವಾರ ವಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇರ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ ಅದಿಕ ಪ್ರಶಂಸ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಒರುವುದು ತಿಂಡಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವುಳ್ಳ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಒಹಿರೋದ್ದೀಪನ ತೇಲ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೩

ವಿಳಾಸ — **ಶಕ್ತಿಸುಧಾ ಕಾರ್ಯಾಲಯ**

೨೩ ಕಾಂಬಾರವಾಡ 4ನೇ ಗಲ್ಲಿ

ಮುಂಬಯಿ.

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತ್ತರ್ಲ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂಮಿಕ್ಶ್ಚರ್, ಮತ್ತು ಎಗ್ಯೂಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್

ಕೇಡಲ್ ರೋಡ್ ಪೊ ಆ ದಾದರ್ ಮುಂಬಾಯಿ 14

Dr H L. Batliwalla, Sons & Co., Ltd.

Kadell Road, P. O. Dadar Bombay 14.

ತಂತಿ ವಿಳಾಸ —"CAVASPUR" Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್



ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ [illegible] ಪಥ್ಯವು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು [illegible] ಪಡಿಸಿ [illegible] ಆರೋಗ್ಯ [illegible] ಕೊಡುತ್ತದೆ

ಅರ್ಕ — ಇದು ಎಲ್ಲಾ ತರದ ಜ್ವರಗಳನ್ನು [illegible] ಪಡಿಸಿ ಇಡೀ ದೇಹವನ್ನು [illegible]ಗೊಳಿಸುತ್ತದೆ

ಅಮೃತ — ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd, Bombay,14.

ದಿ ಝಾಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ.

ಲೋಕಪ್ರಸಿದ್ಧವಾದ

'ಝಾಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಲೆ [illegible] ಇತರ ಮೂಲಿಕೆಗಳನ್ನು [illegible] ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು [illegible] ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಜೋಡಿ ರೂ 10/- ಕ್ರಯ 1 ಪಾವು ಸೀಸ ರೂ 2/8 ½ ಪಾ ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು.—**ದಾಮೋದರ್ ಅಂಡ್ ಕಂಪೆನಿ**, 78 ಜ್ವೆನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು.—**ಮೆಸರ್ಸ್ ಪಂಡಿತ ಮತ್ತು ಕಂಪೆನಿ**

ಮಂಗಳೂರು ಏಜಂಟರು — **ಶಾ ಅಂಡ್ ಕಂಪೆನಿ**, ಡೈಮಂಡ್ ಬಿಲ್ಡಿಂಗು

ಸಿರ್ಸಿ ಏಜಂಟರು — **ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್.**

ಸಬ್ ಏಜಂಟರು—ಮೈಸೂರು ಏಜಂಟರು — **ಟಿ. ಸಿ ನಟರಾಜ್ ಅಂಡ್ ಕೊ,** ಸಯಾಜಿರಾವ್ ರೋಡ್.

ಬೆಂಗಳೂರು ಏಜಂಟರು — **ಬಿ ಪ್ರೊಷಟ್‌ಲಾಲ್ ಕಂಪೆನಿ,** ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ದ. ಕ. ಜಿಲ್ಲೆಯ ಖಾಸಗಿ ಶಾಲೆಗಳ ಮೆನೇಜರರ

ಮತ್ತು

ಅಧ್ಯಾಪಕರಲ್ಲಿ, ನಮ್ರ ವಿನಂತಿ.

ಸರಕಾರದಿಂದ ಖಾಸಗಿ ಶಾಲೆಗಳಿಗೆ ವರುಷಕ್ಕೆಷ್ಟು(?) ಅತ್ಯಲ್ಪ ಸ್ಕೇಲಿನದೆಂದು ನಿಶ್ಚಿತ ಗ್ರೇಂಟಾದರೂ, ಯಾವ ಅನುಮಾನವೂ ಇಲ್ಲದೆ, ದೊರೆಯುವದೆಂಬ ಭರವಸೆಯು ಬಹು ಕಾಲದಿಂದಲೂ ಅಂಟಿಕೊಂಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಂಬಾ ಖಾಸಗಿ ಶಾಲೆಗಳು ಪ್ರಚಾರವಾಗಲು ಸರಕಾರದ ಮೇಲಿರುವ ಈ ಭರವಸೆಯೇ ಕಾರಣವಾಗಿತ್ತು. ಮುಖ್ಯವಾಗಿ ಬಾಸೆಲ್ ಮಿಶನಿನಂಥಾ ಕೆಲವು ಕ್ರೈಸ್ತ, ವ ಹಿಂದೂ ಸಂಸ್ಥೆಗಳು ಪ್ರಾಥಮಿಕ ವಿದ್ಯಾ ಪ್ರಚಾರಕ್ಕಾಗಿ ವಾರ್ಷಿಕ ವಿನಿಯೋಗಿಸುತ್ತಿರುವ ಅಪಾರ ದ್ರವ್ಯವನ್ನೂ ಸರಕಾರದಿಂದ ಸಿಕ್ಕುವ ಅಲ್ಪ ಸ್ಕೇಲಿನ ಗ್ರೇಂಟನ್ನೂ ತುಲನೆ ಮಾಡಿದ್ದಲ್ಲಿ ಕೇವಲ ವಿನಿಯೋಗದ ಮೊತ್ತದ ಅರ್ಧ ಎಂದರೂ ಹೆಚ್ಚಿನ ತಪ್ಪಾಗದು. ಇಂಥಾ ಪ್ರಬಲವಾದ ಸಂಸ್ಥೆಗಳಾದರೂ ಸರಕಾರದಿಂದ ದೊರೆಯುವ ವಾರ್ಷಿಕ ಗ್ರೇಂಟನ್ನು ಅತ್ಯಾಸಕ್ತಿಯಿಂದ ಎದುರು ನೋಡುತ್ತಿದ್ದವು. ಹೀಗೆ ಸರಕಾರದ ಗ್ರೇಂಟಿನ ನಂಬಿಗೆಯು ಬಲಗೊಂಡಷ್ಟಕ್ಕೆ ಟೀಚರ್ ಮೆನೇಜರರ ಶಾಲೆಗಳೂ ಅಲ್ಲಲ್ಲಿ ಉದ್ಭವಿಸುತ್ತಾ ಕಾಲಕ್ರಮೇಣ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ತಲೆ ಎತ್ತಿ ನಿಂತವು. ಟೀಚರ್ ಮೆನೇಜರರೆಂದರೆ ಕರೆಯಿಸಲ್ಪಟ್ಟ ಯಾವ ಬಂಡವಾಳವೂ ಇಲ್ಲದೆ, ಒರೇ ಸರಕಾರದ ಗ್ರೇಂಟಿನಲ್ಲಿಯೇ ಇತರ ಅಧ್ಯಾಪಕರೊಂದಿಗೆ ತಮ್ಮ ಉದರಪೋಷಣೆಯನ್ನು ಕೂಡ ಅವಲಂಬಿಸಿಕೊಂಡಿರುವ ಬಡಸಂಸ್ಥೆಗಳು. ಇಂಥಾ ಈ ಸಂಸ್ಥೆಗಳಾದರೂ, ವಿದ್ಯಾ ಪ್ರಚಾರದಲ್ಲಿ ಅಳಿಲು ಭಕ್ತಿಯ ಮಳಲು ಸೇವೆಯನ್ನು ಮಾಡುತ್ತಿವೆ ಎಂದು ಎಲ್ಲರ ಮಾತು. ಹೀಗೆ ಎಲ್ಲಾ ವಿಧದ ಎಯಿಡೆಡ್ ಶಾಲೆಗಳೂ ಒಂದಲ್ಲ ಒಂದು ವಿಧದಿಂದ ಸರಕಾರದ ಗ್ರೇಂಟನ್ನು ನಂಬಿಕೊಂಡೇ ತಮ್ಮ ಕೆಲಸವನ್ನು ಸಾಗಿಸುತ್ತಿವೆ ಎಂಬುದು ಎಲ್ಲರೂ ಒಪ್ಪತಕ್ಕದ್ದಾಗಿದೆ. ಒಟ್ಟಾರೆ ನಮ್ಮ ಜಿಲ್ಲೆಯ ಖಾಸಗಿ ಶಾಲೆಗಳಿಂದಾಗ ವಿದ್ಯಾಪ್ರಸಾರವು ಮದ್ರಾಸು ಸಂಸ್ಥಾನದ ಅನೇಕ ಜಿಲ್ಲೆಗಳಿಗಿಂತಲೂ ಉತ್ತಮವಾಗಿದೆ ಎಂದು ಹಲವರ ಅನುಭವವಾಗಿದೆ.

ದೇಶವೇ ದುರ್ಭಿಕ್ಷ ಕಾಲದ ದವಡೆಯಲ್ಲಿ ಸಿಲುಕಿಕೊಂಡು ತತ್ತರಿಸುತ್ತಿರುವಾಗ ನಮ್ಮ ಮದ್ರಾಸು ಸರಕಾರವೂ ದ್ರವ್ಯಾಭಾವದಿಂದ ಬಳಲುತ್ತಿರುವುದು ಸೋಜಿಗವಲ್ಲ. ಸರಕಾರದ ಅಡಚಣೆಯಲ್ಲಿ ಅದು ತನ್ನ ವ್ಯಯವನ್ನಳಿಸುವ ಅದರ ಪೋಷಣೆಯಲ್ಲಿರುವ ಇಲಾಖೆಗಳು, ತಮ್ಮ ಉತ್ಪತ್ತಿಯಿಂದ ಸ್ವಲ್ಪಾಂಶ ಬಿಟ್ಟುಕೊಡುವುದೂ ಅನುಚಿತವೆನ್ನಲಾಗದು. ಪರಂತು ಸರಕಾರವು ಯಾವ್ಯಾವ ಇಲಾಖೆಗಳಲ್ಲಿ ಯಾವ್ಯಾವ ದಾಮಾಶಾಯಿಯಲ್ಲಿ ರಿಟ್ರೆಂಚಮೆಂಟಿನ ಕತ್ತರಿಯನ್ನುಪಯೋಗಿಸಿಯದೆ? ಯಾವ್ಯಾವ ಇಲಾಖೆಯು ಆ ಕಡಿತವನ್ನು ತಡೆಯಲಿಕ್ಕೆ ಎಷ್ಟರ ಮಟ್ಟಿಗೆ ಶಕ್ತಿಯುಳ್ಳದ್ದಾಗಿದೆ? ಎಂಬ ವಿಚಾರವನ್ನು ಪ್ರಸ್ತುತ ಬಾಕಿ ಇಟ್ಟು ಖಾಸಗಿ ಶಾಲೆಗಳಿಗೆ ಕೂಡ ಈ ಗ್ರೇಂಟಿನಲ್ಲಿ ಯಾವ ವಿಧದಲ್ಲಿ ಕೊಡಲಿ ಏಟು ಬಿದ್ದಿದೆ? ಅದೂ ಕೂಡಾ ಪ್ರಾಂತ್ಯದ ಎಲ್ಲಾ ಜಿಲ್ಲೆಗಳಲ್ಲಿ ಯಾವ ದಾಮಾಶಾಯಿಯಲ್ಲಿ ಕಡಿಯಲ್ಪಟ್ಟಿದೆ? ಎಂಬ ವಿಷಯವನ್ನು ಮಾತ್ರ ಯೋಚಿಸಿದರೆ ನಮ್ಮ ಜಿಲ್ಲೆಯ ಮೇಲಿನ ವಿಚಾರವು ಕರುಣಾಜನಕವಾಗಿದೆಯೆಂದು ಒಡಂಬಡುವುದು.

ಖಾಸಗಿ ಶಾಲೆಗಳ ಗ್ರೇಂಟಿನಲ್ಲಿ ಸಹಿಸಲಾರದ ಆಘಾತ ಉಂಟಾಗಬಾರದಾಗಿ ಹಳೆ ಜನವರಿ ಲಾಗಾಯ್ತು ಅನೇಕ ವಿಧವಾಗಿ ಸರಕಾರಕ್ಕೆ ನಾವು ಮೊರೆ ಇಡುತ್ತಿದ್ದೆವು. ಕಟ್ಟಕಡೆಗೆ ಸರಕಾರದಿಂದ ಸಂಕ್ಷನ್ ಆದ ಈ ವರುಷದ ಗ್ರೇಂಟನ್ನು ಪರಿಶೀಲಿಸುವಾಗ, ಮೊದಲೇ ಹಲವು ತರದ ಕಡಿತಗಳಿಗೊಳಗಾಗಿ ಉಳಿದುಳಿದ ಅತ್ಯಲ್ಪ ಗ್ರೇಂಟನ್ನಾದರೂ ಪಡೆಯಲಿಕ್ಕೆ ಹಾತೊರೆಯುತ್ತಿದ್ದ ನಮ್ಮ ಜಿಲ್ಲೆಯ ಶಾಲೆಗಳಿಗೆ ಸರಕಾರವು ಪುನಹಾ ೧ ಅಂಶದ ಕೊಡಲಿ ಏಟನ್ನುಪಯೋಗಿಸಿದ್ದಾದರೆ ಗಾಯದ ಮೇಲೆ ಬ್ರಹ್ಮಾಸ್ತ್ರ ಹೊಡೆದಂತಾಯಿತು. ತಡೆಯಲಾರದ ಈ ವೇದನೆಯಿಂದ ಖಾಸಗಿ ಶಾಲೆಗಳ ಕಾರ್ಯಕ್ಷೇತ್ರದಲ್ಲಿ ನಿರುತ್ಸಾಹವೂ, ಅತೃಪ್ತಿಯೂ, ಅಶಾಂತಿಯೂ ಮನೆ ಮಾಡಿದ್ದಲ್ಲದೆ ಇಂತಹ ಭಯಂಕರ ದುಸ್ಪರಿಣಾಮವು ಮುಂದಕ್ಕೆ ನೆಲೆನಿಂತರೆ, ನಮ್ಮ ಜಿಲ್ಲೆಯ ಖಾಸಗಿ ಶಾಲೆಗಳು ಮುಖ್ಯವಾಗಿ ಟೀಚರ್ ಮೆನೇಜರರ ಶಾಲೆಗಳು ನಿರ್ನಾಮವಾಗುವುವೆಂಬುದಕ್ಕೆ ಸಂದೇಹವೇ ಇಲ್ಲ. ಸುಮಾರು ಅರೆವಾಸಿ ಖಾಸಗಿ ಶಾಲೆಗಳಿಂದ ಪ್ರಸಾರವಾಗುತ್ತಿದ್ದ ಪ್ರಾಥಮಿಕ ವಿದ್ಯಾಭ್ಯಾಸದ ದಾರಿಯು ಹೀಗೆ ಕುಂಠಿತವಾಗಲು, ನಮ್ಮ ಜಿಲ್ಲೆಯ ವಿದ್ಯಾಪ್ರಚಾರವು ಎಷ್ಟು ಹಿಂದಕ್ಕೆ ದೂಡಲ್ಪಟ್ಟಂತಾಗುವುದು ಎಂಬ ವಿಚಾರವನ್ನು ದೀರ್ಘ ದೃಷ್ಟಿಯಿಂದ ಪರ್ಯಾಲೋಚಿಸುವವರ ಮನ ಕರಗದೆ ಇರದು.

ಮದ್ರಾಸು ಸಂಸ್ಥಾನದ ಅನೇಕ ಜಿಲ್ಲೆಗಳಿಗಿಂತ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಗ್ರೇಂಟಿನ ಕಡಿತದ ದಾಮಾಶಾಯಿಯಲ್ಲಿ ಹೇಗೆ ಹೆಚ್ಚಿನ ಅನ್ಯಾಯವನ್ನು ಪಡೆದಿರುತ್ತದೆಂತಲೂ ಈ ವಿಷಯದಲ್ಲಿ ನಾನು ಯಾವ ಕಾರ್ಯಭಾಗವನ್ನು ಮಾಡುತ್ತಿದ್ದೇನೆಂತಲೂ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಹಲವು ಲೇಖನಗಳಿಂದ ತಮ್ಮೆಲ್ಲರಿಗ ವಿದಿತವಾಗಬಹುದು. ಈ ವಿಚಾರದಲ್ಲಿ ನಮ್ಮ ಸ್ಥಳೀಯ ಎಮ್. ಎಲ್. ಸಿ. ಯವರ ಹತ್ತಿರವೂ, ಮುಖತಾ ಭೇಟಿಯಾಗಿ ಸಂಬಂಧಪಟ್ಟ ಇಂತಹ ಸಂಸ್ಥೆಗಳ ಸಮೇತ ನಿವೇದಿಸಿಕೊಳ್ಳಲು ಅವರೆಲ್ಲರೂ ತುಂಬಾ ಸಹಾನುಭೂತಿಯನ್ನು ತೋರಿಸಿದ್ದಲ್ಲದೆ, ಈ ಕುರಿತು ತಾವು ಪ್ರಯತ್ನಿಸುತ್ತೇವಾಗಿ ಅಭಯವನ್ನು ಸಹ ದಯಪಾಲಿಸಿದ್ದಾರೆ. ಪತ್ರಿಕಾಕಾರರುಗಳೂ ತಮ್ಮ ಪತ್ರಿಕೆಯ ಅಗ್ರಲೇಖನಗಳಲ್ಲಿ ಗ್ರೇಂಟು ಹಂಚುವ ಸರಕಾರದ ಪಕ್ಷಪಾತ ಧೋರಣೆಯನ್ನು ಟೀಕಿಸಿ ನಮ್ಮ ಜಿಲ್ಲೆಯ ಖಾಸಗಿ ಶಾಲೆಗಳ ದುರವಸ್ಥೆಯ ಕಡೆಗೆ ಸಂತಾಪ ಸೂಚಿಸುತ್ತಿದ್ದಾರೆ.

ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಬಾಸೆಲ್ ಮಿಶನ್ ಸಂಸ್ಥೆಯವರೂ ರೋಮನ್ ಕಥೋಲಿಕ ಸಂಸ್ಥೆಯವರೂ ಮತ್ತು ಉಪಾಧ್ಯಾಯರ ಜಿಲ್ಲಾ ತಾಲೂಕು ವ ಸೆಂಟರ್ ಸಂಘಗಳೂ ತಮ್ಮ ತಮ್ಮ ಸಭೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗ್ರೇಂಟಿನ ಅಪಾರ ಕಡಿತದ ಬಗ್ಗೆ ವಿಷಾದವನ್ನು ಸೂಚಿಸಿ ಅನ್ಯಾಯವಾಗಿ ಕಡಿಮೆ ಮಾಡಿದ ಗ್ರೇಂಟನ್ನು ತಿರಿಗಿ ಕೊಡಿಸುವಂತೆಯೂ, ಬರುವ ವರುಷಕ್ಕೆ ಇಂತಹ ವ್ಯತ್ಯಾಸಗಳುಂಟಾಗದಂತೆಯೂ ನಿರ್ಣಯಗಳನ್ನು ಮಂಜೂರಿ ಮಾಡಿ ಅದರ ಪತ್ರಗಳನ್ನು ಸರಕಾರಕ್ಕೂ ಅಲ್ಲಿಯ ಮಾನ್ಯ ಎಮ್. ಎಲ್. ಸಿ. ಯವರಿಗೂ ಮತ್ತು ಪ್ರಕಟಣೆಯ ಬಗ್ಗೆ ಪತ್ರಿಕೆಗಳಿಗೂ ಕಳುಹಿಸುವುದಲ್ಲದೆ, ಒಂದು ಪ್ರತಿಯನ್ನು ನನಗೂ ದಯಮಾಡಿ ತಪ್ಪದೆ ಕಳುಹಿಸಬೇಕಾಗಿ ನಮ್ರಭಾವದಿಂದ ಬೇಡಿಕೊಳ್ಳುತ್ತೇನೆ. ಬೋರ್ಡ್ ಯಾ ಇತರ ಸಂಸ್ಥೆಗಳ ಉಪಾಧ್ಯಾಯರೂ ಖಾಸಗಿ ಶಾಲೆಗಳ ಈ ಅಪಾರ ಗಂಡಾಂತರದಲ್ಲಿ ಸಹಾನುಭೂತಿಯಿಂದ ಸಹಕರಿಸಿ ಬೆಂಬಲವೀಯಬೇಕಾಗಿ ಸವಿನಯ ವಿನಂತಿ. ಬಾಕಿ ಅನುಭವಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆನು.

ಇತಿ ತಮ್ಮಗಳ ಚರಣಸೇವಕ,

ಕಟಪಾಡಿ ಪೋಸ್ಟು ಕುರುಕಾಲು ಗಣಪಯ್ಯ ಶೆಟ್ಟಿ
(ಮೆಂಬರ್ ಡಿ. ಇ. ಸಿ.) ಪ್ರೆಸಿಡೆಂಟ್
೨೬ ೪ ೩೨ | ದಕ್ಷಿಣ ಕನ್ನಡ ಜಿಲ್ಲಾ ಟೀ. ಮೆನೇಜರು ಸಂಘ

೧೧೦೦ ರೂ ಬಕ್ಷೀಸು·

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ
ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ
ಸಾದಂಥ ಅನಮೋಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟದೆ

ಶ್ರೀ ಮದನಮಸ್ತಪಾಕು ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ ಎಂಥದಾದರೂ ಪರಮ ಮೈನೂಸೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೪೮ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ಪಿ ರೂ ೧ ಹೇಳೀ ರೂ ಗಡ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫॥ ಮತ್ತ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ರಿಯ್ ಖಿಟ್ಟಿ ಎಲ್ ಎಮ್ ಎಂಡ್ ಎಸ್, ಜೆ ಪಿ ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗುಪ್ತ ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾ. ಪಿ ಎಸ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ವೇಳೆ ವ್ಯಕ್ತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟ ಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ಇದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲು ಪೂರ್ಣ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೆಳವಾ ಮಾಹಿಮ ಠಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ ಪಿ ಖರ್ಚ ೦।।೦

ವಿಳಾಸ — ಸಂಜೀವಿನೀ ಔಷಧಾಲಯ. ಮು. ಪೋ. ಮಿರಜ, S. M. C.

ಜಯಕರ್ನಾಟಕ ಗ್ರಂಥಮಾಲೆಯ

೩ನೆಯ ವರ್ಷದ ಯೋಜನೆ.

ಮನೋರಂಜಕವಾದರೂ,
ಗಂಭೀರಶೈಲಿಯ ಗ್ರಂಥಗಳ ಸುಗ್ಗಿ
ಚಂದಾ ಹಣವನ್ನು ಕಡಿಮೆ ಮಾಡಿದೆ!
ವರ್ಷದಲ್ಲಿ ೬ ಪುಸ್ತಕಗಳು!!
ವಾರ್ಷಿಕ ಚಂದಾ (ಅಂಚೆ ಸೇರಿ) ೪-೮-೦ ಮಾತ್ರ!!
ಜಯಕರ್ನಾಟಕ ಚಂದಾದಾರರಿಗೆ ೩-೦-೦

ಮೊದಲನೆಯ ಗ್ರಂಥವಾಗಿ ಶ್ರೀ ಆನಂದಕಂದರ ಸಣ್ಣಕತೆಗಳ ಸಂಗ್ರಹವು ಅಕ್ಷಯ ತೃತೀಯೆಯ ದಿನ ಹೊರಡುವದು

ಇಲ್ಲದೆ ಶ್ರೀಯುತರಾದ 'ಶ್ರೀನಿವಾಸ' ಬೇಂದ್ರೆ ಗೋಕಾಕ ಪಾಟೀಲ, ಚೆನ್ನವಲ್ಲಿ ಮೊದಲಾದ ಕವಿ ಲೇಖಕರಿಂದ ನಾಟಕ ಕಾದಂಬರಿ ಕಥೆಗಳೂ ಶ್ರೀ [illegible] ಗೋರ್ಕಿಯ 'Mother' ಗ್ರಂಥದ ಅನುವಾದವೂ ಲಾವಣಿಗಳ ಸಂಗ್ರಹವೂ ಹೊತ್ತಿಗೆ ಸರಿಯಾಗಿ ಹೊರಡುವವು

ನಿಯಮಿತವಾಗಿಯೇ ಪ್ರತಿಗಳನ್ನು ತೆಗೆಯುವದರಿಂದ ಚಂದಾದಾರರಾಗಬಯಸುವವರು ಬೇಗನೆ ಪತ್ರ ಬರೆಯಬೇಕು

ಎಲ್ಲ ಕಡೆಗೂ ಏಜಂಟರು ಬೇಕಾಗಿದ್ದಾರೆ
ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ
ಜಯಕರ್ನಾಟಕ ಕಾರ್ಯಾಲಯ,
ಸಾಧನಕೇರಿ, ಧಾರವಾಡ

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ್ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್
ಬ್ಯಾಂಕ್, ಲಿಮಿಟೆಡ್
(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ೨೮೦ ಕೋಟಿ ರೂ ಗಳಿಗಿಂತ ಹೆಚ್ಚಾಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಾಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿರುವುದು

ವಿಮಾ ಪತ್ರಕಗಳ ಮೇಲಿನ ಕಾಯ್ದೆಬಟ್ಟ ಕ್ಲೇಮುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ ಬೆಳಗಾಂವ, ಕಾರವಾರ, ಸೊಲ್ಲಾಪುರ ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೆರವಾನಜಿ ಆ್ಯಂಡ್ ಸನ್ಸ ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸ್ಕರ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured

PLACE YOUR LIFE ASSURANCE WITH
THE SOUTH INDIAN
Securing for your clients
1. Low rates of Premium
2. Liberal Policy Conditions
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co. Ltd,
Sanyasiguddy MANGALORE
Managing Agents —
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್
ಕಂಪೆನಿ ಲಿಮಿಟೆಡ್ಡನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನನ್ನು ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕ್ಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರುಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ ಶೀತ ನೆಗಡಿ ಕೆಮ್ಮು ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

೩00 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ
(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ವಾಂತಿಯಾಗುತ್ತಿರುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾದರೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.
(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸ ತೈಲ.
ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್ ಸೀತಾರಾಘವ ವೈದ್ಯ ಶಾಲಾ, ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಪೇಟೆಗೆ ಮಾತ್ರ.

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ಕೋ ಆ ಸೊಸ್ಯಾಟಿಗಳಿಂದ ಶಿಫಾರಸು ಹೊಂದಿದೆ.

ವೈದಿಕ ಧರ್ಮಾಭಿಮಾನಿಗಳೂ ಕನ್ನಡ ಭಾಷಾಭಿಮಾನಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ [ವರ್ಷಾರಂಭ
ಸದ್ಬೋಧ ಚಂದ್ರಿಕೆ.
೧೯೦೭ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ತಿಳಿಗನ್ನಡ
ಮಾಸ ಪತ್ರಿಕೆಯು

ವಾ. ಚಂದಾ ರೂ. ೩] [ನಮುನೆ ಪುಕಟೆ

ಆಗಡಿ ಆನಂದವನದಲ್ಲಿ ಈಗ ೩೦ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠಶಾಲೆಗೇ ಇದರ ಆದಾಯವೆಲ್ಲ ವಿನಿಯೋಗಿಸಲ್ಪಡುತ್ತಿರುವದು ಅಲ್ಲದೆ ಅನೇಕ ಸದ್ಬೋಧ ಪೂರ್ಣವಾದ ಲೇಖಗಳಿಂದಲೂ, ಮನೋರಂಜಕ, ಸಾಮಾಜಿಕ, ಧಾರ್ಮಿಕ ಐತಿಹಾಸಿಕ ಕಥೆ ಕಾದಂಬರಿಗಳಿಂದಲೂ ಕರ್ನಾಟಕದ ಸಮಾಜ ಭಾಷಾ ಸೇವೆಯನ್ನೂ ಮಾಡುತ್ತಿರುವದು ನಮ್ಮಲ್ಲಿ ಶ್ರೀ ಶೇ ಗ್ರಂಥ ಮಾಲೆಯ ಪುಸ್ತಕಗಳೂ ದೊರೆಯುತ್ತವೆ

ವ್ಯಾ ಸ ಚ ಆಫೀಸು,
ಪೋ| ಆನಂದವನ, ಜಿ ಧಾರವಾಡ

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ ಯಂ ಗಣಪತಿರಾವ್ ಐಗಳವರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ ಐದನೇ ದರ್ಜೆಯ ಹಿಸ್ಟರಿ ಮತ್ತು ನೀತಿಬೋಧೆ

ಎರಡನೇ ಮೂರನೇ ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

ಎರಡನೇ ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ ೨ನೇ ಭಾಗ)— ಅಚ್ಚುಕಡೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತಕ್ಕ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು



ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಜ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್
ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
ಫಾರ್ಮಸಿಸ್ಟ್ಸ್, ಮುಂಬಾಯಿ ಸ್ಟೋಕಿಸ್ಟ ಪಾ ಕಂಪೆನಿ
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!
ಕಾಫಿ ಪ್ಲಾಂಟರರಿಗೂ ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V S KAMATH AT M. T. A. SHARADA PRESS, MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖
ದೊರೆಯಲನುಪಮರತ್ನಗಳು ಸಾಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಒದಗಿರುವ ‖
ಗರಲಕವರಂಜಿದರೆ! ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ, ತೆರೆ ಬಲ್ಲರೆ! ತೊರೆಯರು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೬. ಮಂಗಳೂರು ತಾ ೧೩ನೇ ಶುಕ್ರವಾರ ಮೇ ೧೯೩೨ (13–5–'32.) ಸಂಚಿಕೆ ೨೦

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು: — ಉಡುಪಿ ಬ್ರಾಂಚ್ – ಕುಂದಾಪುರ. ಮತ್ತು ಮಂಗಳೂರು.

Authorised Capital Rs 3,50,000. Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವಸೂಲಾದ ಮೂಲಧನ ರೂ 2,25,000

STATEMENT OF ASSETS & LIABILITIES AS ON 30TH DAY OF APRIL 1932

	CAPITAL AND LIABILITIES			PROPERTY AND ASSETS	
1	Paid up Capital	Rs. 2,25,000-0-0	1	Premises, Building Furniture etc	Rs [illegible] 0
2	Reserve and other funds	„ 2,22,705-0-0	2	Government securities	„ [illegible]30,78[illegible] 4 0
3	Deposits	„ 19,94,5[illegible]	3	Authorised Investments	„ 21,40[illegible] 14 11
4	Due to Bankers	975-14-10	4	Bills for collection	14[illegible]
5	Sundries	5,174-[illegible]-0	5	Sundries	[illegible]
6	Bills for collection per contra	14[illegible]	6	Cash in hand & with bankers	[illegible]
	Total	25,42,[illegible]30-12-0		Total	25,[illegible]

UDIPI 4-5-'32

N. ANANDA RAO,
Secretary & Manager

ಅಮೃತಾಂಜನ.

ಶೀತ, ದಮ್ಮು, ತಲೆನೋವು, ವಾತ, ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ಭಂಗ್ಯಕೊಡುವ ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತದೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ. ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ. ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು — (ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು, ಎರಡೇ ಸಲದ ತಿಕ್ಕುವಿಕೆಯಿಂದ ಗುಣವಾಗುತ್ತದೆ ಹಳೇ ಮತ್ತು ಬಹಳ ಸಮಯದಿಂದ ಇರುವ ರಿಂಗ್ವರ್ಮನ್ನು ತೆಗೆದುಬಿಡುತ್ತದೆ ಡಬ್ಬಿಗೆ 0–[illegible] ಡಜನಿಗೆ [illegible]

ಅಮೃತಾಂಜನ ಡಿಪೋ,
ಮದರಾಸು ಮತ್ತು ಮುಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ ನಂ. ೪.

ಏಜೆಂಟು — ಪೈ ಕಂಪೆನಿ, ಮಂಗಳೂರು

INSURE WITH
The Popular Insurance Co. Ltd.
Head Office MANGALORE S. India
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office

ಸಲಾಂ!

ಕಾಂಗ್ರೆಸ್ ಮತ್ತು ಸರಕಾರಗಳೊಳಗಿನ ಕಲಹವನ್ನು ನೋಡುವಾಗ ಈದೀಗ ಎಂಥಹನೂ ಸೋಜಿಗಗೊಳ್ಳದಿರನು. ಈಗಿನ ಸ್ಥಿತಿಗತಿಗಳು ಎಂಥಹ ಮಹಾತ್ಮನನ್ನೂ ಬುದ್ಧಿಹೀನನನ್ನಾಗಿ ಮಾಡುತ್ತವೆ.

ಒಂದು ಕಡೆಯಿಂದ ಹಿಂದೂದೇಶದಲ್ಲಿ ತೀಕ್ಷ್ಣ ದಮನ ನೀತಿಯ ಪ್ರಚಂಡ ಗಾಳಿಯು ಉಸಿರುಗಟ್ಟಿ ಬೀಸುತ್ತಿದೆ. ಒಂದು ಕಡೆಯಿಂದ ಅದರ ಪೆಟ್ಟನ್ನು ತಿಂದು ಬಗ್ಗಿಕೊಳ್ಳುವ ಜನಕಂದಗಳು ಕಲ್ಲಣಿಸುತ್ತಿವೆ.

ಒಂದು ದಿಕ್ಕಿನಿಂದ ಜನರ ಮೇಲೆ ಆರ್ಥಿಕ ದುರವಸ್ಥೆಯು ಕೊರಡಿನ ಪೆಟ್ಟು, ಇನ್ನೊಂದು ದೆಸೆಯಿಂದ ಸರಕಾರದ ರಾಜನೀತಿಯ ಮೋಡಿ, ಎರಡೂ ಒಟ್ಟುಗೂಡಿ ಈಗ ಜನಾಂಗವನ್ನು ತಳಮಳಿಸುತ್ತಿದೆ.

ಅತ್ತ ಲಂಡನಿನಲ್ಲಿ ಭಾರತ ಸಚಿವರಾಗಿ ರಾರಾಜಿಸಿ ಮೆರೆಯುವ ಸರ್ ಸಾಮುವೇಲ್ ಹೋರರ ಕೊಳಲ ರಾಗ — ಹಿಂದೂದೇಶವು ಏನೂ ವಿಷಮಸ್ಥಿತಿಗೊಳಗಾಗಲಿಲ್ಲ. ಯಾರೂ ಕಳವಳಿಸುವುದು ಬೇಡ ಎಂದು ಅವರ ಹೇಳಿಕೆ.

ಸರ್ ಸಾಮುವೇಲ್ ಹೋರರು, ಹಿಂದೂದೇಶವು ಇನ್ನೂ ಒಳ್ಳೇ ಸ್ಥಿತಿಯಲ್ಲಿದೆ. ಅಲ್ಲಿ ವ್ಯಾಪಾರ ವಹಿವಾಟು ಒಳ್ಳೆಯದಾಗಿ ನಡೆಯುತ್ತಿದೆ. ತೆರಿಗೆಯು ಸುಲಭವಾಗಿ ಒಳಗೆ ಬರುತ್ತಿದೆ — ಗಲಾಟೆಯಿಲ್ಲ ಗಡಿಬಿಡಿ ನಾಸ್ತಿ ಎನ್ನುತ್ತಿದ್ದಾರೆ. ಪಾಪ! ಅವರ ತಪ್ಪೇನು?

ಅವರು ಇಲ್ಲಿ ಇರುತ್ತಿದ್ದರೆ ಎಲ್ಲವೂ ತಿಳಿಯುತ್ತಿತ್ತು. ಮಂಗಳೂರಲ್ಲಿ ನಡೆಯುವ ವಿದ್ಯಮಾನಗಳು ಮದ್ರಾಸಿಗೆ ಸರಿಯಾಗಿ ತಿಳಿಯುವುದಿಲ್ಲವೆಂದಾಗ ಹಿಂದೂದೇಶದಲ್ಲಿ ನಡೆಯುವ ವಿದ್ಯಮಾನಗಳು ಮೂರು ಸಾವಿರ ಮೈಲು ದೂರದಲ್ಲಿರುವ ಇಂಗ್ಲೆಂಡಿನ ಸರ್ ಸಾಮುವೇಲರಿಗೆ ತಿಳಿಯುವುದೆಂತು?

ಶ್ರೀ ಸಾಮುವೇಲ್ ಹೋರ್ ಮಹಾಶಯರು ಹಿಂದೂದೇಶದ ಸ್ಥಿತಿಗತಿಗಳನ್ನು ಸರಿಯಾಗಿ ಪರಿಶೀಲಿಸುತ್ತಿದ್ದಾರಂತೆ. ಪೋಲೀಸ ಅತ್ಯಾಚಾರವಾಯಿತು ಎಂದು ಆರೋಪಣೆಯಾದ ಕೂಡಲೇ ತನಿಖೆ ನಡೆಸುತ್ತಿದ್ದಾರಂತೆ! ಅವರು ಸೆಕ್ರೆಟರಿ ಒಫ್ ಸ್ಟೇಟರಲ್ಲವೇ? ಇಷ್ಟು ಜಾಗ್ರತೆಯಿಂದಿರಬೇಡವೇ?

ತನಿಖೆ ನಡೆಸುತ್ತಾರಂತೆ ವಿಚಾರಿಸುತ್ತಾರಂತೆ! ಆದರೆ ಅವರಿಗೆ ಪೋಲೀಸರ ಅತ್ಯಾಚಾರವಾದುದು ಕಂಡುಬರಲೇ ಇಲ್ಲವಂತೆ — ಅಲ್ಲ ತಿಳಿದುಬರಲೇ ಇಲ್ಲವಂತೆ. ಇದು ಅವರ ಕೂಲಂಕಷವಾದ ತನಿಖೆಯ ಫಲ.

ಸಂಬಳ ತಿನ್ನುವ ಯಾವ ಅಧಿಕಾರಿಯೇ ಆಗಲಿ ತನ್ನ ಭಡ್ತಿಯ ಆಶೆಯಿಂದಾಗಲೀ ಮೇಲಾಧಿಕಾರಿಗಳ ಮೆಚ್ಚುಗೆಗಾಗಿಯಾಗಲೀ ಕೆಲಸ ನಡೆಸುವುದು ಲೋಕ ರೂಢಿ. ಯಜಮಾನನ ಮನೋಭಾವನೆಯು ಹೇಗಿರುತ್ತದೋ ಹಾಗೆ ಕೆಲಸಗಾರನೂ ನಡೆಯಲೇ ಬೇಕು. ಇಲ್ಲದಿದ್ದರೆ [illegible] ಆಗುವುದಿಲ್ಲವೇ?

ಗೇಣು ಹೊಟ್ಟೆಯ ದ್ರೋಹಪಡೆದುದು ಲೋಕಾಪವಾದದ ಚಿಲ್ಲರೆ ಸಂಗತಿಯು ಅಧಿಕಾರಿಗಳಾದವರಿಗೆ ಕಾಣುವುದೇ ಇಲ್ಲ. ಲೋಕಾಪವಾದಕ್ಕೆ ಹೆದರಿದರೆ ಬೆದರಿದರೆ ಅವರ ಹೊಟ್ಟೆಯಾದರೂ ತುಂಬುವುದು ಹೇಗೆ?

ಹಾಗೆ ಸರಕಾರದ ಅಧಿಪತಿಗಳ ಅವಸ್ಥೆ. ತಮಗೆ ಯಾವುದು ಸರಿಯೆಂದು ಕಾಣುತ್ತದೋ ತಮ್ಮ ಅನುಕೂಲತೆಗೆ ಯಾವ ಸೂತ್ರಗಳ ಅಗತ್ಯವೆನಿಸುತ್ತದೆಯೋ ಅವುಗಳನ್ನು ತಿಕ್ಕಾಟ ಮುಷ್ಟಿಗಳ ಎದುರು ನಿಂತು ಮುಂದೆ ಸಾಗಿಸುವುದು ಅವರ ಧೋರಣೆ.

ಇಂತಹ ಧೋರಣೆಯು ಎಷ್ಟರ ತನಕ ನಡೆದೀತು? ಎಂದು ಕೆಲವರ ಅಂಬೋಣ. ಪ್ರಶ್ನೆಯೇನೋ ಸಹಜವಾದುದು. ಅದಕ್ಕೆ ಉತ್ತರವೇನು? ಎಷ್ಟರ ತನಕ ತನ್ನಲ್ಲಿ ಚೈತನ್ಯವಿದೆಯೋ ಅಷ್ಟರ ತನಕ ಈ ಧೋರಣೆ. ಚೈತನ್ಯವು ಕಡಿಮೆಯಾದೊಡನೆ — ವೃತ್ತ — ಮತ್ತೆ ವತ್ತೆಯ ಆಲೋಚನೆ ನಮಗೇಕೆ ಬೇಡ.

ಹೇಗೂ ಹಿಂದೂದೇಶಕ್ಕೆ ಸುದಿನವು ಒದಗಿದೆ ಎನ್ನೋಣ. ಹಿಂದೂದೇಶಕ್ಕೆ ದುರ್ದಿನವು ಒದಗಿದೆಯೆಂದು ಕಾಂಗ್ರೆಸ್ಸಿನವರಂತಹ ನಿರಾಶಾವಾದಿಗಳು ಹೇಳುತ್ತಾರೆ. ಅವರ ಮಾತಿಗೆ ಸೊಪ್ಪು ಬೀಳಲಿ, ಅವರ ಆಶೆಗೆ ಬೈಹುಲ್ಲು ಬೀಳಲಿ. ಅವರ ಮಾತನ್ನು ಕೇಳುತ್ತಾರಾರು? ಸಾಮುವೇಲ್ ಹೋರರ ನಿಶ್ಚಲಮತಿಯಂತೆ ನಾವು ಆಶಾವಾದಿಗಳಾಗೋಣ.

ಪೋಲೀಸರು ತಪ್ಪು ಮಾಡುವುದಿಲ್ಲವೆಂದೇ ಸಾಮುವೇಲ್ ಹೋರರ ನಂಬಿಕೆ! ಎರಡು ತಿಂಗಳುಗಳ ಹಿಂದೆ ಮದರಾಸಿನ ಡಾಕ್ಟರ್ ಪೇಟನ್ ಎಂಬ ದೊರೆಗಳು ಖಾದಿಯುಟ್ಟು ಒಂದು ಮಾರ್ಗದಲ್ಲಿ ನಿಂತಿದ್ದಾಗ ಅವರಿಗೆ ಪೋಲೀಸರು ಪೆಟ್ಟು ಚಡಾಯಿಸಿದರು. ಕೊನೆಗೆ ಈ ವಿಷಯವಾಗಿ ಸರ್ ಹೋರರಿಗೆ ವರ್ತಮಾನ ಹೋಗಿ ದಯಾರ್ದ್ರಹೃದಯರಾದ ಹೋರರು ಸಣ್ಣ "ಎಪೋಲೊಜಿ" ಕೇಳಿಬಿಟ್ಟರು.

ಪೂರ್ವಕಾಲದಲ್ಲಿ 'ತಪ್ಪುಮಾಡಲು ಬಹು ಹೆದರಿಕೆ, ಅನ್ಯಾಯವನ್ನು ನಡೆಸುವುದೆಂದರೆ ಅಷ್ಟು ಭೀತಿ. ಇಂಗ್ಲೀಷರ ಈ ಕಲಿಯುಗದಲ್ಲಿ ತಪ್ಪು ಮಾಡಿದರೆ ಚಿಂತಿಲ್ಲ — ಮಾಫಿ ಬೇಡಿದರೆ ಎಲ್ಲವೂ ಮುಗಿಯಿತು.

ಹೇಗೂ ಇರಲಿ, ಹಿಂದೂದೇಶವು ತೀಕ್ಷ್ಣವಾದ ದಬ್ಬಾಳಿಕೆಯ ರುಚಿಯನ್ನರಿಯಿತು. ಭಾರತದ ಜನಾಂಗವು ಎಷ್ಟೋ ಓರ್ಡಿನೆನ್ಸುಗಳ ರುಚಿಯನ್ನು ಗೊತ್ತು ಹಿಡಿಯಿತು. ಅಷ್ಟೇ ಬೇಕಾದುದು.

ಇನ್ನು ಒಂದು ತಿಂಗಳಿಗೆ ಓರ್ಡಿನೆನ್ಸು ರಾಜ್ಯವು ಸ್ಥಾಪಿತವಾಗಿ ಗಾಂಧಿಯನ್ನು ಸೆರೆಗಟ್ಟಿ, ಆರು ತಿಂಗಳುಗಳಾಗಲಿಕ್ಕೆ! "ಆರು ತಿಂಗಳುಗಳ ತನಕ ಓರ್ಡಿನೆನ್ಸು ರಾಜ್ಯವಿರಲಿ. ಅವುಗಳಿಂದ ಹಿಂದೂದೇಶಕ್ಕೆ ಎಷ್ಟು ಫಲವಿದೆ"ಯೆಂದು ಸೂಚಿಸಿದ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ ಮಹಾದೊರೆಗಳು ಮುಂದೇನು ಮಾಡಲಿರುವರೋ ನೋಡಲಿದೆ.

ಅವರು ವಿಮಾನದ ಮೂಲಕ ಲಂಡನಿಗೆ ಹಾರಿ ಹೋಗಲಿರುವರೆಂದು ಗುಜುಗುಜು ವಾರ್ತೆಯಿದ್ದಿದೆ. ಲಂಡನಿನಿಂದ ಹಿಂತಿರುಗುವಾಗ ಕೈಯಲ್ಲಿ ಬೇರೆ ಓರ್ಡಿನೆನ್ಸುಗಳು ಬಂದಾವೇ? ಎಂದು ಕೆಲವರ ಶಂಕೆ. ಆದರೆ ಅಂತಹ ಹೊಸ ಭಯಭೀತಿಗೆ ಕಾರಣವಿಲ್ಲ. ಅಂದು ವೈಸರಾಯರು ಗದ್ದಿಗೆಯನ್ನೇರುವಾಗ ತಾನು ಹಿಂದೂದೇಶದ ಹಿತಕ್ಕಾಗಿ ಬಂದಿದ್ದೇನೆ ಎಂದಿದ್ದಾರೆ. ಅವರು ಹಿತವನ್ನೇ ಮಾಡುವರೆಂದು ಆಶಿಸೋಣ.

ಅಲ್ಪಸ್ವಲ್ಪ ಜನರು ಬಳಲಿದರೆ, ಕಾಂಗ್ರೆಸ್‌ವಾಲರಂತಹ ಚಿಲ್ಲರೆ ಮನುಷ್ಯರು ಜೈಲಿಗೆ ಹೋದರೆ ಅದರಿಂದ ಪರ್ವಾ ಇಲ್ಲ. "*Law & Order*" ಅಂದರೆ ಶಾಸನವು ಕ್ರಮವು ಮಾತ್ರ ಭರತ ಭೂಮಿಯಲ್ಲಿ ಅಗತ್ಯ."

ಹೀಗೆ ಸದ್ಯ ಮಂಗಳೂರು ನಗರ ಸಭೆಯಲ್ಲಿನ ಶ್ರೀ ಎಂ ಎಸ್ ಕ್ರಾಸ್ತ ಇವರು ಕೈಲಸಿನಲ್ಲಿ ನಡೆದ ಒಂದು ಲೇಟಿನ್ ಕೆಥೋಲಿಕ್ ಕಾನ್ಫರೆನ್ಸಿನಲ್ಲಿ ಎಂದಿದ್ದಾರೆ: 'ಕ್ರೈಸ್ತರಾರೂ ಕಾಂಗ್ರೆಸ್ಸಿನವರ ಕಡೆ ಸೇರಬಾರದು. ಕ್ರೈಸ್ತರು ಕ್ರಾಂತಿಗೆ ಬೆಂಬಲವಾಗಿಲ್ಲ. ಶಾಂತಿಗೆ ಮಾತ್ರ' ಎಂದಿದ್ದಾರೆ.

ಕೆಲವು ಕ್ರೈಸ್ತರು ಹೆಸರು ಗಳಿಸುವುದಕ್ಕಾಗಿ ಕಾಂಗ್ರೆಸ್ಸಿನ ಕಡೆ ಸೇರಿದ್ದಾರೆ. ಅವರು ಮಾಡುವುದು ಸರಿಯಲ್ಲ. ಕಾಂಗ್ರೆಸ್ಸು ಗಡಿಬಿಡಿ ಸಂಸ್ಥೆ. ಅದರ ಧೋರಣೆಯಿಂದ ಶಾಂತಿಯು ನೆಲಸದು" ಎಂದು ಮಿಸ್ಟರ್ ಕ್ರಾಸ್ತರು ಹೇಳಿದ್ದಾರೆ. ಇನ್ನೊಂದು ಸಲ ಬರುತ್ತೇನೆ. ಸಲಾಂ.

ಸತ್ಯ ಬ

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಶ್ರೀ ಮದನಮಸ್ತಪಾಕು ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತಕ್ರಿಯೆಯಿಂದಲೂ ಅತಿ ಸ್ತ್ರೀಸಂಪರ್ಕದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ ಎಂಥದಾದರೂ [illegible] ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ. ೨೦ ದಿವಸ ಸಾಲುವ ೬೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ [illegible] ರೂ ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧. ಮೂರ ಡಬ್ಬಿಗೆ ರೂ ೧೫ ಮಾತ್ರ. ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಸಿದ್ದಿಕ್, ಎಲ್ ಎಮ್ ಎಂಡ್ ಎಸ್, ಜೆ ಪಿ ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ಇದ್ದು [illegible] ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಬಿ ಪ್ರಿನ್ಸಿಪಾಲ ಫಿಜಿಶಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತಾ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೆ ರೂ ೧೧೦೦ ಇನಾಮು ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ ಔಷಧಾಲಯ, ಮು ಪೋ ಮಿರಜ S M C

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಸ್ ಕೆ ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. [illegible] ವಿಶೇಷ ಮಕ್ಕಳಾಗುವುದರಿಂದ [illegible] ಆಗುತ್ತದೆ. ಈ ಕಾರಣದಿಂದಲೂ [illegible] ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ [illegible] ಪೂರ್ಣವಾಗಿಯೂ ಕೂಡಲೇ ಗರ್ಭಧಾರಣ ಬಂದಾಗುವದು. [illegible] ಪೂರ್ಣ ವಿಚಾರವನ್ನು [illegible] ಬೇಡಿರಿ. [illegible] ಸರ್ಟಿಫಿಕೇಟ್ ವೈದ್ಯ ಡಾ [illegible] ಎಲ್ ಸಿ ಪಿ ಎಸ್ [illegible] — ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ ಖರ್ಚ ೮ ಆ

ವಿಳಾಸ — ಸಂಜೀವಿನೀ ಔಷಧಾಲಯ, ಮು ಪೋ ಮಿರಜ, S M C.



ಆಶ್ಚರ್ಯವಲ್ಲ — ಮೋಸವಿಲ್ಲ ಬರೇ ರೂ ೩—೧೪—೦ಕ್ಕೆ

ಈ ಕೆಳಗಿನ ಮಾಲುಗಳನ್ನು ಅತ್ಯುತ್ತಮ ಸಾಮಾನುಗಳನ್ನು ಕೊಡುತ್ತೇವೆ. ೩ ಬಾಟ್ಲಿ ನಮ್ಮ ಪ್ರಖ್ಯಾತ [illegible] ಇದರ ೩-೪ ಹನಿಗಳು [illegible] ಇಡೀ ದಿನ ಸುಗಂಧವನ್ನೀಯುತ್ತದೆ. ೧ ಪೆಟ್ಟಿಗೆ ಹಲ್ಲು ಪುಡಿ, ೧ ಪೆಟ್ಟಿಗೆ ಮುಖ ಲೇಪನ, ೧ ಸೇಫ್ಟಿ ರೇಜರ್ (ಕತ್ತಿ), ೧ ಪೆನ್ನು ಫೌಂಟನ್ ಪೆನ್ನು, ೧ ಜೋಡು [illegible], ೧ ಜರ್ಮನ್ [illegible], ೧ ಡಬ್ಬಿ ಪಾಕೆಟ್ ವಾಚ್ (ಸರಪಳಿ ಸಮೇತ) ಅಥವಾ ನಿಕ್ಕಲ್ ಕೇಸಿನ ನೆಪೋಲಿಯನ್ ರಿಸ್ಟ್ ವಾಚ್. ಎಲ್ಲಾ ಸಾಮಾನುಗಳಿಗೆ ಒಟ್ಟು ರೂಪಾಯಿ ೩—೧೪—೦ ಮಾತ್ರ. ಪೇಕಿಂಗ್ ಮತ್ತು ಪೋಸ್ಟೇಜ್ ೧ ರೂಪಾಯಿ ಪ್ರತ್ಯೇಕ.

ವಿ ಸೂ —ಓರ್ಡರ್ ಕೊಡುವಾಗ ನಿಮ್ಮ [illegible] ಕೊಡಿರಿ. ಎಲ್ಲಾ ನಿಜವಾದ ವಾಚುಗಳಿಗೆ ೫ ವರ್ಷ ಗ್ಯಾರಂಟಿ—ನಿಮಗೆ ಭರವಸೆ ಕೊಡುತ್ತೇವೆ

ಕೂಡಲೇ ಈ ವಿಳಾಸಕ್ಕೆ ಬರೆಯಿರಿ— ಆರ್. ಎನ್. ಬ್ರದರ್ಸ್ ಎಂಡ್ ಕೊ.

ಟಪ್ಪಾಲ್ ಪೆಟ್ಟಿಗೆ ನಂಬ್ರ 6712, S B- ಕಲ್ಕತ್ತಾ.

ಶಾಸ್ತ್ರೀಯ
ಅಮೂಲ್ಯ ಔಷಧಗಳು

ಅಮೃತಾಕಾಂಡವ ತೈಲ — ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡತಕ್ಕದು. ಮಾಂಸಗಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ — ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0 ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷಂಗಳನ್ನು ಹೊರಗೆ ಹಾಕಿ ಪ್ರಸವದಿಂದ ಸ್ವಸ್ಥವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲಿ ಆಕುಂಚಿತಮಾಡುವದು

ರಸಾಯನ ಗುಣದಿಂದ ಬಾಣಂತಿಯು — ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2 0—0 ಪೋಸ್ಟೇಜ ವಗೈರೆ ಬೇರೆ

[illegible]

ಯ. ಮ್. ಪಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು.

[illegible] 6 [illegible] 2 [illegible] ರೂ 2 [illegible] ವರೆಗೆ [illegible] ಗಳು, [illegible] ಪೇಟ, [illegible] ಕೇಸರಿ, ಪಚ್ಚಕರ್ಪೂರ, [illegible] ಸಾಮಾನುಗಳು, [illegible] ಸಾಮಗ್ರಿಗಳು, [illegible] ತರದಿಂದ ಕಳುಹಿಸಲ್ಪಡುವವು [illegible] ಸುವವರು ಪತ್ರ ಮೂಲ ತಿಳಿದುಕೊಳ್ಳ [illegible]

ವಿಳಾಸ

ಕಾಪು ವಿಶ್ವನಾಥ [illegible] ಬ್ರದರ್ಸ್
[illegible]

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1913)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ನಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುಂಭಂಡುಗಳೂ ನಡೆಯಿಸಲ್ಪಡುತ್ತವೆ ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE.**

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal Kasargod, Cochin, Udipi, Gangolli Coondapur, Bombay Puttur, Calicut & Alleppey**

ಬ್ರಾಂಚುಗಳು:-
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised and fully paid up Capital Rs 300 000 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ [illegible] ಮೂಲಧನವು ರೂ 30[illegible] 0 —
Reserve and other sinking Funds Rs 226 000 0 0	ಶ್ರೀನ ನಿಧಿ ಮತ್ತು ಇತರ ಫಂಡುಗಳು ರೂ 226, 0—0—0
Amount invested on G P Notes Rs 815,092—12 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 815,092 12—
Rates of interest on fixed deposits at Head Office and Branches are 6% for 2 Year [illegible] 1 Year	[illegible]

Current Account Deposits received and interest allowed on daily balance of Rs 50 and above that or multiple of R 10 @ [illegible]% from 1st Janauary to 30th June and @ [illegible]% from 1st July to 31st December. No interest will be allowed unless the depositor earns not less than Rs 5 during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000 in the case of Head Office and Cochin Branch and on sums [illegible] exceeding Rs [illegible] 000 in the case of [illegible] Branch and on sums exceeding Rs [illegible] 00 [illegible] the case [illegible] ther Branches

For further particulars please apply to —

Office of the Bank,
Mangalore 1[illegible]-4—[illegible]932

K. Venkat Rao.
Secretary & Treasurer

The Pangal Nayak Bank, Ltd.

Head Office
Udipi

Established 19[illegible]

Branch Office
Mangalore

Authorised Capital Rs 2 00,000-	Paid up Capital Rs. 1 75 000-
Issued Capital Rs 1 75,000-	Reserve and other Funds Rs 1,80 000

NOTICE.

The rate of interest allowed on the under mentioned deposits will be as follows with effect from 19 4—1932.

Fixed Deposits 3 months 4 [illegible]
[illegible] 5 [illegible] 2 [illegible] p [illegible]

Short term deposits 4 p [illegible]

(By order)

Office of the Bank
Udipi [illegible] 4 32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಮುದುಕ
ಮೂವತ್ತು	[illegible]	ಮುಟ್ಟಿದ
ನಲವತ್ತು	[illegible]	ನರಳುವದು
ಐವತ್ತು	[illegible]	ಆಲಸ್ಯ
ಅರುವತ್ತು	[illegible]	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ

ಈ ಸ್ಥಿತಿಗಳಲ್ಲಿ [illegible] ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿರಿ

ಮದನಮಂಜರಿ ಫಾರ್ಮಸಿ, 1 94 ಚೀನಾ ಬಜಾರ್ ಮದ್ರಾಸ್

ಮದನಮಂಜರಿ ಮಾತ್ರೆಗಳ ಏಜಂಟರು — ವಿ ಜಿ ಚಂದರಾವ್ ಮಿಶನ್ ಬೀದಿ ಮಂಗಳೂರು



ಮುಂದೇನು?

ಬೇಸಿಗೆಕಾಲ, ಸೆಕೆ, ಮೋಡ, ಸಿಡಿಲ್ಮಿಂಚು, ಮಳೆ ಇದು ಅನುಕ್ರಮವಾಗಿ ನಡೆಯತಕ್ಕುದೇ ಎಂದು ಬಲ್ಲೆವು. ಈಗ ಮೋಡಕಟ್ಟಲಾರಂಭ ಅಲ್ಲಲ್ಲಿ ಸಿಡಿಲ್ಮಿಂಚೂ ಜಡಿಮಳೆಯೂ ಪ್ರಾರಂಭವಾಗಿದೆ. ಬಂಗಾಳದ ಒಂದು ಭಾಗದಲ್ಲಿ, ಚಿತ್ತಗಾಂಗದ ಹಾವಳಿ, ಅಲ್ಲಲ್ಲಿ ಗುಂಡಿನೇಟು ಅದಂತೆಯೇ ಜಡಿಮಳೆಗೆ ಹಳ್ಳಿಗಳೇ ಕೊಚ್ಚಿಕೊಂಡು ಹೋದುದೂ ಇದೆ. ಫ್ರಾಂಚಾಯಿಸ್ ಮೊದಲಾದ ಕಮಿಟಿಗಳು ಸಂಚಾರ ಮುಗಿಸಿ ರಿಪೋರ್ಟ್ ಬರೆದು ತಮ್ಮ ಕೆಲಸ ಮುಕ್ತಾಯಗೊಳಿಸಿವೆ. ಇನ್ನು ಓರ್ಡಿನೆನ್ಸುಗಳ ಬೇಸಿಗೆ ಕಾಲವೂ ಸೆಕೆಯೂ ಮುಗಿಯಲು, ನಾಲ್ಕಾರು ವಾರಗಳು ಮಾತ್ರವಿವೆ. ಮುಂದೆ ಮಳೆಗಾಲದ ತಣಿವಿಗೆ ಸಮಯವಾಗುವುದು. ಆದರೆ, ಈ ಮಧ್ಯೆ ಹೋರರದೊಂದು ಸಾಂಕೇಯುವದೊಂದು, ಫ್ರಾಂಚಾಯಿಸ್ ಕಮಿಟಿಯ ಎಕ್ಸ್‌ಪರ್ಟನದೊಂದು ಹೀಗೆ ಮೂರು ಬಿಲ್ಲುಗಳು ತಯಾರಾಗುತ್ತಿವೆ. ಓರ್ಡಿನೆನ್ಸಿನ ಅವಧಿಯಾದ ಬಳಿಕ ಎರಡು ತಿಂಗಳು ಜಡಿಮಳೆ, ಸಾಮಾನ್ಯ ಶಾಸನಗಳ ವಾಯುಗುಣ ಆದಾಗುತ್ತಲೇ ಈ ಮಸೂದೆಯ ಬೀಜಗಳನ್ನು ಬಿತ್ತುವರು. ನೇಜಿ ನಡಬೇಕು, ಹಲವು ಇಂಡಿಯಾ ಸರಕಾರದ ಮೆಂಬರರು ರಜೆ ಪಡೆದು ಇಂಗ್ಲೆಂಡಿನಲ್ಲಿ ಹಾಜರಾಗುವರು. ಅಜೆ ಈಜೆ ನೀರು ಹರಿದು, ಗೊಬ್ಬರ ಹರಡಿ, ಸೇಫ್‌ಗಾರ್ಡುಗಳ ಬೇಲಿ ಹಾಕಲು ತಮ್ಮ ಹೊಲಗಳಿಗೆ ಮೋಸವಾದೀತೆಂದು ವಿಲ್ಲಿಯರ್ಸರಿಂದ ಯುರೋಪಿಯನ್ ಸಂಘಗಳ ಅರಸೂ, ಮುಸ್ಲಿಮ ಪ್ರತ್ಯೇಕ ಪ್ರಾತಿನಿಧ್ಯವಾದಿ ಸರ್ ಫಜಲೀ ಹುಸ್ಸೇನರೂ ಅಲ್ಲಿಯೇ ಎಚ್ಚರ ನೋಡುವರು. ನೊವೆಂಬರದಲ್ಲಿ ಬೆಳೆ ಕಟಾವಿಗೆ ಬಂದಿತು. ಮೇ ತಿಂಗಳಲ್ಲಿ ನಮ್ಮ ದೇಶದ, ನಮ್ಮ ಜನಾಂಗದ ಸಲುವಾಗಿ ಇಂಗ್ಲೆಂಡಿನಲ್ಲಿ ಕುಟ್ಟಿಸಲಾದ ಈ ಬೆಳೆಯು ಇತ್ತ ಮಾರಾಟಕ್ಕೆ ಬರುವುದು. ನೊವೆಂಬರದ ಸುಮಾರಿಗೆ ಧನಪೂಜೆಯಾಗಿ ದೀಪಾವಳಿಯಾಗುವುದರೊಳಗ ಈ ಶಾಸನದಲ್ಲಿರ ಮಮರನ್ನು ಬಿಡುಗಡೆ ಮಾಡಬಹುದು. ಹಾಗಾದಲ್ಲಿ ಮುಂದಣ ಒಕ್ಟೋಬರದೊಳಗ ಹೊಸ ಕೌನ್ಸಿಲುಗಳಿಗೆ ಚುನಾವಣೆ ನಡೆಯಬಹುದು. ಅಂತೂ ಮುಂದಿನ ಮಳೆಗಾಲವೇ ಈಗಿನ [illegible] ನಿವಾರಿಸಬಹುದಾಗಿ ರಾಜಕೀಯ ವಾತಾವರಣ ಎಲ್ಲವರ ಫೋರ್‌ಕಾಸ್ಟ್ ಅಂದಾಜು.

ಈ ಸರಕು ಮಾತ್ರ ವಿದೇಶಿ ಸರಕಾಗದೆ?

ಈ ಹೊಸ ಮಸೂದೆಗಳೆಲ್ಲವು ಹುಟ್ಟುವ ಕಾಲದಲ್ಲಿ ಮಾಗಸಿ ಸರ್ [illegible] ಕಾನ್ಸರನ್ನು [illegible] ವುದೆ? ಇಲ್ಲವೆಂದೇ ಎಲ್ಲವನ್ನು ತಿಳಿ[illegible] ಹಿಂದೆ ಚರ್ಚೆಗಿಟ್ಟ ಹೇಳಿಕೆಗಳಲ್ಲಿ ಇಲ್ಲ. ಇವು ಸಂಸ್ಥಾನಗಳು ಇಲ್ಲಿಂದ ಕಳುಹಿದ ತ್ರಿ[illegible] ಅಧ್ಯಕ್ಷ ತ್ರಿಮೂರ್ತಿಗಳು [illegible] ತಿವಾರಿ[illegible] ಅಲ್ಲ. ಇವೆ [illegible] ಮಸೂದೆಯ ರೂಪವಾಗಿ ಜನ್ಮ [illegible] ಎಂಬುದರಲ್ಲಿ ಇನ್ನುಮೆ ಚರ್ಚೆಗಳಿಗಾಗಿ ದೇವ–ದಾನವ ಸದಗಳ ಅಗತ್ಯವಿಲ್ಲ. ಆದರೆ ಇದು ದೇಶದ ನಾಯಕರಿಗೆ ಒಪ್ಪೀತೆ? ಯಾವ ಒಗಟು ಸ್ವಾತಂತ್ರ್ಯವು ದೇಶಕ್ಕೆ ಸಿಗಬೇಕೆನ್ನುವ ಛಲದಿಂದ ಅವರು ಕಾರಾವಾಸಕ್ಕೂ ಒಳಗಾದರೂ ದೇಶವು ಓರ್ಡಿನೆನ್ಸುಗಳ ಸಿಡಿಲ್ಮಿಂಚಿಗೆ ಒಳಪಟ್ಟಿತೊ, ಆ ಬಗೆಯ ಸ್ವಾತಂತ್ರ್ಯವನ್ನು ದೇಶಕ್ಕಾಗಿ ದೇಶಿಯರೇ ಘಟಿಸಿ ತುಲುಪಾರಾದರ, ಈ ಮುಂದಣ ಹೊಸ ಮಸೂದೆಯ ಬೆಳೆಯು ಇಂಗ್ಲೆಂಡಿನಲ್ಲೇ ಹುಟ್ಟಿ ಬೆಳೆದು ಇತ್ತ ಬರುವ ಕಾರಣ, ಇದು ಸ್ವದೇಶಿಯಾಗಿರದೆ ವಿದೇಶಿ ಸರಕೆಂದು ಇದನ್ನು ಅಷ್ಟು ಮೋಹದಿಂದ ಆದರಿಸ ಮಮರಾರೋ ತಿಳಿಯದಾಗಿದೆ.

ಅಮೇರಿಕದ ಶಾಸನ ಕ್ರಮ

ಇದೇನ[illegible] ಮೇಯೊ ಎಂಬಾ ಹೆಂಗಸು ಬರೆದ ಪುಸ್ತಕದ ಕಥೆಯಲ್ಲ. ಮೊನ್ನೆ ನಡೆದ ಕಥೆ. ಹವಾಯಿ ದ್ವೀಪದಲ್ಲಾದ ಅತ್ಯಾಚಾರ ಮತ್ತು ಅದರ ಅಪಚಾರ ದ್ವೀಪವಾಸಿಯಾಗಿ ಅಮೇರಿಕದ ಕರೀ ಪ್ರಜೆಯೊಬ್ಬನನ್ನು ಅಮೇರಿಕದ ಬಿಳೀ ಜನರು ಕೊಂದರು. ಕೊಂದರೆಂದು ಚಾರ್ಜುಮಾಡದೆ, ಮೊಕದ್ದಮೆ ಒರ[illegible] ಕಠಿಣ ಗಾಯಪಡಿಸಿದುದಕ್ಕಾಗಿ ಎಂದೇ ವಿಚಾರಣೆಯಾಯಿತು. ವಿಚಾರಣೆಯಲ್ಲಿ ತಪ್ಪು ಸ್ಥಾಪಿತವಾಗಿ, ಕೇದಿಗಳನ್ನು ಹತ್ತು ವರ್ಷದ ಕಠಿಣ ಕೈದು ದಂಡನೆಗೆ ವಿಧಿಸಲಾಯಿತು. ಆದರೆ, ಹತ್ತು ವರ್ಷದ ಕಠಿಣ ಕೈದನ್ನು ಒಂದೇ ಒಂದು ತಾಸು ಅನುಭವಿಸುವುದರೊಳಗೆ ದ್ವೀಪದ ಅಮೇರಿಕನ್ ಗವರ್ನರರು ೮ ೬೦ ನಿಮಿಷಗಳ ವರೆಗೆ ಸುಮ್ಮನೆ ಕಾಯ ದಂಡನೆಯೇ ಹತ್ತು ವರ್ಷಗಳ ಕಠಿಣ ಕೈದಿಗೆ ಸಮ್ಮತವಾಯಿತೆಂದು ಕೇದಿಗಳನ್ನು ಮುಕ್ತಗೊಳಿಸಿದರು. ಇದಕ್ಕಿಂತಲೂ ಅಪಹಾಸ್ಯವಿದೆಯೇ? . ಈ ಅಪಹಾಸ್ಯಕರ ದಂಡನೆಯನ್ನು ಒಂದು ಶಾಸನ ಮಾಡದೆ ಹವಾಯಿ ಜನರು ಸುಮ್ಮನಿರಲಾರರು.

ದೇಶಭಾಷೆಗೆ ಪ್ರೋತ್ಸಾಹ

ಮಾಲ್ಟಾ ದ್ವೀಪವು ಇಂಗ್ಲಿಷರದು. ಆ ದ್ವೀಪವಾಸಿಗಳು ರೋಮಿಯ ಕುಲದವರು, ಅವರ ಭಾಷೆ ಸಾಧಾರಣ ಲತೀನ ಭಾಷೆಯು. ಆದರೆ, ಎಲ್ಲೆಲ್ಲಿಯೂ ಇಂಗ್ಲಿಷ ಭಾಷೆಯನ್ನೆ ಪ್ರಯೋಗಿಸಬೇಕಾಗಿ ಇಂಗ್ಲಿಷ ಗವರ್ನರರ ಆಜ್ಞೆ. ಪ್ರಜೆಗಳು ಚಳವಳ ನಡೆಸಿದರು. ದಂಗೆಯಾಯಿತು. ಬ್ರಿಟಿಷ ನಾವೆಗಳೂ ಸೈನ್ಯವೂ ಅತ್ತ ತೆರಳಿದುವು. ಬೇಕಾದಷ್ಟು ದಬ್ಬಾಳಿಕೆಗೆ ಪ್ರಾರಂಭವಾಯಿತು. ಇಟಲಿಯ ಮಂತ್ರಿಯೊಬ್ಬರು ಅತ್ತ ತೆರಳಿ ನಾಲ್ಕು ಮಾತುಗಳನ್ನು ಚೆನ್ನಾಗಿ ಆಡಿ ಬಂದರು. ಅದರ ಫಲವು ವಿಪರೀತವಾಗಿ, ಹಾಗೆ—ಹೀಗೆಂದು ಗಲಭೆಗಿಟ್ಟಿತು. ಕೊನೆಗೆ, ಈಗ ಇಂಗ್ಲಿಷು ಮಾತ್ರವನ್ನೆ ಅಲ್ಲ ನಿಮ್ಮ ದೇಶಭಾಷೆಯನ್ನೂ ಶಾಲೆಗಳಲ್ಲಿ ಅಗತ್ಯ ಕಲಿಸತಕ್ಕದ್ದು. ಕೋರ್ಟು ಕಚೇರಿಗಳಲ್ಲಿ ಬಲ್ಯ ತಿಂಗಳಿಂದ ದೇಶಭಾಷೆಯು ಬಳಕೆಗೆ ಬರಬಹುದು, ಎಂದೀಗ ಇಂಗ್ಲಿಷ ಗವರ್ನರರು ಇಸ್ತಿಹಾರ ಪ್ರಕಟಿಸಿರುವರು. ವಿನಂತಿಯಿಂದಾಗದುದನ್ನು ಸೈನ್ಯಬಲ ಪ್ರದರ್ಶನಯೂ ಕಾವೇ ಕೊಟ್ಟ ದಾನವಂತೆ ಇಂಗ್ಲಿಷರು ಮೆರೆಸಿದ ಲಕ್ಷಣವು ತಾಜಾ ಬ್ರಿಟಿಷ ರಾಜಕೀಯ ದಾಸಗಳ ಲಕ್ಷಣ.

ಸಾಯ್‌ಪ್ರಸ್ ದ್ವೀಪದ ಸ್ವರಾಜ್ಯ

ಕಳೆದ ಅಕ್ಟೋಬರ ತಿಂಗಳಲ್ಲಿ ಈ ದ್ವೀಪದಲ್ಲಾದ ದಂಗೆಯ ವೃತ್ತಾಂತವು ಈಗ ಪ್ರಕಟವಾಗಿದೆ. ಈ ದ್ವೀಪದ ಜನರಲ್ಲಿ ನೂರಕ್ಕೆ ೮೦ ಮಂದಿ ಗ್ರೀಕರು, ಹೀಗಿರುವ ಕಾರಣ ವಕೀಲರಿಂದ ಪ್ರಾರಂಭಿಸಿ, ಉಪಾಧ್ಯಾಯರು, ವೈದಿಕರು, ಮುಖ್ಯ ಜನಗಳು ಮೊದಲಾದೆಲ್ಲರಲ್ಲಿ ಸ್ವರಾಜ್ಯ ಚಳವಳವು ಹರಡಿತು. ೫೪೮ ಹಳ್ಳಿಗಳಲ್ಲಿ, ೩೦೦ರಲ್ಲಿ ಸರಕಾರ ವಿರುದ್ಧವಾಗಿಯೇ ದಂಗೆ ಮೊದಲಾದವು ಉಂಟಾದುವು, ೭೦ ಹಳ್ಳಿಗಳಲ್ಲಿ ಹಿಂಸೆ ನಡೆಯಿತು. ರಾಷ್ಟ್ರೀಯ ಚಳವಳಗಳ ಪಾಶ್ಚಾತ್ಯದಲ್ಲಿ ಹೀಗೆಯೇ ಕಂಡುಬವು, ಬ್ರಿಟಿಷರು ಇವನ್ನು ಅದುಮುವುದಕ್ಕೆ ಹಿಂದಿನ ನೀತಿಯನ್ನೇ ಕೈಕೊಂಡರು. ಇವರ ಒಲೀ ಗ್ರೀಕ್ ಧರ್ಮದವರಲ್ಲದೆ, ಗ್ರೀಕರಲ್ಲ, ಬ್ರಿಟಿಷ ಪ್ರಜೆಗಳು, ಎಂದೇ ಬ್ರಿಟಿಷರು ಇವರನ್ನು ಲಕ್ಷಿಸಿ ಇವರಿಗೂ ಗ್ರೀಕರಿಗೂ ಸಂಬಂಧವೇನೂ ಇಲ್ಲವೆಂದರು. ಕೂಡಲೇ, ಇವರನ್ನು ಅಡಗಿಸಲು ೬ ಮಂದಿಯನ್ನು ಜನ್ಮಾಂತ ದಂಡನೆಗೆ ಒಳಪಡಿಸಿ ಅಲ್ಲಿನ ನ್ಯಾಯವಿಧಾಯಕ ಸಭೆಯನ್ನು ರದ್ದುಪಡಿಸಿ, ಬ್ರಿಟಿಷರು ನೇಮಿಸಿದವರೇ ಹೊರತು ಜನರು ಚುನಾಯಿಸಿದವರು ಗ್ರಾಮ ಉದ್ಯೋಗಸ್ಥರಾಗಬಾರದೆಂದು ನಿಯಮಿಸಿ ಗ್ರೀಕರ ತಮ್ಮ ರಾಷ್ಟ್ರೀಯ ಧ್ವಜಗಳನ್ನು ಹಾರಾಡಿಸಬಾರದೆಂದು ಇಗರ್ಜಿ ಗಂಟೆಗಳನ್ನು ಬಾರಿಸುವುದನ್ನೂ ನಿಷೇಧಿಸಿ ಓರ್ಡಿನೆನ್ಸುಗಳು ಹೊರಟವು. ದಂಗೆಯನ್ನು ತಡೆವುದಕ್ಕೆ ೬ ಮಂದಿಯನ್ನು ಕೊಂದಿಕ್ಕಿ, ೩೦ ಮಂದಿಯನ್ನು ಗಾಯಪಡಿಸಿದ್ದಾಯಿತು, ಪೋಲೀಸರಲ್ಲೂ ೩೮ ಮಂದಿಗೆ ಗಾಯಗಳಾದುವು. ಹಿಂದೆ ೧೨೬ ಮಂದಿ ಪೋಲೀಸರಿದ್ದುದು ಈಗ ೧೭೫ಕ್ಕೆ ಏರಿತು. ಸಾಯಪ್ರಸ್ ದ್ವೀಪವನ್ನು ಬೇಕಾಗುವಷ್ಟು ದಿನ ಬಲಾತ್ಕಾರದಿಂದ ಹೀಗೆ ಸ್ವಾಧೀನ ಇರಿಸಿಕೊಳ್ಳುವುದು ಬ್ರಿಟಿಷ ಸಾಮ್ರಾಜ್ಯದ ಪ್ರಾಬಲ್ಯಕ್ಕೇನೂ ಕಷ್ಟವಾಗಿಲ್ಲ. ಇನ್ನೊಂದು ಮಹಾಯುದ್ಧವಾದರೆ, ಆಗ ಹಿಂದಣ ಯುದ್ಧದಲ್ಲಿ ಪೋಲೆಂಡು ಮೊದಲಾದುವು ಸ್ವರಾಜ್ಯ ಹೊಂದಿದಂತೆ ಈ ದ್ವೀಪವೂ ಸ್ವರಾಜ್ಯ ಪಡೆಯಬಹುದು. ಅಲ್ಲಿಗೆ ವಿವೇಕವೆಲ್ಲ ಮುಗಿವಿದೆಯೆ?

ಅಸ್ಪೃಶ್ಯರ ಮಹಾ ಕೊಂಗ್ರೆಸ್!

ನಾಗಪುರದ ಒಳಿ ಕಂಪಟೀ ಊರಲ್ಲಿ ಜತೆ ಪ್ರಾತಿನಿಧ್ಯವಾಗಿ ಹಿಂದೂಗಳೊಡನೆ ನಾವೂ ಸೇರಿ ಚುನಾವಣೆ ಮಾಡಿಕೊಳ್ಳಲು ಒಪ್ಪಿದರೆ, ನಮ್ಮ ಸರ್ವನಾಶವಾಗುವುದು ಎಂದು ರಾಜಾ—ಮುಂಜೆಯವರೊಳಗಾದ ತಾಹಾ ನಾಮೆಯನ್ನು ನಿರಾಕರಿಸಲಿಕ್ಕಾಗಿ ಒಂದು ಸಭೆಗೂಡಿತು. ೩೦ ಮಂದಿ ಪ್ರತಿನಿಧಿಗಳು ಸೇರಿದ್ದರು. ನಾಗಪುರದಿಂದ ೧೫೦೦ ಮಂದಿ ಮಹಾರರೂ ೫೦೦ ಸ್ತ್ರೀಯರೂ ಸೇರಿದ್ದರು. ನಾಗಪುರ ಜಿಲ್ಲಾ ಮೆಜಿಸ್ಟ್ರೇಟರೂ ಪೋಲೀಸರೂ ಒಳಗೂ ಹೊರಗೂ ಹಾಜರಿದ್ದರು. 'ಅಖಿಲ ಭಾರತದ ಅಸ್ಪೃಶ್ಯರ ಈ ಮಹಾ ಕೊಂಗ್ರೆಸ್ ಸಭೆಗೆ ಮದ್ರಾಸಿನ [illegible] ಅಧ್ಯಕ್ಷರಾಗಿದ್ದು, ತಮ್ಮ ನಾಲ್ಕು ಜನ ಪ್ರತಿನಿಧಿಯರೊಂದಿಗೆ ಹಾಜರಾಗಿ ಅಲಂಕರಿಸಿದ್ದರು. ಮಹಾ [illegible]ಯಿಂದ ಸ್ವಯಂ [illegible] ಸವಾರಿ ಚಿತ್ತೈಸಿದ್ದರು.' ಕರೀ ಬಾವುಟಗಳನ್ನು ಇವರು ನೋಡಿ, ಮಹಾ ಪ್ರಸನ್ನರಾಗಿ, ಬಾವುಟ ಹಿಡಿದವರ ಮುಖಂಡ ಮಗುವೂ ತಟ್ಟೆ ಓಡವ ಗಾಯ[illegible]ವುದನ್ನೂ ನೋಡಿ. ಶ್ರೀ ರಾಜರವರ ಪಕ್ಷದ ಮಹಾ ಜನಗಳು ಪೋಲೀಸರ ಕೈದಿನಲ್ಲಿ ಬಂಡನೆ ಹೊಂದಿದ ಬಳಿಕ, ಕಾಂಗ್ರೆಸ್ಸಿಗೆ ದಯಮಾಡಿಸಿದರು. ಪ್ರತಿನಿಧಿಗಳೇ ಇಲ್ಲದೆ ಅಖಿಲ ಭಾರತದ ಕಾಂಗ್ರೆಸ್ ಎಂದು ಹೇಗಾದೀತು ಎಂದು ಮೊದಲನೆ ಪ್ರಶ್ನೆ ಸಭೆಯಲ್ಲಿ ಎದ್ದಿತ, ಕೂಡಲೆ ಹಾಗೆ ಕೇಳಿದವರನ್ನು ನಾಲ್ಕಾರು ಮಂದಿ ಮುತ್ತಿ [illegible] ಬಡಿದೊಡನೆಯೆ, ಜಿಲ್ಲಾ ಮೆಜಿಸ್ಟ್ರೇಟರ ಸಭೆಯ ಸಮಾಧಾನಕ್ಕಾಗಿ, ಅವರನ್ನು ಹೊರಕ್ಕೆ ತಂದು ಆಸ್ಪತ್ರೆಗೆ ಕಳಿಸಿದರು. ಹಿಂದುಗಳ ಜತೆಗೂಡಿ ಸರ್ವನಾಶವಾಗುವುದೆಂದು ನಿರ್ಣಯಮಾಡಲಾಯಿತಾದರೂ, ಇವರಿವರೇ ಜತೆ ಸೇರಿ ಸಾಧಾರಣ ಸಾಮಾನ್ಯ ನಾಶಕ್ಕೆ ಪ್ರಯತ್ನಿಸಿದರು. ೩೦ ಮಂದಿ ಅಪ್ರತಿಮ ಪ್ರತಿನಿಧಿಗಳ ಈ ಕಾಂಗ್ರೆಸ್ಸಿನ ಮಹಾ ನಿರ್ಣಯಗಳನ್ನು ಇನ್ನು ಬ್ರಿಟಿಷ ಸರಕಾರಕ್ಕೆ ತಿಳಿಸುವುದೊಂದೇ ಉಳಿದಿದೆ. ಸಾವಿರಾರು ಮುಖಂಡರ ಸಭೆಗಳೂ ಪ್ರತ್ಯೇಕ ಪ್ರಾತಿನಿಧ್ಯವೇ ಶಾಪವೆಂದರೂ, ಈ ಮೂವತ್ತರ ಕಾಂಗ್ರೆಸು ಕೋಟಿ ಜನಸಂಖ್ಯೆಗೊಬ್ಬ ಪ್ರತಿನಿಧಿಯಿಂದಾಗಿ ಆ ಶಾಪವನ್ನೆ ಆಶೀರ್ವಾದವಾಗಿ ಶಿರಸಾಧರಿಸಿಕೊಂಡಿದೆ ಎಂದು ಹೋರರು ಹಿಗ್ಗದಿರರು.

* * *

ನೋಟಗಳು

NOTE....S

ಪುಸಲಾಯಿಸುವುದನ್ನು ಕುರಿತಾದ ಬಿಲ್ಲು, ಈಗ ಓರ್ಡಿನೆನ್ಸು ರೂಪದಲ್ಲಿದ್ದುದನ್ನು ಆಕ್ಟು ಮಾಡುವುದಾಗಿ ಎಸೆಂಬ್ಲಿಯಲ್ಲಿ ತರಲಾಗಿತ್ತು. ಆದರೆ ಇನ್ನು ಎಸೆಂಬ್ಲಿ ಅಧಿವೇಶನವಿಲ್ಲ; ಮುಂದೆ ಆಗೋಸ್ತು ಕೊನೆಗೆ ಸೇರಬೇಕಷ್ಟೆ, ಹೀಗಾಗಿ, ಆ ಬಿಲ್ಲು ಎಸೆಂಬ್ಲಿಯನ್ನು ಪುಸಲಾಯಿಸುವ ಮೊದಲೆ ತಾನಾಗಿ ರದ್ದಾಯಿತು.

• • • •

ಒಬ್ಬ ಮಹನೀಯರ ತಂದೆಯ ಹೆಸರು ಅಸ್ತಿ ಮುಂತಾದ್ದು ತಿಳಿಯಲಿಕ್ಕಾಗಿ, ತನ್ನ ಪ್ರಬುದ್ಧೆ ಮಗಳನ್ನು ಅವಳ ಮಗನಿಗೆ ಮದುವೆಮಾಡಿ ಕೊಡಲು ನಿರ್ಧರಿಸುವುದಕ್ಕಾಗಿ, ಮಗನ ಜಾತಕ ಕೇಳಿ ಒಬ್ಬನು ಬಂದನು. ಆದರೆ ಮಗನ ವಯಸ್ಸನ್ನ, ಜಾತಕ ಕೊಡಲಿಲ್ಲ, ಬೇರೆ ವಿಚಾರ ತಿಳಿಸಿಲ್ಲ. ಟೆಲಿಫೋನ್ ಮೂಲಕ ಕೇಳಲಾಯ್ತು. ಹೇಳಲಿಲ್ಲ. ಕೊನೆಗೆ ಜಾತಕ ಹೇಳಿದವ C I D ಎಂದು ತಿಳಿದು ಬರಲು, ಅವನ ಜಾತಕವೇ ಈ ಪತ್ರಿಕೆಗಳಲ್ಲಿ ಬಂದಿದೆ. ನವ [illegible] ಓಡೆ ಓಡೆ ತಿರುಗಿ ಜಾತಕ ಪ್ರಕಟಿಸುವ ಕೆಲವರೂ ಇದ್ದಾರೆ'

• • • •

ಕೊಂಗ್ರೆಸು ಹಿಂದೂ ದ್ವೇಷಿ ಎಂದ ಭಾಯಿ ಪರಮಾನಂದರು ಹೇಳುವರು, ಮುಸ್ಲಿಮ ದ್ವೇಷಿ ಎಂದು ಶೌಕತ್ ಅಲಿಯವರು ಹೇಳುವರು, ಅಸ್ಪೃಶ್ಯ ದ್ವೇಷಿ ಎಂದು ಅಂಬೇಡ್ಕಾರರು ಹೇಳುವರು, ಯುರೋಪಿ ದ್ವೇಷಿ ಎಂದ ವಿಲ್ಯರ್ಸ ಸಾಹೇಬರು ಹೇಳುವರು. ಇಂತಹ ಪ್ರಚಂಡ ಸಮಾಜಗಳ ದ್ವೇಷಿಯಾದ ಕೊಂಗ್ರೆಸನ್ನು ಅಣಗಿಸುವುದಕ್ಕಾದರೂ ಇಷ್ಟೆಲ್ಲ ಓರ್ಡಿನೆನ್ಸುಗಳು ಯಾತಕ್ಕೊ ತಿಳಿಯದು.

• • • •

'ಕೊಂಗ್ರೆಸ್ ದ್ವೇಷಿಗಳೆಂದ ಅಲೀ ಪಕ್ಷ ಮುಸ್ಲಿಮರೂ, ಪರಮಾನಂದ ಪಕ್ಷದ ಹಿಂದುಗಳೂ, ವಿಲ್ಯರ್ಸ ಪಕ್ಷದ ಯುರೋಪಿಯರೂ, ಅಂಬೇಡ್ಕಾರ ಪಕ್ಷದ ಅಸ್ಪೃಶ್ಯರೂ ಸೇರಿ ಹೋರರಿಗೆ ಹರಸಿರುವರಲ್ಲದೆ ಹೊಸ ಸುಧಾರಣೆಗೆ ತಡೆವ ಹಾಗೆ ಸಹಾ[illegible]ಗಿರುವರು. ಇವುಗಳಾದರೂ ಸಿಗುವುದು ಪಕ್ಷಪಾತ ಫಲವೋ ದ್ವೇಷವೋ ತಿಳಿದಿಲ್ಲ

• • • •

ಓರ್ಡಿನೆನ್ಸುಗಳಿಗೆ ಎರಡು ತಿಂಗಳು ರಜಾ ಕೊಟ್ಟು, [illegible] ವಜಾ ಉಂಟುಮಾಡುವ ಬಗೆ ಪ್ರಯತ್ನಿಸಿ, ಕೈದಿ [illegible] ದಂಡನೆಯನ್ನು ಪಡೆ ಮಾಡುವದಾಗಿ, ಪತ್ರಿಕೆಗಳಲ್ಲಿ ಜಪಾ ಹೊರಡಿದೆ

* * * *

1. Good Riding Quality.
2. Gripping Tread.
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

I N

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ,
ನಮ್ಮ ಜಿಲ್ಲೆಯ ವ್ಯಾಪಾರದ ಅಭಿವೃದ್ಧಿ . . . ೬
ಸ್ಫುಟವಿಚಾರಗಳು . . . ೮
ನೋಟಗಳು . . . . [illegible]
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ . . ೬
ಒಳದೇಶ ವರ್ತಮಾನ . . . ೬
ದಕ್ಷಿಣ ಕನ್ನಡ — ಮಂಗಳೂರು, ಉಡುಪಿ, ಕುಂದಾಪುರ ಕಾರ್ಕಳ, ಪುತ್ತೂರು, ಕಾಸರಗೋಡು, ಕುಂಬಳೆ, ಸುರತ್ಕಲ್, ಮುಲ್ಕಿ. . . . ೭
ವಿವಿಧ ಸಮಾಚಾರಗಳು ೧೧
ಸಲಾಂ! ೮
ಜಳವಳದ ವಾರ್ತೆ! ೯
ಮಕ್ಕಳ ಕೂಟದ ಪ್ರಥಮ ಸಮ್ಮೇಳನ ೧೪

ಸ್ವದೇಶಾಭಿಮಾನಿ.

ತಾ. ೧೩ನೇ ಶುಕ್ರವಾರ ಎಪ್ರಿಲ್ ೧೯೩೨

ನಮ್ಮ ಜಿಲ್ಲೆಯ ವ್ಯಾಪಾರದ ಅಭಿವೃದ್ಧಿ.

ನಮ್ಮ ಜಿಲ್ಲೆಯು ಕೃಷಿ, ಕೈಗಾರಿಕೆಗಳಲ್ಲಿ ಪ್ರಕೃತದ ಸ್ಥಿತಿಗಳ ಮಟ್ಟಿಗೆ ಬಹಳ ಹಿಂದೆ ಇದೆಯಾಗಿ ಹೇಳಲಾಗುವುದಿಲ್ಲ. ಆ ಕೃಷಿ ಕೈಗಾರಿಕೆಗಳಿಂದ ಜಿಲ್ಲೆಯ ವ್ಯಾಪಾರಕ್ಕೆ ಅನೇಕ ತರದಲ್ಲಿ ಸೌಕರ್ಯಗಳು ಒದಗಿರುತ್ತವೆ. ಆದರೆ ಜಿಲ್ಲೆಯ ಉತ್ಪಾದನ ಶಕ್ತಿಯು ಸರಿಯಾಗಿ ವ್ಯವಸ್ಥೆಗೊಳಿಸಲ್ಪಡದೆ ಸಂಘದಭಿವೃದ್ಧಿಗೆ ಬಹಳ ತೊಡಕ್ಕುಂಟಾಗಿರುತ್ತದೆಂದು ಸ್ಪಷ್ಟವಾಗಿ ಕಾಣುತ್ತದೆ. ಜಿಲ್ಲೆಯ ಹಲವು ಕೈಗಾರಿಕೆಗಳ ಮುಖಂಡರೂ, ಜಮೀನುದಾರರೂ, ವ್ಯಾಪಾರಸ್ಥರೂ ಸರಿಯಾದ ರೀತಿಯಲ್ಲಿ ಸಹಕರಿಸಿದರೆ ನಮ್ಮ ಜಿಲ್ಲೆಯೊಳಗಿನ ಬಡತನವನ್ನು ಬಹುಮಟ್ಟಿಗೆ ನಿವಾರಿಸಬಹುದಾಗುತ್ತದೆ.

ಉದಾಹರಣೆಯಾಗಿ, ನಮ್ಮ ಜಿಲ್ಲೆಯ ಹಂಚಿನ ಕೈಗಾರಿಕೆಯನ್ನು ನೋಡಿ. ನಮ್ಮ ಜಿಲ್ಲೆಯ ಹಂಚು ಎಂದರೆ ಹೆಸರುವಾಸಿಯಾದುದು. ಪರದೇಶಗಳಲ್ಲಿ ಅದಕ್ಕೆ ತುಂಬಾ ಗಿರಾಕಿ ಇದೆ. ಅಲ್ಲದೆ ಈ ಕೈಗಾರಿಕೆಯ ಇನ್ನೊಂದು ವಿಶೇಷವೇನೆಂದರೆ, ಇದರ ಬಂಡವಾಳವಾಗಲಿ, ತಯಾರಿ ಖರ್ಚಾಗಲಿ ಇದಕ್ಕಾಗಿ ವ್ಯಯಿಸಲ್ಪಡುವ ಹಣವು ಪೂರ್ಣವಾಗಿ ನಮ್ಮ ಜಿಲ್ಲೆಗೇನೇ ಉಳಿಯುತ್ತದೆ. ಅಂದರೆ ಬಂಡವಾಳದಲ್ಲಿ, ಒಂದು ಇಂಜಿನಿನ ಹೊರತು ಬಾಕಿ ಎಲ್ಲಾ ಯಂತ್ರೋಪಕರಣಗಳು ನಮ್ಮ ಜಿಲ್ಲೆಯಲ್ಲಿಯೇ ತಯಾರಾಗುತ್ತವೆ. ಹಾಗೆಯೇ ತಯಾರಿ ಖರ್ಚಿಂದಲ ಮಣ್ಣು, ಕೂಲಿಯಲ್ಲದೆ ಜಿಲ್ಲೆಯ ಹೊರಗೆ ಹೋಗತಕ್ಕ ಯಾವ ಅಂಶವೂ ಇದರಲ್ಲಿಲ್ಲ. ಆದುದರಿಂದ ಈ ಕೈಗಾರಿಕೆಯು ನಮ್ಮ ಜಿಲ್ಲೆಯ ಜೀವಾಳ. ಆದರೂ ಇದರಲ್ಲಿ ಯಾವ ಅವಸ್ಥೆಯೂ ಇರುವುದಿಲ್ಲ. ಒಂದು ಬಾರಿ ಕಾರ್ಖಾನೆದಾರರ ಸಂಘವು ಏರ್ಪಟ್ಟಿತು. ಈಗ ಅದರ ಸುದ್ದಿಯೇ ಇಲ್ಲ. ಫಲವಾಗಿ ಕೈಗಾರಿಕೆಯು ಬಹಳ ಕಷ್ಟ ತೊಡರುಗಳಲ್ಲಿ ಬಳಲುತ್ತಲೇ ಇದೆ. ಈ ಕಾರ್ಖಾನೆಗಳೆಲ್ಲಾ ಒಂದುಗೂಡಿ ಮಾರಾಟದ ಸಂಸ್ಥೆಯೊಂದನ್ನು ಅಂದರೆ Sales Corporation ಎಂಬ ಒಂದು ಸಂಸ್ಥೆಯನ್ನು ಮಾಡಿ ಆ ಮೂಲಕ ಎಲ್ಲಾ ಕಾರ್ಖಾನೆಗಳೂ ತಮ್ಮ ಮಾರಾಟವನ್ನು ವ್ಯವಸ್ಥೆಗೊಳಿಸಲಿಕ್ಕಾಗುವುದಿಲ್ಲವೆ? ಇಂತಹ ಸಂಸ್ಥೆಯ ಮೂಲಕ ಮಾರಾಟವನ್ನು ವ್ಯವಸ್ಥೆಗೊಳಿಸಿದರೆ, ದರಗಳನ್ನು ನ್ಯಾಯವಾಗಿ ನಿರ್ಣಯಿಸಬಹುದು, ಮಾರಾಟದ ಕ್ಷೇತ್ರವನ್ನು ಹೆಚ್ಚಿಸಿ ಖರ್ಚನ್ನು ಇಳಿಸಬಹುದು, ನೂತನ ಮಾರಾಟದ ಕ್ಷೇತ್ರಗಳನ್ನು ಹುಡುಕಿ ಕಂಡು ಹಿಡಿಯಬಹುದು; ಹಂಚುಗಳ ಉಪಯೋಗವು ಹೆಚ್ಚುವಂತೆ ಪ್ರಚಾರಕಾರ್ಯವನ್ನು ನಡಿಸಬಹುದು, ಹಂಚಿನ ತಯಾರಿಯಲ್ಲಿ ಇನ್ನೂ ಉತ್ತಮ ಸುಧಾರಣೆಗಳನ್ನು ಮಾಡಲು ಶೋಧನವನ್ನು ಕೈಕೊಳ್ಳಬಹುದು. ಆದುದರಿಂದ ಹಂಚಿನ ಕಾರ್ಖಾನೆಯವರು ಇತ್ತಕಡೆ ಲಕ್ಷ್ಯ ಕೊಡುವುದು ಒಳ್ಳೆಯದು.

ಮಂಗಳೂರು ಬಂದರವು ಹಲವು ತರದ ರಫ್ತನ್ನು ನಡಿಸುತ್ತಿದೆ. ಕಾಫಿಬೀಜ, ಗೇರುಬೀಜ, ಕಾಡುತ್ಪತ್ತಿ ಇತ್ಯಾದಿ ಇವೇ ಮುಖ್ಯವಾದವುಗಳು. ಇತ್ತೀಚೆಗೆ ಇವುಗಳ ವ್ಯಾಪಾರವು ಸ್ಥಳೀಕ ವ್ಯಾಪಾರಿಗಳಿಂದಲೂ ಸಾಗುತ್ತಿದೆಯಾದರೂ, Peirce Leslie, Volkart Bros, Aspinwalls, ಮೊದಲಾದ ಪರಸ್ಥಳೀಯ ಸಂಸ್ಥೆಗಳು ಎಷ್ಟೋ ಚೆನ್ನಾಗಿ ಈ ವ್ಯಾಪಾರಗಳನ್ನು ನಡಿಸುತ್ತವೆ. ಅಷ್ಟೇ ವ್ಯವಸ್ಥಿತ ರೀತಿಯಲ್ಲಿ ವ್ಯಾಪಾರ ನಡಿಸುವ ಸ್ಥಳೀಕ ವ್ಯಾಪಾರಸ್ಥರು ಅತ್ಯಲ್ಪ, ಇಲ್ಲವೆಂದರೂ ತಪ್ಪಾಗದು. ಇದರ ಅರ್ಥವೇನು? ನಾವು ವ್ಯಾಪಾರ ಕಲಿಯುವುದರಲ್ಲಿ ಉತ್ಸಾಹವಿರುವುದಕ್ಕಿಂತ ಹೆಚ್ಚಾಗಿ ವ್ಯಾಪಾರಮಾಡುವುದರಲ್ಲಿ ಹೆಚ್ಚು ಉತ್ಸಾಹಿಗಳು. ಸ್ವಂತ ಅಭಿವೃದ್ಧಿಯನ್ನು ಸಾಧಿಸುವುದಕ್ಕಿಂತ ಪ್ರತಿಸ್ಪರ್ಧಿಗಳ ನಷ್ಟಗಳನ್ನು ಲೆಕ್ಕಮಾಡುವುದರಲ್ಲಿ ಉತ್ಸಾಹಿಗಳು. ವ್ಯಾಪಾರವೆಂದರೆ ಬರೇ ದುಡ್ಡಿನಿಂದಾಗದು, ಅದರಲ್ಲಿ ಪರಿಶ್ರಮಪಡಬೇಕು. ಈಗಿನ ವ್ಯಾಪಾರಗಳಿಗೆ ಇಡೀ ಲೋಕದ ಅನುಭವ ಬೇಕು. ಈ ಬಗ್ಗೆ ನಮ್ಮ ಸಾಹುಕಾರರು ಯಾವ ಪ್ರಯತ್ನಗಳನ್ನು ನಡಿಸುತ್ತಾರೆ? ಸಾಹುಕಾರರು ಒಟ್ಟುಗೂಡಿ ಒಂದು ಸಂಘವನ್ನು ಮಾಡಿ ಎಲ್ಲವರಿಗೂ ಪ್ರಯೋಜನಕ್ಕೆ ಬೀಳುವಂತಹ ಸಾಧನಗಳನ್ನು ಮಾಡಿದರೆ ಒಬ್ಬರಿಗೊಬ್ಬರು ಆಧಾರಕ್ಕೆ ನಿಂತು ಎಲ್ಲರೂ ಅಭಿವೃದ್ಧಿಗೊಳ್ಳಲು ಸುಲಭವಾಗುತ್ತದೆ.

ಮುಂಬಾಯಿಯಲ್ಲಿ ಇರುವಂತಹ ಒಂದೆ ಬಾರಿಗೆ ಬಹಳ ನಷ್ಟ ಬೀಳುವಂತಹ (Speculative) ವಹಿವಾಟುಗಳು ಮಂಗಳೂರಿನಲ್ಲಿ ಇರುವುದಿಲ್ಲ. ಆದರೂ ವರ್ಷ ವರ್ಷವೂ ಕೆಲವು ಸಾಹುಕಾರರು ಅಡಿಮೇಲಾಗುತ್ತಾರೆ. ಇದಕ್ಕೆ ಮೇಲಿನ ಅಭಾವಗಳೇ ಕಾರಣವಲ್ಲದೆ ಬೇರೆಯಲ್ಲ.

ಹಲವು ವ್ಯಾಪಾರಸ್ಥರು ಇನ್ನೂ ಹಳೇ ಪದ್ಧತಿಯಲ್ಲಿಯೇ ಲೆಖ್ಖಪತ್ರಗಳನ್ನಿಡುತ್ತಾರೆ. ವರ್ಷಾಂತ್ಯದ ಲೆಖ್ಖಪರಿಶೋಧನವು ಇರುವುದಿಲ್ಲ. ಆದುದರಿಂದ ಲಾಭವಾಗಲಿ, ನಷ್ಟವಾಗಲಿ ವರ್ಷ ವರ್ಷ ಬೆಳೆಯುತ್ತಾ ಹೋಗುವುದು, ದುಡ್ಡು ಕೈಯಲ್ಲಿ ತಿರುಗಿದಂತೆ ಲಾಭವೇ ಕಂಡುಬಂದು ಖರ್ಚು ಬೆಳೆದು ಬರುವುದು. ಅಖೈರಿಯಲ್ಲಿ ಹೊರಗಿನಿಂದ ಪಡೆದ ಸಾಲಗಳು ಭರ್ತಿಯಾದ ಮೇಲೆ ವ್ಯಾಪಾರವು ಕುಸಿಯಲಾರಂಭವಾಗುವುದು.

ವ್ಯಾಪಾರಕ್ಕೆ ಹಲವು ಅನುಕೂಲತೆಗಳೂ, ನೂತನ ಮಾರ್ಗಗಳೂ, ನೂತನ ಸುಧಾರಣೆಗಳೂ ಇವೆ. ಇವನ್ನು ವ್ಯವಸ್ಥಿತ ರೀತಿಯಲ್ಲಿ ತಂದರೇನೇ ನಮ್ಮ ಜಿಲ್ಲೆಯ ಸಂಪತ್ತು ಅಭಿವೃದ್ಧಿಹೊಂದುವುದು.

ವಿದೇಶ ವರ್ತಮಾನ.

— ಪ್ರಧಾನ ಮಂತ್ರಿವರ್ಯರಾದ ಮಿ. ಮೆಕ್ಡೊನಾಲ್ಡರ ಒಂದು ಕಣ್ಣಿನ ರೋಗವನ್ನು ಗುಣಪಡಿಸುವುದಕ್ಕಾಗಿ ಅವರೀಗ ಆಸ್ಪತ್ರೆಯಲ್ಲಿರುವರೆ.

— ಚೀನಾ ಜಪಾನರ ಯುದ್ಧ ಶಮನಕ್ಕಾಗಿ ಇಷ್ಟು ಸಮಯದಿಂದಲೂ ಯತ್ನವಾಗುತ್ತಿತ್ತು. ನೆನ್ನೆ ದ್ವಿಪಕ್ಷಗಳವರೂ ಯುದ್ಧ ಶಮನವನ್ನಾದುವೆವೆಂದು ಕಾಗದದಲ್ಲಿ ಬರೆದಿರುತ್ತಾರೆ.

— ಪೇಲೆಸ್ತೀನ್ ದೇಶಕ್ಕೆ ಸೇರಿದ ಅರ್ಲ್ಟ್ ಎಂಬಲ್ಲಿ ಆಂಗ್ಲೊ ಅಮೇರಿಕನ್ ಭೂಪರಿಶೋಧಕರು ಕೆಲಸ ನಡೆಸುತ್ತಿದ್ದು ಕೆಲವು ಅಸ್ಥಿಪಂಜರಗಳು ಸಿಕ್ಕಿದುವು. ಇವು ೭೫೦೦೦ ವರ್ಷಗಳ ಹಿಂದೆ ಪ್ರಪಂಚದಲ್ಲಿ ಜೀವಂತರಾಗಿದ್ದ ಮನುಷ್ಯರದ್ದೆಂದು ತಿಳಿದುಬಂತು. ಇಂತಹ ಶೋಧನೆಯು ಭೂಗೋಳದಲ್ಲಿ ಇಷ್ಟರ ತನಕ ನಡೆದಿಲ್ಲವೆಂದು ಭೂಶಾಸ್ತ್ರಜ್ಞನಾದ ಮಿ. ಮೆಕ್ಕಾರ್ಡ್ ಎಂಬ ವಿದ್ವಾಂಸನೆನ್ನುತ್ತಾನೆ.

— ಇಂಗ್ಲೆಂಡಿನ ಪ್ರಸಿದ್ಧ ವೈಮಾನಿಕರಾದ ಮೆಕ್‌ಗ್ರೆಗರ್ ಮತ್ತು ಸ್ಕಾಟ್ ಎಂಬವರು ಆಕಾಶದಲ್ಲಿ ಹಾರುತ್ತಿರುವಾಗ ಯಂತ್ರವು ಹಾಳಾಗಿ ವಿಮಾನಕ್ಕೆ ಬೆಂಕಿ ತಗಲಿತು. ವಿಮಾನವು ಭೂಮಿಗೆ ಇಳಿಯುವಾಗ ಸಂಪೂರ್ಣ ಸುಟ್ಟಿದ್ದಿತು. ವೈಮಾನಿಕರಿಬ್ಬರೂ ಮಡಿದಿದ್ದರು.

ಹಸಿಡ್ಯ ಎಂಬಲ್ಲಿ ಒಂದು ಭಯಂಕರ ಭೂಕಂಪನವೂ ಗಾಳಿಯೂ ಎದ್ದು ೫೦೦ ಜನರು ಮಡಿದರಾಗಿ ವಾರ್ತೆ.

— ರಷ್ಯ ಕ್ರಾಂತಿಕಾರನ ಗುಂಡಿನಿಂದ ಮಡಿದ ಫ್ರೆಂಚ್ ಅಧ್ಯಕ್ಷರ ಶವಸಂಸ್ಕಾರಕ್ಕೆ ಇಂಗ್ಲೆಂಡಿನ ಕಡೆಯಿಂದ ಪ್ರಿನ್ಸ್ ಒಫ್ ವೇಲ್ಸರು ವಿಮಾನದಲ್ಲಿ ಹೋಗಿರುವರು.

— ಗುಜರಾತ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ವಲ್ಲಭಭಾಯಿ ಪಟೇಲರು ಅಂತ್ಯಜ ಆಶ್ರಮದ ನೆಲಗಂದಾಯವನ್ನು ಕೊಡದಿದ್ದುದಕ್ಕಾಗಿ ಸರಕಾರವು ಆ ಭೂಮಿಯನ್ನು ವಶೀಕರಿಸಿಕೊಂಡಿತು.

* * *

ಒಳದೇಶ ವರ್ತಮಾನ

— ಲಾಹೋರಿನಲ್ಲಿನ "ಪಂಜಾಬ ಕೇಸರಿಯಲ್ಲಿ" "ನಾಟಕದ ಅಂಕ"ವೆಂಬ ವಿಷಯವೊಂದನ್ನು ಪ್ರಕಟಿಸಿದುದಕ್ಕಾಗಿ ಅದರ ಸಂಪಾದಕರಿಗೂ ಮುದ್ರಕರಿಗೂ ಶಿಕ್ಷೆ ವಿಧಿಸಲಾಯಿತು.

ಕೈಟ್ಟದಲ್ಲಿ ಎರಡು ಮಾರ್ಗ ಕೂಡುವಲ್ಲಿ ಎರಡು ಮೋಟಾರುಗಳು ಒಂದಕ್ಕೊಂದು ಢಿಕ್ಕಿ ಹೊಡೆದು ಇಬ್ಬರು ಆಂಗ್ಲ ಸ್ತ್ರೀಯರು ವಿಷಮತರದ ಗಾಯಗೊಂಡರು. ಒಂದು ಮೋಟಾರು ಚೂರು ಚೂರಾಯಿತು.

— ಸ್ತ್ರೀ ಸ್ವಯಂಸೇವಕರನ್ನು ಅಗೌರವದಿಂದ ಭಂಗಿಸಿದ ಒಬ್ಬ ಹೆಡ್ ಕಾನ್ಸ್‌ಟೇಬಲ್ ಮತ್ತು ೪ ಮಂದಿ ಪೋಲೀಸರ ಮೇಲೆ ಬನಾರಸಿನಲ್ಲಿ ತಕ್ಸೀರು ನಡೆದಿದೆ. ಅದರ ತನಿಖೆಯು ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಂದಲೇ ನಡೆಯುತ್ತದೆ. ಅಪಾದನೆಯು ಸ್ಥಾಪಿತವಾಗುತ್ತಿದೆ. ಪಂಡಿತ ಮಾಲವೀಯರನ್ನು ಸಾಕ್ಷಿಯಾಗಿ ವಿಚಾರಿಸುತ್ತಿರುವರು.

— ಕಂದಾಯ ನಿರಾಕರಣೆ ಮಾಡಿದುದಕ್ಕಾಗಿ ಬೋರ್ಸದ್ ತಾಲೂಕಿನ ರಾಸ್ ಗ್ರಾಮದಲ್ಲಿ ೧೪೮ ಜಮೀನುದಾರರ ಜಮೀನುಗಳನ್ನು ವಶೀಕರಿಸಿಕೊಳ್ಳಲಾದೀತೆಂದು ಸರಕಾರವು ನೋಟೀಸು ಕಳುಹಿದೆ.

— ಅಲ್ಲಹಾಬಾದಿನಲ್ಲಿ ತಾ. ೯ನೇ ದಿನ ವಿಪರೀತವಾದ ಬಿರುಗಾಳಿ ಎದ್ದು ಅದರೊಡನೆ ಸುಂಟರಗಾಳಿಯೂ ಸಂಚರಿಸಿ ೧೩ ಜನರು ಮಡಿದರು. ೧೩೫ ಜನರಿಗೆ ಜಖಂ ಆಗಿದೆ. ಕೆಲವು ಜನರನ್ನು ಸುಂಟರಗಾಳಿಯು ಎಲ್ಲೆಲ್ಲೋ ಎತ್ತಿ ಹಾಕಿತಂತೆ. ಮಾವಿನ ತೋಟ ತೆಂಗಿನ ತೋಟಗಳೆಲ್ಲ ನೆಲದ ಮೇಲೆ ಮಲಗಿರುವುವು. ಹರಕು ಮುರುಕು ಗುಡಿಸಲುಗಳ ಪತ್ತೆಯೇ ಇಲ್ಲ.

— ತಿನ್ನೆವೆಲ್ಲಿಯ ಪೋಸ್ಟಾಫೀಸಿನಲ್ಲಿ ಅಂಚೆ ಕಾಗದಗಳು ಭಸ್ಮೀಕರಿಸಲ್ಪಟ್ಟುವು. ಪೋಲೀಸರು ತನಿಖೆ ನಡೆಸಿದರು. ಅಪಾದಿತರು ಸಿಗಲಿಲ್ಲ.

— ಟ್ಯುಟಿಕೋರಿನ್‌ನಲ್ಲಿ ಬೆಂಕಿಯೆದ್ದು ೩೫ ಮನೆಗಳು ಸುಟ್ಟು ಅನೇಕರು ನಿರ್ಗತಿಕರಾಗಿರುವರು. ಸುಮಾರು ರೂ ೧೫೦೦೦ದಷ್ಟು ನಷ್ಟವಾಗಿರಬಹುದಂತೆ.

— ಗುಂಟೂರಿನಲ್ಲಿ ಜೈಲಿನೊಳಗಿನ ರಾಜಕೀಯ ಕೈದಿಗಳಿಗೆ ವಸ್ತ್ರದ ಮೂಟೆಯೊಡನೆ ಬೀಡಿಗಳನ್ನು ಅಡಗಿಸಿಟ್ಟು ಕೊಟ್ಟುದಕ್ಕಾಗಿ ಶ್ರೀ ರಾಘವಾಚಾರಿ ಎಂಬವರ ಮೇಲೆ ತಕ್ಸೀರು ಹೊರಿಸಲಾಗಿದೆ.

— ಅಂಚೆ ಕಾಗದಗಳನ್ನು ಸುಡುವ ಚಾಳಿಯು ಮದ್ರಾಸು, ಬಂಗಾಳ ಸಂಯುಕ್ತ ಪ್ರಾಂತ್ಯ ಮೊದಲಾದ ಎಲ್ಲಾ ಕಡೆಗಳಿಗೂ ಹರಡಿದೆ. ಒಂದು ಬಗೆಯ ಎಸಿಡ್ ಹಾಕಿ ಪೆಟ್ಟಿಗೆಗಳೊಳಗಿರುವ ಕಾಗದಗಳನ್ನು ಸುಡುವುದೇ ಕೆಲವು ಪುಂಡರ ಹಟ.

— ಕಳೆದ ಒಂದು ವರ್ಷದಿಂದ ನಡೆಯುತ್ತಿದ್ದ ಮುಜಾಫರಪುರದ ದೊಂಬಿ ತಕ್ಸೀರಿನಲ್ಲಿ ೭ ಮಂದಿಗಳಿಗೆ ಮರಣದಂಡನೆಯೂ ೨೫ ಮಂದಿಗಳಿಗೆ ದ್ವೀಪಾಂತರವಾಸವೂ ಕೊಡಲ್ಪಟ್ಟಿತು.

ರಾಜಪಾಳ್ಯ ಎಂಬಲ್ಲಿ ಒಬ್ಬ ತರುಣಿಯು ೬ ಅಂಗುಲ ಉದ್ದ ಬಾಲವಿದ್ದ ಒಂದು ಹೆಣ್ಣುಮಗುವನ್ನು ಹೆತ್ತಳು. ಮೂರನೆಯ ದಿನ ಮೃತಳಾದಳು. ಮಗೂ ಬದುಕುವಂತಿಲ್ಲವಂತೆ.

— ಅಲ್ವಾರದಲ್ಲಿನ ಗಲಾಟೆಯು ಇನ್ನೂ ಶಮನವಾಗಿರುವುದಿಲ್ಲ. ಕೆಲವು ಪುಂಡರು ರಾತ್ರಿ ಒಂದು ಮನೆಗೆ ನುಗ್ಗಿ ೨೦ ವರ್ಷ ಪ್ರಾಯದ ಒಬ್ಬ ತರುಣಿಯನ್ನೂ ಅವಳ ಮುದಿ ತಾಯಿಯನ್ನೂ ಕತ್ತಿಯಿಂದ ಕಡಿದು ಇದ್ದುದಿದ್ದುದನ್ನು ದೋಚಿಕೊಂಡು ಓಡಿದರು.

— ಬೆಂಗಳೂರಿಗೆ ಕುಡಿಯುವ ನೀರನ್ನು ತೊಂದರೆಯಿಲ್ಲದೆ ಒದಗಿಸುವುದಕ್ಕಾಗಿ ಮಾಗಡಿ ತಾಲೂಕು ತಿಪ್ಪಗೊಂಡನಹಳ್ಳಿ ಬಳಿ ಕಟ್ಟಿಸುತ್ತಿರುವ ಜಲಾಶಯಕ್ಕೆ ಚಾಮರಾಜೇಂದ್ರ ಜಲಾಶಯವೆಂಬ ಹೆಸರಿಡಬೇಕೆಂದು ಸರಕಾರದ ಅಪ್ಪಣೆಯಾಗಿದೆ.

— ಅಂಬಾಲಕ್ಕೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಹೆಂಗಸು ೧೫ ದಿವಸಗಳ ತನ್ನ ಅವಳಿಜವಳಿ ಮಕ್ಕಳನ್ನು ಒಂದು ಕೆರೆಯ ಬಳಿ ಮರದ ನೆರಳಿನಲ್ಲಿ ಮಲಗಿಸಿ ಕೆರೆಯಲ್ಲಿ ಬಟ್ಟೆಯನ್ನೊಗೆಯುತ್ತಿದ್ದಳು. ಅಷ್ಟರಲ್ಲಿ ಅಲ್ಲಿ ಯಾರೋ ಬಂದು ಅವಳನ್ನು ಎತ್ತಿಕೊಂಡು ಹೋದರು. ಮಕ್ಕಳು ಮಲಗಿಸಲ್ಪಟ್ಟಲ್ಲಿಯೇ ಇದ್ದುವು. ಇದಾದ ಎರಡು ದಿನಗಳ ನಂತರ ಆ ಎರಡು ಮಕ್ಕಳು ಆಹಾರವಿಲ್ಲದೆ ಬಿಸಿಲಿನಲ್ಲಿ ಒಣಗಿ ತೀರಿಕೊಂಡುದು ಕಂಡುಬಂತು.

— ಎಲ್ಲೂರಿನಲ್ಲಿ ಮದುವೆ ಮುಂಜಿಗಳ ಸಂಬಂಧವಾಗಿ ಮದ್ದು ಹಾರಿಸಬಾರದಾಗಿ ಅಲ್ಲಿಯ ನಗರ ಸಭೆಯ ಚೆಯರ್‌ಮೇನರು ಅಪ್ಪಣೆಯಿತ್ತಿರುವರು.

— ರಾಜಪಾಳ್ಯಂನಲ್ಲಿ ಒಬ್ಬ ಸ್ತ್ರೀಯು ೪ ಮಕ್ಕಳನ್ನು ಹೆತ್ತಿರುತ್ತಾಳೆ. ಮಕ್ಕಳೂ ತಾಯಿಯೂ ಸುಖದಿಂದಲೇ ಇರುವರಾಗಿ ತಿಳಿದು ಬಂದಿದೆ.

ದಕ್ಷಿಣ ಕನ್ನಡ

ಮಂಗಳೂರು: — ಶ್ರೀ ಎ ಬಿ ಶೆಟ್ಟಿ, ಎಂ ಎಲ್ ಸಿ ಇವರು ಪೋಲೀಸರ ಅತಿರೇಕದ ಕುರಿತು ಸರಕಾರಕ್ಕೆ ಆಕ್ಷೇಪಕ್ಕಾಗಿ ಒಂದು ಮನವಿಯನ್ನು ಮಾಡಿಕೊಂಡಿದ್ದರಷ್ಟೆ. ಜಿಲ್ಲೆಯಲ್ಲಿ ನಡೆಯುವ ಪೋಲೀಸ ಅತಿರೇಕವು ಇನ್ನೂ ಕಡಿಮೆಯಾಗಿಲ್ಲವೆಂದೂ ಅದನ್ನು ಇಲ್ಲಿ ತನಿಖೆ ಕಳುಹಿಸಬೇಕೆಂದೂ ಮದ್ರಾಸ್ ಸರಕಾರದ ಆಕ್ಟಿಂಗ್ ಚೀಫ್ ಸೆಕ್ರೆಟರಿಗಳಿಗೆ ಇವರು ಪುನಃ ಬರೆದುಕೊಂಡಿದ್ದಾರೆ. ಮಂಗಳೂರಲ್ಲಿ ಶಾಸ್ತ್ರಿಯವರ ಅಂಗಡಿಯೆದುರು ನಡೆದ ವಿದ್ಯಮಾನಗಳನ್ನು ಇವರು ಅವರಿಗೆ ತಿಳಿಯಪಡಿಸಿರುವರು.

ಕರ್ನಾಟಕ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಲ್ಲೊಬ್ಬರಾದ ಶ್ರೀ ಬಿ ಕೋಚಣ್ಣ ಭಂಡಾರಿ ಬಿ ಎ ಇವರನ್ನು ಮಂಗಳವಾರ ಮೇಲೆ ಹಿಡಿದಿರುವರು. ಶ್ರೀ ನಾರಾಯಣ ಕಿಲ್ಲೆಯವರೂ ಬಂಧಿಸಲ್ಪಟ್ಟಿರುವರು. ಶ್ರೀ ಕೋಚಣ್ಣ ಭಂಡಾರಿಗಳವರಿಗೆ ೬ ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

ಕಳೆದ ಬುಧವಾರ ಎಕ್ಸೈಜ್ ಅಡ್ವೈಸರಿ ಕಮಿಟಿಯ ಸಭೆಯು ಜರಗಿತು.

ಮಂಗಳೂರು ತಾಲೂಕು ಬೋರ್ಡಿನ ಒಂದು [illegible]ಯು ಈ ದಿನ ಸಂಜೆ ೫ ಗಂಟೆಗೆ ಅದರ [illegible]ನಲ್ಲಿ ಜರಗಲಿರುವುದು.

ಮಂಗಳೂರು ನಗರ ಸಭೆಯು ಇದೇ ತಾ ೧೬ನೇ ದಿನ ಸಂಜೆ ೫ ಗಂಟೆಗೆ ಜರಗುವುದು.

ಶ್ರೀಯುತ ಬಿ ಗೋಪಾಲಕೃಷ್ಣ ರಾವ ಎಂಬವರು ದಿಲ್ಲಿಯಲ್ಲಿ ನಡೆದ ಐ ಸಿ ಎಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ದಕ್ಷಿಣ ಕನ್ನಡಿಗರು.

ಗಾಂಧೀ ದಿನಾಚರಣೆಯ ದಿನ ಪ್ರೋಸೆಸನ್ನು [illegible] ಅನಗತ್ಯವಾಗಿ ಎಳೆದುಕೊಂಡು ಹೋಗಿ ಹೊಡೆದರೆಂಬ ಆಪಾದನೆಯ ಮೇಲೆ ಡಿಪ್ಯೂಟಿ ಮ್ಯಾಜಿಸ್ಟ್ರೇಟರಲ್ಲಿ ಶ್ರೀ [illegible] ಶೆಟ್ಟಿ ನಡೆಸಲಿರುವರೆಂದು ತಿಳಿದುಬರುತ್ತದೆ.

ಮಂಗಳೂರಿನಿಂದ ಕಡಬಾಗೆ ಹೋಗುತ್ತಿದ್ದ [illegible] ಕಂಪೆನಿಯ ಒಂದು ಬಸ್ಸು ತಾ [illegible]ನೇ ದಿನ ಅದರ ಮುಂದಿನ [illegible] ಅಪಘಾತಕ್ಕೊಳಗಾಯಿತು. ಕೆಲವರಿಗೆ ಏಟು ಆಗಿರುತ್ತದೆ.

ತಾ ೮ನೇ ದಿನ ಆದಿತ್ಯವಾರ ಸಂಜೆ ಇಲ್ಲಿ [illegible] ನಡೆಯುತ್ತಿರುವಾಗ ಹರಿಜನ ಕೆಲಸ ನಡೆಸುವ ಸ್ವಯಂಸೇವಕರ ತಂಡವು ಕಾಂಗ್ರೆಸ್ಸಿನ [illegible] ಪಿಕೆಟಿಂಗ್ ಮಾಡಿತು. ಹೆಚ್ಚಿನವರನ್ನು ಪೋಲೀಸರು [illegible] ಮಾಡಿದರು. ಕೆಲವರಿಗೆ [illegible] ಮರುದಿನ ಎಲ್ಲರನ್ನು ಬಿಟ್ಟರು.

ಇದೇ ತಾ [illegible]ನೇ [illegible] ಸಂಜೆ ೬ ಗಂಟೆಗೆ [illegible] ಶ್ರೀ [illegible] ಸಭೆಯ [illegible] ನಡೆಯಲಿದೆ. ಶ್ರೀ [illegible] ಅವರ [illegible] ಪ್ರತಿಯೊಬ್ಬರೂ ನೋಡಬೇಕಾದುದೇ [illegible] ಸಂಬಂಧಪಟ್ಟ [illegible].

ಪುತ್ತೂರು ತಾಲೂಕು ಬೋರ್ಡು [illegible] ಸ್ಥಾನಗಳಿಗೆ ಅಭ್ಯರ್ಥಿಗಳು [illegible] ಎಲೆಕ್ಷನ್ [illegible] ತಾರೀಕು [illegible] ಮತ್ತು ಅಪೀಲು [illegible] ತಾರೀಕು [illegible] ಆಗಿರುತ್ತದೆ.

[illegible] ೧೯೩೧ರ [illegible] ಮಂಗಳೂರು ಮುನಿಸಿಪಾಲಿಟಿಯೊಳಗೆ [illegible] ಜನಸಂಖ್ಯೆ ಆಗಿದೆ.

ಈ ಮೊದಲು ಪ್ರಕಟಿಸಿದಂತೆ ಶ್ರೀ ಶಂಕರಭಗವತ್ಪಾದಾಚಾರ್ಯರ ಜಯಂತ್ಯುತ್ಸವವು ಇದೇ ತಾ ೧೬ನೇ [illegible] ದಿವಸ ಉಳ್ಳಾಲದ [illegible] ವಿಜೃಂಭಣೆಯಿಂದ ನಮ್ಮ ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ ಎನ ಚಂದ್ರಶೇಖರ ಅಯ್ಯರ್ ಬಿ ಎ ಬಿ ಎಲ್ ಅವರುಗಳ ಮಹಾಶಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಮೊದಲು ನಿರ್ಧರಿಸಿ ಪ್ರಕಟಿಸಿದಂತೆ ಅದೇ ದಿವಸ ಅಪರಾಹ್ನ ೩ ಘಂಟೆಗೆ ಆಶ್ರಮದಲ್ಲಿ ೬ ವಿದ್ಯಾರ್ಥಿಗಳಿಂದ ಸಂಸ್ಕೃತ ಪಾಠಶಾಲೆಯು ಪ್ರಕೃತ ಶ್ರೀ ವೇದಮೂರ್ತಿ ವೆಂಕಟ್ರಮಣ ಶಾಸ್ತ್ರಿಗಳ ಅಧ್ಯಾಪಕತ್ವದಲ್ಲಿ ಪ್ರಾರಂಭಿಸಲ್ಪಟ್ಟಿತು.

ಇಲ್ಲಿಯ ಕಾಂಗ್ರೆಸ್ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿರುವರೆಂಬ ಆರೋಪದ ಮೇಲೆ ಶ್ರೀ ಮಾರಪ್ಪ ಪಕ್ಕಳ ಹೊಸ್ತು ಶ್ರೀ ಅನಂತಶೈಗಳ ಮೇಲೆ ವಾರಂಟು ಜ್ಯಾರಿಯಾಗಿದೆ. ಅವರು ಇನ್ನೂ ತನಕ ಸಿಕ್ಕಿರುವುದಿಲ್ಲ.

ಮೊನ್ನೆ ಇಲ್ಲಿಯ ಮದ್ರಾಸ್ ಲೋಜಿಗೆ ಪೋಲೀಸರು ಹೋಗಿ ಅಲ್ಲಿ ಊಟಕ್ಕಿದ್ದ ಶ್ರೀಗಳಾದ ಉಗ್ಗಪ್ಪ ಪೈಯ್ಯಾಡೆ ಮತ್ತು ಭಾಸ್ಕರ ರೈ ಎಂಬವರನ್ನು ಸ್ಟೇಷನಿಗೊಯ್ದರು. ಉಗ್ಗಪ್ಪ ಪೈಯಡೆಯವರು ಬಿಡುಗಡೆ ಹೊಂದಿದೊಡನೆ ಪಹರೆ ನಡೆಸಿ ಸೆರೆಗೊಳಗಾಗಿ ೪ ತಿಂಗಳ ಶಿಕ್ಷೆಗೆ ಗುರಿಯಾದರು.

ಉಡುಪಿ: — ತಾ ೪ನೇ ದಿನ ಕೈದುಮಾಡಲ್ಪಟ್ಟವರಲ್ಲಿ ಶ್ರೀ ವಾಸುದೇವ ಪ್ರಭು ಮತ್ತು ಬಾಬು ಇವರನ್ನು ರಾತ್ರೆ ೧೦ ಘಂಟೆಗೆ ಬಿಡುಗಡೆಮಾಡಿದರು. ಉಳಿದವರಲ್ಲಿ ಶ್ರೀ ಜನಾರ್ಧನ ನಾಯಕರನ್ನು ತಾ ೫ನೇಯ ಮಧ್ಯಾಹ್ನ ಬಿಟ್ಟುಬಿಟ್ಟರು. ಮತ್ತೂ ಒಬ್ಬರಾದ ಶ್ರೀ ಜನಾರ್ಧನ ಶೆಣೈಯವರನ್ನು ತಾ ೬ನೇ ದಿನ ತಪ್ಪುಮಾಡಿ ೬ ತಿಂಗಳ ಕಠಿಣ ಸಜೆಗೆ ಗುರಿಮಾಡಿದರು. ಇವರನ್ನು ಮಂಗಳೂರು ಸಬ್ ಜೈಲಿಗೆ ಕೊಂಡೊಯ್ಯಲಾಯಿತು.

ಎಪ್ರಿಲ್ ತಾ ೧೩ನೇ ದಿನ ಸ್ಟೇಷನಿನೊಳಗೆ ಕೊಂಡೊಯ್ಯಲ್ಪಟ್ಟು ಹೊಡೆಯಲ್ಪಟ್ಟರೆಂಬುದಾಗಿ ಮಾಡಿದ್ದ ಅರ್ಜಿಯು [illegible].

ತಾ [illegible]ನೇ ಸೋಮವಾರ ಸಂಜೆ ೪ ಗಂಟೆಗೆ ಶ್ರೀಮಂತ [illegible] ಹೊರಟಿತು. ಅದರಲ್ಲಿ [illegible] ಶ್ರೀ [illegible] ವಾಸುದೇವ ಪ್ರಭು ಮತ್ತು [illegible] ಶೆಟ್ಟಿ [illegible] ಇದ್ದರು. ಇವರೆಲ್ಲ [illegible] ಶ್ರೀ [illegible] ಪೋಲೀಸರ [illegible] ೨೦೦ [illegible].

ಕುಂದಾಪುರ: — ಇಲ್ಲಿಗೆ [illegible] ಕೃಷ್ಣ [illegible] ತಾ ೧೧ನೇ [illegible] ಪೋಲೀಸರೂ ಅಲ್ಲಿಗೆ [illegible].

ಕಾರ್ಕಳ: — ಉಡುಪಿಯ ಶ್ರೀ ಫಲಿಮಾರು ಮಠದ ಶ್ರೀ ರಘುವರ್ಯ ತೀರ್ಥ ಸ್ವಾಮಿಯವರು ಕಾರ್ಕಳಕ್ಕೆ ವಿಜಯ [illegible] ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನ [illegible] ಶ್ರೀ ಶ್ರೀನಿವಾಸ ಆಶ್ರಮ ಮತ್ತು [illegible] ಶ್ರೀ ಶ್ರೀನಿವಾಸ ಆಶ್ರಮದಲ್ಲಿ ೨ ದಿನಗಳ [illegible] ತಾ ೩ರಲ್ಲಿ ಆಶ್ರಮದಲ್ಲಿ ಸ್ವಾಮೀಜಿಯವರ ನೇತೃತ್ವದಲ್ಲಿ [illegible] ಧರ್ಮಸಭೆಯು ಜರಗಿತು. ಶ್ರೀ [illegible] ಶ್ರೀನಿವಾಸ ಆಚಾರ್ಯರ ಸ್ವಾಗತ [illegible] ಸಂಘಟನೆಗೆ ಶ್ರೀ ಸ್ವಾಮಿಯವರ [illegible] ಶಾಶ್ವತವಾಗುತ್ತದೆ.

[illegible] ಪೋಲೀಸರು [illegible] ಪೋಲೀಸರು [illegible] ಏನು?

ಶ್ರೀಯುತ ವಿದ್ಯಾರ್ಥಿಯವರ ಮತ್ತು ಬ್ಯಾಂಡಿಯವರ [illegible]ನವರ ಪ್ರಚಾರ ಕಾರ್ಯವು ಚೆನ್ನಾಗಿಯೇ ಸಾಗಿದುವು.

ಪುತ್ತೂರು — ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದ ಆಡಳಿತ ಸಭೆಯು ತಾ ೩-೫-೩೭ನೇ ದಿನ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ ಶ್ರೀಮಾನ್ ಮದ್ದಿಲ ರಾಮಣ್ಣ ಗೌಡರ ಸಭಾಧ್ಯಕ್ಷತೆಯಲ್ಲಿ ಜರಗಿತು. ಮಾಜಿ ತಹಶೀಲ್ದಾರರಾಗಿದ್ದ ದಿವಂಗತ ಅತ್ತಾವರ ದೇವಪ್ಪ ಪೂಂಜರವರ ಧರ್ಮಪತ್ನಿ [illegible] ಫಂಡ್) ನಿಂದ [illegible] ಮುಂದಕ್ಕೆ ಪ್ರತಿ ವರ್ಷ ರೂಪಾಯಿ [illegible]ರಂತೆ ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದ ಬಡ ವಿದ್ಯಾರ್ಥಿ ಫಂಡಿಗೆ ಉಪಕಾರಾರ್ಥ ಕಾಣಿಕೆಯಾಗಿ ಉದಾರ ಭಾವದಿಂದ ಶ್ರೀಮಾನ್ ಅತ್ತಾವರ ಬಾಲಕೃಷ್ಣ ಶೆಟ್ಟರವರು ದಯಪಾಲಿಸಿ ಕೊಟ್ಟಿದ್ದನ್ನು ಈ ಸಂಘದವರು ವಂದನಾಪೂರ್ವಕವಾಗಿ ಸ್ವೀಕರಿಸಿಕೊಂಡಿದ್ದಾರೆ. ಕೀರ್ತಿಶೇಷರಾದ ದೇವಪ್ಪ ಪೂಂಜರವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸುವಂತೆ ದ ಕ ಗೌಡ ವಿದ್ಯಾ ಸಂಘದವರು ಪ್ರಾರ್ಥಿಸುತ್ತಾರೆ.

ಕಾಸರಗೋಡು — ಕಳೆದ [illegible] ದಿಲ್ಲಿಯಲ್ಲಿ [illegible] ಕಾಂಗ್ರೆಸ್ ಸಭೆಯ [illegible] ಪೋಲೀಸರ [illegible] ಶ್ರೀ [illegible].

[illegible]

ಕುಂಬಳೆ: — ಕಳೆದ [illegible].

[illegible]

ಸುರತ್ಕಲ್: — [illegible]

ಮುಲ್ಕಿ: — [illegible] ಶ್ರೀ ಕೆ ಎಸ್ [illegible] ಪ್ರಸಿದ್ಧರಾದ [illegible] ಸಭಾಂಗಣ [illegible].

—+— —+—

[illegible] ಅಂಗೀರಸ ಸಂವತ್ಸರದ
ವೈಶಾಖ ಶು ೯ ಶನಿವಾರದಿಂದ ಅಂಗೀರಸ ಸಂವತ್ಸರದ ವೈಶಾಖ ಶು ೧೫ ಶುಕ್ರವಾರದ ವರೆಗಿನ ಪಂಚಾಂಗ

([illegible] — [illegible])

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
14	ಶನಿ	೯	[illegible]	ಮಘಾ	[illegible]	[illegible]	6 8	6 46
15	ರವಿ	೧೦	[illegible]	ಹುಬ್ಬಾ	[illegible]	[illegible]	6 8	6 46
16	ಸೋಮ	೧೧	[illegible]	ಉತ್ತರಾ	[illegible]	[illegible]	6. 7	6 47
17	ಭೌಮ	೧೩	[illegible]	ಹಸ್ತಾ	[illegible]	[illegible]	6 7	6.47
18	ಬುಧ	೧೪	[illegible]	ಚಿತ್ರಾ	[illegible]	[illegible]	6 7	6 47
19	ಗುರು	೧೪	[illegible]	ಸ್ವಾತಿ	[illegible]	[illegible]	6. 7	6 47
2	ಶುಕ್ರ	○	[illegible]	ವಿಶಾಖಾ	[illegible]	[illegible]	6 7	6.48

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall ಮಳೆ ದಿನದ ಮಳೆ	ಜುಮುಲಾ ಮಳೆ.
6	90— 6	80— 6	—	—
7	91— 1	81 — 1	—	—
8	91— 3	80— 9	—	—
9	90 — 8	77— 7	0 03	—
10	91 — 5	80— 6	—	—
11	91 — 1	80 2	—	—
12	90 — 3	77 — 1	0—31	0—84

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ ಆ	ವರೆಗೆ ರೂ ಆ
ಹೊಸ ರಾಶಿ ಅಕ್ಕಿ	3 – 12	4 –
ಹೊಸ ಮಸ್ಕತಿ	4 – 0	4 – 1
ಹೊಸ ಗುಡ್ಡು	4 0	4 4
ಹೊಸ ಸುಗ್ಗಿ	3 – 12	4 –
ಊರ ಅವ್ವಲ್ ಬೆಳ್ತಿಗೆ	4 – 8	5 – 0
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8 0	8 – 8
ಎಲ್ಲಾರು ಬೆಳ್ತಿಗೆ ಮುಡಿ ೧ಕ್ಕೆ	4 – 10	4 – 12
ಗೋದಿ ಗೋಣಿ ೧ಕ್ಕೆ	9 – 8	14 – 8
[illegible] ಗೋಣಿ ೧ಕ್ಕೆ	12 – 0	12 – 8
ಹುರುಳಿ ಗೋಣಿ ೧ಕ್ಕೆ	6 – 2	7 – 4
ಕಡಲೆ ಗೋಣಿ ೧ಕ್ಕೆ	8 – 8	12 – 8
ತೊಗರಿಬೇಳೆ ಗೋಣಿ ೧ಕ್ಕೆ	13 – 8	21 – 0
ಉದ್ದು ಗೋಣಿ ೧ಕ್ಕೆ	11 – 8	13 – 0
ಹೆಸರು ಗೋಣಿ ೧ಕ್ಕೆ	10 – 4	11 –
ಊರು ಬೆಲ್ಲ ಖಂಡಿ ೧ಕ್ಕೆ	2[illegible] – 8	30 – 0
ಉಪ್ಪು ಗೋಣಿ ೧ಕ್ಕೆ	5 – 0	5 – 4
[illegible] ಖಂಡಿ ೧ಕ್ಕೆ	60 –	62 –
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	22 – 0	2[illegible] – 8
ಎಳ್ಳಿಂಡಿ ಖಂಡಿ ೧ಕ್ಕೆ	26 – 4	26 – 18
ಕೊಬ್ರಿ ಎಣ್ಣೆ ಮಣ ೧ಕ್ಕೆ	6 4	6 – 6
ಎಳ್ಳೆಣ್ಣೆ ಮಣ ೧ಕ್ಕೆ	6 – 12	7 – 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	4 – [illegible]	8 – 12
ಮೋರಿಸ್ ಸಕ್ಕರೆ ಮಣ ೧ಕ್ಕೆ	4 – 0	4 – 1
[illegible]	4 – 0	5 – 0
[illegible] ಮುಡಿ ೧ಕ್ಕೆ	5 – 4	8 – 0
[illegible] ಖಂಡಿ ೧ಕ್ಕೆ	217 – 8	225 –
ಕಾಳುಮೆಣಸು ಖಂಡಿ ೧ಕ್ಕೆ	170 – 0	180 –
[illegible] ಮಣ ೧ಕ್ಕೆ	27 – 0	28 –
ಗೇರುಬೀಜ ಮುಡಿ ೧ಕ್ಕೆ	3 – 2	–
[illegible] ಖಂಡಿ ೧ಕ್ಕೆ	30 – 0	35 – 8
ತಾಮ್ರ ತಗಡು ಮಣ ೧ಕ್ಕೆ	12 – 8	13 – 0
ತಾಮ್ರ ಪಾತ್ರಗಳು ಮಣ ೧ಕ್ಕೆ	15 – 0	16 – 0
[illegible] ೧ಕ್ಕೆ	14 – 10	14 – 12
ಹಿತ್ತಾಳೆ ತಗಡು ಮಣ ೧ಕ್ಕೆ	12 – 0	12 – 8
[illegible] ೧ಕ್ಕೆ	17 — 14	17 – 14
[illegible] ಖಂಡಿ ೧ಕ್ಕೆ	36 –	–
[illegible] ಖಂಡಿ ೧ಕ್ಕೆ	375 –	400 –
ಹಳೆ ಅಡಿಕೆ	140 –	205 –
[illegible]	140	145 –

Chikmagalur Public Conveyance Motor Service.

CHIKMAGALUR.

ಚಿಕ್ಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ॥ 1 30ಕ್ಕೂ ಬೆಳ್ತಂಗಡಿಗೆ 1 45ಕ್ಕೂ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10¾ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ ೪॥ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶಮಾಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್ ಪಂಡರಪೂರ ಗೋವಾ ಲೋಂಡ ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(Established 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ

ಕಾರ್ಕಳ ಗೋಮಟೇಶ್ವರನ,

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು ಮತ್ತು ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

ಅರಂಬಾಗಿನಲ್ಲಿ ೪೦೦ ಮಂದಿಗಳು ಒಟ್ಟುಗೂಡಿ ಒಂದು ಪ್ರಚಂಡ ಮೆರವಣಿಗೆಯನ್ನು ಮಾಡಿದರು. ಕಾನೂನುಲ್ಲಂಘನೆಗಾಗಿ ಜರಗಿಸಲ್ಪಟ್ಟ ಈ ಮೆರವಣಿಗೆಯು ಪೋಲೀಸರಿಂದ ಚದರಿಸಲ್ಪಟ್ಟಿತು.

ಜವಾಹರಲಾಲರ ಸ್ಥಿತಿ.

ಕಳೆದ ಆದಿತ್ಯವಾರ ಶ್ರೀಮತಿ ಕಮಲಾನೆಹರುರವರು, ತನ್ನ ಪತಿ ಶ್ರೀ ಜವಾಹರಲಾಲರನ್ನು ಬಾರಿಲ್ಲಿ ಜೈಲಿನಲ್ಲಿ ಸಂದರ್ಶಿಸಿದರು. ಶ್ರೀಯುತರ ಆರೋಗ್ಯಸ್ಥಿತಿ ಹೇಗಿದೆ ಎಂದು ಒಬ್ಬರು ಕೇಳಿದ್ದಕ್ಕೆ ಜವಾಹರಲಾಲರ ಎದೆಯ ಎಡಭಾಗದಲ್ಲಿ ಒಂದು ನೋವಿದೆಯೆಂದೂ ಅವರಿಗೆ [illegible] ಡಿಗ್ರಿಗಳಷ್ಟು ಜ್ವರ ಬರುತ್ತಿದೆಯೆಂದೂ, ಅವರು ತೂಕದಲ್ಲಿ ಕಡಿಮೆಯಾಗಿದ್ದಾರೆಂದೂ ಹೇಳಿದರು. ಜವಾಹರಲಾಲರನ್ನು ಕಾನ್ಪುರದ ಕಾರಾಗೃಹಕ್ಕೆ ಕೊಂಡೊಯ್ಯಲಿರುವರಂತೆ

ಕಾರಾಗೃಹ ಪ್ರಿಯ

ಅಹ್ಮದಾಬಾದಿನಲ್ಲಿ ಶ್ರೀ ವೀರಪ್ಪ ಎಂಬವರು ಮೂರು ಸಲ ಸೆರೆಹಿಡಿಯಲ್ಪಟ್ಟು ಮೂರು ಸಲವೂ ಬಿಡಲ್ಪಟ್ಟರು. ಮೂರನೇ ಸಲ ಬಂಧವಿಮುಕ್ತರಾದೊಡನೆ ಅವರು ಕೈದಿ [illegible] ಹೋಗಿ ಒಂದು ಸಭೆ [illegible] ಮಾಡಿದರು. ಈ ಸಂಬಂಧವಾಗಿ ಅವರಿಗೆ ಎರಡು ವರ್ಷ ಕಠಿಣ ೧೦೦ ರೂಪಾಯಿ ಜುಲುಮಾನೆ ತಪ್ಪಿದರೆ ೬ ತಿಂಗಳ ಹೆಚ್ಚಿನ ಸಜೆಯು ವಿಧಿಸಲ್ಪಟ್ಟಿತು.

ಪೀಳ್ಯದೆಲೆ ತೋಟದಲ್ಲಿ ಕೊಂಗ್ರೆಸ್ ಸಂಸ್ಥೆ.

ಕಲ್ಕತ್ತದ ಹೌರಾ ಎಂಬಲ್ಲಿ ಕೆಲವು ಕೊಂಗ್ರೆಸ್ ಸ್ವಯಂಸೇವಕರು ಒಂದು ಹಳ್ಳಿಯಲ್ಲಿನ ಪೀಳ್ಯದೆಲೆ ತೋಟದ ಮಧ್ಯ ನಿರ್ಜನ ಸ್ಥಳದಲ್ಲಿ ತಮ್ಮ ಕಾಂಗ್ರೆಸ್ ಸಂಸ್ಥೆಯನ್ನು ಮಾಡಿಕೊಂಡಿದ್ದರು. ಗುಟ್ಟು ರಟ್ಟಾಗಿ ಪೋಲೀಸರು ಧಾಳಿ ನಡೆಸಿ ಮೂವರನ್ನು ಸ್ಟೇಶನಿಗೆ ಕೊಂಡೊಯ್ದರು

ಕಡಿಮೆ ಮಾಡಲಾಯಿತು.

ಲಾಹೋರಿನಲ್ಲಿ ಶ್ರೀಮತಿ ಭಗವಂತಿ ಎಂಬವರಿಗೆ ಒಂದು ವರ್ಷ ಕಠಿಣ ಸಜೆ ೨೦೦ ರೂಪಾಯಿ ಜುಲುಮಾನೆ ವಿಧಿಸಲ್ಪಟ್ಟಿದ್ದಿತು. ಮೊನ್ನೆ ಅವರ ಜುಲುಮಾನೆಯನ್ನು [illegible] ರೂಪಾಯಿಗೆ ಇಳಿಸಿದರು

೨೫೦೦೦ ಕರಪತ್ರ.

ಮುಂಬಾಯಿಯಲ್ಲಿ ತಾ [illegible] ನೇ ದಿನ ಒಬ್ಬ ಹುಡುಗನು ಗೋಡೆಗಳ ಮೇಲೆ ಕರಪತ್ರಗಳನ್ನು ಹಚ್ಚುತ್ತಿದ್ದನು. ಅವನಿಗೆ ಅದು ಯಾವುದರ ನೋಟೀಸು ಎಂದು ತಿಳಿದಿಲ್ಲ. ಸಿಗರೇಟಿನ ಜಾಹೀರಾತು ಎಂದು ನೆನೆಸಿ ಅವನು ಅವುಗಳನ್ನು ಹಚ್ಚಲು ಪ್ರಾರಂಭಿಸಿದ. ಇದನ್ನು ಕಂಡು ಪೋಲೀಸರು ಅವನನ್ನು ಕೈದುಮಾಡಿ ಕೊಂಗ್ರೆಸ್ ಪತ್ರಗಳು ಎಲ್ಲಿ ದೊರೆತುವೆಂದು ವಿಚಾರಿಸಿದರು. ಅವರ [illegible] ಮಾರ್ಗದ ಒಂದು ಮನೆಯಲ್ಲಿ ಇಟ್ಟು [illegible] ಹಾಕಲ್ಪಟ್ಟಿತ್ತು ಎಂದು [illegible] ಶೋಧಿಸಲಾಗಿ ೨೫೦೦೦ ಕರಪತ್ರಗಳು ದೊರಕಿದುವು

ಕರಪತ್ರಗಳ ತಪಾಸು

ಕಾನ್ಪುರದಲ್ಲಿನ ಇತ್ತೀಚೆ [illegible] ಗೋಡೆಗಳಲ್ಲಿ ಕೊಂಗ್ರೆಸ್ ಕರಪತ್ರಗಳು ಹಚ್ಚಲ್ಪಡುತ್ತಿವೆ. ಅವುಗಳನ್ನು ತೆಗೆದ ಸ್ವಲ್ಪ ಹೊತ್ತಿನಲ್ಲೇ ಪುನಃ ಅವುಗಳ ಸ್ಥಳಗಳಲ್ಲೇ ಬೇರೆಯವುಗಳು ಬರುತ್ತಿವೆ. ಟಪ್ಪಾಲು ಪೆಟ್ಟಿಗೆಯ ಕಾಗದಗಳನ್ನು ತೆರೆವು [illegible] ಕೊಂಗ್ರೆಸ್ [illegible] ಪ್ರಕಟಿಸಿದ ಕೈನೋಟೀಸುಗಳೂ ಹೇಗೂ ಎಲ್ಲಿಗೂ ಸಿಗುತ್ತಿವೆ

ನಿದ್ರೆಯಲ್ಲಿದ್ದಾಗ ಬಂಧಿಸಿದರು.

ಅಹ್ಮದಾಬಾದಿನಲ್ಲಿ ಗುಜರಾಥ್ ಕೊಂಗ್ರೆಸ್ ಕಮಿಟಿಯ ಸರ್ವಾಧಿಕಾರಿಯಾದ ಶ್ರೀ [illegible] ಸಿಂಗ್ ಠಾಕೂರ್ ಎಂಬವರು ಬರೋಡದ ಒಬ್ಬ ಮಿತ್ರರೊಡನೆ ಮಾತನಾಡಲು ಅಲ್ಲಿಗೆ ಹೋದರು. ಒಂದು ಕಡೆಯಲ್ಲಿ ಮಲಗಿದ್ದಾಗ ಅವರನ್ನು ಬರೋಡ ಪೋಲೀಸರು ಹಿಡಿದು ಬ್ರಿಟಿಷ ಪೋಲೀಸರಿಗೆ ಕೊಟ್ಟರು.

೨೦೦೦ ಮಂದಿಗಳನ್ನು ಬಿಟ್ಟರು.

ಪೇಶಾವರದಲ್ಲಿ ಕಳೆದ ದಶಂಬರ ತಿಂಗಳಲ್ಲಿ ಒಮ್ಮೆಲೇ ಸೆರೆಹಿಡಿಯಲ್ಪಟ್ಟ ಸುಮಾರು ೨೦೦೦ ಮಂದಿ ಸ್ವಯಂಸೇವಕರನ್ನು ತಾವಿನ್ನು ಕೊಂಗ್ರೆಸ್ಸಿಗೆ ಸೇರುವುದಿಲ್ಲವಾಗಿ ಬರೆದುಕೊಟ್ಟರೆಂದೂ ಆ ಸಂಬಂಧವಾಗಿ ಅವರನ್ನೆಲ್ಲ ಬಿಡುಗಡೆಮಾಡಿರುವರೆಂದೂ ವಾರ್ತೆ ಬಂದಿದೆ.

ಚಳವಳ ವಾರ್ತೆ.

ಅನೇಕರ ಬಂಧನ. ಹಲವರ ಬಿಡುಗಡೆ.

ಸಾವಿರಗಟ್ಟಳೆ ಕರಪತ್ರಗಳು.

ಬಿಡುತ್ತಿರುವರು.

ಡೆಲ್ಲಿಯಲ್ಲಿ [illegible] ಇಂಡಿಯನ್ ನೇಶನಲ್ ಕೊಂಗ್ರೆಸ್ಸಿನ ಅಧಿವೇಶನಕ್ಕಾಗಿ ಹೋಗಿದ್ದ ಅನೇಕರನ್ನು ಬಿಟ್ಟರು. ೩೦ ಮಂದಿಗಳ ಮೇಲೆ ಸ್ಥಳೀಯ ಸರಕಾರಗಳು ತಕ್ಷೀರನ್ನು ನಡೆಸಲಿವೆ. [illegible] ಪ್ರತಿನಿಧಿಗಳು ಇಷ್ಟರಲ್ಲೇ ಬಿಡಲ್ಪಟ್ಟರು. [illegible] ರಾಜಧಾನಿಯ ಕೈದಿಗಳಿಂದ [illegible] ಕೊಂಡಿವೆಯೆಂದು ಪಂಡಿತ ಮಾಲವೀಯರು [illegible]ತ್ತಿದ್ದಾರೆ

ಕಾನೂನುಲ್ಲಂಘನೆಗಾಗಿ

ಅಹ್ಮದಾಬಾದಿನಲ್ಲಿ ಗಾಂಧಿಜೀಯವರ 'ನವ ಜೀವನ'ದ ಮುದ್ರಣಾಲಯದ ಅಸಿಸ್ಟೆಂಟ್ ಮೆನೆಜರಾದ [illegible]ಲಾಲ್ ಸಾಹ್‌[illegible] ಎಂಬವರು ಕಾನೂನುಲ್ಲಂಘನ ಕೊಂಗ್ರೆಸ್ ಅಧಿವೇಶನಕ್ಕೆ ಹೋದುದರಿಂದ ಅಪರಾಧದ ಮೇಲೆ ಒಂದು ವರ್ಷ ಕಠಿಣ ಸಜೆ [illegible]

ಅಧ್ಯಕ್ಷರ ಮೇಲೆ

ಡೆಲ್ಲಿ ಕೊಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆಯ ಸ್ಥಾನ [illegible] ಕ್ರಮವನ್ನು ವಹಿಸಿಕೊಂಡುದರಿಂದ ಆರೋಪಿಸಲ್ಪಟ್ಟಿರುವ ಮಿಲ್ ಮ್ಯಾನೇಜರಾದ ಶ್ರೀ ಸರ್ದಾರ್ [illegible] ಲಾಲ್ ಎಂಬವರ ಮೇಲೆ ತಕ್ಷೀರು ನಡೆಯುತ್ತಿದೆ

ಸರಕಾರವು ವರ್ಗಾಯಿಸಿತು

ಕಳೆದ ಮಾರ್ಚಿ ತಿಂಗಳಲ್ಲಿ ಮದ್ರಾಸಿನಲ್ಲಿ ಶ್ರೀ [illegible] ರಾವ್ ಮತ್ತು ಶ್ರೀ ರಾಮಸ್ವಾಮಿ [illegible] ಎಂಬವರು ಪೋಲೀಸರ ಪೆಟ್ಟಿಗೆ ಆಹುತಿಯಾದರು. ಈ ವಿಷಯ ಸರಕಾರವು ವಿಚಾರಣೆ ನಡೆಸಿ ಪೋಲೀಸರ ಅತಿರಿಕ್ತವು ಅತಿರೇಕವಾಯಿತೆಂದು [illegible] ಪೆಟ್ಟು ಅವರಿಗೆ ಹೊಡೆಯಲು ಕಾರಣಭೂತರಾದ ಇನ್ಸ್ಪೆಕ್ಟರನ್ನೂ ವರ್ಗಾಯಿಸಿತು

ಓರ್ಡಿನೆನ್ಸಿಗೆ ವಿರೋಧವಾಗಿ ಬರೆಯಬೇಡಿ

ಭಾವನಗರದ ದರ್ಬಾರು ಒಂದು ಪ್ರಕಟಣೆಯನ್ನು ಮಾಡಿದೆ. ಅದರಲ್ಲಿ ಮುದ್ರಣಾಲಯಗಳು [illegible] ಸರಕಾರದ ಓರ್ಡಿನೆನ್ಸುಗಳ ವಿರುದ್ಧವಾಗಿ ಬರೆಯಬಾರದೆಂದೂ ಅವನ್ನು ಪ್ರಕಟಿಸಬಾರದೆಂದೂ ಇದೆ. ಈ ಕಾನೂನನ್ನು ಲಂಘಿಸಿದವರಿಗೆ ೬ ತಿಂಗಳ ಸಜೆ ಮತ್ತು ೨೦೦ ರೂಪಾಯಿಗಳ ಜುಲುಮಾನೆಯಂತೆ ಮತ್ತು ಸಂಸ್ಥಾನದ ಪೋಲೀಸರು ಯಾವ ಮುದ್ರಣಾಲಯವನ್ನಾಗಲೀ ಜಪ್ತಿ ನಡೆಸಿ, ನಿಷಿದ್ಧ ಪತ್ರಗಳನ್ನು ಕೊಂಡೊಯ್ಯಬಹುದೆಂದೂ ಅವರಿಗೆ ಅಧಿಕಾರ ಕೊಟ್ಟಿದೆ

ಮೆರವಣಿಗೆ.

ಮದ್ರಾಸಿನಲ್ಲಿ ತಾ ೧೦ನೇ ದಿನ ಮೆರವಣಿಗೆಯೂ ವಿದೇಶಿ ವಸ್ತ್ರ ಪಿಕೆಟಿಂಗೂ [illegible] ನಡೆಯಿತು. ಪೋಲೀಸರು ತಡೆದು ಕೆಲವರನ್ನು ಕೈದುಮಾಡಿದರು

ಕಲ್ಲಿಕೋಟೆ ಕಡಲೂರು, ತಿನ್ನವೆಲ್ಲಿ, ರಾಜಪಾಲಯಂ, ಮಧುರ [illegible] ಮೊದಲಾದ ಕಡೆಗಳಲ್ಲಿ ಪಿಕೆಟಿಂಗು, ಜಪ್ತಿ, ಮೆರವಣಿಗೆ, ಕೈದು ಜರುಗುತ್ತಿವೆ

೧೧೩೩

ಪಂಜಾಬದ ಕೌನ್ಸಿಲ್ ರಿಪೋರ್ಟಿನಿಂದ ತಿಳಿದು ಬರುವಂತೆ ಇಷ್ಟರ ತನಕ ಪಂಜಾಬಿನಲ್ಲಿ ಕಾಯಿದೆಭಂಗದ ಸಂಬಂಧವಾಗಿ ೧೧೩೩ ಜನರು ಸೆರೆಮನೆಗೆ ಹೋದರು

ಗಾಂಧೀ ದಿನ

ಬನಾರಿಸ್‌ನಲ್ಲಿ ಗಾಂಧೀ ದಿನ'ದ ಸಂಬಂಧವಾಗಿ ಕೆಲಸ ನಡೆಸಿದ ನಾಲ್ಕು ಮಂದಿಗಳನ್ನು ಕೈದುಮಾಡಿದರು

ಉಪ್ಪು ಸಾಗಿಸಿದುದಕ್ಕಾಗಿ

ಅಹ್ಮದಾಬಾದಿನಲ್ಲಿ ಶ್ರೀಮತಿ ದೇವಿಬೆನ್ ಪಟ್ಟಾನಿ ಎಂಬವರೂ ಇನ್ನಿತರ ೩೧ ಮಂದಿಗಳೂ ಒಟ್ಟುಗೂಡಿ ನಿಷಿದ್ಧ ಉಪ್ಪನ್ನು ರೈಲು ಮೂಲಕ ಇನ್ನೊಂದೂರಿಗೆ ಕೊಂಡೊಯ್ಯುತ್ತಿದ್ದರು. ಅವರೆಲ್ಲರನ್ನೂ ಕೈದುಮಾಡಿ, ೨೬ ಮಂದಿಗಳನ್ನು ಪುನಃ ಬಿಟ್ಟು, ಉಳಿದವರ ಮೇಲೆ ತಕ್ಷೀರು ನಡೆಸಿದರು.

ಮುಂಬಾಯಿಯ ಜನರಲ್ ಪೋಸ್ಟಾಫೀಸಿನಲ್ಲಿ ಪಹರೆ ನಡೆಸಿದ ಅಲ್ಲಿಯ ಸರ್ವಾಧಿಕಾರಿಯನ್ನೂ ಇನ್ನಿತರ [illegible] ಮಂದಿಗಳನ್ನೂ ಕೈದುಮಾಡಿದರು.

ಶಿಕ್ಷೆ

ಪುನೆಯಲ್ಲಿ ಶ್ರೀ ಎಸ್ [illegible] ಗೋರೆ [illegible] ಯು ಸರಕಾರದವಿಷ್ಟನ್ನು [illegible] ತಿಂಗಳ [illegible] ಟ್ಟಿನ ಇನ್ನಿತರ [illegible]

ಸ್ತ್ರೀಯರು

ಮದ್ರಾಸಿನಲ್ಲಿ ಸ್ತ್ರೀ ಪುರುಷರು ಪಿಕೆಟಿಂಗ್ ಕೆಲಸ ಕೈಕೊಂಡಿರುವರು. ಪೋಲೀಸರು ಅವರನ್ನು ಕೈದುಮಾಡುತ್ತಿರುವರು. ಅಲ್ಲಿ [illegible] ಗೋಪಾಲನ್ ಮತ್ತು [illegible] ಪತಿ ಎಂಬವರ ಮೇಲೆ ಪೋಲೀಸರು ತಕ್ಷೀರು ನಡೆಸಿದರು.

ಕರ್ನಾಟಕ ಸರ್ವಾಧಿಕಾರಿ [illegible] ಪೋಲೀಸರ ಬೀಟಿ [illegible]

ಮಧುರೆಯಲ್ಲಿ

ಪಿಕೆಟಿಂಗನ್ನು [illegible] ರಿಂದ ಹೊಡೆದು [illegible]

ಶಿಕ್ಷೆ ಸಿಕ್ಕಿತು

ಶ್ರೀ ಆರ್ ಎಸ್ ಪಂಡಿತರಿಗೆ ಅಲ್ಲಹಾಬಾದಿನಲ್ಲಿ ಒಂದು ವರ್ಷ [illegible] ರೂಪಾಯಿ ದಂಡ

ಕುಮಾರಿ ಸೋಫಿಯಾ ಸೋಮ್ಜಿ

[illegible] ಕಾನೂನುಲ್ಲಂಘನ [illegible] ವರ್ಷ ಸಜೆಯು ವಿಧಿಸಲ್ಪಟ್ಟಿತು

೫೫೦೦ ಜುಲುಮಾನೆ

ಲಾಹೋರಿನಲ್ಲಿ [illegible] ಪೋಲೀಸರು [illegible] ಅಕ್ರಮವಾಗಿ ಹೊಡೆದು [illegible] ತಿಂಗಳ [illegible]

೨೪೫೦

ಮುಂಬಾಯಿಯಲ್ಲಿ [illegible] ತಿಂಗಳ [illegible] ಕೈದಿಗಳು [illegible] ಅಲ್ಲಿ ಪತಿ [illegible] ಶ್ರೀ [illegible] ಕೈದುಮಾಡಲ್ಪಟ್ಟಿದ್ದಾರೆ

೧ ವರ್ಷ ೫೦ ರೂಪಾಯಿ

ನಾಗಪುರದಲ್ಲಿ ಡಾ। ಎನ್ ಬಿ ಪಟವರ್ಧನ್ ಎಂಬವರಿಗೆ ರಾಜದ್ರೋಹದ ಆರೋಪಣೆಯ ಮೇಲೆ [illegible] ವರ್ಷಗಳ ಶಿಕ್ಷೆಯನ್ನೂ ೫೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು. ಪುನರ್ವಿಚಾರಣೆಯಾಗಿ ೧ ವರ್ಷದ ಶಿಕ್ಷೆಯು ಕಡಿಮೆಯಾಯಿತು.

* * *

ನಿಮ್ಮ ಮಕ್ಕಳನ್ನು ಸುಖದಿಂದಲೂ ಆರೋಗ್ಯದಿಂದಲೂ ಇಡುವುದಕ್ಕೆ ಮಾರ್ಗ.

ಆರೋಗ್ಯವು ಸಿಗಬೇಕಾದರೆ ಸರಿಯಾದ ಪರಿಪೋಷಣೆಯು ಅತ್ಯಗತ್ಯ. ಅದು ಕೂಡಾ ಮಕ್ಕಳ ಬೆಳವಣಿಗೆಯ ಸಮಯದಲ್ಲಿ ಇದು ಅಗತ್ಯದ ಸಂಗತಿ.

ನಗುತ್ತಾ ತಮಾಷೆಯೊಡನೆ ಆನಂದಿಸುವ ಆರೋಗ್ಯವಂತ ಶಿಶುವು ಪ್ರತಿ ಹೆತ್ತವರಿಗೂ ಆನಂದವನ್ನುಂಟುಮಾಡುವಂತಹುದು. ಮಕ್ಕಳ ಸುಖಸಂತೋಷವೂ ಭವಿಷತ್ತೂ ಯಾವುದರ ಮೇಲೆ ಹೊಂದಿಕೊಂಡಿರುವುದೋ ಅಂತಹ ಆರೋಗ್ಯಕರ ಪೋಷಣೆಯ ವಿಷಯದಲ್ಲಿ ಅವರಿಗೆ ಸಾಕಷ್ಟು ಮತ್ತು ಸರಿಯಾದ ಪೋಷಣೆಯು ದೊರೆಯುವಂತೆ ಜಾಗರೂಕರಾಗಿರಬೇಕು.

ನಿಮ್ಮ ಮಕ್ಕಳ ದೈನಿಕ ಪಾನೀಯವನ್ನಾಗಿ ಓವಲ್‌ಟಿನ್ನನ್ನು ಮಾಡಿರಿ. ನಿಸರ್ಗದ ಅತ್ಯಮೂಲ್ಯವಾದ ಟೋನಿಕ್ ಆಹಾರಗಳಿಂದಾಗಿ ಇದನ್ನು ತಯಾರಿಸಲಾಗಿದೆ. ಮೆದುಳು ಮತ್ತು ದೇಹವನ್ನು ಬೆಳೆಸುವುದಕ್ಕಾಗಿ ಎಲ್ಲಾ ಬಗೆಯ ಪೋಷಣೆಯನ್ನಿದು ಒದಗಿಸಿಕೊಡುವಂತಹದ್ದಿದೆ. ಇದರಿಂದ ಚೈತನ್ಯವೂ ಶಕ್ತಿಯೂ ಉತ್ಪನ್ನವಾಗುತ್ತದೆ. ರುಚಿಕರವಾದ ಓವಲ್‌ಟಿನ್ನನ್ನು ಮಕ್ಕಳು ಪ್ರೀತಿಸುತ್ತಾರೆ. ಅವರಲ್ಲಿ ಕ್ರಮವಾಗಿ ಉಂಟಾಗುವ ಬೆಳವಣಿಗೆಯನ್ನು ಪರೀಕ್ಷಿಸಿರಿ. ರೋಗರುಜಿನೆಗಳಿಂದ ಅವರು ಎಷ್ಟು ವಿಮುಕ್ತರಾಗಿರುತ್ತಾರೆಂದು ಕಾಣಿರಿ! ಓವಲ್‌ಟಿನ್ ಎಂಬುದು ಅಸಮಾನ ಅತ್ಯುತ್ತಮ ಅತ್ಯಂತ ಶುದ್ಧ ಮತ್ತು ಬಹಳ ಸುಲಭದರದ ಪಾನೀಯವಾಗಿರುತ್ತದೆ.

ಮಕ್ಕಳ ಆರೋಗ್ಯ, ಶಕ್ತಿ ಮತ್ತು ಚೈತನ್ಯಗಳಿಗಾಗಿ ದಿನನಿತ್ಯದ ಪಾನೀಯು

ಅತ್ಯುತ್ತಮವಾದ ಓವಲ್‌ಟಿನ್ನಿಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಅನುಕರಣೀಯವಾದ ಬರೀ ಮಿಶ್ರಣವಾದ ಮತ್ತು ಸಪ್ರಮಾಣ ತೂಕದಿಂದಿರದ ಎಲ್ಲ ಆಹಾರಗಳನ್ನು ತಿರಸ್ಕರಿಸಿರಿ.



OVALTINE

TONIC FOOD BEVERAGE

ಅತೀ ಶುದ್ಧ, ಅತ್ಯುತ್ತಮ— ಕರಸ್ಪರ್ಶವು ಇದಕ್ಕಾಗಿರುವುದಿಲ್ಲ

[illegible] ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಜೇಮ್ಸ್ ರೈಟ್ 8 ಎ ರಿಪನ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಯಿ, ಮದ್ರಾಸು ರಂಗೂನುಗಳಲಿ

ನೀವು ಓವಲ್‌ಟಿನ್ನನ್ನು ಪ್ರೀತಿಸುತ್ತೀರಲ್ಲವೇ? ಹಾಗಾದರೆ ಓವಲ್‌ಟಿನ್ ರೊಟ್ಟಿಗಳನ್ನೂ ಏಕೆ ಪರೀಕ್ಷಿಸಬಾರದು? ಇವು ಬಹಳ ಒಳ್ಳೆಯದಿವೆ ಮತ್ತು ಆರೋಗ್ಯಕರ ಪೋಷಣೆಯನ್ನೀಯುವಂತಹವುಗಳು. ಸಾಮಾನ್ಯವಾದ ಬಿಸ್ಕತ್ತುಗಳಿಗಿಂತ ಇವು ಅತ್ಯುತ್ತಮ. ನಿಮ್ಮ ಹಲ್ಲು ಮತ್ತು ಜೀರ್ಣಶಕ್ತಿಯ ಸುಸ್ಥಿತಿಗಾಗಿ ಇವುಗಳನ್ನು ತಿನ್ನಿರಿ.

OV 99

ಈಗ ತಾನೇ ಅಚ್ಚಾಗಿ ಬಿಕರಿಗೆ ಸಿದ್ಧವಾಗಿದೆ

ಕಾಮದ ಗುಟ್ಟು

ಸುಂದರ ಚಿತ್ರಗಳ ಸಹಿತ

ಲೇಖಕರು — ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ — ಪಂಡಿತ ತಾರಾನಾಥರವರ ಮುನ್ನುಡಿಯೊಡನೆ.

ದಾಂಪತ್ಯದ ಸರ್ವಾಂಗ ಸುಖಗಳನ್ನೂ ಭೋಗಿಸಬೇಕಾದರೆ ಇದನ್ನು ಓದಲೇಬೇಕು. ವಿವಾಹಿತರಿಗೂ, ಅವಿವಾಹಿತರಿಗೂ, ಗಂಡಸರಿಗೂ, ಹೆಂಗಸರಿಗೂ ಅವಶ್ಯಕವಾಗಿ ಬೇಕಾಗಿರುವ ಪ್ರಶ್ನೆಗಳ ಮತ್ತು ಉತ್ತರಗಳ ಪುಸ್ತಕ. ಬ್ರಹ್ಮಚಾರಿಗಳಿಗೂ ಉತ್ತಮ ಕೈದೀವಿಗೆ. ಅಂತರಂಗದಲ್ಲಿ ಕೊರಗಿಸುತ್ತಿರುವ ಗುಪ್ತವ್ಯಾಧಿಗಳಿಗೆ ಪಾಶ್ಚಿಮಾತ್ಯ ಹೈಂದವ ದೃಷ್ಟಿಗಳಿಂದ ಚಿಕಿತ್ಸೆ ಮಾಡುವ ಸುಲಭ ವೈದ್ಯ. ಇಂಥಾ ಪುಸ್ತಕವನ್ನು ಇದುವರೆಗೂ ಯಾರೂ ಬರೆದೇ ಇಲ್ಲ.

ಫಲವಿಷ್ಟಿದ್ದರೂ ಬಹುಜನರಿಗೆ ಪ್ರಯೋಜನವಾಗಲೆಂದು ಬೆಲೆಯೋ ೧೪ ಆಣೆ ಮಾತ್ರವೆ

ಅಂಚೆವೆಚ್ಚ ಪ್ರತ್ಯೇಕ

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಶನು ದೊರೆಯುತ್ತದೆ

ಬೇಗನೇ ಬರೆದು ತರಿಸಿಕೊಳ್ಳಿರಿ!

ವಿ. ಜಿ. ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ಜಯಕರ್ನಾಟಕ ಗ್ರಂಥಮಾಲೆಯ

೨ನೆಯ ವರ್ಷದ ಯೋಜನೆ.

ಮನೋರಂಜಕವಾದರೂ,
ಗಂಭೀರಶೈಲಿಯ ಗ್ರಂಥಗಳ ಸುಗ್ಗಿ!!

ಚಂದಾ ಹಣವನ್ನು ಕಡಿಮೆ ಮಾಡಿದೆ!

ವರ್ಷದಲ್ಲಿ ೬ ಪುಸ್ತಕಗಳು!!

ವಾರ್ಷಿಕ ಚಂದಾ (ಅಂಚೆ ಸೇರಿ) ೩–೮–೦ ಮಾತ್ರ!!

ಜಯಕರ್ನಾಟಕ ಚಂದಾದಾರರಿಗೆ ೩–೦–೦

ಮೊದಲನೆಯ ಗ್ರಂಥವಾಗಿ ಶ್ರೀ ಆನಂದಕಂದರ ಸಣ್ಣಕತೆಗಳ ಸಂಗ್ರಹವು ಅಕ್ಷಯ ತೃತೀಯೆಯ ದಿನ ಹೊರಡುವುದು.

ಅಲ್ಲದೆ ಶ್ರೀಯುತರಾದ ಶ್ರೀನಿವಾಸ, ಬೇಂದ್ರೆ, ಬೇಂಗಸೆ, ಮುಗಳಿ, ಚೆನ್ನಮಲ್ಲ ಮೊದಲಾದ ಸುಖಿತ ಬರೆಹಗಾರರ ನಾಟಕ ಕಾದಂಬರಿ ಕಥೆಗಳೂ ಶ್ರೀ ಅರವಿಂದ ಯೋಗಿಗಳ 'Mother' ಗ್ರಂಥದ ಅನುವಾದವೂ ಲಾವಣಿಗಳ ಸಂಗ್ರಹವೂ ಹೊತ್ತಿಗೆ ಸರಿಯಾಗಿ ಹೊರಡುವವು.

ನಿಯಮಿತವಾಗಿಯೇ ಪ್ರತಿಗಳನ್ನು ತೆಗೆಯುವದರಿಂದ ಚಂದಾದಾರರಾಗ ಬಯಸುವವರು ಈಗಲೇ ಪತ್ರ ಬರೆಯಬೇಕು.

ಎಲ್ಲ ಕಡೆಗೂ ಏಜಂಟರು ಬೇಕಾಗಿದ್ದಾರೆ

ಪತ್ರವ್ಯವಹಾರ ಮಾಡಬೇಕು

ವ್ಯವಸ್ಥಾಪಕ
ಜಯಕರ್ನಾಟಕ ಕಾರ್ಯಾಲಯ
ಸಾಧನಕೇರಿ, ಧಾರವಾಡ

ENCOURAGE INDIAN COMPANIES AND INDUSTRIES.

SWADESH MEANS PROVIDING
FOOD FOR STARVING MILLIONS
DEAL IN INDIAN GOODS AND KEEP
INDIAN MONEY IN INDIA

M. V. KAMATH
SWADESH PRACHARAK SANGHA
Kasaragod S. K.

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.

(REGISTERED UNDER COMPANY'S ACT 191)

ಕಾಸರಗೋಡು ದ. ಕನ್ನಡ

ಮೂಲಧನ ರೂಪಾಯಿ 0 000—0—0

ಪಾಲ 1ಕ್ಕೆ ರೂಪಾಯಿ 10—0—0 ರಂತೆ

5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸುವಂತೆ ಸಹಾಯಕರಾಗಿ ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ.

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯ ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿರುವ ಒಂದು ಕಂಪೆನಿಯು ಇಲ್ಲವೆಂದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ. ಸ್ವದೇಶಿ ಪ್ರೇಮಿಗಳೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ. ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ. ಕೂಡಲೇ ಅಪೇಕ್ಷಿಸಿರಿ.

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನುಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯುಳ್ಳದಾಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳ ಸಗಟು ಮತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧವಿದೆ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ—

ಮೆನೇಜಿಂಗ್ ಡೈರೆಕ್ಟರ್
ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್
ಕಾಸರಗೋಡು, ದ. ಕ.

ವಿವಿಧ ಸಮಾಚಾರಗಳು.

ಫ್ರಾನ್ಸಿನ ಅಧ್ಯಕ್ಷರನ್ನು ಗುಂಡಿನಿಂದ ಕೊಂದರು

ಫ್ರಾನ್ಸ್ ದೇಶದ ಅಧ್ಯಕ್ಷರಾದ ಎಂ ಡೌಮರ್ ಎಂಬವರು ಪೆರಿಸ್ ನಗರದ ಮಾರ್ಗದ ಮೇಲೆ ಹೋಗುತ್ತಿರುವಾಗ ಡಾಕ್ಟರ್ ಗೌಗೋಲೊಫ್ ಎಂಬ ರಶ್ಯಾದೇಶದವನು ಗುಂಡು ಹಾರಿಸಿದನು ಎರಡು ಗುಂಡುಗಳು ಅವರ ಹಣೆಯನ್ನು ಹೊಕ್ಕವು ಒಂದು ಗುಂಡು ಅವರ ಎದೆಯನ್ನು ಹೊಕ್ಕಿತು ಎರಡು ಗುಂಡುಗಳು ಅವರೊಡನಿದ್ದ ಫ್ರೆಂಚ್ ಧುರೀಣರಿಗೆ ತಾಗಿ ಅವರೂ ವಿಷಯಾವಸ್ಥೆಯಲ್ಲಿದ್ದಾರೆ ಡೌಮರರಿಗೆ ಗುಂಡು ತಗಲಿದೊಡನೆ ಅವರು ಜೊ[illegible] [illegible]ಯನ್ನು ಹಿಡಿದುಕೊಂಡು ಬಿದ್ದುಬಿಟ್ಟರು ಅವರನ್ನು ಘಾಯಗೊಂಡ ಇನ್ನಿಬ್ಬರನ್ನೂ ಆಸ್ಪತ್ರೆಗೆ ಕೊಂಡೊಯ್ಯಲಾಯಿತು [illegible] ಘಾರಿಗೆಟ್ಟು ಹರಿಯಿತು ಆಸ್ಪತ್ರೆಗೆ ತಲುಪುತ್ತಲೇ ಸುಪ್ರಸಿದ್ಧ ವೈದ್ಯರ ಚಿಕಿತ್ಸೆಯಾಯಿತು ಅವರು ನಿಧಾನಗೊಂಡರು [illegible] ಯನ್ನು ಹಿಡಿಯಲಾಯಿತು ಕೊಲೆಪಾತಕಿಯು [illegible] ಶಾಂತಿಕಾರ ಪಂಗಡದ ಹೆಸರುವಾಸಿ ಮಾಜಿ ಅಧ್ಯಕ್ಷನಂತೆ ತಾನು ತನ್ನ ದೇಶದಿಂದ ಈ ಕೊಲೆಗಾಗಿಯೇ ಬಂದಿರುತ್ತೇನೆಂಬನು ಇದೀ ಪೇರಿಸ್ [illegible]ಶವೂ, ಫ್ರಾನ್ಸೂ ಇಂಗ್ಲಾಂಡೂ, ರಶ್ಯಾವೂ ಈ ಕೊಲೆಯ ಪರಿಣಾಮವು ವಿಷಮವಾದೀತೆಂದು ಭಯಪಡುವಂತೆ [illegible] ಮಾರ್ಕೆಟುಗಳೂ, ವ್ಯಾಪಾರ ವಹಿವಾಟೂ ಸ್ತಬ್ಧತೆಯನ್ನು ಹೊಂದಿದುವು ಸರಕಾರಿ ಆಫೀಸು [illegible] ಕೊಲೇಜು ಮೊದಲಾದ ಸಂಸ್ಥೆಗಳು [illegible]ಟ್ಟುವು ಕೊಲೆಗಾರನು ಹುಚ್ಚನೋ ಎಂದು ಕೆಲವರ ಶಂಕೆ [illegible]ನಿಗೆ ರಶ್ಯನರು ಹಣ ಕೊಟ್ಟು ಕೊಲೆ ಮಾಡಿಸಿದರೋ ಎಂದ ಕೆಲವರ ಸಂಶಯ ತಾ [illegible]ನೇ ದಿನ ಶವಸಂಸ್ಕಾರವು ಇದೀ [illegible] ಖಂಡದವರ ದುಃಖಸೂಚನೆಯಿಂದ ಕೊನೆಗೊಂಡಿತು [illegible] ಫ್ರೆಂಚ್ ಅಧ್ಯಕ್ಷರಾಗಿದ್ದ ಎಂ ಪೇರಿ ಫ್ರಾನ್ ಕೊಸಡಿ [illegible] ಎಂಬವರೂ ಕೊಲೆಮಾಡಲ್ಪಟ್ಟಿದ್ದರು

* * *

ಮೋಸದ ಬಲೆ

ಮುಂಬಾಯಿಯ [illegible] ಯಲ್ಲಿ ಸಿಲ್ಕು ವಸ್ತ್ರದ ರಾಶಿಯು ಬಹಳವಿತ್ತು ಇದನ್ನು ನೋಡಿ ಒಬ್ಬ ಪಠಾಣ ಏನೋ ಒಂದು ಕುತಂತ್ರವನ್ನು ಹೂಡಿ ಅಂಗಡಿಗೆ ಹೋಗಿ ತಾನು ಮಹಾ ಧನಿಕನೆಂದೂ ತಾನು ಅಫ[illegible] ನಾದಿರಷಹರ ಆಪ್ತ ಮಿತ್ರನೆಂದೂ ಹೇಳಿಕೊಂಡನು ಇದನ್ನು ಕೇಳಿ ಅಂಗಡಿಯ ಯಜಮಾನನಿಗೆ ಸಂತೋಷವಾ[illegible] ಅವನನ್ನು ಸಂಭ್ರಮದಿಂದ ಉಪಚರಿಸಿ [illegible] ಸಿಲ್ಕು ವಸ್ತ್ರವನ್ನು ನಾದಿರಷಹಾರ [illegible] ಹೆಸರನ್ನು ಹೇಳಿದ[illegible] ಸಿಲ್ಕನ್ನು ಕೊಟ್ಟನು [illegible] ವಸ್ತ್ರವು ಅರಸನಿಗೆ ಮುಟ್ಟಿದ [illegible] ವಿಚಾರಿಸಿ ತಿಳಿಯಲಾಗಿ ಆ ವಸ್ತ್ರವು ನಾದಿರಷಹರಿಗೆ ಮುಟ್ಟಲಿಲ್ಲವೆಂದು ತಿಳಿದುಬಂತು ಮೋಸಗಾರನನ್ನು [illegible]

* * *

ಸೆರೆಮನೆಗೆ ಹೋದವರೆಷ್ಟು ಮಂದಿ?

ಭಾರತ ಮಂತ್ರಿಗಳಾದ [illegible] ಒಂದು ಭಾಷಣ ಮಾಡುತ್ತಾ ಸೆರೆಮನೆಗೆ ಹೋದ [illegible] ಅಂಥ ಕೆಲವು ಜನರು ಹಿಂದೂದೇಶದಲ್ಲಿ [illegible] ಗಾಬರಿಪಡಬೇಕಾಗಿಲ್ಲ ಎಂದು ಮೊದಲು [illegible] ನಲ್ಲಿ ಹೇಳಿದ್ದ ಸಂಗತಿಯು ಸರ್ವತ್ರ ಹರಡಿಕೊಂಡಿದೆ ಇವರ ಈ ಹೇಳಿಕೆಯನ್ನು ಕೇಳಿ ಪಂಡಿತ ಮಾಲವೀಯ [illegible] ಜೈಲಿನಿಂದ ಹೊರಬಂದೊಡನೆ ಒಂದು ಪ್ರಶ್ನೆಯನ್ನು ಮಾಡಿದ್ದಾರೆ [illegible] ಹೋದರ [illegible] ಆದಗಿನಿಯೋ ತಿಳಿಯದ ಸತ್ಯವನ್ನೇ ಅವರ ಹೇಳುತ್ತಿದ್ದು ಅಂದು ರಶ್ಯದಲ್ಲಿ ನಡೆದ [illegible] ವಿಪರೀತವಾದ [illegible] ಇಂದು ಹಿಂದೂದೇಶದಲ್ಲಿ ನಡೆಯುತ್ತಿದೆ ಎಂದು ತಿಳಿದು ಬರುತ್ತಿತ್ತು ಚಳವಳವು ಪ್ರಾರಂಭವಾದ ದಿನದಿಂದ ೩೦ನೇ ಎಪ್ರಿಲ್ ತನಕ [illegible] ಮಂದಿಗಳು ಸೆರೆಮನೆಗೆ ಹೋದರೆಂದೂ ಇವರಲ್ಲಿ [illegible] ಮಂದಿಗಳು ಸ್ತ್ರೀಯರೂ ಮಕ್ಕಳೂ ಇರುವರೆಂದೂ ತಿಳಿದು ಬಂದಿದೆ ಕಾಂಗ್ರೆಸಿನ ಲೆಖ್ಖದಿಂದ ಇಷ್ಟರಲ್ಲಿ ಸುಮಾರು [illegible] ೦೦೦ ಜನರು ಜೈಲನ್ನು ಸೇರಿದಂತೆ ಕಾಣುತ್ತದೆ [illegible] ಅಧಿಕವಾಗಿವೆ ಅದರ ಮೇಲೆ ಪುನಃ ದಿಲ್ಲಿ ಕಾಂಗ್ರೆಸಿನ ದಿನ [illegible] ಗಟ್ಟಳೆ ಜನರನ್ನು ಹಿಡಿದು ಬಂಧಿಸಿದರು [illegible] ಕಡೆಗಳಲ್ಲಿ ಗುಂಡು ಹಾರಿಸಲಾಯಿತು ನಿರಸ್ತ್ರಧಾರಿಗಳಾದ ಜನರ ಮೇಲೆ [illegible] ಕಡೆಗಳಲ್ಲಿ ಲಾಠೀ ಪ್ರಹರವಾಯಿತು [illegible] ದಿನಗಳು ಜಪ್ತಿಗೊಳಗಾದುವು [illegible] ಕಡೆಗಳಲ್ಲಿ ಆಸ್ತಿಗಳು ವಶೀಕರಿಸಲ್ಪಟ್ಟುವು [illegible] ಪತ್ರಿಕೆಗಳನ್ನೂ ಮುದ್ರಣಾಲಯಗಳನ್ನೂ ವಶೀಕರಿಸಿಕೊಳ್ಳಲಾಯಿತು ಇಷ್ಟಿದ್ದರೂ ಹಿಂದೂದೇಶವು ಶಾಂತತೆಯಿಂದಿದೆಯೆನ್ನಲಾಗುವುದೇ, ಎಂದರು

ಮುಯ್ಯಿಗೆ ಮುಯ್ಯಿ—ಕೊಲೆ!

ಪೋಲೀಸ್ ಅಧಿಕಾರಿಗಳು ತಮಗೆ ಸಹಾಯವನ್ನು ಮಾಡಲಿಲ್ಲ ಎಂದು ಕೆಲವು ಮುಂಬಾಯಿವಾಲರು ಗವರ್ನರರಿಗೆ ದೂರು ಕೊಟ್ಟಿರುವರು.

+ + + +

ಪೋಲೀಸರ ಕಷ್ಟ ಇವರಿಗೇನು ಗೊತ್ತು? ಒಂದು ಕಡೆಯಿಂದ ಅವರಿಗೆ ಕಾಂಗ್ರೆಸ್ಸಿನವರ ಪೋರು ಚಳವಳದ ಭಯ. ಒಂದು ದಿಕ್ಕಿನಿಂದ ತಮ್ಮ ಹುದ್ದೆ ಪ್ರಾಣದ ಭಯ! ಇನ್ನೊಂದು ಕಡೆಯಿಂದ ಅಧಿಕಾರಿಗಳ ಭಯ.

+ + + +

ಇಷ್ಟು ಭಯಗಳಿರುವಾಗ ಪೋಲೀಸರು ಥಟ್ಟನೇ ಹೊರಗೆ ಬಂದು ಕೊಲ್ಲುವವರನ್ನು ಕೊಲ್ಲಬೇಡಿರೆಂದು ಹೇಳುವುದು ಹೇಗೆ? ಅವರಿಂದಾದಷ್ಟು ಅವರು ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಗುಂಡು ಹಾರಿಸಿದ್ದಾರೆ. ಒಟ್ಟಿಟ್ಟರು ಪುಡಾರಿಗಳನ್ನು ಕೊಂದಿದ್ದಾರೆ. ಇಷ್ಟು ಸಾಕಾಗದೇ?

× × × ×

ಮಿಲಿಟರಿಯವರೂ ಕೂಡ ಒಳ್ಳೆ ಕೆಲಸ ಮಾಡಿದ್ದಾರೆ. ಅವರ ಕೆಲಸವನ್ನು ಸರಕಾರವೇ ಪ್ರಶಂಸಿಸಿದೆ. ರಾತ್ರಿ ಹಗಲು ಅವರು ಮುಂಬಾಯಿ ಪಟ್ಟಣದಲ್ಲಿ ಪಹರೆ ಮಾಡಿದ್ದು ಸಾಕಾಗಲಿಲ್ಲವೇ?

× × × ×

ಇಷ್ಟು ಬಂದೋಬಸ್ತು ಇದ್ದರೂ ಹಿಂದೂಮುಸ್ಲಿಮರಲ್ಲಿ ನೂರಕ್ಕಿಂತ ಹೆಚ್ಚು ಕೊಲೆಗಳು ಹೇಗೆ ಆದುವೆಂದು ಕೆಲವರಿಗೆ ಆಶ್ಚರ್ಯ! ಇಂತಹ ಆಶ್ಚರ್ಯಕ್ಕೆ ಕಾರಣವಿಲ್ಲ. ಸತ್ತವರಿಗೆ ಆಯುಷ್ಯ ಮುಗಿದಿದೆ ಎಂದು ಹೇಳಿ ಸುಮ್ಮನೆ ಕುಳಿತುಕೊಳ್ಳೋಣ.

× × ×

ಮುಂಬಾಯಿಯ ಗಲಾಟೆಯ ಕುರಿತು ತನಿಖೆ ನಡೆಯಲಿದೆಯಂತೆ. ಈ ತನಿಖೆ ಏಕೆ ಎಂದು ನನ್ನ ಪ್ರಶ್ನೆ! ಸತ್ತವರು ಬದುಕುವುದಾದರೆ ಈ ತನಿಖೆಯು ಅಗತ್ಯ. ಯಾವ ತನಿಖೆಯಿಂದಲೂ ಪ್ರಯೋಜನವಾಗುವಂತಿಲ್ಲ.

× × × ×

ತನಿಖೆಯಲ್ಲಿ ಮುಸಲ್ಮಾನರು ಸರಿಯೆಂದೂ, ಹಿಂದೂಗಳು ತಪ್ಪೆಂದೂ ನಿರ್ಧಾರವಾಗುವುದರಲ್ಲಿ ಸಂದೇಹವಿಲ್ಲ. ಇದು ಅಂತಹ ಕಾಲ!

× × × ×

ಮುಂಬಾಯಿಯ ಹಿಂದೂಮುಸಲ್ಮಾನರೇ, ನೀವು ಏನೂ ವ್ಯಥೆಗೊಳ್ಳಬೇಡಿರಿ. ಆದದ್ದು ಆಯಿತು. ಎಲ್ಲಾ ನಿಮ್ಮ ಶಕ್ತಿಶೂರರ ಇಚ್ಛೆ. ನಿಮ್ಮ ಹೃದಯದಲ್ಲಿದ್ದ ದೇವರ ಇಚ್ಛೆಯೆಂದು ನೆನೆದುಕೊಳ್ಳಿ!

'ಸ್ವಾಬ'

ಪತ್ರವ್ಯವಹಾರ.

[ಪ್ರಕಟವಾದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.—ಸಂ. ಸ್ವ.]

ದ. ಕ. ಜಿ. ಕಲೆಕ್ಟರ ದೊರೆಗಳವರಿಗೆ ಬಡವರ ವಿನಂತಿ.

ಉಳ್ಳಾಲ, ಸೋಮೇಶ್ವರ, ಕೋಟೆಕಾರು, ಕಲ್ಲಾಪು ಮತ್ತು ಉಚ್ಚಿಲದಲ್ಲಿ ವಾಸವಾಗಿರುವ ಬಡವರಾದ ನಾವು ನಮ್ಮ ಗೃಹೋಪಯೋಗಾರ್ಥವಾಗಿ ಮಂಗಳೂರಿನಿಂದ ಕಡವು ಮೂಲಕ ಕೊಂಡುಹೋಗುವ ಸಾಮಾನುಗಳಿಗೆ ಕಡವಿನ ಹಣ (ಸುಂಕ) ಕೊಟ್ಟು, ಅವುಗಳನ್ನು ಎತ್ತಿನ ಗಾಡಿಯಲ್ಲಿ ಹಾಕಿ ಮುಂದೆ ಹೋಗುತ್ತಿರುವಲ್ಲಿ, ಉಳ್ಳಾಲ ಪೇಟೆಯಲ್ಲಿ ಸದ್ರಿ ಗಾಡಿಗಳನ್ನು ಅಡ್ಡ ತಡೆದು, ನಿಲ್ಲಿಸಿ, ತಾನು [illegible] ಹೇಳಿ, ಬಡಜನರಿಂದ ಪ್ರತಿ ಗಾಡಿ ಒಂದಕ್ಕೆ ನಾಲ್ಕಾಣೆಯಿಂದ ಒಂದು ರೂಪಾಯಿ ವರೆಗಿನ ಮೊಬಲಗನ್ನು ಒಬ್ಬ ಬ್ಯಾರಿಯು ವಸೂಲು ಮಾಡಿ, ಬಡಜನರಿಗೆ ರಶೀದಿಗಳನ್ನು ಕೊಡದೆ ತಾನು ಬೋರ್ಡಿನ ಆಶ್ರಯದಿಂದ ಹುಕುಂ ಪಡೆದವನೆಂದು ಜನರನ್ನು ಕಷ್ಟಕ್ಕೊಳಪಡಿಸುತ್ತಿರುವನು. ಈ ವಿಷಯ ಸರಕಾರದವರು ತನಿಖೆ ನಡೆಸಿ, ಇದರ ಸತ್ಯಾಂಶವನ್ನು ಕಂಡುಹಿಡಿಯಬೇಕಾಗಿ ಪ್ರಾರ್ಥಿಸುವ,

ಬಡವರಲ್ಲೊಬ್ಬ

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಧರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅನಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಶ್ರೀ ಮದನಮಸ್ತಪಾಕು. ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ [illegible], ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೬೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫. ಟಿ. ಖ. ರೂ. ೧. ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ. ೧೧. ಮೂರ ಡಬ್ಬಿಗೆ ರೂ. ೧೫॥ [illegible] ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಖಟಖಟ್ಟೆ ಎಲ್ ಎಮ್ ಎಂಡ್ ಎಸ್, ಜೆ. ಪಿ., ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ವಿಮುಕ್ತರಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ವಿ. ಎ. ವೈದ್ಯ ಎಲ್ ಸಿ. ಪಿ. ಎಸ್ ಕೊಳವಾಮಾಹಿಮ ರಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ೪ ರೂ ವಿ ಪಿ ಖರ್ಚ ೦|।೦

ವಿಳಾಸ — ಸಂಜೀವಿನೀ ಔಷಧಾಲಯ. ಮು. ಪೊ. ಮಿರಜ, S. M. C.



ಆಶ್ಚರ್ಯವಲ್ಲ — ಮೋಸವಿಲ್ಲ, ಬರೇ ರೂ ೩—೧೪—೦ಕ್ಕೆ

ಈ ಕೆಳಗಿನ ವಾಚುಗಳನ್ನೂ ಇನ್ನಿತರ ಸಾಮಾನುಗಳನ್ನೂ ಕೊಡುತ್ತೇವೆ. ೩ ಬಾಟ್ಲಿ ನಮ್ಮ ಪ್ರಖ್ಯಾತ ಒಟ್ಟೊ ಪುಷ್ಪ, ಇದರ ೩—೪ ಹನಿಗಳು ನಿಮಗೆ ಇಡೀ ದಿನ ಸುಗಂಧವನ್ನೀಯುತ್ತದೆ. ೧ ಪೆಟ್ಟಿಗೆ ಹಲ್ಲು ಪುಡಿ ೧ ಪೆಟ್ಟಿಗೆ ಮುಖ ಲೇಪನ ೧ ಪಾಕೆಟ್ ಚಾಕು (ಕತ್ತಿ), ೧ ಪೆನ್ಸಿ ಪಾರ್ಕಿಟನ್ ಪೆನ್ನು, ೧ ಜೋಡು ಬಾಳಿಕೆಯ ಕೆನ್ವಸ್ ಶೂ ೧ ಜರ್ಮನ್ ಬ್ರಾಂಜ್ ಪೀಸು ೧ ಹಮ್ಮು ಪಾಕೆಟ್ ವಾಚ್ (ಸರಪಳಿ ಸಮೇತ) ಅಥವಾ ನಿಕ್ಕಲ್ ಕೇಸಿನ ನಿಪೋಲಿಯನ್ ರಿಸ್ಟ್ ವಾಚ್. ಎಲ್ಲಾ ಸಾಮಾನುಗಳಿಗೆ ಒಟ್ಟು ರೂಪಾಯಿ ೩—೧೪—೦ ಮಾತ್ರ. ಪೇಕಿಂಗ್ ಮತ್ತು ಪೋಸ್ಟೇಜ್ ೧ ರೂಪಾಯಿ ಪ್ರತ್ಯೇಕ.

ವಿ ಪೊ — ಓರ್ಡರ್ ಕೊಡುವಾಗ ನಿಮ್ಮ ಪಾದದ ಅಳತೆ ಕೊಡಿರಿ. ಎಲ್ಲಾ ನಿಜವಾದ ವಾಚುಗಳಿಗೆ ೫ ವರ್ಷ ಗೇರಂಟೀ — ನಿಮಗೆ ಭರವಸೆ ಕೊಡುತ್ತೇವೆ

ಕೂಡಲೇ ಈ ವಿಳಾಸಕ್ಕೆ ಬರೆಯಿರಿ—

ಎನ್. ಬ್ರದರ್ಸ್ ಎಂಡ್ ಕೊ.
ಟಪ್ಪಾಲ್ ಪೆಟ್ಟಿಗೆ ನಂಬ್ರ 6712, S. B. ಕಲ್ಕತ್ತಾ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಷ್ಟಾಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ'
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀತ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಕವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರ್-ಜ್ಜೀವಿಸುವುದು

, ಸುಖಜೀವನ ಗುಣದಿಂದ ಬಾಣಂತಿಯು ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

[illegible] "[illegible] ರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು.

ಹೆಂಗಸರಿಗ ಹಾಕುವ ಬಿಳಿ ಬಣ್ಣದ ಕಾಶೀ ಸಿಲ್ಕುಗಳು 6 ಮೊಳ ಉದ್ದ 2½ ಮೊಳ ಅಗಲ ರೂ [illegible] ಲಾಗಾಯತು ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಮಡಿಗಳು, ಎಲವಸ್ತ್ರ, ಒತ್ಯಾಸಿ, ಪೇಟ, ಇತ್ಯಾದಿ ಉಣ್ಣೆಯ ಶಾಲು, ಖದ್ದರ್ ಮಡಿ, ಧಾವಳಿ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು, ಜರಿಟೊಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ —

ರಾವು ವಿಶ್ವನಾಥರಾವ್ ಎಂಡ್ ಬ್ರದರ್ಸ್
ದುರ್ಗಾಘಾಟ್ ಕಾಶೀ, ಬನಾರಸ್ ಸಿಟಿ

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ, ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್.

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — MANGALORE.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal Kasargod, Cochin, Udipi, Gangolli, Coondapur, Bombay Puttur, Calicut & Alleppey

ಬ್ರಾಂಚುಗಳು:-
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised and fully paid up Capital Rs 300 000 0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕಟ್ಟಲ್ಪಟ್ಟ ಮೂಲಧನವು ರೂ 300 000 0—0
Reserve and other sinking Funds Rs 526 000-0 0	ರಿಸರ್ವ ನಿಧಿ ಮತ್ತು ಇತರ ಫಂಡುಗಳ ರೂ. 626,000—0—0
Amount invested on G P Notes Rs 818 092-12-0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ 818,092—12—0
Rates of interest on fixed deposits at Head Office and Branches are 6% for 2 Years 5½ ,, 1 Year	[illegible] ಬಡ್ಡಿ ದರ—ಎರಡು ವರುಷಕ್ಕೆ ಶೇಕಡಾ 6% 1 ವರುಷಕ್ಕೆ ಶೇಕಡಾ 5½.

Current Account Deposits received and interest allowed on daily balance of Rs 50 and above that on multiple of Rs 10 @ [illegible]% from 1st Janauary to 30th June and @ 2% from 1st July to 31st December No interest will be allowed unless the depositor earns not less than Rs 5 during a period of 6 months ending either 30th June or 31st December in any year.

Except by special arrangement no interest is allowed on sums exceeding Rs 10,000 in the case of Head Office and Cochin Branch and on sums not exceeding Rs 1[illegible],000 in the case of Bombay Branch and on sums exceeding Rs [illegible],000 in the case of other Branches

For further particulars please apply to —

Office of the Bank,
Mangalore 15—4—1932

K. Venkat Rao,
Secretary & Treasurer

The Pangal Nayak Bank, Ltd.

Head Office Udipi, — *Established 1920* — Branch Office Mangalore

Authorised Capital Rs 2,00,000-
Issued Capital Rs 1,75,000-
Paid up Capital Rs. 1 75 000-
Reserve and other Funds Rs 1,80,000-

NOTICE.

The rate of interest allowed on the undermentioned deposits will be as follows with effect from 19-4-1932.

Fixed Deposits 3 months 4 [illegible] and 6 months 5 , 1 year and above 5 [illegible] and 2 years [illegible] 6 p a

Short term deposits 4 p a

(By order)

Office of the Bank,
Udipi 19 4-'32

P. Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಮುದುಕ
ಮೂವತ್ತು	ರಕ್ತ	ಮುಚ್ಚಟೆ
ನಲವತ್ತು	ರಾಗ	ನರಳುವದು
ಐವತ್ತು	ಬದರಿ	ಆಲಸ್ಯ
ಅರುವತ್ತು	ತೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ!

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಕ

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0.

ಹೆಚ್ಚಿನ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1/94 ಚೈನಾ ಬಜಾರ್, ಮದ್ರಾಸ್.

ಮದನಮಂಜರಿ ಮಾತ್ರೆಗಳ ಏಜಂಟರು — ಪಿ. ಜಿ. ಚಂದರಾಜ, ಮಿಶನ್ ಬೀದಿ, ಮಂಗಳೂರು

"ಶಾಂತಿಗಾಗಿ ಸಭೆ; ಯುದ್ಧಕ್ಕಾಗಿ ಸನ್ನಾಹ"

ಇದು ಲೀಗ್ ಒಫ್ ನೇಶನ್ಸಿನ ಯುದ್ಧ ನಿವಾರಣಾ ಕೂಟದ ಅಥವಾ ಶಸ್ತ್ರತ್ಯಾಗದ ಸಲುವಾಗಿ ಸೇರಿದ ಪರಿಷದದ ಕಾರ್ಯವೃತ್ತಾಂತವನ್ನೋದಿ ಬರೆದ ಟೀಕೆಯಲ್ಲವಾದರೂ, ಅದರಂತೆಯೆ ಆದುದೆಂಬ ಒಂದು ವೃತ್ತಾಂತ. ಮುಂಬಾಯಿಯಲ್ಲಿ ದಂಗೆಯಾಗುತ್ತಿರುವುದನ್ನು ತಡೆಯಲು ಗವರ್ನರಿಂದಲೇ ಮೊದಲಾಗಿ ಸರ್ವರೂ ಪೇಚಾಡುತ್ತಾ, ಮ್ಯುನಿಸಿಪಲ್ ಕೋರ್ಪೊರೇಶನಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲೇ ಶಾಂತಿಸಾಧನಾ ಸಭೆ ಸೇರಿತು. ಈ ಸಭೆಯಲ್ಲಿ ಸಮಸ್ತ ಜಾತಿ ಸಮಾಜಗಳ ಪ್ರತಿನಿಧಿಗಳು ಸೇರಿದರು. ಸದ್ಯ ವಿಚಾರವಾಗುತ್ತಾ, ಇದು ವರೆಗೆ ಹೊರಬಿದ್ದ ವದಂತಿ, ಪತ್ರಿಕಾ ಲೇಖಗಳು, ಬಾತಮಿಗಳು ಸ್ವತಃ ಅನುಭವ ಮೊದಲಾದುವನ್ನು ಹಿಂದೂ ಮೆಂಬರರೂ, ಮುಸ್ಲಿಮ ಮೆಂಬರರೂ ಅಧ್ಯಕ್ಷರ ಮುಂದಿಟ್ಟರು. ಇತ್ತಂಡಗಳ ಟೀಕೆಗಳಾಗುವಾಗ ಎತ್ತಣಿಂದಲೋ ನೆಟ್ಟಗೆ ಅತ್ತ ಒಬ್ಬ ಪ್ರತಿನಿಧಿಗಳು ಬಂದು ಹಿಂದೂಗಳೇ ಎಲ್ಲಕ್ಕೂ ಕಾರಣರೆಂದೂ, ಮುಸ್ಲಿಮರನ್ನು ಹಿಂಸೆಮಾಡುವರೆ ಮನೋವಾಕ್ಕಾಯಗಳಲ್ಲಿ ಅವರು ಪ್ರಯತ್ನಿಸಿದರೆಂದೂ ಭಾಷಣವನ್ನು ರೋಷದಿಂದ ಮಾಡಿದರು. ಮುಂದೆ ಪುನಃ ಸಭಾಕಾರ್ಯವು ಜರುಗಲಿರುವಾಗ ಈ ಪ್ರತಿನಿಧಿಗಳೇ ಅಡ್ಡಬಾಯಿಹಾಕಿದರು. ಅಧ್ಯಕ್ಷರು ಒಮ್ಮೆ ಎಲ್ಲಾ ಹೇಳಿಕೆಯಾದ ಬಳಿಕ, ಪುನಃ ಮಾತಾಡುವುದು ನ್ಯಾಯವಿರುದ್ಧವೆಂದರು. ಅಧ್ಯಕ್ಷರು ಹಿಂದುಗಳಾಗಿ ಮುಸ್ಲಿಮರ ಮೇಲೆ ಪಕ್ಷವಾಗಿರುವರೆಂದು ಜರೆದು, ಈ ಮಹಾಶಯರು 'ಶಾಂತಿಯಂತೆ! ಹಃ! ಸುಡಬೇಕು ನಿಮ್ಮ ಶಾಂತಿಗೆ ಒಂದು ಅರ ಕಾಸು ಬೆಲೆ. ಈಗ ನಾನು ಈ ಸಭೆಯಲ್ಲಿ ಹೊರಕ್ಕೆ ಹೋಗಿ ಏನು ಮಾಡಬಹುದೋ ನೋಡವೆನು' ಎಂದು ಬಿಗಿದ ಮುಷ್ಟಿಯಿಂದ ಹೆದರಿಸಿ ತಕ್ಷಣವಲ್ಲೇ ರಭಸದಿಂದ ಎದ್ದು ನಡೆದರು. ಈ ಪ್ರತಿನಿಧಿಗಳು ಯಾರು? ಶಾಂತಿಗಾಗಿ ಇಡೀ ಜೀವನದ ದುಡಿದುದರಲ್ಲಿ ತನ್ನನ್ನು ಮೀರಿದವರು ಜಗತ್ತಿನಲ್ಲೇ ಇಲ್ಲ ಎಂದು ನಿನ್ನೆ ನುಡಿದ ಶ್ರೀ ಮೌಲಾನಾ ಶೌಕತ್ ಆಲಿಯವರು. ಹೇಗೆ ದುಡಿದರು, ಹೇಗೆ ದುಡಿಯುತ್ತಿರುವರು ಹೇಗೆ ದುಡಿಯಲಿರುವರು!'

ಅಮೇರಿಕದಲ್ಲಿ ಸತ್ಯಪ್ರಚಾರ

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಮತ್ತು ಕೆನಡಾ ರಾಜ್ಯದಲ್ಲಿ ಹಿಂದೀಯರು ನಡೆಸುವ ಅಹಿಂಸಾತ್ಮಕ ಚಳವಳವನ್ನು ಕೇಳಿ ಸಹಾನುಭೂತಿಯುಳ್ಳ ಪ್ರಜಾಗಣವು ಸಾಕಷ್ಟಿದೆ. ಯಾದ ಕಾರಣ ಬ್ರಿಟಿಷರಲ್ಲಿ ಕೆಲವರು ಅಮೇರಿಕದಲ್ಲಿ ಕೆಲವರು ಈ ಸಹಾನುಭೂತಿಯನ್ನು ಕುಂದಿಸ [illegible] ಹೇಗೆ ಅಕ್ಷರುಗಳ ಮೂಲ ಜನತೆಗೆ ಸತ್ಯ ವಿಚಾರಗಳನ್ನು ಪ್ರಚಾರವಾದ [illegible] ಮಿಸ್ ಮೇಯೋ, ಒಳ್ ಥಾಮ್ಸನ್ ಸಾಹೇಬರು, ಮೊನ್ನೆ ಚರ್ಚಿಲ್ಲರು, ಇಂದ ವಿಲ್ಸನರು. ನಾಳೆಗೆ ಶ್ರೀಮತಿ [illegible] ಕೆಂಡಲ್ [illegible] ಈ ಶ್ರೀಮತಿಯು ಮೇಯೊ ಬಾಯಿಯ ಗೆಳತಿ—ಚಿತ್ರಿತವಾಯಿಯಾಗಿರಬಹುದು. ಇಂಡಿಯಾ ಪ್ರಾಂತ್ಯದಲ್ಲಿ ನಾಲ್ಕು ಸಲ ಪ್ರದಕ್ಷಿಣೆ ಮಾಡಿ, ಸ್ವ ಅನುಭವವನ್ನು ಅಮೇರಿಕನವರಲ್ಲಿ ತಿಳಿಸಲು ತುಂಬಲು ಇವಳು ಹೊರಟಿರುವಳು. ಇಂಡಿಯಾ ಆಫೀಸಿನವರು ಇವಳು ತಂದಿರುವ ಶಿಫಾರಸು ಪತ್ರಗಳನ್ನು ಓದಿ, ಮುಗ್ಧರಾಗಿರುವರು. ಇಂಡಿಯಾ ಸರಕಾರದ ಅಭಿಪ್ರಾಯಗಳ ಯಾವುವೋ ಅವೇ ಅವಳುಳ್ಳ ಅಭಿಪ್ರಾಯಗಳನ್ನು ಇವಳೂ ಹೊರಡಿಸಲು ಯೋಗ್ಯಳೆಂದು ಮನೋಸಾಮಾನ್ಯತೆ ಹಚ್ಚಿದ್ದು ಇದರಲ್ಲಿ ವಿಚಿತ್ರವೇನೂ ಇಲ್ಲ. 'ಅಮೇರಿಕದಲ್ಲಿಯಾಗಲಿ ಇಂಗ್ಲೆಂಡಿನಲ್ಲಾಗಲಿ, ಯಾವ ಸರಕಾರವಾದರೂ ಹಿಂದೀಯರು ನಡೆಸುವಂತಹ ಚಳವಳವನ್ನು ಇಂಡಿಯಾದಲ್ಲಿ ಇದಿರಿಸಿದುದಕ್ಕಿಂತ ಎಷ್ಟೋ ಕಠಿಣವಾಗಿ ದಂಡಿಸುತಿದ್ದರು.' ಎಂಬುದು ಇವಳು ಪ್ರಚಾರಮಾಡುವ ಅಮೂಲ್ಯಾಭಿಪ್ರಾಯಗಳಲ್ಲೊಂದು ಸೆಂಪಲ್ ಮಾದರಿ. ಬ್ರಿಟಿಷ ಸಾಮ್ರಾಜ್ಯದಲ್ಲಿ ಮುಳುಗದ ಸೂರ್ಯನ ಬೆಳಕೇರುತ್ತ ಹಾಗೆ ಇಂತಹ ಒಂದೊಂದು ಕೆಂಡಾಲ ಧೂಮಕೇತುವು ವಿಜಯಸೂಚಕ ಕೆಂಡಗಳನ್ನೂ ಇಂಡಲ್ಲಿ ಹಾರಾಡಿಸುತ್ತಿರಲಿ. ಸರ್ಕಸ್ ಆಟದ ಚಿರತೆ, ಕೋತಿಗಳನ್ನು ಊರೂರಲ್ಲಿ ಜನಾಭಿರಂಜನೆಗಾಗಿ ಪ್ರದರ್ಶಿಸುವರಿರುವಂತೆ, ಈ ಕೆಂಡಾಲ ಸಂಚಾರಿಣಿಗೂ ಒಬ್ಬ ಮೊಕ್ತೇಸರರು ಇರುವರು, ಇವರೇ ಮೊಕ್ತೇಸರರು ಭಾರತೀಯರ ಅಯೋಗ್ಯತೆಯನ್ನು ಅಮೇರಿಕದಲ್ಲಿ ಸಾರುವಾಗ ಚರ್ಚಿಲ್ಲರ ಮೆನೇಜರರಾಗಿದ್ದುದರಿಂದ ಈ ಪುರುಷರತ್ನದಂತೆ ಆ ಸ್ತ್ರೀರತ್ನವೂ ಅಮೇರಿಕದಲ್ಲಿ ಇಂಡಿಯಾದ ಕುರಿತಾಗಿರುವ ಅಜ್ಞಾನಾಂಧಕಾರವನ್ನು ತೊಲಗುವಂತೆ ಬೆಳಗಲಿ!

ಚಿತ್ತರಂಜನನ ಮಾದರಿಯಲ್ಲಿ

ಮುನ್ನಡೆಯಲು ಸರ್ ಅಬ್ದುಲ್ ರಹೀಮರು ಕಾಲು ಹಾಕುತ್ತಿರುವುದು ಸಂತೃಪ್ತಿಕರವಾಗಿದೆ. ಇನ್ನು ಅವರು ವಕಾಲತ್ತನ್ನು ಸ್ವೀಕರಿಸದೆ, ರಾಜಕೀಯ ಚಳವಳಿಗಳಲ್ಲೇ ಜೀವನ ಸವೆಯುವರೆಂದು ಪ್ರಕಟವಾಗಿದೆ. ಹಣ—ಯಶಸ್ಸುಗಳೆರಡನ್ನೂ ತೃಣೀಕರಿಸಿ, ದೇಶಸೇವೆಯಲ್ಲೇ ಭಾರತೀಯರಲ್ಲಿ ಎಷ್ಟೋ ಮಂದಿ ಜನ್ಮವನ್ನು ಧನ್ಯಗೊಳಿಸಿರುವರು. ಆದರೂ ಇಂತಹ ಪುಣ್ಯಾತ್ಮರು ಇನ್ನೆಷ್ಟೋ ಮಂದಿ ಭಾರತಮಾತೆಗೆ ಸೇವಾಗ ಬೇಕಾಗಿದೆ. ಉದ್ಯೋಗದಲ್ಲಿ ಅಗ್ರಗಣ್ಯರೆಂದು ಕಾನೂನು ವಿಶಾರದರಾದ ಅಬ್ದುಲ್ ರಹೀಮರು ಮೆರೆದಿರುವರು. ಈಗ ವಾನಪ್ರಸ್ಥದ ವೇಳೆ ಅನುಕೂಲವಾಗಿರುವಾಗ, ಅವಕಾಶವನ್ನು ತನ್ನ ಸ್ವಸಾಧನೆಗೆ ವಿನಿಯೋಗಿಸದೆ ದಿನದಲ್ಲಿ [illegible] ತಾಸು ರಾಜಕೀಯವೇ ತನ್ನ ಪ್ರಾಣವಾಯುವೆಂದು ಇವರು ದೃಢ ನಿಶ್ಚಯ ಮಾಡಿಕೊಂಡಿರುವರು. ಮುಸ್ಲಿಮರ ಜನ್ಮಸಿದ್ಧ ಹಕ್ಕುಗಳನ್ನು ಕಾಪಾಡುವುದಕ್ಕೆ ಹೇಗೆ ನಿಷ್ಠಾವಂತರಾಗಿ ಇವರಿರುವರೋ ಅಷ್ಟೆ ರಾಷ್ಟ್ರೀಯತೆಗಾಗಿ ಹೆಣಗುವವರಾಗಿದ್ದಾರೆ. ಆಗಾಗ ತನ್ನ ವಿಷದ ಹಲ್ಲುಗಳನ್ನು ಪ್ರದರ್ಶಿಸುತ್ತಾ ಮೆರೆವ ಶಾಂತಿಪ್ರಿಯರಿಗಿಂತ, ಇವರು ಎಷ್ಟೋ ಘನ ಬುದ್ಧಿಯುಳ್ಳವರು. ಶೌಕತ ಆಲಿಯವರಿಗಿಂತಲೂ ಸ್ವಜಾತಿ ಪ್ರೇಮವು ಇವರಲ್ಲಿ ಹೆಚ್ಚಾಗಿದ್ದು, ಇವರು ಹಿಂದೆ ಪ್ರತ್ಯೇಕ ಪ್ರತಿನಿಧಿತ್ವಕ್ಕಾಗಿ ಕಾದಾಡಿದವರು, ಈಗ ತನ್ನ ಅನುಭವದಿಂದ ತಪ್ಪನ್ನು ತಿಳಿದು, ಜನಾಂಗಕ್ಕಾಗಿ ಹಿತಸಾಧನೆ ಮಾಡುವುದಾದರೆ ಜಾತಿ ಸಮಾಜಗಳ ಗೊಡವೆ ಬಿಟ್ಟು ಎಲ್ಲರೂ ಒಂದೇ ಜನಾಂಗವೆಂದೇ ಕರ್ತವ್ಯ ಮಾಡಲು ನಿರ್ಧರಿಸಿರುವರು. ಇವರೂ ಚಿತ್ತರಂಜನರಂತೆ ದೇಶಬಂಧುಗಳೆಂದು ಗೌರವ ಹೊಂದುವರೆಂದು ಭರವಸೆಯಿದೆ.

ಏನು ಹುಚ್ಚಾಟ!

ಇವೇ ಕೆಲವು ದಿನಗಳಿಂದ ಹಿಂದೂಮುಸಲ್ಮಾನರು ಕಂಡ ಕಂಡಲ್ಲಿ ಮಂಡೆಯೊಡೆದು ಕೊಳ್ಳುವ ಪುಂಡಾಟಿಕೆ ಉಪಕ್ರಮಿಸಿರುವುದನ್ನು ಓದಿದರೆ ಪಶ್ಚಾತ್ತಾಪವೆನಿಸುತ್ತಿದೆ. ಸರಕಾರವೂ ಪ್ರಜಾಮುಖಂಡರ ಮಂಡಲವೂ ಶಾಂತಿಗಾಗಿ ಪೇಚಾಡಿ, ಹೇಗೂ ಈಗ ಒಂದು ಕೊಲೆ, ಒಬ್ಬರಿಗೆ ಗಾಯ ಎಂದಿಷ್ಟು ಒಂದು ದಿನದ ವದಂತಿ ಒರಲಾರಂಭವಾಗಿದೆ. ಇವೆರಡೂ ಸಮಾಜಗಳವರು [illegible] ಒಂದೇ ಕುಲದವರು, ಒಂದೇ ದೇಶವಾಸಿಗಳು, ಮತಭೇದವಾದವರಿದ್ದರೂ, ಇವರ ನೆತ್ತರೊಂದೇ ಭಾರತ ವರ್ಷದ ಅನ್ನಾಹಾರಗಳಿಂದ ಬೆಳೆದುದು. ಅರುವತ್ತು ಮಿಲಿಯ ಮುಸ್ಲಿಮರಲ್ಲಿ ಹಲವರ ಪೂರ್ವಜರು ಬೇರೆ ದೇಶಗಳಿಂದ ಇಲ್ಲಿಗೆ ಬಂದು ದಿರಬಹುದು. ನಮ್ಮ [illegible] ಬಿತ್ತಿದ ಬೀಜವು ಎಲ್ಲಿಂದ ಬಂದಿದ್ದರೇನು ಅದು ನಮ್ಮ ಪೈರಾಗುವುದಿಲ್ಲವೆ? ನಾವು ಓದುವ ಇತಿಹಾಸಗಳಲ್ಲಿ, ಬಲಾತ್ಕಾರದಿಂದಲೇ ಮತಪ್ರಚಾರ ಮಾಡಿ ಮುಸ್ಲಿಮ ಧರ್ಮವು ಇಲ್ಲಿ ಬೆಳೆಯಿತೆನ್ನುವುದಕ್ಕೂ ಆಧಾರವಿಲ್ಲವಾಗಿದೆ. ಅದು ಹಾಗಿದ್ದರೆ ಇಡೀ ಉತ್ತರ ಹಿಂದೂಸ್ಥಾನವೂ ಮುಸ್ಲಿಮಮಯವಾಗಿ ಒಂದೇ ತಲೆಯಾದರೂ ಹಿಂದುವಿನದು ಉಳಿಯುವಂತಿರಲಿಲ್ಲ. ನಮ್ಮ ದೇಶದಲ್ಲಿ ನೂರಾರು ಮತಗಳಿವೆ, ಅವುಗಳೊಳಗೆ ಜಗಳ ಕೇಳಿಬರುವುದಿಲ್ಲ. ಇವೆರಡು ಸಮಾಜಗಳೇ ಮಾತ್ರ ಆಗಾಗ ಹೆಣಗಾಡುವುವೇಕೆ? ನಮ್ಮ ದೇಶದ ಹಿಂದುಗಳು ಅನ್ಯದೇಶಗಳಲ್ಲಿ ಮುಸ್ಲಿಮರು ನಡುವೆ ವಾಸಮಾಡುತ್ತಿರುವರಾದರೂ ಅಲ್ಲಿಯಾದರೂ ಹಿಂದೂ—ಮುಸ್ಲಿಮ ಸಮಸ್ಯೆಯು ಹುಟ್ಟಿದುದಿಲ್ಲ. ಸಮೀಪದ ಅಫಘಾನಿಸ್ಥಾನವನ್ನಾದರೂ ನೋಡಿದರೆ, ನೂರಾರು ವರ್ಷಗಳಿಂದಲೂ ಹಿಂದೂಮುಸ್ಲಿಮರು ಅಲ್ಲಿನ ಮುಸ್ಲಿಮ ಅಮೀರರ ಪ್ರಜೆಗಳಾಗಿ ಸುಖವಾಗಿರುವರು. ಹಾಗಿದ್ದರೇ ನಮ್ಮ ದೇಶದಲ್ಲಿ ಮಾತ್ರ ಈ ಸಮಾಜಾಂತರ ಕಲಹಗಳ ಕಾರಣವೇನೆಂದು [illegible] ಯಂತ್ರದಿಂದಲಾದರೂ ಒಮ್ಮೆ ಶೋಧಿಸಬೇಕಾಗಿದೆ.

ಕಾರಣವೇನೂ ಇರಲಿ; ಕಾರ್ಯವು ಉತ್ತಮವಾಗಲಿ

ಎಂದೂ ಒಂದು ಗಾದೆಯಂತೆ ಹೇಳುವವರಿದ್ದಾರೆ. ಉಭಯ ಸಮಾಜಗಳೂ ಒಂದಲ್ಲ ಒಂದು ಕಾರಣದಿಂದ ಪರಸ್ಪರ ದ್ವೇಷವನ್ನು ಕಟ್ಟಿಕೊಂಡಿರಬಹುದಾದರೂ, ಹಿಂದುಗಳು ಮುಸ್ಲಿಮರಲ್ಲಿ ತಮಗಿರಬಹುದಾದ ದ್ವೇಷ, ಅಸೂಯೆ, ಸಂಶಯ, ಮೊದಲಾದುವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಎಷ್ಟೆಂದರೂ ಹಿಂದುಗಳು ಮುಸ್ಲಿಮರಿಗಿಂತ ನಾಲ್ಕುಮಡಿ ಹೆಚ್ಚಾದ ಸಂಖ್ಯೆಯಲ್ಲಿರುವರು. ಯುಗಧರ್ಮಕ್ಕೆ ತಕ್ಕಂತೆ, ಹಿಂದೂಧರ್ಮವು ಮಾರ್ಪಡಬೇಕು. ಅಸ್ಪೃಶ್ಯತೆ ಎಂಬುದು ದೂರವಾಗಬೇಕು. ಅಸ್ಪೃಶ್ಯರ ದೇವತೆಯಾದ ರುದ್ರನನ್ನು ಹಿಂದುಗಳ ತಮ್ಮ ದೇವರನ್ನಾಗಿ ಮಾಡಿಕೊಂಡು, ಆ ದೇವರಿಗಾಗಿರುವ ದೇವಾಲಯಗಳಿಗೂ ಅಸ್ಪೃಶ್ಯರು ಬಾರದಂತೆ ತಡೆಹಾಕಿರುವುದು ಶೋಚನೀಯವಲ್ಲವೆ? ಹಿಂದುಗಳು ತಮ್ಮ ಧರ್ಮವನ್ನು ಶುದ್ಧೀಕರಿಸಿಕೊಂಡು ಮುಸ್ಲಿಮರನ್ನು ಸೋದರರನ್ನಾಗಿ ಭಾವಿಸಿ ವರ್ತಿಸುತ್ತ ಬಂದರೆ ಮುಸ್ಲಿಮರ ಹೃದಯಗಳು ತಾವಾಗಿ ಮಾರ್ಪಟ್ಟು ಇಂತಹ ದ್ವೇಷವು ಕಿತ್ತುಹೋಗಲು ಅನುಕೂಲವಾಗುವುದು. ಇಬ್ಬರಲ್ಲೂ ಆಗ ಸೋದರತೆ ನೆಲೆಗೊಂಡರೆ, ಮುಂದೆ ಇತ್ತಂಡಗಳೂ ರಾಷ್ಟ್ರೀಯತೆಯೆ ತಮ್ಮ ಧರ್ಮವೆಂದು ದೃಢವಾಗಿ ನಂಬಿ, ಅದರ ಆಚರಣೆಗೆ ಕೈಹಚ್ಚಿ, ಇಂತಹ ದಂಗೆಗಳಿಂದೂ ಉಂಟಾದರೆ ಸ್ವದೇಶಕ್ಕೆ ಅಪಾರವಾದ ಕೇಡು ಉಂಟೆಂದು ತಿಳಿದು ಮುಂದೆ ವಿವೇಕದಿಂದ ವರ್ತಿಸುವರು,—ಎಂಬುದೇ ದಂಗೆಗಳನ್ನು ಟೀಕಿಸುವಾಗ ಹೇಳಬೇಕಾದ ಗೋಳ!

ನೋಟಗಳು

NOTES

ಹಾಳು ಹೆಸರಿಗೊಂದು ದೈವವು ಕೈಬಳಿಯಲ್ಲಿ ದೊರೆತಂತಾಯಿತು. ದಂಗೆಗಳಾದುವು, ಸಿಡಿಲು ಬಡೆಯಿತು, ಹಡಗು ಬೆಂಕಿಗೆ ತುತ್ತಾಯಿತು, ವಿಮಾನವು ಕೆಳಕ್ಕೆ ಬಿತ್ತು; ಇಂಡಿಯನ್ ಕ್ರಿಕೆಟ್ ಟೀಮು ಗೆದ್ದಿತು,—ಎಲ್ಲಕ್ಕೂ ಕಾರಣ ಕೊಂಗ್ರೆಸ್!

• • • •

ಶೌಕತ್ ಆಲಿಯವರು ಶಾಂತಿಪ್ರಿಯರು. ಜಗತ್ತಿನಲ್ಲಿ ಶಾಂತಿಗಾಗಿ ಪ್ರಯತ್ನಿಸುವವರು ಯಾರೂ ಇರುವರಾದರೆ, ಈ ಮೌಲಾನರೇ ಎಂದು ಅವರೇ ಸಾರುತ್ತಿರುವಾಗ, ಇನ್ನಾರ ಯಾವ ಶಿಫಾರಸೂ ಅಗತ್ಯವಿದೆಯೆ?—ಶಾಂತಿಸಾಧಕ ಸಭೆ ಮಾತ್ರ ಅವರಿಗೆ ಒಪ್ಪಲಿಲ್ಲ, ಅದಕ್ಕೆ ತಪ್ಪು ಯಾರದು?

• • • •

ಬ್ರಿಟಿಷರು ಸೂಚಿಸಿದ್ದಂತೆ ಕರಾರಿನಲ್ಲಿದ್ದ 'ರಾಜಭಕ್ತಿ ಪ್ರಮಾಣ'ದ ಒಕ್ಕಣೆಯನ್ನೆ ಐರ್ಲೆಂಡಿನಲ್ಲಿ ಡಿವೇಲರು, ಅಲ್ಲಿನ ಪಾರ್ಲಿಮೆಂಟಿನ ಶಾಸನದಿಂದ ಕಿತ್ತುಹಾಕಿದರು. ಇತರ ವಸಾಹತುಗಳೂ ಹೀಗೆ ಮಾಡುವುವೆ? ಎಂದು ಬೆದರಿಕೆಯಾಗುವುದರೊಳಗೆ, ದಕ್ಷಿಣಾಫ್ರಿಕದಿಂದ ಅಲ್ಲಿನ ಪಾರ್ಲಿಮೆಂಟ ಮೆಂಬರೊಬ್ಬರೂ ಇದೇ ರೀತಿಯ ಶಾಸನವನ್ನು ಮಾಡಲು ಮಸೂದೆ ಮುಂದೆ ತರುವರೆಂದು ನೋಟೀಸು.

• • • •

ಹೊಸ ಪ್ರಾಂತ್ಯವಾದುದೇ ತಡ ವಾಯವ್ಯ ಸರಹದ್ದಿನ ಶಾಸನ ಸಭೆಯೂ ಸೇರಿತು. ಹೊರಬಂದುದು ಮೊದಲಾಗಿ ಅಲ್ಲಿನ ಬಜೆಟು. ಅಪ್ಯಾಯಿತರಾದ ಪ್ರಾಂತಿಕ ಬಂಧುಗಳು ಚರ್ಚೆಗೆ ಆರಂಭಿಸಿ

• • • •

ಸರಕಾರವನ್ನು ಕೊಂಡಾಡುವ ಬದಲಾಗಿ—ಒರ್ಡಿನೆನ್ಸುಗಳೇ ಮೊದಲಾದುವನ್ನೆಲ್ಲ ರದ್ದುಪಡಿಸಿರಿ. ಒಟ್ಟು ಕಂದಾಯ ೬೫ ಲಕ್ಷದಲ್ಲಿ ಪೋಲೀಸ ಇಲಾಖೆಗೆ ೩೩ ಲಕ್ಷ, ವಿದ್ಯಾಭ್ಯಾಸ ರಸ್ತೆ—ವೈದ್ಯಕೀಯ ಸಹಾಯ ಮೊದಲಾದುವಕ್ಕೆಲ್ಲಿಂದ ಹಣ ಉಳಿದೀತ? ಎಂದು ಟೀಕೆಗೆ [illegible] ಆರಂಭಿಸಿರುವರು. ದೇಶ ಸ್ವಾತಂತ್ರ್ಯವಲ್ಲಿ, ಕೌನ್ಸಿಲು ಹೊಸ ಕೊಟ್ಟುದಕ್ಕೆ ಕೃತಜ್ಞರಾಗಿ ಮೌನವಾಗಿದ್ದರೆ ಚಂದವಾಗದೆ? ಈ ಸಂಖ್ಯೆಗಳಿಂದೇನು? ನಮ್ಮ ಯಾ ಇತರ ಪ್ರಾಂತ್ಯಗಳ ಬಜೆಟು ನೋಡಿರಿ. ನಿಮ್ಮದೇನು ಬೇರೆ ಲೋಕವೇ?

• • • •

ಶ್ರೀಮಂತರಾದ ಕೆಲವರೇ ಜಗತ್ತಿನ ಹಣವನ್ನೆಲ್ಲ ಕೂಡಿಸಿಟ್ಟುಕೊಂಡು, ಉಳಿದೆಲ್ಲರಿಗೆ ಭಿಕ್ಷಾ ಪಾತ್ರೆ ಕೊಡಲು ನಿರ್ಧರಿಸಿ ಕೊನೆಗೆ ಅಂತಹ ದರಿದ್ರರೊಡನೆ ಮಣ್ಣುಪಾಲಾಗುವವರಲ್ಲಿ ಮೊದಲನೆಯ [illegible] —ಎಂದು ಪೋಪ್ ಸ್ವಾಮಿಯರ ರಾಯಸ.

• • • •

ಸಮಾನಸ್ಕಂಧರೆ ಎಂದರೇನಯ್ಯ ಎಂದು ಡಿವೆಲರು ಕೇಳುವರು. ಎರಡು ರಾಷ್ಟ್ರಗಳ ಹೆಗಲು ಒಂದೇ ಎತ್ತರವಾಗಿರಬೇಕು ಎಂದರ್ಥ. ಸರಿ ಎತ್ತರ ಇದ್ದರೆ ಸಾಕು. ಅವರವರ ಹೆಗಲ ಮೇಲೆ ಭಾರದ ಜವಾಬ್ದಾರಿ ಮಾತ್ರ ಭಿನ್ನ.

• • • •

ಪುನಃ ಪ್ರಕಟವಾದ ಫಲ ಗಾಂಧಿಜಿಯವರು ಜೂನ [illegible] ಒಂದುವಾರಕ್ಕೆ ಮೊದಲೇ ಬಿಡುಗಡೆಯಾಗುವರೆಂದೂ ಬ್ರಿಟಿಷ ಮಂತ್ರಿಮಂಡಲದೊಳಗೆ ಒಡಕು ಹುಟ್ಟುವುದೆಂದೂ, ಪುನಃ ರೌಂಡ್‌ಟೇಬಲ್ ಕೊನ್ಫರನ್ಸ ನವಂಬರದಲ್ಲಿ ಕೂಡುವುದೆಂದೂ, ಮಹಾತ್ಮರು ಅದಕ್ಕೆ ಕೊಂಗ್ರೆಸ್ ವಿರೋಧಿಸಿದರೂ ತೆರಳುವರೆಂದೂ ಹೊಸದಿಲ್ಲಿ ಜೋಯಿಸರ ಪ್ರವಾದವಿದೆ.

1. Good Riding Quality.
2. Gripping Tread
3. Economical wear.
4. Maximum Resistance to shock

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ,
ಸಾಮ್ರಾಜ್ಯ ಪರಿಷತ್ತು . . . ೧
ಸ್ಫುಟವಿಚಾರಗಳು . .
ಸೋಟಿಗಳು . . . ೪
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೬
ಒಳದೇಶ ವರ್ತಮಾನ . ೬
ದಕ್ಷಿಣ ಕನ್ನಡ — ಮಂಗಳೂರು, ಉಡುಪಿ, ಕಾರ್ಕಳ, ಅಜೆಕಾರು, ಫರಂಗಿಪೇಟೆ, ಬಂಟ್ವಾಳ. . ೮
ವಿವಿಧ ಸಮಾಚಾರಗಳು . . ೧೧
ಹಿಂದೂಮುಸಲ್ಮಾನರಿಗೊಂದು ಸಲಾಂ! . . ೨
ಮುಸೋಲಿನಿ ಅಥವಾ ದೈವಸತ್ವಪರೀಕ್ಷೆ. . ೯
ಮಕ್ಕಳ ಕೂಟದ ಪ್ರಥಮ ಸಮ್ಮೇಳನ . ೧೪

ಸ್ವದೇಶಾಭಿಮಾನಿ.

ತಾ. ೨೭ನೇ ಶುಕ್ರವಾರ ಮೇ ೧೯೩೨

ಸಾಮ್ರಾಜ್ಯ ಪರಿಷತ್ತು

ಅಮೇರಿಕದ ಉತ್ತರಭಾಗವಾಗಿರುವ ಕೆನಡಾ ದೇಶವು ಬ್ರಿಟಿಷ ಡೊಮಿನಿಯನ್ ರಾಜ್ಯವಾಗಿರುತ್ತದೆ. ಅಲ್ಲಿಯ ಒಟ್ಟಾವಾ ಎಂಬ ಶಹರಿನಲ್ಲಿ ಬ್ರಿಟಿಷ ಸಾಮ್ರಾಜ್ಯ ಪರಿಷತ್ತು ಸೇರುವುದು. ಇಂಗ್ಲೆಂಡಿನ ಸಾಮ್ರಾಜ್ಯವು ವಿಶಾಲವಿದೆ. ಕನಡಾ, ದಕ್ಷಿಣಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಜೀಲೇಂಡ್, ಐರ್ಲೆಂಡ್, ಮುಂತಾದ ಹಲವು ರಾಜ್ಯಗಳೂ ವಸಾಹತುಗಳೂ ಈ ಸಾಮ್ರಾಜ್ಯದೊಳಗಿನವುಗಳಾಗಿದ್ದು ಈ ಪರಿಷತ್ತಿಗೆ ಪ್ರತಿನಿಧಿಗಳನ್ನು ಕಳುಹಿಸತಕ್ಕವುಗಳಾಗಿವೆ. ಹಾಗೆಯೇ ಹಿಂದೂಸ್ಥಾನವೂ ಕೆಲವು ಪ್ರತಿನಿಧಿಗಳನ್ನು ಕಳುಹಿಸುವುದು — ಹಿಂದೂಸ್ಥಾನವೆಂದರೆ ಹಿಂದೀಯ ಪ್ರಜೆಗಳಲ್ಲ ಹಿಂದೀ ಸರಕಾರ, ಹಿಂದೀ ಸರಕಾರವೆಂದರೆ ಹಿಂದೀ ಸರಕಾರವಲ್ಲ, ಬ್ರಿಟಿಷ ಸರಕಾರ. ಅಂತೂ ಸಾಮ್ರಾಜ್ಯ ಪರಿಷತ್ತೊಂದು ಯಶಸ್ವಿಯಾಗಿ ನಡಿಯಬೇಕು. ಹಿಂದೀಯರೂ ಅದರಲ್ಲಿರುವರೆಂದು ತೋರಿಸಬೇಕು. ಹಿಂದೂಸ್ಥಾನವನ್ನು ಬ್ರಿಟಿಷ ಸಾಮ್ರಾಜ್ಯವು ತನ್ನ ಹಿತ, ಲಾಭಗಳಿಗಾಗಿ ದುಡಿಸಿ ಗೇಯಿಸಬೇಕು. ಇದಕ್ಕಾಗಿ ಪರಿಷತ್ತಿಗೆ "ಪ್ರತಿನಿಧಿ"ಗಳೆಂದು ಬ್ರಿಟಿಷ ಸೂತ್ರ ಸಂಚಾಲನೆಗೆ ನಲಿಯಬಲ್ಲ ಕೆಲವು ಹಿಂದೀಯರು ಹೊರಡುವರು. ಇದರ ಮೇಲೆ ಬ್ರಿಟಿಷ ಸಾಮ್ರಾಜ್ಯದಲ್ಲಿ ಹಿಂದೀಯರಿಗೆ ಸಮಾನತೆಯಿದೆಯೆಂಬುದಕ್ಕೆ ಬೇರೆ ಸಾಕ್ಷ್ಯ ಬೇಕೆ! ನಾಮದಾರ್ ಶ್ರೀನಿವಾಸ ಶಾಸ್ತ್ರಿಗಳು, ಸರ್ ಸಿ. ಪಿ. ರಾಮಸ್ವಾಮಿಅಯ್ಯರರು, ಮುಂತಾದ ವಿಚಕ್ಷಣ, ಪ್ರತಿಭಾಸಂಪನ್ನ ಹಿಂದೀಯರೇ ಇಂತಹ ಕೆಲಸಗಳಿಗೆ ಉಮೇದ್ವಾರರಿರುವಾಗ ಈಗ ಹೊರಡುವ 'ಪ್ರತಿನಿಧಿ'ಗಳ ಪಾಡೇನು?

ಸಾಮ್ರಾಜ್ಯ ಪರಿಷತ್ತಿನ ಈ ಸಂದರ್ಭದಲ್ಲಿ ಸಾಮ್ರಾಜ್ಯದರ್ಪವೂ ಸ್ವಾರ್ಥವೂ ಪ್ರತಿ ಬ್ರಿಟಿಷರವನನ್ನು ಆವರಿಸಿರುವುದು ಆಶ್ಚರ್ಯವಲ್ಲ. ಆದರೆ ವಿಚಾರಕ್ರಾಂತಿಯನ್ನುಂಟುಮಾಡಬಲ್ಲ, ಅರ್ಥಾತ್ ಮಾಡುವೆನೆಂಬ ಧ್ಯೇಯವನ್ನಿಟ್ಟುಕೊಂಡ ಮಿ| ರಾಮ್ಸೆ ಮೆಕ್ಡೊನಾಲ್ಡರೂ ತಮ್ಮ ಪ್ರಧಾನಮಂತ್ರಿ ಪದವಿಯಲ್ಲಿ ಈ ಸಾಮ್ರಾಜ್ಯದರ್ಪಕ್ಕೆ ಒಳಬೀಳುವರೆಂಬುದು ವ್ಯಕ್ತಿಯ ರಾಜಕೀಯ ಭಾವವಿಕಾಸಕ್ಕೆ ಒಂದು ವ್ಯಂಗಾತ್ಮಕ ಉದಾಹರಣೆಯಾಗಿರುತ್ತದೆ. ಸಾಮ್ರಾಜ್ಯ ದಿನವೆಂಬುದನ್ನು ಇಂಗ್ಲೆಂಡು ಮೇ ೨೪ನೇ ತಾರೀಕಿನ ದಿನ ಆಚರಿಸುತ್ತಿದೆ. ಆ ದಿನ ಮಿ| ಮೆಕ್ಡೊನಾಲ್ಡರು ಹಿಂದೀ ಧೋರಣದ ವಿಷಯದಲ್ಲಿ ಹೀಗೆಂದರು.—

> ಕಳೆದ ವರ್ಷ, ಹಿಂದೀ ಸಮಸ್ಯೆಯ ತೀರ್ಮಾನಕ್ಕೆ ಕಾಂಗ್ರೆಸ್ ಉಪಾಯಗಳಿಂದ ಬಹಳ ವಿಘ್ನಗಳು ತಂದೊಡ್ಡಲ್ಪಟ್ಟವು. ಯಾವ ದೇಶವು ತನ್ನ ಕಠಿಣ ಕೆಲಸಗಳನ್ನು ಎದುರಿಸಲು ಹೆದರಿ ಪ್ರತಿರೋಧಿಯ ಕೇಳುವಿಕೆಗೆ ಒಪ್ಪುತ್ತದೊ ಅದು ಇಡೀ ಲೋಕಕ್ಕೇನೆ ಅಪಕಾರವನ್ನು ಮಾಡಿದಂತಾಗುತ್ತದೆ, ಮತ್ತು ವಿವೇಕ ಮತ್ತು ಸ್ವಾತಂತ್ರ್ಯದ ಬದಲಿಗೆ ಹಿಂಸೆ, ಕಲಹ ಮತ್ತು ವಿದ್ವೇಷದ ಶಕ್ತಿಗಳನ್ನು ಸಡಿಲು ಬಿಟ್ಟಂತಾಗುತ್ತದೆ. ರಾಜಕೀಯ ಧೋರಣದಲ್ಲಿ ವಿಚಾರಹೀನ ಉದಾರತೆಯು ಖಂಡನೀಯವಾದುದು.

ಇತ್ಯಾದಿ. ಹಿಂದಿನ ಲೇಬರ್ ಗವರ್ನಮೆಂಟಿನ ರಾಮ್ಸೆ ಮೆಕ್ಡೊನಾಲ್ಡರೆಲ್ಲಿ? ನೆಶನಲ್ ಗವರ್ನಮೆಂಟಿನ ಮೆಕ್ಡೊನಾಲ್ಡರೆಲ್ಲಿ? ಆಗಿನ ವಿಚಾರಗಳಿಗೂ ಈಗಿನ ವಿಚಾರಗಳಿಗೂ ಅಭ್ಯಂತರವೆಷ್ಟು! ಆದರೆ ತಾನೇ ಕೈಕೊಟ್ಟ, ಬೆಳೆಸಿ ಬಲಮಾಡಿ, ಅದರ ಸಹಾಯದಿಂದ ಸಾಮ್ರಾಜ್ಯದಶ್ರೇಷ್ಠತಮ ಪದವಿಯನ್ನು ಸೇರಿದ ಮೇಲೆ ಅದೇ ಪಕ್ಷವನ್ನು ಸಮೂಲ ನಾಶಮಾಡಿ ಬ್ರಿಟಿಷ ರಾಜಕೀಯ ವಾತಾವರಣದಲ್ಲಿಯೇ ಇಂಗಣ (Sommersault) ಹೊಡೆದ ರಾಮ್ಸೆ ಮೆಕ್ಡೊನಾಲ್ಡರು, ತಾವು ಈಗ ಕೃತಜ್ಞರಾಗಿರಬೇಕಾದ ಆ ಕನ್ಸರ್ವೇಟಿವ್ ಪಕ್ಷವನ್ನು ಸರ್ವ ವಿಧದಿಂದಲಾದರೂ ಮೆಚ್ಚಿಸಿ ತನ್ನ ಸ್ಥಾನವನ್ನು ರಕ್ಷಿಸಿಕೊಳ್ಳಲು ಯತ್ನಿಸುವುದು ಆಶ್ಚರ್ಯವಲ್ಲ.

ಅಂತೂ ಸಾಮ್ರಾಜ್ಯ ಪರಿಷತ್ತಿನ ಉದ್ದೇಶವೇನೆಂದು ಇದರಿಂದ ತಿಳಿಯಬೇಕು. ಸಾಮ್ರಾಜ್ಯದ ಇತರ ಎಲ್ಲಾ ಅಂಗಗಳೂ ಸ್ವತಂತ್ರವಾಗಿದ್ದು ಹೆಸರಿಗೆ ಮಾತ್ರ ಇಂಗ್ಲೆಂಡನ್ನು ಮಾನಿಸುತ್ತವೆ. ನಿಜವಾಗಿ ಇಂಗ್ಲೆಂಡಿನ ಸಾಮ್ರಾಜ್ಯವು ಹಿಂದೂಸ್ಥಾನವೊಂದೇ, ಅದನ್ನು ಬಿಟ್ಟರೆ ಸಾಮ್ರಾಜ್ಯವೆಲ್ಲಿ? ಐರ್ಲೆಂಡು ತನ್ನ ಪ್ರಮಾಣವಾಕ್ಯ (Oath) ವನ್ನು ತೆಗೆದುಹಾಕಿತು. ಇತರರೂ ಅದನ್ನು ಬೇಗನೆ ತೆಗೆವರು. ಇಂಗ್ಲೆಂಡಿನ ಸೈನ್ಯಗಳನ್ನು ಹೊತ್ತು ಇಂಗ್ಲೆಂಡಿನ ಲಾಭಗಳನ್ನು ವೃದ್ಧೀಕರಿಸಿ ಲೋಕಕ್ಕೆ 'ಅತ್ಯುಚ್ಚ'ದ ಉದಾಹರಣೆಯನ್ನು ಕೊಡಬೇಕಾದುದು ಹಿಂದೂಸ್ಥಾನವೇ ಸರಿ.

ವಿದೇಶ ವರ್ತಮಾನ.

— ಲೋರ್ಡ್ ಲೋಥಿಯನರು ಇಂಗ್ಲಾಂಡಿನಲ್ಲಿ ಹಿಂದೂದೇಶದ ಕುರಿತು ಹೇಳುತ್ತಾ — ಹಿಂದೀಯರಿಗೆ ನಾವು ಸರ್ವಸಮ್ಮತವಾದ ರಾಜ್ಯರಚನಾದಾನವನ್ನು ಮಾಡದೆ ಉಪಾಯವೇ ಇಲ್ಲ. ಅದನ್ನು ತ್ವರಿತದಲ್ಲಿ ಕೊಡಬೇಕು ಎಂದರು.

'ದಬ್ಬಾಳಿಕೆಯಿಂದ ಬಹಿಷ್ಕಾರವು ಬಲವಾದೀತು. ಕ್ರಾಂತಿಯು ಕೆರಳಿದೀತು, ಹಿಂದೀಯರೊಳಗೂ ಆಂಗ್ಲೇಯರೊಳಗೂ ಭೇದಬುದ್ಧಿಯುತ್ಪನ್ನವಾದೀತು. ಸರಕಾರದ ಮೇಲೆ ಜನರಿಗೆ ಭರವಸೆಯು ತಪ್ಪೀತು, ಮಧ್ಯಮಸ್ಥಿತಿಯಲ್ಲಿದ್ದ ರಾಜಭಕ್ತರೂ ಸರಕಾರವನ್ನು ದೂಷಿಸುವ ಸಂದರ್ಭವು ಬಂದೀತು. ಹಿಂದೀಯರು ಯಾವ ರೀತಿಯಲ್ಲೂ ಬಗ್ಗದ ವಿಷಮಾವಸ್ಥೆಯು ಸನ್ನಿಹಿತವಾದೀತು' ಎಂದು ದೀನಬಂಧು ಸಿ. ಎಫ್. ಎಂಡ್ರ್ಯೂಸರು ಲಂಡನಿನಲ್ಲಿ ಎಚ್ಚರಕೊಟ್ಟರು.

— 'ಜಹಜಿನಲ್ಲಿ ಬೆಂಕಿಯು ನಾಗಾಲೋಟದಿಂದ ಉರಿಯುತ್ತು ಪ್ರಯಾಣಿಕರನ್ನು ನಾನು ಆದಷ್ಟು ತ್ವರಿತದಿಂದ ಕೆಳಗಿಳಿಸಿದೆನು. ಕೆಲವರು ಕೋಣೆಗಳೊಳಗೆ ಸಿಲುಕಿಬಿದ್ದು ಮೃತಿಯನ್ನೈದಿದರು. ನನ್ನನ್ನು ಒಂದು ರಷ್ಯನ್ ಸ್ಟೀಮರಿನವರು ಹೆಕ್ಕಿದರು. ೬೮೮ ಮಂದಿಗಳು ರಕ್ಷಿಸಲ್ಪಟ್ಟರು' ಎಂದು ಮೊನ್ನೆ ಕಡಲ ನಡುವಿನಲ್ಲಿ ಅಗ್ನಿಗಾಹುತಿಯಾದ ಜೋರ್ಜಸ್ ಫಿಲಿಪ್ಪರ್ ಎಂಬ ಸ್ಟೀಮರಿನ ಕೆಪ್ಟನನ ಹೇಳಿಕೆ. ಆ ಸ್ಟೀಮರು ತಾ. ೨೦ನೇ ದಿನ ಮುಳುಗಿತು.

'ಇನ್ನುಮುಂದೆ ಏನು ಮಾಡುವುದು?' ಎಂಬ ಪ್ರಶ್ನೆಯು ಈಗ ಲಂಡನಿನಲ್ಲಿ ಚರ್ಚಿಸಲ್ಪಡುತ್ತಿದೆ. ದಬ್ಬಾಳಿಕೆಯಿಂದ ಪ್ರಯೋಜನವಿಲ್ಲವೆಂದು ಎಲ್ಲಾ ಸರಕಾರದಧಿಕಾರಿಗಳೂ ಕಂಡುಕೊಂಡಿರುವರಾಗಿ ತಿಳಿದು ಬಂದಿದೆ.

ಒಳದೇಶ ವರ್ತಮಾನ

— ಲಾಹೋರಿನ ಡಿ. ಎ. ವಿ. ಕೊಲೇಜಿನ ಉದ್ಯೋಗಸ್ಥನೊಬ್ಬನು ಅಲ್ಲಿಯ ಡಿಸ್ಟ್ರಿಕ್ಟ್ ಕೋರ್ಟ್ ಪೋಸ್ಟ್ ಆಫೀಸಿನ ಟಪ್ಪಾಲುಪೆಟ್ಟಿಗೆಯೊಳಗೆ ಅಗ್ನಿಕಾರಕ ವಸ್ತುಗಳನ್ನು ಹಾಕಿ, ಕಾಗದಗಳನ್ನು ಸುಡಲು ಯತ್ನಿಸುತ್ತಿದ್ದುದನ್ನು ತಾನು ನೋಡಿದ್ದೇನೆಂದು ಪೋಸ್ಟ್ ಮಾಸ್ಟರರು ಹೇಳಿ ಆರೋಪಿತನು ವಿಚಾರಣೆಗೊಳಗಾಗಿರುವನು.

— ಕಲ್ಕತ್ತದಲ್ಲಿ ವಿಪಿನಚಂದ್ರಪಾಲರೆಂಬ ರಾಷ್ಟ್ರಧುರೀಣರು ಕಾಲವಾದುದಕ್ಕೆ ವಿಷಾದಿಸಿ ಬಂಗಾಳ ಗವರ್ನರರು ತನ್ನ ಸಹತಾಪ ತಂತಿಯನ್ನು ಮೃತರ ಕುಟುಂಬಕ್ಕೆ ರವಾನಿಸಿರುವರು.

— ಪೇಶಾವರದ ಬಜಾರದಲ್ಲಿ ಕೆಂಪಂಗಿಯವರು ವಿದೇಶಿ ವಸ್ತ್ರದಂಗಡಿಗಳನ್ನು ಪಹರೆಮಾಡಿದ್ದಕ್ಕೆ ಕೈದುಮಾಡಲ್ಪಟ್ಟಿರುವರು.

— ಮುಂಬಾಯಿಯಲ್ಲಿ ಕಳೆದವಾರ ಪಿಕೆಟಿಂಗಿನ ಸುದ್ದಿಯಿಲ್ಲದಿದ್ದರೂ ಈ ವಾರದ ಪ್ರಥಮದಲ್ಲಿ ಅಲ್ಲಿ ಪಿಕೆಟಿಂಗು ಆರಂಭವಾಗಿದೆ. ವೈಟವೇಯವರ ಕಂಪೆನಿಯು ಪಹರೆಗೊಳಗಾಗುತ್ತಲೂ ಪಿಕೆಟರರು ಸೆರೆಮನೆಗೆ ನಡೆಯುತ್ತಲೂ ಇರುವರು.

— ಮುಂಬಾಯಿಯ ಬೊಂಬೇ ಕ್ರೊನಿಕಲ್ ಪತ್ರಿಕೆಯು ಈ ವಾರದೊಳಗೆ ೬೦೦೦ ರೂಪಾಯಿ ಭದ್ರತೆಯನ್ನು ಕೊಡಬೇಕಾಗಿ ಆಜ್ಞೆಯಾಗಿದೆ. ಬಿ. ಜಿ. ಹೋರ್ನಿಮನ್ನರ ಒಂದು ಲೇಖನದ ರಾಜದ್ರೋಹದ ವಿಚಾರಗಳು ಅದಕ್ಕೆ ಕಾರಣವೆಂದು ತಿಳಿದುಬಂದಿದೆ.

"ಬೊಂಬೇ ಸಮಾಚಾರ"ದ ಸಂಪಾದಕರಾದ ಶ್ರೀ. ಜಯಂತೀಲಾಲ್ ಹತಿಟ್ಯಾ ಎಂಬವರು ಎಮರ್ಜೆನ್ಸಿ ಪವರ್ಸ್ ಶಾಸನದ ಮೇರೆಗೆ ಕೈದುಮಾಡಲ್ಪಟ್ಟಿರುವರು.

ಗಾಂಧಿಜೀಯವರ 'ನವಜೀವನ' ಮುದ್ರಣಾಲಯದ ಮೆನೇಜರರಾದ ಶ್ರೀ ಜೀವಾಂಜಿ ಎಂಬವರಿಗೆ ಒಂದು ವರ್ಷದ ಕಠಿಣ ಸಜೆಯು ವಿಧಿಸಲ್ಪಟ್ಟಿತು.

— ಸಿರಾಜ್‌ಗಂಜಿನ ಜುಮ್ನಾ ನದಿಯಲ್ಲಿ ೧೧ ಜನರು ಕುಳಿತಿದ್ದ ಒಂದು ದೋಣಿಯು ಒಂದು ಜಹಜಿನ ಬಳಿಯಿಂದ ಹೋಗುತ್ತಿರುವಾಗ ಅದಕ್ಕೆ ಢಕ್ಕೆ ಬಡೆದು ದೋ[illegible] ಕವಚಿಬಿದ್ದು ಅದರಲ್ಲಿದ್ದ ಸ್ತ್ರೀಪುರುಷರೂ ಮಕ್ಕಳೂ ಹೊ[illegible] ನಾಲ್ಕು ಜನರ ಶವಗಳು ದೊರೆತಿರುವುದಿಲ್ಲ. ಇಬ್ಬರು ರಕ್ಷಿ[illegible]ರು.

— ಅಲ್ಲಹಾಬಾದಿನಲ್ಲಿ ತಾ. ೨೫ನೇ ದಿನ ಜರಗಲಿದ್ದ ಜಿಲ್ಲಾ ರಾಜಕೀಯ ಪರಿಷತ್ತಿಗೆ ಹಳ್ಳಿಗರು ಹೋಗಲಿರುವರೆಂಬ ವದಂತಿಯನ್ನು ಕೇಳಿ ಅಲ್ಲಿಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ರೈಲ್ವೇ ಸ್ಟೇಶನಿನಲ್ಲಿ ಪೋಲೀಸ ಪಹರೆಯನ್ನಿಟ್ಟರು.

ತಿನ್ನವೆಲ್ಲಿಯ ಕೊಯಿಲ್‌ಪತ್ತಿ ರೈಲ್ವೇ ಸ್ಟೇಶನನ್ನು ಒಬ್ಬಳು ಸ್ತ್ರೀಯು ಒಬ್ಬ ಹುಡುಗನೊಡನೆ ದಾಟುತ್ತಿರುವಾಗ ಒಂದು ಬೊಂಬು ಒಡೆದು ಅವರಿಬ್ಬರಿಗೂ ಜಖಂ ಆಯಿತು. ಶೋಧೆಯಾಗುತ್ತಲಿದೆ.

ಮಂದ್ರಾಸಿನ ಜೋರ್ಜ್ ಟೌನ್ ಮಾರ್ಗದ ಬಳಿ ಒಂದು ಅಂಗಡಿಯಲ್ಲಿ ಭಗತ್‌ಸಿಂಗನ ಪಟದ ೪೦೦ ಪ್ರತಿಗಳಿದ್ದುದನ್ನು ನೋಡಿ ಪೋಲೀಸರು ಅವುಗಳನ್ನು ವಶೀಕರಿಸಿಕೊಂಡರು.

ನಾಗಪುರದ ಸೆನೂಯು ಜೈಲಿನಲ್ಲಿರುವ ಶ್ರೀ ಸುಭಾಷ್ಚಂದ್ರ ಬೋಸರು ತೂಕದಲ್ಲಿ ೩೮ ಪೌಂಡುಗಳಷ್ಟು ಕಡಿಮೆಯಾಗಿರುವರು. ಉದರರೋಗದಿಂದ ಬಾಧಿಸಲ್ಪಡುತ್ತಿರುವರು.

ಕಮಿಶನರರಾದ ಗಿಬ್ಸನ್ ಎಂಬವರ ಕೊಲೆಗೆ ಯತ್ನಿಸಿದ ರಾಮಚಂದ್ರ ಬಪಟ ಎಂಬವನಿಗೆ ಹತ್ತು ವರ್ಷಗಳ ಕಠಿಣ ಸಜೆಯು ಅಜ್ಮೀರದಲ್ಲಿ ವಿಧಿಸಲ್ಪಟ್ಟಿತು.

— ಗುಜರಾಥ್ ಸಮಾಚಾರ ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ ಇಂದ್ರವರ್ಧನ ಎಂಬವರನ್ನು ದಸ್ತಗಿರಿಮಾಡಿ ಒಂದು ವರ್ಷದ ಕಠಿಣ ಸಜೆ ವಿಧಿಸಿದರು.

ಕಳೆದ ತಾ. ೨೨ರಲ್ಲಿ ಡಾ. ಅಂಬೇಡ್ಕರರು ಪೂನಾಕ್ಕೆ ಹೋಗಿದ್ದರು. ಅವರು ಅಲ್ಲಿಯ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಪ್ರತ್ಯೇಕ ಪ್ರಾತಿನಿಧ್ಯವೂ ಸರಕಾರದ ಸೇವೆಯೂ ಆಹಾರವೂ ಬಟ್ಟೆಬರೆಗಳೂ, ವಿದ್ಯೆಯೂ ಮತ್ತು ಸುಸಂದರ್ಭಗಳೂ ಪತಿತವರ್ಗದವರಿಗೆ ಆಗತ್ಯವಿರುವಂತಹುಗಳು ಎಂದರು.

— ನಾಗಪುರದ ಸೆನೂಯು ಜೈಲಿನಲ್ಲಿದ್ದ ಶ್ರೀಗಳಾದ ಅಭ್ಯಂಕರ್ ಮತ್ತು ಎಂ. ಎಸ್. ಅನಿಯವರನ್ನು ಬಿಟಿಲ್ ಜೈಲಿಗೆ ವರ್ಗಾಯಿಸಿದರು.

— ಕಾಶ್ಮೀರದಲ್ಲಿ ಹಿಂದೂಮುಸ್ಲಿಮ್ ವೈಷಮ್ಯವು ಕಡಿಮೆಯಾಗಿಲ್ಲ. ಮಹಾರಾಜರೆದುರು ಪ್ರದರ್ಶನಗಳಾಗಿ ಲಾಠಿ ಪ್ರಹರವು ನಡೆದು ಅನೇಕರು ಜಖಂಗೊಂಡು ಸೆರೆಮನೆಗೆ ಹೋದರು. ಶಸ್ತ್ರ ನಿಶಾನೆಯ ಮೆರವಣಿಗೆಯು ನಡೆಯಿತು.

— ಕುಮಾರಿ ಮಣಿಬೆನ್ ಪಟೇಲ್ (ಸರ್ದಾರ್ ವಲ್ಲಭಾಯಿಯವರ ಪುತ್ರಿ) ಇವರನ್ನು ಬೆಳಗಾಂವ ಜೈಲಿನಿಂದ ಬಿಟ್ಟರು.

— ಕುಂಭಕೋಣದ ಕನ್ನಿಯಾ ನಾಟಕ ಮಂಡಳಿಯ ಸ್ಟೇಜ್ ಮೇಸ್ತ್ರಿಯೊಬ್ಬನು ನಾಟಕ ಪ್ರಾರಂಭವಾಗುವಾಗ ಪರದೆಗಳನ್ನು ಸರಿಪಡಿಸುತ್ತಿದ್ದಾಗ ಹೃದ್ರೋಗದಿಂದ ನರಳಿ ಅಲ್ಲೇ ಮಡಿದುಬಿದ್ದನು.

— ನಾಗಪುರದಲ್ಲಿ ಮುದುಕಿಯೊಬ್ಬಳು ಒಂದು ಮಗುವಿನೊಡನೆ ಮಾರ್ಗದ ಮೇಲೆ ನಡೆಯುತ್ತಿರುವಾಗ, ಅವರೆದುರಿನಲ್ಲಿ ರಟ್ಟಿನ ಬೆಂಡಿನಂತಿದ್ದ ಒಂದು ಬೊಂಬು ಸ್ಫೋಟನವಾಗಿ ಇಬ್ಬರಿಗೂ ಜಖಂ ಉಂಟಾಯಿತು.

— ಅಲ್ಲಹಾಬಾದಿನ ಡಾ| ಕೈಲಾಸನಾಥ ಕಾಟ್ಜು ಎಂಬವರು ಮೋಟರ್ ಕಾರಿನಲ್ಲಿ ತನ್ನ ಹೆಂಡತಿಮಕ್ಕಳೊಡನೆ ಹೋಗುತ್ತಿರುವಾಗ ಮೋಟರು ಅಡಿಮೇಲಾಗಿ ಬಿದ್ದು ಡ್ರೈವರನು ಮಡಿದನು. ಉಳಿದವರಿಗೆ ಜಖಂ ಆಗಿದೆಯಾದರೂ ಪ್ರಾಣಾಪಾಯವುಂಟಾಗಲಿಲ್ಲ.

— ಮಿಡ್ನಾಪುರದಲ್ಲಿ ಕೊಲೆಮಾಡಲ್ಪಟ್ಟ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಡೋಗ್ಲಸ್ ದೊರೆಯವರು ತನಗೆ ಅಪಾಯವು ಖಂಡಿತವಾಗಿಯೂ ಸಂಭವಿಸಲಿದೆಯೆಂದು ಸಾಯುವ ಮೊದಲೇ ಒಬ್ಬ ಮಿತ್ರರಿಗೆ ಬರೆದಿದ್ದರೆಂದೂ, ತನ್ನದು ಇದೇ ಕಡೇ ಪತ್ರವೆಂದು ಮಿತ್ರನಿಗೆ ಸೂಚಿಸಿದ್ದರೆಂದೂ ತಿಳಿದುಬಂದಿದೆ.

* * *

ದಕ್ಷಿಣ ಕನ್ನಡ

ಮಂಗಳೂರು: — ಇಲ್ಲಿಯ ಪೋಲೀಸ್ ಸುಪರಿಂಟೆಂಡೆಂಟರಾಗಿದ್ದ ಶ್ರೀ ರಾಜಗೋಪಾಲ ತಂಬಿಸರವರಿಗೆ ಕರ್ನೂಲಿಗೆ ವರ್ಗವಾಯಿತಷ್ಟೆ! ಅವರು ಮೊನ್ನೆ ಆದಿತ್ಯವಾರ ಅಲ್ಲಿಗೆ ಅನೇಕ ಆಫೀಸರರ ಬೀಳ್ಕೊಡುವಿಕೆಯ ನಂತರ ಹೋದರು. ಅವರ ಬದಲಿಗೆ ವಿ.ಡಬ್ಲ್ಯು. ಎಚ್. ರ್‍ಯಾಟ್ ಎಂಬವರು ಬಂದು ತಾ ೨೧ನೇ ದಿನ ಚಾರ್ಜು ವಹಿಸಿಕೊಂಡರು

ಇಲ್ಲಿ ಕೊಂಗ್ರೆಸ್ ಕೆಲಸಗಾರರಾಗಿದ್ದು ಕಳೆದ ವರ್ಷ ಜೈಲಿಗೆ ಹೋಗಿದ್ದ ಕಾಂಡೇಶ್ವರದ ಶ್ರೀ ಶೇಷಪ್ಪ ಶೆಟ್ಟರ ಮನೆಯನ್ನು ಪೋಲೀಸರು ಜಪ್ತಿ ನಡೆಸಿ, ಕೊಂಗ್ರೆಸ್ ಸೈಕ್ಲೊಸ್ಟೈಲ್ ಯಂತ್ರವು ಸಿಗುವುದೋ ಎಂದು ಹುಡುಕಿದರು ಆದರೆ ಏನೂ ಸಿಗಲಿಲ್ಲವಂತೆ ಅಲ್ಲಿಯೇ ಸಮೀಪ ಇರುವ ಶ್ರೀ ಕೃಷ್ಣೋಪಾಧ್ಯಾಯರ ಮನೆಯಲ್ಲೂ ಜಪ್ತಿಯು ನಡೆಯಿತು.

ಮಂಗಳವಾರ ದಿನ ಸಂಜೆ ಕೆಲವು ಕೊಂಗ್ರೆಸ್ ಕೆಲಸಗಾರರು ಕೂಡಿ ಮೆರವಣಿಗೆಯನ್ನು ನಡೆಸಿ ಹಂಪನಕಟ್ಟೆಯ ಮಾರ್ಗವಾಗಿ ಹೋಗುತ್ತಿದ್ದರು ಅವರನ್ನು ಪೋಲೀಸರು ತಡೆದು ಕೈದುಮಾಡಿ ಕೊಂಡ್ಹೋದರು ಪೆಟ್ಟುಗಳು ಇರಲೇ ಇಲ್ಲ ರಾತ್ರಿ ೯ ಘಂಟೆಗೆ ಬಳ್ಳಿಕೆರೆ ಪೂವಪ್ಪನವರ ಹೊರತು, ಮಿಕ್ಕವರನ್ನು ಬಿಟ್ಟುಬಿಟ್ಟರು. ಶ್ರೀಯುತ ಪೂವಪ್ಪನವರನ್ನು ಮಾರನೆ ದಿನ ೨ನೇ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟಿಗೊಯ್ದು, ವಿಚಾರಣೆ ನಡೆಸಿ ಸದ್ರಿಯವರಿಗೆ ೮ ತಿಂಗಳ ಸಖ್ತ ಸಜೆಯು ವಿಧಿಸಲ್ಪಟ್ಟಿತು.

ಕಾಯಿದೆಭಂಗವನ್ನು ಪ್ರೋತ್ಸಾಹಿಸುತ್ತಾರೆಂಬ ಆರೋಪದಿಂದ ಶ್ರೀಯುತ ನಾರಾಯಣ ಕಿಲ್ಲೆಯವರ ವಿಚಾರಣೆಯಾಗಿ ತಾ ೨೫ರಲ್ಲಿ ೬ ತಿಂಗಳ ಸಜೆಯು ವಿಧಿಸಲ್ಪಟ್ಟಿತು

ಶ್ರೀಯುತ ಮಾರಪ್ಪ ಪಕ್ಕಳರು ಕಳೆದ ಶನಿವಾರ ಕಂಕನಾಡಿ ಗೇಟಿನ ಬಳಿ ಪೋಲೀಸರಿಗೆ ಸಿಕ್ಕಿದರು ವಿಚಾರಣೆಯು ಬೇಗನೇ ನಡೆಯಲಿದೆ

ನಿನ್ನೆ ದಿನ ಕಾಂಜಿಯವರ ಅಂಗಡಿಯು ಪಿಕೆಟು ಮಾಡುತ್ತಿದ್ದಾಗ ಹದಿನಾರು ಮಂದಿ ಸ್ವಯಂಸೇವಕರು ಕೈದುಮಾಡಲ್ಪಟ್ಟು ಸ್ಟೇಶನಿಗೆ ಕೊಂಡೊಯ್ಯಲ್ಪಟ್ಟರು ಪೆಟ್ಟುಗಳು ನಿನ್ನೆಯೂ ಇರಲಿಲ್ಲ ಪೋಲೀಸರ ಲಗುಬಗೆಯ ಗಡಿಬಿಡಿಯೂ ಇರಲಿಲ್ಲ ಕೈದ ಕೇಸು ಅಷ್ಟೆ ಸಂಜೆ ೮ ಘಂಟೆಗೆ ಎಲ್ಲರನ್ನೂ ಬಿಟ್ಟರು ಅವರು ಜಯಘೋಷವನ್ನೆತ್ತಿ ಮನೆಗೆ ತೆರಳಿದರು ಪೋಲೀಸ್ ಅಧಿಕಾರಿಗಳ ಆಚರಣೆಯು ಸಂಪೂರ್ಣ ಪರಿವರ್ತಿತವಾಗಿರುವುದು ಸಂತೋಷಕರ

ಬೋಳೂರಿನ ಇಂಪೀರಿಯಲ್ ಹಂಚು ಕಾರ್ಖಾನೆಯ ಬಳಿ ಒಂದು ತೋಡಿನಲ್ಲಿ ಕಳೆದ ಮಂಗಳವಾರ ದಿನ ಒಂದು ಸಣ್ಣ ಹೆಣ್ಣು ಶಿಶುವಿನ ಮೃತಶರೀರವು ಬಿದ್ದಿತ್ತು ಭ್ರೂಣ ಹತ್ಯೆ!

ಇಲ್ಲಿಯ ಕೆನರಾ ಬ್ಯಾಂಕ್ ಲಿಮಿಟೆಡ್ ಇದರ ರಜತೋತ್ಸವವು ಮೇ ತಿಂಗಳ ಕೊನೆಯ ವಾರದಲ್ಲಿ ಜರಗಿಸಲ್ಪಡುವುದೆಂದು ಈ ಮುಂಚೆ ಪ್ರಕಟಿಸಲ್ಪಟ್ಟಿತಷ್ಟೆ! ಕೆಲವು ಅನಿವಾರ್ಯ ಕಾರಣಾಂತರಗಳಿಂದ ಅದು ಹಿಂದಕ್ಕಿರಿಸಲ್ಪಟ್ಟು ಅದು ಇದೇ ನವೆಂಬರ ತಿಂಗಳಲ್ಲಿ ಜರಗಿಸಲ್ಪಡುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ

ಇದೇ ತಿಂಗಳ ತಾ ೨೯ನೇ ಆದಿತ್ಯವಾರ ಬೆಳಿಗ್ಗೆ ೭ ಘಂಟೆಗೆ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀ ಸುಧೀರ ಚಂದ್ರ ಬೆನರ್ಜಿ ಇವರು ಇಂಗ್ಲಿಷಿನಲ್ಲಿ ದೇವಾರಾಧನೆ ಮತ್ತು ಧರ್ಮ ವ್ಯಾಖ್ಯಾನ ನಡೆಸುವರು (ವ್ಯಾಖ್ಯಾನದ ವಿಷಯ — *Religion Personal and Congregational*) ಎಲ್ಲರಿಗೂ ಸುಸ್ವಾಗತವೆಂದು ಸೆಕ್ರೆಟರಿಯವರು ತಿಳಿಸುತ್ತಾರೆ

ತಾರೀಕು ೨೧—೫ ೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೦ ಮರಣಗಳೂ ೪೨ ಜನನಗಳೂ ಆದುವು

ತಾ. 29ನೇ ಆದಿತ್ಯವಾರವು
ಅ. ಭಾರತ ಸ್ವದೇಶಿ ದಿನವು.

ಇದೇ ತಾ ೨೯ನೇ ಆದಿತ್ಯವಾರವನ್ನು ಸ್ವದೇಶಿ ದಿನವೆಂದಾಚರಿಸಬೇಕೆಂದು ಪೂಜ್ಯ ಪಂಡಿತ ಮದನಮೋಹನ ಮಾಲವೀಯರು ಪ್ರಕಟಿಸುತ್ತಾರೆ ಆ ದಿನ ಎಲ್ಲರೂ ಸ್ವದೇಶಿವ್ರತವನ್ನು ತೊಟ್ಟುಕೊಳ್ಳಬೇಕು. ಸಾಧ್ಯವಿರುವಷ್ಟು ಮಂದಿಗಳು ಬೈ ಇಂಡಿಯನ್ ಲೀಗಿಗೆ ಸೇರಿಕೊಳ್ಳಬೇಕು ಅಂಗಡಿಗಾರರು ಸ್ವದೇಶಿ ಪ್ರಚಾರದಲ್ಲಿ ತೊಡಗಬೇಕು. ಸ್ವದೇಶೀ ಮಂತ್ರವು ದೇಶದ ಎಲ್ಲಾ ಕಡೆಗಳಿಗೂ ಹರಡಿಕೊಳ್ಳಲಿರುವುದರಿಂದ, ಮುಂದಕ್ಕೆ ಅದು ಶಾಶ್ವತವಾಗಿ ನಿಲ್ಲಲಿರುವುದರಿಂದ ಹಿಂದೀಯನಾದ ಪ್ರತಿಯೊಬ್ಬ ವರ್ತಕನೂ, ಕೊಳುವಾತನೂ, ಸ್ವದೇಶೀ ವ್ರತವನ್ನಾಚರಿಸುತ್ತಾ ಬರಬೇಕು ಎಂದು ಮಂಗಳೂರು ಬೈ ಇಂಡಿಯನ್ ಲೀಗಿನ ಜನರಲ್ ಸೆಕ್ರೆಟರಿಗಳಾದ ಶ್ರೀ ಎಂ. ಎಸ್. ಮಾಧವರಾಯರು ಬರೆಯುತ್ತಾರೆ.

ಈ ಕೆಳಗಿನವು ಶುದ್ಧ ಸ್ವದೇಶಿ ಸಂಸ್ಥೆಗಳೆಂದು ಲೀಗಿನಿಂದ ಸರ್ಟಿಫೈ ಮಾಡಲಾಗಿವೆ ಮಂಗಳೂರು ಸ್ವದೇಶಿ ಸ್ಟೋರ್, ಮೆಸರ್ಸ್ ಸೋಮಯಾಜಿ ಎಂಡ್ ಕೊ ವಂದೇ ಮಾತರಂ ಸ್ಟೋರ್ಸ್, ಸ್ವತಂತ್ರ ಭಾರತ ಸ್ಟೋರ್ಸ್, ಭಾರತ ಜನರಲ್ ಸ್ಟೋರ್ಸ್, ಬೋಳಾರ ಕೋಸ್ಟಲ್ ನಿಟ್ಟಿಂಗ್ ವರ್ಕ್ಸ್, ಶ್ರೀ ಕೋಟ್ಯಪ್ಪ ಶೆಟ್ಟರ ಮಗ್ಗದ ಕಾರ್ಖಾನೆ, ಮತ್ತು ದೇಶಬಂಧು ಸ್ಟೋರ್ಸ್

ಶ್ರೀಗಳಾದ ಜೋರ್ಜ್ ಆಲ್ಬರ್ಕರ್ಕ, ಜೋರ್ಜ್ ಹರ್ಬರ್ಟ್, ಜೆರೊಮ್ ಸಾಲ್ಡಾನರೇ ಮೊದಲಾದ ಕ್ರೈಸ್ತ ಧುರೀಣರ ಸಾಧನೆಯಿಂದ ಬಲ್ಮಠದಲ್ಲಿ ಒಂದು ಬೈ ಇಂಡಿಯನ್ ಲೀಗ್ ಸಂಸ್ಥೆಯು ಸ್ಥಾಪಿತವಾಗಿದೆ ಈ ಸಂಸ್ಥೆಯು ಮಂಗಳೂರಿನ ಬೈ ಇಂಡಿಯನ್ ಲೀಗಿಗೆ ಸಂಬಂಧಪಟ್ಟು ಕೆಲಸ ನಡೆಸುವುದು ಶ್ರೀ ಜೋರ್ಜ್ ಆಲ್ಬರ್ಕರ್ಕಯವರೂ ಸಲ್ಡಾನರವರೂ ಈಗಾಗಲೇ ಮಂಗಳೂರು ಬೈ ಇಂಡಿಯನ್ ಲೀಗಿನೊಡನೆ ಸಹಕರಿಸಿರುವರು

ಮಂಗಳೂರಿನ ಬೈ ಇಂಡಿಯನ್ ಲೀಗಿನವರು ಕಾರ್ಕಳ ಮೂಲ್ಕಿ ಕಾಸರಗೋಡು, ಪುತ್ತೂರು, ಬೆಳ್ತಂಗಡಿ, ಮತ್ತು ಬಂಟ್ವಾಳಗಳ ಮುಂದಾಳುಗಳು ತಮ್ಮ ಲೀಗಿಗೆ ಸಹಾಯವನ್ನು ಮಾಡುವ ವ್ಯವಸ್ಥೆಯನ್ನು ಮಾಡಿರುವರು ಈ ಸ್ಥಳಗಳಲ್ಲೆಲ್ಲಾ ಹೆಚ್ಚಿನ ಸ್ವದೇಶೀ ಪ್ರಚಾರ ಕಾರ್ಯವು ನಡೆಯುತ್ತಿದೆ ಉಡುಪಿ ಕುಂದಾಪುರಗಳೂ ಈ ಲೀಗಿನೊಡನೆ ಬೇಗನೇ ಸೇರುವಂತೆ ಯತ್ನವಾಗುತ್ತಲಿದೆ ಕೆಲಸಗಾರರ ಹೆಸರುಗಳು ಬೇಗನೇ ಪ್ರಕಟಿಸಲಾಗುವುವು ಜಿಲ್ಲೆಯಲ್ಲಿ ಸ್ವದೇಶಿ ಸಾಮಾನಿನ ಕೇಂದ್ರಸ್ಥಾನವನ್ನು ತೆರೆಯಬೇಕಾಗಿಯೂ ಅದರ ಮೂಲಕ ಜಿಲ್ಲೆಯ ಸ್ವದೇಶೀ ಸಾಮಾನುಗಳ ಬೆಲೆಯನ್ನು ಸುವ್ಯವಸ್ಥಿತಗೊಳಿಸಬೇಕಾಗಿಯೂ ಆಲೋಚಿಸಿ ಕೆಲವು ದಿನಗಳ ಹಿಂದೆ ಒಂದು ಸಬ್ ಕಮಿಟಿಯು ಕೂಡಿತು. ಇಂತಹ ಕೇಂದ್ರಸಂಸ್ಥೆಯ ಸಂಸ್ಥಾಪನೆಯನ್ನು ಮಾಡಿ ಅದನ್ನು ಖಾಸಗಿ ಲಿಮಿಟೆಡ್ ಕಂಪೆನಿಯಾಗಿ ಮಾಡಲಿಕ್ಕೆ ೨೫೦೦೦ ರೂಪಾಯಿಯ ಅಧಿಕೃತ [illegible] ಬೇಕೆಂದು ನಿರ್ಧರಿಸಲಾಯಿತು ಇದಕ್ಕೆ ಸಂಬಂಧಪಟ್ಟ ಕೆಲಸಗಳು ಭರದಿಂದ ಸಾಗುತ್ತಿವೆ ಕಂಪೆನಿಯು ಬೇಗನೇ ಸ್ಥಾಪಿಸಲ್ಪಡುವುದು. ಮುಂಬಾಯಿ [illegible] ಸ್ವದೇಶಿ ಸ್ಟೋರ್ಸಿನ ಶ್ರೀ ಎನ್ ಬಿ [illegible] ಎಂಬವರು ಇದರಲ್ಲಿ ಸಹಕರಿಸಲಿರುವರು.

ಕೆನರಾ ಹೈಸ್ಕೂಲ್ ಶಿಕ್ಷಣದ ಬಗ್ಗೆ ಶಾಲೆಯು ಮುಚ್ಚಲಾಗುವುದೆಂದು ಅಲ್ಲಲ್ಲಿ ಹರಡಿರುವ ವರ್ತಮಾನವು ನಿರಾಧಾರವಾಗಿದೆ ಎಂದು ಕೆನರಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರು ನಮಗೆ [illegible] ತಿಳಿಸಿರುವರು

ಕಾರ್ಕಳ: — ವರ್ಷಂಪ್ರತಿ ನಡೆಯುವ ಸ್ತ್ರೀಯರ ಭಜನ ಸಪ್ತಾಹವು ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಆ ಮುಗಿಯಿತು. ಪ್ರಾರಂಭವಾಗಿ ಇದು ೫ನೇ ವರ್ಷ ಸಾಮಾನ್ಯವಾಗಿ ಸ್ತ್ರೀಯರಲ್ಲಿ ಮೊದಲಿನಷ್ಟು ಉತ್ಸಾಹವು ಕಂಡುಬರುವುದಿಲ್ಲವಾದರೂ ಸ್ಥಾಪಕರ ಹಾಗೂ ಚಾಲಕರ ಉತ್ಸಾಹವೂ ಕಾರ್ಯಕುಶಲತೆಯೂ ಮಾನನೀಯವಾಗಿದೆ ಹೀಗೆಯೇ ರಾಜಕೀಯ ಸಾಮಾಜಿಕ ವಿಷಯಗಳಲ್ಲಿಯೂ ಸ್ತ್ರೀಯರು ಮುಂದಾದರೆ ಎಷ್ಟೋ ಅಭಿವೃದ್ಧಿಯಾಗುವುದು ಸತ್ಯವು

ಅಪರೀಕ್ಷಿತವಾದ ಮತ್ತು ಆಕಾಲಿಕವಾದ ಗಾಳಿ ಮಳೆ ಸಿಡಿಲುಗಳಿಂದ ಕೃಷಿ ಮೊದಲ್ಗೊಂಡು ಎಲ್ಲರೂ ಕಂಗಾಲಾಗುತ್ತಿರುವರು

ಇಲ್ಲಿಯ ತಾಲೂಕು ಬೋರ್ಡಿನಲ್ಲಿ ಹಣ ಕಡಿಮೆಬಿದ್ದಿರುವುದೆಂದು ಮೊದಲೇ ಅಲ್ಪವೇತನದಿಂದ ಅರೆಹೊಟ್ಟೆ ಉಂಡು ಹೇಗೂ ಹಾಗೆ ಜೀವಿಸುತ್ತಿರುವ ಉಪಾಧ್ಯಾಯರ ಬಡಹೊಟ್ಟೆಯ ಮೇಲೆ ಇನ್ನೊಂದು ಕೊಡಲಿಯ ಏಟನ್ನು ಕೊಡುವ ವಿಚಾರವು ನಡೆದಿದೆಯಂತೆ ಬೇರೆ ವಿಧಾನಗಳಿಂದ ಖರ್ಚನ್ನು ಕಡಿಮೆ ಮಾಡುವ ಆಲೋಚನೆ ಮಾಡದೆ ಬಡ ಉಪಾಧ್ಯಾಯರ ಅಲ್ಪವೇತನವನ್ನೇ ಇನ್ನೂ ಕಡಿಮೆ ಮಾಡುವ ಸಂಚನ್ನು ನಡೆಸುವರಾದರೆ ಅಸಮಾಧಾನಗೊಂಡ ಉಪಾಧ್ಯಾಯರಿಂದ ಆಗುವ ಶಿಕ್ಷಣ ಪ್ರಚಾರವು ಎಲ್ಲಿಗೆ ಹೋಗಿ ಮುಟ್ಟೀತೆಂದು ಮಕ್ಕಳ ಹಿತದಿಂದ ಅಧಿಕಾರಿಗಳು ಒಮ್ಮೆ ಆಲೋಚಿಸುವುದುತ್ತಮ

ಅಜೆಕಾರು: — ರೋಮನ್ ಕೆಥೋಲಿಕರ ಇಗರ್ಜಿಯ ಕೆಲಸವು ಬಹು ರಭಸದಿಂದ ಸಾಗುತ್ತಿರುವುದು ರೆವರೆಂಡ್ ಫಾದರ್ ಸೋಜರ ಸಾಹಸವು ಶ್ಲಾಘನೀಯವೇ ಸರಿ ಕ್ರೈಸ್ತಜನರನೇಕರ ಧನ್ಯವಾದಗಳು ಅವರಿಗಿರಲಿ!

ಕಾರ್ಕಳ ಹೆಲ್ತ್ ಇನ್ಸ್‌ಪೆಕ್ಟರರು ಗ್ರಾಮದಲ್ಲಿ ಸಂಚರಿಸಿ ಜನನ ಮರಣಗಳನ್ನು ತನಿಖೆ ಮಾಡುತ್ತಲಿರುವರು ಫಲಿತಾಂಶ ನೋಡಬೇಕಿದೆ

ಘರಂಗಿಪೇಟೆ — ಕಳೆದ ತಾ ೧೮ನೇ ದಿನ ಇಲ್ಲಿಯ ಶ್ರೀ ರಾಮ ಹಾಯರ್ ಎಲಿಮೆಂಟರಿ ಶಾಲೆಯ ಮಠದಲ್ಲಿ ಶ್ರೀ ನಾರಾಯಣ ಕಿಲ್ಲೆಯವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಯಕ್ಷಗಾನ ಮಂಡಳಿಯ ಸಭೆಯು ನಡೆಯಿತು. ಸದ್ರಿ ಸಭೆಯಲ್ಲಿ ಜನಾಬ್ ಎಫ್ ಎಚ್ ವಡೇಯರವರಿಗೆ — ಯಕ್ಷಗಾನದಲ್ಲಿ ಅವರಿಗಿದ್ದ ಅಭಿರುಚಿಯ ಗೌರವಾರ್ಥವಾಗಿ ಅವರ ಸ್ನೇಹಿತರಿಂದ ಅರ್ಪಿಸಲ್ಪಟ್ಟ ಸ್ವರ್ಣಪದಕವು ಅಧ್ಯಕ್ಷರಿಂದ ಕೊಡಲ್ಪಟ್ಟಿತು ಯಕ್ಷಗಾನದ ಉದ್ದೇಶ್ಯವೇ ಒಂದು ಸಂಘವನ್ನು ಏರ್ಪಡಿಸಿ ತನ್ಮೂಲಕ ಗ್ರಾಮೋದ್ಧಾರಣೆಯ ಕೆಲಸವನ್ನು ಸಾಗಿಸುವುದು ಎಂಬಿತ್ಯಾದಿ ಅಧ್ಯಕ್ಷರ ಭಾಷಣದಿಂದ ಯಕ್ಷಗಾನ ಸಭೆಯು ಮುಕ್ತಾಯಗೊಂಡಿತು

ಉಡುಪಿ: — ತಾ ೨೩ನೇ ದಿನ ಇಲ್ಲಿಯ ಪ್ರಮುಖ ಜಿನಸು ವ್ಯಾಪಾರಿಗಳಾದ ಶ್ರೀ ಕೆ ವೆಂಕಟಪ್ಪಯ್ಯ ಪೈಗಳ ಅಂಗಡಿಯೆದುರು ಪರದೇಶಿ ಸಕ್ಕರೆಯನ್ನು ಮಾರಬಾರದಾಗಿ ಶ್ರೀಮತಿ ಮನೋರಮಾ ಬಾಯಿ ವಾಸುದೇವ ಪ್ರಭು, ಬಾಬುರಾವ್, ಮುತ್ತಪ್ಪರು ಬೆಳಿಗ್ಗೆ ೮ ಘಂಟೆಯಿಂದ ಪಹರೆಗೆ ಪ್ರಾರಂಭಿಸಿದರು. ಒಂದು ತಾಸಿನೊಳಗೆ ಪೋಲೀಸರು ಬಂದು ಅವರನ್ನೆಲ್ಲಾ ಕೈದುಮಾಡಿ ಸ್ಟೇಶನಿಗೊಯ್ದರು ಶ್ರೀಮತಿ ಮನೋರಮಾಬಾಯಿಯವರು ತಾ ೨೪ನೇಗೆ ಕುಂದಾಪುರದಲ್ಲಿ ಡಿವಿಜನಲ್ ಆಫೀಸರರೆದುರು ಹಾಜರಾಗಬೇಕೆಂದು ಮುಂಚಿತವಾಗಿಯೇ ನೋಟೀಸು ಕೊಡೋಣವಾಗಿತ್ತು ಇವರನ್ನು ಮರುದಿನ ತಾ ೨೪ಕ್ಕೆ ಕುಂದಾಪುರಕ್ಕೆ ಕೊಂಡೊಯ್ದು ಡಿವಿಜನಲ್ ಆಫೀಸರರೆದುರು ಹಾಜರು ಮಾಡಿದ್ದಲ್ಲಿ ಇವರ ಮೇಲಿನ ತಕ್ಸೀರಿನ ತನಿಖೆಯು ತಾ ೨೮ಕ್ಕೆ ಮುಂದರಿಸಲಾಯಿತು ಆ ತನಕ ಕುಂದಾಪುರವನ್ನು ಬಿಟ್ಟು ಹೋಗದಂತೆ ತನಿಖೆಯ ದಿನ ಹಾಜರಾಗುವಂತೆ ನಿಯಮಿಸಿ ಬಿಟ್ಟಿರುತ್ತಾರೆ ಇವರೊಡನೆ ಕೈದುಮಾಡಲ್ಪಟ್ಟಿದ್ದ ಉಳಿದ ಮೂವರನ್ನು ಮರುದಿನ ತಾ ೨೪ನೇಗೆ ಮಧ್ಯಾಹ್ನದ ನಂತರ ಬಿಡುಗಡೆಮಾಡಿದರು

ತಾ ೨೫ನೇ ದಿನ ಪುನ ಶ್ರೀ ವಾಸುದೇವಪ್ರಭು ಮತ್ತಿಬ್ಬರನ್ನು ಅದೇ ಶ್ರೀ ಕೆ ವೆಂಕಟಪ್ಪಯ್ಯ ಪೈಗಳಲ್ಲಿ ಪರದೇಶಿ ಸಕ್ಕರೆಗಾಗಿ ಪಹರೆ ನಿಂತಿದ್ದ ಕಾರಣ ಕೈದುಮಾಡಿರುವರು

ತಾ ೨೩ನೇ ರಾತ್ರಿ [illegible] ಶ್ರೀನಿವಾಸ [illegible] ಅಧಿಕಾರಿಗಳ [illegible] ತನಿಖೆ [illegible] ೨೯ನೇ ದಿನ [illegible]

ಪೆರ್ಡೂರಿನ [illegible] ದೇವಭಕ್ತರಾದ [illegible] ದಿವಸ ೨೬—೪—೩೦ [illegible] ಇಲ್ಲಿಯ [illegible] ನಮ್ಮ ಪ್ರಾರ್ಥನೆ

ಶ್ರೀ [illegible] ಮೆಜಿಸ್ಟ್ರೇಟರು [illegible] ಜಿಲ್ಲಾ ಕಲೆಕ್ಟರರಲ್ಲಿ [illegible]

ಬಂಟ್ವಾಳ — [illegible]

ಮೂಡಬಿದ್ರೆ ಬಂಟ್ವಾಳ ಮಾರ್ಗವು ಬಹಳ [illegible] ಸಾಧಾರಣ [illegible] ಮಾರ್ಗವು [illegible] ತಯಾರಾಗಿಯದೆ [illegible] ಈ ಮಾರ್ಗವು ಅಧಿಕಾರಿಗಳ ದೃಷ್ಟಿಗೆ ಗೋಚರವಾಗಲಿಲ್ಲ

[illegible] ಆಂಗ್ಲೇರನ ಸಂರದ
[illegible] ಶನಿವಾರದಿಂದ ಆಂಗ್ಲೇರನ ಸಂರದ
[illegible] ಶುಕ್ರವಾರದ ವರೆಗಿನ ಪಂಚಾಂಗ
(ಗಾಂತಿನಿಯ ವೃಷಭ – ದೇಶ).

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
28	ಶನಿ	[illegible]	[illegible]	ಪೂ. ಭಾ.	[illegible]	[illegible]	6 5	6 10
29	ರವಿ	[illegible]	[illegible]	ಪೂ. ಭಾ	[illegible]	[illegible]	6 5	6 51
30	ಸೋಮ	[illegible]	[illegible]	ಉ. ಭಾ.	[illegible]	[illegible]	6. 6	6 51
31	ಕುಜ	[illegible]	[illegible]	ರೇವತೀ	[illegible]	[illegible]	6 6	6.52
1	ಬುಧ	[illegible]	[illegible]	ಅಶ್ವಿನೀ	[illegible]	[illegible]	6 5	[illegible]
2	ಗುರು	[illegible]	[illegible]	ಭರಣೀ	[illegible]	[illegible]	6. 5	6 52
3	ಶುಕ್ರ	[illegible]	[illegible]	ಕೃತ್ತಿಕಾ	[illegible]	[illegible]	6 5	6.53

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum		Minimum		Rainfall ಮಳೆ ದಿನದ ಮಳೆ		ಜುಮುಲಾ ಮಳೆ.
20	79—	3	73—	9	45	9	—
21	81—	6	74 -	8	2—	00	—
22	83—	3	75 —	2	0	88	—
23	81—	9	75—	2	2 -	74	—
24	86 -	7	74	5	0	53	—
25	87 -	6	75	0	3	04	—
26	81 —	4	80 —	1	0 -	39	17–58

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ.	ಆ	ವರೆಗೆ ರೂ.	ಆ
ರಾಶಿ ಅಕ್ಕಿ	3	10	3	14
[illegible]	4 –	0	4 –	12
ಗುಡ	4	0	4	4
ಸುಗ್ಗಿ	3 –	14	4 –	2
ಊರ ಅವ್ವಲ್ ಬೆಲ್ಲ	4 —	8	6 –	0
ರಂಗೂನು ಬೆಳ್ತಿಗೆ ಗೋಣಿ ಒಕ್ಕೆ	8 –	0	8 –	8
ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ	4 –	10	4 –	12
ಗೋಧಿ ಗೋಣಿ ಒಕ್ಕೆ	9 –	8	12 –	8
ತೊಗರಿ ಗೋಣಿ ಒಕ್ಕೆ	12 –	0	12 –	8
ಹುರುಳಿಗೋಣಿ ಒಕ್ಕೆ	6 –	2	7 –	4
ಕಡಲೆ ಗೋಣಿ ಒಕ್ಕೆ	8 –	8	12 –	8
ತೊಗರಿಬೇಳೆ ಗೋಣಿ ಒಕ್ಕೆ	13 –	8	21 –	0
ಉದ್ದು ಗೋಣಿ ಒಕ್ಕೆ	11 –	8	13 –	0
ಹೆಸರು ಗೋಣಿ ಒಕ್ಕೆ	10 –	4	11 –	
ಊರ ಬೆಲ್ಲ ಖಂಡಿ ಒಕ್ಕೆ	27 –	8	30 –	0
ಉಪ್ಪು ಗೋಣಿ ಒಕ್ಕೆ	6 –	0	5 –	4
[illegible] ಖಂಡಿ ಒಕ್ಕೆ	65		72 –	
ಕೊಪ್ರ ಹಿಂಡಿ ಖಂಡಿ ಒಕ್ಕೆ	22 –	8	23 –	
ಎಳ್ಳಿಂಡಿ ಖಂಡಿ ಒಕ್ಕೆ	26 –	4	26 –	18
ಕೊಪ್ರ ಎಣ್ಣೆ ಮಣ ಒಕ್ಕೆ	6 –	4	6 –	6
ಎಳ್ಳೆಣ್ಣೆ ಮಣ ಒಕ್ಕೆ	6 –	12	7 –	0
[illegible] ಒಕ್ಕೆ	4 –	7	8 –	14
[illegible] ಸಕ್ಕರೆ ಮಣ ಒಕ್ಕೆ	4 –	0	4 –	1
[illegible]	4 –	0	6 –	0
[illegible] ಮುಡಿ ಒಕ್ಕೆ	5 –	4	6 –	0
ಸೀಟಿಡ್ ಕಾಫಿ ಖಂಡಿ ಒಕ್ಕೆ	475 –	0	426 –	
ಕಾಳುಮೆಣಸು ಖಂಡಿ ಒಕ್ಕೆ	170 –	0	180 –	
ಯಾಲಕ್ಕಿ ಮಣ ಒಕ್ಕೆ	27 –	0	28 –	
ಗೇರುಬೀಜ ಮುಡಿ ಒಕ್ಕೆ	3 –	6	—	
[illegible] ಖಂಡಿ ಒಕ್ಕೆ	35 –	0	36	8
ತಾಂಬ್ರ ತಗಡು ಮಣ ಒಕ್ಕೆ	12 –	8	13 –	0
ತಾಂಬ್ರ ಪಾತ್ರೆಗಳು ಮಣ ಒಕ್ಕೆ	16 –	0	16 –	0
[illegible] ಸೇರು ಒಕ್ಕೆ	14 –	10	14 –	12
ಹಿತ್ತಾಳೆ ತಗಡು ಮಣ ಒಕ್ಕೆ	12 –	0	12 –	8
[illegible] ಒಕ್ಕೆ	17 –	14	17 –	14
[illegible] ಖಂಡಿ ಒಕ್ಕೆ	35 –		—	
ಪಿಬೇರಿ ಕಾಫಿ ಖಂಡಿ ಒಕ್ಕೆ	330 –		—	
ಹಳೆ ಅಡಿಕೆ	150 –		205 –	
ಹೊಸ ಅಡಿಕೆ	140 –		145 –	

Chikmagalur Public Conveyance Motor Service.

CHIKMAGALUR.

ಚಿಕ್ಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವೀಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್ Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ರ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಇದ ಧರ್ಮಸ್ಥಳ ರೋಡಿಗೆ ದಿ. 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ರ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, 4½ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಢರಪೂರ ಗೋವಾ, ಲೋಂಡ, ಪೂನಾ ಮತ್ತು ಬೊಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಹೊರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಲ್ಯಾವರ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವವರಿ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರು, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ 1½ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

ಮುಸೋಲಿನಿ

ಅಥವಾ

ದೈವಸತ್ವಪರೀಕ್ಷೆ.

ಆಳವಾದ ಸಮುದ್ರಕ್ಕಿಳಿದು, ತಿಮಿಂಗಿಲವೇ ಮೊದಲಾದ ಭಯಂಕರ ಜಲಪ್ರಾಣಿಗಳ ಭಯರಹಿತರಾಗಿ, ಪ್ರಯಾಸಪಟ್ಟು ಯತ್ನಿಸಿದರೆ ವಜ್ರ ವೈಢೂರ್ಯಗಳು ಸಿಗುತ್ತವೆ. ಆಳವಾದ ಗಣಿಗಿಳಿದು ಮಣ್ಣಿನೊಡನೆ ಮಿಶ್ರಿತವಾಗಿರುವ ಭಂಗಾರವನ್ನು ತೋಡ್ತೆಗೆದು ಅದನ್ನು ಅಗ್ನಿಷ್ಟಿಕೆಯಲ್ಲಿ ಹಾಕಿ, ಕಾಯಿಸಿದರೆ ಶುದ್ಧ ಭಂಗಾರವು ಸಿಗುತ್ತದೆ. ಮಧ್ಯಾಹ್ನದ ಬಿಸಿಲನ್ನೆಣಿಸದೆ, ಜುಲಾಯಿ ತಿಂಗಳ ಮಳೆಯನ್ನು ಗಣಿಸದೆ, ಹೊಲಗದ್ದೆಗಳನ್ನು ಉತ್ತು ಬಿತ್ತಿದರೆ ಸರ್ವಸಾರಭರಿತವಾಗಿರುವ ಆಹಾರವು ದೊರೆಯುತ್ತದೆ. ಹಾಗೆ ಬಡತನದ ತೀಕ್ಷ್ಣ ಜ್ವಾಲೆಯಲ್ಲಿ ಬಿದ್ದು, ಮೈಸುಟ್ಟು ಕಷ್ಟಪಟ್ಟ ಮೇಲೆ, ಜೀವನದಲ್ಲಿ ಧೈರ್ಯವೂ ಉತ್ಸಾಹವೂ ಕ್ಲೇಶಸಹಿಷ್ಣುತೆಯೂ ಆತ್ಮಸಂಯಮನವೂ ಲಭ್ಯವಾಗುತ್ತವೆ.

ಬಡತನದ ಬಾಳಿನಲ್ಲಿ ಮಹತ್ತ್ವದ ಪಾಠಗಳಿವೆ. ಶ್ರೀಮಂತಿಕೆಯ ಜೀವನದಲ್ಲಿ ಉತ್ಸಾಹವಿಲ್ಲ—ಸಾರವಿಲ್ಲ—ಧೀರರು ಬಡತನವನ್ನು ಕಂಡು ಬೇಸರಿಸುವುದಿಲ್ಲ ವೀರರು ಬಡತನಕ್ಕೆ ಹೆದರುವುದಿಲ್ಲ. ಬಡತನವೆಂಬುದೊಂದು ಕುಲುಮೆ ಆ ಕುಲುಮೆಯಲ್ಲಿಸಲ್ಪಟ್ಟ ಜೀವನದ ಕೊರಡು ಮತ್ತೆ ಕರ್ರಗಾಗದು—ಅದರ ಬಣ್ಣವು ಮಾಸದು. ಸಾಹಸಸಂಪನ್ನರು, ಪ್ರತಿಭಾಶಾಲಿಗಳು, ಆತ್ಮಸಂಯಮಿಗಳು ಕಷ್ಟಕ್ಕೆ ಹೆದರರು ಬಡತನಕ್ಕೆ ಬೆದರರು. ಅವರ ಕೆಚ್ಚೆದೆಯ ವೀರತ್ವವಂತಹದು

ಅಂತಹ ವೀರರು ಆಧುನಿಕ ಪ್ರಪಂಚದಲ್ಲಿ ಹೆಚ್ಚಿನವರಿಲ್ಲ ಬೆರಳು ಮಡಿಸಿ ಲೆಖ್ಖಮಾಡುವಷ್ಟು ಮಾತ್ರ ಇರುವರು. ಅಂತಹ ಪ್ರಚಂಡ ವ್ಯಕ್ತಿಗಳಲ್ಲಿ ಕೆಲವರಾದ ರಾಮ್ಸೆ ಮೆಕ್‌ಡೊನಾಲ್ಡ್, ಡಿ. ವೆಲರಾ ಇವರ ಕುರಿತು ನಾವು ಸ್ವದೇಶಾಭಿಮಾನಿಯಲ್ಲಿ ಉಲ್ಲೇಖಿಸಿರುವೆವು. ಈಗ ಇಟಲಿ ದೇಶವನ್ನು ತನ್ನ ಮಹಾನ್ ಶಕ್ತಿಪ್ರಭೆಯಿಂದಾಳುತ್ತಿರುವ ಸೀನಿಯರ್ ಮುಸೋಲಿನಿ ಎಂಬ ಧೀರ ಮೂರ್ತಿಯ ಕುರಿತು ಉಲ್ಲೇಖಿಸೋಣ.

ಸೀನಿಯರ್ ಮುಸೋಲಿನಿ, ಅಥವಾ ಬೆನಿಟೋ ಮುಸೋಲಿನಿಯು ಪ್ರತಿಯೊಂದು ಚಿಕ್ಕ ಉಸಿರು ಇಟಲಿಯ ಕಾನೂನಾಗಿದೆ ಅವನ ಪ್ರತಿ ಶಬ್ದವು ಜನತೆಯ ಹೃದಯಾಂಗಣವನ್ನು ಹೊಗುವ ವಿಚಿತ್ರ ವಿದ್ಯುತ್‌ಪ್ರವಾಹವಾಗಿದೆ ಅವನ ದರ್ಶನವು ಇಟಲಿಯ ಜನರನ್ನು ಭಕ್ತಿಭಯಗಳಿಂದ ಕಂಪಾಯಮಾನಗೊಳಿಸುತ್ತದೆ ; ಅವನಿಗೆ ಎದುರುನುಡಿಯುವುದೆಂದರೆ, ಬೆಂಕಿಯಲ್ಲಿ ದುಮುಕಿ ಪ್ರಾಣತ್ಯಾಗ ಮಾಡಿದಂತಾಗುವುದೇ ಸರಿ! ಇಂತಹ ಭಯಂಕರ ವ್ಯಕ್ತಿಯಾದರೂ ಯಾರು?

ಅವನಾರಲ್ಲ ದಾರಿದ್ರ್ಯದೇವತೆಯ ಉದಾರಪೂರ್ಣ, ಉದ್ದೇಶಪೂರ್ಣ, ಕಷ್ಟೋಕಟಾಕ್ಷ ಪೂರ್ಣ. ವರಬಲವನ್ನು ಪಡೆದಂತಹ ಧೈರ್ಯಶಾಲಿಯು! ಹೊಟ್ಟೆಗಿಲ್ಲದೆ, ಬಟ್ಟೆಗಿಲ್ಲದೆ ಬಳಲಿ, ತನ್ನ ಹೃದಯಾಂತರಾಳದಲ್ಲಿ ನೆಲಸಿದ್ದ ಸ್ವಾತಂತ್ರ್ಯಕಾಂಕ್ಷೆ, ಸ್ವಯಂಪ್ರತಿಷ್ಠೆ, ಸ್ವಯಂಪ್ರತಿಭೆಗಳನ್ನು ಸಮಸ್ತ ಸನ್ನಿವೇಶಗಳ ಎದುರು ನಿಲ್ಲಿಸಿ, ಅವುಗಳನ್ನು ಸೋಲಿಸಿದ ಶೌರ್ಯಶಾಲಿಯು ಒಬ್ಬನು ತನಗೆ ಹಾನಿಯನ್ನು ಬಯಸಿದರೆ, ಅವನಿಗೆ ತಕ್ಕ ಮುಯ್ಯಿಗೆ ಮುಯ್ಯನ್ನು ತೋರಿಸುವವನು ಸೀನಿಯರ್ ಮುಸೋಲಿನಿಯು ಒಬ್ಬನು ತನ್ನನ್ನು ಬಗ್ಗಿಸಿ, ಕುಗ್ಗಿಸಿ, ತಗ್ಗಿಸಿ, ತನ್ನ ಮೇಲಿನ ಅಧಿಕಾರದರ್ಪವನ್ನು ಪ್ರದರ್ಶಿಸಿದರೆ ಅಂತಹ ದರ್ಪಾಂಧತೆಗೆ ತಕ್ಕ ಪಾಠವನ್ನು ಕೊಡುವವನು ಬೆನಿಟೋ ಮುಸೋಲಿನಿಯು ತಾನೇ ಘನಪುರುಷ, ತಾನು ಶ್ರೀಮಂತನ ಮದಾಂಧತೆಯ ಎದುರು ಅಸಾಮಾನ್ಯನು, ಅಪ್ರತಿಹತನು, ಅಸಾಧಾರಣನು ಎಂದು ಭಾವಿಸುವವನು ಇಟಲಿಯ ಬೆನಿಟೋ ಮುಸೋಲಿನಿಯು. ಕ್ರೌರ್ಯ, ರಾಜಸಿಕಭಾವ, ಅಹಂಭಾವ, ನಿರಂಕುಶಪ್ರಭುತ್ವ, ಇವುಗಳು ಮುಸೋಲಿನಿಯಲ್ಲಿ ಮೂರ್ತಿಮತ್ತಾಗಿವೆ ತನ್ನನ್ನು ಹೀಯಾಳಿಸಿದವನನ್ನು ಅವನು ಸದೆಬಡಿಯುವನು. ತನ್ನನ್ನು ಯಾರಾದರೂ ಪುಕ್ಕನೆಂದರೆ ಅವರನ್ನು ಕಡಿಯುವನ ತನ್ನ ಅಹಂಭಾವವನ್ನು ಯಾವನಾದರೂ ಬಗ್ಗು ಬಡೆಯಲು ಯತ್ನಿಸುತ್ತಾನೆಂದು ಕಂಡರೆ ಅಂತಹನನ್ನು ಅವನು ಸುಡುವನು ಇಂತಹ ಸ್ವಭಾವವು ಮುಸೋಲಿನಿದ್ದು.

ಮುಸೋಲಿನಿಯು ಬಡವನಾಗಿದ್ದರೂ ತನ್ನ ಸ್ವಪ್ನವಾಕ್ಯವನ್ನು ಇಟಲಿ ದೇಶಿಗರ ಹೃದಯಕ್ಕೆ ನಾಟಿಸುತ್ತಿದ್ದನು. "ನಾನು ಕ್ರಾಂತಿಕಾರನು ನನ್ನ ಕ್ರಾಂತಿತತ್ವವೇ ಮಹಾ ತತ್ವವು" ಎಂಬುದೇ ಮುಸೋಲಿನಿಯ ಮಾತು.

ಮುಸೋಲಿನಿಯು ಸರಕಾರಕ್ಕೆ ಪ್ರತಿ ಬಗೆಯಲ್ಲೂ ತಡೆನಿಲ್ಲುತ್ತಿರುವುದನ್ನು ನೋಡಿ, ದೇಶದಲ್ಲಿ ಆಗಾಗ ಕ್ಷೋಭೆಯನ್ನೆಬ್ಬಿಸುತ್ತಿರುವುದನ್ನು ನೋಡಿ, ಸರಕಾರವು ಅವನನ್ನು ಗಡಿಪಾರು ಮಾಡಿತು. ಈ ರೀತಿಯ ಗಡಿಪಾರಿನಿಂದಾಗಿ ಮುಸೋಲಿನಿಯು ಬಹಳ ಕಷ್ಟಪರಂಪರೆಗಳಿಗೊಳಗಾದ ಸ್ವಿಜರ್‌ಲೆಂಡ್ ಆಸ್ಟ್ರೇಲಿಯಾ, ಹಂಗೇರಿಯಾ ಮುಂತಾದ ದೇಶಗಳಲ್ಲಿ ಅವನು ಅರೆಹೊಟ್ಟೆಯಿಂದ ಅಲೆದು ಬಳಲಿದ

ಕೆಲವು ಸಮಯದ ನಂತರ ಇಟಲಿಗೆ ಹಿಂತಿರುಗಿ, ಪುನಃ ತನ್ನ ಚಳವಳಿಕ್ಕಾರಂಭಿಸಿದ ಅದೃಷ್ಟದೇವತೆಯ ಆಟವು ಅಗಾಧವಾದ್ದುದು—ವಿಚಿತ್ರವಾದುದು. ಅವಳು ಮನುಷ್ಯನಿಗೆ ಅವಮಾನವನ್ನು ಸಲ್ಲಿಸುವಳು ಅಂತಹ ಅವಮಾನವನ್ನು ಅವನು ಧೀರತ್ವದಿಂದ ಸಹಿಸಿಕೊಂಡು ತನ್ನ ಧ್ಯೇಯವನ್ನು ಮರೆಯದಿದ್ದರೆ, ಒಡನೆ ಆ ಮನುಷ್ಯನಿಗೆ ಮಾನವನ್ನು ಕೊಡುವಳು ಮುಸೋಲಿನಿಯು ಪ್ರಥಮದಲ್ಲಿ ಹತ್ತು ಮಂದಿಗಳ ನಗೆಗೆ ಗುರಿಯಾದ ಆದರೆ ಕೊಂಚ ಸಮಯವು ದಾಟುತ್ತಲೇ, ಇಟಲಿಯ ಜನಾಂಗದ ಪ್ರಶಂಸೆಗೆ ಪಾತ್ರನಾದ ಅವನನ್ನು ಅವನ ಜನರು ಸ್ತುತಿಸಲುಪಕ್ರಮಿಸಿದರು. 'ದೇಶದಲ್ಲಿ ಭೇದಾಭೇದವಿಲ್ಲದ ಸರ್ವಸಮಾನತೆಗಳು ಬೇಕೆಂದಿದ್ದರೆ ಒಬ್ಬ ಮುಸೋಲಿನಿಯು ಅಗತ್ಯ''ವೆಂದರು ಅಷ್ಟರಲ್ಲಿ ೧೯೧೪ರ ಮಹಾಯುದ್ಧವು ತಲೆದೋರಿ, ಇಟಲಿಯು ಯುರೋಪಖಂಡದ ಪಾದದಡಿಯಲ್ಲಿ ಬಿದ್ದು ನುಚ್ಚುನೂರಾಯಿತು ಇಟಲಿಯ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳು ಅಧಃಪತನದ ಹಾದಿಯನ್ನು ಹಿಡಿದುವು ಯುದ್ಧವು ನಿಂತ ನಂತರ ಇಟಲಿಯು ನಿರ್ಜೀವಗೊಂಡಿತ್ತು ಅದನ್ನು ಪುನರುಜ್ಜೀವಿಸಬೇಕಾದರೆ ಮುಸೋಲಿನಿಯಂತಹ ಪ್ರಬಲ ಬಲಶಾಲಿಯು ಅಗತ್ಯನೆಂದು ಜನರು ಕಂಡುಕೊಂಡರು ಅವನ ಫಸಿಸ್ಟ್ ಸಂಗಡವನ್ನು ಅಧಿಕಾರಕ್ಕೆ ಕರೆದರು

ಮುಸೋಲಿನಿಯು ಗದ್ದಿಗೆಯನ್ನೇರಿದ ತನ್ನ ಪ್ರತಿಯೊಂದು ವಾಕ್ಯವನ್ನು ಕಾನೂನೆಂದು ಮಾಡಿದ. ತನ್ನ ಪ್ರತಿಯೊಂದು ವಿಚಾರವನ್ನು ಕ್ರಮವೆಂದು ಹೇಳಿದ ಇಟಲಿಯನ್ನು ದಶದಿಕ್ಕುಗಳಲ್ಲೂ ಉದ್ಧರಿಸಿದ ಸರಕಾರದ ಆಡಳಿತೆಯ ಧೋರಣೆಯಲ್ಲಿ ತನ್ನದೇ ಆದ ನವೀನ ರೀತಿಯ ಮಾರ್ಪಾಟುಗಳನ್ನು ಮಾಡಿದ. ತಾನು ತನ್ನ ನಿಮಂತ್ರಿತ ವರ್ಗದವರ ಕೈಗೊಂಬೆಯಾಗಲಿಲ್ಲ. ಅವರನ್ನು ತನ್ನ ಆಟದ ಗೊಂಬೆಗಳನ್ನಾಗಿ ಮಾಡಿದ ಅಧಿಕಾರಿಗಳ ಸ್ವಾರ್ಥಸಾಧನೆಯ ಧೋರಣೆಯನ್ನು ಖಂಡಿಸಿ ತನ್ನದೇ ನಿರಂಕುಶಪ್ರಭುತ್ವವನ್ನು ಸಂಸ್ಥಾಪಿಸಿದ ಹಾಗಾದುದರಿಂದ ಈಗ ಮುಸೋಲಿನಿಯನ್ನು ಅವನ ಆಪ್ತೇಷ್ಟರೂ ಕೂಡಾ ಒಳಸಾರಿ ಅವನ "ಕಿವಿಗೆ ಗಾಳಿಹಾಕಲು" ಸಾಧ್ಯವಿಲ್ಲದ ಹಾಗಾಗಿದೆ ರಾಜ್ಯದಧಿಕಾರಿಗಳನ್ನು ಹೊಗಳುವುದಾಗಲಿ, ಅವರನ್ನು ದಾಕ್ಷಿಣ್ಯ (obligation) ದೃಷ್ಟಿಯಿಂದ ನೋಡುವುದಾಗಲೀ ಅವನ ಕ್ರಮವಲ್ಲ ಅಂತಹ ಬೆನಿಟೋ ಮುಸೋಲಿನಿಯು ಇಂದು ಸೀನಿಯರ್ ಮುಸೋಲಿನಿಯಾಗಿ ಇಟಲಿ ದೇಶವನ್ನು ನಿರಂಕುಶ ಪ್ರಭುತ್ವದಿಂದಾಳುತ್ತಿರುವನು

ಗಾಂಧಿಜೀಯವರು ಕಳೆದ ಸಲ ಲಂಡನಿಗೆ ಹೋಗಿ ಹಿಂತಿರುಗಿ ಬರುವಾಗ ಮುಸೋಲಿನಿಯನ್ನು ಸಂದರ್ಶಿಸಿ, ಮಾತನಾಡಿ ಬಂದಿದ್ದರು ಈ ಮಹಾನ್ ವ್ಯಕ್ತಿಗಳನ್ನು ತುಲನಾತ್ಮಕದೃಷ್ಟಿಯಿಂದ ತೂಗಿದರೆ—ಗಾಂಧೀಜೀಯವರು ನಮ್ರತೆ, ಸರಳತೆಗಳ, ಸೌಜನ್ಯಮೂರ್ತಿ, ಮುಸೋಲಿನಿಯು ಕಠೋರತೆ, ಕ್ರೌರ್ಯ, ಅಹಂಭಾವಗಳ ವೀರ. ಗಾಂಧೀಜೀಯವರು ಸ್ವಾರ್ಥತ್ಯಾಗಿ ಮುಸೋಲಿನಿಯು ಅಧಿಕಾರಯೋಗಿ. ಗಾಂಧೀಜೀಯವರು ರಾಜಕೀಯ ಯೋಗಿ. ಮುಸೋಲಿನಿಯು ರಾಜ್ಯಭೋಗಿ ಗಾಂಧೀಜೀಯವರಿಗೆ ತಾನು ತನ್ನದೆಂಬ ಅಹಂಭಾವವಿಲ್ಲ. ಮುಸೋಲಿನಿಗೆ 'ನಾನು ನನ್ನದು'' ಎಂಬ ಅಹಂಕಾರವಿದೆ ಗಾಂಧೀಜೀಯವರು ಸಮಷ್ಟಿವರ್ಗದವರ ಆಶಾವಾದಕ್ಕೆ ಕಿವಿಗೊಡುವವರು ಮುಸೋಲಿನಿಯು ಜನತೆಯ ಮಾತಿಗೆ ಸೊಪ್ಪು ಹಾಕಿ ಕುಳಿತು ಬಿಡುವವನು ಒಬ್ಬನ ಮೇಲೊಬ್ಬರು ಅಧಿಕಾರವನ್ನು ತೋರಿಸದೆ ಸಮತಾಭಾವನೆಯಿಂದಿರಬೇಕೆಂದು ಗಾಂಧೀಜೀಯವರ ತತ್ವ ತನ್ನ ಮೇಲೆ ಇನ್ನೊಬ್ಬನು ಅಧಿಕಾರವನ್ನು ತೋರಿಸಲು ಎಡಗೊಡನೆಂಬುದು ಸೀನಿಯರ್ ಮುಸೋಲಿನಿಯ ಸೂತ್ರ. ಹೀಗಿದ್ದರೂ ಗಾಂಧಿ ಮುಸೋಲಿನಿಗಳಲ್ಲಿ ಕಾರ್ಯತತ್ಪರತೆ, ಸೇವಾಪ್ರತಿಷ್ಠೆಗಳ ತೇಜಃಪುಂಜ ಸ್ವಭಾವವಿದೆ. ಇಂತಹ ಸ್ವಭಾವವು ಇವರಲ್ಲಿ ಮೂರ್ತಿಮತ್ತಾಗಿರುವುದರಿಂದಲೇ ಅವರಿಂದು ಪ್ರಪಂಚದ ಅಗ್ರಗಣ್ಯ ಪುರುಷರಾಗಿರುವರು.

ಮುಸೋಲಿನಿಯು ಎಂತಹ ಘೋರ ಬಡತನದ ಸಾಗರದಲ್ಲಿ ಈಜಾಡಿದವನೆಂದು ಅವನು ತಾ, ೩ನೇ ಅಕ್ಟೋಬರ ೧೯೦೩ರಲ್ಲಿ ಒಬ್ಬ ಮಿತ್ರನಿಗೆ ಬರೆದ ಪತ್ರದಿಂದ ತಿಳಿಯಬಹುದು.

"ಸಾಯಂಕಾಲದಲ್ಲಿ ಐದು ಹೊಡೆದಿತ್ತು ಮುಂಜಾವಿನಲ್ಲಿ ರೊಟ್ಟಿಯ ಒಂದೆರಡು ತುಣುಕುಗಳನ್ನು ತಿಂದು ಅತ್ತಿತ್ತ ಅಲೆದಾಡುತ್ತಿದ್ದೆನು 'ಉಯಿಲ್ಯಮ್ ಟೇಲ'ನ ಪ್ರತಿಮೆಯ ಕೆಳಗೆ ಕುಳಿತು ಬಹಳ ವೇಳೆಯನ್ನು ಕಳೆದೆನು ಮುಖದಲ್ಲಿ ಧೂಳಿಯು ತುಂಬಿದ್ದಿತು, ಅರಿವೆಗಳು ಹೊಲಸಾಗಿದ್ದುವು ತಲೆ ಕೂದಲು ತುಂಬ ಅಸ್ತವ್ಯಸ್ತವಾಗಿದ್ದಿತು. ಇಂತಹ ನನ್ನ ಚಿತ್ರವನ್ನು ನೋಡಿದರೆ ನೀನು ನಿಜವಾಗಿಯೂ ನನ್ನನ್ನು ಗುರುತಿಸುತ್ತಿದ್ದಿಲ್ಲ. ನನ್ನ ವಿಚಿತ್ರವಾದ ಧ್ಯಾನವನ್ನು ಜನರು ಟಕ್ಕಿಸಿ ನೋಡುವಾಗ ನನ್ನ ತಲೆಯೇ ತಿರುಗುತಿತ್ತು ಅಂತಃಕರಣದಲ್ಲಿ ಸ್ಫೋಟವಾಗುತಿತ್ತು ಇತ್ತ ಹಸಿವೆಯಿಂದ ಜಠರಾಗ್ನಿಯು ಪ್ರಜ್ವಲಿಸುತ್ತಿತ್ತು ಕಾದು ಕೆಂಪಾದ ಸಾವಿರಾರು ಸೂಜಿಗಳನ್ನು ಉದರಕ್ಕೆ ಚುಚ್ಚಿದಂತೆ ವೇದನೆಯಾಗುತ್ತಿತ್ತು ಕೈಕಾಲುಗಳಲ್ಲಿ ಅಶಕ್ತತೆಯುಂಟಾಗಿ ಕಣ್ಣುಕತ್ತಲೆಯುಂಟಾಗುತ್ತಿತ್ತು ಆದರೂ ನಾನು ಹಾಗೆಯೇ ಮುಂದೆ ಸಾಗಿದೆನು ಕೆರೆಯ ಮೇಲಿನಿಂದ ಬೀಸುವ ಗಾಳಿಯ ಸೊಬಗು ಅವರ್ಣನೀಯವಾಗಿತ್ತು ಸ[illegible] ಸೂರ್ಯನ ಕಟ್ಟಕಡೆಯ ಕಿರಣಗಳನ್ನು ನೋಡಿ ಸಂಧ್ಯಾಕಾಲದಲ್ಲಿ ಪ್ರಾರ್ಥನೆಯ ಗಂಟೆಯ ಮಂಜುಳ ನಿನಾದವನ್ನು ಕೇಳಿ ನಾನು ನನ್ನ ಸ್ಥಿತಿಯನ್ನು ತುಸಹೊತ್ತು ಮರೆತೆನು [illegible], ಇಂತಹ ಜೀವಿತದಲ್ಲಿ ಏನು ಅರ್ಥವಿರುತ್ತದೆ? ಎಂಬ ವಿಚಾರವು ಬಂದು ಮನಸ್ಸು ಖಿನ್ನವಾಯಿತು. ಅಷ್ಟರಲ್ಲಿ ಕೆರೆಯ [illegible]ದಿಯಿಂದ ಬಂದ ಗಾಯನದ ಮಧುರವಾದ ಮಂದ್ರ ಧ್ವನಿಯು ಕಿವಿಗೆ ಬಿತ್ತು ನೋಡುತ್ತೇನೆ—[illegible]ವಿನಲ್ಲಿಯೇ 'ಹಾಟೆಲ್ [illegible]ರಿತ್ತೇಜ' ಇಲ್ಲಿ ಅನೇಕ ಜನರು ಮೋಜುಮಾಡುತ್ತಲಿದ್ದರು. ಕೆಳಗೆ ನಾನು ಮಾತ್ರ ಹಸಿವೆಯಿಂದ ಸಾಯುತ್ತಲಿದ್ದೆನು!! ಇದೆಂತಹ ವಿರೋಧ ಪರಿಸ್ಥಿತಿಯು ? ಅಷ್ಟರಲ್ಲಿ ಇಂಗ್ಲಿಷ ದಂಪತಿಗಳು ಅಲ್ಲಿಗೆ ಬಂದರು ಆ ದಂಪತಿಯನ್ನು [illegible] ಅವರಿಂದ ದುಡ್ಡು ಬೇಡಬೇಕೆಂದು ನನಗೆನಿಸಿತು ಆದರೆ ಭಿಕ್ಷೆಯನ್ನು ಬೇಡಲಿಕ್ಕೆ ನಾಲಗೆಯು ಏಳಲೊಲ್ಲದು. ಅವರನ್ನು [illegible], ನಾನು ಹಾಗೆಯೇ ಮುಂದೆ ಸಾಗಿದೆನು ಆ ಕಾಲದ [illegible] ವಿಚಾರವು ನನಗೆ ಉತ್ತಮವಾದ್ದೆಂದು ನನಗೆನಿಸಿತು ಆ ಇಂಗ್ಲಿಷ ಸ್ತ್ರೀಯ ಕೈಬೆರಳು ರತ್ನ ಖಚಿತವಾದ ಉಂಗುರ ಪ್ರಕಾಶದಿಂದ ಬೆಳಗುತಿತ್ತು ಆದರೆ ನನ್ನಲ್ಲಿ ಒಂದು ಬಿಡಿ ಪೈ ಸಹ ಇದ್ದಿಲ್ಲ ರಾತ್ರಿಯಲ್ಲಿ ೧೧ರಿಂದ ೧೨ರವರೆಗೆ ನಾನು ಸಾರ್ವಜನಿಕ ಹೊಲಸುಖಾನೆಯಲ್ಲಿ ಕಾಲ ಕಳೆಯುತ್ತೇನೆ ಒಮ್ಮೊಮ್ಮೆ [illegible] ಹಳೇ ಮನೆಯ ಆಶ್ರಯದಲ್ಲಿ ನಿಲ್ಲುತ್ತೇನೆ. [illegible] ಒಳ ಹೋಗಿ ಮಲಗುತ್ತೇನೆ ಮುಂಜಾವಿನಲ್ಲಿ [illegible] ಒಳ ಅಂಗಡಿಯಲ್ಲಿಟ್ಟಿದ್ದ ಕನ್ನಡಿಯಲ್ಲಿ ನನ್ನ ರೂಪವನ್ನು ನೋಡಿದೆನು ಎಂತಹ ವಿಲಕ್ಷಣವಾದ ನನ್ನ ಚಿತ್ರವದು' ಅದನ್ನು ನೋಡಿ ನನಗೆ ಭಯ ಉಂಟಾಯಿತು ಅಷ್ಟರಲ್ಲಿ ನನ್ನನ್ನು ಆ ಊರಿನವನೊಬ್ಬನು ಭೇಟಿಯಾದನು.

ಅವನಿಗೆ ನಾನು ಸಂಗತಿಯನ್ನು ತಿಳಿಯಪಡಿಸಿದೆ ಅದನ್ನು ಕೇಳಿ ಅವನಿಗೆ ನಗೆ ಬಂದಿತು ನನಗೆ ಮಾತ್ರ ಸಿಟ್ಟು ಬಂದಿತು ಅವನನ್ನು ಬೈಯ ತೊಡಗಿದೆನು ಅವನು ಹತ್ತು ನಾಣ್ಯಗಳನ್ನು ನನ್ನ ಕೈಯಲ್ಲಿಟ್ಟು ಹೋದನು. ಕೂಡಲೇ ಅವನ ಉಪಕಾರಕ್ಕೆ ಕೃತಜ್ಞತೆಯನ್ನು ಪ್ರಕಟಿಸಿ ರೊಟ್ಟಿಯ ಒಂದು ಅಂಗಡಿಯನ್ನು ಸೇರಿದೆನು ಅಲ್ಲಿ [illegible] ನಾಯಿಯಂತೆ ಜಗಿದೆನು ಕಳೆದ [illegible] ತಾಸುಗಳಲ್ಲಿ ನನ್ನ ಹೊಟ್ಟೆಯಲ್ಲಿ ಅನ್ನದ ಒಂದು ಕಣವೂ ಕೂಡ ಇರಲಿಲ್ಲ ''

ಮುಸೋಲಿನಿಯು ದೈವಸತ್ವಪರೀಕ್ಷೆ— ದೈವದ ಶಕ್ತಿಯಲ್ಲ, ವ್ಯಕ್ತಿಯ ಹಟ! ಎಂಬುದು ಅವನ ನಿರ್ಧಾರ ಮುಸೋಲಿನಿಯು ದೈವವನ್ನು ನಂಬಿ ಸಾಹಸಪಡದಿದ್ದರೆ ಇಂದು ರಾಜ್ಯಾಳುವ ಶಕ್ತಿಯು ಅಧಿಕಾರವು ಅವನ ಕೈಯೊಳಗೆ ಬರುತ್ತಿತ್ತೇ? ಬ್ರಿಟಿಷ ಸಾಮ್ರಾಜ್ಯದಲ್ಲಿ ಈಗ ಪ್ರಧಾನಮಂತ್ರಿ ಪದವಿಯಲ್ಲಿರುವ ರಾಮ್ಸೆ ಮೆಕ್‌ಡೊನಾಲ್ಡರು ಇದೇ ಅವಸ್ಥೆಯಲ್ಲೊಮ್ಮೆ ಇದ್ದರು ಅಂದಿನ ಗರೀಬ ಮೆಕ್‌ಡೊನಾಲ್ಡನೆಲ್ಲಿ? ಇಂದಿನ ಶ್ರೀಮಂತ ಮೆಕ್‌ಡೊನಾಲ್ಡರೆಲ್ಲಿ?

'ಸಾಧಿಸಿದರೆ ಸಬಳ ನುಂಗಬಹುದು'' ಎಂಬ ನಾಣ್ಣುಡಿಯನ್ನು ತಮ್ಮ ಕಾರ್ಯ ಮುಖೇನ ಪ್ರದರ್ಶಿಸುವ ಇಂತಹ ಉನ್ನತ ವ್ಯಕ್ತಿಗಳೇ ಜನತೆಯ ಧುರೀಣರಾಗಲರ್ಹರು! ವಿದಿವಿಲಾಸವನ್ನು ಲೋಕಕ್ಕೆ ಸಾರಲು ಯೋಗ್ಯರು! ಭರತವರ್ಷದಲ್ಲಿ ಇಂತಹ ವೀರರಗ್ರೇಸರು ದಿನೇ ದಿನೇ ಜನಿಸಲಿ!

* * *

[illegible] ಶಾಸ್ತ್ರೀಯ
ವಾದದ್ದು.

ಕಾಮದ ಗುಟ್ಟು

ಸುಖಕ್ಕೆ ಸುಖಕರ
ವಾದದ್ದು.

ಲೇಖಕರು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ (ಶಿವಶಂಕರ ಮುನ್ನುಡಿ

ಹೊಸ ಪುಸ್ತಕ. ಇಂಥಾ ಪುಸ್ತಕವು ಬೇರೊಂದಿಲ್ಲ.

ಕಾಮತಂತ್ರದಲ್ಲಿ ಹೊಸ ಹೊಸ ಕಲ್ಪನೆಗಳು ದಿನ ದಿನವೂ ಹುಟ್ಟುತ್ತಿವೆ ತರುಣರ ತಾರುಣ್ಯ ಪ್ರಭಾವದಲ್ಲಿ ತೊಳಲುವ ಎಲ್ಲಾ ಕಾಮುಕಮನುಷ್ಯರಿಗೂ ಮನಃಪೂರ್ವ ಕ್ರಿಯಾಸಿದ್ಧಿಯನ್ನು ಸ್ವಾರಸ್ಯವಾಗಿ ತೋರಿಸಿಕೊಡುವ ಅತ್ಯುತ್ತಮ ಗ್ರಂಥ

ಕಾಮೋಪಭೋಗದ ನ್ಯೂನತೆಗಳಿಗೆಲ್ಲಾ ಔಷಧಿಗಳು ವಿವರವಾಗಿ ಹೇಳಲ್ಪಟ್ಟಿವೆ ಈ ಪುಸ್ತಕವಿದ್ದರೆ—ಎಲ್ಲಾ ಅಂತರಂಗದ ವ್ಯಾಧಿಗಳಿಗೂ ಸ್ವತಃ ಅಂತರಂಗ ಚಿಕಿತ್ಸೆ ಮಾಡಿಕೊಳ್ಳಬಹುದು

ಬೆಲೆ ೧೨ ಆಣೆ ಮಾತ್ರ ಅಂಚೆವೆಚ್ಚ ಪ್ರತ್ಯೇಕ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ದೊರೆಯುತ್ತೆ **ಬೇಗನೆ ತರಿಸಿಕೊಳ್ಳಿ.**

ಇತರ ಗ್ರಂಥಗಳು

ಆಹುತಿ (ನಾಟಕ) ರೂ ೧, ಅದಿದ್ದೇನು (ನಾಟಕ) ೩ ಆಣೆ, **ಮೋಹನಾಸ್ತ್ರ** (ನಾಟಕ) ರೂ. ೧. **ಕುವರ ವೈರಾಗ್ಯ** (ಸಚಿತ್ರ ನಾಟಕ)—ರೂ ೧ ವಿವೇಕಾನಂದರ ಕರ್ಮಯೋಗ—ರೂ ೧ **ಹೊಸಹುಟ್ಟು** (ಸಚಿತ್ರ)—ರೂ. ೧, **ಸಾಹಿತ್ಯದ ಗುಟ್ಟು**—೬ ಆಣೆ **ತ್ರಿಶಂಕುಸ್ವರ್ಗ** (ನಾಟಕ)—೮ ಆಣೆ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯ ಶ್ರೇಷ್ಠ ಸಾಧುವರ್ಯ ನಾಗಮಹಾಶಯರ **ಜೀವನಕಥೆ**—ರೂ ೧

ನವಜೀವನ ಗ್ರಂಥಭಂಡಾರದಿಂದ ಹೊರಟಿರುವ (೧) ಆಕಾಶದೊಳಗಿನ ಅದ್ಭುತ ಚಮತ್ಕಾರಗಳು ೧—೮—೦ (೨) ಧರ್ಮ ಸಂಭವ—೧—೪—೦ (೩) ಹಿಂದೂಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು ೧—೮—೦ ಕನ್ನಡಪುಸ್ತಕಗಳೆಲ್ಲಾ ದೊರೆಯುತ್ತವೆ

ವಿ ಜಿ. ಟಿ ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ

ನಿದ್ರಿಸಹೋಗುವಾಗ 'ಓವಲ್‌ಟಿನ್'ನ್ನು ಕುಡಿಯಿರಿ – ಅದು ಸ್ನಾಯುವನ್ನು ಶಾಂತಗೊಳಿಸಿ, ಶಾಂತಿಕರವಾದ ನಿದ್ರೆಯನ್ನೀಯುತ್ತದೆ

ಹವಾಗುಣದಿಂದಲೂ ನಿಮ್ಮ ಕೆಲಸಕಸಬುಗಳಿಂದಲೂ ನಿಮ್ಮ ಸ್ನಾಯುಗಳು ಶಾಂತಿರಹಿತವಾಗುತ್ತವೆ. ಇದರಿಂದ ನಿದ್ರೆಯು ಸಿಗುವುದಿಲ್ಲ ನಿಮಗೆ ನಿದ್ರೆಯು ಹತ್ತದಿದ್ದರೆ ಸ್ನಾಯುಗಳು ಸರಿಯಾದ ಪೋಷಣೆ ಇಲ್ಲದಿಲ್ಲವೆಂದು ಭಾವಿಸಿರಿ ಅವುಗಳು ಬಳಲುತ್ತಿವೆಯೆಂದು ತಿಳಿಯಿರಿ ಸ್ನಾಯುಗಳನ್ನು ಬಲಗೊಳಿಸಲು ನಿಮ್ಮ ಆಹಾರವು ಪರಿಪುಷ್ಟಿಯುಳ್ಳದ್ದಲ್ಲವೆಂದು ತಿಳಿಯಿರಿ

ನಿಮ್ಮ ಸ್ನಾಯುಗಳನ್ನು ಚೈತನ್ಯಯುಕ್ತವಾಗಿ ಓವಲ್‌ಟಿನ್ ಮಾಡುತ್ತದೆ ಇದನ್ನು ನಿಸರ್ಗಸಿದ್ಧವಾಗಿ ತಯಾರಿಸಲಾಗಿದೆ ದೇಹದ ಮೆದುಳುಗಳನ್ನು ದೃಢೀಕರಿಸುವ ಇದರ ಪ್ರತಿಯೊಂದು ಅಣುವೂ ಅಮೂಲ್ಯವಾದುದು.

ನಿಮ್ಮ ನರಗಳನ್ನು ಈ ಪಾನೀಯದಿಂದ ಪೋಷಿಸಿರಿ ನಿದ್ರಿಸಹೋಗುವ ಸಮಯದಲ್ಲಿ ಒಂದು ಕಪ್ ಓವಲ್‌ಟಿನ್"ನ್ನು ಕುಡಿಯಿರಿ ಶಾಂತಿಕರ ಮತ್ತು ಸುಖನಿದ್ರೆಯು ಸಿಗುತ್ತದೆ

ಆರೋಗ್ಯ ಬಲ, ಧಾತುಪುಷ್ಟಿಗೆ ಓವಲ್ಟಿನಿನ ಹಾಗೆ ಇನ್ನೊಂದಿಲ್ಲ

ಅತ್ಯುತ್ತಮವಾದ ಓವಲ್‌ಟಿನ್ನಿಗೆ ಸರಿಸಮಾನವಾದ ಇನ್ನೊಂದು ಪೇಯವಿಲ್ಲ ಅನುಕರಣೀಯವಾದ ಬೇರೆ ಮಿಶ್ರಣವಾದ ಮತ್ತು ಸಪ್ರಮಾಣ ಕೂಡದಿಂದಿರದ ಎಲ್ಲಾ ಆಹಾರಗಳನ್ನು ತಿರಸ್ಕರಿಸಿರಿ

ನಿಸರ್ಗಸಿದ್ಧವಾದ ಸುನಿದ್ರೆಯನ್ನು ಕೊಡುತ್ತದೆ

OVALTINE

TONIC FOOD BEVERAGE

ಅತೀ ಶುದ್ಧ ಮತ್ತು ಅತ್ಯುತ್ತಮ ಕರಸ್ಪರ್ಶವಾಗಿಲ್ಲ

ಏಜಂಟರು ಎಲ್ಲಾ ಕೆಮಿಷ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್ ರೈಟ ೮೫ ಎ ರಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಬೊಂಬಾಯಿ, ಮದ್ರಾಸ್ ರಂಗೂನುಗಳಲ್ಲಿ

ಓವಲ್‌ಟಿನ್ ರೊಟ್ಟಿಗಳು ಬಹಳ ಪೋಷಣಾ ಶಕ್ತಿಯುಳ್ಳವುಗಳು ಅವುಗಳನ್ನು ಒಂದು ಕಪ್ ಓವಲ್‌ಟಿನ್ ಅಥವಾ ಕಾಫಿ ಟೀ ಬೆಣ್ಣೆ ಹಣ್ಣುಗಳೊಡನೆ ಸ್ವೀಕರಿಸಿರಿ ಅವು ಬಿಸ್ಕತ್ತುಗಳಿಗಿಂತ ಅತ್ಯುತ್ತಮ, ರುಚಿಕರ, ಮತ್ತು ಜೀರ್ಣಕರ

OV/106

ENCOURAGE INDIAN COMPANIES AND INDUSTRIES.

SWADESHI MEANS PROVIDING
FOOD FOR STARVING MILLIONS
DEAL IN INDIAN GOODS AND KEE
INDIAN MONEY IN INDIA

M V KAMATH,
SWADESHI PRACHARAK SANGHA,
Kasaragod, S.

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.

(REGISTERED UNDER COMPANY'S ACT 191
ಕಾಸರಗೋಡು, ದ ಕನ್ನಡ
ಮೂಲಧನ ರೂಪಾಯಿ 50 000—0—0
ಪಾಲು 1 ಕ್ಕೆ ರೂಪಾಯಿ 10—0—0 ರಂತೆ
5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸುವಂತೆ ಸಹಾಯಕರಾಗಿ, ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯ ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿರುವ ಒಂದು ಕಂಪೆನಿಯು ಇಲ್ಲವೆಂದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿಗಳೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನುಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯುಳ್ಳದಾಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳು ಸಗಟು ಮತ್ತು ಚಿಲ್ಲರೆಯಾಗಿ ಮಾರಾಟಕ್ಕಿದೆ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮೆನೇಜಿಂಗ್ ಡೈರೆಕ್ಟರ್

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್
ಕಾಸರಗೋಡು, ದ ಕ

* * *

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P A 24/32

1 ಮುತ್ತಕ್ಕ ಶೆಡ್ತಿ, 2 ಪಿ ಎಲ ಶೆಟ್ಟಿ—ಅರ್ಜಿದಾರರು

ಮೇಲ್ಕಂಡ ಅರ್ಜಿ ವ್ಯವಹಾರ [illegible] 1ನೇ ಅರ್ಜಿದಾರಳ ಮಗ 2ನೇ ಅರ್ಜಿದಾರನ ಸಹೋದರ ಮೃತ ಜಗನ್ನಾಥ ಶೆಟ್ಟಿಗೆ "The General Assurance Society Ltd Ajmer ನಂಬ್ರ 21934ನೇ ಪೋಲಿಸಿ ಬಾಬ್ತು ಒಟ್ಟಕ್ಕೆ ರೂ 500-0 0 ವಸೂಲು ಮಾಡಲಿಕ್ಕೆ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಮಿಗ್ಗೆ ಅರ್ಜಿದಾರರು ದಾಖಲ್ ಮಾಡಿದ ಸದ್ರಿ ಅರ್ಜಿಯು ತಾ 18—6—32ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆ ಬಗ್ಗೆ ಆಕ್ಷೇಪ ಹೇಳುವವರು ಸದರಿ ತಾರೀಕು ದಿವಸ ಸದರಿ ಅರ್ಜಿ ತನಿಕೆ ಸಮಯ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸಲಾಗುತ್ತದೆ

ಉಡುಪಿ
೨೦ ೫ ೩೨

P Padmanabha Rao
Vakil for Petitioners

NOTICE.

GOVERNMENT TRADES SCHOOL MANGALORE

Reopens on the 16th June '32 Offer instruction in Engineering, Mechanics Carpentry and Wood-work. Admission i restricted to bona fide apprentices Application form & prospectus can be had from the Superintendent

* * *

ವಿವಿಧ ಸಮಾಚಾರಗಳು.

ಮೀರಾಬಾಯಿಯವರನ್ನು ಬಿಟ್ಟರು.

ಮುಂಬಾಯಿಯಲ್ಲಿ ಶ್ರೀಮತಿ ಮೀರಾಬಾಯಿ (ಮಿಸ್ ಸ್ಲೇಡ್) ಅವರು ತಮ್ಮ ಕಾರಾಗೃಹವಾಸವನ್ನು ಮುಗಿಸಿ ತಾ ೧೭ನೇ ದಿವಸ ಬಿಡುಗಡೆ ಮಾಡಲ್ಪಟ್ಟರು. ಬಿಡಲ್ಪಟ್ಟೊಡನೆ ಅವರು ನೆಟ್ಟಗೆ ಪುನಹ ಹೋಗಿ ಯೆರವಾಡ ಜೈಲಿನಲ್ಲಿರುವ ಗಾಂಧಿಜೀಯವರನ್ನು ನೋಡಬೇಕೆಂದು ಜೈಲ್ ಸುಪರಿಂಟೆಂಡೆಂಟರೊಡನೆ ಕೇಳಿಕೊಂಡರು. ಪ್ರತಿ ಬುಧವಾರ ದಿನ ಗಾಂಧಿಜೀಯವರ ನಾಲ್ಕು ಮಿತ್ರರನ್ನು ಅವರ ಸಂದರ್ಶನಕ್ಕೆ ಬಿಡುವಂತಹ ಕ್ರಮ—ಆ ಕ್ರಮಾನುಸಾರವಾಗಿ ಮೀರಾಬಾಯಿಯವರೂ ಸಂದರ್ಶನಾಪೇಕ್ಷಿತರಾಗಿ ಹೋದುದು—ಮೊದಲಿನ ಸಲ ಮೀರಾಬಾಯಿಯವರನ್ನು ಒಳಗೆ ಬಿಟ್ಟಿದ್ದರು. ಆದರೆ ಮೊನ್ನೆ ಮಾತ್ರ ಅವರಿಗೆ ಅಪ್ಪಣೆಯು ದೊರೆಯಲಿಲ್ಲ. ಅನೇಕ ರಾಜಕೀಯ ಕೈದಿಗಳು ತಮ್ಮ ಬಿಡುಗಡೆಯ ನಂತರ ಗಾಂಧಿಜೀಯವರನ್ನು ಕಂಡು ಬರುತ್ತಿದ್ದಾರೆ. ಆದರೆ ಮೀರಾಬಾಯಿಯವರು ಗಾಂಧಿಜೀಯವರನ್ನು ನೋಡಲು ಅವಕಾಶ ಸಿಗಲಿಲ್ಲ. 'ಬಾಪುವನ್ನು ನೋಡಲಿಕ್ಕೆ ನನ್ನನ್ನು ಯಾಕೆ ಬಿಡಲಿಲ್ಲವೆಂದು ನನಗೆ ತಿಳಿಯದು' ಎಂದು ಒಬ್ಬರೊಡನೆ ಹೇಳಿದರು. ಮೀರಾಬಾಯಿಯವರು ಮುಂಬಾಯಿಯಲ್ಲಿ ಖಾದಿ ಪ್ರಚಾರವನ್ನು ಮಾಡಲಿರುವರು.

* * *

ಲಿಂಡ್‌ಬರ್ಗ್‌ನ ಕೂಸು

ಕರ್ನಲ್ ಲಿಂಡ್‌ಬರ್ಗ್ ಎಂಬವರ ಕೂಸನ್ನು ನ್ಯೂಯಾರ್ಕ್‌ನಲ್ಲಿ ಯಾರೋ ಕಳ್ಳರು ಎತ್ತಿಕೊಂಡು ಹೋಗಿ ಆ ಕೂಸಿನ ತಂದೆಯಿಂದ ಹಣವನ್ನು ಲುಟಾಯಿಸಿದ ವಾರ್ತೆ[illegible]ಯಷ್ಟೆ. ಆ ಮಗುವನ್ನು ಕೊಲೆ ಮಾಡಿದವರನ್ನು ಹಿಡಿಯಲು ಸರಕಾರವು ಬಹಳ ಮೆಹನತ್ತಿನಿಂದ ಕೆಲಸಮಾಡಿತು. ಕೊನೆಗೆ ಮಿಸ್ಟರ್ ಕರ್ಟಿಸ್ ಎಂಬ ಮಿಲಿಯಾಧಿಪತಿಯೊಬ್ಬನು ತನಗೆ ಕಳ್ಳರ ಪರಿಚಯವಿದೆಯೆಂದು ಹೇಳಿದ್ದನ್ನು ಕೇಳಿ ಮಗುವಿನ ಕೊಲೆಯಾದೊಡನೆ ಪೋಲೀಸರು ಕರ್ಟಿಸನನ್ನು ವಿಚಾರಿಸತೊಡಗಿದರು. ಕಳ್ಳರನ್ನು ಹಿಡಿದುಕೊಡಬೇಕೆಂದು ಕರ್ಟಿಸನೊಡನೆ ಕೇಳಿಕೊಂಡರು. ಆದರೆ ಕರ್ಟಿಸನು [illegible] ಹೇಳಿದುದು ಸುಳ್ಳೆಂದನು. ಇದನ್ನು ಕೇಳಿ ಸರಕಾರದವರು ಅವನನ್ನು ಸಂಶಯದ ಮೇಲೆ ಕೈದು ಮಾಡಿರುವರು. ಅವನನ್ನೀಗ ಬಹಳ ಬಂದೋಬಸ್ತಿನಿಂದ ಇಡಲಾಗಿದೆ.

* * *

ಬಾಬು ವಿಪಿನಚಂದ್ರಪಾಲರ ಮರಣ

ಇವರು ತಮ್ಮ ೭೬ನೇ ವರ್ಷ ಪ್ರಾಯದಲ್ಲಿ ಕಲ್ಕತ್ತೆಯಲ್ಲಿ ಸ್ವರ್ಗಸ್ಥರಾದರು. ಒಳ್ಳೇ ವಿದ್ವಾಂಸರೂ ದೇಶಭಕ್ತರೂ ಆಗಿದ್ದ ಇವರು ಹಿಂದಿನ ಕ್ರಾಂತಿಕಾರ ತತ್ವಪ್ರಚಾರಕರು. ಹಿಂದೂದೇಶವು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಬೇಕೆಂದೇ ಅವರ ಆಶೆ. [illegible] ಸುರೇಂದ್ರನಾಥ ಬೆನರ್ಜಿ, ಅರವಿಂದಘೋಷ್ ವಿಪಿನಚಂದ್ರಪಾಲ್ ಎಂಬವರು ಬಂಗಾಳ ಕೇಸರಿಗಳು. ವಿಪಿನ ಚಂದ್ರ[illegible] ಪತ್ರಿಕೆಯ [illegible] ಯಾವುದು ತನಗೆ ಅನ್ಯಾಯವೆಂದು ಕಂಡಿತೋ ಅದನ್ನವರು ಖಂಡಿಸುತ್ತಿದ್ದರು. ಅರವಿಂದಘೋಷರನ್ನು ಸರಕಾರವು ಆರೋಪಿಸಿ ಬಂಧಿಸಿದಾಗ ವಿಪಿನಚಂದ್ರರು ಘೋಷರ ಬಿಡುಗಡೆಯ ಸಲುವಾಗಿ ಬಹಳ ಹೆಣಗಾಟ ಪಟ್ಟರು. ಮಾತೃಭೂಮಿಯ ಸೇವೆಯನ್ನು ನಿರ್ಮಲಾಂತಃಕರಣವಾಗಿ ಮಾಡಿದವರಲ್ಲಿ ವಿಪಿನಚಂದ್ರ ಪಾಲರೂ ಅಗ್ರಗಣ್ಯರು. ಅನೇಕ ಸಾರಿ [illegible]ನೆಯನ್ನೂ ಸೇರಿದರು. ಸರಕಾರಕ್ಕೆ ತಮ್ಮ ಹೃದಯದ ಕಾಂಕ್ಷೆಯನ್ನು ತಿಳುಹಿಸಿದರು. ವಿಪಿನಚಂದ್ರಪಾಲರು ಬಂಗಾಳ ವಿಭಜನೆಯ ಕಾಲದಲ್ಲಿ ಲೋರ್ಡ್ ಕರ್ಜನರ ಆಳಿಕೆಯ ಧೋರಣೆಯನ್ನು ತೀವ್ರವಾಗಿ ಖಂಡಿಸಿದ್ದರು. ವಿಭಜನೆಯ ಕಾಲದಲ್ಲಿ ಮಹತ್ತಾದ ಚಳವಳವನ್ನು ಹೂಡಿ ಖ್ಯಾತಿಗೊಂಡರು. ಕಾಂಗ್ರೆಸ್ ಬಹು ಮಂದ ಹೆಜ್ಜೆಯನ್ನು ಇಡುತ್ತದೆಂದೇ ವಿಪಿನರು ಪದೇ ಪದೇ ಹೇಳುತ್ತಿದ್ದರು. ಅವರ ಮರಣದಿಂದಾಗಿ ಬಂಗಾಳದ ಒಬ್ಬ ಕಾಂಗ್ರೆಸರನು ತಪ್ಪಿಹೋದಂತಾಯಿತು.

* * *

ಮಿಲಿಯಾಧಿಪತಿಯು ಭಿಕ್ಷಾಧಿಪತಿಯೇ?

ಸ್ವಿಡಿಶ್ ಬೆಂಕಿಕಡ್ಡಿಗೆ ಕಾರ್ಖಾನೆಗಳ ಮಾಲೀಕರಾದ ಐವರ್ ಕ್ರೂಗರ್ ಎಂಬವರು ಪ್ರಾಣತ್ಯಾಗ ಮಾಡಿದರಷ್ಟೆ! ಅವರ ಕಾರ್ಖಾನೆಗಳೆಲ್ಲವುಗಳಲ್ಲಿ ಲೆಕ್ಕ ಪರಿಶೋಧನೆಯು ನಡೆದು, ಈ ಕಂಪೆನಿಗಳು ಈಗ ಭೂಲೋಕದಲ್ಲಿ ಇಷ್ಟರತನಕ ನಡೆಯದಿರುವ ದಿವಾಳಿತನಕ್ಕೆ ಗುರಿಯಾಗಿವೆ. ಮಿಲಿಯಗಟ್ಟಳೆ ಹಣದಿಂದ ವ್ಯಾಪಾರ ವಹಿವಾಟವನ್ನು ಕ್ರೂಗರ್‌ರವರ ಮಾಲಿಕತನದಿಂದ ಕೆಲಸ ನಡೆಸುತ್ತಿದ್ದುವಾದರೂ, ಈಗ ಅವುಗಳು ಚಿಕ್ಕಾಸು ಇಲ್ಲದಂತಾಗಿವೆ. ಕ್ರೂಗರ್‌ರವರ ಖಾಸಗಿ ಸಾಲವು ಈಗ ೫೦೦ ಮಿಲಿಯನ್ 'ಕ್ರೋನರ್' ಎಂದೂ, ಇನ್ನಿತರ ಸಾಲಗಳು ೪೦೦ ಮಿಲಿಯ 'ಕ್ರೋನರ' ಎಂದೂ ತಿಳಿದುಬಂದಿದೆ.

ಗಂಡನನ್ನು ಕೊಲ್ಲಿಸಲೊಪ್ಪಿದ ಹೆಂಡತಿ

ನಾಗಪುರದಲ್ಲಿ ಪುಣೆಯನೆಂಬವನೊಬ್ಬನು ಕೆಲವರ್ಷಗಳ ಹಿಂದೆ ರುಖಿ ಎಂಬವಳನ್ನು ಮದುವೆಯಾಗಿದ್ದನು. ಅವನಲ್ಲಿ ಸ್ವಲ್ಪ ಹಣಕಾಸಿದ್ದುದನ್ನು ನೋಡಿ ರುಖಿಯ ತಂದೆಯೂ ರುಖಿಯ ಚಿಕ್ಕತಾಯಿ ಗುಜಿ ಎಂಬವಳೂ ಪುಣೆಯನ್ನು ಕೊಲ್ಲಲು ಒಂದು ಪಿತೂರಿಯನ್ನು ನಡೆಸಿದರು. ಒಂದು ದಿನ ರುಖಿಯ ತಂದೆಯು ಒಂದು ವಿಹಾರ ಸಂಚಾರವನ್ನು ಮಾಡಬೇಕೆಂದು ಅಳಿಯನೊಡನೆ ಹೇಳಿದನು. ಅಳಿಯನು ಅದಕ್ಕೊಪ್ಪಲು, ಮಾವನಳಿಯಂದಿರೂ ಗುಜಿಯೂ ಮತ್ತೊಬ್ಬ ಕಟುಕನೂ ಒಂದು ದಿನ ವಿಹಾರಸಂಚಾರಕ್ಕೆಂದು ಒಂದು ನಿರ್ಜನ ಪ್ರದೇಶಕ್ಕೆ ಹೋದರು. ತಮಗೆ ಒಪ್ಪುವ ಒಂದು ಸ್ಥಳಕ್ಕೆ ಬರಲು ಪುಣೆಯನ್ನು ಕಟುಕನೂ ಮಾವನೂ ಕೂಡಿ ಹೊಡೆದು, ಕತ್ತು ಹಿಸುಕಿ, ಕೊಂದಿಕ್ಕಿದರು. ಹೆಣದ ಕುತ್ತಿಗೆಗೆ ಒಂದು ಕಲ್ಲನ್ನು ಕಟ್ಟಿ ಬಳಿಯಲ್ಲಿ ಹರಿಯುತ್ತಿದ್ದ ಒಂದು ಸರೋವರಕ್ಕೆಸೆದರು. ದುರ್ದೈವವಶಾತ್ ಸರೋವರದಲ್ಲಿ ನೀರು ಕಡಿಮೆಯಿದ್ದುದರಿಂದ ಹೆಣವು ಮುಳುಗದೆ ಹೋಯಿತು. ಒಡನೆ ಅದನ್ನು ನೀರಿನಿಂದ ತೆಗೆದು ವಧೆಯು ನಡೆದ ಸ್ಥಳದಲ್ಲೇ ಹೂಣಲಾಯಿತು. ಪುಣೆಯನ ಉಪದ್ರವವು ಹೇಗೂ ತಪ್ಪಿತೆಂದು ಸಂಚುಗಾರರು ಮನೆಗೆ ಬಂದು ಬಹಳ ಸುಖಸಂತೋಷದಲ್ಲಿದ್ದರು. ರುಖಿಗೆ ಈ ಸಂಗತಿಯು ತಿಳಿಯದಿರಲಿಲ್ಲ. ಪತಿಯು ಊರಿನಲ್ಲಿಲ್ಲದಿರುವುದನ್ನು ನೋಡಿ ಒಬ್ಬ ನೆರೆಹೊರೆಯವನು ಪೋಲೀಸರಿಗೆ ತಿಳುಹಿಸಿದನು. ತನಿಖೆ ನಡೆಯಿತು. ಕೊನೆಗೆ ಅಳಿಯ ಮಾವಂದಿರ ವಿಹಾರಕೂಟದ ಪ್ರಸಂಗವು ಹೊರಬಿತ್ತು. ಎಲ್ಲರನ್ನೂ ಕೈದುಮಾಡಲಾಯಿತು. ೬ ಮಂದಿಗಳ ಮೇಲೆ ಕೋರ್ಟಿನಲ್ಲಿ ತಕ್ಸೀರು ನಡೆದು ವಿಚಾರಣೆಯಾಗುವಾಗ ನೇಣಿನ ಶಿಕ್ಷೆಯು ಹೊರಬಿತ್ತು.

* * *

ಮುಂಬಾಯಿಯ ಗಲಾಟೆಯು ನಿಂತಿತು!

ಮುಂಬಾಯಿಯಲ್ಲಿ ಕಳೆದ ವಾರ ನಡೆದ ಹಿಂದೂಮುಸ್ಲಿಮರ ಗಲಭೆಯು ಶಾಂತವಾಗಿದೆ. ಅಂಗಡಿಗಳೂ ವರ್ಕಶಾಪುಗಳೂ ತೆರೆಯಲ್ಪಟ್ಟಿವೆ. [illegible] ಸಂಬಂಧಪಟ್ಟ ಬ್ಯಾಂಕು [illegible]ನಾಗಿದೆ. ಎಷ್ಟೋ ಲಕ್ಷ ರೂಪಾಯಿ ನಷ್ಟವಾಗಿದೆ. [illegible] ಭುಲೇಶ್ವರ ಭೆಂಡಿಬಜಾರುಗಳಲ್ಲಿ ಹೇರಳ ನಷ್ಟವುಂಟಾಗಿರುತ್ತದೆ. ಮಾರ್ಗದ ಮೇಲೆ ಸುರಿಯಲ್ಪಟ್ಟ ಎಸೆಯಲ್ಪಟ್ಟ ಸಾಮಾನುಗಳನ್ನು [illegible] ಪಕ್ಕದವರು ಹೆಕ್ಕುತ್ತಾ ಕಣ್ಣೀರು ಸುರಿಸುತ್ತಿರುವರು. ಒಟ್ಟು [illegible]ಕ್ಕಿಂತ ಹೆಚ್ಚು ಮರಣಗಳಾಗಿವೆ. [illegible]ಕ್ಕಿಂತ ಹೆಚ್ಚು ಜನ [illegible]. ಆಸ್ಪತ್ರೆಗಳೆಲ್ಲವೂ ಜಖಂಗೊಂಡ ಜನರಿಂದ ತುಂಬಿಕೊಂಡಿವೆ. ಆ ಜಖಂಗೊಂಡವರಲ್ಲಿ ಕೆಲವರು ಮರಣೋನ್ಮುಖರಾಗಿದ್ದಾರೆ. ೩೦೦ ಜನರನ್ನು ಕೈದುಮಾಡಿದ್ದಾರೆ. ಇವರೆಲ್ಲರ ಮೇಲೂ ತಕ್ಸೀರು ನಡೆಯಲಿರುವುದು. ಕಾಂಗ್ರೆಸ್ಸಿನ ಸ್ವಯಂಸೇವಕರು ತಮ್ಮ ಜಾತಿಬಾಂಧವರಾದ ಮುಸ್ಲಿಮರೊಡನೆ ಸೇರಿ ಕೊಲೆಯನ್ನು [illegible]ದರೆಂದೂ ಅಂತವರನ್ನು ಗುಂಡಿನಿಂದ ಹೊಡೆದ [illegible] ಒಬ್ಬ ಮುಸಲ್ಮಾನನ ಮಾತಿನಿಂದ ತಿಳಿದುಬರುತ್ತದೆ. ಹಿಂದೂ ಮುಸ್ಲಿಮರ ದ್ವೇಷಾಗ್ನಿಯು ಆರಿಹೋಗಿರುವುದಿಲ್ಲ. ಶೌಕತಾಲಿಯವರು ರಾಜಕೀಯಕ್ಕೆ ರಾಜೀನಾಮೆ ಕೊಟ್ಟು [illegible] ಮಾಡಿದ್ದ ಹಿಂದೂಗಳಿಂದ [illegible] ಹೊರನಡೆದರು. ಶೌಕತಾಲಿಯವರನ್ನು ಗವರ್ನರರು ಕರೆದು ಹೀಗೆ ಹೇಳಿದರಂತೆ: ಇಂತಹ ಸಮಯದಲ್ಲಿ ರಾಜಿಗಾಗಿ ಹೋರಾಡದೆ ಸುಮ್ಮಸುಮ್ಮಗೆ ಹಿಂದೂಗಳನ್ನು ದೂರಿ ಫಲವಿಲ್ಲ ಎಂದು ಗವರ್ನರರು ಶೌಕತಾಲಿಯವರಿಗೆ ಹೇಳಬಹುದೆಂದು ಕೆಲವು ಪತ್ರಿಕೆಗಳೆನ್ನುತ್ತಿವೆ. ದಂಗೆಯಲ್ಲಿ ಮುಸ್ಲಿಮರ ಮಕ್ಕಳು ಮರಿಗಳೂ ಸಹಕಾರಿಗಳಾದರೆಂದು ತಿಳಿದು ಬಂದಿದೆ. ಹಿಂದೂಗಳಲ್ಲಿ ಕೆಲವು ಪುಂಡರನ್ನು ಮೊನ್ನೆ ಕೈದುಮಾಡಿದರು. ಮುಸಲ್ಮಾನರು ಹಿಂದೂಗಳ ವೇಷವನ್ನು ಹಾಕಿ ಹಿಂದೂಗಳ ವಠಾರಕ್ಕೆ ಶಸ್ತ್ರ ಸಮೇತ ಹೋಗಿ ಕೆಲವರನ್ನು ಕೊಂದ ವರ್ತಮಾನವಿದೆ. ಹಾಗೆ ಹಿಂದೂಗಳ ಯುವಕರು ಮಾಡದಿರಲಿಲ್ಲವೆಂದೂ ಹಾಗೆ ಮಾಡಿದವರಿಗೆ ತಕ್ಕ ಶಿಕ್ಷೆಯು ಕೊಡಲ್ಪಟ್ಟಿದೆಯೆಂದೂ ವಾರ್ತೆ. ಒಬ್ಬ ಮುಸ್ಲಿಮನು ತಾನು ರೊಟ್ಟಿ ಮಾರುವವನೆಂದು ಹೇಳಿ ತನ್ನ ಕೈಗಾಡಿಯನ್ನು ದೂಡುತ್ತಾ ಹೋಗಿ ಮುಸ್ಲಿಮ ದಂಗೆಕೋರರಿಗೆ ತನ್ನ ಗಾಡಿಯೊಳಗಿಂದ ಕೆಲವು ಚೂರಿಗಳನ್ನು ತೆಗೆದುಕೊಟ್ಟು ಸಹಾಯ ಮಾಡಿದನಾಗಿಯೂ ಅವನನ್ನು [illegible]ವರಾಗಿಯೂ ವದಂತಿಯಿದೆ. ಮಿಲಿಟರಿಯೂ ಪೋಲೀಸರೂ ಈಗ ಹಿಂತಿರುಗಿ ಹೋಗಿರುವರು. ಕರ್ಫ್ಯೂ ಆರ್ಡರ್ ಈಗ ಅಷ್ಟು ಪ್ರಬಲತೆಯಲ್ಲಿಲ್ಲ. ಐದು ದಿನಗಳ ತನಕ ಜನರು ರಾತ್ರಿ ಹತ್ತು ಘಂಟೆಯ ಮೇಲೂ ಬೆಳಗ್ಗೆ ೬ ಘಂಟೆಯ ಒಳಗೂ ಮನೆಗಳನ್ನು ಬಿಡಬಾರದೆಂದು ಮೇಜಿಸ್ಟ್ರೇಟರ ಹುಕುಂ ಆಗಿರುತ್ತದೆ.

* * *

ಇಂಗ್ಲೆಂಡಿನಲ್ಲಿ ನೆರೆ!

ಕಳೆದ ವಾರದಲ್ಲಿ ಇಂಗ್ಲೆಂಡಿನಲ್ಲಿ ಪ್ರಚಂಡ ಗಾಳಿಮಳೆಯು ಬಂದಿತು. ಅಲ್ಲಿಯ ಬಹು ಪ್ರದೇಶಗಳು ಜಲಮಯವಾಗಿವೆ. ವಾರ್‌ವಿಕ್‌ಶಯರ್‌ನಲ್ಲಿ ೩೦ ವರ್ಷಗಳಿಂದೀಚೆಗೆ ಬಾರದಿರುವಂತಹ ನೆರೆಯು ಬಂದಿದೆ. ಎಲ್ಲಾ ಕ್ಷೇತ್ರಗಳಲ್ಲೂ ನೀರು ತುಂಬಿದೆ. ಪಟ್ಟಣಗಳ ಮಾರ್ಗಗಳು ಕಾಣುವುದಿಲ್ಲ. ಅನೇಕ [illegible] ನೀರಿನ ಮೇಲೆ ತೇಲಿಕೊಂಡು ಹೋದುವು. ಮಾರ್ಗಗಳ ಮೇಲೆ ದೋಣಿಗಳು ತೇಲಾಡುತ್ತಿವೆ. ಯೋರ್ಕ್‌ಶಯರ್ ಮತ್ತು ಲಿಂಕನ್‌ಶಯರುಗಳ ಅನೇಕ ಎಕ್ರೆ ಭೂಮಿಗಳು ಸಂಪೂರ್ಣ ಕೆರೆಯಂತೆ ಕಾಣುತ್ತವೆ. ಎರಡು ದಿನಗಳ ತನಕ ಮಳೆಯು ಬಿಡದೆ ಸುರಿಯಿತು. ಡರ್ಬಿಯಲ್ಲೂ ಬನ್‌ಬೂರಿಯಲ್ಲೂ ಮಳೆ ನೀರು ಎಲ್ಲೆಲ್ಲೂ ನಿಂತು ಹಳ್ಳಗಳಾಗಿವೆ. ಕೆಲವು ಬಂಗಲೆಗಳು ನೀರ ಮಧ್ಯೆ ನಿಂತಿರುತ್ತವೆ. ಅವುಗಳಲ್ಲಿ ವಾಸಿಸುವ ಜನರಿಗೆ ದೋಣಿಗಳ ಮೂಲಕ ಆಹಾರ ಸಾಮಗ್ರಿಗಳು ಒದಗಿಸಲ್ಪಡುತ್ತವೆ. ಕೌಂಟಿ ಕ್ರಿಕೆಟ್ ಮೈದಾನದಲ್ಲಿ ೧೫ ಅಡಿಗಳಷ್ಟು ನೀರು ನಿಂತಿದೆ. ಜಾನುವಾರುಗಳು ನೀರು ಪಾಲಾಗಿವೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

I. P. No. [illegible]

ಅರ್ಜಿದಾರ—ಪುಟ್ಟಣ್ಣ ಯಾನೆ ಅನಂತ ಭಟ್ಟ,
ಮುದ್ದಿ—ಸುಬ್ಬಪ್ಪ[illegible]

ವಕೀಲ್ ಕೆ ರಘುನಾಥರಾಯರು ತಿಳಿಸುವದೇನೆಂದರೆ

ಮೇಲೆ ಕಂಡಿರುವ ಅರ್ಜಿದಾರ[illegible] ತನ್ನನ್ನು ಸಾಲದಿಂದ ನಿವೃತ್ತಿಸಬೇಕೆಂದು ಸದ್ರಿ ಕೋರ್ಟಿನಲ್ಲಿ ದಿವಾಳಿ ಅರ್ಜಿ ದಾಖಲು ಮಾಡಿದ್ದಾನೆ. ಸದ್ರಿ ಅರ್ಜಿಯು ತಾ [illegible]ನೇ ತಾರೀಕು ತನಿಖೆಗೆ ಬರಲಿರುತ್ತದೆ. ಆದುದರಿಂದ ಸದ್ರಿ ಅರ್ಜಿಗೆ ಆಕ್ಷೇಪವಿದ್ದವರು ಸದ್ರಿ ತನಿಖೆಯ ತಾರೀಕಿಗೆ ಸದ್ರಿ ಕೋರ್ಟಿಗೆ ಖುದ್ದಾಗಿಯಾಗಲೀ ವಕೀಲರ ಮೂಲಕವಾಗಲೀ ಹಾಜರಾಗಿ [illegible] ಸದ್ರಿ ಅರ್ಜಿ [illegible].

ಪುತ್ತೂರು K. RAGHUNATHA RAO
[illegible] Pleader for Pet.

ವಿದ್ಯಾರ್ಥಿಗಳೂ ಶಿಕ್ಷಕರೂ [illegible]

ಪದ್ಯಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

ಶ್ರೀ [illegible] ಲಕ್ಷ್ಮಣ[illegible]

ಕ್ರಯ ೦—೩—೬

[illegible]

[illegible]

ಹೆಚ್ಚಿನ ಪ್ರತಿಗಳನ್ನು [illegible]ವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—
ಹರಿಹರ ಛಾಪಖಾನೆ, ಪುತ್ತೂರು. (ದ. ಕನ್ನಡ)
ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು
ನೇಶನಲ್ ಕೆನರಾ ನ್ಯೂಸ್ ಏಜನ್ಸಿ,
[illegible]

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

([illegible])

[illegible] ಭಟ್ಟ—ಅರ್ಜಿದಾರ

[illegible] ಈ ಕೋರ್ಟಿನಲ್ಲಿ [illegible] ಸದ್ರಿ O. P. [illegible]/32ನೇ ಅರ್ಜಿಯು ತಾ ೧೦—6—32ಕ್ಕೆ ತನಿಖೆಗೆ ಇಟ್ಟಿದೆ. ಇದಕ್ಕೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಆ ದಿವಸಕ್ಕೆ ಈ ಕೋರ್ಟಿಗೆ ಹಾಜರು ಮಾಡಿಕೊಳ್ಳತಕ್ಕದ್ದು.

ಮಂಗಳೂರು
[illegible]

K. Gopal Rao,
ಅರ್ಜಿದಾರನ ಕಡೆ ವಕೀಲ್

[illegible]

'ಸ್ಥಾಪಿತ' ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ಯೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕೃಷ್ಣ ವೈದ್ಯರಿಂದ ನಡೆಯೋಣದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವ ವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ಹಿಡಿದಿದ್ದ ಕಾಲ, ಪ್ರಾಯ, ಪಥ್ಯ ಆಹಾರದ ಕ್ರಮ, ವ್ಯಕ್ತಿ [illegible] ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ [illegible] ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮುಖ್ಯ ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ [illegible] ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ [illegible] ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

[illegible] ಪ್ರತಿ ಶನಿವಾರ [illegible] ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಮೂಲವ್ಯಾಧಿ

[illegible], ಅಥವಾ ಕಷ್ಟಸಾಧ್ಯವಾದ ಅತ್ಯಂತ ಹಳೆಯದು ವ [illegible] ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನಮಾಡುವುದರಿಂದ ಚಮತ್ಕಾರಿಕ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇರ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ. ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು. ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಒಸರುವುದು, ತಿಂಡಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ [illegible] ತೈಲ ಅಮೋಘ ಅಸ್ತ್ರವಿದೆ. ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಕಾಂದಾರವಾಡಿ 4ನೇ ಗಲ್ಲಿ,
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೋ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರಿಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L. Batliwalla, Sons & Co., Ltd.
Kadell Road P O Dadar, Bombay, 14.

ತಂತಿ ವಿಳಾಸ – 'CAVASPUR' Bombay

ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಸ್ತ್ರೀಯರ ಮೂರು ರತ್ನಗಳು

ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಪಥ್ಯಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ — ಇದು ಎಲ್ಲಾ ತರದ ಜ್ವರಗಳನ್ನು ನಿವಾರಣೆ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ — ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಕೇಸರಿ ಕುಟೀರಂ
ಎಗ್ಮೋರ್ ಮದರಾಸು, ಎಲ್ಲಾ ಔಷಧಿ ಮಾರಾಟದವರಲ್ಲಿ ದೊರೆಯುತ್ತದೆ

The Zandu Pharmaceutical Works, Ltd., Bombay, 14.
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್. ಬೊಂಬಾಯಿ, 14ನೆ

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ, ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಜ್ಞಾನಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಜಾಡಿ ರೂ 10/– ಕ್ರಯ 1 ಪೌನು ಸೀಸೆ ರೂ. 2/8, ½ ಪಾ ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು–ಮೈಸೂರು ಏಜಂಟರು — ಟಿ. ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು — ಬಿ ಪ್ರೊಸಟ್‌ಲಾಲ್ ಕಂಪೆನಿ, ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಮಕ್ಕಳ ಕೂಟದ ಪ್ರಥಮ ಸಮ್ಮೇಲನ.

ಉಪ್ಪಿನಂಗಡಿ.

ಲೇಖಕರು—ಶ್ರೀಯುತ ಶಿವರಾಮ ಕಾರಂತರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ತಾ. ೨೧ ಪ್ರಾತಃಕಾಲ ೭॥ ಘಂಟೆಗೆ—ಸ್ವರಾನುಕರಣೆ (mimicry) ತರುವಾಯ ಕಥಾರಚನೆಯ ಆಟ. ತಮ್ಮ ನೆರೆಕರೆಯಲ್ಲಿ ವಾಸಮಾಡುವ ಪಶುಪಕ್ಷಿಗಳನ್ನು ಕಂಡು ಮಕ್ಕಳು ತುಂಬಾ ಆನಂದ ಪಡಬಹುದು. ಆ ರೀತಿ ಆನಂದಪಡಲು ಅವರು ಆ ಪಶುಪ್ರಾಣಿಗಳನ್ನು ಆಗಾಗ ನಿರೀಕ್ಷಿಸುವುದು ಅವಶ್ಯ. ಅವುಗಳ ನಿವಾಸ, ಅಭ್ಯಾಸ ಇತ್ಯಾದಿಗಳನ್ನು ಕಾಣುವುದವಶ್ಯ. ಇದಕ್ಕೇನಾದರೊಂದು ನೆಪವು ಬೇಕು. ಚಿತ್ರಲೇಖನವು ಅವರಿಗೆ ಆ ಜೀವಗಳ ರೂಪದ ಅನುಭವವನ್ನು ಕೊಟ್ಟರೆ, ಆ ಸ್ವರಾನುಕರಣೆಯ ನೆಪವೂ ಅಂಥ ಅವಕಾಶವನ್ನೇ ಕೊಡುವುದು. ಅಲ್ಲದೆ ಅವುಗಳು ಸಂತಸದಿಂದ ಕೂಗಿ ಹಾಡುವುವು, ಭೀತಿಯಲ್ಲಿ ಯಾವರೀತಿಯಲ್ಲಿ ಕೂಗುವುವು ಎಂಬುದನ್ನೆಲ್ಲ ತಿಳಿಯುವ ಆತುರವು ಮಕ್ಕಳಿಗುಂಟಾದರೆ ಪ್ರಾಣಿಗಳ ಜೀವನದ ಮೇಲೆ ಒಂದು ರೀತಿಯ ಸಹಾನುಭೂತಿಯು ಉತ್ಪನ್ನವಾಗುವುದು. ಇದರಿಂದ ಅವರು ಸುಖವನ್ನು ಗಳಿಸುವ ಸಾಧನವೂ ಹೆಚ್ಚುವುದು. ಇತರ ಬಗೆಯ ಸ್ವರಾನುಕರಣೆಗಳಾದರೂ ಅವರ ಶ್ರವಣ ಬಲವನ್ನು ಹೆಚ್ಚಿಸುವುದು.

ಈ ಕಾರ್ಯಕ್ರಮದಲ್ಲೂ ಹುಡುಗರು ಹಿಂದುಳಿಯಲಿಲ್ಲ. ಸಾಧಾರಣ ೧॥ ಘಂಟೆಯ ತನಕ ಇದು ಸಾಗಿತು. ಒಬ್ಬೊಬ್ಬರೇ ೧೦-೧೫ ಪಶುಪ್ರಾಣಿಗಳ ಸ್ವರಾನುಕರಣೆ ಮಾಡುವವರುಂಟು. ಸಾಮಾನ್ಯ ನಾಡು ಹಕ್ಕಿಗಳ, ಪಶುಗಳ ಕಾಡು ಹಕ್ಕಿಗಳ, ಪ್ರಾಣಿಗಳ ಮನುಷ್ಯನ—ಸ್ವರಾನುಕರಣೆಯು ಪ್ರದರ್ಶನಗಳಾದುವು. ಅವರು ಅನುಕರಿಸಿದ ಎಷ್ಟೋ ಪೂರ್ವದ ಹಕ್ಕಿಗಳ ಸ್ವರವನ್ನು ಕೇಳದವರು ಈ ಮಕ್ಕಳು ಅವುಗಳನ್ನು ಕಲಿತುಕೊಳ್ಳಲು ತೋರಿದ ಆಸಕ್ತಿ ಎಂಥದೆಂದು ಊಹಿಸಬಹುದು.

೯ ಘಂಟೆಯ ಅನಂತರದಲ್ಲಿ ಕಥಾರಚನೆಯ ಆಟವು ಜರುಗಿತು. ಎಂಟು ಹತ್ತು ಹುಡುಗರು ಸೇರಿ, ಒಬ್ಬೊಬ್ಬರೇ ತಮಗೆ ಇಷ್ಟಕಂಡ ಒಂದೊಂದು ವಾಕ್ಯವನ್ನು ಹೇಳಿ, ಅವುಗಳನ್ನು ಸೇರಿಸಿ ಕಥೆಯೊಂದನ್ನು ರಚಿಸುವ ಆಟವಿದು. ಹಲವರ ಕಲ್ಪನಾಶಕ್ತಿಗಳು ಬೇರೆ ಬೇರೆ ರೀತಿಯಿಂದ ಹರಿಯುವುದರಿಂದ ಹತ್ತು ಮಂದಿಯೊಟ್ಟಿಗೆ ಕಥೆಯೊಂದನ್ನು ರಚಿಸುವುದು ಕಷ್ಟದ ಕೆಲಸ. ಒಬ್ಬನ ಸರದಿಗೆ ಒಮ್ಮೆಗೆ ದೊರೆಯುವುದು ಒಂದು ವಾಕ್ಯವನ್ನಾಡುವ ಅಧಿಕಾರ. ಹಿಂದೆ ಆಗಿ ಹೋದ ಯಾವತ್ತು ಮಾತುಗಳಿಗೆ ಒಪ್ಪುವ ರೀತಿಯಲ್ಲಿ ಅವನ ಈ ವಾಕ್ಯವಿರಬೇಕು. ಅಲ್ಲದೆ ಅದು ಕಥೆಯನ್ನು ಸಾಗಿಸಿಕೊಂಡು ಹೋಗುವಂತೆಯೂ ಇರಬೇಕು.

ಆ ಕಾರ್ಯಕ್ರಮದ ಮಟ್ಟಿಗೆ ಆ ಮೊದಲು ಅವರು ತೋರಿಸಿದ್ದ ಜಾಣ್ಮೆಯು ಪರಿಷತ್ತಿನ ಕಾಲದಲ್ಲಿ ತೋರದೆಲ್ಲೆಂಬುದನ್ನು ಕಂಡೆವು. ಅಂತು ಕಥಾವಿಷಯವನ್ನು ಒಟ್ಟೊಟ್ಟಿಗೆ ಒಂದೊಂದು ಹಾದಿಗೆ ಸೆಳೆಯಲು ಯತ್ನಿಸಿದ ಅಂಶವು ಜಾಸ್ತಿಯೇ ಇತ್ತು. ಆದರೆ, ಈಗ ಅತ್ತಿತ್ತ ಸೆಳೆದ ಧಾರೆಗಳನ್ನು ಕಥಾ ಪೂರ್ಣತೆಗಾಗಿ, ಒಪ್ಪಿಗೆ ಮುಟ್ಟಿಸುವಷ್ಟು ಪ್ರತಿಭೆಯು ಆ ದಿನದ ಮಟ್ಟಿಗೆ ಅವರಲ್ಲಿ ಕಾಣಿಸಲಿಲ್ಲ.

ಮಧ್ಯಾಹ್ನ—೨ರಿಂದ ೪॥ ಘಂಟೆಗೆ ಸಾಧಾರಣ ಒಂದು ತಾಸಿನ ಕಾಲವನ್ನು ಬಾಲಕರು ಲಾವಣಿ ಹಾಡುಗಳ ಮತ್ತು ಶಿಶುಸಾಹಿತ್ಯದ ಪರಿಚಯವನ್ನು ಮಾಡಿಕೊಳ್ಳುವುದರಲ್ಲಿ ಕಳೆದರು. ಅನಂತರದ ಕಾರ್ಯಕ್ರಮವು ಹಳ್ಳಿಯ ನರ್ತನಗಳು.

ನರ್ತನ ಕಲೆಯು ಮನುಷ್ಯನ ಭಾವನೆಗಳನ್ನು ಪ್ರದರ್ಶಿಸಲು ತೀರ ಉಪಯುಕ್ತ ಸಾಧನವು. ಇದರಿಂದ ದೇಹದ ಚಲನೆಗೆ ಒಂದು ರೀತಿಯ ಲಾಲಿತ್ಯವೂ, ನಡೆಗೆ ಒಂದು ಬಗೆ ಒಪ್ಪೂ ಉಂಟಾಗುವುದು. ಪೂರ್ವದ ಗ್ರಾಮಜೀವನವು ಈ ಕಲೆಯಲ್ಲಿ ಸಂಪೂರ್ಣವಾಗಿತ್ತಾದರೂ, ಈಗೀಗ ಮುಂದರಿಸಿದ ಜಾತಿಯವರಲ್ಲಿ ಇದು ಪೂರ್ಣ ನಷ್ಟವಾದುದೆಂಬುದು ಶೋಚನೀಯ. ಪಾಶ್ಚಾತ್ಯ ದೇಶಗಳಲ್ಲಿ ನರ್ತನವು ವಿದ್ಯೆಯ ಒಂದು ಅಂಗವೇ ಇದು ಎಂಬಂತಾಗಿದೆ. ನಾವಾದರೂ ಹಳ್ಳಿಗಳ ಮಕ್ಕಳಲ್ಲಿ, ಅವರ ಸಂಸ್ಕೃತಿಯೊಡನೆ ಬೆಳೆದ ನರ್ತನ ಕಲೆಯನ್ನು ಪುನರುಜ್ಜೀವನಗೊಳಿಸಿ ಅವರ ಉತ್ಸಾಹ, ಭಾವ, ಪ್ರತಿಭೆಗಳು ಹರಿಯಲು ಅವಕಾಶ ಕೊಡಬೇಕೆಂದು ಈ ಕಾರ್ಯಕ್ರಮವನ್ನು ನಿಶ್ಚಯಿಸಿದ್ದೆವು.

ನಮ್ಮ ಆಕಾಂಕ್ಷೆಯು ಈ ವಿಷಯದಲ್ಲಿ ವ್ಯರ್ಥವಾಗಲಿಲ್ಲ. ಬಾಲಕರಲ್ಲಿ ಎಷ್ಟೋ ಮಂದಿ ಮುಂದೆ ಬಂದರು. ಯಕ್ಷಗಾನದ ಸ್ತ್ರೀವೇಷದ ಕುಣಿತ, ರಾಕ್ಷಸ ನರ್ತನ, ಯುದ್ಧಕಾಲದ ವೀರರ ನರ್ತನಗಳೂ ಆದುವು. ಕೊನೆಯ ನರ್ತನವನ್ನಿತ್ತ ಬಾಲಕನು ಪೂರ್ಣ ಮೈಮರೆತುಮಾಡಿದನು. ನರ್ತನ ದೃಷ್ಟಿಯಿಂದ ಅದು ಪರಿಪಕ್ವವಾಗಿಲ್ಲದಿದ್ದರೂ ಅದು ಭಾವಸಮಾಧಿಯನ್ನು ಮೂಡಿಸಿತ್ತೆಂಬುದರಲ್ಲಿ ಆಕ್ಷೇಪವಿಲ್ಲ. ಅಂತೆಯೇ—ಭೂತದ ದರ್ಶನವನ್ನು ಮಾಡಿ ತೋರಿಸಿದ ಇನ್ನೊಬ್ಬನ ಕೆಲಸವೂ ಇತ್ತು. ಇದಲ್ಲದೆ ಕೆಲವೊಂದು ಬಗೆಯ ಕೊರಗರ ಕುಣಿತಗಳು, ಸಿದ್ಧವೇಷದ ಕುಣಿತ, ಸೋಜ ನಡುವಿಕೆಯ ಕುಣಿತ, ಸುಗ್ಗಿ ಕುಣಿತ, ಕೊಡಗರ ಕುಣಿತ ಮೊದಲಾದುವು ಚಿತ್ತಾಕರ್ಷಕವಾಗಿದ್ದುವು. ಮೊಯಿಲಾಳರ ಕೋಲಾಟವಾದರೂ ಚೆನ್ನಾಗಿತ್ತು. ಈ ಕುಣಿತಗಳಾದರೂ ತಾಸಿನ ತನಕ ನಡೆದುವು.

ರಾತ್ರಿ—ಮಾಯಾಲಾಂದ್ರದ ಸಹಾಯದಿಂದ ಅಲಿಬಾಬನ ಕಥೆಯನ್ನೂ, ಕಾಗೆಯ ಮದುವೆ—ಎಂದು ಈ ಕೂಟಕ್ಕಾಗಿಯೇ ಸಿದ್ಧಗೊಳಿಸಿದ ಕಥೆಯನ್ನೂ ಹೇಳಿದ ಬಳಿಕ ಲಾವಣಿಕಾರರ ಎರಡು ಹಾಡುಗಳೊಂದಿಗೆ ದಿನದ ಕಾರ್ಯವು ಕೊನೆಗೊಂಡಿತು.

ತಾ ೨೨—ಮಂಗಳವಾರ—೭॥—೧೦ರ ತನಕ—ಹೂಗಳಿಂದ ಚಿತ್ರಲೇಖನ. ಈ ಮೊದಲು ಮಣ್ಣು ಮತ್ತು ಎಲೆಗಳಿಂದ ಚಿತ್ರವನ್ನು ರಚಿಸಿದಂತೆ ಬಾಲಕರು ಕಾಡು ನಾಡು ಹೂಗಳಿಂದ ವಿವಿಧ ಚಿತ್ರಗಳನ್ನೂ ಬಿಡಿಸಿದರು. ಸಾಧಾರಣ ೧೫ ಬಾಲಕರು ಈ ಕಾರ್ಯದಲ್ಲಿ ಆಸಕ್ತಿ ತೋರಿದರು. ಈ ಕಾರ್ಯಕ್ರಮವಾದರೂ ಆಶಾಜನಕವಾಗಿಯೇ ಸಾಗಿತು. ಉಳಿದ ಬಾಲಕರು ಈ ಸಮಯದಲ್ಲಿ ತಮ್ಮ ನಾಟಕಗಳಿಗೆ ಅಣಿಮಾಡಿದರು.

ಮಧ್ಯಾಹ್ನ ೩ರಿಂದ ೪॥ ತನಕ—ಮೂಕ ನಾಟಕಗಳೂ ಹಾಸ್ಯಗಳು. ನಮ್ಮಲ್ಲಿ ದಿನೇ ದಿನೇ ನಟನಾಶಕ್ತಿಯು ನಾಶವಾಗುತ್ತಿದೆ. ಭಾವಪ್ರದರ್ಶನಕ್ಕೂ, ಭಾವಸಮಾಧಿಗೂ ಇದೊಂದು ಪ್ರಬಲ ಸಾಧನವು. ಈ ನಾಟಕಗಳಲ್ಲಿ ಮಕ್ಕಳು ಮಾತಿನ ಸಹಾಯವಿಲ್ಲದೆ ಕೇವಲ ಭಾವಗಳಿಂದಲೂ, ಮುಖಮುದ್ರೆಗಳಿಂದಲೂ ತಮ್ಮ ಮನಸ್ಸಿನ ಭಾವಗಳಿಗೆ ರೂಪವನ್ನೀಯಬೇಕಾಗಿತ್ತು. ಮಕ್ಕಳಲ್ಲಿ ದೊಡ್ಡವರು ಮೂಕ ಹಾಸ್ಯಗಳನ್ನು ಚಿಕ್ಕವರು ಮೂಕ ಕಥೆಗಳನ್ನೂ ಆಡಬೇಕೆಂದು ನಿರ್ಣಯಿಸಿದ್ದೆವು. ಇದಕ್ಕಾಗಿ ಅವರವರೇ ತಮ್ಮಲ್ಲಿ ವಿಭಾಗ ಮಾಡಿಕೊಂಡು ನಾಯಕರನ್ನು ಆರಿಸಿಕೊಂಡು ತಮಗೆ ಯುಕ್ತ ಕಂಡ ಕಥೆಯನ್ನು ರಚಿಸಿಯೋ ಆರಿಸಿಯೋ ಪ್ರದರ್ಶನಮಾಡಬೇಕಿತ್ತು. ಉಡುಗೆಗಳೂ, ವ್ಯತ್ಯಾವಳಿಗಳೂ ಅವರಿಂದಲೇ ಯೋಜಿತವಾದುವಿರಬೇಕು. ಇಷ್ಟೆಲ್ಲ ಮಾಡುವುದರಿಂದ ಅವರ ಊಹಾಶಕ್ತಿಗೂ ಕ್ರಿಯಾಶಕ್ತಿಗೂ ಅತಿಶಯ ಅವಕಾಶ ದೊರೆಯುವುದೆಂದು ನಮ್ಮ ನಂಬಿಕೆಯಾಗಿತ್ತು.

ಹಿರಿ ಕಿರಿಯ ಬಾಲಕರು ಈ ಕಾರ್ಯದಲ್ಲಿ ಅತಿ ಹೆಚ್ಚಿನ ಯಶಸ್ಸು ದೊರೆಯುವಂತೆ ಕೆಲಸಮಾಡಿದರು. ತೆನ್ನಾಲಿ ರಾಮಕೃಷ್ಣನು ಕುದುರೆ ಸಾಕಿದುದು, ಅಜ್ಜಿ ದೋಸೆ, ಹದ್ದು ದೂಮಪನ್ನ, ಇವೇ ಮೊದಲಾದ ಆರು ರೂಪಕಗಳನ್ನು ಅವರು ತೋರಿಸಿದರು. ಅವರಲ್ಲಿ ಅಧಿಕಾಂಶ ಬಾಲಕರು ತಮ್ಮ ತಮ್ಮ ಭೂಮಿಕೆಗಳನ್ನು ತೀರ ಹೆಚ್ಚಿನ ಜಾಣ್ಮೆಯಿಂದ ನಿರ್ವಹಿಸಿದರು. ಇದೇ ರೀತಿಯ ಪ್ರೋತ್ಸಾಹದಿಂದ ಮಕ್ಕಳ ಮುಖವು ಕನ್ನಡಿಯಂತೆ ಮನಸ್ಸನ್ನು ಬಿಂಬಿಸುವಷ್ಟು ಶಕ್ತಿಗಳಿಸಲು ಯಾವ ಸಂದೇಹವೂ ಇಲ್ಲಾದರು.

ರಾತ್ರಿ—ದಾಮಾಜಿಪಂತ ಮೊದಲಾದ ಲಾವಣಿ ಹಾಡುಗಳಾದ ನಂತರ "ಪರಿವರ್ತನ ಭಾರತ"ವೆಂಬ ಐತಿಹಾಸಿಕ ಚಿತ್ರನಟನಾವಳಿಯನ್ನು ತೋರಿಸಿದರು. ಇದು ಒಂದು ಹೊಸಯತ್ನ. ಭಾರತವರ್ಷದ ಚರಿತ್ರೆಯನ್ನು, ಮುಖ್ಯವಾಗಿ ಅದರ ಇತಿಹಾಸವು ಸಂಸ್ಕೃತಿ, ಮತ, ರಾಜಕೀಯ ವಾತಾವರಣಗಳು ಪರಿವರ್ತನೆಗೊಂಡ ಕಥೆಯನ್ನು ಸಜೀವವಾಗಿ ಕಣ್ಮುಂದೆ ನಿಲ್ಲಿಸುವುದು ಇದರ ಉದ್ದೇಶವಾಗಿತ್ತು. ಈ ವಿಷಯವು ಹಾಡಿನ ರೂಪದಿಂದ ಹಿನ್ನಿಂದ ಹಾಡಲ್ಪಟ್ಟಿತು. ಆ ಕಾಲದಲ್ಲಿ ಕ್ರಮವಾಗಿ ಕೋಲರು, ದ್ರಾವಿಡರು, ಆರ್ಯರು ಯವನರು—ಮೊಗಲರು, ಇಂಗ್ಲಿಷರು—ಮೊದಲಾದವರ ಪ್ರತಿ ವ್ಯಕ್ತಿಗಳನ್ನು ಆಯಾಯ ಕಾಲದ ಉಡುಗೆತೊಡಿಗೆಯಲ್ಲಿ ತಂದು ನಿಲ್ಲಿಸಿ, ನಮ್ಮ ಚರಿತ್ರೆಯ ಚಿತ್ರಾತ್ಮಕ ಕಲ್ಪನೆಯನ್ನು ಉಂಟುಮಾಡಿಕೊಟ್ಟುವು. ಈ ಸಾಹಸವು ಯಶಸ್ವಿಯಾಗಿಯೂ, ಪರಿಣಾಮದಾಯಕವಾಗಿಯೂ ಕೊನೆಗೊಂಡಿತು. ಶ್ರೀಮಾನ್ ಪಂಜೆ ಮಂಗೇಶರಾಯರು ಈ ಯತ್ನವನ್ನು ಬಹುವಾಗಿ ಮೆಚ್ಚಿ ಮಾತನಾಡಿದರು.

[ಸಶೇಷ]

ಕೈದು, ಶಿಕ್ಷೆ.

ಮುನಿಸಿಪಲ್ ಕಮಿಶನರರಿಗೆ ಶಿಕ್ಷೆ.

ಡಿಲ್ಲಿಯ ಪಟ್ಟಣದ ಮುನಿಸಿಪಲ್ ಕಮಿಶನರರಾದ ಶ್ರೀ. ದೇಶಬಂಧು ಗುಪ್ತರೆಂಬವರು ೧೪೪ನೇ ಸೆಕ್ಷನನ್ನುಲ್ಲಂಘಿಸಿ ಮೆರವಣಿಗೆಯನ್ನು ಕೊಂಡು ಹೋದುದಕ್ಕಾಗಿ ೬ ತಿಂಗ ಕಠಿಣ ಸಜೆಗೊಳಗಾದರು. ಅಲ್ಲದೆ ೫೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು. 'ಎ' ಕ್ಲಾಸನ್ನು ಕೊಟ್ಟರು.

ಯುತ್ ಲೀಗಿನ ಮೆಂಬರರಿಗೆ ಶಿಕ್ಷೆ.

ಯುತ್ ಲೀಗಿನ ಸದಸ್ಯರಲ್ಲೊಬ್ಬರಾದ ಶ್ರೀ ಆರ್ ಕೆ ಖಾದಿಲ್‌ಕರ್ ಎಂಬವರು ಕಾಯಿದೆಭಂಗ ಮಾಡಿದುದಕ್ಕಾಗಿ ಎರಡು ವರ್ಷ ಕಠಿಣ ಸಜೆಗೂ ೫೦ ರೂಪಾಯಿ ಜುಲ್ಮಾನೆಗೆ ಗುರಿಯಾದರು.

ಪ್ರೊಪಗಾಂಡ ವಾರ.

ಲಕ್ನೋ ಮೊದಲಾದ ಕಡೆಗಳಲ್ಲಿ ಕಳೆದವಾರ ಕೊಂಗ್ರೆಸ್ ಪ್ರಚಾರ ವಾರವು ಆಚರಿಸಲ್ಪಟ್ಟಿತು. ಲಕ್ನೋವಿನಲ್ಲಿ ೨೭ನೇ [illegible] ದಿನದ [illegible] ಕೈದಾಗಿದ್ದಾರೆ.

ಲೋಂಚಿನಲ್ಲಿ ಕೈದು.

[illegible] ಯುವಕನೊಬ್ಬನು ಪೆಸೆಂಜರ್ ಲೋಂಚಿನಲ್ಲಿ ಕಾನೂನು ಬಾಹಿರ ಪತ್ರಗಳನ್ನು ಹಂಚುವುದಕ್ಕಾಗಿ ಕೈದು ಮಾಡಲ್ಪಟ್ಟಿದ್ದಾನೆ.

ಬಿಟ್ಟರು

ಲಕ್ನೋವಿನಲ್ಲಿ ಶ್ರೀಮತಿ ಸುನೀತಿ ಮಿತ್ರರೆಂಬ ಸ್ತ್ರೀಯು [illegible] ಕಾರಾಗೃಹವಾಸವನ್ನು ಪೂರ್ಣ ಅನುಭವಿಸಿ ಅನಂತರ ಬಿಡುಗಡೆಮಾಡಲ್ಪಟ್ಟರು.

ಜಮಿಯತ್ ಉಲ್ ಉಲೆಮಾದ ಡಿಕ್ಟೇಟರರಿಗೆ ಶಿಕ್ಷೆ

ಡಿಲ್ಲಿಯಲ್ಲಿ ಜಮಿಯತ್ ಉಲ್ ಉಲೆಮಾದ ಸರ್ವಾಧಿಕಾರಿಯಾಗಿದ್ದು ಸರಕಾರದ ಆಜ್ಞೆಯನ್ನುಲ್ಲಂಘಿಸಿದುದಕ್ಕಾಗಿ ಮೌಲಾನಾ ನಸೀರುದ್ದೀನ್ ಎಂಬವರಿಗೆ ಎರಡು ವರ್ಷಗಳ ಕಠಿಣ ಸಜೆಯು ದೊರಕಿತು.

ಆಂಗ್ಲೇಯನು ತಗೆದುಕೊಂಡನು

ಬಾರ್ಡೋಲಿಯ ಸತ್ಯಾಗ್ರಹಿಗಳ [illegible] ವಸ್ತು ಒಡವೆಗಳು ತೀರ್ವೆಯ ಸಲುವಾಗಿ ಹರಾಜು ಮಾಡಲ್ಪಟ್ಟುವು. ಒಬ್ಬ ಆಂಗ್ಲೇಯನು ಅವುಗಳನ್ನು [illegible] ರೂಪಾಯಿಗೆ ವಹಿಸಿಕೊಂಡನು.

ಜಾಮೀನು

ಅಲ್ಲಹಾಬಾದಿನಲ್ಲಿ ಶ್ರೀಮತಿ ಲಕ್ಷ್ಮೀದೇವಿ ಎಂಬ ಸ್ತ್ರೀ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಜೈನ ಯುವಕ' ಎಂಬ ವರ್ತಮಾನ ಪತ್ರಿಕೆಯು ೧೦೦೦ ರೂಪಾಯಿ ಜಾಮೀನು ಕೊಡಬೇಕೆಂದು ಆಜ್ಞೆಯಾಗಿದೆ.

ಪೈರನ್ನು ಕೊಯ್ದರು.

ಅಹ್ಮದಾಬಾದಿನ ಗುಜರಾತ್ ವಿದ್ಯಾಪೀಠದ ಆಸ್ತಿಯ ಹೊಲದ ಗದ್ದೆಗಳ ಪೈರನ್ನು ಸರಕಾರವು ವಶೀಕರಿಸಿಕೊಂಡು ಕೊಯ್ದಿದೆ. ಅದನ್ನು ಏಲಂ ಹಾಕಲಾಗುವುದು.

ನಿರಶನ ವ್ರತ.

ಬೆಳಗಾವಿ ಸೆಂಟ್ರಲ್ ಜೈಲಿನಲ್ಲಿ ನಿರಶನ ವ್ರತವನ್ನು ಕೈಗೊಂಡಿದ್ದ ಶ್ರೀ ನರಸಿಂಹರಾವ್ ಮತ್ತು ದಿವಾಕರ್ ಪತ್ಕೀಕರ್ ಎಂಬವರು ತಮ್ಮ ಇಚ್ಛೆಯು ಪರಿಪೂರ್ಣವಾದ ಮೇಲೆ ಆ ವ್ರತವನ್ನು ಬಿಟ್ಟರು.

೬ ತಿಂಗಳು ೫೦೦೦ ಜುಲ್ಮಾನ

ಕಳೆದ ಕೊಂಗ್ರೆಸ್ ಅಧಿವೇಶನವು ಡಿಲ್ಲಿಯಲ್ಲಿ ಜರಗಿದಂದು [illegible] ಮಿಲ್ ಮಾಲೀಕರಾದ ಶೇಟ್ [illegible] ಧನಸಹಾಯ ಕೊಟ್ಟಿದ್ದಂದೂ ವಾರ್ತೆಯು ತಪ್ಪೆ ಶ್ರೀಯುತರನ್ನು ಕೈದು ಮಾಡಲ್ಪಟ್ಟು ಅವರ ತಕ್ಷೀರು ನಡೆದು ೬ ತಿಂಗಳ ಕಠಿಣ ಶಿಕ್ಷೆ ಮತ್ತು ೫೦೦೦ ರೂಪಾಯಿ ಜುಲ್ಮಾನೆಯನ್ನು ಹಾಕಿದರು. ಜುಲ್ಮಾನೆ ಕೊಡದಿದ್ದರೆ ೬ ತಿಂಗಳ ಹೆಚ್ಚಿನ ಶಿಕ್ಷೆ.

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್
ಬೇಂಕ್, ಲಿಮಿಟೆಡ್.
(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟುದು)

ಒಟ್ಟು ವಿಮಾ ಹಣವು ೨೦೪ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಪತ್ರಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕಾಯ್ದೆಶೀರ ತೀರ್ವುಗಳು ಹಿಂದೀ ಕೋರ್ಟುಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ ಬೆಳಗಾಂವ, ಕಾರವಾರ ಸೋಲ್ಲಾಪುರ, ಬಳ್ಳಾರಿ ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೆರವಾನಜಿ ಅ್ಯಂಡ್ ಸನ್ಸ ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸ್ಕರ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

"If every Wife knew what every Widow knows every Husband would be Insured

PLACE YOUR LIFE ASSURANCE WITH
THE SOUTH INDIAN
Securing for your clients –
1 Low rates of Premium
2. Liberal Policy Conditions.
AND FOR YOURSELF
An Agency with attractive Terms
of Commission and Salary in
The South Indian
General Assurance Co, Ltd.,
Any where in CANARA DISTRICTS &
HYDERABAD STATE
For terms of Agency please apply to—
H R K IYENGAR
Chief Agent
The S I G A Co Ltd,
Sanyasiguddy MANGALORE
Managing Agents –
K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್
ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ಕಂಡಾ ಪ್ರಯೋಜನ
ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ಉದಾರ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ
ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನನ್ನೂ ಕೈತುಂಬಾ ಸಂಬಳವೂ
ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್ ಕ ಅಯ್ಯಂಗಾರ್
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು.
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು
ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೆಯೇ ಉಪಯೋಗಿಸುತ್ತಿದ್ದರೆ ಆಹಾರ ನೀರ ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.
ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ ಶೀತ ನೆಗಡಿ ಕೆಮ್ಮು ಅಜೀರ್ಣ ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ
300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ
ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.
(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)
ಮೂತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಡ ಮೊದಲನೇ ವೇಳೆಯಲ್ಲಿಯೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ
(ಪ್ಲೇಗಿಗೆ)
ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸ ತೈಲ
ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಮಾಚಾರ್ಯರ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್ ಸೀತಾರಾಮಾಚಾರ್ಯರ ವೈದ್ಯ ಶಾಲಾ, ಮೈಸೂರು

ಏಜಂಟರು —
ಆತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ
ಮಂಗಳೂರು ಬಿವಾಗಿ ಸಾಕ್ಷ

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ಸೈಂಟ್ ಲೈ ಸೊಸೈಟಿಗಳಿಂದ ಶಿಫಾರಸು ಹೊಂದಿದೆ

ವೈದಿಕ ಧರ್ಮಾಭಿಮಾನಿಗಳೂ ಕನ್ನಡ ಅಭ್ಯಾಸಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ [ವರ್ಷಾರಂಭ
ಸದ್ಬೋಧ ಚಂದ್ರಿಕೆ
೧೯೦೭ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ಕನ್ನಡ ಮಾಸ ಪತ್ರಿಕೆಯು.
ವಾ ಚಂದಾ ರೂ. ೩] [ಇಷ್ಟು ಫುಟಗಳು

ಅಗಡಿ ಆನಂದವನದಲ್ಲಿ [illegible] ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠ ಶಾಲೆಯ [illegible] ಎಲ್ಲ ವಿನಿಯೋಗಿಸಲ್ಪಡುತ್ತಿರುವುದ [illegible] ಸದ್ಬೋಧ ಪೂರ್ಣವಾದ ಲೇಖಗಳಿಂದಲೂ [illegible] ಧಾರ್ಮಿಕ ಐತಿಹಾಸಿಕ [illegible] ಕರ್ನಾಟಕದ ಸೇವಾಜ [illegible] ನವ್ಯತೆ ಶ್ರೀ ಶೇ [illegible] ದೊರೆಯುತ್ತವೆ

ವ್ಯವಸ್ಥಾಪಕ ಆಫೀಸ
[illegible] ಧಾರವಾಡ

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲ್ [illegible] ತಯಾರಿಸಿದ ಹೊಸ ಪಾಠಪಟ್ಟಿ [illegible] ಪ್ರಕಾರ ಪಾಠಪುಸ್ತಕಗಳು [illegible]

[illegible] ಜೇಯ [illegible] ನೀತಿಭೋದೆ

[illegible] ಶಾಸ್ತ್ರ [illegible]

[illegible] ಕಂಸ್ಥ

[illegible] ಮತ್ತು [illegible] ಹೊಸ [illegible] ಪುಸ್ತಕಗಳು [illegible]

ಶಾರದಾ ಛಾಪಖಾನೆ,
[illegible] ಮಂಗಳೂರು



ಡಾಕ್ಟರ ವಾಮನ ಗೋಪಾಳರವರ
ಐಓಡೈಜ್ಡ ಸಾರ್ಸಪರಿಲಾ.
[illegible]
ಡಾಕ್ಟರ ಗೌತಮರಾವ್
ಕೇಶವರವರ
ಪ್ರೆಸ್ಕ್ರಿಪ್ಶನ್ [illegible]
[illegible]
ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
[illegible] ಮಂಗಳೂರ

ಮಾರಾಟಕ್ಕಿವೆ ಮಾರಾಟಕ್ಕಿವೆ!!
ಕಾಫಿ ಪ್ಲೆಂಟರರಿಗೂ ತೋಟದವರಿಗೂ
ಬೇಕಾಗುವಂತಹ
ಚಕ್ ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

EDITED, PRINTED & PUBLISHED BY V S KAMATH AT M T A. SHARADA PRESS, MANGALORE

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳ ನಾ [illegible] ಸುರರಾಗದರಿಂ ಕರುಹನಾಯಿತೆ! ತುತ್ತ ವಿಷ್ವದ ಸುಡುತ ಉರುತಿರುವ ॥
ಗರಲಕವರಂಜಿದರೆ! ಸುಧೆಯನು ಮರೆತು [illegible] ಕುಳಿತರೆ [illegible] ತೊರೆದು ಧೀರರು ನಿಶ್ಚಿತಾರ್ಥವನು ॥ ೧

ಪುಸ್ತಕ ೨೬ ಮಂಗಳೂರು ತಾ ೩ನೇ ಶುಕ್ರವಾರ ಜೂನ್ ೧೯೩೨ (3-6-'32) ಸಂಚಿಕೆ [illegible]

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office —UDIPI. Branches.—COONDAPOOR & Mangalore
ಹೆಡ್ ಆಫೀಸು — ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರು

Authorised Capital Rs 3,50,000 Subscribed & Called up Rs 25 000
ನಿಯಮಿತ ಮೂಲಧನ ರೂ 3,50,000 ಚಂದಾ [illegible] ಮೂಲಧನ [illegible]

STATEMENT OF ASSETS & LIABILITIES AS ON 30TH DAY OF APRIL 193[illegible]

CAPITAL AND LIABILITIES	Rs	PROPERTY AND ASSETS	Rs
1 Paid up Capital	2,25,000-0-0	1 Premises Building Furniture etc	[illegible]
2 Reserve and other funds	[illegible]	2 Government Securities	[illegible]
3 Deposits	[illegible]	3 Authorised Investments	[illegible]
4 Due to banks	[illegible]	4 Bills [illegible]	[illegible]
5 Sundries	[illegible]	5 Sundries	[illegible]
6 [illegible]	[illegible]	6 Cash in hand & with banks	[illegible]
Total	[illegible]	Total	[illegible]

Udipi [illegible]

N. ANANDA RAO
[illegible]



ಅಮೃತಾಂಜನ.

[illegible]

ಗಜಕರ್ಣ ಮುಲಾಮು — [illegible]

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು
ಕೇ. ಟಿ. ಡ್ಯೋಂಗರೇ ಕಂಪೆನಿ.
ಗಿರಗಾಂವ, ಮುಂಬಯಿ.
ಏಜಂಟರು — [illegible]

[illegible]
The Popular Insurance Co. Ltd
Head Office MANGALORE
First of its kind in the West Coast

CHAIRMAN
Dewan Bahadur N. Subba Rao

STRIKING FEATURES

Policy Conditions Liberal
Claims Settlement Prompt

MANAGEMENT ENTIRELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN.

ದಾರಿ ಯಾವುದು?

ಎಂದರೆ ಸ್ವರಾಜ್ಯಕ್ಕೆ ದಾರಿ ಯಾವುದು? — ಅದಲ್ಲ! ಹಿಂದೀಯರಿಗೆ ಇನ್ನು ಮುಂದಿನ ದಾರಿಯಾವುದು? ಎಂಬ ಪ್ರಶ್ನೆ! ತಿಳಿಯಕೇಳಿ [illegible] ಜೂನ್ ತಿಂಗಳು 'ಮಳೆಯು ಸುರಿಯುತ್ತಿರುವ [illegible] ತಿಂಗಳು'. ಈ ತಿಂಗಳುಗಳಲ್ಲಿ ಮಹಾತ್ಮಾಜೀಯವರನ್ನು ಸರಕಾರದವರು ಸೆರೆಯಿಂದ ಬಿಡಲಿರುವರೆಂದು ಒಬ್ಬ ಜೋತಿಷ್ಯರ ಜೋತಿಷ್ಯ.

× × × ×

ಯಾವ ಜೋತಿಷಿಗಳೇ ಆಗಲಿ, ಅವರು ಭಾರತಮಂತ್ರಿ ಸರ್ ಸಾಮ್ಯುವೇಲ್ ಹೋರರಿಗೆ ಸಾಗಲಿಕ್ಕಿಲ್ಲ. ಅವರ ಜೋತಿಷ್ಯದ ಫಲವು ಆಶ್ಚರ್ಯಮೆಚ್ಚಾದುದು. ಹಿಂದೂಸ್ಥಾನದಲ್ಲಿ ಬೇಗನೇ ಶಾಂತಿಸಮಾಧಾನವಾಗುವುದೆಂದು ಅವರು ಹೇಳಿದ್ದರು. ಈಗ ಹಾಗೆಯೇ ಆಗಿದೆ.

× × × ×

ಕಾಂಗ್ರೆಸ್ಸಿನವರ ಸಭೆ, ಮೆರವಣಿಗೆ, ಗಡಿಬಿಡಿ, ಪ್ರಚಾರವೂ ಸರಕಾರದವರ ಬಿಡಿ ಗಡಿ ಎಂಬ ನೋಟೀಸೂ ಈಗೀಗ ಕಡಿಮೆಯಾಗುತ್ತಿರುವಂತೆ ಕಾಣುತ್ತದೆ. ಇದಕ್ಕೆ ಕಾರಣವೇನೆಂದು ಕೆಲವರ ಪ್ರಶ್ನೆ!

+ + + +

ಕಾರಣವೇನಿಲ್ಲ! ಜೋತಿಷ್ಯಶಾಸ್ತ್ರಿಗಳಿಗೆ ಹಿಂದೂದೇಶದ ಭವಿಷ್ಯತ್ತು ವಿಚಾರವನ್ನು ಹೇಳಿ ಹೇಳಿ ಸಾಕಾಯಿತು. ಇಲ್ಲಿಯವರು, ಅಲ್ಲಿಯವರು, ನಿಂತವರು, ಕೂತವರು, ಮಲಗಿದವರು, ಎಚ್ಚತ್ತವರು, ಬಿದ್ದವರು, ಎದ್ದವರು ಎಲ್ಲರೂ ಅವರ ಓರ್ಡಿನೆನ್ಸ್ ದೇವತೆಯನ್ನು ನೋಡಿ ಹೆದರಿಬಿಟ್ಟರು. ಆದಕ್ಕೆ ಶರಣು ಹೊಡೆದು "ಬಂದ ಹಾಗೆ ನೀನು ಒಮ್ಮೆ ಹೋಗಮ್ಮಾ" ಎಂದರು.

+ + + +

ಹಿಂದೂ ಟೊಪ್ಪಿ, ಮುಸ್ಲಿಮ ಟೊಪ್ಪಿ, ಇಂಗ್ಲಿಷ್ ಟೊಪ್ಪಿ, ಅಮೇರಿಕನ್ ಟೊಪ್ಪಿ, ಮಂಗ್ಳೂರ್ ಟೊಪ್ಪಿ, ಮೈಸೂರು ಟೊಪ್ಪಿ ಮೊದಲಾದ ಎಲ್ಲಾ ಟೊಪ್ಪಿಗಳವರೂ ಈ ಮಹಾ ಓರ್ಡಿನೆನ್ಸ್ ದೇವಿಯನ್ನು ಹೊಗಳುವುದನ್ನು ನೋಡಿ ಇದನ್ನು ಬಿಟ್ಟ ಸರ್ ಸಾಮುವೇಲ್ ಹೋರರು ದಿಗಿಲುಗೊಂಡಿರುವರು.

+ + + +

ತಾನು ದಿಗಿಲುಗೊಂಡಿರುವೆನೆಂದು ಬಹಿರಂಗದಲ್ಲಿ ಅವರು ತೋರಿಸುವುದಿಲ್ಲ. ಇಂಗ್ಲೀಷರ ಗುಟ್ಟೇ ಅದು. ಮೂಗಿನ ವರೆಗೆ ಮುಳುಗಿದರೂ ಅವರು ತಾವು ಮುಳುಗಿದೆವೆನ್ನುವುದಿಲ್ಲ (ಮತ್ತೆ ಮುಳುಗಿ ಹೋದಮೇಲೆ ಗೊತ್ತಾಗುತ್ತದೆ). ಹಾಗೆ ಹೋರರೂ ಗುಟ್ಟು ರಟ್ಟು ಮಾಡುವುದಿಲ್ಲ.

× × × ×

ಗೋಪ್ಯವಾದ ವಿಚಾರಗಳನ್ನು ನೋಡಿ ಈಗ ಗಾಂಧಿಜೀಯವರನ್ನೂ ರಾಜಕೀಯ ಕೈದಿಗಳನ್ನೂ ಬಿಡುವಂತೆ ಮಾಡಲಿರುವರೆಂದು ಹಲಕೆಲವು ಪತ್ರಿಕೆಗಳು ಹೇಳುತ್ತಿವೆ. ಹೀಗಾದರೆ ದೇಶಕ್ಕೆ ಸುದಿನವು ಸನ್ನಿಹಿತವಾಯಿತೆನ್ನಿ. ಎಲ್ಲರೂ ಎರಡೆರಡು ತುತ್ತ ಹಾಲು ಕುಡಿದು ತುಪ್ಪ ತಿನ್ನಿ.

+ + + +

ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಡದೆ ನನ್ನ ಮನಸ್ಸು ಸುಮ್ಮನಾಗುವುದಿಲ್ಲ"ವೆಂದು ಅರೆಬತ್ತಲೆ"ಯ ಗರೀಬ ಶರೀರನಾದ ಗಾಂಧಿಜೀಯವರ ಹಟ! "ನಾವು ಅದನ್ನು ಕೊಡುವುದಿಲ್ಲ. ಕೊಡುವುದಕ್ಕೆ ಆಲೋಚನೆಯನ್ನೂ ಮಾಡುವುದಿಲ್ಲ"ವೆಂದು ಸರಕಾರದವರ ಛಲ. ಇವರೊಳಗಿನ ಛಲದಿಂದಾಗಿ ನನ್ನಂತಹ ಬಡ ಸ್ವಾಬನು ಮುದುಕಿಯಾಗಿರುವ ಹೆಂಡತಿ ಮತ್ತು ಮೊಲೆತಿನ್ನುವ ಮಕ್ಕಳ ಕುಟುಂಬವನ್ನು ಹಿಡಿದುಕೊಂಡು ಯಾವ ದಾರಿಯಲ್ಲಿ ಬೀಳುವುದು?"

+ + + +

ಅದಕ್ಕಾಗಿಯೇ ನಾನು ಕೇಳಿದ್ದು "ದಾರಿಯಾವುದು?" ಎಂದು. ನನಗೆ ಈಗ ಕಣ್ಣು ಕಾಣುವುದಿಲ್ಲ. ಒಂದು ಕಡೆಯಿಂದ ಅಪ್ಪಿಕೊಂಡಿರುವ ಬಡತನ! ಒಂದು ಕಡೆಯಿಂದ ಗಾಂಧೀ-ಸರಕಾರಗಳ ಹಟತನ! ಇನ್ನೊಂದು ಕಡೆಯಿಂದ ಹಿಂದೂ-ಮುಸಲ್ಮಾನರ ಗಟ್ಟಿಗತನ. ಇವುಗಳೊಳಗೆ ಸಿಲುಕಿ ಬಡವರು ಸತ್ತ!!! (ಸ್ವಾಬನ ಭಾಷೆ — ತಪ್ಪಿದರೆ ತಿದ್ದಿಕೊಳ್ಳಿ)

+ + + +

ಹಿಂದೂ ಮುಸ್ಲಿಮ ಮತ್ತು ಅಸ್ಪೃಶ್ಯರು ಸಮಾಧಾನವಾಗದೆ ಹಿಂದೂದೇಶಕ್ಕೆ ಸುಖವಿಲ್ಲ. ಗಾಂಧೀ ಶೌಕತಾಲಿ ಅಂಬೇಡಕಾರರು ಒಂದಾಗಬೇಕು. ಈ ಮೂವರ ಜಳಜಳವೂ ಸಮಾಧಾನವಾಗಬೇಕು ಎಂದರೆ ಬಡವರಿಗೆ ಸುಖವುಂಟು.

+ + + +

ಗಾಂಧಿಯವರನ್ನು ರಾಜಿಗೆ ಕರೆದು ಸಮಾಧಾನ ಮಾಡಬಹುದು. "ಹೋಗು" ಎಂದಷ್ಟು ಹೇಳುತ್ತಲೇ ಸೆಟ್ಟಿಗೆ ಯೆರವಾಡಾ ಜೈಲಿಗೆ ಹೋಗುತ್ತಾರೆ! 'ಬಾ' ಎಂದರೆ ರಾಜಿಗೆ ಬರುತ್ತಾರೆ. ಇದು ಗಾಂಧಿಯವರ ಪ್ರಕೃತಿ ಲಕ್ಷಣ.

ಆದರೆ ಶೌಕತಾಲಿಯವರು 'ಖುದಾವಂದ್ ಇದರ್ ಆವ್ರೋ' 'ಮಹಾರಾಜ್ ಇತ್ತ ಬನ್ನಿ' ಎಂದರೆ ಬರುವುದಿಲ್ಲ ಎಂದು ಅತ್ತ ಓಡುತ್ತಾರೆ. 'ಖುದಾವಂದ್ ಉದರ್ ಚಲೊ' (ಮಹಾರಾಜ್ ಅತ್ತ ಹೋಗಿ) ಎಂದರೆ ಹೋಗುವುದಿಲ್ಲ' ಎಂದು ಇತ್ತ ಬರುತ್ತಾರೆ. ಅವರ ಮಾರ್ಗನೇ ಸ್ಪೆಶಲ್ (special) ಆಗಿ ಹೋಗಿದೆ.

+ + + +

ಇನ್ನು ಡಾ। ಅಂಬೆಡಕಾರರ ವಿಷಯ. ಇವರು ಅಸ್ಪೃಶ್ಯರನ್ನು ಹುರಿದುಂಬಿಸಿ ಅಸ್ಪೃಶ್ಯರಿಗೆ ಕೋಟಿ ಬೇಕು ಕೊಪ್ಪರಿಗೆ ಬೇಕು ಎಂದು ಹಿಂದೂಗಳೊಳಗೇನೇ ಒಂದು ಗಡಿಬಿಡಿ ಮಾಡುವವರು — ಶಾಂತಿಯನ್ನು ಕೆಟ್ಟುಮಾಡುವವರು. ಇವರನ್ನು ಸ್ಪೃಶ್ಯರ — ಪಾವನ ವರ್ಗದವರ ಬ್ರಾಹ್ಮಣರ ದೇವಸ್ಥಾನಕ್ಕೆ ಪ್ರವೇಶಿಸಬಿಡಬೇಕಂತೆ. ಇವರ ಜನರಿಗೆ ಪ್ರತ್ಯೇಕವಾದ ಚುನಾವಣಾ ಹಕ್ಕನ್ನು ಕೊಡಬೇಕಂತೆ.

+ + + +

ಬೇರೆ ಕೆಲಸವೇನು? ಮನೆಯಲ್ಲಿ ಕೂತು ಒಂದು ಉದ್ಯೋಗಕ್ಕೆ ಕೈಹಾಕಬೇಕಲ್ಲವೇ? ಇಲ್ಲದಿದ್ದರೆ ಪುರುಷಾರ್ಥವಾಗುತ್ತದೆಯೇ? ಅಂತಹ ಪುರುಷಾರ್ಥವನ್ನು ರಾಜಕೀಯ ಗಲಾಟೆ ಮೂಲಕ ಹೊಂದಬೇಕೆಂದು ಬಯಸುತ್ತಾರೆ. ವಹಾರೆ ವ್ವಾ! ಬಲ್ಲೆ 'ಅದ್ಮಿ' ಇವರು.

× × × ×

ಲೋರ್ಡ ಅರ್ವಿನರು ಅಮೇರಿಕಕ್ಕೆ ತನ್ನ ಲೆಕ್ಚರಿನ ಸುರಿಮಳೆಗಳನ್ನು ಸುರಿಯಲಿಕ್ಕೆ ಹೋಗಿರುವರು. ಸರ್ ಸಾಮುವೇಲ್ ಹೋರರು ಪಾರ್ಲಿಮೆಂಟಿನಲ್ಲಿ ಕೆಮ್ಮಳೆಯುತ್ತಿರುವರು. ಸರಕಾರವು ಬಂಗಾಳ ಓರ್ಡಿನೆನ್ಸನ್ನು ಪುನರ್ಜೀವಗೊಳಿಸಿದೆ. ಶೌಕತಾಲಿಯವರು ಕೋಪದಲ್ಲಿದ್ದಾರೆ.

× × × ×

ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸ. ಬಡ ಭಾರತಕ್ಕೆ ಉಪವಾಸ. ನನ್ನಂತಹ ಸ್ವಾಬನಿಗೆ ದಾರಿವಾಸ.

+ + + +

ಆದದ್ದೆಲ್ಲಾ, ಆಗುವುದೆಲ್ಲಾ, ಆಗುತ್ತಿರುವುದೆಲ್ಲಾ ನಮ್ಮ ಒಳ್ಳೇಯದಕ್ಕೆಂದು ನೆನಸಿರಿ. ಬ್ರಿಟಿಷರು ಎಲ್ಲಾ ಮಾಡುವುದು ನಮ್ಮ ಹಿತಕ್ಕಾಗಿ.

'ಸ್ವಾಬ'

೧೧೦೦೦ ರೂ ಬಕ್ಷೀಸು

೧೦ ವರ್ಷದ ಪ್ರಯೋಗದಿಂದ ಪೂರ್ಣ ಗುಣಯುತನು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ಪಾದರಂಥ ಅಮೂಲ್ಯವಾದ ಔಷಧಿ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಶ್ರೀ ಮದನಮಸ್ತ ಪಾಕ. ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಭಾಯ ಪರಿಣಾಮ, ಎಂಥದಾದರೂ ಪರಮ್ಮ, ಮೈನೂಸೋಣ, ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ಸಾಧಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೦ ದಿವಸ ಸಾಲುವ ೪೮ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫, ಟಿ ಖ ರೂ ೧. ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ ೧೧. ಮೂರ ಡಬ್ಬಿಗೆ ರೂ ೧೫॥ ಮಾತ್ರ. ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನು ನೋಡಿರಿ,

ಡಾಕ್ಟರ ಎಮ್ ಆಯ್ ಖಟಖಟೆ, ಎಲ್. ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ — ಈ ಪಾಕು 'ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿ ತೋರಿಸಿದವರಿಗೆ ರೂ ೧೧೦೦೦ ಇನಾಮು ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಒಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನೆ ಮಾಡಿದರೂ ದುಃಖವಾಗುವುದಿಲ್ಲ. ಮೊದಲು ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ವಿ [illegible] ವೈದ್ಯ ಎಲ್ [illegible] ಪಿ ಎಸ್ ಕೊಲ್ಹಾಪುರ ರಾಣೀ:— ಈ ಚೂರ್ಣದಿಂದ ಯಾವ ತರದ ಪೀಡೆಯಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕೆ ೪ ರೂ ವಿ ಪಿ ಖರ್ಚ ೦।೦

ವಿಳಾಸ — ಸಂಜೀವಿನೀ ಔಷಧಾಲಯ. ಮು ಪೋ. ಮಿರಜ, S. M C.

ಬ್ರಹ್ಮಶ್ರೀ ನಾರಾಯಣ ಸ್ವಾಮಿ ಸ್ಮಾರಕ ಫಂಡು

ಬಿಲ್ಲವ ಸಮಾಜೋದ್ಧಾರಕರಾದ ಬ್ರಹ್ಮ ಶ್ರೀ ನಾರಾಯಣ ಸ್ವಾಮಿ ಪರಮಹಂಸರು ಸ್ವರ್ಗವಾಸಿಯಾದ ಸಮಯದಲ್ಲಿ ಮುಂಬಾಯಿಯ ಬಿಲ್ಲವರು ತಮ್ಮ ದುಃಖಪ್ರದರ್ಶನಾರ್ಥವಾಗಿ ಸೇರಿದ ಸಭೆಯಲ್ಲಿ ನಿರ್ಣಯಿಸಿದ ಪ್ರಕಾರ ಪೂಜ್ಯ ಗುರುಗಳ ಒಂದು ಶಿಲಾಪ್ರತಿಮೆಯನ್ನು ತಯಾರಿಸಿ ಮಂಗಳೂರಲ್ಲಿರುವ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿಡಲು ಬೇಕಾದ ಹಣವನ್ನು ಕೂಡಹಾಕಲು ದಕ್ಷಿಣ ಕನ್ನಡ ಸರ್ವರಿಗೂ ಮುಖ್ಯವಾಗಿ ಬಿಲ್ಲವರೆಲ್ಲರಿಗೂ ವಿದಿತವಿರುವುದಾಗಿದೆ. ಸಮಿತಿಯವರು ಈ ತನಕ ಕೆಲಸಮಾಡಿ ಎಷ್ಟು ಹಣವನ್ನು ಸಂಚಯಿಸಿದರೆಂದು ಈ ಕೆಳಗೆ ತೋರುವ ಲೆಕ್ಕಪಟ್ಟಿಯಿಂದ ತಿಳಿಯುವುದು. ಈ ಕೆಲಸಕ್ಕೆ ಇನ್ನೂ ಹೆಚ್ಚಿನ ಭಂಡವಾಳವು ಬೇಕಾಗಿರುವುದರಿಂದ ಉದಾರಹೃದಯರಾದ ನಮ್ಮ ಸರ್ವ ದೇಶ ಮತ್ತು ಜಾತಿಬಾಂಧವರು ತಮ್ಮ ಶಕ್ತ್ಯನುಸಾರವಾಗಿ ಸಹಾಯವನ್ನಿತ್ತು ನಾವು ಕೈಕೊಂಡಿರುವ ಕೆಲಸವನ್ನು ಪೂರ್ತಿಗೊಳಿಸಲು ಸಹಾಯವಾಗಬೇಕಾಗಿ ಪ್ರಾರ್ಥನೆ. ಹಾಗೆ ಸಹಾಯ ಮಾಡಲಿಚ್ಛಿಸುವವರು ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ರಶೀದಿಯನ್ನು ಪಡೆಯತಕ್ಕದ್ದು.

Mr A P Kirodian
3/0 Cadel Road Dadar
Bombay No 14

ಸಂ ೧೯೩೦ನೇ ಇಸವಿ ಮಾರ್ಚ ತಿಂಗಳ ತಾ ೩೧ಕ್ಕೆ ಅಂತ್ಯವಾದ ೧೫ ತಿಂಗಳುಗಳ ಬ್ರಹ್ಮ ಶ್ರೀ ನಾರಾಯಣ ಪರಮಹಂಸ ಸ್ವಾಮಿಯವರ ಸ್ಮಾರಕ ಮಂಡಳಿಯ ಆದಾಯ ಪಟ್ಟಿ

ಸ್ಮಾರಕಫಂಡು ಸಂ ೧೯೩೧ನೇ ಜನವರಿ ತಿಂಗಳ ತಾರೀಕು ೧ರಲ್ಲಿ ಇದ್ದ ಶಿಲ್ಕು — ರೂ ೧೦೫೫—೪—೯ ಸಂ ೧೯೩೧ನೇ ಜನವರಿಯಿಂದ ೩೨ನೇ ಮಾರ್ಚ ತಿಂಗಳ ಅಂತ್ಯದ ವರೆಗೆ ಆದ ಜಮೆಯಲ್ಲಿ ಖರ್ಚು ಕಳೆದುಳಿದ ರೂ, ೩೩೪—೧೧—೬ ದಾತಾರರ ಪಟ್ಟಿಯಲ್ಲಿ ೩೪೮—೩—೬ ಜುಮ್ಲಾ ೧೭೪೨—೩—೯

ಆಸ್ತಿ ೩೧ ೩ — ೩೨ರಲ್ಲಿ ಬೊಂಬೇ ಪ್ರಾವಿನ್ಸಿಯಲ್ ಕೊಓಪರೇಟಿವ್ ಬೇಂಕಿನಲ್ಲಿರುವ ಹಣ—೧೩೯೪—೦—೩ ದಾತಾರರಿಂದ ಬರತಕ್ಕದ್ದು ಹಣ—೩೪೮—೩—೬ ಜುಮ್ಲಾ ೧೭೪೨—೩—೯

ಎಂ ಎ ಸುವರ್ಣ, ಬಿ ಎ ಎಲ್ ಎಲ್. ಬಿ, ಮತ್ತು ಬಿ ಪಿ ಪರಮೇಶ್ವರ — ಜತೆ ಪರಿಶೋಧಕರು

ಯು ಸಿ ಸನಿಲ್. ಎ ಪಿ ಕಿರೋಡಿಯನ್, ಕೇಸಲಪ್ಪಯ್ಯ.
ಖಜಾಂಚಿ ಕಾರ್ಯದರ್ಶಿ, ಅಧ್ಯಕ್ಷ.

ಶಾಸ್ತ್ರೀಯ
ಅಮೂಲ್ಯ ಔಷಧಗಳು

ಅಮೃತಾಂಕುಶ ತೈಲ — ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಭ್ಯಂಗಕ್ಕೆ ಅನುಕೂಲವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ — ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ ಕ್ಷಯ ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಸ್ರಸ್ತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ ಅಗ್ನಿ ಮಾಂದ್ಯ ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2 0 0 ಪೋಸ್ಟೇಜ ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ [illegible]

ಎಮ್ ವಿ. ಶಾಸ್ತ್ರೀ,
ಆಯುರ್ವೇದ ಭೂಷಣ
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು

ಹೆಗಲಿಗೆ ಹಾಕುವ [illegible] ಬಣ್ಣದ ಕಾಶೀ ಸಿಲ್ಕುಗಳು 6 ಮೊಳ ಉದ್ದ 2 ಮೊಳ ಅಗಲ ರೂ 5 ರಿಂದ ಆರಂಭವಾಗಿ ರೂ 20 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು ರವಕೆ ಖಣಗಳು ಮತ್ತು [illegible] ವಸ್ತ್ರ [illegible] ಟೋಪಿ ಇತ್ಯಾದಿ ಉತ್ತಮ ಶಾಲು, [illegible], ಧೋತ್ರ, ಕಸ್ತೂರಿ ಕೇಸರಿ, ಪಚ್ಚಕರ್ಪೂರ ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳ ಜರಿ [illegible], ಸುಗಂಧ ದ್ರವ್ಯಗಳು ಕಡಿಮೆ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ—
ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
[illegible] ಘಾಟ್ ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906 — 1906 ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal Kasargod Cochin, Udipi Gangolli Coondapur Bombay Puttur Calicut & Alleppey

ಬ್ರಾಂಚುಗಳು —
ಕಾರ್ಕಳ, ಕಾಸರಗೋಡು ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲೆಪೆ

Authorised and fully paid up Capital Rs 300 000 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟಿದ ಮೂಲಧನವು ರೂ 30[illegible]
Reserve and other sinking Funds Rs 526 000 - 0 0	ಕ್ಷೇಮ ನಿಧಿ ಮತ್ತು ಇತರ ಫಂಡುಗಳು ರೂ 526 [illegible] 0 — 0 —
Amount invested on G P Notes Rs 816 092 2 0	ಗವರ್ನಮೆಂಟ್ ಪ್ರೋಮಿಸರಿ ನೋಟುಗಳಲ್ಲಿ ಹಾಕಿದ ರೂ [illegible] 092 — 12 —
Rate of interest on fixed deposits at Head Office and Branches are 6% for 2 Years [illegible] 1 Year	[illegible]

Current Account Deposits received and interest allowed [illegible] balance of Rs 500 and above that on multiple of Rs 10 @ [illegible] from 1st January to 30th June and @ 2% from 1st July to 31st December. No interest will be allowed unless the deposit [illegible] than Rs 50 [illegible] a period of [illegible] months ending either [illegible] June [illegible] 31st December [illegible]

Except by special arrangement no interest [illegible] allowed [illegible] exceeding Rs [illegible]0 000 in the case of Head Office and Cochin Branch [illegible] exceed [illegible]5 000 in the case of Bombay Branch [illegible] other Branches

For further particulars please apply to —

Office of the Bank,
Mangalore 1 [illegible] 932

K. Venkat Rao,
Secretary [illegible] Treasurer

The Pangal Nayak Bank, Ltd.

Head Office Udipi — *Established 1[illegible]* — **Branch Office Mangalore**

Authorised Capital Rs 2 00,000	Paid up Capital Rs 1 75 000
Issued Capital Rs 1 75 000-	Reserve and other Funds Rs 1,80 000

NOTICE.

The rate of interest allowed on the under mentioned deposits will be as follows with effect from 19-4-1932.

Fixed Deposits 3 month[illegible] 4 [illegible]
[illegible] above [illegible] p a

Short term deposits [illegible]

(L[illegible])

Office of the Bank,
Udipi [illegible] 4 - 32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಹುಡುಗು
ಮೂವತ್ತು	[illegible]	ಮುಟ್ಟಿಟ
ನಲವತ್ತು	[illegible]	ನರಳುವದು
ಐವತ್ತು	[illegible]	ಆಲಸ್ಯ
ಅರುವತ್ತು	ತೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಕು

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿರಿ/ ಮದನಮಂಜರಿ ಫಾರ್ಮಸಿ, 1/34 ಚೀನಾ ಬಜಾರ್ ಮದ್ರಾಸ್

ಮದನಮಂಜರಿ ಪದಾರ್ಥಗಳ ಏಜಂಟರು.—ಪಿ ಜಿ ಚಂದರಾವ ಮಿಶನ್ ಬೀದಿ ಮಂಗಳೂರು

ಮದ್ರಾಸು ಸಂಸ್ಥಾನದಲ್ಲಿ ಸಹಕಾರ ಚಳವಳವು

ಈಗ ಬಲು ಬಿಕ್ಕಟ್ಟಿನಲ್ಲಿದೆಯೆಂದು ಪ್ರತಿಯೊಂದು ಕಡೆಯ ವೃತ್ತಾಂತಗಳಿಂದ ಸ್ಪಷ್ಟವಾಗುತ್ತ ಬರುತ್ತಿದೆ. ಕಳೆದ ಕೆಲ ವರ್ಷಗಳಿಂದ ಸಹಕಾರಿಗಳು ಸಂಘ ವ ಬೇಂಕುಗಳಿಂದ ಪಡೆದ ಸಾಲಗಳು ವಸೂಲಾಗದೆ ಬಾಕಿಯಿರುವ ಮೊಬಲಗೂ ಅವಧಿಯೂ ಹೆಚ್ಚು ಹೆಚ್ಚಾಗುತ್ತಲೇ ಬರುತ್ತಲಿದೆ; ಹೀಗಿರುವಲ್ಲಿ, ಈಗ ಸರ್ವತ್ರವೂ ಆರ್ಥಿಕ ದುರವಸ್ಥೆಯು ಬೆಳೆಯುತ್ತ ಬಂದಿರುವ ಕಾರಣ, ಹೊರ ಬಾಕಿಗಳು ಈಗ ಅಪಾರವಾಗಿಯೇ ಬಂದಿವೆ. ಜಾಮೀನಾಗಿರುವ ಜಮೀನು, ಬೆಳೆಯ ಬೆಲೆ ಕಡಿಮೆಯಾಗುತ್ತ ಬಂದುದರಿಂದ ಮೌಲ್ಯದಲ್ಲಿ ಇಳಿದೇ ಒಂದಿದೆ. ಹಣ, ಮೇಲ್ತನಿಖಿ, ಲೆಕ್ಕತಪಾಸಣೆ ಮೂರೂ ವಿಷಯಗಳಲ್ಲಿ ವಿಚಾರ ಮಾಡಿದರ, ಈ ಚಳವಳವು ಬೋಡದಡಿಯಲ್ಲಿ ಮರೆಯಾದಂತೆ ಕಂಡು ಬರುವುದಾಗಿ ಸರ್ ಕೆ ವಿ. ರೆಡ್ಡಿಯವರು ಮೊನ್ನೆ ಸಹಕಾರಿಗಳ ಪರಿಷತ್ತು ನೆರೆದಾಗ ಸ್ಪಷ್ಟವಾಗಿ ತಿಳಿಸಿದರು. ಸಂಯೋಜಿತ ಸಂಘಗಳು ೨೪ರಿಂದ ೧೦ಕ್ಕೆ ಇಳಿದಿವೆ! ಬೇಂಕುಗಳ ಒತ್ತಾಯವೂ ಪ್ರಾಬಲ್ಯವೂ ಸಂಘಗಳ ಮೇಲೆ ಹರಡಿದೆ ಎಂಬುದನ್ನು ಈ ಸಂಖ್ಯೆಯೇ ಸೂಚಿಸುವುದು. ಬೇಂಕುಗಳೇ ಎಲ್ಲ ಮೇಲ್ತನಿಖಿ ನೋಡಬೇಕೆಂಬುದರಲ್ಲಿ ಅರ್ಥವಿಲ್ಲೆಂದೂ, ತಪಾಸಣೆ ಕೆಲಸವನ್ನು ಯೂನಿಯನ್ನುಗಳಿಗೆ ಕೊಡುವುದರಲ್ಲಿ ಬಲವಾದ ಆಕ್ಷೇಪಗಳಿವೆ ಎಂಬುದನ್ನು ಅವರು ತಿಳಿಸಿರುವುದನ್ನು ನೋಡಿದರೆ, ಸರಕಾರವು ಇಡೀ ಇಲಾಖೆಯ ಯಾವತ್ತು ಕೆಲಸವನ್ನು ಕೂಲಂಕುಷವಾಗಿ ವಿಮರ್ಶಿಸುವುದು ಅತ್ಯಾವಶ್ಯಕವೆಂದೇ ಹೇಳಬೇಕಾಗಿದೆ.

ಪುನಃ ಪ್ರವಾದ

ಶ್ರೀಯುತ ಜೋಸರಿತ್ತಿಯವರು ಭಾರತೀಯರ ಚಳವಳವನ್ನೂ ಮುಬಂಧದ ಸ್ಥಿತಿಗತಿಗಳನ್ನೂ ಕುರಿತಾಗಿ ಇತ್ತೀಚೆಗೆ ಭವಿಷ್ಯ ನುಡಿದಂತೆ, ಈಗ ಪುನಃ ಅವರು ಗ್ರಹಚಾರ ಫಲವನ್ನು ಗಣಿತು ಬರೆದಿರುವರು. ಬರುವ ಜೂನ್ ಅಂತ್ಯ ಅಥವಾ ಜುಲೈ ಮೊದಲಿಗೆ ಸರಿಯಾಗಿ ಇನ್ನೊಂದು ಯುದ್ಧವು ರಷ್ಯಾ ಜಪಾನುಗಳೊಳಗೆ, ಜಪಾನಿನ ದುಡುಕುವಿಕೆಯಿಂದ ಪ್ರಾರಂಭಿಸುವುದಾಗಿಯೂ, ಮೊದಲು ಜಪಾನು ಜಯಶೀಲವಾಗುವಂತೆ ತೋರಿದರೂ, ನೊವೆಂಬರಿನೊಳಗೆ ರಷ್ಯವೇ ಗೆಲ್ಲುವುದೆಂದೂ ಈ ಅಲ್ಪ ಸಮಯದೊಳಗೆ ಕಾದಾಟವೂ, ನಷ್ಟವೂ ವಿಶೇಷವಾಗುವುದೆಂದೂ, ಮುಂದೆ ಮಧ್ಯ ಯುರೋಪು ಆಸ್ಟ್ರಿಯಾ, ಜರ್ಮನಿ, ಅಮೇರಿಕಾ, ಇಟಲಿ ದೇಶಗಳೂ ಯುದ್ಧದಲ್ಲಿ ಸೇರುವುದೆಂದೂ, ಇಂಗ್ಲೆಂಡು ಕೊನೆಯ ತನಕ ಸುಮ್ಮನಿದ್ದು, ಗೆಲವು ತೋರುವಾಗ ವಿಜಯೀಪಕ್ಷವನ್ನೇ ಸೇರುವದೆಂದೂ ಇವರು ಪ್ರಕಟಿಸಿರುವರು.

ಜಮೀನುದಾರರಿಗೆ ಹಿತಸೂಚನೆ

ಬಿಹಾರ ಪ್ರಾಂತ್ಯದ ಗವರ್ನರರಾದ ಸರ್ ಜೇಮ್ಸ್ ಸ್ಟಿಫನ್‌ರವರು ಆ ಪ್ರಾಂತ್ಯದ ಜಮೀನ್ದಾರರನ್ನು ಕಂಡಾಗ, ಅವರು ಒಂದು ಬಿನ್ನವತ್ತಳೆಯನ್ನು ಸಮರ್ಪಿಸಿದರು. ಅದರಲ್ಲಿ,— 'ನಾವು ಒಂದಾಗಿ ಒಂದು ಪಕ್ಷವನ್ನು ಮಾಡಿಕೊಂಡು, ಜಮೀನು ಜನಗಳನ್ನು ರಕ್ಷಿಸುವುದಕ್ಕಾಗಿಯೂ ಕೃಷಿ ವ್ಯಾಪಾರಾದಿಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿಯೂ ಪೇಚಾಡುವೆವು' ಎಂದು ಜಮೀನ್ದಾರರು ಬರೆದ ಒಂದು ವಾಕ್ಯವನ್ನು ಗವರ್ನರರು ಓದಿ,— ಮನಸ್ಸನ್ನು ಬಿಚ್ಚಿ ನುಡಿಯುವುದಾದರೆ, ಇಂತಹ ಪಕ್ಷವಿನ್ನೂ ಉಂಟಾಗಿಲ್ಲವೆಂದೇ ತೋರುವುದಿಲ್ಲ! ಜಮೀನುದಾರರ ಮತ್ತು ಒಕ್ಕಲುಗಳ ಹಿತವೆಂಬುದು ಒಂದೇ ಹೊರತು ಬೇರೆಯಾಗಿಲ್ಲ ಎಂಬುದನ್ನು ಖಂಡಿತವಾಗಿ ಒಕ್ಕಲುಗಳ ಮನಸ್ಸನ್ನು ನೀವು ಖಚಿತಗೊಳಿಸಲು ಪ್ರಯತ್ನಿಸಿರಿ," ಎಂದು ಸೂಚಿಸಿದರು. ಯಾವ ಪ್ರಾಂತ್ಯದಲ್ಲೇ ಆದರೂ, ಒಕ್ಕಲುಗಳ ಹಿತವೆಂದರೆ, ಜಮೀನ್ದಾರರ ಹಿತವೆಂಬುವ ಅಭಿಪ್ರಾಯವೇ ಉಂಟಾಗಿಲ್ಲವೆಂಬಂತಿದೆ. ದೇವದತ್ತವಾದ ಅಧಿಕಾರದಿಂದ ಒಕ್ಕಲು ಯಾ ಪ್ರಜೆಗಳನ್ನು ನಮ್ಮ ಮನಸ್ಸಿಗೆ ಹಿತ ತೋರುವಂತೆ ಆಳುವವರು ನಾವು ಎಂಬ ತಪ್ಪು ಅಭಿಪ್ರಾಯವು ರಾಜರುಗಳಿಂದಲೂ, ಜಮೀನ್ದಾರರಿಂದಲೂ ಎಷ್ಟು ಬೇಗ ತೊಲಗುವುದೋ ಅಷ್ಟು ತ್ವರೆಯಾಗಿಯೂ ಪೂರ್ಣವಾಗಿಯೂ ರಾಜ್ಯಕ್ಕೂ ಜಮೀನಿಗೂ ಸುಖವುಂಟಾಗುವುದು.

'ಅತ್ಯಾವಶ್ಯಕತೆ

'ಯ ಹೆಸರಲ್ಲಿ ಒರ್ಡಿನೆನ್ಸುಗಳಾಗುವುವು. ಬಂಗಾಳೆದಲ್ಲಿ ಹಿಂದೆ ಇದ್ದ ಒರ್ಡಿನೆನ್ಸು ಅವಧಿ ತಪ್ಪಿ ರದ್ದಾಗುವುದು ನಾಳೆಗೆ ಎಂದರೆ, ಇಂದೇ ಮತ್ತೊಂದು ಒರ್ಡಿನೆನ್ಸು ಹೊರಬಿದ್ದಿದೆ. ಅದರಂತೆಯೇ ಈಗ ಜಾರಿಯಲ್ಲಿರುವ ಒರ್ಡಿನೆನ್ಸುಗಳ ಅವಧಿಯು ಸದ್ಯದಲ್ಲೇ ಗುಜಾರಾಗುವ ಪ್ರಯುಕ್ತ, ಆಗ ಸಹ ಹೊಸ ಒರ್ಡಿನೆನ್ಸುಗಳನ್ನು ಹೊರಡಿಸುವ ಯತ್ನಗಳಾಗುವುದು ಖಂಡಿತವೆಂದೇ ಈ ಮೇಲ್ಪಂಕ್ತಿಯು ಅರ್ಥವಾಗಿರಬಹುದು. ಆದರೆ, ಪ್ರತಿಯೊಂದು ಒರ್ಡಿನೆನ್ಸು ಹೊರಡಿಸುವಾಗ, 'ಸರಕಾರಕ್ಕೆ ಇದು ಅತ್ಯಾವಶ್ಯಕವೆಂದು ಕಂಡುಬಂದಿರುವ ಪ್ರಯುಕ್ತ' ಎಂಬ ಮಾತುಗಳಿಂದಲೇ ಒರ್ಡಿನೆನ್ಸು ಪ್ರಾರಂಭವಾಗುವುದು. ಒರ್ಡಿನೆನ್ಸಿನ ಅವಧಿ ಆರು ತಿಂಗಳು. ಒಂದು ಸಲ ಅವಧಿ ಮೀರಿದ ಬಳಿಕವೂ ಪುನಃ ಅದೇ ಬಗೆಯ ಒರ್ಡಿನೆನ್ಸು ಹೊರಡುವುದಾದರೆ, ಅತ್ಯಾವಶ್ಯಕತೆ ಎಂಬುದಿದು ಆರು ತಿಂಗಳೂ ಮೀರಿ ಇರುವಂತೆ, ಯಾವಾಗಲೂ ವರ್ತಮಾನಕಾಲದ ವ್ಯಾಪ್ತಿಯನ್ನುಳ್ಳದೇ? ಎಂದು ಕೇಳಬೇಕಾಗುವುದು. ಆರು ತಿಂಗಳ ತನಕ ತನ್ನ ಜೋರಿನಿಂದ ಅತ್ಯಾವಶ್ಯಕತೆಯನ್ನು ಅದು ದೂರಗೊಳಿಸಿಲ್ಲ ಎಂತಾದರೆ, ಅಷ್ಟು ಜೋರು ನಿರರ್ಥಕವೆಂತಾಗಿ, ಒರ್ಡಿನೆನ್ಸು ಹೊರತು ಬೇರೊಂದು ಸಾಮೋಪಾಯವನ್ನು ಕೈಗೊಳ್ಳುವುದು ಉತ್ತಮವಾಗದೆ? ಅಥವಾ ನಿರಂತರವೂ ಅತ್ಯಾವಶ್ಯಕತೆ ಇದೆಯೆಂತಾದರೆ, ಒರ್ಡಿನೆನ್ಸಿನ ಬದಲಾಗಿ ಮಸೂದೆಯನ್ನೆ ಕೌನ್ಸಿಲಿನ ಮುಂದೆ ತಂದು ಮಂಜೂರ್ಮಾಡಿಸಿ, ಕಾನೂನನ್ನೆ ಮಾಡಿಟ್ಟುಕೊಳ್ಳುವುದು ಸಾರ್ಥಕವೂ ಸಮಂಜಸವೂ ಎನಿಸದೆ? ದೇಶದ ಶಾಂತಿಯನ್ನೂ ಸರಕಾರವನ್ನೂ ಕದಡಿಬಿಡುವ ವಿದ್ಯಮಾನಗಳು ಇನ್ನೂ ಇರುವಲ್ಲಿ ಕೂಡಲೆ ಲೆಜಿಸ್ಲೆಟಿವ್ ಕೌನ್ಸಿಲನ್ನು ಕರೆದು, ಒರ್ಡಿನೆನ್ಸನ್ನು ಶುದ್ಧ ಕಾನೂನಾಗಿ ಮಾಡಿಕೊಳ್ಳಬೇಕಾಗಿದೆ. ಕೌನ್ಸಿಲುಗಳು ಇನ್ನೂ ಸೇರಿದ್ದಾಗಲೇ ಈ ಬಗೆಯಾಗಿ ಒರ್ಡಿನೆನ್ಸುಗಳನ್ನು ಅವುಗಳ ಮುಂದೆ ಚರ್ಚೆಗೆ ತಂದುದಿಲ್ಲವೇಕೆ? ಎಂದೇ ಮೊದಲಾಗಿ ಪ್ರಶ್ನೆಗಳು ಎಲ್ಲ ಮುಖ್ಯ ದೇಶೀಯ ಪತ್ರಿಕೆಗಳಲ್ಲಿವೆ. ಇವಕ್ಕೆ ಉತ್ತರವೇನು?

ರಾಜಭಕ್ತಿಯ ಪ್ರದರ್ಶನ

ಎಂದೇ ಹಲವು ಕಡೆಗಳಲ್ಲಿ ಜಿಲ್ಲಾಧಿಕಾರಿಗಳ ಹೆಸರಲ್ಲಿ ಸೇರುತ್ತಿರುವುದು ಮುಂಬಾಯಿ ಪ್ರಾಂತ್ಯದ ಒಂದು ಹೊಸ ಲಕ್ಷಣವಾಗಿದೆ. ಇವೇ ಕೆಲವು ತಿಂಗಳುಗಳಿಂದ ಇವುಗಳ ವಿಷಯ ಬಾತಮಿಗಳು ಬಹಳವಾಗಿ ಪ್ರಕಟವಾಗುತ್ತಲಿವೆ. ಆದರೆ, ಇವು ಎಲ್ಲಿ ಸೇರಿದರೂ, ಭಾಷಣಗಳ ಒಕ್ಕಣೆಯೊಂದೇ, ನಿರ್ಧಾರಗಳೂ ಒಂದೇ, ಅದ ಕಾರಣ, ಇಡೀ ಪ್ರಾಂತ್ಯದಲ್ಲಿ ಒಂದೇ ಅಭಿಪ್ರಾಯವು ಧ್ವನಿಸತೊಡಗಿದೆ ಎಂದು ವ್ಯಕ್ತವಾಗುವಂತಿದೆ. ಹಲವು ದಿನಗಳಿಂದಲೂ ಈ ವೃತ್ತಾಂತಗಳಲ್ಲಿ, (೧) ಕಾಂಗ್ರೆಸ್ ಎಂಬುದು ಹಿಂದುಗಳ ಒಂದು ತಂಡ (೨) ಕಾಂಗ್ರೆಸಿನ ಕಟ್ಟು ಹಾವಳಿಯಿಂದ ಎಲ್ಲರೂ ದೂರವಾಗಿರಬೇಕು. (೩) ವ್ಯಾಪಾರವನ್ನು ಕಾಂಗ್ರೆಸ್ ಚಳವಳವು ಕೆಡಿಸಿದೆ ಎಂಬ ಸರ್ವಸಾಮಾನ್ಯ ವಿಚಾರಗಳಿದ್ದವು. ಈಗ ೪ನೆಯದಾಗಿ, ಮೊದಲನೆ ಮೂರನ್ನೆ ಪದೇ ಪದೇ ಬಾಯಿಪಾಠ ಹೇಳಿ ಬೇಸರಿಸಿದಂತೆ ಮುಂಬಾಯಿಯಲ್ಲಾದ ದಂಗೆಗೆ ಕಾಂಗ್ರೆಸ್ ಚಳವಳವೇ ಕಾರಣವೆಂಬುದನ್ನೂ ಈಗ ಕೂಡಿಸತೊಡಗಿರುವರು. ರಾಜಭಕ್ತರಿಗೆ ಬಾಯಿಪಾಠದ ದೋಷವು ತಪ್ಪಿದಂತೆ, ದೈವವಶಾತ್, ಅನುಕೂಲವಾಗಿ, ಮುಂಬಾಯಿಯಲ್ಲಿ ದಂಗೆಗಳಾದುದು ಬಹಳ ಆಧಾರವಾಯಿತೆಂದು 'ಬೊಂಬಾಯಿ ಕ್ರಾನಿಕಲ್' ಪತ್ರವು ಟೀಕಿಸಿದೆ.

ಉತ್ಕಲ ಪ್ರಾಂತ್ಯ

ಒರಿಸ್ಸಾ ಪ್ರದೇಶದೊಡನೆ, ಉರಿಯ ಅಥವಾ ಓಢ್ರ ಭಾಷೆಯನ್ನಾಡುವ ಜನಸಮುದಾಯವಿರುವ ಇತರ ಜಿಲ್ಲೆಗಳನ್ನು ಸೇರಿಸಿ, ಹೊಸದೊಂದು ಪ್ರಾಂತ್ಯವನ್ನು ರಚಿಸಬೇಕಾಗಿ ಹಿಂದೆ ಕಾಂಗ್ರೆಸ್ ಸಭೆಯೂ, ನಂತರ ಸೈಮನ್ ರಿಪೋರ್ಟೂ ಸೂಚಿಸಿದಂತೆ, ಈಗ ಅದಕ್ಕಾಗಿಯೇ ನೇಮಕ ಹೊಂದಿರುವ ಒಂದು ಕಮಿಟಿಯು ಸ್ಥಿತಿವಿಚಾರವನ್ನು ಮಾಡಿ, ತನ್ನ ಶಿಫಾರಸುಗಳನ್ನು ಸರಕಾರಕ್ಕೆ ಬರೆದುಕೊಂಡಿದೆ. ಈ ಹೊಸ ಪ್ರಾಂತ್ಯಕ್ಕೆ ಮೊದಲಿಂದಲೇ ೩೫ ಲಕ್ಷದಿಂದ ಪ್ರಾರಂಭವಾಗಿ, ಹದಿನೈದು ವರ್ಷಗಳಲ್ಲಿ ೪೦ ಲಕ್ಷ ರೂಪಾಯಿಗಳ ವರೆಗೆ ವಾರ್ಷಿಕ ಆದಳಿತದಲ್ಲಿ ನಷ್ಟವೇ ಕಂಡುಬರುವುದಾಗಿ ಎಣಿಕೆ ಹಾಕಲಾಗಿದೆ. ಮೇಲು ಆಫೀಸರರೇ ಮೊದಲಾದವರನ್ನು ಕಡಿಮೆಮಾಡುವುದಕ್ಕಾಗಲಿ, ಸಿಬ್ಬಂದಿಯನ್ನೇ ಇಳಿಸುವುದಕ್ಕಾಗಲಿ ಉಪಾಯಗಳಿಲ್ಲವಂತೆ. ಖರ್ಚಿನ ಇಸಮುಗಳೆಲ್ಲವೂ ಅಗತ್ಯವೇ ಇವೆ. ಜಾರಿಯಲ್ಲಿರುವ ಕಂದಾಯದ ಮೂಲಗಳನ್ನೂ, ವೆಚ್ಚದ ಇಸಮುಗಳನ್ನೂ ಅಲ್ಲಾಡಿಸಬರುವುದಿಲವೆಂದೂ ಕಮಿಟಿಯು ಎಂದರೂ, ಕಂದಾಯದ ಅಂದಾಜು ಇಳಿದುಹೋಗಲೂ, ವೆಚ್ಚವು ಬೆಳೆದು ಬರಲೂ ಯಾವ ಆತಂಕಗಳೂ ಇಲ್ಲವಾಗಿವೆ. ಹೊಸ ತೆರಿಗೆಗಳನ್ನು ಇನ್ನು ಹೊರಿಸ ಬರುವುದಿಲ್ಲ. ಅದುಕಾರಣ ವರಿಷ್ಠ ಸರಕಾರವೇ ಹಣವನ್ನು ಕೊಡಬೇಕಾಗಿ ಬರುವುದು. ಎಂದರೆ, ಪ್ರತಿ ವರ್ಷ ೩೫—೪೦ ಲಕ್ಷ ರೂಪಾಯಿಗಳ ಸುಂಕ ತೆರಿಗೆ ಮೊದಲಾದುವನ್ನು ಇಡೀ ಇಂಡಿಯದ ಮೇಲೆ ಹೊರಿಸಿ ಈ ಪ್ರಾಂತ್ಯವನ್ನು ರಚಿಸಬೇಕಾಗಿದೆ. ಉತ್ಕಲದ ಭಾಗ್ಯ, ಇತರರ ದುರ್ಭಾಗ್ಯ.

ನೋಟಗಳು.

NOTE....S

ಬಹುದಿನಗಳಿಂದಲೂ ನಮ್ಮ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಾಗಿದ್ದ ಶ್ರೀ| ತಂಬನರವರ ವರ್ಗದಿಂದ ಅನೇಕರ ಹೃದಯದಲ್ಲಿ ಅನುಕಂಪನವಾಗದೆ ಇಲ್ಲ. ಈಗ ವರ್ಗವಾಗಿ ಬಂದಿರುವ ಮಿ| ರಾಯಿಟ್ ಸಾಹೇಬರು ಎಂದಿನಂತೆ ಸ್ಮಾರ್ಟ್ ಆಗಿಯೇ ಇರುವರೆಂದು ಎಲ್ಲರೂ ಆಶಿಸದೆ ಇಲ್ಲ.

* * *

ವಿದ್ಯಾಭ್ಯಾಸದ ಕ್ರಮವನ್ನೆಲ್ಲ ಮಗುಚಿ ತಿದ್ದಿದ್ದಲ್ಲದೆ ಸುಖವಿಲ್ಲವೆಂದು ಗವರ್ನರ ಸಾಹೇಬರೆನ್ನುವರು. ಮಾಡುವುದೇನು? ಹಣವಿಲ್ಲ. ಇದ್ದ ಹಣದಿಂದ ತಿದ್ದುವುದು ಹೇಗೆಂದು ಇತ್ಯರ್ಥಿಸಲು ಒಂದು ಕಮಿಶನನ್ನು ಹತ್ತು ವರ್ಷಕ್ಕೆ ನೇಮಿಸಿ ಅಭಿಪ್ರಾಯ ಸೂಚನೆ ಶಿಫಾರಸು ಪಡೆದು, ಮುಂದಣ ಹತ್ತು ವರ್ಷಗಳಲ್ಲಿ ಗ್ರೇಂಟು ರಿವಿಜನ್ ಕೋಡು ತಯಾರಿಸಿ, ಇನ್ನು ಹತ್ತು ವರ್ಷಗಳಲ್ಲಿ ಹಣ ಕೂಡಿಕೊಳ್ಳುತ್ತಾ ...ಆಗ ಪುನಃ ಆ ಕ್ರಮವನ್ನು ತಿದ್ದದಲ್ಲದೆ ಸುಖವಿಲ್ಲವೆಂದು ತಿಳಿದು . ಇತ್ಯಾದಿ ಶಿಕ್ಷಣವೆಂದರೆ ಅಷ್ಟು ಅಭ್ಯುದಯದ ಸಾಯೆನ್ಸು!

* * *

ಇಂಡಿಯದ ಹೈಕಮಿಶನರರು ಲಂಡನಿನಲ್ಲಿ ನೇಮಕವಾಗಿ ಜಗತ್ತಿಗೇನು ಉಪಕಾರವಾಯಿತು ಎಂದು ಹಲವರು ಕೇಳುತ್ತಿದ್ದರಷ್ಟೆ. ಒಂದು ಮುಖ್ಯ ಉಪಕಾರವು ಈಗ ಕೆಲವು ತಿಂಗಳುಗಳಿಂದಲೂ ವ್ಯಕ್ತವಾಗುತ್ತ ಬಂದಿದ್ದಿತು. ಈಗ ಅದು ಸ್ಪಷ್ಟ ಉಪಕಾರವಾಗಿ ತೋರಿಬಂದಿದೆ.

* * *

ನಮ್ಮ ಶ್ರೀಮಾನ್ ಚಕ್ರವರ್ತಿಯವರ ಮೇಜವಾನಿಗಾಗಿ ಇಂಡಿಯದ ಮಾವು ಹಣ್ಣುಗಳು ಸರಬರಾಜಾಗಿವೆ. ಇಂಡಿಯದ ಮಾವು ಇಂಗ್ಲೆಂಡಿನ ಚಕ್ರವರ್ತಿಯರ ನೈವೇದ್ಯಕ್ಕಾಗಿ ಅರ್ಪಿತವಾಗಿದೆ. ನೈವೇದ್ಯಕಾಲದಲ್ಲಿ ಭಾರತವರ್ಷದ ಗರ್ಭದಲ್ಲಿ ಉತ್ಪನ್ನವಾಗುವುವು ಎಂತಹವೆಂದಾದರೂ ಅವರ ದಿವ್ಯ ಚಿತ್ತಕ್ಕೆ ವೇದ್ಯವಾದರ, ಭಾರತೀಯರು ಕೃತಾರ್ಥರೆಂದು ಹೈಕಮಿಶನರರ ಮೂಲಕ ವಿಜ್ಞಾಪಿಸಿಕೊಳ್ಳಲಾಗುವುದು.

* * *

ಹಲವು ಒಕ್ಕಣೆಗಾರರು ಸೇರಿ, ಭಾರತವರ್ಷದ ಮುಂದಣ ರಾಜ್ಯಭಾರಕ್ರಮವನ್ನು ಕುರಿತಾಗಿ ಮಸೂದೆ ತಯಾರಿಸುತಿದ್ದಾರೆ. ಸಾಂಕೀ ಹೋರ್, ಇಂಡಿಯಾ ಆಫೀಸು, ಇಲ್ಲಿನ ಸರಕಾರ, ಬ್ರಿಟಿಷ ಕೆಬಿನೆಟ್ಟು, ಫ್ರಾಂಚಾಯಿಸ್ ಇತ್ಯಾದಿ ಕಮಿಟಿಗಳು, ಡಾಯ್ ಹಾರ್ಡರು ಮೊದಲಾದವರು ಒಬ್ಬೊಬ್ಬರು ಒಂದೊಂದು ಮಸೂದೆ ತಯಾರಿಸಿದ್ದರಂತೆ, ನಡುವೆ, ಫಜಲಿ ಹುಸೇನರು ಒಂದು ಗಂಟು ಸೇರಿಸುವರೆಂದು, ಬೆಂಬಲಕೊಬ್ಬ, ಮುಂಬಲಕೊಬ್ಬ ಅಂಬೇಡ್ಕರರು. ಗೋಪನದಲ್ಲೇ ಯಾತ್ರೆ ಮಾಡಿದರು. ಹಲವರು ಸೇರಿ, ಹಲವನು ತಯಾರಿಸಿದರ, ಅದು ಹೇಗಾಗುವುದೋ ತಿಳಿಯದು.

* * *

ಹಲವರ ಅಭಿಪ್ರಾಯಗಳೂ ಬೇರೆ, ಇಂಡಿಯಕ್ಕೆ ಬೇಕಾದುದೇ ಬೇರೆ,—ಎಂತಾದರೆ,—ಯಾರೇನು ಮಾಡುವುದು?

* * *

ಕುಂಬಳಕಾಯಿಯ ದಾನಕ್ಕೆ ಪಾಪಭಟ್ಟನಿದ್ದಂತೆ,— ಲೋಕದ ಜನರ ಪಾಪಗಳನ್ನು ಹೊತ್ತುಕೊಂಡು ಹೋಗುವ ಕುರಿಮರಿಯೋ ಎಂಬಂತೆ—ಎಲ್ಲಕ್ಕೂ ಹೊಣೆ ಕಾಂಗ್ರೆಸ್ ಆಗಿಯೇ ಹೋಯಿತು. ಅದನ್ನು ನಿರ್ನಾಮಗೊಳಿಸಲು ಒರ್ಡಿನೆನ್ಸುಗಳು ಹೊರಟರೂ, ಕಾಂಗ್ರೆಸ್ ಪಕ್ಷದ ಬಲಕಾಗ್ನಿ [illegible]ವಾಗಿ ಬೆಂದು ಬೆಂಡಾಗಿ ಬಣಗಿ ಕಡ್ಡಿಯಾಗಿದೆ ಎಂದವರೇ, ಈಗ—ಅದೋ ಬೊಂಬಾಯಿಯ ಗಲಾಟೆಗೆ ಕಾಂಗ್ರೆಸ್ ಕಾರಣ ಎಂದು ಪಾರ್ಲಿಮೆಂಟಿನಲ್ಲೂ ಎನ್ನುತ್ತಿಹರಲ್ಲ! ಅಬ್ಬಾ, ಕತ್ತರಿಸಿದಷ್ಟು ಹುಟ್ಟುವ ಕಾಂಗ್ರೆಸ್ ಬಳ್ಳಿಯೇ!

* * *

ಹೊಸ ಗಡಿನಾಡಿನ ಪ್ರಾಂತ್ಯದ ಕೌನ್ಸಿಲಲ್ಲಿ ಮದ್ಯಪಾನ ನಿವಾರಣೆಯಾಗಲೇ ಬೇಕೆಂದು, ಕೌನ್ಸಿಲು ಒಂದು ಪೈಯನ್ನಾದರೂ ಅಬಕಾರಿಗೆ ಖರ್ಚಿಗೆ ಸೆಂಕ್ಷನ್ ಮಾಡಿಲ್ಲ. ಇನ್ನು ಗವರ್ನರರು ಅಬಕಾರೀ ಖರ್ಚನ್ನು ಸೆಂಕ್ಷನ್ ಮಾಡಿದರೆ, ಮದ್ಯಪಾನವನ್ನು ಸೆಂಕ್ಷನು ಮಾಡಿದಂತಾಗುವುದು

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ

ಅಗ್ರಲೇಖ
- ಪೋಲೀಸರ ಮೇಲಿನ ಆರೋಪ . ೩
- ಸ್ಫುಟವಿಚಾರಗಳು . ೪
- ಟೀಕೆಗಳು . . ೫

ವರ್ತಮಾನ ಸಂಗ್ರಹಗಳು
- ವಿದೇಶ ವರ್ತಮಾನ . . ೩
- ಒಳದೇಶ ವರ್ತಮಾನ . ೩ ೭
- ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಕಾರ್ಕಳ, ಕುಂಬಳೆ ಕಾಸರಗೋಡು, ಬಂಟ್ವಾಳ. ೭
- ವಿವಿಧ ಸಮಾಚಾರಗಳು ೧೧
- ದಾರಿ ಯಾವುದು? ೮
- ಮುಂಬಾಯಿಯಲ್ಲಿ ಪುನಃ ಮಾರಾಮಾರಿ ೯
- ಮಕ್ಕಳ ಕೂಟದ ಪ್ರಥಮ ಸಮ್ಮೇಲನ ೧೩

ಸ್ವದೇಶಾಭಿಮಾನಿ.

ತಾ. ೩ನೇ ಶುಕ್ರವಾರ ಜೂನ್ ೧೯೩೨

ಪೋಲೀಸರ ಮೇಲಿನ ಆರೋಪ.

ಸತ್ಯಾಗ್ರಹ ಚಳವಳವು ಆರಂಭವಾದಂದಿನಿಂದ ಪೋಲೀಸ ಅಧಿಕಾರಗಳು ಬಹಳವಾಗಿ ಹೆಚ್ಚಿವೆ ಅದರಲ್ಲೂ ಓರ್ಡಿನೆನ್ಸು ಮೊದಲಾದ ನೂತನ ಕಾನೂನುಗಳು ಪೋಲೀಸರಿಗೆ ಅಪಾರ ಅಧಿಕಾರಗಳನ್ನು ಕೊಟ್ಟಿವೆ ಆದರೆ ಪೋಲೀಸ್ ಇಲಾಖೆಯೆಂದರೆ ಸಂಪೂರ್ಣ ಸ್ವತಂತ್ರವಾಗಿ ವರ್ತಿಸಲು ಬಿಡತಕ್ಕುದಲ್ಲವೆಂಬುದು ಸರಕಾರಕ್ಕೇನೆ ಗೊತ್ತಿರಬೇಕು ಈ ಕಾರಣದಿಂದಲೇ ಸರಕಾರದ ಎಕ್ಸಿಕ್ಯೂಟಿವ್ ಶಾಖೆಯಲ್ಲಿ ಪೋಲೀಸ್ ಇಲಾಖೆಯನ್ನು ವಿಂಗಡಿಸಿ ಅದನ್ನು ಮೆಜಿಸ್ಟ್ರೇಟರಿಗೆ ಅಧೀನಮಾಡಿರುತ್ತದೆ ಪೋಲೀಸರು ಯಾವುದೊಂದು ಪ್ರಮುಖ ಕೆಲಸವನ್ನು ಕೈಕೊಳ್ಳಬೇಕಾದರೂ ಅವರು ಮೆಜಿಸ್ಟ್ರೇಟರ ವಿಚಾರಪೂರ್ವಕ ಅಭಿಪ್ರಾಯವನ್ನೂ ಅಪ್ಪಣೆಯನ್ನೂ ಪಡಕೊಳ್ಳುವ ವಿಧಾನವನ್ನು ಸರಕಾರವೇ ಈ ಕಾರಣದಿಂದ ನಿರ್ಣಯಿಸಿದೆ

ಸಾಮಾನ್ಯ ದಿನಗಳಲ್ಲಿಯೇ, ಪೋಲೀಸರ ವಿಷಯದಲ್ಲಿ ಸರಕಾರವು ಈ ರೀತಿಯಲ್ಲಿ ತಿಳಕೊಂಡಿರುವಾಗ ಈ ವಿಶೇಷ ಸಮಯದಲ್ಲಿ ಹೇಗ ತಿಳಕೊಳ್ಳಬೇಕು? ಓರ್ಡಿನೆನ್ಸುಗಳು, ಜಿ ಓ (G O)ಗಳು ಆಗಾಗ್ಗೆ ಹಲವು ಬರುತ್ತಾ ಇವೆ ಇವುಗಳಿಂದ ಮೆಜಿಸ್ಟ್ರೇಟರ ಕೈ ಬಿಗಿಯಲ್ಪಟ್ಟು ಪೋಲೀಸರ ಸ್ವಾತಂತ್ರ್ಯವು ಹೆಚ್ಚಿರುತ್ತದೆ ಅನ್ನುವಾಗ, ಸರಕಾರೀ ಧೋರಣವು ಎಷ್ಟೇ ವಿವೇಕದ್ದಿದ್ದರೂ, ಹತ್ತಿಪ್ಪತ್ತು ರೂಪಾಯಿ ಸಂಬಳದ ತಿಳಿವಿಲ್ಲದ ಪೋಲೀಸ ಜವಾನರು, ಒಳ್ಳೆ ಕೆಲಸವನ್ನು ತೋರಿಸಬೇಕೆಂಬ ಒಂದೇ ಉದ್ದೇಶವನ್ನಿಟ್ಟು, ಈ ಜವಾನರನ್ನು ಹುರಿದುಂಬಿಸುವ ಇನ್ಸ್‌ಪೆಕ್ಟರರ ಕೈಕೆಳಗೆ ಹೇಗೆ ವರ್ತಿಸಬಹುದೆಂಬುದನ್ನು ನಾವು ಕಲ್ಪಿಸಿಕೊಳ್ಳಬಹುದು

ಸತ್ಯಾಗ್ರಹ ಚಳವಳವನ್ನು ಅಡಗಿಸುವ ಬಗ್ಗೆ ಹೊರಟ ಓರ್ಡಿನೆನ್ಸುಗಳಲ್ಲದೆ, ಇತರ ಗುಟ್ಟಿನ ಯಾವ ಅನುಭವವು ಸರಕಾರದಿಂದ ಪೋಲೀಸರಿಗೆ ಕೊಡಲ್ಪಟ್ಟಿಯದೆ ಎಂಬುದು ನಮಗೆ ಗೊತ್ತಿಲ್ಲ ಆದರೆ ಒಂದು ಕಡೆಯಲ್ಲಿ ಒಬ್ಬ ಸ್ವಯಂಸೇವಕನು ಲಾಠಿ ಪೆಟ್ಟಿನಿಂದ ತೀರಿಹೋದುದು, ಇನ್ನೊಂದು ಕಡೆಯಲ್ಲಿ ಆಗತ್ಯವಿರುವುದಕ್ಕಿಂತಲೂ ಹೆಚ್ಚು ಹೊಡವದೆ ಎಂದು ಸರಕಾರವು ಒಪ್ಪುವಷ್ಟು ರೀತಿಯಲ್ಲಿ ಯಾರೂ ಒಬ್ಬರನ್ನು ಪೋಲೀಸರು ಹೊಡೆದುಬಿಟ್ಟುದು, ದೂರವೇಕೆ ಮಂಗಳೂರಿನಲ್ಲಿಯೇ ಪ್ರೊಫೆಸರರೊಬ್ಬರಿಗೆ ಹೊಡೆದುದು, ಹಾಗೆಯೇ ಇಂತಹ ಹಲವು ಹೊಡೆತದ ಉದಾಹರಣೆಗಳು, ಕೌನ್ಸಿಲಿನಲ್ಲಿ ಪ್ರಶ್ನೆ ಬಂದಾಗ ಸರಕಾರವು ಕೆಲವನ್ನು ಜವಾಬಿನಿಂದ ತಪ್ಪಿಸಿ ಸಮರ್ಥಿಸಿದುದು, ಕೆಲವನ್ನು ಅರ್ಧ ಮನಸ್ಸಿನಿಂದ ಸಾವಿರ ನೆವನಗಳೊಡನೆ ಒಪ್ಪಿದುದು, ಇವೆಲ್ಲವನ್ನೂ ನೋಡುವಾಗ ಸರಕಾರದ ಅಂತರ್ಯದ ವಿಷಯದಲ್ಲಿ ಅನುಮಾನವಾಗುತ್ತದೆ

ಮೇಲೆ ಹೇಳಿದ ಉದಾಹರಣೆಗಳು ಬಹಿರಂಗದವುಗಳೆಂದು ಸರಕಾರಗಳು ಒಪ್ಪುತ್ತವೆ, ನೆವನ ಹೇಳುತ್ತವೆ, ಅಥವಾ ನಿರಾಕರಿಸುತವೆ. ಆದರೆ ಎಲ್ಲದಕಿಂತಲೂ ಭಯಂಕರವಾದ ಆರೋಪ ಕೇಳಿದರೆ ಪೋಲೀಸ್ ಜೈಲಿನಲ್ಲಿ ಹಾಕಿದ ಮೇಲೆ ಹೊಡೆಯುವುದೆಂಬುದು. ಈ ಆರೋಪಗಳು ಹಲವು ಕಡೆಗಳಿಂದ ಬಂದಿವೆ. ಅವುಗಳಲ್ಲಿ ಬಹಳ ಕಠಿಣವಾದ ಆರೋಪವು ಬಂಗಾಳದ್ದು ಅಲ್ಲಿ ಒಬ್ಬನು ಅರಾಜಕ ಕಡೆ (Anarchist)ಯವನೆಂದು ಕೈದು ಮಾಡಲ್ಪಟ್ಟನು ಕೆಲವು ಸಮಯದ ನಂತರ ಅವನಿಗೆ ಮೈಮೇಲೆಲ್ಲಾ ಪೆಟ್ಟುಗಳಾಗಿ ಅವನು ರಕ್ತ ಕಾರಲು ಆರಂಭಿಸಿದನು. ಆರೋಪವೇನೆಂದರೆ ಪೋಲಿಸರು ಅಷ್ಟು ಹೊಡೆದರೆಂದು, ಪೋಲೀಸರು ಹೇಳುವುದೇನೆಂದರೆ ಅವನಿಗೆ ಮೂರ್ಛೆ ಬೀಳುವ ರೋಗವಿದ್ದು, ಮೂರ್ಛೆ ಬಂದಾಗ ಬಿದ್ದು ಪೆಟ್ಟಾದುದೆಂದು ಹಾಗೆಯೇ ಬೆನಾರಸಿನಲ್ಲಿ ಸ್ವಯಂಸೇವಿಕೆಯರ ವಸ್ತ್ರ ಹಿಡಿದೆಳೆದರೆಂಬ ಇನ್ನೊಂದು ಆರೋಪ ದಕ್ಷಿಣ ಹಿಂದೂಸ್ಥಾನದಲ್ಲಿ ಇಬ್ಬರು ಮರ್ಯಾದಸ್ಥ ಸತ್ಯಾಗ್ರಹೀ ಕೈದಿಗಳನ್ನು ಲೋಕಪ್ಪಿನಲ್ಲಿ ಹೊಡೆದರೆಂಬ ಹಳೇ ಆರೋಪ ಈ ಆರೋಪಗಳನ್ನು ಸರಕಾರವು ಮೆಜಿಸ್ಟ್ರೇಟರ ಮೂಲಕ ವಿಚಾರಿಸಿ ತನಿಖೆ ನಡಿಸಿ ಸುಳ್ಳೆಂದು ಪ್ರಕಟಿಸಿಯದೆ ಆದರೆ ಮೇಲಿಂದ ಮೇಲೆ ಬರುವ ಇಂತಹ ಆರೋಪಗಳನ್ನು ಮೆಜಿಸ್ಟ್ರೇಟರ ಮೂಲಕ ತನಿಖೆ ನಡಿಸಿದರೆ ಸಾಕಾಗುವುದೆಂದು ನಾವು ನೆನಸಲಾರೆವು. ಏಕೆಂದರೆ ವಿಚಾರಣೆಯು ಸರಕಾರಿ ನೌಕರರಿಂದ, ರುಜುವಾತು ಪೋಲೀಸ ಕಡೆಯಿಂದ ಅದರಲ್ಲೂ ಲೋಕಪ್ಪಿನಲ್ಲಿ ಅಂದರೆ ಪೋಲೀಸ್ ಜೈಲಿನಲ್ಲಿ ಆದ ಕೃತ್ಯಗಳಿಗೆ ಕೈದಿಯು ಎಲ್ಲಿಂದ ರುಜುವಾತು ತರಬೇಕು? ಕೈದಿಯು ಇಂತಹ ಕಷ್ಟ ಸ್ಥಿತಿಯಲ್ಲಿರುವಾಗ ವಿಚಾರಣೆಯು ನಿಷ್ಪಕ್ಷಪಾತವಾಗಿಯೂ, ಅನುಮಾನಗಳಿಗೆ ಅವಕಾಶ ಕೊಡದಂತಹುದಾಗಿಯೂ ಇರಬೇಕು ಆದುದರಿಂದ ಸರಕಾರವು ಮೆಜಿಸ್ಟ್ರೇಟರ ಮೂಲಕ ಈ ಅಪವಾದಗಳನ್ನು ವಿಚಾರಣೆ ನಡಿಸಿ ಇವು ನಿರಾಧಾರವೆಂದು ಕಂಡಲ್ಲಿ, ಬೇರೆ ಸರಕಾರೀ ಕಮಿಟಿ ಮೂಲಕ ಇವುಗಳ ಪುನರ್ವಿಚಾರಣೆಯನ್ನು ಯಾಕೆ ಮಾಡಕೂಡದು?

ಸರಕಾರವನ್ನು ನಿಂದಿಸಲಿಕ್ಕೆ ಕಾಂಗ್ರೆಸ್ಸಿನವರು ಉಂಟುಮಾಡಿರುವ ಬನಾವಣೆಯಿದು ಎಂದು ಸರಕಾರವು ಈ ಆರೋಪಗಳನ್ನು ಸುಲಭದಲ್ಲಿ ತೀರಿಸಿದ್ದಾರೆ ಅದರಿಂದ ಲೋಕವಾಗಲಿ, ಪ್ರಜೆಗಳಾಗಲಿ ಇಷ್ಟರಿಂದಲೇ ತೃಪ್ತವಾಗಲಾರವು ಸರಕಾರವು ತನ್ನ ಯಶಸ್ಸಿನ ಬಗ್ಗೆಯಾದರೂ ಈ ಆರೋಪ—ಅಪವಾದಗಳನ್ನು ಬೇಸರಕಾರೀ (Non Official) ವಿಚಾರಣೆಗೆ ಗುರಿಪಡಿಸುವುದು ಆವಶ್ಯಕ

ವಿದೇಶ ವರ್ತಮಾನ.

ಬೆನಾರೆಸ್‌ನಲ್ಲಿ ಸ್ತ್ರೀಯರಿಗೆ ಪೋಲೀಸರು ಹೊಡೆದರೆಂಬ ಆರೋಪದ ಸತ್ಯಾಂಶವನ್ನು ಸರ್ ಹೋರರು ಹೊರಗೆಡಹುತ್ತಾ, ಅದು ಬರೇ ಸುಳ್ಳು, ಕೊಂಗ್ರೆಸಿನವರ ಪಿತಲಾಟ ಅಂದು ಕೈದುಮಾಡಲ್ಪಟ್ಟವರಲ್ಲಿ ಒಬ್ಬಳಲ್ಲದೆ ಬೇರೆ ಗೃಹಿಣಿಗಳಾರೂ ಇರಲಿಲ್ಲ ಗಂಡನ ಮನೆಯಿಂದ ಓಡಿದ ನಿರ್ಗತಿಕ ಸ್ತ್ರೀಯರು ಮಾತ್ರ ಇದ್ದರು ಎಂದು ಹೇಳಿದರು

ದಕ್ಷಿಣ ರೊಡೇಸಿಯಾದಲ್ಲಿ ಅಮೇರಿಕನ್ ಮಿಶನರಿಗಳು ನಿಗ್ರೋ ಜನಾಂಗದವರನ್ನು ತಮ್ಮ ಉಪದೇಶದಿಂದ ಕಳೆಕಿರುಗಿಸಿರುವರೆಂಬುದನ್ನು ಕೇಳಿ ಅಲ್ಲಿಯ ಸರಕಾರವು ೪ ಮಂದಿ ಮಿಶನರಿಗಳನ್ನು ಗಡಿಪಾರು ಮಾಡಿಬಿಟ್ಟಿತು

ಜಪಾನರು ರಶ್ಯದೇಶದ ಗಡಿಗಳ ಬಳಿಗೆ ಹೋಗಿ ನಿಂತಿರುವರು ಅವರೊಳಗೆ ಯುದ್ಧವಾಗಬಹುದೊ ಎಂದು ಶಂಕಿಸಲಾಗಿದೆ

— ಅಮೇರಿಕದಲ್ಲಿ ಟಾಲರ್ ಎಂಬವನು ಒಂದು ವಿಷವಸ್ತುವನ್ನು ಕಂಡುಹಿಡಿದಿದ್ದಾನೆ ಅದನ್ನು ರಾತ್ರಿ ೮ ಗಂಟೆಗೆ ಒಂದು ಸಳ್ಳಿಯಲ್ಲಿ ಹಾಕಿ ಹಾರಿಸಿಬಿಟ್ಟರೆ ಬೆಳಗ್ಗೆ ೮ ಗಂಟೆಯಾಗುವುದರೊಳಗೆ ಸಾವಿರ ಮೈಲು ವಿಸ್ತೀರ್ಣದ ಭೂಮಿಯೂ ಜನರೂ ಮೃಗಪಕ್ಷಿಗಳೂ ಧ್ವಂಸವಾಗುವುವು

* * *

ಒಳದೇಶ ವರ್ತಮಾನ

ನಾಗಪುರದಲ್ಲಿ ವನಶಾಸನ ಭಂಗವು ನಡೆಯುತ್ತಿದೆ ಕಳೆದ ವಾರ ಕಾಡಿನ ಮರಗಳನ್ನು ಕಡಿದ ೧೨ ಮಂದಿಗಳನ್ನು ಕೈದುಮಾಡಿದರು

ನಾಗಪುರದ/ವರ್ಧ ಎಂಬಲ್ಲಿ ಸ್ತ್ರೀಯರು ರೈಲ್ವೆ ಸ್ಟೇಶನಿನ ಟಿಕೇಟು ಆಫೀಸಿನ ಬಳಿ ನಿಂತು ಪಹರೆಗಾರಂಭಿಸಿರುವರು

ಲೊಥಿಯನ್ ಕಮಿಟಿ ಬಹಿಷ್ಕಾರಾರ್ಥವಾಗಿ ಸಿದ್ಧತೆಯನ್ನು ರಹಸ್ಯವಾಗಿ ಮಾಡುತ್ತಿದ್ದ ಡಾ ಸೋಹಾನ್ ಎಂಬವರನ್ನೂ ಇನ್ನು ಕೆಲವರನ್ನೂ ಲಾಹೋರಿನಲ್ಲಿ ಕಾರಾಗೃಹವಾಸಕ್ಕೆ ಕೊಂಡೊಯ್ದರು

ಮದ್ರಾಸಿನಲ್ಲಿ ಒಬ್ಬನು ಮರದಿಂದ ಎಲೆಗಳನ್ನು ಕೊಯ್ಯಲು ಹತ್ತಿದಾಗ, ಬೀದಿಯಲ್ಲಿದ್ದ ವಿದ್ಯುತ್ ಸರಿಗೆಯನ್ನು ಪಕ್ಕನೆ ಹಿಡಿದು ಮರದ ಮೇಲೆ ತೂಗಾಡುತ್ತಾ ಸತ್ತನು.

ಮುಂಬಯಿಯಲ್ಲಿ ತನಗೊಂದು ಕೆಲಸವು ಸಿಕ್ಕಿದೆ ಅದಕ್ಕಾಗಿ ಮುಂಬಾಯಿಗೆ ಹೋಗಲು ತನ್ನಲ್ಲಿ ಹಣವಿಲ್ಲವೆಂದು ಹೇಳಿ ಉದಕಮಂಡಲದಲ್ಲಿ ಜೆರಾಲ್ಡ್ ನೋರ್ಮನ್ ಎಂಬ ಆಂಗ್ಲೋ ಇಂಡಿಯನ್ ಯುವಕನೊಬ್ಬನು ಅನೇಕ ಶ್ರೀಮಂತರಿಂದ ಹಣ ಪಡೆದು ದುರ್ವಿನಿಯೋಗ ಮಾಡಿದನೆಂಬ ಆರೋಪಣೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟಿರುವನು.

ಹಿಂದೂಸ್ಥಾನದ ನಾನಾ ಬಗೆಯ ಕಲೆ ಮತ್ತು ಕುಶಲವಿದ್ಯೆಗಳಿಗೆ ಉತ್ತೇಜನವಿತ್ತು ಜನರಲ್ಲಿರುವ ಕಲಾಭಿಮಾನವನ್ನು ವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಇದೇ ಜುಲೈ ತಿಂಗಳ ಮೊದಲನೆಯ ವಾರದಲ್ಲಿ ಒಂದು ಪ್ರದರ್ಶನವನ್ನು ಬೆಂಗಳೂರಲ್ಲಿ ನಡೆಸಲು ನಿಶ್ಚಯವಾಗಿದೆ ಸಾಮಾನ್ಯವಾಗಿ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ, ವಿಶೇಷತಃ ಕರ್ನಾಟಕದಿಂದಲೂ ಪ್ರದರ್ಶನ ಸಾಮಗ್ರಿಗಳನ್ನು ತರಿಸಲು ಏರ್ಪಾಡಾಗಿದೆ ಈ ಪ್ರದರ್ಶನದಲ್ಲಿ — ಲಲಿತಕಲಾ ಕೈಗೆಲಸಗಳು, ಉಪಕರಣಗಳು ಸಣ್ಣ ಕೈಗಾರಿಕೆಗಳು ಫೋಟೋಗ್ರಾಫಿ ಮತ್ತು ಕಲಾ ಸಂಗ್ರಹಗಳು ಪ್ರಾಚೀನ ಚಿತ್ರ ಮತ್ತು ಬರವಣಿಗೆಗಳು ಮತ್ತು ರಂಗ ಭೂಮಿಗೆ ಸಂಬಂಧಪಟ್ಟ ಪ್ರದರ್ಶನ ಇತ್ಯಾದಿಗಳು ಪ್ರದರ್ಶಿಸಲ್ಪಡುವುವು

ಸ್ವದೇಶಿಯ ನಾನಾ ಬಗೆಯ ಕೈಗಾರಿಕೆಗಳನ್ನು ಅಂತಸ್ತುವಾರಾಗಿ ವಿವರಿಸಿ ತಿಳಿಸಲು ಅನುಕೂಲಿಸುವ ಮಾದರಿಗಳನ್ನು ವಿವರವಾಗಿ ಪ್ರದರ್ಶಿಸಲು ಸೌಕರ್ಯಗಳನ್ನು ಕಲ್ಪಿಸಿರುವೆವು ಈ ಪ್ರದರ್ಶನವನ್ನು ಯಶಸ್ವಿಯಾಗಿ ನಡೆಯಿಸಲು ಅನೇಕ ಮಹನೀಯರುಗಳ ಮತ್ತು ಕಲಾಭಿಮಾನಿಗಳ ಸಭೆಯೊಂದು ಏರ್ಪಡಿಸಲಾಗಿದೆ ಶ್ರೀಮಾನ್ ಪಾಪಡಿ ಸುಬ್ಬರಾಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕಾರ್ಯ ಮಾಡಲು ಉಪಸಮಿತಿಯೊಂದು ಏರ್ಪಡಿಸಿದೆ ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷೆಯುಳ್ಳವರು ಕಾರ್ಯದರ್ಶಿಗಳಾದ ಶ್ರೀ ಎ ಎನ್ ಸುಬ್ಬರಾವ್ ಕಲಾ ಮಂದಿರ— ಅಥವಾ ಶ್ರೀ ಜಿ ಶೀನಿವಾಸ ರಾವ್ ಬಿ ಎ ಬಿ ಎಲ್ ಅಡ್ವೋಕೇಟ್ ಕಲಾ ಮಂದಿರ, ಬೆಂಗಳೂರು ಇವರಿಗೆ ಬರೆಯುವುದು

— ಕಳೆದ ಆದಿತ್ಯವಾರ ಹಿಂದೂದೇಶದ ಎಲ್ಲಾ ಕಡೆಗಳಲ್ಲೂ ಅಖಿಲ ಭಾರತ ಸ್ವದೇಶಿ ದಿನವು ಜರಗಿತು ಭಾಷಣ ಮೆರವಣಿಗೆಗಳೂ ಇದ್ದುವು ಎಲ್ಲೂರಿನಲ್ಲಿ ಸ್ವದೇಶಿ ದಿನಾಚರಣೆಯ ಸಂಬಂಧದ ಮೆರವಣಿಗೆಯೂ ಸಭೆಯೂ ಆಗಲು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಅಪ್ಪಣೆ ಕೊಡಲಿಲ್ಲ

ಇಂಗ್ಲೆಂಡಿಗೆ ಮಾವಿನ ಹಣ್ಣುಗಳು ಇಷ್ಟರ ತನಕ ಕಳುಹಿಸಲ್ಪಡಲಿಲ್ಲ ಕಳೆ ತಿಂಗಳ ೩ನೆ ಒಳ್ಳೆ ಮಾವಿನ ಹಣ್ಣುಗಳನ್ನು ಸಮುದ್ರಯಾತ್ರಿಗಳಿಗೆ ರವಾನಿಸಲಾಯಿತು ಅವು ಕೊಳೆಯದೆ ಸುರಕ್ಷಿತವಾಗಿ ತಲಪಿದರೆ ಮತ್ತೆ ಇಂಗ್ಲೆಂಡಿಗೆ ಹಣ್ಣುಗಳನ್ನು ಕಳುಹಿಸಬಹುದೆಂದು ಯೋಜಿಸಲ್ಪಟ್ಟಿತು ಮೊನ್ನೆ ಆ ಹಣ್ಣುಗಳು ಸುಗಮಯಾತ್ರೆಯನ್ನು ಮಾಡಿ ಇಂಗ್ಲೆಂಡಿಗೆ ತಲಪಿದುವು ಇನ್ನು ಮೇಲೆ ಮಾವಿನ ಹಣ್ಣುಗಳೂ ಇಂಗ್ಲೆಂಡಿಗೆ ಹೋಗುವುವು

ನಾಗಪುರದ ಸಿವನೀ ಜೈಲಿನಲ್ಲಿದ್ದ ಸುಭಾಷ್ಚಂದ್ರ ಬೋಸರ ಆರೋಗ್ಯವು ಸುಸ್ಥಿತಿಯಲ್ಲಿಲ್ಲದಿರುವುದರಿಂದ ಅವರನ್ನು ಬೇರೆಲ್ಲಿಗಾದರು ವರ್ಗಾಯಿಸಬೇಕೆಂದು ಕೇಂದ್ರಪ್ರಾಂತ್ಯದ ಸರಕಾರದೊಡನೆ ಪತ್ರವ್ಯವಹಾರವು ನಡೆಯುತ್ತಿದೆ

ಅಹ್ಮದಾಬಾದಿನ ಮ್ಯುನಿಸಿಪಾಲಿಟಿಯವರು ತಮ್ಮ ಆಫೀಸಿನ ವಸ್ತು ಒಡವೆಗಳ ಮೇಲೂ ಕಸದ ಬುಟ್ಟಿ ಮೊದಲಾದ ಸಮಾನುಗಳ ಮೇಲೂ ಕೊಂಗ್ರೆಸ್ ಪತಾಕೆಗಳನ್ನು ಬಿಡಿಸಿದುದಕ್ಕಾಗಿ ಡಿ ಪೆ ಜಸ್ಟಿಸ್ ಕೌನ್ಸಿಲಿನ ಅಧ್ಯಕ್ಷರಿಂದ ಸಮಾಧಾನಗಳನ್ನು ಕೇಳಿರುವರು ಅಲ್ಲದೆ ಮಹಾತ್ಮರು ೧೯೩೦ನೇ ಜುಲಾಯಿ ೭ರಲ್ಲಿ ಮುನಿಸಿಪಾಲಿಟಿ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನೇರಿಸಿದ ದಿನ ಆದ ಠರಾವುಗಳ ನಕಲೂ ತನಗೆ ಬೇಕೆಂದಿರುವರು

"ಮುಂಬಾಯಿ ಕ್ರೊನಿಕಲ್"ನಿಂದ ಸರಕಾರವು ಕೇವಲ ಠೇವಣಿಯನ್ನು ಕೇಳಬೇಕಷ್ಟೆ ಆ ವಿಷಯವಾಗಿ ಬಿ ಜಿ ಹೊರ್ನಿಮೆನ್ನರು ಸರ್ ಸಾಮ್ಯುವೆಲ್ ಹೋರರಿಗೂ ವೈಸರಾಯರಿಗೂ ತಂತಿ ಕೊಟ್ಟು ಜಾತೀಯತೆಯ ಗಲಭೆಯುಂಟಾದಾಗ ಸರಕಾರವು ಸರಿಯಾಗಿ ಎಚ್ಚರ ತೆಗೆದುಕೊಳ್ಳಲಿಲ್ಲವೆಂದು ಹೇಳಿದ ತನ್ನ ಮಾತು ಆಳವಳ ವಿರೋಧದ ಶಾಸನಗಳಿಗೊಳಗಾಗುವುದು ತೀರ ನ್ಯಾಯವಲ್ಲವೆಂದೂ, ಠೇವಣಿಯನ್ನು ಕೇಳಬಾರದೆಂದೂ ಹೇಳಿರುವರು ಲೇಖನಗಳನ್ನು ಸರ್ ಹೋರರು ಪರಿಶೀಲಿಸಲಿರುವರು

— ಅಹ್ಮದಾಬಾದಿನಲ್ಲಿ ಗುಜರಾಥ್ ಕೊನ್ಫರೆನ್ಸನ್ನು ಜರಗಿಸಲು ಯತ್ನವು ನಡೆದಾಗ ಮೂವರನ್ನು ಕೈದುಮಾಡಿದರು

— ಮಲಬಾರಿನಲ್ಲಿ ಕಳೆದ ವಾರ ಆಗಿ ಹೋದ ಬಿರುಗಾಳಿಯ ದೆಸೆಯಿಂದ ೧೩ ಜನರು ಮಡಿದರೆಂದು ತಿಳಿದುಬರುತದೆ

* * *

ದಕ್ಷಿಣ ಕನ್ನಡ.

ಮಳೆಗಾಲದಲ್ಲಿ ಮಾರ್ಗ ರಿಪೇರಿಗಾಗಿ ಅಲ್ಲಲ್ಲಿ ಮಾರ್ಗದ ಬದಿಗಳಲ್ಲಿ ರಾಶಿ ಹಾಕಿ ಕೂಡಿಸಿಟ್ಟ ಕಲ್ಲು ಮತ್ತು ಜಲ್ಲಿ ರಾಶಿಗಳ ಹತ್ತಿರ ಅನೇಕ ಕಡೆಗಳಲ್ಲಿ ಡೇಂಜರು ಲ್ಯಾಟುಗಳನ್ನಿಡದೆ ರಾತ್ರಿಯಲ್ಲಿ ಹಾದು ಹೋಕರು ಸದ್ರಿ ರಾಶಿಗಳ ಮೇಲೆ ಬಿದ್ದು ಅಪಾಯಕ್ಕೀಡಾಗುವರೆಂದೂ ಮಾರ್ಗದ ಬದಿಗಳಲ್ಲಿ ರಾಶಿ ಹಾಕಿದೊಡನೆಯೇ ಡೇಂಜರು ಲ್ಯಾಟುಗಳನ್ನು ಕಾಲವಿಳಂಬವಿಲ್ಲದೆ ಇಡಿಸುವ ವಿಲೆವಾರಿಯನ್ನು ಮುನಿಸಿಪಾಲಿಟಿಯ ಸಂಬಂಧಪಟ್ಟ ಅಧಿಕಾರಿಗಳು ಮಾಡಬೇಕೆಂದು ಸೂಚಿಸುವ ಒಂದು ಪತ್ರವು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ (ಸಂಪಾದಕ)

ಮಂಗಳೂರು: — ಕಳೆದ ವಾರ ಮಳೆಗಾಳಿಯ ಸಮಯದಲ್ಲಿ ಕೊಚ್ಚಿಯಿಂದ ಮಂಗಳೂರಿಗೆ ಸರಕು ತುಂಬಿಸಿಕೊಂಡು ಬಂದ ಒಂದು ಮಚ್ವೆಯು ಅಳಿವೆಬಾಗಿಲಲ್ಲಿ ಅಡಿಮೇಲಾಗಿ ಬಿತ್ತು. ಅದರಲ್ಲಿದ್ದ ೪೦,೦೦೦ ಕೊಬರಿಯೂ ಎಣ್ಣೆಯ ಇನ್ನಿತರ ಸಾಮಾನುಗಳೂ ಸಮುದ್ರದ ಪಾಲಾದುವು

ಮಾರ್ಚಿ ತಿಂಗಳಲ್ಲಿ ಇಲ್ಲಿಗೆ ಬಂದಿದ್ದ ಜಂಕರ್ಸ್ ವಿಮಾನವು ಪೋರ್ಟ ಡಾರ್ವಿನ್ ಎಂಬಲ್ಲಿ ಹಾರಾಡುತ್ತಿರುವಾಗ ಎಲ್ಲಿಯೋ ಬಿದ್ದು ವಿಮಾನವೂ ಅದರೊಳಗಿದ್ದ ವೈಮಾನಿಕರೂ ಕಾಣೆಯಾದರು. ಕೆಪ್ಟನ್ ಬಟ್ರ್ಯಾಮ್ ಎಂಬವರು ಅದರ ಮುಖ್ಯ ಚಾಲಕರು. ಅದರಲ್ಲಿ ೨ ಮಂದಿಗಳಿದ್ದರು.

ಸ್ಥಳೀಯ ವಿವೇಕಾನಂದ ಸೊಸೈಟಿಯ ಆಶ್ರಯದಲ್ಲಿ ಶ್ರೀ ಅಚ್ಯುತಬಾಳಿಗ, ಬಿ. ಎ. ಎಲ್. ಟಿ. ಇವರು ನಡೆಸಲಿರುವ ಗೀತಾ ಕ್ಲಾಸು ನಾಳೆ ೮ ಘಂಟೆಗೆ ಕೆನರಾ ಹೈಸ್ಕೂಲಿನ ಹೊಸಕಟ್ಟಡದಲ್ಲಿ ಪ್ರಾರಂಭವಾಗುವುದು

ಮೊನ್ನೆ ಆದಿತ್ಯವಾರ ಬೆಳಿಗ್ಗೆ ಮಂಗಳೂರು ಮೈದಾನಿನಲ್ಲಿ ರಾಷ್ಟ್ರಧ್ವಜವಂದನೆಯು ನಡೆಯಿತು. ಶ್ರೀ ಜಯರಾಮಶೆಟ್ಟಿ ಮತ್ತು ಇನ್ನಿತರ ೩ ಮಂದಿ ಸ್ವಯಂಸೇವಕರನ್ನು ಕೈದುಮಾಡಿಬಿಟ್ಟರು. ಬಾಬು ಶೆಟ್ಟಿ ಎಂಬವರೂ ಜಯರಾಮಶೆಟ್ಟರೂ ತಾ [illegible]ನೇ ದಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಮುಂದೆ ಹಾಜರಾಗಬೇಕೆಂದು ಅಪ್ಪಣೆಯಾಗಿದೆ

ಕೆಲವು ತಿಂಗಳ ಹಿಂದೆ ಪಹರೆ ನಡೆಸಿ ಶಿಕ್ಷೆ ಹೊಂದಿದ ಶ್ರೀನಾಥ ಕಲ್ಯಾಣ ಎಂಬವರು ತಾ. ೩೦ನೇ ದಿನ ಬಿಡುಗಡೆ ಮಾಡಲ್ಪಟ್ಟರು

ಶ್ರೀ ಮಾರಪ್ಪ ಪಕ್ಕಳರನ್ನು ಡಿವಿಜನಲ್ ಮೇಜಿಸ್ಟ್ರೇಟರ ಮುಂದೆ ಹಾಜರುಪಡಿಸಿ ಜಾಮೀನಿನ ಮೇಲೆ ಬಿಟ್ಟಿರುವರು. ಅವರ ಕೇಸಿನ ವಿಚಾರಣೆಯು ನಿನ್ನೆ ನಡೆಯಿತು

ಕೈದೀಲು ತಿಮ್ಮಪ್ಪ ಶೆಟ್ಟರು ಕಾಯಿದೆಭಂಗ ಪ್ರೇರಕರೆಂಬ ಅಪಾದನೆಯ ಮೇಲೆ ಪುನಃ ಆರು ತಿಂಗಳ ಶಿಕ್ಷೆಗೆ ಗುರಿಯಾದರು

ಆದಿತ್ಯವಾರ ದಿನ ಪ್ರಭಾತಫೇರಿ ಮೆರವಣಿಗೆಯು ನಡೆಯಿತು. ಲಾಠಿಪೆಟ್ಟುಗಳೂ ಕೈದುಗಳೂ ಇರಲಿಲ್ಲ

ಈಗ ಸ್ವಯಂಸೇವಕರನ್ನು ಪೋಲೀಸರು ಕೈದುಮಾಡುವ ಸುವ್ಯವಸ್ಥೆಯು ಪ್ರಕಟವಾಗಿದೆ. ಪಹರೆಗಾರರು ತಮ್ಮ ಪಿಕೆಟಿಂಗನ್ನು ನಿಲ್ಲಿಸಿ ಹೊರಟುಹೋಗಬೇಕೆಂದು ಪೋಲೀಸರು ಎಚ್ಚರಿಸಿ ಹತ್ತು ಹದಿನೈದು ನಿಮಿಷಗಳ ಅವಕಾಶವನ್ನು ಕೊಡುವರು. ಸ್ವಯಂಸೇವಕರು ಮತ್ತೂ ಪಹರೆಮಾಡಿದರೆ ಅವರನ್ನು ಕೈದುಮಾಡುವರು. ಮೊದಲಿನಂತೆ ಯಾವ ಗಲಾಟೆಯೂ ಇಲ್ಲ

ಕೊಂಗ್ರೆಸ್ಸಿನ ಸೈಕ್ಲೊಸ್ಟೈಲ್ ಯಂತ್ರದ ಪತ್ತೆಗಾಗಿ ಪೋಲೀಸರು ಅಲ್ಲಲ್ಲಿ ಶೋಧೆ ನಡೆಸುತ್ತಿರುವರು. ಇನ್ನೂ ಅದರ ಪತ್ತೆಯಾಗಲಿಲ್ಲ

ಕಳೆದ ತಾ ೨೯ರಲ್ಲು ಜರಗಲಿಕ್ಕಿದ್ದ ಅದ್ವೈತ ಸಮಿತಿಯ ಷಷ್ಠಮ ವಾರ್ಷಿಕ ಮಹಾಸಭೆಯಲ್ಲಿ ಸಾಕಷ್ಟು ಮಂದಿ ಸದಸ್ಯರ ಹಾಜರಿಯು ಇಲ್ಲದಿದ್ದ ಕಾರಣ ಸದ್ರಿ ಸಭೆಯು ಇದೇ ಜೂನ್ ತಿಂಗಳ ತಾ ೫ನೇ ಆದಿತ್ಯವಾರ ಸಾಯಂಕಾಲ ಘಂಟೆ ೪ಗೆ ರಾ। ಬಾ। ಪಾಠಶಾಲೆಯಲ್ಲಿ ಜರಗುವುದು. ಅದೇ ದಿವಸ ಅ. ಸಿ. ಮಂಡಳಿಯ ದ್ವಿತೀಯಾಧಿವೇಶನವು ಸಾಯಂಕಾಲ ಘಂಟೆ ೬ಕ್ಕೆ ಸದ್ರಿ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿಯೇ ಜರಗುವುದಾದ ಕಾರಣ ಸದಸ್ಯರೆಲ್ಲರೂ ಉಪಸ್ಥಿತರಾಗಬೇಕಾಗಿ ಕಾರ್ಯದರ್ಶಿಗಳ ವಿನಂತಿಯಿದೆ

ತಾ ೨೮-೫-೩೨ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೫೩ ಜನನಗಳೂ, ೨೩ ಮರಣಗಳೂ ಉಂಟಾಗಿವೆ.

ಮಂಗಳೂರು ಮುನಿಸಿಪಾಲಿಟಿ ಕೌನ್ಸಿಲಿನ ಒಂದು ಸಭೆಯು ತಾ. ೬-೬-೧೯೩೨ನೇ ದಿವಸ ಸಾಯಂಕಾಲ ೫ ೩೦ಕ್ಕೆ ಅದರ ಆಫೀಸಿನಲ್ಲಿ ಜರಗುವುದು.

ಉಡುಪಿ: — ಹಲವು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಅವಿಶ್ರಾಂತ ಖಾದಿ ಪ್ರಚಾರ ಮಾಡುತ್ತಿರುವ ಇಲ್ಲಿನ ಖಾದಿ ನಿಲಯದಲ್ಲಿ ರೇಶ್ಮೆಯ ಕೋಟಿಂಗ್, ಶರ್ಟಿಂಗ್, ಉಪ್ಪಸಕ್ಕಾಗುವ ಮೇಲ್ತರದ ಮತ್ತೂ ನಾನಾ ಬಗೆಯ ಖಾದಿಯು ಹೊಸತಾಗಿ ಬಂದಿರುವುದು; ಮುಂಚಿತವಾಗಿ ತಿಳಿಸಿದ್ದಲ್ಲಿ ಗ್ರಾಹಕರು ಅಪೇಕ್ಷಿಸುವ ನಮೂನೆಯ ಯಾವತ್ತೂ ಖಾದಿಯು ಸಿದ್ಧಮಾಡಿಕೊಡಲಾಗುತ್ತದೆ.

ಗೌಡ ಸಾರಸ್ವತರಿಗೆ ವಿದ್ಯಾರ್ಥಿವೇತನ ಪರದೇಶಗಳಿಗೆ ಹೋಗಿ ಮೇಲ್ತರದ ವಿದ್ಯಾರ್ಜನೆ ಮಾಡಲು ಅಪೇಕ್ಷಿಸುವ ಗೌಡ ಸಾರಸ್ವತ ಬ್ರಾಹ್ಮಣವೃಂದದ ವಿದ್ಯಾರ್ಥಿಗಳ್ಯಾರಾದರೂ ಸಾಲ ರೂಪದಲ್ಲಿ ವಿದ್ಯಾರ್ಥಿವೇತನವನ್ನು ಅಪೇಕ್ಷಿಸುವವರಿದ್ದರೆ ಇದೇ ಜುಲಾಯಿ ೧೫ರೊಳಗೆ ಅರ್ಜಿ ಮಾಡತಕ್ಕದ್ದು. ಈ ವರ್ಷ ಒಂದೇ ಅಥವಾ ಹೆಚ್ಚು ವೇತನಗಳಿಗಾಗಿ ಕೊಡುವರೆ ರೂ ೫೦೦೦ ದೊರಕುವುದು. ರಾವ್ ಸಾಹೇಬ್ ಎಚ್. ವಿ ರಾಜಾ, ಅಧ್ಯಕ್ಷ, ಗೌಡಸಾರಸ್ವತ ಬ್ರಾಹ್ಮಣ ಪರದೇಶಿ ವಿದ್ಯಾರ್ಜನೆ ಸಂಘ, ಬೊಂಬಾಯಿ ಇವರಿಗೆ ಅರ್ಜಿಮಾಡತಕ್ಕದ್ದು.

(ಮು ಕ್ರೋ ೧೮-೫-೩೨)

ಬಂಟ್ವಾಳ — ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಅಮಟಾಡಿ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಮೇ ತಿಂಗಳ ೨೯ ರಲ್ಲು ಜರಗಿತು. ಮಂಗಳೂರು ತಾಲೂಕು ಬೋರ್ಡಿನವರು ಹಣದ ಅಭಾವದಿಂದ ಬೋರ್ಡ್ ಶಾಲಾ ಉಪಾಧ್ಯಾಯರಿಗೆ ಕಳೆದ ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಶೇಕಡಾ ೧೦ರಂತೆ ಕಡಿಮೆ ಮಾಡಿದ ಸರ್ಕಲಾರನ್ನೂ, ಕಳೆದ ಏಪ್ರಿಲಿನಿಂದ ಮುಂದಕ್ಕೆ ರೂಪಾಯಿ ೧೫ಕ್ಕೆ ೮ ಆಣೆಯಂತೆಯೂ ರೂ ೧೬ರಿಂದ ೨೦ರ ವರೆಗೆ ೧೨ ಆಣೆಯಂತೆಯೂ ರೂ ೨೧ರಿಂದ ೩೫ರ ವರೆಗೆ ಒಂದು ರೂಪಾಯಿಯಂತೆಯೂ, ರೂ ೩೬ರಿಂದ ೪೫ರ ವರೆಗೆ ಒಂದು ರೂಪಾಯಿ ೪ ಆಣೆಯಂತೆಯೂ, ರೂ ೪೬ರಿಂದ ೫೦ರ ವರೆಗೆ ೨ ರೂ ಎಂಟಾಣೆಯಂತೆಯೇ ಕಡಿಮೆ ಮಾಡಿದ ಸರ್ಕಲಾರನ್ನು ಓದಿ ಹೇಳಲಾಯಿತು. ಇನ್ನು ಮುಂದೆ ಎಲಿಮೆಂಟರಿ ಶಾಲೆಗಳಲ್ಲಿ ದಿವಸಕ್ಕೆ ೬ ಘಂಟೆ ಕೆಲಸ ಮಾಡಬೇಕೆಂದೂ ಶಾಲೆಯ ಹಾಜರಿಯು ೨೦೦ ದಿವಸಗಳಾಗಬೇಕೆಂದೂ ಪ್ರಕಟವಾದ ಸಂಗತಿಯು ಸಭೆಯ ಮುಂದೆ ಇಡಲಾಯಿತು. ಹಾಯರ್ ಎಲಿಮೆಂಟರಿ ಗ್ರೇಡಿನವರಿಗೆ ರೂ ೩ರಂತೆಯೂ ಲೋವರ್ ಎಲಿಮೆಂಟರಿ ಗ್ರೇಡಿನವರಲ್ಲಿ ಡಿಪ್ರೆಸ್ಡ್ ಕ್ಲಾಸ್ ವರ್ಗದವರಿಗೆ ರೂ ೩ರಂತೆಯೂ, ಇತರರಿಗೆ ರೂ ೨ರಂತೆಯೂ ಸ್ಟೈಪೆಂಡ ಕಡಿಮೆಯಾಗುವುದೆಂದೂ ಪ್ರಕಟವಾದುದನ್ನು ತಿಳಿಸಲಾಯಿತು.

'ಎಲಿಮೆಂಟರಿ ಶಾಲಾ ಉಪಾಧ್ಯಾಯ' ಎಂಬ ಮಾಸ ಪತ್ರಿಕೆಯನ್ನು ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗಾಗಿ ಹೊರಡಿಸಬೇಕೆಂದೂ ಎಂ ಗಣಪತಿರಾವ್ ಐಗಳರನ್ನು ಈ ಪತ್ರಿಕೆಗೆ ಸಂಪಾದಕರನ್ನಾಗಿ ಮಾಡಬೇಕೆಂದೂ ಎಲಿಮೆಂಟರಿ ವಿದ್ಯಾವಂತ ಮಹನೀಯರಿಂದ ಲೇಖನಗಳು ಪಡೆಯುವಂತೆ ಮಾಡಬೇಕೆಂದೂ, ಅಮೇರಿಕಾ, ಜರ್ಮನಿ ರಷ್ಯಾ ಜಪಾನ ಮುಂತಾದ ದೇಶಗಳಲ್ಲಿ ಎಲಿಮೆಂಟರಿ ವಿದ್ಯಾಭ್ಯಾಸದ ಏಳಿಗೆಗಾಗಿ ಪ್ರಕಟವಾಗುತ್ತಿರುವ ವಿಷಯಗಳನ್ನು ಈ ಪತ್ರಿಕೆಯು ಒಳಗೊಂಡಿರಬೇಕೆಂದೂ ನಿಶ್ಚಯಿಸಲಾಯಿತು

ಬಂಟವಾಳದಲ್ಲಿ ಬಡವರ ಮಕ್ಕಳಿಗಾಗಿ ೬ ೭ — ೮ನೇ ಕ್ಲಾಸುಗಳಿರುವ ಒಂದು ಹಾಯರ ಎಲಿಮೆಂಟರಿ ಶಾಲೆಯು ತೆರೆಯಲ್ಪಡುವುದು. ಹೈಸ್ಕೂಲುಗಳಿಗೆ ಕೊಡುತ್ತಿರುವ ಗ್ರಾಂಟು ಬಹಳ ಕಡಿಮೆಯಾಗಿ ಸಂಬಳ ಹೆಚ್ಚಾಗುವ ಸಂಭವವು ತೋರುತ್ತಲಿದೆ

ಕಾರ್ಕಳ: — ತಾ. ೨೯-೫-೩೨ರ ದಿನವನ್ನು ಪಂಡಿತ ಮದನಮೋಹನ ಮಾಲವೀಯರ ವಿನಂತಿ ಮೇರೆಗೆ ಅಖಿಲ ಭಾರತ ಸ್ವದೇಶಿ ದಿನವೆಂದು ಆಚರಿಸಲಾಯಿತು. ಬೆಳಗ್ಗಿನಿಂದ ಮಧ್ಯಾಹ್ನದ ವರೆಗೆ ಸ್ವದೇಶೀ ಸಾಮಾನುಗಳ ಪ್ರಚಾರ ಸ್ವದೇಶಿ ಸಂಘಕ್ಕೆ ಸದಸ್ಯರನ್ನು ಸೇರಿಸುವಿಕೆ ಮೊದಲಾದ ಕಾರ್ಯಗಳೂ ಸಾಯಂಕಾಲ ಮೆರವಣಿಗೆ ಸಭೆ ಭಾಷಣಾದಿಗಳೂ ಆಗುವುವೆಂದೂ ಕರಪತ್ರಗಳ ಮೂಲಕ ಪ್ರಕಟವಾದಂತೆ ಎಲ್ಲಾ ಕಾರ್ಯಗಳೂ ಸಾಂಗವಾಗಿ ಲೋಪವಿಲ್ಲದೆ ಆದುವು ಎಂದು ತಿಳಿದುಬರುತ್ತದೆ

ಕುಂಬಳೆ: — ಇಲ್ಲಿಯ ಗ್ರಾಮ ಪಂಚಾಯತ ಕೋರ್ಟನ್ನು ತೆಗೆದು ಇಲ್ಲಿ ಬರೇ ಗ್ರಾಮ ಕೋರ್ಟನ್ನು ಇಡುವರೆ ಆಲೋಚಿಸುವರೆಂಬ ವರ್ತಮಾನದಿಂದ ಹೆಚ್ಚಿನವರಿಗೆ ತುಂಬಾ ವ್ಯಸನವಾಗಿದೆ. ವ್ಯಾಪಾರ ಪಟ್ಟಣದಲ್ಲಿ ಈ ತಾಲೂಕಿನ ಎರಡನೇ ಪಟ್ಟಣವಾದ ಇಲ್ಲಿ ಲೇವಾದೇವಿಗಳು ಅನೇಕವಿರುವುದರಿಂದ ಈಗಿನ ಪಂಚಾಯತ ಕೋರ್ಟನ್ನು ಇಲ್ಲೇ ಸ್ಥಿರಪಡಿಸಿಕೊಡುವುದು ಮಾನ್ಯ ಅಧಿಕಾರಿಗಳ ಮುಖ್ಯ ಕರ್ತವ್ಯವಾಗಿದೆ

ಕಾಸರಗೋಡು — ತಾ ೨೮ನೇ ದಿನ ಸ್ವಯಂಸೇವಕರು ಪಹರೆ ನಡೆಸಿದರು. ಅವರನ್ನು ಕೈದುಮಾಡಿ ಮತ್ತೆ ಬಿಟ್ಟರು. ಮರುದಿನ ರಾಷ್ಟ್ರಧ್ವಜ ವಂದನೆಯು ನಡೆಯಿತು. ಪೋಲೀಸರು ಅತಂಕಿಸಲಿಲ್ಲ.

ಕರ್ನಾಟಕ

ಹೇರೂರಿನ ಗಜಾನನ ರಥೋತ್ಸವ ಕಾಲದಲ್ಲಿ ರಥವನ್ನು ಅನೇಕ ರಾಷ್ಟ್ರೀಯ ಧ್ವಜಗಳಿಂದ ಅಲಂಕರಿಸಿದ್ದರು. ಪೋಲೀಸರು ಮೊಕ್ತೇಸರರ ಮುಖಾಂತರ ಜಯಕಾರ ಹಾಕಬಾರದು, ಚಳವಳಿಯ ವಿಷಯ ಮಾತಿತ್ತಬಾರದು ವಗೈರೆ ಆರ್ಡರುಗಳನ್ನು ಸಾರಿಸಿದರು. ಕಾಂಗ್ರೆಸ ಕಡೆಯಿಂದ 'ಬ್ರಿಟಿಷ ಬಹಿಷ್ಕಾರ' ಸರಕಾರಿ ಹುಕುಮಿನ ಸವಿನಯ ಧಿಕ್ಕಾರ 'ಚಳವಳಿಯ ಸಮಾಚಾರ' ವಗೈರೆ ಹಸ್ತಪತ್ರಿಕೆಗಳು ಹಂಚಲ್ಪಟ್ಟವು. ರಾತ್ರಿ ಹೂವಿನ ತೇರು ಹೊರಟಾಗ ಜೋರಿನಿಂದ ಜಯಕಾರಗಳು ಹಾಕಲ್ಪಟ್ಟವು. ಪೋಲೀಸರು ಬೆತ್ತದಿಂದ ಜನರನ್ನು ಹೊಡೆಯಲಾರಂಭಿಸಿದರು. ಶ್ರೀ ವೆಂಕಟರಮಣ ಹಾವೇಗೌರಿ, ಶ್ರೀ ಕೃಷ್ಣ ಶಿರಗೋಡಬೈಲ ಎಂಬಿಬ್ಬರನ್ನು ಎಳೆದುಕೊಂಡು ಹೋಗಿ ಹೊಡೆದರು. ಮರುದಿನ ಬೆಳಿಗ್ಗೆ ೫ ಗಂಟೆಗೆ ಧ್ವಜವಂದನೆಯು ನಡೆಯಿತು. ಪೋಲೀಸರು ಜಯಘೋಷವನ್ನು ಕೇಳಿ ಓಡಿಬಂದು ಧ್ವಜಸ್ತಂಭವನ್ನು ಕಡಿದು ಹಾಕಿದರು. ಆತ್ತ ಜನರೇ ತೆಂಗಿನ ಮರಗಳ ಮೇಲೆಲ್ಲಾ ಧ್ವಜಗಳನ್ನು ಏರಿಸಿದರು. ಜಯಘೋಷಗಳನ್ನು ಮಾಡುತ್ತಾ ಕಾಯಿಗಳನ್ನು ಒಡೆದರು. ರಥಕ್ಕೆ ಕಟ್ಟಿದ ಧ್ವಜಗಳನ್ನು ತೆಗೆಯದ ಹೊರತು ತೇರನ್ನು ಎಳೆಯಗೊಡುವುದಿಲ್ಲವೆಂದು ಪೋಲೀಸರು ಸತ್ಯಾಗ್ರಹ ಮಾಡಿದರು. ಧ್ವಜವನ್ನು ತೆಗೆದರೆ ರಥ ಎಳೆಯುವುದಿಲ್ಲವೆಂದು ಜನರು ತಂತಮ್ಮ ಮನೆಗಳಿಗೆ ಹೋದರು. [illegible] ಶ್ರೀ [illegible] ಹೆಗ್ಡೇರು ಧ್ವಜವಿಲ್ಲದೆ ತೇರನ್ನು ಎಳೆಯಿಸಿ [illegible] ಹೊಡೆದರು ಎಂದರು. ಯಾರೂ ಕೈಹಚ್ಚಲಿಕ್ಕೆ ಹೋಗಲಿಲ್ಲ. [illegible] ಮಯ್ಯನವರ ಹೊಸತೋಟದ ವೆಂಕಟರಮಣ ಭಟ್ಟರೂ [illegible] ಹೆಗ್ಡೇರೂ ಮಾತ್ರ ಚಪ್ಪಾಳೆ ಹೊಡೆದರು. [illegible] ರಥದ ಮೇಲೆ ಧ್ವಜ ಬೇಕೆನ್ನುವವರು ಚಪ್ಪಾಳೆ ಹೊಡೆಯಿರಿ ಎಂದರು. ಆಗ ಎಲ್ಲರೂ ಚಪ್ಪಾಳೆ ಹೊಡೆದು ಜಯಘೋಷವನ್ನು ಮಾಡಿದರು.

ಅನಂತರ [illegible] ಧ್ವಜವನ್ನು ತೆಗೆದವರಿಗೆ ೧೦ ರೂಗಳನ್ನು ಕೊಡುವುದಾಗಿ ಡಂಗುರ ಹೊಡೆಸಿದರು. ಆದರೆ ಒಬ್ಬನಾದರೂ ತಯಾರಾಗಲಿಲ್ಲ. [illegible] ಆ ಕೆಲಸವು ತಮ್ಮಿಂದಾಗುತ್ತಿಲ್ಲ ಎಂದು ಕಡೆಗೆ ಒಬ್ಬ [illegible]ನನ್ನು ತಂದು ಧ್ವಜವನ್ನು ತೆಗೆದರು. ಜನರನ್ನು ಹೊಡೆದು ಓಡಿಸಿ ತೇರನ್ನೆಳೆದರು. ಪೋಲೀಸರೂ [illegible] ತೇರನ್ನೆಳೆದರು. ಎಲ್ಲಾ ಮುಗಿದ ಮೇಲೆ, ಗೋಪುರದ ಮೇಲೆ ೨ ರಾಷ್ಟ್ರಧ್ವಜಗಳು ಘನ ಗಂಭೀರದಿಂದ ಹಾರಾಡುತ್ತಿದ್ದುವು. [illegible] ದೇವಸ್ಥಾನಕ್ಕೆ [illegible] ಕೊಟ್ಟರು.

ದಿ ಕೆನರಾ ಬೇಂಕಿಂಗ್ ಕಾರ್ಪೋರೇಶನ್ ಉಡುಪಿ ಲಿಮಿಟೆಡ್

ಉಡುಪಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಲಾದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಸಾಲ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕಟ್ಟದಿರುವುದರಿಂದಲೂ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರಿಗೆ ಸಾಪತ್ತು ಆಗದ್ದರ ಕಾರಣದಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಸದರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲವು ಬಡ್ಡಿ [illegible] ನೋಟೀಸು ಖರ್ಚು, ಮತ್ತು ಈ ನೋಟೀಸು ಖರ್ಚು ಸಹಾ ಇದೇ ೧೯೩೨ನೇ ಇಸವಿ ಜೂನ್ ತಿಂಗಳ ತಾ ೧೫ನೇ ತಾರೀಕಿನ ಒಳಗೆ ತಂದು ಕೊಟ್ಟು ಅಡವಿಟ್ಟ ನಗಗಳನ್ನು ಸದರಿಯವರು ಬಿಡಿಸಿಕೊಂಡು ಹೋಗದಿದ್ದರೆ ಸದರಿಯವರ ಅಡವಿಟ್ಟ ನಗಗಳನ್ನು ಇದೇ ೧೯೩೨ನೇ ಇಸವಿ ಜೂನ್ ತಾ ೨೧ನೇ ಮಂಗಳವಾರ ದಿವಸ ಮಧ್ಯಾಹ್ನ ಮುಂದೆ ೨ ಘಂಟೆಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ ೩೬೧ ೨೯ [illegible] ಬಡಗ್ರಾಮ ಶೇಕ್ ಅಹಮದ್ ಸಾಹೇಬ ಸಾಲದ ಮೊಬಲಗು ರೂ ೨೦

ಸಾಲದ ನಂಬ್ರ ೫೫೭ ೨೯ ಕೊಡವೂರು ಬುಡಾನ ಮುಹಮ್ಮದ್ [illegible] ಸಾಲದ ಮೊಬಲಗು ರೂ ೩೦

ಸಾಲದ ನಂಬ್ರ ೫೮೮ ೩೦ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥಸ್ವಾಮಿಯವರು ಸಾಲದ ಮೊಬಲಗು ರೂ ೫೫೦

ಸಾಲದ ನಂಬ್ರ ೬೨೫ ೩೧ [illegible] ಗ್ರಾಮ ಉಡುಪಿಯವರು ರಾಮಚಂದ್ರಭಟ್ಟ ಸಾಲದ ಮೊಬಲಗು ರೂ ೬೦

ಸಾಲದ ನಂಬ್ರ ೧೧೮೮ ೩೧ ಕೊರಂಗ್ರಪಾಡಿ ವೆಂಕಪ್ಪಾಚಾರಿ ಸಾಲದ ಮೊಬಲಗು ರೂ ೮೦

Office of the
Corporation
Udipi 31 5 32

N. Manjunath Rao,
Agent in charge

[illegible] ಅಂಗೀರಸ ಸಂವತ್ಸರದ
ವೈಶಾಖ ಬ[illegible] ಶನಿವಾರದಿಂದ ಅಂಗೀರಸ ಸಂವತ್ಸ-
ಜ್ಯೇಷ್ಠ ಶು ೬ ಶುಕ್ರವಾರದ ವರೆಗಿನ ಪಂಚಾಂಗ
([illegible])

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉದಯ	ಸೂರ್ಯ ಅಸ್ತ
4	ಶನಿ	●	೨೪ ೩೨	ರೋಹಿಣಿ	೩೭ ೧೪	೨೨	6 5	6 53
5	ರವಿ	೧	೨೭ ೨	ಮೃಗಶಿರಾ	೪೦ ೧೪	೨೩	6 5	6 53
6	ಸೋಮ	೨	೨೯ ೦೬	ಆರ್ದ್ರಾ	೪೪ ೨	೨೪	6. 5	6 53
7	ಕುಜ	೩	೨೮ ೪೪	ಪುನರ್ವಸು	೪೭ ೪೬	೨೫	6 5	6.54
8	ಬುಧ	೪	೨೭ ೪೬	ಪುಷ್ಯ	೪೬, ೨	೨೬	6 5	6 54
9	ಗುರು	೫	೨೫,೩೨	ಅಶ್ಲೇಷಾ	೪೫ ೩೨	೨೭	6. 5	6 04
10	ಶುಕ್ರ	೬	೨೨,೦೪	ಮಘಾ	೪೩ ೪೬	೨೮	6 5	6.54

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum [illegible]	Temperature. ಉಷ್ಣ (ಕಾವು) Minimum [illegible]	Rainfall ಮಳೆ [illegible] ಮಳೆ	Rainfall ಮಳೆ ಜುಮುಲಾ ಮಳೆ.
27	87— 5	81— 4	—	—
28	87— 9	81 – 6	—	—
29	87— 6	78— 9	0—05	—
30	87— 8	78— 8	—	—
31	88— 1	77— 8	—	—
1	88— 7	78 9	—	—
2	88— 1	78— 9	0—13	17—77

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ	3—10	3 14
[illegible]	4— 0	4—12
[illegible]	4— 0	4— 4
ಸುಗ್ಗಿ	3—14	4— 2
ಊರ ಅವ್ವಲ್ ಬೆಳ್ತಿಗೆ	4—8	5— 0
ರಂಗೂನು ಬೆಳ್ತಿಗೆ ಗೋಣಿಗೆ	8— 0	8— 8
[illegible] ಬೆಳ್ತಿಗೆ ಮುಡಿಗೆ	4—10	4—12
ಗೋಧಿ ಗೋಣಿಗೆ	9— 8	14— 8
ತೊಗರಿ ಗೋಣಿಗೆ	12— 0	12— 8
ಹುರುಳಿ ಗೋಣಿಗೆ	6— 2	7— 4
ಕಡಲೆ ಗೋಣಿಗೆ	8— 8	12— 8
ತೊಗರಿಬೇಳೆ ಗೋಣಿಗೆ	13— 8	21— 0
ಉದ್ದು ಗೋಣಿಗೆ	11— 8	13— 0
ಹೆಸರು ಗೋಣಿಗೆ	10— 4	11—
ಊರು ಬೆಲ್ಲ ಖಂಡಿಗೆ	2"— 8	30— 0
ಉಪ್ಪು ಗೋಣಿಗೆ	5— 0	5— 4
[illegible] ಖಂಡಿಗೆ	65	72—
ಕೊಬ್ರಿ ಹಿಂಡಿ ಖಂಡಿಗೆ	22— 8	23—
ಎಳ್ಳಿಂಡಿ ಖಂಡಿಗೆ	26— 4	26—18
ಕೊಬ್ರಿ ಎಣ್ಣೆ ಮಣಗೆ	5— 4	6— 6
ಎಳ್ಳೆಣ್ಣೆ ಮಣಗೆ	6—12	7— 0
ಹರಳೆಣ್ಣೆ [illegible]	4— 7	8—12
[illegible] ಸಕ್ಕರೆ ಮಣಗೆ	4— 0	4— 1
[illegible]	4— 0	5— 0
ಸಾಸಿವೆ ಮುಡಿಗೆ	6— 4	8— 0
[illegible] ಕಾಫಿ ಖಂಡಿಗೆ	275— 0	226—
ಕಾಳುಮೆಣಸು ಖಂಡಿಗೆ	170— 0	180—
ಮೆಂತ್ಯ ಮಣಗೆ	27— 0	28—
ಗೇರುಬೀಜ ಮುಡಿಗೆ	3— 6	—
[illegible] ಖಂಡಿಗೆ	30—0	35— 8
[illegible] ತಗಡು ಮಣಗೆ	12— 8	18—0
ತಾಮ್ರ ಪಾತ್ರಗಳು ಮಣಗೆ	15— 0	16—0
[illegible]	14—10	14—12
ಹಿತ್ತಾಳೆ ತಗಡು ಮಣಗೆ	12— 0	12— 8
[illegible]	17—14	17—14
ಹುಣಸೆ ಹುಳಿ ಖಂಡಿಗೆ	35—	—
[illegible] ಕಾಫಿ ಖಂಡಿಗೆ	330—	
[illegible] ಅಡಿಕೆ	180—	205—
[illegible]	140—	146—

Chikmagalur Public Conveyance Motor Service
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ
ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್, Tel Conveyance.
ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜ್ರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜ್ರೆ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, 4½ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಢರಪೂರ ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ
ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ
ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,
ಕಾರ್ಕಳ ಗೋಮಟೇಶ್ವರನ
ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ
ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾಪಿತವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ [illegible] ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ 1½ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.
The Canara Public Conveyance Company Ltd., Mangalore

ವಿವಿಧ ಸಮಾಚಾರಗಳು.

ಗುಟ್ಟು ರಟ್ಟಾಯಿತು !!

ಮಾಲಿಯಾಧಿಪತಿಯೆಂದೆಣಿಸಲ್ಪಟ್ಟಿದ್ದ ಸ್ವೀಡಿಶ್ ಬೆಂಕಿಪೆಟ್ಟಿಗೆ ಕಾರ್ಖಾನೆಗಳ ಮಾಲೀಕನಾದ ಕ್ರ್ಯುಗರನು ತನ್ನ ಜೀವಿತಕಾಲದಲ್ಲಿ ಮಾಡಿದ ಮೋಸಗಳು ಪ್ರಪಂಚದಲ್ಲಿ ನಡೆದ ಇನ್ನಿತರ ಸೂರೆಸುಲಿಗೆಗಳನ್ನು ಮೀರುತ್ತವೆಂದು ಈಗ ಕಂಡುಹಿಡಿಯಲ್ಪಟ್ಟಿದೆ. ಅನೇಕ ಮೋಸಗಾರರನ್ನು ದಸ್ತಗಿರಿ ಮಾಡುತ್ತ ಇದ್ದಾರೆ. ಪ್ರತಿಯೊಂದು ದಸ್ತಗಿರಿಯಿಂದ ಕ್ರ್ಯುಗರನ ಒಂದೊಂದು ಗುಟ್ಟು ಹೊರಬೀಳುತ್ತಿದೆ. ಕ್ರ್ಯುಗರನು ಅಜ್ಞಾತದಲ್ಲಿದ್ದ ಒಬ್ಬ ಅಪ್ರತಿಮ ವರ್ತಕ. ಅವನ ಜೀವಿತದಲ್ಲಿ ಅವನು ಸಮಾಜದ ಯಾವ ಉತ್ಸವಸಮಾರಂಭಗಳಲ್ಲೂ ಕೂಡಿಕೊಳ್ಳುತ್ತಿದ್ದಿಲ್ಲ. ಅವನಿಗೆ ವಿವಾಹವೂ ಆಗಿದ್ದಿಲ್ಲ. ಎದುರು ಹಲ್ಲಿದ್ದವರು ನೂರು ಮಾತುಗಳನ್ನಾಡಿದರೆ ಅವನು ಒಂದು ಶಬ್ದವನ್ನಾಡುವನು. ಅಂತಹ ವಾಗ್ಮಿ ಅವನು. ಅಂತಹ ಮೌನಿಯು ಗುಂಡಿಟ್ಟುಕೊಂಡು ಪ್ರಾಣತ್ಯಾಗ ಮಾಡಿದೊಡನೆ ಎಲ್ಲರಿಗೂ ಆಶ್ಚರ್ಯವಾಯಿತು. ಇಷ್ಟು ಘನಪುರುಷನಾದ ಐಶ್ವರ್ಯವಂತನಾದ ಅವನು ಪ್ರಾಣಹತ್ಯಮಾಡಿಕೊಳ್ಳಲು ಕಾರಣವೇನೆಂದು ಇಡೀ ಪ್ರಪಂಚವು ಆಲೋಚಿಸತೊಡಗಿತು. ಕೊನೆಗೆ ಒಂದೊಂದೇ ಗುಟ್ಟು ರಟ್ಟಾಯಿತು. ಕ್ರ್ಯುಗರನಿಗೆ ಸಾಯುವಾಗ ೯,೦೦೦,೦೦೦ ಪೌಂಡು ಸಾಲವಿತ್ತು. ಕ್ರ್ಯುಗರನು ಸಾಲಗಾರರ ಸರ್ಟಿಫಿಕೇಟುಗಳನ್ನು ಹೇಗೆ ತನ್ನ ಮನೆಯಲ್ಲಿ ಗುಪ್ತ ಪೋಲೀಸರ ಮೂಲಕ ಮಾಡಿಸುತ್ತಿದ್ದನು, ಅವನು ಇಟಲಿ ದೇಶದ ಸೀನಿಯರ್ ಮುಸೋಲಿನಿಯವರ ದಸ್ತಕನ್ನು ಹೇಗೆ ಫೋರ್ಜರಿ ಮಾಡಿದನು, ತನ್ನ ಲೆಕ್ಕಪತ್ರಗಳನ್ನು ಗೋಪ್ಯವಾಗಿಟ್ಟು ಬ್ಯಾಂಕುಗಳನ್ನೂ ಸರಕಾರಗಳನ್ನೂ ಹೇಗೆ ಮೋಸಗೊಳಿಸಿದನು ಎಂಬ ಕುರಿತು ಈಗೀಗ ಉದ್ದುದ್ದ ಲೇಖಗಳು ಹೊರಬೀಳುತ್ತಿವೆ

⁂

ಬೆಂಕಿ ಬೆಂಕಿ !! ೧೦೦೦ ಮನೆಗಳು !!

ಕಳೆದ ತಾ|| ೨೦ನೇ ದಿನ ಪೇಶಾವರದ ಚರ್ಸದಾ ಪೇಟೆಯಲ್ಲಿ ಘೋರವಾದ ಬೆಂಕಿಯು ಎದ್ದುಕೊಂಡಿತು. ಬೆಂಕಿಗೆ ಕಾರಣವೇನೆಂದು ತಿಳಿದಿಲ್ಲ. ವಿಪರೀತಗಾಳಿಯು ಇದ್ದುದರಿಂದ ಪರ್ವತಸಮಾನಕ್ಕೆ ಎದ್ದ ಬೆಂಕಿಯು ಪೇಟೆಯ ಅಂಗಡಿ ಮನೆಮಠ ಮರಗಿಡಗಳಿಗೆ ತಗಲಿತು. ಬೆಂಕಿಯು ಉರಿದಷ್ಟು ಗಾಳಿಯೂ, ಗಾಳಿಯು ಬೀಸಿದಷ್ಟು ಬೆಂಕಿಯೂ ಪ್ರಬಲತೆಯನ್ನು ಹೊಂದಿತು. ಯಾವ ಉಪಾಯದಿಂದಲಾದರೂ ಅದನ್ನು ನಂದಿಸಲು ಸಾಧ್ಯವಾಗಲಿಲ್ಲ. ಪೋಲೀಸರೂ ಮಿಲಿಟರಿಯವರೂ ಅದನ್ನು ಆರಿಸಲು ಫಯರ್‌ಬ್ರಿಗೇಡ್ ಮೊದಲಾದ ಯಂತ್ರಸಾಧನಗಳಿಂದ ಯತ್ನಿಸಿದರೂ ಕಾರ್ಯವು ಸಫಲತೆಯನ್ನು ಹೊಂದಲಿಲ್ಲ. ಬೆಂಕಿಯು ತ್ರಿಗುಣಿತ ಶಕ್ತಿಯಿಂದ ಹರಡಿಕೊಳ್ಳಲು ಗಾಳಿಯೇ ಪ್ರಮುಖ ಕಾರಣವೆಂದು ತಿಳಿಯಲ್ಪಟ್ಟಿತು. ಮೊದಲೊಮ್ಮೆಯೂ ಇಂತಹ ಭೀಷಣಕರ ದುಃಖಮಯ ಹಾವಳಿಯು ಪೇಶಾವರ ಜಿಲ್ಲೆಯಲ್ಲಿ ಆಗಿತ್ತು. ಎಲ್ಲರೂ ತಮ್ಮ ತಮ್ಮ ಕುಟುಂಬ ಮನೆಮಾರುಗಳ ಸಂರಕ್ಷಣೆಯಲ್ಲಿ ಮಗ್ನರಾಗಿದ್ದುದರಿಂದ ಅಲ್ಲಿ ಲೂಟಿಯು ನಡೆಯಲವಕಾಶವು ಸಿಗಲಿಲ್ಲ. ಅಲ್ಲದೆ ಪೋಲೀಸರ ಮತ್ತು ಮಿಲಿಟರಿಯವರ ಸುಸೂತ್ರವಾದ ವ್ಯವಸ್ಥೆಯು ಅಂತಹ ಸುಲಿಗೆಗಳನ್ನು ನಡೆಸಲೆಡೆಗೊಡಲಿಲ್ಲ. ಒಬ್ಬ ಇಬ್ಬರ ಪ್ರಾಣಹಾನಿಯುಂಟಾಗಿರುವುದೆಂದೂ, ಅನೇಕ ಜಾನುವಾರುಗಳು ನಾಶವಾದುವೆಂದೂ ವಾರ್ತೆಯಿದೆ. ಸುಮಾರು ಅರ್ಧಕೋಟಿ ರೂಪಾಯಿಗಳ ನಷ್ಟವು ಸಂಭವಿಸಿದೆಯಾಗಿ ಅಂದಾಜು ಮಾಡಲ್ಪಟ್ಟಿದೆ

⁂

ಮದುವೆಯ ದಿವಸವೇ ಅಗ್ನಿನಾರಾಯಣನನ್ನು ಅಪ್ಪಿಕೊಂಡಳು !

ಮುಸಲೀಪಟ್ಟಣದಿಂದ ಒಂದು ವಿಚಿತ್ರ ವಾರ್ತೆಯು ಹಸ್ತಗತವಾಗಿದೆ. ಅಲ್ಲಿಯ ಒಬ್ಬ ಧನಿಕನ ಪುತ್ರಿ ಶ್ರೀಮತಿ ಕನಕದುರ್ಗಮ್ಮ ಎಂಬ ೧೬ ವರ್ಷ ಪ್ರಾಯದ ಒಬ್ಬ ಕುಮಾರಿಗೆ ತಾರೀಖು ೨೫ನೇ ಮಧ್ಯಾಹ್ನ ಒಬ್ಬ ತರುಣನೊಡನೆ ವಿವಾಹವೆಂದು ನಿಶ್ಚಯಿಸಲ್ಪಟ್ಟಿತು. ವಧುವಿನ ಮನೆಯಲ್ಲಿ ಮುಂಚಿನ ದಿನವೇ ಜನಸಂದೋಹವು ಸೇರಿಕೊಂಡಿತು. ಬಂಧುಬಳಗ ಹಿರಿಕಿರಿಯರು ಎಲ್ಲರೂ ಬಂದಿದ್ದರು. ವಧುವು ಕೂಡಾ ಮನೆಯೊಳಗಿನ ಸಾಮಗ್ರಿಗಳನ್ನು ವ್ಯವಸ್ಥೆಗೊಳಿಸುವುದರಲ್ಲೋ, ಬೇಕಾದವರಿಗೆ ಅವುಗಳನ್ನು ಒಳಗಿನಿಂದ ಒದಗಿಸಿಕೊಡುವ ಪ್ರವೃತ್ತಿಯಲ್ಲೋ ಇದ್ದಳು. ಮರುದಿನ ಮದುವೆ. ಆದರೆ ಮದುವೆಯ ಮುಂಚಿನ ದಿನ ರಾತ್ರೆ ಒಂದು ವಿಸ್ಮಯವು ನಡೆದುಹೋಯಿತು. ಬಂದ ಅತಿಥಿಗಳು ಬಳಲಿ, ರಾತ್ರೆ ನಿದ್ರಾಪರವಶವಾಗಿದ್ದರು. ಹುಡುಗಿಯ ಮಾತಾಪಿತೃಗಳೂ ನಿದ್ರಿಸುತ್ತಿದ್ದರು. ಅಷ್ಟಾಗುವಾಗ, ಮರುದಿನ ಅನ್ಯಪುರುಷನ ಕೈಹಿಡಿಯಲಿದ್ದ ಕನಕದುರ್ಗಮ್ಮಳು ಮೆಲ್ಲನೆ ಹಾಸಿಗೆಯಿಂದೆದ್ದು ತನ್ನ ಕೋಣೆಗೆ ಹೋಗಿ ಒಂದು ಕಾಗದದಲ್ಲಿ ಹೀಗೆ ಬರೆದಳು "ನಾನು ಪಾವನಜೀವನವನ್ನು ನಡೆಸಿಕೊಂಡು ಇಷ್ಟರ ತನಕ ಬಂದೆ. ನನ್ನ ಪಾವಿತ್ರ್ಯವನ್ನು ಧ್ವಂಸೀಕರಿಸಬಾರದೆಂದು ಆಲೋಚಿಸಿದ್ದೇನೆ. ನನ್ನ ಸ್ವೇಚ್ಛಾಪ್ರೇರಣೆಯಿಂದಾಗಿ ನಾನು ಅಗ್ನಿನಾರಾಯಣನನ್ನಪ್ಪಿಕೊಂಡು ಪ್ರಾಣತ್ಯಾಗ ಮಾಡಿದ್ದೇನೆ" ಮರುದಿನ ಬೆಳಗ್ಗೆ ಅವರ ಮನೆಯ ಹಿಂಗಡೆ ಹಿತ್ತಲಿನಲ್ಲಿ ಬೆಂಕಿಯು ಉರಿಯುತ್ತಿತ್ತು. ಅದರಲ್ಲಿ ದುರ್ಗಮ್ಮಳ ಶವವು ಮಲಗಿತ್ತು. ಮದುವೆಯ ಮನೆಯಲ್ಲಿ ಮಹಾಕೋಲಾಹಲವುಂಟಾಯಿತೆಂದು ಬೇರೆ ಹೇಳಬೇಕಿಲ್ಲ. ಆ ದಿನ ದುರ್ಗಮ್ಮಳ ವಿವಾಹವು ಯಾವ ನಕ್ಷತ್ರ ಮತ್ತು ಘಳಿಗೆಯಲ್ಲಿ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿತ್ತೋ ಅದೇ ಘಳಿಗೆಯಲ್ಲಿ, ಅವಳು ಬೆಂಕಿಯುರಿಸಿ ಪ್ರಾಣತ್ಯಾಗ ಮಾಡಿದ್ದಲ್ಲಿಯೇ (ಮುನಿಸಿಪಾಲಿಟಿಯವರ ವಿಶೇಷ ಅಪ್ಪಣೆಯನ್ನು ಹೊಂದಿ) ಅವಳ ಶರೀರವನ್ನು ಭೂಸಮರ್ಪಣ ಮಾಡಲಾಯಿತು. ಶವಮೆರವಣಿಗೆಯಲ್ಲಿ ಭಾಗವಹಿಸಿದ ಜನಸಂಖ್ಯೆಯು ಅರ್ಧ ಮೈಲಿಗಿಂತಲೂ ಉದ್ದವಾಗಿತ್ತು. ಎಲ್ಲಾ ಮತ ಪಾಳಿಗೆಯವರೂ ದಿವ್ಯ ಶರೀರಕ್ಕೆ ಸನ್ಮಾನವನ್ನು ಮಾಡಿದರು.

⁂

ಮಲಬಾರಿನಲ್ಲಿ ಹಾನಿಕಾರಕ ತುಫಾನು !

ಹಿಂದೂಸ್ಥಾನದ ನಾಲ್ಕು ಕಡೆಗಳಲ್ಲೂ ಈ ಸಲ ವಿಪರೀತ ಗಾಳಿ, ಬಿರುಗಾಳಿ, ಮಳೆ ನೆರೆ ಪ್ರತಿಯೊಂದು ಪ್ರಾಂತ್ಯದಲ್ಲಿ ಗಾಳಿಯು ಹಾವಳಿಯನ್ನುಂಟು ಮಾಡಿದೆ. ಕಲ್ಲಿಕೋಟೆಯಲ್ಲಿ ತಾ|| ೨೫ನೇ ದಿನ ಉಗ್ರರೂಪದ ಗಾಳಿಯು ಪ್ರಚಂಡವಾಗಿ ಬೀಸಿತು. ಅದರೊಡನೆ ಜಡಿಮಳೆಯೂ ಬಂತು. ಮಲಬಾರ್ ಸ್ಟೀಮ್ ನೆವಿಗೇಶನ್ ಕಂಪೆನಿಯವರು ೮೦೦೦ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ ಒಂದು ಸುಂದರವಾದ ಕಟ್ಟಡವು ನೆಲಸಮವಾಯಿತು. ೧೯ ಅಂಗುಲದಷ್ಟು ಮಳೆಯು ಸುರಿಯಿತು. ಪಿ. ವಿ. ನಾರಾಯಣರೆಂಬವರ ದೊಡ್ಡ ಮನೆಯೊಂದು ಕುಸಿದುಬಿದ್ದು ಒಳಗಿದ್ದವರಲ್ಲಿ ಕೆಲವರು ಜಖಂಗೊಂಡರು. ಪ್ರತಿಯೊಬ್ಬಳ ಒಂದು ಮನೆಯಲ್ಲಿ ವಾಸಿಸುತ್ತಿದ್ದ ಮೂರು ವರ್ಷದ ಮೇಲೆ ಕಟ್ಟಡವು ಕುಸಿದುಬಿದ್ದು ಅವುಗಳು ಒಡನೆ ಮರಣಪಟ್ಟವು. ಒಂದು ತೆಂಗಿನ ಮರವು ಒಬ್ಬ ಸ್ತ್ರೀಯ ತಲೆಯ ಮೇಲೆ ಬಿದ್ದು ಅವಳು ಮೃತಪಟ್ಟಳು. ಇನ್ನು ಕೆಲವೆಡೆಗಳಲ್ಲಿ ಅನೇಕ ತೆಂಗಿನ ಮರಗಳು ಮನೆಗಳ ಮೇಲೆ ಬಿದ್ದುವಾಗಿಯೂ, ಅವುಗಳಿಂದ ೫ ಮಂದಿಗಳ ಪ್ರಾಣ ಹೋಯಿತೆಂದೂ ವಾರ್ತೆಯಿದೆ. [illegible] ನೀರುಪಾಲಾಗಿದೆ. ಭರತ ನದಿಯು ನೆರೆಯಿಂದ ತುಂಬಿಕೊಂಡಿತು. ಆಕಸ್ಮಿಕ ಘಟನೆಗಳಿಂದಾಗಿ ೧೧ ಜನರು ಮಡಿದುದಲ್ಲದೆ ಬೇರೆ ಪ್ರಾಣಹಾನಿಗಳುಂಟಾಗಲಿಲ್ಲ

⁂

32,524

ಈ ಸಲದ ಕಾಯಿದೆಭಂಗ ಚಳವಳಿಯಿಂದಾಗಿ ಸೆರೆಮನೆಗೆ ಹೋದವರೆಷ್ಟು ಮಂದಿ ಎಂಬ ಅಫಿಶಿಯಲ್ ಪಟ್ಟಿಯು ಹೊರಬಿದ್ದಿದೆ. ಚಳವಳಿಯು ಪ್ರಾರಂಭವಾದಂದಿನಿಂದ ಒಟ್ಟು ೬೪,೮೫೩ ಜನರಿಗೆ ಶಿಕ್ಷೆಯಾಯಿತು. ಜನವರಿಯಲ್ಲಿ ೧೪೮೦೦ ಫೆಬ್ರವರಿಯಲ್ಲಿ ೧೭೮೦೦ ಮಾರ್ಚಿಯಲ್ಲಿ ೬೯೦೦, ಏಪ್ರಿಲ್ ತಿಂಗಳಲ್ಲಿ ೫,೩೦೦, ಏಪ್ರಿಲ್ ತಿಂಗಳ ಅಂತ್ಯದ ವರೆಗೆ ಸೆರೆಮನೆಯಲ್ಲಿದ್ದವರ ಸಂಖ್ಯೆ—೩೨,೫೨೪, ಈ ಅಂಕಸಂಖ್ಯೆಗಳನ್ನು ಪಂಡಿತ ಮಾಲವೀಯರು ವಿವರಿಸಿ ಹೇಳುತ್ತಾ, ಸಾಧಾರಣ ೮೦,೦೦೦ ಸಾವಿರ ಜನರು ಸೆರೆಮನೆಗೆ ಹೋದರೆಂದು ಹೇಳುವರು. ಸರ್ ಸಾಮುವೇಲರು ಪಾರ್ಲಿಮೆಂಟಿನಲ್ಲಿ ವಿವರಿಸಿ ಹೇಳುತ್ತಾ ಬರೇ ೩೦,೦೦೦ ಜನರು ಕಾರಾಗೃಹದಲ್ಲಿರುವರೆಂದರು. ಅಂತೂ ಇಂತೂ ಇವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯಬರುವುದಿಲ್ಲ. ಇದು ಏಪ್ರಿಲ್ ತಿಂಗಳ ವರೆಗಿನ ಲೆಕ್ಕವಾಯಿತು. ಇನ್ನು ಮೇ ತಿಂಗಳಲ್ಲಿ ಶಿಕ್ಷೆ ಹೊಂದಿದವರ ಸಂಖ್ಯೆಯು ಬೇರೆ ಇದೆ. ಅದು ಹೊರಬಿದ್ದಿರುವುದಿಲ್ಲ

⁂

ಸ್ವದೇಶಿ ಪ್ರತೋಷವಾಸಿಗಳಿಗೆ ಮಾಲವೀಯರ ಸಂದೇಶ

ಕಳೆದ ಆದಿತ್ಯವಾರ ಅಖಿಲ ಭಾರತ ಸ್ವದೇಶಿ ದಿನವು ಪಂಡಿತ ಮಾಲವೀಯರ ಆಜ್ಞೆಯ ಮೇರೆಗೆ ಸರ್ವ ಕಡೆಗಳಲ್ಲೂ ಸುಸೂತ್ರವಾಗಿ ಜರಗಿಸಲ್ಪಟ್ಟಿತಷ್ಟೆ! ಈ ಸಂಬಂಧವಾಗಿ ಮಾಲವೀಯರು ಹೀಗೆ ಬರೆದಿರುವರು, 'ಸ್ವದೇಶೀ ಚಳವಳಿಯನ್ನು ಶಕ್ತಿಗೊಳಿಸುವುದಕ್ಕಾಗಿ ದೇಶವು ಸ್ವದೇಶಿ ದಿನವೊಂದನ್ನಾಚರಿಸಬೇಕೆಂದು ನಾನು ಮಾಡಿದ ಅರಿಕೆಗೆ ದೇಶದ ಉದಾರ ಹೃದಯವು ದೊರೆತುದಕ್ಕಾಗಿ ನಾನು ಎಲ್ಲರಿಗೂ ಆಭಾರಿಯಾಗಿರುವೆನು. ನಾನು ದೇಶೀಯ ರಾಜ ವರ್ಗದವರಿಗೂ, ಸರದಾರರಿಗೂ, ಸಂಸ್ಥಾನಗಳ ಜನರಿಗೂ ವಿಶೇಷರೀತಿಯ ಅರಿಕೆಯನ್ನು ಮಾಡಿಕೊಂಡು, ಅವರು ಕೂಡಾ ಸ್ವದೇಶಿ ಪ್ರಚಾರ ಕಾರ್ಯದಲ್ಲಿ ಉದಾತ್ತಭಾಗವನ್ನು ವಹಿಸಿಕೊಳ್ಳಬೇಕೆಂದು ಅರಿಕೆ ಮಾಡಿಕೊಂಡಿಲ್ಲ, ಅಂತಹ ಅರಿಕೆಯನ್ನು ನಾನು ಈಗ ಮಾಡುವೆನು.

ಹಿಂದೂದೇಶವು ಅರಸುಗಳ ಭೂಮಿ. ಅದು ದೇಶೀಯ ರಾಜರ ಪ್ರಜೆಗಳ ಭೂಮಿಯೂ ಅಹುದು. ಅಲ್ಲದೆ ಬ್ರಿಟಿಷ ಸಂಸ್ಥಾನವೂ ಅಹುದು. ಸಂಸ್ಥಾನಗಳ ರಾಜರುಗಳೂ ಅವುಗಳ ಜನರೂ ಬ್ರಿಟಿಷ ಸಂಸ್ಥಾನದ ಸ್ವದೇಶಿ ಪ್ರಚಾರ ಕಾರ್ಯದಲ್ಲಿ ಧಾರಾಳವಾಗಿ ಭಾಗವಹಿಸುವುದು ಅವರ ಕರ್ತವ್ಯವಾಗಿರುತ್ತದೆ. ಭರತಮಾತೆಯನ್ನುದ್ಧರಿಸುವುದು ಅವರ ಧರ್ಮವಾಗಿರುತ್ತದೆ. ದೇಶೀಯ ರಾಜ್ಯಗಳ, ಬ್ರಿಟಿಷ ಸಂಸ್ಥಾನದಲ್ಲೂ, ಎಲ್ಲಿ ಇಷ್ಟರ ತನಕ ಬೈ ಇಂಡಿಯನ್ ಲೀಗ್ ಎಂಬ ಸಂಸ್ಥೆಯು ಸ್ಥಾಪಿತವಾಗಲಿಲ್ಲವೋ ಅಲ್ಲಿ ಇನ್ನಾದರೂ ಅವುಗಳನ್ನು ಸ್ಥಾಪಿಸುವರೆಂದು ಆಶಿಸುತ್ತೇನೆ. ಈ ಚಳವಳಿಯ ಉದ್ದೇಶಗಳನ್ನು ಪ್ರದರ್ಶಿಸುವುದಕ್ಕಾಗಿ, ಪ್ರತಿ ಜಿಲ್ಲೆ ಪಟ್ಟಣಗಳಲ್ಲಿ ಒಂದೊಂದು ಶಾಶ್ವತವಾದ ಸ್ವದೇಶಿ ಪ್ರದರ್ಶನಾಲಯಗಳನ್ನು ತೆರೆಯಬೇಕು. ಅದಕ್ಕೆ ಸಂಬಂಧಪಟ್ಟ ಸಣ್ಣ ಲೈಬ್ರರಿಯೂ ಸ್ವದೇಶೀಯ ಕುರಿತು ವಾರ್ತೆಗಳನ್ನು ಸಂಗ್ರಹಿಸಲಿಕ್ಕಾಗಿ ಒಂದು "Information Bureau" ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕು. ಈ ಸಂಸ್ಥೆಯು ಸ್ವದೇಶಿ ವರ್ತಕರ ವಿಳಾಸಪಟ್ಟಿಯನ್ನೂ ಅವರು ವಿಕ್ರಯಿಸುವ ವಸ್ತುಗಳ ವಿವರವನ್ನೂ ಒದಗಿಸಿಕೊಡುವಂತಾಗಬೇಕು. ಸಾಮಾನು ತಯಾರಿಸುವವರ ಮತ್ತು ಕೃಷಿಕರ ಕೈಗಾರಿಕೆಯ ಪ್ರಗತಿಯನ್ನು ಸಾಧಿಸಿದರೆ ದೇಶದ ಸಾಂಪತ್ತಿಕ ಪ್ರಗತಿಯುಂಟಾಗುವುದು. ಈ ಪ್ರಕೃತಿ ಉದ್ದೇಶವನ್ನು ಮೇಲಿನ ಪ್ರದರ್ಶನವು ಇಟ್ಟುಕೊಳಬೇಕು. ಈ ವಸ್ತು ಪ್ರದರ್ಶನವನ್ನು ಮುಖ್ಯ ವ್ಯವಸಾಯಕ ಮತ್ತು ಕೈಗಾರಿಕೆ ವಿಭಾಗಗಳನ್ನಾಗಿ ಮಾಡಬೇಕು. ಈ ಪ್ರದರ್ಶನ [illegible] ಬೇಕಾಯ ಅಥವಾ [illegible] ಬೇಕು. ಅದಲ್ಲದೆ ಇವು [illegible] ಮಹಾತ್ಮಾ ಗಾಂಧಿಯವರನ್ನಂತೆ [illegible]

[illegible]

⁂

ಅಂಬೆಡ್ಕರರು ಲಂಡನಿಗೆ ಹೋದರು

ಡಾ|| ಅಂಬೇಡ್ಕರರು ಇಂಗ್ಲಂಡಿಗೆ [illegible]

ನೋಟೀಸು

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ

[illegible]

[illegible] S C 1108/25ನೇ ದಾವೆಯಲ್ಲಿ [illegible] 21—6—1932ಕ್ಕೆ [illegible]

ಕಾರ್ಕಳ
೨೧—೫—೧೯೩೨

ಪಿ. ರಾಮಚಂದ್ರ ರಾವ್,
ಅರ್ಜಿದಾರನ ಕಡೆ ವಕೀಲ

ಧನ್ವಂತ್ರಿಸಾರ ಶಾಸ್ತ್ರೀಯವಾದವು
ಕಿಮ್ಮತ್ತು ಸ್ವಲ್ಪ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ ಶಿಷ್ಯರಿಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಳ್ಳಾತ ಕಣ್ಣ ವೈದ್ಯರಿಂದ ತೆರೆಯೋಣವಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿಸಲಿ. ತಯಾರಿರುವವು ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತಿಂದಗಿದ ಕಾಲ, ವಯಸ್ಸು, ನಿತ್ಯ ಆಹಾರದ ಕ್ರಮ, ವೃತ್ತಿ ಹಿಂದೆಲು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯುಲಿಕ್ಕೆ ಶಕ್ತಿ ಉಳ್ಳವರೋ ಎಂಬ ಹಸರೇಲು [illegible] ಸಂಗತಿಗಳಲ್ಲಿ ಎಷ್ಟು ಕ್ರಮವ ನಡದದ ಎಂಬ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂತಾ ರೋಗಿಗಳ ಚಿಕಿತ್ಸೆ ನಡಿಸುವರೆ ಖುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಸಿಗಾ ಕೊಡೋಣಾಗುವದಲ್ಲದೆ ಅನಾಸು ಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿಗೆ ವಾಹಿತಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅವನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು

ಧಾರದ ಪ್ರತಿ ಶನಿವಾರ ವಿವರ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ಶಷ್ಕನ್ನವಾದ ಅತ್ಯಂತ ಹಳೆಯದು ವ ತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು ಪಥ್ಯೆ ವಗೈರೆ ಇಲ್ಲ ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ —೦—೦

ಕಿವುಡುತನ

ಕಿವಿಯೊಳಗಿಂದ ಕೀವು ಒರುವುದು ತಿಂದಿಯುವ ವ್ರಣ, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರಾದ್ಧಿವನ ತೇಜ ಜವೌಷಧ ತಪ್ಪದೆ ನಿವಾರಣಿ ಸುಪ್ರಸಿದ್ಧ ನೆಟ್ಟಗಾಗಿರುವದು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
2 ಕಾಂಬಾರವಾಡ ೪ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ವಿಕ್ಕಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.
ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರಿಯಿರಿ
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟಡ್
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dadar Bombay, 14.

ತಂತಿ ವಿಳಾಸ — CAVASPUR Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮನೆಜಿಂಗ್ ಡ್ಯಾರಕ್ಟರ್



ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಪಥಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯ ಸಂಪದಗಳನ್ನು ಕೊಡುತ್ತದೆ

ಅರ್ಕ — ಇದು ಎಲ್ಲಾ ತರದ ಜ್ವರಗಳನ್ನು ನಿವಾರಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ — ರಕ್ತಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಕೇಸರಿ ಕುಟೀರಂ
ಎಗ್ಮೋರ್ ಮದರಾಸು,
ಎಲ್ಲಾ ಔಷಧಿ ಮಾರಾಟದವರಲ್ಲಿ ದೊರೆಯುತ್ತದೆ

The Zandu Pharmaceutical Works, Ltd Bombay,14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆವಳಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ ನಾನಾ ವಿಧವಾದ ದುರ್ಬಲತ್ವ, ಕೆಮ್ಮು ಎದೆ ನೋವು ಸ್ವಂಭಂಗ ವೃದ್ಧಾಪ್ಯ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ಜಠರಶಕ್ತಿಹೀನತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಘುಡಗಿಶೃತನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ 2/8, ½ ಪಾ ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು — ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ, ಸಯ್ಯಾಜಿರಾವ್ ರೋಡ್
ಬೆಂಗಳೂರು ಏಜಂಟರು — ಬಿ ಫ್ರೊಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ಕಳೆದ ವಾರದಲ್ಲಿ ಮುಂಬಾಯಿಯ ಗಲಭೆಯು ಶಾಂತವಾಗಿದ್ದಿತು. ಪೋಲೀಸರ ಕರ್ತವ್ಯನಿಷ್ಠೆಯಿಂದಲೋ, ದುರೀಣರ ಶಾಂತಿಸ್ಥಾಪನಾ ಯತ್ನದಿಂದಲೋ, ಶೌಕತಾಲಿಯವರ ಪ್ರಯತ್ನದಿಂದಲೋ ಪಟ್ಟಣವು ಶಾಂತಿಯಿಂದಿದ್ದಿತು. ಅಂಗಡಿಗಳು ತೆರೆಯಲ್ಪಟ್ಟುವು. ವಾಹನಗಳು ಸಂಚರಿಸಲುಪಕ್ರಮಿಸಿದುವು. ಜನರ ಹೃದಯದಲ್ಲಿನ ಭಯಭೀತಿಗಳು ಕಡಿಮೆಯಾಗುತ್ತಾ ಬಂದುವು

ಆದರೆ ತಾ. ೩೦ರಲ್ಲಿ ಪುನಃ ಮಾರಾಮಾರಿಗಾರಂಭವಾಯಿತು. ಒಬ್ಬ ಮಹಮ್ಮದೀಯನು ಪನಾಸ್‌ವಾಡಿಯಲ್ಲಿ ಹಿಂದೂಗಳಿಂದ ಹೊಡೆಯಲ್ಪಟ್ಟನು. ಒಡನೆ ಅವನು ಅಲ್ಲಿಯೇ ಸಮೀಪವಿರುವ ಮುಸ್ಲಿಮ್ ವಠಾರವನ್ನು ಹೊಕ್ಕು, ಒಂದು ಮನೆಯೊಳಗೆ ಓಡಿ, "ನನ್ನನ್ನು ಹಿಂದೂಗಳು ಕೊಲ್ಲುತ್ತಾರೆ ಬೇಗ ಬನ್ನಿ, ಕೊಲ್ಲುತ್ತಾರೆ" ಎಂದು ಬೊಬ್ಬಿಟ್ಟನು. ಅದನ್ನು ಕೇಳಿದ ಮುಸ್ಲಿಮರು ಎಚ್ಚತ್ತು, ಅರ್ಧಘಟಿಗಳೊಳಗೆ ಓಡಿದರು. ಕೂಡಲೇ ಮೊದಲಾಯಿತು — ಹಿಂದೂಗಳ ಅಂಗಡಿ ಲೂಟಿ! ಅನೇಕ ಅಂಗಡಿಗಳು ಮುಚ್ಚಲ್ಪಟ್ಟುವು! ಅವುಗಳ ಯಜಮಾನರು ಪ್ರಾಣಾಪಾಯವನ್ನು ತಪ್ಪಿಸುವುದಕ್ಕಾಗಿ ಓಡಿದರು. ಅವರ ಇಂತಹ ಓಟದ ಸತ್ಪ್ರಯೋಜನವನ್ನು ಮುಸ್ಲಿಮ್ ಪುಂಡಿಗಳು ಪಡೆದರು. ಸಿಲ್ಕ್ ವ್ಯಾಪಾರಸ್ಥರ ಅಂಗಡಿಗಳನ್ನು ಒಡೆದು ಇದ್ದ ಸಿಲ್ಕುಗಳನ್ನು ಅಂಗಿಗಳೊಳಗೆ ಅಡಗಿಸಿಕೊಂಡು ಮನೆಗೆ ಸಾಗಿಸಲಾಯಿತು. [illegible] ಮಾಡಲ್ಪಟ್ಟುವು. ಒಬ್ಬ ಮುಸ್ಲಿಮನು ಸಿಲ್ಕ ವಸ್ತ್ರಗಳನ್ನು ಮೈತುಂಬಾ ಸುತ್ತಿಕೊಂಡು, ಅವು ಕಾಣದ ಹಾಗೆ ಮೊಣಕಾಲನ್ನು ಅಡಗಿಸುವಂತಹ ಒಂದು ಅಂಗಿಯನ್ನು ಧರಿಸಿಕೊಂಡು ಬೀದಿಯ ಮೇಲೆ ಹೋಗುತ್ತಿದ್ದನು. ನಿತ್ಯವೂ ತೆಳ್ಳಗೆ ಕಾಣುತ್ತಿದ್ದ ಮುಸಲ್ಮಾನನು ಇಂದು ಏಕೆ ಹೀಗೆ ದಪ್ಪನಾಗಿ ಕಾಣುವನೆಂದು ಕೆಲವರು ಆಶ್ಚರ್ಯಗೊಂಡರು. ಅಷ್ಟರಲ್ಲಿ ದುರ್ದೈವವಶಾತ್, ಅವನು ಒಳಗೆ ಸುತ್ತಿಕೊಂಡಿದ್ದ ಸಿಲ್ಕಿನ ಒಂದು ಭಾಗವು ಕೆಳಗಡೆ ಇಳಿಯಿತು. ಅವನನ್ನು ಹಿಡಿಯಲಾಯಿತು. ಮೇಲಂಗಿಯನ್ನು ತೆಗೆಯಲಾಗಿ, ಅವನ ಮೈಯಿಂದ ಸಮಾರು [illegible] ಗಜ ವಸ್ತ್ರವು [illegible] ನೀರಲ್ಲಿ ಬಿದ್ದ ಹೆಣದಂತೆ ಅಷ್ಟು ತೋರವಾಗಿ ಕಾಣುತ್ತಿದ್ದ ಮುಸಲ್ಮಾನ ಬಂಧುವು, ಒಡನೆ ಬಿಸಿಲಲ್ಲಿ ಒಣಗಿದ ಅಸ್ಥಿಪಂಜರದಂತೆ ಕಂಡನು

ಗಲಾಟೆಯಾದೊಡನೆ ಟೆಲಿಫೋನು [illegible] ಪೋಲೀಸರ ಫೌಜು ಒಡನೆ ಅತ್ತ ಹೊರಟಿತು. ಮದನಪುರ, ನಾಗಪಾಡ, ಜೆಕೊಬ್ ಸರ್ಕಲ್, [illegible] ಮತ್ತು ಪನಾಸ್‌ವಾಡಿಗಳಲ್ಲಿ ಪೋಲೀಸ ಪಹರೆಯು ನಿಂತಿತು. ಫಯರ್ ಬ್ರಿಗೇಡುಗಳೂ, ಸಶಸ್ತ್ರಧಾರಿ ಜವಾನರ ಮೋಟಾರುಗಳೂ ಬೀದಿಬೀದಿಗಳಲ್ಲಿ ಅಲೆದಾಡಿದವು. ರಾತ್ರಿಯಲ್ಲಿ ಎಲ್ಲವೂ [illegible] ಶಮನಹೊಂದುವು

ಮುನಿಸಿಪಲ್ ಕೆಲಸಗಾರನಾಗಿದ್ದ ಒಬ್ಬ ಹಿಂದೂವನ್ನು ಮುಸ್ಲಿಮರ ಪೋರರು ತಿವಿದರು. ಅವರನ್ನು [illegible] ಲಾಗಿಟೆ ಮತ್ತೊಬ್ಬ ಮುಸ್ಲಿಮನು ರಕ್ತಪೂರಿತ ವಸ್ತ್ರಗಳನ್ನೂ ಚೂರಿಯನ್ನೂ ಅಡಗಿಸಿಕೊಂಡು ದಾರಿ ಮೇಲೆ ಬೇಗಬೇಗನೆ ಓಡುತ್ತಿದ್ದನು. ಅವನನ್ನು ಹಿಡಿದು ವಿಚಾರಿಸಲಾಗಿ ಅವನೂ ಒಬ್ಬ ಹಿಂದೂವನ್ನು ಕೊಂದ ಸಂಗತಿಯು ತಿಳಿದುಬಂತು. ಒಟ್ಟು ಆ ದಿನ ೬ ಮಂದಿಗಳು ಮೃತಪಟ್ಟರು. ೬೩ ಮಂದಿಗಳು ಘಾಯಗೊಂಡರು.

ತಾ ೩೧ನೇ ದಿನ ಗಲಭೆಯು ಪುನಃ ಮೊದಲಾಯಿತು. ಕ್ರಾಫರ್ಡ್ ಮಾರ್ಕೆಟಿನ [illegible] ಒಂದು ಅಂಗಡಿಯನ್ನು ಸುಡುವುದಕ್ಕೆ ಮುಸ್ಲಿಮರ ಸಾಹಸವಾಯಿತು. ಒಡನೆ ಮಿಲಿಟರಿಯವರನ್ನು ಕರೆಯಲಾಯಿತು. ಅವರು ಬಂದೊಡನೆ ಶಾಂತಿ ಸಮಾಧಾನವಾಗುವ ಬದಲಿಗೆ ಸೋಡಾಬಾಟ್ಲಿ ಮತ್ತು ಕಲ್ಲುಗಳ ಸುರಿಮಳೆಯು ಪ್ರಾರಂಭವಾಯಿತು. ಪೋಲೀಸರು ಜನರನ್ನು ಗದರಿಸಿದರು. ಆದರೂ ದಂಗೆಗಾರರು ಓಡಲಿಲ್ಲ. ಒಡನೆ ತುಪಾಕಿಗಳ ತುದಿಗಳಿಂದ ಅವರನ್ನು ಹಿಂದೆ ದೂಡಲಾಯಿತು. ಅನೇಕರು ಘಾಯಗೊಂಡರು. ಒಂದು ಕಡೆಯಲ್ಲಿ ದೇವಸ್ಥಾನಕ್ಕೆ ಬೆಂಕಿ ಹಚ್ಚುವ ಯತ್ನವು ನಡೆಯಿತು. ಆದರೆ ಫಯರ್‌ಬ್ರಿಗೇಡುಗಳು ಕ್ಲುಪ್ತಕಾಲದಲ್ಲಿ ಸಹಾಯವನ್ನಿತ್ತುದರಿಂದ ದೇವಸ್ಥಾನವು ನಾಶವಾಗಲಿಲ್ಲ. ಆ ದಿನ ಒಬ್ಬನ ಮರಣವಾಯಿತು. ೧೩ ಜನರು ಘಾಯಗೊಂಡರು. ಪುಂಡರಿಗಳ ದಸ್ತಗಿರಿಯು ನಡೆಯುತ್ತಿದೆ

ಪ್ರಥಮ ಸಲದ ದಂಗೆಯಲ್ಲಿ ಮಡಿದ ಮತ್ತು ಘಾಯಗೊಂಡವರ ಸಂಖ್ಯೆಯ ಪಟ್ಟಿಯನ್ನು ಸರಕಾರದ ಪ್ರಕಟನಾ ಶಾಖಾಧಿಕಾರಿಗಳು ಕೊಟ್ಟಿರುತ್ತಾರೆ. ಅದರಲ್ಲಿ ಹೀಗಿದೆ:—

ಮುಂಬಾಯಿಯಲ್ಲಿ ಪುನಃ ಮಾರಾಮಾರಿ!

ಕೆಲವರು ಕೊಲೆ ಮಾಡಲ್ಪಟ್ಟರು!

ಇನ್ನೂರು ಮಂದಿಗಳು ಜಖಂಗೊಂಡರು!

ಪೋಲೀಸರ ಗುಂಡು – ಪಹರೆ – ಕೈದು.

ಒಟ್ಟು ಸತ್ತವರು ೧೩೬ ಮಂದಿಗಳು. ಅವರಲ್ಲಿ ಹಿಂದೂಗಳು ೮೯, ಮುಸಲ್ಮಾನರು ೪೭. ಗಾಯಗೊಂಡವರು ೧೬೦೧, ಅವರಲ್ಲಿ ಹಿಂದೂಗಳು ೭೯೭, ಮುಸಲ್ಮಾನರು ೬೫೩.

ಮೇ ತಾ ೧೪ಕ್ಕೆ ಮೊದಲಾದ ಕಲ್ಲೋಳದಿಂದಾಗಿ ಒಟ್ಟು ೨೦೦೦ ಜನರು ಘಾಯಗೊಂಡರೆಂದೂ ೨೦೦ ಜನರು ಮಡಿದರೆಂದೂ ಇನ್ನೊಂದು ಪ್ರಕಟನೆಯಾಗಿರುತ್ತದೆ. ತಾ ೩೦ನೇ ದಿನವೂ ಅಲ್ಲಲ್ಲಿ ಮಾರಾಮಾರಿಗಳು ನಡೆದುವು. ಮಿಲಿಟರಿಯವರೂ ಪೋಲೀಸರೂ ಬಲವಾದ ಕಾವಲು ನಿಂತಿರುವಾಗಲೂ, ಅವರು ಕಾವಲು ಮಾಡುತ್ತಿದ್ದ ಹಾಗೆಯೇ, ಕೆಲ ಪುಂಡರು ಪುಂಡಾಟಿಕೆಗಳನ್ನು ನಡೆಸಿದರು. ಆ ದಿನ ಬೆಳಗ್ಗೆ ಸಂಜೆ ಕೆಲವರು ಜಖಂಗೊಂಡರು. ಆಗ ಕತ್ತಲಾಗುತ್ತಲೇ ಜನರು ತಮ್ಮ ತಮ್ಮ ಮನೆಬಾಗಿಲುಗಳನ್ನು ಹಾಕಿಕೊಳ್ಳುತ್ತಿದ್ದರು. ಅವರ [illegible] ದೊಡನೆ ಸಂಘರ್ಷವು ದೊರೆಯಿತು [illegible] ಗಳನ್ನು ಹಿಡಿದುಕೊಂಡು [illegible] ಹೊರಡುತ್ತಿರುವರು. ದಾರಿ ಮೇಲೆ ನಿಶ್ಚಿಂತರಾಗಿ ಹೋಗುತ್ತಿರುವವರ ಮೇಲೂ ಆ ಪುಂಡರಿಗಳು ಬೀಳುವುದಿಲ್ಲ. ಹೀಗೆ ಎಲ್ಲಾ ಕಡೆಗಳಲ್ಲೂ ನಡೆಯುತ್ತಿಲ್ಲ. ಗಲಭೆಯು ಪ್ರಾರಂಭವಾಗಿದ್ದ [illegible] ಗಳಲ್ಲಿ ಮಾತ್ರ ಹೀಗಾಗುತ್ತಿದೆ. [illegible] ಅಲ್ಲಿ ಬಲವಾದ ಪಹರೆಯಿಲ್ಲದುದರಿಂದ ಇಂತಹ ಕೊಲೆ ಪಾತಕಿಗಳಿಗೆ ಒಂದು ತರದ ಅನುಕೂಲವಾಗಿರುತ್ತದೆ. ಘಳಿಗೆಗೊಂದೆರಡು ಸಲ ಮಿಲಿಟರಿಯವರು ಮೋಟಾರ್ ಮೇಲೆ ಓಡಾಡುತ್ತಿರುವರು.

ತಾ ೩೧ನೇ ದಿನ ೮ ಜನ ಅಲ್ಲಲ್ಲಿ ಜಖಂಗೊಂಡರು. ರಾತ್ರಿ ೧೧ ಘಂಟೆಗೆ ಕೆಲವು ಮುಸ್ಲಿಮ್ ಗುಂಡಾಗಾರರು ಹಿಂದೂಗಳ ಮೂರು ದೇವಸ್ಥಾನಗಳಿಗೆ ಬೆಂಕಿ ಕೊಡಲು ಯತ್ನಿಸಿದರು. ಆದರೆ ಕ್ಲುಪ್ತಕಾಲದಲ್ಲಿ ಎಚ್ಚರದಿಂದ ಕೆಲಸಮಾಡಿದ ಫಯರ್ ಬ್ರಿಗೇಡ್‌ಗಳ ಕಾರ್ಯದಕ್ಷತೆಯು ಅಂತಹ ಬೆಂಕಿಯನ್ನು ನಂದಿಸಿಬಿಟ್ಟಿತು. ಒಂದು ದೇವಸ್ಥಾನವು ಸುಡುತ್ತಿರುವುದನ್ನು ನೋಡಿ ಫಯರ್ ಬ್ರಿಗೇಡ್ ಓಡಿಸುವವನು ಥಟ್ಟನೆ ಅಲ್ಲಿ ಹೋಗಿ ಬೆಂಕಿಯನ್ನು ನಂದಿಸಿದನು. ಒಡನೆ ಮುಸ್ಲಿಮರ ಒಂದು ದೊಡ್ಡ ಗುಂಪು ಅವನ ಮೇಲೂ ಇನ್ನಿತರರು ಕೆಲವರ ಮೇಲೂ ಬಿದ್ದು ಅವರಿಗೆ ಹೊಡೆದು ಬ್ರಿಗೇಡಿನ ಎದುರಿನ ಲಾಟಿನುಗಳನ್ನು ಹುಡಿಮಾಡಿದರು. ಯಂತ್ರ ಸಾಮಗ್ರಿಗಳನ್ನು ಎತ್ತಿಕೊಂಡರು. ಈ ವಾರ್ತೆಯು ಹರಡಿದೊಡನೆ ಪೋಲೀಸರು ಕೂಡಲೇ ಅಲ್ಲಿ ಹೋಗಿ ರೋಷಾವಿಷ್ಟ ಸ್ಥಿತಿಯಲ್ಲಿದ್ದ ಪುಂಡರಿಗಳನ್ನು ಚದರಿಸಿದರು. ಆ ದಿನ (ತಾ ೩೦—೫—೩೨) ಒಬ್ಬ ಮನುಷ್ಯ ಮರಣ. ೭೦ ಜನ [illegible] ಪೋಲೀಸರು ದಂಗೆಖೋರರನ್ನೂ, ಸುಳಿಗಾರರನ್ನೂ, ಪ್ರೇರಕರನ್ನೂ, ಪ್ರೋತ್ಸಾಹಕರನ್ನೂ ಸದೆಬಡಿಯುತ್ತಿರುವರು. ಆ ದಿನ ಸುಮಾರು ೯೦ ಹಿಂದೂ ಮುಸ್ಲಿಮರ ದಸ್ತಗಿರಿಯಾಗಿವೆ. ಇದಕ್ಕಿಂತ ಮೊದಲು ೧೫೦೦ ಜನರನ್ನು ಕೈದುಮಾಡಿ ಲಾಕಪ್ಪಿನಲ್ಲಿಟ್ಟಿರುವರು.

ತಾ ೩೦ರ ರಾತ್ರಿ ಕ್ರಾಫರ್ಡ್ ಮಾರ್ಗದಲ್ಲಿ ಪೋಲೀಸರು ರಭಸದಿಂದೋಡುತ್ತಿದ್ದ ಒಂದು ಮೋಟಾರ್ ಕಾರನ್ನು ತಡೆದರು. ಅದರಲ್ಲಿದ್ದ ಐದು ಮಂದಿ ಮುಸ್ಲಿಮರನ್ನು ಕೈದು ಮಾಡಿದರು. ಅವರ ಕೈಯಲ್ಲಿ ಒಟ್ಟು ೩೦ ದೊಡ್ಡ ದೊಡ್ಡ ಕತ್ತಿ ಕಠಾರಿಗಳಿದ್ದುದನ್ನು ಕಸಗೊಂಡರು. ಮೆಜಿಸ್ಟ್ರೇಟರೆದುರು ಅವರ ತನಿಖೆಯು ನಡೆದು, ಕಮಿಶನರರು ಶಸ್ತ್ರಬಾಹಿರ ಕಾನೂನನ್ನು ಜಾರಿಮಾಡಿದ್ದರೂ ಅದನ್ನುಲ್ಲಂಘಿಸಿ ಕತ್ತಿ ಕೈದುಗಳನ್ನು ಹಿಡಿದ ಅಪಾದನೆಯ ಮೇಲೆ ಐದ್ವೈದು ರೂಪಾಯಿ ಜುಲುಮಾನೆಯನ್ನು ವಿಧಿಸಿದರು. ಕತ್ತಿಗಳು ವಶೀಕರಿಸಲ್ಪಟ್ಟುವು. ಶಿಕ್ಷೆಯಾದ ಜನರು ವೃತ್ತಿಯಲ್ಲಿ ಕಟುಕರಾಗಿದ್ದುದರಿಂದ ಕತ್ತಿಗಳನ್ನು ಹಿಡಿದುಕೊಳ್ಳಲು ಕಾರಣವೆಂದೂ ಅವರು ತಪ್ಪಿತಸ್ಥರಲ್ಲವೆಂದೂ ಒಬ್ಬ 'ಡಿಫೆನ್ಸ್' ವಕೀಲರ ವಾದ! ಆದರೆ ಮೆಜಿಸ್ಟ್ರೇಟರು ಆ ವಾದವನ್ನು ಅಪವಾದವೆಂದೆಣಿಸಿ, ಅಪಾದಿತರು ಕತ್ತಿಕೈದುಗಳನ್ನು ಹಿಡಿದುಕೊಂಡು ತಿರುಗಾಡಿರುದು ತೀರ ಅಸಂಬದ್ಧ ಸಂಗತಿಯೆಂದು ಹೇಳಿ ಶಿಕ್ಷೆಯನ್ನು ಕಾಯಂ ಮಾಡಿದರು. ಶಸ್ತ್ರನಿಷಿದ್ಧ ಕಾನೂನನ್ನುಲ್ಲಂಘಿಸಿದುದಕ್ಕಾಗಿ ಮೊದಲೊಮ್ಮೆ ಮಿಲಿಟರಿಯಲ್ಲಿ ಕೆಲಸ ಮಾಡಿ ಸಾಕಾಗಿ ನಿವೃತ್ತಿ ಹೊಂದಿದ ಮುಸ್ಲಿಮನೊಬ್ಬನು ವಿಚಾರಿಸಲ್ಪಟ್ಟು ಐದು ರೂಪಾಯಿ ದಂಡವನ್ನು ತೆತ್ತನು.

ಮೊನ್ನೆ ಮುಂಬಾಯಿಯಲ್ಲಿ ನಡೆದ ಹತ್ತಾಹತ್ತಿ ಮಾರಾಮಾರಿಯ ಸಮಯದಲ್ಲಿ ಅಲ್ಲಿಯ ಅನೇಕ ಹಿಂದೂ ಮುಸ್ಲಿಮ್ ಧುರೀಣರು ಒಟ್ಟು ಕಲೆತು ಒಂದು ಶಾಂತಿಸ್ಥಾಪನಾ ಸಮಿತಿಯನ್ನೇರ್ಪಡಿಸಿದ್ದರಷ್ಟೆ. ಕಲ್ಲೋಳವು ವಿಷಮಾವಸ್ಥೆಗೇರಿ ನಿಂತ ಕಾಲದಲ್ಲಿ, ಈ ಸಭೆಯು ದಿನಕ್ಕೆರಡುಬಾರಿ ಸೇರುತ್ತಿತ್ತು ಮತ್ತು ಮುಂದಿನ ಆಲೋಚನೆಗಳನ್ನು ಮಾಡುತ್ತಿತ್ತು. ಇಂತಹ ಯೋಚನೆ, ಆಲೋಚನೆಗಳನ್ನು ಮಾಡುವುದಕ್ಕಾಗಿ ಕಳೆದ ಗುರುವಾರ ಮುಂಬಾಯಿಯ ಮೇಯರರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಜರಗಿತು. ಗಲಭೆಯನ್ನು ಶಮನಗೊಳಿಸಲು ಬೇಕಾದ ಯೋಜನೆಗಳು ಯೋಜಿಸಲ್ಪಟ್ಟುವು. ಮಾತಿನಲ್ಲಿ ಚರ್ಚಾಸ್ಪದವಾದ ಕೆಲವು ವಿಚಾರಗಳು ಬಂದುವು. [illegible] ದಾಸ್ [illegible] ಅಡಗಿಸಲ್ಪಟ್ಟಿದ್ದ ಕತ್ತಿ [illegible] ಸತ್ಯವೋ [illegible] ಕೊಳ್ಳಬೇಕೆಂದೂ ಅದ [illegible] ವಿಸ್ವಾಸವು [illegible] ಶೋಚನೀಯವಾದುದೆಂದೂ ನಿಂತಿದ [illegible] ಅಧ್ಯಕ್ಷರ [illegible] ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದೆಯಾದರೂ [illegible] ಅಧಿಕೃತ ಸಂಗತಿಯಾಗಿ [illegible] ತಾಕೀತು [illegible] ಬಿಲಾಫತ್ತಿನವರ ಮೇಲೆ ಈ ಆರೋಪವನ್ನು [illegible] ಶೌಕತಾಲಿಯವರು [illegible] ಸಮಯದಲ್ಲಿ ತನ್ನದೊಂದು [illegible] ಕೆಲವರ [illegible] ಶೌಕತಾಲಿಯವರು [illegible] ಆ [illegible] 'ಸಂಪೂರ್ಣ (ಸತ್) ಪ್ರಯೋಜನವನ್ನು ಶೌಕತಾಲಿಯವರು [illegible] ಬಿಲಾಫತ್ತಿನವರ ಮೋಟಾರ್ (van) ವಾಹನಗಳಿಗೆ [illegible] ಬಿಲಾಫತ್ತಿನವರು [illegible] ಮುಂಬಾಯಿಯಲ್ಲಿ ನಡೆದ [illegible] ಮುಸ್ಲಿಮ್ [illegible] ಜರ್ನಲ್'' ಹೇಳಿದೆ [illegible] ಹೇಳಿದರು

ಶಾಂತಿಸ್ಥಾಪನಾ ಸಮಿತಿಯೊಳಗೆ ಶೌಕತಾಲಿಯವರ ಕ್ರಾಂತಿ!

ಇನ್ನೊಬ್ಬ ಶ್ರೀ [illegible] ಎಂಬವರು 'ಶೌಕತಾಲಿ [illegible] ಹೊರಿಸುವ ಅಪಾದನೆಗಳೂ [illegible] ಸಭೆಯು [illegible] 'ಫ್ರೀ ಪ್ರೆಸ್ ಜರ್ನಲಿ'ನ [illegible] ಪತ್ರಕರ್ತರು ನಡೆಸಿ [illegible] ಅದನ್ನು ನೀವು ನೀವು ನೋಡಿಕೊಳ್ಳಿರಿ [illegible] ಪ್ರಾಯಶ್ಚಿತ್ತ [illegible] ಗಳನ್ನು ಪ್ರಸ್ತಾಪಿಸುವ ಅವಶ್ಯಕತೆಯು ಇಲ್ಲ [illegible] ವುದಿಲ್ಲವೆಂದರು. ಶೌಕತಾಲಿಯವರು [illegible] ಪ್ರಸ್ತಾಪಿಸುತ್ತಾ ಮುಂದೆ ಸಾಗಿ [illegible] ಶೌಕತಾಲಿಯವರನ್ನು ಎಚ್ಚರಿಸುತ್ತಾ [illegible] ಅದೇ ವಿಷಯಗಳನ್ನೆತ್ತಿ ಹೇಳುವುದು [illegible] ಕೇಳಿ ಶೌಕತಾಲಿಯವರು [illegible] ಈ ಸಭೆಯು ಒಂದು ತಮಾಷೆಯಲ್ಲದೆ ಮತ್ತೆ ಬೇರೇನಿಲ್ಲ [illegible] ಮೊದಲಾಗಿ [illegible] ಅಧ್ಯಕ್ಷರ [illegible] ಕೂಡಲೇ 'ಶೌಕತಾಲಿಯವರು [illegible] ಕೋಣೆಯನ್ನು [illegible] ಈ ಸಮಿತಿ [illegible] ಎಲ್ಲವನ್ನು (I [illegible] claim [illegible] for [illegible] and for its proceedings) [illegible] ಎಂದು [illegible] ಹೊರಟರು '

ಅದರ ಮೇಲೆ ಪಟ್ಟಾಭಿ [illegible] ನಡದ [illegible] ಗಳನ್ನು ವಿವರಿಸುತ್ತಾ 'ಕೊಲೆಯಿಂದ [illegible] ಹಿಂದೂಗಳನ್ನು ಮುಸ್ಲಿಮರನ್ನು ಎಂಬ ವಿಷಯವಾಗಿ ನಾವು ಆಲೋಚಿಸಕೂಡದು. ನಾವು ನಮ್ಮ ಪಟ್ಟಣದ ಸನ್ಮಾನವನ್ನು ಸತ್ಕೀರ್ತಿಯನ್ನು ಉಳಿಸಬೇಕು. ಅದಕ್ಕಾಗಿ ಎಲ್ಲರೂ ನೆರವಾಗಬೇಕು'' ಎಂದರು.

* * *

[illegible] ಮಾದಷ್ಟು.

ಕಾಮದ ಗುಟ್ಟು

[illegible] ಮಾದಷ್ಟು.

ಲೇಖಕರು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ (ಕಾರ್ಕಳ ಮುದ್ರಣ)

ಹೊಸ ಪುಸ್ತಕ. ಇಂಥಾ ಪುಸ್ತಕವು ಬೇರೊಂದಿಲ್ಲ.

ಕಾಮತಂತ್ರದಲ್ಲಿ ಹೊಸ ಹೊಸ ಕಲ್ಪನೆಗಳು ದಿನ ದಿನವೂ ಹೆಚ್ಚುತ್ತಿವೆ ತರುಣರ ತಾರುಣ್ಯ ಪ್ರಭಾವದಲ್ಲಿ ಹೊಳೆಯುವ ಎಲ್ಲಾ ಕಾಮುಕಸಮಸ್ಯೆಗಳಿಗೂ ಮನವೊಪ್ಪುವ ಕ್ರಿಯಾಸಿದ್ಧಿಯನ್ನೂ ಸ್ವಾರಸ್ಯವಾಗಿ ತೋರಿಸಿಕೊಡುವ ಅತ್ಯುತ್ತಮ ಗ್ರಂಥ!

ಕಾಮೋಪಭೋಗದ ನ್ಯೂನತೆಗಳಿಗೆಲ್ಲಾ ಔಷಧಿಗಳು ವಿವರವಾಗಿ ಹೇಳಲ್ಪಟ್ಟಿವೆ ಈ ಪುಸ್ತಕವಿದ್ದರೆ—ಎಲ್ಲಾ ಅಂತರಂಗದ ವ್ಯಾಧಿಗಳಿಗೂ ಸ್ವತಃ ಅಂತರಂಗ ಚಿಕಿತ್ಸೆ ಮಾಡಿಕೊಳ್ಳಬಹುದು

ಬೆಲೆ ೧ ರೂ ೪ ಆಣೆ ಮಾತ್ರ. ಅಂಚೆವೆಚ್ಚ ಪ್ರತ್ಯೇಕ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ದೊರೆಯುತ್ತೆ ಬೇಗನೆ ತರಿಸಿಕೊಳ್ಳಿ

ಇತರ ಗ್ರಂಥಗಳು

ಆಹುತಿ (ನಾಟಕ) ರೂ ೧, ಅದರ್ದೇನು (ನಾಟಕ) ೬ ಆಣೆ ಮೋಹನಾಸ್ತ್ರ (ನಾಟಕ) ರೂ ೧ ಉದರ ವೈರಾಗ್ಯ (ಸಚಿತ್ರ ನಾಟಕ)—ರೂ ೧ ವಿವೇಕಾನಂದರ ಕರ್ಮಯೋಗ—ರೂ ೧ ಹೊಸಹುಟ್ಟು (ಸಚಿತ್ರ)—ರೂ ೧। ಸಾಹಿತ್ಯದ ಗುಟ್ಟು—೬ ಆಣೆ ತ್ರಿಶಂಕುಸ್ವರ್ಗ (ನಾಟಕ)—೮ ಆಣೆ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯ ಶ್ರೇಷ್ಠ ಸಾಧುವರ್ಯ ನಾಗಮಹಾಶಯರ ಜೀವನಕಥೆ—ರೂ ೧

ನವಜೀವನ ಗ್ರಂಥಭಂಡಾರದಿಂದ ಹೊರಟಿರುವ (೧) ಆಕಾಶದೊಳಗಿನ ಅದ್ಭುತ ಚಮತ್ಕಾರಗಳು ೧—೨—೦ (೨) ಧರ್ಮ ಸಂಭವ—೧—೮—೦ (೩) ಹಿಂದೂಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು ೧—೨—೦ ಕನ್ನಡಪುಸ್ತಕಗಳೆಲ್ಲಾ ದೊರೆಯುತ್ತವೆ

ವಿ ಜಿ. ಟಿ ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ



ಮಾತೃಗಳೇ,
ನಿಮ್ಮ ಮಗುವನ್ನು ಪ್ರಾಕೃತಿಕವಾಗಿ ಪೋಷಿಸಿರಿ

ತನ್ನ ಮಗುವನ್ನು ಪೋಷಿಸಬೇಕೆಂಬುದು ಪ್ರತಿಯೊಬ್ಬ ತಾಯಿಯಲ್ಲಿ ಪ್ರಕೃತಿಸಿದ್ಧವಾಗಿ ಇರುವ ಆಶೆ ಆದರೆ ಪ್ರಾಮುಖ್ಯವಾದ ಈ ಸೇವೆಯನ್ನು ಮಾಡಲು ಹೆಚ್ಚಿನವರು ಶಕ್ತಿ ಮತ್ತು ಸಾಮರ್ಥ್ಯವುಳ್ಳವರಾಗಿರುವುದಿಲ್ಲ ಎದೆ ಹಾಲನ್ನು ಕೊಡಲಾಗದಿದ್ದರೆ ಅದರಿಂದ ತಾಯಿಗೆ ವ್ಯಸನವೇ ಮಗುವಿಗೂ ಕಷ್ಟವೇ ಏಕೆಂದರೆ ಮಗುವಿಗೆ ಎದೆ ಹಾಲು ನಿಸರ್ಗಸಿದ್ಧವಾದ ಒಂದು ಆಹಾರವಾಗಿರುತ್ತದೆ ಅದಕ್ಕೆ ಸರಿಯಾದ ಬೇರಾವ ಉತ್ತಮ ಆಹಾರವೂ ಸಿಗದು

ಓವಲ್‌ಟಿನ್ ನ ಸಹಾಯದಿಂದ ಪ್ರತಿಯೊಬ್ಬ ತಾಯಿಯೂ ಅವಳ ಮಗುವನ್ನು ಸಂರಕ್ಷಿಸಬಹುದು ಮಗುವು ಹುಟ್ಟುವ ಕೆಲವು ತಿಂಗಳುಗಳ ಮೊದಲು ಅದನ್ನು ತೆಗೆದುಕೊಂಡರೆ ಎದೆಯಲ್ಲಿ ಬೇಕಾದಷ್ಟು ಹಾಲು ಉತ್ಪನ್ನವಾಗುತ್ತದೆ ಅಲ್ಲದೆ ಮಗು ಹೆತ್ತಾದ ಮೇಲೆ ನಿಶ್ಶಕ್ತತೆಯನ್ನು ಹೋಗಲಾಡಿಸಿ ಶಕ್ತಿವಂತಳಾಗಬಹುದು

ಓವಲ್‌ಟಿನ್ನನ್ನು ಪ್ರಕೃತಿ ಸಂಬಂಧವಾದ ಅತ್ಯುತ್ತಮ ಟೋನಿಕ್ ಆಹಾರಗಳಿಂದಲೇ ಸಿದ್ಧಪಡಿಸಲಾಗಿದೆ ಅದು ಇಡೀ ದೇಹವನ್ನು ಖಂಡಿತವಾಗಿಯೂ ತ್ವರೆಯಾಗಿಯೂ ರಕ್ಷಿಸಬಹುದು. ಅದು ಎಲ್ಲಾ ತಾಯಂದಿರುಗಳೂ ಅನುಭೋಗಿಸುವ ಆಹಾರವು ಅದರ ರುಚಿಕರ ಪರಿಮಳವು ಮನಾಹ್ಲಾದವನ್ನುಂಟು ಮಾಡುವಂತಹದ್ದಿದೆ

ಉತ್ತಮವಾದ ಓವಲ್ಟಿನ್ನಿಗೆ ಸಂಸಮಾನವಾದ ಇನ್ನೊಂದು ಪಾನೀಯವಿಲ್ಲ ಸಪ್ತಮಾಣದಿಂದ ತಯಾರಿಸಲ್ಪಡದ ಎಲ್ಲಾ ಮಿಶ್ರಣಗಳನ್ನು ತಿರಸ್ಕರಿಸಿರಿ

ಅತ್ಯುತ್ತಮ — ಅತ್ಯಮೋಘ — ಕರಸ್ಪರ್ಶಿತವಾಗದ್ದು

OVALTINE
TONIC FOOD BEVERAGE

ತಾಯಂದಿರು ಶಿಶುಗಳನ್ನು ಎದೆ ಹಾಲಿನಿಂದಲೇ ಸಲಹಲು ಸಹಕಾರಿಯಾಗುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜಂಟರು — ಜೇಮ್ಸ್ ರೈಟ್ ಲಿಮಿಟೆಡ್ ಕಲ್ಕತ್ತಾ ಮತ್ತು ಮುಂಬಾಯಿ ಮದ್ರಾಸು ರಂಗೂನುಗಳಲ್ಲಿ

ನಿಮ್ಮ 'ಓವಲ್‌ಟಿನ್' ನೊಡನೆ "ಓವಲ್ಟಿನ್" ರೊಟ್ಟಿಗಳನ್ನೂ ತಿನ್ನಿರಿ ಇವುಗಳು ಬಿಸ್ಕತ್ತುಗಳಿಗಿಂತಲೂ ಉತ್ತಮ ಇವುಗಳಲ್ಲಿ ಒಳ್ಳೇ, ಸುಲಭ ಜೀರ್ಣಕರ ಆಹಾರವು ಇದೆ 'ಮಕ್ಕಳಿಗೆ ಹಲ್ಲು' ಮೂಡುವಾಗ ಅವುಗಳನ್ನು ಬಲಪಡಿಸಲಿಕ್ಕೆ ಇವುಗಳನ್ನು ಕೊಡಬಹುದು ಇವುಗಳು ಶಿಶುವನ್ನು ಸಂತೋಷದಿಂದಿರಿಸುತ್ತವೆ

OV/119

[illegible]

SWADESHI MEANS PROVIDING
FOOD FOR STARVING MILLIONS.
DEAL IN INDIAN GOODS AND K[illegible]
INDIAN MONEY IN INDIA

M V KAMATH,
SWADESHI PRACHARAK SANGHA,
Kasargod, S. K

ದಿ ಖಾದಿ ವರ್ಕ್ಸ್ ಮತ್ತು
ಸ್ವದೇಶಿ ಸ್ಟೋರ್ಸ್ ಲಿಮಿಟೆಡ್

(REGISTERED UNDER COMPANY'S ACT 1913

ಕಾಸರಗೋಡು, ದ ಕನ್ನಡ

ಮೂಲಧನ ರೂಪಾಯಿ 50 000—0—0

ಪಾಲು 1 ಕ್ಕೆ ರೂಪಾಯಿ 10—0—0 ರಂತೆ

5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸ ಮಂತೆ ಸಹಾಯಕರಾಗಿ, ಸ್ವದೇಶಿ ಸಾಮಾನಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯು ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿದ ಒಂದು ಕಂಪೆನಿಯು ಇಲ್ಲವೆಂದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿಗಳೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದಿರಲಿಕ್ಕಿಲ್ಲ ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯ ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯ ಕ್ಲಾಸುಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನಗಳು ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜಿಂಗ ಡ್ಯಾರೆಕ್ಟರ್

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್
ಕಾಸರಗೋಡು, ದ ಕ

++ ++

'ಸ್ವದೇಶಾಭಿಮಾನಿ' ಪತ್ರಿಕೆಗೆ
ಚಂದಾದಾರರಾಗಿರಿ.

ಕಲಿಯುವಿಕೆಗೂ ಕಲಿಸುವಿಕೆಗೂ ಮನೋರಂಜಕವಾದ

ಪದ್ಯ ಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

(ಶ್ರೀ ಜಿ ಎಸ್ ಲಕ್ಷ್ಮಣ ಪೈ ವಿರಚಿತ)

ಕ್ರಯ ೦—೩—೬

ಮಕ್ಕಳಿಗೆ ಬೇಕಾಗುವ ಕಥೆಗಳನ್ನೂ ನೀತಿಸಾರಗಳನ್ನೂ ಲಲಿತವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಒಳಗೊಂಡ ಕವಿತಾಗ್ರಂಥ!

ಮದರಾಸು ಮುಂಬಾಯಿ ಸರಕಾರದವರು ಇದನ್ನು ಪಠ್ಯಪುಸ್ತಕವಾಗಿ ಮಂಜೂರು ಮಾಡಿದ್ದಾರೆ, ಮೈಸೂರು ಸರಕಾರದವರು ಲೈಬ್ರೆರಿಗಳ ಉಪಯೋಗಕ್ಕೆ ಮಂಜೂರುಮಾಡಿದ್ದಾರೆ

ಹೆಚ್ಚಿನ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—

ಹರಿಹರ ಛಾಪಖಾನೆ, ಪುತ್ತೂರು (ದ. ಕನ್ನಡ)
ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು,
ನೇಶನಲ್ ಕೆನರಾ ನ್ಯೂಸ್ ಏಜನ್ಸಿ,
ನಂ ಫಿರೋಜಶಾ ಮೇಥಾ ರೋಡ್, ಮುಂಬಾಯಿ

ಮಕ್ಕಳ ಕೂಟದ ಪ್ರಥಮ ಸಮ್ಮೇಲನ,

ಉಪ್ಪಿನಂಗಡಿ

ಲೇಖಕರು—ಶ್ರೀಯುತ ಶಿವರಾಮ ಕಾರಂತರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ತಾ ೨೫ನೇ ಬುಧವಾರ—ಬೆಳಿಗ್ಗೆ ನಾಟಕಗಳು ಮಕ್ಕಳು ತಾವೇ ಆರಿಸಿದ ಕಥೆಗಳನ್ನು ಸಂಭಾಷಣೆಯಿಲ್ಲದೆ ಸಭೂಷಿತರಾಗಿ, ದೃಶ್ಯಾವಳಿಗಳನ್ನು ಸಿದ್ಧಪಡಿಸಿಕೊಂಡು ಆಡುವುದಿತ್ತು. ಮಕ್ಕಳ ಕಲ್ಪನಾಶಕ್ತಿಯನ್ನೂ ಅದಕ್ಕೆ ಒಪ್ಪುವ ವಾಗ್ಬಲವನ್ನೂ ಕೂಡಿಸಲು ಮಾಡಿದ ಯತ್ನವಿದು. ಬೆಳಿಗ್ಗೆ—'ಇಲಿಗಳ ಥಕಥೈ' [illegible] ಸಂಬಳ, ಪಂಚವಟಿ [illegible] ಮೂರು ಕಥೆಗಳನ್ನು ಮಕ್ಕಳು ಅಭಿನಯಿಸಿ ತೋರಿಸಿದರು. ಅವರ ಅಭಿನಯವಾಗಲಿ, ಮಾತುಗಳಾಗಲಿ ತೀರ ಸ್ವತಂತ್ರವಾಗಿದ್ದುವು. ಎಷ್ಟೋ ಬಾರಿ ಅವರು ಆಡುತ್ತಿದ್ದ ಮಾತುಗಳೂ, ಕಂಠಪಾಠಮಾಡಿ ಆಡಬಹುದಾದುದಕ್ಕಿಂತಲೂ ಚೆನ್ನಾಗಿತ್ತು.

ಮಧ್ಯಾಹ್ನ—ಇದೇ ಕಾರ್ಯಕ್ರಮವು ೩ ತಾಸುಗಳ ತನಕ ನಡೆಯಿತು. ವಾಲಿಸುಗ್ರೀವ, ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು—ಎಂಬಿವೇ ರೂಪಕಗಳಾಗಿದ್ದುವು. ಆದರೆ ಈ ಬಾರಿ ಮಕ್ಕಳಲ್ಲಿ ಒಬ್ಬಿಬ್ಬರು, ಈಗಿನ ವ್ಯವಸಾಯೀ ರಂಗಭೂಮಿಯವರನ್ನು ಅನುಕರಿಸಿ ನಡುನಡುವೆ ಅನಾವಶ್ಯಕವಾದ ಹಾಸ್ಯವನ್ನು ತಂದು ಹಾಕಿ ಕಥಾಬಂಧವನ್ನೂ ಸ್ವಾರಸ್ಯವನ್ನೂ ಕೆಡಿಸಿದರು. ಈ ಮಟ್ಟಿಗೆ ಅವರನ್ನು ಎಚ್ಚರಿಸಿದಲ್ಲಿ ಈ ರೀತಿಯ ಸ್ವತಂತ್ರ ಸ್ಫೂರ್ತಿಗಳು ಮಕ್ಕಳ ಕ್ರಿಯಾಶಕ್ತಿಯ ಬೆಳವಣಿಗೆಗೆ ತೀರ ಸಹಾಯವಾಗಬಹುದು.

೫ ಘಂಟೆಯಿಂದ ೭ಕ್ಕೆ—ಪರಿಷತ್ತಿನ ಸಮಾಪ್ತಿ ಅಧಿವೇಶನ. ಈ ಕಾಲದಲ್ಲಿ, ಪರಿಷತ್ತಿಗೆ ಬಂದ ಉಪಾಧ್ಯಾಯ ವರ್ಗದವರಿಂದ ಕೇಳಿ ಬರಮಾಡಿಕೊಂಡ ಪರಿಷತ್ತಿನ ಟೀಕೆ ಟಿಪ್ಪಣಿಗಳು ಓದಿ ಹೇಳಲ್ಪಟ್ಟವು. ಮುಖ್ಯವಾಗಿ ಬಂದ ಸೂಚನೆಗಳು ಪರಿಷತ್ತಿನ ಇತರ ವ್ಯವಸ್ಥೆಗಳನ್ನು ಕುರಿತಾಗಿದ್ದುವಲ್ಲದೆ, ನಿಜಕಾರ್ಯಕ್ಕೆ ಸಂಬಂಧಿಸಿದ್ದಿಲ್ಲ. ಮುಖ್ಯವಾಗಿ ಉಪಾಧ್ಯಾಯರಲ್ಲಿ ಕೆಲವರು—ಈ ರೀತಿಯ ಸ್ವಾತಂತ್ರ್ಯವನ್ನು ಬಾಲರಿಗೆ ಕೊಟ್ಟರೆ ಅನರ್ಥಕಾರಿಯಾಗಲಾರದೇ—ಎಂಬ ಸಂಶಯದಲ್ಲಿದ್ದಂತೆ ಕಂಡಿತು.

ಉಪಾಧ್ಯಾಯರ ಟೀಕೆಗಳಾದ ಬಳಿಕ ನಂತರ ಮಕ್ಕಳನ್ನು ಅವರವರ ಅಭಿಮತ ಸೂಚನೆಗಾಗಿ ಕರೆದೆವು. ಕೆಲವೊಂದು ಬಾಲಕರು ಧೈರ್ಯದಿಂದ ಮುಂದೆಬಂದರು. ಒಂದವರಲ್ಲಿ [illegible] ಇದ್ದರು. ಅವರೂ ಸಭಾ ಕಂಪನವಿಲ್ಲದೆ ತಮ್ಮ ಅಭಿಪ್ರಾಯವನ್ನು ಕೊಟ್ಟರು. ಕೆಲವರು ಸ್ನಾನವನ್ನು ಕುರಿತು ಮಾತನಾಡಿದರು. ಕೆಲವರು ಈ ಸಮಯದಲ್ಲಿ ವಾಚನಾನುಕೂಲತೆಯನ್ನು ಮಾಡಿಕೊಡಬೇಕೆಂದು ಕೇಳಿದರು. ಕೆಲವರು ಭೋಜನದ ವ್ಯವಸ್ಥೆಯನ್ನು ಖಂಡಿಸಿದರು, ಇನ್ನು ಕೆಲವರು ಮಂಡಿಸಿದರು. ಮುಖ್ಯವಾಗಿ ಪರಿಷತ್ತಿನ ನಿಜಕಾರ್ಯವನ್ನು ಕುರಿತು ಬಂದ ಮಾತುಗಳಲ್ಲಿ ಇವು ಕೆಲವು ಗಣನೀಯವಾಗಿದ್ದುವು. [illegible] ಈಗ ಇಷ್ಟು [illegible] ತಿಳಿದೆವು. ಇನ್ನು ಮನೆಗೆ ಹೋದ ಬಳಿಕ [illegible] ಇಲ್ಲಿಂದ ಕಾಲು ಕೀಳುವುದೇ ಕಷ್ಟವಾಗಿದೆ. 'ಇಲ್ಲಿ ನಿಜಕ್ಕೂ [illegible] ಭೇದ, ವಯೋಭೇದವನ್ನು ಮರೆತು 'ನಾವೆಲ್ಲರೂ ಬಂದೆವು.' ಹೊಸ ಗೆಳೆಯರು ದೊರೆತರು. ಒಬ್ಬ ಚಿಕ್ಕ ಹುಡುಗನ ಈ ಮಾತಂತೂ ತೀರ ರಸವತ್ತಾಗಿತ್ತು—'ಇಲ್ಲಿಗೆ ಬಂದಂದಿನಿಂದ ನನಗೆ ಹುಚ್ಚು ಹಿಡಿದಿದೆ' ಅಂತೂ—ಈ ಏಳು ದಿನಗಳು ಅವರ ಜೀವನದ ಹಾಳೆಯಲ್ಲಿ ಅಳಿಯಲಾರದ ಒಂದು ಗುರುತನ್ನುಂಟುಮಾಡಿದೆ ಎಂಬುದು ಎಲ್ಲರ ಅನುಭವವಾಗಿತ್ತು.

ನೆರೆದವರಲ್ಲಿ ಅತಿಥಿಗಳಾಗಿ ಬಂದ ಶ್ರೀ ಹೊಯಿಸಳ—ದಾವಣಗೇರಿ, ಶ್ರೀ| ವೀರಭದ್ರಪ್ಪ (ದಾವಣಗೇರಿ ವಿದ್ಯಾರ್ಥಿ) ಶ್ರೀ| ಆನಂದಕಂದರು ತಮ್ಮ ಆನಂದವನ್ನೂ ಅಭಿಪ್ರಾಯವನ್ನೂ ಪ್ರಕಟಿಸಿದರು. ಎಲ್ಲ ಮುಗಿಯಲು, ಸಭೆಯು ಯಶಸ್ಸಿಗೆ ತನು ಮನ ಧನ ಸತ್ಕರವಾದ ಸಹಾಯವನ್ನು ಮಾಡಿದವರಿಗೆ ಪರಿಷತ್ತಿನ ವ್ಯವಸ್ಥಾಪಕರು ಧನ್ಯವಾದಗಳನ್ನು ಅರ್ಪಿಸಿದರು.

ರಾತ್ರಿ—ದೀಪೋತ್ಸವ ಶಾಲೆಯ ಆಟದ ಬಯಲಲ್ಲಿ ಗೋಪುರಾಕೃತಿಯ ಒಂದು ಮಂದಿರವನ್ನು ಬಿದಿರಿನಿಂದ ರಚಿಸಿ ಅದನ್ನು ದೀಪಮಾಲಿಕೆಗಳಿಂದ ಅಲಂಕರಿಸಿದರು. ಅದರ ಸುತ್ತು ಬಾಲಕರ ಆರು ಮಂಡಲದವರೂ, ಒಂದು ಕಡೆ ನೆರೆದ ಉಪಾಧ್ಯಾಯರು, ಇನ್ನೊತ್ತಟ್ಟು ಊರಿನ ಬಾಲಕಿಯರು—ಬಂದು ಸೇರಿದ ಜಾತ್ರೆಯ ಜನಸಂದಣಿಯನ್ನು ತಮ್ಮ ವಿನೋದ, ಯಕ್ಷಗಾನ, ನರ್ತನ, ಮ್ಯಾಜಿಕ್, ಡೊಂಬರು ಮೊದಲಾದ ಆಟಗಳಿಂದ ತಮ್ಮ ತಮ್ಮ ಕಡೆಗೆ ಆಕರ್ಷಿಸಲು ಯತ್ನಿಸಿದರು. ಹೀಗೆ ನೆರೆದವರನ್ನು, ಈ ಎಂಟು ಮಂಡಲದವರು ತಮ್ಮ ತಮ್ಮ ಕಡೆಗೆ ಬರಮಾಡಿದ ಸ್ಪರ್ಧೆಯು ತೀರ ಚಿತ್ತಾಕರ್ಷವಾಗಿತ್ತು. ಉತ್ಸವಕ್ಕೆ ಸಾವಿರ ಜನರಷ್ಟು ಪ್ರೇಕ್ಷಕರು ಕಲೆತಿದ್ದರು. ಬಂದ ಮಹಿಳೆಯರಾದರೂ ೧೦೦—೨೦೦ಕ್ಕೆ ಕಡಿಮೆ ಇದ್ದಿರಲಿಲ್ಲ. ರಾತ್ರಿ ೧೦|| ಘಂಟೆಗೆ ಉತ್ಸವವು ಮುಗಿದು ರಾಷ್ಟ್ರಗೀತೆಗಳನ್ನು ಹಾಡಿ ಮಕ್ಕಳ ಕೂಟವು ತನ್ನ ಏಳು ದಿನದ ಜಾತ್ರೆಯನ್ನು ಉತ್ಸಾಹದಿಂದ ನೆರವೇರಿಸಿತು.

೩

ನಿತ್ಯ ಕೆಲಸಗಳು ಇಲ್ಲಿಯ ತನಕ ಪರಿಷತ್ತಿನ ವಿಶೇಷ ವಾರ್ತೆಯನ್ನು ಕೊಟ್ಟ ಹಾಗಾಯಿತು. ಈಗ ನಮ್ಮ ಬಾಲಕರು ಏಳು ದಿನಗಳಲ್ಲಿ ಅನುಸರಿಸುತ್ತಿದ್ದ ನಿತ್ಯ ನೇಮಗಳನ್ನು [illegible]. ಬಾಲಕರು ಪ್ರತಿ ದಿನ ಬೆಳಿಗ್ಗೆ ೫ ಘಂಟೆಗೆ ಎದ್ದು ನದೀ ತೀರಕ್ಕೆ ಹೋಗುತ್ತಿದ್ದರು. ಅಲ್ಲಿ ಮುಖಮಜ್ಜನಾದಿಗಳನ್ನು ಮುಗಿಸಿ ೬ ಘಂಟೆಗೆ ಮರಳ ದಂಡೆಯ ಮೇಲೆ ಪ್ರಾರ್ಥನೆಗೆ ಕುಳಿತುಕೊಳ್ಳುತ್ತಿದ್ದರು. ಶಾಂತರಾಗಿ ಕುಳಿತು, ಪುರಂದರ ಸೂರ ತುಲಸಿದಾಸ ಮೊದಲಾದವರ ಹಾಡನ್ನೋ [illegible] ಭಕ್ತಿಸರವಾದ ಮಾತುಗಳನ್ನೋ ಕೇಳಿ ಬಳಿಕ ಸಾಲಾಗಿ ನಗರ ಭಜನೆಗೆ ಹೊರಡುತ್ತಿದ್ದರು. ನಗರ ಭಜನೆಯನ್ನು ಮುಗಿಸಿ ಬರುವಾಗ ಬೆಳಗಿನ ೭ ಘಂಟೆಯಾಗುತ್ತಿತ್ತು. ೭ ಘಂಟೆಗೆ ಮಕ್ಕಳ ಸಲುವಾಗಿ ಗಂಜಿ ಊಟದ ವ್ಯವಸ್ಥೆಯೂ ಹಿರಿಯರಿಗೆ ಫಲಾಹಾರದ ವ್ಯವಸ್ಥೆಯೂ ಮಾಡಲ್ಪಟ್ಟಿತ್ತು.

ಬೆಳಿಗ್ಗೆ ೭ ಘಂಟೆಯಿಂದ ೧೦ರ ತನಕ ಪರಿಷತ್ತಿನ ಕೆಲಸಗಳು. ತರುವಾಯ ಬಾಲಕರು ನದಿ ಸ್ನಾನಕ್ಕೆ ಹೋಗುತ್ತಿದ್ದರು. ಕುಮಾರಧಾರಾ ನೇತ್ರಾವತಿ ನದಿಗಳ ಈ ಸಂಗಮಸ್ಥಾನವು ಮಕ್ಕಳ ಮನಸ್ಸನ್ನು ಬಲವಾಗಿ ಆಕರ್ಷಿಸುವಂತ ಕಾಣುವುದು. ಮಕ್ಕಳ ನಲಿವಿಗೆ ಈ ಆಳವಿಲ್ಲದ ನದಿಯು ಅತಿ ಹೆಚ್ಚಿನ ಸಹಾಯ ಮಾಡಿತ್ತು. [illegible] ನದಿಯಿಂದ ಸ್ನಾನ ಮಾಡಿ ಒಂದರೆಗಳಿಗೆ ಬಂದ ಆಮಂತ್ರಿತ ಅತಿಥಿಗಳು ಮಕ್ಕಳ ಕೂಟಕ್ಕೆ ಬರುವರು. ಅವರೊಳಗೆ ಸಂತಸದ ಮಾತುಕಥೆಗಳು ನಡೆಯುವುವು.

ಮಧ್ಯಾಹ್ನ ೧೨ ಘಂಟೆಗೆ ಊಟವಾಯಿತೆಂದರೆ ಬಾಲಕರು ೨ ಘಂಟೆಯ ತನಕ ಕಾಲವನ್ನು ತಮಗಿಷ್ಟಬಂದ ರೀತಿಯಲ್ಲಿ ಕಳೆಯುವರು. ೨ ಘಂಟೆಯಿಂದ ೪ ಘಂಟೆಯ ತನಕ ಕೂಟದ ಕೆಲಸವಾಗುವುದು. ೪ ಘಂಟೆಗೆ ಸಂಜೆಯ ಉಪಹಾರಗಳಿಂದ ೬ರ ತನಕ ಮಕ್ಕಳು ಹಳ್ಳಿಯ ಆಟಗಳನ್ನಾಡುವರು. ಈ ಆಟಗಳನ್ನು ಅವರಿಂದ ಆಡಿಸುವ ಸಲುವಾಗಿ ವಿಶೇಷ ವ್ಯವಸ್ಥೆಯನ್ನು ಮಾಡಲು ನಿಶ್ಚಯವಿತ್ತಾದರೂ, ಅದೇ ಸಮಯ ಹಿರಿಯರಿಗೆ ಇತರ ಕಾರ್ಯಕ್ರಮಗಳಿದ್ದುದರಿಂದ ಹುಡುಗರನ್ನು ಅವರ ಪಾಲಿಗೇ ಬಿಟ್ಟು ಬಿಡಬೇಕಾಯಿತು. ಅವರು ಆ ಕಾಲವನ್ನು ಆಟದಲ್ಲಿ ವಿಶೇಷವಾಗಿ ಕಳೆದಂತಿಲ್ಲ.

ಸಂಜೆ ೬|| ಘಂಟೆಗೆ, ಪ್ರಾರ್ಥನೆಗೆ ನದಿ ದಂಡೆಯಲ್ಲಾಗಲಿ ಶಾಲೆಯ ಬಯಲಿನಲ್ಲಾಗಲಿ ಕಳೆಯುವರು. ತುಸು ಹೊತ್ತು ಪ್ರಾರ್ಥನೆಯಾಗಿ ಮುಗಿಯಲು ಅವರು ೭ ಘಂಟೆಗೆ ಸರಿಯಾಗಿ ರಾತ್ರಿ ಊಟಕ್ಕೆ ಅಣಿಯಾಗುವರು. ೮ ಘಂಟೆಯಿಂದ ಸಾವಕಾಶವಾಗಿ ೧೦ ಘಂಟೆಯ ತನಕವೂ ವಿನೋದ ಮೊದಲಾದುವುಗಳಿರುವುವು. ಇವುಗಳಲ್ಲಿ ಹುಡುಗರು ನೆರೆಯಲೇ ಬೇಕೆಂಬ ಖಡ್ಡಾಯವಿದ್ದಿಲ್ಲವಾದರೂ, ಕೇವಲ ಅವರ ಮನಸ್ಸಂತೋಷಕ್ಕಾಗಿ ಏರ್ಪಡಿಸಿರುವಾದುದರಿಂದ ನಿದ್ದೆ ತೂಗುವ ತನಕ ಅವರಾದರೂ ಅವುಗಳ ಉಪಯೋಗವನ್ನು ಪಡೆಯದಿರುತ್ತಿದ್ದಿಲ್ಲ. ಈ ವಿನೋದಗಳು—ಮಾಯಾ ಲಾಂದ್ರ, ಲಾವಣಿ, ಚಲಚ್ಚಿತ್ರ ಗಾಯನ ಮೊದಲಾದುವುಗಳ ಸ್ವರೂಪದಲ್ಲಿರುತ್ತಿದ್ದುದರಿಂದ ಊರಿನ ಹಿರಿಯರು ಹೆಂಗಸರು ಮಕ್ಕಳೆನ್ನದೆ ನೂರಾರು ಜನರು ತಪ್ಪದೆ ಸೇರುತ್ತಿದ್ದರು. ಕೊನೆಯ ಎರಡು ಮೂರು ದಿವಸಗಳಲ್ಲಿ ಜನಸಂದಣಿಯು ೪೦೦ [illegible] ಕ್ಕೆ ನೆರೆದಿತ್ತು.

ಮಕ್ಕಳಿಗಾಗಿ ಇತರ ಅನುಕೂಲತೆಗಳು ಮಕ್ಕಳ ಕೂಟದ ಕಾಲವನ್ನಲ್ಲದೆ, ಉಳಿದ ಸಮಯವನ್ನು ಕಳೆಯಲು ಇತರ ವ್ಯವಸ್ಥೆಗಳೂ ಮಾಡಲ್ಪಟ್ಟಿದ್ದುವು. ಬಂದಿರುವ ಅತಿಥಿಗಳೊಡನೆ ಅವರ ಪರಿಚಯವನ್ನು ಬೆಳೆಸುವ ಅವಕಾಶವನ್ನು ದೊರಕಿಸಿ ಕೊಟ್ಟಿದ್ದೆವು. ಅವರಿಗೆ ಓದುವುದಕ್ಕಾದರೆ ಓದಲು ಇಲ್ಲವಾದರೆ ಚಿತ್ರಗಳನ್ನು ಕಂಡು ಆನಂದಿಸಲು—'ಬುಕ್ ಆಫ್ ನಾಲೆಜ್' ಗ್ರಂಥದ ೧೨ ಭಾಗಗಳೂ, 'ವಂಡರ್ಸ್ ಆಫ್ ಎನಿಮಲ್ ಲೈಫ್' ಎಂಬ ಗ್ರಂಥದ ನಾಲ್ಕು ಭಾಗಗಳೂ ಒದಗಿಸಲ್ಪಟ್ಟಿದ್ದುವು. ಅದರಲ್ಲಿ ಕೊನೆಯ ಗ್ರಂಥವು ಪಶುಪ್ರಾಣಿಗಳ ಚಿತ್ರದಿಂದಲೇ ತುಂಬಿದ್ದುದರಿಂದ ಯಾವಾಗಲೂ ಅದು ಮಕ್ಕಳ ಕೈಗಳಲ್ಲಿ ನಲಿಯುತ್ತಿತ್ತು. ಸಾಹಿತ್ಯ ಸಂಬಂಧದ ಇತರ ಗ್ರಂಥಗಳನ್ನು ಒದಗಿಸಿ ಕೊಡುವುದು ಸಾಧ್ಯವಿತ್ತು. ಆದರೆ, ಅವರು ಈ ಸಮಯದಲ್ಲಿ ಹೆಚ್ಚಿನ ಮಾನಸಿಕ ಪರಿಶ್ರಮ ಪಡುವುದು ಬೇಡವೆಂದು ಹೀಗೆ ಮಾಡಿದೆವು. ಇನ್ನು ಅವರ ವಿರಾಮಕಾಲವು ಹರುಷದಲ್ಲಿ ಸಾಗಲು ಶ್ರೀಮಾನ್ ರಮಾನಂದರಾಯರ ಕೃಪೆಯಿಂದ ಗ್ರಾಮಫೋನ್, ರೇಡಿಯೋ—ಸಲಕರಣೆಯನ್ನು ಒದಗಿಸಿಕೊಟ್ಟಿದ್ದೆವು. ವಾತಾವರಣದ ತೊಡಕಿನಿಂದ ರೇಡಿಯೋ—ಯಾವಾಗಲೂ ಚೆನ್ನಾಗಿ ಕೆಲಸಮಾಡುತ್ತಿದ್ದಿಲ್ಲವಾದರೂ, ಗ್ರಾಮಫೋನ್ ಬಿಡುವಿಲ್ಲದೆ ಬಾಲಕರಿಗಾಗಿ ದಣಿಯುತಿತ್ತು.

ನಮ್ಮ ಅತಿಥಿಗಳ

ಮಕ್ಕಳ ಪರಿಷತ್ತಾದುದರಿಂದ ಉಪಾಧ್ಯಾಯ ವರ್ಗದವರು ಕೂಡುವರೆಂದು ನಮ್ಮ ನಂಬಿಕೆಯಾಗಿತ್ತು. ಸಾಧಾರಣ ೬೦ ೭೦ ಮಂದಿ ಉಪಾಧ್ಯಾಯ ವರ್ಗದವರು ಬಂದು ಹೋಗಿದ್ದರು. ಅವರಲ್ಲಿ ಸಾಧಾರಣ ೨೦ಕ್ಕೆ ಮೇಲ್ಪಟ್ಟು ಏಳು ದಿನವೂ ಅವರೊಡನೆ ವಾಸಮಾಡಿಕೊಂಡಿದ್ದರು. ಈ ಸಮಯದಲ್ಲೇ ನವವಿಧಾನದ ಶಿಕ್ಷಣ [illegible] ಅವರಿಗೆ [illegible] ವನ್ನುಂಟು ಮಾಡಬೇಕೆಂದು ನಾವು ಹೊರಗಿನಿಂದ ಉಪನ್ಯಾಸಕರನ್ನು ಬರಮಾಡಿದೆವು. ಈ ಅತಿಥಿಗಳ [illegible] ಪೂರ್ಣವಾಗಿ [illegible] ಶ್ರೀ ಕೆ ಎಸ್ ಆಚಾರ್ಯ — ಶ್ರೀ ಹೊಯಿಸಳ [illegible] ಆನಂದಕಂದ ಶ್ರೀ [illegible] ಉಪಾಧ್ಯಾಯರಿಗೆ [illegible] ಉಪನ್ಯಾಸವನ್ನು ಕೊಟ್ಟರು. ಈ ಕಾಲದಲ್ಲಿ [illegible] ನೆರೆದ ಬಾಲಕರೆಲ್ಲ [illegible] ಹೆಚ್ಚಾದುದು [illegible] ಉಪನ್ಯಾಸ [illegible]

ಉಪಸಂಹಾರ

ಈ ಕೂಟದ ಏಳು ದಿವಸಗಳ ಕೆಲಸ [illegible] ನಮ್ಮ ಅಭಿಪ್ರಾಯವನ್ನಿಲ್ಲಿ ಕೊಡುವೆವು.

ಈ ಕೂಟವು ಪ್ರಥಮ [illegible] ಹಲವು ಬಾಲರಲ್ಲಿ ಉಂಟುಮಾಡಿದ [illegible] ಇಂಥ ಕೂಟಗಳ [illegible] ಧ್ಯೇಯವನ್ನು [illegible] ಧೈರ್ಯವಿಲ್ಲ ಮಾತ್ರವಲ್ಲ [illegible] ಮುಂದೆ ಸಾಗಿದೆ ಎಂಬುದು ನಿಶ್ಚಯ. ಈ ಕೂಟವು ನಮ್ಮಲ್ಲಿ ಉಂಟುಮಾಡಿದ ನವಭಾವನೆಗಳು ಒಮ್ಮೆಗೇ ಅಳಿದು ಹೋಗಲಾರವು. ಹೆಚ್ಚಿನ ಪರಿಶ್ರಮದಿಂದ ಇದೇ ಹಾದಿಯಲ್ಲಿ ಮುಂದರಿದಲ್ಲಿ ನಮ್ಮ ಬಗೆ ಉತ್ಸಾಹಗಳು ಎಂದೂ ವ್ಯರ್ಥವಾಗಲಾರವೆಂಬುದ ನಮ್ಮ ದೃಢವಾದ ಅಭಿಪ್ರಾಯ.

ಈ ಪರಿಷತ್ತಿನ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ನಮ್ಮ ಧನ್ಯವಾದಗಳು. ಇನ್ನು ಮುಂದಾದರೂ ನಮಗೆ ಅವರು ಇದೇ ರೀತಿಯ ಬೆಂಬಲವನ್ನು ಕೊಡುವರೆಂದೇ ನಮ್ಮ ಭರವಸೆ.

ಸಂಪೂರ್ಣ

* * *

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೮೭ರಲ್ಲಿ ಸ್ಥಾಪಿಸಲ್ಪಟ್ಟಿದ್ದು.)

ಗುರುಪುರ: — ಇಲ್ಲಿಯೇ ಸಮೀಪದ ಕಂಪಾವರ ಗ್ರಾಮದ ಯತಮೊಗರು ಗುತ್ತಿನ ರಾಮಪ್ಪಯ್ಯನವರ ಅಳಿಯ ಶಾಮ ಸೋಲಂಟಿಯೆಂಬವರು ಇದೇ ತಾ ೬ನೇ ರಾತ್ರಿ ಊಟ ಮಾಡಿ ಮಲಗಿದವರಿಗೆ ಹಾವು ಕಡಿತವಾಗಿ ಎಷ್ಟು ಔಷಧಿ ಮಾಡಿದರೂ ಪ್ರಯೋಜನವಾಗದೆ ಅದೇ ರಾತ್ರಿ ಸುಮಾರು ೩ ಘಂಟೆಗೆ ದೈವಾಧೀನವಾದ [illegible] ಸಂಗತಿಯನ್ನು ತಿಳಿಸುವದಕ್ಕೆ ಬಹು ವಿಷಾದವೆನಿಸುತ್ತದೆ ಇವರು ಸದ್ರಿ ಗ್ರಾಮದ ದೊಡ್ಡ ಜಮೀನ್ದಾರರಾಗಿದ್ದರಲ್ಲದೆ ಒಳ್ಳೇ ಗುಣಧರರೂ ಬಡವರ ಹಿತೈಷಿಯೂ ಆಗಿದ್ದರು ಇವರ ಆತ್ಮಕ್ಕೆ ಶಾಂತಿಯಿರಲಿ

NOTICE.

IN THE COURT OF
THE DISTRICT MUNSIFF OF MANGALORE.

S C No 16 1932

BETWEEN

Kudpi Raghunath Shanbhogue & Co

Plffs

Vs

1 Huvina Madhava Kamthi son of Huvina Anantha Kamthi
2 Achutha Shanbhogue son of Basti Vaman Shanbhogue
Residing at Mangalore town } Defts

Is hereby given that the above suit filed by Plaintiffs against the defendants for recovery of Rs 150-6-10 being the amount due in respect of the dealings with future interest and costs of suit is posted for hearing at 11 A M on 28 6-32 in the above Court The 1st defendant may appear in person or by pleader and contest the same on the said date failing which it will be heard and decided in his absence

Mangalore
4-6-1932

B Vaikunta Baliga,
Vakil for Plaintiffs

ಶಾಲಿವಾಹನಶಕೆ ೧೮೫೯ನೆಯ ಆಂಗೀರಸ ಸಂವರದ ಜ್ಯೇಷ್ಠ ಶು|| ೭ ಶನಿವಾರದಿಂದ ಆಂಗೀರಸ ಸಂವರದ ಜ್ಯೇಷ್ಠ ಶು|| ೧೪ ಶುಕ್ರವಾರದ ವರೆಗಿನ ಪಂಚಾಂಗ

(೧೯೩೭ನೆಯ ವೃಷಭ – ಜ್ಯೇಷ್ಠ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಷ್ಟಕಾಲ	ಸೂರ್ಯನ ಉ	ಅಸ್ತ
11	ಶನಿ	೭	೧೮ ೧	ಪುಬ್ಬಾ	೪೦ ೩	೩೯	6 5	6 5
12	ರವಿ	೮	೧೩ ೧೪	ಉತ್ತರಾ	೩೭ ೪೪	೩೦	6 5	6 55
13	ಸೋಮ	೯	೭ ೪೪	ಹಸ್ತಾ	೩೪ ೩	೩೦	6. 6	6 55
14	ಭೌಮ	೧೦	೧ ೩೨	ಚಿತ್ತಾ	೩೦ ೧೪	೩೨	6 6	6,55
15	ಬುಧ	೧೨	೪೯ ೪೩	ಸ್ವಾತೀ	೨೩ ೩	೧	6, 6	6 55
16	ಗುರು	೧೩	೪೪ ೩	ವಿಶಾಖಾ	೨೨ ೧	೩	6 6	6 56
17	ಶುಕ್ರ	೧೪	೩೮ ೩೧	ಅನುರಾಧ	೧೮ ೩೧	೩	6 6	6 56

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ(ಕಾವು) Maximum ಅಧಿಕವಾದ	Minimum ಕಡಿಮ್ಯಾದ	Rainfall ಮಳೆ ದಿನದ ಮಳೆ	ಜುಮುಲಾ ಮಳೆ
3	88— ɔ	75— 9	1—13	—
4	80— 9	75— 6	0—23	—
5	83— 7	73— 3	0—28	—
6	87— 6	77— 8	0—60	—
7	83— 0	74— 8	1—18	—
8	84— 9	78- 9	0—72	—
9	83— 7	78 – 7	2—81	24-72

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ ಆ	ವರೆಗೆ ರೂ ಆ
ರಾಶಿ ಅಕ್ಕಿ	3 – 12	3 14
ಮುಸ್ಕಿ	4 – 0	4 – 1
ಗುಡ್ಡು	4 – 0	4 – 4
ಸುಗ್ಗಿ	3 – 14	4 –
ಊರ ಅವ್ವಲ್ ಬೆಳ್ತಿಗೆ	4 – 8	5 – 0
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8 – 0	8 – 3
ಎಪ್ಪು ರುಬೆಳ್ತಿಗೆ ಮುಡಿ ೧ಕ್ಕೆ	4 – 10	4 – 12
ಗೋದಿ ಗೋಣಿ ೧ಕ್ಕೆ	9 – 8	12 – 8
ತೊಗರಿ ಗೋಣಿ ೧ಕ್ಕೆ	12 – 0	12 – 8
ಹುರುಳಿ ಗೋಣಿ ೧ಕ್ಕೆ	6 – 2	7 – 4
ಕಡಲೆ ಗೋಣಿ ೧ಕ್ಕೆ	8 – 8	12 – 8
ತೊಗರಿಬೇಳೆ ಗೋಣಿ ೧ಕ್ಕೆ	13 – 8	14 – 0
ಉದ್ದು ಗೋಣಿ ೧ಕ್ಕೆ	11 – 8	13 – 0
ಹೆಸರು ಗೋಣಿ ೧ಕ್ಕೆ	10 – 4	11 –
ಊರು ಬೆಲ್ಲ ಖಂಡಿ ೧ಕ್ಕೆ	3 0	[illegible] – 0
ಉಪ್ಪು ಗೋಣಿ ೧ಕ್ಕೆ	5 – 4	5 – 8
ಜೀರಿ ಖಂಡಿ ೧ಕ್ಕೆ	65	–
ಕೊಬ್ರಿ ಒಂದೇ ಖಂಡಿ ೧ಕ್ಕೆ	23 – 8	24 –
ಎಳ್ಳಿಂಡಿ ಖಂಡಿ ೧ಕ್ಕೆ	26 – 4	26 – 18
ಕೊಬ್ರಿ ಎಣ್ಣೆ ಮಣ ೧ಕ್ಕೆ	5 – 4	6 – 6
ಎಳ್ಳೆಣ್ಣೆ ಮಣ ೧ಕ್ಕೆ	6 – 12	7 – 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	4 – 7	8 – 12
ತೋರಿನ ಸಕ್ಕರೆ ಮಣ ೧ಕ್ಕೆ	4 – 0	4 – 1
ಹೊಸ ಮೆಣಸು	4 – 0	5 – 0
ಸಾಸಿವೆ ಮುಡಿ ೧ಕ್ಕೆ	0 – 4	6 – 0
ನೇಟಿವ್ ಕಾಫಿ ಖಂಡಿ ೧ಕ್ಕೆ	275 – 0	226 –
ಕಾಳುಮೆಣಸು ಖಂಡಿ ೧ಕ್ಕೆ	170 0	180 –
ಮೇಲಕ್ಕಿ ಮಣ ೧ಕ್ಕೆ	27 – 0	28 –
ಗೇರುಬೀಜ ಮುಡಿ ೧ಕ್ಕೆ	3 – 6	
ಕಳ್ಳಿಕ ಖಂಡಿ ೧ಕ್ಕೆ	30 – 0	35 – 8
ತಾಂಬ್ರ ತಗಡು ಮಣ ೧ಕ್ಕೆ	12 – 8	13 – 0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	15 – 0	16 – 0
ಚೀನಬೆಳ್ಳಿ ಸೀಸು ೧ಕ್ಕೆ	14 – 10	14 – 12
ಹಿತ್ತಾಳೆ ತಗಡು ಮಣ ೧ಕ್ಕೆ	12 – 0	12 – 8
ರವಸು ೧ಕ್ಕೆ	17 – 14	17 – 14
ಪುನಾಸ ಹುಳಿ ಖಂಡಿ ೧ಕ್ಕೆ	40 –	–
ಫರೀದಿ ಕಾಫಿ ಖಂಡಿ ೧ಕ್ಕೆ	330 –	–
ಚಿಕ ಅಡಿಕೆ	160 –	205 –
ಹೊಸ ಅಡಿಕೆ	140 –	145 –

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್ Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟವಾಳ ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ, 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗ ದಿವಿ 1 30ಕ್ಕೂ ಬೆಳ್ತಂಗಡಿಗ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗ ದಿ ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪|| ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸಂಜರುಗಳಿಗ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೋರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ವಿಸ್ತಾರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧|| ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

ಜೀವನ್ಮುಕ್ತ ಮಹಾತ್ಮ ಗಾಂಧಿ

"Mahathma Gandhi is the greatest man in the world to day"

(R Tagore)

"ಸೈಕೊಲೊಜಿ" ಎಂಬ ಪತ್ರಿಕೆಯಲ್ಲಿ, ಅಮೇರಿಕದಲ್ಲಿರುವ ಶ್ರೀ ಬಿ ಕೆ ರೋಯ್ ಎಂಬವರು ಬರೆದ ಒಂದು ಲೇಖನವಿದು ಇದರಲ್ಲಿ ಮಹಾತ್ಮಾ ಗಾಂಧಿಯವರ ಕುರಿತಾಗಿ ಉತ್ಕೃಷ್ಟವಾದ ಅಭಿಪ್ರಾಯವು ಅಡಕವಾಗಿದೆ

ರವೀಂದ್ರನಾಥ ಠಾಗೋರರ ಪರಿಚಯವು ನನಗೆ ಇಪ್ಪತ್ತು ವರ್ಷಗಳಿಂದಲೂ ಇದೆ. ಅಮೇರಿಕಕ್ಕೆ ಠಾಗೋರರ ವಿಷಯವಾಗಿ ಏನೂ ತಿಳಿಯದಿದ್ದ ಆ ಕಾಲದಲ್ಲಿ ನಾನು ಅವರ ಕುರಿತು ಇಲ್ಲಿ ಬರೆದಿದ್ದೆನು ಅದು ೧೯೧೩ರ ನವಂಬರಿನಲ್ಲಿ ಅವರು ತನ್ನ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನವನ್ನು ಪಡೆಯುವ ಮೊದಲು. ನಾನು ಅವರೊಡನೆ ಅನೇಕ ವಿಷಯಗಳ ಕುರಿತು ತರ್ಕಿಸಿದ್ದೆ. ಅನೇಕ ದೇಶಧುರೀಣರ ಆದರ್ಶದ ಕುರಿತು ನಾನು ಅವರೊಡನೆ ಚರ್ಚಿಸಿದ್ದೆ ೧೯೨೦ನೇ ವರ್ಷದ ಮೊದಲು ನಾನು ರವೀಂದ್ರರೊಡನೆ ಮಹಾತ್ಮಾ ಗಾಂಧಿಯವರ ಕುರಿತು ಚರ್ಚೆಗಿಳಿಯಲಿಲ್ಲ. ಬಾಲಗಂಗಾಧರ ತಿಲಕ ಮಹಾಶಯರ ನಿಧನದ ನಂತರ ಮಹಾತ್ಮರು ಮುಂದಾಳಾಗಿ ಒದಗಿದುದು ಇದೇ ವರ್ಷದಲ್ಲಿಯೇ

೧೯೨೦ರ ಮೊದಲ್ಗೊಂಡು ಮಹಾತ್ಮರ ಕುರಿತು ನಾನು ಅನೇಕ ಮಾತುಕತೆಗಳನ್ನು ಠಾಗೂರರೊಡನೆ ನಡೆಸಿದ್ದೆನು. ಪ್ರತಿಯೊಂದು ಸಲವೂ, ಕವೀಶ್ವರರಾದ ಠಾಗೂರರು ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವದ ಕುರಿತು ಅನುಪಮಪ್ರೀತಿಯಿಂದ ಮಾತನಾಡಿದ್ದರು ಕಾಲ ತಪ್ಪಿ, ವರ್ಷಗಳು ಕಳೆದು ವಾತಾವರಣವು ಮಾರ್ಪಾಟು ಹೊಂದಿದ ಸಮಯದಲ್ಲಿ ನಾನು ಠಾಗೂರರೊಡನೆ ಗಾಂಧಿಯವರ ಕುರಿತು ಮಾತನಾಡಿದ್ದೆ ಪ್ರತಿಯೊಂದು ಸಲವೂ ಕವಿಪುಂಗವರು ಮಹಾತ್ಮರ ಕುರಿತ ಏಕರೀತಿಯ ಸರಸವಾಣಿಯಿಂದ ನುಡಿದಿದ್ದರು ಪುಟ್ಟ ದೇಹದ ಉಜ್ವಲ ಆತ್ಮದ ಮಹಾತ್ಮರನ್ನು ಪ್ರಶಂಸಿಸಿದ್ದರು.

"ಗಾಂಧಿಯವರ ಕುರಿತು ನಿಮ್ಮ ನಿಜವಾದ ಅಭಿಪ್ರಾಯವೇನು? ಅವರು 'ಮಹಾತ್ಮ' ರೆಂದು ಸಂಬೋಧಿಸಲ್ಪಡಲು ಅರ್ಹರೇ?" ಎಂದು ನಾನು ೧೯೩೦ರಲ್ಲಿ ಠಾಗೂರರೊಡನೆ ಕೇಳಿದ್ದೆ ಅದಕ್ಕವರು ಕೂಡಲೇ ಮುಖವನ್ನರಳಿಸಿ ಅಧರಗಳನ್ನು ಸಡಿಲಿಸಿ "ಮಹಾತ್ಮಾ ಗಾಂಧಿಯವರು ಇಂದಿನ ದಿನದಲ್ಲಿ ಪ್ರಪಂಚದಲ್ಲೇ ಅಪ್ರತಿಮ ಮತ್ತು ಅಸಾಧಾರಣವಾದ ಘನ ವ್ಯಕ್ತಿಯೆಂದು ನಾನು ಖಚಿತವಾಗಿ ತಿಳಿದುಕೊಂಡಿದ್ದೇನೆ' ಎಂದು ಒಪ್ಪಿದರು.

"ನೀವು ಇಷ್ಟು ದೊಡ್ಡ ಕವಿವರ್ಯರಾದುದರಿಂದ, ನೀವು ಹೀಗೆ ಹೇಳುತ್ತಿರುವುದು ನಿಮ್ಮ ನೈಸರ್ಗಿಕವಾದ ಬುದ್ಧಿಚಾತುರ್ಯದ ಉತ್ಪ್ರೇಕ್ಷೆಯ ಗುಣದಿಂದಾಗಿ" ಎಂದು ನಾನು ಸಂಶಯವಿಹ್ವಲನಾಗಿ ಉತ್ತರವಿತ್ತೆ

'ಛೆ, ಛೆ, ಇಲ್ಲ ನಿಜವಾಗಿಯೂ ಇಲ್ಲ' ಎಂದು ಠಾಗೂರರು ಒತ್ತಿ ಒತ್ತಿ ಹೇಳುತ್ತಾ ತನ್ನ ಉದ್ದವಾದ ಗಡ್ಡದ ಮೇಲೆ ಬೆರಳನ್ನು ಸವರಿ ಪುನಃ "ನೀವು ಮಹಾತ್ಮರನ್ನು ಕಂಡಿಲ್ಲ, ಅವರ ಪರಿಚಯವು ನಿಮಗೆ ಆಗುತ್ತಿದ್ದರೆ ನೀವು ನನ್ನೀ ಹೇಳಿಕೆಯಲ್ಲಿ ಒಂದಿಷ್ಟು ಸಂದೇಹವನ್ನಿಡುತ್ತಿದ್ದಿಲ್ಲ ಮಹಾತ್ಮರ ಪರಿಚಯವು ನನಗೆ ಆದ್ಯಂತವಾಗಿ ನಡದು ಅನೇಕ ವರ್ಷಗಳಾಗಿದ್ದುವು ಅವರು ದಕ್ಷಿಣಾಫ್ರಿಕದಿಂದ ಹಿಂತಿರುಗಿ ಬಂದಾಗ ನಮ್ಮ ಶಾಲೆಯಲ್ಲಿ ಕೆಲವು ಸಮಯ ಉಳಕೊಂಡಿದ್ದರು."

"ಅವರು ಎಷ್ಟು ಮಹತ್ಪುರುಷರೆಂದರೆ ಅವರ ಮಹತ್ವಿಕೆ ನಮ್ಮ ಕಪೋಲ ಕಲ್ಪನೆಗೆ ನಿಲುಕದು. ಅದನ್ನು ವಿವರಿಸಿ ಆಲೋಚಿಸಲು ಅಸಾಧ್ಯ! ಮಹಾತ್ಮರ ಆಂತರಿಕ ಉಜ್ವಲ ಗುಣಸಂಪತ್ತೆ, ಆದರ್ಶಮಯ, ತೇಜೋಮಯ ಸ್ವಭಾವವನ್ನರಿಯ ಬೇಕಾದರೆ ಕಡಿಮೆ ಎಂದರೆ ಒಂದು ವಾರದ ತನಕವಾದರೂ ಅವರೊಡನಿರಬೇಕು" ಎಂದರು

"ನೀವು ಬೋಲ್ಪುರದಲ್ಲಿದ್ದಾಗ ಮಹಾತ್ಮರು ನಿಮ್ಮೊಡನೆ ಉಳಕೊಂಡಿದ್ದರಷ್ಟೆ. ಅವರ ಯಾವ ಗುಣಗಳು ನಿಮ್ಮ ಮನವನ್ನು ಆಕರ್ಷಿತಗೊಳಿಸಿದುವು?' ಎಂದು ನಾನು ಪ್ರಶ್ನಿಸಿದೆ. ಠಾಗೂರರೆಂದರು—"ನನ್ನಿಂದ ಹಲವು ವರ್ಷಗಳ ಪರಿಯಂತರ ಆಗದಿದ್ದ ವಿಷಯಗಳನ್ನು ಅವರು ಕೆಲವು ದಿನಗಳಲ್ಲೇ ಸಾಧಿಸಿದರು — ನನ್ನ ಈ ಶಾಲೆಯ ಹುಡುಗರು ತಮ್ಮ ತಮ್ಮ ಶಾಲಾ ಕೊಠಡಿಗಳನ್ನು ತಾವು ತಾವೇ ಗುಡಿಸಿಕೊಳ್ಳಬೇಕು. ತಮ್ಮ ತಮ್ಮ ಹಾಸಿಗೆಗಳನ್ನು ತಾವು ತಾವೇ ಸರಿಪಡಿಸಿಕೊಳ್ಳಬೇಕು. ತಮಗೆ ಬೇಕಾದ ಆಹಾರವನ್ನು ತಾವೇ ಸಿದ್ಧಪಡಿಸಬೇಕು ತಮ್ಮ ಪಾತ್ರೆಗಳನ್ನು ತಾವೇ ತೊಳೆಯಬೇಕು. ಎಂದು ನನ್ನ ಆಶೆಯಿತ್ತು. ಆದರೆ ಆ ಹುಡುಗರೆಲ್ಲರೂ ದೊಡ್ಡ ದೊಡ್ಡ ಕುಟುಂಬಕ್ಕೆ ಸೇರಿದವರಾಗಿದ್ದುದರಿಂದ ನನಗೆ ನನ್ನ ಈ ಇಚ್ಛೆಯನ್ನು ಕಾರ್ಯತಃ ನೆರವೇರಿಸಲಾಗಲಿಲ್ಲ, ಕಾರಣವೇನೆಂದರೆ— ಸ್ವತಃ ನಾನು ಕೂಡಾ ನನ್ನ ಕೋಣೆಯನ್ನು ಸ್ವಹಸ್ತದಿಂದ ಗುಡಿಸುತ್ತಿದ್ದಿಲ್ಲ ನನ್ನ ಹಾಸಿಗೆಯನ್ನು ನಾನು ಹಾಸುತ್ತಿದ್ದಿಲ್ಲ ನನ್ನ ಪಾತ್ರೆಗಳನ್ನು ನಾನು ಶುದ್ಧಪಡಿಸುತ್ತಿದ್ದಿಲ್ಲ ಇದು ದೊಡ್ಡ ತೊಂದರೆಯಾಗಿ ನಿಂತಿತು ಇದರಿಂದಾಗಿ ಹುಡುಗರೂ ಕೂಡಾ ಇವುಗಳಿಗೆ ವಿಶೇಷವಾದ ಗಮನವನ್ನೀಯಲಿಲ್ಲ ನಾನು ಸುಮ್ಮಗೆ ಉಪನ್ಯಾಸವನ್ನೀಯುತ್ತಿದ್ದೆ' ಅವರು ಕಿವಿಗೊಟ್ಟು ಕೇಳುತ್ತಿದ್ದರು ಅಷ್ಟೆ"

ಆದರೆ ಗಾಂಧಿಯವರು ನಮ್ಮ ಶಾಲೆಯನ್ನು ಹೊಕ್ಕೊಡನೆ ಹುಡುಗರ ಹೃದಯಗಳನ್ನು ಜಯಿಸಿಕೊಂಡರು. ಅವರು ಅವರೊಡನೆ ಸೇರಿಕೊಂಡು, ಅವರಲ್ಲೊಬ್ಬರಂತಾಚರಿಸಿದರು ತಾವು ಮಾಡುವ ಕೆಲಸಗಳಿಗಾಗಿ ಸೇವಕರನ್ನಿಟ್ಟುಕೊಳ್ಳುವುದು ಅಸಂಬದ್ಧವೆಂದು ಗಾಂಧಿಯವರು ಹುಡುಗರಿಗೆ ಬೋಧಿಸಲು ಪ್ರಯತ್ನಿಸಿದರು —ಅವರು ತನ್ನ ಕೋಣೆಯನ್ನು ತಾನೇ ಗುಡಿಸಿದರು. ತನ್ನ ಹಾಸಿಗೆಯನ್ನು ತಾನೇ ಸಜ್ಜುಗೊಳಿಸಿದರು. ತನ್ನ ಪಾತ್ರೆಗಳನ್ನು ತಾನೇ ತೊಳೆದುಕೊಂಡರು ಅಲ್ಲದೆ ಅವರು ತನ್ನ ವಸ್ತ್ರಗಳನ್ನೂ ತಾನೇ ಒಗೆದುಕೊಂಡರು ಇದನ್ನೆಲ್ಲಾ ಕಂಡು ಹುಡುಗರು ನಾಚಿಕೆಗೊಂಡರು. ಒಡನೆ ಅವರು ಗಾಂಧಿಯವರಂತೆ ತಮ್ಮ ತಮ್ಮ ಕೆಲಸಗಳನ್ನು ತಾವು ತಾವೇ ಸ್ಫೂರ್ತಿಯಿಂದಲೂ, ಉಲ್ಲಾಸದಿಂದಲೂ ಮಾಡಲಾರಂಭಿಸಿದರು. ಗಾಂಧಿಯವರು ನನ್ನ ಹುಡುಗರ ಹೃದಯಗಳನ್ನು ಹೇಗೆ ವಶೀಕರಿಸಿಕೊಂಡರೆಂಬುದು ನನಗೆ ಆಗ ಭಾಸವಾಯಿತು"

"ಇಷ್ಟಾಗುತ್ತಲೇ ಗಾಂಧಿಯವರು ಹೊಲಸು ತೆಗೆಯುವ "ತೋಟಿ"ಗಳನ್ನು ಕರೆದು ಅವರು ಕೆಲವು ದಿನಗಳ ತನಕ ತಮ್ಮ ಕೆಲಸಕ್ಕೆ ಬರುವುದು ಬೇಡವೆಂದರು ಅಸ್ಪೃಶ್ಯರಾದ ತೋಟಿಯ ಕೆಲಸವನ್ನು ಸತ್ಕುಲೋತ್ಪನ್ನರಾದ ನನ್ನ ಹುಡುಗರು ಮಾಡಲು ಮುಂಬರುವುದು ಅಪ್ರಾಗತಿಕವೆಂದು ನಾನು ನೆನಸಿದ್ದೆ, ಒಂದೆರಡು ದಿನಗಳಲ್ಲಿ ಆವಾರವೆಲ್ಲ ದುರ್ವಾಸನೆಯಿಂದಾವೃತವಾಗಿ ಶಾಲಾ ದಿನಗಳನ್ನು ಕಳೆಯುವುದೂ ಕೂಡ ಅಸಾಧ್ಯವೆನಿಸಿತು

"ಒಂದು ದಿನ ಬೆಳಗ್ಗೆ ತೋಟಿಯು ಹೊರುತ್ತಿದ್ದ ಹೊಲಸು ಪಾತ್ರೆಯನ್ನು ಗಾಂಧಿಯವರು ತನ್ನ ತಲೆಯ ಮೇಲಿಟ್ಟುಕೊಂಡು ಅದನ್ನು ದೂರದ ಒಂದು ಬಯಲಿಗೊಯ್ದರು. ಆ ಹೊಲಸನ್ನು ನೆಲದಲ್ಲಿ ಹೂಣಿಟ್ಟರು —ಹಿಂತಿರುಗಿದರು. ಈ ಮಹತ್ಕಾರ್ಯದ ಪರಿಣಾಮವು ಒಂದೆರಡು ದಿನಗಳಲ್ಲೇ ನಮ್ಮ ಹುಡುಗರೊಳಗೆ ಅಂಟುರೋಗದಂತೆ ಹಬ್ಬಿತು ಒಡನೆ ಕುಲಭೂಷಿತರೂ, ಸತ್ಕುಟುಂಬಿಕರೂ, ಉತ್ತಮ ಜಾತಿಯವರೂ ಆದ ಎಲ್ಲಾ ಹುಡುಗರೂ ತೋಟಿಯ ಕೆಲಸದಲ್ಲಿ ಭಾಗವಹಿಸಿ, ಅದನ್ನು ನೆರವೇರಿಸಿಬಿಡುವುದರಲ್ಲಿ ಒಂದು ಗೌರವವುಂಟೆಂದು ತಿಳಿದುಕೊಂಡರು ದಿನಾಲೂ ಆ ಕೆಲಸವನ್ನು ಮಾಡುತ್ತಿದ್ದರು."

"ಮುಂಬಾಯಿಯ ಈ ವ್ಯಕ್ತಿಯ ಕಾರ್ಯವನ್ನು ನೋಡಿ ನಾನು ಸ್ತಬ್ಧನಾದೆ. ನನ್ನ ಬಾಯಿಯಿಂದ ಒಂದೂ ಮಾತು ಹೊರಡದಾಯಿತು ನಾನು ಗಾಂಧಿಯವರೆದುರು ಅತ್ಯಂತ ವಿನೀತನಾಗಿ, ನಮ್ರನಾಗಿ, ಬಗ್ಗಿಕೊಂಡೆ ನನ್ನ ಆತ್ಮವನ್ನು ಅವರೆದುರು ಅರ್ಪಿಸಿದೆ ಆಗ ಅವರಲ್ಲಡಗಿದ್ದ ಮಹಾನ್ ಶಕ್ತಿಯ ಅಸ್ತಿತ್ವತೆಯು ನನಗೆ ಭಾಸವಾಯಿತು.

ಮಹಾತ್ಮಾ ಗಾಂಧಿಯವರಲ್ಲಿ ನಾನು ಅಭೂತಪೂರ್ವ ಚೇತನಾಶಕ್ತಿಯ ನೆರಳನ್ನು ಕಂಡೆನು. ಈಗಿನ ಅಖಿಳಭಾರತವು ಅವರನ್ನು 'ಮಹಾತ್ಮಾ' (ಮಹಾ ಆತ್ಮವುಳ್ಳವರು) ಎಂದು ಸಂಬೋಧಿಸುವುದನ್ನು ನೋಡಿ ಅತ್ಯಾನಂದತುಂದಿಲನಾಗಿರುವೆನು ಈ ಬಿರುದನ್ನು ಪಡೆಯಲು ಯಾರಾದರೂ ಅರ್ಹರಾಗಿರುವರೆಂದರೆ, ಅವರು ಮಹಾತ್ಮಾ ಗಾಂಧಿಯವರೇ! ನಮ್ಮ ದೇಶಿಗರು ತಮ್ಮ ಹೃದಯದಿಂದ ಗಾಂಧಿಯವರಿಗೆ ಹೃತ್ಪೂರ್ವಕವಾಗಿ ಕೊಟ್ಟಿರುವುದೆಂದರೆ ಇದೊಂದೇ ದಾನವನ್ನು" ಎಂದು ಸುಮ್ಮಗಾದರು.

ನಾನು "ನಿಮ್ಮ ನಾಲಿಗೆಯಿಂದ ಈ ಆನಂದಜನಕ ನುಡಿಗಳು ಬೀಳುವುದನ್ನು ನೋಡಿ ಸಂತುಷ್ಟನಾದೆನು. ಭಾರತವರ್ಷದ ಮಿಲಿಯಾದಿ ಜನರ ಮೇಲೆ ಮಹಾತ್ಮಾ ಗಾಂಧಿಯವರು ಒಂದು ಅಪ್ರತಿಹತ ಶಕ್ತಿಯಿದೆಯಷ್ಟೆ. ಅವರ ಅಂತಹ ದಿವ್ಯಸ್ವರೂಪಶಕ್ತಿಗೆ ಕಾರಣೀಭೂತವಾದ ರಹಸ್ಯವಾದರೂ ಆವುದು?" ಎಂದು ಕೇಳಿದೆನು

ಠಾಗೂರರೆಂದರು— 'ಅವರ ವಿಜಯಮಯ ಶಕ್ತಿಯ ನಿಜವಾದ ರಹಸ್ಯವು ಅವರ ನೈತಿಕ ಮತ್ತು ಪಾರಮಾರ್ಥಿಕ ವಿಚಾರಗಳ ಪಾವಿತ್ರ್ಯದಲ್ಲಡಗಿಕೊಂಡಿದೆ ಅವರ ಸಂಪೂರ್ಣ ನಿಸ್ವಾರ್ಥಮಯ ತ್ಯಾಗದಲ್ಲಡಗಿಕೊಂಡಿದೆ ಅನೇಕ ಸಾರ್ವಜನಿಕ ದೇಶಧುರೀಣರಿದ್ದಾರೆ ಅವರು ಒಂದು ವಿಧದ ಗೋಚರವಾದ ಸ್ವಾರ್ಥಮಯ ಇಚ್ಛೆಯಿಂದಾಗಿ ತ್ಯಾಗಕಾರ್ಯವನ್ನು ಶಿರಸಾವಹಿಸುತ್ತಾರೆ ಅಂತಹ ದೃಷ್ಟಿಗೋಚರ ಸ್ವಾರ್ಥಪರ ನಿಸ್ವಾರ್ಥತೆಯು ಒಂದು ರೀತಿಯ [illegible]—[illegible] ದೊರೆಯುವ [illegible] ಅವರ ನಮ್ಮ ಮಹಾತ್ಮರು ಹಾಗಲ್ಲ ಅವರು ಸಂಪೂರ್ಣ ವ್ಯತಿರಿಕ್ತ ವ್ಯಕ್ತಿ ಶ್ರೇಷ್ಠತೆಯಲ್ಲಿ ಅವರು ಅತೀ ಶ್ರೇಷ್ಠರು ಅವರ ಜೀವನಸರ್ವಸ್ವವು ನಿಸ್ವಾರ್ಥಪರತೆಯ ತ್ಯಾಗರೂಪದಲ್ಲಿ ಅನಿರ್ವಚನೀಯ ಅವರ್ಣನೀಯ ಶಕ್ತಿಯಾಗಿದೆ ಅವರ ತ್ಯಾಗಗಳು ಬಲಿದಾನವೇ ಅವರು ಅವರ ನಿಸ್ವಾರ್ಥಪರತೆಯ ಉಜ್ವಲ ತೇಜೋಮೂರ್ತಿ ಅವರು ಅಧಿಕಾರವನ್ನು ಕಾಂಕ್ಷಿಸುವುದಿಲ್ಲ, ಅವರು ಬಲವನ್ನಾಶಿಸುವುದಿಲ್ಲ ಅವರು ಐಶ್ವರ್ಯವನ್ನು ಇಚ್ಛಿಸುವುದಿಲ್ಲ ಅವರಿಗೆ ಹೆಸರು ಬೇಡ ಕೀರ್ತಿ ಬೇಡ ಸ್ಥಾನಮರ್ಯಾದೆ ಬೇಡ ಅವರಿಗೆ ಅಖಿಳ ಭಾರತದ ಸಿಂಹಾಸನವನ್ನು ಕೊಡಿರಿ, ಅವರದರಲ್ಲಿ ಕುಳಿತುಕೊಳ್ಳಲು ಸಮ್ಮತಿಸಲಾರರು ಒಂದು ವೇಳೆ ಪಟ್ಟವನ್ನೂ ಕಿರೀಟವನ್ನೂ ಅವರು ಸ್ವೀಕರಿಸಿದರೆಂದರೆ, ಮತ್ತೆ ಅವುಗಳ ಭಂಗಾರವೇ ಮೊದಲಾದ ಐಶ್ವರ್ಯವನ್ನು ಮಾರಿ, ಹಾಗೆ ಬಂದ ಹಣವನ್ನು ದೀನಜನರಿಗೆ ನಿಸ್ಸಂದೇಹವಾಗಿ ಹಂಚಿ ಬಿಡುವರು. ಅನೇಕ ರೀತಿಯ ಅತ್ಯೈಶ್ವರ್ಯವನ್ನು ಅವರಿಗೆ ಕೊಡಿರಿ, ಅವರದನ್ನು ಖಂಡಿತವಾಗಿಯೂ ಸ್ವೀಕರಿಸಲೊಪ್ಪಲಾರರು ಹಾಗೆ ಪಡೆದುಕೊಂಡರೂ ಮಾನವಕುಟುಂಬದುದ್ಧಾರಕ್ಕಾಗಿ ಅದನ್ನು ವಿನಿಯೋಗಿಸುವರು. ಅವರ ಅಂತರಾತ್ಮವು ಪರರಿಗೆ ಶ್ರೇಯೋ ಕೊಡಲು ಹಂಬಲಿಸುತ್ತಿದೆ—ತವಕ ಪಡುತ್ತಿದೆ ಅವರ ಅದು ಒಬ್ಬ ಮಾನವನಾಗಿ ಇನ್ನೊಂದ ವಸ್ತುವನ್ನು ಪಡೆಯಲು ಸರ್ವದಾ ಮುಂದೆ ಬರಲಾರರು ಏಕೆ ಅವರಿಗೆ ಒಂದು ಉಪಕಾರ ಸ್ಮರಣೆಯ ಮಾತು ಕೂಡ ಬೇಡ ಇದು ಉತ್ಪ್ರೇಕ್ಷೆಯ ನುಡಿಗಳಲ್ಲ — ಕಾರಣ, ಅವರ ಸ್ವಭಾವದ ಕುರಿತ ನಾನು ಸಂಪೂರ್ಣ ಗೋಚರಿಸಿದ್ದೇನೆ

ನಿರ್ಭೀತಿಯೆಂಬುದು ಅವರಲ್ಲಿ ಪ್ರಾಧಾನ್ಯವನ್ನು ಹೊಂದಿಕೊಂಡಿರುವುದರಿಂದ ಅವರ ತ್ಯಾಗವು ಅಧಿಕವಾಗುತ್ತಿದೆ ಸಾಮ್ರಾಜ್ಯಾಧಿಪತಿಗಳು, ಮಹಾರಾಜರ ತುಪಾಕಿಗಳು, ಗುಂಡುಗಳು, ಕೈದುಗಳು, ಭಾರತದ ಕಷ್ಟಪರಂಪರೆಗಳು, ಕಾರಾಗೃಹಗಳ ನೋವು ಸಂಕಷ್ಟಗಳು—ಏಕೆ ಮೃತ್ಯುವು ಕೂಡಾ ಮಹಾತ್ಮಾ ಗಾಂಧಿಯವರ ನಿಶ್ಚಲ ಶಕ್ತಿಪ್ರವಾಹವನ್ನು ಅಲುಗಾಡಿಸಲಾರವು

ಒಂದು ಮಾತಿನಲ್ಲಿ ಹೇಳುವುದಾದರೆ ಅವರು ಜೀವನ್ಮುಕ್ತರು ಪಂಚಭೂತ ಶಕ್ತಿಯ ದೇಹಜ್ಯೋತಿಯಿಂದಲೇ ಅವರು ಅಮರತ್ವವನ್ನು ಹೊಂದಿರುವರು "ನೀವು ನನ್ನನ್ನು ವಧಿಸಲಿಚ್ಛಿಸಿದರೆ, ನಾನು ಸ್ವಪ್ರಾಣರಕ್ಷಣಾರ್ಥವಾಗಿ ಬೊಬ್ಬಿಡುವೆನು ಆದರೆ ನೀವು ಗಾಂಧಿಯವರನ್ನು ಕೊಲ್ಲಲಿಚ್ಛಿಸಿದರೆ, ಅವರು ಬೊಬ್ಬಿಡುವುದಂತಿರಲಿ, ನಿಂತಲ್ಲಿಂದ ಒಂದಂಗುಲದಷ್ಟು ಕೂಡಾ ಅಲುಗಾಡಲಾರರು ಬದಲಿಗೆ—ಅವರು ನಿಮ್ಮನ್ನು ಕಂಡು ಬಾಯ್ತುಂಬ ನಕ್ಕು ಬಿಡುವರು ಒಂದು ವೇಳೆ ಅವರಿಗೆ ಸಾಯುವ ಕಾಲವು ನಿಕಟವಾಗಿ ಸನ್ನಿಹಿತವಾಗುವುದಾದರೆ ಅವರು ಹಸನ್ಮುಖರಾಗಿ, ಹರ್ಷಚಿತ್ತದಿಂದಲೇ ಸಾಯುವರು. ಹಾಗೆಂದು, ಅವರನ್ನು ಹಿಂಸಿಸಿದ ನಿಮ್ಮನ್ನು ಅವರು ಎಳ್ಳಷ್ಟೂ ಕೂಡಾ ದ್ವೇಷಿಸರು

(ಬರುವ ಸಂಚಿಕೆಯಲ್ಲಿ ಅಂತ್ಯವಾಗುವುದು)

ಶಾಸ್ತ್ರ ಶಾಸ್ತ್ರೀಯ
ವಾದದ್ದು

ಕಾ ಮ ದ ಗು ಟ್ಟು

ಸುಖ ಸುಖಕರ
ವಾದದ್ದು

ಲೇಖಕರು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ. (ಕಾಂಗಾವಾಕೆರೆ ಮುನ್ನಾಡಿ)

ಹೊಸ ಪುಸ್ತಕ. ಇಂಥಾ ಪುಸ್ತಕವು ಬೇರೊಂದಿಲ್ಲ.

ತಂತ್ರದಲ್ಲಿ ಹೊಸ ಹೊಸ ಕಲ್ಪನೆಗಳು ದಿನ ದಿನವೂ ಹೆಚ್ಚುತ್ತಿವೆ. ತರುಣರ ತಾರುಣ್ಯ ಪ್ರಭಾವದಲ್ಲಿ ಹೊಳೆಯುವ ಎಲ್ಲಾ ಕಾಮಸಮಸ್ಯೆಗಳಿಗೂ ಮನವೊಪ್ಪುವ ಕ್ರಿಯಾಸಿದ್ಧಿಯನ್ನೂ ಸ್ವಾರಸ್ಯವಾಗಿ ತೋರಿಸಿಕೊಡುವ ಅತ್ಯುತ್ತಮ ಗ್ರಂಥ'

ಕಾಮೋಪಭೋಗದ ನ್ಯೂನತೆಗಳಿಗೆಲ್ಲಾ ಔಷಧಿಗಳು ವಿವರವಾಗಿ ಹೇಳಲ್ಪಟ್ಟಿವೆ ಈ ಪುಸ್ತಕವಿದ್ದರೆ—ಎಲ್ಲಾ ಅಂತರಂಗದ ವ್ಯಾಧಿಗಳಿಗೂ ಸ್ವತಃ ಅಂತರಂಗ ಚಿಕಿತ್ಸೆ ಮಾಡಿಕೊಳ್ಳಬಹುದು.

ಬೆಲೆ ೧೨ ಆಣೆ ಮಾತ್ರ ಅಂಚೆವೆಚ್ಚ ಪ್ರತ್ಯೇಕ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ದೊರೆಯುತ್ತೆ. **ಬೇಗನೆ ತರಿಸಿಕೊಳ್ಳಿ.**

ಇತರ ಗ್ರಂಥಗಳು.

ಆಹುತಿ (ನಾಟಕ) ರೂ ೧, **ಆದದ್ದೇನು** (ನಾಟಕ) ೬ ಆಣೆ, **ಮೋಹನಾಸ್ತ್ರ** (ನಾಟಕ) ರೂ ೧ **ಉದರ ವೈರಾಗ್ಯ** (ಸಚಿತ್ರ ನಾಟಕ)—ರೂ.೧, ವಿವೇಕಾನಂದರ ಕರ್ಮಯೋಗ—ರೂ ೧ **ಹೊಸಹುಟ್ಟು** (ಸಚಿತ್ರ)—ರೂ ೧, **ಸಾಹಿತ್ಯದ ಗುಟ್ಟು**—೬ ಆಣೆ **ತ್ರಿಶಂಕುಸ್ವರ್ಗ** (ನಾಟಕ)—೮ ಆಣೆ, ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯ ಶ್ರೀ ಸಾಧುವರ್ಯ ನಾಗಮಹಾಶಯರ ಜೀವನಕಥೆ—ರೂ ೧

ನವಜೀವನ ಗ್ರಂಥಭಂಡಾರದಿಂದ ಹೊರಟಿರುವ (೧) ಆಕಾಶದೊಳಗಿನ ಅದ್ಭುತ ಚಮತ್ಕಾರಗಳು ೧—೨—೦ (೨) ಧರ್ಮ ಸಂಭವ—೧—೪—೦ (೩) ಹಿಂದೂಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು ೧—೨—೦ ಕನ್ನಡಪುಸ್ತಕಗಳೆಲ್ಲಾ ದೊರೆಯುತ್ತವೆ.

ವಿ. ಜಿ. ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ಅಸ್ವಸ್ಥದ ನಂತರ—

"ಓವಲ್ಟಿನ್ನು" ಬಹು ತ್ವರೆಯಿಂದ ಸಂಪೂರ್ಣ ಚೈತನ್ಯವನ್ನೀಯುತ್ತದೆ.

ಅಸ್ವಸ್ಥದಲ್ಲಿ ಬಿದ್ದಾದ ಮೇಲೆ, ಮೈಕೈಗಳು ಸ್ವಲ್ಪ ಬಲಗೊಂಡು, ಕುಳಿತುಕೊಳ್ಳಲು ಚೈತನ್ಯಯುಕ್ತರಾದ ಕೂಡಲೇ ಸಾಮಾನ್ಯವಾದ ಆಹಾರವನ್ನು ಜೀರ್ಣಿಸುವಷ್ಟು ಶಕ್ತಿಯು ಬರುವುದಿಲ್ಲ. ಸಾಮಾನ್ಯ ಆಹಾರಗಳು ಸರಿಯಾದ ಮತ್ತು ಸಮತೂಕದ ಆಹಾರವನ್ನೊದಗಿಸಿಕೊಡುವುದಿಲ್ಲವಾದುದರಿಂದ ಅದನ್ನು ಸ್ವೀಕರಿಸುವುದೂ ಸರಿಯಲ್ಲ.

'ಓವಲ್ಟಿನ್ನಿ'ನಲ್ಲಿರುವ ಉತ್ತಮವಾದ ಆಹಾರ ಭಾಗವು ಅದರ ರುಚಿಯಿಂದ ಶಿಶುಗಳಿಗೂ, ಅಶಕ್ತಿವಂತರಿಗೂ ಅತ್ಯುತ್ಕೃಷ್ಟ ಮತ್ತು ಆಶ್ಚರ್ಯಕರ ಆಹಾರವನ್ನಾಗಿ ಮಾಡುತ್ತದೆ.

"ಓವಲ್ಟಿನ್ನು" ಬಹು ಕ್ಷೀಣವಾದ ದೇಹವನ್ನು ಶಕ್ತಿ ತುಂಬಿ ಬಲವಾಗುವ ತನಕ ಪೋಷಿಸುತ್ತದೆ. ಇದು ಸರಿಯಾದ ಮತ್ತು ಪ್ರಕೃತಿ ಸಂಬಂಧವಾದ ಉತ್ಕೃಷ್ಟ ಟೋನಿಕ್ ಆಹಾರ. ಬೇಗನೇ ಕರಗಿ ಜೀರ್ಣಿಸುತ್ತದೆ. ಅಸ್ವಸ್ಥದಿಂದೆದ್ದು "ಶಕ್ತಿ"ಯನ್ನನುಭವಿಸುವವರ ಜೀರ್ಣಶಕ್ತಿಯನ್ನು ವೃದ್ಧಿಪಡಿಸುವಂತೆ ಸಹಕಾರಿಯಾಗಿದೆ. ಬಹು ನಿಶ್ಶಕ್ತಿಯನ್ನು ಹೊಂದಿದ ವ್ಯಕ್ತಿಯೂ ಓವಲ್ಟಿನ್ನನ್ನು ಕುಡಿಯುವುದರಿಂದ ಶಕ್ತಿವಂತನಾಗುತ್ತಾನೆ.

OVALTINE

TONIC FOOD BEVERAGE



ಆರೋಗ್ಯಕ್ಕೆ, ಶಕ್ತಿಗೆ, ಧಾತುಪುಷ್ಟಿಗೆ

ಅತೀ ಶುದ್ಧ ಮತ್ತು ಅತ್ಯುತ್ತಮ ಕರಸ್ಪರ್ಶಿತವಾದುದಲ್ಲ.

ಎಲ್ಲಾ ಕೆಮಿಸ್ಟರುಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಲ್ಪಡುತ್ತಿದೆ

ಏಜಂಟರು— ಜೇಮ್ಸ್ ರೈಟ್, ೪೧ಎ ರಿಪನ್ ಸ್ಟ್ರೀಟ್, ಕಲ್ಕತ್ತಾ
ಮತ್ತು ಮುಂಬಾಯಿ ಮದ್ರಾಸ್, ರಂಗೂನುಗಳಲ್ಲಿ

ರುಚಿಕರ ಹಾಗೂ ಅತ್ಯುತ್ತಮವಾದ 'ಓವಲ್ಟಿನ್'ಗೆ ಸರಿಯಾದ ಪಾನೀಯವು ಬೇರೊಂದಿಲ್ಲ. ಮಿಶ್ರಣವೂ, ಸಪ್ರಮಾಣರಹಿತವೂ ಆಗಿರುವ ಎಲ್ಲಾ ನಕಲಿ ಮಾಲುಗಳನ್ನು ತಿರಸ್ಕರಿಸಿರಿ

OV/122

ನಿಶ್ಶಕ್ತಿಯ ಸಮಯದಲ್ಲಿ 'ಓವಲ್ಟಿನ್' ರೊಟ್ಟಿಗಳನ್ನು ತಿನ್ನಿರಿ. ಅದರ ಪೋಷಣೆಯಿಂದ ಜೀರ್ಣಶಕ್ತಿಯು ಸುಲಭದಿಂದಾಗುತ್ತದೆ. ಅದರ ಪರಿಮಳಭರಿತ ರುಚಿಯು ಮನಾಹ್ಲಾದವನ್ನುಂಟುಮಾಡುತ್ತದೆ. ಬಿಸ್ಕುಟುಗಳಿಗಿಂತ ಇವುಗಳು ಅತ್ಯುತ್ತಮ. ಓವಲ್ಟಿನ್ನಿನಂತೆ ಅವುಗಳು ಪುಷ್ಟಿಕೊಡುತ್ತದೆ

ಪುತ್ತೂರು ತಾಲೂಕು ಬಾಂಧವರಲ್ಲಿ ವಿನಂತಿ

ನಾವು ಕೈಕೊಂಡ ಗ್ರಾಮಾಭಿವೃದ್ಧಿ ಮಂಡಲದ ಪ್ರಥಮ ಸಂಚಾರ ಪ್ರಚಾರಗಳು ಜನವರಿ ತಾ. ೨೩ಕ್ಕೆ ತೊಡಗಿ ಮೇ ೧೦ಕ್ಕೆ ಮುಗಿದದ್ದಾಯಿತು. ಆ ಸಂದರ್ಭದಲ್ಲಿ ದೊರೆತ ಅನುಭವ ಸಹಾಯಗಳ ವಿಷಯ ಚುಟುಕಿನಲ್ಲಿ ಹೇಳುವೆವು. ಕಾರ್ಯಕ್ರಮಗಳನ್ನು ಮೊದಲು ಜಾಹೀರು ಪಡಿಸಿದ ಗ್ರಾಮಗಳಲ್ಲಲ್ಲದೆ ಮತ್ತು ನಾಲ್ಕಾರು ಸ್ಥಳಗಳಲ್ಲಿ ಕೈಕೊಂಡೆವು. ಹಳ್ಳಿಗಾಡಿನಲ್ಲಿ ನಮ್ಮ ನಾಟಕ, ಮಾಯಾಲಾಂದ್ರ, ಉಪನ್ಯಾಸ ನೋಡಲಾದುವುಗಳಿಗೆ ಜನರು ಕೂಡುವರೋ ಎಂಬ ಸಂಶಯವು ನಮಗೆ ತುಂಬಾ ಇತ್ತಾದರೂ ಜನರು ಅದಕ್ಕೆ ಅಸ್ಪದಕೊಡಲಿಲ್ಲ. ೧೦೦—೩೦೦ ತನಕ ಪ್ರತಿ ಹಳ್ಳಿಯಲ್ಲೂ ನೆರೆಯುತ್ತಿತ್ತು. ಬಲುದೂರದಿಂದಲೂ ಬರುತ್ತಿದ್ದರು. ಎಷ್ಟರ ಮಟ್ಟಿಗೆ ಅವುಗಳಿಂದ ಲಾಭವಾದೀತೆಂಬುದು ಮುಂದೆ ಅವರು ಅನುಸರಿಸುವ ಹಾದಿಯ ಮೇಲೆ ಹೊಂದಿದೆ. ನಮ್ಮ ಶಂಖವನ್ನು ನಾವು ಊದಿರುವುದೆಂದಿಷ್ಟು ಸಮಾಧಾನ. ಈ ಸಂಬಂಧದಲ್ಲಿ, ಕೃಷಿ ವಿಷಯದ ಉಪನ್ಯಾಸಗಳಿಗೆ ಎಗ್ರಿಕಲ್ಚರಲ್ ಇಲಾಖೆಯ ಡಿಮೋನ್ಸ್ಟ್ರೇಟರರು ಆಗಾಗ ಬಂದು ಸಹಾಯಕರಾಗುತ್ತಿದ್ದರು. ಅವರ ಸಹಾಯದಿಂದ ಸ್ವಲ್ಪ ಮಟ್ಟಿಗೆ ಹೊಸಬೀಜ, ಗೊಬ್ಬರ ಗಿಡಗಳ ಪ್ರಚಾರವು ಖಂಡಿತಕ್ಕೂ ಆದೀತು.

ಇನ್ನು ನಮ್ಮ ಗ್ರಾಮ ಸಂಚಾರವನ್ನು ಕುರಿತು. ಇದು ನಮ್ಮ ಹಳ್ಳಿಗರ ಆರ್ಥಿಕ ಆರೋಗ್ಯ ಮೊದಲಾದ ಸ್ಥಿತಿಗಳನ್ನು ತಿಳಿಯಲು ಕೈಕೊಂಡುದು. ಹಲವು ವಿಷಯಗಳಿಂದ ಕೂಡಿದ ವಿಚಾರಣೆಯನ್ನು ಮಾಡಿದೆವು. ೪೦೦ ಕಿಂತ ಮನೆಗಳನ್ನು ತಿರುಗಿ ಅವರಿಂದ ಹಲವು ವಿಷಯಗಳನ್ನೂ ಸಂಗ್ರಹಿಸಿದೆವು. ಇದೇ ಒಂದು ಗ್ರಂಥವಾಗುವಷ್ಟಿದೆ. ಒಂದು ಸೂಕ್ಷ್ಮ ಸೂಚನೆ ಕೊಡುವುದಾದರೆ ಹೀಗೆ — ನಮ್ಮ ತಾಲೂಕಿನಲ್ಲಿ ಒಬ್ಬನ ವರ್ಷಾವಧಿ ಸಂಪಾದನೆ ರೂ ೨೫—೩೦ಕ್ಕೆ ಮೀರುವುದಿಲ್ಲ. ಉಳಿದ ಸಂಗತಿಗಳು ಹೇಗಿರಬೇಕು?

ನಮ್ಮ ಕಾರ್ಯಕ್ರಮವು ಯಶಸ್ವಿಯಾಗಲು ಸಹಾಯಕರಾದವರನ್ನು ಇಲ್ಲಿ ಸ್ಮರಣೆಮಾಡದಿರೆವು. ಅಂಥವರು ನೂರಾರು ಜನರಿರುವುದರಿಂದ ಎಲ್ಲರ ಹೆಸರನ್ನು ಇಲ್ಲಿ ಹೇಳಲು ಬರುವಂತಿಲ್ಲ. ಅಂತು, ಅಲ್ಲಲ್ಲಿಯ ಶಾಲಾ ಉಪಾಧ್ಯಾಯರುಗಳು, ಊರಗೃಹಸ್ಥರು, ಗ್ರಾಮ ಸಂಚಾರದ ವಿಷಯದಲ್ಲೂ ಊಟಉಪಚಾರಗಳ ವಿಷಯದಲ್ಲೂ, ಸಭೆ ಕೂಡಿಸುವ ವಿಷಯದಲ್ಲೂ ಮರೆಯಲಾರದಷ್ಟು ಋಣಕ್ಕೆ ನಮ್ಮನ್ನು ಭಾಗಿಗಳನ್ನಾಗಿ ಮಾಡಿದ್ದಾರೆ. ಇನ್ನು ಆರ್ಥಿಕ ವಿಚಾರ. ಶ್ರೀಮಾನ್ ಎ. ಬಿ. ಶೆಟ್ಟರವರು — ನಮ್ಮ "ಹಣೇ ಬರಹ" ಎಂಬ ನಾಟಕದ ೫೦೦ ಪ್ರತಿಗಳನ್ನು ಧರ್ಮಾರ್ಥವಾಗಿ ಅಚ್ಚುಹಾಕಿಸಿ ಅದರ ಉತ್ಪನ್ನವು ಪ್ರವಾಸಕ್ಕೆ ನೆರವಾಗುವಂತೆ ಸಹಾಯ (ಸಾಧಾರಣ ರೂ ೨೫ಕ್ಕೆ ಮಿಕ್ಕಿ) ಮಾಡಿದ್ದಾರೆ. ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ರೂ ೨೦ನ್ನು ನಗದಿಯಿಂದ ಸಹಾಯ ಮಾಡಿದ್ದಾರೆ. ಈ ಯಾವತ್ತು ಮಹನೀಯರಿಗೆ ನಮ್ಮ ವಂದನೆಗಳು. ಇತಿ

ಮೊಳಹಳ್ಳಿ ಶಿವರಾವ್ ಶಿವರಾಮ. ಕಾರಂತ

'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.

ಕಲಿಯುವಿಕೆಗೂ ಕಲಿಸುವಿಕೆಗೂ ಮನೋರಂಜಕವಾದ

ಪದ್ಯ ಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

(ಶ್ರೀ ಜಿ ಎಸ್ ಲಕ್ಷ್ಮಣ ಪೈ ವಿರಚಿತ)

ಕ್ರಯ ೦—೩—೬

ಮಕ್ಕಳು ಮೆಚ್ಚುವ ಕಥೆಗಳನ್ನೂ, ನೀತಿಸಾರಗಳನ್ನೂ ಲಲಿತವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಒಳಗೊಂಡ ಕವಿತಾಗ್ರಂಥ!

ಮದರಾಸು, ಮುಂಬಾಯಿ ಸರಕಾರದವರು ಇದನ್ನು ಪಠ್ಯ ಪುಸ್ತಕವಾಗಿ ಮಂಜೂರು ಮಾಡಿದ್ದಾರೆ, ಮೈಸೂರು ಸರಕಾರದವರು ಲೈಬ್ರೆರಿಗಳ ಬಗ್ಗೆ ಮಂಜೂರುಮಾಡಿದ್ದಾರೆ.

ಹೆಚ್ಚಿನ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—

ಹರಿಹರ ಛಾಪಖಾನೆ, ಪುತ್ತೂರು. (ದ. ಕನ್ನಡ.)
ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು.
ನೇಶನಲ್ ಕೆನರಾ ನ್ಯೂಸ್ ಏಜನ್ಸಿ,
ಸರ್ ಫಿರೋಜಶಾ ಮೇಥಾ ರೋಡ್, ಮುಂಬಾಯಿ.

ವಿವಿಧ ಸಮಾಚಾರಗಳು.

ಸರ್ ಪುರುಷೋತ್ತಮದಾಸರ ಮೇಲೆ ಅತ್ಯಾಚಾರ!

ತಾ. ೩ನೇ ದಿನ ಮುಂಬಾಯಿಯಲ್ಲಿ ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸರು ತಮ್ಮ ಆಫೀಸಿನಿಂದ ಹೊರಟು, ತಮ್ಮ ಸೆಕ್ರೆಟರಿಯ ಸಂಬಂಧಿಕರೊಬ್ಬರೊಡನೆ ಮಾತನಾಡುತ್ತಾ ದಾರಿ ಮೇಲೆ ಹೋಗುತ್ತಿದ್ದರು. ಅಷ್ಟರಲ್ಲಿ ಒಬ್ಬ ಮುಸಲ್ಮಾನನು ಅವರ ಬಳಿಗೆ ಹೋಗಿ "ಸರ್ ಪುರುಷೋತ್ತಮದಾಸ್ ಅಂದರೆ ಯಾರು?" ಎಂದು ಕೋಪಾಟೋಪದಿಂದ ಗಜರುತ್ತಾ ಪ್ರಶ್ನಿಸಿದನು. ಅದನ್ನು ಕೇಳಿ ಸರ್ ಪುರುಷೋತ್ತಮದಾಸರು "ಏನು ಬೇಕು ಭಾಯಿ?" ಎಂದು ಸಮಾಧಾನದಿಂದ ಪ್ರಶ್ನಿಸಿದರು. ಒಡನೆ ಆ ಪುಂಡ ಮುಸ್ಲಿಮನು ತನ್ನ ಕೈಯಲ್ಲಿದ್ದ ಕೊಡೆಯೊಂದನ್ನು ಎತ್ತಿ ಅವರಿಗೆ ಹೊಡೆದನು. ಅದನ್ನು ಕಂಡು ಅವರ ಬಳಿಯಲ್ಲಿದ್ದವರು ಆ ಕಾಳಸ್ವರೂಪಿಯನ್ನು ಹಿಡಿದುಕೊಂಡರು. ಈ ಸುದ್ದಿಯು ನಿಮಿಷಾರ್ಧದಲ್ಲಿ ಆ ಪೇಟೆಯಲ್ಲೆಲ್ಲ ಹರಡಿಕೊಂಡಿತು. ನವ್‌ಸಾರಿ ಚೇಂಬರಿನ ಸುತ್ತುಮುತ್ತಲಿದ್ದ ಅಂಗಡಿ, ಮನೆಮಾರುಗಳಿಂದ ಜನತಂಡಗಳು ಓಡಿಬಂದು ಗಲಿಬಿಲಿಯನ್ನೆಬ್ಬಿಸಿದುವು. ಮುಸ್ಲಿಮನನ್ನು ತುಮುರು ತಮುರು ಮಾಡುವೆವೆಂದೇ ಎಲ್ಲರ ಹಟವಾಯಿತು. ಜನರ ಕೋಪೋದ್ರೇಕವು ಮಿತಿಮೀರಿತು. ಆಗ ಪುರುಷೋತ್ತಮದಾಸರು ಆ ಜನರನ್ನೆಲ್ಲಾ ಶಾಂತಪಡಿಸಿ, ತನಗೆ ಹೊಡೆದವನನ್ನು ರಕ್ಷಿಸಿ, ಅವನನ್ನು ತಾನು ಪೋಲೀಸರ ವಶಕ್ಕೊಪ್ಪಿಸುವೆನು; ಜನರು ಗಲಭೆಯನ್ನುಂಟುಮಾಡಬಾರದು ಎಂದು ಬೇಡಿಕೊಂಡರು. ಮುಸ್ಲಿಮನನ್ನು ಎಸ್ಪ್ಲನೇಡ್ ಸ್ಟೇಷನಿಗೆ ಕೊಂಡುಹೋಗಲಾಗಿ, ಪೋಲೀಸರ ವಶಕ್ಕೊಪ್ಪಿಸಲಾಯಿತು. ಪುರುಷೋತ್ತಮದಾಸರಿಗೆ ಹೊಡೆಯಲು ಕಾರಣವೇನೆಂದು ಪೋಲೀಸರು ಆ ಮುಸ್ಲಿಮನೊಡನೆ ಕೇಳಿ ವಿಚಾರಿಸಿದರು. ಆದಕ್ಕವನು "ಅವರು ಹಿಂದೂಗಳ ಪಕ್ಷವಾಗಿರುವುದಕ್ಕೆ" ಎಂದು ಉತ್ತರವಿತ್ತನು. ಅಪರಾಧಿಯ ಹೆಸರು ಅಲ್ಲಾಂಖಾನ್ ಅಬ್ಬಾಸ್ ಎಂಬುದಾಗಿ ತಿಳಿದುಬಂದಿದೆ. ಅವನ ಜೇಬುಗಳಲ್ಲಿ ಜಪ್ತಿ ನಡೆಸಲು ಕೆಲವು ಮನಿಯಾರ್ಡರ್ ರಶೀದಿಗಳೂ, ಬಾಡಿಗೆ ರಶೀದಿಗಳೂ ದೊರೆತುವು. ಅವನು ಒಬ್ಬ ಶಾಲಾ ಉಪಾಧ್ಯಾಯನೆಂದು ತಿಳಿದುಬಂದಿದೆ. ಅವನನ್ನು ಜಾಮೀನಿನ ಮೇಲೆ ಬಿಟ್ಟಿರುವರು. ಪುರುಷೋತ್ತಮದಾಸರಿಗೆ ಪೆಟ್ಟುಬಿದ್ದ ವಾರ್ತೆಯು ಎಲ್ಲೆಡೆಗಳಲ್ಲಿಯೂ ಹರಡಿ ರಾತ್ರಿ ಇಡೀ ಅವರ ಅನೇಕ ಮಿತ್ರರು ಅವರನ್ನು ಟೆಲಿಫೋನು ಮೂಲಕ ಕರೆಯುತ್ತಿದ್ದು ವಿಪರೀತತೆಯು ಅಷ್ಟರಲ್ಲೇ ಕೊನೆಗೊಂಡಿದುದು ಸಂತೋಷಕರವೆಂದು ತಿಳಿಸಿದರು. ಪುರುಷೋತ್ತಮದಾಸರ ಎಡ ಹೆಗಲೂ ಬಲಗೈಯೂ ನೋವುಗೊಂಡಿದೆ.

⁂

ಗಾಳಿಪಟಕ್ಕಾಗಿ ಕೊಲೆ!

ಲಕ್ನೋವಿನಲ್ಲಿ ಮುಸ್ಲಿಮರ ಎರಡು ಪಂಗಡಗಳು ಗಾಳಿಪಟವನ್ನು ಹಾರಿಸುತ್ತಿದ್ದುವು. ಅಷ್ಟರಲ್ಲಿ ಒಂದು ಪಂಗಡದ ಒಬ್ಬ ಹುಡುಗನು ಎದುರುಪಕ್ಷದವರ ಒಂದು ಉಂಡೆ ನೂಲನ್ನು ಕದ್ದೊಯ್ದು ತನ್ನ ಗಾಳಿಪಟಕ್ಕೆ ಉಪಯೋಗಿಸಿದನು. ಒಡನೆ ಪ್ರಾರಂಭವಾಯಿತು ಆ ಮುಸ್ಲಿಮರೊಳಗೆ ಹತ್ತಾಹತ್ತಿ! ಮಾರಾಮಾರಿ! ಕತ್ತಿ ಕಠಾರಿಗಳು ಬಂದುವು. ಕಿಡಿಯಂತಿದ್ದ ಜಗಳವು ಮಹಾ ಬೆಂಕಿಯಾಗಿ ಹೋಯಿತು. ಒಬ್ಬನನ್ನು ಕತ್ತಿಯಿಂದ ತಿವಿದು ಕೊಂದರು. ಕೆಲವರು ಜಖಂಗೊಂಡರು. ಪೋಲೀಸರ ಆಗಮನವಾಯಿತು. ಅನೇಕರನ್ನು ಆಸ್ಪತ್ರೆಗೊಯ್ಯಲಾಯಿತು. ಹತ್ತಿಪ್ಪತ್ತು ಜನರನ್ನು ಕೈದುಮಾಡಲಾಯಿತು. ಇದು ಮತವಾದ ಜಗಳವಲ್ಲವೆಂಬುದನ್ನು ಕೇಳಿ ಎಲ್ಲರೂ ಸಂತೋಷಗೊಂಡರು. ಪೆಟ್ಟು ತಿಂದವರಲ್ಲಿ ಕೆಲವರು ಪರಲೋಕದ ಕಡೆ ಬೇಗನೇ ಹೊರಡಲಿರುವರು.

⁂

ಇಂಗ್ಲೆಂಡಿನಲ್ಲಿ ನೆರೆಹಾವಳಿ

ತಾ. ೨ನೇ ದಿನದ ವರೆಗೆ ಇಂಗ್ಲೆಂಡಿನಲ್ಲಿ ಎಲ್ಲೆಲ್ಲಿಯೂ ನೆರೆಹಾವಳಿಯ ಸುದ್ದಿ. ರೈಲ್ವೇ ಲೈನುಗಳೂ, ಮಾರ್ಗಗಳೂ, ಚರಂಡಿಗಳೂ ನೀರಿನಿಂದ ತುಂಬಿಕೊಂಡುವು. ಜನಸಂಚಾರ, ವಾಹನ ಸಂಚಾರವು ಅಸಾಧ್ಯವೆನಿಸಿತು. ಡೋನ್‌ಕೆಸ್ಟರ್ ಎಂಬಲ್ಲಿ ೨೫೦೦ ಜನರು ತಮ್ಮ ಮನೆಮಾರುಗಳನ್ನು ಬಿಟ್ಟು ಓಡಿರುವರು. ವಿಂಡ್ಸರ್ ಕಾಸ್ಸಲ್ ಬಳಿಯೂ ಬಹಳ ನೆರೆ! ವೆಸ್ಟ್ ಬ್ರಿಜ್‌ಫೋರ್ಡ್ ಎಂಬಲ್ಲಿ ನಾಲ್ಕು ಮಂದಿ ತರುಣಿಯರು ಆಫೀಸು ಕೆಲಸಕ್ಕೆ ಹೋಗುವ ಆಗತ್ಯಪ್ರಸಂಗದಿಂದಾಗಿ ನೀರಿನಲ್ಲಿ ಈಜಾಡಿಕೊಂಡು ಇನ್ನೊಂದು ದಡವನ್ನು ಸೇರಬೇಕಾಯಿತು. ಅವರು ಆಫೀಸುಗಳನ್ನು ತಮ್ಮ ಸ್ನಾನದ ಉಡುಪಿನಿಂದಲೇ ಸೇರಿದರು. ಎಲ್ಲರಿಗೂ ಆಶ್ಚರ್ಯವಾಯಿತು. ಟೆಲಿಫೋನು ಕೆಲಸದಲ್ಲಿ ನಿರತರಾಗಿದ್ದ ಕೆಲವು ಮಂದಿ ಸ್ತ್ರೀಯರು ಆಫೀಸಿನೊಳಗೆ ನೀರು ಬಂದರೂ ಹೆದರದೆ, ಮೊಣಕಾಲಿನ ವರೆಗಿನ ನೀರಿನಲ್ಲಿ ನಿಂತು ಟೆಲಿಫೋನು ವಾರ್ತೆಯ ಕೆಲಸಗಳನ್ನು ನಿರ್ವಹಿಸಿದರು. ಕೆಲವು ಕಡೆಗಳಲ್ಲಿ ಸ್ತ್ರೀಕೆಲಸಗಾರರನ್ನು ಗಂಡಸರು ಹೊತ್ತುಕೊಂಡು ನೀರಿನ ಮೇಲೆ ನಡೆದು ಅವರನ್ನು ಆಚೆ ದಡಕ್ಕೆ ಸೇರಿಸಿ ಕೂಲಿ ಪಡೆದರು. ನೋಟಿಂಗ್‌ಹಮ್‌ಶಯರ್, ಯೋರ್ಕ್‌ಶಯರ್, ಲೈಸಿಸ್ಟರ್‌ಶಯರ್ ಮೊದಲಾದೆಡೆಗಳಲ್ಲಿ ನೂರುಗಟ್ಟಲೆ ಕೆಲಸಗಾರರೂ ವಿದ್ಯಾರ್ಥಿಗಳೂ ಮನೆಯಲ್ಲೇ ಉಳಿದುಕೊಂಡರು. ಮಾರ್ಗಗಳ ಮೇಲೆ ೪ ಕಾಲುಗಳ ಮೋಟಾರುಗಳ ಬದಲಿಗೆ ಕಾಲಿಲ್ಲದ ದೋಣಿಗಳು ಓಡಾಡುತ್ತಿವೆ. ಬರುವ ವಾರದೊಳಗೆ ನೀರು ಕೆಳಗಿಳಿಯಬಹುದೆಂದು ಊಹಿಸಲಾಗಿದೆ.

⁂

ಚೀನದಲ್ಲೂ ಮನುಷ್ಯರ ಬೇಟೆ.

ಮನುಷ್ಯರನ್ನು ರಹಸ್ಯವಾಗಿ ಕದ್ದೊಯ್ದು, ತಮಗೆ ಆಹುತಿಯಾಗಿ ಸಿಕ್ಕವರ ಬಂಧುಬಳಗದವರಿಗೆ ಆ ವಾರ್ತೆಯನ್ನು ತಿಳುಹಿಸಿ "ಹಣಕೊಡಿ, ಇಲ್ಲದಿದ್ದರೆ ಅವನನ್ನು ಕೊಲ್ಲುತ್ತೇವೆ" ಎಂಬ ವಾರ್ತೆಯನ್ನು ಕಳುಹಿಸಿ ಸಿರಿವಂತರ ಕುಟುಂಬಗಳಲ್ಲಿ ದುಃಖದ ಬೆಂಕಿಯನ್ನು ತಂದೊಡ್ಡುವ ರೂಢಿಯು ಅಮೇರಿಕದ ಕಳ್ಳಕಾಕರಲ್ಲೇ ಇರುವುದಲ್ಲ. ಈಗೀಗ ಇಂತಹ ಹೇಯವೃತ್ತಿಯು ಚೀನಾದೇಶದ ದರೋಡೆಗಾರರಿಂದಲೂ ನಡೆಯುತ್ತಿದೆ. ಅಲ್ಲಿಯ ಟೀಯೆನ್‌ಸಿಟ್‌ಸಿನ್ ಎಂಬಲ್ಲಿ ಒಂದು ದೊಡ್ಡ ಬಂಡಸಾಲೆಯವರು ತಮ್ಮೊಬ್ಬ ಗುಮಾಸ್ತನನ್ನು ವ್ಯಾಪಾರ ಸಂಬಂಧವಾಗಿ ಸಮೀಪದ ಊರಿಗೆ ಕಳುಹಿಸಿದರು. ಕೆಲವು ದಿನಗಳ ತನಕವೂ ಆತನ ಪತ್ತೆಯೇ ಇಲ್ಲದಾಯಿತು. ಒಂದು ದಿನ ಆ ಮನುಷ್ಯನ ಹೇಟ್, ಬೂಟು, ಅಂಗಿ ಮೊದಲಾದುವುಗಳು ಟಪ್ಪಾಲು ಮೂಲಕ ಸಂಬಂಧಿಕರಿಗೆ ಹೋದುವು. ಇದನ್ನು ಕಂಡು ಎಲ್ಲರೂ ಬೆರಗಾದರು. ಮತ್ತೊಂದು ದಿನ ಕುಟುಂಬದವರಿಗೊಂದು ಪತ್ರವು ಬಂತು. ಅದರಲ್ಲಿ "ನಮಗೆ ೩೦೦೦ ಪೌಂಡುಗಳನ್ನು ಕೊಡಿರಿ. ಇಲ್ಲದಿದ್ದರೆ ನಿಮ್ಮ ಮನುಷ್ಯನನ್ನು ಕೊಂದಿಕ್ಕುವೆವು" ಎಂದಿತ್ತು. ಆದರೂ ಆ ಮನುಷ್ಯನ ಸಂಬಂಧಿಕರು ಸುಮ್ಮನಿದ್ದುಬಿಟ್ಟರು. ಕೆಲವು ದಿನಗಳ ತನಕ ದರೋಡೆಗಾರರು ಹಣವನ್ನು ನಿರೀಕ್ಷಿಸಿದರು. ಅದು ಬಾರದಿರಲು ತಮ್ಮ ಆಹುತಿಯನ್ನು ಕತ್ತಿಗೆ ಬಲಿಗೊಟ್ಟರು. ದೇಹವನ್ನು ಮೂರು ಹೋಳುಗಳಾಗಿ ಮಾಡಿ, ಒಂದು ಹೋಳನ್ನು ಕೊಲ್ಲಲ್ಪಟ್ಟ ಮನುಷ್ಯನ ಕುಟುಂಬಿಕರಿಗೆ ಕಳುಹಿಸಿದರು. ಮತ್ತೆರಡು ಹೋಳುಗಳನ್ನು ಇನ್ನಿತರ ದೊಡ್ಡ ದೊಡ್ಡ ಕುಟುಂಬಗಳಿಗೆ ರವಾನಿಸಿ "ನೀವೂ ಹಣ ಕೊಡದಿದ್ದರೆ ನಿಮ್ಮ ಜನರ ಅವಸ್ಥೆಯೂ ಇದೇ ಆಗುವುದು ಜೋಕೆ!" ಎಂದು ಬರೆದರು.

⁂

ವಿಧವೆಗೆ ದೇಹಾಂತ ಶಿಕ್ಷೆ!

ಬನಾರಸಿನಲ್ಲಿ ರಾಜೇಶ್ವರಿದೇವಿ ಎಂಬ ವಿಧವೆಯೊಬ್ಬಳು ಕೆಲ ಸಮಯದ ಹಿಂದೆ ಲೀಲಾವತಿ ದೇವಿ ಎಂಬ ತರುಣಿಯೊಬ್ಬಳನ್ನು ಕೊಲೆಮಾಡಿದಳೆಂಬ ಅಪಾದನೆಯ ಮೇಲೆ ದೇಹಾಂತಶಿಕ್ಷೆಗೊಳಗಾದಳು. ಇವಳು ನಡೆಸಿದ ಕೊಲೆಗೆ ಆಧಾರವಾದ ಕತೆಯು ಹೀಗಿದೆ— ಲೀಲಾವತಿದೇವಿಯ ಗಂಡನಿಗೂ ಈ ವಿಧವೆಗೂ ಏನೋ ಒಂದು 'ನಿಕಟ ಸಂಬಂಧ'ವಿದ್ದಿತು. ಇವಳು ರಾತ್ರಿ ಲೀಲಾವತಿದೇವಿಯೊಡನೆಯೇ ಮಲಗುವಳು. ಬೆಳಗ್ಗೆ ಅವಳೊಡನೆಯೇ ಏಳುವಳು. ಒಂದು ದಿನ ರಾತ್ರಿ ನಿತ್ಯದಂತೆ, ವಿಧವೆಯು ಲೀಲಾವತಿಯ ಕೊಠಡಿಯನ್ನು ಹೊಕ್ಕಳು. ಮರುದಿನ ಮುಂಜಾನೆ ನೋಡುವಾಗ ಲೀಲಾವತಿಯ ರುಂಡವು ಮುಂಡದಿಂದ ಕಡಿಯಲ್ಪಟ್ಟು ಬೇರ್ಪಡಿಸಲ್ಪಟ್ಟಿತ್ತು. ಇದನ್ನು ಕೆಲಸದ ಹುಡುಗಿಯೊಬ್ಬಳು ಕಂಡು ಹಾಹಾಕಾರ ಗಲಭೆಯನ್ನೆಬ್ಬಿಸಿದಳು. ನೆರೆಹೊರೆಯವರೆಲ್ಲರೂ ಧಾವಿಸಿಬಂದರು. ಇಷ್ಟಾಗುವಾಗ ರಾಜೇಶ್ವರಿಯು ಹೆಣದ ಬಳಿ ಕುಳಿತು "ಇದನ್ನು ಮಾಡಿದುದು ನಾನೆ" ಎಂದು ಅತ್ತಳು. ಅವಳನ್ನು ಕೈದುಮಾಡಲಾಯಿತು. ವಿಚಾರಣೆಯ ದಿನ, ತನಗೇನೂ ಗೊತ್ತಿಲ್ಲವೆಂದಳು. ಜ್ಯೂರಿಯು ಬಹಳವಾಗಿ ಆಲೋಚಿಸಿ ಕೊನೆಗೆ ಅವಳ ತಪ್ಪು ಸ್ಥಾಪನೆಯಾದುದನ್ನು ಕಂಡು ರಾಜೇಶ್ವರಿಗೆ ದೇಹಾಂತಶಿಕ್ಷೆಯನ್ನು ವಿಧಿಸಿತು. ಲೀಲಾವತಿಯ ಗಂಡನ ಸಂಬಂಧದಿಂದಾಗಿ ಈ ಅನಾಹುತವಾಗಿರಬೇಕೆಂದು ಊಹಿಸಲಾಯಿತು.

⁂

ಅರಸುಕುಮಾರನೆಂದುಕೊಂಡಿದ್ದ ಬ್ರಾಹ್ಮಣ ತರುಣ!

ಬನಾರಸಿನ ಒಬ್ಬ ಬಡ ಬ್ರಾಹ್ಮಣ ಯುವಕನಾದ ಕಾಶೀನಾಥಸಿಂಗ್ ಎಂಬಾತನು ತನ್ನ ಮೋಸಗಾರಿಕೆಗಾಗಿ ಈಗ ಪೋಲೀಸರ ಕೈಗೆ ಸಿಕ್ಕಿರುತ್ತಾನೆ. ಕಳೆದ ಕೆಲವು ತಿಂಗಳಲ್ಲಿ ಈ ಬ್ರಾಹ್ಮಣ ಪೋರನು ಕೆಲವು ಸಂಸ್ಥಾನಾಧಿಪತಿಗಳನ್ನು ಸಂದರ್ಶಿಸಿ ತಾನು ಕೋಟಾದ ಮಹಾರಾಜನ ಮಗನೆಂದು ಹೇಳಿಕೊಂಡನು. ಮೊನ್ನೆ ಮಂಡ್ಲದ ಮಹಾರಾಜರು ಒಂದು ಔತಣವನ್ನು ಕೊಟ್ಟರು. ಅದಕ್ಕೂ ಕೂಡ ಈ ನಾಥಸಿಂಗನು ಹೋಗಿ ಅಲ್ಲಿ ನೆರೆದಿದ್ದ ಸಭಿಕರಿಗೆ ತಾನು ಕೋಟಾದ ಮಹಾರಾಜನ ಮಗ, ತಿರುಗಾಡಿಕೊಂಡು ಬಂದೆನು ಎಂದು ಹೇಳಿದನು. ಕೋಟಾಸಂಸ್ಥಾನವು ರಜಪುತಾನದಲ್ಲಿದೆ. ಈ ಸಂಸ್ಥಾನದ ದೊಡ್ಡ ದೊಡ್ಡ ಮನುಷ್ಯರೂ, ಕೆಲವು ಮಹಾರಾಜರೂ ತನ್ನ ಸಂಬಂಧಿಕರೆಂದು ಹೇಳಿ ಕೆಲವು ದಿನಗಳನ್ನು ಅರಸುಮಗನಂತೆ ಕಳೆದನು. ಇತ್ತೀಚೆಗೆ ಅವನ ಮರೆಮೋಸದ ಗುಟ್ಟು ಹೊರಗೆ ಬಿತ್ತು. ಅವನನ್ನು ಹಿಡಿದು ಕೋರ್ಟಿನಲ್ಲಿ ನಿಲ್ಲಿಸಿ, ಮುಂದಿನ ಸದಾಚಾರಕ್ಕಾಗಿ ಅವನಿಂದ ೨೦೦ ರೂಪಾಯಿಗಳ ಜಾಮೀನನ್ನು ಪಡೆಯಲಾಯಿತು.

ಮುಂಬಾಯಿಯ ಪರಿಸ್ಥಿತಿ!

ಮುಂಬಾಯಿಯ ಪರಿಸ್ಥಿತಿಯು ತಾ. ೪ರ ತನಕ ಶಾಂತವಾಗಿತ್ತು. ಜನರು ಮುಂಚಿನಂತೆಯೇ ನೆಮ್ಮದಿಯ ನೆರಳಲ್ಲಿದ್ದರು. ಆದರೆ ತಾ. ೫ನೇ ದಿನ ಗ್ರೇಂಟ್‌ರೋಡ್, ಚಗ್ಗಸ್ಟ್ರೀಟುಗಳಲ್ಲಿ ಒಂದೆರಡು ಜನರು ಹೊಡೆದಾಡಿಕೊಂಡು ಗಲಭೆಯನ್ನುಂಟುಮಾಡಿದರು. ಗ್ರೆಂಟ ರೋಡಿನಲ್ಲಿ ನಿಂತಿದ್ದ ಒಬ್ಬ ಹಿಂದೂವನ್ನು ಕೆಲ ಮುಸ್ಲಿಮರು ಕೂ[illegible] ಹೊಡೆದರು. ಮಿಠಾಯಿ-ಅಂಗಡಿಗಳನ್ನು ಲೂಟಿ ಮಾಡಿದರು. ಅಷ್ಟರಲ್ಲಿ ಪೋಲೀಸರು ಬಂದು ಕೆಲವರನ್ನು ಕೈದುಮಾಡಿದರು. ಕೆಲ ಮುಸಲ್ಮಾನರು ಓಡಿದು ಮಸೀದಿಯಲ್ಲವಿತು ಕೂತರು. ಅವರನ್ನು ಪೋಲೀಸರು ಸುಲಭದಿಂದ ಹಿಡಿದರು. ಒಬ್ಬ ಪಠಾಣನಿಗೆ ಕೆಲ ಹಿಂದೂಗಳು ಕೂಡಿ ಹೊಡೆದರು. ಪೋಲೀಸರು ಬಂದು ಜನರನ್ನು ಚದರಿಸಿದರು. ಗುಂಡು ಹಾರಿಸಿದರು. ಕೆಲವರಿಗೆ ಜಖಂ ಆಯಿತು. ೫೬ ಮಂದಿಗಳನ್ನು ದಸ್ತಗಿರಿ ಮಾಡಿದ್ದಾರೆ. ಒಬ್ಬನು ಮಡಿದನು.

⁂

ಶ್ರೀಯುತ ವಿ. ಜೆ. ಪಟೇಲರು

ಇವರು ಆರೋಗ್ಯ ಸಂಪಾದನೆಗಾಗಿ ವಿಯೆನ್ನಾ ಎಂಬಲ್ಲಿಗೆ ತೆರಳಿರುವರಷ್ಟೆ. ಇವರ ದೇಹಸ್ಥಿತಿಯು ಉತ್ತಮವಾಗಿದೆಯಾದರೆ ಸಂಪೂರ್ಣ ಗುಣಮುಖವಾಗಲಿಲ್ಲ. ತಾ. ೪ನೇ ದಿನ ಪೆರಿಸ್ ನಗರದಲ್ಲಿರುವಾಗ ಒಬ್ಬ ಪತ್ರಿಕಾ ಪ್ರತಿನಿಧಿಯು ಇವರನ್ನು ಭೇಟಿಯಾದಾಗ ಇವರು "ಪ್ರಪಂಚದಲ್ಲೆಲ್ಲಾ ತಿರುಗಾಡಿ ಜನರೆಲ್ಲರಿಗೆ ಹಿಂದೂಸ್ಥಾನದ ನಿಜಸ್ಥಿತಿಯ ಕುರಿತು ತಿಳಿಯಪಡಿಸಬೇಕೆಂದು ನನ್ನ ಆಲೋಚನೆಯಾಗಿದೆ" ಎಂದರು. ಇವರು ಇಂಗ್ಲೆಂಡ್, ಐರ್ಲೇಂಡ್, ಅಮೇರಿಕಾ ಮೊದಲಾದ ದೇಶಗಳಿಗೆ ಹೋಗಬೇಕೆಂದಿರುವರು. ಮುಂಬಾಯಿಯಲ್ಲಿ ನಡೆದ ದಂಗೆಗಳಿಗೆ ಬ್ರಿಟಿಷರ ಮಧ್ಯಸ್ಥಿಕೆಯೇ ಕಾರಣವೆಂದು ಹೇಳಿದರು. ಹಿಂದೂಸ್ಥಾನಕ್ಕೆ [illegible]ವಾದ ಫೆಡರೇಶನ್ ಬೇಕೆಂದೂ ಬ್ರಿಟಿಷರು ತಮ್ಮ ಪಕ್ಷಪಾತಕ್ಕಾಗಿ ಹೋರಾಡಬಾರದೆಂದೂ ಹೇಳಿದರು.

⁂

ಸುಂದರಿಯು ತರುಣನನ್ನು ಕೊಂದಳು!

ತಾ. ೪ನೇ ದಿನ ಲಂಡನಿನಲ್ಲಿ ಜಾನೆಟ್ ಎಂಬ ವಿವಾಹಿತ ತರುಣಿಯೊಬ್ಬಳು ಮೈಕೆಲ್ ಸ್ಕೋಟ್ ಸ್ಟೀವನ್ ಎಂಬವನ ಕೊಲೆ ಮಾಡಿದಳೆಂಬ ವಾರ್ತೆಯು ಬಂದಿದೆ. ಜಾನೆಟಳು ಸರಕಾರಿ ಬ್ರೋಕರನಾದ ಸರ್ ಜೋನ್ ಮುಲ್ಲಿನ್ಸ್ ಎಂಬವರ ಒಬ್ಬ ಸೌಂದರ್ಯವತಿಯಾದ ಪುತ್ರಿ. ಮರಣಪಟ್ಟ ತರುಣನು ಕೆಂಟ್ ಎಂಬಲ್ಲಿನ ಮೆಜಿಸ್ಟ್ರೇಟೊಬ್ಬರ ಪುತ್ರ. ಈ ಪುತ್ರ—ಪುತ್ರಿಯರೊಳಗೆ ಜಗಳವಾಗಿ ಪುತ್ರಿಯು ಗುಂಡು ಹಾರಿಸಿದಳೆಂದೂ, ಅವನು ಒಡನೆ ಸತ್ತನೆಂದೂ ತಿಳಿದುಬಂದಿದೆ. ಸುಂದರಿಯನ್ನು ಕೈದುಮಾಡಲಾಗಿದೆ. ನಾನು ತಪ್ಪಿತಸ್ಥಳಲ್ಲವೆಂದೇ ಅವಳು ಕಲ್ಲು ಹೃದಯದಿಂದ ಹೇಳಿದಳು. ಅವಳ ವಿಚಾರಣೆಯು ಬೇಗನೇ ನಡೆಯಲಿದೆ.

⁂

ವಿಮಾನದ ಹುಚ್ಚು!

ಇಂಗ್ಲೆಂಡಿನಲ್ಲಿ ವಿಕ್ಟರ್ ಬ್ರೂಸ್ ಎಂಬ ಶ್ರೀಮತಿಯೊಬ್ಬಳು ಬ್ರಿಟಿಷ ವಿಮಾನಗಳ ಶ್ರೇಷ್ಠತೆಯನ್ನು ಪ್ರದರ್ಶಿಸುವುದಕ್ಕಾಗಿ ಒಂದು ವಿಮಾನದಲ್ಲಿ ಮೇಲೆ ಹಾರಿ, ಒಂದು ತಿಂಗಳ ತನಕ ಮೇಲೆಯೇ ಹಾರುತ್ತಿರಬೇಕೆಂದು ನಿರ್ಧರಿಸುತ್ತಾಳೆ. ಒಂದು ತಿಂಗಳ ತನಕ ಮೇಲೆಯೇ ಇರಲು ಸಾಧ್ಯವೇ ಎಂದು ಕೆಲವರೆನ್ನುತ್ತಿರುವರಾದರೂ ಅವಳು ಸಾಧ್ಯವೆನ್ನುತ್ತಿರುವಳು. ತನ್ನ ವಿಮಾನಕ್ಕೆ ಬೇಕಾದ ಎಣ್ಣೆ ಸಲಕರಣೆಗಳನ್ನು ತನ್ನ ಗಂಡನು ಇನ್ನೊಂದು ವಿಮಾನದ ಮೂಲಕ ದಿನಾಲೂ ಮೇಲೆ ತಂದು ಕೊಡಬೇಕೆಂದೂ ತನಗೆ ಬೇಡವಾದುದನ್ನು ಅವನು ಕೆಳಗೆ ಕೊಂಡೊಯ್ಯಬೇಕೆಂದೂ ಅವಳ ಆಲೋಚನೆ. ಅವಳು ಹಾರಾಯಿಸಿರುವ ವಿಮಾನವು ೧೨೦ ಕುದುರೆ ಶಕ್ತಿ ಇರುವಂತಹದು. ಅದಕ್ಕೆ ೩ ಎಂಜಿನುಗಳಿವೆ. ಆರು ಜನರು ವಾಸಿಸಬಹುದಾದಷ್ಟು ಸ್ಥಳವು ಅದರೊಳಗಿದೆ. ಅವಳ ಈ ವಿಮಾನದ ಹುಚ್ಚನ್ನು ನೋಡಬೇಕೆಂದು ಇಂಗ್ಲೆಂಡಿನಲ್ಲಿ ಲಕ್ಷೋಪಲಕ್ಷ ಜನರು ನಿರೀಕ್ಷಿಸುತ್ತಿದ್ದಾರೆ.

⁂

ಕಿವುಡ ಮುನ್ಸೀಫರು ಡಾಕ್ಟರರ ಮೇಲೆ ದಾವೆ ಹೂಡಿದರು

ಬಿಹಾರ್ ಎಂಬಲ್ಲಿ ಮೊದಲೊಮ್ಮೆ ಡಿಸ್ಟ್ರಿಕ್ಟ್ ಮುನ್ಸಿಫರಾಗಿದ್ದ ಬೆನಾರಿಸ್‌ದಾಸ್ ಕಂಕನ್ ಎಂಬ ಒಬ್ಬ ಮಹನೀಯರು. ಇವರಿಗೆ ಆಗಾಗ್ಗೆ ಕಿವಿನೋವು ಉಂಟಾಗುತ್ತಿತ್ತು. ಒಬ್ಬ ಸಿವಿಲ್ ಸರ್ಜನರಿಂದ ಔಷಧವನ್ನು ಪಡೆದು ಅದನ್ನು ದಿನಾಲೂ ಉಪಯೋಗಿಸುತ್ತಿದ್ದರು. ಕೆಲವು ಸಮಯದಲ್ಲೇ ಕಿವಿನೋವು ನಿಂತಿತು. ಮದ್ದನ್ನು ಮೂಲೆಯಲ್ಲಿರಿಸಿದರು. ಒಂದು ವರ್ಷ ದಾಟಿತು. ಕಿವಿಯು ಪುನಃ ಮುಚ್ಚಿಕೊಂಡಿತು. ಮೂಲೆಯಲ್ಲಿದ್ದ ಮದ್ದನ್ನು ಪುನಃ ತೆಗೆದು ಕಿವಿಗೆ ಬಿಟ್ಟರು. ಕಿವಿಯು ಸಂಪೂರ್ಣವಾಗಿ ಬಾಗಿಲುಹಾಕಿಕೊಂಡಿತು. ಮದ್ದು ಒಳ್ಳೇದಲ್ಲವೆಂದೂ ಕಿವಿಯನ್ನು ಸರ್ಜನರು ಕೊಡಬೇಕೆಂದೂ ದಾವೆ ಹೂಡಿರುವರು.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮುಸ್ಸಾದ' ಅವರುಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಲ್ಲ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಹೋಲ್‌ಸೇಲು ರಿಟೇಲಿನಲ್ಲಿ ತಯಾರ ಇರುವವು ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ಸಿಕ್ಕ ಆಹಾರದ ಕ್ರಮ, ವೃತ್ತಿ, ಹಿಡಿದು ಬೇಡವಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ಪಥ್ಯ ರೀತಿ ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವದರಿಯೂ ಬುದ್ಧಿ ಬಂದು ಸಂದರ್ಶಿಸಬೇಕಾದ ಸಂಗತಿಗಳಿಕ್ಕೆ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಸಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾತ್ರೆಗಳನ್ನು ಕೊಡುವದರಿಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವದರಿಯೂ ಸದಾ ಈ ವೈದ್ಯಶಾಲೆಯು ತಯಾರಾಗಿ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮ್ಯಾನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಮೂಲವ್ಯಾಧಿ

[illegible] ಅಥವಾ ತಜ್ಜನ್ಯವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇರ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೈಲ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೨

ವಿಳಾಸ — ಶಕ್ತಿ ಸುಧಾ ಕಾರ್ಯಾಲಯ
23 ಕಾಂದಾರವಾಡಿ 4ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸ್ಯಾಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ಸ್
ರಥ ಬೀದಿ, ಮಂಗಳೂರು

ವಿಕ್ಕಿಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ

ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ. ಆ ದಾದರ್ ಮುಂಬಾಯಿ 14

Dr H L. Batliwalla, Sons & Co., Ltd.
Kadell Road, P O Dadar Bombay, 14.

ತಂತಿ ವಿಳಾಸ —"CAVASPUR' Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.



ಲೋಧ್ರ —ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಔಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ —ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ —ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd., Bombay 14.
ದಿ ಝೂಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಾಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ, ನಾನಾ ವಿಧವಾದ ಜ್ವರಗಳು, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾಯಿತು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.'

5 ಪೌ ಡಬಿ ರೂ 10/- ಕ್ರಯ 1 ಪೌನು ಸೀಸೆ ರೂ 2/8. ½ ಪೌ. ರೂ. 1/5 ¼ ಪೌ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು.—ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು.—ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು.—ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು,—ಟಿ. ಸಿ ನಟರಾಜ್ ಅಂಡ್ ಕೊ., ಸಯಾಜಿರಾವ್ ರೋಡ್
ಬೆಂಗಳೂರು ಏಜಂಟರು—ಬಿ ಪೂಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ
ಹೋಲ್‌ಸೇಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಚಳವಳದ ಡೈರಿ.

ಬೀಗ ಮುರಿದು ಜಪ್ತಿ ನಡೆಸಿದರು

ಅಲ್ಲಹಾಬಾದಿನಲ್ಲಿ ಕಳೆದ ವಾರ ಸಿ ಎ ವಿ ಹೈಸ್ಕೂಲಿನ ಹೆಡ್ಮಾಸ್ತರರಾದ ಮಿಸ್ಟರ್ ಡಂಕನ್ ಗ್ರೀನ್ ಲೀಸ್ ಎಂಬವರ ಮನೆಯಲ್ಲಿ ಪೋಲೀಸರು ಜಪ್ತಿನಡೆಸಿದರು ಸಿಟಿ ಡಿಪ್ಯೂಟಿ ಪೋಲೀಸ್ ಸುಪರಿಂಟೆಂಡೆಂಟರೂ ಸಿಟಿಮೆಜಿಸ್ಟ್ರೇಟರೂ ಖುದ್ದಾಗಿಯೇ ಜಪ್ತಿನಡೆಸಿದರು ಜಪ್ತಿನಡೆಸುವಾಗ ಡಂಕನರು ಮನೆಯಲ್ಲಿರಲಿಲ್ಲ. ಆದರೂ ಬೀಗವನ್ನು ಮುರಿದು ಬಾಗಿಲು ತೆರೆದು ಪರಿಶೋಧನೆಮಾಡಲಾಯಿತು ಕೆಲವು ಕಾಗದಪತ್ರಗಳೂ, ಒಂದು ಟೈಪ್‌ರೈಟರೂ ಕೊಂಡೊಯ್ಯಲ್ಪಟ್ಟಿದೆ

ಶ್ರೀಮತಿ ಮುಕುಂದ ಮಾಲವೀಯರಿಗೆ ಶಿಕ್ಷೆ

ಪಂಡಿತ ಮದನಮೋಹನ ಮಾಲವೀಯರ ಸೊಸೆ ಶ್ರೀಮತಿ ಮುಕುಂದ ಮಾಲವೀಯರಿಗೆ ಕಾನೂನುಲ್ಲಂಘನೆಯ ಬಗ್ಗೆ ಅಲ್ಲಹಾಬಾದ್ ಮೆಜಿಸ್ಟ್ರೇಟರು ಒಂದು ವರ್ಷದ ಕಠಿಣ ಸಜೆಯನ್ನು ಕೊಟ್ಟರು ಎ ಕ್ಲಾಸನ್ನೂ ಕೊಟ್ಟರು ಮತ್ತಿತರ ನಾಲ್ಕು ಮಂದಿ ಕಾಂಗ್ರೆಸ್‌ವಾಲರೂ ಶಿಕ್ಷಿಸಲ್ಪಟ್ಟರು ಶ್ರೀಮತಿ ಮೋಹಿನಿದೇವಿ ಎಂಬವರು ಕಾಯಿದೆಯನ್ನುಲ್ಲಂಘಿಸಿ ಮೆರವಣಿಗೆಯನ್ನು ಮಾಡಿದ್ದಕ್ಕೆ ಒಂದು ವರ್ಷದ ಕಠಿಣ ಸಜೆಗೆ ಗುರಿಯಾದರು ಮತ್ತೂ ಕೆಲವು ಸ್ತ್ರೀಯರೂ, ಪುರುಷರೂ ಕಳೆದ ವಾರ ಶಿಕ್ಷಿಸಲ್ಪಟ್ಟರು ಸಿವಿಲ್‌ಲೈನಿನೊಳಗೆ ಪ್ರವೇಶಿಸಲು ಯತ್ನಿಸಿದ ಹನ್ನೊಂದು ಮಂದಿಗಳು ಶಿಕ್ಷಿಸಲ್ಪಟ್ಟರು

ಬಲತ್ಕಾರದಿಂದ ಚದರಿಸಿದರು

ತಿನ್ನವೆಲ್ಲಿಯಲ್ಲಿ ಕಳೆದ ವಾರ ಒಂದು ಸಭೆಯು ಸೇರಿತ್ತ ಶ್ರೀಯುತ ಮುರ್ಗಪ್ಪ ಚಟ್ಟಿಯಾರ್ ಎಂಬವರು ಭಾಷಣವಿತ್ತರು ಪೋಲೀಸರು ಸಭೆಯನ್ನು ಬಲತ್ಕಾರದಿಂದ ಚದರಿಸಿದರು [illegible]ಂಗ್ರೆಸ್ಸಿಗೆ ಸೇರಬೇಕೆಂದು ಆರಿಕೆಮಾಡುತ್ತಾ ಕರಪತ್ರಗಳನ್ನು [illegible]ತ್ತಿದ್ದ ನಾಮಶಿವಾಯಂ ಪಿಳ್ಳೆ ಎಂಬವರನ್ನು ಕೈದು[illegible]ಡಲಾಯಿತು

ಜೈಲು ತುಂಬಿತಂತೆ'

ಮಧುರೆಯ ಡಿಸ್ಟ್ರಿಕ್ಟ್ ಜೈಲಿನಲ್ಲಿ ರಾಜಕೀಯ ಕೈದಿಗಳ ಹಾವಳಿಯಿಂದ ಸ್ಥಳವಿಲ್ಲದಂತಾಗಿದೆ ಇದ್ದ ಸ್ಥಳವನ್ನು ಮೀರಿ ಕೈದಿಗಳಿರುವರು ಇದಕ್ಕಾಗಿ ಅಲ್ಲಿಯ "ಅಂಡರ್‌ಟ್ರಯಲ್ ವಾರ್ಡ್"ನ್ನು ಒಂದು ಕಾರಾಗೃಹದಂತೆ ಒಂದು ವಾರದೊಳಗ ಮಾಡಿ ಇನ್ನು ಬರುವವರನ್ನು ಅವರಲ್ಲಿಡುವರಂತೆ ರಾಜಕೀಯ ಕೈದಿಗಳೊಡನೆ ಇನ್ನಿತರ ಕ್ರಿಮಿನಲ್ ಕೈದಿಗಳು ಮಿಳಿತವಾಗದಂತೆ ವ್ಯವಸ್ಥೆಯು ಮಾಡಲ್ಪಡುವುದಂತೆ

ಅಂಚೆಕಟ್ಟೆಯ ಪಹರೆ

ತಲ್ಲೇರಿಯಲ್ಲಿ ಕಳೆದ ವಾರ ಅಂಚೆಕಚ್ಚೇರಿಯ ಪಿಕೆಟಿಂಗ್ ನಡೆಯಿತು ಅಲ್ಲಿಯ ಸಬ್ ಪೋಸ್ಟಾಫೀಸನ್ನು ಪಿಕೆಟ್ ಮಾಡುತ್ತಿದ್ದ ಮೂರು ಮಂದಿ ಸ್ತ್ರೀಯರನ್ನು ಕೈದುಮಾಡಿದರು

ವಾರ್ತಾವಾಹಕನ ಗತಿ!

ಶಿರ್ಸಿ, ಸಿದ್ದಾಪುರಗಳಲ್ಲಿ ಕಾಯಿದೆಭಂಗವು ಸ್ತ್ರೀಪುರುಷರಿಂದ ನಡೆಯುತ್ತದಂತೆ ಆದರೂ ಅದರ ಸುದ್ದಿಯು ಇತ್ತ ಬರುವುದಿಲ್ಲ. ಪತ್ರವ್ಯವಹಾರವೂ ಆ ಊರಲ್ಲಿ ಬಹಳ ಕಷ್ಟಕರ ಸಂಗತಿ. ಹಿಂದೂ ಪತ್ರಿಕೆಯ ಒಬ್ಬ ವರ್ತಮಾನ ಸಂಗ್ರಹಕಾರರು ಅಲ್ಲಿಯ ಜನರ ಸ್ಥಿತಿಗತಿಗಳನ್ನು ತಿಳಿದುಕೊಂಡು ಬರುವುದಕ್ಕಾಗಿಯೂ, ಪೋಲೀಸರು ಸ್ತ್ರೀಯರನ್ನು ಉಪದ್ರವಿಸುತ್ತಾರೆಂಬ ಆರೋಪಗಳ ಸತ್ಯತೆಯನ್ನು ಅರಿಯುವುದಕ್ಕಾಗಿಯೂ ಅಲ್ಲಿಗೆ ಕಳುಹಿಸಲ್ಪಟ್ಟಿದ್ದರು ಈ ಗೃಹಸ್ಥರು ಸತ್ಯಾಗ್ರಹಿಗಳೊಡನೆ ನಡೆದ ಸಂಗತಿಗಳನ್ನು ವಿಚಾರಿಸಿ ತಿಳಿದುಕೊಳ್ಳುತ್ತಿರುವಾಗ ಪೋಲೀಸರು ಅವರನ್ನೂ ಕೈದುಮಾಡಿದರು ತಾನು ವರ್ತಮಾನ ಸಂಗ್ರಹಕರ್ತನೆಂದರೂ ಒಂದು ಪ್ರಖ್ಯಾತ ಪತ್ರಿಕೆಯ ಪ್ರತಿನಿಧಿ ಎಂದರೂ ಪೋಲೀಸರು ಇವರನ್ನು ಬಿಡಲಿಲ್ಲ. ಇವರನ್ನೂ ಇವರಿಗೆ ದಾರಿ ತೋರಿಸಲು ಹೋಗಿದ್ದ ಒಬ್ಬ ವರ್ತಕನನ್ನೂ ಬಂಧಿಸಿ ಕಲೆಕ್ಟರರ ಮುಂದಿರಿಸಿದರು.

ತಿರುಚಿನಾಪಳ್ಳಿಯಲ್ಲಿ

ಒಂದು ದೊಡ್ಡ ಮರದ ಮೇಲೆ ರಾಷ್ಟ್ರಧ್ವಜವನ್ನೇರಿಸಿ ಕಾಂಗ್ರೆಸ್‌ವಾಲರು ಕೂಡಿ ಅದನ್ನು ವಂದಿಸಿದರು ಅಷ್ಟರಲ್ಲಿ ಪೋಲೀಸರು ಬಂದು ಅದನ್ನು ತೆಗೆಯಿಸಿದರು

ತಿನ್ನವೆಲ್ಲಿ

ಇಲ್ಲಿಯ ಪುತನೇರಿ ರಾಮಸ್ವಾಮಿ ಅಯ್ಯಂಗಾರರೆಂಬ ಧುರೀಣರೊಬ್ಬರನ್ನು ಶಿಕ್ಷಿಸಿದುದಕ್ಕಾಗಿ ಅರ್ಧ ದಿನದ ಹರತಾಳ ವಾಚರಿಸಲ್ಪಟ್ಟಿತು

ಎರಡುಸಾವಿರದ ಇಪ್ಪತ್ತು ಮಂದಿಗಳನ್ನು ಬಿಟ್ಟರು

ಮುಂಬಾಯಿಯ ಜೈಲುಗಳಲ್ಲಿ ರಾಜಕೀಯ ಕೈದಿಗಳು ಹೆಚ್ಚಿ ತೊಂದರಗಳಾಗುತ್ತಿರುವುದರಿಂದ ಮೂರನೇ ಒಂದಂಶ ಶಿಕ್ಷೆಯನ್ನನುಭವಿಸಿದವರೂ, ಜೈಲಿನ ಒಳಗಡೆ ಒಳ್ಳೆಯ ಗುಣನಡತೆಯುಳ್ಳವರೂ ಬಿಡುಗಡೆಗೆ ಅರ್ಹರೆಂದು ಡೈರೆಕ್ಟರ್ ಆಫ್ ಇನ್‌ಫೋರ್ಮೇಶನ್ ಇವರು ಪ್ರಕಟಿಸಿರುತ್ತಾರೆ ಇಷ್ಟರಲ್ಲೇ ಎರಡುಸಾವಿರದ ಇಪ್ಪತ್ತು ಜನರನ್ನು ಬಿಟ್ಟಿರುತ್ತಾರೆ

ಬೆನಾರೆಸ್‌ನಲ್ಲಿ

ಶ್ರೀಯುತ ಸತ್ಯನಾರಾಯಣ್ ಎಂಬ ಕಾಂಗ್ರೆಸ್ ಡಿಕ್ಟೇಟರು ಕೈದುಮಾಡಲ್ಪಟ್ಟರು ಅವರ ಜೇಬಿನಲ್ಲಿ ಹದಿನೈದು ರೂಪಾಯಿಗಳಿದ್ದವಾಗಿಯೂ, ಅವುಗಳನ್ನು ಅವರು ಮಿಕ್ಕ ಸ್ವಯಂಸೇವಕರೊಳಗೆ ಹಂಚಿಕೊಳ್ಳಲು ಇಟ್ಟುಕೊಂಡಿದ್ದರಾಗಿಯೂ ಸುದ್ದಿ

ಲಾಹೋರಿನಲ್ಲಿ

ಕಳೆದ ತಿಂಗಳ ಅಂತ್ಯದಲ್ಲಿ ಶ್ರೀ ತೇಜಸಿಂಗ್ ಎಂಬ ಕಾಂಗ್ರೆಸ್ ಕೆಲಸಗಾರರೊಬ್ಬರು ಅಲ್ಲಿಯ ಮುಖಂಡರಾದ ಸರ್ದಾರ್ ಸರ್ದೂಲ್ ಸಿಂಗ್ ಕವೀಶ್ವರರೆಂಬವರ ಮನೆಯಿಂದ ಹೊರಗೆ ಬರುವಾಗ ಅವರ ಕೈಯಲ್ಲಿ ಕಾಂಗ್ರೆಸ್ ಬುಲೆಟಿನು ಇದ್ದುದನ್ನು ನೋಡಿ ಅವರನ್ನು ಕೈದುಮಾಡಿದರು ಆ ಸಂಬಂಧ ಈಗ ಸರ್ದೂಲ್ ಸಿಂಗರ ಮನೆ ಜಪ್ತಿನಡೆದು ಒಂದು ಸೈಕ್ಲೊಸ್ಟೈಲ್ ಯಂತ್ರವು ದೊರೆಯಿತು ತೇಜಸಿಂಗರಿಗೆ ಆರು ತಿಂಗಳ ಕಠಿಣ ಸಜೆಯಾಗಿದೆ

ಪತ್ರಿಕೆಯು ನಿಂತಿತು

ನಾಗಪುರದ ಜಬ್ಬಲ್‌ಪುರ ಎಂಬಲ್ಲಿನ 'ಲೋಕಮತ" ವೆಂಬ ಪತ್ರಿಕೆಯಿಂದ ಭದ್ರತೆಯನ್ನು ಕೇಳಲಾಯಿತು ಪತ್ರಿಕೆಯು ಈಗ ಪ್ರಕಾಶಿತವಾಗುವುದಿಲ್ಲ

ಪ್ರಿನ್ಸಿಪಾಲರ ಬಂಧನ

ಅಲ್ಲಹಾಬಾದಿನಲ್ಲಿ ಹಿಂದೀ ವಿದ್ಯಾಪೀಠದ ಪ್ರಿನ್ಸಿಪಾಲರಾದ ಶ್ರೀ ಚೌಬೆ ಎಂಬವರನ್ನು ಕೈದುಮಾಡಿರುವರು.

ರಾಜಕೀಯ ಪರಿಷತ್ತುಗಳು

ಕಳೆದ ವಾರದ ಕೆಲವು ಪ್ರಾಂತ್ಯಗಳಲ್ಲಿ ರಾಜಕೀಯ ಪರಿಷತ್ತುಗಳನ್ನು ಜರಗಿಸಲು ಯತ್ನವು ನಡೆಯಿತು ಕಲ್ಲಿಕೋಟೆಯಲ್ಲಿ ಮೂವತ್ತೈದು ಮಂದಿಗಳನ್ನು ಕೈದುಮಾಡಲಾಯಿತು ಅಮೃತಸರದಲ್ಲಿ ಜರಗಲಿದ್ದ ಪಂಜಾಬ್ ರಾಜಕೀಯ ಪರಿಷತ್ತನ್ನು ಕೂಡಲು ಬಿಡಬಾರದಾಗಿ ಪೋಲೀಸರು ಬಹಳ ಪ್ರಯತ್ನಪಟ್ಟರು ಇಬ್ಬರು ವಕೀಲರು ಹೌರಾ ಎಕ್ಸ್‌ಪ್ರೆಸ್ಸಿನಲ್ಲಿ ಅಮೃತಸರಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಸೆರೆಹಿಡಿಯಲ್ಪಟ್ಟರು ಲಾರಿಗಳ ಮೂಲಕ ಅಮೃತಸರಕ್ಕೆ ಮುಟ್ಟಿದ ಇಪ್ಪತ್ತಮೂರು ಮಂದಿಗಳನ್ನು ಕೈದುಮಾಡಲಾಯಿತು ಇನ್ನೂ ಕೆಲವು ಕಡೆಗಳಿಂದ ಪ್ರತಿನಿಧಿಗಳಾಗಿ ಹೋದ ಅನೇಕರನ್ನು ದಸ್ತಗಿರಿ ಮಾಡಿದರು ಅಮೃತಸರದ ಶ್ರೀಮತಿ ಶಾಂತಿದೇವಿ ಎಂಬ ಮುಂದಾಳು ಸ್ತ್ರೀಕೆಲಸಗಾರರನ್ನೂ ಇನ್ನಿತರ ಕೆಲವು ಸ್ತ್ರೀಯರುಗಳನ್ನೂ ಸ್ಟೇಶನಿಗೊಯ್ಯಲಾಯಿತು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದ ಪ್ರಿನ್ಸಿಪಾಲ್ ರಾಮ್‌ದೇವ್ ಆಚಾರಿ ಎಂಬವರು ತನ್ನ ಮೇಲಿದ್ದ ನಿಷಿದ್ಧ ಕಾನೂನನ್ನುಲ್ಲಂಘಿಸಿ ಅಮೃತಸರದ ಪರಿಷತ್ತಿಗೆ ತೆರಳುತ್ತಿದ್ದಾಗ ಕೈದುಮಾಡಲ್ಪಟ್ಟರು

* * *

ಒಂದಿಷ್ಟು.

ತಿರುತನ್ನಿಯ ಜ್ಯೋತಿಷರು ಮಹಾತ್ಮಾಗಾಂಧಿಯ ಬಿಡುಗಡೆಯ ಕುರಿತು ಮಾಡಿದ್ದ ಭವಿಷದ್ವಿಚಾರದ ಬೆಣ್ಣೆಯು ಕರಗಿ ನೀರಾಗಲು ಇನ್ನು ಹದಿನೆಂಟು ದಿನಗಳಿವೆ. ಅಂದರೆ ಜೂನ್ ತಾ ಇಪ್ಪತ್ತೆಂಟಕ್ಕೆ ಇನ್ನು ಬರೇ ಹದಿನೆಂಟು ದಿನಗಳಿವೆ ಅಷ್ಟರೊಳಗೆ ಗಾಂಧಿಜೀಯವರನ್ನು ಬಂಧನವಾಸದಿಂದ ಸರಕಾರವು ವಿಮುಕ್ತಗೊಳಿಸುತ್ತದೆಂದು ಜೋತಿಷ್ಯರ ದೇವತೆಯು ಹೇಳಿದ್ದಾಳೆ ನೋಡಬೇಕು, ಜ್ಯೋತಿಷ್ಯರ Diety ಯ ಶಕ್ತಿಯನ್ನು—ಸರಕಾರದ ಬೀಗ ಮುದ್ರೆಯು ಬಲವಾಗುತ್ತದೋ, ದೇವತೆಯ ಬಿರುನುಡಿಗಳು ಘಟ್ಟಿಯಾಗುತ್ತದೋ ಎಂದು ಮೊದಲೊಮ್ಮೆ ಈ ಜೋತಿಷ್ಯರು ಹೇಳಿದ್ದು ಸರಿಯಾಗಿತ್ತು. ಇದಕ್ಕಾಗಿ ಅವರಿಗೆ ಬಹಳ ಹಣವೂ ಕೀರ್ತಿಯೂ ದೊರೆತಿತ್ತು ಈ ಸಲ ಏನು ದೊರೆಯುತ್ತದೋ ತಿಳಿದಿಲ್ಲ ಎಲ್ಲ ಅವರ ದೇವಿಯ ಮಹಿಮೆ!

• • • •

ಮಂಗಳೂರಿನ ಬೈ ಇಂಡಿಯನ್ ಲೀಗಿನ ಕೆಲಸವು ವಾತಾವರಣದ ದೃಷ್ಟಿಗೆ ಸಾಕಾಗುವುದಿಲ್ಲವೆಂದು ಕೇಳಬಹುದು ಅದರ ಕಾರ್ಯಕಲಾಪಗಳು ನಡೆದುದು ಬಹಿರಂಗವಾಗಿ ಕಾಣುವುದಿಲ್ಲ ಹೀಗಾದರೆ ಅದು ಎಷ್ಟು ಫಲಕಾರಿಯಾದೀತು? ಪರಿಣಾಮಕಾರಿಯಾದೀತ? ಪ್ರಥಮದಲ್ಲಾಗಿ ಅದರ ಸಾರ್ವಜನಿಕ ಸಭೆಯು ಸೇರಬೇಕು. ತಿಂಗಳಿಗೆ ಒಂದೆರಡು ಸಲವಾದರೂ ಈ ಸಭೆಯು ಸೇರಿ ಜನತೆಯ ಮನದಲ್ಲಿ ಒಂದು ಚಿತ್ರವನ್ನು ರೂಪಿಸಬೇಕು. ಹತ್ತಿಪ್ಪತ್ತು ಮುಂದಾಳು ನಗರವಾಸಿಗಳು ಸದಾ ಸೇರಿ, ತಮ್ಮತಮ್ಮೊಳಗೆ ರಂಗಾವುಮಾಡಿದರ ಏನಾದಂತಾಯಿತು? ಬೈ ಇಂಡಿಯನ್ ಚಳವಳವು ಸ ನೂರನಾಲ್ವತ್ತನಾಲ್ಕರ ಕೈಗೆ ಸಿಗುವಂತಹದಲ್ಲವಾದರೆ, ಅಧಿಕಾರಿಗಳ ಅಪ್ಪಣೆ ಪಡೆದು, ಸಭೆಗಳನ್ನೇಕೆ ಜರಗಿಸಬಾರದು? ಈಗ ಅದು ಮಾಡುತ್ತಿರುವ ಕೆಲಸಗಳು ಪತ್ರಿಕೆಗಳಲ್ಲಲ್ಲದೆ ಬೇರೆ ವಿಧದಲ್ಲಿ ಜಾಹೀರಾಗುತ್ತಿಲ್ಲ

• • • •

ಬೆನಾರೆಸ್‌ನಲ್ಲಿ ಪೋಲೀಸರು ಸ್ತ್ರೀಯರನ್ನು ಕ್ರೂರಭಾವದಿಂದ ನೋಡುತ್ತಿರುವರು ಎಂಬ ಆರೋಪದ ಮೇಲೆ ಸರ್ ಸಾಮುವೇಲ್ ಹೋರರು ಲಂಡನಿನಲ್ಲಿ ನಿಂತು, "ಇದು ಆಗಿರುವುದೇ ಇಲ್ಲ ಪೋಲೀಸರ ಮೇಲಿನ ಇಂತಹ ಆರೋಪಗಳು ಪ್ರಚಾರಕರ ಕುಕಲ್ಪನೆ! ಬೆನಾರಸ್‌ನಲ್ಲಿ ಸೆರೆಹಿಡಿಯಲ್ಪಟ್ಟ ಸ್ತ್ರೀಯರಲ್ಲಿ ಹೆಚ್ಚಿನವರು ಗಂಡರ ಮನೆಯಿಂದ ಹೊರಬಿದ್ದ ನಿರ್ಗತಿಕ ವಿಧವೆಯರು" ಎಂದರು! ಇದು ಹೌದೋ ಅಲ್ಲವೋ, ಎಂದು ಬೆನಾರಸ್‌ನವರಿಗೆ ತಿಳಿಯದಿರಲಿಕ್ಕಿಲ್ಲ

• • • •

ಮಂಗಳೂರಿನಲ್ಲಿ ಈಗ ಲಾಠಿ ಚಾರ್ಜ ಇಲ್ಲದಿರುವುದು ಪರಮಾನಂದ ಸಂಗತಿಯಾಗಿದೆ 'To die of a natural death" ಎಂಬ ಫ್ರೇಸು ಈ ಸಮಯದಲ್ಲಿ ನೆನಪಿಗೆ ಬರುತ್ತದೆ ಜನರ ಮನಸ್ಸಿನಲ್ಲಿ ಸರಕಾರದ ಮೇಲಿನ ಭರವಸೆಯು ಹೆಚ್ಚಲು ಅಧಿಕಾರಿಗಳ ಇಂತಹ ವರ್ತನೆಯು ಸಹಕಾರಿಯಾಗಿದೆ

• • • •

ಹಳೇ ಕೈ ಯಾವಾಗಲೂ ವಿರೂಪವುಳ್ಳದ್ದ ಹೊಸ ಕೈ ಸ್ವರೂಪವುಳ್ಳದು ಹೊಸ ಸುಪರಿಂಟೆಂಡೆಂಟ್ ದೊರೆಗಳ ಪೋಲಿಸಿಯು ನಿಜವಾಗಿಯೂ ಅಭಿನಂದನೀಯವೇ! ಕಾಯಿದೆ ಭಂಗಿಗಳಿಗೆ ಕೈದಿಗಳ ಬಹುಮಾನವನ್ನು ಕೊಡುವುದು ಸರಕಾರಗಳ ಧರ್ಮ ಮುಂಚಿನ ಹಾಗೆ ಹೊಡೆಯುವುದಲ್ಲ!

• • • •

ಮೊನ್ನೆ ಆದಿತ್ಯವಾರ ಮೈದಾನಿನಲ್ಲಿ ಸೇರಿದ ಸಭೆಗಳನ್ನು ಪೋಲೀಸರು ಶಾಂತರೀತಿಯಿಂದ ಬದಿಗೆ ಚದರಿಸಿದರು ಮುಂಚಿನ ಕಾಲದಲ್ಲಿ ದೊಣ್ಣೆ ಬೀಸಿ ಬೀಸಿ ಅಭ್ಯಾಸವಾಗಿದ್ದ ಒಬ್ಬ ಪೋಲಿಸನು ತನ್ನ ಸಣ್ಣ ದೊಣ್ಣೆಯಿಂದ ಒಬ್ಬೊಬ್ಬರಿಗೆ ಕುಟ್ಟಿಯೇ ಬಿಟ್ಟನು ಚದರಿಸಲು ಮಾತ್ರ ಅವನಿಗೆ ಅಪ್ಪಣೆ, ಇತ್ತು ದೊಣ್ಣೆಯಿಂದ ಕುಟ್ಟಲಿಕ್ಕೆ ಇತ್ತೋ?

• • • •

ಆದಿತ್ಯವಾರ ದಿನ ಪೋಲೀಸರು ಪ್ರದರ್ಶಿಸಿದ ನೈತಿಕ ಬಲವು ಪ್ರಶಂಸನೀಯವಾಗಿದೆ ಹೆಚ್ಚು ಕಡಿಮೆ ಸ್ಪೋರ್ಟ್ ಡಿಸಿಪ್ಲಿನ್‌ನನ್ನು ಪ್ರಕಾಶಿಸಿದರು ಹಾಗೆ ಮಾಡಿದುದರಿಂದ ಜನರ ಮನಸ್ಸಿನಲ್ಲಿ ಅವರ್ಣನೀಯವಾದ ಶಾಂತತಾ ಮನೋಭಾವ ವುಂಟಾಯಿತು ಇದಕ್ಕೆಲ್ಲ ಮಾನ್ಯ ಸುಪರಿಂಟೆಂಡೆಂಟರ ಉತ್ತಮ ದಕ್ಷತೆಯೇ ಕಾರಣವು ಅವರು ಯಶಸ್ವಿಗಳಾಗಲಿ!

* * *

ALLIANZ UND STUTTGARTER
Life Insurance Bank, Ltd.

ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್ ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದು.)

ಒಟ್ಟು ವಿಮಾ ಹಣವು ೨೦೪ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು. ವಾರ್ಷಿಕ ವಿಮಾ ಹಪ್ತೆಗಳ ಹಣವು ೯.೯ ಕೋಟಿ ರೂ, ಗಳಿಂತ ಹೆಚ್ಚಿಗಿರುವುದು. ಒಟ್ಟು ಪ್ರಾಪ್ತಿ ೮೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಕಗಳ ಮೇಲಿನ ಕಾಯ್ದೆಶೀರ ತೀರ್ಪುಗಳು ಹಿಂದೀ ಕೋರ್ಟುಗಳಲ್ಲಿಯೇ ಕೊಡಗಿಸಲ್ಪಡುವುವು.

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು. ಹೆಚ್ಚಿನ ಮಾಹಿತಿಗಾಗಿ ಮೊರವಾನಜೆ ಆ್ಯಂಡ್ ಸನ್ಸ, ಧಾರವಾಡ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured.'

PLACE YOUR LIFE ASSURANCE WITH
THE SOUTH INDIAN.

Securing for your clients —

1. **Low rates of Premium.**
2. **Liberal Policy Conditions.**

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & *HYDERABAD STATE*

For terms of Agency please apply to:—

H. R. K. IYENGAR.
Chief Agent.

The S. I. G A. Co. Ltd.,
Sanyasiguddy, MANGALORE

Managing Agents —

K. C PANDALAI & CO.
7-8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ದನಲ್ಲಿ ವಿಮೆಮಾಡಿರಿ,

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಶರ್ತಗಳು ಶೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ **ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು.**

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಆಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್. ಐ. ಜಿ. ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು:—

ಕೆ. ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ. ಟಿ. ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮಹಿತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು.—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು [illegible]

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ಕೊ. ಆ. ಸ್ಕೂಲ್ ಬುಕ್ಸ್ ಗಳಿಂದ ಶಿಫಾರಸು ಹೊಂದಿದೆ.

ವೈದಿಕ ಧರ್ಮಾಭಿಮಾನಿಗಳೂ, ಕನ್ನಡ ಭಾಷಾಭಿಮಾನಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ [ವರ್ಷಾರಂಭ

ಸದ್ಬೋಧ ಚಂದ್ರಿಕೆ.

೧೯೦೮ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ತಿಳಿಗನ್ನಡ **ಮಾಸ ಪತ್ರಿಕೆಯು.**

ವಾ. ಚಂದಾ ರೂ. ೩] [ಡೆಮ್ಮಿ ಫರಮ್ ೪.

ಆಗಡಿ ಆನಂದವನದಲ್ಲಿ ಈಗ ೨೫ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ "ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠ ಶಾಲೆ"ಗೇ ಇದರ ಆದಾಯವೆಲ್ಲ ವಿನಿಯೋಗಿಸಲ್ಪಡುತ್ತಿರುವುದು ಅಲ್ಲದೆ, ಅನೇಕ ಸದ್ಬೋಧ ಪೂರ್ಣವಾದ ಲೇಖಗಳಿಂದಲೂ, ಮನೋರಂಜಕ, ಸಾಮಾಜಿಕ, ಧಾರ್ಮಿಕ, ಐತಿಹಾಸಿಕ ಕಥೆ ಕಾದಂಬರಿಗಳಿಂದಲೂ ಕರ್ನಾಟಕದ ಸಮಾಜ ಭಾಷಾ ಸೇವೆಯನ್ನೂ ಮಾಡುತ್ತಿರುವದು. ನಮ್ಮಲ್ಲಿ ಶ್ರೀ ಶೇ ಗ್ರಂಥ ಮಾಲೆಯ ಪುಸ್ತಕಗಳೂ ದೊರೆಯುತ್ತವೆ

ಮ್ಯಾನೇಜರ ಆಫೀಸು,
ಪೋ॥ ಆನಂದವನ, ಜಿ. ಧಾರವಾಡ.

⁂

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಚ್ಚುಕಟ್ಟು ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ.—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಡಾಕ್ಟರ ವಾಮನ ಗೋಪಾಳರವರ

ಐಡಿಯಾಯಿಡ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ್ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಪಿ ಪ್ಲೇಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಮುಂಗಡ ಕ್ರಯ:—ವರ್ಷ ಒಂದಕ್ಕೆ ರೂಪಾಯಿ 2-0-0 [illegible] ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷ್ವದ ಸುಡುಕ ಒದಗಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೭ನೇ ಶುಕ್ರವಾರ ಜೂನ್ ೧೯೩೨ (17-6-'32.) ಸಂಚಿಕೆ ೨೫

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**
ಹೆಡ್ ಆಫೀಸು:—ಉಡುಪಿ ಶಾಖೆ — ಕುಂದಾಪುರ ಮತ್ತು ಮಂಗಳೂರು

Authorised Capital Rs 3,50 000. Subscribed & Called up Rs. 2,25,000
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF MAY, 1932

	CAPITAL AND LIABILITIES			PROPERTY AND ASSETS	
1	Paid up Capital	Rs 2,25,000 0 0	1	Premises Building, Furniture etc	Rs 044 0
2	Reserve and other funds	„ 2 22,705 0-0	2	Government securities	„ 530 8 0
3	Deposits	20 11 486 14 7	3	Authorised Investments	21 45
4	Due to Bankers	1 057 5	4	Bills for collection	[illegible]
5	Sundries	[illegible] 7 7 1	5	Sundries	2
6	Bills for collection per contra	15,147 11 0	6	Cash in hand & with bankers	[illegible]
	Total	25 90,264 4		Total	25 90 [illegible]

Udipi 2-6-'32

N. ANANDA RAO
Secretary & Manager

Regd.

ಅಮೃತಾಂಜನ.

ಶೀತ ಕೆಮ್ಮು, ತಲೆನೋವು, ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ಭಂಗಕೊಡುವ ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತವೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ. ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ. ಎಲ್ಲಾ ಅಂಗಡಿಗಳಲ್ಲೂ ದೊರಕುತ್ತದೆ.

ಗಜಕರ್ಣ ಮುಲಾಮು—(ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ, ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಎಂದೇ ಸಲದ ತಗಲಿಸುವಿಕೆಯಿಂದ ಗುಣವಾಗುವದೆ. ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ. ಟಿನ್ನಿಗೆ 0 6— ಜಾಡಿಗೆ 8—

ಅಮೃತಾಂಜನ ಡಿಪೋ.
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು — ಶಾ ಕಂಪೆನಿ, ಮಂಗಳೂರು

INSURE WITH
The Popular Insurance Co. Ltd.
Head Office MANGALORE S Ind
First of its kind in the West Coast.

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT
MEN

For further particulars apply to the Head Office

೧೧೦೦ ರೂ. ಬಕ್ಷೀಸು.

೨೦ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರೆ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೩೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಮದನಮಸ್ತಪಾಕ. ರಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ ಅಶಕ್ತತೆ ಕಾಮೋದ್ರೇಕವಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ ಎಂಥದಾದರೂ ಪರಮ ಮೈನಸೋಣ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ ೨೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫ ಟ ಪ ರೂ ೧ ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫॥ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನು ನೋಡಿರಿ

ಡಾಕ್ಟರ ಎಮ್ ಆಯ್ ಖಟಖಟೆ, ಎಲ್ ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ — ಈ ಪಾಕ ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ, ನಪುಂಸಕತ್ವ ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿ ದವರಿಗೆ ರೂ ೧೧೦೦ ಇನಾಮು ಕೊಡುವೆವು

ಪತ್ತೆ — **ವೈದ್ಯ ಮೋಹನಲಾಲ ಎಸ್ ಔಷಧಾಲಯ,** ಮು ಪೋ ಮಿರಜ S M C

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ [ಹಣವಾಪಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರೆ ಹಡಿಯುವದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಒಹಳ ಹಡೆತನದಲ್ಲಿ ಜೀವ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂತಾನಶಕ್ತಿ ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತನಂತರ ಏನು ಮಾಡಿದರೂ ಸಂಭವಾಗುವದಿಲ್ಲ ಮೊದಲ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ವಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಳವಾಮಾಹಿಮ ರೋಡ — ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ ಖರ್ಚ ೦।೦

ವಿಳಾಸ — ಸಂಜೀವಿನೀ ಔಷಧಾಲಯ. ಮು ಪೋ ಮಿರಜ S M C

'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.

ಬ್ರಿಟಿಷರ ಕಷ್ಟ!

ಇದೊಂದು ಯುಗದಲ್ಲಿ ಬ್ರಿಟಿಷರಿಗೆ ಬಹಳ ಕಷ್ಟ! ಕಠೋರ ಕಾಲದ ಅತ್ತೆಯು ದವಡೆಯೊಳಗೆ ಸಿಕ್ಕಿಕೊಂಡು ಕಷ್ಟದಿಂದ ಬಳಲುವ ಸೊಸೆಯ ಅವಸ್ಥೆಯು ಅವರದಾಗಿದೆ — ಹೇಗೆಂದು ಕೇಳುವಿರಾ? — ಹೇಳುತ್ತೇನೆ ಕೇಳಿರಿ.

೧೫೦ ವರ್ಷಗಳಿಂದಲೂ ತಮ್ಮ ನಿರಂಕುಶ ಪ್ರಭುತ್ವದಿಂದ ಆಳಿಕೊಂಡು ಬರುತ್ತಿದ್ದ ಹಿಂದೂ ದೇಶವು 'ಈಗ ನಮಗೆ ಸ್ವಾತಂತ್ರ್ಯ ಬೇಕು, ನಮಗೆ ಸ್ವಾತಂತ್ರ್ಯವು ಬೇಕು" ಎಂದು ಬೊಬ್ಬಿಡುತ್ತಿದೆ ಅಳುತ್ತಿದೆ ಇದನ್ನು ಸಮಾಧಾನಗೊಳಿಸುವ ಕೆಲಸವು ಬಹಳ ಕಷ್ಟಕರವಾಗಿದೆ ಇದು ಅವರ ಒಂದನೇ ಕಷ್ಟ'

ಮೂಗಿನ ವರೆಗೆ ಸಾಲವಾಗಿದೆ ಅಮೇರಿಕದವರಿಗೆ ೩ ಬಿಲಿಯನ್ ಪೌಂಡುಗಳಷ್ಟು ಸ್ಟರ್ಲಿಂಗು ಸಾಲವನ್ನು ಹಿಂತಿರುಗಿ ಕೊಡಬೇಕು ಆದರೂ ಈ ರಿಟ್ರೆಂಚ್‌ಮೆಂಟಿನ ಕಾಲದಲ್ಲಿ — ಇವರು ಇಷ್ಟೊಂದು ಹಣವನ್ನು ಹೇಗೆ ಸಂಪಾದಿಸುವರು? ನೀವೇ ಹೇಳಿ ಇದು ಅವರ ಎರಡನೇಯ ಕಷ್ಟ!'

ಐಯರ್ಲೆಂಡು ಇಷ್ಟು ಕಾಲದಿಂದಲೂ ಬ್ರಿಟಿಷರಿಗೆ ವಿಧೇಯವಾಗಿತ್ತು ಈಗ ಮಾತ್ರ ಅಲ್ಲಿಯ ಡಿ. ವೆಲರಾರೆಂಬ ಪ್ರಜಾಪ್ರತಿನಿಧಿಗಳು ಎದ್ದು ನಿಂತು ಎದೆತಟ್ಟಿ ರಟ್ಟೆತಟ್ಟಿ ಬ್ರಿಟಿಷರೇ ನಿಮಗೆ ನಾವು ವಿಧೇಯರು ನಿಜ ಆದರೆ ವಿಧೇಯರಲ್ಲ' ಎಂಬ ಎರಡು ಅರ್ಥದ ಮಾತುಗಳನ್ನಾಡುತ್ತಾರೆ ಇವರನ್ನು ಸಮಾಧಾನಗೊಳಿಸುವ ಸಂಗ ಮೂರನೇಯ ಕಷ್ಟ!!!

ಇಷ್ಟು ಕಷ್ಟವಿದ್ದರೂ ಅವರಿಗೆ ಕಷ್ಟದೊಡನೆ ಒಂದು ಇಷ್ಟವಿದೆ 'ಇಂಡಿಯನ ಸಿವಿಲ್ ಸರ್ವಿಸು ಬ್ರಿಟಿಷರಿಗೊಂದ ಅಮೋಘ ಸಹಾಯ ವಸ್ತುವಿದೆ ಅಯ್ಯೋ ಅದರ ಕೆಲಸವನ್ನು ಏನೆಂಟಿ?" ಎಂದು ಸರ್ ಸಾಮುವೇಲ್ ಹೋರರು ಮೊನ್ನೆ ಒಂದು ಭಾಷಣದಲ್ಲಿ ಹೇಳಿದ್ದಾರೆ

ಇವರು ದೇಶದ ಪೋಲೀಸ್ ಶಿಬಂದಿಯನ್ನೆಲ್ಲಾ ಹೊಗಳಿದ್ದಾರೆ ಪೋಲೀಸ ಡಿಪಾರ್ಟಮೆಂಟನ್ನು Law givers ಕಾನೂನು ಕೊಡುವವರೆಂದು ಹೊಗಳಿದ್ದಾರೆ ಪೋಲೀಸರನ್ನು ಇವರು ಹೀಗೆ ಹೊಗಳಿದರಾಯಿತೇ? ಅವರಿಗೆ ಸಂಬಳವನ್ನು ಹೆಚ್ಚಿಸಬೇಡವೇ?

ಯಾರ ಸಂಬಳವನ್ನಾದರೂ ಹೋರರು ಕಡಿಮೆ ಮಾಡುವರು ಅವರು ಪೋಲೀಸರ ಸಂಬಳವನ್ನು ಕಡಿಮೆ ಮಾಡಲಾರರು ಎಂದು ಕೆಲ ಪತ್ರಿಕೆಗಳ ಅಭಿಪ್ರಾಯ ಹಿಂದೂದೇಶವೆಂಬ ತೋಟದ ಸುತ್ತಲಿರುವ ಈ ಪೋಲೀಸ್ ಬೇಲಿಯನ್ನು ತೆಗೆಯಲು ಅಷ್ಟು ಬುದ್ಧಿಯಿಲ್ಲವೇ'

ಬ್ರಿಟಿಷರ ವಿರೋಧವಾಗಿ ಹಿಂದೂದೇಶದಲ್ಲೂ ಪರದೇಶಗಳಲ್ಲೂ ಪ್ರಚಾರ ಕಾರ್ಯ (unscrupulous p opaganda) ನಡೆಯುತ್ತಿದೆ ಎಂದು ಹೋರರು ಹೇಳಿದ್ದಾರೆ ಆದರೆ ಹಿಂದೂದೇಶದ ವಿರೋಧವಾಗಿ ಮಿಸ್ ಮೇಯೊ ಮಿಸ್ ಕೊರ್ನೇಲಿಯಾ ಸೋರಾಬ್ಜಿ ಚರ್ಚಿಲ್ ಮೊದಲಾದವರು ಮಾಡುವ ಪ್ರಪಗಾಂಡದ ಸುದ್ದಿಯನ್ನು ಇವರೇಕೆ ಎತ್ತುವುದಿಲ್ಲ?'

೧೦ನೇ ಪುಟಕ್ಕೆ ಮುಂದುವರಿಯುವದೆ



ಇಂದಿನ ದಿನ ಹಿಂದೂ ದೇಶದಲ್ಲಿ

ಫೋರ್ಡು ಕಾರಿನ ಬೆಲೆಯು ನಿಜವಾಗಿಯೂ ಬಹು ಅಗ್ಗ!

ಹೈಡ್ರೋಲಿಕ್ ಶೋಕ್ ಎಬ್ಸೋರ್ಬರ್ಸ್. ಶಿಟ್ಟರ್‌ಲೆಸ್ ಗ್ಲಾಸ್ ಸುಲಭವಾದ ಸ್ಟೀಯರಿಂಗ್.

ವೇಗ ಶಕ್ತಿ ಅತ್ಯಲ್ಪ ಬೆಲೆ. ಬಹು ಬಾಳುವಿಕೆ, ಹಾಳಾಗದ ಉಕ್ಕಿನ ಚಕ್ರ. ಉಕ್ಕಿನ ಬೋಡಿ.

Ford

ದಿ ಫೋರ್ಡು ಮೋಟರ್ ಕಂಪನಿ ಒಫ್ ಇಂಡಿಯಾ, ಲಿಮಿಟೆಡ್.,

ಎಸೆಂಬ್ಲಿ ಬ್ರೇಂಚುಗಳು: ಬೊಂಬ್ಬಾ, ಕಲ್ಕತ್ತಾ, ಮದ್ರಾಸು, ಮುಲ್ತಾನ, ಕೊಳೊಂಬೊ

ಕಲಿಯುವಿಕೆಗೂ ಕಲಿಸುವಿಕೆಗೂ ಮನೋರಂಜಕವಾದ

ಪದ್ಯ ಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

(ಶ್ರೀ ಜಿ ಎಸ್ ಲಕ್ಷ್ಮಣ ಪೈ ವಿರಚಿತ)

ಕ್ರಯ ೦—೩—೬

ಮಕ್ಕಳು ಮೆಚ್ಚುವ ಕಥೆಗಳನ್ನು, ನೀತಿಸಾರಗಳನ್ನು ಲಲಿತವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಒಳಗೊಂಡ ಕವಿತಾಗ್ರಂಥ!

ಮದರಾಸು ಮುಂಬಾಯಿ ಸರಕಾರದವರು ಇದನ್ನು ಪಠ್ಯ ಪುಸ್ತಕವಾಗಿ ಮಂಜೂರು ಮಾಡಿದ್ದಾರೆ, ಮೈಸೂರು ಸರಕಾರದವರು ಲೈಬ್ರರಿಗಳ ಬಗ್ಗೆ ಮಂಜೂರುಮಾಡಿದ್ದಾರೆ

ಹೆಚ್ಚಿನ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ —

ಹರಿಹರ ಛಾಪಖಾನೆ, ಪುತ್ತೂರು. (ದ. ಕನ್ನಡ)

ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು

ನೇಶನಲ್ ಕೆನರಾ ನ್ಯೂಸ್ ಏಜನ್ಸಿ,

ಸರ್ ಫಿರೋಜಶಾ ಮೆಹತಾ ರೋಡ್ ಮುಂಬಾಯಿ

The Udipi Mutual Benefit Fund, UDIPI

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು

ಎಂ ಮುಖ್ಯಪ್ರಾಣಭಟ್ಟ ಪ್ರೊಪ್ರೈಟರ್

ENCOURAGE INDIAN COMPANIES AND INDUSTRIES.

SWADESHI MEANS PROVIDING FOOD FOR STARVING MILLIONS DEAL IN INDIAN GOODS AND KEEP INDIAN MONEY IN INDIA

M V KAMATH

SWADESHI PRACHARAK SANGH

Kasaragod

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.

REGISTERED UNDER COMPANIES ACT [illegible]

ಕಾಸರಗೋಡು, ದ ಕನ್ನಡ

ಮೂಲಧನ ರೂಪಾಯಿ [illegible]000—0—0

ಪಾಲು 1ಕ್ಕೆ ರೂಪಾಯಿ 10—0—0 ರಂತೆ

5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸ ಬೇಕೆಂತ ಸಹಾಯಕರಾಗಿ ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯ ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿದ ಒಂದು ಕಂಪೆನಿಯು ಇಲ್ಲವಾದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿಗಳೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನುಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯುಳ್ಳದಾಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳು ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧವಿದೆ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಮೆನೇಜಿಂಗ್ ಡೈರೆಕ್ಟರ್,

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್

ಕಾಸರಗೋಡು, ದ ಕ

Canara Bank Limited.

ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal Kasargod, Cochin, Udipi Gangolli Coondapur, Bombay Puttur Calicut & Alleppey**

ಬ್ರಾಂಚುಗಳು:-

ಕಾರ್ಕಳ, ಕಾಸರಗೋಡು ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised and fully paid up Capital Rs 300 000 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ 300 [illegible]
Reserve and other sinking Funds Rs 526 000 - 0 0	ರಿಜರ್ವ ಮತ್ತು ಇತರ ಫಂಡುಗಳು ರೂ 526,0[illegible]0 – 0 –
Amount invested on G P Notes Rs 810 092 - 12 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ [illegible] 92 – 12 –
Rates of interest on fixed deposits at Head Office and Branches are 6% for 2 Years [illegible] 1 Year	ಖಾಯಂ ಠೇವಣಿಗಳ ಮೇಲೆ ಕೊಡಲಾಗುವ ಬಡ್ಡಿ ದರ – ಎರಡು ವರುಷಗಳಿಗೆ ಸೇಕಡಾ 6 [illegible] 1 ವರುಷಕ್ಕೆ ಸೇಕಡಾ [illegible]

Current Account Deposits received and interest allowed on daily balance of Rs 50 and above that on multiples of Rs [illegible]0 @ 3% from 1st January to 30th June and @ 2% from 1st July to 31st December. No interest will be allowed unless the deposit [illegible] not less than Rs 5/ during a period of 6 months ending either 30th June or 31st December in any year.

Except by special arrangement no interest is allowed on sum exceeding Rs 10 000/ in the case of Head Office and Cochin Branch and on sums [illegible] exceeding Rs 15 000 in the case of Bombay Branch and on sums exceeding Rs [illegible] in the case of other Branches

For further particulars please apply to

Office of the Bank,
Mangalore [illegible] –4–1932

K. Venkat Rao,
Secretary & Treasurer

The Pangal Nayak Bank, Ltd.

Head Office
Udipi

Established 1920

Branch Office
Mangalore

Authorised Capital Rs 2 00,000-	Paid up Capital Rs. 1 75 000-
Issued Capital Rs 1 75,000-	Reserve and other Funds Rs 1,80 000

NOTICE.

The rate of interest allowed on the under-mentioned deposits will be as follows with effect from 19-4-1932.

Fixed Deposits 3 months 4 [illegible] 6 and [illegible] months 5 [illegible] 1 year [illegible] above 5 [illegible] 2 years [illegible] p a

Short term deposits 4 p a

(By order)

Office of the Bank,
Udipi [illegible] 4 – 32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಮುದುಕು
ಮೂವತ್ತು	ರಲ್ಲಿ	ಮುಚ್ಚಟೆ
ನಲವತ್ತು	ರೋಗ	ನರಳುವಿಕೆ
ಐವತ್ತು	ಆದರೆ	ಆಲಸ್ಯ
ಅರುವತ್ತು	ಕೋಲಿನಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್ ಮದ್ರಾಸ್

ಮದನಮಂಜರಿ ಮಾತ್ರೆಗಳ ಏಜಂಟರು — ಪಿ ಟಿ ಚಂದರಾವ ವಿಶನ್ ಬೀದಿ ಮಂಗಳೂರು

ಮಳೆಗಾಲದ ಮೊದಲನೆ ವೈಭವ

ನೆಂಪರ್ಕೆ—ಕಪ್ಪೆಗಳ ವಿಜೃಂಭಣೆ. ಬೇಸಿಗೆಯಲ್ಲಿ ಅತ್ತಿತ್ತ ಮೆರೆದು ತಲೆ ಮರೆಸಿದ್ದು ಕೊನೆಗೆ ಎರಡು ಹನಿ ನೀರಿಳಿದ ಕೂಡಲೆ, ಬಾಯ್ತೆರೆದು ವಟ—ವಟಾ ಎನ್ನುವುವು ಈ ಬೇಂಡು ದಿನೇ ದಿನೇ ವೃದ್ಧಿಹೊಂದುತ್ತಾ ಬರುವುದು ಇಂಗ್ಲಿಷ ಆಫೀಸರರಿಗೆ,—ಭಾರತವರ್ಷದಲ್ಲಿ ಅಸಾಧಾರಣ ಸಂಬಳ ಭತ್ತೆ ರಜಿ ರಿಯಾಯತಿ ಪೆನ್ಶನು ಅಧಿಕಾರಗಳೆಲ್ಲವೂ ಇದ್ದರೂ,—ಇಲ್ಲಿರುವುದೆಂದರೆ, ಈ ಬೇಸಗೆಯ ಮರುಭೂಮಿಯಲ್ಲಿರುವಂತೆ' ಇಂಡಿಯಕ್ಕೆ ಬಂದು ಆಳತೊಡಗುವುದೇ 'ಬಿಳೇಜನರ ಹೆಗಲಭಾರ' ಎಂದು ಅವರ ಡಂಗುರದ ಗಾದೆ ಇಲ್ಲಿನ ಈ ಬಿಸಿ ಬಿಸಿ ದೇಶದಿಂದ ಹಿಂತೆರಳಿದೊಡನೆ, ಇಂಗ್ಲೆಂಡಿನ ತಮ್ಮ ಹವೆಗೆ ಮರಳಿ, ಇಲ್ಲಿನ ಅನ್ನವನ್ನು ಅಲ್ಲಿ ಕೂತು ತಿಂದು, ವಟ—ವಟಾ ಧ್ವನಿ ಮಾಡುವರು ಇಂಡಿಯದ ಗಾಳಿಕಾಗಿದ ಅಧಿಕಾರಿಗಳಲ್ಲಿಗು ಅಧಿಕಾರವಾಣಿಯಿಂದ ಆಡತಕ್ಕವರೆಂದು ಅಲ್ಲಿನವರ ನಂಬುಗೆ ಪಾಪ! ಕಂಬಳೀ ಗೌಡರಿಗಲ್ಲಿಯ ಗೊತ್ತು ಇಲ್ಲಿಯ ಸಂಕಟ ಈಗ,—ಫ್ರಾಂಚಾಯಿಸ ಮೊದಲಾದ ಕಮಿಟಿಗಳು ಮನೆ ಸೇರಿದ್ದೇ ಎಲ್ಲ ಕಪ್ಪೆಗಳೂ ಅಧಿಕಾರವಾಣಿಯಿಂದ ವಟಾ—ವಟಾ ಎನ್ನತೊಡಗಿವೆ ಈ ಡಾಯರ್‌ಹಾರ್ಡವಟರವವು ಈಗ ಬೇಂದಿನ ಗದ್ದಲವಾಗಿ ಎದ್ದಿದೆ ಜವಾಬ್ದಾರಿಯನ್ನು ಹಿಂದೀಯರಿಗೆ ಕೊಡಿರಿ! ಏನು ಉದಾರತೆ! ಆದರೆ,—ಈ ದರೆಯೊಗ ಅದ್ದ ಬಂದಿದೆ—ಆದರೆ, ನಿಧಾನವಾಗಿ ಹೆಜ್ಜೆ ಹಾಕುತ್ತ, ಬ್ರಿಟಿಷರ ಮತ್ತು ಹಿಂದೀಯರ ಹಿತಕ್ಕಾಗಿ ಜತನದಿಂದ ಆಡಳಿತ ಕೈವರ್ತಿಸಿರಿ' ಎಂದದೆ ಇದೊಂದು ಹೊಸತಾಗಿ ಒಂದಿರುವ ಘೋರ ಕಪ್ಪೆ ಇದರ ಗೌರವಾನ್ವಿತ ಹೆಸರನ್ನು ಹೇಳಿಯೆ ತಿಳಿಯಬೇಕಾಗಿಲ್ಲ ಬಂಗಾಳದ ಮಾಜಿ ಗವರ್ನರರಂತೆ ಇವರು

ಈ ನಾಗಸ್ವರಕ್ಕೆ ಸಮತಾನ

ಹಿಮ್ಮೇಳಕ್ಕಿವರ್ವ್ಯಾರೆ —ಆಗಾಖಾನರವರು, ಮಿ. ಜಿನ್ನಾರವರು ಇವರ ಸಂಗೀತದ ಆಲಾಪನೆಯೇ ಸಾಕಾಗುತ್ತಿತ್ತು, ಫಕ್ಕನೆ ದಣಿವಾದಲ್ಲಿ ಎದಲಿ ಮತ್ತು ಅತ್ಯಾಧುನಿಕ ರೀತಿಯ ಪ್ರಲಾಪನೆಗೆ ಸರ್ ಫಜಲಿ ಹುಸ್ಸೇನರು ಇಷ್ಟರಲ್ಲೇ ಅತ್ತ ತಲಪುವರ ಇವರ ಜತೆಯಲ್ಲಿ ವಾದ್ಯರವವು ಚೆನ್ನಾಗಿ ಕೇಳಿಸುವಂತೆ ವಿಲಾಪನೆಗೆ ಇದ್ದಾರೆ ಅಂಬೇಡ್ಕಾರರು ಇಷ್ಟು ಜನವೇ ಕೂಡಿದರ ಮಹಾ ಮೇಳವಾಗಿದ್ದಿತ ಇವರಿಷ್ಟೇ ಸಾಕೆ? ದಾಸ ಮಂಜೆಪ ವರೂ ಅತ್ತ ಸವಾರಿ ಬೆಳಸಿರುವರು ನಂತರ ಕೊನೆಯದಾ ರಾ ರಾಜಾಲುವರೂ ಹೋಗುವರು ಇವರು ಜೋಡ ಮೇಳಕ್ಕೆ ಒಟಿಸಿರುವರೊ ತಿಳಿದಿಲ್ಲ ಇನ್ನು ದೂರದಿಂದ ಪ್ರತಿಧ್ವನಿ ಕೊಡಲು ಎಪಿಲ್ ಸರ್ವಿಸನವರೂ, ವ್ಯಾಪಾರಿಗಳ ಜ ಯೂರೋಪಿಯನ್ ಸಂಘಗಳೂ, ಎಲ್ಲಿಯ ಸರ್ ಸಾಹೇಬರೂ ಲಂಗಸ್ಟ ಇಂಡಿಯನ್ ಪತ್ರಿಕಾಕಾರರುಗಳೂ ಪ್ಲೆಂಟರುಗಳೂ ಓಡಗಿದೆ ಇದ್ದಾರೆ ಹೀಗ ಹೊಲಿಯನ್ನೆಬ್ಬಿಸಿ ಹೊಸ ರಾಜ್ಯಘಟನಾ ಕ್ರಮಗಳ ಡಂಗುರ ಸಾರುವರೇನು? ರೌಂಡ ಟೇಬಲ್ ಪಕ್ಷವು ತನಗೆ ಬೇಕಾಗಿರುವ ಬಗೆಯ ತಿದ್ದುಪಾಟುಗಳನ್ನು ಸೂಚಿಸಿಯದೆ ನಿಜ, ಒಂದು ವೇಳೆ ಇವುಗಳನ್ನು ಒದಗಿಟ್ಟು ಸರಕಾರವು ನಡೆದರೂ ಲಿಬರಲ್ಲರು ಇದು ಚೆನ್ನಾಗಿದೆ ಎನ್ನುವರೋ ಎಂದೂ ಹಲವರ ನಂಬುಗೆ ಇದೆ ದೇಶದ ಮುಖ್ಯ ರಾಜ್ಯಾಂಗವಾಗಿರುವ ಕೊಂಗ್ರೆಸ್ಸು ಜೈಲು ಪಾಲಾಗಿರುವಾಗ ಕೈಕಾಲುಗಳಿಗೆ ತೃಪ್ತಿಕರವಾದುದೆಂದು ತೋರಬಹುದಾದ ದು ತಳಗ ತಹೋರಬಂದೀತೆ? ಎಂದೇ ಮೊದಲಾಗಿ ಪತ್ರಿಕೆಗಳೆಂದಿವೆ ಸದ್ಯದಲ್ಲೇ ತಿಳಿದು ಬರುವುದು

ಎರಡನೆ ಸಲ ಆಕ್ಟಿಂಗ್

ಎಕ್ಸಿಕ್ಯೂಟಿವ ಕೌನ್ಸಿಲರರಾಗಿ ನೇಮಕ ಹೊಂದಿರುವ ಸರ್ ಸಿ ಪಿ ರಾಮಸ್ವಾಮಿಯ್ಯರು ಕೃತಜ್ಞತಾಭಾವದಿಂದ ಮಾತ್ರವೇ ಅಲ್ಲದೆ ಇದ್ದರೂ ವಿಮರ್ಶಾದೃಷ್ಟಿಯಿಂದ ಲೋರ್ಡ್ ವಿಲ್ಲಿಂಗಡನ್ನರಿಗೆ ಶಿಫಾರಸು ಕೊಟ್ಟದು ಅಸಂಗತವಲ್ಲ 'ಹಿಂದೀಯರ ನಿಜ ಮಿತ್ರರೆಂದರೆ ಈ ವೈಸ್ರಾಯರು' ಎಂದು ಇವರ ಸಿದ್ಧಾಂತವಾಗಿದೆ, ಉದಾಹರಣೆಗಾಗಿ ಅವರು ಶ್ರೀಯುತ ಅಯ್ಯರ ನಿಜ ಮಿತ್ರರೆಂಬುದರಲ್ಲಿ ಸಂದೇಹವೆಂತೂ ಇರಲಾರದು 'ಲೋರ್ಡ್ ಸಾಹೇಬರೇ ಇಂಡಿಯದ ಮೊದಲನೆ ಕನ್ಸ್ಟಿಟ್ಯೂಶನಲ್ ಗವರ್ನರ ಜನರಲರಾಗುವರು' ಎಂಬುದು ಎರಡನೆ ಪ್ರವಾದ. ಹಾಗಾಗಲಿ ಎಂದು ಯಾರೂ ಆಶಿಸದ ಇರಲಾರರು. ಆದರೆ ಸರಕಾರವು ಈ ಹೊಸ ರಚನೆಗೆ ಮುಂದರಿವ ಹೆಜ್ಜೆಗಳ ವೇಗವನ್ನು ನೋಡಿದರೆ ಬಹು ವರ್ಷಗಳಲ್ಲಾದರೂ ಪ್ರಾಂತಿಕ ಸ್ವರಾಜ್ಯವು ಸಂಘಟಿಸಬಹುದೇ ಎಂದು ಅಂಜಿಕೆ ತೋರುತ್ತಿದೆ, ಅದು ವರೆಗೆ ಲೋರ್ಡ ಬಹದೂರರು ಚಿರಾಯುವಾಗಿರಲಿ! ಬಳಿಕವೇ ಇಂಡಿಯದ, ಫೆಡರೇಶನ್ ಎಂದಾದ ಇಂಡಿಯದ, ಗವರ್ನರ ಜನರಲ್ ಆಗತಕ್ಕವರಿರುವರು. ಬಾಯುಪಚಾರದಿಂದ ನಾವೇನೆಂದರೂ ಎನ್ನಬಹುದು ಒರ್ಡಿನೆನ್ಸುಗಳು ವೈಸ್ರಾಯ ಕರಾರುಗಳಾಗಬಹುದೆ? ಎಂದರೂ ಹೌದೆನ್ನದೆ ಅಯ್ಯರರು ದೇರೇನೆನ್ನುವರೆ? ಇವರು ಆಕ್ಟಿಂಗು ಕಾಯಮ್ಮಾಗಲಿ!

ಬ್ರಿಟಿಷರ ಸ್ವದೇಶೀ ಕ್ರಮ

ಬ್ರಿಟಿಷ ಸರಕನ್ನೆ ಕೊಂಡುಕೊಳ್ಳಿರಿ' ಎಂಬುದನ್ನು ಬಹು ದಿನಗಳ ತನಕ ಸಾರಿ, ಅದರ ಮರ್ಮವು ಅಲ್ಲಿನ ಜನಗಳಲ್ಲಿ ನಾಟುವಂತೆ ಮಾಡಿದ ಬಳಿಕ ಈಗ, ''ಬ್ರಿಟಿಷ ಹಡಗುಗಳಲ್ಲಿ ಪ್ರಯಾಣಮಾಡಿರಿ' ಎಂಬ ಹೊಸ ಡಂಗುರಕ್ಕಾರಂಭಿಸಿರುವರು ಇಂತಹ ಸ್ವದೇಶೀ ಚಳವಳ ಮಾಡಲು ಅಧಿಕಾರವುಳ್ಳವರೇ ಧನ್ಯ ಜೀವಿಗಳು ಜೀವಂತ ಧನ್ಯರು ಇಟಲಿ ದೇಶದ ಹಡಗುಗಳಿಗೆ ಇದಿರಾಗಿ ಸ್ಪರ್ಧೆ ನಡೆಸುವುದು ಬ್ರಿಟಿಷ ಹಡಗುಗಳಿಗೆ ತೀರ ಕಷ್ಟತರವಾಗಿದೆ ಇಟಲಿ ಸರಕಾರವು ಇಟಲಿ ಹಡಗುಗಳಿಗೆ ತ ಎರಾ ಪೋಷಕ ದ್ರವ್ಯಸಹಾಯಮಾಡುತ್ತಿದೆ ಇಟಲಿಯ ಹಡಗುಗಳು ಜಗತ್ತಿನ ಹಡಗುಗಳಲ್ಲೆಲ್ಲ ಪ್ರಯಾಣಿಕರಿಗೆ ಸೌಕರ್ಯ ಒದಗಿಸುವುದರಲ್ಲಿ ಮೊದಲನೆಯವಾಗಿವೆ ಬ್ರಿಟಿಷ ಸರಕಾರವು ಪ್ರಸಿದ್ಧವಾದ ಪಿ ಒ ಕಂಪೆನಿಗೆ ಕಾಸಿನ ದ್ರವ್ಯ ಸಹಾಯಮಾಡ ವುದಿಲ್ಲವಂತೆ ಇದೇ ಯುರೋಪಿಯರೂ ಹಿಂದೀಯರೂ ಹೆಚ್ಚುಹೆಚ್ಚಾಗಿ ಇಟಲಿಯ ಹಡಗುಗಳಲ್ಲಿ ಪ್ರಯಾಣಮಾಡುತ್ತಿರುವರೇಕೆಂದು ಬ್ರಿಟಿಷ ಕಂಪೆನಿಗಳು ವಿಚಾರ ಮಾಡಬಾರದೆ? ಇಟಲಿ ಅಥವಾ ಫ್ರಾನ್ಸಿನ ಹಡಗುಗಳಲ್ಲಿ ಪ್ರಯಾಣಿಕರನ್ನು ವರ್ಣದ ತಾರತಮ್ಯವಿಲ್ಲದೆ ವಿನಯದಿಂದ ಕಾಣುತ್ತಿರುವರೆಂಬುದು ನಿಜವೇ?

ಮೂರ್ತೆಮಾಡಲು ಪ್ರತಿಬಂಧಕ

ಮಾಡಿದವರ ಮುಂಬಯಿ ಮುನಿಸಿಪಾಲಿಟಿಯವರು ಅಲ್ಲಿನ ಮ್ಯುನಿಸಿಪಲ್ ಸ್ಥಳದೊಳಗೆ ಎಲ್ಲಿಯೂ ತೆಂಗಿನ ಯಾ ತಾಳೆ ಮರಗಳ ಮೂರ್ತೆಮಾಡಬಾರದು ಎಂದೇ ಮ್ಯುನಿಸಿಪಾಲಿಟಿಯ ಶಾಸನವಾಗಿದೆ ಇದಾಗಿ ಎರಡು ವರ್ಷಗಳಾಗಿವೆ ಇಷ್ಟು ಕಾಲ ಆದಾಗ ಈ ಶಾಸನವನ್ನು ರದ್ದುಮಾಡಲು ಬಹಳ ಪ್ರಯತ್ನಗಳಾದುವು, ಆದರ ನಿರರ್ಥಕವಾಯಿತ ಈಗ ಆರ್ಥಿಕ ಅಡಚಣೆಯಿರುವ ಕಾರಣ, ಹೆಂಡ ಇಳಿಸಲು ಈ ತೆಂಗಿನ ಮರಗಳಿಗೆ ಅಪ್ಪಣೆಕೊಡಬಹುದಾಗಿ ನಿರ್ಧಾರವಾಗಲೆಂದು, ಸರ್ ವಸಂತರಾವ ದಾಬೋಳಕರರೇ ಸೂಚನೆ ತಂದಿರುವರು ಮದ್ಯಪಾನ ನಿವಾರಣೆಯ ಸಾಧನೆಗಾಗಿಯೇ ಹಿಂದಣ ನಿರ್ಧಾರವನ್ನು ಮಾಡಿರುವ ಸಭಿಕರು ಇಂತಹ 'ಉದಾರ ದಾನವು ಕುಡಿಕರಿಗೆ ದೊರೆಯದಂತೆ ಪ್ರಯತ್ನಿಸದೆ ಇರಲಾರರೆಂದು ನಂಬಬೇಕಾಗಿದೆ

ಸಾಮ್ರಾಜ್ಯದೊಳಗಣ ಪ್ರಜೆಗಳು

ಹಿಂದೀಯರು ಆಫ್ರಿಕದಲ್ಲಿ? ಹಿಂದೀಯರನ್ನು ಬ್ರೆಜಿಲ್ ಎಂಬ ದಕ್ಷಿಣ ಅಮೇರಿಕಾ ಪ್ರಾಂತ್ಯಕ್ಕೆ ಕಳುಹಿಕೊಡಲು ಪ್ರಯತ್ನಗಳಾಗುತ್ತಿವೆ ಆಫ್ರಿಕದಲ್ಲಿ ಬ್ರಿಟಿಷರಿಗೆ ನೆಲೆನಿಲ್ಲುವುದಕ್ಕೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಲು ನೆತ್ತರನ್ನು ಬೆವರಾಗಿ ಮಾರ್ಪಡಿಸಿದವರೇ ಹಿಂದೀಯರು ಇನ್ನು ಅವರ ಅಗತ್ಯವು ಅಲ್ಲಿಲ್ಲ ಕರೀ ಜನರು ಬಿಳೇ ಜನರ ಹವಾ ಕೆಡಿಸಬಾರದು ಅದಕ್ಕಾಗಿ 'ತೊಲಗಿ! ಎಂದರ ಹೋಗರು "ಬ್ರೆಜಿಲ್ ಪ್ರಾಂತ್ಯವು ಇಂಡಿಯದಂತೇ ಇದೆ ಅತ್ತ ತೆರಳಿ, ಹಣ ಕೊಡುತ್ತೇವೆ' ಎನ್ನುವರು ಬ್ರಿಟಿಷರು ಹೊಗೆ ಹಾಕದರೂ ಹೋಗುವುದಿಲ್ಲವೆಂದು, ತಾವು ಹುಟ್ಟಿ ಬೆಳೆದ ಆಫ್ರಿಕವನ್ನು ತೊಲಗಲಾರೆವೆಂದು ಹಿಂದೀಯರೆನ್ನುತ್ತಾರೆ ಇಂಡಿಯಾ ಸರಕಾರವು ಬಹಳ ಪ್ರಯತ್ನಪಟ್ಟು, ಹಿಂದೀಯರನ್ನೂ ಬ್ರಿಟಿಷರನ್ನೂ ಅತೃಪ್ತಿಗೊಳಿಸಿದೆ ಎಂದು ಮೆಂಚೆಸ್ಟರ್ ಗಾರ್ಡಿಯನ್ ಬರೆದಿದೆ

ಸಬಳದಂತೆ ಘಾತಕವಾದ ಸಂಬಳ

ಬ್ರಿಟಿಷ ಇಂಡಿಯನ್ ಎಸೋಸಿಯೇಶನ್ ಎಂಬ ಜಮೀನ್ದಾರರೂ ರಾಜರುಗಳೂ ಮೆಂಬರರಾಗಿರುವ ಸಂಘವು ಬಂಗಾಳದ ಸರಕಾರೀ ವ್ಯಯ ಇಳಿಸುವರೆ ಉಂಟಾಗಿರುವ ಕಮಿಟಿಗೆ ಒಂದು ಸೂಚನಾಪತ್ರ ಬರೆದುಕೊಂಡಿದೆ ಅದರಲ್ಲಿ, ಸಿವಿಲ್ ಸರ್ವಿಸೇ ಮೊದಲಾದ ಸರ್ವಿಸುಗಳಲ್ಲಿನ ಹುದ್ದೇದಾರರಿಗೆ ತೆರಲುಗುವ ಸಂಬಳಗಳನ್ನು ಮಿತ ಕಡಿತಾಯವು ಕಡ್ಡಾಯವಾಗಿ ಆಗಬೇಕೆಂದು ಸೂಚಿಸಲಾಗಿದೆ ಮಸಾಹತುಗಳಲ್ಲಾದರೂ ಸಿವಿಲ್ ಸರ್ವಿಸ್ ಅಧಿಕಾರಿಗೆ ಸಿಗುವ ಸಂಬಳದ ಪರಮಾವಧಿಯು ೧೫೦೦ ರೂಪಾಯಿ, ಇಲ್ಲಿ ೬೦೦ರಿಂದ ಪ್ರಾರಂಭಿಸಿ ಇಪ್ಪತ್ತು ವರ್ಷಗಳಲ್ಲಿ ೨೬೦೦ ರೂಪಾಯಿ! ಇಂಗ್ಲೆಂಡಿನಲ್ಲಿಯೇ ಅತ್ಯುಚ್ಚ ಸಿವಿಲ್ ಸರ್ವಿಸ್ ಅಧಿಕಾರಿಗೆ ವಾರ್ಷಿಕ ಸಿಗುವುದು ೯೦೦ ಪವನು, (೧೨೦೦೦ರೂಪಾಯಿ) ಫ್ರಾನ್ಸಿನ ರಾಜಧಾನಿಯ ಪ್ರಮುಖ ನ್ಯಾಯಾಧೀಶನಿಗೆ ೫೦೦ ರೂಪಾಯಿ, ಜಾಪಾನಿನಲ್ಲಿ ೬೫೦ ರೂಪಾಯಿ ಸಂಬಳ ಮೀರಿದ ಸಿವಿಲಿಯನ್ ಒಬ್ಬನೂ ಇಲ್ಲ, ಪ್ರಧಾನ ಸಚಿವರ ಸಂಬಳವಿರುವುದು ೩೦೦೦ ರೂಪಾಯಿ * ನಮ್ಮಲ್ಲಿ ಮೊದಲನೆ ತರಗತಿ ಜಡ್ಜರಿಗೆ ಸಿಗುವುದಕ್ಕಿಂತ ಇದು ಸ್ವಲ್ಪ ಹೆಚ್ಚಾಗಿರಬಹುದು

ನೋಟಗಳು.

NOTE S

ಈ ವರ್ಷದ ಸ್ಕೂಲ್‌ಫೈನಲ್ ಫಲಿತಾಂಶಗಳು ಹೊರಟುವು, ೨೦೦೦೦ದಲ್ಲಿ ಸೇಕಡಾ ೩೭ರಂತೆ ಪಾಸ್, ಉಳಿದುದು ನಾಪಾಸ್ ಇನ್ನು ಕೆಲವು ಮಟ್ಟಿನ ರಿಯಾಯತಿ ತೋರಿಸಿ ಕುಸರಿಯಾಗಿ ಸೇಕಡಾ ೫ ಕೂಡಿಸುವರಂತೆ ಇಲ್ಲದಿದ್ದರೆ ನೂರರಲ್ಲಿ ೬೦ ಹಾಳೆಂದರೆಂದು ಹೆಸರು ಕೆಡದೇ?

* * * *

ಈ ವರ್ಷದ ಮಳೆಗಾಲವೂ ಹಾಗೆಯೆ ನಮ್ಮ ದೇಶದ ಉತ್ಪನ್ನವು ಮಳೆಯನ್ನಾಧರಿಸಿಯದೆ, ಚಿನ್ನವು ಉತ್ಪನ್ನಗಳನ್ನಾಧರಿಸಿಯದೆ, ಚಿನ್ನವೆಲ್ಲವು ಪರದೇಶಕ್ಕೆ ಹೋಗುವುದೆಂತಾದರೆ, ಉತ್ಪನ್ನಗಳು ಕಡಿಮೆಯಾದಷ್ಟು ಹಿತ, ಅದಕ್ಕಾಗಿ ಮಳೆಯೂ ಕಡಿಮೆಯಾಗಲೆಂದು ಪರ್ಜನ್ಯಮಹಾರಾಯನ ಅಪ್ಪಣೆ, ಈಗ ಎಪ್ರಿಲ್ ತಿಂಗಳಂತೆ ಬಿಸಿಲು, ಫಾಲ್ಗುಣದಂತೆ ಬೆಳದಿಂಗಳ! ಅಂತೂ ಈ ವರ್ಷದ ಮಳೆ ನೂರಕ್ಕೆ ೮೦ರಂತೆ ಇದ್ದೀತಾಗಿ ಸರಕಾರದ ಅಂದಾಜು

• • • •

ಮುಂಬಯಿಯ ದಂಗೆ ಶಾಂತಿಮಯವಾಗಿದೆ ಶೌಕತ್ ಅಲಿಯವರು ಕೂಡಲೆ ತಮ್ಮ ಶಾಂತಿಸ್ಥಾಪನಾ ಸಾಧನೆಗಳ ವಿಷಯವಾಗಿ ಇಸ್ತಿಹಾರ ಹೊರಡಿಸಿ ಬಿಟ್ಟಿದ್ದಾರೆ ಇನ್ನು, ಶಾಂತಿಭಂಗವಾಗದಂತೆ ಶಾಂತಿಸಮಿತಿಯ ಮರು ಬಹಳ ವೇಚಾರ ಬೇಕಾಗ ಬಂದಿದೆ

• • • •

ಸರಕಾರದ ಬಜೆಟಿನಲ್ಲಿ ಹಣ ಕಡಿಮೆ. ವಾರಪತ್ರಿಕೆಯೊಂದನ್ನು ೩೦೦೦೦ ಪ್ರತಿಗಳಂತೆ ಯುಕ್ತಪ್ರಾಂತ್ಯದ ಸರಕಾರವು ಪ್ರಕಟಿಸಿ ರಾಜಭಕ್ತಿ ಹಬ್ಬಿಸುತ್ತಿದೆ ಎಚ್ಚರಿಕೆ ತಿಳಿಸುತ್ತಿದೆ

• • • •

೩೦ ಕೇಂದ್ರಗಳಲ್ಲಿ ಅಮನ್ ಸಭೆಗಳ ಸೇರಿ, ಅಧಿಕಾರಿಗಳ ಸೂಚನೆಗಳಿಗೆ 'ಆಮೆನ್ ತಥಾಸ್ತು' ಎನ್ನುತ್ತಿವೆ ಕೊಂಗ್ರೆಸ್ಸಿನ ಮುಸುಡು ಯಾವ ಮೂಲೆಯಲ್ಲಿ ಮರೆಯಾಗಿರುವುದೋ ತಿಳಿದೇ ಇಲ್ಲ ಆದರ, ಇನ್ನೂ ಜೈಲು ಸೇರುವ ಕೊಂಗ್ರೆಸ್ ಪಕ್ಷದವರು ಅಲ್ಲೇ ಹೆಚ್ಚಾಗಿದ್ದಾರೆಂದು ಪತ್ರಗಳಲ್ಲಿದೆ ಒರ್ಡಿನೆನ್ಸುಗಳನ್ನು ಇನ್ನೂ ಮುಗಿಸಿಲ್ಲ ಅದೇಕೆ?

• • • •

೧೫೦ ವರ್ಷಗಳಿಂದ ಇಂಡಿಯವನ್ನು ಇಷ್ಟು ಸಂಪನ್ನವಾಗಿ ಇರಿಸಿದ ಸಿವಿಲ್ ಸರ್ವಿಸ್ಸಿನವರಿಗ ಹೋರರ ಥ್ಯಾಂಕ್ಸು! ಇಂಡಿಯಕ್ಕೆ ಇವರು ಮಾಡಿದ ಉಪಕಾರವನ್ನು ಬ್ರಿಟಿಷ ಸರಕಾರವು ಎಂದೂ ಮರೆಯಲಾರದು

• • • •

ಇಂಡಿಯವು ಇವರಿಗೇನಾದರೂ ಉಪಕಾರವನ್ನು ಮಾಡಿದ ವುದೇ? ಇದ್ದರೆ ಇವರ ಅದನ್ನು ಮರೆಯಬಾರದಾಗಿ ನಿರಾತಂಕವಾಗಿ ಹೇಳಬಹುದೆ?

• • • •

ನನ್ನವರಿಗಾಗಿ ನಾನೆ ಹೋರಾಡುತ್ತೇನೆಂದು ನನ್ನನ್ನು ಬಾಧಿಸುತ್ತಿದ್ದಾರ ಎಂದು ದೊಡ್ಡಣ್ಣನ ಮಾತು ಏಕೆ ಹಾಗೆ ಗೊಣಗುವುದೆ? ಕೇವಲ ತನ್ನವರಿಗಾಗಿ ಮಾತ್ರ ಹೋರಾಡುವವನನ್ನು ಬಾಧೆಗಳು ಬಾಧಿಸದಿರುವುವೆ? ಕ್ಷಮಿಯಂತೆ ಸಾಧುವಾಗಿ ಬಾಧೆಗಳನ್ನು ಸಹಿಸುವುದೇ ಸಲ್ಲಕ್ಷಣ ಸಿಂಹದ ಗರ್ಜನೆಯೇಕೆ?

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.


SEIBERLING SPECIAL SERVICE
SEIBERLING SPECIAL SERVICE
They Reduce cost per mile.

TRIED & PROVED

USE A Seiberling Tube

I N

A Seiberling Tire.

You cannot find a better combination.

ಅನುಕ್ರಮಣಿಕೆ

ಅಗ್ರಲೇಖ
ಹಿಂದೂ ಮತದ ಪುನರುದ್ಧಾರ . . ೬
ಸ್ಫುಟವಿಚಾರಗಳು ೮
ನೋಟಿಗಳು ,,
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ . . ೬
ಒಳದೇಶ ವರ್ತಮಾನ ೬
ದಕ್ಷಿಣ ಕನ್ನಡ — ಮಂಗಳೂರು, ಬಂಟ್ವಾಳ, ಉಡುಪಿ, ಕಟಪಾಡಿ, ಕುಂದಾಪುರ, ಕಾರ್ಕಳ, ಕಾಸರಗೋಡು ೭
ವಿವಿಧ ಸಮಾಚಾರಗಳು . ೧೧
ಬ್ರಿಟಿಷರ ಕಣ್ಣು ೩
ಜೀವನ್ಮುಕ್ತ ಮಹಾತ್ಮ ಗಾಂಧಿ ೯
ಪತ್ರವ್ಯವಹಾರ ೧೦
ಚಳವಳದ ಡೈರಿ ೧೪
ಒಂದಿಷ್ಟು

ಸ್ವದೇಶಾಭಿಮಾನಿ.

ತಾ ೧೭ನೇ ಶುಕ್ರವಾರ ಜೂನ್ ೧೯೩೦

ಹಿಂದೂಮತದ ಪುನರುದ್ಧಾರ.

ಲೋಕದಲ್ಲಿ ಹಿಂದೂಮತದಷ್ಟು ವಿಶಾಲವೂ ಉದಾರವೂ ಆದ ಮತವು ಬೇರೊಂದಿಲ್ಲವೆಂಬುದನ್ನು ಇತರ ಮತೀಯರು ಕೂಡ ಒಪ್ಪುತ್ತಾರೆ. ಹಿಂದೂಮತವು ಶ್ರೇಷ್ಠತಮವಾದುದೆಂದೂ, ಸನಾತನವೆಂದೂ, ಅದರ ಮೂಲಾಧಾರವಾದ ವೇದಗಳು ದೈವೀಕೃತವಲ್ಲದೆ ಮಾನುಷ್ಯಕೃತವಲ್ಲವೆಂದೂ ಹಿಂದೂಗಳ ವಿಶ್ವಾಸ. ದೈವದತ್ತವೆಂದೆಣಿಸಲ್ಪಡುವ ಆಧಾರಗಳಿಲ್ಲದೆ ಯಾವ ಮತವೂ ರಚಿಸಲ್ಪಟ್ಟಿಲ್ಲ. ಅಂತೂ ಈ ದೈವದತ್ತ ವೇದಗಳಿಂದ ಬೆಳೆದ ಈ ಹಿಂದೂಮತದ ವ್ಯಾಪಕತೆಗೆ ಮೇರೆ ಇರುವುದಿಲ್ಲ. ಇದರಲ್ಲಿ ಚಾರ್ವಾಕರಂತಹ ನಾಸ್ತಿಕವಾದಿಗಳಿಂದ ಅಷ್ಟ ಭೂತಪಿಶಾಚ ಪೂಜಕರ ವರೆಗೆ ಸ್ಥಾನ ಹೊಂದಿರುವರು ಅಥವಾ ಇದರ ಸಂಸರ್ಗದಲ್ಲಿ ಬೆಳೆದಿರುವರೆನ್ನುವಾಗ ಇದರ ವ್ಯಾಪಕತೆಯ ವಿಶೇಷತೆಯು ಕಂಡುಬರುವುದು.

ಈ ವ್ಯಾಪಕತೆಯ ಪರಿಣಾಮವೆಂದರೆ, ಜನಸಾಮಾನ್ಯರಿಗೆ ಕಾರ್ಯಕಾರಿಯಾಗುವಂತಹ ಮತವೊಂದಿಲ್ಲದಿರುವುದು. ಹಿಂದೂಮತವು ಒಂದು ಬಾರಿ ಬಹಳ ಉನ್ನತ ಸ್ಥಿತಿಯನ್ನು ಹೊಂದಿತು, ಹಾಗೆಯೇ ಅದರಲ್ಲಿ ಅಲ್ಲದ ಸಲ್ಲದ ಆಚರಣೆಗಳು ಉಂಟಾದುವು, ಅದರ ಪ್ರತಿಕ್ರಿಯೆಯಾಗಿ ಬುದ್ಧಮತವು ಜನಿಸಿ ವ್ಯಾಪಿಸಿತು, ಬುದ್ಧಮತದೆದುರಿಗೆ ಶಕ್ತಿಗುಂದುತ್ತಿದ್ದ ಹಿಂದೂಮತವು ತನ್ನ ಅಸ್ತಿತ್ವವನ್ನು ಬಲಪಡಿಸಲಿಕ್ಕೂ ತನ್ನ ಸಹಜವಾದ ವ್ಯಾಪಕತೆಯಿಂದಲೂ ಬುದ್ಧಮತವನ್ನೂ ತನ್ನಲ್ಲಿ ಸೇರಿಸಿಕೊಂಡಿತು. ಆ ಮೇಲಿನ ಹಿಂದೂಮತದ ಇತಿಹಾಸವು ಬಹು ಕ್ಷುಬ್ಧವಾದ ಸಾಗರದಂತಿದೆ. ಮುಸಲ್ಮಾನ ಉತ್ಪಾತಗಳ, ಅಂತರ್ಯದೊಳಗಿನ ದೋಷಗಳು ಮತ್ತು ನ್ಯೂನತೆಗಳು, ಡಂಭಾಚಾರಗಳ, ಪೌರೋಹಿತ್ಯ ಅನಾಚಾರ ಮತ್ತು ಮೋಸಗಳು, ಇತ್ಯಾದಿಗಳಿಂದ ಮತವು ಬಹಳವಾಗಿ ಕೆಡುತ್ತಿದ್ದಾಗ, ಉತ್ತರಹಿಂದೂಸ್ಥಾನದಲ್ಲಿಯೂ ದಕ್ಷಿಣಹಿಂದೂಸ್ಥಾನದಲ್ಲಿಯೂ ಹಿಂದೂಮತದ ಪುನರ್ರಚನೆಗಾಗಿ ಹಲವು ದಾಸರು, ಸಂತರು, ಗುರುಗಳು ಮತ್ತು ಮತಾಚಾರ್ಯರುಗಳು ಮುಂದೆ ಬಂದರು. ಇವುಗಳಿಂದ ಹಿಂದೂಮತದ ಸೂತ್ರಗಳು ಸ್ಪಷ್ಟೀಕರಿಸಲ್ಪಡಬೇಕಿತ್ತು. ಆಚಾರಗಳು ವ್ಯವಸ್ಥಿತವಾಗಬೇಕಿದ್ದುವು, ಜನಸಾಮಾನ್ಯ ವಿಚಾರಶಕ್ತಿಯಲ್ಲಿ ಹೆಚ್ಚು ಶ್ರಮ ಉಂಟಾಗದ ಮತಪುಸ್ತಕ ಮತ್ತು ಉಪನ್ಯಾಸಗಳು ಉಂಟಾಗಬೇಕಿದ್ದುವು.

ಆದರೆ ಹಿಂದೂಮತದ ವ್ಯಾಪಕತೆಯು ಮೇರೆಯಿಲ್ಲದುದಾದುದರಿಂದ, ಹಿಂದೂಮತರಚನೆಯಲ್ಲಿ ವ್ಯಕ್ತಿಯ ವಿಚಾರಗಳಿಗೆ ಪ್ರಾಧಾನ್ಯವು ಹೆಚ್ಚು, ಹೀಗಾಗಿ ಮತೋದ್ಧಾರಕ್ಕಾಗಿ ಮುಂದೆ ಬಂದವರು ಮತದ ಆದಿ ಸೂತ್ರಗಳನ್ನು ಜನಸಾಮಾನ್ಯರ ಅನುಕೂಲತೆಯ ದೃಷ್ಟಿಯಿಂದ ಲಕ್ಷಿಸುವುದಕ್ಕಿಂತಲೂ ತಮ್ಮ ವಿಚಾರಶಕ್ತಿಯ ದೃಷ್ಟಿಯಿಂದ ನೋಡಿ, ಗಹನವೂ! ಕಲ್ಪನಾತ್ಮಕವೂ ಕೆಲವು ಸಮಯದಲ್ಲಿ ಸ್ವಪ್ನಮಯವೂ ಆದ ತತ್ವಗಳನ್ನೂ ರಚನೆಗಳನ್ನೂ ಹೊರಗೆ ಕೊಟ್ಟರು. ಇಂದಿಗೆ ಹಿಂದೂಮತವೆಂದರೇನೆಂದು ಸರಿಯಾಗಿ ಹೇಳಬಲ್ಲವರಾರೂ ಇಲ್ಲ. ವಿಚಾರದ ಪರಮಾವಧಿಯನ್ನು ಮುಟ್ಟಿದವರು ಹಿಂದೂಮತದಲ್ಲಿ ಎಲ್ಲವೂ ಇದೆಯೆನ್ನುವರು; ಅದರಲ್ಲಿ ಇತರ ಎಲ್ಲಾ ಮತಗಳೂ ಗರ್ಭಸ್ಥವಾಗಿವೆಯೆನ್ನುವರು. ವಿಚಾರದ ಆರಂಭದಲ್ಲಿದ್ದವರು ತನ್ನ ಹೊಟ್ಟೆಯ ನಾಲ್ಕು ಕಾಳುಗಳನ್ನು ಸಂಪಾದಿಸುವುದೇ ಹಿಂದೂಮತವೆನ್ನುವರು. ಜನಸಾಮಾನ್ಯರೊಳಗೆ ಹೊಕ್ಕರೆ ನಾಲ್ಕಾಣೆ, ಸಾವಿರಾರು ರೂಪಾಯಿಯ ಭಂಗಾರ, ವಜ್ರ ಇತ್ಯಾದಿಗಳ ಲಂಚದಿಂದ ತೃಪ್ತಿಪಡಿಸಬಲ್ಲ ದೇಗುಲದೊಳಗಿನ ಮೂರ್ತಿಭವಿಸಲ್ಪಟ್ಟಿರುವ ದೇವರ ಹೊರತು ಹಿಂದೂಮತವೇನೆಂದು ಸರಿಯಾಗಿ ತಿಳಿದವರಾರೂ ಇಲ್ಲ.

ಹಿಂದೂಮತವು ವಿಶಾಲವಾದುದು, ವ್ಯಾಪಕವಾದುದು. ಈ ವ್ಯಾಪಕತೆಯ, ಈ ವಿಶಾಲತೆಯ ಇನ್ನೊಂದು ಆಶ್ಚರ್ಯಕರವಾದ ಪರಿಣಾಮವೆಂದರೆ ಅತ್ಯಂತ ಕ್ಷುದ್ರತಮವಾದ ಸಂಕುಚಿತತೆ. ಹಿಂದೂಸಮಾಜದಲ್ಲಿ ಈ ವ್ಯಾಪಕತೆಯ ಹೆಸರಿನಲ್ಲಿ ರಚಿಸಲ್ಪಟ್ಟಿರುವ ಭೇದ, ಸ್ವಾರ್ಥ, ದುರಾಚಾರ ಇತ್ಯಾದಿಗಳನ್ನು ನೋಡಿದರೆ ಅತ್ಯಂತ ಆಶ್ಚರ್ಯವಾಗುತ್ತದೆ. ಕ್ರಿಸ್ತೀಯರಿಗೆ ತಮ್ಮ ಮತವೇನೆಂದರೆ ತೋರಿಸಲು, ಅವರು ತಿಳಿಯಬಲ್ಲ ಬೈಬಲು ಇದೆ, ಮುಸಲ್ಮಾನರಿಗೆ ಪ್ರತಿಯೊಬ್ಬನು ಓದಿ ತಿಳಿಯಬಲ್ಲ ಕುರಾನು ಇದೆ, ಆದರೆ ಹಿಂದೂವು ತನ್ನ ಮತವೆಂದು ಯಾವುದನ್ನು ಕರೆಯಬಲ್ಲನು. ಅವನ ಮತಪಾಲನಕ್ಕೆ ಪ್ರತ್ಯೇಕಿಸಲ್ಪಟ್ಟ ಪುಸ್ತಕವಿಲ್ಲ, ಅವನ ಮತಪೂಜೆಗೆ ನಿರ್ದಿಷ್ಟ ದಿನವಿಲ್ಲ, ಅವನ ಆಚರಣೆಗೆ ಸ್ಪಷ್ಟವಾದ ಸೂತ್ರಗಳಿಲ್ಲ. ಹಿಂದೂವೆಂದು ಪ್ರತಿಯೊಬ್ಬನನ್ನು ತನ್ನ ಆವರಣದೊಳಗೆ ಸೇರಿಸಬಲ್ಲ ಸರ್ವಸಾಮಾನ್ಯ (Common) ತತ್ವವಿಲ್ಲ. ಊರೊಳಗೆ ಬರಲಾರದ ಪಂಚಮನಿಂದ, ದೇವರ ಮೂರ್ತಿಯನ್ನೇ ಕಿತ್ತು ತನ್ನ ಪೆಟಾರೆಯಲ್ಲಿ ಮುಚ್ಚಿಡಬಲ್ಲ ಬ್ರಾಹ್ಮಣನ ವರೆಗೆ ಎಲ್ಲರೂ ಹಿಂದೂಗಳು. ಆದರೆ ಒಬ್ಬನ ಮತಕ್ಕೂ ಇನ್ನೊಬ್ಬನ ಮತಕ್ಕೂ ಸಂಬಂಧವೇ ಇಲ್ಲ.

ಈ ದೋಷಗಳನ್ನೇ ಈಗ ಮುಖ್ಯವಾಗಿ ಲಕ್ಷಿಸಬೇಕು, ಈ ದೃಷ್ಟಿಯಿಂದ ಹಿಂದೂಮತದಲ್ಲಿ ಸುಧಾರಣೆಯಾಗಬೇಕು. ಮತವು ಜನತೆಯನ್ನು ವಿಂಗಡಿಸಬಾರದು, ಒಬ್ಬೊಬ್ಬನಿಗೆ ಒಂದೊಂದು ರೂಪದಲ್ಲಿ ತೋರಬಾರದು, ಎಲ್ಲರಿಗೂ ಸಮಾನವಾದ ಸೂತ್ರವು ಒಂದಾದರೂ ಅದರೊಳಗಿರಬೇಕು. ಮತವು ಕಲ್ಪನಾತ್ಮಕ ತತ್ವಗಳ ಅನ್ವೇಷಣದಲ್ಲಿಯೇ ತೃಪ್ತವಿರಬಾರದು. ಸಮಾಜ ರಚನೆ, ಸಮಾಜದ ಅಖಂಡತೆ, ಸಮಾಜಕ್ಕೆ ಆಧಾರ, ಸಮಾಜಕ್ಕೆ ಸರ್ವಸಾಮಾನ್ಯ ಸೂತ್ರ, ಪ್ರತಿಯೊಬ್ಬನೂ ತನ್ನದಿದು ಮತವೆನ್ನಬಹುದಾದ ಪ್ರಮಾಣ, ಇವುಗಳನ್ನು ಮತವು ರಚಿಸಬೇಕು. ಹಿಂದೂಮತವು ಇದನ್ನು ಉದ್ದೇಶಿಸಿ ತನ್ನೊಳಗೆ ಪರಿವರ್ತನೆಗಳನ್ನು ಮಾಡಿಕೊಳ್ಳಬೇಕು. ಇದು ಸಾಧ್ಯವೇ?

ವಿದೇಶ ವರ್ತಮಾನ.

ಪಟ್ಟಣ ವಾಸಕ್ಕೂ ಹಳ್ಳಿಯ ವಾಸಕ್ಕೂ ಇರುವ ಭೇದವನ್ನು ತಿಳಿಯುವುದಕ್ಕಾಗಿ ಪ್ರಿನ್ಸ್ ಆಫ್ ವೇಲ್ಸರು ಕಳೆದ ವಾರ ಡರ್ಬಿಶಯರಿನ ಪೀಕ್ ಜಿಲ್ಲೆಗೆ ಹೋಗಿ ಅನೇಕ ಬಡವರ ಮನೆಮಠಗಳನ್ನು ಸಂದರ್ಶಿಸಿ ಹಳ್ಳಿಗಳಲ್ಲಿ ಜನರು ಯಾವ ರೀತಿಯಿಂದ ಕಾಲಕ್ಷೇಪ ಮಾಡುತ್ತಿರುವರೆಂದು ಕಂಡುಕೊಂಡರು. ಲೆಂಗ್ಲಿ ಎಂಬಲ್ಲಿ ಒಬ್ಬ ಬಡ ಕಮ್ಮಾರನು ತನ್ನ ಗುಡಿಸಲಲ್ಲಿ ಕುಳಿತು ಕಬ್ಬಿಣದ ಕೆಲಸದಲ್ಲಿ ನಿರತನಾಗಿದ್ದನು. ಪ್ರಿನ್ಸ್ ಆಫ್ ವೇಲ್ಸರು ಆಕಸ್ಮಿಕವಾಗಿ ಅವನಲ್ಲಿಗೆ ಹೋಗಿ ಅವನು ಮಾಡುವ ಕೆಲಸಗಳನ್ನು ಕಂಡರು. ಕಂಡು ಕನಿಕರಗೊಂಡರೋ ಎಂಬಂತೆ, ಅವರು ನೆಟ್ಟಗೆ ತಿದಿಯ ಬಳಿಗೆ ಹೋಗಿ ಅದನ್ನು ತಿರುಗಿಸುತ್ತಾ ಕೆಲಹೊತ್ತು ಕುಳಿತರು.

— ಇಟಲಿಯ ಒಂದು ಅಗಾಧವಾದ ಸಮುದ್ರದ ಮಧ್ಯೆ ಕೆಲವು ವರ್ಷಗಳ ಮೊದಲು 'ಈಜಿಪ್ಟ' ಎಂಬ ಸ್ಟೀಮರು ಮುಳುಗಿತ್ತು. ಅದು ಮುಳುಗುವಾಗ ಅದರಲ್ಲಿ ಬಿಲಿಯಗಟ್ಟಳೆ ದ್ರವ್ಯವೂ ಇತ್ತು. ಆ ನಿಧಿಯನ್ನು ಮೇಲೆತ್ತಬೇಕಾಗಿ ಬಹಳ ಯತ್ನಮಾಡಿದರೂ ಪ್ರಯೋಜನವಾಗಲಿಲ್ಲ. ತಾ ೯ನೇ ದಿನ ಕೆಲವು ಇಟಲಿಯನರು ಕೂಡಿ 'ಆರ್ಟಿಗ್ಲಿಯೋ' ಎಂಬ ಸ್ಟೀಮರಿನಿಂದ ಸಮುದ್ರಕ್ಕೆ ಮುಳುಗಿ 'ಈಜಿಪ್ಟ' ಸ್ಟೀಮರಿನ ಒಂದು ಕೋಣೆಯನ್ನು ಒಡೆದರು. ೧೫೦೦೦ ರೂಪಾಯಿಗಳ ನೋಟುಗಳು ದೊರೆತಿವೆ.

— ಓಲ್ ಇಂಡಿಯಾ ಕ್ರಿಕೆಟ್ ಪಂಗಡವೊಂದು ಪೋರ್ ಬಂದರ ಮಹಾರಾಜರ ಮುಂದಾಳುತನದಲ್ಲಿ ಇಂಗ್ಲಾಂಡಿಗೆ ಹೋಗಿತ್ತಷ್ಟೆ! ಇವರು ಅನೇಕ ಹೆಸರುವಾಸಿ ಪಂಗಡಗಳನ್ನು ಸೋಲಿಸಿರುವುದು ಆಶ್ಚರ್ಯಕರ.

— [illegible] ಗಳಲ್ಲಿ ಬಂಧಿಸಲ್ಪಡುವ ರೂಢಿಯನ್ನು ಖಂಡಿಸಿ ಬಿಷಪ್ ಆಫ್ ಎಕ್ಸೆಟರರಾದ ಲೋರ್ಡ್ ವಿಲ್ಲಿಯಮ್ ಸಿಸಿಲರು ಲಂಡನಿನಲ್ಲಿ ಭಾಷಣವಿತ್ತರು.

— ಮುದಿತನದಿಂದ ಬಳಲುವ ಮಿ। ಲೊಯಡ್ ಜೋರ್ಜರು ಪಾರ್ಲಿಮೆಂಟಿಗೆ ಪುನಃ ಕಾಲಿಟ್ಟಿರುವರು. ಅವರ ಭಾಷಣಗಳಾಗುತ್ತಿವೆ.

ಒಳದೇಶ ವರ್ತಮಾನ

— ಕಲ್ಕತ್ತದಲ್ಲಿ ಅಮೀರುದ್ದೀನ್ ಹಬೀಬ್, ಜವಾರಿ ಎಂಬ ಮೂವರು ತಲಾಷು ಬೀಡಿಕಟ್ಟ ದೊರೆತ ಎಂಟಾಣೆಗಳನ್ನು ಹಂಚಿಕೊಳ್ಳುತ್ತಾ, ತರ್ಕಕ್ಕೆಳೆದು, ಜಗಳಕ್ಕೇರಿ ಬಳಿಯಲ್ಲಿದ್ದ ಕತ್ತಿಗೆ ಹತ್ತಿ, ಕಡೆಯವನು ಹಬೀಬ ಅಮೀರುದ್ದೀನರನ್ನು ತಿವಿದುಬಿಟ್ಟನು.

ಲೋರ್ಡ್ ವಿಲ್ಲಿಂಗ್ಡನರೂ ಅವರ ಧರ್ಮಪತ್ನಿಯವರೂ ಬರುವ ತಿಂಗಳಲ್ಲಿ ನೀಲಗಿರಿಯ ಉದಕಮಂಡಲಕ್ಕೆ ವಿಮಾನದ ಮೂಲಕ ಹೋಗಲಿರುವರು. ಮೈಸೂರಿಗೂ ಹೋಗುವರಂತೆ.

— ಕಲ್ಕತ್ತದಲ್ಲಿ ಮಿ। ಜಲಾಲುದ್ದೀನ್ ಹಶೇಮಿ ಎಂ ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ ತಾ ೮ನೇ ದಿನ ಜಿಲ್ಲಾ ರಾಜಕೀಯ ಪರಿಷತ್ತು ಜರಗಲಿತ್ತು. ಪೋಲೀಸರು ಅವರನ್ನು ಸೆರೆಹಿಡಿದರು. ೮ ತಿಂಗಳ ಸಜೆಯಾಯಿತು. ಸ್ವಾಗತ ಕಮಿಟಿಯ ಸೆಕ್ರೆಟರಿಯವರೂ ಇನ್ನಿತರ ಕೆಲವರೂ ಶಿಕ್ಷೆಗೊಳಗಾಗಿದ್ದಾರೆ.

ಮೇ ೩೦ನೇ ದಿನ ಮುಂಬಾಯಿಯಿಂದ ಲಂಡನಿಗೆ ತೆರಳಿದ ಮಾಲ್ವಾ ಎಂಬ ನಾವೆಯಲ್ಲಿ ೬೧ ೭೦೦೦ ರೂಪಾಯಿ ಬೆಲೆಬಾಳುವ ಭಂಗಾರದ ಘಟ್ಟಿಗಳು ೭೬ ಪೆಟ್ಟಿಗೆಗಳಲ್ಲಿ ರವಾನಿಸಲ್ಪಟ್ಟುವು. ಇದು ಹಿಂದೂದೇಶದ ಭಂಗಾರದ ಪ್ರಯಾಣವಂತೆ.

— ಮೀರಾಬೆನ್ನರು ತನ್ನ ಭೇಟಿಮಾಡಲು ಸರಕಾರವು ಅಪ್ಪಣೆ ಕೊಡುವುದಿಲ್ಲವೆಂಬುದನ್ನು ಗಾಂಧಿಜಿಯವರು ಕೇಳಿ ಮೀರಾಬೆನ್ನರನ್ನು ಒಳಗೆ ಬಿಡುವುದಿಲ್ಲವಾದರೆ ಇನ್ನಿತರರನ್ನೂ ತನ್ನ ಸಂದರ್ಶನಾರ್ಥವಾಗಿ ಸರಕಾರವು ಕಳುಹಿಸುವುದು ಅಗತ್ಯವಿಲ್ಲವೆಂದು ಗಾಂಧೀಜಿಯವರು ಸರಕಾರಕ್ಕೆ ಒಂದು ಪತ್ರವನ್ನು ಬರೆದಿರುವರು.

ಗಾಂಧಿಜಿಯವರು ಸೆರೆಮನೆಯೊಳಗೆ ತನ್ನ ಆಶ್ರಮದ ಕುರಿತು ಒಂದು ಚರಿತ್ರೆಯನ್ನು ಬರೆಯತೊಡಗಿರುವರಂತೆ. ಜೋತಿಷ್ಯರು ತನ್ನ ಬಿಡುಗಡೆಯ ತಾರೀಕನ್ನು ಭವಿಷ್ಯಮೂಲಕ ಹೇಳುತ್ತಿರುವುದನ್ನು ಕೇಳಿ ಗಾಂಧಿಜಿಯವರು ನಗುತ್ತಿರುವರೆಂದೂ ತನ್ನ ಬಿಡುಗಡೆಯ ವಿಷಯವಾಗಿ ಅವರು ತಾತ್ಪರರಾಗಿಯೇ ಇರುವುದಿಲ್ಲವೆಂದೂ ತಿಳಿದುಬರುತ್ತದೆ.

— ಮುಂಬಯಿಯ [illegible] ಕಾರ್ಯವನ್ನು ನಗರವಾಸಿಗಳೇ ಮಾಡುತ್ತಿರುವರು. ಹಿಂದೂ ಮುಸ್ಲಿಮ್, ಯುರೋಪಿಯನರ ಕಡೆಯ ಕೆಲವು ಮಂದಿಗಳು ಒಟ್ಟುಗೂಡಿ ಕಾವಲು ನೋಡುತ್ತಿರುವರು.

— ಕರಾಚಿಯಲ್ಲಿ ನಡೆಯಬೇಕಿದ್ದ ಸಿಂಧ್ ಪ್ರಾಂತಿಕ ಪರಿಷತ್ತನ್ನು ಜರಗಿಸಲೆಳಸಿದ್ದ ೭೦ ಮಂದಿಗಳಿಗೆ ತಲೆಗೆ ನಾಲ್ಕು ತಿಂಗಳುಗಳಂತೆ ಶಿಕ್ಷೆ ವಿಧಿಸಿದರು. ಶಿಕ್ಷೆ ಹೊಂದಿದವರಲ್ಲಿ ೬ ಮಂದಿ ಸ್ತ್ರೀಯರು.

ಲಾಹೋರಿನ ಕಾಂಗ್ರಿಯಲ್ಲಿನ ಗುರುಕುಲದ ವೈಸ್ ಚಾನ್ಸಲರಾದ ಶ್ರೀ ಆಚಾರ್ಯ ರಾಮ ದೇವ ಎಂಬವರು ಲಾಹೋರಿನ ಹೊರಗೆ ಹೋಗಬಾರದೆಂದು ಕಟ್ಟಪ್ಪಣೆಯಾಗಿತ್ತು. ಆ ಅಪ್ಪಣೆಯನ್ನುಲ್ಲಂಘಿಸಿದುದಕ್ಕಾಗಿ ಆಚಾರ್ಯರ ಮೇಲೆ ತಕ್ಸೀರು ನಡೆದಿದೆ.

ಲಕ್ನೋವಿನ ಜುಡಿಷಿಯಲ್ ಚೀಫ್ ಕೋರ್ಟಿನ ಚೀಫ್ ಜಡ್ಜರಾದ ಸರ್ ವಜೀರ್ ಹಸನ್ ಎಂಬವರ ಮನೆಗೆ ಕಳ್ಳರು ರಾತ್ರಿಯಲ್ಲಿ ಬಾಗಿಲು ಒಡೆದು ಹೊಕ್ಕು ಒಂದು ಕುಫಾಕಿಯನ್ನೂ ಕೆಲವು ಬೆಳ್ಳಿಯ ಪಾತ್ರೆಗಳನ್ನೂ ಕೊಂಡೊಯ್ದಿರುವರು. ಅಪಾದಿತರು ಸಿಗಲಿಲ್ಲ. ತನಿಖೆಯು ನಡೆಯುತ್ತಿದೆ.

— ಅಲ್ಲಹಾಬಾದಿನ ಬಾರೆಲಿ ಜೈಲಿನಲ್ಲಿದ್ದ ಪಂಡಿತ ಜವಾಹರಲಾಲರನ್ನು ಅವರ ಅಸ್ವಸ್ಥ ಸಂಬಂಧವಾಗಿ ಡೇಹರಾಡನ್ ಎಂಬ ಜಿಲ್ಲೆಯ ಸೆರೆಮನೆಗೆ ವರ್ಗಾಯಿಸಿರುವರು. ವರ್ಗಾಯಿಸುವ ಸಮಯವೂ ವರ್ಗವಾದ ವ್ಯಕ್ತಿಯೂ ಜನರ ಮನಸ್ಸನ್ನಾಕರ್ಷಿಸಲಿಲ್ಲ. ಕಾರಣ ಎಲ್ಲವೂ ಆಕಸ್ಮಿಕ!

— ಕಲ್ಕತ್ತದ ಸಿಟಿ ಕೋಲೇಜಿನ ದೇವಕುಮಾರನೆಂಬ ವಿದ್ಯಾರ್ಥಿಯ ಕೈಯಲ್ಲಿ ಲೈಸನ್ಸು ಇಲ್ಲದ ಒಂದು ರಿವೋಲ್ವರು ಇದ್ದುದರಿಂದ ೮ ವರ್ಷಗಳ ಕಠಿಣ ಶಿಕ್ಷೆಗೊಳಗಾದನು.

— ಲಕ್ನೋವಿನಲ್ಲಿ ಬೆನಾರಿಸ್ ಹಿಂದೂ ಯುನಿವರ್ಸಿಟಿಯ ಒಬ್ಬ ವಿದ್ಯಾರ್ಥಿಯಾದ [illegible] ಕಾಲೇ ಎಂಬವನ ಮನೆಯಲ್ಲಿ ಜಪ್ತಿ ನಡೆಸಿದಾಗ ಒಂದು ಸೈಕ್ಲೋಸ್ಟೈಲ್ ಯಂತ್ರವೂ ಕೊಂಗ್ರೆಸ್ ಕರಪತ್ರಗಳ ರಾಶಿಯೂ ದೊರೆತುವು.

— ನಿಷಿದ್ಧ ಮೆರವಣಿಗೆಯಲ್ಲಿ ಭಾಗವಹಿಸಿದುದಕ್ಕಾಗಿ ಕಲ್ಕತ್ತದಲ್ಲಿ [illegible]ಮತಿ ಕಮಲಿನೀ ಸರ್ಕಾರ್ ಮತ್ತು ಇನ್ನೊಬ್ಬರಿಗೆ ತಲೆಗೆ ೪ ತಿಂಗಳಂತೆ ಸಜೆಯು ವಿಧಿಸಲ್ಪಟ್ಟಿತು.

ದಕ್ಷಿಣ ಕನ್ನಡ

ಮಂಗಳೂರು: — ಸ್ಥಳೀಕ ಮುನಿಸಿಪಾಲಿಟಿಯ ಒಂದು ಸಭೆಯು ಇದೇ ತಾ. ೨೧ನೇ ಸೋಮವಾರ ದಿನ ಸಾಯಂ ೫ ಘಂಟೆಗೆ ಅದರ ಆಫೀಸಿನಲ್ಲಿ ಜರಗುವುದು

ಬೆಂಗಳೂರಿನ ಸುಪ್ರಸಿದ್ಧ ವೀಣ ಕಲಾಕೋವಿದರಲ್ಲೊಬ್ಬರಾದ ಶ್ರೀ ನಾರಾಯಣಸ್ವಾಮಿ ಪಿಳ್ಳೆ ಎಂಬವರು ಇದೇ ತಾ ೧೯ನೇ ಶನಿವಾರ ಸಂಜೆ ೪ ಘಂಟೆಗೆ ಇಲ್ಲಿಯ ಮಹಿಳಾಸಭೆಯಲ್ಲಿ ತನ್ನದೊಂದು ಕಲಾಪ್ರದರ್ಶನವನ್ನು ಮಾಡಲಿರುವರು ಎಲ್ಲಾ ಸ್ತ್ರೀಯರಿಗೂ ಸುಸ್ವಾಗತವಿದೆಯಾಗಿ ಮಹಿಳಾ ಸಭೆಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಇದೇ ತಿಂಗಳ ತಾ ೧೯ನೇ ಶನಿವಾರ ದಿನ ಮಧ್ಯಾಹ್ನ ೩ ಘಂಟೆ ಸರಿಯಾಗಿ ಮಂಗಳೂರು ಮುಸ್ಲಿಮ್ ಸಂಘದ ವಾರ್ಷಿಕ ಸಭೆಯು ಕುದ್ರೋಳಿ ಹಿಂದೂಸ್ತಾನಿ ಶಾಲೆಯಲ್ಲಿ ಮ। ರಾ। ಪಂಜೆ ಮಂಗೇಶರಾವ್, ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಕೂಡಲಿದೆ

ತಾ ೧೧-೬-೩೭ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೩೬ ಮರಣಗಳೂ ೫೦ ಜನನಗಳೂ ಆಗಿರುತ್ತವೆ

(ಶ್ರ) ಈ ಕೆಳಗಿನ ಹೆಸರುಗಳವರಲ್ಲದೆ ಇತರರು ಈ ವರ್ಷದ ಲೋವರ ಗ್ರೇಡು ಟ್ರೈನಿಂಗ್ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ ಪೆಟ್ಟ ಪಡಪು ಗಣಪತಿ ನಾಯ್ಕ, ಯು ಕೆ ಆನಂದ, ನಲ್ಲೂರ ದೇವರಾಜ ಪೂವಣಿ ಈಶ್ವರಮಂಗಲ ದೇವಪ್ಪ ಕಟ್ಟೂರಿ ತಸಿಯ ಬಜಿಯ ಅಂಗರ ಕನ್ನಡ ಮತ್ತು ಲೆಕ್ಕ ತೋರ್ತುಸ್ ಲೂವಿಸ್ ಡಿಸೋಜ ಪಡ್ಡೆರ್ ನಾರಾಯಣ ಶೆಟ್ಟಿ, ಕಾಟೂರ ವಳಪಿಲ್ ಕುಮಾರನ್ ಪಿ ಕುಂಞ ತೀಯ ಕನ್ನಡ ಮತ್ತು ಸೋಶಿಯೊಲೋಜಿ ಯು ಪಿ ಪಂದ್ಸು ಕನ್ನಡ ಮತ್ತು ನೇಚರ್‌ಸ್ಟಡಿ — ಬಿ ಎಮ್ ಮಹಮ್ಮದ್ [illegible] ಡ್ರೋಯಿಂಗ್ — ಯಸ್ ಸುಬ್ಬಾ ಈ ಕೆಳಗಿನವರು ಎಲ್ಲಾ ವಿಷಯಗಳಲ್ಲಿ ಪಾಸಾಗಿದ್ದಾರೆ — ಕುಂಬಳೆ ಹನುಮಂತ ಭಟ್ಟ ಆಟ್ವಿಲ್ಲ [illegible], ಇಸ್ಮಾಯಿಲ್ ಸಾಹೇಬ ಕುಂಬಳೆ ಮಾಲಿಂಗಯ್ಯ, ಮಲ್ಲಿ ರಾಮು, ಫ್ರಾನ್ಸಿಸ್ ನೊರೊಂಹಾ ಗಿರಿಮಜಲು ಕುಕ್ಕಪ್ಪ ಗೌಡ ಲೆಕ್ಕ ಮತ್ತು ಭೂಗೋಳ — ಅರ್ಕ ವೆಂಕಪ್ಪ ಗೌಡ

ಸಾಹುಕಾರ ವ ಜಮೀನ್ದಾರರೂ ಆದ ಶ್ರೀ ಕೆ ರಘುಚಂದ್ರ ಬಲ್ಲಾಳರು ಬಸ್ತಿಹಿತ್ತಿಲಿನಲ್ಲಿ ಸರ್ವಸಾಧಾರಣವಾದ ಜೈನ ಮತ್ತು ಬ್ರಾಹ್ಮಣರಿಗಾಗಿ ಒಂದು ಧರ್ಮಛತ್ರವನ್ನು ತೆರೆದಿರುವರು

ಇಲ್ಲಿಯ ಸ್ಥಳೀಕ ವೆಂಕಟ್ರಮಣ ದೇವಸ್ಥಾನದಿಂದ ವರ್ಷಂಪ್ರತಿ ಕೊಡುವ ವಿದ್ಯಾರ್ಥಿ ವೇತನದ ಪ್ರಕಟಣೆಯು ಇನ್ನೂ ಹೊರಬೀಳಲಿಲ್ಲವೇನೆಂದು ಹಲವರು ಕುತೂಹಲದಿಂದ ಕಾಯುತ್ತಿರುವರಾಗಿ ತಿಳಿದು ಬರುತ್ತದೆ

ರಥಬೀದಿಯಲ್ಲಿರುವ ಚರಂಡಿಗಳು ಕೆಟ್ಟ ದುರ್ಗಂಧವಾಗಿವೆ ಅವುಗಳಿಂದ ತೆಗೆದ ಮಣ್ಣನ್ನು (ಈ ಮುಂಚೆ ವರ್ತಮಾನ [illegible]) ಕೂಡಲೇ ತೆಗೆದುಬಿಡುವಂತೆ ಏರ್ಪಾಡು ಮಾಡಿದರೆ ಕೆಲಸವು ಸಾರ್ಥಕವಾಗುವುದಾಗಿ ಸೂಚನೆ

ಇಲ್ಲಿಯ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರಾದ ಡಾ ಬಿ ಸುಬ್ರಾಯ ಬಾಳಿಗ ಎಲ್ ಎಮ್ ಎಸ್ ಡಿ ಟಿ ಎಮ್ ಇವರಿಗೆ ಬೆಂಗಳೂರಿಗೆ ವರ್ಗವಾಗಿದೆ ಇವರ ಅಗಲುವಿಕೆಯಿಂದ ಜನರು ವಿಷಾದಿಸುವಷ್ಟರ ಪ್ರೀತಿಗೆ ಇವರು ಪಾತ್ರರಾಗಿದ್ದರು

ಪ್ರೊಫೆಸರ್ ರಾಮರಾವ್ ಇವರು ಇಲ್ಲಿಯ ಸರ್ಕಲ್ ಇನ್ನ[illegible]ರ ಮತ್ತು ಸಬ್ ಇನ್ಸಪೆಕ್ಟರರ ಮೇಲೆ ಹೂಡಿದ ದಾವೆಯು ತಾ ೨೬ನೇ ದಿನಕ್ಕೆ ಮುಂದಕ್ಕೆ ಇಡಲ್ಪಟ್ಟಿದೆ

ಕಾಂಚಿಗಳ ಅಂಗಡಿಯೂ ಇನ್ನೂ ಪಿಕೆಟ್ ಮಾಡಲ್ಪಡುತ್ತಿದೆ ಕೈದುಗಳೂ ಬಿಡುಗಡೆಗಳೂ ನಡೆಯುತ್ತಿವೆ

ಇದೇ ತಿಂಗಳ ತಾ ೧೯ ೨೦ ಮತ್ತು ೨೧ನೇ ಸೋಮವಾರ ದಿವಸಗಳಲ್ಲಿ ಸಾಯಂಕಾಲ ೬ ಗಂಟೆಗೆ ಕೊಡಿಯಾಲಬೈಲಿನಲ್ಲಿರುವ ಉಳ್ಳಾಲ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಗೀತೆಯಲ್ಲಿ ಪ್ರಸಿದ್ಧ ವಿದ್ವಾಂಸರಾದ ಮೈಸೂರಿನ ಶ್ರೀ ಎಂ ಎಸ್ ಗೋಪಾಲ ಅಯ್ಯಂಗಾರರು ಉಪನ್ಯಾಸಗಳನ್ನು ಕೊಡುವರು. ಸರ್ವರಿಗೂ ಸುಸ್ವಾಗತವಿದೆ ಎಂದು ಗೀತಾಸ್ವಯಂಸೇವಕರಾದ ಯಸ್ ರಾಮಚಂದ್ರ ಐಯ್ಯರರು ತಿಳಿಸುತ್ತಾರೆ

ಈ ವರ್ಷದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಮಂಗಳೂರಿನ ಹೈಸ್ಕೂಲುಗಳ ಫಲಿತಾಂಶವು ಹೀಗಿದೆ ಗವರ್ನಮೆಂಟ್ ಕಾಲೇಜ್—೨೬ರಲ್ಲಿ ೧೫ ಮಂದಿ (ಇದರಲ್ಲಿ ಶ್ರೀಮತಿ ಸಿ ಗಿರಿಜಾಬಾಯಿ ಎಂಬ ಓರ್ವ ವಿದ್ಯಾರ್ಥಿನಿಯೂ ತೇರ್ಗಡೆ ಹೊಂದಿರುತ್ತಾಳೆ) ಗಣಪತಿ ಹೈಸ್ಕೂಲಿನ ೪೯ರಲ್ಲಿ ೨೭ ಮಂದಿ ಸೈಂಟ್ ಎಲೋಶಿಯಸ್ ಕಾಲೇಜಿನ ೧೦೫ರಲ್ಲಿ ೫೦ ಮಂದಿ. ಕೆನರಾ ಹೈಸ್ಕೂಲಿನ ೧೧೪ರಲ್ಲಿ ೪೩ ಮಂದಿಗಳು ತೇರ್ಗಡೆಹೊಂದಿರುವರು.

ಬಂಟ್ವಾಳ — ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಬಂದು ನೋಡಿಕೊಂಡು ಹೋದರೂ, ಇಲ್ಲಿಯ ಕೊಟ್ರಮನಗಂಡಿ ತುಂಬೆ ಮಾರ್ಗವು ಯಥಾಪ್ರಕಾರ ಹೂಡಿದ ಗದ್ದೆಯಂತೆ ಇದೆ ಅವುಗಳಿಗೆ ಜಲ್ಲಿಕಲ್ಲು ಇನ್ನೂ ಹಾಕದೆ ಜನಜಾನುವಾರುಗಳಿಗೆ ಅಡಿಕೂಡಿ ಹೋಗುವರೆ ಸಾಧ್ಯವೇ ಇಲ್ಲ ದನ ಎಮ್ಮೆಗಳನ್ನು ಗೋಚರಾದಿಗೆ ಅದೇ ದಾರಿಯಾಗಿ ಕೊಂಡುಹೋಗಬೇಕಾದುದರಿಂದ ಅವುಗಳನ್ನು ಮನೆಗಳಲ್ಲಿಯೇ ಕಟ್ಟಿಹಾಕಬೇಕಾಗಿದೆ

ಇಲ್ಲಿಯ ಪಂಚಾಯತ ಕೋರ್ಟಿನ ಚುನಾವಣೆಯಾಯಿತು ಈ ಚುನಾವಣೆಯಲ್ಲಿ ಈ ಪಂಚಾಯತ ಕೋರ್ಟಿನ ಸರಹದ್ದಿಗೆ ಸೇರದವರನ್ನು ಚುನಾಯಿಸಿರುವರು ಹೆಚ್ಚಿನವರಲ್ಲಿ ಕಳೆದ ಸರ್ತಿಯವರೇ ಆಗಿರುತ್ತಾರೆ ಕಳೆದ ಸರ್ತಿಯ ಮೆಂಬರರಿಗೆ ಪಂಚಾಯತು ಕೋರ್ಟಿನ ಅನುಭವ ಕಡಿಮೆಯಾಗಿ ಇಲ್ಲಿಯ ಪಂಚಾಯತ ಕೋರ್ಟನ್ನೇ ತೆಗೆದು ಹಾಕುವ ಸಂಭವವಿತ್ತು ಇನ್ನು ಅದೇ ಅವಸ್ಥೆಗೆ ಬರುತ್ತದೋ ಎಂಬ ಸಂಶಯ

ಇಲ್ಲಿಂದ ಮಂಗಳೂರು ಮಹಿಳಾ ಸೇವಾಶ್ರಮಕ್ಕೆ ಇಬ್ಬರು ಎಳೇ ಪ್ರಾಯದ ಕರಾಡ ಬ್ರಾಹ್ಮಣ ವಿಧವೆಯರು ದ್ರಾವಿಡ ಬ್ರಾಹ್ಮಣ ಸಂಘದ ಸಹಾಯದಿಂದ ಹೋಗಿರುವರು

ಬಂಟ್ವಾಳ ಎಸ್ ವಿ ಎಸ್ ಫ್ರೀ ಎಲಿಮೆಂಟರಿ ಶಾಲೆಯಿಂದ ಟ್ರೈನ್ಡ್ ಆದ ಅನುಭವಸ್ಥರಾದ ಉಪಾಧ್ಯಾಯರಿಬ್ಬರನ್ನು ಕೆಲಸದಿಂದ ತೆಗೆದು (ತರಬೇತಾಗದ ಉಪಾಧ್ಯಾಯರನ್ನು ಕೆಲಸಕ್ಕೆ ನೇಮಕಮಾಡಬಾರದೆಂದು ಸರಕಾರಿ ರೂಲು ಇದ್ದರೂ) ಅನ್‌ಟ್ರೈನ್ಡ್ ಉಪಾಧ್ಯಾಯರನ್ನೇ ನೇಮಿಸಿರುವರು

ಉಡುಪಿ: — ತಾ ೬ ೧೧ ೧೪ ಮತ್ತು ೧೫ನೇಗೆ ಶ್ರೀ ಕೆ ವೆಂಕಟ್ರಾಯ ಪೈಗಳ ಅಂಗಡಿ ಎದುರು ವಿದೇಶಿ ಸಕ್ಕರೆಗಾಗಿ ಪಹರೆ ಇತ್ತು ಪಹರೆಯವರನ್ನು ಪ್ರತ್ಯೇಕ ಕೈದುಮಾಡಿ ಅಂದೇ ರಾತ್ರಿ ಅಥವಾ ಮರುದಿನ ಬಿಡುಗಡೆಮಾಡಿರುವರು ಆ ಪೈಕಿ ತಾ ೧೫ನೆ ದಿನ ಕೈದುಮಾಡಲ್ಪಟ್ಟ ಶ್ರೀ ದೇವೇಂದ್ರ ಶೆಣೈ, ಇವರ ಧರ್ಮಪತ್ನಿ ಮತ್ತು ಇತರರ ಪೈಕಿ ದೇವೇಂದ್ರ ಶೆಣೈಯವರನ್ನುಳಿದು ಬಾಕಿ ಎಲ್ಲರನ್ನು ಬಿಡುಗಡೆಮಾಡಿದ್ದರು ಶ್ರೀ ಶೆಣೈಯವರನ್ನು ಮರುದಿನ ಕುಂದಾಪುರಕ್ಕೊಯ್ದು ಡಿವಿಜನಲ್ ಆಫೀಸರರೆದುರು ಹಾಜರುಮಾಡಿ, ಪಹರೆಯವರ ಮೇಲಣ ತಕ್ರಾರಿನ ತನಿಖೆಯು ಮುಂದರಿಸಲ್ಪಟ್ಟಿತು.

ಇಲ್ಲಿನ ಪಹರೆಗಾರರನ್ನು ಪೋಲೀಸರು ಸ್ಟೇಶನಿಗೆ ಕೊಂಡು ಹೋಗಿ ಹೊಡೆದರೆಂಬ ತಕ್ರಾರಿನ ವಿಚಾರಣೆಯು ಕುಂದಾಪುರದಲ್ಲಿ ತಾ ೧೧ಕ್ಕೆ ನಡೆದು ಪೋಲೀಸರ ಮೇಲೆ ಛಾರ್ಜುಮಾಡದೆಯಾಗಿ ಮುಂದಣ ವಿಚಾರಣೆಯು ಅಲ್ಲೇ ತಾ ೨೧ಕ್ಕೆ ಇಡಲಾಗಿದೆ

ಒಜೆ ಮತ್ತು ಪೆರ್ಡೂರಿನ ಬಳಿ ದೊಂಡೆರಂಗಡಿಯಲ್ಲಿನ ಸೇಂದಿ ಅಂಗಡಿಗಳೆದುರು ಪಹರೆಯು ಈಚೆಗೆ ಕೆಲವು ದಿನಗಳಿಂದ ನಡೆಯುತ್ತಿತ್ತು ಒಜೆಯಲ್ಲಿ ಪಹರೆಮಾಡುತ್ತಿದ್ದವರನ್ನು ಕೈದುಮಾಡಿ ೩-೪ ದಿನ ಲೋಕಪ್ಪಿನಲ್ಲಿಟ್ಟು ಶ್ರೀ ಕೆ ವಿಠ್ಠಲ ಶೆಟ್ಟಿ ಎಂಬ ಒಬ್ಬರನ್ನು ಬಿಡುಗಡೆಮಾಡಿದರ, ಶ್ರೀ ಶೆಟ್ಟರು 'ರಾಮಬಾಣ'ದ ಸಂಪಾದಕರಾಗಿರುವರು, ಇವರನ್ನು ಕುಂದಾಪುರದಲ್ಲಿ ಡಿವಿಜನಲ್ ಆಫೀಸರರು ತಾ ೧೪ಕ್ಕೆ ೫ ತಿಂಗಳ ಸಜೆಗೆ ಮತ್ತು ರೂ ೧೦೦ರ ಜುಲ್ಮಾನೆಗೆ ಗುರಿಮಾಡಿರುತ್ತಾರೆ

ವಾರಕ್ಕೆ ಎರಡು ಮೂರಾವೃತ್ತಿ ವಿದೇಶಿ ಸಕ್ಕರೆಯ ಪಿಕೆಟ್ ನಡೆಯುತ್ತಲೂ ತತ್ಸಂಬಂಧ ಕೈದು ಬಿಡುಗಡೆಗಳಾಗುತ್ತಲೂ ಇವೆ

ಪ್ರಥಮ ಬಾರಿ ಕೈದುಮಾಡಲ್ಪಟ್ಟು ಶಿಕ್ಷಿಸಲ್ಪಟ್ಟ ಶ್ರೀಗಳಾದ ಶಾಂಗಾಳ ಮಂಜುನಾಥ ನಾಯಕ್ ಕುಂಬಳೆ ರಮಾನಾಥರಾವ ಬಿ ಕೃಷ್ಣಯ್ಯ ಹೆಗ್ಡೆ ಬಿ ಸದಾಶಿವ ಹೆಗ್ಗಡೆ ರಾಮದಾಸ ಪೈ ಟಿ ಕೇಶವ ಪೈ ಟಿ ರಮಾನಾಥ ಪೈ ಕಮಲಾಕ್ಷ ಕಾಮತ್ ದೇವರಾಯ ಕಾಮತ್ — ಇವರು [illegible] ತಿಂಗಳ ಶ್ರೀ ಕೃಷ್ಣ ಜನ್ಮಸ್ಥಾನವನ್ನು ಅನುಭವಿಸಿ ತಾ ೪ರಲ್ಲಿ ಬಿಡುಗಡೆ ಹೊಂದಿ ಇಲ್ಲಿಗೆ ಬಂದಿರುವರು ಈ ಧುರೀಣರಿಗೆಲ್ಲಾ ತಾ ೧೩ ಮತ್ತು ೧೪ರಲ್ಲಿ ಶ್ರೀ ಬಿ ಕೃಷ್ಣಯ್ಯ ಹೆಗ್ಡೆಯರ ಮತ್ತು ಬಿ ಸದಾಶಿವ ಹೆಗ್ಡೆಯರ ಭಾರೀ ಔತಣಗಳು ಜರಗಿದುವು ನಾವೂ ಅಭಿವಂದನೆಯ ಔತಣವನ್ನು ಸಲ್ಲಿಸುವೆವು

ಕೆಳಗಿನ ದರ್ಜೆಯನ್ನು ಕಳೆದು ಶಾಲೆಗಳಲ್ಲಿ ತೆರೆಯಲ್ಪಟ್ಟಿವೆ ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಇತರ ಶಾಲೆಯ ಮಕ್ಕಳನ್ನು ತಮ್ಮ ಶಾಲೆಗೆ ಎಳೆಯುವಂತೆ ಗಾಳಹಾಕುವುದೇ ಕೆಲಸವಾಗಿದೆ ಎಂಬ ವರ್ತಮಾನವಿದೆ ಒಂದು ಶಾಲೆಯವರು ಇನ್ನೊಂದು ಶಾಲೆಯವರಿಗೆ ಅಡ್ಡಗಾಲು ಹಾಕಿ ಬೀಳಿಸ ನೋಡುವುದರಲ್ಲಿ ಅದಾವ ಧರ್ಮವಿರುವುದೋ? ತಮ್ಮ ಸ್ವಾರ್ಥಕ್ಕಾಗಿ ಮಕ್ಕಳನ್ನು ಅಲೆಸುವುದರಲ್ಲಿಯೂ ಹೆತ್ತವರಿಗೆ ಉಪದ್ರವಕೊಡುವುದರಲ್ಲಿಯೂ ನ್ಯಾಯವಿರದು. ಇಂಥಾ ಅನಾಚಾರಗಳು ನಡೆಯದಂತೆ ನೋಡಲು ಅಧಿಕಾರಿಗಳಲ್ಲಿ ಕಾನೂನು ಸಂಗ್ರಹವಿಲ್ಲವೋ ತಿಳಿಯದು ಅನಿವಾರ್ಯ ಸಂದರ್ಭಗಳ ಹೊರತು ಇನ್ನುಳಿದ ವೇಳೆಗಳಲ್ಲಿ ವಿದ್ಯಾರ್ಥಿಗಳು ಮನಬಂದಂತೆ ಶಾಲೆ ಬದಲಾಯಿಸದಂತೆ ನೋಡುವುದು ಉತ್ತಮವಲ್ಲವೇ?

ಇನ್ನು ಮುಂದೆ ಶನಿವಾರ ದಿನಗಳಲ್ಲಿ ಸಹ ಶಾಲೆಗಳನ್ನು ನಡಿಸಬೇಕೆಂಬ ನಿಯಮವು ಜಾರಿಗೆ ಬರಲಿರುವುದಂತೆ. ಸಂಬಳ ಕಡಿಮೆಯಾದರೂ ಉಪಾಧ್ಯಾಯರು— ಪಾಪ! — ಕೆಲಸವನ್ನಾದರೂ ಹೆಚ್ಚು ಮಾಡಿ ಬಾಳಲಿ—ಅಲ್ಲ

ಕಟಪಾಡಿ: — ಇಲ್ಲಿಯ ಬೀಡಿನ ಪಟ್ಟದರಸರಾಗಿದ್ದ ಲಿಂಗಪ್ಪ ಬಲ್ಲಾಳರು ಒಂದೆರಡು ವರ್ಷಗಳಿಂದ ಮೂತ್ರರೋಗದಿಂದ ಬಾಧಿತರಾಗಿದ್ದು ತಾ ೧೦ರಲ್ಲಿ ಪರಂಧಾಮವನ್ನೈದಿದರೆನ್ನಲು ವಿಷಾದವಾಗುತ್ತದೆ ಮೃತರ ಬಂಧುಬಳಗದೊಡನೆ ಸಹತಾಪಪಡುವೆವಲ್ಲದೆ ಮೃತರ ಆತ್ಮಕ್ಕೆ ಶಾಂತಿ ದೊರಕಲೆಂದೂ, ಹೊಸತಾಗಿ ಪಟ್ಟವೇರಿದ ಶ್ರೀ ಶೀತಾರಾಮ ಬಲ್ಲಾಳರು ಆಯುರಾರೋಗ್ಯ ಸಂಪತ್ತುಳ್ಳವರಾಗಿ ಜನತಾಸೇವೆಯನ್ನು ಮಾಡುವಂತಾಗಲೆಂದೂ ಭಗವಂತನೊಡನೆ ಪ್ರಾರ್ಥನೆ

ಕುಂದಾಪುರ: — ಇದೇ ತಿಂಗಳ ತಾ ೧೧ನೇ ಶುಕ್ರವಾ[illegible] ಬೇರೂರಿನ ಸತ್ಯಾಗ್ರಹಿಗಳಿಗೆ ಕಾಡಿನ ಕಾನೂನುಲ್ಲಂಘನೆ ಮಾಡಿದ್ದಕ್ಕಾಗಿ ಸ್ಥಳೀಯ ಮೇಜಿಸ್ಟ್ರೇಟರು ಶಿಕ್ಷೆ ವಿಧಿಸಿದರು ೧೪ ಜನರಿಗೆ ಛಡಿ ೫ ಜನರಿಗೆ ಕಠಿಣ ಸಜೆ ಛಡಿ ಶಿಕ್ಷೆಯನ್ನನುಭವಿಸಿದರಲ್ಲಿ ಒಬ್ಬನು ಮಾತ್ರ ಮೂರ್ಛಿತನಾದನು ೬ ಜನರು ಸಂತೋಷದಿಂದ ಶಿಕ್ಷೆಯನ್ನನುಭವಿಸಿದರು ಛಡಿಯಲ್ಲದೆ ಇನ್ನು ಎರಡು ವಾರಗಳ ಕಠಿಣ ಸಜೆ ಅದೂ ಕುಂದಾಪುರದಲ್ಲಿಯೇ

ತಾ ೧೪ನೇ ಸೋಮವಾರ ಶ್ರೀ ಬಿ ವೆಂಕಟರಾವ್ ಎಂಬವರು ಗಂಧದ ತುಂಡುಗಳನ್ನು [illegible] ಸಂಗ್ರಹ ಮಾಡಿದುದಕ್ಕಾಗಿ ೬ ತಿಂಗಳುಗಳ ಕಠಿಣ ಸಜೆ ಮತ್ತು ೧೦೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು ಇವರ ಮೇಲಿನ ಇನ್ನೊಂದು ಛಾರ್ಜು ತಾ ೧೬ನೇ ಪ್ರಸ್ತುತವರ ತನಿಖೆಗೆ ಇದೆ

ಕಾರ್ಕಳ: — ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯು ಕಳೆದ ಫೆಬ್ರವರಿಯಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಕಾರ್ಕಳ ಕೇಂದ್ರದಿಂದ ತೇರ್ಗಡೆಹೊಂದಿದ ಹಿಂದೀ ವಿದ್ಯಾರ್ಥಿಗಳ ಪದವೀದಾನ ಸಮಾರಂಭವು ೧೯ ೬ ೩೭ರ ದಿನ ಸಾಯಂಕಾಲ ೪-೩೦ ಗಂಟೆಗೆ ಬೋರ್ಡ [illegible] ಎಲಿಮೆಂಟರಿ ಶಾಲೆಯಲ್ಲಿ ನಡೆಯುವುದು ಹಿಂದೀ ಪ್ರೇಮಿಗಳೆಲ್ಲರೂ ಬಂದು ಪ್ರೋತ್ಸಾಹಿಸಬೇಕಾಗಿ ವಿನಂತಿ ಆ ಸಮಯದಲ್ಲಿ ಇಲ್ಲಿಯ ಹಿಂದೀ ಪ್ರೇಮಿ ಮಂಡಲವನ್ನು ಪ್ರಸ್ಥಾಪಿಸುವ ಆಲೋಚನೆಯನ್ನು ಮಾಡಲಾಗುವುದು.

ಕಾಸರಗೋಡು — ತಾ ೧೧ರಲ್ಲಿ ಇಬ್ಬರ ಸ್ವಯಂಸೇವಕರಾದ ರಾಮಕೃಷ್ಣ ಮತ್ತು ರಾಮ ಹೆಗ್ಡೆಯವರು ಸಂಜೆಯಲ್ಲಿ ಒಬ್ಬ ಶ್ರೀಧರ ಕಮ್ತಿಯವರ ವಿದೇಶಿ ವಸ್ತ್ರದ ಅಂಗಡಿಯನ್ನು ಸುಮಾರು ಒಂದು ಒಂದೂವರೆ ಘಂಟೆ ಪಹರೆಮಾಡಿದರು ನಂತರ ನಾಲ್ಕು ಜನ ಪೋಲೀಸ ಜವಾನರು ಬಂದು ಅವರನ್ನು ದಸ್ತಗಿರಿಮಾಡಿ ಪೋಲೀಸ್ ಠಾಣ್ಯಕ್ಕೆ ಕೊಂಡುಹೋದರು ಸುಮಾರು ಅರ್ಧ ಘಂಟೆಯ ವರೆಗೆ ಅಲ್ಲಿಯೇ ಇಡಿಸಿ ನಂತರ ಬಿಟ್ಟರು

ತಾ ೧೨ರಲ್ಲಿ ಸಂಜೆಗೆ ೨೬ ಮಂದಿಗಳಿದ್ದ ಮೆರವಣಿಗೆಯೊಂದು ಹೈಸ್ಕೂಲಿನ ಹತ್ತಿರದಿಂದ ಹೊರಟು ಸುಮಾರು ಅರ್ಧ ಮೈಲು ನಡೆದು ಪೋಲೀಸ್ ಸ್ಟೇಶನ ಹತ್ತಿರ ಬಂತು. ಆಗ ಪೋಲೀಸರು ಮುಂದುಗಡೆಯವರು ಕೈಯಲ್ಲಿದ್ದ ಧ್ವಜವನ್ನು ಎಳೆದು ಸಣ್ಣ ಹುಡುಗರನ್ನು ಓಡೋಡಿಸಿ ಬಾಕಿ ಇದ್ದವರನ್ನೆಲ್ಲಾ ದಸ್ತಗಿರಿಮಾಡಿ ಪೋಲೀಸ್ ಸ್ಟೇಶನಿಗೆ ಕೊಂಡುಹೋದರು ಆ ಸಣ್ಣ ಹುಡುಗರು ಇನ್ನೊಂದು ಕಡೆಯಿಂದ ಮೆರವಣಿಗೆಯನ್ನು ಮಾಡಿದರು. ಪೋಲೀಸರು ಅವರನ್ನೆಲ್ಲಾ ದಸ್ತಗಿರಿಮಾಡಿ ಠಾಣ್ಯಕ್ಕೆ ಕೊಂಡೊಯ್ದರು ಎಲ್ಲರನ್ನೂ ರಾತ್ರಿ ೮ ಗಂಟೆಗೆ ಬಿಡುಗಡೆಮಾಡಿದರು ಈ ಸಲ ಪಹರೆ ಎಂದರೆ ಬೆತ್ತದ ಏಟೂ ಇಲ್ಲ ಮತ್ತು ಪಹರೆಮಾಡುವ ಸಮಯದಲ್ಲಿ ಹೆಚ್ಚಾಗಿ ಜನರೂ ಕೂಡಿಬರುವುದಿಲ್ಲ

ತಾ ೧೩ರಲ್ಲಿ ಅನಂತಪ್ರಭು ಮತ್ತು ಚಂದ್ರಶೇಖರ ಕಮ್ತಿ ಎಂಬವರು ಶ್ರೀಧರ ಕಮ್ತಿಯವರ ವಿದೇಶಿ ವಸ್ತ್ರದ ಅಂಗಡಿಯನ್ನು ಪಹರೆಮಾಡಿದರು ಪೋಲೀಸ್ ಜವಾನರು ಬಂದು ಅವರನ್ನು ದಸ್ತಗಿರಿಮಾಡಿ ಠಾಣ್ಯಕ್ಕೆ ಕೊಂಡುಹೋದರು ಸುಮಾರು ಒಂದು ಒಂದೂವರೆ ಘಂಟೆಯ ನಂತರ ಬಿಟ್ಟರು

ತಾ ೧೪ರಲ್ಲಿ ಶೇಂದಿ ಬಗ್ಗೆ ಮೂರ್ತೆಮಾಡಲು [illegible] ತೆಂಗಿನ ಮರಗಳ ಗೊನೆಗಳನ್ನು ಕಡಿದುಹಾಕುವ ಪ್ರಾರಂಭವಾಗುವುದಾಗಿ ಈ ಮೊದಲೇ ಪೋಲೀಸಿನವರಿಗೆ ಬರಹ ಮೂಲಕ ನೋಟೀಸುಕೊಟ್ಟ ಮೇರೆಗೆ ಆ ದಿನ ಬೆಳಗ್ಗೆ ಇಲ್ಲಿಯ ನೆರೆಗ್ರಾಮವಾದ ಪೆರಂಬಳ ಎಂಬಲ್ಲಿ ತಾಲೂಕು ಸರ್ವಾಧಿಕಾರಿಗಳಾದ ಶ್ರೀ ಕೃಷ್ಣ ಮನೋಳಿತ್ತಾಯ ಮತ್ತು ಸ್ವಯಂಸೇವಕ ಶ್ರೀ ನಾರಾಯಣ ನಾಯರ್ ಅವರು ಮೂರ್ತೆ ಬಗ್ಗೆ ಮೊಹರು ಹಾಕಿದ ತೆಂಗಿನ ಮರಗಳ ಮೇಲಣ ಗಡಿಗೆಗಳನ್ನು ತೆಗೆದು ಹಾಕಿ ಗೊನೆಗಳನ್ನು ಕಡಿದು ಹಾಕಿದರಾಗಿ ತಿಳಿದುಬರುತ್ತದೆ ಈ ಪೈಕಿ ನಾಲ್ಕೈದು [illegible] ಗಳು ಆ ಗ್ರಾಮದ ಪಟೇಲರದೆ ಆಗಿರುತವಂತೆ

* * *

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂ॥ರದ ಜ್ಯೇಷ್ಠ ಬ॥ ೧೫ ಶನಿವಾರದಿಂದ ಅಂಗೀರಸ ಸಂ॥ರದ ಜ್ಯೇಷ್ಠ ಬ॥ ೬ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಾಹ್ಯಶೈಲಿಯ ವ್ಯವಧ—ದೇಶ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯಸ್ಪಷ್ಟ	ಸೂರ್ಯನ ಉ	ಸೂರ್ಯನ ಅಸ್ತ
18	ಶನಿ	○	೩೩ ೩೦	ಜ್ಯೇಷ್ಠಾ	೧೫ ೧೬	೪	6. 6	6 56
19	ರವಿ	೧	೨೯ ೩೧	ಮೂಲಾ	೧೨.೪೬	೫	6 7	6 56
20	ಸೋಮ	೨	೨೬ ೦೪	ಪೂ ಷಾ.	೧೧. ೨	೬	6. 7	6 56
21	ಮಂಗಳ	೩	೨೪ ೨	ಉ ಷಾ	೧೦.೩೨	೭	6. 7	6.57
22	ಬುಧ	೪	೨೩ ೨	ಶ್ರವಣಾ	೧೧.೦೪	೮	6. 7	6.57
23	ಗುರು	೫	೨೩.೦೬	ಧನಿಷ್ಟಾ	೧೩ ೨	೯	6. 8	6 07
24	ಶುಕ್ರ	೬	೨೫ ೦	ಶತಭಿಷ	೧೬ ೦೪	೧೦	6 8	6.57

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚೆಂದರೆ	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
10	86— 5	72— 9	1—67	—
11	83— 6	74— 6	0—97	—
12	86— 0	74— 1	6—07	—
13	82— 7	74— 9	1—29	—
14	86 — 9	79 — 9	—	—
15	86 — 7	78 1	1—16	—
16	86 — 6	73 — 8	0 — 06	35—94

ಮಂಗಳೂರಿನ ಪೇಟೆ ಧಾರಣೆ.

ದೇನಸು	ಹಿಂದ ರೂ ಆ	ವರೆಗೆ ರೂ. ಆ
ರಾಶಿ ಅಕ್ಕಿ	3 — 12	3 14
ಮಸ್ಸಿ	4 — 0	4 — 12
ಗುಡ್ಡ	4 0	4 — 8
ಸುಗ್ಗಿ	3 14	4 — 2
ಉಪ್ಪರ ಅನ್ನಲ್ ಬೆಳ್ತಿಗೆ	4 — 8	5 — 0
ರಂಗೂನು ಬೆಳ್ತಿಗೆ ಗೋಣಿ ಒಳ್ಳೆ	8 — 0	8 — 8
ಎಚ್ಚುರುಬೆಳ್ತಿಗೆ ಮುಡಿ ಒಳ್ಳೆ	4 — 10	4 — 12
ಗೋಧಿ ಗೋಣಿ ಒಳ್ಳೆ	9 — 8	12 — 8
ತೊಗರಿ ಗೋಣಿ ಒಳ್ಳೆ	12 — 0	12 — 8
ಹುರುಳಿಗೋಣಿ ಒಳ್ಳೆ	6 — 2	7 — 4
ಕಡಲೆ ಗೋಣಿ ಒಳ್ಳೆ	8 — 8	12 — 8
ತೊಗರಿಬೇಳೆ ಗೋಣಿ ಒಳ್ಳೆ	13 — 8	21 — 0
ಉದ್ದು ಗೋಣಿ ಒಳ್ಳೆ	11 — 8	13 — 0
ಹೆಸರು ಗೋಣಿ ಒಳ್ಳೆ	10 — 4	1 —
ಊರ ಬೆಲ್ಲ ಖಂಡಿ ಒಳ್ಳೆ	3 — 0	30 — 0
ಉಪ್ಪು ಗೋಣಿ ಒಳ್ಳೆ	5 — 4	5 — 8
ಬೆಂಡ ಖಂಡಿ ಒಳ್ಳೆ	85	2—
ಕೊಬ್ರಿ ಹಿಂಡಿ ಖಂಡಿ ಒಳ್ಳೆ	23 — 8	24 —
ಎಳ್ಳಿಂಡಿ ಖಂಡಿ ಒಳ್ಳೆ	26 — 4	26 — 18
ಕೊಬ್ರಿ ಎಣ್ಣೆ ಮಣ ಒಳ್ಳೆ	6 — 4	8 — 6
ಎಳ್ಳೆಣ್ಣೆ ಮಣ ಒಳ್ಳೆ	6 — 12	7 — 0
ಚಿಮಿಣಿಎಣ್ಣೆ ಪೆಟ್ಟಿಗೆ ಒಳ್ಳೆ	4 — 7	8 — 12
ಮೋರಿಸ ಸಕ್ಕರೆ ಮಣ ಒಳ್ಳೆ	4 — 0	4 — 1
ಹೊಸ ಮೆಣಸು	4 — 0	6 — 0
ಸಾಸಿವೆ ಮುಡಿ ಒಳ್ಳೆ	5 — 4	6 — 0
ಕೆಂಟಿನ್ ಕಾಫಿ ಖಂಡಿ ಒಳ್ಳೆ	275 — 0	226 —
ಕಾಳುಮೆಣಸು ಖಂಡಿ ಒಳ್ಳೆ	170 — 0	180 —
ಯೇಲಕ್ಕಿ ಮಣ ಒಳ್ಳೆ	27 — 0	28 —
ಗೇರುಬೀಜ ಮುಡಿ ಒಳ್ಳೆ	3 — 6	—
ಕಬ್ಬಿಣ ಖಂಡಿ ಒಳ್ಳೆ	35 — 0	35 — 8
ತಾಂಬ್ರ ತಗಡು ಮಣ ಒಳ್ಳೆ	12 — 8	13 — 0
ತಾಂಬ್ರ ಪಾತ್ರೆಗಳು ಮಣ ಒಳ್ಳೆ	16 — 0	16 — 0
ಚೀನಿಬೆಳ್ಳಿ ಸೇರು ಒಳ್ಳೆ	14 — 10	14 — 12
ಹಿತ್ತಾಳೆ ತಗಡು ಮಣ ಒಳ್ಳೆ	12 — 0	12 — 8
ಪವನು ಒಳ್ಳೆ	17 — 14	17 — 14
ಹುಣಸೆ ಹುಳಿ ಖಂಡಿ ಒಳ್ಳೆ	40 —	—
ಪೀಬೆರಿ ಕಾಫಿ ಖಂಡಿ ಒಳ್ಳೆ	330 —	—
ಹಸಿ ಅಡಕೆ	180 —	205 —
ಕೋಶಅಡಕೆ	140 —	145 —

Chikmagalur Public Conveyance Motor Service,

CHIKMAGALUR.

ಚಿಕ್ಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ- ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ.ಪ. 1-30ಕ್ಕೂ, ಬೆಳ್ತಂಗಡಿಗೆ 1-45 ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪॥ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಢರಪುರ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ. ಎನ್. ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕ. ಸೂರಪ್ಪ ಸೆಟ್ಟಿ.

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾಪಿತವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. **ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.**

Secretary.

The Canara Public Conveyance Company Ltd., Mangalore

ಜೀವನ್ಮುಕ್ತ ಮಹಾತ್ಮ ಗಾಂಧಿ

"Mahathma Gandhi is the greatest man in the world to day"

(R Tagore)

'ಸೈಕಾಲಜಿ' ಎಂಬ ಪತ್ರಿಕೆಯಲ್ಲಿ ಅಮೇರಿಕದಲ್ಲಿರುವ ಶ್ರೀ ಬಿ. ಕೆ. ರೋಯ್ ಎಂಬವರು ಬರೆದ ಒಂದು ಲೇಖನವಿದು. ಇದರಲ್ಲಿ ಮಹಾತ್ಮಾ ಗಾಂಧಿಯವರ ಕುರಿತಾಗಿ ಉತ್ಕೃಷ್ಟವಾದ ಅಭಿಪ್ರಾಯವು ಅಡಕವಾಗಿದೆ.

"ಗಾಂಧಿಯವರ ಜೀವನಕ್ರಮದ ನಡತೆಯು ಶಿಶುಸಮಾನವಾದುದು, ಅವರ ಸತ್ಯಪಾಲನಾಗ್ರಹವು ನಿಶ್ಶಂಕವಾದುದು; ಅವರಿಗೆ ಮಾನವ ವರ್ಗದ ಮೇಲಿರುವ ಪ್ರೇಮವು ಅಗಾಧವಾದುದು.—ಅಮೋಘವಾದುದು. ಅವರಲ್ಲಿ 'ಕ್ರೈಸ್ತ ಶಕ್ತಿ' ಎಂಬುದು ಮೂರ್ತಿಮತ್ತಾಗಿದೆ. ಅವರೊಡನೆ ನಾನು ಎಷ್ಟು ಕಾಲವಿರುತ್ತೇನೋ ಅಷ್ಟು ಸಂತೋಷದಿಂದ ಅವರನ್ನು ಪ್ರೀತಿಸುತ್ತೇನೆ. ಹಿಂದೂದೇಶದ ಈ ವಿಭೂತಿ ಪುರುಷರಾಗಿರುವ ಇವರು ಪ್ರಪಂಚದ ಭಾವೀಮಾರ್ಗನಿರ್ಮಾಣಕಾರ್ಯದಲ್ಲಿ ಒಂದು ವಿಶೇಷ ಭಾಗವನ್ನು ಧರಿಸಲು ಜನ್ಮವೆತ್ತಿದಂತಿದೆ."

ಅಮೇರಿಕಕ್ಕೂ ಯುರೋಪಿಗೂ ಮಹಾತ್ಮಾಗಾಂಧಿಯವರ ಕುರಿತು ಏನೂ ತಿಳಿಯದಿದ್ದ ಸಮಯದಲ್ಲಿ ಹೀಗಿತ್ತು. ಪುನಃ ನಮ್ಮ ಕವಿ ಶಿಖಾಮಣಿಗಳೊಡನೆ ನಾನು ಕೇಳಿದೆ.

"ಹಾಗಾದರೆ ಇಂತಹ ಮಹಾವ್ಯಕ್ತಿಯ ಅಸ್ತಿತ್ವವು ಜಗತ್ತಿಗೆ ಸಾರ್ವತ್ರಿಕವಾಗಿ ತಿಳಿಯಪಡಿಸಬೇಡವೇ? ನೀವು ಈ ಕಾರ್ಯವನ್ನೇಕೆ ಮಾಡಲಾರಿರಿ? ನೀವೂ ಸರ್ವ ಪ್ರಪಂಚ ಪ್ರಖ್ಯಾತರಾದವರು."

ರಾಗೋರರಂದರು: 'ಅವರನ್ನು ನಾನು ಹೇಗೆ ಪ್ರಶಂಸಿಸಲಿ? ದಿವ್ಯಮೂರ್ತಿಯಾದ ಅವರೊಡನೆ ನನ್ನನ್ನು ತುಲನೆಮಾಡಿದರೆ ನಾನು ತೃಣಮಾತ್ರನೇ ಸರಿ. ಮಹಾವ್ಯಕ್ತಿಗಳನ್ನು ಪುರಸ್ಕರಿಸುವ ಆಗತ್ಯವಿರುವುದಿಲ್ಲ. ಇಂತಹ ಮನುಷ್ಯರು ತಮ್ಮ ಸ್ವಯಂ ಪ್ರತಿಭೆ, ಮತ್ತು ಪ್ರತಿಷ್ಠೆಗಳಿಂದಲೇ ಘನ ವ್ಯಕ್ತಿಗಳಾಗುವರು. ವಿಶ್ವವು ಸಿದ್ಧತೆಯ ಮೆಟ್ಟಿಲನ್ನು ಕಟ್ಟುತ್ತಲೇ ಇಂತಹ ವಿಭೂತಿ ಪುರುಷರ ಅಂತರಂಗ ಚೇತನವು ಒಮ್ಮೆಲೆ ತನ್ನ ಮಹಾತ್ಮ್ಯವನ್ನು ಪ್ರಕಾಶಿಸುವುದು. ಮುಂದಿನ ಸನ್ನಿವೇಶಗಳ ಸಮಾಗಮವು ಆಗುತ್ತಲೇ ಹಾಗೆ ಪ್ರಪಂಚಕ್ಕೆ ಪ್ರೇಮ, ಸತ್ಯ ಮತ್ತು ಐಕ್ಯದ ಸಂದೇಶಗಳು ದೊರೆಯುವವು.'

"ಪೌರ್ವಾತ್ಯದೇಶದಲ್ಲಿ ಜನಿಸಿದ ಇವರು ಯೋಗ್ಯವ್ಯಕ್ತಿಗಳೇ ಸರಿ. ಮಾನವನು ನೈತಿಕ ಬಲಪ್ರದಾಯಕನೆಂದು ಗಾಂಧಿಯವರು ಸ್ಪಷ್ಟೀಕರಿಸುತ್ತಿರುವರು. ಮಾನವ ಸ್ವರೂಪಿಯು ಧಾರ್ಮಿಕ ಮತ್ತು ನೈತಿಕ ಮಾರ್ಗಕ್ರಮಣದಲ್ಲಿ ಶುದ್ಧ ತೇಜಸ್ವಿಯಾಗಿ ಬೆಳಗಬೇಕೆಂದು ಗಾಂಧಿಯವರು ಪ್ರಕಟಿಸುತ್ತಾರೆ. ದ್ವೇಷ ಅಸೂಯೆ, ದುರ್ಭಾವನೆಗಳಿಂದಾಗಿ ಮನುಷ್ಯನು ತನ್ನ ದೈಹಿಕ ಮತ್ತು ಆತ್ಮಿಕ ಶಕ್ತಿಗಳನ್ನು ಕಳೆದುಕೊಂಡು ಸಂಪೂರ್ಣ ನಾಶಹೊಂದುತ್ತಾನೆಂದು [illegible] ಲೋಕಕ್ಕೆ ಸಾರುತ್ತಿರುವರು."

ನಾನು ಕೇಳಿದೆ: 'ನೀವು ಇಂದಿನ ದಿನದಲ್ಲಿ ಬಹು ಮಹದ್ವ್ಯಕ್ತಿ ಸ್ವರೂಪರೇ [illegible] ಮಹಾತ್ಮಾ ಗಾಂಧಿಯವರ ಯಶಸ್ಸನ್ನು [illegible] ಈ ಮಾತುಗಳು ಸಮರ್ಥನೀಯವೇ ಸರಿ. ಆದರೆ ಹಿಂದೂದೇಶದಲ್ಲಿನ ಅವರ ಅಸಹಕಾರ ಚಳವಳಿ [illegible] ನಿಮ್ಮ ಅಭಿಮತವೇನು?'

ನಗುತ್ತಾ ರಾಗೋರರಂದರು:— 'ಸರಿ, ಇದು ಒಂದು ಪ್ರತ್ಯೇಕ ಸಂಗತಿ. ನಾನು ಒಂದು ದಿನ ಹಿಂದೂದೇಶದ ಮಿತ್ರರೊಬ್ಬರಿಗೆ ಟಪಾಲಿನ ದ್ವಾರಾ ರವಾನಿಸಬೇಕೆಂದಿದ್ದ ಒಂದು ಪತ್ರವನ್ನು ನಿಮಗೆ ತೋರಿಸಿದ ಸಂಗತಿಯು ನಿಮ್ಮ ನೆನಪಿನಲ್ಲಿರಬಹುದು. ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳಿ ಕುರಿತು ನಾನು ಅದರಲ್ಲಿ ವಿವರಿಸಿದ್ದೆ. ಪಾಶ್ಚಿಮಾತ್ಯರಾದ ಸಂಗತಿಗಳನ್ನೆಲ್ಲ ನಾನು ಬಿಡಬೇಕೆಂದು ಮಹಾತ್ಮಾ ಗಾಂಧಿಯವರು ನನಗೆಂದರೆ, ನಾನು ಅವುಗಳನ್ನು ಬಿಡಲೊಲ್ಲೆ. ಸಿ. ಎಫ್. ಎಂಡ್ರ್ಯೂಸರು ಇಂಗ್ಲೆಂಡಿನವರಾಗಿರುವುದರಿಂದ ಅವರನ್ನು ನಾನು ಬಹಿಷ್ಕರಿಸಬೇಕೆಂದರೆ ಅದು ನನ್ನಿಂದಾಗಲಾರದು. ನಮ್ಮ ಜನ್ಮಭೂಮಿಯ ಪುನರುಜ್ಜೀವನಕ್ಕೆ ಸಹಾಯಕರವಾದ ಪಾಶ್ಚಿಮಾತ್ಯ ರಸಾಯನಶಾಸ್ತ್ರಗಳನ್ನು ನಾನು ನಿರಾಕರಿಸಬೇಕೆಂದು ಹೇಳಿದರೆ ಅದು ನನ್ನಿಂದಾಗದು. ಮಹಾತ್ಮಾ ಗಾಂಧಿಯವರ ಅಭಿಪ್ರಾಯವು ಹೇಗೂ ಇರಲಿ, ಪಶ್ಚಿಮದೇಶವು ನಮಗೆ ಯಾವುದನ್ನು ಅತ್ಯುತ್ತಮವೆಂದು ಕೊಡುತ್ತದೋ, ಅದನ್ನೆಲ್ಲ ನಾವು ಆಭಾರಿಗಳಾಗಿ ಸ್ವೀಕರಿಸಬೇಕು. ನಮ್ಮಲ್ಲಿ ಯಾವುದು ಅತ್ಯುತ್ಕೃಷ್ಟವೆಂದಿದೆಯೋ ಅದನ್ನು ನಾವು ಪಶ್ಚಿಮ ದೇಶಗಳಿಗೆ ಕೊಡಬೇಕು. ಹೀಗಾದರೆ ಪ್ರಪಂಚದ ಮಾನವ ಕುಟುಂಬಗಳೆಲ್ಲ, ನೈತಿಕ ಮತ್ತು ಭೌತಿಕ ವಿಚಾರದೃಷ್ಟ್ಯಾ

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

ಊರ್ಜಿತಾವಸ್ಥೆಯನ್ನು ಹೊಂದುವುದು ನಿಜ. ಭಿನ್ನಭಿನ್ನವಾಗಿರುವುದು "ಪ್ರಾಚ್ಯ"ವು "ಪಾಶ್ಚಿಮಾತ್ಯ"ವೆಂಬ ಎಲ್ಲವುಗಳನ್ನೂ ಒಟ್ಟುಗೂಡಿಸುವ ಮಹಾತ್ಮಾ ಗಾಂಧಿಯವರ ಧೋರಣೆಯು ಹಿಂದೂದೇಶಕ್ಕೆ ಸ್ವಾತಂತ್ರ್ಯ[illegible] ಸಂಗತಿಯಾಗಿ ಪರಿಣಮಿಸುವುದು.

ಪೌರ್ವಾತ್ಯರಲ್ಲಿ [illegible] ತರದಲ್ಲಿ ಮಹಾತ್ಮಾಗಾಂಧಿಯವರನ್ನು ತುಲನಾತ್ಮಕದೃಷ್ಟಿಯಿಂದ ಸಮತೂಗಿಸುವುದು ಹೇಗೆ ಎಂದು ನಾನು ಪ್ರಶ್ನಿಸಿದೆ.

ರಾಗೋರರು ಉತ್ತರವಿತ್ತರು: 'ಸಂತ ಫ್ರಾನ್ಸಿಸ್ಸರ [illegible], ಜೀಸಸ್ ಕ್ರಿಸ್ತ, ಬುದ್ಧ ಮೊದಲಾದವರ ಉಪದೇಶಾಮೃತವನ್ನು ಮಹಾತ್ಮಾ ಗಾಂಧಿಯವರು ಇಂದಿನ ದಿನದಲ್ಲಿ ಒಳ್ಳೆ ವಿಶಾಲದೃಷ್ಟಿಯಿಂದ ಪ್ರಪಂಚದ ಮೇಲೆ ಧಾರೆಯೆರೆಯುತ್ತಿರುವರು. ಅವರ ಧರ್ಮೋತ್ಕರ್ಷದ ಮೇಲೆ ಇಂದು ಪಸರಿಸಲ್ಪಟ್ಟಿರುವ ಅಪ್ರತಿಹತವಾದ ನೈತಿಕಶಕ್ತಿಯ ಪ್ರಭೆಯನ್ನರಿಯಲು ನಾವು ಅವರ ಹೇಳಿದ ಅವರು ಮಾಡುವ ಎಲ್ಲಾ ವಿಷಯಗಳನ್ನೂ ಒಪ್ಪುವ ಆಗತ್ಯವಿಲ್ಲ. ಅವರು ಇಂದಿನ ದಿನದಲ್ಲಿ ಸರ್ವಶ್ರೇಷ್ಠರಾದ ಘನಮೂರ್ತಿಯಾಗಿರುತ್ತಾರೆ. ಅವರ ಅಂತರಾತ್ಮದಲ್ಲಿ ಅತ್ಯಮೂಲ್ಯವಾದ ಗುಣಭಂಡಾರವೇ ಅಡಗಿಕೊಂಡಿರುತ್ತದೆ.

"ಮಹಾತ್ಮಾ ಗಾಂಧಿಯವರು ತಮಗೆ ಗೋಚರವಾಗುವ ವಿಷಯಗಳ ಪರಿಶೋಧನೆಗೆ ತೊಡಗಿರುವರು. ಸಂಗತಿಯು [illegible] ತಿಳಿದರೂ ಅವರು ಹೂಡಿರುವ ಪ್ರಯೋಗಕಾರ್ಯದಿಂದ ಮುಂದಕ್ಕೆ ಏನೆಲ್ಲ ಪರಿಣಾಮಗಳುತ್ಪನ್ನವಾಗುವುವೆಂದು ಸಮಯವು ಒದಗಿಬಾರದ ಈ ಸಮಯದಲ್ಲಿ ಹೇಳಲಸಾಧ್ಯ.

ಬೋಲ್ಪುರದಲ್ಲಿ ಮಹಾಗಾಂಧೀಜಯಂತಿಯ ದಿನದಂದಾಗೂ ರಾಗೋರರು ಹೀಗಂದರು: 'ನಮ್ಮ ಧ್ಯೇಯಪೂರಿತ ನಿಶ್ಚೇತನಮಯ ಮನೋಭಾವದ ಅಸ್ತವ್ಯಸ್ತ ಮೇಲೆ ವಿದೇಶೀಯ ವರ್ತಕ ಮುಂದ[illegible] ಎಲ್ಲಾ ವಾಣಿಜ್ಯಗಳನ್ನು ಬಿಚ್ಚಿಡಿ ತನ್ನ ಅಮೋಘವಾದ [illegible] ಉಜ್ವಲವಾಗಿ ಮೂಡಿ ಬಿಟ್ಟಿದೆ. ನಮ್ಮ ನಿರ್ಬಲತೆ ಹೊಂದಿದ್ದ ಸ್ವಪ್ನಗಳೂ, ಕಷ್ಟಗಳೂ ಇದ ಈ ಕಲಹವನ್ನು ಸಾಧಿಸಲು ಸಾಧ್ಯವಾದ ಸಂಗತಿಯಾಗಿದ್ದಿಲ್ಲ. ಇಷ್ಟು ಕಾಲದಿಂದಲೂ ನಾವು ನಮ್ಮೊಳಗಿನ ಅಂತರಾತ್ಮವನ್ನು ಅಪಮಾನದ ಮಾರ್ಗದಲ್ಲಿ ನಡೆಸಿಕೊಂಡು ಹೋದೆವು. ಅಂತಹ ದುರ್ಮಾರ್ಗದಿಂದ ಇಂದು ಮಹಾತ್ಮಾ ಗಾಂಧಿಯವರು ನಮ್ಮನ್ನು ರಕ್ಷಿಸಲು ಜನಿಸಿರುತ್ತಾರೆ. ಅವರು ಇಂದು ಭಾರತ ಜನಾಂಗದ ಮಧ್ಯ ಜ್ಞಾನಸಾಗರವು ಹರಿದಾಡುವಂತೆ ಸ್ಫೂರ್ತಿದಾಯಕ ಚೇತನಶಕ್ತಿಯನ್ನುಂಟುಮಾಡಿದ್ದಾರೆ. ವೀರತ್ವ ದೀಪ್ತಿಗಳನ್ನು ಪರಿಪುಷ್ಟಗೊಳಿಸಿದ್ದಾರೆ. ಈಗ ನಮ್ಮ ಅಳಿದುಳಿದ ನಮ್ಮೊಡನೆ ಸಂಧಿಗ್ಧ ಕೈಜೋಡಿಸುತ್ತಿರುತ್ತಾರೆ. ಕಾರಣ, ಅಂದು ನಮ್ಮ ವೀರತ್ವವು ಲೋಪವಾಗಿದ್ದರೂ ಇಂದು ನಮ್ಮಲ್ಲಿ ಅದು ತುಂಬಿಕೊಂಡಿದೆ. ಅದರಿಂದಾಗಿ ಪ್ರಪಂಚಸಮಾಜದಲ್ಲಿ ನಾವಿಂದು ನಮ್ಮ ಯೋಗ್ಯಸ್ಥಾನವನ್ನು ನಮ್ಮ ಹಕ್ಕಾಗಿ ಕೇಳುತ್ತಿದ್ದೇವೆ.'

ಗಾಂಧಿಯವರು ತಮ್ಮ ತಪ್ಪುಗಳನ್ನು ಒಪ್ಪುತ್ತಾ ಇದಕ್ಕೆ ಸಮಯವು ಒದಗಿದ ಹಾಗೆ ತಮ್ಮ ಅಭಿಪ್ರಾಯಗಳನ್ನೂ ಬದಲಾಯಿಸಿದ್ದೇನೆಂದು ಹೇಳುತ್ತಾರೆ. ಇಂತಹ ಬದಲಾವಣೆಗಳನ್ನು ಮಾಡಿದರೂ, ಅವರು ತಮ್ಮ ಸತ್ಯಸಂಶೋಧನೆಯ ಧ್ಯೇಯವನ್ನು ಎಂದಾದರೂ ಪರಿವರ್ತಿಸಿಕೊಳ್ಳಲಿಲ್ಲ. ಈ ವಿಷಯದಲ್ಲಿ ಅವರು ನಿಶ್ಚಂಚಲವಾದ ತಳಹದಿಯ ಮೇಲೆ ಕಾಲೂರಿ ನಿಂತಿರುವರು. ಈ ದೃಢತೆಯು ಅವರಲ್ಲಿ ಅಜನ್ಮವಾಗಿ ಬಂತು. ಕರ್ಮದ ಕವಚವೆಂಬಂತೆ ಅದು ಅವರಿಗೆ ತಗಲಿಕೊಂಡಿದೆ. ಅವರ ಈ ಅನಿವಾರ್ಯ[illegible] ಶಕ್ತಿ ಪ್ರತಿಷ್ಠೆಯು ಮಾನವನ ಚರಿತ್ರೆಯಲ್ಲಿ ನಾಶರಹಿತ[illegible]ವಾಗಿ ನಿಂತಿತು. ಪ್ರಪಂಚದಲ್ಲಿ ಮಾರ್ಪಾಟಾಗುತ್ತಿರುವ ಅಗತ್ಯ ಸಂಭವಗಳಿಗನುಸಾರವಾಗಿ ಬದಲಾವಣೆಯ ಸರೋವರವೂ ಹರಿಯುತ್ತಿದೆ. ಆದರೂ ಇಂತಹ ಮಾರ್ಪಾಟುಗಳಿಗೆ ತುತ್ತಾಗದೆ, ಚಿಚ್ಛಕ್ತಿಮಾನವಾಗಿ ಪ್ರದರ್ಶಿಸುತ್ತಿರುವ ಮಹಾತ್ಮರ ಜೀವನ ಬೆಳಕು ಒಂದರಿಂದ ಸ್ವಜವಾದ ಶ್ರೇಷ್ಠತೆಯು ಹೊರಸೂಸುತ್ತಿದೆ.'

ಮಹಾತ್ಮಾ ಗಾಂಧಿಯವರು ತಮ್ಮ ದುರು[illegible] ಯಾವ ವಿಘ್ನಗಳೂ ತೊಂದರೆಗಳು ನಿಲ್ಲುವಂತೆ ಎಡೆಗೊಡಲಿಲ್ಲ. ತಾನು ತಪ್ಪಿಹೋಗಿದ್ದರೂ ಅವರು ಆ ತಪ್ಪಿನಿಂದಾಗಿ ಧ್ಯೇಯ ತ್ಯಾಜ್ಯರಾಗಲಿಲ್ಲ. ಎಂತಹ ಆವೇಶದ, ಉದ್ರೇಕಮಯ ಸಂದಿಯಲ್ಲೂ ಅವರ ಮನೋವಿಶಾಲತೆಯ ಸಮಾಧಾನವು ತನ್ನ ಶಕ್ತಿಯನ್ನು ಕಳೆದುಕೊಳ್ಳಲಿಲ್ಲ—ತನ್ನ ಆಲೋಚನಾಶಕ್ತಿ [illegible] ಗೊಡಲಿಲ್ಲ. ಇಂತಹ ಅಮೋಘ [illegible] ಪುರುಷಮಣಿಯ ಜಯಂತಿಗಾಗಿ ನಾವಿಂದು [illegible]

ರವೀಂದ್ರರ ಮನೋಭಾವ.

ರವೀಂದ್ರನಾಥ ರಾಗೋರರ [illegible] ಅಲ್ಲದೆ ಅವರ [illegible] ನಾವು [illegible] ಹೊಂದಬೇಕಾಗಿದೆ. [illegible] ಮಹಾತ್ಮಾ ಗಾಂಧಿಯವರ [illegible] ಪ್ರಶಂಸಿ[illegible] ಮಹಾತ್ಮಾ ಗಾಂಧಿಯವರಂತೆ ದೇಶ ರಚನಾ ಕೆಲಸ ((C [illegible] tu Bul [illegible]) ದಲ್ಲಿ [illegible] ರವೀಂದ್ರರು [illegible] ಯಾಗಿ, ನೀವು ಮಹಾತ್ಮಾ ಗಾಂಧಿ [illegible] ಪ್ರಶಂಸನೀಯವಾಗಿ [illegible] ಸ್ವೀಕರಿಸಲ್ಪಡುವುದಿಲ್ಲ [illegible] ರವೀಂದ್ರನಾಥ ರಾಗೋರರು [illegible] ಮೇಲೂ ಭಾರತೀಯ [illegible] ಅವರ [illegible] ವಿಶಾಲದೃಷ್ಟಿ [illegible] ಚಳವಳಿಯಲ್ಲಿ [illegible] ಎಂದು [illegible] ಇಲ್ಲವೇಕೋ ತಿಳಿಯದೆಂದು [illegible] ಮಹಾತ್ಮಾ ಗಾಂಧಿಯವರ [illegible] ಹೀಗೆಂದಿದ್ದರಂತೆ 'ರವೀಂದ್ರರೇ [illegible] ದಲ್ಲಿ [illegible] ಅನ್ನ ದೊರೆತ ಮೇಲೆ [illegible] ಇದರಿಂದಾಗಿ ಮಹಾತ್ಮಾ ಗಾಂಧಿಯವರೂ [illegible] ನವೀನ ಭಾರತ [illegible] ಹೇಳಿದ ಅರ್ಥವಾಗುತ್ತದೆ.

ರವೀಂದ್ರರ [illegible] ದೇಶದ [illegible] ಪ್ರತಿಭಾಶಾಲಿಗಳ [illegible] ರವೀಂದ್ರರು [illegible]

[illegible] ಮಾನವ ವರ್ಗಕ್ಕೆ [illegible] ಗಾಂಧಿಯವರಲ್ಲಿ [illegible] ರವೀಂದ್ರರಲ್ಲೂ ಇದೆ. ಆದರೆ ಮಹಾತ್ಮಾ [illegible] ಹಿಂದೂದೇಶದ ಜನತೆಯ ಮೇಲಿದೆ. ರಾಗೋರರ [illegible] ಶಕ್ತಿಯು ಇಡೀ ವಿಶ್ವಜನಾಂಗದ ಮೇಲಿದೆ, ವ್ಯತ್ಯಾಸವಿಷ್ಟೆ.

* * *

ಶಾಸ್ತ್ರೋಕ್ತ-ಶಾಸ್ತ್ರೀಯವಾದದ್ದು. **ಕಾಮದ ಗುಟ್ಟು** ಸುಖಕ್ಕೆ ಸುಖಕರವಾದದ್ದು.

ಲೇಖಕರು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ. (ಕಾರಾನಾಥರ ಮುನ್ನುಡಿ)

ಹೊಸ ಪುಸ್ತಕ. ಇಂಥಾ ಪುಸ್ತಕವು ಬೇರೊಂದಿಲ್ಲ.

"ಕಾಮತಂತ್ರದಲ್ಲಿ ಹೊಸ ಹೊಸ ಕಲ್ಪನೆಗಳು ದಿನ ದಿನವೂ ಹೆಚ್ಚುತ್ತಿರೆ ತರುಣರ ತಾರುಣ್ಯ ಪ್ರಭಾವದಲ್ಲಿ ಹೊಳೆಯುವ ಎಲ್ಲಾ ಕಾಮುಕಸಮಸ್ಯೆಗಳಿಗೂ ಮನವೊಪ್ಪುವ ಕ್ರಿಯಾಸಿದ್ಧಿಯನ್ನೂ ಸ್ವಾರಸ್ಯವಾಗಿ ತೋರಿಸಿಕೊಡುವ ಅತ್ಯುತ್ತಮ ಗ್ರಂಥ'

ಕಾಮೋಪಭೋಗದ ನ್ಯೂನತೆಗಳಿಗೆಲ್ಲಾ ಔಷಧಿಗಳು ವಿವರವಾಗಿ ಹೇಳಲ್ಪಟ್ಟಿವೆ ಈ ಪುಸ್ತಕವಿದ್ದರೆ—ಎಲ್ಲಾ ಅಂತರಂಗದ ವ್ಯಾಧಿಗಳಿಗೂ ಸ್ವತಃ ಅಂತರಂಗ ಚಿಕಿತ್ಸೆ ಮಾಡಿಕೊಳ್ಳಬಹುದು.

ಬೆಲೆ ೧೨ ಆಣೆ ಮಾತ್ರ ಅಂಚೆವೆಚ್ಚ ಪ್ರತ್ಯೇಕ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ದೊರೆಯುತ್ತೆ **ಬೇಗನೆ ತರಿಸಿಕೊಳ್ಳಿ**

ಇತರ ಗ್ರಂಥಗಳು.

ಆಹುತಿ (ನಾಟಕ) ರೂ ೧, **ಅದದ್ದೇನು** (ನಾಟಕ) ೬ ಆಣೆ **ಮೋಹನಾಸ್ತ್ರ** (ನಾಟಕ) ರೂ ೧ **ಉದರ ವೈರಾಗ್ಯ** (ಸಚಿತ್ರ ನಾಟಕ)—ರೂ ೧ **ವಿವೇಕಾನಂದರ ಕರ್ಮಯೋಗ**—ರೂ ೧ **ಹೊಸಹುಟ್ಟು** (ಸಚಿತ್ರ)—ರೂ ೧, **ಸಾಹಿತ್ಯದ ಗುಟ್ಟು**—೬ ಆಣೆ **ತ್ರಿಶಂಕುಸ್ವರ್ಗ** (ನಾಟಕ)—೮ ಆಣೆ **ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯ ಶ್ರೇಷ್ಠ ಸಾಧುವರ್ಯ ನಾಗಮಹಾಶಯರ ಜೀವನಕಥೆ**—ರೂ ೧

ನವಜೀವನ ಗ್ರಂಥಭಂಡಾರದಿಂದ ಹೊರಟಿರುವ (೧) ಆಕಾಶದೊಳಗಿನ ಅದ್ಭುತ ಚಮತ್ಕಾರಗಳು ೧—೩—೦ ೨) ಧರ್ಮ ಸಂಭವ—೧-೪-೦ (೩) ಹಿಂದೂಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು ೧—೨—೦ ಕನ್ನಡಪುಸ್ತಕಗಳೆಲ್ಲಾ ದೊರೆಯುತ್ತವೆ

ವಿ ಜಿ. ಟಿ ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ನಿಮ್ಮ ಬಂಧುಬಳಗದ ಆರೋಗ್ಯಲಾಭಕ್ಕಾಗಿ.

ತಂದೆಗೆ ಅವನ ಕಷ್ಟಮಯ ಕೆಲಸಗಳಿಗೆ ಆವಶ್ಯಕವಿರುವ ಆರೋಗ್ಯ ಶಕ್ತಿಗಳಂತೆಯೇ ತಾಯಿಗೂ ಶ್ರಮವಿಲ್ಲದೆ ಮನೆಗೆಲಸಗಳನ್ನು ಮಾಡಲು ಅಂತಹ ಆರೋಗ್ಯ ಮತ್ತು ಶಕ್ತಿಗಳು ಬೇಕಾಗಿವೆ ಮಕ್ಕಳು ಕೂಡ ಆಟಪಾಠಗಳಲಿ ತಮ್ಮ ಚೈತನ್ಯವನ್ನು ಬೇಗನೇ ಕಳೆದುಕೊಳ್ಳುತ್ತಾರೆ ಅದನ್ನು ಪುನಃ ತುಂಬಿಸಬೇಕು ಆರೋಗ್ಯವನ್ನೂ ಶಕ್ತಿಯನ್ನೂ ವೃದ್ಧಿಸಲಿಕ್ಕೆ ಸರಿಯಾದ ಮತ್ತು ಸಮತೂಕದ ಪೋಷಣೆಯು ಒಂದು ಮಾರ್ಗ

ನಿಮ್ಮ ಕುಟುಂಬದ ಆರೋಗ್ಯ ಪಾಲನೆಯನ್ನು ರುಚಿಕರವಾದ ಓವಲ್ಟಿನ್ಗೆ ಬಿಟ್ಟುಕೊಡಿರಿ ಎಲ್ಲಿ ಆರೋಗ್ಯವಿದೆಯೋ ಅಲ್ಲಿ ಧಾರಾಳವಾದ ಸಂತೋಷವಿದೆ ಎಲ್ಲಿ ಓವಲ್ಟಿನ್ ಪಾನೀಯವಿದೆಯೋ ಅಲ್ಲಿ ಆರೋಗ್ಯವಿದೆ

ಒಳ್ಳೇ ಶುದ್ಧ ಉತ್ಕೃಷ್ಟವು — ಕರಸ್ಪರ್ಶಿತವಾದುದದಲ್ಲ

ರುಚಿಕರವಾದ ಓವಲ್ಟಿನ್ಗೆ ಸರಿಸಮಾನವಾದ ಬೇರೆ ಪಾನೀಯವಿಲ್ಲ ಮಿಶ್ರವೂ ಸಪ್ರಮಾಣ ರಹಿತವೂ ಆಗಿರುವ ಎಲ್ಲಾ ಪಕಾರಿ ವಸ್ತುಗಳನ್ನು ತಿರಸ್ಕರಿಸಿರಿ

OVALTINE
TONIC FOOD BEVERAGE

ಟೋನಿಕ್ ಆಹಾರ ಮತ್ತು ಪಾನೀಯ

ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಏಜಂಟರು ಜೇಮ್ಸ್ ರೈಟ್ ೩೨ಎ. ಮಿಷನ್‌ಸ್ಟ್ರೀಟ್, ಕಲ್ಕತ್ತಾ, ಮತ್ತು
ಮುಂಬಾಯಿ ಮದರಾಸ್, ರಂಗೂನುಗಳಲ್ಲಿ

ಓವಲ್ಟಿನ್' ರೊಟ್ಟಿಗಳನ್ನು ಎಲ್ಲಾ ಕುಟುಂಬಗಳು ಸೇವಿಸುತ್ತವೆ. ಇದನ್ನು 'ಓವಲ್ಟಿನ್" ನೊಡನೆಯಾಗಲೀ ಚಹ ಕಾಫಿ ಬೆಣ್ಣೆ ಹಣ್ಣಿನೊಡನೆಯಾಗಲೀ ತೆಗೆದುಕೊಳ್ಳಿರಿ ಬಹಳ ರುಚಿಕರ, ಇದರಲ್ಲಿ ಬೇಗನೇ ಜೀರ್ಣವಾಗುವ ಮತ್ತು ಶಕ್ತಿವರ್ಧಕ ಗುಣಗಳಿವೆ, ಹಲ್ಲುಗಳನ್ನು ಬಲಗೊಳಿಸುತ್ತದೆ

OV/52

ಪತ್ರವ್ಯವಹಾರ.

[ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ, ಸಂ, ಸ್ವ]

ಸ್ವದೇಶಾಭಿಮಾನಿ ಸಂಪಾದಕರಿಗೆ

ಬೋಳೂರು ಸ್ಮಶಾನದ ಬಳಿ ಮಾರ್ಗ ದುರುಸ್ತಿ ಬಗ್ಗೆ ಕಲ್ಲುಗಳ ರಾಶಿಗಳು ಹಾಕಲ್ಪಟ್ಟು ಕೆಲವು ದಿವಸಗಳಾದುವು ಕಲ್ಲು ರಾಶಿಗಳು ಹಾಕಿರುವಲ್ಲಿ (ಮಾರ್ಗದಲ್ಲಿ) ಅಪಾಯ ಸೂಚಕ ದೀಪಸ್ತಂಭಗಳಿಲ್ಲದಿರುವುದರಿಂದ, ರಾತ್ರಿ ಸಮಯದಲ್ಲಿ ಅದರಲ್ಲೂ ಈಗಿನ ಮಳೆಗಾಲದ ರಾತ್ರಿಯಲ್ಲಿ ಆ ಮಾರ್ಗದಿಂದ ಹೋಗುವ ಅಪರಿಚಿತರೆಂತೂ ಇರಲಿ ಪರಿಚಿತರೂ ಕಲ್ಲುಗಳ ರಾಶಿಗೊಮ್ಮೆ ಸಾಷ್ಟಾಂಗವೆರಗಿ ಉರುಳಿ ಮೂಡ ಸುತ್ತುಗಳ ಒಂದೇ ಅಂತರ್ರಾಗ್ ಹೊಡೆದು ಸರ್ಕಸಿನವರಂತೆ ಅಭಿನಯಿಸಿ, ತಮ್ಮ ಮೂಗು ಮುಸುಡುಗಳನ್ನಾಹುತಿ ಕೊಟ್ಟವರು ಅನೇಕ ಮಂದಿಗಳಿರುವರು ಇಂದಿನ ವರೆಗೆ ನಡೆದುದೆಂತೂ ನಡೆಯಿತಷ್ಟೆ ಇನ್ನು ಮುಂದಕ್ಕಾದರೂ ಹೀಗೆ ನಡೆಯದಂತೆ ಕಲ್ಲುಗಳ ರಾಶಿಯ ಬಳಿಗಳಲ್ಲೊಂದು ಅಪಾಯ ಸೂಚಕ ದೀಪ (Danger Light) ವನ್ನಿಡುವುದು ಒಳ್ಳೇಯದಲ್ಲವೇ? ಮುನ್ಸಿಪಲ್ ಕೌನ್ಸಿಲರರೊಮ್ಮೆ ರಾತ್ರಿ ಸಮಯ ದೀಪ ರಹಿತರಾಗಿ ಮೋಟಾರಿನಲ್ಲಲ್ಲ ಸೈಕಲಿನಲ್ಲಲ್ಲ, ಬರಿ ಕಾಲ್ನಡಿಗೆಯಲ್ಲಿಯೇ ಅತ್ತ ಚಿತ್ತೈಸಿದರೆ ಹೇಗಾಗಬಹುದೆಂದು ತಿಳಿದುಕೊಂಡು ಹೋಗಬಹುದು.

ಅಯ್ಯಾ ಕೌನ್ಸಿಲರೇ ನೀವೊಮ್ಮೆ ಬಂದ ನೋಡುವುದಕ್ಕಿಂತ ಮುಂಚಿತವಾಗಿ ಬೇಗನೇ ದೀಪವನ್ನು ಅಲ್ಲಿರಿಸುವಂತೆ ಮಾಡಿರಿ

ಅಪಾಯ ಸಂಭವಿಸಿದವನೊಬ್ಬ

ನೋಟೀಸು

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

I P N 10/34

ಅನಂತರಾವ ಸಂಪಿಗೆತಾಯ—ಅರ್ಜಿದಾರ

ವೋಜಿಯ ಆಚಾರಿ ವಗೈರಾ 4 ಜನರು—ಎದುರಿ

ಸದ್ರಿ ಅರ್ಜಿದಾರನು ತನ್ನನ್ನು ನಿರಾಧಾರಿ ಎಂತ ಸ್ಥಾಪಿಸಬೇಕಾಗಿ ಕೊಟ್ಟ ಮೇಲಿನ ಅರ್ಜಿಯು 20—6—34ಕ್ಕೆ ತನ್ನಿಗೆ ಇಟ್ಟಿರುತ್ತದೆ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ತಾರೀಖು ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಆಗಲೀ, ವ ವಕೀಲರ ಮುಖಾಂತರವಾಗಲೀ ಹಾಜರ ಆಗಿ ವ್ಯವಹರಿಸತಕ್ಕದ್ದು ಎಂತ ಇದರಿಂದ ತಿಳಿಸಲಾಗುತ್ತದೆ

ಪುತ್ತೂರು
11—6—34 } **C. S. Shastry**
Vakil for Petitio

೩ನೇ ಪುಟದಿಂದ ಮುಂದುವರಿಸಿದುದು

ಮಿಸ್ ಕೆಂಡಾಲ್ ಎಂಬೊಬ್ಬ ರಂಭೆಯು ಕೊಂಗ್ರೆಸನ್ನೂ ಗಾಂಧಿಜೀಯವರನ್ನೂ ಕಂಡಾಬಟ್ಟೆ ದೂರಿ ದೂಷಿಸಿ ಒಂದು ಪುಸ್ತಕವನ್ನು ಬರೆದಿದ್ದಾಳೆ (ಅದರ ಹೆಸರು ಹೇಳುವುದಿಲ್ಲ) ಇದನ್ನವಳು ತನ್ನ ಸ್ವಂತ ತಲೆ ಖರ್ಚು ಮಾಡಿ ಬರೆದುದಲ್ಲ

ಇವಳಿಗೆ ಎಲ್ಲಿಯೋ ಯಾರೋ ಎಷ್ಟೋ ಯಾಕೋ ಹೇಗೋ ಹೇರಳ ಹಣಕೊಟ್ಟು ಪ್ರೊಪಗಾಂಡ ನಡೆಸುವಂತೆ ಹೇಳಿರಬೇಕು ಎಂದು ಎಲ್ಲಾ ಪತ್ರಿಕೆಗಳು ಗುಜುಗುಜು ಗುಜುಗುಜು ಎಂದು ಹೇಳುತ್ತವೆ

ಹಿಂದೀಯರನ್ನು ದೂರಿ ಬರೆದ ಪುಸ್ತಕಗಳಿಗೆ ಹೆಚ್ಚು ಬೆಲೆಯಿದೆ ಅವುಗಳು ಬಹಳವಾಗಿ ಸೇಲ್ (ಮಾರಾಟ) ಆಗುತ್ತವೆ ಎಂದು ಮೇಯೋ ಒಬ್ಬಳಿಗೆ ಗೊತ್ತಾಯಿತು ಅವಳು ತನ್ನ ಅನುಭವವನ್ನು ಅಮೇರಿಕಾ ಇಂಗ್ಲೆಂಡುಗಳಲ್ಲಿ ಪ್ರಚಾರಪಡಿಸಿದಳು ಈಗ ನೋಡಿ ಕೆಲಸವಿಲ್ಲದ ಪ್ರತಿಯೊಬ್ಬನೂ ಹಿಂದೂದೇಶದವರನ್ನು ದೂರಿ ಪುಸ್ತಕಗಳನ್ನು ಬರೆದು ಹಣ ಸಂಪಾದಿಸುತ್ತಾರೆ

ಆದರೆ ಬುದ್ಧಿವಂತರಾದ ಹಿಂದೀಯರು ಯಾರೂ ಅವುಗಳನ್ನು ಪಡಕೊಳ್ಳಬಾರದು ಅವುಗಳಿಗೆ ಖರ್ಚುಮಾಡುವ ದುಡ್ಡನ್ನು ಈ ಮಳೆಗಾಲದಲ್ಲಿ ಚರಂಡಿಗಳಲ್ಲಿ ಹರಿಯುವ ನೀರಿಗೆ ಬಿಸಾಡಬಹುದು

ನಿಮ್ಮ ಲೋ ಎಂಡ್ ಓರ್ಡರ ಕೊಡುವ ವ್ಯವಸ್ಥೆಗಳಿಗೂ ಕೊಂಗ್ರೆಸನ್ನು ಬಗ್ಗುಬಡೆಯುವ ನಿರಂಕುಶ ದಬ್ಬಾಳಿಕೆಯನ್ನುತೋರಿಸುವ ಸಾಹಸಗಳಿಗೂ ನಮ್ಮ ಬೆಂಬಲವಿದೆ ಎಂದು ಅನೇಕ ಸಂಸ್ಥಾನಗಳ ರಾಜರುಗಳು ವೈಸರಾಯರಿಗೆ ತಂತಿ ಬಿಡುತ್ತಿರುವರು

ಡಾ ಅಂಬಡೇಕಾರರು, ಇಂಗ್ಲಾಂಡಿಗೆ ಹೋಗಿದ್ದಾರೆ ಅದು ಕೂಡಾ ಗುಟ್ಟಾಗಿ ಹೋಗಿದ್ದಾರೆ ಇವರು ಅಲ್ಲಿಗೆ ಹೋಗುವಾಗ ಟೊಪ್ಪಿ ಇಟ್ಟುಕೊಂಡು ಹೋಗಿಲ್ಲ (ಟೊಪ್ಪಿ ಇಡುವ ಅಭ್ಯಾಸ ಇವರಿಗಿಲ್ಲ) ಬರುವಾಗ ಇಂಗ್ಲಾಂಡಿನವರು ಇವರಿಗೆ ಟೊಪ್ಪಿ ಇಡುವುದು ಖಂಡಿತ

ಇವರು ಅಸ್ಪೃಶ್ಯರ ಶ್ರೇಯಸ್ಸನ್ನು ಕಾಂಕ್ಷಿಸಿ ಇಂಗ್ಲಾಂಡಿಗೆ ಹೋದುದಲ್ಲ. ತನಗೆ ಏನಾದರೊಂದು ಟೈಟಲ್ ಕೊಡಬಹುದೋ! ಎಂದು ಮಂತ್ರಿಯವರೊಡನೆ ಕೇಳಲಿಕ್ಕೆ! ಎಂದು ಕೆಲವು ಪತ್ರಿಕೆಗಳು ಹೇಳುತ್ತಿವೆ ಅಂಬಡೇಕಾರರೇ ನಿಮಗೆ "ಸ್ವಾಬ"ನ ಆಶೀರ್ವಾದವಿರಲಿ!

"ಸ್ವಾಬ"

ವಿವಿಧ ಸಮಾಚಾರಗಳು.

ಮೋಸಗಾರಿಕೆಯ ವಿವಾಹ

ಕಲ್ಕತ್ತದಲ್ಲಿ ಒಂದು ಇಡೀ ಕುಟುಂಬವು ಮೋಸಗಾರತನಕ್ಕಿಳಿಯಿತು. ಸುಶೀಲಕುಮಾರ ಬೆನರ್ಜಿಯೆಂಬ ತರುಣನೋರ್ವನು ತನ್ನ ತಾಯಿ ಸುಶೀಲಾದೇವಿಯನ್ನೂ, ತನ್ನ ಚಿಕ್ಕತಂದೆ ಹರಿಹರ ಚಟರ್ಜಿಯನ್ನೂ, ತನ್ನ ಮಾವ ನೋನಿತ್ ಚಟರ್ಜಿ ಎಂಬವನನ್ನೂ ಕೂಡಿಕೊಂಡು ಪರಊರುಗಳಿಗೆ ಹೋಗಿ, ತಾನು ಎಂ. ಎ. ಪದವೀಧರನೆಂದೂ, ಕಲ್ಕತ್ತಾ ಯುನಿವರ್ಸಿಟಿಯಲ್ಲಿ ದೊಡ್ಡ ಹುದ್ದೆಯುಳ್ಳವನೆಂದೂ, ತನಗೀಗ ವಿವಾಹವಾಗಬೇಕೆಂದೂ ಕೆಲವು ಜಾತಿ ಗೃಹಸ್ಥರಿಗೆ ತಿಳುಹಿಸಿದನು. ಸುಶೀಲನೊಡನಿದ್ದ ಕುಟುಂಬ ಪರಿವಾರವನ್ನೆಲ್ಲಾ ನೋಡಿ ಹೆಣ್ಣಿನ ಕಡೆಯವರು ಓಡಿಬಂದು, ತನ್ನ ಮಗಳನ್ನು, ತನ್ನ ಮಗಳನ್ನು ಎಂಬಂತೆ, ತಮ್ಮ ಮಕ್ಕಳನ್ನು ಸುಶೀಲನಿಗೆ ವಿವಾಹ ಮಾಡಿಕೊಡಲು ತವಕಗೊಂಡರು. ಸುಶೀಲಕುಮಾರನ ದುಶ್ಶೀಲವನ್ನರಿಯದ ಜನರು ಆತನಿಗೆ ಹೆಣ್ಣನ್ನೂ ಕುಮಾರಶುಲ್ಕದ ರೂಪದಲ್ಲಿ ಹೊನ್ನನ್ನೂ ಕೊಟ್ಟರು. ಆದರೆ ಸುಶೀಲನು ಮದುವೆಯಾದ ಹೆಂಡತಿಯನ್ನು ಒಂದು ವಾರದ ತನಕ ಇಟ್ಟುಕೊಳ್ಳುತ್ತಿದ್ದಿಲ್ಲ. ಹುಡುಗಿಯನ್ನು ಮನೆಗೆ ಕಳುಹಿಸಿ ಅವಳ ಮೂಲಕ ಬಂದ ದ್ರವ್ಯವನ್ನು ಮಾತ್ರ ಇಟ್ಟುಕೊಳ್ಳುತ್ತಿದ್ದನು. ಸುಶೀಲನೂ ಅವನ ಕುಟುಂಬದವರೂ ಇದೇ ರೀತಿ ಹತ್ತುಹನ್ನೆರಡು ಕಡೆಗಳಿಗೆ ಹೋಗಿ ಹಲಕೆಲವು ವಿವಾಹಗಳನ್ನಾಗಿ ವರದಕ್ಷಿಣೆಯ ಹೇರಳ ಹಣವನ್ನು ಲೂಟಿಮಾಡಿದರು. ಕಾಲಕ್ರಮೇಣ ಈ ಗುಟ್ಟು ಬಯಲಿಗೆ ಬಿತ್ತು. ಸುಶೀಲನ ಕುಟುಂಬದವರು ಮಾಡುವ ವಿವಾಹವು ಮೋಸಗಾರಿಕೆಯ ವಿವಾಹವಾಗಿರುತ್ತದೆಂದು ಹೆಣ್ಣುಕೊಟ್ಟವರಿಗೆಲ್ಲ ತಿಳಿಯಿತು. ಸುಶೀಲನನ್ನೂ ಅವನ ಜನರನ್ನೂ ಪತ್ತೆ ಮಾಡಿ ಹಿಡಿಯಲಾಯಿತು. ಪರಿಶೀಲಿಸಿ ನೋಡಿದ್ದಲ್ಲಿ ಸುಶೀಲನು ಹೆಚ್ಚು ವಿದ್ಯಾವಂತನಲ್ಲವೆಂದೂ ನಿರುದ್ಯೋಗಿ ಲಂಪಟನೆಂದೂ ತಿಳಿದು ಬಂತು. ಈಗ ಸುಶೀಲನಿಗೆ ೩ ವರುಷ, ಸುಶೀಲಬಾಲಾ ದೇವಿಗೆ ೨ ವರ್ಷ, ಇನ್ನಿತರರಿಗೆ ಒಂದೊಂದು ವರ್ಷದ ಸಜೆಯಾಗಿದೆ.

* * *

ರಾಜಕೀಯ ಕೈದಿಗಳನ್ನು ಅಂಡಮಾನಕ್ಕೆ ಕಳುಹಿಸಬಾರದೇ?

ಕಳೆದ ವಾರದಲ್ಲಿ ಪಾರ್ಲಿಮೆಂಟಿನಲ್ಲಿ ಸರ್ ಚಾರ್ಲ್ಸ್ ಓಮನ್ ಎಂಬ ಬುದ್ಧಿವಂತರೊಬ್ಬರು ಎದ್ದು ನಿಂತು ಜೈಲುಗಳಲ್ಲಿ ಜನಸಂಖ್ಯೆಯಿಂದಾಗಿ ಉಪದ್ರವವಾಗುತ್ತಿದೆಯಷ್ಟೆ. ರಾಜಕೀಯ ಕೈದಿಗಳನ್ನು ಅಂಡಮಾನಕ್ಕೆ ಸರಕಾರವು ಕಳುಹಿಸುವುದಿಲ್ಲವೇಕೆ? ಎಂದು ಪ್ರಶ್ನಿಸಿದರು. ಇದಕ್ಕೆ ಸರ್ ಸಾಮ್ಯುವೇಲು ಹೋರು ಕೆಲವು ತರಗತಿಯ ಕೈದಿಗಳನ್ನು ಅಂಡಮಾನ ದ್ವೀಪಕ್ಕೆ ಕಳುಹಿಸಬೇಕೆಂದು ನಾನೂ ಆಲೋಚಿಸುತ್ತಿದ್ದೇನೆ ಎಂದರು. ಇವರ ಈ ಮಾತಿನ ಅರ್ಥವು ಏನೆಂದು ತಿಳಿದುಬಂದಿಲ್ಲ. ರಾಜಕೀಯ ಕೈದಿಗಳನ್ನು ಇವರು ಅಂಡಮಾನಕ್ಕೆ ಕಳುಹಿಸಲಾಲೋಚಿಸುವರೋ ಅಥವಾ ಕ್ರಿಮಿನಲ್ ಕೈದಿಗಳನ್ನೋ ಎಂದು ಗೊತ್ತಾಗಿರುವುದಿಲ್ಲ. ಈ ವಿಷಯವಾಗಿ ಕೆಲವು ಪತ್ರಿಕೆಗಳು ಟೀಕೆ ಮಾಡುತ್ತಾ 'ಸರ್ ಸಾಮ್ಯುವೆಲರ ಆಲೋಚನೆ ಹಾಗಿರಬಹುದು. ಆದರೆ ೧೯೨೦ರಲ್ಲಿ ಇಂಡಿಯನ್ ಜೈಲ್ಸ್ ಕಮಿಟಿಯು ನಿರ್ಣಯಿಸಿದ್ದ ಮೇರೆಗೆ ಇನ್ನು ಮುಂದೆ ಅಂಡಮಾನ ದ್ವೀಪಕ್ಕೆ ಸಾಧಾರಣ ಕೈದಿಗಳನ್ನು ಕಳುಹಿಸಲೇ ಬಾರದು ಎಂದು ಏರ್ಪಾಡಾಗಿದೆಯಲ್ಲ? ಹಾಗಿರುವಾಗ ಹೋರರು ರಾಜಕೀಯ ಕೈದಿಗಳನ್ನಲ್ಲ, ಸಾಧಾರಣ ಕೈದಿಗಳನ್ನೂ ಅಂಡಮಾನಕ್ಕೆ ಕಳುಹಿಸಲು ಸಾಧ್ಯವಿಲ್ಲ' ಎಂದಿವೆ.

* * *

ತಿನ್ನವೆಲ್ಲಿಯಲ್ಲಿನ ಬೊಂಬು!

ಕೆಲವು ಸಮಯದಿಂದೀಚೆಗೆ ತಿನ್ನವೆಲ್ಲಿಯಲ್ಲಿ ಸಿಡಿಮದ್ದು ಮತ್ತು ಬೊಂಬುಗಳ ಹಾವಳಿಯು ನಡೆಯುತ್ತಾ ಇದೆಯಷ್ಟೆ. ಒಂದೆರಡು ವಾರಗಳ ಹಿಂದೆ ಒಬ್ಬಳು ಮುದುಕಿಯು ಸಣ್ಣ ಹುಡುಗನೊಡನೆ ಮಾರ್ಗದ ಮೇಲೆ ಹೋಗುತ್ತಿದ್ದಾಗ ಚೆಂಡಿನಂತಿದ್ದ ಬೊಂಬು ಒಡೆದು ಜಖಂಗೊಂಡರು. ಹೀಗೆಯೇ ಇನ್ನೆರಡು ಕಡೆಗಳಲ್ಲಿಯೂ ಮೊನ್ನೆ ನಡೆಯಿತು. ಕಳೆದ ಶನಿವಾರ ಬೊಂಬು ತಯಾರಿಗಳ ಮನೆಯನ್ನು ಪತ್ತೆಮಾಡುವುದಕ್ಕಾಗಿ ತಿನ್ನವೆಲ್ಲಿಯ ಟೌನು ಪೋಲೀಸರು ಜಪ್ತಿ ಆರಂಭಿಸಿದರು. ಅನೇಕ ಮನೆಗಳನ್ನು ಜಪ್ತಿಮಾಡಿ ನಂತರ ರಾಮಸ್ವಾಮಿ ಎಂಬವನ ಮನೆಯನ್ನು ಜಪ್ತಿ ಮಾಡಿದರು. ಮನೆಯ ಒಂದು ಕೋಣೆಯಲ್ಲಿ ಸಿಡಿಮದ್ದುಗಳೂ ಬೊಂಬು ತಯಾರಿಯ ಬಗ್ಗೆ ಬೇಕಾಗುವ ಸಾಮಾಗ್ರಿಗಳೂ ಕಾಣಸಿಕ್ಕಿದುವು. ಒಡನೆ ಅವನನ್ನು ಕೈದು ಮಾಡಲಾಯಿತು. ಒಂದೆರಡು ದೊಡ್ಡ ದೊಡ್ಡ ಬೊಂಬುಗಳು ಒಂದು ದೇವಸ್ಥಾನದ ಹಿಂದುಗಡೆಯಲ್ಲಿ, ಒಂದು ದೊಡ್ಡ ಮೂರ್ತಿಯ ಹಿಂದುಗಡೆಯಲ್ಲಿದ್ದುದೂ ಕಂಡುಬಂತು. ಆ ಬೊಂಬುಗಳನ್ನು ಪರೀಕ್ಷಾರ್ಥವಾಗಿ ಕಳುಹಲಾಗಿದೆ.

ಶೌಕತಾಲಿಯವರ ಪ್ರಲಾಪ!

ಮೌಲಾನಾ ಶೌಕತಾಲಿಯವರು ಪುನಃ ದೇಶಾಭಿಮಾನದಿಂದ, ಜಾತ್ಯಾಭಿಮಾನದಿಂದ ಮಾತನಾಡಲು ತೊಡಗಿದ್ದಾರೆ. ಮುಂಬಯಿ ದಂಗೆಗೆ ಕಾರಣರಾರು, ತನ್ನ ಖಿಲಾಫತ್ತು ಎಷ್ಟು ಸಾಧು ಕೂಟ, ಎಂಬುದಾಗಿ ಇವರು ಪ್ರಕಟಿಸುತ್ತಾ—"ಹಿಂದೀಯ ಪತ್ರಿಕೆಗಳೆಲ್ಲ ನನ್ನನ್ನು ಸಿಕ್ಕಾಬಟ್ಟೆ ದೂಷಿಸುತ್ತವೆ. ಇವುಗಳ ದೂಷಣೆಯನ್ನು ಕೇಳುವುದಕ್ಕೂ ಉತ್ತರ ಕೊಡುವುದಕ್ಕೂ ನನಗೆ ಸಮಯವಿಲ್ಲ. ಎಲ್ಲಾ ರಾಷ್ಟ್ರೀಯ ಪತ್ರಿಕೆಗಳೂ, ರಾಷ್ಟ್ರದ ಜನರೂ ನನ್ನೊಬ್ಬನ ಮೇಲೆಯೇ ಹರಿದುಬೀಳುತ್ತಿದ್ದಾರೆ—ನನ್ನ ಖಿಲಾಫತ್ತನ್ನು ದೂರುತ್ತಿದ್ದಾರೆ. ಶಾಂತಿ ರಕ್ಷಣಾ ಸಮಿತಿಗೆ ನಾನು ಹೋಗಿದ್ದೆ. ಅಲ್ಲಿ ನನ್ನನ್ನು ದೂರುವವರಿಗೆ ತಕ್ಕ ಜವಾಬನ್ನು ಕೊಡುವುದರಲ್ಲಿದ್ದೆ. ಸಭೆಯವರು ನನಗೆ ಪರಿಹಾಸ್ಯ ಮಾಡಿದರು. ಅಧ್ಯಕ್ಷರು ನನ್ನ ಹೇಳಿಕೆಗಳನ್ನು ಕೊಡಲು ಬಿಡಲಿಲ್ಲ. ಅದಕ್ಕಾಗಿ ಅಂತಹ ಶಾಂತಿರಕ್ಷಣಾ ಸಮಿತಿಯನ್ನು ನಾನು ತ್ಯಜಿಸಿ ಹೊರಗೆ ಹೊರಟೆ. ಈ ವಿಷಯವಾಗಿಯೂ ಪತ್ರಿಕೆಗಳು ನನ್ನೊಬ್ಬನನ್ನೇ ದೂರುತ್ತವೆ. ಕೆಲವರು ನನಗೆ ಸರಕಾರವು ಸಂಬಳವನ್ನು ಕೊಡುತ್ತಿದೆಯೆಂದು ಪ್ರಕಟಿಸುತ್ತಿರುವರು. ಇವರ ಮೌಢ್ಯಕ್ಕೆ ಏನೆನ್ನಲಿ? ಖಿಲಾಫತ್ತಿನವರು ತಪ್ಪುಗಾರರೆಂದಾದರೆ ಸರಕಾರವು ಒಂದು ವಿಚಾರಣಾ ಸಮಿತಿಯನ್ನೇರ್ಪಡಿಸಿ ಸಂಗತಿಗಳನ್ನು ಕಂಡುಹಿಡಿಯಬಹುದು. ದಂಗೆಗೆ ಕಾರಣರಾರೆಂದೂ ಸರಕಾರವು ಕಂಡುಹಿಡಿಯಬಹುದು. ಈ ವಿಷಯವಾಗಿ ನಾನು ಕೋರ್ಟು ವ್ಯವಹರಣೆಯನ್ನು ಮಾಡುವವನಿದ್ದೇನೆ. ನನ್ನ ಅರ್ಜಿಯನ್ನು ನನ್ನ ವಕೀಲರಿಗೆ ಈಗಾಗಲೇ ಕೊಟ್ಟಿರುತ್ತೇನೆ. ಹಾಗೂ ಸತ್ಯಸಂಗತಿಯನ್ನು ಹೊರತಂದು ನಾನೂ ಮುಸ್ಲಿಮರೂ ನನ್ನ ಖಿಲಾಫತ್ತು ಸುಮ್ಮನಿರುವಾಗ ದೂಷಣೆಯ ಕೆಲಸವನ್ನು ಭರದಿಂದ ಸಾಗಿಸುತ್ತಿರುವವರಿಗೆ ಒಂದು ಪಾಠವನ್ನು ಕೊಡಬೇಕಾಗಿದೆ" ಎಂದರು.

* * *

ನಾನು ಮಹಾತ್ಮ ಗಾಂಧಿಯವರ ಶಿಷ್ಯೆ

ಕ್ರಾಂತಿಕಾರ ಪಕ್ಷವಾದ ಸರಕಾರದ ವಿರುದ್ಧ ಕೆಲಸಗಳನ್ನು ಮಾಡುತ್ತಾಳೆಂಬ ಆರೋಪದ ಮೇಲೆ ಅಲ್ಲಹಾಬಾದಿನ ಶ್ರೀಮತಿ ಸಾವಿತ್ರಿದೇವಿ ಎಂಬವಳ ಮನೆಯನ್ನು ಪೋಲೀಸರು ಕೆಲ ಸಮಯದ ಹಿಂದೆ ಜಪ್ತಿಮಾಡಿ ಕೆಲವು ಶಸ್ತ್ರಗಳನ್ನು ಕೊಂಡೊಯ್ದಿರುವರು. ಸಾವಿತ್ರಿದೇವಿಯು [illegible] ಒಬ್ಬ ಮುಸಲ್ಮಾನನನ್ನು ವಿವಾಹವಾದವಳು. ಹಿಂದೀಯರ ಸ್ವಾತಂತ್ರ್ಯ ಹೋರಾಟವನ್ನು ಕಂಡು ಮೆಚ್ಚಿದವಳಿವಳು. ಅಲ್ಲಹಾಬಾದಿನಲ್ಲಿ ಇವಳ ನ್ಯಾಯವಿಚಾರಣೆಯು ನಡೆಯುತ್ತಿದೆ. ಇವಳು ಮೊನ್ನೆ ಮಾಡಿದ ಸ್ಟೇಟುಮೆಂಟು ಹೀಗಿರುತ್ತದೆ— ಶಸ್ತ್ರಶಾಸನವನ್ನು ಉಲ್ಲಂಘಿಸಿ ನಾನು ಯಾವ ಅನ್ಯಾಯವನ್ನೂ ಮಾಡಿರುವುದಿಲ್ಲ. ನನ್ನ ಮನೆಯಲ್ಲಿ ಯಾವ ತರದ ಶಸ್ತ್ರಗಳೂ, ಮದ್ದು ಗುಂಡುಗಳೂ ಇರಲಿಲ್ಲ. ಅವುಗಳ ವಿಷಯ ನಾನು ಅಜ್ಞಾತಳೇ ಸರಿ. ಪೋಲೀಸರು ನನ್ನ ಮನೆಯನ್ನು ಜಪ್ತಿಮಾಡಿದರು. ಜಪ್ತಿಯ ಸಮಯದಲ್ಲಿ ಅವರೊಡನೆ ಯಾರೂ ಇರಲಿಲ್ಲ. ನಾನಾದರೂ ಅವರೊಡನೆ ಒಳಗೆ ಹೋಗುವೆನೆಂದಿದ್ದಾಗ ಪೋಲೀಸರು ನನ್ನನ್ನು ಕಾಲೆತ್ತಲು ಬಿಡಲಿಲ್ಲ. ಪೋಲೀಸರು ಜಪ್ತಿಯನ್ನು ಕಾಯಿದೆಗೆ ವಿರೋಧವಾಗಿ ನಡೆಸಿದರು. ಅವರ ಕೈಯಲ್ಲಿ ವಾರಂಟೂ ಇರಲಿಲ್ಲ. ತಮ್ಮ ಇಚ್ಛಾನುಸಾರವಾಗಿ ಅವರು ಜಪ್ತಿ ನಡೆಸಿದರು. ನನ್ನ ಕೋಣೆಯಲ್ಲಿ ಪೋಲೀಸರಿಗೆ ಮದ್ದು ಗುಂಡುಗಳು ದೊರೆತುವೆಂದು ಅಪವಾದವಿದೆ. ಇದರ ವಿಷಯ ನನಗೇನೂ ತಿಳಿಯದು. ಅವುಗಳು ನನ್ನದಾಗಿಲ್ಲ. ಅಂತಹ ಸಾಮಾನುಗಳು ನನ್ನ ಮನೆಯಲ್ಲಿ ದೊರೆತುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ನಾನು ಯೂರೋಪಿಯಾನಳು ಹೌದು. ಹಿಂದೂದೇಶದ ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡುವುದನ್ನು ನೋಡಿ ನಾನು ಸಹಾನುಭೂತಿಪರಳಾಗಿದ್ದೇನೆ. ಹಿಂದೂದೇಶವು ಈಗ ನನ್ನ ಜನ್ಮಭೂಮಿಯಾಗಿದೆ. ನಾನು ಖಾದಿಯನ್ನು ಧರಿಸುತ್ತೇನೆ. ಖಾದಿಯನ್ನು ಮನೆಮನೆಗೆ ಕೊಂಡೊಯ್ದು ಮಾರಿದ್ದೇನೆ. ನಾನು ಮಹಾತ್ಮಾ ಗಾಂಧಿಯವರ ಶಿಷ್ಯರಲ್ಲೊಬ್ಬಳು. ನನ್ನಲ್ಲಿ ಅಪಾಯಕರ ಶಸ್ತ್ರಗಳು ಇದ್ದುವೆನ್ನುವುದು ನನ್ನ ರಾಜಕೀಯ ಧರ್ಮಕ್ಕೆ ಒಂದು ವಿರೂಪವನ್ನು ಕೊಟ್ಟಂತಲ್ಲದೆ ಮತ್ತೇನಿಲ್ಲ. ನಾನು ತಪ್ಪಿತಸ್ಥಳಲ್ಲವೆಂದು ನನಗೆ ತಿಳಿದಿದೆ. ಈ ಕೋರ್ಟು ಕೂಡ ನನ್ನನ್ನು ವಿಮುಕ್ತಗೊಳಿಸಲಿ. (ಅವಳನ್ನು ಸರಕಾರವು ಬಿಡುಗಡೆಮಾಡಿದೆಯಾಗಿ ಈಗಲೊಂದ ವಾರ್ತೆ ಬಂದಿದೆ)

* * *

ಪತಿತವರ್ಗಕ್ಕೆ ಮಂತ್ರವನ್ನು ಕಲಿಸಿರಿ!

ಪಂಡಿತ ಮದನಮೋಹನ ಮಾಲವೀಯರು ಆಜ ಎಂಬ ಪತ್ರಿಕೆಯಲ್ಲಿ ಒಂದು ಪ್ರಕಟಣೆಯನ್ನು ಮಾಡಿದ್ದಾರೆ. ಅದರಲ್ಲಿ ಹೀಗೆ ಹೇಳಿರುತ್ತದೆ— "ಅಸ್ಪೃಶ್ಯತೆಯನ್ನು ನಿರ್ಮೂಲಮಾಡಬೇಕೆಂದು ಮಹಾತ್ಮಾ ಗಾಂಧಿಯವರು ದೇಶಿಗರೊಡನೆ ಅರಿಕೆ ಮಾಡಿಕೊಂಡಂದಿನಿಂದ ಸ್ಪರ್ಶಾಸ್ಪರ್ಶ್ಯ ವಿಚಾರವಾಗಿ ನಡೆದ ಸುಧಾರಣೆಗಳು ಪ್ರಶಂಸನೀಯವಿವೆ. ಆದರೂ ಬಹುಮಂತ ಕೆಲಸವು ಇನ್ನೂ ಮಾಡತಕ್ಕದ್ದಾಗಿ ಬಾಕಿ ಉಳಿದಿದೆ. ಪತಿತ ವರ್ಗದವರನ್ನುದ್ಧರಿಸುವ ಒಂದು ಮಾರ್ಗವು ನನಗೆ ಕಂಡುಬಂದಿದೆ. ಇದಲ್ಲದೇ ಅವರ ಉನ್ನತಿಗೆ ಬೇರೆ ಮಾರ್ಗವು ಕಾಣಲಾರದು. ಬ್ರಾಹ್ಮಣರೂ, ಕ್ಷತ್ರಿಯರೂ ವೈಶ್ಯರೂ ಉಚ್ಚರಿಸುವ ಮಂತ್ರಗಳನ್ನು ಅವರಿಗೆ ಹೇಳಿಕೊಡಬೇಕು. ಇವುಗಳನ್ನು ಅವರು ಎಲ್ಲಾ ಹಿಂದೂ ಸ್ತ್ರೀಪುರುಷರೊಡನೆ ಉಚ್ಚರಿಸುವಂತಾಗಬೇಕು."

ತಾಯಿಯನ್ನು ಕೊಂದ ಸಿಖ್ಖ ತರುಣರಿಗೆ ಫಾಶಿ!

ಲಾಹೋರಿನ ಚರ್ಖಾ ಎಂಬಲ್ಲಿಂದ ಒಂದು ವಿಶೇಷ ವಾರ್ತೆಯು ಹಸ್ತಗತವಾಗಿದೆ. ಅಲ್ಲಿಯ ರಂಗಸಿಂಗ ಎಂಬ ಗೃಹಸ್ಥನೊಬ್ಬನ ಮನೆಗೆ ಹಜಾರ್‌ಸಿಂಗ್‌ನೆಂಬೊಬ್ಬ ತರುಣನು ದಿನಾಲೂ ಬರುತ್ತಿದ್ದ. ರಂಗಸಿಂಗನ ಧರ್ಮಪತ್ನಿಯು ಸ್ವಲ್ಪ ಅಧರ್ಮಪತ್ನಿಯಂತೆ ನಡೆದಳು. ಕಾಲಕ್ರಮೇಣ ರಂಗಸಿಂಗನ ಹೆಂಡತಿ ಗುಲಾಬಿಕಳದಲೆಗೂ ಹಜಾರ್‌ಸಿಂಗನಿಗೂ ಪ್ರೇಮಪಾಶದ ಬಂಧನವು ಬಿತ್ತು. ಆದರಿಂದ ತಪ್ಪಿಸಿಕೊಳ್ಳಲು ಅವರಿಬ್ಬರಿಗೂ ಸಾಧ್ಯವಾಗಲಿಲ್ಲ. ಇಷ್ಟಾಗುವಾಗ ಗುಲಾಬಿಗೆ ಗೇಲ್‌ಸಿಂಗ್, ಚೋಟಾಸಿಂಗ್, ತೇಲ್‌ಸಿಂಗ್ ಎಂಬ ಮೂವರು ಗಂಡುಮಕ್ಕಳಾದರು. ತಾಯಿಯ ಅವರು ಮತ್ತು ಹಜಾರ್‌ಸಿಂಗನ ಮೇಲೆ ಕಣ್ಣಿಡುತ್ತಾ ಇದ್ದರು. ಒಂದು ದಿನ ಅಕಸ್ಮಾತ್ ಗುಲಾಬಿಯ ಗಂಡನು ತೀರಿಕೊಂಡ. ಅವನು ಮರಣಹೊಂದಿದುದೇ ಗೊತ್ತು. ಗುಲಾಬಿಯನ್ನು ಹಜಾರ್‌ಸಿಂಗನು ತನ್ನ ಹಳ್ಳಿಗೆ ಕೊಂಡು ಹೋದ. ಅಲ್ಲಿ ಅವಳಿಗೆ ಒಂದು ಪ್ರತ್ಯೇಕ ಮನೆಯನ್ನು ಮಾಡಿಕೊಟ್ಟು ಸುಖ ಸಂತೋಷದಿಂದ ದಿನಹರಣಮಾಡುತ್ತಿದ್ದನು. ಗುಲಾಬಿಯು ತನ್ನ ಪ್ರೇಮವಲ್ಲಭನಿಗಾಗಿ ತನ್ನ ಒಳೆದ ಮಕ್ಕಳನ್ನು ಕುಟುಂಬವನ್ನೂ ತ್ಯಜಿಸಿಹೋದುದನ್ನು ನೋಡಿದ ಹಿರಿಯರೂ ಜಾತ್ಯಾಭಿಮಾನಿಗಳೂ ಅವಳ ಮೂವರು ಮಕ್ಕಳಿಗೂ ಪರಿಹಾಸ್ಯಮಾಡಿ ಉಪಕ್ರಮಿಸಿದರು. ಅವರನ್ನು [illegible] ಮಾಡಬೇಕೆಂದು ಆಲೋಚಿಸಿಕೊಂಡರು. ಇದನ್ನು ತಿಳಿದ, ಮತ್ತು ತಾಯಿಯ ದ್ರೋಹವನ್ನೂ ಕಠೋರತೆಯನ್ನೂ ಕಂಡ ಗುಲಾಬಿಯ ಮಕ್ಕಳು ಮಾತೃವಧೆಗಾಗಿ ಟೊಂಕಕಟ್ಟಿದರು. ಗುಲಾಬಿಯು ತನ್ನ [illegible] ಮನೆಯಲ್ಲಿ ವಾಸಿಸುತ್ತಿದ್ದಲ್ಲಿಗೆ ಮೊನ್ನೆ ಹೋದರು. ಕತ್ತಿಕೊಂಡು [illegible] ಓಡಿದರು. ಇದನ್ನು ಕಂಡ ಗುಲಾಬಿಯು ಸ್ವಸಂರಕ್ಷಣಾರ್ಥವಾಗಿ ಮಾಳಿಗೆಯಿಂದ ಕೆಳಗಿದ್ದ ಗದ್ದೆಗೆ ಹಾರಿ ಓಡಲೆತ್ನಿಸಿದಳು. ಆದರೆ ಘಾಯಗೊಂಡ ಅವಳ ಹೆಚ್ಚಿಗೆ ಓಡಲಾರದೆ ತನ್ನ ಮಕ್ಕಳ ಹರಿತವಾದ ಕತ್ತಿಗಳಿಗೂ ಕೋಪೋದ್ರೇಕಕ್ಕೂ [illegible] ವನ್ನೈದಿದಳು. ಮೂವರು ಮಕ್ಕಳನ್ನು ಪೋಲೀಸರು ಹಿಡಿದು ನ್ಯಾಯವಿಚಾರಣೆಯಾಗಿ ಮೊದಲಿನ ಕಿರಿಯವನಿಗೆ [illegible] ಉಳಿದಿಬ್ಬರಿಗೂ ಫಾಶಿ ಶಿಕ್ಷೆಯು ವಿಧಿಸಲ್ಪಟ್ಟಿತು. ಇವರನ್ನು ಗಲ್ಲಿಗೇರಿಸುವುದಕ್ಕಾಗಿ ಹಜಾರ್‌ಸಿಂಗನು ಬಹು ಪ್ರಯತ್ನಪಡಿಸಿದ [illegible] ವಿಜಯಿಯಾದನು.

ಶಿಕ್ಷೆ!

ಲಾಹೋರಿನಲ್ಲಿ ಒಬ್ಬಳು ಬಂಜೆಯು ತನ್ನ ಗಂಡನು [illegible] ದೊಡನೆ ಅವನ [illegible] ನೊಡೋತ್ತಮನಾಗಿಸೆಂಬ [illegible] ಪುರುಷನೊಡನೆ ಗಂಡನ [illegible] ಸ್ಮಶಾನದಲ್ಲಿನ ಒಂದು ಕಟ್ಟೋಣದಲ್ಲಿ ಮಾಡ [illegible] ಒಂದು [illegible] ೩೦೦ ರೂಪಾಯಿ ಬಂಗಾರವನ್ನು ಬಲಾತ್ಕಾರದಿ ದೆತ್ತಿ [illegible] ಹೊಡೆದು ಓಡಿದರು. [illegible] ತರಿಗೆ ಶಿಕ್ಷೆಯಾಗಿದೆ.

ನೋಟೀಸು

[illegible] ತಾಲೂಕು ಮಾಂಟ್ರಾಡಿ ಗ್ರಾಮದ ಕೊಂಡಿಬೆಟ್ಟು ಬಿಮ್ಮಣ್ಣ ಪೂಜಾರಿ ಅಳಿಯ ಶುಕ್ರಪೂಜಾರಿ ಆದ ನಾನು ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ ಕಾರ್ಕಳ ತಾಲೂಕು [illegible] ಗ್ರಾಮದ ಕಾಂಟ್ರಾಡಿ ಎಂಬಲ್ಲಿರುವ ಕಾರ್ಕಳ [illegible] ಹೆಗ್ಗಡೆಯರ ಪಿದವೆ ಸೋಮಯ್ಯ ಹೆಗ್ಗಡೆ [illegible] ಹೆಗ್ಗಡೆ 1 ಸದ್ರಿ ಶಿವಪ್ಪಹೆಗ್ಗಡೆ ಅಳಿಯ ವಾಲಿಪ್ಪಾಡಿಯ [illegible] ಹೆಗ್ಗಡೆ 1, ಸದ್ರಿ ಸೋಮಯ್ಯ ಹೆಗ್ಗಡೆತಿಯು [illegible] ರಾಮಯ್ಯ ಹೆಗ್ಗಡೆ 1 ವಾಲಿಪ್ಪಾಡಿ ಗ್ರಾಮ [illegible] ಪೂಜಾರಿ 1 ಮಾಂಟ್ರಾಡಿ ಗ್ರಾಮದ [illegible] ಪೂಜಾರಿ 1 ಹೀಗೆ ೨ ಜನರೂ ಮತ್ತು ಇತರ ಕೆಲವು [illegible] ಜನರು ಕೂಡಿ ಮೋಸಕೃತ್ಯದಿಂದ ನನ್ನ ಎಡಹೆಬ್ಬೆಟ್ಟಿನ ಮುದ್ರೆಯನ್ನು ತಾ 4—6—'32ರಲ್ಲಿ ಪಡೆದಿರುತ್ತಾರೆ. ನಾನು ಓದುಬರಹ ತಿಳಿಯದವನಾದುದರಿಂದ ಸದ್ರಿಯವರು [illegible] ನನಗೆ ಮೋಸಗೊಳಿಸಿ ಹೆಬ್ಬೆಟ್ಟಿನ ಮುದ್ರೆಯನ್ನು ಪಡೆದರು ಎಂಬುದು ಗೊತ್ತಿಲ್ಲ. ಆದಕಾರಣ ಸದ್ರಿಯವರು ನನ್ನಿಂದ ಪಡೆದ ಎಡಹೆಬ್ಬೆಟ್ಟಿನ ಅಥವಾ [illegible] ಮೇಲೆ ಸೋಮಯ್ಯ ಹೆಗ್ಗಡೆಯ ಯಾ ಬೇರೆಯವರ ಹೆಸರಲ್ಲಿ ಮಾಡಿದ ಯಾವದೇ [illegible] ರಿಕಾರ್ಡು ಸಿಂಧು ಆಗತಕ್ಕದ್ದಲ್ಲ. ಅದನ್ನು ಯಾರಾದರೂ ಸಂಬಂಧೀನ ಕಾಗದಪತ್ರಗಳಿಂದಲ್ಲಿ ಅದರಿಂದ ಅವರಿಗೆ ಯಾವ ಪ್ರಯೋಜನವೂ ದೊರೆಯಲಿಕ್ಕಿಲ್ಲ. ಮಾತ್ರವಲ್ಲ ಅಂಥಾ ರಿಕಾರ್ಡುಗಳ ಆಧಾರದ ಮೇಲೆ ನನ್ನ ಓದಿಸಿದ ಯಾವತ್ತು [illegible] ಯನ್ನು ನಾನು ತೆರಲೂ ಬದ್ಧನಲ್ಲ ಎಂಬ ಸಂಗತಿಯನ್ನು ಎಲ್ಲರ ಜಾಹೀರಾತಿನ ಬಗ್ಗೆ ಈ ಮೂಲಕ ತಿಳಿಯಪಡಿಸಿದ್ದೇನೆ.

ಈ ಮೂರು ಗೆರೆ ಮತ್ತು ಎಡಹೆಬ್ಬೆಟ್ಟಿನ ಮುದ್ರೆ

ಶುಕ್ರಪೂಜಾರಿ ರುಜು.

ಮಾಂಟ್ರಾಡಿ ಕೊಂಡಿಬೆಟ್ಟು, ೧೬—೬—೩೨

ಪರೀಕ್ಷಿಸಿರಿ! ಪ್ರಾತ್ಯಕ್ಷಿಗುಣವಹುದು!

ಕಿಮ್ಮತ್ತು ಅಗ್ಗ ಫಲಪ್ರದಂ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನರೆಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರಿಗಳ ಶಿಷ್ಯರಾಗಿ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಳ್ಯಾಣ ಕಲ್ಲು ವೈದ್ಯರಿಂದ ಕೆಲಸ ನಡೆಯೋಣವಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಸಾರ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಗುತಿನಲ್ಲಿ ತಯಾರಿರುವವು ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಹೀಗಲು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ್ದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಸಹಿತ ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿಗೆ ವಾಹಿಸಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚಿನ ವಿವರಕ್ಕೆ ಪತ್ರಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಞಂಗಾಡ (ದ ಕ

ಮೂಲವ್ಯಾಧಿ

ರಕ್ತ ಅಥವಾ ತಜ್ಜನ್ಯವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲಿ ಬೇನೆ ಸಹಿತ ನಾಶವಾಗುವುದು ಪಥ್ಯೆ ಜರೂರಿ ಇಲ್ಲ ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯಿಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಜ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರ೧ ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಠಾಂಬಾರವಾಡೆ 4ನೇ ಗಲ್ಲಿ
ಮುಂಬಯಿ.

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರ 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರಿಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೊ ಆ ದಾದರ್ ಮುಂಬಾಯಿ 14

Dr H L. Batliwalla, Sons & Co., Ltd.
Kadell Road P O Dadar Bombay 14

ತಂತಿ ವಿಳಾಸ – CAVASPUR' Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.



ಶೀತಜ್ವರದ ಮೂರು ರತ್ನಗಳು.

ಲೋಧ್ರ—ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಔಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ—ಇದು ಎಲ್ಲಾ ತರದ ಜ್ವರಗಳನ್ನು ನಿವಾರಣೆ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ—ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಕೇಸರಿ ಕುಠೀರಂ
ಎಗ್ಮೋರ್ ಮದರಾಸು,
ಎಲ್ಲಾ ಔಷಧಿ ಮಾರಾಟದವರಲ್ಲಿ ದೊರೆಯುತ್ತದೆ

The Zandu Pharmaceutical Works, Ltd., Bombay, 14.

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ. 2/8, ½ ಪಾ. ರೂ. 1/5 ¼ ಪಾ. ೧ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು.—ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು.—ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು.—ಟಿ ಸಿ. ನಟರಾಜ್ ಅಂಡ್‌ಕೊ, ಸಯ್ಯಾಜಿರಾವ್ ರೋಡ್.
ಬೆಂಗಳೂರು ಏಜಂಟರು:—ಬಿ ಪ್ರೊಹಟ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು,

ಒಂದಿಷ್ಟು.

ಆಯರ್ಲೆಂಡು ಮತ್ತು ಬ್ರಿಟನಿನೊಳಗೆ ಅಂದು ನಡೆದಿದ್ದ (Oath Bill) ಪ್ರತಿಜ್ಞಾಪಾಲನೆಯನ್ನು ಇಂದು ಆಯರ್ಲೆಂಡು ನಿರ್ಲಕ್ಷಿಸಿತು. ಅದನ್ನು ಕಂಡು ಮೊನ್ನೆ ಆಯರ್ಲೆಂಡಿನ 'ಪ್ರಜಾ ಪ್ರಭು' ಡಿ'ವೆಲಾರರನ್ನು ಲಂಡನಿಗೆ ಕರೆದರು. ಒಂದು ಸಭೆ ನಡೆದು ಚರ್ಚೆಗೆ ಪ್ರಾರಂಭವಾಯಿತು.

* * * *

ಮಂತ್ರಿವರ್ಯರಾದ ಮೆಕ್ಡೊನಾಲ್ಡರು ಅಧ್ಯಕ್ಷರಾಗಿದ್ದರು. ಡೊಮಿನಿಯನ್ ಸೆಕ್ರೆಟರಿಗಳೂ ಇನ್ನಿತರ ಮಹಾ ಮಹಾ ಪ್ರತಿನಿಧಿಗಳೂ ಸಭೆಯಲ್ಲಿ ಸೇರಿದ್ದರು ಮಾತುಕತೆ ನಡೆಯಿತು. ತಾವು ಹೇಳಿದಂತೆ ಡಿ'ವೆಲಾರಾರವರು ಕೇಳಬಹುದೆಂದು ಬ್ರಿಟಿಷ ಮುತ್ಸದಿಗಳ ಆಶೆಯಾಗಿತ್ತು ಇಡೀ ದಿನ ಚರ್ಚೆ ನಡೆಯಿತು ಆದರೆ ಡಿ'ವೆಲಾರರವರು ಬಗ್ಗಲಿಲ್ಲ

* * * *

'ಆಯರ್ಲೆಂಡು ತನ್ನ ಪ್ರತಿಜ್ಞೆಯನ್ನು ಮುರಿಯುವುದಿಲ್ಲ. ಆದರೂ ಇಂಗ್ಲೆಂಡಿಗೆ 'ಭೂ-ಶಾಸನ ರೂಪವಾಗಿ ಒಂದು ಪೈಯನ್ನೂ ಕೊಡಲಿಕ್ಕಿಲ್ಲ' ಎಂಬುದೇ ಡಿ ವೆಲಾರವರ ಖಚಿತೋದ್ಗಾರವಾಯಿತು ಬ್ರಿಟಿಷರು 'ಅದಕ್ಕೆ ನಾವು ಒಪ್ಪಲಿಕ್ಕಿಲ್ಲ' ಎಂದರು ಮೀಟಿಂಗು ಮುರಿಯಿತು ಡಿವೆಲಾರರು ಮರುದಿನವೇ ಸ್ವದೇಶಕ್ಕೆ ಹೊರಟುಹೋದರು. ಮಂತ್ರಿಯವರು ಬಹಳ ಬೇಸರದಲ್ಲಿದ್ದಾರೆ

* * * *

ಅಂದು ಗಾಂಧೀ ಸರಕಾರಗಳೊಳಗೆ ಲಂಡನಿನಲ್ಲಿ ಚರ್ಚೆ ನಡೆದು ಗಾಂಧಿಯವರು ಬಗ್ಗದೆ ಹಿಂತಿರುಗಿದಂತೆ ಮೊನ್ನೆ ಡಿವೆಲಾರವರು ಬ್ರಿಟಿಷರಿಗೆ ತಗ್ಗದೆ, ಹಿಂತಿರುಗಿ ಬಿಟ್ಟರು. The Irish Deadlock!" ಎಂಬುದು ಪ್ರಚಾರವಾಯಿತು

* * * *

ಈ ಸಂಬಂಧವಾಗಿ ಇಂಗ್ಲಾಂಡು ಆಯರ್ಲೆಂಡುಗಳಲ್ಲಿ ಮಹಾ ಗಲಭೆ ಎದ್ದಿದೆ ಮುಂದಕ್ಕೇನಾಗುವುದೆಂದು ಯಾರಿಂದಲೂ ಹೇಳಲು ಸಾಧ್ಯವಿಲ್ಲ ಅಂತೂ ಆಯರ್ಲೆಂಡು ಬ್ರಿಟಿಷರ ಕೈಯಿಂದ ತಪ್ಪಿದಂತಾಗಿದೆ

* * * *

ಡಿಲ್ಲಿಯಲ್ಲಿ ಕೆಲವು ಸಮಯದ ಹಿಂದೆ ಒಂದು ಡಕಾಯಿತಿ ನಡೆಯಿತು ಡಕಾಯಿತರನ್ನು ಪತ್ತೆಮಾಡಲಾಗಲಿಲ್ಲ ಮೊನ್ನೆ ಸಂಶಯದ ಮೇಲೆ ಕುಂದನ್‌ಸಿಂಗ್ ಎಂಬ ಪೋಲೀಸನ ಮನೆಯನ್ನು ಝಡ್ತಿಮಾಡಲಾಯಿತು ಕಳವಾದ ಸಾವಿರಾರು ಸಾಮಾನುಗಳು ಅವನ ಮನೆಯೊಳಗಿದ್ದುವು' 'ಬೇಲಿ ಹೊಲವನ್ನೇ ಮೇಯುವುದು' ಎಂಬುದು ಇದಕ್ಕಾಗಿಯೇ

* * * *

ಪೋಲೀಸರನ್ನು ಇಡುವುದು ದೇಶ ರಕ್ಷಣೆಗಾಗಿ ಅವರೇ ದೇಶ ಭಕ್ಷಣೆಗೆ ತೊಡಗಿದರೆ ಮತ್ತೇನು ಉಳಿದಂತಾಯಿತು? ಕುಂದನ್‌ಸಿಂಗನಂತಹ ಬೇರೆ ಪೋಲೀಸರು ಇರಬಹುದೋ ಎಂಬ ಸಂಶಯ!

* * * *

ಮಂಗಳೂರಿನ ಕೆಲ ಮಾರ್ಗಗಳಲ್ಲಿ ಜಲ್ಲಿ ಕಲ್ಲುಗಳು ತಮ್ಮ ಹರಿತವಾದ ಬಾಯಿಗಳನ್ನು ತೆರೆದು ಜನರಿಗೆ ಕಚ್ಚುತ್ತಿವೆ ಶ್ರೀ ವೆಂಕಟರಮಣ ದೇವಸ್ಥಾನದ ಎದುರು ಚೆಲ್ಲಿಗಳು ಹಾಕಲ್ಪಟ್ಟಂತೆ ಜಲ್ಲಿ ಕಲ್ಲುಗಳು ಬಿದ್ದಿವೆ ಅಯ್ಯಾ ಕೌನ್ಸಿಲರರೇ, ಅವುಗಳ ಮೇಲೆ ರೂಲರನ್ನು ಒಮ್ಮೆ ಓಡಿಸುವಂತೆ ಮಾಡಲಾರಿರಾ?

* * * *

'ಗಾಂಧಿಯನ್ನು ಬಿಡಿರಿ' ರಾಜಕೀಯ ಕೈದಿಗಳನ್ನು ಬಿಡಿರಿ' ರಾಜಿಯಾಗಿರಿ, ಶಾಂತಿಯನ್ನುಂಟುಮಾಡಿರಿ' ಎಂಬ ಆರ್ಭಟೆಗಳು ಈಗ ಎಲ್ಲೆಲ್ಲಿಯೂ ಕೇಳುತ್ತಿವೆ ಲಂಡನಿನವರೂ, ಹಿಂದೂದೇಶದವರೂ ಬೊಬ್ಬಿಡುತ್ತಿದ್ದಾರೆ ಏನೆಲ್ಲ ಆಗಲಿದೆ ನೋಡಬೇಕು

* * * *

ಪಾರ್ಲಿಮೆಂಟಿನಲ್ಲಿ ಸರ್ ಚಾರ್ಲ್ಸ್ ಓಮನ್ ಎಂಬವರು ಬಹಳ ತಲೆ ಖರ್ಚುಮಾಡಿ ಒಂದು ಪ್ರಶ್ನೆಯನ್ನು ನಮ್ಮ ಸರ್ ಸಾಮುವೇಲ್ ಹೋರರಿಗೆ ಹಾಕಿದರು. 'ರಾಜಕೀಯ ಕೈದಿಗಳು ತುಂಬುತ್ತಿರುವರಷ್ಟೆ. ಕೆಲವರನ್ನು ಅಂಡಮಾನಕ್ಕೆ ಕಳುಹಿಸಿದರೇನು!" ಎಂದು ಚಾರ್ಲ್ಸ್ ದೊರೆಗಳ ಪ್ರಶ್ನೆ! ಸರ್ ಚಾರ್ಲ್ಸ್‌ರು ಅಂಡಮಾನವನ್ನು ನೋಡಿದವರೇ?

* * * *

ನೋಡಿದವರಲ್ಲದಿದ್ದರೆ, ಅಂಡಮಾನಕ್ಕೆ ಹೋಗಿ ಕೆಲವು ದಿನಗಳ ತನಕ ಅಲ್ಲಿದ್ದು ಅಲ್ಲಿಯವರ ಸ್ಥಿತಿಗತಿಗಳು ಹೇಗಿವೆ ಎಂದು ತಿಳಿದುಕೊಂಡರೆ ಉತ್ತಮವಲ್ಲವೇ?

* * * *

ಚಳುವಳಿಯ ಡೈರಿ.

ಡಿಕ್ಟೇಟರನಿಗೆ ಶಿಕ್ಷೆ

ಬೆನಾರೆಸ್‌ನಲ್ಲಿ ಕಾನೂನನ್ನುಲ್ಲಂಘಿಸಿದುದಕ್ಕಾಗಿ ಶ್ರೀ. ಸತ್ಯನಾರಾಯಣ ಮಿಶ್ರ ಎಂಬ ಕೊಂಗ್ರೆಸ್ ಸರ್ವಾಧಿಕಾರಿಯನ್ನು ಒಂದು ವರ್ಷದ ಕಠಿಣ ಸಜೆಗೆ ಗುರಿಪಡಿಸಿದರು ಕೊಂಗ್ರೆಸ್ ಚಟುವಟಿಕೆಗಳಲ್ಲಿ ಸೇರಿದರೆಂಬ ಅಪಾದನೆಯ ಮೇಲೆ ಇನ್ನಿತರ ಎಂಟು ಮಂದಿಗಳೂ ವಿವಿಧಾವಧಿಯ ಶಿಕ್ಷೆಗೆ ಗುರಿಯಾದರು

ಸಿಕ್ಕಿತು!

ಮದುರೆಯ ಅಲಗಿರಿ ಸ್ವಾಮಿ ಮತ್ತು ಸುಬ್ಬಯ್ಯನಾಯ್ಡು ಎಂಬಿಬ್ಬರು ಸ್ವಯಂಸೇವಕರು ಮೈಲ್ ಹತ್ತಿ ಸ್ಟೇಷನಿಗೆ ತೆರಳಿದ್ದಾಗ ಅವರನ್ನು ಪೋಲೀಸರು ರೈಲ್ವೆ ಸ್ಟೇಶನಿನಲ್ಲಿ ತಡೆದು ಅವರ ಕೈಯಲ್ಲಿದ್ದ ಸೈಕ್ಲೊಸ್ಟೈಲನ್ನು ಕಸಗೊಂಡರು ಇಬ್ಬರನ್ನೂ ಸೆರೆಹಿಡಿದಿರುವರು

ಕರ್ಣಾಟಕ ರಾಜಕೀಯ ಪರಿಷತ್ತು

ಕಳೆದ ವಾರ ಧಾರವಾಡ ಜಿಲ್ಲೆಯ ಬಾಗಲಕೋಟೆಯಲ್ಲಿ ಕರ್ಣಾಟಕ ರಾಜಕೀಯ ಪರಿಷತ್ತು ಜರಗುವುದೆಂದು ವದಂತಿಯಿತ್ತು ಪೋಲೀಸರ ವ್ಯವಸ್ಥೆಯಾಗಿ ೧೦೦ ಮಂದಿಗಳನ್ನು ಕೈದುಮಾಡಿದರು. ತುಮಕೂರಿನ ಶ್ರೀ ಸುಬ್ರಹ್ಮಣ್ಯಂ ಎಂಬ ವಕೀಲರೂ ಬೆಂಗಳೂರಿನ ಮುನಿಸಿಪಲ್ ಕೌನ್ಸಿಲರರಾದ ಶ್ರೀ ಎಸ್ ಎನ್ ಎಮ್ ರಿಷ್ವಂಕವರೂ ದಸ್ತಗಿರಿಮಾಡಲ್ಪಟ್ಟಿದ್ದಾರೆ

ಇವರ ಈ ಪ್ರಶ್ನೆಗೆ ಉತ್ತರವಾಗಿ ಹೋರರು 'ನನಗೂ ಆಲೋಚನೆ ಇದೆ (cert in class) ಕೆಲವು ತರಗತಿಯವರನ್ನು ಅಲ್ಲಿಗೆ ಕಳುಹಬೇಕೆಂದಾಲೋಚನೆ ಮಾಡುತಿದ್ದೇನೆ. ಎಂದರು ಇವರು ಯಾವ ಕ್ಲಾಸಿನವರನ್ನು ಅಂದಮಾನ ದ್ವೀಪಕ್ಕೆ ಕಳುಹಿಸುತ್ತಾರೆ ನೋಡಲಿದೆ!

* * * *

ಸರ್ ಸಾಮುವೇಲ್ ಹೋರರ ಮನಸ್ಸು ದೇಶ ವಿದೇಶಗಳ ಧುರೀಣರ ಮನವಿಗಳಿಂದಲೂ, ಬೇಡಿಕೆಗಳಿಂದಲೂ ಇನ್ನೂ ಕೂಡ ಬಗ್ಗಿರುವುದಿಲ್ಲವೆಂಬುದಕ್ಕೆ ಇವರ ಈ ಮೇಲಿನ ಉತ್ತರವು ಸಾಕ್ಷ್ಯವಾಗಿದೆ ಹೋರರ ಮನೋಭಾವವನ್ನರಿಯದವರಾರು?

ಇನ್ನೊಂದು ಪರಿಷತ್ತು

ಹೌರಾ ಜಿಲ್ಲೆಯಲ್ಲಿ ರಾಜಕೀಯ ಪರಿಷತ್ತು ಜರಗಿತು. ಅನೇಕ ಪ್ರತಿನಿಧಿಗಳು ಅಲ್ಲಿಗೆ ತೆರಳಿದರು. ಸುಮಾರು ೨೦ ಮಂದಿಗಳನ್ನು ಕೈದುಮಾಡಿರುವರು ಮೌಲವಿ ಜಲಾಲುದ್ದೀನ ಹಶಮಿ (ಲೆಜಿಸ್ಲೇಟಿವ್ ಕೌನ್ಸಿಲರ್) ಇವರು ಅಧ್ಯಕ್ಷರಾಗಿದ್ದರು ಇವರನ್ನೂ ಹಿಡಿದಿರುವರು

ಕರಪತ್ರ ಹಂಚಿದುದಕ್ಕೆ

ಟ್ಯುಟಿಕೋರಿನಿನಲ್ಲಿ ಕೊಂಗ್ರೆಸ್ ಕರಪತ್ರಗಳನ್ನು ಹಂಚಿದ ಕಂಡಸ್ವಾಮಿ ತೇವರ್ ಎಂಬವರನ್ನು ಕೈದುಮಾಡಿ ೧೫ ತಿಂಗಳ ಸಜೆಯನ್ನು ವಿಧಿಸಿದರು.

ಬಜಾಜರ ಆಶ್ರಮ

ನಾಗಪುರದ ವಾರ್ಧಾದಲ್ಲಿ ಸೇಟ್ ಜಮ್ನಾಲಾಲ್ ಬಜಾಜ ಆಶ್ರಮದಲ್ಲಿ ಪೋಲೀಸರು ಜಪ್ತಿಯನ್ನು ನಡಸಿದರು ಅದರೊಳಗಿದ್ದ ಎಂಟು ಮಂದಿ ಸ್ವಯಂಸೇವಕರನ್ನು ಹೊರಹೋಗದ ಅಪ್ಪಣೆಯಿತ್ತರು ಆದರೆ ಅವರು ಒಪ್ಪಲಿಲ್ಲ ಅವರನ್ನು ಕೈದುಮಾಡಲಾಯಿತು

೧೩ನೇ ಡಿಕ್ಟೇಟರರು

ತಿನ್ನವೆಲ್ಲಿಯ ೧೩ನೇ ಸರ್ವಾಧಿಕಾರಿಯಾದ ಪಿ ಪಿ ಶ್ರೀನಾಥ ಅಯ್ಯಂಗಾರರೆಂಬವರು ಕೊಂಗ್ರೆಸ್ ಕರಪತ್ರಗಳನ್ನು ಹಂಚಿದುದಕ್ಕಾಗಿ ೧ ವರ್ಷದ ಸಜೆಗೆ ಗುರಿಯಾದರು

ಸ್ತ್ರೀ ಡಿಕ್ಟೇಟರರಿಗೆ ಶಿಕ್ಷೆ

ಮದ್ರಾಸಿನ ಶ್ರೀಮತಿ ಸರಸ್ವತಿ ಪಾಂಡುರಂಗನ್ ಎಂಬ ಮಹಿಳಾ ಡಿಕ್ಟೇಟರರು ಕೊಂಗ್ರೆಸ್ ಕರಪತ್ರಗಳನ್ನು ಹಂಚುತ್ತಿದ್ದುದಕ್ಕಾಗಿ ಕೈದುಮಾಡಲ್ಪಟ್ಟರು ಅವರೊಡನೆ ನಟರಾಜ ಪಿಳ್ಳೆ ಎಂಬೊಬ್ಬ ಸತ್ಯಾಗ್ರಹಿಯನ್ನೂ ದಸ್ತಗಿರಿ ಮಾಡಿದರಿದ್ದಾರೆ

ದೇಶಿಯಲ್ಲ' ವಿದೇಶಿ

ಕಲ್ಲಿಕೋಟೆಯ ಕೇರಳ ಸ್ವದೇಶಿ ಎಂಪೋರಿಯಂ ಎಂಬ ಮಳಿಗೆಯಲ್ಲಿ ದೇಶಿಯೊಡನೆ ವಿದೇಶಿ ವಸ್ತ್ರಗಳನ್ನು ಮಾರುತ್ತಾರೆಂಬ ವಾರ್ತೆಯು ಕೊಂಗ್ರೆಸ್ಸಿನವರಿಗೆ ತಿಳಿದುಬಂದ ಅದನ್ನು ಪಿಕೆಟ್‌ಮಾಡಲಾಯಿತು. ಅನೇಕ ಕೈದುಗಳಾದವು

ಸ್ವಜಾಗ್ರತೆಯು ಮೊದಲು.

ಮೋಟರ್ ಚಲಾವಣೆಯನ್ನು ಆದಷ್ಟು ಅಪಘಾತರಹಿತವಾಗಿ ಮಾಡುವುದು ಹೇಗೆಂಬ ಪ್ರಶ್ನೆಯ ಕುರಿತು ಈಗ ಲೋಕದ ಎಲ್ಲಾ ಮೋಟರ್ ಮಾಲಿಕರು ಆಲೋಚಿಸುತ್ತಿದ್ದಾರೆ ಒಂದು ಅಪಘಾತವಾಯಿತೆಂದೊಡನೆ, ಮೋಟರನ್ನು ಥಟ್ಟನೆ ನಿಲ್ಲಿಸಲಾಗುತ್ತದೆ ಆಗ ಎದುರು ಸೀಟಿನಲ್ಲಿ ಕುಳಿತ ಪ್ರವಾಸಿಕರು ಥಟ್ಟನೆ ವಿಂಡ್‌ಸ್ಕ್ರೀನುಗಳ ಮೇಲೆ ಎಸೆಯಲ್ಪಟ್ಟಂತಾಗುತ್ತಾರೆ ಇದರಿಂದ ವಿಪರೀತವಾಗುವುದಾದರೆ ತುಂಡಾದ ವಿಂಡ್‌ಸ್ಕ್ರೀನು ಗ್ಲಾಸಿನಿಂದಾಗಿ ದಕ್ಷಿಣ ಹಿಂದೂಸ್ಥಾನದಲ್ಲಿ ಇತ್ತೀಚೆಗೆ ಇಬ್ಬರು ಪ್ರವಾಸಿಕರು ವಿಂಡ್‌ಸ್ಕ್ರೀನು ಗ್ಲಾಸು ತುಂಡಾಗಿ ಗಾಯವಾದುದರಿಂದಾಗಿ ಮೃತಪಟ್ಟರು

ಬ್ರಿಟಿಷ್ ದ್ವೀಪದಲ್ಲಿ ಉಪಯೋಗಿಸಲ್ಪಡುವ ಎಲ್ಲಾ ವಿಂಡ್‌ಸ್ಕ್ರೀನುಗಳಿಗೂ ಸೇಫ್ಟಿ ಗ್ಲಾಸು ಇಡಲ್ಪಡತಕ್ಕದೆಂದು ಇಂಗ್ಲಾಂಡು ಒಂದು ಕಾನೂನು ಜಾರಿಮಾಡಿದೆ



ಇಲ್ಲಿರುವ ಚಿತ್ರವು ಮೊನ್ನಿನ ಮುಂಬಾಯಿ ಗಲಭೆಯ ಸಮಯದಲ್ಲಿ ದೊಂಬಿಗಾರರು ಒಂದು ಫೋರ್ಡ್ ಕಾರಿನ ವಿಂಡ್‌ಸ್ಕ್ರೀನಿಗೆ ೩ ಪೌಂಡು ಭಾರದ ಕಲ್ಲನ್ನು ಎಸೆದು ಆದ ವಿರೂಪವನ್ನು ತೋರಿಸುತ್ತದೆ ಆದರೆ ಅದೃಷ್ಟವಶಾತ್ ಅದಕ್ಕಿದ್ದ ಫೋರ್ಡ್ ಸ್ಟೇಂಡಾರ್ಡ್ ವಿಂಡ್‌ಸ್ಕ್ರೀನು ಸೇಫ್ಟಿ ಗ್ಲಾಸ್ ಆಗಿತ್ತು ಅದು ಸೇಫ್ಟಿ ಗ್ಲಾಸ್ ಆಗಿಲ್ಲದಿರುತ್ತಿದ್ದರೆ ಕಲ್ಲು ಒಳಗೆ ಹೋಗಿ ಡ್ರೈವರನಿಗೆ ವಿಶೇಷ ಗಾಯ ಆಗುತ್ತಿತ್ತು

ಈ ಮೂರು ವಾಚುಗಳಿಗೂ, ಸಿಬಲಿ, ಶರ್ಟ್ ಧೋತಿ, ಪಾದರಕ್ಷೆಗಳೆಲ್ಲ ಕ್ರಮವಾಗಿ ೪—೮—೦ ಒಟ್ಟಿಗೆ ದಸ್ತಾನ ಎಂಬ ಸುಗಂಧದ್ರವ್ಯ ಬಾಟ್ಲಿ ರಕ್ತ ೩ ಆಣೆ ಚಾಳು ಕಡಿತದ ನೋವನ್ನು ಎಲ್ಲಿಸುವ ಔಷಧಿ ಡಬ್ಬಿಗೆ ೬ ಆಣೆ ರಿಂಗ್ ವರ್ಮ್ ಮದ್ದಿಗೆ ೩ ಆಣೆ ಟನ್ಸ್ವರ್ ಬೀಡುವಿಸ್‌ಗೆ ೩ ಆಣೆ ಮೇಲಿನವುಗಳಲ್ಲಿ ೧-ಡಬ್ಬಿಗಳನ್ನು ಪಡಕೊಳ್ಳುವವರಿಗೆ ಆಶ್ಚರ್ಯಕರ ಇನಾಮು ಸಿಗುವುದು ಒಂದು ಫೇಷನ್ ರಿಸ್ಟ್ ವಾಚ್, ಒಂದು ರೋಲ್ಡ್ ಗೋಲ್ಡ್ ಪೋಕೆಟ್ ವಾಚ್ ೧ ಟೈಂಪೀಸ್—೧೦ ವರ್ಷಗಳ ಗೇರಂಟಿ ಸಹಿತ ಅಲ್ಲದೆ ಇನ್ನಿತರ ಫೌಂಟನ್ ಪೆನ್ ಫೈಸ್ಕೋಪ ಸಾಮಾನು, ಪಿಸ್ತೂಲ್, ಕನ್ನಡಿ, ಬಾಚಣಿಗೆ, ಉಡುವಸ್ತ್ರ ಧೋತಿ ಕತ್ತರಿ ಗಿಲಿಟಿನ ಉಂಗುರ ತಂಪು ಕನ್ನಡಕ, ಸುಸಿಟಲಿಗಳೂ ದೊರೆಯುವುವು ಈ ಸಾಮಾನುಗಳು ಸಂತೃಪ್ತಿಕರವಾಗಿಲ್ಲದಿದ್ದರೆ ಹಣವನ್ನು ವಾಪಾಸು ಕೊಡಲಾಗುವುದು ಪೋಸ್ಟೇಜ್, ಪೇಕಿಂಗ್ ಪ್ರತ್ಯೇಕ

ವಿಳಾಸ— **ಭಾರತ ಯೂನಿಯನ್ ಟ್ರೇಡಿಂಗ್ ಕೋ**

ಪೆಟ್ಟಿಗೆ ನಂಬ್ರ 2394. ಕಲಕತ್ತಾ

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ್ ಸ್ಟುಟಗಾರ್ಟರ ಲ್ಯಾಫ್‌ಇನ್ಶೂರೆನ್ಸ್
ಬೇಂಕ್, ಲಿಮಿಟೆಡ್
(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ೨೦೮ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಪತ್ರಗಳ ಹಣವು ೯೯ ಕೋಟಿ ರೂ, ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕರಾಯ್ದಿಟ್ಟ ಕ್ಲೇಮುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ

ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೊರಮಾನಜಿ ಆ್ಯಂಡ್ ಸನ್ಸ್, ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN
securing for your clients –
1 Low rates of Premium
2. Liberal Policy Conditions.
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co, Ltd,
Sanyasiguddy, MANGALORE
Managing Agents –
K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್
ಕಂಪೆನಿ ಲಿಮಿಟೆಡ್ಡ್‌ನಲ್ಲಿ ವಿಮೆಮಾಡಿರಿ.
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ,
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್, ಜಿ. ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.
(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ವಾಂತಿ ಆಗುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.
(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.
ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಗ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು.—
ಅಪ್ಪುವಡುಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಇವರಿಗೆ ಮಾತ್ರ.

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ಕೆ. ಆ. ಸಂಸ್ಥಾನಗಳಿಂದ ಆಶ್ರಯವನ್ನು ಹೊಂದಿದೆ

ವೈದಿಕ ಧರ್ಮಾಭಿಮಾನಿಗಳೂ ಕನ್ನಡ ಭಾಷಾಭಿಮಾನಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ [ವರ್ಷಾರಂಭ
ಸದ್ಬೋಧ ಚಂದ್ರಿಕೆ.
೧೯೦೮ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ತಿಳಿಗನ್ನಡ
ಮಾಸ ಪತ್ರಿಕೆಯು.
ವಾ. ಚಂದಾ ರೂ. ೩] [ಡೆಮ್ಮಿ ಫರಂ ೬.

ಆಗಡಿ ಆನಂದವನದಲ್ಲಿ ಈಗ ೨೫ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ 'ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠ ಶಾಲೆ'ಗೇ ಇದರ ಆದಾಯವೆಲ್ಲ ವಿನಿಯೋಗಿಸಲ್ಪಡುತ್ತಿರುವುದು ಅಲ್ಲದೆ, ಅನೇಕ ಸದ್ಬೋಧ ಪೂರ್ಣವಾದ ಲೇಖಗಳಿಂದಲೂ, ಮನೋರಂಜಕ, ಸಾಮಾಜಿಕ, ಧಾರ್ಮಿಕ, ಐತಿಹಾಸಿಕ ಕಥೆ ಕಾದಂಬರಿಗಳಿಂದಲೂ ಕರ್ನಾಟಕದ ಸಮಾಜ ಭಾಷಾ ಸೇವೆಯನ್ನೂ ಮಾಡುತ್ತಿರುವದು ನಮ್ಮಲ್ಲಿ ಶ್ರೀ ಶೇ ಗ್ರಂಥ ಮಾಲೆಯ ಪುಸ್ತಕಗಳೂ ದೊರೆಯುತ್ತವೆ

ಮ್ಯಾ ಸ ಚ ಆಫೀಸು,
ಪೋ॥ ಆನಂದವನ, ಜಿ॥ ಧಾರವಾಡ

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ ಯಂ ಗಣಪತಿರಾವ್ ಐಗಳರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ ಮೂರನೇ ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

ಎರಡನೇ, ಮೂರನೇ ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ ಹೊಸಕನ್ನಡ (೧ನೇ, ೨ನೇ ಭಾಗ)— ಅಚ್ಚ ಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಜ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ.
ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ - ಶಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! ಮಾರಾಟಕ್ಕಿವೆ!!
ಕಾಫಿ ಪ್ಲೇಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಮೆನೇಜರ
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S KAMATH AT M. T. A. SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೯ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೨೪ನೇ ಶುಕ್ರವಾರ ಜೂನ್ ೧೯೩೨ (24-6-'32.) ಸಂಚಿಕೆ ೨೬.

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**
ಹೆಡ್ ಆಫೀಸು. — ಉಡುಪಿ ಶಾಖೆ — ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000. Subscribed & Called up Rs. 2,25,000
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF MAY 1932

	CAPITAL AND LIABILITIES			PROPERTY AND ASSETS	
1	Paid up Capital	Rs 2,25,000 0 0	1	Premises, Building, Furniture etc	Rs [illegible]44 0
2	Reserve and other funds	„ 2,22,705 0-0	2	Government securities	„ 5,30,786 2 0
3	Deposits	20,11,456 14 7	3	Authorised Investments	„ 21,156 [illegible]
4	Due to Bankers	51,087	4	Bills for collection	10 47 1 0
5	Sundries	53,897 7 1	5	Sundries	[illegible] 1 1
6	Bills for collection per cont	11,147 11 0	6	Cash in hand & with bankers	34 85 [illegible]
	Total	25,90,204 5 4		Total	[illegible]90 [illegible]4 5 [illegible]

UDIPI 2 – 32

N. ANANDA RAO,
Secretary & Manager

Regd

ಅಮೃತಾಂಜನ.

ಶೀತ ಕೆಮ್ಮು ತಲೆನೋವು ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ಭಂಗಕೊಡುವ ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ ಇದು ಎದುರೊಡ್ಡಿ ಅವುಗಳನ್ನು ಓಡಿಸುತ್ತದೆ ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು — (ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ, ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು, ಎರಡೇ ಸಲದ ಹಚ್ಚುವಿಕೆಯಿಂದ ಗುಣವಾಗುತ್ತದೆ ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ ಡಬ್ಬಿಗೆ 0-6-0 ಡಜನಿಗೆ 3-8-0

ಅಮೃತಾಂಜನ ಡಿಪೋ.
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ದೋಂಗರೆ

ಇವರ

ಬಾಳಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ದೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು — ಶಾ ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office - MANGALORE S. India
First of its kind in the West Coast

CHAIRMAN
Dewan Bahadur N. Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety, Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office

ಎಷ್ಟರ ವರೆಗೆ ಸರ್?

ಕೈದು ಮಾಡುವುದು, ಶಿಕ್ಷೆ ವಿಧಿಸುವುದು, ಕಾರಾಗೃಹದೊಳಗೆ ದೊಬ್ಬಿಬಿಡುವುದು, ಈ ಕೆಲಸಗಳು ಎಷ್ಟರ ವರೆಗೆ ನಡೆಯಬಹುದು ಸರ್? ಒಂದಲ್ಲ ಒಂದು ದಿನ ಇದನ್ನು ನಿಲ್ಲಿಸಬೇಕಾಗಿಲ್ಲವೇ? ಒಂದಲ್ಲ ಒಂದು ದಿನ (ಬೇಗನೇ) ಎಲ್ಲಾ ರಾಜಕೀಯ ಕೈದಿಗಳನ್ನು ಬಿಡಲೇ ಬೇಕಲ್ಲವೇ?

× × × ×

ಮೂರು ತಿಂಗಳ ಹಿಂದೆ ನಮ್ಮ ಪ್ರಖ್ಯಾತ ಸರ್ ಸಾಮ್ಯುವೇಲ್ ಹೋರರು "Though the dogs bark, the caravan passes on" ಎಂಬ ಅರ್ಥಗರ್ಭಿತ ಮಾತನ್ನು ಹೇಳಿರುವರು 'ಸ್ಕಾಬ'ನಂತಹ ಅನೇಕರಿಗೆ ಇವರ ಮಾತಿನ ಅರ್ಥವಾಗಿರಲಿಕ್ಕಿಲ್ಲ

+ + + +

ಹೋರರ ಅಭಿಮತವೇನೆಂದರೆ, ಬ್ರಿಟಿಷ ಪ್ರವಾಸಿಕರ ಪ್ರವಾಸವು ನಡೆಯುತ್ತಿದೆ ಹಿಂದೂದೇಶದ ನಾಯಿಗಳು (ಕೊಂಗ್ರೆಸಿನವರು) ಬೊಗಳಿದರೂ ಚಿಂತಿಲ್ಲ ಎಂದು ಹೋರರೇ ನಿಮ್ಮ ಮಾತಿಗೆ ಮೆಚ್ಚದವರಾರು?

+ + + +

ಆದರೆ ನಿಮ್ಮ ಪ್ರವಾಸವು ನಡೆಯುತ್ತಿದೆ—ಸಾಗುತ್ತಿದೆ ಎಂದು ಹೇಳುತ್ತೀರಲ್ಲಾ? ನಡೆಯುವ ಯಾವ ವಸ್ತುವೇ ಆಗಲಿ, ಅದು ಒಂದಲ್ಲ ಒಂದು ದಿನ ತಟಸ್ಥವಾಗಿ ನಿಲ್ಲಬೇಕೆಂಬ ಸಂಗತಿಯು ನಿಮಗೆ ತಿಳಿದಿರುವುದೋ! ಒಬ್ಬನು ನಡೆಯುತ್ತಾನೆನ್ನಿ ಅವನು ಎಷ್ಟರ ತನಕ ನಡೆದಾನು? ಎಲ್ಲಿಯ ವರೆಗೆ ಸಾಗಿಯಾನು? ನಿಲ್ಲದಿದ್ದರೂ ಕಾಲು ಬಟ್ಟಿದರೆ ಅವನು ಒಂದು ಕಡೆ ಕುಳಿತುಕೊಳ್ಳಲೇ ಬೇಕಲ್ಲವೇ? ಅಥವಾ ಅವನು ಸದಾಸರ್ವದಾ ನಡೆಯುತ್ತಾ ಹೋದರೆ, ಭೂಪ್ರದಕ್ಷಿಣೆ ಮಾಡಬೇಕಾಗುವುದಿಲ್ಲವೇ? ಹಾಗೆ ಭೂಪ್ರದಕ್ಷಿಣೆ ಮಾಡುವಾಗ ಕಾಡು, ಹೊಳೆಗಳನ್ನು ದಾಟಬೇಡವೇ? ಎಷ್ಟು ಕಷ್ಟ ನೋಡಿ!

+ + + +

ಬ್ರಿಟಿಷ ಸಾಮ್ರಾಜ್ಯಾಧಿಪತ್ಯವು ಸಾಗುತ್ತಿದೆ ಅದನ್ನು ತಡೆಯುವವರಿಲ್ಲ ಎಂಬುದು ಸರ್ ಸಾಮುವೇಲರ ಮಾತು ಆದರೆ ಇವರ ಒರ್ಡಿನೆನ್ಸು ರಥವು ಹೊರಟ ಮೇಲೆ ಎಲ್ಲಿಯಾದರೂ ಸ್ವಾಭಾವಿಕವಾಗಿ ನಿಲ್ಲಲೇ ಬೇಕಷ್ಟೆ!

+ + + ×

'ಕೊಂಗ್ರೆಸ್ಸಿನವರನ್ನು ಬೊಗಳುವ ನಾಯಿಗಳಿಗೆ ಹೋಲಿಸಿದ ಸರ್ ಹೋರರು ಅವರೊಡನೆ ರಾಜಿಗೆ ಹೋಗದಿದ್ದರೆ ಹೋರರ ಅಭಿಮಾನವು ಉಳಿಯುತ' ಎಂದು ಒಂದು ಆಂಗ್ಲ ಪತ್ರಿಕೆಯೆಂದಿದೆ 'ಸ್ಕಾಬ'ನೂ ಅದೇ ಹೇಳುವುದು

× × × ×

'ಜೈಲುಗಳು ತುಂಬಿವೆ' ವೆಚ್ಚವು ಹೆಚ್ಚಾಗುತ್ತಿದೆ" ಎಂಬ ಮಹಾ ಬೊಬ್ಬೆಯು ಈಗ ಎಲ್ಲೆಲ್ಲೂ ಕೇಳುತ್ತಿದೆ ಒರ್ಡಿನೆನ್ಸುರಾಜ್ಯವನ್ನು ಕೊನೆಗಾಣಿಸಿ ಬಿಡಿರಿ' ಅದರಿಂದ ಪ್ರಯೋಜನವಿಲ್ಲವೆಂದು ಸರ್ ತೇಜಬಹದ್ದೂರ್ ಸಪ್ರೂ ಸ್ವಾಮಿಯವರು ಹೇಳಿಬಿಟ್ಟರು ಹೋರರಿಗೆ ಇದು ಕೇಳಿರುವುದೇ?

× × × ×

ರವೀಂದ್ರನಾಥ ಠಾಗೂರರು ಕೂಡಾ ಒಂದು ಹೃದಯಂಗಮವಾದ ಮನವಿಯನ್ನು ಇಂಗ್ಲಿಷ ಮತ್ತು ಹಿಂದೀಯ ಮುತ್ಸದಿಗಳಿಗೆ ಮಾಡಿರುವರು ಹೋರರಿಗೆ ಅದು ತಿಳಿದಿರುವುದೇ?

× × × ×

ದೀನಬಂಧು ಸಿ ಎಫ್ ಎಂಡ್ರ್ಯೂಸರು ಪ್ರಧಾನಮಂತ್ರಿಯವರನ್ನು ಕಂಡು, ಹಿಂದೂದೇಶದ ಕಷ್ಟಪರಂಪರೆಗಳನ್ನು ತಿಳಿಯಲಿಳಿಸಿದರಂತೆ! ಬೇಗನೇ ರಾಜಿಯಾಗುವುದುತ್ತಮವೆಂದರಂತೆ! ಎಂಡ್ರ್ಯೂಸರಿಗೆ ಬೇರೆ ಕೆಲಸವಿಲ್ಲವೋ? ತನ್ನ ಮಾತನ್ನು ಮಂತ್ರಿವರ್ಯರು ಕಿವಿಮೇಲೆ ಹಾಕಿಕೊಳ್ಳಲಿಕ್ಕಿಲ್ಲ ಎಂಬ ಸಂಗತಿ ಇವರಿಗೇಕೆ ತಿಳಿದಿಲ್ಲ?

× + + +

ವೈಸರಾಯರು ಕೂಡ ಈಗ ಆಲೋಚನೆಗೆ ತೊಡಗಿದ್ದಾರೆ ಅವರಿಗೆ ಈಗ ಸಮುದ್ರದ ಮಧ್ಯೆ ನಿಂತವನ ಸ್ಥಿತಿಯುಂಟಾಗಿದೆ ಗಾಂಧಿಗೆ ಜನವರಿ ತಿಂಗಳಲ್ಲಿ ಬಿಟ್ಟುಕೊಡದೆ ಎಂತಹ ಮಿಸ್ಟೇಕ್ ಆಯಿತು! ಎಂದು ಇವರು ಆಲೋಚಿಸಬಹುದೆಂದು ನನ್ನ ಅಭಿಪ್ರಾಯ,

+ + + +

ಗಾಂಧಿಯು ಜೈಲಿನೊಳಗೆ ಕುಳಿತು ತನ್ನ ಆಶ್ರಮದ ಚರಿತ್ರೆಯನ್ನು ಬರೆಯಲು ತೊಡಗಿದ್ದಾರಂತೆ! ಈ ಕೆಲಸವು ಸಾಂಗವಾಗಿ ನಡೆಯುವಂತೆ ಅವರನ್ನು ಜೈಲಿನೊಳಗಿಟ್ಟು, ಅವಕಾಶವನ್ನು ಕಲ್ಪಿಸಿಕೊಟ್ಟ ಶ್ರೀಯುತ ಸರಕಾರಕ್ಕೆ ಸ್ಕಾಬನ ಎಂಟು ಅಂಗಗಳ ನಮಸ್ಕಾರವಿರಲಿ

× × × ×

'ರಾಜಿಗೆ ಬರುವಿರಾ?" ಎಂಬ ಅರ್ಥದ ಒಂದು ಪತ್ರವನ್ನು ಇಂಗ್ಲಾಂಡಿನಿಂದ ಗಾಂಧಿಯವರ ಸೆರೆಮನೆಯೊಳಗೆ ಒಬ್ಬ ಆಂಗ್ಲ ಧುರೀಣರು ಕಳುಹಿಸಿದರಂತೆ! ಅದಕ್ಕೆ ಗಾಂಧಿಯು 'ರಾಜಿಗೆ ಒಪ್ಪುತ್ತೇನೆ ಆದರೆ ನಿಮ್ಮ ನಮ್ಮ ಶರ್ತಗಳನ್ನು ನಾನು ಕೊಂಗ್ರೆಸ್ಸಿನವರೊಡನೆ ಇತ್ಯರ್ಥಿಸಿಕೊಳ್ಳದೆ ಯಾವುದೂ ಸಾಧ್ಯವಿಲ್ಲ" ಎಂದು ಮರು ಜವಾಬು ಕೊಟ್ಟರಂತೆ ಗಾಂಧಿಯವರಿಗೆ ಬುದ್ಧಿಯುಂಟೆ? ಇವರಿಗೆ ಕೊಂಗ್ರೆಸ್ ಯಾಕೆ? ಕೊಂಗ್ರೆಸ್ ಈಗ ದೇಶದಲ್ಲುಂಟೇ? ಸುಮ್ಮನೆ ಕೊಂಗ್ರೆಸ್ ಅಂತೆ!

+ + + +

ಅಮೇರಿಕದ ಒಬ್ಬ ಲೇಖಕನು ಒಂದು ಲೇಖನವನ್ನು ಬರೆಯುತ್ತ "೬೦ ೦೦೦ ರಾಷ್ಟ್ರ ಪುರುಷರು ಈಗ ಜೈಲಿನೊಳಗಿದ್ದಾರೆ ಆದರೆ ಅದಕ್ಕಿಂತ ಇಮ್ಮಡಿ ಜನರು ಜೈಲಿನ ಹೊರಗೆ ಇನ್ನೂ ಇದ್ದಾರೆ" ಎಂದನು. "ಕೊಂಗ್ರೆಸ್ಸಿನ ಜನರು ಯಾರೂ ಜೈಲಿನ ಹೊರಗೆ ಇಲ್ಲ"ವೆಂದು ನನ್ನ ಮಾತು.

ಜೋತಿಷ್ಯರ ಮಾತು ಸುಳ್ಳಾಗಲಿಕ್ಕೆ (ಸತ್ಯ)ಇನ್ನು ನಾಲ್ಕು ದಿವಸಗಳಿವೆ ೨೪ನೇ ದಿನ ಗಾಂಧಿಯವರನ್ನು ಬಂಧವಿಮುಕ್ತ ಮಾಡುತ್ತಾರೆ ಎಂದಿದ್ದ ತಿರುಕನ್ನಿಯ ಜೋತಿಷ್ಯರಿಗೆ ಈಗ ಎದೆ ಬಡಬಡ ಎನ್ನುತ್ತಿರಬೇಕು

+ + + +

ಏಕೆ ಕೇಳುವಿರಾ? ತನ್ನ ಭವಿಷ್ಯನ್ನುಡಿಯು ಸುಳ್ಳಾಗುವುದೇ ಎಂಬ ಹೆದರಿಕೆಯಿಂದ ಪ್ರಿಯ ಜೋತಿಷ್ಯರೇ, ಹೆದರಬೇಡಿ, ಹೆದರಬೇಡಿ ಮೊದಲು ನೀವು ವೈಸರಾಯರನ್ನೂ ಆ ಮೇಲೆ (ನಾಲ್ಕು ದಿನಗಳೊಳಗೆ) ಲಂಡನಿಗೆ ಸೇರಿ ಹೋರರನ್ನೂ ನೋಡಿಬನ್ನಿ (ಅಂಬಡೇಕರರು ಹೋಗಿದ್ದಾರೆ, ನೀವೂ ಹೋಗಿರಿ) ಹಾಗೆ ಮಾಡಿದರೆ ಗಾಂಧಿಯವರನ್ನು ಸರಕಾರವು ಬಿಡುಗಡೆ ಮಾಡಬಹುದು ನಿಮಗೆ ಕೀರ್ತಿ (ಕಾಸು!?!) ದೊರೆಯಬಹುದು. ನನ್ನಂತಹ ಸ್ಕಾಬನ ಆಶೀರ್ವಾದವು ನಿಮಗಿರಲಿ

+ + + +

ಅಂಬೆಡೇಕರರು ನನ್ನ ಆಶೀರ್ವಾದ ಪಡೆದುಕೊಂಡೇ ಲಂಡನಿಗೆ ಹೋಗಿರುತ್ತಾರೆ ಮಂತ್ರಿವರ್ಯರು ಅವರಿಗೆ ಏನನ್ನಾದರೂ ಕೊಡದೆ ಇರಲಿಕ್ಕಿಲ್ಲ ಮಂತ್ರಿಯವರೇ ನಿಮಗೂ ನನ್ನದೊಂದು ಆಶೀರ್ವಾದವಿರಲಿ,

'ಸ್ಕಾಬ'

೧೧೦೦ ರೂ ಬಕ್ಷೀಸು

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ಬಾದಾಂ, ಅಮೂಲ್ಯವಾದ ೩೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಶ್ರೀ ಮದನಮಸ್ತ ಪಾಕು — ರಿಜಿಸ್ಟರ್ಡ.

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ, ಮೈನೋವು, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ ೨೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫, ಟಿ ಖ ರೂ ೧ ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫॥ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನು ನೋಡಿರಿ

ಡಾಕ್ಟರ ಎಮ್ ಆಯ್ ಖಟಖಟೆ, ಎಲ್ ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಬಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು.

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ, S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯ ಆಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಗರ್ಭವಾಗುವುದಿಲ್ಲ ಮೊದಲ ಪೂರಾ ವಿಚಾರಮಾಡಿ ಔಷದ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಳವಾಮಾಹಿಮ ರಾಣೀ— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ ಖರ್ಚ ೦॥೦

ವಿಳಾಸ — ಸಂಜೀವಿನೀ ಔಷಧಾಲಯ. ಮು ಪೋ ಮಿರಜ, S M C.

'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.



ಈ ಮೂರು ವಾಚುಗಳಿಗೂ, ನುಸಿಬಲೆ, ಶರ್ಟ ಧೋತಿ, ಪಾದರಕ್ಷೆಗಳೆಲ್ಲಕ್ಕೂ ೪—೮—೦ ಒಟ್ಟೋ ಮಸ್ತನ ಎಂಬ ಸುಗಂಧದ್ರವ್ಯ ಬಾಟಲಿಕ್ಕೆ ೩ ಆಣೆ ಚೇಳು ಕಡಿತದ ನೋವನ್ನು ನಿಲ್ಲಿಸುವ ಔಷಧಿ ಡಬ್ಬಿಗೆ ೮ ಆಣೆ ರಿಂಗ್ ವರ್ಮ್ ಮದ್ದಿಗೆ ೩ ಆಣೆ ಟಿನ್ಚರ್ ಅಯೊಡಿನ್‌ಗೆ ೩ ಆಣೆ ಮೇಲಿನವುಗಳಲ್ಲಿ ೧೨ ಡಬ್ಬಿಗಳನ್ನು ಪಡೆಕೊಳ್ಳುವವರಿಗೆ ಆಶ್ಚರ್ಯಕರ ಇನಾಮು ಸಿಗುವುವು ಒಂದು ಫೇನ್ಸಿ ರಿಸ್ಟ ವಾಚ ಒಂದು ರೈಲ್ವೆ ಟೈಂ ಪೋಕೆಟ್ ವಾಚ್ ೧ ಟೇಬಲ್ ಟೈಂ ಪೀಸ್—೧೦ ವರ್ಷಗಳ ಗೇರಂಟಿ ಸಹಿತ ಅಲ್ಲದೆ, ಇನ್ನಿತರ ಫೌಂಟನ್ ಪೆನ್ ಬೈಸ್ಕೋಪ್ ಸಾಮಾನು, ಪಿಸ್ತೂಲ್, ಕನ್ನಡಿ ಬಾಚಣಿಗೆ, ಕರವಸ್ತ್ರ ಧೋತಿ ಕತ್ತರಿ ಗಿಲಿಟಿನ ಉಂಗುರ ತಂಪು ಕನ್ನಡಕ, ನುಸಿಬಲೆಗಳೂ ದೊರೆಯುವುವು ಈ ಸಾಮಾನುಗಳು ಸಂತೃಪ್ತಿಕರವಾಗಿಲ್ಲದಿದ್ದರೆ ಹಣವನ್ನು ವಾಪಾಸು ಕೊಡಲಾಗುವುದು ಪೋಸ್ಟೇಜ್ ಪೇಕಿಂಗ್ ಪ್ರತ್ಯೇಕ

ವಿಳಾಸ— ಭಾರತ ಯೂನಿಯನ್ ಟ್ರೇಡಿಂಗ್ ಕೋ

ಟ ಪೆಟ್ಟಿಗೆ ನಂಬ್ರ 2394 ಕಲಕತ್ತಾ

ನೋಟೀಸು

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

O P No 58/32

ಕಾವೇರಮ್ಮ—ಸೀತಾರಾಮ ಅಂಗಿಂತಾಯರ ವಿಧವೆ— ಅರ್ಜಿದಾರಳು.

ಅರ್ಜಿದಾರಳ ಗಂಡ ಹಾಲಿ ಮೃತಪಟ್ಟ ಸೀತಾರಾಮ ಅಂಗಿಂತಾಯರು ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಜೀವವಿಮೆ ಮಾಡಿ ಪಡೆದ ನಂಬ್ರ 305887ನೇ ಪೋಲಿಸಿಯ ಮೇರೆಗೆ ಸದ್ರಿ ಕಂಪೆನಿಯಿಂದ ವಸೂಲಾಗಬೇಕಾದ ರೂಪಾಯಿ ಒಂದು ಸಾವಿರದ ಬಗ್ಗೆ ಸದರಿ ಸೀತಾರಾಮ ಅಂಗಿಂತಾಯರು ಈ ಕೋರ್ಟಿನ ಸ್ಮಾಲ ನಂಬ್ರ 29/26ನೆಗೆ ಅಲಿ ಮಹಮ್ಮದ ಮುಕ್ರಿ ಬ್ಯಾರಿ ಮೇಲೆ ಪಡೆದ ಡಿಕ್ರಿಯ ಮೇರೆಗೆ ಬಹ ಅಂದಾಜು ರೂಪಾಯಿ 130ರ ವಸೂಲಿ ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟ ಕೊಡಿಸಬೇಕಾಗಿ ಅರ್ಜಿದಾರಳು ಮೇಲ್ಕಂಡ ಅರ್ಜಿಯಲ್ಲಿ ಮನವಿ ಮಾಡಿಕೊಂಡಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು 1932ನೇ ಇಸವಿ ಜುಲ್ಯೈ ತಾ. 6ನೇಯ ದಿನ ಹಗಲು 10 ಘಂಟೆಗೆ ಸದರಿ ಕೋರ್ಟಿನ ಮುಂದೆ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ದಾಖೀಲು ಮಾಡಿಕೊಳ್ಳತಕ್ಕದ್ದು.

ಪುತ್ತೂರು
೩೦ ೬–೩೨

M Shiva Rao,
Pleader

The Udipi Mutual Benefit Fund, UDIPI.

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1913)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು

ಎಂ. ಮುಖ್ಯಪ್ರಾಣಭಟ್ಟ ಪ್ರೊಪ್ರೈಟರ್

ENCOURAGE INDIAN COMPANIES AND INDUSTRIES.

SWADESHI MEANS PROVIDING FOOD FOR STARVING MILLIONS
DEAL IN INDIAN GOODS AND KEEP INDIAN MONEY IN INDIA

M V KAMATH
SWADESHI PRACHARAK SANGHA
Kasaragod S K

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.

(REGISTERED UNDER COMPANY'S ACT 1913)
ಕಾಸರಗೋಡು, ದ ಕನ್ನಡ
ಮೂಲಧನ ರೂಪಾಯಿ 50 000—0—0
ಪಾಲು 1ಕ್ಕೆ ರೂಪಾಯಿ 10—0—0 ರಂತೆ
5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸ ವಂತೆ ಸಹಾಯಕರಾಗಿ ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯ ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿರುವ ಒಂದು ಕಂಪೆನಿಯು ಇಲ್ಲವೆಂದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿಗಳೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನುಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯುಳ್ಳದಾಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳು ಛಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧವಿದೆ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ –

ಮೆನೇಜಿಂಗ್ ಡ್ಯಾರೆಕ್ಟರ್,
ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್
ಕಾಸರಗೋಡು, ದ. ಕ.

Canara Bank Limited.

ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal Kasargod, Cochin, Udipi Gangolli Coondapur, Bombay Puttur, Calicut & Alleppey

ಬ್ರಾಂಚುಗಳು:–
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised Capital 10 00000—0—0	ಅಧಿಕಾರಗೊಂಡಿಸಲ್ಪಟ್ಟ ಮೂಲಧನ ರೂ 10,00000—0—0
Issued & paid up Capital 300 000 0 0	ಚಂದಾ ಹಾಕಿದ ಮತ್ತು ವಸೂಲು ಆದ ಮೂಲಧನ ರೂ 300,000 0—0
Reserve and other sinking Funds Rs 526 000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳ 526,000—0—0
Amount invested on G P Notes Rs 1210 092—12—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 1210,092— 2—0
Rates of interest on fixed deposits at Head Office and Branches are 6% for 2 Years 5½%, 1 Year	ಖಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ— ಎರಡು ವರುಷಗಳಿಗೆ ಸೇಕಡಾ 6 % 1 ವರುಷಕ್ಕೆ ಸೇಕಡಾ 5½

Current Account Deposits received and interest allowed on daily balance of Rs 50 and above that on multiples of Rs 10/ @ 3% from 1st Janauary to 30th June and @ 2% from 1st July to 31st December No interest will be allowed unless the depositor earns not less than Rs 5/ during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000/ in the case of Head Office and Cochin Branch and on sums not exceeding Rs 15 000/ in the case of Bombay Branch and on sums exceeding Rs 5000 in the case of other Branches

For further particulars please apply to —

Office of the Bank,
Mangalore 17-6-932

K Venkat Rao,
Secretary & Treasurer

The Pangal Nayak Bank, Ltd.

Head Office
Udipi,

Established 1920

Branch Office
Mangalore

Authorised Capital Rs 2,00,000-	Paid up Capital Rs 1,75 000-
Issued Capital Rs 1 75,000-	Reserve and other Funds Rs 1,80 000

NOTICE.

The rate of interest allowed on the undermentioned deposits will be as follows with effect from 19-4-1932.

Fixed Deposits 3 months 4% 6 and 9 months 5%, 1 year and above 5% and 2 years @ 6% p a

Short term deposits 4% p a

(By order)

Office of the Bank,
Udipi 19 4-32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ದುಡುಕು
ಮೂವತ್ತ	ರಲ್ಲಿ	ಮುಚ್ಚಟೆ
ನಲವತ್ತಾ	ದಾಗ	ನರಳುವದು
ಐವತ್ತು	ಆದರೆ	ಆಲಸ್ಯ
ಅರುವತ್ತು	ಕೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಕು

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0.

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಕಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ವೈದ್ಯವಿದ್ಯೆ ಎಂಬ ಪುಸ್ತಕವನ್ನು ಓದಿರಿ

ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್

ಮದನಮಂಜರಿ ಮಾತ್ರೆಗಳ ಏಜಂಟರು — ಪಿ ಜಿ ಚಂದರಾನಾ, ಮಿಶನ್ ಬೀದಿ, ಮಂಗಳೂರು

ಆ ಮಹಾಪುರುಷರು ಯಾರು?

"ಹಿಂದುಸ್ಥಾನದ ಮುಸ್ಲಿಮ ಮುಖಂಡರ" ಹೆಸರಲ್ಲಿ ಕೆಲದಿನಗಳ ಹಿಂದೆ ಲಂಡನಿನಲ್ಲಿ ಒಂದು ಹೇಳಿಕೆಯು ಎಲ್ಲೆಲ್ಲಿಯೂ ಪ್ರಕಟಗೊಂಡಿತು. ಹಿಂದೂಗಳನ್ನು ನಿಂದಿಸಿ, ತಮ್ಮ ಪೌರುಷಾದಿ ಮಹಾ ಗುಣಗಳನ್ನು ಪ್ರಕಟಿಸಿ, ಯುದ್ಧಕಾಲದಲ್ಲಿ ಮಾಡಿದ ಸಹಾಯವನ್ನು ಮುಂದಿಕ್ಕಿ, ತಮಗೆ ವಿಶೇಷ ದಾಕ್ಷಿಣ್ಯದಿಂದ ವರ್ತಿಸಿ ರಿಯಾಯತಿಗಳನ್ನು ಅಧಿಕವಾಗಿ ಕರುಣಿಸಬೇಕೆಂದೇ ಬ್ರಿಟಿಷರಲ್ಲಿ ವಿನಂತಿಸಿಕೊಳ್ಳುವ ಪತ್ರಕವಿದು. ಆದರೆ, ಇಷ್ಟು ದಿನಗಳಾದ ಬಳಿಕವೂ, ಇಡೀ ದೇಶದಲ್ಲಿನ ಒಬ್ಬನೇ ಒಬ್ಬ ಮುಸ್ಲಿಮ ಮುಖಂಡನು ತನಗೆ ಈ ಪತ್ರಕದ ಹೇಳಿಕೆಯೊಡನೆ ಸಂಬಂಧವಿದೆಯಾಗಿ ಸೂಚಿಸಿಕೊಂಡುದಿಲ್ಲ. "ಮುಸಲ್ಮಾನ" ಎಂಬ ಪತ್ರಿಕೆಯು "ನಿಮ್ಮ ಅಭಿಪ್ರಾಯಗಳಿಗೆ ತಾಯ್ತಂದೆಯರಾಗಿರುವ ನೀವು ನಿಮ್ಮ ಹೆಸರನ್ನು ಹೇಳಿ, ಈ ಪತ್ರಕವು ಹೆತ್ತುದನ್ನು ಒಪ್ಪಿಕೊಳ್ಳಲು ನಾಚುವಿರೇಕೆ?" ಎಂದು ಕೇಳಿದರೂ, ಒಬ್ಬರೂ ತಮ್ಮ ಹೆಸರನ್ನು ಕೊಡಲಿಲ್ಲ. ಇದು ಮೊದಲಾಗಿ ಪ್ರಕಟಹೊಂದುದು ಕಲ್ಕತ್ತದ 'ಸ್ಟೇಟ್ಸ್‌ಮೆನ್' ಪತ್ರದಲ್ಲಿ. ಆ ಪತ್ರವು ಹಿಂದೀಯರೊಳಗೆ ಏನಾದರೊಂದು ಗಡಿಬಿಡಿ ಏಳುವ ಅನುಕೂಲತೆಗಳನ್ನು ಕಾಣುವಲ್ಲಿ ವಿಚಕ್ಷಣದೃಷ್ಟಿಯುಳ್ಳುದಾಗಿ ಟೀಕಿಸಿ, ಬಹುಶಃ ಮುಸ್ಲಿಮರೇ ಆದರೂ ಒಪ್ಪಲು ನಾಚುವಂತಹ ಒಕ್ಕಣೆಯನ್ನು ಇತರರಾರೋ ಬರೆದು ಅವರ ಹೆಸರಲ್ಲಿ ಇವರ ಕೈಗೊಪ್ಪಿಸಿ, ತಲೆಮರೆಸಿ ನಗುತ್ತಿರುವರೆಂದು ವಿಮರ್ಶಕರೆನ್ನುತ್ತಾರೆ. ಅಂತೂ, ಗುಟ್ಟು ಈಗ ರಟ್ಟಾಗಿದೆ.

ನಿರಾಧಾರವಾದ ಬೆದರಿಕೆ

ಏಳು ಕೋಟಿ ಮುಸ್ಲಿಮರ ಹಕ್ಕುಬಾಧ್ಯತೆಗಳು ಮೋಸ ಹೋಗದಂತೆ ಪ್ರಯತ್ನಿಸುವವರೆಂದು ಹಲವರು ಈಗ ಸಮಯಾಸಮಯಗಳನ್ನದೆ, ಪ್ರತ್ಯೇಕಪ್ರಾತಿನಿಧ್ಯ, ರಕ್ಷಣೋಪಾಯಗಳೇ ಮೊದಲಾದ ಹೊಸ ಘೋಷಗಳನ್ನು ಹೊರಡಿಸಿರುವರು. ಇದು ಕೇವಲ ಸ್ವಾರ್ಥದ ಮತ್ತು ಸ್ವಅಭ್ಯುದಯಕ್ಕಾದ ಚಳವಳಿ ಎಂದೇ 'ಮುಸಲ್ಮಾನ' ಪತ್ರಿಕೆ ಟೀಕಿಸಿದೆ. ಬೆರಿಸ್ಟರ್ ಆಸಾಫ ಅಲಿಯವರು ಈ ವಿಷಯ ವಿಶದವಾಗಿ ಬರೆಯುತ್ತ 'ತಾವು ರಾಜಭಕ್ತರೆಂದು ತೋರಿಸಿಕೊಳ್ಳುವುದಕ್ಕಾಗಿ ಕೆಲವರು ಎಷ್ಟು ಬಾಗಿ ನಾಚದೆ ನಡೆಯಬಹುದು. ಆದರೆ, ಯೋಗ್ಯತೆಯೇ ತಮ್ಮ ಆಸ್ತಿ ಎಂದು ನಂಬಿರುವ ಮುಸಲ್ಮಾನರೇ ಈ ದೇಶದಲ್ಲಿ ಧಾರಾಳರಿರುವರು. ದಾದಿಯು ಚಮಚೆಯಿಂದ ಅಂಬಲಿ ಕುಡಿಸಿದರೇ ಉಣ್ಣುವೆವೆಂಬ ಮುಸ್ಲಿಮರು ಬಹು ಕಡಿಮೆ, ಏಕೆಂದರೆ ಇದು ದುರ್ಬಲತೆಯ ಲಕ್ಷಣ. ದೇಶವು ತಮ್ಮದೆಂದು ಮೊದಲು ವಂದಿಸದವರು ಯಾರ್ಯಾರ ಕಾಲಿಗ ಬಿದ್ದಾದರೂ ತಮ್ಮ ಜೀವನ ಸಾಗಿಸಲು ನಾನಾ ರೀತಿಯಾಗಿ ಮಧುರವಾದ ಮಾತು ನುಡಿದು ಅಸಂಬದ್ಧ ಪ್ರಲಾಪಮಾಡುವರೇ ಹೊರತು, ಎಂದಿನಿಂದಲೂ ಇಡಿಯ ಜನರಾದರೂ ಹೆಚ್ಚು ಸಂಖ್ಯೆಯವರನ್ನು ಆಳಿ, ಅವರೊಡನೆ 'ಬಾಳಿಕೊಂಡಿದ್ದ' ಮುಸ್ಲಿಮರು ಯಾವ ಬಹುಸಂಖ್ಯಾಕರ ದೌಡನ್ನೂ ಬೆದರರು. ಏಳು ಕೋಟಿ ಜನರನ್ನು ನುಂಗಬೇಕಾದರೆ ಆ ಗಂಟಲು ಎಷ್ಟು ಸ್ಥೂಲವಾಗಬೇಕು! ಆದರೂ ವ್ಯರ್ಥ ಬೆದರುವುದೇಕೆ? ಎಲ್ಲರೂ ಒಂದಾಗಿ, ಭಾರತೀಯರಾಗಿರಿ" ಎನ್ನುವರು.

ಗಿರಣಿದಾರರ ಪುಂಡಾಟ.

ಬೊಂಬಾಯಿಯ ಗಿರಣಿದಾರರು, ಜಪಾನಿನಿಂದ ಈ ದೇಶಕ್ಕೆ ಆಮದಾಗುವ ಬಟ್ಟೆಯ ಗಂಟನ್ನು ನೋಡಿ ತಮಗೆ ನಷ್ಟವಾಗುವುದೆಂದು ಬೊಬ್ಬೆ ಹಾಕಿ, ಇಂಗ್ಲಿಷ ಬಟ್ಟೆಯ ಮೇಲಿರುವ ಸುಂಕಕ್ಕಿಂತ ಇತರ ದೇಶಗಳಿಂದ ಇತ್ತ ಬರುವ ಬಟ್ಟೆಯ ಮೇಲೆ ಸುಂಕ ಏರಿಸಬೇಕೆಂದು ಮನವಿಮಾಡಿಕೊಂಡಿರುವರು. ಅಹ್ಮದಾಬಾದು ಗಿರಣಿಮಾಲಿಕರು, ಪ್ರತಿಯೊಂದು ದೇಶದಿಂದ (ಇಂಗ್ಲೆಂಡು ಸಹ) ಇಲ್ಲಿಗೆ ಬರುವ ಬಟ್ಟೆಯ ಮೇಲೆ ಒಂದೇ ಬಗೆಯ ಸುಂಕವಿರಬೇಕೆಂದು ಬರೆವರು. ಅಹ್ಮದಾಬಾದಿನಲ್ಲಿ ತಯಾರಾಗುವ ಬಟ್ಟೆ ಲಂಕೇಶಾಯರಿನ ಬಟ್ಟೆಯೊಡನೆ ಸ್ಪರ್ಧೆಗೆ ನಿಲ್ಲಲು ಶಕ್ತವಾಗದೆ, ಮುಂಬಾಯಿಯ ಬಟ್ಟೆ ನಾಜೂಕಿಲ್ಲದೆ ಉಳಿದಿದೆ. ನಮ್ಮ ದೇಶಕ್ಕೆ ಪಕ್ಷಪಾತದೃಷ್ಟಿಯ ಸುಂಕವೇ ಬೇಡವಾಗಿದೆ. ಇಂಗ್ಲೆಂಡಿಗೆ ರಿಯಾಯತಿ ಎಂದೊಡನೆ, ಮಿತ್ರರಾಷ್ಟ್ರಗಳೆಲ್ಲ ಕಣ್ಣು ಕೆಂಪಗೆ ಮಾಡುತ್ತವೆ. ಜಪಾನಿನ ಸರಕು ಇಲ್ಲಿಗೆ ಬಂದು ಬೇಕಾದಷ್ಟು ಹಾವಳಿ ಮಾಡುತ್ತಿದೆ ನಿಜ; ಆದರೆ ಇಷ್ಟು ವರ್ಷ ನಫೆ ಕೂಡಿಸಿದ್ದ ಈ ಗಿರಣಿಗಳು ಯೋಗ್ಯ ಸುಧಾರಣೆಗಳನ್ನೇಕೆ ಮಾಡಿಕೊಂಡಿಲ್ಲ? ಬೊಂಬಾಯಿ ಗಿರಣಿಗಳು ಇಂಗ್ಲೆಂಡಿನ ಗಿರಣಿದಾರರ ಮಿತ್ರಕೂಟಕ್ಕೆ ಸೇರಿದವರು. ಕೆಲ ವರ್ಷಗಳ ಹಿಂದೆ, ಇವರು ಲಂಕೇಶಾಯರಿನ ಗಿರಣಿದಾರರನ್ನು ಸೇರಿ, ಇಂಗ್ಲಿಷ ಮತ್ತು ಹಿಂದೀ ಗಿರಣಿಗಳು ಜಪಾನಿನ ಗಿರಣಿಗಳನ್ನು ಮುರಿದಿಕ್ಕಬೇಕೆಂದು ಎಷ್ಟೋ ಪ್ರಚಾರ ಮಾಡಿದ್ದುಂಟು! ಇಂಗ್ಲೆಂಡಿಗೆ ಇಂಡಿಯದಲ್ಲಿ ರಿಯಾಯತಿ ತೋರಿಸಬೇಕೆಂದು ಈ ಕವುಲಿನ ಒಂದು ಶರ್ತವಿತ್ತು. ಈಗಲಾದರೂ ಆ ಹಳೆಯ ಕವುಲು ಉಳಿದಿರಬೇಕು.

ಮಹಾರಾಜರ ಸಹಾನುಭೂತಿ ಸೇವಾದಿಗಳು

ಒರ್ಡಿನೆನ್ಸುಗಳು ಅವಧಿಬಾಧಕ ತಪ್ಪಿ ತಾವಾಗಿ ವಿನಾಶಹೊಂದುವ ಕಾಲವು ಸಮೀಪಿಸಿರುವುದಾಗಿ, ಎಲ್ಲರೂ ಹೆಬ್ಬೆಟ್ಟಿನ ಮೇಲೆ ನಿಂತು, ಅವುಗಳ ಲಯವನ್ನೇ ಕಾಣುವೆವೆಂದು ಕುತೂಹಲಗೊಂಡಿರುವಾಗಲೆ, ಬಿಕಾನೇರ ಸಂಸ್ಥಾನದ ಶ್ರೀಮನ್ಮಹಾರಾಜರವರು ವೈಸ್ರಾಯರಿಗೆ ಈ ಒರ್ಡಿನೆನ್ಸುಗಳನ್ನು ಜ್ಯಾರಿಗೆ ತರುವುದರಲ್ಲಿ ತಮ್ಮ ತ್ರಿಕರಣಪೂರ್ವಕವಾದ ಬೆಂಬಲವಿದೆ ಎಂದು ಬಿನ್ನಹಪತ್ರ ಬರೆದುಕೊಂಡಿರುವರೆಂದು ಈಗಲೆ ಪ್ರಕಟವಾಗಿದೆ. ವಿಚಿತ್ರವಿದು. ಅವಸಾನಕಾಲದಲ್ಲಿ ಚಿರಂಜೀವಿಯಾಗಿರೆಂದು ದೇವರು ಹರಸಿದಂತೆ, ಈ ಅಭಯವಚನದಿಂದ, ಅಳಿಯುವ ಒರ್ಡಿನೆನ್ಸುಗಳು ಇನ್ನೂ ಆರು ತಿಂಗಳ ಕಾಲ,—ಭೀಷ್ಮನು ಅಯನ ಬದಲಾಗುವುದನ್ನು ಕಾಯುತ್ತಿದ್ದು ದೇಹ ಬಿಟ್ಟಂತೆ—ಉಳಿಯಲೆಂದು ಈ ಆಶೀರ್ವಾದವೆ? ಇನ್ನು ನೋಡಬೇಕು—ಇವರೊಡನೆ ಭಾರತ ರಾಜವಂಶೋದ್ಧಾರಕರಾದ ಇನ್ನೆಷ್ಟು ಮಂದಿ ತಾನೆ ಪರಿಶೆ ಕೂಡಿ, ಒರ್ಡಿನೆನ್ಸುಗಳ ಜೋಗುಳ ಹಾಡು ಹಾಡಲು ಬರುವುದೋ ಎಂಬ ಕುತೂಹಲವೆ ಇದೆ ಎಂದು ಪತ್ರಿಕೆಗಳ ಹಾರಯಿಕೆ.

ಉಪಕಾರಸ್ಮರಣೆ

ಇಂಡಿಯದ ನಾಣ್ಯಚಲಾವಣೆಯ ಇಲಾಖಾ ಆಫೀಸರರು ಕಳೆದ ವರ್ಷ ನಡೆಸಿದ ವಹಿವಾಟುಗಳ ವೃತ್ತಾಂತವನ್ನು ಪ್ರಕಟಿಸಿರುವರು. ಅದರಲ್ಲಿ, 'ಇಂಡಿಯದಿಂದ ರಫ್ತಾಗುತ್ತಿದ್ದ ಕೋಟಿಗಟ್ಟಲೆ ಮೌಲ್ಯದ ಚಿನ್ನವು ಈಗ ಒದಗುತ್ತ ಬರಲು, ಬ್ರಿಟಿಷ ಸರಕಾರವು ವಿದೇಶೀಯ ನಾಣ್ಯಗಳನ್ನು ಕೊಂಡುಕೊಳ್ಳಲು ಅನುಕೂಲತೆ ಹೊಂದಿ, ಕಳೆದ ಆಗೋಸ್ತಿನಲ್ಲಿ ಸಲ್ಲಬೇಕಾದ ಸಾಲವನ್ನು ತೆತ್ತು ಕೃತಾರ್ಥವಾಯಿತು' ಎಂಬ ವಚನಗಳಿವೆ. ವಾಯಿದೆಯು ಸಮೀಪಿಸಿ, ಇಂಗ್ಲೆಂಡು ಕಂಠಗತಪ್ರಾಣವಾಗಿದ್ದಾಗ, ಭಾರತದ ಸ್ವರ್ಣವು ಹೇಗೆ ಇಂಗ್ಲೆಂಡಿಗೆ ಸಂಜೀವನವನ್ನು ಕುಡಿಯಿಸಿ ಉದ್ಧಾರ ಮಾಡಿತೆಂದು, ಕೃತಜ್ಞತಾಸೂಚಕವಾದ ಈ ವಾಕ್ಯಗಳು ನಿಜವಾಗಿಯೂ ಸ್ವರ್ಣಾಕ್ಷರಗಳಲ್ಲೇ ಉಲ್ಲೇಖಿತವಾಗಿವೆಯಲ್ಲವೇ? ಮಾಡಿದ ಉಪಕಾರವನ್ನು ಅದು ಸ್ವಲ್ಪವಾದರೂ 'ಥ್ಯಾಂಕ್ಸ್' ಎನ್ನದೆ ಬ್ರಿಟಿಷರು ಎಂದೂ ಬಾಯಿ ತಡೆಯರು, ಕರೆನ್ಸಿ ಆಫೀಸರು, ಈ ರೀತಿಯಾಗಿ, ಇತಿಹಾಸದಲ್ಲಿ ಒಂದು ಸ್ವರ್ಣಖಚಿತವಾದ ಉಡುಗೊರೆಯನ್ನು ನಮ್ಮಲ್ಲಿನ ಸರಾಫರುಗಳಿಗೆ ಬಹುಮಾನ ಒಪ್ಪಿಸಿದೆ.

ಒಟ್ಟಾವಾದಲ್ಲಿ ಕಾರ್ಯಕ್ರಮ

ಈಗಲೆ ಪ್ರಕಟವಾಗಿದೆ. ಪ್ರಥಮ ಚರ್ಚೆ,—ಪರಸ್ಪರ ಸುಲಭವಾಗುವಂತೆ ಇಂಗ್ಲೆಂಡು ಮತ್ತು ವಸಾಹತುಗಳೊಳಗಣ ವ್ಯಾಪಾರೀ ಕರಾರು ಮಾಡುವುದೇನು? ವಸಾಹತುಗಳು ತಂತಮ್ಮ ವ್ಯಾಪಾರವು ಸರಾಗ ನಡೆವಂತೆ, ಮೊದಲೇ ನಿಶ್ಚಿತ ದರಾವುಗಳನ್ನು ತಾವು ಮಾಡಿಟ್ಟುಕೊಂಡೇ ಇವೆ. ಪ್ರತಿಯೊಂದು ವಸಾಹತ್ತೂ ತನಗೆ ಲಾಭಕರವಾದ ರೀತಿಯಲ್ಲಿ ವ್ಯಾಪಾರೀ ಕರಾರನ್ನು ಮಾಡಿಕೊಳ್ಳಬೇಕೆಂದೇ ಹೋರಾಡದಿರದು. ಹೀಗಿದ್ದರೂ, ಇಂಡಿಯವು ಏನು ಮಾಡಬಲ್ಲುದು? ಅದರ ಹಣೆಯಲ್ಲಿ ಹೋರ ಬ್ರಹ್ಮನು ಮೊದಲೇ ಬರೆದಾಗಿದೆ ಎನ್ನಬಹುದು. ಆದರೆ,—ಬಾಲ್ಡ್‌ವಿನ್ ಮಹಾಶಯರು ಈ ಕಾರ್ಯಕ್ರಮದಲ್ಲಿ ತೋರುವ ಸಮಸ್ತ ವಿಷಯಗಳನ್ನು ಚರ್ಚಿಸಿ ಇತ್ಯರ್ಥಿಸಲು ಮೂರು ವರ್ಷಗಳಾದರೂ ಬೇಕು ಎಂದು ಭವಿಷ್ಯ ಹೇಳಿರುವರು. ಮೂರು ವರ್ಷ! ಒಂದು ಸಾವಿರ ದಿನಗಳು! ಅಷ್ಟು ಅವಧಿಯಲ್ಲಿ ಏನೇನೆಲ್ಲ ನಡೆದು ಹೋಗಬಾರದು? ನೆಶನಲ್ ಸರಕಾರವು ತ್ಯಾಗದಿಂದಲೋ ವೈರಾಗ್ಯದಿಂದಲೋ ಹೊರ ಬೀಳಬಹುದು, ಈಗ ಹೊರಿಸಿದ ಸುಂಕದ ಹೇರು ಥೇಮ್ಸ್ ನದಿಯಲ್ಲಿ ಬಿದ್ದು ಮುಳುಗಬಹುದು, ಇಂಡಿಯಕ್ಕೂ ಸ್ವರಾಜ್ಯವು ದೊರೆಯಬಾರದೆಂದೇನೂ ಇಲ್ಲ. ಮೂರು ವರ್ಷಗಳ ಮುಂದೆ ಆಗಬಹುದಾದುದಕ್ಕೆ ಈಗಲೇ ಸಭ್ಯಗಳಾಧ್ಯಕ್ಷರನ್ನು ನೇಮಿಸಿ ಪ್ರಯೋಜನವೇನು?

ನೋಟಗಳು.

NOTE. .S

ಅಖಿಲಭಾರತ ಮುಸ್ಲಿಮ ಲೀಗಿನ ಕೊನೆಯ ಸಭೆಯು ಮೂರು ಕಲಮು ಉದ್ದ ನಿರ್ಣಯಗಳನ್ನು ಮಂಜೂರು ಮಾಡಿರುವುದು. ಸಭಿಕರ ಸಂಖ್ಯೆ ಮೂರು ಮಂದಿ ಎಂಬುದು ಮಾತ್ರ ಪ್ರಕಟವಾಗದೆ ಉಳಿದಿದೆ. ಹೆಚ್ಚು ಸಭಿಕರು ಸೇರಿದ್ದರೆ, ನಿರ್ಣಯಗಳು ಇನ್ನೆಷ್ಟು ಕಲಮು ಉದ್ದವಾಗುತ್ತಿದ್ದುವು! ಎಂದೇ, ಮೂರೇ ಮಂದಿ ಸಾಕೆಂದರು.

* * * *

೨೦೦೦ ಮಿಲ್ಲಿಯ ಪವನು ಬಂತಕ್ಕ ಸಾಲವನ್ನು ಯುದ್ಧದಲ್ಲಿ ಸೇರಿದ ಮಹಾ ಸರಕಾರಗಳೆಲ್ಲವೂ ರದ್ದುಮಾಡಿವೆ. ಎಲ್ಲರ ಉಸಿರು ಬಿಗಿದಿದೆ ಎಂದು ಬ್ರಿಟಿಷ ಮಂತ್ರಿಗಳ ಹೇಳಿಕೆ ಆಗಲೆ, ಐರ್ಲೆಂಡಿನವರು ತೆರಬೇಕಾದ ೩ ಮಿಲ್ಲಿಯ ಪವನು ತೆರದಿದ್ದರೆ ಮೋಸವೆಂದು ಪಾರ್ಲಿಮೆಂಟಿನಲ್ಲಿ ಭಯಪ್ರದರ್ಶನ. ಐರ್ಲೆಂಡು ತೆರಬೇಕಾದುವರಲ್ಲಿ ಸೊನ್ನೆಗಳು ಕಡಿಮೆಯೆಂದು ಐರ್ಲೆಂಡು ತೆರಲೊಪ್ಪಿಸುವುದಿಲ್ಲ, ಇಂಗ್ಲೆಂಡು ಬಿಡಲಾರದಾಗಿದೆ.

* * * *

ಕಾಂಗ್ರೆಸ್ಸಿನ ಕಾರ್ಯಕ್ರಮಕ್ಕೆ ಯಾವ ತರದ ಸಹಾಯವನ್ನು ಮಾಡುವುದಿದ್ದರೆ ಅದರ ನಿವಾರಣೆಗೆ ಒರ್ಡಿನೆನ್ಸುಗಳು ಇವೆ. ಗರ್ಭಿಣಿಯರು ಹೆರುವ ಮಕ್ಕಳು ಮುಂದೆ ಕಾಂಗ್ರೆಸ್ ಪಕ್ಷದವರಾಗಬಹುದಾಗಿ ನಂಬಲು ಸಾಧ್ಯವಿರುವ ಸಂದೇಹವಿದೆ ಎಂದು ಗರ್ಭಿಣಿಯರಿಗೆ ಒರ್ಡಿನೆನ್ಸು ಪ್ರಕಾರ ಹೆರದಂತೆ ನೋಟೀಸು ಕೊಡಬಹುದಾಗಿ ಬ್ರಿಟಿಷರೊಬ್ಬರ ಹೇಳಿಕೆ.

* * * *

ಯುರಪಾ ಡಾ-ಸಿ ಮ್ಯಾಗಳೊಳಗೆ ಸಂಧಾನಸನ್ನಾಹ ಸಂಬಂಧಗಳಿಗಾಗಿ ಹಿಂದಿನ ಕುಲಪುರೋಹಿತರಿಬ್ಬರು ಸಿಮ್ಲಕ್ಕೆ ತೆರಳಿ, ಮುಹೂರ್ತ ಚೆನ್ನಾಗಿಲ್ಲ, ಗುರುಬಲ ಕಡಿಮೆ ಎಂದು ಹಿಂದಕ್ಕೆ ಬಂದರಂತೆ. ಜೋಯಿಸರ ಪ್ರವಾದ ಚೆನ್ನಾಗಿದೆ, ನಿತ್ಯವೂ ಎಕ್ಸಿಕ್ಯೂಟಿವ್ ಕೌನ್ಸಿಲ ಸಭ ಸೇರುತ್ತದೆ. ತಾ [illegible] ವಿಡುಗಡೆ ವಾಯಿದೆಯನ್ನೆ.

* * * *

ವೈಸ್ರಾಯರು ಊಟಕಮಂಡಿಗೆ ಬರುವಾಗ ಮ್ಯುನಿಸಿಪಲ್ ಸಭೆಯು ಭಿನ್ನವತ್ತಳೆಗೆ ಹಣ ಖರ್ಚುಮಾಡುವುದ ಬೇಡವೆ ಎಂದು ಚರ್ಚೆ ತೀರ್ಮಾನವಾಗುವುದರೊಳಗೆ, ಶ್ರೀಮಾನರು ವಿಶೇಷ ಕಾರ್ಯನಿಮಿತ್ತವಾಗಿ ಬರುವುದಿಲ್ಲವೆಂದು ಇತ್ತಂಡಗಳಿಗೆ ಸಮಾಧಾನಮಾಡಿದರು.

* * * *

ಮುಂಬಾಯಿಯ ಶಾಂತಿಸಾಧನಾ ಕಮಿಟಿಯು ದಂಗೆಗಳ ಬೆಂಬಲ ಯಾವುದೆಂದು ಶೋಧಿಸಲು ಸರಕಾರಕ್ಕೆ ವಿನಂತಿ ಮಾಡಿತು. ಇನ್ನೂ ಉತ್ತರ ಬಂದಿಲ್ಲ. ಈಗ ಶೌಕತ್ ಆಲಿಯವರು ಅವರ ವಿಷಯ ಕೆಲ ಪ್ರಸ್ತಾಪಗಳು ಫ್ರೀಪ್ರೆಸ್ ಜರ್ನಲಿನಲ್ಲಿ ಪ್ರಕಟವಾದುದು ಮಾನನಷ್ಟವಾಯಿತೆಂದು ದಾವಾ ದಾಖಲು ಮಾಡಿದ್ದಾರೆ. ಈಗ ಈ ವಿಚಾರಣೆಯಲ್ಲಾದರೂ ಆ ಶೋಧನೆ ನಡೆಯಬಹುದು.

* * * *

ಮುಂಬಾಯಿಯಲ್ಲಿ ನಿಮಗೆ ನೋಡಸಿಗುವವರಲ್ಲಿ ಪ್ರತಿ ಎರಡನೆ ಮನುಷ್ಯನು ದಿವಾಳಿಯಾಗಿದ್ದಾನೆ ಎಂದು ಹಿಂದೆ ಗವರ್ನರರ ಬದಲಿ ನೋಡಿದ ಹೊಟ್ಸನರು ಇಂಗ್ಲೆಂಡಿನಲ್ಲಿ ಹೇಳಿರುವರು. ಆದರೂ, ಇವರ ಪೆನ್ಶನನ್ನು ಸರಾಗ ತೆರುವರೆ ಹಣ ಇಂಡಿಯದಲ್ಲಿ ಉಳಿದಿದೆಯೆಂಬುದು ವಿಚಿತ್ರವಲ್ಲವೆ?

* * * *

ಸಿಲೋನಿನಲ್ಲಿ ರೈಲ್ವೆ ಟಿಕೇಟುಗಳ ದರ ಏರಿಸಿ ನಾಲ್ಕು ತಿಂಗಳಾದುವು. ಈಗ, ಹೀಗೆ ದರ ಹೆಚ್ಚಿಸಲು ಅಧಿಕಾರ ಕೇಳುವ ಮಸೂದೆ ಕೌನ್ಸಿಲಿನ ಮುಂದೆ ಬರಲು, 'ಈಗ ಪುರಸೊತ್ತಿಲ್ಲ' ಎಂದು ಅದನ್ನು ವಿಲೆವಾಡಿದರು. ಎಂದರೆ, ಇನ್ನೂ ದರಗಳನ್ನು ಏರಿಸುವುದಕ್ಕೆಯೋ?

* * * *

ಭೂಲೋಕಕ್ಕೆ ತಗಲಿರುವ ಅಂಟುರೋಗಗಳಲ್ಲಿ ಅತಿ ಭಯಂಕರವಾಗಿರುವ ರೋಗಯಾವುದು? ಚಿನ್ನಕೂಡಿಸುವ ರೋಗ.

1. Good Riding Quality.
2. Gripping Tread.
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE
Seiberling's Exclusive Quality.



TRIED & PROVED.

USE A Seiberling Tube
IN
A Seiberling Tire.

You cannot find a better combination.

ಅನುಕ್ರಮಣಿಕೆ

ಅಗ್ರಲೇಖ
- ಆರ್ಡಿನೆನ್ಸುಗಳ ಭವಿಷ್ಯವೇನು?
- ಸ್ಫುಟವಿಚಾರಗಳು
- ಸೂಕ್ತಿಗಳು

ವರ್ತಮಾನ ಸಂಗ್ರಹಗಳು
- ವಿದೇಶ ವರ್ತಮಾನ
- ಒಳದೇಶ ವರ್ತಮಾನ
- ದಕ್ಷಿಣ ಕನ್ನಡ — ಮಂಗಳೂರು, ಉಡ್ಪಿ, ಮುಲ್ಕಿ, ಕಾರ್ಕಳ, ಅಜೆಕಾರು, ಬಂಟ್ವಾಳ, ಮಂಜೇಶ್ವರ, ಕಾಸರಗೋಡು ಪಡುಬಿದ್ರಿ
- ವಿವಿಧ ಸಮಾಚಾರಗಳು
- ಎಲ್ಲಿಯ ವರೆಗೆ ಸರಿ?
- ಮಹಾತ್ಮರೂ ವರ್ಣಾಶ್ರಮಧರ್ಮವೂ
- ಚರ್ಚಿಲ್ಲರ ಸ್ಫುಟವಾಣಿ
- ಚಳವಳದ ಡೈರಿ
- ಬಂದಿಸ್ತು

ಸ್ವದೇಶಾಭಿಮಾನಿ.

ತಾ. ೨೪ನೇ ಶುಕ್ರವಾರ ಜೂನ್ ೧೯೩೨

ಆರ್ಡಿನೆನ್ಸುಗಳ ಭವಿಷ್ಯವೇನು?

ಆರು ತಿಂಗಳುಗಳಿಂದ ಸರಕಾರದ ದಬ್ಬಾಳಿಕೆಯ ಕಠಿಣ ಕಾನೂನುಗಳನ್ನೊಳಗೊಂಡ ಆರ್ಡಿನೆನ್ಸುಗಳು ಹಿಂದೂಸ್ಥಾನವನ್ನು ಆಳಿಕೊಂಡು ಬಂದುವು. ಆರ್ಡಿನೆನ್ಸುಗಳು ಒಂದು ಬಾರಿ ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ಜ್ಯಾರಿಯಲ್ಲಿ ಇರಲಿಕ್ಕೆ ಅವುಗಳಿಗೆ ಅಧಿಕಾರವಿಲ್ಲ. ಆದುದರಿಂದ ಜುಲಾಯಿ ತಿಂಗಳ ಆರಂಭದಲ್ಲಿ ಹೆಚ್ಚಿನ ಆರ್ಡಿನೆನ್ಸುಗಳು ಅಂತ್ಯವಾಗುವುವು. ಅವುಗಳ ಕಾನೂನುಗಳು ಆ ಮೇಲೆ ಜನತೆಗೆ ಸಂಬಂಧಿಸುವುದಿಲ್ಲ. ಆದರೆ ಸರಕಾರವು ಬಲಾತ್ಕಾರದ ರಾಜ್ಯವೇ ಬ್ರಿಟಿಷ ಸಾಮ್ರಾಜ್ಯವನ್ನು ರಕ್ಷಿಸಬಲ್ಲುದೆಂಬ ವಿಶ್ವಾಸದಿಂದಿರುವಾಗ, ಈ ಆರ್ಡಿನೆನ್ಸುಗಳು ಮುಕ್ತಾಯ ಹೊಂದಿದರೆ ಪುನಃ ಸತ್ಯಾಗ್ರಹವು ಪ್ರಬಲವಾದೀತೆಂಬ ಹೆದರಿಕೆ ಇದ್ದುದಾಗಿದೆ. ಪರಿಣಾಮವಾಗಿ ಸರಕಾರವು ಮುಕ್ತಾಯಹೊಂದುವ ಆರ್ಡಿನೆನ್ಸುಗಳನ್ನು ಪುನಃ ಉಜ್ಜೀವನಗೊಳಿಸುವುದೊ ಎಂಬ ಪ್ರಶ್ನೆಯು ಈಗ ರಾಜಕೀಯ ವಾತಾವರಣದಲ್ಲೆಲ್ಲಿಯೂ ಕೇಳಲ್ಪಡುತ್ತಿದೆ

ಆರ್ಡಿನೆನ್ಸುಗಳ ಕಳೆದ ಆರು ತಿಂಗಳ ಇತಿಹಾಸವನ್ನು ನೋಡಿದ್ದಲ್ಲಿ ಸರಕಾರವು ತೃಪ್ತಿಪಡತಕ್ಕುದೇನೂ ಕಾಣುವುದಿಲ್ಲ. ಸಾಧಾರಣ ೬೦,೦೦೦ ಮಂದಿ ಸತ್ಯಾಗ್ರಹಿಗಳು ಜೈಲಿನಲ್ಲಿದ್ದಾರೆ, ಸತ್ಯಾಗ್ರಹಿಗಳಿಗೆ ಸ್ಥಳಮಾಡಿಕೊಡಲಿಕ್ಕೆ ಇತರ ತರದ ಕೈದಿಗಳನ್ನು ಜೈಲಿನಿಂದ ಹೊರಗೆ ಬಿಡಬೇಕಾಗಿದೆ, ಹಿಂದಿನಿಗಿಂತಲೂ ಈ ಬಾರಿ ಜೈಲಿನ ಶಿಸ್ತುಗಳು ಕ್ರಮಗಳು ಕಠಿಣವಿವೆ. 'ಬಿ' ಕ್ಲಾಸು ಅಂದರೆ ಸ್ವಲ್ಪ ಸುಖದ ಜೈಲು ಹೊಂದಿದವರು ಹಿಂದಿನಿಗಿಂತಲೂ ಈ ಬಾರಿ ಕಡಿಮೆ. 'ಎ' ಕ್ಲಾಸು ಜೈಲಿನವರು ತೀರಾ ಕಡಿಮೆ, ಜುಲುಮಾನೆಗಳು, ಒಂದೆರಡಲ್ಲ, ನೂರುಗಟ್ಟಲೆಯಲ್ಲ, ಸಾವಿರಗಟ್ಟಲೆ—ಒಬ್ಬರಿಗೆ ಇಪ್ಪತ್ತು ಸಾವಿರ ರೂಪಾಯಿ ಜುಲುಮಾನೆ ಸಹ ಆಗಿಯದೆ. ಆದರೂ ಪರಿಣಾಮವೇನು? ಚಳವಳವು ಅಂತೆಯೇ ಇದೆ, ಸತ್ಯಾಗ್ರಹಿಗಳ ಸಂಖ್ಯೆಯು ಇದ್ದಷ್ಟೇ ಇದೆ, ಒಬ್ಬರು ಹೋದರೆ ಇನ್ನೊಬ್ಬರು ಬರುತ್ತಾರೆ, ಹೆಚ್ಚಿನ ಜನತೆಯು ಕಾಂಗ್ರೆಸ್ಸಿನ ಅಭಿಮಾನವುಳ್ಳವರಾಗಿಯೇ ಇದ್ದಾರೆ. ಹೀಗಿರುವಾಗ ಆರ್ಡಿನೆನ್ಸುಗಳಿಂದ ಹಿಂದೂಸ್ಥಾನವನ್ನು ಎಷ್ಟು ಕಾಲ ಆಳಬಹುದು?

ಸರಕಾರವು ದ್ವಿಧೋರಣೆಯನ್ನು ವಹಿಸಿಯದೆನ್ನುವರು, ಒಂದು ಕಡೆಯಿಂದ ಕಠಿಣತೆಯಿಂದ ಕಾನೂನು ಮತ್ತು ಶಾಂತತೆಯನ್ನು ರಕ್ಷಿಸುವುದು, ಇನ್ನೊಂದು ಕಡೆಯಿಂದ ಸುಧಾರಿತ ಸರಕಾರವನ್ನು ಜ್ಯಾರಿಗೆ ತರಲು ಏರ್ಪಾಡು ಮಾಡುವುದು. ಆದರೆ ಈ ದ್ವಿಧೋರಣೆಯಿಂದ ಪ್ರಯೋಜನವೇನು? ಸುಧಾರಿತ ಸರಕಾರವನ್ನು ಸ್ವೀಕರಿಸಬಲ್ಲವರೇ ಜೈಲಿಗೆ ನುಗ್ಗಿಸಲ್ಪಟ್ಟಿರುವರು. ಆ ಮೇಲೆ ಯಾರ ಬಗ್ಗೆ ಈ—ಸರಕಾರರಚನೆಯನ್ನು ತಯಾರಿಸುವುದು? ಅವರ ಒಪ್ಪಿಗೆ ಇಲ್ಲದೆ ತಯಾರಿಸಲ್ಪಟ್ಟ ಈ ನೂತನ ಸರಕಾರರಚನೆಯನ್ನು ಅವರು ಸ್ವೀಕರಿಸುವುದಾದರೂ ಹೇಗೆ? ಹಾಗೆ ತಯಾರಿಸಿದ ಸರಕಾರರಚನೆಯನ್ನು ಜ್ಯಾರಿಗೆ ತರುವಾಗಲಾದರೂ ಈಗಿನ ಆರ್ಡಿನೆನ್ಸುಗಳನ್ನು ತೆಗೆದುಹಾಕುವುದು ಬೇಡವೇ? ಹಾಗೆ ತೆಗೆದುಹಾಕುವಾಗ, ತಮಗೊಪ್ಪಿಗೆಯುಲ್ಲದ ಸರಕಾರದ ವಿರುದ್ಧ ಕಾಂಗ್ರೆಸ್ ಪಕ್ಷದವರು ಪುನಃ ಸತ್ಯಾಗ್ರಹವನ್ನು ಬಿಗುಪಡಿಸದೆ ನಿಲ್ಲುವರೇ? ಆದುದರಿಂದ ಈಗಿನ ದ್ವಿಧೋರಣವು ದೇಶಕ್ಕೆ ಎಷ್ಟು ಮಾತ್ರವೂ ಶಾಂತಿಯನ್ನು ತರಲಾರದೆಂದು ಸ್ಪಷ್ಟವಾಗುವುದೆಂದು. ಕಾಂಗ್ರೆಸ್ಸಿನೊಡನೆ ರಾಜಿಯಾಗದೆ ಆರ್ಡಿನೆನ್ಸು ತೆಗೆದು ಪ್ರಯೋಜನವಿಲ್ಲ, ಆರ್ಡಿನೆನ್ಸು ತೆಗೆಯದೆ ಕಾಂಗ್ರೆಸ್ಸಿನೊಡನೆ ರಾಜಿಯು ಸಾಧ್ಯವಿಲ್ಲ ಎಂದಿದೆ ಈಗಿನ ಪರಿಸ್ಥಿತಿ

ಅತ್ತ ಇಂಗ್ಲೆಂಡಿನಲ್ಲಿ ಪ್ರಜಾಭಿಪ್ರಾಯಕ್ಕೆ ಸಾಮ್ರಾಜ್ಯವಾದದ ಪಿತ್ಥವು ತಲೆಗೇರುತ್ತದೆ. ಲೇಬರ್ ಸರಕಾರ ಸಮಯದಲ್ಲಿ ಕೇಳಬರುತ್ತಿದ್ದ ಉದಾರವೂ ಸಹಾನುಭೂತಿಯುಳ್ಳವುಗಳೂ ಆದ ಮಾತುಗಳು ಈಗ ಕೇಳಬರುವುದಿಲ್ಲ. ಲೋತಿಯನ್ ರಿಪೋರ್ಟು ಹಿಂದೂಸ್ಥಾನಕ್ಕೆ ಹಕ್ಕನ್ನು ಹೆಚ್ಚಿಸಿಯದೆಂದು ಅದನ್ನು ಕೂಡ ನಿರೋಧಿಸುವವರು ಹಲವು ಮಂದಿ. ಆದುದರಿಂದ ಸರಕಾರವು ತನ್ನ ಹಿಂದಿನ ಅನುಭವದ ಸಾರವನ್ನು ಕಲಿಯುವುದೇ ಎಂಬುದು ಇನ್ನೂ ಸಂದೇಹಕರ

ಆರ್ಡಿನೆನ್ಸುಗಳನ್ನು ಅಂತ್ಯಪಡಿಸದೆ ದೇಶಕ್ಕೆ ಶಾಂತತೆಯು ಸಾಧ್ಯವೆಂದು ತೋರುವುದಿಲ್ಲ, ಸರಕಾರವು ಇದನ್ನು ತಿಳಿದುಕೊಂಡದೊ ಎಂದು ಇನ್ನೂ ಕೆಲವೇ ದಿನಗಳಲ್ಲಿ ತೋರಬರುವುದು. ಏಕೆಂದರೆ ಆರ್ಡಿನೆನ್ಸುಗಳನ್ನು ಪುನಃ ಜ್ಯಾರಿಗೆ ತಂದರೆ ಕಾಂಗ್ರೆಸ್ಸಿನವರೊಡನೆ ರಾಜಿಸಂಧಾನತೆಯ ಆಲೋಚನೆಯು ಸರಕಾರಕ್ಕಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಇದು ನಿಜವಾದರೆ ಈ ತರದ ಧೋರಣಕ್ಕಾಗಿ ಸರಕಾರವು ಪಶ್ಚಾತ್ತಾಪಪಡಬೇಕಾಗಿ ಬರುವ ದಿನಗಳು ದೂರವಿರಲಿಕ್ಕಿಲ್ಲ

ವಿದೇಶ ವರ್ತಮಾನ.

— ಹಿಂದೀಯರ ಸ್ಥಿತಿಗತಿಗಳನ್ನು ನೋಡಬರಲು ಲಂಡನಿಂದ ಲೋಥಿಯನ್ ಕಮಿಟಿಯು ಬಂದಿತ್ತಷ್ಟೆ. ಅದರ ವರದಿಯು ಹಿಂದೀಯರಿಗೆ ಕೊಂಚ ಹಿತಕಾರಿಯಾಗಿಯೂ, ಇಂಗ್ಲಿಷರಿಗೆ ಸ್ವಲ್ಪ ಅಹಿತಕಾರಿಯಾಗಿಯೂ ಇರುವುದನ್ನು ನೋಡಿ, ಪಾರ್ಲಿಮೆಂಟಿನ ಸದಸ್ಯರು ಆ ರಿಪೋರ್ಟಿನ ರಚಯಿತರನ್ನು ದೂರುತ್ತಿದ್ದಾರೆ. 'ಲೋಥಿಯನ್ ರಿಪೋರ್ಟನ್ನು ಕಾರ್ಯಕ್ಕೆ ಹಚ್ಚಿದರೆ ಬಹಳ ನಷ್ಟವಾದೀತು' ಎನ್ನುತ್ತಿದ್ದಾರೆ

— ಅಮೇರಿಕದ ವೈಟ್‌ಹೌಸ್ ಎಂಬ ಸರಕಾರೀ ಮಂದಿರವೊಂದನ್ನು ಬೋಂಬಿನಿಂದ ಒಡೆದುಬಿಡಲು ನಡೆದ ಗೂಢರಹಸ್ಯದ ಸುದ್ದಿಯು ಅಲ್ಲಿಯ ಅಧಿಕಾರಿಗಳಿಗೆ ಲಭ್ಯವಾಗಿ, ಅಂತಹ ಅತ್ಯಾಚಾರವನ್ನು ತಡೆಯುವುದಕ್ಕಾಗಿ ನಗರದಲ್ಲೆಲ್ಲಾ ಪೋಲೀಸರ ಪಹರೆಯಿರುತ್ತದೆ

— ಅಮೇರಿಕಕ್ಕೆ ಇಂಗ್ಲಾಂಡು ಯುದ್ಧಕಾಲದ ಸಾಲವನ್ನು ಪಾವತಿಮಾಡುವುದು ಬಾಕಿ ಉಳಿದಿದೆಯಷ್ಟೆ. ಇಂಗ್ಲಾಂಡು ಸಮರ ಸಿದ್ಧತೆಗಾಗಿ ಶಸ್ತ್ರತಯಾರಿಗಳನ್ನು ಮಾಡುವುದನ್ನು ನಿಲ್ಲಿಸಿ, ಶಸ್ತ್ರಸನ್ಯಾಸವನ್ನು ವಹಿಸಿಕೊಂಡರೆ ತಾನು ಆ ಸಾಲವನ್ನು ಬಿಡಲು ಆಲೋಚಿಸುವೆನೆಂದು ಅಮೇರಿಕವು ಹೇಳಿದೆ

— ಡಬ್ಲಿನಿನಲ್ಲಿ ಇಯುಚರಿಸ್ಟ್ ಎಂಬ ಅಖಿಲ ಪ್ರಪಂಚ ಕೊಂಗ್ರೆಸ್ ಸಭೆಯೆಂಬುದು ಜರಗಲಿದೆ. ಅದರಲ್ಲಿ ಭಾಗವಹಿಸಲು ಅನ್ಯದೇಶಗಳಿಂದ ಬರಲಿರುವ ಜನಸಂಖ್ಯೆಯಿಂದಾಗಿ ಅಲ್ಲಿ ಅನ್ನಾಹಾರಗಳು ಕಡಿಮೆಯಾಗದಿರದೆಂಬ ಹೆದರಿಕೆಯಿಂದ ಜನರು ಆದಷ್ಟು ಆಹಾರವನ್ನು ಶೇಖರಿಸಿ ಒಳಗಿಟ್ಟುಕೊಳ್ಳುತ್ತಿರುವರು

— ಹಿಂದೂದೇಶದಲ್ಲಿ ಕ್ರೈಸ್ತ ಮಿಶನರಿಗಳು ಮಾಡುವ ಪ್ರಚಾರ ಕಾರ್ಯವನ್ನು ನೋಡಿ ಸಂತೋಷಗೊಂಡು ಸ್ವನಾಡಿಗೆ ತೆರಳಿದ ಹಳೇ ವೈಸ್ರಾಯರಾದ ಲೋರ್ಡ್ ಅರ್ವಿನರು ಆ ಕಾರ್ಯವೆಸಗುವ ಮಿಶನರಿಗಳನ್ನು ಬಹಳವಾಗಿ ಹೊಗಳಿದರು

“ಹಿಂದೂದೇಶಕ್ಕೂ ನಮಗೂ ಮಧ್ಯೆ ಒಂದು ಮಹಾ ವಿಪತ್ತು ಸನ್ನಿಹಿತವಾಗಿರುವುದು ನಿಸ್ಸಂದೇಹ” ಎಂದು ಸಿ. ಎಫ್. ಎಂಡ್ರೂಸರು ಮಂತ್ರಿಯವರಿಗೆ ತಿಳುಹಿಸಿದರು

— ಮಧ್ಯ ಅಮೇರಿಕದಲ್ಲಿನ ಸಮುದ್ರ ಒಂದರ ಮಧ್ಯೆಯಿಂದ ಮೊನ್ನೆ ಪ್ರಚಂಡ ಭೂಕಂಪದ ಝುಣಝುಣತ್ಕಾರವು ಕೇಳಬಂತು. ಭೂಮಿಯು ಬಹಳವಾಗಿ ನಡುಗಿತು. ಕೆಲವು ಮನೆಕಟ್ಟಡಗಳು ಕುಸಿದು ಬಿದ್ದುವು. ಸಮುದ್ರದ ನೀರು ಮಹಾ ಆಂದೋಲನಕ್ಕೊಳಗಾಯಿತು.

— ಲಂಡನಿನಲ್ಲಿ ಫರ್ನಾಡೇಲ್ ಮತ್ತು ಸಿಂಬೆಲೈನ್ ಎಂಬೆರಡು ಸ್ಟೀಮರುಗಳಲ್ಲಿ ಸಿಡಿಮದ್ದುಗಳು ಸ್ಫೋಟನವಾಗಿ ಕೆಲವರು ಜಖಂಗೊಂಡರು

ಒಳದೇಶ ವರ್ತಮಾನ

ಗುಂಟೂರಿನಲ್ಲಿ ಕಳೆದ ವಾರ ಟಿರ್ಮಂಟ್ಯನಿಗೆ ಬೆಂಕಿ ತಗಲಿ ಭಯಂಕರ ಬೆಂಕಿಯೆದ್ದು ೨೩೭ ಮನೆಗಳು ಅಗ್ನಿಗಾಹುತಿಯಾದುವು. ನಿರ್ಗತಿಕರಿಗೆ ಸರಕಾರವು ೫೦೦೦ ರೂಪಾಯಿಗಳನ್ನು ಕೊಟ್ಟಿದೆ

— ಫೈನೇನ್ಸ್ ಮೆಂಬರರಾದ ಸರ್ ಜೋರ್ಜ್ ಶುಸ್ಟರರು ಪತ್ನೀಸಮೇತರಾಗಿ ಹಿಂದೂದೇಶವನ್ನು ಬಿಟ್ಟು ಇಂಗ್ಲಾಂಡಿಗೆ ಹೋದರು.

ಮುಂಬಾಯಿಯ ಫ್ರೀಪ್ರೆಸ್ ಜರ್ನಲಿನ ಸಂಪಾದಕರೂ, ಮುದ್ರಣಕರ್ತರೂ ಆದ ಶ್ರೀ. ಡಿ. ಎಸ್. [illegible]ಯವರು ಪ್ರಕಟಿಸಿದ ಒಂದು ಲೇಖನವು ಕಾಯಿದೆವಿರೋಧವಾಗಿರುವುದರಿಂದ, ಸರಕಾರವು ಅವರಿಂದ ೬೦೦೦ ರೂಪಾಯಿಗಳನ್ನು ಭದ್ರತೆ ಕೇಳಿದೆ

ಶ್ರೀ. ಅಯ್ಯಪ್ಪ ಚೆಟ್ಟಿ ಎಂಬವರು ಮದ್ರಾಸಿನಿಂದ ಮೈಸೂರಿಗೆ ೧೦೦ ಮಿನಿಟುಗಳಲ್ಲಿ ವಿಮಾನದ ಮೂಲಕ ಹಾರಿ ಇಳಿದರು

— ಆಂಧ್ರ ಪ್ರೊವಿನ್ಸಿಯಲ್ ಪರಿಷತ್ತನ್ನು ಜರಗಿಸಲೆತ್ನನಾಗಿ ಸೆರೆಗೊಳಗಾದ ಅನೇಕ ಕೈದಿಗಳಲ್ಲಿ ನೂರು ಮಂದಿಗಳನ್ನು ಬಿಡುಗಡೆ ಮಾಡಿರುವರು.

— ಸರಕಾರವು ಕಾನೂನುಕ್ರಮಗಳ ರಕ್ಷಣಾರ್ಥವಾಗಿ ಕೈಕೊಂಡಿರುವ ಪ್ರಯತ್ನವು ಸರ್ವಶ್ಲಾಘನೀಯವೆಂದೂ, ಅದಕ್ಕೆ ತನ್ನ ಸಂಪೂರ್ಣ ಸಹಾನುಭೂತಿಯೂ ಸಹಾಯವೂ ಇದೆಯೆಂದು ಬಿಕಾನೀರ್ ಮಹಾರಾಜರು ವೈಸರಾಯರಿಗೆ ತಂತಿಬಿಟ್ಟಿರುವರು

— ಡಾ। ಅಂಬೇಡ್ಕರರ ವಿರೋಧವಾಗಿ, ತಮಗೆ ಜತೆಪ್ರಾತಿನಿಧ್ಯವೇ ಬೇಕೆಂಬ ಅಖಿಲಭಾರತ ಪತಿತವರ್ಗದವರ ಒಂದು ಮಹಾಸಭೆಯು ಮುಂಬಾಯಿಯ ನೊವೆಲ್ಟಿ ಸಿನೆಮಾದಲ್ಲಿ ಶ್ರೀ ಎಂ. ಸಿ. ರಾಜರ ಅಧ್ಯಕ್ಷತೆಯಲ್ಲಿ ಜರಗಲಿರುವುದು

— ಕಾನ್‌ಪುರದ ಒಂದು ಮನೆಯಲ್ಲಿ ಸಿಟಿಮೆಜಿಸ್ಟ್ರೇಟರೂ, ಒಬ್ಬ ಸಬ್ ಇನ್ಸಪೆಕ್ಟರರೂ ಕೂಡಿ ಜಪ್ತಿ ನಡೆಸಿದಾಗ ಒಂದು ಮಹಾ ಬೋಂಬು ದೊರೆತು, ಮನೆಯ ಯಜಮಾನನು ದಸ್ತಗಿರಿ ಮಾಡಲ್ಪಟ್ಟಿರುವನು.

— ಒಬ್ಬ ಬಂಗಾಳಿ ತರುಣನು ಕಾರಣವಿಲ್ಲದೆ ಗತಿಯಿಲ್ಲದೆ” ಮದ್ರಾಸಿನಲ್ಲಿ ತಿರುಗಾಡುತ್ತಿದ್ದುದನ್ನು ನೋಡಿ, ಒಂದು ವಾರಾಂಟನ್ನು ಅವನ ಮೇಲೆ ಜ್ಯಾರಿ ಮಾಡಿ ದಸ್ತಗಿರಿ ಮಾಡಿದರು. ಕೆಲವು ಕಡೆಗಳಲ್ಲಿ ಜಪ್ತಿಗಳೂ ನಡೆದವು

— ಮಧ್ಯಪ್ರಾಂತ್ಯದಲ್ಲಿ ತಯಾರಾದ ಬೆಂಕಿಪೆಟ್ಟಿಗೆಗಳ ಮೇಲೆ ದಿವಂಗತ ಭಗತ್‌ಸಿಂಗನ ಚಿತ್ರವಿದ್ದುದನ್ನು ಕಂಡು ಆ ಬೆಂಕಿಪೆಟ್ಟಿಗೆಗಳನ್ನು ಕಾಯಿದೆಬಾಹಿರವಾಗಿ ಮಾಡಲಾಯಿತು

— ಕಲ್ಕತ್ತದಲ್ಲಿ ಕರ್ತಾಚಂದ ದಾಸನೆಂಬವನು ಲೈಸನ್ಸು ಇಲ್ಲದ ರಿವೋಲ್ವರನ್ನು ಹಿಡಿದುಕೊಂಡುದಕ್ಕಾಗಿ ಶಿಕ್ಷಿಸಲ್ಪಟ್ಟನು

— ಮಹಾತ್ಮಾ ಗಾಂಧಿ' ಎಂಬ ಚಲಚಿತ್ರವನ್ನು ಡಿಲ್ಲಿ ಪ್ರಾಂತ್ಯದಲ್ಲಿ ನಿಷಿದ್ಧಪಡಿಸಿರುವರು

— ಅಸ್ಸಾಮಿನ ಗೋಲಗಟ್ಟೆಯೆಂಬಲ್ಲಿ ಸಿ. ಜಿ. ಡಿ. ಗ್ರಿಂಟ್ ಎಂಬವರು ತನ್ನ ಕಿಸೆಯಲ್ಲಿ ಒಂದು ರಿವೋಲ್ವರನ್ನು ಇಟ್ಟುಕೊಂಡು ಕುಳಿತಿದ್ದಾಗ ಅದು ಥಕ್ಕನೆ ಸಿಡಿದು ಹಾರಿ, ಅವರನ್ನು ಕೊಂದಿಕ್ಕಿತು. ಇವರು ಅವಿವಾಹಿತರು

— ಕಲ್ಕತ್ತದಲ್ಲಿ ಮೂವರು ತರುಣರು ಕೊಂಗ್ರೆಸ್ ಗೀತಗಳನ್ನು ಹಾಡುತ್ತಾ ನೆಟ್ಟಗೆ ಹೈಕೋರ್ಟನ್ನು ಹೊಕ್ಕರು. ಅವರನ್ನು ದಸ್ತಗಿರಿ ಮಾಡಿದರು

— ವೈಸರಾಯರಿಗೆ ಪಬ್ಲಿಕ್ ಕೆಲಸಗಳು ಬಹಳವಿರುವುದರಿಂದ ಅವರು ತನ್ನ ಜುಲಾಯಿ ಪ್ರವಾಸವನ್ನು ರದ್ದುಪಡಿಸಿರುವರು,

ಡೆಕ್ಕಾದಲ್ಲಿ ಕ್ರಾಂತಿಕಾರನಾದ ಅನಿಲ ಕುಮಾರದಾಸನೆಂಬವನನ್ನು ದಸ್ತಗಿರಿ ಮಾಡಿ ಬಂಧನದಲ್ಲಿಟ್ಟಿದ್ದರು. ಒಂದು ದಿನ ಅವನು ಜೈಲಿನೊಳಗೆ ತೀರಿಹೋಗಿದ್ದನು. “ಅವನಿಗೆ ಯಾರೂ ಹೊಡೆದಿರುವುದಿಲ್ಲ”ವೆಂದು ಮುಂತಾಗಿ ಹೇಳಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪ್ರಕಟಿಸಿರುವರು

— ಅರಾಜಕರ ಹಾವಳಿಯ ಬಗ್ಗುಬಡೆತದ ಬಗ್ಗೆ ಕಲ್ಕತ್ತದಲ್ಲಿ ೪ ಮನೆಗಳು ಜಪ್ತಿಗೊಳಗಾಗಿ ಕೆಲವರು ಕೈದುಮಾಡಲ್ಪಟ್ಟಿರುವರು

— ಪುನೆಯಲ್ಲಿ ಹಸನ್ ಎಂಬ ಮಿಲಿಟೆರಿಯವನು ಅನಗತ್ಯನಾಗಿ ಮೀನು ಹಿಡಿಯಹೋದಾಗ ಹೊಳೆಯಲ್ಲಿ ಬಿದ್ದು ತೀರಿಕೊಂಡನು. ಶವವು ದೊರೆತಿದೆ

— ಕಲ್ಕತ್ತದಲ್ಲಿ “ಕೊಂಗ್ರೆಸ್ ಕ್ಯಾಂಪ್” ಎಂಬ ಹೆಸರಿನಲ್ಲಿದ್ದ ಒಂದು ಗುಡಿಸಲಿನಲ್ಲಿ ಪೋಲೀಸರು ಜಪ್ತಿನಡೆಸಿ, ಕೆಲವರನ್ನು ಕೈದು ಮಾಡಿ, ನಿಷಿದ್ಧ ಸಾಮಾನುಗಳನ್ನು ಕೊಂಡೊಯ್ದರು.

ದಕ್ಷಿಣ ಕನ್ನಡ

ಶ್ರೀ. ೩ ವೆಂಕಟ್ರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯ ವರದಿ. ಕಟಪಾಡಿ:—ಜನಾಬ್ ಕೆ ಮೊಹಮ್ಮದ್ ಸಾಹೇಬ್ ಬಹದೂರ್, ಎಮ ಎ ಇವರ ಅಧ್ಯಕ್ಷತೆಯಲ್ಲಿ ನಡೆದ ಮೇಲಿನ ಶಾಲೆಯ ವರ್ಧಂತ್ಯುತ್ಸವ ಸಮಯದಲ್ಲಿ ಓದಿದ ಆ ಶಾಲೆಯ ಸಂಕ್ಷಿಪ್ತ ಇತಿಹಾಸವು ನಮ್ಮ ಕೈಸೇರಿಯದೆ. ಶಾಲೆಯು ೧೭ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟು, ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಹೊಂದುತ್ತಾ ಬಂದದೆ ೧೯೩೦ರಲ್ಲಿ ವಿದ್ಯಾರ್ಥಿ ಸಂಖ್ಯೆಯು ೨೫೪ ಇದ್ದದ್ದು ೧೯೩೨ರಲ್ಲಿ ೩೦೪ಕ್ಕೆ ಏರಿಯದೆ. ಶಾಲೆಯ ಕೆಲಸಗಳು ಅತ್ಯಂತ ಸಮರ್ಪಕವಾಗಿ ನಡೆಯುತ್ತಿವೆಯೆಂದು ಶಾಲೆಯನ್ನು ಭೇಟಿ ಮಾಡಿದ ಹಲವು ಸದ್ಗೃಹಸ್ಥರ ಅಭಿಪ್ರಾಯಗಳಿಂದ ಕಂಡುಬರುತ್ತದೆ. ಶೇಕಡಾ ೫೬ ಮಂದಿ ವಿದ್ಯಾರ್ಥಿಗಳಿಗೆ ಉಚಿತವಾಗಿಯೂ ಇನ್ನೂ ಕೆಲವರಿಗೆ ಅರ್ಧಾಂಶ ಸಂಬಳ ಮಾಫಿಯಾಗಿಯೂ ವಿದ್ಯಾದಾನವಾಗುತ್ತಿದೆ. ಶಾಲೆಯನ್ನು ಅಭಿವೃದ್ಧಿಗೆ ತರುವುದರಲ್ಲಿ ಅದರ ಕಾರ್ಯನಿರ್ವಾಹಕ ಮಂಡಲವೂ ಮುಖ್ಯೋಪಾಧ್ಯಾಯರೂ ಬಹಳ ಶ್ರಮವನ್ನು ವಹಿಸಿಕೊಳ್ಳುತ್ತಿರುವರೆಂಬುದರಲ್ಲಿ ಸಂಶಯವಿಲ್ಲ. ಈ ಶಾಲೆಯು ಇಂತಹ ಇತರ ಶಾಲೆಗಳಿಗೆ ಮಾದರಿರೂಪವಾಗಿದೆಯೆನ್ನಲು ಸಂದೇಹವಿಲ್ಲ

ಮಂಗಳೂರು:—ವಿಶಾಖ ಪಟ್ಟಣದ ಹಿಂದೂಮಿಶನರಿಯಾದ ಬ್ರಹ್ಮಶ್ರೀ ಅಂಕುರಾಜ ವಿ ಸುಬ್ರಾಯ ಶರ್ಮರು ಇಲ್ಲಿಯ ಅಧ್ಯಾತ್ಮ ಸಮಿತಿಯ ಆಶ್ರಯದಲ್ಲಿ ಇದೇ ಬರುವ ತಾ ೨೬ನೇ ಆದಿತ್ಯವಾರ ಸಾಯಂಕಾಲ ೫ ಘಂಟೆಗೆ ಹಿಂದೂಧರ್ಮ ಎಂಬ ವಿಷಯದಲ್ಲಿ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಉಪನ್ಯಾಸವನ್ನು ಮಾಡುವರು. ಸರ್ವರಿಗೂ ಸುಸ್ವಾಗತವಿದೆ

ಜಿಲ್ಲಾ ಮೆಡಿಕಲ್ ಎಸೋಶಿಯೇಶನಿನ ಒಂದು ಸಭೆಯು ತಾ ೨೫—೬—೩೨ನೇ ದಿನ ವೆನ್‌ಲೋಕ್ ಆಸ್ಪತ್ರೆಯಲ್ಲಿ ಗಂಟೆ ೫ ೩೦ಕ್ಕೆ ಜರಗುವುದು. ಡಾ| ಶ್ರೀ ಆರ್ ಗಣಪತಿ ಅಯ್ಯರ್, ಇವರು ಭಾಷಣ ಮಾಡಲಿರುವರು. ಎಲ್ಲಾ ವೈದ್ಯರಿಗೆ ಸುಸ್ವಾಗತವಿದೆ

ಪ್ರೊಫೆಸರ್ ರಾಮರಾಯರು ಪೋಲೀಸ ಅಧಿಕಾರಿಗಳ ಮೇಲೆ ಮಾಡಿದ ಮೊಕದ್ದಮೆಯ ವಿಚಾರಣೆಯು ಜುಲೈ ೨೨ಕ್ಕೆ

ಇಲ್ಲಿಯ ಡಿಪ್ಯುಟಿ ಕಲೆಕ್ಟರರಾದ ಶ್ರೀ| ಆರ್ ಸುಬ್ರಹ್ಮಣ್ಯ ಅಯ್ಯರರು ಡೈರೆಕ್ಟರ್ ಆಫ್ ಎಗ್ರಿಕಲ್ಚರರಿಗೆ ಸಹಾಯಕೋದ್ಯೋಗಿಯಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ

ಅನಂತಪುರದ ಡಾ ತಯ್ಯಣ್ಣ ಮೇನನ್ ಎಂಬವರು ಇಲ್ಲಿಯ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರಾಗಿ ನೇಮಕಹೊಂದಿರುತ್ತಾರೆ

ಕಾರ್ಕಳದ ಶ್ರೀ ಶಿವಪ್ಪ ಹೆಗ್ಗಡೆಯವರನ್ನು ಕಳೆದ ವರುಷ ಯಾರೋ ಕೊಲೆಮಾಡಿದರಷ್ಟೆ. ಈ ಸಂಬಂಧವಾಗಿ ತಕ್ಸೀರಿಗೆ ಗುರಿಯಾಗಿದ್ದ ಪಿಲಿಕಜೆ ತಿಂಗ ಬೌಟ ಎಂಬವರನ್ನು ಯಾರೋ ಕಳೆದ ಗುರುವಾರ ಹಗಲು ಸಮಯದಲ್ಲಿ ಗುಂಡು ಹೊಡೆದು ಕೊಂದುಬಿಟ್ಟರು

ಶ್ರೀ| ಶೀನಶೆಟ್ಟಿ ಎಂಬ ಸ್ವಯಂಸೇವಕರಿಗೆ ೪ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು

ಶ್ರೀ| ತಲಚೇರಿ ರಂಗರಾಯರು ೬ ತಿಂಗಳ ಸಜೆಗೊಳಗಾಗಿದ್ದು ಕಡಲೂರಿನ ಸೆರೆಮನೆಯಲ್ಲಿದ್ದರಷ್ಟೆ. ಅವರೀಗ ಬಿಡುಗಡೆ ಹೊಂದಿ ಬಂದಿರುತ್ತಾರೆ

ಏಳನೇ ಡಿಕ್ಟೇಟರ್‌ರಾದ ಶ್ರೀ| ಜಯರಾಮಶೆಟ್ಟರೂ ಮತ್ತು ಶ್ರೀಗಳಾದ ಬಾಬು ಮತ್ತು ಬಾಬುದೇವಾಡಿಗರೆಂಬ ಸ್ವಯಂಸೇವಕರೂ ಶಿಕ್ಷೆಗೊಳಗಾಗಿದ್ದಾರೆ

ಇದೇ ತಾ ೨೨ನೇ ದಿನ ಗೋಕರ್ಣಕಟ್ಟೆ ಬಜಾರಿನಲ್ಲಿರುವ ವಿಟ್ಠಲ್ಜಿ ಮಾಧವಜಿಯವರ ರಟ್ಯಲ್ ಶಾಪಿನಲ್ಲಿ ಸಂಕಪ್ಪ ರೈ ಮತ್ತು ಮರ್ತಪ್ಪ ನಾಯ್ಕ ಎಂಬಿಬ್ಬರು ಸ್ವಯಂಸೇವಕರು ಪರದೇಶೀ ವಸ್ತ್ರದ ಬಗ್ಗೆ ಬೆಳಿಗ್ಗೆ ೧೦ ೩೦ಕ್ಕೆ ಪಹರೆ ನಡೆಸಿ ೧೫ ನಿಮಿಷಗಳೊಳಗೆ ಕೈದುಮಾಡಿ ಸ್ಟೇಶನಿಗೊಯ್ಯಲ್ಪಟ್ಟರು. ಅದೇ ದಿನ ಮಧ್ಯಾಹ್ನ ೩ ೩೦ಕ್ಕೆ ನಾಗಸೇನೆಯ ಸೈನ್ಯಾಧಿಪತಿಯಾಗಿದ್ದ ಉಳ್ಳಾಲ ದಾಮೋದರ ನಾಯ್ಕ ಮತ್ತು ಕೆ ಪಿ ಸಂಜೀವ ಎಂಬೀರ್ವ ಸ್ವಯಂಸೇವಕರು ಪಹರೆ ನಡಿಸಿ ಕೈದುಮಾಡಿ ಸ್ಟೇಶನಿಗೊಯ್ಯಲ್ಪಟ್ಟರು. ಅದೇ ಸಮಯ ಕೆ ವಾಸು ಮತ್ತು ಯುಟಾಬು ಕೂಡ ೩ ಜನರ ಒಂದು ತಂಡವು ಪಹರೆ ಮಾಡಿ ಕೈದುಮಾಡಲ್ಪಟ್ಟರು. ಅಷ್ಟರಲ್ಲಿ ನರಸಿಂಹಭಟ್ಟ ಮತ್ತು ಬಿ ಕೇಶವಬಾಳಿಗ ಎಂಬಿಬ್ಬ ಕೊಂಗ್ರೆಸ್ ಸ್ವಯಂಸೇವಕರು ಪಹರೆ ಮಾಡಿ ಕೈದುಮಾಡಲ್ಪಟ್ಟರು. ಹಿಂದು ಕೊಟ್ಟಾರಿ, ಬಾಬುರಾವ್, ಕಾಂತಪ್ಪ ಮತ್ತು ಬಿ ರಾಮ ಕಿಣಿ ೪ ಜನ ಸ್ವಯಂಸೇವಕರು ಅದೇ ಅಂಗಡಿಯಲ್ಲಿ ಪಹರೆ ನಡೆಸಿ ಕೈದು ಮಾಡಲ್ಪಟ್ಟು, ಸ್ಟೇಶನಿಗೊಯ್ಯಲ್ಪಟ್ಟು ಮರುದಿನ ಬೆಳಿಗ್ಗೆ ಬಿಡಲ್ಪಟ್ಟಿರುವರು

ತಾ ೨೪ರಲ್ಲಿ ವಿಟ್ಠಲಜೀ ಮಾಧವಜೀಯವರ ಅಂಗಡಿಯ ಮುಂದೆ ಬೆಳಿಗ್ಗೆ ೧೦-೩೦ಕ್ಕೆ ನಾಗಸೈನ್ಯದ ಸ್ವಯಂಸೇವಕರಾದ ಯುಬಾಬು ಮತ್ತು ಬಾಳಿಗ ಎಂಬಿಬ್ಬರು ಸರ್ಪಕಾವಲು ಮಾಡಿ ಕೈದಿಗೊಳಗಾದರು. ರಾತ್ರಿ ೭ ಘಂಟೆಗೆ ಬಿಡಲ್ಪಟ್ಟರು

ಉಡುಪಿ:—ಈ ವರ್ಷದ ಎಸ್. ಎಸ್. ಎಲ್. ಸಿ ಪರೀಕ್ಷೆಯ ಫಲಿತಾಂಶವಾಗಿ ಕ್ರಿಶ್ಚನ್ ಹೈಸ್ಕೂಲಿನಿಂದ ೪೧ರಲ್ಲಿ ೩೦ ಮತ್ತು ಬೋರ್ಡ್ ಹೈಸ್ಕೂಲಿನಿಂದ ೨೯ರಲ್ಲಿ ೧೬ ಮಂದಿ ತೇರ್ಗಡೆ ಹೊಂದಿರುತ್ತಾರೆ

ಶ್ರೀ ಕೆ ವೆಂಕಟ್ರಾಯ ಪೈಗಳ ಅಂಗಡಿಯೆದುರು ಪರದೇಶಿ ಸಕ್ಕರೆಗಾಗಿ ಪಹರೆಮಾಡಿದ ಬಗ್ಗೆ ಕೈದುಮಾಡಲ್ಪಟ್ಟಿದ್ದ ಶ್ರೀ ದೇವೇಂದ್ರ ಶೆಣೈಯವರನ್ನು ಕುಂದಾಪುರ ಡಿವಿಜನಲ್ ಆಫೀಸರರು ೬ ತಿಂಗಳ ಕಠಿಣ ಸಜೆಗೆ ಗುರಿಮಾಡಿರುತ್ತಾರೆ

ಕಳೆದವಾರದ ಅಂತ್ಯದಲ್ಲಿ ಪೋಲೀಸ್ ಸುಪರಿಂಟೆಂಡೆಂಟರು ಇಲ್ಲಿಗೆ ಚಿತ್ತೈಸಿದ್ದು, ಪೋಲೀಸ್ ಸ್ಟೇಶನಿನ ವರ್ಷಾವಧಿ ಇನ್ಸ್ಪೆಕ್ಷನ್ ಮಾಡಿದರು. ಇಲ್ಲಿ ಹಲಕಾಲದಿಂದ ಇಡಿಸಲಾಗಿದ್ದ ರಿಜರ್ವ್ ಪೋಲೀಸರು ಮಂಗಳೂರಿಗೆ ವಾಪಾಸು ತೆರಳಿದರು

ವಿದೇಶಿ ಸಾಬೂನಿಗೋಸ್ಕರ ಇಲ್ಲಿನ ಶ್ರೀ ಕೇಶವ ನರಸಿಂಹ ಪೈಗಳ ಅಂಗಡಿಯೆದುರು ಪಹರೆಯು ತಾ ೧೮ರಲ್ಲಿತ್ತು, ಪೋಲೀಸರು ಪಹರೆಗಾರರನ್ನು ಕೈದುಮಾಡಿದರೂ, ಮರುದಿನ ಬಿಡುಗಡೆಮಾಡಲ್ಪಟ್ಟರು

ಪೋಲೀಸರ ಮೇಲೆ ಹೂಡಲಾದ ಫಿರ್ಯಾದಿ ಬಾಬಿನಲ್ಲಿ ಪೋಲೀಸರ ಕಡೆಯ ಅಡ್ಡವಿಚಾರಣೆಗೆ ತಾ ೨೧ಕ್ಕೆ ಕುಂದಾಪುರದಲ್ಲಿ ಮುಂದರಿಸಲಾದ ತನಿಖೆಯು ಪುನಃ ಜುಲೈ ತಾ ೧೫ಕ್ಕೆ ಮುಂದರಿಸಲಾಗಿದೆ

ತಾ ೨೧ಕ್ಕೆ ಇಲ್ಲಿನ ಸ್ಟೇಶನರಿ ಸಬ್ ಮೇಜಿಸ್ಟ್ರೇಟರ ಮುಂದೆ ಸೆಕ್ಷನ್ ೧೦೮ರ ಪ್ರಕಾರ ಉದಾಸರಕೆಕೊಡಲು ಹಾಜರಾಗಬೇಕೆಂದು ನೋಟೀಸು ಜ್ಯಾರಿಮಾಡಲಾದಂತೆ ಶ್ರೀ ಬೋಳಾರ ನಾರಾಯಣಸ್ವಾಕರ ಮೇಲಣ ತಕ್ಸೀರಿನ ತನಿಖೆಯು ಇದೇ ತಾ ೨೭ಕ್ಕೆ ಮುಂದರಿಸಲಾಗಿದೆ

ತಾ ೨೦ ಮತ್ತು ೨೧ರಲ್ಲೂ ಪಹರೆ ಇತ್ತು. ತಾ ೨೧ನೆಯ ದಿನ ವಸ್ತ್ರ ಪಹರೆ ನಿಂತಿದ್ದ ಶ್ರೀ ದೇವರಾಯ ಭಂಡಾರಿಯು ಬೇಸ್ತ್ರೆಸ್ನಲ್ಲಿ ಕೈದುಮಾಡಲಿಕ್ಕೆ ಬಂದಿದ್ದ ಪೋಲೀಸರ ಆಜ್ಞೆಯಂತೆ ಸ್ಟೇಶನಿಗೆ ತಾನಾಗಿ ಒವಲಿಕ್ಕೆ ತಿರಸ್ಕರಿಸಿದ್ದರಿಂದ, ಪೋಲೀಸನು ಆತನನ್ನು ಸ್ವಲ್ಪದೂರ ತನ್ನ ಹೆಗಲ ಮೇಲೆ ಎತ್ತಿ ಕೂಡ್ರಿಸಿ ಹೊತ್ತುಕೊಂಡು ಹೋಗಬೇಕಾಯಿತು. ದಾರಿಯುದ್ದ ಆಗಾಗ್ಗೆ ಆತನು ಜಯಕಾರಗಳನ್ನು ಮಾಡುತ್ತಲೇ ಇದ್ದನು.

ತಾ ೧೭ನೆಗೆ ಇಲ್ಲಿ ತೆಂಕಪೇಟೆಯಲ್ಲಿನ ಟಪ್ಪಾಲು ಪೆಟ್ಟಿಗೆಯಿಂದ ಎಂದಿನಂತೆ ಕಾಗದ ಪತ್ರಗಳನ್ನು ತೆಗೆಯಲು ಪೇದೆಯು ನೋಡುವಾಗ ಒಳಗೆ ಬೆಂಕಿ ಕೆಂಡಗಳು ಕಂಡುಬಂದುವಾಗಿ ಹಲವು ಕಾಗದಗಳೂ ಸುಟ್ಟು ಬೂದಿಯಾಗಿದ್ದುವು. ಅಂದಿನಿಂದ ಪೇಟೆಯಲ್ಲಿ ಅಲ್ಲಲ್ಲಿರಿಸಿದ್ದ ಟಪ್ಪಾಲು ಪೆಟ್ಟಿಗೆಗಳನ್ನು ಇಲಾಖೆಯವರು ತೆಗೆದುಬಿಟ್ಟಿರುವರು. ಈ ಅನ್ಯಾಯದ ಕೆಲಸವು ಶುದ್ಧ ತುಂಟರದ್ದೆಂಬುದಕ್ಕೇನೂ ಸಂದೇಹವಿಲ್ಲ

ಮುಲ್ಕಿ:—ಸ್ಥಳೀಕ ಯೂನಿಯನ್ ಕ್ಲಬ್ಬಿನ ವರ್ಷ ವರ್ಧಂತ್ಯುತ್ಸವವು ಇದೇ ಕಳೆದ ತಾ ೧೬—೬—೩೨ನೇ ಬೃಹಸ್ಪತಿವಾರ ಅಪರಾಹ್ನ ಘಂಟೆ ೫ಕ್ಕೆ ಕ್ಲಬ್ಬಿನ ಸಭಾಸದನದಲ್ಲಿ ಬಹಳ ವಿಶೇಷ ರೀತಿಯಿಂದ ಆಚರಿಸಲ್ಪಟ್ಟಿತು. ಅದರ ಜತೆಯಲ್ಲಿಯೇ 'ದಿವಂಗತ ಡಾಕ್ಟರ್ ಬೋಳ ಶಂಕರರಾಯರ' ಜನ್ಮ ದಿನಾಚರಣೆಯ ಕಾರ್ಯಕ್ರಮವು ನೆರವೇರಿತು. ಕಟ್ಟಡವು ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು. ಅಂದು ಮ| ರಾ| ಯು ಕೆ ಯಸ್ ಭಟ್, ಬಿ ಎ ಬಿ ಎಲ್, ಎಂ ಎಲ್ ಸಿ ಇವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಕ್ರಮಪ್ರಕಾರ ಅಧ್ಯಕ್ಷರ ಚುನಾವಣೆಯು ನಡೆಯಲು ಸಭಾಧ್ಯಕ್ಷ ಮಹಾಶಯರ ಪೂರ್ವಾರ್ಥ ಭಾಷಣವು ನಡೆದು, ಶ್ರೀ| ಯಂ ಟಿ ದೇವರಾವ್ ಬಿ ಎ ಎಲ್ ಟಿ ಇವರು 'ದಿವಂಗತ ಬೋಳ ಶ್ಯಾಮರಾಯರ ಸಂಕ್ಷಿಪ್ತ ಜನ್ಮ ಚರಿತ್ರೆಯನ್ನು ಓದಿ ಹೇಳಿದರು. ನಂತರ ಡಾ| ಎಂ ಎನ್ ಪ್ರಭು ಇವರು ಸುಶ್ರಾವ್ಯವಾಗಿ ಸಂಸ್ಥೆಯ ಏಳ್ಗೆಯನ್ನು ಸ್ಪಷ್ಟಗೊಳಿಸಿ, ಸಂಸ್ಥೆಗೆ ಶ್ರೇಯೋಭಿವೃದ್ಧಿಯನ್ನು ತೋರಿ ಅಭಿನಂದನವನ್ನು ಸೂಚಿಸಿದರು. ಅನಂತರ ಸಂಸ್ಥೆಯ ಗೌರವ ಕಾರ್ಯದರ್ಶಿ ರಾ| ಬಿ ಭೋಜರಾಯರು ಇದೇ ಕಳೆದ ತಾ ೩೧—೫—೩೨ಕ್ಕೆ ಅಂತ್ಯವಾದ ಸಂಸ್ಥೆಯ ೧೭ನೇ ವಾರ್ಷಿಕ ವರದಿಯನ್ನು ಓದಿಹೇಳಿದರು. ಇದು ಸರ್ವಸಮ್ಮತವಾಗಿ ಅಂಗೀಕೃತವಾಯಿತು. ಇದಾಗಲು ಸಂಸ್ಥೆಗೆ ಶ್ರೇಯಸ್ಸನ್ನು ಕೋರಿ, ಪರಊರ ಗಣ್ಯರಿಂದ ಬಂದ ಸ್ವಸ್ತಿವಾಚನಾ ಪತ್ರಗಳು ಓದಿಹೇಳಲ್ಪಟ್ಟುವು. ಆ ಮೇಲೆ ಮುಂದಿನ ವರುಷದ ಆಡಳಿತ ಕಮಿಟಿ ಮೆಂಬರರ ಹಾಗೂ ಒಡಿಟರರ ಚುನಾವಣೆಯು ಸರ್ವಸಮ್ಮತಿಯಿಂದ ನಡೆಯಿತು. ಇದಾಗಲು ಸನ್ಮಾನ್ಯ ಅಧ್ಯಕ್ಷ ಮಹಾಶಯರು ಸಂಸ್ಥೆಯು ತೋರಿಸುತ್ತಿರುವ ಚಟುವಟಿಕೆಗಳ ಕುರಿತಾದ ಸದಭಿಪ್ರಾಯಗಳನ್ನು ಹೊರಗೆಡಹಿ, ಅದರ ಮುಂದಿನ ಜೀವಮಾನದಲ್ಲಿ ಅದು ಕೈಕೊಳ್ಳತಕ್ಕ ಹಲಕೆಲವು ಕಾರ್ಯಭಾಗಗಳನ್ನು ಸೂಚಿಸಿದರು. ಸಂಸ್ಥೆಯ ಗೌ| ಕಾರ್ಯದರ್ಶಿಯವರು ಸಭಾಧ್ಯಕ್ಷರಿಗೂ ಅತಿಥಿ ಅಭ್ಯಾಗತರಿಗೂ ಸಂಸ್ಥೆಯ ಪರವಾಗಿ ಉಪಕಾರವನ್ನು ಸೂಚಿಸಿ, ಕೂಡಿಬಂದ ಸಮಸ್ತರನ್ನೂ ಹೂ, ಪನ್ನೀರು, ಫಲಾಹಾರ ತಾಂಬೂಲಾದಿಗಳಿಂದ ಸತ್ಕರಿಸಿಯಾಗಲು ಅಂದಿನ ಸಮಾರಂಭವು ಕೊನೆಗಂಡಿತು

ಕಾರ್ಕಳ:—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಯೋಗ್ಯತಾಪತ್ರಗಳನ್ನು ಕೊಡುವ ಸಮಾರಂಭವು ತಾ ೧೯—೬—೩೨ನೇ ದಿನ ಸಾಯಂಕಾಲ ಇಲ್ಲಿಯ ಮೈನ್ ಎಲಿಮೆಂಟರಿ ಶಾಲೆಯಲ್ಲಿ ವಕೀಲ ಪಿ ವಾಸುದೇವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರ ಪ್ರಾರಂಭಿಕ ಭಾಷಣವಾದ ಮೇಲೆ ಯೋಗ್ಯತಾಪತ್ರಗಳು ಹಂಚಲ್ಪಟ್ಟವು. ತದನಂತರ ಶ್ರೀಯುತ ವಕೀಲ ಎಂ ಎಸ್ ಅಧಿಕಾರಿ, ಬಿ ಲಕ್ಷ್ಮಣದೇವ ವಿದ್ಯಾರ್ಥಿ, ಮತ್ತು ಕಟಪಾಡಿ ಶ್ರೀನಿವಾಸ ಶೆಣೈಯವರು ಹಿಂದೀ ಭಾಷೆಯ ಅಧ್ಯಯನದ ಆವಶ್ಯಕತೆ ಮತ್ತು ಇಲ್ಲಿಯ ಹಿಂದೀ ಪ್ರೇಮಿ ಮಂಡಲವನ್ನು ಪುನರ್ಘಟಿಸುವ ಕುರಿತು ಭಾಷಣಗಳನ್ನಿತ್ತರು. ತರುವಾಯ ಹಿಂದೀ ಪ್ರೇಮಿ ಮಂಡಲದ ಪುನರ್ಘಟನೆ ಮಾಡುವುದಕ್ಕಾಗಿ ಒಂದು ತಾತ್ಕಾಲಿಕ ಸಮಿತಿಯು ಸ್ಥಾಪಿಸಲ್ಪಟ್ಟಿತು. ಆ ಮೇಲೆ ಅಧ್ಯಕ್ಷರಿಗೂ ಇತರರಿಗೂ ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾವಿಸರ್ಜನೆಯಾಯಿತು.

ಅಜೆಕಾರು:—ಇಲ್ಲಿ ಕಾರ್ಕಳದ ಸಾರ್ವಜನಿಕ ಪುಸ್ತಕ ಭಂಡಾರದ ಉಪಶಾಖೆಯೊಂದು ತೆರೆಯಲ್ಪಟ್ಟು ಶ್ರೀ ಎ ಪಾಂಡುರಂಗ ಕಿಣಿಯವರನ್ನು ಲೈಬ್ರೇರಿಯನರಾಗಿ ನೇಮಕ ಮಾಡಿರುವರು. ಕಾರ್ಯಕಲಾಪಗಳು ಹೇಗೆ ನಡೆಯುತ್ತವೆ ಎಂಬುದನ್ನು ನೋಡಲಿದೆ

ಬಂಟ್ವಾಳ—ಇಲ್ಲಿಯ ಪರಸ್ಪರ ಸಹಾಯಕ ಸಂಘದ ಮಹಾಸಭೆಯು ಕಳೆದ ವಾರ ಜರಗಿ ಹೊಸ ಪಂಚಾಯತಿ ಮೆಂಬರರನ್ನು ಚುನಾಯಿಸಲಾಯಿತು. ಈ ಸಂಘದಲ್ಲಿ ಅನೇಕ ಮಹಿಳೆಯರು ಮೆಂಬರರಾಗಿರುವುದರಿಂದ ಇನ್ನೊಂದು ಸಲದ ಚುನಾವಣೆಯಲ್ಲಾದರೂ ಒಬ್ಬರು ಮಹಿಳೆಯನ್ನು ಪಂಚಾಯತಿ ಮೆಂಬರರನ್ನಾಗಿ ಚುನಾಯಿಸಿದರೆ ಉತ್ತಮವಿತ್ತು

ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಯಲ್ಲಿ ೬ನೇ ತರಗತಿಯನ್ನು ತೆರೆಯುವರೆ ಹುಕುಂ ಬಂದಿದೆ. ಈಗಿನ ಉಪಾಧ್ಯಾಯಿನಿಯರ ಅಧಿಕಾರಕ್ಕೆ ಕೊರತೆಯುಂಟಾಗುತ್ತದೆಂದ ಇನ್ನೂ ಕ್ಲಾಸು ತೆರೆಯಲಿಲ್ಲವೆಂದು ತೋರುತ್ತದೆ. ಹುಡುಗಿಯರ ಸಂಖ್ಯೆಯು ಬೇಕಾದಷ್ಟಿದೆ

ಕೊಟ್ರವನ ಗಂಡಿಯಿಂದ ತುಂಬೆ ಮಾರ್ಗದ ದುರುಸ್ತಿ ಕೆಲಸವು ಇನ್ನೂ ಪ್ರಾರಂಭವಾಗಲಿಲ್ಲ. ಅನೇಕರಿಗೆ ಅಪಾಯಗಳು ಸಂಭವಿಸುತ್ತಲೇ ಇವೆ

ಮಂಜೇಶ್ವರ:—ಇಲ್ಲಿಯ ಕಣ್ವತೀರ್ಥ ಮಠದಲ್ಲಿ ಒಂದು ನವೀನ ತರದ ವಿವಾಹವು ನಡೆಯಿತು. ವರನು ಶಿವಳ್ಳಿ ಬ್ರಾಹ್ಮಣ, ವಧುವು ಕರಾಡ ಬ್ರಾಹ್ಮಣ ವರ್ಗದವಳು

ಕಾಸರಗೋಡು—ಹೆಚ್ಚಿನ ಹಿಂದೂಮುಸಲ್ಮಾನ ಓಟರ ಅಪೇಕ್ಷೆ ಮೇರೆಗೆ ಈ ಮೊದಲು ಕಾಸರಗೋಡು ಫಸ್ಟ್ ಕ್ಲಾಸ್ ಬೆಂಚ್ ಮೇಜಿಸ್ಟ್ರೇಟರೂ ದಕ್ಷಿಣ ಕನ್ನಡ ಜಿಲ್ಲಾ ಸೆಶನ್ ಕೋರ್ಟ್ ಜೂರರರೂ ಆದ ಮ| ರಾ| ಮೊಗ್ರಾಲ ಎಂ ಎ ಇಬ್ರಾಹಿಂ ಸಾಹೇಬರು ಇದೇ ಬರುವ ಕಾಸರಗೋಡು ತಾಲೂಕು ಬೋರ್ಡಿನ ಮಂಜೇಶ್ವರ ಸರ್ಕಲಿನ ಮಾಪಿಳ್ಳ ಸೀಟಿಗೆ ಉಮೇದ್ವಾರರಾಗಿ ನಿಲ್ಲುತ್ತಾರೆ

ಪಡುಬಿದ್ರಿ—ಇಲ್ಲಿಯ ಪಲಿಮಾರಿನಲ್ಲಿ ಪಲಿಮಾರು ಮಠದ ಶ್ರೀ ಸ್ವಾಮಿಜೀಯವರ ಆಶ್ರಯದಲ್ಲಿ ಶ್ರೀ ರಾಮ ಕ್ಲಬ್ ಎಂಬ ಸಾರ್ವಜನಿಕ ಸಂಸ್ಥೆಯು ಸ್ಥಾಪನೆಯಾದುದು ಸ್ತುತ್ಯ

* * *

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ.

R I A N 51 32 I P N 12 30

ಚಂದ್ರಗಿರಿ ರಾಮಚಂದ್ರ ನಾಯ್ಕ್—ಅರ್ಜಿದಾರ
ಮತ್ತು
ಶ್ರೀನಿವಾಸ ಶ್ಯಾನುಭಾಗ—ರಸ್ಪಾಂಡೆಂಟ

ಮೇಲ್ಕಂಡ ರಸ್ಪಾಂಡೆಂಟ (ದಿವಾಳಿ ಅರ್ಜಿದಾರ) ನು ಸದ್ರಿ ಮೇಲ್ಕಂಡ ದಿವಾಳಿ ಅರ್ಜಿಯಲ್ಲಿ ಆದ ಹುಕುಂ ಪ್ರಕಾರ ಐವೇಜು ಕಟ್ಟದೆ ಇದ್ದದ್ದರಿಂದ ಆತನ ದಿವಾಳಿ ಅರ್ಜಿಯು ವೇಳಾದ Adjudication ಹುಕುಮನ್ನು (annul) ತೆಗೆದುಹಾಕಬೇಕಾಗಿ ವಗೈರೆ ಕಾಣಿಸಿ ಮೇಲ್ಕಂಡ ಅರ್ಜಿದಾರನು ಗಾತಲು ಮಾಡಿದ ಸದ್ರಿ ಅರ್ಜಿಯು ತಾ 30-6-'32ಕ್ಕೆ ತನ್ನಿಗೆ ಇಟ್ಟಿದೆ. ಆ ಸಂಬಂಧ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪವನ್ನು ಮೇಲ್ಕಾಣಿಸಿದ ವಾಯಿದೆಯ ಒಳಗ್ಗೆ ಹಾಜರುಪಡಿಸತಕ್ಕದ್ದೆಂತ ಈ ಮೂಲಕ ತಿಳಿಸುತ್ತದೆ.

ಮಂಗಳೂರು,
೨೪ ೬ ೧೯೩೨

U Rama Rao,
Vakil for Petitioner.

* * *

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂವತ್ಸರದ ಜ್ಯೇಷ್ಠ ಬ॥ ೭ ಶನಿವಾರದಿಂದ ಅಂಗೀರಸ ಸಂವತ್ಸರದ ಜ್ಯೇಷ್ಠ ಬ॥ ೧೩ ಶುಕ್ರವಾರದ ವರೆಗಿನ ಪಂಚಾಂಗ

([illegible] ವೃಷಭ—ದೀಶ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ: ಉ	ಅಸ್ತ
25	ಶನಿ	೭	೨೭ ೪೪	ಪೂ ಭಾ	೨೦ ೩೨	೧೧	6 8	6 58
26	ರವಿ	೮	೩೧ ೩೧	ಉ ಭಾ	೨೫ ೪೬	೧೨	6 8	6 58
27	ಸೋಮ	೯	೩೬ ೨	ರೇವತೀ	೩೧ ೪೬	೧೩	6 9	6 58
28	ಕುಜ	೧೦	೪೦ ೪೪	ಅಶ್ವಿನೀ	೩೮ ೦	೧೪	6 9	6.58
29	ಬುಧ	೧೧	೪೫ ೩೧	ಭರಣೀ	೪೪ ೩೨	೧೫	6 9	6 59
30	ಗುರು	೧೨	೫೦	ಕೃತ್ತಿಕಾ	೫೦ ೩೫	೧೬	6 9	6 59
1	ಶುಕ್ರ	೧೩	೫೩ ೪೬	ರೋಹಿಣೀ	೫೫ ೪೬	೧೭	6 9	6.59

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature ಉಷ್ಣ (ಕಾವು) Maximum ಹೆಚ್ಚು	Minimum ಕಡಿಮೆ	Rainfall ಮಳೆ ದಿನದ ಮಳೆ	ಜುಮಲಾ ಮಳೆ.
17	86— 0	73— 9	2—05	—
18	78— 4	73— 5	1—14	—
19	80— 0	71— 0	2—25	—
20	80— 7	73— 1	0—57	—
21	81— 6	73— 8	0—59	—
22	84— 9	76 8	0—12	—
23	83— 7	73— 8	0—69	43—32

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ	ವರೆಗೆ ರೂ. ಆ
ರಾಶಿ ಅಕ್ಕಿ	3—12	4 4
ಮುಷ್ಟಿ	4— 0	5—
ಗುಡ್ಡ	4— 0	4— 3
ಸುಗ್ಗ	3—14	4— 2
ಊರ ಅವ್ವಲ್ ಬೆಳ್ತಿಗೆ	4— 8	6— 4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8— 0	8— 8
[illegible] ಬೆಳ್ತಿಗೆ ಮುಡಿ ೧ಕ್ಕೆ	4—10	4—12
ಗೋಧಿ ಗೋಣಿ ೧ಕ್ಕೆ	9— 8	14— 8
ತೊಗರಿ ಗೋಣಿ ೧ಕ್ಕೆ	12— 0	12— 8
ಹುರುಳಿಗೋಣಿ ೧ಕ್ಕೆ	6— 2	7— 4
ಕಡಲೆ ಗೋಣಿ ೧ಕ್ಕೆ	8— 8	12— 8
[illegible] ಗೋಣಿ ೧ಕ್ಕೆ	13— 8	21— 0
ಉದ್ದು ಗೋಣಿ ೧ಕ್ಕೆ	11— 8	13— 0
ಹೆಸರು ಗೋಣಿ ೧ಕ್ಕೆ	10— 4	11—
ಊರು ಬೆಲ್ಲ ಖಂಡಿ ೧ಕ್ಕೆ	[illegible] — 0	35— 0
ಉಪ್ಪು ಗೋಣಿ ೧ಕ್ಕೆ	5— 4	5— 8
ಕೊಬ್ಬರಿ ಖಂಡಿ ೧ಕ್ಕೆ	66	72—
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	23— 8	24—
ಎಳ್ಳೆಂಡಿ ಖಂಡಿ ೧ಕ್ಕೆ	26— 4	26— 8
ಕೊಬ್ಬರಿ ಎಣ್ಣೆ ಮಣ ೧ಕ್ಕೆ	6— 4	6— 6
ಎಳ್ಳೆಣ್ಣೆ ಮಣ ೧ಕ್ಕೆ	6—12	7— 0
[illegible] ೧ಕ್ಕೆ	4— 7	8—12
ಊರಿನ ಸಕ್ಕರೆ ಮಣ ೧ಕ್ಕೆ	4— 0	4— 1
[illegible] ಮೆಣಸು	4— 0	5— 0
ಸಾಸಿವೆ ಮುಡಿ ೧ಕ್ಕೆ	5— 4	6— 0
[illegible] ಕಾಫಿ ಖಂಡಿ ೧ಕ್ಕೆ	275— 0	225—
ಕಾಳುಮೆಣಸು ಖಂಡಿ ೧ಕ್ಕೆ	170— 0	180—
ಯೇಲಕ್ಕಿ ಮಣ ೧ಕ್ಕೆ	27— 0	28—
ಗೇರುಬೀಜ ಮುಡಿ ೧ಕ್ಕೆ	3— 6	—
[illegible] ಖಂಡಿ ೧ಕ್ಕೆ	30—0	35 8
ತಾಮ್ರ ತಗಡು ಮಣ ೧ಕ್ಕೆ	12— 8	13— 0
ತಾಮ್ರ ಪಾತ್ರೆಗಳು ಮಣ ೧ಕ್ಕೆ	15— 0	16—0
[illegible] ಸೇರು ೧ಕ್ಕೆ	14—10	14—12
ಹಿತ್ತಾಳೆ ತಗಡು ಮಣ ೧ಕ್ಕೆ	12— 0	12— 8
[illegible] ೧ಕ್ಕೆ	17—14	17—14
[illegible] ಖಂಡಿ ೧ಕ್ಕೆ	40—	—
ಪೀಬೇರಿ ಕಾಫಿ ಖಂಡಿ ೧ಕ್ಕೆ	330—	—
ಹಳೆ ಅಡಿಕೆ	150—	205—
ಹೊಸ ಅಡಿಕೆ	140—	145—

Chikmagalur Public Conveyance Motor Service.

CHIKMAGALUR

ಚಿಕ್ಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್, Tel Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜ್ರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1 30ಕ್ಕೂ ಬೆಳ್ತಂಗಡಿಗೆ 1 ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾ ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜ್ರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ ಗೋವಾ, ಲೋಂಡ ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಫ್ರಾಮರೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು, ಮತ್ತು ಉತ್ತರ
ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಟಪಾಡಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ
ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ-
ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ
ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ
ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಷೇತ್ರಕ್ಕೆ** ಹೋಗುವವರ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ
ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿ
ನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವವರು,
ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗೆಕ್ಕೆ 12 ಗಂಟೆಗಳೊಳಗೂ ತಲಪಬಹುದು. **ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.**

Secretary,
The Canara Public Conveyance Company Ltd., Mangalore

ಒಂದಿಷ್ಟು!

ಹಿಂದೀಯ ಸಂಕಾರದ ಫೈನಾನ್ಸ್ ಮೆಂಬರರಾದ ಸರ್ ಜೋರ್ಜ್ ಶುಸ್ಟರ್ ಎಂಬವರು ಮೊನ್ನೆ ರಂಚಿ ಎಂಬ ಸ್ಟೀಮರಿನಲ್ಲಿ ಇಂಗ್ಲಾಂಡಿಗೆ ಹೋಗಿದಿಟ್ಟರು ಅವರು ಸ್ವನಾಡಿಗೆ ತೆರಳುವಾಗ್ಗೆ ಹಿಂದೂದೇಶದ ಮೇಲಿನ ಮಮತೆಯಿಂದಾಗಿ ಕೆಲವು ಆಕಾಶಬಾಣಗಳನ್ನು ಬಿಟ್ಟರು

* * * *

"ಹಿಂದೂದೇಶವು ಸಮೃದ್ಧಿಯಿಂದಿದೆ ಬೇರೆ ರಾಷ್ಟ್ರಗಳಿದುರು ಹಿಂದೂದೇಶದ ಸಾಂಪತ್ತಿಕ ಸ್ಥಿತಿಯು ಉತ್ತಮವೇ ಸರಿ! ಸರಕುಗಳ ಬೆಲೆಯೇರಿದೆ ರವೆನ್ಯು ಸರಿಯಾಗಿ ಒಳಗೆ ಬರುತ್ತದೆ. (Coming in fairly well!)" ಎಂದು ಇವರ ವಾಣಿ!

* * * *

ಇದರ ಅರ್ಥವೇನೋ ಯಾರಿಗೆ ಗೊತ್ತು? ಒಡ ಜನರ ಪ್ರಕೃತದ ಕಷ್ಟವು ಇವರಿಗ ತಿಳಿಯುವುದೆಂತು? 'ರೆವೆನ್ಯು ಸರಿಯಾಗಿ ಒಳಗೆ ಬರುತ್ತದೆ' ಎಂಬ ಅರ್ಥದ ಮೇಲೆ ಇವರು "ಹಿಂದೂದೇಶಗಳಲ್ಲಿ ಕಷ್ಟವಿಲ್ಲ" ಎಂದಿರಬೇಕು

* * * *

ತನ್ನ ಜೇಬುಗಳಿಗೆ ತೆರಂದರೆ ಬಂದರ ಮಾತ್ರ ಒಬ್ಬನಿಗೆ ಕಷ್ಟದ ಅರಿವುಂಟಾಗುತ್ತದೆ ಎಷ್ಟರ ತನಕ ಸುಖವುಂಟೋ ಅಷ್ಟರ ತನಕ ಎಲ್ಲರೂ ಸುಖಿಗಳೇ ಎಂದು ತಿಳಿದುಕೊಳ್ಳುವುದು ಶುಸ್ಟರರು, ಏಕೆ? ಮಾನವನ ಚಾಳಿ

* * * *

ಸುಖೋಪಭೋಗದಲ್ಲಿ ತೇಲಾಡಿ ಬೀಳುವ ಸುಖಜೀವಿಯೆದುರು "ಅಯ್ಯೋ ಬಡಕನ! ಅಯ್ಯೋ ಕಷ್ಟ" ವೆಂಬದ ಆಲಾಪಿಗ ಈ ಮಾತುಗಳ ಅರ್ಥವಾದೀತೆ?

* * * *

ಹಿಂದೂದೇಶದ ಆರ್ಥಿಕ ಸ್ಥಿತಿಯು ಕಟ್ಟ ಕಡೆಯನ್ನು ಹಿಡಿದಿರುತ್ತದೆಂದು ಇಡೀ ಪ್ರಪಂಚವಲ್ಲೇ 'ಸಾರ್ಸಿಪ್ಪಿದ ವಾಗ ಶುಸ್ಟರರು "ಅಷ್ಟು ದೊಡ್ಡದಲ್ಲ" ಎಂಬ ಮಾತನ್ನು ಹೇಳುವುದು ಆಶ್ಚರ್ಯವಲ್ಲವೇ?

* * * *

ಹಿಂದೂದೇಶದ ಸ್ಥಿತಿಗಳನ್ನು ಇವರು ಇಂಗ್ಲೆಂಡಿನ ಪ್ರಧಾನ ಮಂತ್ರಿ ಮೆಕ್ಡೊನಾಲ್ಡರಿಗೆ ತಿಳುಹಿಸುತ್ತ ಆ ಸಂಧಿಯ ಕಾಲದಲ್ಲಿ ಸರಿಯಾಗಿ ವರ್ತಿಸಬೇಕು ಕೈ ತಪ್ಪಿದರೆ ಎಲ್ಲವೂ ತಪ್ಪಿ ಹೋದಂತಾದೀತು ಮನ್ನೆಚ್ಚರಿಕೆಯಾಗಿರಬೇಕು ಎಂದು ಎಚ್ಚರವಿತ್ತರಂತೆ ಅವರ ಮಾತುಗಳನ್ನು ಮೆಕ್ಡೊನಾಲ್ಡರು ಕಿವಿಗೊಟ್ಟು ಕೇಳಿದರಂತೆ. ಎಂತಹ ವರ್ತಮಾನಗಳಿಗಾತುರಾಯಾಗಿದ್ದರ ಸರಿ

* * * *

"ಮಹಾತ್ಮರನ್ನೂ ರಾಜಕೀಯ ಕೈದಿಗಳನ್ನೂ ಬಂಧ ವಿಮೋಚನಮಾಡುವರೆಂದು ಭವಿಷತ್ತನ್ನಿತ್ತ ಜ್ಯೋತಿಷ್ಯರ ಮಾತು ಸುಳ್ಳಾಗಲು ಇನ್ನೂ ನಾಲ್ಕು ದಿನಗಳಿವೆ ವಾತಾವರಣವನ್ನು ಕಾಣುವಾಗ ಅವರ ಭವಿಷತ್ತು ಹಿಂದೆ ಬೀಳುವಂತೆ ಕಾಣುತ್ತದೆ ಇನ್ನು ಅವರ ದೈವಗಳ ಚಿತ್ರ!

* * * *

ಜನವರಿ ತಿಂಗಳಲ್ಲಿ ಜಾರಿಯಾದ ಓರ್ಡಿನೆನ್ಸುಗಳು ಈ ತಿಂಗಳಾಂತ್ಯದಲ್ಲಿ ಅಂತ್ಯವಾಗಲಿವೆ ಇವುಗಳನ್ನು ಪುನರುಜ್ಜೀವಗೊಳಿಸುವರಂತೆ ಬ್ರಿಟಿಷ ಸಾಹಸ!

* * * *

ಓರ್ಡಿನೆನ್ಸುಗಳಿಂದ ಎಷ್ಟು ಫಲವು ದೊರೆಯಿತೆಂದು ವೈಸರಾಯರೂ, ಹೋಂರರೂ, ಮಂತ್ರಿಗಳೂ, ಬುದ್ಧಿವಂತರಾದ ಪಾರ್ಲಿಮೆಂಟಿನವರೂ ಈಗಾಗಲೇ ತಂಡುಕೊಂಡಿರುವರು ಇನ್ನೂ ಅನುಭವಿಸಲಿದ್ದಾರೆ ಜ್ಞಾನಾಭಿವೃದ್ಧಿಯಾಗಬೇಡವೇ?

* * * *

ಬ್ರಿಟಿಷರು ಮತ್ತು ಹಿಂದೀಯರು ಈಗ ತಕ್ಕಡಿಯಲ್ಲಿ ತೂಕಲ್ಪಡುತ್ತಿದ್ದಾರೆ. ಬ್ರಿಟಿಷರು ಕೆಳಗೆ ಬತ್ತುತ್ತಿದ್ದಾರ ಹಿಂದೀಯರು ಮೇಲೊತ್ತುತ್ತಿದ್ದಾರೆ ಇವರ ಜಗಳದಲ್ಲಿ ತಕ್ಕಡಿಯು ಮುರಿಯದಿದ್ದರೆ ಸಾಕು

* * * *

ಇನ್ನೂ ಬೇಕೆ?

ಟೈಮ್ಸ್ ಒಫ್ ಇಂಡಿಯಾ ಪತ್ರಿಕೆಯಲ್ಲಿ ಒಬ್ಬ ಆಂಗ್ಲೇಯನು ಹೀಗೆ ಬರೆದಿರುತ್ತಾನೆ:—

ವೈಸರಾಯರು ಜಾರಿಮಾಡಿದ ಎಮರ್ಜೆನ್ಸಿ ಓರ್ಡಿನೆನ್ಸುಗಳು ಈ ತಿಂಗಳ ಅಂತ್ಯದಲ್ಲಿ ತಮ್ಮ ಅವಧಿಯನ್ನು ಮುಟ್ಟುತ್ತವೆ ಇವುಗಳನ್ನು ಪುನರುಜ್ಜೀವಿಸಲು ನಿರ್ಧಾರವಾಗಿದೆಯೆಂದು ಕೇಳಿ ನನಗೆ ಅತ್ಯಾಶ್ಚರ್ಯವಾಗುತ್ತದೆ, ಕಾರಣ—ಸರಕಾರದ ಪ್ರಕೃತದ ಧೋರಣವನ್ನು ನೋಡಿ ಅಸಮಾಧಾನಗೊಂಡು, ಕೊಂಗ್ರೆಸ್ಸು ತನ್ನ ಚಟುವಟಿಕೆಗಳನ್ನು ಮುಂದೆ ಸಾಗಿಸಲು ಮನಸ್ಸುಮಾಡದಿರದು ಬ್ರಿಟಿಷರು ಹಿಂದೀಯರಿಗೆ ಕೊಟ್ಟ ಭಾಷೆಗಳ ಪರಿಪಾಲನಾರ್ಥವಾಗಿ ಕಾಯಿದೆಭಂಗ ಚಳವಳವನ್ನು ಮುರಿಯಲು ವೈಸರಾಯರು ಈ ಓರ್ಡಿನೆನ್ಸುಗಳನ್ನು ಜಾರಿಮಾಡಿದ್ದಿರಬಹುದು. ಹಿಂದೂದೇಶವು ಸ್ವತಂತ್ರವಾಗಬೇಕಾದರೆ ಈ ಓರ್ಡಿನೆನ್ಸುಗಳು ಅಗತ್ಯವೆಂದು ಅವರು ತಿಳಕೊಂಡಿರಬಹುದು ಆದರೆ ನಿಜವಾದ ರಹಸ್ಯವೇನೆಂದರೆ ಈ ಓರ್ಡಿನೆನ್ಸುಗಳಿಂದಾಗಿ ಭಾವೀ ರಾಜ್ಯಾಂಗರಚನಾ ವ್ಯವಸ್ಥೆಗೆ ಹೆಣಗುತಲಿದ್ದ ಅನೇಕ ಬ್ರಿಟಿಷ ಪ್ರಭೃತಿಗಳ ಮನೋಭಾವವು ಕಠೋರತರವಾಗುತ್ತಿದೆ ಅಲ್ಲದೆ ಈ ಓರ್ಡಿನೆನ್ಸುಗಳು ಯಾವ ಬಗ್ಗ ಜಾರಿಮಾಡಲಾಯಿತೋ ಆ ಧ್ಯೇಯ ಸಾಧನೆಯಾಗದೆ, ಅದರ ವ್ಯತಿರಿಕ್ತವಾಗಿ ಪರಿಣಾಮವಾಗಿದೆ ಅದರೂ ಅವುಗಳು ಪುನಃ ಜೀವಗೊಳ್ಳುವವೆಂದು ಸುದ್ದಿಯೆದ್ದಿದೆ ಹೇಗೂ ಇರಲಿ! ಇದರಿಂದ ಮನೋಸಂಕ್ಷೋಭೆಯು ಪ್ರಕಾಶವಾಗುತ್ತಿದೆ ಈ ಓರ್ಡಿನೆನ್ಸುಗಳಿಂದುಂಟಾದ ಹಾನಿಕಾರಕ ಪ್ರಸಂಗಗಳನ್ನುಲ್ಲೇಖಿಸಲು ಸ್ಥಳಸಂಕೋಚದಿಂದ ನನಗೆ ಸಾಧ್ಯವಾಗುವುದಿಲ್ಲ

ಇಂಗ್ಲೆಂಡು ಸತ್ಯಸಂಗತಿಗಳ ಎದುರೊಡ್ಡಬೇಕಾಗಿದೆ ಬಾಹ್ಯದಲ್ಲಾಗಲೀ, ಅಂತರ್ಯದಲ್ಲಾಗಲೀ ಪ್ರತಿಯೊಬ್ಬ ಹಿಂದೀಯನೂ ಕಾಂಗ್ರೆಸ್ಸಿನ ಮೇಲೆ ಸಹಾನುಭೂತಿಯುಳ್ಳವನಾಗಿದ್ದಾನೆ ೬೦,೦೦೦ ಕೈದಿಗಳು ಈಗ ಕಾರಾಗೃಹದಲ್ಲಿದ್ದಾರೆಂದರ ಅಷ್ಟೇ ಸಂಖ್ಯಾಕರು ಕಾಂಗ್ರೆಸ್ಸನ್ನು ಸೇರಲು ಹೊರಗಿದ್ದಾರೆ ಹಿಂದೀಯರ ಗಡಿಬಿಡಿಗಳ ಕುರಿತು ಸಂಪೂರ್ಣ ಅಜ್ಞತರಾಗಿರುವವರು ಈ ಪ್ರತಿಪಾದನೆಯನ್ನು ತಿರಸ್ಕರಿಸುವರು ಎಲ್ಲಾ ಚಳವಳಗಳಂತೆ ಕಾಂಗ್ರೆಸ್ಸಿಗೂ ಪುರಸ್ಕಾರಕರ್ತರೂ ತಿರಸ್ಕಾರಕರ್ತರೂ ಇರುತ್ತಾರೆ ಹಿಂದೂದೇಶ ಮತ್ತು ಇಂಗ್ಲೆಂಡುಗಳ ಅನ್ಯೋನ್ಯತೆಯ ಮನ ಧುರೀಣರು ಇನ್ನೂ ಧೈರ್ಯದ ಹೆಜ್ಜೆ ಇಡುತ್ತಾರೆ ಇವರ ಹೇಳಿಕೆ ಕೇಳಿಕೆಗಳಿಗ ಸರಕಾರವು ಬೆಲೆಕೊಟ್ಟು ಕಿವಿಯನ್ನು ತೋರಿಸಬೇಕು ಈ ಧುರೀಣರು ಸರಕಾರದ ಪ್ರಕೃತ ರಾಜ್ಯಾಂಗರಚನೆಯ ನಿಧಾನವಾದ ಪದ್ಧತಿಯನ್ನು ನೋಡಿ ಬೇಸರಗೊಂಡಿರುವರು ಅವರ ಹೇಳಿಕೆಯು ನಾವು ಗಾಂಧಿಯವರು 'ಹಿಂದೂದೇಶವು ತಪ್ಪು ಮಾಡಲು ಹಕ್ಕು ಇದೆ' ಎಂದಿದ್ದಾರೆ ಇಂತಹ ತಪ್ಪು ತಡೆಗಳನ್ನು ಮಾಡಿಯೇ ಹಿಂದೂದೇಶವು ಸ್ವಾತಂತ್ರ್ಯಾರ್ಹವಾಗುವುದು ಇಂತಹ ತಪ್ಪು ತಡೆಗಳನ್ನು ಮಾಡಿದರೆ ಹಿಂದೂದೇಶಕ್ಕೆ ಈಗಿನ ಓರ್ಡಿನೆನ್ಸುಗಳಿಂದ ಸಂಭವಿಸುವಷ್ಟು ನಷ್ಟವಾಗಲಿಕ್ಕಿಲ್ಲ ಬ್ರಿಟನು ಉದಾರಿಯಾಗಲಿ

* * * *

ಚಳವಳದ ಡೈರಿ.

ಗುಜರಾಥ್ ಕೊನ್ಫರೆನ್ಸ್.

ಗುಜರಾಥ್ ಪ್ರಾಂತ್ಯದ ಕೊಂಗ್ರೆಸ್ ಸಭೆಯು ಸೇರಲಿತ್ತು ಪೋಲೀಸರು ಅದನ್ನು ತಡೆದು ಅಧ್ಯಕ್ಷರನ್ನೂ ಇನ್ನು ಕೆಲವು ಸ್ವಯಂಸೇವಕರನ್ನೂ ದಸ್ತಗಿರಿಮಾಡಿದರು

ಜಿಲ್ಲಾ ಪರಿಷತ್ತು.

ಢಕ್ಕಾದಲ್ಲಿ ಜಿಲ್ಲಾ ಪರಿಷತ್ತು ಜರಗಲಿಕ್ಕಿತ್ತು ಅದನ್ನು ಪೋಲೀಸರು ತಡೆದರು ಮೋಹನ ಭೌಮಿಕ, ಮನೋರಂಜನ ಬೆನರ್ಜಿ ಎಂಬಿಬ್ಬರು ಮುಖಂಡರನ್ನೂ ಕೈದುಮಾಡಿದ್ದಾರೆ

೧೦೦ ಮಂದಿಗಳಿಗೆ ಶಿಕ್ಷೆ

ಸಿಂಧ್ ಪ್ರಾಂತ್ಯದಲ್ಲಿ ಜಿಲ್ಲಾ ಪರಿಷತ್ತಿನ ಜರಗೋಣಕ್ಕ ಯತ್ನವಾಯಿತು ಸುಮಾರು ೧೦೦ ಮಂದಿಗಳು ಹಿಡಿಯಲ್ಪಟ್ಟು ಶಿಕ್ಷೆಗೊಳಗಾಗಿರುವರು ೪ ಮಂದಿ ಹುಡುಗರು ತಲಗೆ ೩೫ ರೂಪಾಯಿ ಜುಲುಮಾನೆ ಕೊಡಬೇಕಾಯಿತು ಹುಡುಗರ ಹೆತ್ತವರು ಜುಲುಮಾನೆಯನ್ನು ಪಾವತಿಮಾಡದಿದ್ದರೆ ತಂದೆ ತಾಯಿಗಳನ್ನೇ ಶಿಕ್ಷಿಸಲಾಗುವುದೆಂದು ನೋಟೀಸು ಹೋಗಿದೆ

ಕೈದು

ಮಯ್ಮೆನ್‌ಸಿಂಗನಲ್ಲಿ ರಾಮಕೃಷ್ಣಾಶ್ರಮದ ಮಹಾರಾಜ ಸರೇಂದ್ರನಾಥ ಸನ್ಯಾಸಿಯೆಂಬವರು ದಸ್ತಗಿರಿಮಾಡಲ್ಪಟ್ಟಿದ್ದರು.

ಸಭೆ.

ಅಲ್ಲಹಾಬಾದಿನಲ್ಲಿ ಕಳೆದವಾರ ಕಾಂಗ್ರೆಸ್ ಸಭೆಯು ಸೇರಿತು ೧೪ ಮಂದಿಗಳ ದಸ್ತಗಿರಿ ಧ್ವಜವಂದನೆಯಾಗುವಾಗ ಪೋಲೀಸರು ಧ್ವಜಗಳನ್ನು ಕಿತ್ತೊಗೆದರು

ಮದ್ರಾಸಿನಲ್ಲಿ,

ಪಿಕೆಟಿಂಗೂ ಕೈದುಗಳೂ ನಡೆಯುತ್ತಿವೆ ೧೩ ಮಂದಿ ಸ್ವಯಂಸೇವಕರನ್ನು ಪಿಕೆಟಿಂಗಿನ ಸಂಬಂಧವಾಗಿ ಹಿಡಿದಿರುವರು

೪೦೦ ಕೈದುಗಳು.

ಕಳೆದವಾರದಲ್ಲಿ ಅಹ್ಮದಾಬಾದಿನ ಗುಜರಾಥ್ ಪ್ರಾಂತಿಕ ಪರಿಷತ್ತನ್ನು ಸಂಭ್ರಮದಿಂದ ಜರಗಿಸಲು ಸಾಹಸವಾಯಿತು ಅಲ್ಲಿಗೆ ಹೋಗಲಿದ್ದ ೪೦೦ ಮಂದಿಗಳು ಕೈದುಮಾಡಲ್ಪಟ್ಟಿದ್ದಾರೆ ಪ್ರತಿನಿಧಿಗಳು ಸಭೆಗಳಿದ ಹಾಗೆ ಪೋಲೀಸ್ ಪಹರೆಯ ಒಹಳವಿತ್ತು

ಜುಲುಮಾನ ವಸೂಲಿ

ಬೆನಾರಿಸ್‌ನಲ್ಲಿಯ ಸರ್ವಾಧಿಕಾರಿಯಾದ ಶ್ರೀ ಶಿ ಪ್ರಕಾಶರೆಂಬವರು ಸೆರೆಮನೆಯಲ್ಲಿರುವಾಗಲೇ, ಪೋಲೀಸರ ಅವರ ಮನೆಯನ್ನು ಇಡ್ಡಿ ನಡೆಸಿ ಪೆಟ್ಟಿಗೆಯಲ್ಲಿದ್ದ ೧೫೦-೩-೦ಯನ್ನು ಒಯ್ದರು ಅವರ ಮೇಲಿನ ಜುಲುಮಾನೆ ವಸೂಲಿಗೆಂತೆ ಇದ ಕೆಲವು ಸಾಮಾನುಗಳು ಏಲಂ ಕರಿಸಲ್ಪಟ್ಟಿವೆ

* * * *



ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್

ಪ್ರಕಟಣೆಯು.

ಮೆಸರ್ಸ್ ಮಾಬೆನ್ ಎಂಡ ಸನ್ಸ್ ಗ್ರೇಸ್ ಲೋಜ್ ಉದಿಯಾವರ ದಕ್ಷಿಣ ಕನ್ನಡ ಇವರನ್ನು ನಾವು ನಮ್ಮ ಸೋಲ್ ಡಿಸ್ಟ್ರಿಬ್ಯೂಟರರನ್ನಾಗಿ ನಿಯಮಿಸಿರುವೆವೆಂಬ ಬಗ್ಗೆ ಪ್ರಕಟಿಸಲು ಅನಂದವಾಗುತ್ತದೆ ಇವರು ಮುಖ್ಯವಾಗಿ ಉಕ್ಕಿನ ಸಾಮಾನು ಅಸ್ತಿತ್ರಿಯ ಫರ್ನಿಚರುಗಳನ್ನು ಸಪ್ಲೈ ಮಾಡುವರು ಆದ್ದರಿಂದ ನಮ್ಮ ಮಂಗಳೂರ ಜಿಲ್ಲೆಯವರಿಗೆ ವಿಜ್ಞಾಪನೆ ಮಾಡಿಕೊಳ್ಳುವುದೇನೆಂದರೆ ಸದರೀ ಮಾಬೆನ್ ಎಂಡ್ ಸನ್ಸ್‌ರಿಗೆ, ನಾವು ಸ್ವತಹಾ ಮಂಗಳೂರಲ್ಲಿ ಅಂಗಡಿಯನ್ನು ತೆರೆಯುತ್ತಿದ್ದರೆ ತಾವುಗಳು ನಮಗೆ ಹೇಗೆ ಸಹಾನುಭೂತಿಯನ್ನು ತೋರಿಸುತ್ತಿದ್ದಿರೋ ಹಾಗೆ, ಇವರಿಗೂ ಸಹಾನುಭೂತಿಯನ್ನು ತೋರಿಸಿದರೆ ಉಪಕಾರ, ಹಾಗೂ ಸ್ವದೇಶಿ ಕಾರಖಾನೆಗೆ ನಮ್ಮೆಲ್ಲರ ಆಶ್ರಯವಿರಲೆಂದು ವಿನಂತಿ

ಉಕ್ಕಿನ ನೇಗಿಲು, ನೀರಿನ ಪಂಪುಗಳು, ಮೇಜು ಕುರ್ಚಿ ಮಂಚ ಮುಂತಾದ ಸಾಮಾನಿನ ಎಲ್ಲಾ ಮಾಹಿತಿ ಕೆಟಲಾಗ ಹಸ್ತಪತ್ರಿಕೆ, ಮತ್ತು ಏಜೆನ್ಸಿ ಬಗ್ಗೆ –

ಮಿಸ್ಟರ್ ಎ. ಜಿ. ಮಾಬೆನ್ ಫೆಕ್ಟರಿ ರೆಪ್ರೆಸೆಂಟೇಟಿವ್,

ಮಾಬೆನ್ ಎಂಡ್ ಸನ್ಸ್, ಉದಿಯಾವರ, ದ. ಕ. ಇವರಿಗೆ ಬರೆದುಕೊಳ್ಳುವುದು.

[illegible] ವಾದದ್ದು.

ಕಾಮದ ಗುಟ್ಟು

ಸುಲಭ ಸುಖಕರ ವಾದದ್ದು

ಲೇಖಕರು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ. (ಕಾರಾಸಾಹೇಬರ ಮುನ್ನುಡಿ)

ಹೊಸ ಪುಸ್ತಕ. **ಇಂಥಾ ಪುಸ್ತಕವು ಬೇರೊಂದಿಲ್ಲ**

ಕಾಮತಂತ್ರದಲ್ಲಿ ಹೊಸ ಹೊಸ ಕಲ್ಪನೆಗಳು ದಿನ ದಿನವೂ ಹೆಚ್ಚುತ್ತಿವೆ. ತರುಣರ ತಾರುಣ್ಯ ಪ್ರಭಾವದಲ್ಲಿ ಹೊಳೆಯುವ ಎಲ್ಲಾ ಕಾಮುಕವಾಸನೆಗಳಿಗೂ ಮನಃಪೂರ್ವಕ ಕ್ರಿಯಾಸಿದ್ಧಿಯನ್ನು ಸ್ಪಷ್ಟವಾಗಿ ತೋರಿಸಿಕೊಡುವ ಅತ್ಯುತ್ತಮ ಗ್ರಂಥ!

ಕಾಮೋಪಭೋಗದ ನ್ಯೂನತೆಗಳಿಗೆಲ್ಲಾ ಔಷಧಿಗಳು ವಿವರವಾಗಿ ಹೇಳಲ್ಪಟ್ಟಿವೆ ಈ ಪುಸ್ತಕವಿದ್ದರೆ—ಎಲ್ಲಾ ಅಂತರಂಗದ ವ್ಯಾಧಿಗಳಿಗೂ ಸ್ವತಃ ಅಂತರಂಗ ಚಿಕಿತ್ಸೆ ಮಾಡಿಕೊಳ್ಳಬಹುದು.

ಬೆಲೆ ೧೨ ಆಣೆ ಮಾತ್ರ ಅಂಚೆವೆಚ್ಚ ಪ್ರತ್ಯೇಕ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ದೊರೆಯುತ್ತೆ. **ಬೇಗನೆ ತರಿಸಿಕೊಳ್ಳಿ.**

ಇತರ ಗಂಧಗಳು

ಆಹುತಿ (ನಾಟಕ) ರೂ. ೧, ಅದದ್ದೇನು (ನಾಟಕ) ೬ ಆಣೆ, **ಮೋಹನಾಸ್ತ್ರ** (ನಾಟಕ) ರೂ. ೧. **ಉದರ ವೈರಾಗ್ಯ** (ಸಚಿತ್ರ ನಾಟಕ)—ರೂ ೧, ವಿವೇಕಾನಂದರ ಕರ್ಮಯೋಗ—ರೂ ೧ **ಹೊಸಹುಟ್ಟು** (ಸಚಿತ್ರ)—ರೂ ೧। **ಸಾಹಿತ್ಯದ ಗುಟ್ಟು**—೬ ಆಣೆ **ತ್ರಿಶಂಕುಸ್ವರ್ಗ** (ನಾಟಕ)—೮ ಆಣೆ, ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯ ಶ್ರೇಷ್ಠ ಸಾಧುವರ್ಯ ನಾಗಮಹಾಶಯರ ಜೀವನಚರಿತೆ—ರೂ ೧

ನವಜೀವನ ಗ್ರಂಥಭಂಡಾರದಿಂದ ಹೊರಟಿರುವ (೧) ಆಕಾಶದೊಳಗಿನ ಅದ್ಭುತ ಚಮತ್ಕಾರಗಳು ೧—೨—೦. (೨) ಧರ್ಮ ಸಂಭವ—೧-೮-೦ (೩) ಹಿಂದೂಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು ೧—೨—೦ ಕನ್ನಡಪುಸ್ತಕಗಳೆಲ್ಲಾ ದೊರೆಯುತ್ತವೆ

ವಿ ಜಿ ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಬಾಳುವುದು.

ಬೆಳೆಯುವ ಮಕ್ಕಳು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಬೆಳೆಯಬೇಕಾದರೆ ಅವರಿಗೆ ಸಾಮಾನ್ಯ ಆಹಾರಕ್ಕಿಂತ ಒಳ್ಳೆಯ ಆಹಾರವು ಬೇಕಾಗುತ್ತದೆ ದೇಹದಲ್ಲಿ ಚೈತನ್ಯವೂ ಮೆದುಳಿನ ಶಕ್ತಿಯೂ ವೃದ್ಧಿಯಾಗುವುದಕ್ಕೆ ಆಹಾರವೇ ಕಾರಣವು ಆದುದರಿಂದಲೇ 'ಓವಲ್ಟಿನ್' ನಿಮ್ಮ ಮಕ್ಕಳ ನಿತ್ಯದ ಪಾನೀಯವಾಗಿದೆ

'ಓವಲ್ಟಿನ್' ಬಹಳ ರುಚಿಕರವಾದ ಪಾನೀಯವು ಅದು ಆರೋಗ್ಯಲಾಭಕ್ಕೆ ಬೇಕಾಗುವ ಪೋಷಣೆಯ ಸುಲಭ ಜೀರ್ಣವಾಗುವ ವಸ್ತುಗಳನ್ನು ಸಮತೂಕದಿಂದ ಒದಗಿಸಿಕೊಡುತ್ತದೆ ಅದು ನಿಸರ್ಗದ ಅತ್ಯುತ್ತಮ ಆಹಾರಗಳಿಂದಲೇ ತಯಾರಿಸಲ್ಪಟ್ಟಿದೆ ಅದರ ಸುಪರಿಮಳದಿಂದ ಮಕ್ಕಳು ಆಹ್ಲಾದಗೊಳ್ಳುತ್ತವೆ ಅವುಗಳು 'ಓವಲ್ಟಿನ್' ಕುಡಿಯುವುದರಿಂದ ಅಸಮಾನರೀತಿಯಿಂದ ಘಟ್ಟಿಯಾಗಿಯೂ, ಆರೋಗ್ಯವಾಗಿಯೂ, ಸಂತೋಷವಾಗಿಯೂ ಬೆಳೆಯುತ್ತವೆ

ನಿಮ್ಮ ಮಕ್ಕಳಿಗೆ ಚಾ, ಕಾಫಿ, ಇತ್ಯಾದಿಗಳ ಬದಲಿಗೆ ಶುದ್ಧ ಮತ್ತು ಸಂಪೂರ್ಣವಾದ 'ಓವಲ್ಟಿನ್'ನ್ನು ಕೊಡಿರಿ ಅದು ಅವರಿಗೆ ಎಲ್ಲಾ ವಿಧದಿಂದಲೂ ಒಳ್ಳೇಯದು

ಅತೀ ಶುದ್ಧ—ಅತ್ಯುತ್ತಮ. ಕರಸ್ಪರ್ಶಿತವಾಗಿರುವುದಿಲ್ಲ

ರುಚಿಕರವಾದ ಓವಲ್ಟಿನ್ನಿಗೆ ಸಂಸಮಾನವಾದ ಬೇರೊಂದು ಪಾನೀಯವಿಲ್ಲ ಸಪ್ರಮಾಣದಿಂದ ತಯಾರಿಸಲ್ಪಡದ ರಕಾಂ [illegible]ಗಳನ್ನು ತಿರಸ್ಕರಿಸಿರಿ.

OVALTINE

TONIC FOOD BEVERAGE

ಏಜಂಟರು— [illegible] ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್ ರೈಟ್, 8೦ಎ ರಿಪನ್ ಸ್ಟ್ರೀಟ್, ಕಲ್ಕತ್ತಾ ಮತ್ತು ಮುಂಬೈ, ಮದ್ರಾಸ್, ರಂಗೂನುಗಳಲ್ಲಿ

ಮಕ್ಕಳು ಓವಲ್ಟಿನ್ ರೊಟ್ಟಿಗಳನ್ನು ತಿನ್ನಲು ಸಂತೋಷಗೊಳ್ಳುತ್ತವೆ ಈ ರೊಟ್ಟಿಗಳು ಬಹಳ ಪರಿಮಳವಿದ್ದು ಆರೋಗ್ಯಕರ ವಸ್ತುವಿನಿಂದ ಕೂಡಿದೆ. ಇವುಗಳನ್ನು 'ಓವಲ್ಟಿನ' ನೊಡನೆಯಾಗಲೀ, ಚಾ, ಕಾಫಿಯೊಡನೆಯಾಗಲೀ ಸೇವಿಸಿರಿ ಇವುಗಳು ಹಲ್ಲುಗಳಿಗೂ ಒಳ್ಳೇಯದು ಮತ್ತು ಬಿಸ್ಕತ್ತುಗಳಿಗಿಂತಲೂ ಉತ್ತಮ.

OT/56

ಚರ್ಚಿಲ್ಲರ ಸ್ಫುಟವಾಣಿ!

ಕೆಳಗಿನವು ವಿನ್ಸ್ಟನ್ ಚರ್ಚಿಲ್ಲರು ಹೇಳುವ ಸದ್ಯೋವೇದನೆಗಳು: ಚರ್ಚಿಲರೆಂದರೆ ಹಿಂದೀಯ ಸ್ವಾತಂತ್ರ್ಯ ವಿರೋಧಿಯೆಂದು ಎಲ್ಲರಿಗೂ ತಿಳಿದಿದ್ದ ಸಂಗತಿ. ಅವರು ಒಂದು ಭಾಷಣದಲ್ಲಿ ಹೀಗೆಂದರು—

ನಾನು ಗತಕಾಲದಲ್ಲಿ ಅಷ್ಟು ವಿಚಕ್ಷಣಶಾಲಿಯಲ್ಲ! (ಈಗಲ್ಲ?)

ಯುದ್ಧದಲ್ಲಿ ನಾವು ಒಮ್ಮೆ ಮಾತ್ರ ಕೊಲ್ಲಲ್ಪಡುತ್ತೇವೆ. ಆದರೆ ರಾಜಕೀಯ ಸಮರರಂಗದಲ್ಲಿ ಅನೇಕ ಸಲ ಕೊಲ್ಲಲ್ಪಡುತ್ತೇವೆ. (ನೀವು ಕೊಲ್ಲಲ್ಪಟ್ಟಿದ್ದೀರಾ?)

ಪ್ರಗತಿಯನ್ನು ಹೊಂದುವುದೆಂದರೆ ಪರಿವರ್ತಿತವಾಗುವುದು. ಸಂಪೂರ್ಣ ಪ್ರಗತಿಪರವಾಗಬೇಕಾದರೆ ನಿಮಿಷಕ್ಕೊಮ್ಮೆ ಬದಲಾವಣೆಯಾಗುತ್ತಿರಬೇಕು (ನೀವು ಬದಲಾವಣೆಯಾಗುವುದು ಯಾವಾಗ?)

ಪಂಥವೇ ಬ್ರಿಟಿಷರ ಜೀವನವು—ಪ್ರಾಣವು. ಬ್ರಿಟಿಷರು ದೊಡ್ಡವರಾದುದು ಸ್ಪರ್ಧೆಯಿಂದಾಗಿ (ಅವರು ದೊಡ್ಡದಾಗಿ ಬೆಳೆಯುವರನ್ನು ಸಣ್ಣದು ಮಾಡಿದುದು ನಿಮಗೆ ಗೊತ್ತಿರಬಹುದೇ?)

ನಾವು ಇಂಗ್ಲೆಂಡು ಎಂಬ ದ್ವೀಪದಲ್ಲಿ ಯಾವ ರೋಗದಿಂದ ಬಳಲುತ್ತಿದ್ದೇವೇ? ನಮ್ಮ ಮನೋಶಕ್ತಿಯ ಲೋಪದಿಂದ ಬಳಲುತ್ತಿದ್ದೇವೆ (ನಿಮ್ಮಂತಹ ಮನೋಬಲರಿದ್ದರೆ?)

ಉಪನ್ಯಾಸವನ್ನು ಕೊಡಬೇಕಾದರೆ ಉಪನ್ಯಾಸಕನು ಒಳ್ಳೆ ವಾಗ್ಮಿಯಾಗಿಯೂ ಬಲ್ಲವನಾಗಿಯೂ ಇರಬೇಕು

ಇದ್ದಕ್ಕಿದ್ದ ಹೊರ ಸಂಗತಿಗಳಲ್ಲಿ ತೃಪ್ತರಾಗಿ ಕುಳಿತುಕೊಳ್ಳುವುದಲ್ಲ

ವೋಟು ಕೊಡುವ ಹಕ್ಕನ್ನು ಕೆಲವರಿಗೆ ಕೊಟ್ಟಿದ್ದ ಸಮಯದಲ್ಲಿ ಅದನ್ನು ಎಲ್ಲರೂ ಆಶಿಸಿದರು ಅದನ್ನು ಹೆಚ್ಚಿನವರಿಗೆ ಕೊಟ್ಟಾಗ ಅದನ್ನು ಕೆಲವರು ಆಶಿಸಿದರು ಈಗ ವೋಟು ಕೊಡುವ ಹಕ್ಕು ಎಲ್ಲರಿಗೂ ಇದೆ ಆದುದರಿಂದ ಈಗ ಅದನ್ನು ಕೊಡಲು ಯಾರಿಗೂ ಆಶೆಯಿರುವುದಿಲ್ಲ

ಪ್ರಪಂಚದ ಬುದ್ಧಿಶಕ್ತಿಯು ಪರಿಪಕ್ವವಾಗಿರುವಾಗಲೇ ಅದನ್ನು ಉಪಯೋಗಿಸಿಕೊಳ್ಳಬೇಕು. ಸಮಯವನ್ನು ಹಾಳು ಮಾಡಬಾರದು

ನಾವು ಮುಂದೆ ಮುಂದೆ ಹೋದಷ್ಟಕ್ಕೆ ನಮ್ಮ ಸ್ವಂತ ಸೃಷ್ಟಿಯನ್ನು ಸೃಷ್ಟಿಸುತ್ತಾ ಹೋಗುತ್ತೇವೆ ನಮ್ಮ ಕಲ್ಪನಾಶಕ್ತಿಯು ಎಷ್ಟು ಬಲವಾಗಿರುತ್ತದೋ ಅಷ್ಟೆ ನಮ್ಮ ರಾಜ್ಯವೂ ವಿಸ್ತಾರವಾಗುತ್ತದೆ ಕಲ್ಪನೆಯು ಕಡಿಮೆಯಾದೊಡನೆ ರಾಜ್ಯವೂ ಸಣ್ಣದಾಗುತ್ತದೆ

ತಪ್ಪಿದ್ದರೆ ಒಪ್ಪಿಕೊಳ್ಳಬಾರದು ಕಾರಣ ನಾವು ಯಾವಾಗಲೂ ಅನೇಕ ಬಗೆಯ ತಪ್ಪುಗಳನ್ನು ಮಾಡುತ್ತಾ ಹೋಗುತ್ತೇವೆ

ನಾವು ಎಷ್ಟರ ತನಕ ಸತ್ಯಾತ್ಮಗಳಾಗಿಯೂ ಉದಾರಿಗಳಾಗಿಯೂ ಇರುತ್ತೇವೋ ಅಷ್ಟರ ತನಕ ನಾವು ಯಾರಿಗೂ ಹಾನಿಯನ್ನು ಮಾಡಲಾರೆವು

ಭೂಮಿಯು ವಧು ತರುಣನು ವರ ಭೂಮಿಯನ್ನು ತರುಣರು ವರಿಸಿಕೊಳ್ಳಬೇಕು

(ಬ್ರಾಕೆಟಿನೊಳಗಿರುವುದು ನನ್ನ ಪ್ರಶ್ನೆ)

'ಮಾಧವ'

The Canara Bank, Ltd. Mangalore.
ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.
NOTICE.

ಕಾಸರಗೋಡು ತಾಲ್ಲೂಕ್ ಹೊಸದುರ್ಗ ಸಮೀಪ ಕೋಟಚ್ಚೇರಿಯಲ್ಲಿರುವ ಉಪೇಂದ್ರ ಶ್ಯಾನುಭಾಗರ ಮಗ ಲಕ್ಷ್ಮಣ ಶ್ಯಾನುಭಾಗರಿಂದ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನ ಸ್ಮಾಲ್‌ಕಾಸ್ ನಂಬ್ರ 777/31 ಬಾಬ್ತು ಬರತಕ್ಕ ಡಿಕ್ರಿ ಸಾಲಗಳನ್ನು ವಸೂಲ್ಯಾಸಬೇಕಾಗಿ ಸದ್ರಿ ಕೋಟಚ್ಚೇರಿ ಲಕ್ಷ್ಮಣ ಶ್ಯಾನುಭೋಗರಿಗೆ ತಾ 31—5—32ರಲ್ಲು ಕೊಟ್ಟ ಟಪ್ಪಾಲು ರಿಜಿಸ್ಟ್ರಿ ನೋಟೀಸು ಪ್ರಕಾರ ಸದ್ರಿ ಸಾಲಗಳನ್ನು ಸದ್ರಿಯವರು ಸಲ್ಲಿಸಲಿಲ್ಲವಾದುದರಿಂದ ಸದ್ರಿಯವರ ಬಾಬ್ತು ಸದ್ರಿ ಬೇಂಕಿನ ನಂಬ್ರ 409 ಮತ್ತು 410 ಕೂಡಾ ಶೇರುಗಳು 2ನ್ನು ಇದೇ ಬರುವ ಜುಲೈ ತಿಂಗಳ ತಾ. 15ನೇ ಶುಕ್ರವಾರ ಮಧ್ಯಾಹ್ನ ಗಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬ್ಯಾಂಕಿನ 37 ವ 38ನೇ ಆರ್ಟಿಕಲುಗಳ ಪ್ರಕಾರ ಬೇಂಕಿಗೆ ಇರುವ ಅಧಿಕಾರದ ಮೇರೆಗೆ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿದಂದ ಪಣವು ಬ್ಯಾಂಕಿನ 39ನೇ ಆರ್ಟಿಕಲ್ ಪ್ರಕಾರ ಸದ್ರಿ ಸಾಲಗಳಿಗೆ ವಜಾ ಮಾಡೋಣಾದೀತು. (By Order.)

Office of the Bank
Mangalore,
21—6—1932

K. VENKAT RAO,
Secretary & Treasurer.

ವಿವಿಧ ಸಮಾಚಾರಗಳು.

"ಕಾಂಗ್ರೆಸು ಇಲ್ಲದೆ ರಾಜಿಯು ಇಲ್ಲ"

ಲಂಡನಿನ ವೈಟ್ ಫೀಲ್ಡ್ ಚರ್ಚ ಎಂಬಲ್ಲಿ ಮಿ ಲೋರೆನ್ಸ್ ಹೌಸ್‌ಮೇನ್ ಎಂಬವರ ಅಧ್ಯಕ್ಷತೆಯಲ್ಲಿ ಫ್ರೆಂಡ್ಸ್ ಒಫ್ ಇಂಡಿಯಾ ಕೊನ್ಸರೆನ್ಸು ಇದರ ಪರಿಷತ್ತು ಜರಗಿತು ವಿಠ್ಠಲಭಾಯಿ ಪಟೇಲರೇ ಮೊದಲಾದ ನೂರಾರು ಮಂದಿಗಳು ಹಾಜರಿದ್ದರು ಅಧ್ಯಕ್ಷರು ತನ್ನ ಭಾಷಣದಲ್ಲಿ 'ಶಕ್ತಿಯನ್ನು ಹಿಡಿದು ರಾಜ್ಯಾಡಳಿತವನ್ನು ನಡೆಸಿದರೆ ಫಲವಿಲ್ಲ ಆಳಲ್ಪಡುವವರ ಸಮ್ಮತಿವಿಲ್ಲದಿದ್ದರೆ ಅದರ ಫಲವೇನು" ಎಂದರು ಡಾ| ನೋರ್ವುಡ್ ಎಂಬವರು ಹೇಳುತ್ತಾ ಹಿಂದೀಯರಿಗೆ ಸಮ್ಮತವಿಲ್ಲದ ಸರಕಾರವಿಲ್ಲದೆ ಯಾವ ಸಮಾಧಾನವೂ ಆಗಲಿಕ್ಕಿಲ್ಲ" ಎಂದರು ಇನ್ನೂ ಅನೇಕ ಬ್ರಿಟಿಷ ಪ್ರಭುಗಳ ಭಾಷಣಗಳಾಗಿ ಅವರೂ ಹಿಂದೀಯ ಸ್ವಾತಂತ್ರ್ಯಾಕಾಂಕ್ಷೆಯನ್ನು ಸಮರ್ಥಿಸಿದರು ಆ ಮೇಲೆ ಠರಾವುಗಳು ಮುಂದರಿಸಲ್ಪಟ್ಟವು ಮೊದಲನೇಯದಾಗಿ "ಹಿಂದೀಯರನ್ನು ಪ್ರತಿನಿಧಿಸುವ ಕೊಂಗ್ರೆಸ್ಸಿನ ಅನುಮತಿಯಿಲ್ಲದೆ ಯಾವ ಇತ್ಯರ್ಥವೂ ಸಾಧ್ಯವಿಲ್ಲ"ವೆಂಬ ಠರಾವು ಹೊರಬಿತ್ತು ಎರಡನೇಯದಾಗಿ ಒರ್ಡಿನೆನ್ಸುಗಳು ಖಂಡಿಸಲ್ಪಡುತ್ತವೆ ಪೋಲೀಸರ [illegible]ಗಿ ಉತ್ಪಾತದವರೊಡನೆ ಸಹಾನುಭೂತಿಯಿದೆ ಸರಕಾರದ ಹಿಂದೀಯ ಧೋರಣೆಯಿಂದಾಗಿ ಸಂಕಷ್ಟಕ್ಕೊಳಗಾದ ಲೆಂಕೆಶಯರ್ ಕೆಲಸಗಾರರೊಡನೆ ಈ ಸಭೆಯು ಸಮಾನ ಭೂತಿಯುಳ್ಳದ್ದಾಗಿದೆ' ಎಂಬ ಠರಾವಾಯಿತು ಮೂರನೇಯದಾಗಿ 'ಎಲ್ಲಾ ಮಿತ್ರಕಕ್ಷರು ಇಂಡಿಯದ ಸ್ವಾತಂತ್ರ್ಯಸಕ್ತಿಯಲ್ಲಿ ಸರ್ವತ್ರಿಕವಾದ ಸಹಕಾರವನ್ನು ತೋರಿಸಬೇಕು' ಎಂಬ ಠರಾವೂ ಆಯಿತು ಆ ಮೇಲೆ ಶ್ರೀ ವಿಟ್ಠಲಭಾಯಿಯವರ ಭಾಷಣವಾಯಿತು ಅವರು 'ಮುಂಬಾಯಿ ಗಲಭೆಯು ಬ್ರಿಟಿಷರ ಮಧ್ಯಸ್ಥಿಕೆಯಿಂದಾಯಿತು ಈ ಮಧ್ಯಸ್ಥಿಕೆಯ ಕೂಟವು ತೆಗೆಯಲ್ಪಟ್ಟರೆ ಹಿಂದೂಮುಸ್ಲಿಮರು ಒಂದಾಗುವರು ಎಂದು ಮೊದಲಾಗಿ ಹೇಳಿದರು ಬ್ರಿಟಿಷ ಸರಕಾರದ ದಬ್ಬಾಳಿಕೆಯ ಧೋರಣವು ಹಿಂದೀಯ ಸ್ವಾತಂತ್ರ್ಯಕ್ಕೆ ಸಹಕಾರಿಯಾದೀತು ಎಂದೂ ಹೇಳಿದರು

* * *

ಸತ್ತ ಮರವು ಜೀವಗೊಂಡು ಎದ್ದುನಿಂತ ವೈಚಿತ್ರ್ಯ!

ಅನಂತಪುರದಿಂದ ಒಂದು ವಿಚಿತ್ರ ವಾರ್ತೆಯು ಹಸ್ತಗತವಾಗಿದೆ ಅಲ್ಲಿಯ ಮದಕಸಿರ ತಾಲೂಕಿನ ಪರೇಸಮುದ್ರ ಎಂಬಲ್ಲಿ ಒಂದು ದೊಡ್ಡ ಮರವು ಕೆಡವಿದಿತ್ತು ರೆವಿನ್ಯೂ ದಿಪಾರ್ಟಮೆಂಟನವರು ಅದರ ಗೆಲ್ಲುಗಳನ್ನು ಕತ್ತರಿಸಿ, ಉಳಿದ ಇಡೀ ಕಾಂಡವನ್ನು ಏಲಂ ಹಾಕಿದರು ಅದನ್ನು ಒಬ್ಬನು ಪಡೆದುಕೊಂಡು ಮನೆಗೆ ಕೊಂಡೊಯ್ದನು ಅವನು ಒಡೆದು ಕಟ್ಟಿಗೆ ಮಾಡುವುದಕ್ಕಾಗಿ ಅದನ್ನು ಬಿಸಿಲಿಗಿಟ್ಟನು ಮೊನ್ನೆ ಕೆಲವು ದನಮೇಯಿಸುವ ಹುಡುಗರು ಆ ಸತ್ತ ಮರದ ಕಾಂಡದ ಬಳಿ ಕುಳಿತು ದನಮೇಯಿಸುತ್ತಿದ್ದಾಗ, ಆ ಕಾಂಡವು ಒಂದು ಮಹಾ ಶಬ್ದವನ್ನೆಬ್ಬಿಸಿತು ನೋಡುನೋಡುತ್ತಿರುವಾಗ ಇಡೀ ಕಾಂಡವು (ಮಲಗಿದ್ದವನು ಏಳುವಂತೆ) ತನ್ನಷ್ಟಕ್ಕೆ ಎದ್ದು ನಿಂತಿತು ಇದನ್ನು ಕಂಡು ಹುಡುಗರೆಲ್ಲರೂ ದಿಗಿಲುಗೊಂಡು ಓಟ್ಟೆಯನ್ನಿಡಿಸಿದರು ಈ ವಾರ್ತೆಯು ಒಡನೆ ಎಲ್ಲಾ ಕಡೆಗಳಿಗೂ ಹರಡಿತು ಮರದ ಯಜಮಾನನಿಗೂ ತಿಳಿಯಿತು ತನ್ನ ಮರವು ಜೀವಂತವಾಗಿ ಎದ್ದು ನಿಂತುದನ್ನು ಕಂಡು ಅವನೂ ಆಶ್ಚರ್ಯಗೊಂಡನು ಆ ಮರದಲ್ಲಿದ್ದ ಒಂದು ಭೂತದ ಶಕ್ತಿಯಿಂದ ಇದು ಹೀಗಾಯಿತೆಂದು ಈಗ ಅಲ್ಲಿ ವಾರ್ತೆಯಿದ್ದಿದೆ ಅಲ್ಲದೆ ಆ ಮರದಲ್ಲಿ ಒಂದು ಶಕ್ತಿಯುತ ಸರ್ಪ ಇದ್ದಿತೆಂದೂ, ಆ ಮರವೇ ಅದರ ವಾಸಸ್ಥಾನವಾಗಿದ್ದಿತೆಂದೂ ಅದು [illegible] ಶಕ್ತಿಯಿಂದ ಮರವನ್ನು ಎದ್ದುನಿಲ್ಲಿಸಿತೆಂದೂ ತಿಳಿಯಲಾಗಿದೆ ಯಾತ್ರೆಗೆ ಹೋಗುವಂತೆ ಈಗ ಜನರೆಲ್ಲರೂ ಆ ಮರದ ಬಳಿಗೆ ಹೋಗಿ ಹಣ್ಣುಹಂಪಲುಗಳನ್ನೂ ಹರಿಕೆ ಕಾಣಿಕೆಗಳನ್ನೂ ಸಲ್ಲಿಸುತ್ತಿರುವರು ಈ ಶತಮಾನದ ಈ ಅದ್ಭುತವನ್ನು ನೋಡಲು ಪರವೂರುಗಳಿಂದಲೂ ಜನತಂಡವು ಹೋಗುತ್ತಿದೆ

* * *

ಕಾಣೆಯಾಗಿರುವ ಪಾರ್ಶೀ ವೈಮಾನಿಕ

ಪಾರ್ಶೀ ವೈಮಾನಿಕನಾದ ಶ್ರೀ ಡಿ ಪಿ ಜೀಜಿಭಾಯ್ ಎಂಬ ತರುಣನು ಕಳೆದ ೧೨ ದಿನಗಳ ಹಿಂದೆ ಮುಂಬಾಯಿಯಿಂದ ವಿಮಾನದ ಮೂಲಕ ಹೊರಟವನು ಕಾಣೆಯಾಗಿರುವನಷ್ಟೆ! ಅವನನ್ನು ಕಂಡು ಹಿಡಿಯಲು ಅಲ್ಲಿಯ ವಿಮಾನ ಸಂಸ್ಥೆಯವರು ಬಹಳ ಪ್ರಯಾಸಪಟ್ಟರೂ ಫಲಕಾರಿಯಾಗಲಿಲ್ಲ ತಾ ೧೭ನೇ ದಿನ ಬೆಳಿಗ್ಗೆ ಹಿಂದಿ ಎಂಬ ಹಳ್ಳಿಯಿಂದ ಒಬ್ಬ ಹಳ್ಳಿಗನು ಮುಂಬಾಯಿಗೆ ಬಂದು, ತಾನು ಜೀಜೀಭಾಯಿಯನ್ನು ನೋಡಿರುವೆನೆಂದೂ, ಒಂದು ಕಾಡಿನ ಮಧ್ಯೆ ಬಿದ್ದ ಅವನನ್ನು ತನ್ನ ಜನರು ರಕ್ಷಿಸಿದರೆಂದೂ ಹೇಳಿದನು ಒಡನೆ ಅವನನ್ನು ಕರೆದುಕೊಂಡು ಬರಲು ಮೋಟರು, ವಿಮಾನಗಳ ಸಹಿತ ಡಾಕ್ಟರರೂ ಮಿತ್ರರೂ ಓಡಿದರು ಆದರೆ ಅವರ ಹುಡುಕಾಟವು ನಿಷ್ಫಲವಾಯಿತು ವೈಮಾನಿಕನಾಗಲೀ ಅವನ ವಿಮಾನವಾಗಲೀ ಅಲ್ಲಿ ಕಾಣಸಿಗಲಿಲ್ಲ, ಇದನ್ನು ಕಂಡು ಎಲ್ಲರೂ ಬೆರಗಾಗಿ ಆ ಹಳ್ಳಿಗನನ್ನು ಗದರಿಸಿದರು ಆಗ ಅವನ ಮೋಸವು ಬಯಲಿಗೆ ಬಿತ್ತು ತಾನು ಮುಸಲ್ಮಾನನ ಉಡುಪನ್ನು ಹಾಕಿರುವುದಾದರೂ ತಾನು ಮುಸಲ್ಮಾನನಲ್ಲ, ಪಾರ್ಶಿಯೆಂದೂ, ಹಣ ಲುಟಾಯಿಸುವುದಕ್ಕಾಗಿ ತಾನು ಸುಳ್ಳು ವಾರ್ತೆಯನ್ನು ಹಬ್ಬಿಸಿದೆನಾಗಿಯೂ ಒಪ್ಪಿಕೊಂಡನು ಅವನನ್ನು ಸೆರೆಹಿಡಿಯಲಾಗಿದೆ ಶ್ರೀ| ಜೀಜೀಭಾಯಿಯು ಸಮುದ್ರಕ್ಕೆ ಬಿದ್ದು ಮುಳುಗಿಹೋಗಿರಬೇಕೆಂದು ಊಹಿಸಲಾಗಿದೆ

* * *

ಸ್ಟೀಮರು ಮುಳುಗಿತು

ದ್ವಾರಕೆಯ ಬಳಿ ಎಸ್ ಎಸ್ ಕುಮಾರಿ ಎಂಬ ಸ್ಟೀಮರು ಮುಳುಗಿದ ವಾರ್ತೆಯೊಂದು ಬಂದಿದೆ ಈ ಸ್ಟೀಮರು ತಾ ೧೨ನೇ ದಿನ ಕರಾಚಿಯಿಂದ ಮದ್ರಾಸಿಗೆ ಕೆಲವು ಸರಕುಗಳನ್ನೂ ಜನರನ್ನೂ ಹೊತ್ತು ಹೊರಟಿತು ದ್ವಾರಕೆಯನ್ನು ಸಮೀಪಿಸುತ್ತಲೇ ಅದರ ಒಂದು ಪಾರ್ಶ್ವದಲ್ಲಿ ಒಂದು ಬಿರುಕು ಇದ್ದುದು ಕಂಡು ಬಂತು ನೀರು ಬಹು ರಭಸದಿಂದ ಒಳಗೆ ದಾವಿಸಿತು ಪಂಪುಗಳನ್ನುಪಯೋಗಿಸಿ ಆದಷ್ಟು ನೀರನ್ನು ಹೊರಗೆ ಹಾಕಿದರು ಕ್ರಮೇಣ ನೀರು ತುಂಬಿತು ಇಂಜಿನು ನಿಂತಿತು ಶ್ರೀ ದಂಡ್ವಾರೆ ಎಂಬ ಕೆಪ್ಟನರು ಸ್ಟೀಮರನ್ನು ಒಂದು ಕಡೆ ನಿಲ್ಲಿಸಿದರು ಬಹಳ ಬಿರುಗಾಳಿಯೂ ನೀರಿನ ಹೊಡೆತವೂ ಇದ್ದಿತು ಇದ್ದ ೪ ಲೈಫ್‌ಬೋಟುಗಳನ್ನು ಇಳಿಸಲಾಯಿತು ೩೪ ಮಂದಿಗಳು ಅದರಲ್ಲಿ ಕುಳಿತು ದ್ವಾರಕೆಯತ್ತ ಕಡೆ ಸಾಗಿದರು ೧೪ ಜನರು ಮಡಿದರು ಕೆಪ್ಟನರ ಮೃತಶರೀರವು ಕಡಲತಡಿಯಲ್ಲಿ ದೊರೆಯಿತು ಕೆಪ್ಟನರು ಸಹಿತ ೧೪ ಜನರು ಒಂದು ಬೋಟಿನಲ್ಲಿ ಕುಳಿತ ದಡವತ್ತ ಸಾಗುತ್ತಿರುವಾಗ ಸ್ಟೀಮರು ಮುಳುಗಿದ ಬಿರುಸಾಟದಿಂದ ನೀರು ಅಲ್ಲೋಲಕಲ್ಲೋಲವಾಯಿತೆಂದೂ ಆ ನೀರಿನ ಆಂದೋಲನಕ್ಕೆ ಸಿಲುಕಿದ ಕೆಪ್ಟನರ ಲೈಫ್ ಬೋಟ್ ಮಗುಚಿ ಹೋಗಲು ಕಾರಣವೆಂದೂ ಊಹಿಸಲಾಗಿದೆ ಕೆಪ್ಟನರು ೪೦ ವರುಷ ಪ್ರಾಯದವರು—[illegible]

* * *

ಕಳ್ಳ! ಆದರೆ ಕದಿಯಲು ಗೊತ್ತಿಲ್ಲ

ಮುಲ್ತಾನಿನ ಇಂಪೀರಿಯಲ್ ಬೇಂಕಿನ ಖಜಾನೆಯಿಂದ ೨೬೦೦೦ ರೂಪಾಯಿ ನೋಟುಗಳ ಗಂಟು ಕಾಣೆಯಾಯಿತು ಎಕೌಂಟೆಂಟ್ ಕೇಶಿಯರ್ ಮೊದಲಾದವರನ್ನು ದಸ್ತಗಿರಿ ಮಾಡಲಾ[illegible] ಅಬ್ದುಲ್ ಲತೀಫನೆಂಬವನು ಆ ಬೇಂಕಿನ ಕೆಲಸಗಾರ ಖಜಾನೆಯ ಬೀಗದ ಕೈಯನ್ನು ಒಂದು ದಿನ ತನ್ನ ವಶಪಡಿಸಿಕೊಂಡ ರಾತ್ರಿಯಲ್ಲಿ ಪೇಟೆಗೆ ಹೋಗಿ ಅದೇ ಬೀಗದ ಕೈಯ ಡುಪ್ಲಿಕೇಟ್ ಒಂದು ತಯಾರಿಸಿ ತಂದ ಕಳೆದ ಶನಿವಾರ ರಾತ್ರಿ ಬೇಂಕಿನ ಹಿಂಬಾಗಿಲಿನಿಂದಾಗಿ ಒಳಸೇರಿ ಇದ್ದ ನೋಟುಗಳ ಕಟ್ಟನ್ನು ಹಿಡಿದುಕೊಂಡು ಹೊರಹೊರಟನು ೮೦೦೦ ರೂಪಾಯಿಗಳನ್ನು ಸೆಂಟ್ರಲ್ ಬೇಂಕಿನಲ್ಲಿ ಠೇವಣಾತಿ ಇಟ್ಟನು ಅದೇ ಬೇಂಕಿನಲ್ಲಿ ಒಂದು ಪೆಟ್ಟಿಗೆಯನ್ನೂ ಭದ್ರತೆಯಲ್ಲಿಟ್ಟನು ಅದರ ರಶೀದಿಯನ್ನು ತನ್ನ ಕೈಯಲ್ಲಿದ್ದ ಒಂದು ತಾಯಿತದೊಳಗೆ ಹಾಕಿಕೊಂಡು ಸ್ವಸ್ಥಚಿತ್ತದಿಂದಿದ್ದನು ಮರುದಿನ ಕಳ್ಳತನದ ಸುದ್ದಿಯು ಹೊರಬಿತ್ತು ಹಣಕ್ಕೆ ಸಂಬಂಧಪಟ್ಟಿದ್ದ ಬೇಂಕು ಕೆಲಸಗಾರರನ್ನು ಕೈದು ಮಾಡಲಾಯಿತು ಲತೀಫನ ಮೇಲೆ ಸಂಶಯ ತೋರಲಿಲ್ಲ ಅಷ್ಟಾಗುವಾಗ ಲತೀಫನು ಸೆಂಟ್ರಲ್ ಬೇಂಕಿನಲ್ಲಿ ಪೆಟ್ಟಿಗೆಯೊಂದನ್ನು ಭದ್ರತೆಯಾಗಿಟ್ಟ ಸುದ್ದಿಯು ಹೇಗೋ ಬೇಂಕಿನವರಿಗೆ ತಿಳಿಯಿತು ಲತೀಫನನ್ನು ಹಿಡಿಯಲಾಯಿತು ಸೆಂಟ್ರಲ್ ಬೇಂಕಿನಲ್ಲಿದ್ದ ಪೆಟ್ಟಿಗೆಯನ್ನು ಬಿಡಿಸಲು ೩,೫೦,೦೦೦ ರೂಪಾಯಿಗಳು ದೊರಕುವು ಬೇರೆ ೨೦೦೦ ರೂಪಾಯಿಯೂ ದೊರೆಯಿತು ಅವನ ತೋಳಿನಲ್ಲಿದ್ದ ತಾಯಿತದಿಂದ ಅವನು ರಶೀದಿಯನ್ನು ತೆಗೆಯುವಾಗ ಅವನ ಬುದ್ಧಿವಂತಿಕೆಯನ್ನು ನೋಡಿ ಎಲ್ಲವರಿಗೂ ಆಶ್ಚರ್ಯವಾಯಿತು ೧೦೦ ರೂಪಾಯಿಗಳಲ್ಲದೆ ಬಾಕಿ ಎಲ್ಲಾ ಹಣವು ದೊರಕಿರುತ್ತದೆ ನ್ಯಾಯವಿಚಾರಣೆಯಾಗಲಿದೆ

* * *

ಚಿಟ್ಟಗೊಂಗಿನಲ್ಲಿ ಕೆಪ್ಟನ್ ಕೆಮರೊನರ ಕೊಲೆ

ಕಳೆದ ವಾರದಲ್ಲಿ ಚಿಟ್ಟಗೊಂಗಿನ ಧಾಲ್‌ಘಾಟ್ ಎಂಬಲ್ಲಿ [illegible] ನವೀನ ಚಕ್ರವರ್ತಿ ಎಂಬವರ ಮನೆಯಲ್ಲಿ ಕ್ರಾಂತಿಕಾರರು ವಾಸಿಸುತ್ತಿರುವರೆಂಬ ವಾರ್ತೆಯನ್ನು ಕೇಳಿ ಕೆಪ್ಟನ್ ಕೆಮರೋನ್ ಎಂಬವರು ತನ್ನ ಮಿಲಿಟರಿ ಪರಿವಾರದವರೊಡನೆ ಅಲ್ಲಿಗೆ ಹೋಗಿ ಜಪ್ತಿ ನಡೆಸಿದರು ಅಷ್ಟರಲ್ಲಿ ಮನೆಯ ಮಾಳಿಗೆಯಲ್ಲಿ ಯಾರೋ ಇದ್ದಂತೆ ಗೋಚರವಾಯಿತು ಒಡನೆ ಕೆಪ್ಟನರು ಮಾಳಿಗೆ ಹತ್ತಿ, ಅಪರಿಚಿತ ಕ್ರಾಂತಿಕಾರನೊಬ್ಬನನ್ನು ಹಿಡಿಯಲೆತ್ನಿಸಿದರು ಅವನು ಒಂದು ರಿವಾಲ್ವರನ್ನು ಹಾರಿಸಿಬಿಟ್ಟನು ಕ್ಷಣಮಾತ್ರದಲ್ಲಿ ಕೆಪ್ಟನರು ಬಿದ್ದು ಮರಣಹೊಂದಿದರು ಕೊಲೆಗಾರನು ಓಡುತ್ತಿರುವಾಗ ಗುರ್ಖಾ ಸಿಪಾಯಿಗಳು ಗುಂಡು ಹಾರಿಸಿದರು, ಅವನು ಸತ್ತುಬಿದ್ದನು ಮನೆಯ ಕೆಳಕೋಣೆಗಳಲ್ಲಿ ವಾಸಿಸುತ್ತಿದ್ದ ಹೆಂಗುಸರನ್ನೂ ಇನ್ನು ಕೆಲವರನ್ನೂ ದಸ್ತಗಿರಿ ಮಾಡಿದ್ದಾರೆ. ಶವವು ಮಿಲಿಟರಿ ಮಾನದಿಂದ ಹೂಣಿಡಲ್ಪಟ್ಟಿತು ಕೆಪ್ಟನರ ಮರಣದಿಂದಾಗಿ ಇದು ಚಿಟ್ಟಗೊಂಗಿನಲ್ಲಿ ಹೊಸರೀತಿಯ ಇನ್ನೊಂದು ಶಾಸನವು ಹೊರಬಿದ್ದು, ಪೋಲೀಸ ಅಧಿಕಾರಿಗಳಿಗೆ ಹೆಚ್ಚಿನ ಶಕ್ತಿಯು ಕೊಡಲ್ಪಟ್ಟಿದೆ.

ನೋಟೀಸು

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P 68/32

ದಾರಮ್ಮ ಶೆಟ್ಟಿ—ಅರ್ಜಿದಾರಳು

ಕಳೆದ ತಾ 16-3-32ರಲ್ಲಿ ಕೂಡಿಯಾಲುಬೈಲು ಗ್ರಾಮದಲ್ಲಿ ಮೃತಪಟ್ಟ ಮೇಲಣ ಅರ್ಜಿದಾರಳ ಮಗ ನಾರಾಯಣ ಶೆಟ್ರಿಗೆ "The East India Distilleries & Sugar Factories Limited" ಇವರ ಏಜಂಟರಾದ "Messrs Parry & Co Ltd, Madras" ಇವರಿಂದ ಬರಾ ಸದ್ರಿ ನಾರಾಯಣ ಶೆಟ್ರು ಸದ್ರಿ ಕಂಪೆನಿಯಲ್ಲಿ ಡಿಪೋಜಿಟ್ ಮಾಡಿದ ರೂಪಾಯಿ 200/-, ಸಂಬಳದ ಬಾಕಿ ರೂ 18-0-0 ಕೂಡಾ ರೂಪಾಯಿ 218-0-0 ವಸೂಲ ಮಾಡುವರೆ ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಮೇಲ್ಕಂಡ ಅರ್ಜಿದಾರಳು ಮೇಲಣ ಕೋರ್ಟಿನಲ್ಲಿ ದಾಖಲು ಮಾಡಿದ O P 68 32 ನೇ ಅರ್ಜಿಯು ತಾ 12-7-32ಕ್ಕೆ ತನಿಖೆಗೆ ಇಟ್ಟಿದೆ ಇದಕ್ಕೆ ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಗಳನ್ನು ಆ ದಿವಸಕ್ಕೆ ಮೇಲಣ ಕೋರ್ಟಿಗೆ ಹಾಜರುಪಡಿಸತಕ್ಕದ್ದು

ಮಂಗಳೂರು
೨೨-೬-೩೨

K. Gopala Rao,
ಅರ್ಜಿದಾರರ ಕಡೆ ವಕೀಲರು

ವಿಟ್ಲ ಗ್ರಾಮ ಪಂಚಾಯತ ಕೋರ್ಟಿನಲ್ಲಿ

ದಾವೆ ನಂಬ್ರ ೩೩ ೩೨

ಕೆ ಅಪ್ಪಪ್ಪ ನಾಯ್ಕ —ವಾದಿ

ವಿ ಸಂಜೀವ [illegible] —ಪ್ರತಿವಾದಿ

ಮೇಲ್ಕಂಡ ನಂಬ್ರವು ತಾ 2-[illegible]-32ಕ್ಕೆ ವಿಚಾರಣೆ ತೀರ್ಮಾನಕ್ಕೆ ಇಟ್ಟಿರುವುದರಿಂದ ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಯು ಹಾಜರಾಗದಿದ್ದಲ್ಲಿ ಸದ್ರಿ ವ್ಯಾಜ್ಯ [illegible] ತೀರ್ಮಾನಿಸಲ್ಪಡುವುದು

V. Rajalaksminath Swamiji,
President Village Panchayat Court

The Canara Bank Ltd Mangalore

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ [illegible] ಕೊಡದೆ ಇದ್ದುದರಿಂದ [illegible] ರಿಜಿಸ್ಟ್ರ ನೋಟೀಸ ಸದ್ರಿಯವರು ಮೃತಪಟ್ಟಿದ್ದಾರೆಂದು [illegible] ಬಂದಿರುವುದರಿಂದ, ಸದ್ರಿಯವರ ಒತ್ತೆ ನಗಗಳನ್ನು ಇದೇ ಬರುವ ಜುಲಾಯಿ ತಿಂಗಳ ತಾ ೮ನೇ [illegible] ದಿವಸ ಮಧ್ಯಾಹ್ನ ಘಂಟೆ 12ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

Loan No 3,12, Gurpu Rama Bhatta's Krishna Bhatt [illegible] Rs 300-0-0 [illegible] 200-0-0 Interest till 8-7-32 Rs [illegible] Charges Rs [illegible]

Loan No [illegible] 49 [illegible] Gauga Kamat [illegible] Mangalore [illegible] pal Rs [illegible] Interest till [illegible] Rs 4 [illegible] Charges Rs [illegible]

ಸೂ—ಈ ನೋಟೀಸು ಖರ್ಚು ಸೇರಿದೆ.

Office of the Bank
Mangalore
Date 22-6 193[illegible]

M. Mukund Kini,
Asst Secretary

ದಿ ಕೆನರಾ ಬೇಂಕ್, ಲಿಮಿಟೆಡ್ ಗಂಗೊಳ್ಳಿ

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಗಗಳ ಆಧಾರದ ಮೇಲೆ ಸದ್ರಿ ಬೇಂಕಿನಿಂದ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಮೇಲಣ ಬಡ್ಡಿಯನ್ನಾಗಲೀ ಕೊಡದೆ ಇದ್ದುದರಿಂದಲೂ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸು ವಾಪಾಸ ಬಂದಿರುವುದರಿಂದಲೂ ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ ಸದರಿ ನಗಗಳನ್ನು ಇದೇ ಬರುವ ತಾ [illegible] 7 32ನೇ ದಿನ ಮಧ್ಯಾಹ್ನ 12 ಗಂಟೆ ಸಮಯಕ್ಕೆ ಸದ್ರಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಅಡವಿಟ್ಟ ತಾ ೧೫ನೇ ಜೂನ್ ೧೯೩೦ ಲೋನ್ ನಂಬ್ರ ೪೩ ೩೧ ತಲ್ಲೂರು ದೊಡ್ಡಮನೆ ಶೇಷಶೆಟ್ಟಿ ಸಹೋದರ ನಾಗಯ್ಯಶೆಟ್ಟಿ, ತಲ್ಲೂರು ಕುಂದಾಪುರ ಪೋಸ್ಟು ಅಸ್ಲು ರೂ ೨೦೦ ಏಲಂ ತಾ ವರೆಗೆ ಅಂದಾಜು ಬಡ್ಡಿ ೧೦-೬-೨ ರಿಜಿಸ್ಟ್ರಿ ನೋಟೀಸು ಖರ್ಚು ೦ ೬-೬ ಈ ನೋಟೀಸು ಖರ್ಚು ಅಲಾಯ್ದ

M V Kamath, *Agent*

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಖಚಿತ್ತ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ.

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಭಿಷಕ್ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕೃಷ್ಣ ವೈದ್ಯರಿಂದ ಸ್ಥಾಪಿಸಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಹೀಗೆಯೇ ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ತಿಳಿಯ ಹಾಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಇಲ್ಲವರೂ ಎಂಬ ಪಕ್ಷೀಯ ಸಂಗತಿಗಳಲ್ಲಿ ಎಷ್ಟು ದಿವಸ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಫೀಸು ಕೊಡಲಾಗುವದಲ್ಲದೆ ಅನಾಥ ಕಷ್ಟಿಸ್ಥರಾದ ಗರೀಬರಿಗೆ ಅವರ ಆಗತ್ಯದ ಮದ್ದಿನ ಸಾಹಿತ್ಯಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿತರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸಹ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ವ ತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨-೦-೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಜ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೨

ವಿಳಾಸ — ಶಕ್ತಿ ಸುಧಾ ಕಾರ್ಯಾಲಯ
23 ಕಾಂಬಾರವಾಡ 4ನೇ ಗಲ್ಲಿ
ಮುಂಬಯಿ.

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೋ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ವಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಷ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು,

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dadar, Bombay, 14.

ತಂತಿ ವಿಳಾಸ – 'CAVASPUR' Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಲೋಧ್ರ—ಇದು ಸ್ತ್ರೀಯರ ಗರ್ಭದೋಷಗಳಿಗೆ ರಾಮ ಪಥಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ—ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ—ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd , Bombay,14.

ದಿ ಝಾಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್. ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಾಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಳೆ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಜಾಡಿ ರೂ 10/- ಕ್ರಯ 1 ಪಾನು ಶೀಸೆ ರೂ. 2/8, ½ ಪಾ. ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು:— ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು,— ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು:— ಟಿ. ಸಿ. ನಟರಾಜ್ ಅಂಡ್ ಕೊ, ಸಯ್ಯಾಜಿರಾವ್ ರೋಡು
ಬೆಂಗಳೂರು ಏಜಂಟರು:— ದಿ ಪ್ರೊಹಿಟ್ ಲಾಲ್ ಕಂಪೆನಿ, ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಮಹಾತ್ಮರೂ ವರ್ಣಾಶ್ರಮಧರ್ಮವೂ.

ಹಿಂದೂ ಧರ್ಮವೆಂಬುದು ಸಜೀವ ಜನಾಂಗವು. ಅದು ನೈಸರ್ಗಿಕ ಬಂಧನಗಳೊಡನೆ ಉನ್ನತಿಯನ್ನು ಹೊಂದಬಹುದು, ಅವನತಿಯನ್ನೂ ಹೊಂದಬಹುದು. ಬುಡದಲ್ಲಿ ಅದು ಒಂದೇ ಆಗಿದೆ. ಆದರೆ ಮಹಾವೃಕ್ಷದಂತೆ ಅದು ಘನವಾಗಿ ಬೆಳೆದು, ಅನೇಕ ಶಾಖೆಗಳನ್ನು ಬಿಟ್ಟಿದೆ. ಪ್ರಕೃತಿಯ ಪರಿವರ್ತನೆಗಳು ಅದರ ಮೇಲೆ ಪರಿಣಾಮಕಾರಿಯಾಗುತ್ತವೆ. ಅದಕ್ಕೆ ಬಿಸಿಲು ಮತ್ತು ಮಳೆಗಾಲವಿದೆ ಬಿಸಿಲಿನಿಂದ ಅದು ಬಾಡುತ್ತದೆ. ಮಳೆಯಿಂದ ಅದು ಅರಳುತ್ತದೆ ಒಂದು ರೀತಿಯಲ್ಲಿ ಅದು ಶಾಸ್ತ್ರಗಳ ಮೇಲೆ ಹೊಂದಿಕೊಂಡಿದೆ ಇನ್ನೊಂದು ರೀತಿಯಲ್ಲಿ ಅದು ಶಾಸ್ತ್ರಾಧಾರವಾಗಿಲ್ಲ ಹಿಂದೂಧರ್ಮವು ಏಕಮಾತ್ರ ಶಾಸ್ತ್ರದಿಂದ ಅಧಿಕೃತವಾಗಿಲ್ಲ ಗೀತೆಯು ಸಾರ್ವತ್ರಿಕವಾಗಿ ಸ್ವೀಕೃತವಾಗಿದೆ ಆದರೂ ಅದು ತೋರಿಸಿರುವುದು ಒಂದು ದಾರಿಯನ್ನು ಮಾತ್ರ ಹಿಂದೂಮತಾಚರಣೆಗೂ ಅದಕ್ಕೂ ಸಂಬಂಧವಿಲ್ಲ

ಹಿಂದೂಮತವೆಂಬುದು ಗಂಗಾನದಿಯಂತೆ—ಉಗಮಸ್ಥಾನದಲ್ಲಿ ಅದು ಪರಮಪಾವನವಾಗಿದೆ ಆದರೆ ಅದು ಮುಂದಕ್ಕೆ ಹರಿಯುತ್ತ ದಾರಿಯ ಹೊಲಸಿನಿಂದ ಅಶುದ್ಧವಾಗುತ್ತ ಗಂಗಾನದಿಯು ಹೇಗೆ ಉಪಯೋಗಕಾರಿಯೋ ಹಾಗೆ ಹಿಂದೂಧರ್ಮವೂ ಸರ್ವ ಪ್ರಪಂಚಕ್ಕೂ ಪ್ರಯೋಜನಕಾರಿಯಾಗಿದೆ ಅದು ಒಂದೊಂದು ದೇಶದಲ್ಲಿ ಒಂದೊಂದು ರೀತಿಯಿಂದಿದೆ ಆದರೆ ಅದರ ಆಂತರಿಕ ತೇಜಸ್ಸು ಎಲ್ಲಾ ಕಡೆಯಲ್ಲಿಯೂ ಪಸರಿಸಿಕೊಂಡಿದೆ—ಆಚರಣೆಯು ಒಂದು ಧರ್ಮವಲ್ಲ—ಆಚಾರವಿಚಾರಗಳು ಬದಲಾವಣೆಯಾಗುವುವು —ಆದರೆ ಧರ್ಮವು ಮಾರ್ಪಾಟು ಹೊಂದಲಾರದು.

ಹಿಂದೂಧರ್ಮದ ಜೀವನತತ್ವವು ಅದನ್ನು ಆಚರಿಸುವವನ ಆತ್ಮಸಂಯಮನದಲ್ಲಿದೆ ತಮ್ಮ ಧರ್ಮವು ಹಾಳಾದ ಸಮಯದಲ್ಲಿ ಹಿಂದೂಗಳು ತೀಕ್ಷ್ಣವಾದ ತಪಸ್ಸನ್ನು ಅನುಭವಿಸಿದ್ದರು ಆ ಪಾಪಕ್ಕೆ ಕಾರಣಗಳೇನೆಂಬುದನ್ನು ಕಂಡುಕೊಂಡಿದ್ದರು. ಬಂದಿದ್ದ ಕಷ್ಟಗಳನ್ನು ಪರಿಹರಿಸಿಕೊಂಡಿದ್ದರು ಶಾಸ್ತ್ರಗಳು ದಿನೇ ದಿನೇ ಹೆಚ್ಚಾಗುತ್ತಲಿವೆ ವೇದಗಳೂ, ಉಪನಿಷತ್ತುಗಳೂ ಸ್ಮೃತಿಗಳೂ, ಪುರಾಣಗಳೂ, ಇತಿಹಾಸಗಳೂ ಎಲ್ಲವೂ ಏಕಕಾಲದಲ್ಲಿ ಉದ್ಭವವಾಗಲಿಲ್ಲ ಪ್ರತಿಯೊಂದೂ ಒಂದೊಂದು ಕಾಲದ ಸಂದರ್ಭಾನುಸಾರವಾಗಿ ಜನಿಸಿತು ಆದುದರಿಂದಾಗಿ ಅವುಗಳು ನಮ್ಮ ಬುದ್ಧಿಯನ್ನೂ ಸ್ಥಗಿತಗೊಳಿಸುವುದಿಲ್ಲ. ಅವುಗಳ ಕುರಿತು ನಮ್ಮ ಮನಸ್ಸಿನಲ್ಲಿ ಗಲಿಬಿಲಿಯುಂಟಾಗುತ್ತದೆ ಈ ಮೇಲಿನ ಶಾಸ್ತ್ರಗಳೆಲ್ಲ — ನಾಶರಹಿತವಾದ ಸತ್ಯ ಸಂಗತಿಗಳನ್ನು ಬೋಧಿಸುವುದಿಲ್ಲ, ಆದರೆ ಅವುಗಳು ಆಯಾ ಕಾಲದಲ್ಲಿ ಯಾವ ಯಾವ ಧರ್ಮಗಳು ಆಚರಣೆಯಲ್ಲಿದ್ದವೆಂದು ಹೇಳುತ್ತವೆ ಒಂದು ಕಾಲದ ಆಚರಣೆಯು ಆ ಕಾಲಕ್ಕೆ ಉಚಿತವಾಗಿದ್ದಿರಬಹುದು ನಾವು ಅದನ್ನು ಕುರುಡುಗಣ್ಣಿನಿಂದ ಅನುಸರಿಸುತ್ತ ಹೋದರೆ, ಅದರಿಂದ ಹಾನಿಯು ತಪ್ಪದಿರಲಾರದು. ಒಂದು ಕಾಲದಲ್ಲಿ ಪ್ರಾಣಿವಧೆಯು ಆಚರಣೆಯಲ್ಲಿತ್ತೆಂದರೆ, ನಾವು ಈಗಲೂ ಅಂತಹ ಆಚರಣೆಯಲ್ಲಿರಬೇಕೆಂದುಂಟೇ? ಒಂದು ಕಾಲದಲ್ಲಿ ನಮ್ಮ ಹಿರಿಯರು ಗೋಭಕ್ಷಕರಾಗಿದ್ದರೆಂದರೆ, ನಾವು ಈಗಲೂ ಗೋಭಕ್ಷಣೆಯನ್ನು ಮಾಡಬೇಕೆ? ಒಂದು ಕಾಲದಲ್ಲಿ ನಾವು ಕಳ್ಳರ ಕೈಗಳನ್ನು ಕಡಿದು ಹಾಕುತ್ತಿದ್ದೆವೆಂದರೆ, ಅಂತಹ ಕ್ರೂರಾಚರಣೆಯನ್ನು ನಾವು ಈಗಲೂ ಉಪಯೋಗಿಸಬೇಕೆ? ನಾವು ಬಹುಪತಿತ್ವದ ವಿಚಾರವನ್ನು ಈಗ ಮುಂದೆ ತರಬಹುದೇ? ನಾವು ಬಾಲ್ಯವಿವಾಹಗಳನ್ನು ಮಾಡಬಹುದೇ? ಮಾನವವರ್ಗದ ಒಂದು ಭಾಗದವರನ್ನು ನಾವು ಅಂದು ಜಾತಿಬಾಹಿರರನ್ನಾಗಿ ಮಾಡಿದ್ದೆವೆಂದು ಇಂದು ಕೂಡಾ ಅದೇ ಆಚಾರವಿಚಾರವನ್ನು ನಾವು ಕಾರ್ಯಕ್ಕೆ ಹಚ್ಚಬಹುದೇ?

ವೇದಗಳು

ಹಿಂದೂಧರ್ಮವು ಬಗ್ಗಡವಾಗಲಿಕ್ಕಿಲ್ಲ ಜ್ಞಾನವು ಮೇರೆರಹಿತವಾದುದು ಹಾಗೆ ಸತ್ಯವೂ ಕೂಡಾ ಅಮಿತವಾದುದು ಆತ್ಮಶಕ್ತಿಯನ್ನು ಆಧ್ಯಾತ್ಮಿಕವನ್ನು—ನಾವು ದಿನೇ ದಿನೇ ಅಭಿವೃದ್ಧಿಸುತ್ತೇವೆ. ಇನ್ನು ಮುಂದಕ್ಕೂ ನಾವು ಅದೇ ರೀತಿ ಮಾಡಬೇಕು. ನವೀನರೀತಿಯ ಅನುಭವಗಳು ನಮಗೆ ನವೀನ ರೀತಿಯ ಕರ್ತವ್ಯಪಾಲನೆಯನ್ನು ಬೋಧಿಸುತ್ತವೆ—ಹೀಗಿದ್ದರೂ, ಸತ್ಯವು ಶಾಶ್ವತವಾಗಿ, ಏಕಾಗ್ರವಾಗಿ ನಿಲ್ಲುವುದು ಸತ್ಯದ ಸಂಪೂರ್ಣತೆಯನ್ನು ಕಂಡು ಹಿಡಿದವರಾರು? ಇಂದಿನ ದಿನದಲ್ಲಿ ವೇದವೆಂದು ಹೆಸರುಗೊಂಡಿರುವ ವೇದವು ಮುಂಚಿನ ನಿಜವಾದ ವೇದವೆಂಬ ಜ್ಞಾನಕೋಶದ ಮಿಲಿಯ ಭಾಗಗಳಲ್ಲೊಂದು ಭಾಗವೂ ಆಗಿರುವುದಿಲ್ಲ ನಾವು ಅನುಸರಿಸುತ್ತಿರುವ ಕೆಲವು ವೇದಗಳ ಸಂಪೂರ್ಣಾರ್ಥವನ್ನು ತಿಳಿದವರಾರು? ಅಗಾಧವಾದ ಈ ಗಜಿಬಿಜಿಯಲ್ಲಿ ನಮ್ಮ ಬುದ್ಧಿಶಕ್ತಿಯು ಹಾಳಾಗಿ ಹೋಗದಂತೆ ನಮ್ಮ ಪೂರ್ವಿಕರು ನಮಗೆ ಒಂದು ಸಂಗತಿಯನ್ನು ಬೋಧಿಸಿರುವರು "ನಿನ್ನ ಆತ್ಮವು ಹೇಗೋ, ವಿಶ್ವವೂ ಹಾಗೆಯೇ" ಆತ್ಮಚಿಂತನೆಯನ್ನು ಮಾಡಬಹುದು ವಿಶ್ವಚಿಂತನೆಯನ್ನ' ಮಾಡುವುದೆಂತು? 'ನಿನ್ನ ಆತ್ಮವನ್ನು ತಿಳಿದುಕೋ, ಆಗ ವಿಶ್ವವನ್ನೇ ತಿಳಿದುಕೊಳ್ಳುವಿ' ಆತ್ಮವನ್ನು ತಿಳಿದುಕೊಳ್ಳುವ ಸಂಗತಿಯೂ ಸುಲಭವಾಗಿಲ್ಲ—ಅದು ಬಹಳ ಕಷ್ಟಸಾಧ್ಯವಾದ ಕೆಲಸ ಆದರೆ ಅದರ ಸಾಧನೆಯಲ್ಲಿ ಆತ್ಮವು ಶುದ್ಧಿಯಾಗುತ್ತದೆ—ಹೃದಯವು ಶುಚಿರ್ಭೂತವಾಗುತ್ತದೆ ಈ ಶುದ್ಧಾಂತಃಕರಣವೇ ತನ್ನ ನಿತ್ಯನೈಮಿತ್ತಿಕ ಕಾರ್ಯಕಲಾಪಗಳನ್ನು ನಡೆಸಲವಕಾಶ ಕೊಡುತ್ತದೆ ದೈವಬಲವಿಲ್ಲದೆ ತನ್ನ ನಿತ್ಯ ನೈಮಿತ್ತಿಕಗಳನ್ನು ಮಾಡಲು ಸಾಧ್ಯವಿಲ್ಲ—ವಿಶ್ವಾಸವೂ ಧ್ಯಾನವೂ ಇದ್ದರೆ ದೈವಬಲವಿದೆ ಇದಕ್ಕಾಗಿಯೇ ತುಲಸೀದಾಸರು ರಾಮನಾಮದ ಬಲುಮೆಯನ್ನು ಹಾಡಿದರು ಇದಕ್ಕಾಗಿಯೇ ಭಾಗವತ ಗ್ರಂಥಿಕರ್ತೃಗಳು ದ್ವಾದಶ ಮಂತ್ರ (ಓಮ್ ನಮೋ ಭಗವತೇ ವಾಸುದೇವಾಯ) ಎಂಬ ನಾಮ ಮಂತ್ರಗಳನ್ನು ಕಲಿಸಿದರು ಯಾರು ಈ ಮಂತ್ರಗಳನ್ನು ತನ್ನ ಅಂತಃಕರಣದಿಂದ ಜಪಿಸುತ್ತಾನೋ, ಅವನೇ ಶ್ರೇಷ್ಠ ಸನಾತನಿಯೆಂದು ನನ್ನ ನಂಬಿಗೆ ಮತ್ತೆಲ್ಲವೂ ಅಪೋಹವಾಣಿಯೆಂದಂತೆ ತಳಹಿತ ಹೊಂದಿದವಾಗಿರುತ್ತದೆ

ಆಹಾರವೂ ಧರ್ಮವೂ.

ಗೋಭಕ್ಷಣ ಬಹಿಷ್ಕಾರ ಕಾರ್ಯವು ಪೂರ್ವಕಾಲಗಳಲ್ಲಿ ಸುಲಭಸಾಧ್ಯವಾದ ಕೆಲಸವಾಗಿತ್ತು ಆದರೆ ಅದು ಇಂದಿನ ದಿನದಲ್ಲಿ ಶಕ್ಯವಲ್ಲ ಸಾಧುವೂ ಸಾಧ್ಯವಾದುದೂ ಅಲ್ಲ ಒಂದು ವೇಳೆ ಅಂತಹ ಅಸ್ಪೃಶ್ಯರ ಮಾಂಸಭಕ್ಷಣೆಯನ್ನು ತೊರೆದು ಬಿಡಬೇಕೆಂದು ನಿಮ್ಮ ಬಲವಿರುವುದಾದರೆ ನಿಮ್ಮ ಬಲಸಾಧನೆಯು ಪ್ರೇಮದ ಮೂಲಕವಾಗಿಯೇ ಆಗುವುದಲ್ಲದೆ ಮತ್ತೆ ಬೇರೆಯಲ್ಲ—ಅಸ್ಪೃಶ್ಯರನ್ನು ಜ್ಞಾನದ ಬೆಳಕಿಗೆ ತಂದು ಆ ಕೆಲಸವನ್ನು ಮಾಡಬೇಕಲ್ಲದೆ, ಅವರನ್ನು ಬಹಿಷ್ಕರಿಸಿ ಅಲ್ಲ ಅಸ್ಪೃಶ್ಯರು ತಮ್ಮ ಮಾಂಸಭಕ್ಷಣವನ್ನು ತ್ಯಜಿಸುವಂತೆ ಅಹಿಂಸಾತ್ಮಕಯತ್ನವು ನಡೆಯುತ್ತಾ ಇದೆಯಾದರೂ, ಹಿಂದೂತ್ವವು ತಿನ್ನುವುದರಲ್ಲೂ ಉಣ್ಣುವುದರಲ್ಲೂ ಇದೆಯೇ? ಹಿಂದೂಮತದ ತಿರುಳು ಅದರ ಸಿದ್ಧಾಂತಗಳಲ್ಲಿದೆ—ಸತ್ಯ ಮತ್ತು ಅಹಿಂಸೆಗಳನ್ನು ಉಪದೇಶಿಸುವ ಮಹಾ ಧರ್ಮದಲ್ಲಡಗಿಕೊಂಡಿದೆ ಮಾಂಸವನ್ನು ಭಕ್ಷಿಸುವವನಾದರೂ, ಯಾರು ಸತ್ಯ ಮತ್ತು ಅಹಿಂಸಾತತ್ವಗಳನ್ನು ಅಂತಃಕರಣಶುದ್ಧಿಯಿಂದ ಪರಿಪಾಲಿಸುತ್ತಾನೋ, ಯಾರು ದೇವರ ಭಯದಿಂದಿರುತ್ತಾನೋ, ಅವನು, ಮಾಂಸ ಭಕ್ಷಣ ಮಾಡದೆ, ಸುಳ್ಳು ವಂಚನೆಗಳಿಂದ ದಿನಹರಣೆ ಮಾಡುವ ಶ್ರೇಷ್ಠ ಹಿಂದೂವಿಗಿಂತಲೂ ಉತ್ತಮನು. ಯಾರು ಅಹಿಂಸಾತತ್ವದ ಕಡೆಗೆ ಕಣ್ಣು ಬಿಟ್ಟು ನೋಡುತ್ತಾನೋ, ಯಾರು ಮಾಂಸ ಭಕ್ಷಣೆಯನ್ನು ತೊರೆದು ಸೃಷ್ಟಿಸಮಾನವಾದ ಪ್ರಾಣಿಚಯವೆಲ್ಲವೂ ಒಂದೇ ಎಂದು ಸಮಭಾವದಿಂದಿರುತ್ತಾನೋ ಅವನು ನಮ್ಮ ಶ್ಲಾಘನೆಗೆ ಪಾತ್ರನೇ ಸರಿ ಅಂತಹವನು ದೇವರ ಅಸ್ತಿತ್ವವನ್ನು ತಿಳಿದವನೇ ನಿಜ ಅಂತಹವನು ಆ ಪರಮಾತ್ಮನ ಭಕ್ತನೇ ಆಹುದು. ಅಂತಹವನೇ ಮಾನವವರ್ಗಕ್ಕೆ ಸನ್ಮಾರ್ಗದಾಯಕನೇ ಸರಿ

ಈಗಿನ ಯುಗದಲ್ಲಿ ಹಿಂದೂಮತವೂ ಇನ್ನಿತರ ಅನೇಕಾನೇಕ ಮತಗಳೂ ತಕ್ಕಡಿಯಲ್ಲಿ ತೂಕಲ್ಪಡುತ್ತಿವೆ ನಾಶರಹಿತವಾದ ಸತ್ಯವು ಒಂದೇ ಭಗವಂತನೂ ಒಬ್ಬನೇ ಅನಾಚಾರದಿಂದಲೂ ಅಧರ್ಮದಿಂದಲೂ ನಾವು ಪಾರಾಗೋಣ—ಸತ್ಯದ ಸನ್ಮಾರ್ಗ ಪ್ರವರ್ತಕರಾಗೋಣ—ಎಂದರೆ ಮಾತ್ರ ನಾವು ನಿಜವಾದ ಹಿಂದೂಗಳೆಂದೆಣಿಸಲ್ಪಡಲು ಯೋಗ್ಯರು. ಅನೇಕರು ತಾವು ಮಹಾ ಸನಾತನವಾದಿಗಳೆಂದು ಭೂಮಿಯನ್ನು ಕಳಂಕಗೊಳಿಸುವರು. ಅವರಲ್ಲಿ ಎಷ್ಟು ಮಂದಿಗಳನ್ನು ದೇವರು ತನ್ನ ಬಳಿ ಸೇರಿಸುವನೆಂದು ಯಾರು ಬಲ್ಲ? ಪರಮಾತ್ಮನ ಆಣೆಗಳನುಸಾರವಾಗಿ ಯಾರು ಆಚರಿಸುತ್ತಾನೋ, ಅಂತಹವನ ಮೇಲೆ ಪರಮಾತ್ಮನ ಅನುಗ್ರಹವಿದೆ ಅಲ್ಲದೆ ಸುಮ್ಮಸುಮ್ಮಗೆ 'ರಾಂ ರಾಂ' ಎಂಬವರ ಮೇಲೆ ದೇವರ ಕರುಣಾಮೃತವು ಬೀಳಲಾರದು

ಸನಾತನಿ ಯಾರು?

ನಾನು ಸನಾತನ ಹಿಂದೂವೆಂದು ಕರೆಯಲ್ಪಡುತ್ತಿದ್ದೇನೆ ಏಕೆಂದರೆ:—

೧. ನನಗೆ ವೇದ, ಉಪನಿಷತ್ತು, ಪುರಾಣ ಮತ್ತು ಹಿಂದೂ ಶಾಸ್ತ್ರವೆಂಬುವುಗಳ ಮೇಲೆ ಭರವಸೆಯಿದೆ ಅವತಾರದ ಮೇಲೂ ಪುನರ್ಜನ್ಮದ ಮೇಲೂ ವಿಶ್ವಾಸವಿದೆ

೨ ನನಗೆ ವರ್ಣಾಶ್ರಮಧರ್ಮದ ಮೇಲೆ ಭರವಸೆ ಇದೆ ಆದರೆ ನನ್ನ ಅರ್ಥವು ಬಹು ವಿಶಾಲವಾಗಿರುವುದು

೩. ನನಗೆ ಗೋರಕ್ಷಣೆಯ ವಿಶಾಲವಾದ ಅರ್ಥದ ಮೇಲೂ ನಂಬಿಕೆಯಿದೆ

೪ ನನಗೆ ಮೂರ್ತಿಪೂಜೆಯ ಮೇಲೆ ಭರವಸೆಯಿಲ್ಲದಿಲ್ಲ

ವೇದಗಳ ಹೆಸರನ್ನೆತ್ತುವಾಗ ಅವುಗಳು 'ಪವಿತ್ರ'ವೆಂದು ಹೇಳುವ ನಾನು ಬೇಕೆಂದು ಬಾಕಿಯಿಟ್ಟ ಕಾರಣ, ವೇದಗಳೇ ಮೊದಲಾದ ಗ್ರಂಥಗಳ ಬಾಹ್ಯ ಪಾವಿತ್ರ್ಯದಲ್ಲಿ ನನಗೆ ಭರವಸೆಯಿಲ್ಲ

ಬೈಬಲ್ ಕೋರಾನ್ ಜಂದವೆಸ್ತಗಳೂ ಕೂಡಾ ವೇದದಂತೆಯೇ ಪರಮಪಾವನವಾಗಿವೆಯೆಂದು ನನ್ನ ಮನೋಭಾವ ನನಗೆ ಹಿಂದೂ ಶಾಸ್ತ್ರಗಳ ಮೇಲೆ ಭಕ್ತಿಯಿದೆಯೆಂದ ಕೂಡಲೇ, ಅವುಗಳಲ್ಲಿರುವ ಪ್ರತಿಯೊಂದು ಶಬ್ದವನ್ನೂ ನಾನು ಶ್ರೇಷ್ಠವೆಂದು ಪರಿಭಾವಿಸಲಾರೆನು ಅಲ್ಲದೆ ಈ ಅಕ್ಷಯಕೀರ್ತಿ ಗ್ರಂಥಗಳ ಸಂಪೂರ್ಣ ಜ್ಞಾನವೂ ನನಗಿರಬೇಕಾಗುತ್ತದೆಂದು ನಾನು ಭಾವಿಸಲಾರೆ ನೈತಿಕವಿಚಾರಕ್ಕೂ ಮನೋಭಾವಕ್ಕೂ ವಿರೋಧವಾಗುವ ಯಾವ ಶಾಸ್ತ್ರೀಯ ನಿರೂಪಣೆಯನ್ನೂ ನಾನು 'ವೇದವಾಕ್ಯ'ವೆಂದು ಸ್ವೀಕರಿಸಲಾರೆ ಹೀಗಿದ್ದರೂ ಕೂಡಾ ಶಾಸ್ತ್ರಪುಸ್ತಕಗಳ ಪ್ರಮುಖಾಂಗವಾಗಿರುವ ಸತ್ಯಬೋಧನೆಯ ರಹಸ್ಯವನ್ನು ನೀವು ತಿಳಿದಿರಬೇಕು ಹಿಂದೂ ಗ್ರಂಥಗಳ ಸಂಪೂರ್ಣ ಮತ್ತು ಸಾರವತ್ತಾದ ಪರಿಜ್ಞಾನವು ತಮಗಿದೆಯೆಂದು ಈಗಿನ ಶಂಕರಾಚಾರ್ಯರೂ ಶಾಸ್ತ್ರಿಗಳೂ ಹೇಳುವದಾದರೆ ಅವರ ಅಂತಹ ಮಾತಿಗೆ ನಾನು ಒಪ್ಪಲಾರೆನು [illegible] ನಮಗೆ ಈ ಗ್ರಂಥಗಳ ವಿಷಯ ಕವಲು ವಿಶಾಲವಾದ ಭಾವವು ಪ್ರಕೃತದಲ್ಲಿ ಆಗಿರುವುದಿಲ್ಲ ಹಿಂದೂ ಗ್ರಂಥದ ಅರ್ಥವಿವರಣೆಯನ್ನು ನಾನು ನಿರ್ಧರಿಸುವುದಾದರೆ,—ಯಾರು ಅಹಿಂಸಾತತ್ವ, ಸತ್ಯ ಮತ್ತು ಬ್ರಹ್ಮಚರ್ಯದ ಅಗಾಧವಾದ ಪರಿಜ್ಞಾನವನ್ನು ಹೊಂದಿರುವುದಿಲ್ಲವೋ, ಅಂತಹವನು ಶಾಸ್ತ್ರವನ್ನರಿತವನಲ್ಲ ಯಾರು ಪ್ರಪಂಚದ ಆಸೆಯನ್ನು ತ್ಯಜಿಸಿರುವನೋ ಅವನು ಕೂಡಾ ಶಾಸ್ತ್ರಿಯಲ್ಲ ಗುರುಕುಲಗಳಲ್ಲಿ ನನಗೆ ಭರವಸೆಯಿದೆ ಆದರೆ ಈಗಿನ ಯುಗದಲ್ಲಿ ಮಿಲಿಯಗಟ್ಟಲೆ ಜನರು ಗುರುವಿಲ್ಲದಿರಬೇಕಾಗುತ್ತದೆ. ಕಾರಣ—ಸುಶಿಕ್ಷಿತರೊಳಗೆ ಸಮತಾಭಾವವು ಎಲ್ಲಿಯೂ ಕಂಡುಬರುವುದಿಲ್ಲ ಹಿಂದೂ ಗ್ರಂಥಗಳ ಜ್ಞಾನಸಾಧನೆಯನ್ನು ಮಾಡಿಕೊಳ್ಳಲು ಬಾಧಕವಿಲ್ಲ ಹಿಂದೂಧರ್ಮದ ತತ್ವಗಳು ಇನ್ನಿತರ ಮತಗಳಂತೆಯೇ ಸುಲಭಗ್ರಾಹ್ಯವೂ ಅರ್ಥಗರ್ಭಿತವೂ, ಅಚಂಚಲವೂ ಆಗಿವೆ ಪ್ರತಿಯೊಬ್ಬ ಹಿಂದೂವೂ ಭಗವಂತನ ಅಸ್ತಿತ್ವದಲ್ಲಿ ವಿಶ್ವಾಸವುಳ್ಳವನಾಗಿರುತ್ತಾನೆ ಅವನಿಗೆ ಪುನರ್ಜನ್ಮ ಸಂಬಂಧಗಳ ಮೇಲೂ ನಂಬಿಕೆಯಿದೆ ಹಿಂದೂಧರ್ಮದಲ್ಲಿ ಅತ್ಯುದಾತ್ತವಾದ ಒಂದು ಮತವಿರುವುದೆಂದರೆ—ವರ್ಣಾಶ್ರಮದ ಕರ್ತವ್ಯಂತಲೂ ಅದಕ್ಕಿಂತ ಗೋರಕ್ಷಣೆಯು

ವರ್ಣಾಶ್ರಮ.

ವರ್ಣಾಶ್ರಮವು ಮಾನವನಲ್ಲಿ ಆಜನ್ಮವಾಗಿರುವ ಒಂದು ಭೇದವು ಆದರೆ ಹಿಂದೂಮತವು ಮಾತ್ರ ಅದನ್ನು ಒಂದು ಶಾಸ್ತ್ರವಾಗಿ ಮಾರ್ಪಾಟುಗೊಳಿಸಿಕೊಂಡಿದೆ ಇದು ಮನುಷ್ಯನ ಜನ್ಮದೊಡನೆ ಸಂಸರ್ಗವನ್ನು ಮಾಡಿಕೊಂಡಿದೆ ಒಬ್ಬ ವ್ಯಕ್ತಿಯು ಸ್ವೇಚ್ಛಾನುಸಾರವಾಗಿ ತನ್ನ ವರ್ಣವನ್ನು ಬದಲಾಯಿಸಲಾರನು ತನ್ನ ವರ್ಣಧರ್ಮಾನುಸಾರವಾಗಿ ಒಬ್ಬನು ಆಚರಿಸುವುದಿಲ್ಲವಾದರೆ ಅವನು ತನ್ನ ಆಜನ್ಮ ನಿಬಂಧನೆಯನ್ನು ತಾತ್ಸಾರದೃಷ್ಟಿಯಿಂದವಲೋಕಿಸಿದಂತೆಯೇ ಸರಿ ವರ್ಣಾಶ್ರಮಧರ್ಮದಿಂದುಂಟಾದ ಜಾತಿಭೇದಗಳು ಶಾಸ್ತ್ರ ಪುರಾಣಗಳ ಆಧಾರಾನುಸಾರವಾಗಿ ಉತ್ಪನ್ನವಾದುವುಗಳು. ಚಾತುರ್ವರ್ಣಗಳು ಸಾಕಿದ್ದುವು

ಒಬ್ಬ ವ್ಯಕ್ತಿಯಲ್ಲಿಯ ಜನ್ಮಸಿದ್ಧ ಪಾವಿತ್ರ್ಯವು ಅವನು ಸಹಭೋಜನ, ಸಹವಿವಾಹವಾದರೆ ಕಳೆದುಹೋಗುವುದೆಂದು ನಾನು ತಿಳಿಯುವುದಿಲ್ಲ ಚಾತುರ್ವರ್ಣಗಳು ಒಂದೊಂದು ವರ್ಣದವರ ಕರ್ತವ್ಯ ಪರಿಪಾಲನೆಯನ್ನು ಬೋಧಿಸುತ್ತವೆ

[ಸಶೇಷ]

ALLIANZ UND STUTTGARTER
Life Insurance Bank. Ltd.
ಅಲಿಅನ್ಸ ಉಂಡ್ ಸ್ಟುಟಗಾರ್ಟರ ಲ್ಯಾಫ್ ಇನ್ಸೂರನ್ಸ
ಬೇಂಕ್, ಲಿಮಿಟೆಡ್.
(ಜರ್ಮನಿಯಲ್ಲಿ ಸನ್ ೧೮೯೦ರಲ್ಲಿ ಸ್ಥಾಪಿಸಲ್ಪಟ್ಟಿದು.)
ಒಟ್ಟು ವಿಮಾ ಹಣವು ೨೧೯ ಕೋಟ್ಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೬.೯೬ ಕೋಟಿ ರೂ ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು
ವಿಮಾ ಪತ್ರಕಗಳ ಕ್ಲೇಮಿನ ಕಾಯ್ದೆಟ್ಟ ಹಣವುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು
ಬೇಕಾಗಿದೆ ಧಾರವಾಡ, ವಿಜಾಪೂರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ, ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಮುಖ್ಯ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured.'

PLACE YOUR LIFE ASSURANCE WITH
THE SOUTH INDIAN.
Securing for your clients –
1 Low rates of Premium
2. Liberal Policy Conditions.
AND FOR YOURSELF
An Agency with attractive Terms
of Commission and Salary in
The South Indian
General Assurance Co, Ltd.,
Any where in CANARA DISTRICTS &
HYDERABAD STATE
For terms of Agency please apply to—
H R K IYENGAR
Chief Agent
The S I. G A Co, Ltd,
Sanyasiguddy, MANGALORE
Managing Agents –
K. C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್
ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ.
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ
ಮತ್ತು ಸೌಕರ್ಯಗಳಿವೆ!
ಪ್ರೀಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೈ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.
ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೆಯೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.
ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ ಕೆಮ್ಮು ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ
300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.
ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.
ವೈಶ್ವಾನರಾಸವ.
(ಕಾಲರಾ, ಪಾಂತಿಭೇದಿಗೆ ಸಿದ್ಧೌಷಧ)
ಮಾತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0
ಲಕ್ಷ್ಮೀವಿಲಾಸರಸ.
(ಪ್ಲೇಗಿಗೆ)
ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಶೀಘ್ರವಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ. 1—0—0.
ಶ್ರೀನಿವಾಸ ತೈಲ.
ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಹುಡುವಾಗುವುದಿಲ್ಲ ಮೊದಲು ಪೂರಾ ವಿಚಾರಮಾಡಿ ಔಷದ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೆಳವಾಮಾಹಿಮ ರಾಣೀ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ ಖರ್ಚು ೦|೦

ವಿಳಾಸ — ಸಂಜೀವಿನೀ ಔಷಧಾಲಯ. ಮು. ಪೊ. ಮಿರಜ, S. M. C

'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.

ಹಿಸ್ ಟೆರ್ಕೈನ್.

ಮೆದಳು-ಶಕ್ತಿಗೆ ಅಮೋಘ ಮದ್ದು

ಹಿಸ್ಟೀರಿಯಾ ನಿದ್ರೆ ಇಲ್ಲದಿರವಿಕೆ ಹುಚ್ಚುಗಳಿಗೆ ದಿವ್ಯ ಮದ್ದು

ಕ್ರಯ—ಬಾಟ್ಲಿಗೆ ರೂ 2 8

ವಿ ಪಿ ಖರ್ಚು ಪ್ರತ್ಯೇಕ

ದಿ ಈಸ್ಟರ್ನ್ ಲ್ಯಾಬೊರೆಟರಿ,
ಗಾಝಿಪುರ ಸಂಯುಕ್ತ ಪ್ರಾಂತ್ಯ

ಫ್ಲೋ ಟೊಗಿನ್.

ಮಕ್ಕಳಿಲ್ಲದ ಸಂತಾನಕೆಟ್ಟಿಂದ ನ. ಸೂನುಗಳಿಲ್ಲದ ಮನೆ ಕಾನನಕ್ಕೆ ಸಮಾನ ಬಾಣಂತಿಯರಿರುವಾಗ ಆಗುವ ನೋವುಗಳಿಗೆ ಅದ್ವಿತೀಯ ಮದ್ದು ಗರ್ಭವನ್ನೂ ತಾಯಿಯನ್ನೂ ಪಾಲಿಸುತ್ತದೆ ಹೆಂಗೆ ನೋವನ್ನು ಕಡಿಮೆಮಾಡಬೇಕೇ? ಗರ್ಭಸ್ರಾವವನ್ನು ನಿಲ್ಲಿಸಬೇಕೇ? ಇದನ್ನು ತೆಗೆದುಕೊಳ್ಳಿರಿ

ಕ್ರಯ ಬಾಟ್ಲಿಗೆ ರೂ 1 4 ವಿ ಪಿ ಖ ಬೇರೆ

THE EASTERN LABORATORY,
GHAZIPUR U P INDIA

Angel's Insurance Company Ltd., Delhi.

ಏಂಜಲ್ಸ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ಡಿಲ್ಲಿ.

ದೇವತೆಗಳ ಸಹಾಯವು ನಿಮಗಿರಲಿ!

ನೀವು ಮುದುಕರಾಗುವಾಗ ನಿಮ್ಮನ್ನು ರಕ್ಷಿಸಲು ಕಂಭ!

ಇತ್ತ ನೋಡಿ! ಇತ್ತ ನೋಡಿ!!

ನೀವು ಈಗಲೇ ತಕ್ಕ ವ್ಯವಸ್ಥೆಯನ್ನು ಮಾಡದೆ, ನಿಮ್ಮ ಮೇಲೆ ಹೊಂದಿಕೊಂಡಿರುವ ಕುಟುಂಬದವರ ನಿಮ್ಮ ನಂತರ ಜೀವನ ಜಲಧಿಯಲ್ಲಿ ತೇಲಾಡಿ ಬಳಲಲು ನೀವು ಬಿಡಬಹುದೇ? ಈ ದಿನವೇ ನಮ್ಮ ಬಳಿಗೆ ಬನ್ನಿ!—ಹಲ್ಲಿದ್ದಾಗಲೇ ಕಡಲೆ ತಿನ್ನಿ "Angels thrift" ಮತ್ತು "Juvenile (ಜುವೆನಿಲ್) ಕ್ರಮದ ಮೂಲಕ ನೀವು ದಿನ ಕೆಲ್ಯಂದಾಣೆ ನಮ್ಮ ಜೋಕೆಯಿಟ್ಟರೆ ನಿಮ್ಮ ಕುಟುಂಬವು ಸಂರಕ್ಷಿಸಲ್ಪಟ್ಟೀತು.

ಪತ್ರಕಗಳಿಗೆ ಈ ಕೆಳಗಿನವರಿಗೆ ಇಂದೇ ಬರೆಯಿರಿ

ಆರೋನ್ ಜಿ. ಮಾಬೆನ್, ಮಾಬೆನ್ ಎಂಡ್ ಸನ್ಸ್, ಜನರಲ್ ಮರ್ಚೆಂಟ್ಸ್

ಸೋಲ್ ಡಿಸ್ಟ್ರಿಬ್ಯೂಟರ್ಸ್: ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಉದಿಯಾವರ, ಉಡುಪಿ, ದ. ಕ

ಹತ್ತಿಬೀಜ, ಬೇಸಾಯದ ಸ್ವದೇಶಿ ಸಾಮಗ್ರಿಗಳು, ಮನೆಗಳಿಗೆ ಆಸ್ಪತ್ರೆಗಳಿಗೆ ಬೇಕಾದ ಮದ್ದುಗಳನ್ನು ಮಾರುವವರು, ಮತ್ತು

ಜೀವವಿಮೆ ಏಜಂಟರು

ಒರ್ಡಿನೆನ್ಸುಗಳು ಚಿರಾಯುವಾಗಲಿ ದೇವ!

"ಒರ್ಡಿನೆನ್ಸುಗಳು ಹೋಗಲ್ಲಿ! ಹೋಗಲಿ!! ಹೋಗಲಿ!!!" ಎಂದು ಹಿಂದೂದೇಶದಲ್ಲೂ, ಇಂಗ್ಲಾಂಡಿನಲ್ಲೂ ಛೀಟ್! ಅಹ್ಹಟ್!! ಕಾಂಗ್ರೆಸ್ಸಿನವರೂ ಮೊಡರೇಟುಗಳೂ, ಅವರೂ, ಇವರೂ ಎಲ್ಲರೂ ಹೇಳುವುದು "ಒರ್ಡಿನೆನ್ಸ್ ಚಲೇಜಾವೋ!" ಎಂದು, ಆದರೆ ನಾನೊಬ್ಬನು ಹೇಳುವುದು — ಬೇಡುವುದು 'ಒರ್ಡಿನೆನ್ಸುಗಳು ಚಿರಾಯುವಾಗಲಿ ದೇವ!" ಎಂದು

+ + + +

ನಿಲ್ಲಿ! ನಿಲ್ಲಿ! ನಾನು ಹೀಗೆಂದೆನೆಂದು ನಿಮ್ಮ ಮುಖ ಬಾತುಕೊಳ್ಳುವುದು ಬೇಡ ಅದನ್ನು ಮೊದಲು ಸಣ್ಣಗೆ ಮಾಡಿಕೊಳ್ಳಿ — ಕೋಪಿಸಬೇಡಿ, ಕೋಪವೆಂಬುದು ನಿಮಗೂ ನಿಮ್ಮ ಹಿರಿಕಿರಿಯರಿಗೂ ಹಿಂದೂದೇಶದ ದೊರೆಗಳಿಗೂ ಇಂಗ್ಲಾಂಡಿನವರಿಗೂ ಕೆಟ್ಟದು ಒರ್ಡಿನೆನ್ಸುಗಳು ಬೇಕು, ಯಾಕೆ ಬಲ್ಲಿರಾ?

+ + + +

ಸ್ವಾತಂತ್ರ್ಯವೆಂಬುವದೊಂದು ದೂರದ ದೇಶವೆಂದು ಭಾವಿಸಿಕೊಳ್ಳಿ ಅಲ್ಲಿಗೆ ನೀವು ಹೋಗಬೇಕೆಂದು ತಿಳಕೊಳ್ಳಿ ಆ ದೇಶದ ಕಡೆಗೆ ನೀವು ಇಷ್ಟರ ತನಕ ನಡೆದು, ನಡೆದು ನಿಮ್ಮ ಕಾಲು ಬಚ್ಚಿಹೋಯಿತು ಎಂದು ನೆನಸಿಕೊಳ್ಳಿ ಹೀಗಾಗುವಾಗ ಸರ್ ಹೋರರು ನಿಮಗೆ ಅಬ್ಬರದ ಕುದುರೆಯನ್ನು ಕೊಟ್ಟರೆಂದು ತಿಳಿದುಕೊಳ್ಳಿ ಈಗ ಒಂದು ಪ್ರಶ್ನೆ —ಬರೇ ಕಾಲ್ನಡೆಯಿಂದ ನೀವು ಸ್ವಾತಂತ್ರ್ಯದೇಶವನ್ನು ಬೇಗ ಮುಟ್ಟುವಿರೋ ಅಥವಾ ಕುದುರೆಯ ಮೇಲೆ ಕೂತೋ?

× × × ×

'ಕುದುರೆಯ ಮೇಲೆ ಕೂತರೆ ಸ್ವಾತಂತ್ರ್ಯದೇಶವನ್ನು ಬೇಗ ಮುಟ್ಟಬಹುದು" ಎಂಬುದು ನಿಮ್ಮ ಉತ್ತರವಾಯಿತು ಹಾಗಾದರೆ ಸರ್ ಹೋರರೂ ವೈಸರಾಯರೂ ಕೂಡಿ ಒರ್ಡಿನೆನ್ಸು ಕುದುರೆಗಳನ್ನು ಕೊಟ್ಟುದರಿಂದ ಎಷ್ಟು ಸುಖವಾಯಿತು! ಒರ್ಡಿನೆನ್ಸುಗಳಿಗೆ ಜೈ! ಸರ್ ಹೋರರಿಗೆ ಜೈ! — ವೈಸರಾಯರಿಗೆ ಜೈ!! ಚರ್ಚಿಲ್ಲರಿಗೆ ಮೂರು ಸಲ ಜೈ - ಪಾರ್ಲಿಮೆಂಟಿನ ಎಲ್ಲಾ ಸದಸ್ಯರಿಗೆ ನೂರಾರು ಸಲ ಜೈ!!!

× × × ×

ಎಷ್ಟರ ತನಕ ಒರ್ಡಿನೆನ್ಸುಗಳಿವೆಯೋ ಅಷ್ಟರ ತನಕ ಹಿಂದೂದೇಶಕ್ಕೆ ಸುದಿನ! ಎಷ್ಟರ ತನಕ ಅವುಗಳು ಇಲ್ಲವೋ ಅಷ್ಟರವರೆಗೆ ನಮಗೆ **ದುರ್ದಿನ** ನನ್ನ ಮಾತು ಸುಳ್ಳೆಂದು ತಿಳಕೊಳ್ಳಬೇಡಿ ನನ್ನ ಮಾತಿನ ಅರ್ಥವು ನಿಮಗೆ ಕೆಲವು ವರ್ಷಗಳ ನಂತರ ತಿಳಿದೀತು

+ + + ×

ಹಿಂದೂ ಧರ್ಮವು ಎಷ್ಟೋ ಮಿಶನರಿಗಳಿಂದ ಕಳಂಕವಾಯಿತು ಆದರೆ ಹಿಂದೂಮತವು ಧ್ವಂಸವಾಗಲಿಲ್ಲ ತಮ್ಮ ಧರ್ಮವು ಹಾಳಾಗುತ್ತಿದೆಯೆಂದು ಹಿಂದೂಗಳು ಪ್ರಚಾರಕಾರ್ಯವನ್ನು ಮಾಡಲಿಲ್ಲ— ಮಾಡುವುದೂ ಇಲ್ಲ ಮಿಶನರಿಗಳ ಆಟವು ಪುಷ್ಟವಾದ ಹಿಂದೂತ್ವವನ್ನು ನಾಶಮಾಡಲಾರದು

+ + + +

ಹಾಗೆ ನಮ್ಮ ಸ್ವಾತಂತ್ರ್ಯವು ಹೋಯಿತೆಂದು ನಾವು ಕ್ರಾಂತಿಯನ್ನೆಬ್ಬಿಸಬಾರದು ಸಮಾಧಾನದಿಂದಿರಬೇಕು ಎಲ್ಲವೂ ನಮ್ಮ ಕೈವಶವಾಗುವ ಕಾಲವು ಸಮೀಪಿಸುತ್ತಿದೆ ನಮ್ಮ ಪ್ರಯತ್ನಗಳು ಅಗತ್ಯವಿಲ್ಲ God helps those who help themselves!

× + + +

ಹಿಂದೂದೇಶದ ಜನರ ಮೇಲೆ ಬ್ರಿಟಿಷರು ಬಿಸಿ ಬಿಸಿ ಅಧಿಕಾರವನ್ನು ನಡೆಸಲು ಕಾರಣವೇನು ಗೊತ್ತಿರುವುದೇ? — ನಾನು ಮೊದಲೆಂದಂತೆ ನಮ್ಮ ಪುಣ್ಯವೇ ಅವರು ನಮ್ಮನ್ನು ಎಷ್ಟು ದಣಿಸಿದರೋ ಅಷ್ಟು ನಮ್ಮಲ್ಲಿ ಒಳ್ಳೆ exercise ಆಗಿ ನಮಗೆ ಶಕ್ತಿ ಬರುತ್ತದೆ

+ + + +

ಸಾರ್ಜಂಟರು ಪೋಲೀಸರನ್ನು ಕವಾತು, ಲಾಠೀಚಾರ್ಜುಗಳಲ್ಲಿ ಹೇಗೆ ತರ್ಬೇತುಗೊಳಿಸುತ್ತಾರೋ ಹಾಗೆ ಬ್ರಿಟಿಷರೂ ನಮ್ಮನ್ನು ತಮ್ಮ ದಬ್ಬಾಳಿಕೆಯ ಸಮ್ಮರ್‌ಸೋಲ್ಟ್‌ಗಳಿಂದ ತರ್ಬೇತುಗೊಳಿಸುತ್ತಿದ್ದಾರೆ— ಆದರ ಈ ರೀತಿಯ ತರ್ಬೇತಿನಿಂದಾಗಿ ನೋಡಿ ನನ್ನ ಕೈಯ ಮಸಲಿಸ್ (muscle) ಎಷ್ಟು ಗಟ್ಟಿಯಾಗಿದೆ

+ + + +

ಲಂಡನಿನ ನ್ಯೂ ಸ್ಟೇಟ್ಸ್‌ಮೇನ್ ಎಂಬ ಪತ್ರಿಕೆಯು ಸರಕಾರದ ವರ್ತನೆಯನ್ನು ಟೀಕಿಸುತ್ತಾ, "ಈ ಒರ್ಡಿನೆನ್ಸು ರಾಜ್ಯದಿಂದಾಗಿ 'England will have no friends left" ಅಂದರೆ 'ಇಂಗ್ಲಾಂಡಿಗೆ ಒಬ್ಬ ದೋಸ್ತಿಯೂ ಸಿಗಲಿಕ್ಕಿಲ್ಲ" ಎಂದಿದೆ ಅಂತೆಯೆ ಕಾಂದರೂ ಶೌಕತಾಲಿಯವರೂ ಇಂಗ್ಲಾಂಡಿನ ಪಕ್ಷವಿರಬಹುದೆಂದು ಇದಕ್ಕೆ ಗೊತ್ತಿಲ್ಲ ಕಾಣುತ್ತೆ.

'ಸ್ವಾಟ'

THE SOUTH INDIA
CO-OPERATIVE INSURANCE SOCIETY
LIMITED MADRAS

LOCAL BOARD.—

THE SOUTH CANARA CENTRAL
CO OPERATIVE BANK LTD MANGALORE

Applications are invited for Sub Agents from capable and energetic persons and Co-operative Institutions to canvas business on behalf of the Local Board of the Society at Mangalore

FOR TERMS APPLY TO

The Secretary,
South Canara Central Co operative
Bank Ltd KODIALBAIL (P O) (Mangalore)
SOUTH CANARA

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ
(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಠೇವಿಫಂಡುಗಳೂ ನಡೆಯುಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು

ಎಂ ಮುಖ್ಯಪ್ರಾಣಭಟ್ಟ ಪ್ರೊಪ್ರೈಟರ್

ENCOURAGE INDIAN COMPANIES AND INDUSTRIES.

SWADESHI MEANS PROVIDING
FOOD FOR STARVING MILLIONS
DEAL IN INDIAN GOODS AND KEEP
INDIAN MONEY IN INDIA

M V KAMATH
SWADESHI PRACHARAK SANGHA
Kasargod S C

ದಿ ಖಾದಿ ವರ್ಕ್ಸ್ ಮತ್ತು
ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.
(REGISTERED UNDER COMPANY'S ACT 1913)
ಕಾಸರಗೋಡು, ದ ಕನ್ನಡ
ಮೂಲಧನ ರೂಪಾಯಿ 50 000—0—0
ಪಾಲು 1ಕ್ಕೆ ರೂಪಾಯಿ 10—0—0 ರಂತೆ
5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸ ವಂತೆ ಸಹಾಯ ರಾಗಿ ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯು ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿರುವ ಒಂದು ಕಂಪೆನಿಯು ಇಲ್ಲವೆಂಬ ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿಗಳೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನುಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯುಳ್ಳದಾಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳ ರಖಂ ವ ತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧವಿದೆ

ಶೇರ ಫಾರ್ಮ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ —

ಮೆನೇಜಿಂಗ್ ಡೈರೆಕ್ಟರ್
ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್
ಕಾಸರಗೋಡು, ದ, ಕ

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.
Head Office — **MANGALORE**

Established July 1906 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

***BRANCHES* -Karkal Kasargod Cochin Udipi Gangolli Coondapur Bombay Puttur Calicut & Alleppey**

ಬ್ರಾಂಚುಗಳು —
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲೆಪೆ

Authorised Capital	10 00000—0—0	ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ 10 [illegible] —
Issued & paid up Capital	300 000—0 0	ಚಂದಾ ಕೂಡಿದ ಮತ್ತು ಕೊಟ್ಟ ಶೇರು ಮೂಲಧನ ರೂ 30 [illegible] 0 —
Reserve and other sinking Funds Rs	526 000 0 0	ರಿಸರ್ವ ಮತ್ತು ಇತರ ಫಂಡುಗಳು 526 00 0 —
Amount invested on G P Notes Rs	2 0 092—12 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ [illegible] 92— 2
Rates of interest on fixed deposit at Head Office and Branches are 6% for 2 Years 5¼ 1 Year		[illegible]

Current Account Deposits received and interest allowed on daily balance of Rs 50 and above that on multiple of Rs 10 @ 3% from 1st January to 30th June and @ 2½ from 1st July to 31st December No interest will be allowed unless the deposit to each not less than Rs 5 during a period of months ending either 30th June or 31st December in any year

Except by special arrangement no interest is allowed on sums exceeding Rs 10 000 in the case of Head Office and Cochin Branch and on sums exceeding Rs [illegible] 000 in the case of Bombay Branch and on sums exceeding Rs [illegible] in the case of other Branches

For further particulars please apply to —

Office of the Bank,
Mangalore 17-[illegible]-1932

K. Venkat Rao.
Secretary & Treasurer

The Pangal Nayak Bank, Ltd.

Head Office Udipi
Established 19[illegible]
Branch Office Mangalore

Authorised Capital Rs 2 00,000	Paid up Capital Rs 75 000
Issued Capital Rs 1 75 000	Reserve and other Funds Rs 1,80 000

NOTICE.

Advances on pledge of Gold ornaments at 8%

Fixed deposits received at following rates

3 months 4½	6 and 9 months 5
1 year and above 5½	2 years 6

Office of the Bank
Udipi 1-[illegible]-32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಮಡುಕ
ಮೂವತ್ತು	ರಲ್ಲಿ	ಮುಟ್ಟಿದ
ನಲವತ್ತಾ	ದಾಗ	ನರಳುವಿಕೆ
ಐವತ್ತು	ಆದರೆ	ಆಲಸ್ಯ
ಅರುವತ್ತು	ಹೋದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಅವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ ಡಬ್ಬಿ 1ಕ್ಕೆ ಕ್ರಯ ರೂ 1—0—0.

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿರಿ

ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್ ಮದ್ರಾಸ್

ಮದನಮಂಜರಿ ಮಾತ್ರೆಗಳ ಏಜಂಟರು — ಬಿ ಪಿ ಚಂದರಾವ ಮರ್ಕೆಟ್ ರೋಡು ಮಂಗಳೂರು

ಹೋರರ ಭರತವಾಕ್ಯ.

ಇಂಡಿಯಕ್ಕೆ ನೂತನ ರಾಜ್ಯಭಾರಕ್ರಮವನ್ನು ಕೊಡುವುದಕ್ಕಾಗಿ ಕಂಕಣಬದ್ಧರಾದ ಹೋರರು ಇಷ್ಟು ದೇವತೆಗಳಾದ ಕನ್ಸರ್ವೇಟರರನ್ನು ಪ್ರಾರ್ಥಿಸಿ, ಆಶೀರ್ವಾದ ಪಡೆದು, ಪ್ರಾಚೀನ ಸೈಮನ್ ರಿಪೋರ್ಟಿನ, ಸರ್ವರೂ ಸಾಮಾನ್ಯವಾಗಿ ತಿರಸ್ಕರಿಸಿದ ಅಮೂಲ್ಯ ಕ್ರಮವನ್ನೇ ತಾವೇ ತಾವಾಗಿ ನಿರಂಕುಶವಾಗಿ ಸದ್ಯದಲ್ಲಿಯೇ ಜಾರಿಗೆ ತಂದು ಹಿಂದೀಯರನ್ನು ಕಾಣುವ ಕ್ರಮಗಳಂತೆ ಪಾರ್ಲಿಮೆಂಟಿನ ಅಂಕೆಗೆ ಒಳಗಾಗಿ, ಇಂಗ್ಲೆಂಡ್ ಪ್ರೀತ್ಯರ್ಥವಾಗಿ ಸುಸ್ಥಿರಗೊಳಿಸುವುದಾಗಿ ತಮ್ಮ ಭರತವಾಕ್ಯವನ್ನು ನುಡಿದರು. ೬ ತಿಂಗಳುಗಳಿಂದಲೂ ಅತಿ ಕಠಿಣ ಅಡಚಣೆ ನಿವಾರಣೆಗೆಂದು ಕೈಕೊಂಡ ಒರ್ಡಿನೆನ್ಸ್ ವ್ರತಗಳು ಇನ್ನೂ ಸುಫಲ ಕೊಟ್ಟಿಲ್ಲವೆಂದು ಜುಲಾಯಿ ೩ನೇ ತಾರೀಕಿನಲ್ಲೂ ಅದೇ ಅಡಚಣೆ ಇರುವುದಾಗಿ ಪುನಃ ಅದೇ ವ್ರತವು ಮುಂದೆ ಸಾಗುವಂತೆಯೂ ಆಯಿತು. ವಿವೇಕವುಳ್ಳ ಒಂದೇ ಒಂದು ಪಕ್ಷದವರಾದರೂ ಈ ಭರತವಾಕ್ಯದಿಂದ ತೃಪ್ತಿಹೊಂದಿಲ್ಲ. ಢಿಲ್ಲಿಯಲ್ಲಿ ಪ್ರಜೆಗಳ ಸಭೆ ಎಂಬ ಎಂಟಕ್ಷರದ ಸಂಘವೊಂದು, ಸರಕಾರದ ಕಿವಿ ಕೇಳುವ ಮುಸಲ್ಮಾನರೊಬ್ಬರು ಇವರಿಬ್ಬರು ಮಾತ್ರ ಆನಂದ ತುಂದಿಲರಾಗಿರುವರು. ಇಷ್ಟರಿಗಾದರೂ ತೃಪ್ತಿಯಾಯಿತಷ್ಟೆ!

ಹುಮಾಯೂನ್ ಕಬೀರ್‌ಕೀ ಜೈ!

ನಮ್ಮ ದೇಶದ ಪ್ರತಿಯೊಂದು ಸಮಾಜದ ಯುವಕರು ನಿರ್ವಿವಾದವಾಗಿ ಕೈಕೊಳ್ಳಬಹುದಾದ ಕೆಲವು ಕಾರ್ಯಕ್ರಮಗಳನ್ನು ಕಲ್ಕತ್ತದ 'ಮುಸ್ಲಿಮ್ ಇನ್ಸ್ಟಿಟ್ಯೂಟ್ ಹೋಲ್' ಎಂಬಲ್ಲಿ ಸೇರಿದ ಸಭೆಗೆ ಶ್ರೀಯುತ ಹುಮಾಯೂನ್ ಕಬೀರರು ಭಾಷಣ ಮೂಲಕ ವಿವರಿಸಿದ್ದಾರೆ. "ಒಂದು ಸಮಾಜವು ಇನ್ನೊಂದನ್ನು ಶಾಶ್ವತವಾಗಿ ಕೆಳಗೊತ್ತಬಹುದು ಎಂದು ಭಾವಿಸುವವರು ಮೂಢರು, ಒಂದು ಸಮಾಜವು ಮತ್ತೊಂದನ್ನು ನಿರ್ಮೂಲಗೊಳಿಸಬಹುದೆಂದು ಎಣಿಸುವವರು ಹುಚ್ಚರು. ಸಾಮಾಜಿಕ ಸಮಸ್ಯೆಯನ್ನು ಪ್ರತ್ಯೇಕ ಚುನಾವಣೆ, ಸಮಾಜೀಯ ಸಂಘಗಳು ಮೊದಲಾದವುಗಳಿಂದ ಇತ್ಯರ್ಥಿಸಲಾಗುವುದಿಲ್ಲ. ಹೀಗೆ ಮಾಡಿದರೆ, ಉಭಯತರಲ್ಲಿ ಸಾಮಾನ್ಯ ಆದರ್ಶಗಳೂ ಒಮ್ಮುಖವಾದ ಭಕ್ತಿಯೂ ಬೆಳೆಯಲಾರವು. ಇತರ ಸಮಾಜಗಳ ಜನರೊಡನೆ ನಾನು ಸ್ಪರ್ಧಿಸಬೇಕಾದರೆ, ನನ್ನನ್ನು ಗ್ಲಾಸಿನ ಪೆಟ್ಟಿಗೆಯೊಳಗಿಟ್ಟು, ಅತೀ ಕೋಮಲವಾದ ಪದಾರ್ಥಗಳನ್ನು ಬಲು ಜಾಗರೂಕತೆಯಿಂದ ಕಿನ್ನಿಸಿ, ಬೆಳೆಸಬೇಕೆಂದು ಹೇಳಿದರೆ, ಅದಕ್ಕಿಂತಲೂ ನಾಚಿಕೆಗೇಡಿನ ಮಾತು ನನಗೆ ಬೇರೊಂದಿರಲಾರದು. ಇಂತಹ ಸಮಸ್ತ ಸಮಾಜಗಳೂ ಒಂದಾಗಿಯೇ ಬಾಳಬೇಕೆಂದು ಬೋಧಿಸುವ ಅಭಿಪ್ರಾಯಗಳೂ ಯಾವ ಯುವಕನ ಬಾಯಿಂದ ಹೊರಗೆ ಬೀಳುವುವೋ ಅವನೂ ಅವನ ಸಮಾಜವೂ ಅವನ ದೇಶವೂ ಧನ್ಯ

ಬರೀ ಮಕ್ಕಳಾಟಿಕೆ.

'ಮಹಾತ್ಮಾಗಾಂಧಿಯವರೂ ಅವರ ಮಿತ್ರರೂ ಜೈಲಿನಲ್ಲಿ ಸೇರು ಹೋರರ ಮೊನ್ನೆಯ ಭಾಷಣವನ್ನು ತರ್ಕಿಸುವಂತಾಗಬೇಕು'-ಎಂದು ಲೆನ್ಸ್‌ಬರಿಯವರು ಪಾರ್ಲಿಮೆಂಟಿನಲ್ಲಿ ನುಡಿದ ಮಾತು ನಮಗೆ ಚೋದ್ಯ ಮಾತ್ರವೇ ಅಲ್ಲದೆ ಕುಚೋದ್ಯವೂ ಎನಿಸುತ್ತದೆ. ಮೊಡರೇಟರೂ ಸಹ ಕಣ್ಣೆತ್ತಿ ನೋಡಲಾರದ, ಶ್ರೀನಿವಾಸ ಶಾಸ್ತ್ರಿಗಳಂತಹ 'ನೀತಿಜ್ಞರು' ಹಿಡಿಯಹಾಕಿದ ಆ ಭಾಷಣ ಪ್ರಸ್ತಾಪಗಳನ್ನು ಕಾಂಗ್ರೆಸ್ಸಿನವರು ಚರ್ಚಿಸುವರೆಂಬುದು ಇರಲಿ. ಅವುಗಳ ಮಾತೆತ್ತಿದರೆ, ಅವರಿಗೆ ಓಕರಿಕೆ ಹತ್ತುವುದು. ಹೋರರ ಧೂರ್ತತನವೇ ಇಂಡಿಯಾ ಮತ್ತು ಇಂಗ್ಲೆಂಡ್ ಇನ್ನೂ ಇನ್ನೂ ದೂರಗೊಳ್ಳುವ ಹಾಗೆ ಅವರು ಮಾಡಿದ ಈ ಭಾಷಣವನ್ನು ಬೇಕಾದಂತಹ ಸ್ವರ್ಣಾಕ್ಷರಗಳಿಂದ ಸರಕಾರವು ಮುದ್ರಿಸಿ ಕೊಟ್ಟರೂ ಜನತೆಯು ಇವನ್ನು ಓದಿ ನೋಡಲು ಒಪ್ಪುವುದಾಗಿ ಸುಲಭವಾಗಿ ನಂಬಲಾಗುವುದಿಲ್ಲ. ಅರುವತ್ತೋ ಎಂಭತ್ತೋ ಸಾವಿರ ಜನರು ಜೈಲುಪಾಲಾದುದು ಇಂತಹ ಕುತ್ಸಿತವಾದ ಭಾಷಣಗಳ ಚರ್ಚೆಮಾಡಲು ಅನುಕೂಲವಾಗಬೇಕೆಂಬುದೇ?

ಅಯರ್ಲೆಂಡಿನಲ್ಲಿ ಪಟೇಲರು

ಎಸೆಂಬ್ಲಿಯಲ್ಲಿ ಅಧ್ಯಕ್ಷರಾಗಿದ್ದಾಗ ನಮ್ಮ ಪಟೇಲರು ಇಡೀ ಹಿಂದೂದೇಶಕ್ಕೊಬ್ಬರು ಪಟೇಲರಾಗಿದ್ದರು. ನ್ಯಾಯವೂ ನಿಷ್ಪಕ್ಷಪಾತವೂ ಆದ ತೀರ್ಮಾನಗಳು ಅವರ ಕೈಯಿಂದ ನಿರ್ದಾಕ್ಷಿಣ್ಯವಾಗಿ ಶಾಸನವಾಗಿ ಎಷ್ಟೋ ಸಲ ಸರಕಾರದಲ್ಲಿ ಪ್ರಕ್ಷೋಭೆಯನ್ನೂ ಉಂಟುಮಾಡಿದೆ. ಇರಲಿ, ಈಗ ಅಯರ್ಲೆಂಡಿನವರು ಪ್ರತಿ ವರ್ಷವೂ ಬ್ರಿಟಿಷ ಸರಕಾರಕ್ಕೆ ಕೊಡಬೇಕಾಗಿದೆಯನ್ನುವ ಮೂರು ಮಿಲಿಯ ಪವನುಗಳನ್ನು ಅದು ನ್ಯಾಯಸಮ್ಮತವೆಂದು ನಿಷ್ಪಕ್ಷವಾಗಿ ತೀರ್ಮಾನಿಸಬಲ್ಲವರು ಹೇಳಿದರೆ ಕೊಡಬಹುದಲ್ಲದೆ ಅನ್ಯಥಾ ಇಲ್ಲ, ಎಂದು ಡಿವೇಲರು ನುಡಿದರು. ನಮ್ಮ ಪಟೇಲರು ತೀರ್ಮಾನಿಸಿದಂತೆಯೇ ನಡೆಯುವುದಾಗಿ ಡಿವೇಲರು ತಿಳಿಸಿದರು. ಬ್ರಿಟಿಷ ಸರಕಾರವು ವಸಾಹತುಗಳ ಪ್ರತಿನಿಧಿಗಳ ಮೂಲಕ ತೀರ್ಮಾನಿಸಿಕೊಳ್ಳಬೇಕೆಂದಿತ್ತು. ಹೀಗಾಗಿ ಡಿವೇಲರ ಸೂಚನೆಗೊಪ್ಪದೆ, ಅಯರ್ಲೆಂಡಿನ ಸರಕುಗಳ ಮೇಲೆ ಸೇಕಡಾ ನೂರರ ಸುಂಕ ಹೊರಿಸಿ, ಅದರಿಂದ ಹುಟ್ಟುವ ಹಣವನ್ನು ಈ ಮೂರು ಮಿಲ್ಲಿಯದ ಲೆಕ್ಕಕ್ಕೆ ಬರೆದುಕೊಳ್ಳುತ್ತೇವಾಗಿ ಹೆದರಿಸಿ ಬಿಟ್ಟಿದ್ದಾರೆ. ಇದರಿಂದ ಅಯರ್ಲೆಂಡಿನಲ್ಲಿ ಗೋಳಾಟ ಎಂದು ಪ್ರಕಟಿಸಲಾಗಿದೆ-ಮಾತ್ರ ನಿಜಸ್ಥಿತಿ ಏನೆಂದರೆ, "ನಿಷ್ಪಕ್ಷವಾದ ತೀರ್ಮಾನಕ್ಕೆ ಬ್ರಿಟಿಷ ಸರಕಾರವು ಒಪ್ಪುವುದಿಲ್ಲವಾದರೆ, ಅಯರ್ಲೆಂಡಿನವರು ತಮ್ಮ ಸರ್ವ ಶಕ್ತಿಗಳನ್ನೂ ಒಂದುಗೂಡಿಸಿ ಬ್ರಿಟಿಷರ ಈ ಸುಂಕಕ್ಕೆ ಪ್ರತೀಕಾರವನ್ನು ಮಾಡುವರು" ಎಂದು ಅಯರ್ಲೆಂಡಿನ ಪ್ರತಿನಿಧಿಗಳೊಬ್ಬರು ಪಾರ್ಲಿಮೆಂಟಿಗೆ ತಿಳಿಸಿದ್ದಾರೆ. ಪಟೇಲರನ್ನೂ ಡಿವೇಲರು ಕರೆದುಕೊಂಡಿದ್ದಾರೆ. ಸ್ವದೇಶದ ಗೌರವಕ್ಕಾಗಿ ಹೋರಾಡಿದರಿವರು ಎಂದು ಡಿವೇಲರು ನುಡಿದು ಅಯರ್ಲೆಂಡಿನವರಿಗೆ ಇವರ ಪರಿಚಯ ಮಾಡಿಕೊಟ್ಟಿದ್ದಾರೆ.

ಮಾಜೀ ಎಕ್ಟಿಂಗ್ ಗವರ್ನರ್

ಟೇಂಬೆಯವರು ಹೋರರ ಭಾಷಣದಲ್ಲಿ ವಿಚಿತ್ರವೇನನ್ನೂ ಕಾಣದೆ, ಎಣಿಸಿದಂತೆಯೇ ಆಗಿದೆ ಎಂದು ಅಭಿಪ್ರಾಯಪಡುವರು. ಇವರ ಅಭಿಪ್ರಾಯದಂತೆ ಸ್ಥಳೀಯ ರಾಜರುಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ಇತರ ಹಿಂದೀ ಪ್ರಜೆಗಳಿಂದ ಇವರನ್ನು ಪ್ರತ್ಯೇಕಿಸಿ ಭಾರತವರ್ಷವನ್ನು ಆಳಬೇಕು ಎಂಬ ಆಕಾಂಕ್ಷೆಯು ಕನ್ಸರ್ವೇಟಿವರಲ್ಲಿ ತುಂಬಾ ಇದೆ. ಏಕೆಂದರೆ ಚರ್ಚಿಲ್ಲರು ಹೇಳಿದ ಹಾಗೆ ಸಮಾಜಗಳನ್ನು ವಿಭಾಗಿಸಿ ನಾವು ಆಳುವುದು ಸಹಜ. ಇಲ್ಲದಿದ್ದಲ್ಲಿ ಸಮಾಜಗಳನ್ನು ಒಂದುಗೂಡಿಸಿ ನಾವು ಇಂಡಿಯದಿಂದ ಹೊರಡಬೇಕಾಗುವುದು ಎಂಬುದೇ ಕನ್ಸರ್ವೇಟಿವ್ ಸರಕಾರದ ಧೋರಣೆಯಾಗಿದೆ ಎಂದು ಇವರ ಅಭಿಪ್ರಾಯ ಒರೆದಿರುವರು.

ಮೊಡರೇಟರರಿಗೆ ಬುದ್ಧಿವಾದ

ಕತ್ತಲುಗವಿಯಲ್ಲಿ ಬೆಳಕು ಇದೆ ಎಂದು ಪ್ರಮಾಣಮಾಡುವುದು ಮೊಡರೇಟರರ ಗುಣ. ಏಕೆಂದರೆ, ತಿಳಿದೂ ತಿಳಿಯದವರಂತೆ ನಟಿಸುತ್ತಿರುವರು. ಇವರಿಗೆ ಸತ್ಯವನ್ನೇ ಸಾಧಿಸಿದಂತೆಯೂ ಆಗಬೇಕು, ಸರಕಾರದ ಅನುಗ್ರಹದಲ್ಲಿಯೂ ಇರಬೇಕು. ಇದರ ಫಲವೇನು? ದೇಶಕ್ಕಾಗಿ ಸಕಲ ಕಷ್ಟಗಳನ್ನೂ ಅನುಭವಿಸಿ ಜೈಲುಪಾಲಾದ ಜನರೇ ನಿಜವಾಗಿಯೂ ಹಿಂದೀಯರ ಪ್ರತಿನಿಧಿಗಳು ಎಂದು ಸರಕಾರವು ತಿಳಿದಿದ್ದರೂ ಬಾಯಿಯಿಂದ ಹಾಗೆ ನುಡಿಯುವುದಿಲ್ಲ. ಅದಕ್ಕೆ ಬದಲಾಗಿ ಈ ಮೊಡರೇಟ್ ಮಂಡಳಿಯಿಂದ ಕೆಲವರನ್ನು ತಮ್ಮ ಸಾಧನೆಗಳು ಪೂರ್ತಿಯಾಗುವ ಹಾಗೆ ಆರಿಸಿಕೊಂಡು, ನಂತರ,—ಸಂಪತ್ತಿಗೆ ಬೇಕಾದ ರಸಹಿಂಡಿದ ಒಳಕೆ ಬಿಸಾಡುವ ಲಿಂಬೆಹಣ್ಣಿನಂತೆ — ಇವರನ್ನು ಸರಕಾರವು ಕಡೆಗಣ್ಣಿನಿಂದಲೂ ನೋಡುವುದಿಲ್ಲ. ಸೈಮನ್ ಕಮಿಷನ್ ಸಾರ್ವ ಜನತೆಯ ಅಭಿಪ್ರಾಯಕ್ಕೆ ವಿರೋಧವಾಗಿಯಾದರೂ ಸಹಕರಿಸಿದ ಆ ಮೊಡರೇಟ್ ಸಹಕಾರಿಗಳನ್ನು ಈಗ ಸರಕಾರವು ನೆನಪಿನಲ್ಲಿಟ್ಟುಕೊಂಡಿದೆಯೇ? ಎಂದು ಎಸೆಂಬ್ಲಿಯ ನಶನಲಿಸ್ಟ ಪಕ್ಷದ ಸೆಕ್ರಿಟರಿ ಗಯಾಪ್ರಸಾದ ಸಿಂಹರು ಮೊಡರೇಟರಿಗೆ ತಿಳಿಸಿರುವರು.

ಹಾಗೆ ನಮ್ಮ ಮಾಜೀ ವೈಸರಾಯರಾದ ಲೋರ್ಡ್ ಅರ್ವಿನರು ಲಂಡನಿನಲ್ಲಿ ಬಣ್ಣ ಬದಲಾಯಿಸುತ್ತಿದ್ದಾರೆ. ಒಮ್ಮೆ "ಹಿಂದೂದೇಶವು ಮಾಡುವುದು ತೀರಾ ಸರಿ" ಎನ್ನುತ್ತಿರುವರು. ಇನ್ನೊಮ್ಮೆ "ಹಿಂದೀಯರು ಹೀಗೆ ಮಾಡಬಾರದಿತ್ತು" ಎನ್ನುತ್ತಿರುವರು

* * * *

ಹಳೇ ಓಡ್ವಾಯರ್ ಧೊರೆಗೆ ಇನ್ನೂ ಕಣ್ಣುರಿಯುವುದು. ಕೊಂಗ್ರೆಸ್ ದುಡ್ಡಿನ ಮೇಲೆ "ಕೊಂಗ್ರೆಸ್ಸಿನ ದುಡ್ಡನ್ನು ಕಸಕೊಳ್ಳಿರಿ" ಎನ್ನುತ್ತಿರುವರು. "ನನ್ನ ಪೆನ್ಶನಿಗೆ ಆ ಹಣವನ್ನೆಲ್ಲ ಕೂಡಿಸಿ ಕೊಡಿ" ಎಂದು ಹೇಳಿಬಿಡಬಾರದೇ ಓಡ್ವಾಯರೇ? ನಿಮ್ಮನ್ನೆಂತು ಮರೆಯಲಿ?

ನೋಟಗಳು

NOTE....S

ಆರಂಭಶೂರತೆಯ ರೋಗವು ಹಿಂದೂಸ್ಥಾನದ ಯಾವ ಮೂಲೆಗಳಲ್ಲೂ ಇದ್ದೇ ಇರುವಂತಹುದು. 'ಪ್ಲಂದ ಮೇಲೆ ಅದು ಮಂಗಳೂರನ್ನು ಬಿಟ್ಟೀತೇ? ಎಲ್ಲರ ಮನೆ ಬೆಲ್ಲದ ಪಾಯಸ!

* * * *

ಅಕ್ಕಿ ಸರಿಯಾಗಬಾರದು, ಅಕ್ಕನ ಮಕ್ಕಳು ಬಡವಾಗಬಾರದು. ಹಣ ಖರ್ಚಾಗಬಾರದು, ಬೈ ಇಂಡಿಯನ್ ಲೀಗಿನ ಕೆಲಸವು ನಡೆಯುತ್ತಿರಬೇಕು. ಎಂದು ಇಲ್ಲಿಯ ಲೀಗಿನವರು ಯೋಚಿಸುತ್ತಿರಬಹುದು.

* * * *

ಹಲ್ಲಿದ್ದಾಗ ಕಡಲೆ ತಿನ್ನಬೇಕೆಂದು ಅಜ್ಜಿಯು ಹೇಳುವಂತೆ ಮಂಗಳೂರಿನ ಬೈ ಇಂಡಿಯನ್ ಲೀಗಿನವರು ಬೇಸಿಗೆ ಕಾಲದಲ್ಲಿ ಮಾತ್ರ ತಮ್ಮ ಅಲ್ಪ ಸ್ವಲ್ಪ ಕೆಲಸಗಳನ್ನು ಜರಗಿಸಿಬಿಟ್ಟರು. ಈಗ ಮಳೆಗಾಲ, ಅದರಲ್ಲೂ ಚಳಿಯಿದೆ!!!

* * * *

ಕಂಭಗಳು ಒಟ್ಟಾಗಿದ್ದರಲ್ಲವೇ ಕಟ್ಟೋಣವು ಗಟ್ಟಿ ನಿಲ್ಲುವುದು? ನಮ್ಮ ಕಂಭಗಳಂತಿರುವ ಮುಂದಾಳುಗಳೇ ಬಾಯಿ ಮಾತ್ರ ಇಂಡಿಯನ್ ಮಾಡಿಕೊಂಡು ಬೈ ಇಂಡಿಯನ್ ಕೆಲಸವನ್ನು ಮೂಲೆಗೊತ್ತಿದರೆ ಮತ್ತೆ ಈ ಚಳವಳದ ನೆನಪಾದರೂ ಜನತೆಯ ಮನಸ್ಸಿಗೆ ಬರುವುದೆಂತ ?

* * * *

ಹಿಂದೂಸ್ಥಾನದಲ್ಲಿ [illegible] ನಂತರ ಜನರಲ್ ರೈಲ್ವೆ ಸ್ಟ್ರೈಕ್ ಒಂದು ನಡೆಯಲಿದೆ. ಶ್ರೀ. ಜಮ್ನಾದಾಸ್ ಮೆಹತರು ಮುಂದಾಳುಗಳಾಗಿ ನಿಂತಿರುವರು. ಓರ್ಡಿನೆನ್ಸುಗಳು ಈ ಮುಖಂಡರ ಮೇಲೆ ಹೇಗೆ ಬೀಳುತ್ತವೆಯೋ ನೋಡಬೇಕು.

* * * *

"ಮೂರು ಕೋಟಿ ರೂಪಾಯಿಗಳನ್ನು ರೈಲ್ವೆ ಫಂಡಿನಿಂದ ತೆಗೆದು ಮಜೂರುಗಾರರಿಗೆ ಭತ್ತೆ ಕೊಡಬೇಕು. ಅವರಿಗೆ ವರ್ಷಕ್ಕೆ ಒಂದು ತಿಂಗಳ ವರೆಗೆ ಸಂಬಳ ಸಹಿತ ರಜೆ ಕೊಡಬೇಕು" ಎಂದು ಮಜೂರುಗಾರರ ಕೇಳಿಕೆ. ಇದಕ್ಕೆ ರೈಲ್ವೇ ಬೋರ್ಡಿನವರೂ ಇಂಡಿಯಾ ಸರಕಾರವೂ ಬೆನ್ನು ತೋರಿಸಿದರೆ, ಮತ್ತೆ ಹಿಂದೂದೇಶದಲ್ಲಿ [illegible] ನಷ್ಟ!

* * * *

ಮುಂಬಾಯಿಯಲ್ಲಿ ಪುನಃ ಗಲಾಟೆಯೆದ್ದಿದೆ. ಮುಸಲ್ಮಾನರು ಹಿಂದೂಗಳ ದೇವಸ್ಥಾನವನ್ನು ಹೊಕ್ಕು ಮೂರ್ತಿಗಳನ್ನು ಒಡೆದಿರುವರು, ದೇವಸ್ಥಾನಗಳಿಗೆ ಬೆಂಕಿ ಕೊಟ್ಟಿರುವರು. ಟಿಪ್ಪುಸುಲ್ತಾನನೂ ಹೀಗೆ ಮಾಡಿ ಮತ್ತೆ ಧ್ವಂಸವಾದನು.

* * * *

ಕೆಲವು ಹಿಂದೂಗಳು ಮಸೀದಿಗಳೆರಡಕ್ಕೆ ಬೆಂಕಿಕೊಟ್ಟರು. ಅವುಗಳೊಳಗೆ ಮೂರ್ತಿಗಳಿರುತ್ತಿದ್ದರೆ ಅವುಗಳನ್ನು ಒಡೆಯುತ್ತಿದ್ದರು. ಖಾಲಿ ಕಟ್ಟೋಣಕ್ಕೆ ಬೆಂಕಿ ಕೊಟ್ಟು ಪೌರುಷವನ್ನು ತೋರಿಸಿದ ಹಿಂದೂಗಳೇ ಶಹಭಾಸ್! ನಿಮಗೆ ಸ್ವರ್ಗದ ಯಾವ ಮೂಲೆ ದೊರೆಯುತ್ತದೋ ತಿಳಿಯದು.

* * * *

ಒಂದು ಅತ್ತೆಯ ಕಾಲ ಒಂದು ಸೊಸೆಯ ಕಾಲ ಮುಂದೆ ಬೆನ್ನ ಸಾಹೇಬರ ಕಾಲ—ಈಗ ಹೋರ್ ಸಾಹೇಬರ ಕಾಲ. ಈ ಕಾಲದ ಬಾಲವು ಎಷ್ಟರ ತನಕ ಬೆಳೆಯುತ್ತದೆ ನೋಡಬೇಕು. ಸರ್ ಹೋರರೇ ನಿಮಗೆ ಎಂಟು ಅಂಗಗಳ ನಮಸ್ಕಾರ"

* * * *

ಬ್ರಿಟಿಷರಿಗೆ ಕೊಡುತ್ತಿದ್ದ 'ಕಾಣಿಕೆ ಕಪ್ಪ'ಗಳನ್ನು ತಾನು ಇನ್ನು ಕೊಡುವುದಿಲ್ಲವೆಂದು "ಅಯರ್ಲೆಂಡಿನ ಪ್ರಧಾನರಾದ ಡಿವೇಲರನು ಹೇಳಿರುವನು. ಬ್ರಿಟಿಷರು ಹಿಂದೆ ಮುಂದೆ ಕೈ ಇಟ್ಟು ಬೆಪ್ಪಾಗಿ ಕುಳಿತಿದ್ದಾರೆ. ಹಿಂದೂಸ್ಥಾನವಾಗುತ್ತಿದ್ದರೆ, ಅರ್ಧ ಡಜನ್ ಓರ್ಡಿನೆನ್ಸುಗಳನ್ನು ಫ್ಯಾಸ್ ಮಾಡಿ ಬಿಡುತ್ತಿದ್ದರು.

* * * *

"ಅಕ್ಕಸಾಲಿಗ ಕಿವಿ ಚುಚ್ಚಿದರೆ ನೋವಿಲ್ಲ" ಚುಚ್ಚುವವನೇ ಚುಚ್ಚಬೇಕು. ಬ್ರಿಟಿಷರ ಎದುರುನಿಂತ ಡಿವೆಲರ ಅಕ್ಕಸಾಲಿಗನ ಸೂಜಿ ಎಷ್ಟು ಕಠಿಣ ತರದ್ದೆಂದು ಎಲ್ಲರೂ ನಿರೀಕ್ಷಿಸುತ್ತಿದ್ದಾರೆ. ಬ್ರಿಟಿಷರೇ, ಚರ್ಚಿಲ್ಲರೇ, ಈಗ ನೋವಾಗುವುದಿಲ್ಲವೇ? ಹೇಗಾದೀತು? ಅಲ್ಲವೇ?

* * * *

'ಓತಿಗಳು ಗಳಿಗೆಗೊಮ್ಮೆ ಬಣ್ಣ ಬದಲಾಯಿಸುತ್ತವಂತೆ.

1. Good Riding Quality.
2. Gripping Tread.
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ

ಅಗ್ರಲೇಖ
- ಬ್ರಿಟಿಷರ ಗರ್ವಭಂಗ ೬
- ಸ್ಫುಟವಿಚಾರಗಳು ೪
- ನೋಟಗಳು ೧೦

ವರ್ತಮಾನ ಸಂಗ್ರಹಗಳು
- ವಿದೇಶ ವರ್ತಮಾನ ೬
- ಒಳದೇಶ ವರ್ತಮಾನ ೬
- ದಕ್ಷಿಣ ಕನ್ನಡ – ಮಂಗಳೂರು, ಉಳ್ಳಾಲ, ಉಡುಪಿ, ಕಲಿಮಾರು, ಬಂಟ್ವಾಳ . . ೭
- ವಿವಿಧ ಸಮಾಚಾರಗಳು . . . ೧೧
- ಓರ್ಗನೆನ್ನುಗಳು ಚಿರಾಯುವಾಗಲಿ ದೇವ . . ೨
- ಮಹಾತ್ಮರೂ ವರ್ಣಾಶ್ರಮಧರ್ಮವೂ . . ೯
- ಉಡುಪಿಯ ಗಡಿಬಿಡಿ ಮುಗಿಯಿತೇ? . . ೧೦
- ಕೈರಾ ಜಿಲ್ಲೆಯ ಪರಿಷತ್ತು . . ೧೪

ಸ್ವದೇಶಾಭಿಮಾನಿ.

ತಾ. ೮ನೇ ಶುಕ್ರವಾರ ಜುಲ್ಯಾ ೧೯೩೨

ಬ್ರಿಟಿಷ ಗರ್ವಭಂಗ.

ಇಡೀ ಲೋಕವೇ ತಮ್ಮದೆಂಬ ಗರ್ವದಿಂದ ಉಬ್ಬಿರುವ ಬ್ರಿಟಿಷರು ತಮ್ಮ ಆ ಸಾಮ್ರಾಜ್ಯದರ್ಪವನ್ನು ತೋರಿಸಲಿಕ್ಕಾಗಿ ಹಿಂದೂಸ್ಥಾನವನ್ನು ದಬ್ಬಾಳಿಸುತ್ತಿರುವಾಗ, ಅತ್ತ ಬ್ರಿಟಿಷ ಸಾಮ್ರಾಜ್ಯದ ಸತ್ವಪರೀಕ್ಷೆಯನ್ನು, ಕೆಲಸಮಯದ ಹಿಂದೆ ಹಿಂದೂಸ್ಥಾನದಂತೆಯೇ ಬ್ರಿಟಿಷರ ಅಧೀನವಾಗಿದ್ದ ಅತ್ಯಂತ ಚಿಕ್ಕದಾದೊಂದು ರಾಷ್ಟ್ರವು ಮಾಡಿ, ಬ್ರಿಟಿಷ ಸಾಮ್ರಾಜ್ಯದ ಅಡಿಗಟ್ಟನ್ನು ಕದಲಿಸುತ್ತಿದೆಯೆಂಬುದು, ಹಿಂದೂಸ್ಥಾನದ ಈ ಕಷ್ಟಗಳ ದಿನಗಳಲ್ಲಿ ಒಂದು ಸಮಾಧಾನದ ವಿಷಯವಾಗಿರುತ್ತದೆ

ಐರ್ಲೆಂಡ್ ಎಂದರೆ ಹಲವು ಶತಮಾನಗಳಿಂದ ಬ್ರಿಟಿಷರ ಅಧೀನವಾಗಿದ್ದ ಅವರ ನೆರೆಯ ಒಂದು ಚಿಕ್ಕ ದ್ವೀಪವಾಗಿರುತ್ತದೆ ಇದರ ಜನತೆಯು ಹೆಚ್ಚಾಗಿ ಎಲ್ಲರೂ ರೋಮನ್ ಕೆಥೊಲಿಕ ಮತಸ್ಥರಾದ ಕ್ರಿಸ್ತೀಯರು. ಇದರ ಉತ್ತರ ಭಾಗವಾದ ಅಲ್ಸ್ಟರ್ Ulster ಎಂಬ ಜಿಲ್ಲೆಯಲ್ಲಿ ಹೆಚ್ಚಿನವರು ಪ್ರೊಟೆಸ್ಟಾಂಟ ಮತಸ್ಥರಾದ ಕ್ರಿಸ್ತೀಯರು ಈ ದ್ವೀಪವು ಬ್ರಿಟಿಷರ ಅಧೀನತೆಗೆ ಒಳಪಟ್ಟಂದಿನಿಂದ ಅಲ್ಲಿನ ಜನತೆಯು ಯಾವಾಗಲೂ ಸ್ವಾತಂತ್ರ್ಯಕ್ಕಾಗಿ ಚಳವಳಿಸುತ್ತಲೂ, ದಂಗೆಯೇಳುತ್ತಲೂ ಇದ್ದು ಬ್ರಿಟಿಷರಿಗೆ ತುಂಬಾ ತೊಂದರೆ ಕೊಡುತ್ತಾ ಇದ್ದಿತು ಕಳೆದ ಯುದ್ಧದ ಸ್ವಲ್ಪ ಸಮಯದ ಮೊದಲು ಅಲ್ಲಿನ ಚಳವಳಿಯು ಬಹಳ ಪ್ರಬಲವಾಗಿ ಬೆಳೆಯಿತು ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕಕ್ಕೆ ಹೋಗಿ ನೆಲಸಿ ಸಂಪನ್ನರಾದ ಐರಿಶ್ ಜನರು ತಮ್ಮ ದ್ರವ್ಯದಿಂದಲೂ ಆ ದೇಶದಲ್ಲಿ ಪ್ರಚಾರಕಾರ್ಯ ಮಾಡಿಯೂ ಈ ಚಳವಳಿಗೆ ಬೆಂಬಲವನ್ನಿತ್ತರು.

ಯುದ್ಧ ಸಮಯದಲ್ಲಿ ಯುದ್ಧದ ತೀವ್ರ ಸಮಸ್ಯೆಯಿಂದ ಈ ಚಳವಳಿಯು ಶಾಂತವಾಯಿತು ಆದರೆ ಹಿಂದೂಸ್ಥಾನದಂತೆ ಐರ್ಲೆಂಡ ಬ್ರಿಟಿಷರಿಗೆ ಯುದ್ಧಕ್ಕಾಗಿ ಜನಸಹಾಯವನ್ನಾಗಲಿ, ದ್ರವ್ಯ ಸಹಾಯವನ್ನಾಗಲಿ ಮಾಡಲಿಲ್ಲ. ಯುದ್ಧಾಂತ್ಯವಾಗಬೇಕಾದರೆ ಪುನಃ ಈ ಚಳವಳಿಯು ಚೇತನವನ್ನು ಹೊಂದಿಬಂದಿತು ಬ್ರಿಟಿಷರು ಇದನ್ನು ನಿರೋಧಿಸುವ ಬಗ್ಗೆ ಅತ್ಯಂತ ಕ್ರೂರವಾದ ಉಪಾಯಗಳನ್ನು ಸಾಧಿಸಿದರು ಬಂಗಾಳದ ಪೋಲೀಸ ರಾಜ್ಯದಂತೆ, ಐರ್ಲೆಂಡಿನಲ್ಲಿ Black and Tans ರಾಜ್ಯವು ನೆಲಸಿತು. ಐರ್ಲೆಂಡಿನಲ್ಲಿ ರಿಪಬ್ಲಿಕನ್ ಅಂದರೆ ಸ್ವಾತಂತ್ರವಾದಿಗಳ ಸೇನೆಯು ಗುಪ್ತದಲ್ಲಿ ವ್ಯವಸ್ಥೆಗೊಳಿಸಲ್ಪಟ್ಟು, ಇವರಿಗೂ ಬ್ರಿಟಿಷ ಪೋಲೀಸರಿಗೂ ಕದನಗಳಾಗುತ್ತಿದ್ದುವು. ಈ ರೀತಿಯಲ್ಲಿ ಭಯಂಕರ ಹತ್ಯಾಕಾಂಡಗಳು ನಡೆಯುತ್ತಿದ್ದುವಲ್ಲದೆ, ಬ್ರಿಟಿಷ ಸಿಪಾಯಿಗಳೂ ಅಪರಾಧಿ ನಿರಪರಾಧಿಗಳೆಂದು ನೋಡದೆ ಮುಯ್ಯಿ ತೀರಿಸುತ್ತಿದ್ದರು ಇದರಿಂದ ಲೋಕಾಭಿಪ್ರಾಯವು ಬ್ರಿಟಿಷರ ತೀರಾ ವಿರೋಧವಾಯಿತು. ಇನ್ನು ಹೆಚ್ಚು ಸಮಯ ಹೀಗೆ ನಡೆದರೆ ತಮ್ಮ ಮರ್ಯಾದೆಯೇ ಹೋಗುವುದೆಂದು ಬ್ರಿಟಿಷರು ಐರ್ಲೆಂಡಿಗೆ Free State ಎಂಬ ಹೆಸರಿನಿಂದ ಸ್ವಾತಂತ್ರ್ಯವನ್ನು ಕೊಟ್ಟರು.

ಆದರೆ ಈ ಸ್ವಾತಂತ್ರ್ಯವನ್ನು ಉದಾರಭಾವದಿಂದ ಕೊಡಲಾರದಾದರು. ಬ್ರಿಟಿಷ ರಾಜನಿಗೆ ತಾನು ಶರಣಾಗಿದ್ದೇನೆಂಬ ಪ್ರತಿಜ್ಞೆಯನ್ನು ಬ್ರಿಟಿಷರು ಅಲ್ಲಿನ ಪಾರ್ಲಿಮೆಂಟ್ ಮೆಂಬರರ ಮೇಲೆ ಹೊರಿಸಿದರು. ಇದಕ್ಕೆ ಐಯರ್ಲೆಂಡಿನವರಿಗೆ ಒಪ್ಪಿಗೆಯಿದ್ದಿರಲಿಲ್ಲವಾದರೂ ಪುನಃ ಯುದ್ಧದ ಆರಂಭವು ಬೇಡವೆಂದು ಒಪ್ಪಿದರು. ಅಲ್ಲದೆ ಅದೇ ಕಾರಣದಿಂದ ಐಯರ್ಲೆಂಡಿನ ರೈತರಿಂದ ಭೂಮಿಯ ಬೆಲೆಯಾಗಿ ಬ್ರಿಟಿಷರು ಪಡಕೊಳ್ಳುತ್ತಿದ್ದ Land Annuities ಎಂಬ ಕಪ್ಪವನ್ನೂ ಈ Free State ಒಪ್ಪಂದದಲ್ಲಿ ಸೇರಿಸಿದರು.

ಐಯರ್ಲೆಂಡಿಗೆ ಸಂಪೂರ್ಣ ಸ್ವಾತಂತ್ರ್ಯವು ಸಿಕ್ಕಿದರೂ ಈ ಎರಡು ವಿಷಯಗಳು ಅವರ ಮನಸ್ಸಾಕ್ಷಿಯನ್ನು ನೋಯಿಸುತ್ತಿದ್ದುವು ಐಯರ್ಲೆಂಡಿನ ಚಳವಳದ ಮುಖ್ಯಾಧಿಪತಿಯಾಗಿದ್ದ ಡಿ ವೆಲರನು ಇದನ್ನು ನಿರಾಕರಿಸಿದನು. Free State ಸ್ಥಾಪಿಸಲ್ಪಟ್ಟಂದಿನಿಂದ ಈ ವರೆಗೆ ಅವನು ಚಳವಳ ನಡೆಸಿ ಕಳೆದ ಚುನಾವಣೆಯಲ್ಲಿ ಐಯರ್ಲೆಂಡಿನ ಪಾರ್ಲಿಮೆಂಟಿನ ಪ್ರೆಸಿಡೆಂಟನಾಗಿ ಬಂದು, ಈಗ ಇವೆರಡು ವಿಷಯಗಳನ್ನೂ ನಿರಾಕರಿಸಿರುವನು

ಬ್ರಿಟಿಷ ಅಧಿಕಾರ, ಬ್ರಿಟಿಷ ಅಭಿಮಾನ, ಮತ್ತು ಬ್ರಿಟಿಷ ಸಾಮ್ರಾಜ್ಯದ ದರ್ಪ ಈಗೆಲ್ಲಿ? ಕೆಲವೇ ದಿನಗಳ ಹಿಂದೆ ಸರ್ ಸಾಮುವೇಲ್ ಹೋರರು ಕಾಂಗ್ರೆಸ್ಸಿನ ಸಾಮಾನ್ಯ ಸವಿನಯ ಚಳವಳಿಯ ವಿಷಯದಲ್ಲಿ—"ನಮ್ಮ ಅಧಿಕಾರವನ್ನು ಕೆಣಕಿಸುವುದನ್ನು ನಿಲ್ಲಿಸುವ ಬಗ್ಗೆ ನಮ್ಮಲ್ಲಿ ಅಧಿಕಾರದೊಳಗಿನ ಯಾವತ್ತು ಶಕ್ತಿಯನ್ನು ಉಪಯೋಗಿಸಲು ನಾವು ನಿಶ್ಚಯ ಮಾಡಿಕೊಂಡಿದ್ದೇವೆ" ಎಂದು ಹೇಳಿದರು. ಐಯರ್ಲೆಂಡು ಸರ್ ಹೋರರ ಅಧಿಕಾರವನ್ನು ಕೆಣಕಿಸುವುದಲ್ಲ, ಸಾಮ್ರಾಜ್ಯದ ಸ್ಥಿರಾಧಾರವಾದ ರಾಜರ ಅಧಿಕಾರವನ್ನೇ ಕೆಣಕಿಸಿರುವುದು ಬ್ರಿಟಿಷರ ಶಕ್ತಿಯೆಲ್ಲಿ? ಯಾಕದು ಹೊರಗೆ ಬರುವುದಿಲ್ಲ? ಬದಲಿಗೆ, ಮಿ| ತೋಮಸ್‌ರು ಪಾರ್ಲಿಮೆಂಟಿನಲ್ಲಿ—"ನಾವು ರಾಜಿಯ ಬಗ್ಗೆ ಸಾಧ್ಯವಿದ್ದಷ್ಟೆಲ್ಲ ಪ್ರಯತ್ನಗಳನ್ನು ಮಾಡಿದ್ದೇವೆ ಫ್ರೀ ಸ್ಟೇಟ್ ಸರಕಾರವು ನಮ್ಮ ಹೇಳಿಕೆಯ ನ್ಯಾಯಪರತೆಯನ್ನು ಕಂಡುಕೊಳ್ಳುವುದಾಗಿ ಈಗಲೂ ನೆನಸುತ್ತೇವೆ (We hope even now that the Free State will see the reasonableness of our case.) ತೋಮಸರ ಈ ಮಾತನ್ನೂ ಹೋರರ ಆ ಮಾತನ್ನೂ ಒಟ್ಟು ತೂಗಿದರೆ ನಿಜವಾದ ಶಕ್ತಿಯಿದ್ದಲ್ಲಿ ಬ್ರಿಟಿಷರ ದರ್ಪವೂ ಗರ್ವವೂ ಹೇಗೆ ಹಾರಿಹೋಗುತ್ತದೆಂದು ತಿಳಿಯುವುದು. ಮಾತು ಮಾತ್ರವಲ್ಲ, ಈ ವಾದವನ್ನು ಪಂಚಾಯ್ತರಲ್ಲಿ ತೀರ್ಮಾನಕ್ಕೆ ಇಡಲು ಬ್ರಿಟಿಷರು ಕೇಳಿಕೊಂಡಿದ್ದಾರೆ ಬ್ರಿಟಿಷ ವರ್ಗಕ್ಕೆ ಇದಕ್ಕಿಂತಲೂ ಕೆಳಗಿನ ಪರಿಸ್ಥಿತಿಯು ಬೇರಾವುದು?

ಹಿಂದೀಯರಿಗೆ ಇದೂ ಒಂದು ಪಾಠವಲ್ಲವೇ?

ವಿದೇಶ ವರ್ತಮಾನ.

– ಶ್ರೀಯುತ ವಿ ಜೆ ಪಟೇಲರು ಆಯರ್ಲೆಂಡಿಗೆ ಹೋದರು ಅವರು ಅಲ್ಲಿಯ ಪ್ರಭುಗಳಾದ ಡಿ ವೆಲರಾರವರನ್ನು ಸಂದರ್ಶಿಸಿದರು ಪಟೇಲರ ಪರವಾಗಿ ಜಯಘೋಷಗಳಾದುವು ಪಟೇಲರು ಭಾಷಣವೀಯುತ್ತಾ "ಹಿಂದೂಸ್ಥಾನವೂ ಐಯರ್ಲೇಂಡೂ ಸ್ವಾತಂತ್ರ್ಯ ಹೋರಾಟದಲ್ಲಿ ಮಗ್ನವಾಗಿವೆ"ಯೆಂದರು.

– ಲಂಡನಿನ ಪಾರ್ಲಿಮೆಂಟಿನಲ್ಲಿ, ಕಳೆದ ಮಹಾಯುದ್ಧದಲ್ಲಿ ಮಿಲಿಟರಿಗೆ ವೆಚ್ಚವಾದ ೧೪,೩೦೦ ೦೦೦ ಪೌಂಡುಗಳ ಭಾರವನ್ನು ಹಿಂದೂದೇಶವು ಹೊರಬೇಕೆಂದು ಠರಾವು ಮಂಜೂರಾಯಿತು

– ಚೀನಕ್ಕೆ ಇಷ್ಟು ಕಾಲದಿಂದಲೂ ಹಾವಳಿಯನ್ನುಂಟುಮಾಡುತ್ತಿದ್ದ ನೆರೆಯನ್ನು ತಡೆಯುವುದಕ್ಕಾಗಿ ೧,೪೦೦ ೦೦೦ ಜನರು ಸೇರಿ ೩೦೦೦ ಮೈಲುದ್ದದ ಒಂದು ಗೋಡೆಯನ್ನು ಕಟ್ಟಿರುವರು.

– ಸಿಯಾಮ್ ದೇಶದಲ್ಲಿನ ರಾಜರಾದ ಪ್ರಜಾಧಿಪೋಕರು ಪ್ರಜೆಗಳ ಕೇಳಿಕೆ ಮೇರೆಗೆ ಪ್ರಜಾಪ್ರಭುತ್ವ ಕೊಟ್ಟಿದರು ಅಲ್ಲಿಯ ಜನರು ಪ್ರಾಣಹಾನಿ ಮಾಡದೆ ಒಂದೆರಡು ದಿನಗಳಲ್ಲೇ ಸ್ವಾತಂತ್ರ್ಯವನ್ನು ಗಳಿಸಿದರು.

– "ಬ್ರಿಟಿಷ ಸರಕಾರದೆದುರು ನಿಂತ ಕೆಲ ಮಂದಿ ಹಿಂದೀಯರನ್ನು ಬಗ್ಗುಬಡಿದ ಸರಕಾರದ ಕಾರ್ಯವು ಪ್ರಶಂಸನೀಯ"ವೆಂದು ಚರ್ಚಿಲ್ಲರು ಹೇಳಿದರು.

– ಲೆನ್ಸ್‌ಬುರಿ ದೊರೆಯವರು ಕಲ್ಕತ್ತದ ಪತ್ರಿಕೆಯೊಂದಕ್ಕೆ ಬರೆಯುತ್ತಾ, ಗಾಂಧಿಯವರನ್ನೂ ಅವರ ಅನುಯಾಯಿಗಳನ್ನೂ ಬಿಟ್ಟುಗೂಡಿಸಿ, ಸರ್ ಹೋರರ ಪ್ರಕಟನೆಯ ವಿಷಯವಾಗಿ ಆಲೋಚಿಸಿದರೆ ಒಳ್ಳೆಯದೆಂದಿರುವರು.

– "ಮುಸ್ಲಿಮರಿಗೆ ಹಿಂದೂಗಳ ಹೆದರಿಕೆಯು ಕಡಿಮೆಯಾಗಿದೆ, ಈ ವಿಷಯವಾಗಿ ಸರಕಾರವೇ ಇತ್ಯರ್ಥಿಸದೆ ಹಿಂದೂದೇಶದಲ್ಲಿ ಶಾಂತಿಯಿಲ್ಲ" ಎಂದು ಲಂಡನಿನ ಒಬ್ಸರ್ವರ್ ಎಂಬ ಪತ್ರಿಕೆಯು ಎಂದಿದೆ.

ಇಂಗ್ಲಾಂಡು ಆಯರ್ಲೇಂಡುಗಳೊಳಗಿನ ಚರ್ಚೆಯನ್ನು ಕೊನೆಗಾಣಿಸುವುದಕ್ಕಾಗಿ ಒಂದು ಟ್ರಿಬ್ಯೂನಲನ್ನು ನೇಮಕ ಮಾಡುವರೆಂದೂ ಅದಕ್ಕೆ ಶ್ರೀಯುತ ವಿ. ಜೆ ಪಟೇಲರನ್ನು ಅಧ್ಯಕ್ಷರನ್ನಾಗಿ ನೇಮಿಸುವರೆಂದೂ ವಾರ್ತೆ ಇದೆ

ಒಳದೇಶ ವರ್ತಮಾನ

– ಮದ್ರಾಸಿನಲ್ಲಿ ವೇಶ್ಯಾಸ್ತ್ರೀ ವ್ಯಾಪಾರ ಗೃಹವನ್ನಿಟ್ಟು ದಿನಹರಣ ಮಾಡುತ್ತಿದ್ದ [illegible] ಎಂಬವನಿಗೆ ೬ ತಿಂಗಳ ಶಿಕ್ಷೆಯಾಯಿತು. ಅವನ ಪ್ರವೃತ್ತಿಗೆ ಬಡತನವು ಕಾರಣವಾಗಿದ್ದುದರಿಂದ ಆ ಶಿಕ್ಷಾವಧಿಯನ್ನು ಒಂದು ತಿಂಗಳಲ್ಲಿ ನಿಲ್ಲಿಸಿದರು

– ಬೆಳಗಾಂವಿನ ಶ್ರೀ ಗಂಗಾಧರರಾವ ದೇಶಪಾಂಡೆಯವರು ಚಳವಳದಲ್ಲಿ ಭಾಗವಹಿಸಿದುದಕ್ಕಾಗಿ ಒಂದು ವರ್ಷದ ಸಾದಾ ಸಜೆಗೂ ೩೦೦ ರೂಪಾಯಿ ಜುಲ್ಮಾನೆಗೂ ಗುರಿಯಾದರು

– ಮಾಯಾವರಂ ಎಂಬಲ್ಲಿನ ಒಂದು ಕೆರೆಯಲ್ಲಿ ಶ್ರೀ ನಟರಾಜ ಅಯ್ಯರ್ ಎಂಬವರು ಇನ್ನಿತರ ೪ ಮಂದಿಗಳೊಡನೆ ಸ್ನಾನಮಾಡುತ್ತಿರುವಾಗ ಆ ಕೆರೆಯಲ್ಲಿದ್ದ ವಿಷಭರಿತ ಹಾವುಗಳು ಅವರಿಗೆ ಕಡಿದು ೫ ಮಂದಿಗಳೂ ಮಡಿದರು. ಆ ಕೆರೆಯಲ್ಲಿ ಬೇರೆ ಯಾರೂ ಸ್ನಾನಮಾಡದಂತೆ ಅಲ್ಲಿ ಪೋಲೀಸ ಪಹರೆಯನ್ನಿಡಲಾಗಿದೆ

ಡಾ ಅನ್ಸಾರಿಗಳು ನಿನ್ನೆ ಬಿಡುಗಡೆ ಹೊಂದಿರುವರು ಅವರು ತನ್ನ ಆರೋಗ್ಯ ಸಂಪಾದನೆಗಾಗಿ ಬೇಗನೇ ಯುರೋಪಿಗೆ ಹೋಗಲಿರುವರೆಂದು ತಿಳಿದುಬಂದಿದೆ

– ಪೇಶಾವರದಲ್ಲಿ ವಿಮಾನಗಳಿಗೆ ಹಾಕುವ ಸಿಡಿಮದ್ದುಗಳ ಪೆಟ್ಟಿಗೆಯೊಂದು ಸಿಡಿಮದ್ದು ಸಮೇತ ಸ್ಫೋಟನವಾಗಿ ಅದನ್ನು ತಯಾರಿಸಿದ ೪ ಮಂದಿಗಳೂ ಅದರೊಡನೆ ನಾಶವಾದರು ಅವರಿದ್ದ ಕಟ್ಟೋಣವು ತುಮುರು ತುಮುರಾಯಿತು.

ಅಲ್ಲಹಾಬಾದಿನಲ್ಲಿ ಮಿ. ಡಂಕನ್ ಗ್ರೀನ್ಸ್ ಎಂಬ ಆಂಗ್ಲೇಯ ದೊಬ್ಬನು ನಕಲಿ ಪತ್ರಗಳನ್ನು ಹಂಚಿದುದಕ್ಕಾಗಿ ನ್ಯಾಯವಿಚಾರಣೆಗೊಳಗಾಗಿದ್ದಾನೆ ವಿಚಾರಣೆಗೆ ಹೋಗಿದ್ದಾಗ ಅವನು ಸಂಪೂರ್ಣ ಮಾದಿಯನ್ನು ಕುಡಿದುಕೊಂಡಿದ್ದನಂತೆ

– ಚಿತಗೊಂಗಿನಲ್ಲಿ ಕೊಲೆ ಸಂಬಂಧವಾಗಿರಿಸಲ್ಪಟ್ಟಿದ್ದ ಪೋಲೀಸ ವೆಚ್ಚಗಳನ್ನು ಅಲ್ಲಿಯ ನಾಗರಿಕರೇ ತೆರಬೇಕೆಂದು ಸರಕಾರವು ಕಾನೂನು ಜಾರಿ ಮಾಡಿದೆ ಒಟ್ಟು ೬೦೦೦೦ ರೂಪಾಯಿಯ ಭಾರವು ಅಲ್ಲಿಯ ಜನರ ಮೇಲೆ ಹೊರಿಸಲ್ಪಟ್ಟಿದೆ

– ಮುಂಬಾಯಿಯ ಮೂಲ್ಜಿ ಜೇಠಾ ಮಾರ್ಕೆಟನ್ನು ಸ್ವದೇಶಿ ವಿದೇಶಿಯಾಗಿ ಬೇರ್ಪಡಿಸಿ ಹಾಕಿದ್ದ ಬೇಲಿಯೊಂದನ್ನು ತೆಗೆದುಬಿಡಬೇಕೆಂದು ಕಮಿಶನರು ಅಪ್ಪಣೆಕೊಟ್ಟರು ಅಲ್ಲಿಯ ವಿದೇಶಿ ವರ್ತಕರು ತಮ್ಮ ವಿದೇಶಿ ವಸ್ತ್ರವ್ಯಾಪಾರವನ್ನು ನಿಲ್ಲಿಸಿಬಿಡುವುದರಲ್ಲಿರುವರು

– ನಾಗಪುರದ ಸಿಟಿ ಸುಪರಿಂಟೆಂಡೆಂಟರ ಮನೆಗೆ ಆರು ಮಂದಿ ಯುವಕರು ಹೊಕ್ಕು ಒಂದು ರಿವಾಲ್ವರನ್ನು ಕದ್ದೊಯ್ದರು ಆರು ಜನರನ್ನೂ ಹಿಡಿದಿದ್ದಾರೆ ಎಲ್ಲರೂ ಸುಪರಿಂಟೆಂಡೆಂಟರ ಸಂಬಂಧಿಕರೇ

ಮುಂಬಾಯಿಯಲ್ಲಿ ಮಂಡಪಕ್ಷದವರಾದ ಶ್ರೀ ಶ್ರೀನಿವಾಸ ಶಾಸ್ತ್ರಿ, ಎಂ ಆರ್ ಜಯಕರ್ ಮತ್ತು ಸಪ್ರೂಗಳು ಒಂದು ಸಭೆ ಗೂಡಿಸಿ ಬ್ರಿಟಿಷ ಸರಕಾರದವರ ಘೋಷಣೆಗಳನ್ನು ಆಲೋಚಿಸಲಿರುವರು.

—ಮದ್ರಾಸಿನಲ್ಲಿ ಒಬ್ಬ ಸೈನಿಕನು ಸೈಕಲ್ ಮೇಲೆ ಭರದಿಂದ ಓಡುತ್ತಾ ಒಬ್ಬಳು ಕಿವುಡಿಯ ಮೇಲೆ ಸೈಕಲನ್ನು ಹಾಕಿದನು. ಕಿವುಡಿಯು ಅಸ್ಪತ್ರೆಯಲ್ಲಿ ತೀರಿಕೊಂಡಳು

– ಮದ್ರಾಸಿನ ಲೋ ಕೊಲೇಜಿನಲ್ಲಿ ವಿದ್ಯಾರ್ಥಿಗಳ ಸಂಬಳವನ್ನು ಹೆಚ್ಚಿಸಿರುವರು ಮುಂಚೆ ರೂ ೧೫೦ ಇತ್ತು ಈಗ ರೂ ೨೦೦ ಆಯಿತು

– ಕಲ್ಕತ್ತದಲ್ಲಿ ಮೋಟರ್ ವಾಹನಗಳ ಮೇಲಿನ ಹೊಸ ತೆರಿಗೆಯಿಂದಾಗಿ ಸರಕಾರಕ್ಕೆ ರೂ. ೪೪೭೦೦೦ ಮಾತ್ರ ದೊರೆತಿದೆ

– ಕಲ್ಕತ್ತದ ಬಂಗಾಳೀ ದೈನಂದಿನ ಪತ್ರಿಕೆಯಾದ 'ವಸುಮತಿ'ಯಿಂದ ೫೦೦ ರೂಪಾಯಿ ಜುಲ್ಮಾನೆ ಕೇಳಲಾಗಿದೆ.

ದಕ್ಷಿಣ ಕನ್ನಡ

ಸ್ವದೇಶಾಭಿಮಾನಿಯಲ್ಲಿ ಸಮಯಾನುಸಾರವಾಗಿ ಆಸಕ್ತರು ಬಿಚ್ಚಬಲ್ಲಂಥ ಒಗಟುಗಳು ಪ್ರಕಟಿಸುವಂತೆ ವ್ಯವಸ್ಥೆಯನ್ನು ಮಾಡಿರುತ್ತೇವೆ. ಬರುವ ಸಂಚಿಕೆಯಲ್ಲಿ ಒಗಟು ನಂಬ್ರ ೧ ಪ್ರಕಟಿಸಲ್ಪಡುವುದು. ಬಿಚ್ಚುಗರಿಗೆ ಒಳ್ಳೇ ಮೌಲ್ಯ ಬರುವ ಪುಸ್ತಕಗಳೂ ಪಾರಿತೋಷಕಗಳೂ ಕೊಡಲ್ಪಡುವುವು. ಬರುವ ಸಂಚಿಕೆಯ ಒಗಟನ್ನು ಎಲ್ಲರೂ ನಿರೀಕ್ಷಿಸುತ್ತಿರಿ! (ಸಂ ಸ್ವ)

ಮಂಗಳೂರು: — ಬಜಾಲ್‌ನಲ್ಲಿ ಲೋಕಯ್ಯಶೆಟ್ಟಿ ಎಂಬವರನ್ನು ಯಾರೋ ಕಡಿದು ಕೊಂದು ಹಾಕಿದರು. ಎರಡನೇ ಮದುವೆಯಾದುದರಿಂದ ಹೀಗಾಯಿತಂತೆ! ಅವರ ಮೊದಲನೆಯ ಹೆಂಡತಿಯ ಎರಡನೇ ಮಗನನ್ನೂ ಅಳಿಯನನ್ನೂ ಸೆರೆಹಿಡಿದಿರುತ್ತಾರೆ.

ಇಲ್ಲಿಯ ವಕೀಲ ಶ್ರೀ ಸೋಮಶೇಖರರಾಯರು ಜಿಲ್ಲಾ ಸ್ಕೌಟು ಅಸಿಸ್ಟಾಂಟ್ ಕಮಿಶನರಾಗಿಯೂ ಶ್ರೀ ಎಂ ಎಸ್ ಪಿತಾಂಬರ ರಾಯರು ಡಿಸ್ಟ್ರಿಕ್ಟ್ ಸ್ಕೌಟ್ ಮಾಸ್ಟರರಾಗಿಯೂ ನೇಮಿಸಲ್ಪಟ್ಟಿದ್ದಾರೆಂಬುದು ಸಂತೋಷಕರ.

ಪ್ರೊಫೆಸರ್ ರಾಮರಾಯರಿಗೂ ಶ್ರೀ ವಿಟ್ಠಪ್ಪ ಪ್ರಭುಗಳಿಗೂ ಪೋಲೀಸರು ಹೊಡೆದ ವಿಚಾರವಾಗಿ ಮಾನ್ಯ ಕಲೆಕ್ಟರರ ತನಿಖೆಯು ಇನ್ನೂ ನಡೆಯುತ್ತಿದೆ. ನಗರದ ಕೆಲವು ಮುಂದಾಳುಗಳ ಸಾಕ್ಷ್ಯವು ತೆಗೆದುಕೊಳ್ಳಲ್ಪಟ್ಟಿದೆ.

ಇಲ್ಲಿಯ ಗವರ್ನಮೆಂಟ್ ಕೊಲೇಜಿನ ಪ್ರಿನ್ಸಿಪಾಲರಾದ ಶ್ರೀ ಜಿ. ಕೆ. ಚೆಟ್ಟೂರ್ 'ಇವರು ಕೊಲೇಜಿಗೆ ಸೇರಬೇಕೆಂದಿರುವ ವಿದ್ಯಾರ್ಥಿಗಳು ತಾವು ಕೊಲೇಜಿನಲ್ಲಿರುವ ತನಕ ರಾಜಕೀಯಕ್ಕೆ ಕೈಯಿಕ್ಕುವುದಿಲ್ಲವೆಂದು ಬರೆದುಕೊಡಬೇಕೆ'ಂದು ಕೇಳಿಕೊಂಡಿರುತ್ತಾರಂತೆ.

ಚಳವಳದಲ್ಲಿ ಭಾಗವಹಿಸಿದ್ದ ಶ್ರೀಗಳಾದ ಗುರ್ಪುರದ ಮಾಧವ ಪ್ರಭು ಮತ್ತು ಐತಪ್ಪ ಮೆಂಡನ್ ಇವರಿಗೆ ೪ ಮತ್ತು ೬ ತಿಂಗಳುಗಳ ಶಿಕ್ಷೆಯು ವಿಧಿಸಲ್ಪಟ್ಟಿತು.

ಬ್ರಹ್ಮಶ್ರೀ ಅಂಕುರಾಜ ಶರ್ಮರು ಧಾರ್ಮಿಕ ವಿಚಾರಗಳ ಕುರಿತು ಮೈದಾನಿನಲ್ಲಿ ಉಪನ್ಯಾಸ ಕೊಡಲಿರುವರೆಂದು ತಿಳಿದುಬಂದಿದೆ.

ತಾಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಚುನಾವಣೆಯು ಇದೇ ತಿಂಗಳ ೩೧ರಲ್ಲಿ ಜರುಗಲಿದೆ.

ಇಲ್ಲಿಯ ಶ್ರೀ ಕೃಷ್ಣ ಸಿನೇಮಾ ಮಂದಿರದಲ್ಲಿ ತಾ ೧ನೇ ದಿನದಿಂದ ಮೊದಲ್ಗೊಂಡು 'ದಿ ಟ್ರ್ಯೇಲ್ ಒಫ್ ೯೮' ಎಂಬ ಅತ್ಯುಜ್ವಲ ಮೆಟ್ರೊ ಗೋಲ್ಡ್ವಿನ್ ಮೇಯರ್ ಚಲಚಿತ್ರ ಪ್ರದರ್ಶನವು ಪ್ರಾರಂಭವಾಗಲಿರುವುದು. ಇದರಲ್ಲಿ ಲೋಕಪ್ರಸಿದ್ಧ ನಟಿಯಾದ ಮಿಸ್ ಡೊಲೊರೆಸ್ ಡೆಲ್ರಿಯೊ ಮತ್ತು ಪ್ರಚಂಡ ನಟನಾದ ರಾಲ್ಫ್ ಫೋರ್ಬಸ್ ಎಂಬವನೂ ಅಭಿನಯಿಸಿರುವರು.

ಬೋಳೂರು ಶ್ರೀ ವೆಂಕಟರಮಣ ಭಜನೆ ಮಂದಿರದಲ್ಲಿ ಇದೇ ತಾ ೧೪ನೇ ಗುರುವಾರ ಪ್ರಥಮೈಕಾದಶೀ ಸಂಬಂಧ ಕಾಲಂಪ್ರತಿ ನಡೆಯುವ ಭಜನೆ ಸಮಾರಂಭಕ್ಕೆ ಭಕ್ತಜನರೆಲ್ಲರೂ ಬಂದು ಈಶಸೇವೆಯನ್ನು ಮಾಡಿ, ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ, ಪುಣ್ಯಕಟ್ಟಿಕೊಳ್ಳಬೇಕೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಸ್ವಲ್ಪ ಸಮಯದ ಹಿಂದೆ ಉರ್ವ ಮೈದಾನಿನಲ್ಲಿ ಜುಗಾರಾಡುವ ವಿಷಯದಲ್ಲಿ ಒಂದು ವಾರ್ತೆಯನ್ನು ಪ್ರಕಟಿಸಿತ್ತಷ್ಟೆ. ಇದಾದ ಕೆಲವು ದಿನಗಳ ವರೆಗೆ ಅಲ್ಲಿ ಈ ಆಟವು ನಿಂತಿತು. ಈಗಲಾದರೋ, ಅದೇ ಮೈದಾನದಲ್ಲಿ ಪಾಳುಬಿದ್ದಿರುವ ಹಳೇ ಕಟ್ಟೋಣಗಳೊಳಗೆ ಬೆಳಗ್ಗೆಯಿಂದ ರಾತ್ರಿಯ ವರೆಗೂ ಕೆಲವರು ನಿರ್ಭಯರಾಗಿ ಜುಗಾರಾಡುತ್ತಿರುವರು. ಅಲ್ಲದೆ ಬೋಳೂರು ಸ್ಮಶಾನದೊಳಗೆ ಶವ ತಂದವರ ವಿಶ್ರಾಂತಿಗಾಗಿ ಇರುವ ಕಟ್ಟಡದೊಳಗೂ ರಾತ್ರಿ ಹಗಲೆಂಬ ಭೇದವಿಲ್ಲದೆ ಜುಗಾರಾಡುತ್ತಿರುವರಂತೆ. ಈ ವಿಷಯದಲ್ಲಿ ಸರಕಾರವು ಆಲೋಚಿಸಲಾರದೇ?

ಮಂಗಳೂರು ಮುನಿಸಿಪಾಲಿಟಿಯೊಳಗೆ ತಾ. ೨-೭-೩೨ಕ್ಕೆ ಅಂತ್ಯವಾಗುವ ವಾರದಲ್ಲಿ ಒಟ್ಟು ೧೬ ಮರಣಗಳೂ ೪೦ ಜನನಗಳೂ ಆಗಿವೆ.

ತಾ. ೬ನೇ ಬುಧವಾರ ಬೋಳಾರದ ಶೇಂದಿ ಅಂಗಡಿಯನ್ನು ಈ ಕೆಳಗಿನ ನಾಲ್ವರು ಸ್ವಯಂಸೇವಕರು ಪಹರೆ ಮಾಡಿದರು. ಸರ್ಕಲ್ ಇನ್ಸ್‌ಪೆಕ್ಟರರು ಬಂದು ಅವರನ್ನು ನೋಡಿ 'ಹೋಗಿ ಹೋಗಿ'ರೆಂದು ಗದರಿಸಿ ಹೋದರಲ್ಲದೆ ಕೈದುಮಾಡಲಿಲ್ಲ. ಶಿವಪ್ಪ ನ್ಯಾಕ, ಪದ್ಮಪ್ಪ ಅಮೀನ್, ಪದ್ಮಪ್ಪ ಮೆಂಡನ್, ನಾರಾಯಣ ಸಪಲ್ಯ ಇವರು ಮತ್ತೂ ೬ ಗಂಟೆಯ ತನಕ ಪಹರೆ ಮಾಡಿ ಹಿಂತಿರುಗಿದರು.

ತಾ. ೭ನೇ (ನಿನ್ನೆ) ದಿನ ಸಂಜೆ ೩॥ ಘಂಟೆಯಿಂದ ೫॥ ಘಂಟೆಯ ತನಕ ಕಾಂಗ್ರೆಸ್ ಸ್ವಯಂಸೇವಕರು ಬೇಡಿಗುಡ್ಡೆಯ ಗಡಂಗನ್ನು ಪಹರೆ ಮಾಡಿದರು. ಎರಡೆರಡೇ ಜನರು ತಂಡತಂಡವಾಗಿ ನಿಂತಂತೆ ಪೋಲೀಸರು ಅವರನ್ನು ಕೈದುಮಾಡಿ ಸ್ಟೇಷನಿಗೆ ಕೊಂಡೊಯ್ದರು. ಎಂ. ರಾಮರಾವ್, ಮರ್ತಪ್ಪ ನಾಯ್ಕ, ಮೋನಪ್ಪ ಬಂಗೇರ, ಬಿ. ಕೆ. ಬಾಳಿಗ, ನಾಗಸೇನೆಯ ಬಾಬು, ವಾಸು, ಮತ್ತು ೨ ಜನರು ಒಟ್ಟಿಗೆ ೮ ಜನರು ದಸ್ತಗಿರಿಮಾಡಲ್ಪಟ್ಟಿರುವರು.

ಉಡುಪಿ: — ತಾ. ೨ಕ್ಕೆ ಶ್ರೀ ವಾಸುದೇವ ಪ್ರಭುಗಳ ನೇತೃತ್ವದಲ್ಲಿ ಪ್ರಾತಃಕಾಲ ೬ ಗಂಟೆಗೆ ಪ್ರಭಾತಫೇರಿಯಾಗಿತ್ತು.

ಅಖಿಲಭಾರತ ಕೊಂಗ್ರೆಸ್ ಕಮಿಟಿಯ ಹಂಗಾಮಿ ಅಧ್ಯಕ್ಷರಾಗಿ ಶ್ರೀ ಗಂಗಾಧರರಾವ್ ದೇಶಪಾಂಡೆಯವರ ಸಹಿಯಿಂದ ತಾ. ೪ನೆ ದಿನವನ್ನು ಅಖಿಲಭಾರತ/ ಕೈದಿಗಳ ದಿನವಾಗಿ ಆಚರಿಸಬೇಕಾಗಿ, ಅಂದು ಹರತಾಳದೊಡನೆ ಇತರ ಕಾರ್ಯಕ್ರಮಗಳನ್ನು ಸೂಚಿಸಿದ್ದ ಬಿನ್ನಹವು ಇಲ್ಲಿನ ರಾಮಬಾಣ ಪತ್ರಿಕದಲ್ಲಿ ಪ್ರಕಟವಾಗಿತ್ತು. ಸದರಿ ಪತ್ರಿಕೆಗಳನ್ನು ಪೇಟೆಯಲ್ಲೆಲ್ಲಾ ಹಂಚಿದ್ದರಲ್ಲದೆ, ಕೆಲವೆಡೆ ಗೋಡೆಗಳಿಗೂ ಅಂಟಿಸಿದ್ದರು.

ತಾ ೪ಕ್ಕೆ ಸಾರ್ವಜನಿಕ ಹರತಾಳವು ಆಚರಿಸಲ್ಪಟ್ಟಿತು. ಉದ್ಯಾವರ, ಕಲ್ಯಾಣಪುರಗಳಲ್ಲೂ ಹಲವಂಗಡಿಗಳು ಮುಚ್ಚಲ್ಪಟ್ಟಿದ್ದುವು. ಅಂದು ಪ್ರಾತಃಕಾಲ ಶ್ರೀ ಗೋವಿಂದಾಚಾರ್ಯರ ನೇತೃತ್ವದಲ್ಲಿ ಪ್ರಭಾತಫೇರಿಯು ಜರಗಿತು. ಹಾಗೆಯೇ ಶ್ರೀ ವಾಸುದೇವ ಪ್ರಭುಗಳ ಮುಂದಾಳುತನದಲ್ಲಿ ಬಾಲಸೇನೆಯ ಮೆರವಣಿಗೆಯಾಗಿತ್ತು. ಮಧ್ಯಾಹ್ನದ ನಂತರ ಅಲ್ಲಲ್ಲಿಂದ ಶ್ರೀ ಬಾಬುರಾವ್ ಕೆ ಗೋವಿಂದ ನಾಯಕ್, ರಾಮದಾಸ ಪೈ, ತಿಮ್ಮಪ್ಪ ಶೆಟ್ಟಿ ಇವರ ಮುಂದಾಳುತನದಲ್ಲಿ ಬೇರೆ ಬೇರೆಯಾಗಿ ರಾಷ್ಟ್ರಧ್ವಜಗಳೊಡನೆ ಮೆರವಣಿಗೆಗಳಿದ್ದುವು. ಇವುಗಳನ್ನು ಅಲ್ಪಾವಕಾಶದೊಳಗಾಗಿ ಅಲ್ಲಲ್ಲಿ ಕಾದಿದ್ದ ಪೋಲೀಸರು ತಡೆದು, ಧ್ವಜಗಳನ್ನು ಸ್ವಾಧೀನ ಪಡಿಸಿಕೊಂಡು ಸ್ಟೇಷನಿಗೊಯ್ದರು. ಇವುಗಳ ಹಿಂದಿನಿಂದ ಜನಸಂದಣಿಯು ಹಿಂಬಾಲಿಸಿಕೊಂಡು ಹೋಗುತ್ತಿದ್ದಿತು. ಸ್ವಯಂಸೇವಕರು ಆಗಿಂದಾಗ ಜಯಕಾರಗಳನ್ನೆತ್ತುತ್ತಿದ್ದರು. ಹಿಂಬಾಲಿಸುತ್ತಿದ್ದ ಜನರನ್ನು ಒಂದೆರಡು ಸಲ ಬೆತ್ತಗಳಿಂದ ಚದರಿಸಬೇಕಾಯಿತು. ತನ್ಮಧ್ಯೆ ಬೀಡಿನಗದ್ದೆ ಮೈದಾನಿನಲ್ಲಿ ಸ್ವಯಂಸೇವಕರು ಸಭೆ ಕೂಡಿಸಿ ಮಹಾತ್ಮಾಗಾಂಧಿ ಮುಂತಾದ ಸತ್ಯಾಗ್ರಹಿ ಕೈದಿಗಳನ್ನು ಬಿಡುಗಡೆಮಾಡಬೇಕೆಂದು ಇನ್ನಿತರ ನಿರ್ಣಯಗಳನ್ನು ಓದಿ ಹೇಳಿ ಮಂಜೂರಾದುವೆಂದೂ, ಸುದ್ದಿಯಿದೆ. ಆದರೆ ಅಂದು ಮಧ್ಯಾಹ್ನ ನಂತರ ಜನಸಂಖ್ಯೆಯೇನೂ ರಥಬೀದಿಯ ನಾಲ್ಕೂ ಕಡೆಗಳಲ್ಲಿ ಕಿಕ್ಕಿರಿದು ನೆರೆದಿದ್ದು ಅತ್ತಿಂದಿತ್ತ ಇತ್ತಿಂದತ್ತ ಚಲಿಸುತ್ತಲೂ ಅಲ್ಲಲ್ಲಿ ಸಂದುಗೊಂದುಗಳಲ್ಲಿ ಪೋಲೀಸ ಪಹರೆಯೂ ಆಗಿಂದಾಗ ಚಿಕ್ಕ ಮಕ್ಕಳು ದೂರದಿಂದ ಎಬ್ಬಿಸುತ್ತಿದ್ದ ಜಯಕಾರ ಧ್ವನಿಗಳೂ, ಬಸ್ಸಿನಲ್ಲಿ ಅಡ್ಡಾಡುತ್ತಿದ್ದ ರಿಜರ್ವ್ ಪೋಲೀಸರೂ, ಇರುವುದನ್ನು ನೋಡುವವರಿಗೆ ಬಹಳ ಸಂದಿಗ್ಧವಾಗಿ ತೋರುತ್ತಿತ್ತು. ಅಂತೂ ಸ್ಟೇಶನಿಗೆ ಕೈದುಮಾಡಿ ಕೊಂಡು ಹೋಗಲಾದವರಲ್ಲಿ ೩೨ ಮಂದಿಯನ್ನು ಲೋಕಪ್ಪಿನಲ್ಲಿಡಲಾಯಿತು, ರಾತ್ರಿ ಊಟ ಫಲಾಹಾರಗಳಾವುವೂ ಇದ್ದಿಲ್ಲ. ಮರುದಿನ ಬೆಳಗ್ಗೆ ೯ ಗಂಟೆ ಸಮಯ ೧೩, ಆನಂತರ ೫, ಸಂಜೆ ೪ ಗಂಟೆಗೆ ಉಳಿದ ೧೪ ಮಂದಿಯನ್ನೂ ಬಿಡುಗಡೆ ಮಾಡಲಾಯಿತು. [illegible] ರಿಜರ್ವ್ ಪೋಲೀಸರು ಹಿಂತೆರಳಿದರು.

ತಾ ೬ಕ್ಕೆ ಮಧ್ಯಾಹ್ನ ಇಲ್ಲಿನ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್ ಜರಗುತ್ತಿರುವ ವೇಳೆಗೆ ಶ್ರೀ ವಾಮನ ಭಟ್ಟರು ಕೋರ್ಟಿನೊಳಗೆ ಹೋಗಿ ಡಿ ಮುನ್ಸೀಫರಿಗೊಂದು ಬಾರಿನಲ್ಲಿದ್ದ ವಕೀಲರಿಗೊಂದೊಂದೂ ಹೊರಗೆ ಸೇರಿದ್ದ ಹಲವರಿಗೂ ರಾಮಬಾಣ ಪತ್ರವನ್ನು ಹಂಚಿಬಿಟ್ಟರು.

ಇಲ್ಲಿನ ಡಿ ಮುನ್ಸೀಫರಾದ ಮಿ ಸಿ ಎಲ್ ಕುಲಾಸೋರವರು ರಜೆಪಡೆದಿರುವುದರಿಂದ ಶ್ರೀ ಎಸ್ ನರಸಿಂಹುಲು ಎಂಬವರು ಅವರ ಬದಲಿಗೆ ಬಂದಿರುತ್ತಾರೆ.

ಫಲಿಮಾರು: — ಉಡ್ಪಿ ಫಲ್ಮಾರ್ ಮಠದ ಶ್ರೀ ಪಾದಂಗಳವರು ಇಲ್ಲಿಗೆ ಚಿತ್ತೈಸಿ ಕೆಲವೊಂದು ಸಾರ್ವಜನಿಕ ಕಾರ್ಯಗಳಲ್ಲಿ ಕೈಹಾಕಿ ಜನತೆಗೆ ಉಪಕಾರವನ್ನು ಮಾಡುತ್ತಿರುವುದು ಅಭಿನಂದನೀಯವು. ಇವರು ಶ್ರೀರಾಮ ವಾಚನಾಲಯದ ಉದ್ಧಾರ ಕೆಲಸಗೈದುದಲ್ಲದೆ ಇಲ್ಲೊಂದು ಚಿಕಿತ್ಸಾಲಯವನ್ನೂ ತೆರೆಯುವ ಆಲೋಚನೆಯಲ್ಲಿರುವರಂತೆ. ಭಗವಂತನವರಿಗೆ ಆಯುರಾರೋಗ್ಯ ಸಂಪತ್ತನ್ನೀಯಲಿ. ಇವರು ಇನ್ನೂ ಹೆಚ್ಚಿನ ಸಾರ್ವಜನಿಕ ಕಾರ್ಯಗಳನ್ನು ಮಾಡುವಂತೆ ಗೌರೀವರನು ಪ್ರೇರೇಪಿಸಲಿ.

ಬಂಟ್ವಾಳ — ಮಂಗಳೂರು ತಾಲೂಕು ಕೊಂಗ್ರೆಸ ಪರಿಷತ್ತು ಇದೇ ತಿಂಗಳ ತಾರೀಕು ೪ನೇ ಸೋಮವಾರ ಬೆಳಗ್ಗೆ ೬ ಗಂಟೆಗೆ ಬಂಟವಾಳ ಜೋಡುಮಾರ್ಗದಲ್ಲಿ ಕಟ್ಟಿಸಿದ ಹೊಸ ಡಿಸ್ಟ್ರಿಕ್ಟ ತಪಶೀಲುದಾರರ ಕಚೇರಿಯ ಅಂಗಳದಲ್ಲಿ ಜರಗಿತು. ಅಧ್ಯಕ್ಷರಾದ ಅಮ್ಮುಣಜೆ ಗುತ್ತು ಶೀನಪ್ಪ ಹೆಗ್ಗಡೆಯವರನ್ನು ಕಚೇರಿಯ ಮುಂಭಾಗದ ಜಗಲಿಯ ಮೇಲೆ ಕುಳ್ಳಿರಿಸಿ ಮಾಡಿಗೆ ರಾಷ್ಟ್ರ ಧ್ವಜವನ್ನು ಹತ್ತಿಸಿ ಸಭೆಯು/ನಡೆಯಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀಮತಿ ಕಿಲ್ಪಾಡಿ ಅಂಬಾಬಾಯಿಯವರೂ ಕಾರ್ಯದರ್ಶಿಯವರಾದ ಬಿ ಶ್ರೀನಿವಾಸ ಶ್ಯಾನುಭಾಗರೂ ಪ್ರತಿನಿಧಿಗಳಾಗಿ ಮಂಗಳೂರಿನಿಂದ ಬಂದಿದ್ದ ೮ ಮಂದಿ, ಅಡ್ಯಾರ ಇಬ್ಬರು, ಪುತ್ತೂರು ೧, ಪಾಣೆಮಂಗಳೂರು ೩, ಅಮ್ಮುಣಜೆ ೧, ಬಂಟವಾಳ ೧೨ ಮಂದಿ ಜಗಲಿಯ ಮುಂದುಗಡೆ ನಿಂತಿದ್ದರು. ಠರಾವುಗಳು ಸರ್ವಸಮ್ಮತದಿಂದ ಪಾಸಾಗಿ ಜಯಕಾರ ಹಾಕಿ, ಮೆರವಣಿಗೆಯಾಗಿ ಕಂಚಿಕಾರಕೊಟಲಿನ ಹತ್ತಿರ ಬರುವಾಗ ಪೋಲೀಸ ಫೌಜು ಬಂದು ಶ್ರೀ ಅಂಬಾಬಾಯಿಯವರ ಕೈಯಿಂದ ಧ್ವಜವನ್ನು ತೆಗೆದುಕೊಂಡು ಎಲ್ಲರನ್ನು ಕೈದುಮಾಡಿ ೨೨ ಜನರನ್ನು ಪೋಲೀಸ ವೇನ್‌ನಲ್ಲಿ ಬಂಟವಾಳ ಕಚೇರಿಗೆ ಕೊಂಡು ಹೋದರು. ೫ ಮಂದಿಯನ್ನು ಪೋಲೀಸ ಗಾರ್ಡಿನಲ್ಲಿ ನಡೆಸಿಕೊಂಡು ತಂದರು.

ಪೇಟೆಯಲ್ಲಿ ಹರತಾಳವನ್ನು ಆಚರಿಸಿದ್ದರು. ಇವರನ್ನು ಕೈದುಮಾಡಿ ತಂದೊಡನೆ ಹೊಸಪೇಟೆಯಿಂದ ೬ ಮಂದಿ ಸ್ವಯಂಸೇವಕರ ಮೆರವಣಿಗೆಯು ದೇವಸ್ಥಾನದ ಬಾಗಲಿಗೆ ಬರುವಷ್ಟರಲ್ಲಿ ಮೆರವಣಿಗೆಗಾರರನ್ನು ಕೈದುಮಾಡಲಾಯಿತು. ಅರ್ಧ ಗಂಟೆಯ ನಂತರ ೬ ಮಂದಿಗಳ ಇನ್ನೊಂದು ಮೆರವಣಿಗೆಯು ಕೊಟ್ಟಿವನ್ಗಂಡಿಯಿಂದ ಹೊರಟು ಬರುವಾಗ ಕೈದುಮಾಡಲ್ಪಟ್ಟಿತು. ಒಟ್ಟಾರೆ ಕೈದುಮಾಡಲ್ಪಟ್ಟ ೪೧ ಮಂದಿಯಲ್ಲಿ ೯ ಮಂದಿಯನ್ನು ಮಾತ್ರವೇ ರಿಮಾಂಡಿನಲ್ಲಿಟ್ಟು ಉಳಿದವರನ್ನು ರಾತ್ರೆ ಸುಮಾರು ೧೦ ಗಂಟೆಗೆ ಬಿಟ್ಟುಬಿಟ್ಟರು. ರಿಮಾಂಡಿನಲ್ಲಿರಿಸಲ್ಪಟ್ಟ ಶ್ರೀಮತಿ ಕಿಲ್ಪಾಡಿ ಅಂಬಾಬಾಯಿ, ಶ್ರೀಗಳಾದ ಶ್ರೀನಿವಾಸ ಶ್ಯಾನಭಾಗ, ಕೋಟೆಚೇರಿ ಪದ್ಮನಾಭ ಶೆಣೈ, ಮಾಧವ ಪೈ, ಕೇಶವ ಗೋಪಾಲ ಬಾಳಿಗಾ, ಕಮಲಾಕ್ಷ ಪ್ರಭು, ಸೈದರ ಸಾಹೇಬ, ಪಾಣೆಮಂಗಳೂರು ಲಕ್ಷ್ಮಣಪ್ಪ, ಶೀನಪ್ಪ ಹೆಗ್ಡೆ ಈ ೯ ಮಂದಿ ತಾ ೫ನೇ ಮಧ್ಯಾಹ್ನ ೧೧ ಗಂಟೆಗೆ ಸ್ಪೆಶಲ್ ಮೆಜಿಸ್ಟ್ರೇಟರಲ್ಲಿ ಕಳುಹಿಸಿದರು.

ತಾ ೭ಕ್ಕೆ ಶ್ರೀಮತಿ ಕಿಲ್ಪಾಡಿ ಅಂಬಾಬಾಯಿ, ಶ್ರೀಯುತ ರಾ. ಬಿ ಶ್ರೀನಿವಾಸ ಶೆಣೈ ಬಿ ಕಮಲಾಕ್ಷ ಪ್ರಭು ಬಿ ಕೇಶವ ಬಾಳಿಗಾ ಇವರಿಗೆ ೪ ೪ ತಿಂಗಳ ಸಜೆ. ಅಮ್ಮುಣಜೆ ಗುತ್ತು ಶೀನಪ್ಪ ಹೆಗ್ಡೆ, ಪಾಣೆಮಂಗಳೂರು ಲಕ್ಷ್ಮಣಪ್ಪ ಕೋಟೆಚೇರಿ ಪದ್ಮನಾಭ ಶೆಣೈ ಇವರಿಗೆ ಆರಾರು ತಿಂಗಳ ಸಜೆ ವಿಧಿಸಲಾಯಿತು. ಸೈದರ ಸಾಹೇಬರ ತನಿಖೆಯನ್ನು ಬಾಕಿ ಇಡಲಾಗಿದೆ.

ಕಾಸರಗೋಡು — ತಾ ೪ರಲ್ಲಿ ಪೇಟೆಯ ಕೆಲವು ಮಂದಿ ರಾಷ್ಟ್ರ ಧ್ವಜಗಳನ್ನು ಹಿಡುಕೊಂಡು ಬೀದಿಗಳಲ್ಲಿ ಹೋಗುವಾಗ ಪೋಲೀಸರು ಅವರನ್ನು ಬೆತ್ತಗಳಿಂದ ಹೊಡೆದು ಚದರಿಸಿ ಅವರಲ್ಲಿ ರಾಮದೇವರನ್ನು ಸ್ಟೇಷನಿಗೆ ಕೊಂಡೊಯ್ದರು. ಅದೇ ಸಾಯಂಕಾಲ ಕೆಲವರು ಜಯಕಾರಗಳನ್ನು ಹಾಕುತ್ತ ಬೀದಿಗಳಲ್ಲಿ ಮೆರವಣಿಗೆಯಾಗಿ ಕರಪತ್ರಗಳನ್ನು ಹಂಚುತ್ತಾ ಹೋದರು. ಪೋಲೀಸರು ಅವರನ್ನು ಬೆತ್ತಗಳಿಂದ ಹೊಡೆದರೂ ಅವರು ಚದರದಿದ್ದುದರಿಂದ ಕೆಲವರನ್ನು ಸ್ಟೇಷನಿಗೆ ಕೊಂಡುಹೋಗಿ ರಾತ್ರೆ ಎಂಟಕ್ಕೆ ಬಿಟ್ಟರು.

ನೋಟೀಸು

ಮಂಗಳೂರು ತಾಲೂಕು [illegible] ಗ್ರಾಮದಲ್ಲಿ ವಾಸ ಪದ್ಮನಾಭ ಭಟ್ಟ [illegible] ನೋಟೀಸು ಕೊಡುವುದೇನೆಂದರೆ—

[illegible] ತಾ 2-6-32ರಲ್ಲಿ ರೂ 400 [illegible] ಬರಕೊಟ್ಟ ನೋಟು [illegible] ಕೊಡಬೇಕಾಗಿ ಬರೆದುಕೊಳ್ಳುತ್ತೇನೆ. ಅಲ್ಲದೆ [illegible] ಟ್ರಾನ್ಸ್‌ಫರ್ [illegible] ತಿಳಿಸಿದೇನೆ

ಉಡುಪಿ ೭-೭-'೩೨ ಪದ್ಮನಾಭಭಟ್ಟನ ರುಜು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 56/1932

ಬಾಗೀರಥಿ ಅಮ್ಮ—ಪಿಟಿಷನರ್.
ವೆಂಕಟೇಶ ಭಟ್ಟ ಮುಂತಾದ 2 ಜನರು —ಎದುರು.

ಮೇಲ್ಕಂಡ ವ್ಯವಹಾರದಲ್ಲಿ ಪಿಟಿಷನರಳ ಮೃತ ಪಟ್ಟ ಗಂಡ ಕೇಶವ ಭಟ್ಟನಿಗೆ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡ ಪ್ರೊವಿಡೆಂಟ್ ಫಂಡಿನಿಂದ ಬರುವ ರೂ 91—೨—0 ಮತ್ತು ಪುತ್ತೂರು ತಾಲೂಕು ಬೋರ್ಡ ನೌಕರರ [illegible] ಮ್ಯೂಚುವಲ್ ಬೆನಿಫಿಟ್ ಫಂಡಿನಿಂದ ಬರುವ ರೂ 145—14—4 ಕೂಡಿಕೆ ವಸೂಲು ಮಾಡುವಿಕ್ಕೆ ಪಿಟಿಷನರಿಗೆ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 19-7-1932ಕ್ಕೆ ತನಿಖೆಗ ಇಟ್ಟಿರುತ್ತದೆಂತಲೂ ಅದರಲ್ಲಿ ಆಕ್ಷೇಪ ಇದ್ದವರು ಸದರಿ ವಾಯಿದೆ ದಿವಸ ಕೋರ್ಟಿನ ಮುಂದೆ ಹಾಜರುಪಡಿಸಿಕೊಳ್ಳತಕ್ಕದ್ದೆಂತಲೂ ಈ ಮೂಲಕ ತಿಳಿಸಲಾಗಿಯದೆ.

Puttur, 7-7-1932 — **B. Shivarama Holla,**
Advocate for Petitioner.

[illegible]

[illegible]

[illegible]	[illegible]	[illegible]	[illegible]	[illegible]	[illegible]	[illegible]	[illegible]	
							ಉ.	ಅ.
9	[illegible]	[illegible]	[illegible]	[illegible]	[illegible]	[illegible]	6.12	6 0
10	[illegible]	[illegible]	[illegible]	ಹಸ್ತ	[illegible]	[illegible]	6 2	6. 0
11	[illegible]	[illegible]	[illegible]	ಚಿತ್ತಾ	[illegible]	[illegible]	6.12	6 0
12	[illegible]	[illegible]	[illegible]	ಸ್ವಾತಿ	[illegible]	[illegible]	6.12	6.10
13	[illegible]	[illegible]	[illegible]	ವಿಶಾಖಾ	[illegible]	[illegible]	6,12	6 0
14	[illegible]	[illegible]	[illegible]	ಅನುರಾಧಾ	[illegible]	[illegible]	6.13	6 59
15	[illegible]	[illegible]	[illegible]	ಜ್ಯೇಷ್ಠಾ	[illegible]	[illegible]	6 13	6 9

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು)		Rainfall ಮಳೆ	
	Maximum ಹೆಚ್ಚಿನದು	Minimum ಕಡಿಮೆಯದು	ದಿನದ ಮಳೆ	ಒಟ್ಟು ಮಳೆ.
1	86— 7	75— 1	0—18	—
2	84— 7	75— 1	0—73	—
3	85— 7	75— 8	0—38	—
4	80— 7	76— 1	0—20	—
5	84— 0	74— 5	2—30	—
6	79— 6	73— 9	1—03	—
7	80— 6	72— 7	1—18	54–75

ಮಂಗಳೂರಿನ ಪೇಟೆ ಧಾರಣೆ

ಜಿನಸು	ಇಂದ ರೂ	ಆ	ವರೆಗೆ ರೂ	ಆ
ರಾಶಿ ಅಕ್ಕಿ	3	8	4	4
[illegible]	4	8		
ಗುಡ್ಡ	4	4	4	
ಸುಗ್ಗಿ	3		4	
ಊರ ಅವ್ಲರ್ ಬೆಳ್ತಿಗೆ	4	8	5	4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8		8	4
[illegible] ಬೆಳ್ತಿಗೆ ಮುಡಿ ೧ಕ್ಕೆ	4	10	4	12
ಗೋಧಿ ಗೋಣಿ ೧ಕ್ಕೆ	9	8	14	8
ತೊಗರಿ ಗೋಣಿ ೧ಕ್ಕೆ	12	0	14	8
ಹುರುಳಿ ಗೋಣಿ ೧ಕ್ಕೆ	6	2	7	4
ಕಡಲೆ ಗೋಣಿ ೧ಕ್ಕೆ	8	8	12	8
[illegible] ಗೋಣಿ ೧ಕ್ಕೆ	13	8	21	0
ಉದ್ದು ಗೋಣಿ ೧ಕ್ಕೆ	11	8	3	0
ಹೆಸರು ಗೋಣಿ ೧ಕ್ಕೆ	10	4	1	
ಊರು ಬೆಲ್ಲ ಖಂಡಿ ೧ಕ್ಕೆ	[illegible]	0	35	0
ಉಪ್ಪು ಗೋಣಿ ೧ಕ್ಕೆ	5	4	5	8
ಕೊಬ್ಬರಿ ಖಂಡಿ ೧ಕ್ಕೆ	65		72	
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	25	8	26	
ಎಳ್ಳಿಂಡಿ ಖಂಡಿ ೧ಕ್ಕೆ	2	4	26	18
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	5	4	6	6
ಎಳ್ಳೆಣ್ಣೆ ಮುಡಿ ೧ಕ್ಕೆ	8	12	[illegible]	0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	4	[illegible]	8	12
[illegible] ಸಕ್ಕರೆ ಮುಡಿ ೧ಕ್ಕೆ	4	2	4	3
[illegible]	4	0	5	0
ಸಾಸಿವೆ ಮುಡಿ ೧ಕ್ಕೆ	5	4	6	0
[illegible] ಕಾಫಿ ಖಂಡಿ ೧ಕ್ಕೆ	275	0	310	
ಕಾಳುಮೆಣಸು ಖಂಡಿ ೧ಕ್ಕೆ	170	0	180	
[illegible] ಮುಡಿ ೧ಕ್ಕೆ	27	0	28	
ಗೇರುಬೀಜ ಮುಡಿ ೧ಕ್ಕೆ	3	0	3	4
[illegible] ಖಂಡಿ ೧ಕ್ಕೆ	35	0	35	8
[illegible] ಮುಡಿ ೧ಕ್ಕೆ	12	8	13	0
[illegible] ಮುಡಿ ೧ಕ್ಕೆ	15	0	16	0
[illegible] ಸೇರು ೧ಕ್ಕೆ	14	4	14	12
[illegible] ಮುಡಿ ೧ಕ್ಕೆ	12	0	14	8
[illegible] ೧ಕ್ಕೆ	17	14	17	14
[illegible] ಮುಡಿ ೧ಕ್ಕೆ	40		—	
[illegible] ಖಂಡಿ ೧ಕ್ಕೆ	330		—	
[illegible]	180		205	
[illegible]	140		145	

[illegible] Public Conveyance Motor Service

CHIKMAGALUR

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ಟೆಲಿಗ್ರಾಮ ಕನ್ವೆಯನ್ಸ್ Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೋಗಿ ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1 30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಲಭವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಕೂಡಲೆ ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ ೪। ಗಂಟೆ ಒಳಗೆ ಚಿಕ್ಕಮಗಳೂರಿಗೂ [illegible] ಪ್ರಯಾಣಿಕರಿಗೆ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವುಂಟು. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಬೆಂಗಳೂರು ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನ್ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಬೆಂಗಳೂರಿಗೂ [illegible] ಪೂನಾ ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲವಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 1 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು [illegible] ಮೈಸೂರು ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲವಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ ಮ್ಯಾನೇಜಿಂಗ್ ಪ್ರೊಪ್ರೈಟರರಿಗೆ ಬರೆದುಕೊಳ್ಳಬಹುದು

ಬಿ ಎಸ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO. LTD, MANGALORE.

ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಲ್ಲಿಂದ ರಚಿತವಾಗಿ 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಬಸ್ಸುಗಳಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವವರ ಸಲುವಾಗಿ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸಿನ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು ನೋಡಬಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವವರು, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಅನುಕೂಲವಾಗುತ್ತದೆ.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಣ್ಣನೂರಿಗೆ [illegible] ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲುಪಬಹುದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದು [illegible]

Secretary.

The Canara Public Conveyance Company, Ltd., Mangalore

ಮಹಾತ್ಮರೂ ವರ್ಣಾಶ್ರಮಧರ್ಮವೂ

(ಹಿಂದೂ ಧರ್ಮವೆಂದರೇನೆಂಬುದನ್ನು ಮಹಾತ್ಮಾಗಾಂಧಿಯವರ ಕೆಳಗಿನ ಅಭಿಪ್ರಾಯಗಳಿಂದ ನಾವು ಅರಿತುಕೊಳ್ಳಬೇಕಾಗಿದೆ.)

(ಕಳೆದ ಸಂಚಿಕೆಯಿಂದ ಮುಂದುವರಿದುದು.)

[illegible]ನ ಪ್ರತಿಪಾದನೆಗಳಿಂದ, [illegible] ಪ್ರತ್ಯೇಕ ಮತ್ತು ವಿಶೇಷ ಧರ್ಮವಲ್ಲವೆಂದು ತಿಳಿದುಕೊಳ್ಳಬಹುದು. ಹಿಂದೂ ಮತದನುಸಾರವಾಗಿ ಪ್ರಪಂಚದ ವಿಭೂತಿಪುರುಷರಾದ ಸಂತರುಗಳನ್ನು ಧ್ಯಾನಿಸಬಹುದು. ಹಿಂದೂ ಮತವು ಪ್ರಚಾರಕಾರ್ಯವನ್ನೆಸಗುವುದಿಲ್ಲ. ಹಾಗಿರುವುದಾದರೂ, ಅದರ ಅವಲಂಬನೆಯನ್ನು ಹೊರಗಿನವರು ಮಾಡಿರುತ್ತಾರೆ. ಇದಕ್ಕೆ ಅದರ ಅಗೋಚರ ಶಕ್ತಿಯೊಂದೇ ಕಾರಣವು. ಪ್ರತಿಯೊಬ್ಬನೂ ತನ್ನ ವಿಶ್ವಾಸ ಅಥವಾ ಧರ್ಮದನುಸಾರವಾಗಿ ದೇವರನ್ನು ಪೂಜಿಸಬೇಕೆಂದು ಹಿಂದೂ ಮತವು ಸಾರುತ್ತದೆ. ಆದುದರಿಂದಲೇ ಅದು ಎಲ್ಲಾ ಮತಗಳೊಡನೆ ಬೆರೆತು ಸುಶಾಂತತೆಯಿಂದಿದೆ.

ಅಸ್ಪೃಶ್ಯತೆ!

ಹಿಂದೂ ಮತವೆಂದರೇನೆಂದು ನಾನು ಹೀಗೆ ಭಾವಿಸುವುದರಿಂದಾಗಿ, ನನಗೆ ಅಸ್ಪೃಶ್ಯತೆಯನ್ನು ಸಹಿಸಲಸಾಧ್ಯವಾಗಿರುತ್ತದೆ. ಅಸ್ಪೃಶ್ಯತೆಯೆಂಬುದು ಮಾನವನ ಕಲ್ಪನೆಯು. ಈ ಅಸ್ಪೃಶ್ಯತಾ ಪದ್ಧತಿಯು ಪುರಾತನ ಕಾಲದಿಂದಲೇ ಇಳಿದು ಬಂದಿರಬಹುದು. ಹೀಗೆ ಪುರಾತನದ ಅನೇಕ ದುಷ್ಟ ಪದ್ಧತಿಗಳು ನಮ್ಮಲ್ಲಿ ಈಗಲೂ ಇವೆ. ದೇವದಾಸೀ ಪದ್ಧತಿಯನ್ನು ಕಂಡು ಎಂತಹ ಹಿಂದುವೂ ನಾಚಿಕೆಪಡಬೇಕಾಗುತ್ತದೆ. ಹಾಗಿದ್ದರೂ, ಈ ರೂಢಿಯು ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ನಡೆಯುತ್ತಿದೆ. ಕಾಳಿಕಾಂಬೆಗೆ ದನ, ಕುರಿ, ಆಡುಗಳನ್ನು ಸಂಹರಿಸುವ ಈ ಪದ್ಧತಿಯನ್ನು ನಾನು ಹಿಂದೂತ್ವವೆನ್ನಲಾರೆ. ಅದು ಹಿಂದೂ ಮತಕ್ಕೆ ಸೇರಿದಂತಹುದಲ್ಲ. ಹಿಂದೂ ಮತವೆಂಬುದು ಅಸಂಖ್ಯಾತ ವರ್ಷಗಳಿಂದ ವಿಕಸನೆಯನ್ನು ಹೊಂದಿಕೊಂಡು ಬಂದ ಒಂದು ಧರ್ಮವರ್ಗವಾಗಿರುತ್ತದೆ. ಹಿಂದೂತ್ವವೆಂಬ ಹೆಸರು ಹಿಂದೂದೇಶದ ಜನರಿಗೆ ಅನ್ಯರು ಕೊಟ್ಟ ಹೆಸರು. ಒಂದು ಕಾಲದಲ್ಲಿ ಧರ್ಮದ ನೆವದಿಂದ ಪ್ರಾಣಿಬಲಿಯು ರೂಢಿಯಲ್ಲಿತ್ತೆಂಬುದು ನಿಸ್ಸಂದೇಹವಾದುದು. ಆದರೆ ಅದು ಒಂದು ಧರ್ಮವಲ್ಲ—ಅಲ್ಲದೆ ಹಿಂದೂ ಧರ್ಮವೂ ಅಲ್ಲ. ನಮ್ಮ ಪೂರ್ವಜರು ಗೋರಕ್ಷಣೆಗೆ ಪ್ರಾರಂಭಿಸಿದಾಗ ಅವರಲ್ಲಿ ಕೆಲವರು ಗೋಮಾಂಸ ಭಕ್ಷಣೆಯನ್ನು ಮಾಡುವುದನ್ನು ಬಿಡಲಿಲ್ಲ. ಇದರಿಂದಾಗಿ ಅಂತಹವರನ್ನು ಜಾತಿಬಾಹಿರರನ್ನಾಗಿ ಮಾಡಲಾಯಿತು. ಅಂತರ್ಕಲಹವು ವಿಪರೀತವಾಯಿತು. ಮಾಂಸಭಕ್ಷಕರನ್ನು ಜಾತಿಬಾಹಿರರನ್ನಾಗಿ ಮಾಡಿದುದಲ್ಲದೆ, ಅವರು ಮಾಡಿದ ಪಾಪದ ಪರಿಣಾಮವು ಅವರ ಮಕ್ಕಳ ಮರಿಗಳ ಮೇಲೂ ಉಂಟಾಯಿತು—ಅವರನ್ನು ಬಹಿಷ್ಕರಿಸಲಾಯಿತು. ಈ ರೀತಿಯ ಬಹಿಷ್ಕಾರವನ್ನು ಪುಷ್ಟೀಕರಿಸಿ ನಮ್ಮ ಶಾಸ್ತ್ರಗಳಲ್ಲಿ ಶ್ಲೋಕಗಳೂ ಬರೆಯಲ್ಪಟ್ಟವು. ಈ ರೀತಿಯ ಬಹಿಷ್ಕಾರ ಕ್ರಮವು ಮೊದಲು ಸತ್ಪರಿಣಾಮಕಾರಿಯಾಯಿತಾದರೂ ಅದನ್ನು ಮತ್ತೂ ಮುಂದೊತ್ತಿದುದರಿಂದಾಗಿ ದುಷ್ಪರಿಣಾಮಗಳೂ ಉತ್ಪನ್ನವಾಗುತ್ತ ಬಂದುವು. ಕೊನೆಗೆ ಅದರ ಅರ್ಥವು ಅನರ್ಥವಾಗಿಬಿಟ್ಟಿತು. ನನ್ನ ಈ ಪ್ರತಿಪಾದನೆಯು ಸಮಂಜಸವೋ ಅಸಮಂಜಸವೋ—ಹೇಗೂ ಇರಲಿ, ಅಸ್ಪೃಶ್ಯತೆಯೆಂಬುದು ಮಾತ್ರ ನನ್ನ ಬುದ್ಧಿಗೆ ನಿಲುಕದ ವಿಷಯವಾಗಿರುತ್ತದೆ—ದಯೆ, ಕರುಣೆ, ಪ್ರೇಮಗಳಿಗೆ ಅದು ಎಡೆಯನ್ನೀಯುವುದಿಲ್ಲ. ಗೋರಕ್ಷಣೆಯನ್ನು ಸಾಕ್ಷ್ಯರೂಪವಾಗಿ ಬೋಧಿಸುವ ಹಿಂದೂ ಮತವ, ಮಾನವರನ್ನು ಬಹಿಷ್ಕರಿಸುವ ಪದ್ಧತಿಯಿದು ನನಗೆ ಸರಿಯೆಂದು ತೋರುವುದಿಲ್ಲ. ಪತಿತವರ್ಗದವರು ನನ್ನವರಲ್ಲವೆಂದು ನಾನು ಹೇಳಿಕೊಳ್ಳುವುದರ ಬದಲಿಗೆ ನನ್ನನ್ನು ತುಂಡುತುಂಡು ಮಾಡಿ ಕೊಚ್ಚಿಬಿಡುವುದು ಒಳ್ಳೆಯದು. ನನಗೆ ಅದಾದರೂ ತೃಪ್ತಿಕರ ವಿಷಯವಾಗಿರುತ್ತದೆ...... ಎಷ್ಟರ ತನಕ ಅಸ್ಪೃಶ್ಯತೆಯ ದುರ್ಗಂಧಗಾಳಿಯು ಪಾವನವಾದ ಹಿಂದೂ ಧರ್ಮದ ಮೇಲೆ ಬೀಸುತ್ತಿದೆಯೋ, ಎಷ್ಟರ ತನಕ ಅಸ್ಪೃಶ್ಯತೆಯನ್ನು ಹಿಂದೂ ಮತದಲ್ಲಿಟ್ಟುಕೊಳ್ಳಲಾಗುತ್ತದೋ, ಅಷ್ಟು ತನಕ ಹಿಂದೂಗಳು ಸ್ವಾತಂತ್ರ್ಯಕ್ಕರ್ಹರಲ್ಲ. ನಾನು ಹಿಂದೂ ಮತವನ್ನು ನನ್ನ ಪ್ರಾಣಕ್ಕಿಂತಲೂ ಹೆಚ್ಚೆಂದು ಭಾವಿಸುತ್ತೇನೆ, ಹಾಗಿರುವಾಗ, ಅದರಲ್ಲಿರುವ ಅಸ್ಪೃಶ್ಯತೆಯ ರೂಢಿಯನ್ನು ಮಾತ್ರ ನಾನು ಕಂಡು ಅತ್ಯಂತ ವ್ಯಸನಗೊಳ್ಳುತ್ತೇನೆ. ನಮ್ಮ ನಾವುಗಳೇ [illegible] ಅಸ್ಪೃಶ್ಯರನ್ನು ಬಹಿಷ್ಕರಿಸಿ, ನಾವು ದೇವರನ್ನು ತಿರಸ್ಕರಿಸಿದಂತಾಗುವುದಲ್ಲದೆ, ಅವನ ಮುಂದೆ ಪಾಪವನ್ನು ಮಾಡಿದಂತೆಯೂ ಆಗುತ್ತದೆ.

ದೇವರೆಂದರೇನು?

ನನಗೆ ದೇವರೆಂದರೆ ಸತ್ಯ ಮತ್ತು ಪ್ರೇಮ. ದೇವರೆಂಬುವನು ಧರ್ಮ, ಸದ್ಗುಣ. ದೇವರೆಂಬುದು ಧೈರ್ಯ. ದೇವರೆಂಬವನು ಪ್ರಕಾಶಮಯನಾದ ಜೀವಂತನಾದ [illegible]. ಆದರೂ ಅವನು ಇವುಗಳೆಲ್ಲಕ್ಕಿಂತ ಮೇಲಾದವನು. ದೇವರೆಂಬವನು ಸಚ್ಚಿತ್ತ. ನಾಸ್ತಿಕತ್ವವೂ ನಾಸ್ತಿಕನೂ ಅವನೇ. ಹೃದಯಶೋಧಕನೂ ದೇವರೇ. ಅವನು ವರ್ಣನಾತೀತನು. ನಮ್ಮ ಅಂತರ್ಯದ ಕುರಿತು ನಮಗೆ ತಿಳಿದಿರುವುದಕ್ಕಿಂತಲೂ ಹೆಚ್ಚಿನ ಸಂಗತಿಗಳು ಅವನಿಗೆ ತಿಳಿದಿವೆ. ನಾವು ಏನನ್ನಾದರೂ ಹೇಳಿಬಿಟ್ಟರೆ ಅದರಿಂದ ಅವನಿಗೆ ನೋವಾಗುವುದಿಲ್ಲ, ಕಾರಣವೇನೆಂದರೆ, ನಮ್ಮಲ್ಲಿ ಕೆಲವರು ತಿಳಿದೂ, ಕೆಲವರು ತಿಳಿಯದೆಯೂ ಮಾತುಗಳನ್ನಾಡಿಬಿಡುತ್ತಾರೆ. ಯಾರಿಗೆ ಅವನು ಪ್ರತ್ಯಕ್ಷಸ್ವರೂಪಿಯಾಗಿ ತಮ್ಮ ಬಳಿಯಲ್ಲಿರಬೇಕೆಂದುಂಟೋ, ಅಂತಹವರಿಗೆ ಅವನು ಪ್ರತ್ಯಕ್ಷ ದರ್ಶನವನ್ನೀಯುತ್ತಾನೆ. ಅವನ ಸ್ಪರ್ಶವು ಯಾರಿಗೆ ಆಗಬೇಕೆಂದಿದೆಯೋ ಅಂತಹವರಲ್ಲಿ ಅವನು ಮೂರ್ತೀಭವಿಸಿ ಅಡಗಿಕೊಂಡಿರುತ್ತಾನೆ. ಅವನು ಸಾರದಲ್ಲಿ ಸಾಕಾರವು. ಯಾರಲ್ಲಿ ವಿಶ್ವಾಸವಿದೆಯೋ ಅವರಿಗೆ ಅವನು ವಿಶ್ವಸ್ತರೂಪಿಯು. ಸಕಲ ಜನರಿಗೂ ಅವನು ಸಕಲ ಸಂಗತಿಗಳ ರೂಪದಲ್ಲಿದ್ದಾನೆ. ಅವನು ನಮ್ಮಲ್ಲಿದ್ದಾನೆ, ಆದರೂ ನಮಗಿಂತ ಮೇಲಾಗಿಯೂ, ದೂರವಾಗಿಯೂ ಇದ್ದಾನೆ. ಕಾಂಗ್ರೆಸ್ಸಿನಿಂದ ದೇವರು ಎಂಬ ಶಬ್ದವನ್ನು ಒಬ್ಬನು ತೆಗೆದುಹಾಕಬಹುದು. ಆದರೆ ಅವನು ಆ ವಸ್ತುವನ್ನು ಮಾತ್ರ ತೆಗೆದುಹಾಕಲಾರನು. ಮನಸ್ಸಾಕ್ಷಿಯೆಂಬುದು ದೇವರೆಂಬ ಮೂರು ಅಕ್ಷರಗಳೊಡನೆ ಸಂಯೋಜಿತವಾಗಿದೆ. ತನ್ನ ಹೆಸರಿನಲ್ಲಿ ಅನಿರ್ವಚನೀಯವಾದ ಅನ್ಯಾಯವು ನಡೆಯುತ್ತದೆಂದು ದೇವರು ತನ್ನ ಸೃಷ್ಟಿನಿಯಮವನ್ನು ಮರೆತು ಸುಮ್ಮನಿರಲಾರನು. ಅವನು ಅನವರತವೂ ಸಂಕಟದಲ್ಲೇ ನರಳುತ್ತಾ ಇದ್ದಾನೆ. ಅವನು ಮಹಾ ಸಹಿಷ್ಣುವು. ಆದರೆ ಮಹಾ ರುದ್ರನೂ ಅಹುದು. ಇಂದಿನ ಮತ್ತು ಮುಂದಿನ ಪ್ರಪಂಚಗಳಲ್ಲಿ ಅಪ್ರತಿಹತ ಶಕ್ತಿಯುತನೆಂದರೆ ಅವನೇ. ನಾವು ನಮ್ಮ ನೆರೆಹೊರೆಯ ಮನುಷ್ಯಪ್ರಾಣಿಗಳನ್ನು ಯಾವ ದೃಷ್ಟಿಚಕ್ರದಿಂದ ನೋಡುತ್ತೇವೋ ಅದೇ ದೃಷ್ಟಿಚಕ್ರದಿಂದ ಅವನು ನಮ್ಮನ್ನು ನೋಡುತ್ತಾನೆ. ನಮ್ಮ ಅಜ್ಞಾನವು ಅವನೆದುರು ಕ್ಷಮ್ಯವಲ್ಲ—ಹಾಗಿದ್ದರೂ ಅವನು ಕ್ಷಮಾಗುಣ ಸಂಪನ್ನನು—ಏಕೆಂದರೆ, ನಾವು ನಮ್ಮ ದುರಾಚಾರಗಳಿಗಾಗಿ ಪಶ್ಚಾತ್ತಾಪ ಪಡಬೇಕೆಂದು. ಅವನು ನಮಗೆ ಸಮಯವನ್ನು ಕಲ್ಪಿಸಿಕೊಡುತ್ತಾನೆ. ಅವನು ಪ್ರಪಂಚದಲ್ಲೊಬ್ಬ ಮಹಾ ಸ್ವಾತಂತ್ರ್ಯಕಾಂಕ್ಷಿ. ಒಳ್ಳೆಯದು ಮತ್ತು ಕೆಟ್ಟುದು ಇವುಗಳಲ್ಲಿ ಬೇಕಾದುದನ್ನು ನಾವು ಆರಿಸಿಕೊಳ್ಳಲು ನಮಗೆ ಅವನು ಸ್ವಾತಂತ್ರ್ಯವನ್ನಿತ್ತಿದ್ದಾನೆ. ತಂತ್ರಗಾರರಲ್ಲಿ ಅವನು ಮಹಾ ತಂತ್ರಗಾರ—ಕಾರಣ, ಒಮ್ಮೊಮ್ಮೆ ನಮ್ಮ ತುಟಿಯ ವರೆಗೆ ಬಂದ ಪಾತ್ರೆಯನ್ನು ಅವನು ತೆಗೆದು ಹಾರಿಸಿಬಿಡುತ್ತಾನೆ. ನಮ್ಮನ್ನು ದಣಿಸಿ, ಬಳಲಿಸಿ, ಚೆಂಡಾಗಿ ಮಾಡಿ ನಮ್ಮ ಅನವಸ್ಥೆಯನ್ನು ಕಂಡು ನಮಗೆ ಪರಿಹಾಸ್ಯ ಮಾಡುತ್ತಾನೆ. ಅವನ ಈ ಆಟಗಳನ್ನೆಲ್ಲಾ ಹಿಂದೂ ಧರ್ಮವು ಲೀಲೆ ಅಥವಾ ದೃಷ್ಟಿಗೋಚರವಾಗದ ಮಾಯೆ ಎಂದು ಕರೆಯುತ್ತದೆ. ನಾವು ಅಶಾಶ್ವತರು. ಅವನು ಶಾಶ್ವತನು. ನಾವು ನಿಶ್ಶಂಕಿತರಾಗಬೇಕಾದರೆ ಅವನ ನಾಮಸ್ಮರಣೆಯನ್ನು ಮಾಡಿ, ಅವನ ಇಚ್ಛಾ [illegible] ಮಾಡಬೇಕು. ಅವನ ಕೊಳಲ ಧ್ವನಿಗನುಸಾರವಾಗಿ ನಾವು ಕುಣಿದಾಡೋಣ. ಎಲ್ಲವೂ ಸರಿಹೋಗುವುದು.

ಮರ್ಯಾದೆಧರ್ಮ

ನನ್ನ ಧರ್ಮವು ನನ್ನ ಆಚರಣೆಗಾಗಿ ಕೆಲವು ಮರ್ಯಾದೆ ಧರ್ಮಗಳನ್ನು ಸೂಚಿಸಿಟ್ಟಿದೆ. ಪೂರ್ವ ಕಾಲದ ಮಹರ್ಷಿಗಳು ತಮ್ಮ ತಪಶ್ಚರ್ಯದ ಬಲದಿಂದ ಕೆಲವು ಅಗಾಧ ಅಸಮಾನವಾದ ಸತ್ಯ ಸಂಗತಿಗಳನ್ನು ಶೋಧಿಸಿಟ್ಟಿರುವರು. ಈ ವಿಷಯಗಳಲ್ಲಿ ಒಂದೇನೆಂದರೆ—ಮಾನವನ ನೈತಿಕೋದ್ಧಾರವಾಗಬೇಕಾದರೆ ಅವನು ಕೆಲವು ನಿಷಿದ್ಧ ಆಹಾರ ಸೇವನೆಯಿಂದ ದೂರವಿರಬೇಕೆಂದು ಅವರು ಪ್ರತಿಪಾದಿಸಿರುವರು. ಅವುಗಳನ್ನು ಸೇರಿಸಬಾರದೆಂದು ನಿರ್ಧರಿಸಿದರು. ಒಬ್ಬ ಮನುಷ್ಯನು ಪರದೇಶ ಸಂಚಾರಕ್ಕೆ ತೊಡಗಿದನೆಂದು ಭಾವಿಸೋಣ. ಅವನು ಪರದೇಶದಲ್ಲಿ [illegible] ಸೇರಿ ನಡೆಯುವಾಗ ಅವರ ಆಚಾರ ಧರ್ಮಗಳಂತೆ ನಡೆಯಬೇಕಲ್ಲವೇ? ಹಾಗಿರುವುದಾದರೂ, ಆತನು ಹೊರಗಿನಿಂದ ಬಂದ ಅತಿಥಿಗೆ ಅವನ ಧರ್ಮಾನುಗುಣವಾದ ಆಚಾರವಿಚಾರಗಳಿಗೆ ಯೋಗ್ಯವಾದ ಸತ್ಕಾರವನ್ನು ಮಾಡುತ್ತಾರೆ. ಇದಕ್ಕೆ ಮರ್ಯಾದೆ ಧರ್ಮವೆನ್ನುವೆನು. ಮರ್ಯಾದೆ ಧರ್ಮದ ಮೇಲೆ ನನಗೆ ಭರವಸೆಯಿದೆಯಾದರೂ, ಅದು ಹಿಂದೂತ್ವದ ಒಂದು ಭಾಗವೆಂದು ನಾನು ಭಾವಿಸುವುದಿಲ್ಲ. ಮರ್ಯಾದೆ ಧರ್ಮದ ನಿರ್ಬಂಧವು ಕಟ್ಟುದಲ್ಲವಾದರೂ, ಅದನ್ನು ಕಾಲಪ್ರಸ್ಥಾನುಸಾರವಾಗಿ ಬದಲಾಯಿಸಲೂ ಬಹುದು. ಈ ರೀತಿಯ ನಿರ್ಬಂಧವು ಸಹಭೋಜನ ಸಹವಿವಾಹಕಾರಿಗಳಿಗೆ ಸಂಬಂಧಿಸಿರುವುದಿಲ್ಲ. ನಾನು ನನ್ನ ಮಗನನ್ನು ಮುಸಲ್ಮಾನನೊಡನೆ ಉಣ್ಣಬಿಡುವೆನು. ಏತಕ್ಕೆಂದರೆ, ಹಿತಾಹಿತ ಆಹಾರವಾವುದೆಂದು ತಿಳಿದುಕೊಂಡು ಸ್ವೀಕರಿಸುವ ಜ್ಞಾನವು ಅವನಲ್ಲಿರುವುದೆಂದು ನನ್ನ ಮತವಿರುತ್ತದೆ.

ನಾನೂ ಕೂಡ ಮುಸಲ್ಮಾನರಲ್ಲಿ ಊಟಉಪಚಾರಗಳನ್ನು ಮಾಡಲು ಹಿಂಜರಿಯುವುದಿಲ್ಲ. ಕಾರಣವೇನೆಂದರೆ—ನನ್ನ ಆಹಾರದ ಕುರಿತ ನನ್ನ ಸ್ವತಃ ನಿರ್ಬಂಧಗಳಿವೆ. ಅಲಿಪುರದಲ್ಲಿ ನಡೆದ ಒಂದು ವಿದ್ಯಮಾನದ ಕುರಿತು ಹೇಳುತ್ತೇನೆ: ಒಮ್ಮೆ ಸ್ವಾಮಿ ಸತ್ಯದೇವ್ ಮತ್ತು ನಾನು ಅಲ್ಲಿಯ ಖ್ವಾಜಾರವರ ಅತಿಥಿಗಳಾಗಿ ಅವರ ಮನೆಗೆ ಹೋದೆವು. ಸ್ವಾಮಿ ಸತ್ಯದೇವರು ನನ್ನ ಅಭಿಪ್ರಾಯಗಳುಳ್ಳವರಲ್ಲ, ನಮ್ಮ ನಮ್ಮ ಆಲೋಚನೆಗಳ ಕುರಿತು ನಾವು ತರ್ಕಿಸಿದೆವು. ನಾನು ನನ್ನ ನಿರ್ದಿಷ್ಟ ಅಭಿಪ್ರಾಯದಂತೆ ಮುಸಲ್ಮಾನರು ಕೊಟ್ಟ ಆಹಾರವನ್ನು ತಿನ್ನದಿದ್ದರೆ ತಪ್ಪಿತಸ್ಥನಾಗುತ್ತೇನೆ. ಕಾರಣ—ಅವನು ನಮ್ಮನ್ನು ತನ್ನ ಆಹಾರಗಳಿಂದ ಸತ್ಕರಿಸುವುದು ಅವನ ಮರ್ಯಾದೆ ಧರ್ಮವಾಗಿರುತ್ತದೆ ಎಂದೆ. ಆದರೆ ಸ್ವಾಮಿಗಳವರು ಅದಕ್ಕೊಪ್ಪಲಿಲ್ಲ. ಅವರಿಗೆ ಸ್ವಪಾಕದ ಕುರಿತು ಬೇರೆ ಸಾಮಗ್ರಿಗಳನ್ನೊದಗಿಸಿ ಕೊಡಲಾಯಿತು. ಇದೇ ರೀತಿ [illegible] ಸಾಹೇಬರ ಅತಿಥಿಯಾಗಿ ನಾನು ಹೋಗಿದ್ದಾಗಲೂ ಅವರು ನನಗೆ ಬೇಕಾದ ಹಣ್ಣುಹಂಪಲುಗಳನ್ನು ಪೇಟೆಯಿಂದ ತರಿಸಿಕೊಟ್ಟು ನನಗಾಗಿ ಒಬ್ಬ ವಿಪ್ರ ಹಸ್ತದ ಅಡಿಗೆಯವನನ್ನು ಒದಗಿಸಿಕೊಟ್ಟರು.

ಶಾಸ್ತ್ರಪಠನ

ಶಾಸ್ತ್ರಗಳ ಜ್ಞಾನ ಸಂಪಾದನೆಯಾಗಬೇಕಾದರೆ ಜಾಗರೂಕತೆಯು ಪಠನವೂ ವಿಶಾಲವಾದ ಅನುಭವವೂ ಅಗತ್ಯವಾಗಿರುತ್ತವೆ. ಶೂದ್ರರು ಶಾಸ್ತ್ರಪಠನವನ್ನು ಮಾಡಬಾರದೆಂದು ಏಕೆ ನಿರ್ಬಂಧಿಸಿರುವುದಕ್ಕೆ ಒಂದು ಅರ್ಥವಿದೆ. ಶೂದ್ರನೆಂದರೆ ಅಲ್ಪಜ್ಞಾನಿಯಾದ ಮೂಢ ವ್ಯಕ್ತಿ. ಅವನು ಶಾಸ್ತ್ರಪಠನವನ್ನು ಮಾಡಿದರೆ ಅವನು ಅದರ್ಥವನ್ನು ಅನರ್ಥವಾಗಿ ಮಾಡುವ ಸಂಭವವಿದೆ. ಆ ಪ್ರತಿಪಾದನೆಯಲ್ಲಡಗಿಕೊಂಡಿರುವ ಗೂಢಾರ್ಥವನ್ನು ಎಲ್ಲರೂ ಅರಿಯಲಾರರು. ಶಾಸ್ತ್ರದ ಅರ್ಥವನ್ನು ಕಲಿತರೆ ಬುದ್ಧಿಯೋಗವಿಲ್ಲ. 'ನಾನು ಬ್ರಾಹ್ಮಣನೆಂದು ಜಂಭವಾಡುವ ಬ್ರಾಹ್ಮಣನೂ ಪಾಪಪಂಕದಲ್ಲಿ ಮುಳುಗಿದವನಿರಬಹುದು. ಇಂತಹ ಬ್ರಾಹ್ಮಣನು ಶಾಸ್ತ್ರ ಕಲಿತರೆ ಅದರಿಂದ ಎಷ್ಟೊಂದು ಅನರ್ಥವುಂಟಾಗಲಿಕ್ಕಿಲ್ಲ!

ಶಾಸ್ತ್ರಗಳನ್ನನುಸರಿಸುವ ಶಾಸ್ತ್ರಿಯು ಮೊದಲು ನೀತಿ ಮತ್ತು ಪ್ರತಿಷ್ಠೆಗಳುಳ್ಳವನಾಗಿರಬೇಕು. ಸದಾಚಾರದ ಅರ್ಥದಲ್ಲಿರುವ ಮನುಷ್ಯಧರ್ಮಗಳನ್ನು ಅವನು ತಿಳಿದಂತವನಿರಬೇಕು. ಹೆಸರಿಗೆ ಮಾತ್ರವಾದ ಶಾಸ್ತ್ರಜ್ಞಾನವು ನಿಷ್ಪ್ರಯೋಜಕವು. ಶಾಸ್ತ್ರಪಠನಕ್ಕೆ ಗುರುವು ಅಗತ್ಯ. ಆದರೆ ಈಗಿನ ದಿನಗಳಲ್ಲಿ ಗುರುಗಳೆಂಬವರು ಇರುವುದು ಅಪರೂಪವಾದುದರಿಂದ, ನಾವು ಭಕ್ತಿಮಾರ್ಗದರ್ಶಕವಾದ ಸದ್ಗ್ರಂಥ ಪಠನವನ್ನು ಮಾಡಿದರುತ್ತಮವೆಂದು ನಮ್ಮ ಪೂರ್ವಿಕರು ಸಂದೇಶವನ್ನಿತ್ತಿದ್ದಾರೆ. ಯಾರು ಭಕ್ತಿರಹಿತ ವಿಶ್ವಾಸರಹಿತರಾಗಿರುತ್ತಾರೋ, ಅವರು ಶಾಸ್ತ್ರಗಳನ್ನು ತಿಳಿದುಕೊಳ್ಳಲು ಅಯೋಗ್ಯರಾಗಿರುತ್ತಾರೆ. ಜ್ಞಾನಿಗಳು ಶಾಸ್ತ್ರದಿಂದ ಅಗಾಧವಾದ ಜ್ಞಾನಸಂಪಾದನೆಯನ್ನು ಮಾಡುತ್ತಾರೆ. ಆದರೂ ಅವರು ಸಂಪಾದಿಸುವ ಜ್ಞಾನವು ಸತ್ಯವಾದ ಜ್ಞಾನವಲ್ಲ. ಅನುಭವಶಾಲಿಗಳೇ ಶಾಸ್ತ್ರಗಳ ನಿಜಾರ್ಥವನ್ನು ತಿಳಿಯುವರು.

(ಮುಂದಿನ ಸಂಚಿಕೆಯಲ್ಲಿ ಕೊನೆಗೊಳ್ಳುವುದು.)

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂವತ್ಸರದ ಆಷಾಢ ಶು| ೬ ಶನಿವಾರದಿಂದ ಅಂಗೀರಸ ಸಂವತ್ಸರದ ಆಷಾಢ ಶು| ೧೨ ಶುಕ್ರವಾರದ ವರೆಗಿನ ಪಂಚಾಂಗ

(ಗಾಣಿನಯ ವೃಷಭ—ದೇಶ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
9	ಶನಿ	೬	೪೧.೩೦	ಪುಬ್ಬಾ	೧.೧೬	೨೫	6 12	6 0
10	ರವಿ	೭	೩೭ ೦	ಉತ್ತ್ರಾ.	೫೪ ೪೨	೨೬	6 2	6. 0
11	ಸೋಮ	೮	೩೧ ೩	ಚಿತ್ತಾ	೫೦ ೪೦	೨೭	6.12	6 0
12	ಮಂಗಳ	೯	೨೫ ೦	ಸ್ವಾತಿ	೪೬ ೪೧	೨೮	6.12	6.10
13	ಬುಧ	೧೦	೧೯.	ವಿಶಾಖಾ	೪೨.೪೨	೨೯	6.12	6 0
14	ಗುರು	೧೧	೧೪, ೧	ಅನುರಾಧಾ	೪೮ ೪೪	೩೦	6.13	6 59
15	ಶುಕ್ರ	೧೨	೭ ೧೪	ಜ್ಯೇಷ್ಠಾ	೩೫ ೧೨	೩೧	6 13	6. 9

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum [illegible]	Minimum [illegible]	Rainfall ಮಳೆ ದಿನದ ಮಳೆ	ಜುಮುಲಾ ಮಳೆ
1	86— 7	75— 1	0—18	—
2	84— 7	75— 1	0—73	—
3	85— 7	75— 8	0—38	—
4	80— 7	76— 1	0—20	—
5	84— 0	74— 5	2—30	—
6	79— 6	73— 9	1—03	—
7	80— 6	72— 7	1—18	54—75

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ.	ಆ	ವರೆಗೆ ರೂ.	ಆ
ರಾಶಿ ಅಕ್ಕಿ	3	9	4	[illegible]
[illegible]	4	8	[illegible]	[illegible]
ಗುಡ್ಡ	4	0	4	[illegible]
ಸುಗ್ಗಿ	3	1	4	[illegible]
ಊರ ಅವ್ವಲ್ ಬೆಳ್ತಿಗೆ	4	8	5	4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	8	[illegible]	8	4
[illegible] ಬೆಳ್ತಿಗೆ ಮುಡಿ ೧ಕ್ಕೆ	4	10	4	12
ಗೋದಿ ಗೋಣಿ ೧ಕ್ಕೆ	9	8	14	8
ತೊಗರಿ ಗೋಣಿ ೧ಕ್ಕೆ	12	0	12	8
ಹುರುಳಿ ಗೋಣಿ ೧ಕ್ಕೆ	6	2	7	4
ಕಡಲೆ ಗೋಣಿ ೧ಕ್ಕೆ	8	8	12	8
ತೊಗರಿಬೇಳೆ ಗೋಣಿ ೧ಕ್ಕೆ	13	8	21	0
ಉದ್ದು ಗೋಣಿ ೧ಕ್ಕೆ	11	8	13	0
ಹೆಸರು ಗೋಣಿ ೧ಕ್ಕೆ	10	4	11	
ಊರು ಬೆಲ್ಲ ಖಂಡಿ ೧ಕ್ಕೆ	[illegible]	0	30	0
ಉಪ್ಪು ಗೋಣಿ ೧ಕ್ಕೆ	5	4	5	8
ಕೊಬ್ರಿ ಖಂಡಿ ೧ಕ್ಕೆ	65		72	
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	25	8	26	[illegible]
ಎಳ್ಳಿಂಡಿ ಖಂಡಿ ೧ಕ್ಕೆ	26	4	26	18
ಕೊಬ್ರಿ ಎಣ್ಣೆ ಮಣ ೧ಕ್ಕೆ	6	2	6	6
ಎಳ್ಳೆಣ್ಣೆ ಮಣ ೧ಕ್ಕೆ	6	12	7	0
[illegible] ಡಬ್ಬಿಗೆ ೧ಕ್ಕೆ	4	7	8	12
[illegible] ಸಕ್ಕರೆ ಮಣ ೧ಕ್ಕೆ	4	2	4	3
[illegible] ಮೆಣಸು	4	0	5	0
[illegible] ಮುಡಿ ೧ಕ್ಕೆ	5	4	6	0
ನೇಟಿವ್ ಕಾಫಿ ಖಂಡಿ ೧ಕ್ಕೆ	275	0	300	
ಕಾಳುಮೆಣಸು ಖಂಡಿ ೧ಕ್ಕೆ	170	0	180	
ಮೇಲಕ್ಕಿ ಮುಡಿ ೧ಕ್ಕೆ	27	0	28	
ಗೇರುಬೀಜ ಮುಡಿ ೧ಕ್ಕೆ	3	0	3	4
[illegible] ಖಂಡಿ ೧ಕ್ಕೆ	35	0	35	8
ತಾಂಬ್ರ ತಗಡು ಮಣ ೧ಕ್ಕೆ	12	8	13	0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	16	0	18	0
[illegible] ಸೇರು ೧ಕ್ಕೆ	14	4	14	12
ಹಿತ್ತಾಳೆ ತಗಡು ಮಣ ೧ಕ್ಕೆ	12	0	12	8
ಪವನು ೧ಕ್ಕೆ	17	14	17	14
ಹುಣಸೆ ಹುಳಿ ಖಂಡಿ ೧ಕ್ಕೆ	40		—	
[illegible] ಕಾಫಿ ಖಂಡಿ ೧ಕ್ಕೆ	330		—	
ಹಳೆ ಅಡಿಕೆ	180		205	
[illegible] ಅಡಿಕೆ	140		146	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ. ಕನ್ವೆಯನ್ಸ್. Tel. Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, 4½ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಪೂರ, ಗೋವಾ, ಬೆಳಗಾಂ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಬಂಟವಾಳ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧|| ದಿವಸದೊಳಗೂ ಶಿವಮೊಗ್ಗೆಕ್ಕೆ 12 ಗಂಟೆಗಳೊಳಗೂ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd., Mangalore

ಮಹಾತ್ಮರೂ ವರ್ಣಾಶ್ರಮಧರ್ಮವೂ

(ಹಿಂದೂಧರ್ಮವೆಂದರೇನೆಂದು ಮಹಾತ್ಮಾಗಾಂಧಿಯವರ ಕೆಳಗಿನ ಅಭಿಪ್ರಾಯಗಳಿಂದ ನಾವು ಅರಿತುಕೊಳ್ಳಬೇಕಾಗಿದೆ.)

(ಕಳೆದ ಸಂಚಿಕೆಯಿಂದ ಮುಂದುವರಿಸಿದುದು.)

ಮೇಲಿನ ಪ್ರತಿಪಾದನೆಗಳಿಂದ, ಹಿಂದೂತ್ವವು ಒಂದು ಪ್ರತ್ಯೇಕ ಮತ್ತು ವಿಶೇಷ ಧರ್ಮವಲ್ಲವೆಂದು ತಿಳಿದುಕೊಳ್ಳಬಹುದು. ಹಿಂದೂ ಮತದನುಸಾರವಾಗಿ ಪ್ರಪಂಚದ ವಿಭೂತಿ ಪುರುಷರಾದ ಸಂತರುಗಳನ್ನು ಧ್ಯಾನಿಸಬಹುದು. ಹಿಂದೂ ಮತವು ಪ್ರಚಾರಕಾರ್ಯವನ್ನೆಸಗುವುದಿಲ್ಲ. ಹಾಗಿರುವುದಾದರೂ, ಅದರ ಅವಲಂಬನೆಯನ್ನು ಹೊರಗಿನವರು ಮಾಡುತ್ತಾರೆ. ಇದಕ್ಕೆ ಅದರ ಅಗೋಚರ ಶಕ್ತಿಯೊಂದೇ ಕಾರಣವು. ಪ್ರತಿಯೊಬ್ಬನೂ ತನ್ನ ವಿಶ್ವಾಸ ಅಥವಾ ಧರ್ಮದನುಸಾರವಾಗಿ ದೇವರನ್ನು ಪೂಜಿಸಬೇಕೆಂದು ಹಿಂದೂ ಮತವು ಸಾರುತ್ತದೆ. ಆದುದರಿಂದಲೇ ಅದು ಎಲ್ಲಾ ಮತಗಳೊಡನೆ ಬೆರಸಿ ಸುಶಾಂತತೆಯಿಂದಿದೆ

ಅಸ್ಪೃಶ್ಯತೆ

ಹಿಂದೂ ಮತವೆಂದರೇನೆಂದು ನಾನು ಹೀಗೆ ಭಾವಿಸುವುದರಿಂದಾಗಿ, ನನಗೆ ಅಸ್ಪೃಶ್ಯತೆಯನ್ನು ಸಹಿಸಲಸಾಧ್ಯವಾಗುತ್ತದೆ. ಅಸ್ಪೃಶ್ಯತೆಯೆಂಬುದು ಮಾನವನ ಕಲ್ಪನೆಯು. ಈ ಅಸ್ಪೃಶ್ಯತಾ ಪದ್ಧತಿಯು ಪುರಾತನ ಕಾಲದಿಂದಲೇ ಇಳಿದು ಬಂದಿರಬಹುದು. ಹೀಗೆ ಪುರಾತನದ ಅನೇಕ ದುಷ್ಟ ಪದ್ಧತಿಗಳು ನಮ್ಮಲ್ಲಿ ಈಗಲೂ ಇವೆ. ದೇವದಾಸೀ ಪದ್ಧತಿಯನ್ನು ಕಂಡು ಎಂತಹ ಹಿಂದೂವು ನಾಚಿಕೆಪಡಬೇಕಾಗುತ್ತದೆ. ಹಾಗಿದ್ದರೂ, ಈ ರೂಢಿಯು ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ನಡೆಯುತ್ತಿದೆ. ಕಾಳಿಕಾಂಬೆಗೆ ಧನ, ಕುರಿ, ಆಡುಗಳನ್ನು ಸಂಹರಿಸುವ ಈ ಪದ್ಧತಿಯನ್ನು ನಾನು ಹಿಂದೂತ್ವವೆನ್ನಲಾರೆ. ಅದು ಹಿಂದೂ ಮತಕ್ಕೆ ಸೇರುವಂತಹುದಲ್ಲ. ಹಿಂದೂ ಮತವೆಂಬುದು ಅಸಂಖ್ಯಾತ ವರ್ಷಗಳಿಂದ ವಿಕಸನೆಯನ್ನು ಹೊಂದಿಕೊಂಡು ಬಂದ ಒಂದು ಧರ್ಮವರ್ಗವಾಗಿರುತ್ತದೆ. ಹಿಂದೂತ್ವವೆಂಬ ಹೆಸರು ಹಿಂದೂದೇಶದ ಜನರಿಗೆ ಅನ್ಯರು ಕೊಟ್ಟ ಹೆಸರು. ಒಂದು ಕಾಲದಲ್ಲಿ ಧರ್ಮದ ನೆವದಿಂದ ಪ್ರಾಣಿಹಿಂಸೆಯು ರೂಢಿಯಲ್ಲಿತ್ತೆಂಬುದು ನಿಸ್ಸಂದೇಹವಾದುದು. ಆದರೆ ಅದು ಒಂದು ಧರ್ಮವಲ್ಲ—ಅಲ್ಲದೆ ಹಿಂದೂ ಧರ್ಮವೂ ಅಲ್ಲ. ನಮ್ಮ ಪೂರ್ವಜರು ಗೋರಕ್ಷಣೆಗೆ ಪ್ರಾರಂಭಿಸಿದಾಗ ಅವರಲ್ಲಿ ಕೆಲವರು ಗೋಮಾಂಸ ಭಕ್ಷಣೆಯನ್ನು ಮಾಡುವುದನ್ನು ಬಿಡಲಿಲ್ಲ. ಇದರಿಂದಾಗಿ ಅಂತಹವರನ್ನು ಜಾತಿಬಾಹಿರರನ್ನಾಗಿ ಮಾಡಬೇಕಾಯಿತು. ಅಂತಃಕಲಹವು ಉಪಸ್ಥಿತವಾಯಿತು. ಮಾಂಸಭಕ್ಷಕರನ್ನು ಜಾತಿಬಾಹಿರರನ್ನಾಗಿ ಮಾಡಿದುದಲ್ಲದೆ, ಅವರು ಮಾಡಿದ ಪಾಪದ ಪರಿಣಾಮವು ಅವರ ಮಕ್ಕಳ ಮೇಲೂ ಉಂಟಾಯಿತು—ಅವರನ್ನು ಬಹಿಷ್ಕರಿಸಲಾಯಿತು. ಈ ರೀತಿಯ ಬಹಿಷ್ಕಾರವನ್ನು ಪುಷ್ಟೀಕರಿಸಿ ನಮ್ಮ ಶಾಸ್ತ್ರಗಳಲ್ಲಿ ಶ್ಲೋಕಗಳೂ ಬರೆಯಲ್ಪಟ್ಟವು. ಈ ರೀತಿಯ ಬಹಿಷ್ಕಾರ ಕ್ರಮವು ಮೊದಲು ಸತ್ಪರಿಣಾಮಕಾರಿಯಾಯಿತು. ಆದರೆ ಅದನ್ನು ಮತ್ತೂ ಮುಂದೊತ್ತಿದುದರಿಂದಾಗಿ ದುಷ್ಪರಿಣಾಮಗಳೂ ಉತ್ಪನ್ನವಾಗುತ್ತ ಬಂದುವು. ಕಡೆಗೆ ಅದರ ಅರ್ಥವು ಅನರ್ಥವಾಗಿಬಿಟ್ಟಿತು. ನನ್ನ ಈ ಪ್ರತಿಪಾದನೆಯು ಸಮಂಜಸವೋ ಅಸಮಂಜಸವೋ—ಹೇಗೂ ಇರಲಿ, ಅಸ್ಪೃಶ್ಯತೆಯೆಂಬುದು ಮಾತ್ರ ನನ್ನ ಬುದ್ಧಿಗೆ ನಿಲುಕದ ವಿಷಯವಾಗಿರುತ್ತದೆ—ದಯೆ, ಕರುಣೆ, ಪ್ರೇಮಗಳಿಗೆ ಅದು ಎಡೆಯನ್ನೀಯುವುದಿಲ್ಲ. ಗೋರಕ್ಷಣೆಯನ್ನು ಸಾಕ್ಷ್ಯರೂಪವಾಗಿ ಬೋಧಿಸುವ ಹಿಂದೂ ಮತವೇ, ಮಾನವರನ್ನು ಬಹಿಷ್ಕರಿಸುವ ಪದ್ಧತಿಯು ನನಗೆ ಸರಿಯೆಂದು ತೋರುವುದಿಲ್ಲ. ಪತಿತವರ್ಗದವರು ನನ್ನವರಲ್ಲವೆಂದು ನಾನು ಹೇಳಿಕೊಳ್ಳುವುದರ ಬದಲಿಗೆ ನನ್ನನ್ನು ತುಂಡು ತುಂಡು ಮಾಡಿ ಕೊಚ್ಚಿಬಿಡುವುದು ಒಳ್ಳೆಯದು. ನನಗೆ ಅದಾದರೂ ತೃಪ್ತಿಕರ ವಿಷಯವಾಗಿರುತ್ತದೆ. .. ಎಷ್ಟರತನಕ ಅಸ್ಪೃಶ್ಯತೆಯ ದುರ್ಗಂಧಗಾಳಿಯು ಪಾವನವಾದ ಹಿಂದೂ ಧರ್ಮದ ಮೇಲೆ ಬೀಸುತ್ತಿದೆಯೋ, ಎಷ್ಟರತನಕ ಅಸ್ಪೃಶ್ಯತೆಯನ್ನು ಹಿಂದೂ ಮತದಲ್ಲಿಟ್ಟುಕೊಳ್ಳಲಾಗುತ್ತದೋ, ಅಷ್ಟರತನಕ ಹಿಂದೂಗಳು ಸ್ವಾತಂತ್ರ್ಯಕ್ಕರ್ಹರಲ್ಲ. ನಾನು ಹಿಂದೂ ಮತವನ್ನು ನನ್ನ ಪ್ರಾಣಕ್ಕಿಂತಲೂ ಹೆಚ್ಚೆಂದು ಭಾವಿಸುತ್ತೇನೆ; ಹಾಗಿರುವಾಗ, ಅದರಲ್ಲಿರುವ ಅಸ್ಪೃಶ್ಯತೆಯ ರೂಢಿಯನ್ನು ಮಾತ್ರ ನಾನು ಕಂಡು ಅತ್ಯಂತ ವ್ಯಸನಗೊಳ್ಳುತ್ತೇನೆ. ನಮ್ಮ ನಾಲ್ಕನೇ ವರ್ಣದವರಾದ ಅಸ್ಪೃಶ್ಯರನ್ನು ಬಹಿಷ್ಕರಿಸಿ ನಾವು ದೇವರನ್ನು ತಿರಸ್ಕರಿಸಿದಂತಾಗುವುದಲ್ಲದೆ, ಅವನ ಮುಂದೆ ಪಾಪವನ್ನು ಮಾಡಿದಂತೆಯೂ ಆಗುತ್ತದೆ.

ದೇವರೆಂದರೇನು?

ನನಗೆ ದೇವರೆಂದರೆ, ಸತ್ಯ ಮತ್ತು ಪ್ರೇಮ, ದೇವರೆಂಬವನು ಧರ್ಮ, ಸದ್ಗುಣ. ದೇವರೆಂಬುದು ಧೈರ್ಯ. ದೇವರೆಂಬವನು ಪ್ರಕಾಶಮಯನಾದ ಜೀವಂತನಾದ [illegible]. ಆದರೂ ಅವನು ಇವುಗಳೆಲ್ಲಕ್ಕಿಂತ ಮೇಲಾದವನು. ದೇವರೆಂಬವನು ಸತ್‌ಚಿತ್ತ. ನಾಸ್ತಿಕತ್ವವೂ ನಾಸ್ತಿಕನೂ ಅವನೇ. ಹೃದಯಶೋಧಕನೂ ದೇವರೇ. ಅವನು ವರ್ಣನಾತೀತನು. ನಮ್ಮ ಅಂತರ್ಯದ ಕುರಿತು ನಮಗೆ ತಿಳಿದಿರುವುದಕ್ಕಿಂತಲೂ ಹೆಚ್ಚಿನ ಸಂಗತಿಗಳು ಅವನಿಗೆ ತಿಳಿದಿವೆ. ನಾವು ಏನನ್ನಾದರೂ ಹೇಳಿಬಿಟ್ಟರೆ ಅದರಿಂದ ಅವನಿಗೆ ನೋವಾಗುವುದಿಲ್ಲ, ಕಾರಣವೇನೆಂದರೆ, ನಮ್ಮಲ್ಲಿ ಕೆಲವರು ತಿಳಿದೂ, ಕೆಲವರು ತಿಳಿಯದೆಯೂ ಮಾತುಗಳನ್ನಾಡಿಬಿಡುತ್ತಾರೆ. ಯಾರಿಗೆ ಅವನು ಪ್ರತ್ಯಕ್ಷ ಸ್ವರೂಪಿಯಾಗಿ ತಮ್ಮ ಬಳಿಯಲ್ಲಿರಬೇಕೆಂದಿರುವುದೋ, ಅಂತಹವರಿಗೆ ಅವನು ಪ್ರತ್ಯಕ್ಷ ದರ್ಶನವನ್ನೀಯುತ್ತಾನೆ. ಅವನ ಸ್ಪರ್ಶವು ಯಾರಿಗೆ ಬೇಕೆಂದಿದೆಯೋ ಅಂತಹವರಲ್ಲಿ ಅವನು ಮೂರ್ತೀಭವಿಸಿ ಅಡಗಿಕೊಂಡಿರುತ್ತಾನೆ. ಅವನು ಸಾರದಲ್ಲಿ ಸತ್ಸಾರವು. ಯಾರಲ್ಲಿ ವಿಶ್ವಾಸವಿದೆಯೋ ಅವರಿಗೆ ಅವನು ವಿಶ್ವಸ್ವರೂಪಿಯು. ಸಕಲ ಜನರಿಗೂ ಅವನು ಸಕಲ ಸಂಗತಿಗಳ ರೂಪದಲ್ಲಿದ್ದಾನೆ. ಅವನು ನಮ್ಮಲ್ಲಿದ್ದಾನೆ, ಆದರೂ ನಮಗಿಂತ ಮೇಲಾಗಿಯೂ, ದೂರವಾಗಿಯೂ ಇದ್ದಾನೆ. ಕಾಂಗ್ರೆಸ್ಸಿನಿಂದ ದೇವರು ಎಂಬ ಶಬ್ದವನ್ನು ಒಬ್ಬನು ತೆಗೆದುಹಾಕಬಹುದು. ಆದರೆ ಅವನು ಆ ವಸ್ತುವನ್ನು ಮಾತ್ರ ತೆಗೆದುಹಾಕಲಾರನು. ಮನಸ್ಸಾಕ್ಷಿಯೆಂಬುದು ದೇವರೆಂಬ ಮೂರು ಅಕ್ಷರಗಳೊಡನೆ ಸಂಯೋಜಿತವಾಗಿದೆ. ತನ್ನ ಹೆಸರಲ್ಲಿ ಅನಿರ್ವಚನೀಯವಾದ ಅನ್ಯಾಯವು ನಡೆಯುತ್ತದೆಂದು ದೇವರು ತನ್ನ ಸೃಷ್ಟಿನಿಯಮವನ್ನು ಮರೆತು ಸುಮ್ಮನಿರಲಾರನು. ಅವನು ಅನವರತವೂ ಸಂಕಟದಲ್ಲೇ ನರಳುತ್ತಾ ಇದ್ದಾನೆ. ಅವನು ಮಹಾ ಸಹಿಷ್ಣುವು. ಆದರೆ ಮಹಾ ರುದ್ರನೂ ಅಹುದು. ಇಂದಿನ ಮತ್ತು ಮುಂದಿನ ಪ್ರಪಂಚಗಳಲ್ಲಿ ಅತ್ಯಧಿಕ ಶಕ್ತಿಯುತನೆಂದರೆ ಅವನೇ. ನಾವು ನಮ್ಮ ನೆರೆಹೊರೆಯ ಮನುಷ್ಯ ಪ್ರಾಣಿಗಳನ್ನು ಯಾವ ದೃಷ್ಟಿಚಕ್ರದಿಂದ ನೋಡುತ್ತೇವೋ ಅದೇ ದೃಷ್ಟಿಚಕ್ರದಿಂದ ಅವನು ನಮ್ಮನ್ನು ನೋಡುತ್ತಾನೆ. ನಮ್ಮ ಅಜ್ಞಾನವು ಅವನೆದುರು ಕ್ಷಮ್ಯವಲ್ಲ—ಹಾಗಿದ್ದರೂ ಅವನು ಕ್ಷಮಾಗುಣ ಸಂಪನ್ನನು—ಏಕೆಂದರೆ, ನಾವು ನಮ್ಮ ದುರಾಚಾರಗಳಿಗಾಗಿ ಪಶ್ಚಾತ್ತಾಪ ಪಡಬೇಕೆಂದು ಅವನು ನಮಗೆ ಸಮಯವನ್ನು ಕಲ್ಪಿಸಿಕೊಡುತ್ತಾನೆ. ಅವನು ಪ್ರಪಂಚದಲ್ಲಿಟ್ಟ ಮಹಾ ಸ್ವಾತಂತ್ರ್ಯಕಾಂಕ್ಷಿ. ಒಳ್ಳೆಯದು ಮತ್ತು ಕೆಟ್ಟದು ಇವುಗಳಲ್ಲಿ ಬೇಕಾದುದನ್ನು ನಾವು ಆರಿಸಿಕೊಳ್ಳಲು ನಮಗೆ ಅವನು ಸ್ವಾತಂತ್ರ್ಯವನ್ನಿತ್ತಿದ್ದಾನೆ. ತಂತ್ರಗಾರರಲ್ಲಿ ಅವನು ಮಹಾ ತಂತ್ರಗಾರ—ಕಾರಣ, ಒಮ್ಮೊಮ್ಮೆ ನಮ್ಮ ತುಟಿಯವರೆಗೆ ಬಂದ ಪಾತ್ರೆಯನ್ನು ಅವನು ತೆಗೆದು ಹಾಕಿಬಿಡುತ್ತಾನೆ. ನಮ್ಮನ್ನು ದಣಿಸಿ, ಬಳಲಿಸಿ, ಬೆಂಡಾಗಿ ಮಾಡಿ ನಮ್ಮ ಅನವಸ್ಥೆಯನ್ನು ಕಂಡು ನಮಗೆ ಪರಿಹಾಸ್ಯ ಮಾಡುತ್ತಾನೆ. ಅವನ ಈ ಆಟಗಳನ್ನೆಲ್ಲಾ ಹಿಂದೂ ಧರ್ಮವು ಲೀಲೆ ಅಥವಾ ದೃಷ್ಟಿಗೋಚರವಾಗದ ಮಾಯೆ ಎಂದು ಕರೆಯುತ್ತದೆ. ನಾವು ಅಶಾಶ್ವತರು. ಅವನು ಶಾಶ್ವತನು. ನಾವು ನಾಶರಹಿತರಾಗಬೇಕಾದರೆ ಅವನ ನಾಮಸ್ಮರಣೆಯನ್ನು ಮಾಡಿ, ಅವನ ಇಚ್ಛೆ ಪರಿಪೂರ್ಣತೆ ಮಾಡಬೇಕು. ಅವನ ಕೊಳಲ ಧ್ವನಿಗನುಸಾರವಾಗಿ ನಾವು ಕುಣಿದಾಡಿದರೆ ಎಲ್ಲವೂ ಸರಿ ಹೋಗುವುದು

ಮರ್ಯಾದೆಧರ್ಮ

ನನ್ನ ಧರ್ಮವು ನನ್ನ ಆಚರಣೆಗಾಗಿ ಕೆಲವು ಮರ್ಯಾದೆ ಧರ್ಮಗಳನ್ನು ಸೂಚಿಸಿಟ್ಟಿದೆ. ಪೂರ್ವ ಕಾಲದ ಋಷಿಮುನಿಗಳು ತಮ್ಮ ತಪಶ್ಚರ್ಯದ ಬಲದಿಂದ ಕೆಲವು ಅಗಾಧ ಅಸಮಾನವಾದ ಸತ್ಯ ಸಂಗತಿಗಳನ್ನು ಶೋಧಿಸಿಟ್ಟಿರುವರು. ಆ ವಿಷಯಗಳಲ್ಲಿ ಒಂದೇನೆಂದರೆ—ಮಾನವನ ಸ್ಥಿತಿಕೋದ್ಧಾರವಾಗಬೇಕಾದರೆ ಅವನು ಕೆಲವು ನಿಷಿದ್ಧ ಆಹಾರ ಸೇವನೆಯಿಂದ ದೂರವಿರಬೇಕೆಂದು ಅವರು ಪ್ರಚುರಪಡಿಸಿರುವರು. ಅವುಗಳನ್ನು ಸೇವಿಸಬಾರದೆಂದೂ ನಿರ್ಧರಿಸಿದರು. ಒಬ್ಬ ಮನುಷ್ಯನು ಪರದೇಶ ಸಂಚಾರಕ್ಕೆ ತೊಡಗಿದನೆಂದು ಭಾವಿಸೋಣ. ಅವನು ಒಂದೊಂದು ಊರಿನ ಜನರೊಡನೆ [illegible] ನಡೆಯುವಾಗ ಅವರ ಆಚಾರ ಧರ್ಮಗಳಂತೆ ನಡೆಯಬೇಕಲ್ಲವೇ? ಹಾಗಿರುವುದಾದರೂ, ಅವರು ಹೊರಗಿನಿಂದ ಬಂದ ಅತಿಥಿಗೆ ಅವನ ಧರ್ಮಾನುಗುಣವಾದ ಆಚಾರವಿಚಾರಗಳಿಗೆ ಯೋಗ್ಯವಾದ ಸತ್ಕಾರವನ್ನು ಮಾಡುತ್ತಾರೆ. ಇದಕ್ಕೆ ಮರ್ಯಾದೆ ಧರ್ಮವೆನ್ನುವುದು. ಮರ್ಯಾದೆ ಧರ್ಮದ ಮೇಲೆ ನನಗೆ ಭರವಸೆಯಿದೆಯಾದರೂ, ಅದು ಹಿಂದೂತ್ವದ ಒಂದು ಭಾಗವೆಂದು ನಾನು ಭಾವಿಸುವುದಿಲ್ಲ. ಮರ್ಯಾದೆ ಧರ್ಮದ ನಿರ್ಬಂಧವು ಕೆಟ್ಟದಲ್ಲವಾದರೂ, ಅದನ್ನು ಕಾಲಕ್ಕನುಸಾರವಾಗಿ ಬದಲಾಯಿಸಲೂ ಬಹುದು. ಆ ರೀತಿಯ ನಿರ್ಬಂಧವು ಸಹಭೋಜನ ಸಹವಿವಾಹಾದಿಗಳಿಗೆ ಸಂಬಂಧಿಸಿರುವುದಿಲ್ಲ. ನಾನು ನನ್ನ ಮಗನನ್ನು ಮುಸಲ್ಮಾನನೊಡನೆ ಉಣ್ಣಬಿಡುವೆನು. ಏತಕ್ಕೆಂದರೆ, ಹಿತಾಹಿತ ಆಹಾರವಾವುದೆಂದು ತಿಳಿದುಕೊಂಡು ಸ್ವೀಕರಿಸುವ ಜ್ಞಾನವು ಅವನಲ್ಲಿರುವುದೆಂದು ನನ್ನ ಮತವಿರುತ್ತದೆ.

ನಾನೂ ಕೂಡ ಮುಸಲ್ಮಾನರಲ್ಲಿ ಊಟಉಪಚಾರಗಳನ್ನು ಮಾಡಲು ಹಿಂಜರಿಯುವುದಿಲ್ಲ. ಕಾರಣವೇನೆಂದರೆ ನನ್ನ ಆಹಾರದ ಕುರಿತು ನನ್ನ ಸ್ವತಃ ನಿರ್ಬಂಧಗಳಿವೆ. ಲಾಹೋರದಲ್ಲಿ ನಡೆದ ಒಂದು ವಿದ್ಯಮಾನ ಕುರಿತು ಹೇಳುತ್ತೇನೆ: ಒಮ್ಮೆ ಸ್ವಾಮಿ ಸತ್ಯದೇವ್ ಮತ್ತು ನಾನು ಅಲ್ಲಿಯ ಒಬ್ಬ [illegible] ಅತಿಥಿಗಳಾಗಿ ಅವರ ಮನೆಗೆ ಹೋದೆವು. ಸ್ವಾಮಿ ಸತ್ಯದೇವರು ನನ್ನ ಅಭಿಪ್ರಾಯಗಳವರಲ್ಲ, ನಮ್ಮ ನಮ್ಮ ಆಲೋಚನೆಗಳ ಕುರಿತು ನಾವು ತರ್ಕಿಸಿದೆವು. ನಾನು ನನ್ನ ನಿರ್ದಿಷ್ಟ ಅಭಿಪ್ರಾಯದಂತೆ ಮುಸಲ್ಮಾನರು ಕೊಟ್ಟ ಆಹಾರವನ್ನು ತಿನ್ನದಿದ್ದರೆ ತಪ್ಪಿತಸ್ಥನಾಗುತ್ತೇನೆ. ಕಾರಣ—ಅವನು ನಮ್ಮನ್ನು ತನ್ನ ಆಹಾರಗಳಿಂದ ಸತ್ಕರಿಸುವುದು ಅವನ ಮರ್ಯಾದೆ ಧರ್ಮವಾಗಿರುತ್ತದೆ ಎಂದೆ. ಆದರೆ ಸ್ವಾಮಿಗಳವರು ಅದಕ್ಕೊಪ್ಪಲಿಲ್ಲ. ಅವರಿಗೆ ಸ್ವಪಾಕದ ಕುರಿತು ಬೇರೆ ಸಾಮಗ್ರಿಗಳನ್ನೊದಗಿಸಿ ಕೊಡಲಾಯಿತು. ಇದೇ ರೀತಿ [illegible] ಸಾಹೇಬರ ಅತಿಥಿಯಾಗಿ ನಾನು ಹೋಗಿದ್ದಾಗಲೂ ಅವರು ನನಗೆ ಬೇಕಾದ ಹಣ್ಣುಹಂಪಲುಗಳನ್ನು ಪೇಟೆಯಿಂದ ತರಿಸಿಕೊಟ್ಟು ನನಗಾಗಿ ಒಬ್ಬ ಬ್ರಾಹ್ಮಣ ಅಡಿಗೆಯವನನ್ನು ಒದಗಿಸಿಕೊಟ್ಟರು

ಶಾಸ್ತ್ರಪಠನ

ಶಾಸ್ತ್ರಗಳ ಜ್ಞಾನ ಸಂಪಾದನೆಯಾಗಬೇಕಾದರೆ ಜಾಗರೂಕತೆಯ ಪಠನವೂ ವಿಶಾಲವಾದ ಅನುಭವವೂ ಅಗತ್ಯವಾಗಿರುತ್ತವೆ. ಶೂದ್ರ ಶಾಸ್ತ್ರಪಠನವನ್ನು ಮಾಡಬಾರದೆಂದು ಏಕೆ ನಿರ್ಬಂಧಿಸಲಾಯಿತೆಂಬುದಕ್ಕೆ ಒಂದು ಅರ್ಥವಿದೆ. ಶೂದ್ರನೆಂದರೆ ಅಲ್ಪಜ್ಞಾನಿಯಾದ ಮೂಢ ವ್ಯಕ್ತಿ. ಅವನು ಶಾಸ್ತ್ರಪಠನವನ್ನು ಮಾಡಿದರೆ ಅದರ ಅರ್ಥವನ್ನು ಅನರ್ಥವಾಗಿ ಮಾಡುವ ಸಂಭವವಿದೆ. ಈ ಪ್ರತಿಪಾದನೆಯೊಳಡಗಿಕೊಂಡಿರುವ ಗೂಢಾರ್ಥವನ್ನು ಎಲ್ಲರೂ [illegible] ಶಾಸ್ತ್ರದ ಅರ್ಥವನ್ನು ಸರಿತರ ಉಪಯೋಗಿಸಲ್ಲ. ನಾನು ಬ್ರಾಹ್ಮಣನೆಂದು ಬೊಗಳುವ ಬ್ರಾಹ್ಮಣನು ಪಾತಕಾಂತದಲ್ಲಿ ಮುಳುಗಿದವನಿರಬಹುದು. ಇಂತಹ ಬ್ರಾಹ್ಮಣ ಶಾಸ್ತ್ರ ಓದಿದರೆ ಅದರಿಂದ ಏನು ಪ್ರಯೋಜನವುಂಟಾಗುತ್ತಿಕ್ಕಿಲ್ಲ?

ಶಾಸ್ತ್ರಗಳನ್ನನುಸರಿಸುವ ಕ್ರಮವು: ಮೊದಲು ನೀತಿ ಮತ್ತು ಪ್ರತಿಷ್ಠೆಗಳುಳ್ಳವನಾಗಿರಬೇಕು. ಸದಾಚಾರದ ಅರ್ಥದಲ್ಲಿರುವ [illegible] ಅವನು ತಿಳಿದಂತವನಿರಬೇಕು. ಹೀಗೆ ಪವಿತ್ರನಾದ ಶಾಸ್ತ್ರಜ್ಞಾನವು ನಿತ್ಯಯೋಜಕವು. ಶಾಸ್ತ್ರಪಠನಕ್ಕೆ ಗುರುವು ಅಗತ್ಯ. ಆದರೆ ಈಗಿನ ದಿನಗಳಲ್ಲಿ ಗುರುಗಳೆಂಬವರು ಸಿಗುವುದು ಅಪರೂಪವಾದುದರಿಂದ, ನಾವು ಭಕ್ತಿಮಾರ್ಗದರ್ಶಕವಾದ ಸದ್ಗ್ರಂಥ ಪಠನವನ್ನು ಮಾಡುವುದು ಉತ್ತಮವೆಂದು ನಮ್ಮ ಪೂರ್ವಿಕರು ಸಂದೇಶವನ್ನಿತ್ತಿದ್ದಾರೆ. ಯಾರು ಭಕ್ತಿರಹಿತ ವಿಶ್ವಾಸರಹಿತರಾಗಿರುತ್ತಾರೋ, ಅವರು ಶಾಸ್ತ್ರಗಳನ್ನು ತಿಳಿದುಕೊಳ್ಳಲು ಅಯೋಗ್ಯರಾಗಿರುತ್ತಾರೆ. ಜ್ಞಾನಿಗಳು ಶಾಸ್ತ್ರದಿಂದ ಅಗಾಧವಾದ ಜ್ಞಾನಸಂಪಾದನೆಯನ್ನು ಮಾಡುತ್ತಾರೆ. ಆದರೂ ಅವರು ಸಂಪಾದಿಸುವ ಜ್ಞಾನವು ಸತ್ಯವಾದ ಜ್ಞಾನವಲ್ಲ. ಅನುಭವಶಾಲಿಗಳೇ ಶಾಸ್ತ್ರಗಳ ಯಥಾರ್ಥವನ್ನು ತಿಳಿಯುವರು.

(ಬರುವ ಸಂಚಿಕೆಯಲ್ಲಿ ಕೊನೆಗೊಳ್ಳುವುದು)

[illegible] ಪಾಠವನ್ನು ಕಾಮದ ಗುಟ್ಟು ಸುಖಪ್ರದ ಸುಖಕರ ಪ್ರಾಯವನ್ನು

ಲೇಖಕರು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ, (ಕಾರ್ಕಾಳ ಕೆರವಸ್ನ್ಯಾಡಿ)

ಹೊಸ ಪುಸ್ತಕ. ಇಂಥಾ ಪುಸ್ತಕವು ಬೇರೊಂದಿಲ್ಲ.

ಕಾಮತಂತ್ರದಲ್ಲಿ ಹೊಸ ಹೊಸ ಕಲ್ಪನೆಗಳು ದಿನ ದಿನವೂ ಹೆಚ್ಚುತ್ತಿವೆ. ತರುಣರ ತಾರುಣ್ಯ ಪ್ರಭಾವದಲ್ಲಿ ಹೊಳೆಯುವ ಎಲ್ಲಾ ಕಾಮುಸಮಸ್ಯೆಗಳಿಗೂ ಮನಪೂರ್ವ ಕ್ರಿಯಾಸಿದ್ಧಿಯನ್ನು ಸ್ವಾರಸ್ಯವಾಗಿ ತೋರಿಸಿಕೊಡುವ ಅತ್ಯುತ್ತಮ ಗ್ರಂಥ!

ಕಾಮೋಪಭೋಗದ ನ್ಯೂನತೆಗಳಿಗೆಲ್ಲಾ ಔಷಧಿಗಳು ವಿವರವಾಗಿ ಹೇಳಲ್ಪಟ್ಟಿವೆ ಈ ಪುಸ್ತಕವಿದ್ದರೆ—ಎಲ್ಲಾ ಅಂತರಂಗದ ವ್ಯಾಧಿಗಳಿಗೂ ಸ್ವತಃ ಅಂತರಂಗ ಚಿಕಿತ್ಸೆ ಮಾಡಿಕೊಳ್ಳಬಹುದು.

ಬೆಲೆ ೧೩ ಆಣೆ ಮಾತ್ರ. ಅಂಚೆವೆಚ್ಚ ಪ್ರತ್ಯೇಕ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ದೊರೆಯುತ್ತೆ. ಬೇಗನೆ ತರಿಸಿಕೊಳ್ಳಿ

ಇತರ ಗ್ರಂಥಗಳು

ಆಹುತಿ (ನಾಟಕ) ರೂ ೧. ಆದದ್ದೇನು (ನಾಟಕ) ೬ ಆಣೆ, ಮೋಹನಾಸ್ತ್ರ (ನಾಟಕ) ರೂ ೧ ಉದರ ವೈರಾಗ್ಯ (ಸಚಿತ್ರ ನಾಟಕ)—ರೂ ೧. ವಿವೇಕಾನಂದರ ಕರ್ಮಯೋಗ—ರೂ. ೧ ಹೊಸಹುಟ್ಟು (ಸಚಿತ್ರ)—ರೂ ೧. ಸಾಹಿತ್ಯದ ಗುಟ್ಟು—೬ ಆಣೆ. ತ್ರಿಶಂಕುಸ್ವರ್ಗ (ನಾಟಕ)—೮ ಆಣೆ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯ ಶ್ರೀಮತ್ ಸ್ವಾಧುವರ್ಯ ನಾಗಮಹಾಶಯರ ಜೀವನಕಥೆ—ರೂ ೧

ನವಜೀವನ ಗ್ರಂಥಭಂಡಾರದಿಂದ ಹೊರಟಿರುವ (೧) ಆಕಾಶದೊಳಗಿನ ಅದ್ಭುತ ಚಮತ್ಕಾರಗಳು ೧—೨—೦. (೨) ಧರ್ಮ ಸಂಭವ—೧—೪—೦ (೩) ಹಿಂದೂಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು ೧—೨—೦ ಕನ್ನಡಪುಸ್ತಕಗಳೆಲ್ಲಾ ದೊರೆಯುತ್ತವೆ

ವಿ ಜಿ ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.



ಪ್ರಪಂಚದಲ್ಲೇ ಅತ್ಯುತ್ತಮವೆನಿಸಿರುವ
ಈ ಆಹಾರವನ್ನು ತಯಾರಿಸುವುದು
ಬಹು ಸುಲಭ

'ಓವಲ್‌ಟಿನ್ನ'ನ್ನು ಬಹು ಬೇಗನೇ ಮತ್ತು ತೊಂದರೆಗಳಿಲ್ಲದೆ ತಯಾರಿಸಬಹುದು. ಒಂದು ಚಮಚ 'ಓವಲ್‌ಟಿನ್ನ'ನ್ನು ಬಿಸಿ ಹಾಲು ಅಥವಾ ಹಾಲು ಮತ್ತು ನೀರಿಗೆ ಹಾಕಿ ಕದಡಿಸಿ ಅಡಿಗೆಯವನೋ ಹುಡುಗನೋ, ಕೆಲಸದವಳೋ, ರುಚಿಕರವಾದ ಪಾನೀಯವನ್ನು ಬೇಗನೇ ಮಾಡಬಹುದು

ಓವಲ್‌ಟಿನ್ನು' ಸೀಲು ಮಾಡಲ್ಪಟ್ಟ ಡಬ್ಬಿಯಲ್ಲಿ ಶುದ್ಧವಾಗಿಯೂ ಸಂಪೂರ್ಣವಾಗಿಯೂ ಬರುತ್ತದೆ ತಯಾರಿಯಾಗುವಾಗ ಅದು ಕೈಯಿಂದ ಮುಟ್ಟಲ್ಪಡುವುದಿಲ್ಲ ಮತ್ತು ನಿಸರ್ಗಸಿದ್ಧವಾಗಿಯೇ ಅದನ್ನು ಮಾಡಲಾಗುತ್ತದೆ ಆರೋಗ್ಯ ಶಕ್ತಿ ಧಾತುಪುಷ್ಟಿಗೆ ಬೇಕಾದ ಎಲ್ಲಾ ಶಕ್ತಿಯುತ ಆಹಾರಗಳು ಅದರಲ್ಲಿವೆ

ಓವಲ್‌ಟಿನ್ನು" ಸಂಪೂರ್ಣ ಮತ್ತು ಸರಿಯಾದ ಆಹಾರವಾಗಿದೆ ಸರ್ವಸಾಮಾನ್ಯ ಪಾನೀಯವನ್ನು ಇದು ಮೀರಿಸಿ ಎಲ್ಲಾ ಹಿಂದೀಯ ಮನೆಗಳಲ್ಲೂ ಸಾವಿರಾರು ಸ್ತ್ರೀಪುರುಷ ಬಾಲರಾದಿಗಳಿಗೆ ಆರೋಗ್ಯವನ್ನುಂಟುಮಾಡುತ್ತದೆ ಇಂತಹ ಅಮೋಘವಾದ ಟೋನಿಕ್ ಆಹಾರವನ್ನು ಈಗಲೇ ಕುಡಿಯಲುಪಕ್ರಮಿಸಿರಿ ಆರೋಗ್ಯ ಸಂಪಾದನೆಯನ್ನು ಮಾಡಿರಿ

ಉತ್ತಮವಾದ ಓವಲ್‌ಟಿನ್ನಿಗೆ ಸರಿಸಮಾನವಾದ ಪಾನೀಯವು ಬೇರೊಂದಿಲ್ಲ ಸಪ್ರಮಾಣದಿಂದ ತಯಾರಿಸಲ್ಪಡದ ಎಲ್ಲಾ ಮಿಶ್ರಣಗಳನ್ನು ತಿರಸ್ಕರಿಸಿರಿ

OVALTINE
TONIC FOOD BEVERAGE

ಸ್ನಾಯು, ನೆದುಳು, ದೇಹಗಳನ್ನು ಬಲಗೊಳಿಸುತ್ತದೆ
ಅತ್ಯುತ್ತಮ, ಅತೀ ಶುದ್ಧ — ಕರಸ್ಪರ್ಶಿತವಾಗಿರುವುದಿಲ್ಲ

ಏಜಂಟರು — ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್‌ರೈಟ್, ೬೮ ಎ ಒಪನ್‌ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬ್ಯಾ, ಮದ್ರಾಸ್, ರಂಗೂನ್‌ಗಳಲ್ಲಿ

"ಓವಲ್‌ಟಿನ್" ರೊಟ್ಟಿಗಳನ್ನು ಪ್ರತಿ ಮನೆಗಳಲ್ಲಿಯೂ ಇಡಬೇಕು ಬಿಸ್ಕೂಟುಗಳಿಗಿಂತಲೂ ಅವು ನಿಮಗೆ ಒಳ್ಳೇಯವು ಅವುಗಳು ಬಹು ರುಚಿಕರವಾಗಿವೆ ಮತ್ತು ಸುಲಭದಿಂದ ಜೀರ್ಣವಾಗುತ್ತವೆ ರುಚಿಕರ, ಶುದ್ಧ, ಮತ್ತು ಸಂಪೂರ್ಣ ಒಂದು ಗ್ಲಾಸ್ "ಓವಲ್‌ಟಿನ್ನ"ನೊಡನೆ ಬಹಳ ರುಚಿಕರ— ಅಥವಾ ಟೀ, ಕಾಫಿ, ಬೆಣ್ಣೆ, ಹಣ್ಣುಗಳೊಡನೆಯೂ ಸ್ವೀಕರಿಸಬಹುದು.

OV/102

ಉಡುಪಿಯ ಗಡಿಬಿಡಿ ಮುಗಿಯಿತೇ?

(ಬರೆದು ಬಂದ ಟೀಕೆಟಿಪ್ಪಣಿ)

ನಮ್ಮ ಉಡುಪಿಯೆಂದರೆ ಕೃಷ್ಣನ, ಅಲ್ಲ; ಶ್ರೀಕೃಷ್ಣನ ಊರು, ಆವನಿದ್ದಲ್ಲಿ ಗೋಪಿಕೆಗಳಿದ್ದಾರೆ - ಗೋವುಗಳಿವೆ - ಭಕ್ತರಿದ್ದಾರೆ- ಭಾವಕರಿದ್ದಾರೆ

+ + + +

ಈಗ ಅವನಿರುವಲ್ಲಿ ಗಡಿಬಿಡಿಯೂ ಇದೆ ಕತ್ತಲಾಗುತ್ತಲೇ ಮಠಗಳ ಸುತ್ತಲು ಕೆಲವು ಜಿಜ್ಞಾಸೀ ಜನರು ನಿಂತು, ಹಣಿಕಿ, ಇಣಿಕಿ, ಕದಕಿ, ಕೇಳಿಯನ್ನೆಬ್ಬಿಸುತ್ತಾರೆ ''ಓ ಬಟ್ಟ ಓಡಾ' ಎಂಬುದು ಎಲ್ಲೆಲ್ಲೂ ಪ್ರಚಾರವಾದ ಒಂದು ಶ್ಲೋಕ

× × × ×

ಬ್ರಹ್ಮಶ್ರೀ ಅಂಕುರಾಜ ಶರ್ಮರವರಿಗೂ ಮಠಾಧಿಪತಿಗಳಿಗೂ ದ್ವಂದ್ವ ಯುದ್ಧವು ಪ್ರಾರಂಭವಾದಂದಿನಿಂದ ನಮ್ಮ ಉಡುಪಿಯಲ್ಲಿ ಹೊಸತಾದ ಒಂದು ಚೈತನ್ಯವು ಒಡಮೂಡಿದೆ ಸ್ವಾಮಿಗಳತ್ತಕಡೆಗೆ ಧಾರಾಕಾರವಾಗಿ ಹರಿಯುತ್ತಿದ್ದ ಭಕ್ತಿ ಸರೋವರವು ಈಗ ಬತ್ತಿಹೋಗುತ್ತಿದೆ ಇದಕ್ಕೆ ಆ ನವಚೇತನವೇ ಕಾರಣವು

× × × ×

ಎಲ್ಲಿ ಹೋದರೂ ಮಠಾಧಿಪತಿಗಳ ಪ್ರಶ್ನೆ' ಎಲ್ಲಿ ನೋಡಿದರೂ ಅಂಕುರಾಜರ ಕಂಪಿದ ಪ್ರತಿಧ್ವನಿ' ಯಾವ ಹೋಟೇಲಿಗೆ ಹೋದರೂ ಇದೇ ಧ್ವನಿ ಪ್ಪಾ ಅಂಕುರಾಜರೇ ನೀವು ನಮ್ಮ ಉಡುಪಿಯನ್ನು ಎಚ್ಚರಿಸಿಬಿಟ್ಟಿರಿ

× × × ×

ಧರ್ಮಸ್ಯಗ್ಲಾನಿರ್ಭವತಿ " ಎಂದು ಶ್ರೀ ಕೃಷ್ಣನೇ ಹೇಳಿದ್ದಾನೆ ಯಾವಾಗ ಧರ್ಮವು ಹಾಳಾಗಿ ಅಧರ್ಮವು ತಲೆದೋರುತ್ತದೋ ಯಾವಾಗ ಶಿಷ್ಟರ ಮೇಲೆ ದುಷ್ಟರ ಶಕ್ತಿಯು ನಡೆಯುತ್ತದೋ ಆಗ ನಾನು ಬರುವೆನೆಂದು ಉಡುಪಿಯ ಶ್ರೀಕೃಷ್ಣನೇ ಹೇಳಿದ್ದಾನೆ

+ + + +

'ಜೇಲ ಪೋಲನೆಲ್ಲಂ ಮೇಪೊಡಂ ಹರ ಕೊಲ್ಲಲ್ ಪರ ಕಾವನೇ ಹರಹರ ಶ್ರೀ ಚೆನ್ನಸೋಮೇಶ್ವರಾ ಎಂಬ ಸಾಮ್ಯವು ಉಡುಪಿಯಲ್ಲಿ ಸತ್ಯವಾಗುವಂತಿದೆ

+ + + +

ಶ್ರೀ ಶರ್ಮರು ಉಡುಪಿಗೆ ಇನ್ನೊಮ್ಮೆ ಬರಲಿರುವರೆಂದು ವಾರ್ತೆ ಇದೆ ಅವರ ಭಾಷೆಗೆ ತಕ್ಕ ಬೀಗಗಳು ಮಠಗಳಲ್ಲಿ ಸಿದ್ಧವಾಗುತ್ತಿರುವುವೋ ತಿಳಿಯದು ಶ್ರೀ ಶರ್ಮರನ್ನು ಕೋರ್ಟಿಗೆಳೆಯಲು ೧೦೦೦!!! ಖರ್ಚಾಯಿತು. ಇನ್ನು ಎಷ್ಟು ಸಾವಿರ ಹೋಗಲಿದೆ ಎಂದು ನೋಡಬೇಕು! !

+ + + +

ಹಿಂದೂ ಧರ್ಮವು ಗ್ಲಾನಿಯಾಗುತ್ತಿರುವ ಚಿಹ್ನೆಯು ಶ್ರೀಕೃಷ್ಣನ ಊರಾದ ಉಡುಪಿಯಲ್ಲಿ ಕಾಣಬರುವದು. ಹಾ! ಶ್ರೀಕೃಷ್ಣ ನಿನ್ನ ಮಹಿಮೆಯೇ?

× × + +

ಕೃಷ್ಣಾ ಮೂರ್ತಿ ಕಣ್ಣ ಮುಂದೆ ನಿಂತಿದಂತಿದೆ ಎಂಬ ಪುರಂದರದಾಸನ ಪದವು ಬಾಯಿಗೆ ಬರುತ್ತದೆ ಶ್ರೀಕೃಷ್ಣನು ಉಡುಪಿಯಲ್ಲಿ ತೋರುವ ಮಾಯಾಜಾಲವು ಕಂಡುಬರುತ್ತದೆ

× × × ×

ಮಠದಲ್ಲಿ ನಡೆಯಲಿರುವ ಬ್ರಾಹ್ಮಣರ ಊಟ ಉಪಚಾರಕ್ಕಾಗಿ ದೇವಸ್ಥಾನದ ಕೆರೆಯ ಪೂರ್ವದಲ್ಲಿ ರಥದ ರೂಪದಲ್ಲಿ ಕಟ್ಟಿರುವ ಕಟ್ಟಿಗೆ ರಾಶಿಗಳಿವೆ. ಇವುಗಳು ಬ್ರಾಹ್ಮಣರ ಅಡಿಗೆಗಾಗಿ ಖರ್ಚಾಗಬೇಕು ಹಾ! ಭೋಜನ ಪ್ರಿಯರೇ! ಆ ಕಟ್ಟಿಗೆಯನ್ನು ನೆಲಸಮ ಮಾಡಿದರೆ ನೀವು ಧನ್ಯರು!

ವಿಟ್ಲ ಗ್ರಾಮ ಪಂಚಾಯತ ಕೋರ್ಟಿನಲ್ಲಿ.

ಕ್ರಮ ನಂಬ್ರ 33/'32

ಕೆ ಅಣ್ಣಪ್ಪ ನಾಯ್ಕ—ವಾದಿ
ಪಿ ಸಂಜೀವ, ನಾರಾಯಣನ ಮಗ— ಪ್ರತಿವಾದಿ.

ಮೇಲ್ಕಂಡ ನಂಬ್ರವು ತಾ. 25-7-32ಕ್ಕೆ ಅಖೈರು ತೀರ್ಮಾನಕ್ಕೆ ಇಟ್ಟಿರುವುದರಿಂದ ಮೇಲ್ಕಂಡ ವ್ಯಾದೆಗೆ ಪ್ರತಿವಾದಿಯು ಹಾಜರಾಗದಿದ್ದಲ್ಲಿ ನಂಬ್ರವು ಪ್ರತಿವಾದಿ ಗೈರುಹಾಜರು ತೀರ್ಮಾನಿಸಲ್ಪಡುವುದು.

V. Rajalaksimlnath Swamiji,
President, Village Panchayath Court.

ಶ್ರೀ ವಿ. ಜೆ. ಪಟೇಲರು ಆಯರ್ಲೆಂಡಿನಲ್ಲಿ ಡಿ. ವೆಲರಾರನ್ನು ಸಂದರ್ಶಿಸಿದರು!—ಡಿ ವೆಲರಾರವರು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪಟೇಲರನ್ನು ಕಂಡು ಸಂತೋಷಗೊಂಡರು—ಅಖಿಲಭಾರತ ಕೈದಿಗಳ ದಿನಾಚರಣೆಯು ಮುಂಬಾಯಿ, ಮದ್ರಾಸ್, ಅಲ್ಲಹಾಬಾದ್, ಅಹ್ಮದಾಬಾದ್, ಕರಾಚಿಗಳಲ್ಲಿ ಜರಗಿತು—ಕಳೆದ ಮಹಾಯುದ್ಧದಲ್ಲಿ ಮಿಲಿಟರಿಗೆ ವೆಚ್ಚವಾದ ೧೪,೬೦೦೦೦೦ ಪೌಂಡುಗಳ ಹೊರೆಯನ್ನು ಹಿಂದೂದೇಶದ ಮೇಲೆ ಪಾರ್ಲಿಮೆಂಟಿನವರು ಹೊರಿಸಿದ್ದಾರೆ—ರೈಲ್ವೇ ಮುಷ್ಕರವು ಹಿಂದೂದೇಶದಲ್ಲಿ ನಡೆಯಲಿದೆ ೭,೨೫೦೦೦ ಜನರು ಮನೆಯಲ್ಲಿ ಕುಳಿತುಕೊಳ್ಳುವರು—ಭಾರತದ ಸಾಂಪತ್ತಿಕ ದುಃಸ್ಥಿತಿ—ಡಾ| ಅನ್ಸಾರಿಗಳು ಬಿಡುಗಡೆ ಹೊಂದಿದರು ಬೇಗನೆ ಯೂರೋಪಿಗೆ ಹೋಗಲಿರುವರು—ಮುಂಬಾಯಿಯಲ್ಲಿ ಹಿಂದೂ ಮುಸ್ಲಿಮರ ಹೊಡೆದಾಟ — ಮಧುರೆಯಲ್ಲಿ ಬಸ್ಸಿನ ಮೇಲೆ ಮರ ಬಿತ್ತು—೧೪ ಮಂದಿಗಳು ಜಜ್ಜಲ್ಪಟ್ಟು ಮಡಿದರು!

ಇನ್ನೊಬ್ಬ ಗಂಡನಿಗಾಗಿ?

ಮದ್ರಾಸಿನಲ್ಲಿ ಮುತ್ತಮ್ಮಾಳ್ ಎಂಬವಳೊಬ್ಬಳು ತನ್ನ ಇನ್ನೊಬ್ಬ ಗಂಡನಿಗಾಗಿ ತನ್ನ ಮೊದಲನೇ ಗಂಡನಿಗೆ ಹುಟ್ಟಿದ ಎರಡು ವರ್ಷ ಪ್ರಾಯದ ಒಂದು ಮಗುವನ್ನು ಕೊಂದ ವಾರ್ತೆ ಬಂದಿದೆ ಕಥೆ ಹೀಗಿದೆ ಮುತ್ತಮ್ಮಳು ತನ್ನ ಮೊದಲನೆ ಗಂಡನನ್ನು ಬಿಟ್ಟು ಎರಡನೆಯ ಪ್ರಣಯ ಗಂಡನೊಡನೆ ಸುಖವಾಗಿರುತ್ತಿದ್ದಳು ಆ ಎರಡನೆಯ ಗಂಡನಿಗೆ ಮುತ್ತಮ್ಮಳಿಗಿದ್ದ ೨ ವರ್ಷ ಪ್ರಾಯದ ಕೂಸನ್ನು ಕಂಡರಾಗುತ್ತಿದ್ದಿಲ್ಲ 'ಅದನ್ನು ನಿನ್ನ ಮೊದಲನೇ ಗಂಡನಿಗೆ ಕೊಟ್ಟು ಬಾ' ಎಂದು ಪದೇ ಪದೇ ಹೇಳುತ್ತಿದ್ದನು ಕಳೆದ ೧೫ ದಿನಗಳ ಹಿಂದೆ ಅವನು ಮುತ್ತಮ್ಮಳಿಗೆ ಅದೇ ರೀತಿ ಹೇಳಿ ಒತ್ತಾಯಪಡಿಸಲು ಅವಳು ಆ ಮಗುವನ್ನು ತನ್ನ ಮೊದಲನೆಯ ಗಂಡನ ಮನೆಗೆ ಕೊಂಡೊಯ್ದು ಬಿಡುವೆನೆಂದು ಹೇಳಿ ಹೊರಟಳು ಕೆಲವು ಮೈಲುಗಳು ದಾಟುತ್ತಾ ಮಾರ್ಗದ ಬದಿಯಲ್ಲಿ ನೀರಿಲ್ಲದೊಂದು ಬಾವಿಯನ್ನು ಕಂಡು, ಮಗುವಿನ ಬಾಯಿಗೆ ವಸ್ತ್ರವನ್ನು ತುರುಕಿ ಅದರ ಕತ್ತು ಹಿಸುಕಿ ಕೊಂದು ಶವವನ್ನು ಬಾವಿಯೊಳಗೆ ಹಾಕಿ, ಹಿಂತಿರುಗಿ ತನ್ನ ಎರಡನೆಯ ಗಂಡನ ಮನೆಗೆ ಬಂದು ಮಗುವನ್ನು ಬಿಟ್ಟುಬಂದೆನೆಂದಳು ದುರ್ದೈವವಶಾತ್ ಈ ಗುಟ್ಟು ಹೊರಗೆ ಬಿದ್ದು ಅವಳನ್ನೀಗ ಪೋಲೀಸರು ಸೆರೆಹಿಡಿದಿದ್ದಾರೆ

* * *

ಇಂಗ್ಲೆಂಡಿನಲ್ಲಿ ಸ್ತ್ರೀ ಪತ್ತೇದಾರಿಗಳು

ಲಂಡನ್ ಪಟ್ಟಣದಲ್ಲಿ ನಡೆಯುವ ಕಳ್ಳತನ ಕೊಲೆ ದರೋಡೆಗಳನ್ನು ನಿಲ್ಲಿಸುವ ಆಲೋಚನೆಯಿಂದ ಅಲ್ಲಿಯ ಸ್ಕಾಟ್ ಲೇಂಡ್ ಯಾರ್ಡಿನವರು ಕೆಲವು ಮಂದಿ ಸ್ತ್ರೀಯರನ್ನು ಪತ್ತೇದಾರರಾಗಿ ನೇಮಿಸಿರುವರು ಪತ್ತೇದಾರಿ ಕೆಲಸದಲ್ಲಿ ಪುರುಷರಿಗಿಂತಲೂ ಸ್ತ್ರೀಯರು ಹೆಚ್ಚು ವಿಚಕ್ಷಣತೆಯಿಂದ ಕೆಲಸಮಾಡಲು ಅವಕಾಶವಿದೆಯೆಂದು ಭಾವಿಸಲ್ಪಟ್ಟಿದೆ ದರೋಡೆಕಾರರು ಹೆಚ್ಚಾಗಿ ಸ್ತ್ರೀಯರ ಸಹಾಯದಿಂದಲೇ ತಮ್ಮ ಕೆಲಸಗಳನ್ನು ಜಾರಿಮಾಡುತ್ತಿರುವುದರಿಂದ ಹಾಗೆ ದರೋಡೆಕಾರರಿಗೆ ಸಹಾಯವನ್ನೀಯುವ ಸ್ತ್ರೀಯರನ್ನು ಕಂಡುಹಿಡಿಯಲು ಈ ಸ್ತ್ರೀಪತ್ತೇದಾರರಿಗೆ ಸಾಧ್ಯವಿದೆಯಂತೆ ಸ್ತ್ರೀಯರು ಇಂತಹ ಕೆಲಸದಲ್ಲಿ ಹೆಚ್ಚಿನ ಪ್ರಯೋಜನಕಾರಿಗಳಾಗಬಹುದೋ ಎಂದು ಮೊದಲು ಪರೀಕ್ಷಿಸಲಾಯಿತು ೩೦ ಮಂದಿ ಸ್ತ್ರೀಯರನ್ನು ಪತ್ತೇದಾರಿಗಳಾಗಿ ನೇಮಿಸಿ ಅವರಿಂದ ಕೆಲಸವನ್ನು ಮಾಡಿಸಲಾಯಿತು ಹೀಗೆ ಮಾಡಿದ್ದಾಗ್ಯೂ ಈ ರೀತಿಯ ಸ್ತ್ರೀ ನೇಮಕದಿಂದಾಗಿ ಬಹು ಪ್ರಯೋಜನವಿದೆಯೆಂದು ತಿಳಿದುಬಂತು ಇಂದು ಎಲ್ಲಾ ಕಡೆಗಳಲ್ಲಿ ಸ್ತ್ರೀ ಪತ್ತೇದಾರಿಗಳ ಸಂಖ್ಯೆಯನ್ನು ಹೆಚ್ಚಿಸುವರು ಆದರೆ ಅವರಲ್ಲಿ ಯಾರ ಹೆಸರುಗಳನ್ನೂ ಹೊರಗೆ ಪ್ರಕಟಿಸದೆ ರಹಸ್ಯವಾಗಿಯೇ ಇಟ್ಟಿರುವರು 'ಅಲ್ಲಿಯವರ ಈ ಯುಕ್ತಿಯಿಂದ ಕೊಲೆ ದರೋಡೆಗಳು ಹೆಚ್ಚಿನಮಟ್ಟಿಗೆ [illegible] ಎಂದು ನಿರೀಕ್ಷಿಸಲ್ಪಟ್ಟಿದೆ

* * *

ಮೊಹರು ಹೊಡೆಯುವಾಗ ಬಾಂಬು ಒಡೆಯಿತು

ಡಿಲ್ಲಿಯ ಜನರಲ್ ಪೋಸ್ಟ್ ಆಫೀಸಿನಲ್ಲಿ ಕಳೆದ ಶುಕ್ರವಾರ ಒಬ್ಬ ಪೋಸ್ಟ್ ಪೇದೆಯು ಕವರುಗಳಿಗೆ ಮೊಹರು ಹೊಡೆಯುತ್ತಿದ್ದನು ಒಂದು ಲಕೋಟೆಗೆ ಮೊಹರು ಹೊಡೆದೊಡನೆ ಅದು ಫಟ್ಟೆಂದು ಒಡೆಯಿತು! ಅದರೊಳಗಿದ್ದ ಸಿಡಿಮದ್ದುಗಳು ಹಾರಿದುದರಿಂದ ಅವನ ಕೈಬೆರಳುಗಳು ನುಚ್ಚುನೂರಾದುವು ಅಷ್ಟೇ ಅಲ್ಲ ಬೆಂಕಿಯೂ ಉಂಟಾಯಿತು ಆ ಲಕೋಟೆಯೂ ಸುಟ್ಟುಹೋಯಿತು ಅದರ ಬಳಿಯಿದ್ದ ಇನ್ನಿತರ ಕಾಗದಪತ್ರಗಳೂ ಸುಟ್ಟುಹೋಗುತ್ತಿದ್ದುವು ಆದರೆ ಅವುಗಳನ್ನು ಅದಷ್ಟು ತ್ವರೆಯಾಗಿ ಬೆಂಕಿಯಿಂದ ದೂರಮಾಡಲಾಯಿತು ಲಕೋಟೆಯೊಳಗಿದ್ದ ಅಗ್ನಿಕಾರಕ ವಸ್ತುಗಳಿಂದಾಗಿ ಹೀಗಾಯಿತೆಂದು ತಿಳಿಯಲಾಗಿದೆ ಇಲ್ಲಿಯ ಇನ್ನೊಂದು ಪೋಸ್ಟಾಫೀಸಿನಲ್ಲೂ ಇಂತಹ ಒಂದು ಘಟನೆಯೂ ನಡೆದ ವಾರ್ತೆ ಇದೆ

* * *

ವಿದ್ಯಾರ್ಥಿನಿಗಳ ಮುಷ್ಕರ!

ಕೊಲಂಬೊವಿನ ದಕ್ಷಿಣದಲ್ಲಿ ೫೦ ಮೈಲುಗಳ ದೂರದಲ್ಲಿರುವ ಬಲಪಿಟಿಯಾ ಎಂಬಲ್ಲಿನ ಸಿದ್ಧಾರ್ಥ ಟ್ರೈನಿಂಗ್ ಸ್ಕೂಲಿನ ೬೦ ವಿದ್ಯಾರ್ಥಿನಿಗಳು ಮುಷ್ಕರ ಹಿಡಿದಿರುವರಾಗಿ ವಾರ್ತೆ ಬಂದಿದೆ ಶಾಲೆಯಲ್ಲಿ ತಮಗೆ ಸಿಗುವ ಊಟೋಪಚಾರಗಳು ಬಹಳ ನಿಕೃಷ್ಟವಾದುವುಗಳಾದುದರಿಂದ ತಮಗೆ ತಕ್ಕ ಆಹಾರವನ್ನೊದಗಿಸಿ ಕೊಡದಿದ್ದರೆ ತಾವು ಮುಷ್ಕರ ಹಿಡಿಯುವೆವೆಂದು ಆ ವಿದ್ಯಾರ್ಥಿನಿಗಳೆಲ್ಲರೂ ಮಿನಿಸ್ಟರ್ ಆಫ್ ಎಡ್ಯುಕೇಶನ್‌ರವರಿಗೆ ಅರ್ಜಿಮಾಡಿಕೊಂಡರು. ಆ ಕಾರಣವಾಗಿ ಅಸಿಸ್ಟೆಂಟ್ ಸ್ಕೂಲ್ ಮಾಸ್ಟರ್ ಒಬ್ಬರನ್ನು ಡಿಸ್‌ಮಿಸ್ ಮಾಡಲಾಯಿತು ಆದರೂ ವಿದ್ಯಾರ್ಥಿನಿಗಳೆಲ್ಲರೂ ಒಟ್ಟುಗೂಡಿ ಇನ್ನೂ ಕೆಲವು ಶಾಲಾ ಕೆಲಸಗಾರರು ಇದಕ್ಕೆ ಜವಾಬ್ದಾರರಾಗಿರುವರೆಂದೂ ಅವರನ್ನು ಕೆಲಸದಿಂದ ತೆಗೆಯಬೇಕೆಂದೂ ಹಠಹಿಡಿದರು ಅವರೆಲ್ಲರೂ ತಮ್ಮ ತಮ್ಮ ಹೆತ್ತವರನ್ನು ಪರಊರುಗಳಿಂದ ಬರಮಾಡಿಕೊಂಡರು ಹೆತ್ತವರೂ ಮಕ್ಕಳೂ ಜಯಕಾರವನ್ನೆತ್ತುತ್ತಾ ಮೆರವಣಿಗೆ ಮಾಡಿ ಅಧಿಕಾರಿಗಳನ್ನು ಸಂದರ್ಶಿಸಿ ತಮ್ಮ ಹಠವನ್ನು ಸಾಧಿಸುತ್ತಿರುವರು ಮಿನಿಸ್ಟರ್ ಆಫ್ ಎಡ್ಯುಕೇಶನ್ ಇವರು ಇದಕ್ಕೇನೆಲ್ಲ ಮಾಡಲಿರುವರೆಂದು ತಿಳಿದುಬಂದಿಲ್ಲ

* * *

ರೈಲ್ವೆ ಮುಷ್ಕರದ ಗಂಡಾಂತರವೊಂದು ಬೇಗನೆ ಸಂಭವಿಸಲಿದೆ

ಹಿಂದೂಸ್ಥಾನದ ಒಂಭತ್ತು ಹತ್ತು-ಸಾವಿರ ರೈಲ್ವೆ ಸ್ಟೇಶನುಗಳ ಸಾಧಾರಣ ೭,೫೦೦೦೦ ಕೆಲಸಗಾರರು ಒಂದಾಗಿ ಇದೇ ಜುಲಾಯಿ ೩೧ನೇ ದಿನ ಒಂದು ಜನರಲ್ ಸ್ಟ್ರೈಕ್ ಮುಷ್ಕರವನ್ನು ಕೈಕೊಳ್ಳಲಿದ್ದಾರೆ ಎಂಬ ವಾರ್ತೆಯು ಹರಡಿದೆ ಈ ಮುಷ್ಕರವು ನಡೆದುಹೋದರೆ ಮುಂದಕ್ಕೆ ಹಿಂದೂದೇಶದಲ್ಲಿ ಮಹಾ ಪ್ರಕ್ಷುಬ್ಧ ವಾತಾವರಣವು ಪಸರಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ ಇದರ ಮುಖಂಡರುಗಳಾಗಿ ಮುಂಬಾಯಿಯ ಶ್ರೀ ಜಮ್ನಾದಾಸ್ ಮೆಹ್ತರು ಇಂತಿದ್ದಾರೆ ಭಾವೀ ಪ್ರಚಂಡ ಮುಷ್ಕರದ ಕೋರಿಕೆಗಳೇನೆಂದರೆ— (೧) ರಿಟ್ರೆಂಚ್‌ಮೆಂಟಿನ ದೆಸೆಯಿಂದ ಉದ್ಯೋಗದಿಂದ ತೆಗೆಯಲ್ಪಡುವ ಜನರ ಶ್ರೇಯಸ್ಸಿಗಾಗಿ ರೈಲ್ವೆ ಅಧಿಕಾರಿಗಳು ಡಿಪ್ರಿಸಿಯೇಶನ್ ಫಂಡಿನಿಂದ ೩ ಕೋಟಿ ರೂಪಾಯಿಗಳನ್ನು ಒಂದು ವರ್ಷದ ವಾಯಿದೆಗೆ ಸಾಲತೆಗೆಯಬೇಕು (೨) ಕೆಲಸಗಾರರಿಗೆ ವರ್ಷಕ್ಕೊಂದು ತಿಂಗಳಂತೆ ಸಂಬಳಸಹಿತ ರಜೆ ಸಿಗುವಂತಾಗಬೇಕು ಈ ವಿಷಯಗಳಾಗಿ ಶ್ರೀ ಜಮ್ನಾದಾಸ್ ಮೆಹ್ತರು ವಿವರಿಸುತ್ತ, ರೈಲ್ವೆಯ ಅಧಿಕಾರಿಗಳು ನಮ್ಮ ಕೋರಿಕೆಗಳಿಗೆ ಗಮನವನ್ನೀಯುತ್ತಾರೋ ಎಂದು ಇದೇ ತಿಂಗಳ ತಾ. ೧೪ರ ವರೆಗೆ ನಿರೀಕ್ಷಿಸಬೇಕು ಹಾಗೆ ಅವರು ಇವುಗಳಿಗೆ ಲಕ್ಷ್ಯವನ್ನು ಕೊಡದೆ ಹೋದರೆ ದೇಶದ ಎಲ್ಲಾ ರೈಲ್ವೆ ಕೆಲಸಗಾರರು ಮುಷ್ಕರ ಹಿಡಿಯಬೇಕು ದೇಶೀಯರೂ ಜನರೂ ಈ ಮುಷ್ಕರವನ್ನು ಯಶಸ್ವಿಯಾಗಿ ಮಾಡಬೇಕು ಎಂದಿದ್ದಾರೆ

* * *

ಬಾವಿಗೆ ಇಳಿದ ಸಿಂಗನು ಎಲ್ಲಿ ಹೋದ?

ಅಲ್ಲಹಾಬಾದಿನಲ್ಲಿ ಕೆಲವು ಹುಡುಗರು ಚೆಂಡಾಟವಾಡುವಾಗ ಅವರ ಚೆಂಡು ಅಲ್ಲೇ ಸಮೀಪವಿದ್ದ ಒಂದು ಬಾವಿಯೊಳಗೆ ಬಿತ್ತು ಆ ಬಾವಿಯು ಅನೇಕ ವರ್ಷಗಳಿಂದ ಪ್ರಯೋಗದಲ್ಲಿದ್ದಿಲ್ಲ ಅದರಲ್ಲಿ ಕೆಸರೂ ಹಾಗೆ ನೀರೂ ತುಂಬಿತ್ತು ಚೆಂಡನ್ನು ತೆಗೆಯುವುದಕ್ಕೆ ಆ ಹುಡುಗರು ಬಸ್ಸು ಸಿಂಗನೆಂಬವನನ್ನು ಕಾಸುಕೊಟ್ಟು ಬಾವಿಗೆ ಇಳಿಸಿದರು ಆದರೆ ಸಿಂಗನು ಕೆಳಗೆ ಹೋದವನು ಮೇಲೆ ಬರಲೇ ಇಲ್ಲ ಅವನು ನೀರಿಗಿಳಿದುದನ್ನು ಮಾತ್ರ ಹುಡುಗರು ಕಂಡರು ಅವನು ಬಿದ್ದ ಶಬ್ದವೂ ಕೇಳಲಿಲ್ಲ ಕೆಲವು ಹೊತ್ತು ಹುಡುಗರು ಅವನನ್ನು ಕಾದು ಕಾದು ಕೊನೆಗೆ ಬುಸ್ಸು ಬುಸ್ಸು! ಎಂದು ಕರೆದರು ಆದರೆ ಬಸ್ಸುವು ಉಸಿರು ಕೂಡಾ ಎತ್ತದೆ ಸುಮ್ಮನಿದ್ದನು ಇದನ್ನು ಕಂಡು ಹುಡುಗರು ಈ ಸಂಗತಿಯನ್ನು ದೊಡ್ಡವರಿಗೆ ತಿಳಿಸಿದರು ದೊಡ್ಡವರು ಬರುವಾಗ ಕತ್ತಲಾಯಿತು ಕತ್ತಲಾಯಿತೆಂದು ದೀಪವನ್ನು ಬಾವಿಗಿಳಿಸಿದರು ಆದರೆ ಬಾವಿಗಿಳಿಸಲ್ಪಟ್ಟ ಪ್ರತಿಯೊಂದು ದೀಪವೂ ತಟ್ಟನೆ ನಂದಿಹೋಯಿತು ಕೊನೆಗೆ ಪರಿಶೋಧಿಸಲಾಗಿ ಆ ಭಾವಿಯಲ್ಲಿ ವಿಷ ವಾಯುವೂ ವಿಷನೀರೂ ತುಂಬಿಕೊಂಡಿದೆಯಾಗಿಯೂ ಚೆಂಡನ್ನು ಮೇಲಕ್ಕೆ ತೆಗೆಯಲು ಕೆಳಗಿಳಿದ ಬಸ್ಸುವು ಉಸಿರುಗಟ್ಟಿ ನರಳಿ ಅದೇ ಬಾವಿಯಲ್ಲಿ ಸತ್ತನೆಂದೂ ತಿಳಿದುಬಂತು ಆ ಬಾವಿಯನ್ನು ಮುನಿಸಿಪಾಲಿಟಿಯವರು ಒಡನೆ ಮುಚ್ಚಿಸಿಬಿಟ್ಟರು

* * *

ಮುಂಬಾಯಿಯ ವಾರ್ತೆ!

ಮುಂಬಾಯಿಯ ಗಲಭೆಯು ಶಾಂತಿರುವುದಿಲ್ಲ ನಿನ್ನೆ ಮೊನ್ನೆಯ ತನಕವೂ ಗಲಾಟೆಯು ನಡೆಯುತ್ತಲೇ ಇತ್ತು ಇಸ್ಲಾಂಪುರ ಎಂಬಲ್ಲಿ ಹಿಂದೂ ಮುಸಲ್ಮಾನ ಗಲಾಟೆಗಾರರು ಮಾರಾಮಾರಿ ಮಾಡಿಕೊಂಡರು ಡಿಪ್ಯುಟಿ ಕಮಿಶನರು ಬಂದು ಅವರಿಗೆ ಎಚ್ಚರಿಕೆಯನ್ನಿತ್ತರೂ ಅವರು ಅಲುಗಾಡಲಿಲ್ಲ ಒಡನೆ ಗುಂಡು ಹಾರಿಸಲು ಅಪ್ಪಣೆಯಾಯಿತು ಕೆಲವರು ಗಾಯಗೊಂಡರು ಅಲ್ಲಿಗೆ ಜನತಂಡಗಳು ಓಡಿಹೋದುವು ಒಟ್ಟು ೪ ಮಂದಿಗಳು ಬುಧವಾರ ದಿನ ಸತ್ತರು ೪೦ ವ್ಯಕ್ತಿಗಳು ಗಾಯಗೊಂಡರು ಫೋರಾಸ್ ರೋಡಿನಲ್ಲಿ ಮುಸ್ಲಿಮ ಪುಂಡರು ಒಂದು ದೊಡ್ಡ ಅಂಗಡಿಯನ್ನು ಒಡೆದು ೫೦೦ ರೂಪಾಯಿಯ ಸಾಮಾನುಗಳನ್ನು ಎತ್ತಿಕೊಂಡು ಅಂಗಡಿಗೆ ಬೆಂಕಿಕೊಟ್ಟರು ಆದರೆ ಅಷ್ಟರಲ್ಲೇ ಪೋಲೀಸರು ಬಂದುದರಿಂದ ಹೆಚ್ಚಿನ ಗಲಾಟೆಯಾಗಲಿಲ್ಲ ಜ. ಎ. ತೋಮಸರೆಂಬ ಜೋನ್‌ಸೊಂಬರರು ಮುಂಬಾಯಿಯನ್ನು ನೋಡಲು ಪೂನಾದಿಂದ ಓಡಿಬಂದರು ಕೆಲವು ಮುಂದಾಳುಗಳೊಡನೆ ಮಾತನಾಡಿ ಪುನಃ ಮನೆಗೆ ಹೋದರು ಒಂದು ಕಡೆಯಲ್ಲಿ ಮುಸ್ಲಿಮರು ಹಿಂದೂಗಳ ದೇವಸ್ಥಾನವನ್ನೂ ಹಿಂದೂಗಳು ಮುಸ್ಲಿಮರ ಮಸೀದಿಗಳನ್ನೂ ಸುಡಲೆತ್ನಿಸಿದರು ಪೋಲೀಸರು ತನ್ನಷ್ಟಕ್ಕೆ ಎದುರಾಯಿಸಿದುದರಿಂದ ಅಲ್ಲಲ್ಲಿ ಶಾಂತವಾಯಿತು

* * *

ಜುಲಾಯಿ ತಾ 3?

ಜುಲಾಯಿ ಮೂರನೇ ತಾರೀಖಿನ ದಿನ ಮೊದಲಿನ ಒರ್ಡಿನೆನ್ಸುಗಳ ಅವಧಿಯು ಮುಗಿದು ಅವುಗಳನ್ನು ಪುನರುಜ್ಜೀವನಗೊಳಿಸಿದರಷ್ಟೆ! ಆ ದಿನ ಸಂಯುಕ್ತಪ್ರಾಂತ್ಯ ಸಹರಾನ್‌ಪುರ ಮೊರದಬಾದ, ಬರೇಲಿ ಕಾನ್‌ಪುರ ಆಗ್ರಾ, ಅಲ್ಲಹಾಬಾದ ಎಟವಾ ಬೆನಾರಿಸ್ ಗೋರಖಪುರ ಮೊದಲಾದ ಸ್ಥಳಗಳಲ್ಲಿ ಕೊಂಗ್ರೆಸ್‌ವಾಲರು ಓಡುವ ರೈಲುಬಂಡಿಗಳನ್ನು ನಿಲ್ಲಿಸಿದರು ಲಕ್ನೋವಿನಲ್ಲಿ ಡೆರಾಡನ್ ಎಕ್ಸ್‌ಪ್ರೆಸ್ ರೈಲುಬಂಡಿಯು ಹೊರಡುತ್ತಲೇ ಅಷ್ಟರಲ್ಲಿ ಅದರ ಎಮರ್ಜೆನ್ಸಿ ಸರಪಣಿಯು ಎಳೆಯಲ್ಪಟ್ಟಿತು ರೈಲು ತಟ್ಟನೆ ನಿಂತಿತು ಗಾರ್ಡನು ಕೆಳಗಿಳಿದು ಹೊರಗೆ ನೋಡಿದನು ಅಷ್ಟರಲ್ಲಿ ಕೆಲವು ಕೊಂಗ್ರೆಸ್ ಸ್ವಯಂಸೇವಕರು ರಾಷ್ಟ್ರಧ್ವಜಗಳನ್ನೆತ್ತಿ ಜಯಘೋಷವನ್ನು ಮಾಡುತ್ತಾ ರೈಲಿನ ಕೆಳಗಿನಿಂದ ಹೊರಬಂದರು ರೈಲನ್ನು ನಿಲ್ಲಿಸಿದುದೇಕೆಂದು ಅವರೊಡನೆ ಕೇಳಲಾಗಿ ನಮ್ಮ ಕೊಂಗ್ರೆಸ್ಸಿನ ಅಜ್ಞೆ ಹಾಗಿದೆ! ಈ ದಿನ ರೈಲುಗಳನ್ನು ನಿಲ್ಲಿಸಬೇಕೆಂದು ಎಂದರು ಅವರನ್ನು ಕೈದು ಮಾಡಲಾಯಿತು ರೈಲು ನಿಲ್ಲಿಸಿದುದರ ಸಂಬಂಧವಾಗಿ ಅನೇಕರು ಕೈದು ಮಾಡಲ್ಪಟ್ಟಿರುವರು

* * *

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O P [illegible] '32

[illegible]

[illegible] ಪ್ರಾ. 1000-ದ ಇನ್ಸೂರೆನ್ಸ್ No D 1040 ನೇ ತಾ 20-5-31 [illegible] ಕೋರ್ಟಿನಲ್ಲಿ ತಾ 27-7-32ಕ್ಕೆ [illegible] ಜಾಹೀರು ಮಾಡಿಕೊಳ್ಳಲಾಗಿದೆ

ಉಡುಪಿ
[illegible] ಕೆ ಜೆ ಬಲ್ಲಾಳ
ಅರ್ಜಿದಾರನ ಪರ ವಕೀಲ

ಪದವು ಗ್ರಾಮ ಪಂಚಾಯ್ತ ಕೋರ್ಟಿನಲ್ಲಿ

ಕ್ರಮ ನಂಬ್ರ 241/31

[illegible] —ವಾದಿ

1 [illegible] ಸಿಲ್ವ 2 ಲಕ್ಷ್ಮಣ ಆಳ್ವ—ಮಂಜುಣಶೆಟ್ಟಿ [illegible] —ಪ್ರತಿವಾದಿ

ಮೇಲ್ಕಂಡ ನಂಬ್ರವು ತಾ 10-7-31ಕ್ಕೆ ಅಖೈರು ತೀರ್ಮಾನಕ್ಕೆ ಇಟ್ಟಿರುವುದರಿಂದ ಮೇಲ್ಕಂಡ ವ್ಯಾದಿಗೆ 2ನೇ ಪ್ರತಿವಾದಿಯು ಹಾಜರಾಗದಿದ್ದಲ್ಲಿ ನಂಬ್ರವು ಪ್ರತಿವಾದಿ ಗೈರುಹಾಜರು ತೀರ್ಮಾನಿಸಲ್ಪಡುವುದು

M Venkat Rao,
President,
Padavoo Village Panchayath Court

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲಪ್ರಾಪ್ತಿ ಅಧಿಕ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರುಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಶಾಸ್ತ್ರ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ವೈದ್ಯ [illegible] ತೈಲಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಗುತ್ತವೆ. [illegible] ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ಹಿಂದಿನ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಇಂಥವು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಇವೆಲ್ಲವು ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವದಲ್ಲದೆ ಮುಖ್ಯ ಒಂದು ಸಂದರ್ಭಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ [illegible] ಕೊಡಲಾಗುವದಲ್ಲದೆ [illegible] ಅವರ ಅಗತ್ಯದ ಮುಖ್ಯ ವಿವರಗಳನ್ನು ತಿಳಿಸುವವರಿಗೂ ರೋಗಕ್ಕೆ ಬೇಕಾದ ಮದ್ದು ವಿವರ ಅದನ್ನು ಸೇವಿಸುವ [illegible] ಎಲ್ಲಾ ಸೂಚನೆಗಳನ್ನು ತಿಳಿಸುವದಲ್ಲದೆ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಲೂ ಸಿದ್ಧವಾಗಿರುವದು. [illegible] ಕೂಡ [illegible] ಇವೆ [illegible] ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನೋಟೀಸು

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P [illegible]

1 [illegible] ಕೃಷ್ಣ ಅಮ್ಮ 2 ಪಂಚಮಾಲ [illegible] 3 ಪಂಚಮಾಲ ಶ್ರೀನಿವಾಸ ಕಮ್ತಿ, 4 [illegible] ದಾಕ್ಷಿ [illegible] ಗೌ ಬಾಯಿ 5 ವಾಸದೇವ ಕಾಮತ್ 6 ಪದ್ಮನಾಭ ಕಾಮತ್, 7 ವಾಮನನಾಥ ಕಾಮತ್ 8 ದಾಮೋದರ ಕಾಮತ್, 9 ಸ ಶೀಲಾ ಬಾಯಿ, 10 ಸ ಮಿತ್ರ ಬಾಯಿ 5 6 7 8 9 10-ಇವರ ಮ್ಯಾನೇಜರ್ [illegible] 2ನೇ ಅರ್ಜಿದಾರ — ಅರ್ಜಿದಾರರು

ತಾ. 26—4—32ರಲ್ಲು ಮಂಗಳೂರ ಶ್ರೀಹಾಳದಲ್ಲಿ ಮೃತಪಟ್ಟ ಪಂಚಮಾಲ ಗಣಪತಿ ಕಮ್ತಿಯ ಸಾಲಗಳನ್ನು ವಸೂಲ್ ಮಾಡುವರೆ 2ನೇ ಅರ್ಜಿದಾರನ ಹೆಸರಲ್ಲಿ ವಾರಿಸ ಸಟಿ ಫಿಕೇಟು ಕೊಡಬೇಕೆಂತ ವಗೈರೆ ಕಾಣಿಸಿ ಅರ್ಜಿದಾರರ ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯನ್ನು ತನಿಕೆ ಬಗ್ಗೆ ತಾರೀಕು 21—7—32ಕ್ಕೆ ಪೂರ್ವಾಹ್ನ 11 ಘಂಟೆಗೆ ತನ್ನಿಗೆ ಇಟ್ಟಿದೆ ಆಕ್ಷೇಪ ಇದ್ದವರು ಸದ್ರಿ ತಾರೀಕಿಗೆ ಸದ್ರಿ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳುವುದು

Mangalore }
6—7—1932 }

M Ramakrishnachar,
Vakil for Petitioners

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚೀಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟಡ್.
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road, P O Dadar Bombay 14.

ತಂತಿ ವಿಳಾಸ —'CAVASPUR' Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.



ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ [illegible] ಪಥಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯ ಸಂಪದಗಳನ್ನು ಕೊಡುತ್ತದೆ

ಆರ್ಕ — ಇದು ಎಲ್ಲಾ ತರದ ಜ್ವರಗಳನ್ನು ನಿವಾರಣೆ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ — ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works Ltd, Bombay, 14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಳೆ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವ [illegible] ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ ನಾನಾ ವಿಧವಾದ ದುರ್ಬಲತ್ವ ಕೆಮ್ಮು ಎದೆ ನೋವು ಸ್ತ್ರೀಯರಿಗೆ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವದು [illegible] ನಿಶ್ಶಕ್ತಿ, ರಕ್ತಕ್ಷೀಣತೆ ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡುತ್ತದೆ. [illegible] ಒಂದು ಸಲ ಉಪಯೋಗಿಸುವದರಿಂದ ತಿಳಿಯುವುದು

5 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ. 1/5 ¼ ಪಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು.—ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಶಿರ್ಸಿ ಏಜಂಟರು—ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು.—ಟಿ ಸಿ ನಟರಾಜ್ ಅಂಡ್ ಕೊ, ಸಯ್ಯಾಜಿರಾವ್ ರೋಡ್.
ಬೆಂಗಳೂರು ಏಜಂಟರು — ಬಿ ಪ್ರೂಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಹೆಚ್ಚಿನ ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ಕೈರಾ ಜಿಲ್ಲಾ ಪರಿಷತ್ತು. ೧೦೦೦ ಕೈದುಗಳು.

ಮುಂಬಾಯಿಯಲ್ಲಿ ಗೋಳಿಬಾರು! ಹಿಂದೂ ಮುಸ್ಲಿಮ ಗಲಭೆ!!

ಅಹಮ್ಮದಾಬಾದಿನಲ್ಲಿ

ಕಳೆದ ಗುರುವಾರ ರಾಜಕೀಯ ಪರಿಷತ್ತನ್ನು ಜರಗಿಸಲು ಯತ್ನವಾಯಿತು. ಅನೇಕ ಕಡೆಗಳಿಂದ ಬಂದ ತಂಡ ತಂಡ ಪ್ರತಿನಿಧಿಗಳನ್ನು ಕೈದುಮಾಡಿದರು. ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದ ಮಗನ್‌ಲಾಲ್ ಪಟೇಲರು ಕೈದುಮಾಡಲ್ಪಟ್ಟರು. ಪೋಲೀಸ ವಾಹನಗಳು ಪಟ್ಟಣದಲ್ಲೆಲ್ಲಾ ತಿರುಗಾಡುತ್ತಿದ್ದುವು. ಸೈದಾದ್ ರೈಲ್ವೇ ಸ್ಟೇಷನಿನಲ್ಲಿ ನೂರುಗಟ್ಟಳೆ ಪ್ರತಿನಿಧಿಗಳು ಕೈದುಮಾಡಲ್ಪಟ್ಟರು.

ಇನ್ನೂರು ಮಂದಿ ಸ್ತ್ರೀಯರು ಪ್ರಭಾತ ಫೇರಿಯನ್ನು ನಡೆಸಿಕೊಂಡು ಹೋದರು. ಅವರೆಲ್ಲರನ್ನೂ ಕೈದುಮಾಡಲಾಯಿತು. ಇನ್ನೂರು ಮಂದಿ ಪ್ರತಿನಿಧಿಗಳು ಒಟ್ಟು ಸೇರಿ ಸಭೆಯನ್ನು ಜರಗಿಸಲು ಯತ್ನಿಸಿದರು. ಅವರನ್ನೂ ಕೈದುಮಾಡಿಯಿತು.

ನಾಗಪುರದಲ್ಲಿ

ಸಮಗ್ರ ಭಾರತ ಟ್ರೇಡ್ ಯೂನಿಯನ್ ಕೊಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀಯುತ ಎಚ್. ಎಸ್. ರುಯಿಕರ್ ಇವರನ್ನು ಪೋಲೀಸರು ಕೈದುಮಾಡಿ ಸೆಂಟ್ರಲ್ ಜೈಲಿಗೆ ಕೊಂಡೊಯ್ದರು. ಇವರು ಮಜೂರಿಗಾರರ ಸಭೆಗಳನ್ನು ಜರಗಿಸಿ ಭಾಷಣ ಮಾಡಿದುದೇ ಇವರ ಮೇಲಿನ ಅಪಾದನೆ.

ಮುಂಬಾಯಿಯಲ್ಲಿ

ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತನ್ನು ಶ್ರೀಮತಿ ಕೃಷ್ಣಬಾಯಿ ಫಡ್ಕೆಯವರ ಅಧ್ಯಕ್ಷತೆಯಲ್ಲಿ ಜರಗಿಸುವುದರಲ್ಲಿದ್ದರು ಪೋಲೀಸರು ನೂರಿಪ್ಪತ್ತೊಂದು ಮಂದಿಗಳನ್ನು ಸೆರೆಹಿಡಿದರು. ಇವರಲ್ಲಿ ಅನೇಕರು ತಮ್ಮ ಜೈಲುವಾಸಕ್ಕಾಗಿ ಬೇಕಾಗುವ ಸಾಮಾನುಗಳನ್ನು ಹಿಡಿದುಕೊಂಡೇ ಸಭೆಗೆ ಹೋಗಿದ್ದರು.

ಲಾಹೋರಿನಲ್ಲಿ

ಧಾಕೂರ್‌ಸಿಂಗ್ ಕೃಷ್ಣಸಿಂಗ್ ಎಂಬಿಬ್ಬರು "ಬಿಳಿ ಸರಕಾರದವರ ಕತ್ತೆಗಳು" ಎಂಬ ಶಿರೋನಾಮೆಯ ಕರಪತ್ರಗಳನ್ನು ಹಂಚಿದುದಕ್ಕಾಗಿ ಸೆರೆಹಿಡಿಯಲ್ಪಟ್ಟು ಶಿಕ್ಷಿಸಲ್ಪಟ್ಟರು.

ಅಹ್ಮದಾಬಾದಿನಲ್ಲಿ

ಡಿಸ್ಟ್ರಿಕ್ಟ್ ಕಲೆಕ್ಟರ ವಿರೋಧದ ಬಳಿ ಜಿಲ್ಲಾ ಪರಿಷತ್ತಿನ ಸಭೆಯನ್ನು ಜರಗಿಸಲು ಯತ್ನವಾದಾಗ ಪೋಲೀಸರು ಏಳು ಮಂದಿಗಳನ್ನು ಸೆರೆಹಿಡಿದರು. ಇಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀಯುತ ಜಿ ವಿ ಮಾವಲಂಕರ್ ಇವರು ಕಾಯಿದೆ ಭಂಗ ಚಳವಳಗಾರರೊಡನೆ ಸೇರಿಕೊಳ್ಳಬಾರದಾಗಿ ನೋಟೀಸು ಜ್ಯಾರಿಮಾಡಿದ್ದಾರೆ

ಅಲ್ಲಹಾಬಾದಿನ

ಫಾತೆಪುರದಲ್ಲಿ ಜಿಲ್ಲಾ ಪರಿಷತ್ತು ಜರಗಲಿತ್ತು. ಅನೇಕ ಕಡೆಗಳಿಂದ ಪ್ರತಿನಿಧಿಗಳು ಬಂದರು ಅವರೆಲ್ಲರನ್ನೂ ಹಿಡಿಯಲಾಯಿತು. ಇಪ್ಪತ್ತನಾಲ್ಕು ಮಂದಿಗಳು ಸ್ಟೇಷನಿನಲ್ಲಿದ್ದಾರೆ.

ಕಲ್ಲಿಕೋಟೆಯಲ್ಲಿ

ಕಳೆದ ಶುಕ್ರವಾರ ಕೊಟ್ಟಾಯಂ ತಾಲೂಕು ಪರಿಷತ್ತು ಜರಗಲಿತ್ತು. ಈ ವಾರ್ತೆಯನ್ನು ಕೇಳಿ ಪೋಲೀಸರು ಸುವ್ಯವಸ್ಥೆ ಮಾಡಿದ್ದರು. ಆದರೂ ಕೊಂಗ್ರೆಸ್‌ವಾಲರು ಒಂದೆಡೆ ಸಭೆ ಸೇರಿ, ಅಧ್ಯಕ್ಷರನ್ನು ಸ್ವಾಗತೀಕರಿಸಿ, ಅವರಿಗೆ ಹೂಮಾಲೆ ಹಾಕಿ, ಠರಾವುಗಳನ್ನು ಮಂಜೂರು ಮಾಡಿ, ವಂದೇ ಮಾತರಂ ಗೀತೆಯನ್ನು ಹಾಡಿ, ಮೆರವಣಿಗೆಯಿಂದ ಅರ್ಧ ದಾರಿ ನಡೆದರು. ಅಷ್ಟರಲ್ಲಿ ಈ ವಾರ್ತೆಯನ್ನು ಕೇಳಿ, ಪೋಲೀಸರು ಓಡಿ ಬಂದು ಅವರೆಲ್ಲರನ್ನೂ ಬಂಧಿಸಿದರು. ಬೇರೆ ಕೆಲವು ಕಡೆಗಳಲ್ಲೂ ಇಂತಹ ಪರಿಷತ್ತುಗಳು ಜರಗಲಿತ್ತಗಳಾದುವು.

ಕಣ್ಣಾನೂರಿನಲ್ಲಿ

ಚಿರಕಲ್ ತಾಲೂಕು ಪರಿಷತ್ತನ್ನು ಜರಗಿಸಲಿದ್ದಾಗ ಶ್ರೀಮತಿ ಗಣೇಶ ಪೈ ಮೊದಲಾದ ಸ್ತ್ರೀಯರು ಕೈದುಮಾಡಲ್ಪಟ್ಟರು. ಕೆಲವು ತರುಣರು "ಮೆರವಣಿಗೆಯಲ್ಲಿ ಕೂಡಿಕೊಳ್ಳುವುದೂ ತಪ್ಪೇ? ಹಾಗಾದರೆ ನಮಗೆ ಶಿಕ್ಷೆ ಕೊಡಿ!" ಎಂದರು.

ಕೊಡಗಿನ

ಸತ್ಯಾಗ್ರಹಿಗಳಾದ ಶ್ರೀಯುತ ಪಿ. ಎಮ್. ಅಣ್ಣಪ್ಪ ಶ್ರೀಯುತ ಪಿ. ಪಿ. ಸುಬ್ಬಯ್ಯ, ಶ್ರೀಯುತ ಪಿ. ಕೆ. ಅಪ್ಪಯ್ಯ, ಶ್ರೀಯುತ ಕೆ. ಪಿ. ಸುಬ್ಬಯ್ಯ, ಶ್ರೀಯುತ ಎಮ್. ಪಿ. ಚೆಂಗಪ್ಪ, ಶ್ರೀಯುತ ಎಮ್ ಕೆ. ಮುದ್ದಣ್ಣ ಮತ್ತು ಶ್ರೀಯುತ ಎ. ಐಯಪ್ಪ ಇವರ ಸೆರೆಯ ಅವಧಿಯು ಮುಗಿದುದರಿಂದ ಇವರನ್ನು ಕಣ್ಣಾನೂರಿನ ಸೆಂಟ್ರಲ್ ಜೈಲಿನಿಂದ ಬಿಡುಗಡೆಮಾಡಲಾಗಿ ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೋದರು.

ಬೆಂಗಲ್ ಹರ್ಟ್‌ನಲ್ಲಿ

ಮಿ| ಅಬ್ದುಲ್‌ಖಾದರ್ ಸಾಹೇಬ್ ಎಂಬವರು ಕೊಂಗ್ರೆಸ್ ಡಿಕ್ಟೇಟರರಾಗಿ ನೇಮಿಸಲ್ಪಟ್ಟರು. ಅವರನ್ನು ಕೈದುಮಾಡಲಾಯಿತು. ವಿಚಾರಣೆಯ ಸಮಯದಲ್ಲಿ ಅವರು ತಾನು ಮಾಡಿದುದು ಸರಿಯೆಂದೂ ತಾನು ಮಹಾತ್ಮಾ ಗಾಂಧಿಯವರ ಶಿಷ್ಯರಲ್ಲೊಬ್ಬರೆಂದೂ ಹೇಳಿದರು. ಅವರಿಗೆ ಆರು ತಿಂಗಳ ಕಠಿಣ ಸಜೆಯು ದೊರೆಯಿತು.

ಈರೋಡಿನಲ್ಲಿ

ಪ್ರಸಿದ್ಧ ವರ್ತಕರೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಶ್ರೀಯುತ ಕೇಶವಲಾಲ್ ಕಾಳೀದಾಸ ಸೇಟ್ ಎಂಬವರು ಬ್ರಿಟಿಷ ವಸ್ತು ಬಹಿಷ್ಕಾರ ವಿದೇಶಿ ವಸ್ತು ಬಹಿಷ್ಕಾರಗಳನ್ನು ಪದೇಶಿಸುವ ಕರಪತ್ರಗಳನ್ನು ಹಂಚಿದುದಕ್ಕಾಗಿ ಕೈದುಮಾಡಲ್ಪಟ್ಟರು. ಅವರಿಗೆ ಎರಡು ತಿಂಗಳ ಸಾದಾ ಸಜೆಯು ದೊರೆಯಿತು.

ಕಲ್ಲಿಕೋಟೆಯಲ್ಲಿ

ಹದಿಮೂರು ಮಂದಿ ಸ್ವಯಂಸೇವಕರು ಮೆರವಣಿಗೆಯನ್ನು ಮಾಡಿದರು. ಅವರನ್ನು ಹಿಡಿದು ವಿವಿಧಾವಧಿಯ ಶಿಕ್ಷೆ ಕೊಟ್ಟರು ಡಿಕ್ಟೇಟರರಿಗೆ ಆರು ತಿಂಗಳ ಕಠಿಣ ಸಜೆಯನ್ನಿತ್ತರು.

ಗುಂಟೂರಿನಲ್ಲಿ

ಜಿಲ್ಲಾ ರಾಜಕೀಯ ಪರಿಷತ್ತು ಜರಗಲು ಯತ್ನಗಳಾದುವು ಶ್ರೀಯುತ ವಿ. ಸೂರ್ಯನಾರಾಯಣರೆಂಬ ವಕೀಲರೊಬ್ಬರನ್ನು ಕೈದುಮಾಡಿದರು ಅಲ್ಲದೆ ಇಷ್ಟರ ತನಕ ಅರುವತ್ತು ಮಂದಿಗಳನ್ನು ಸೆರೆಹಿಡಿದ ವಾರ್ತೆಯು ಬಂದಿದೆ.

ಅಹ್ಮದಾಬಾದಿನಲ್ಲಿಯು

ಒಂದು ಮ್ಯುನಿಸಿಪಲ್ ಶಾಲೆಯ ಉಪಾಧ್ಯಾಯರ ಜೇಬಿನೊಳಗೆ ಕೊಂಗ್ರೆಸ್ ಬುಲ್ಲೆಟಿನುಗಳಿದ್ದುದಕ್ಕಾಗಿ ಅವರನ್ನು ಕೈದುಮಾಡಲಾಗಿದೆ.

ವೆಂಕಟಗಿರಿಯಲ್ಲಿ

ಪೆಟ್ಲೂರು ಗೋವಿಂದ ರೆಡ್ಡಿ ಎಂಬವರು "ಪೋಲೀಸ ಬಹಿಷ್ಕಾರ" ಮಾಡಿದರೆಂಬ ಅಪಾದನೆಯ ಮೇಲೆ ಹೊಡೆಯಲ್ಪಟ್ಟರು. ಪರೆಂದೂ ಅವರನ್ನು ಬಿಡಿಸಲು ಬಂದವರಿಗೂ ಪೋಲೀಸರು ಲಾಠಿಗಳಿಂದ ಹೊಡೆದರೆಂದೂ, ಇದರಿಂದಾಗಿ ಜನರಿಗೂ ಪೋಲೀಸರಿಗೂ ಕೈಕೈ ನಡೆಯಿತೆಂದೂ ವಾರ್ತೆ ಬಂದಿದೆ ಹಲವರನ್ನು ಕೈದುಮಾಡಿದ್ದಾರೆ

ಕರ್ಫ್ಯೂ ಓರ್ಡರು ಜ್ಯಾರಿಯಾಯಿತು.

ರಾತ್ರಿ ಹತ್ತು ಗಂಟೆಯ ಮೇಲೂ ಬೆಳಿಗ್ಗೆ ಆರು ಗಂಟೆಯ ಒಳಗೂ ಯಾರೂ ಹೊರಹೊರಡಬಾರದೆಂದು ತಾ. ೩ನೇ ದಿನ ಕರ್ಫ್ಯೂ ಓರ್ಡರು ಜ್ಯಾರಿಯಾಗಿದೆ. ಈ ಕಾನೂನು ಒಂದು ವಾರದ ತನಕ ಇರುವುದು ಮಿಲಿಟರಿಯನ್ನು ಕರತರಲಾಗಿದೆ. ಆರು ಕಡೆಗಳಲ್ಲಿ ಹಿಂದೂ ಮುಸಲ್ಮಾನ ಜಗಳವು ನಡೆಯಿತು. ಆರು ಕಡೆಗಳಲ್ಲೂ ಪೋಲೀಸರು ಗೋಳಿಬಾರು ಮಾಡಿದರು. ಗೋಳಿಪ್ಪಿತಾದಲ್ಲಿ ಮುಸ್ಲಿಮರು ಒಂದು ದೇವಸ್ಥಾನದೊಳಗೆ ಹೊಕ್ಕು ಮೂರ್ತಿಯನ್ನು ಒಡೆದು ಹಾಕಿ, ಹಿಂದೂಗಳಿಗೆ ಹೊಡೆದರು. ದೇವಸ್ಥಾನಕ್ಕೆ ಬೆಂಕಿ ಕೊಟ್ಟರು. ಪೋಲೀಸರು ಬಂದು ಗುಂಡು ಹಾರಿಸಿದರು. ಕೆಲವರು ಜಖಂಗೊಂಡರು. ಹಿಂದೂಗಳು ಒಂದು ಮೃತಶರೀರವನ್ನು ಸೋನಾಪುರ ಸ್ಮಶಾನಕ್ಕೆ ಕೊಂಡೊಯ್ಯುವಾಗ ಕಮಟಿಪುರದ ಬಳಿ ಮುಸ್ಲಿಮರು ಅವರಿಗೆ ಹೊಡೆದರು. ಅನೇಕರು ಘಾಯಗೊಂಡರು. ಪೋಲೀಸರು ಬಂದು ಹದಿನೆರಡು ಸಲ ಗುಂಡು ಹಾರಿಸಿದರು. ಎಂಟು ಮಂದಿಗಳು ಜಖಂಗೊಂಡರು. ಹೀಗೆ ಇನ್ನೊಂದು ಕಡೆಯಲ್ಲಿಯೂ ನಡೆಯಿತು.

ಮುಂಬಾಯಿಯಲ್ಲಿ

ಗಲಭೆ! ಗುಂಡು! ಕೊಲೆ!

ಮುಂಬಾಯಿಯ ಗಲಾಟೆಯು ಒಮ್ಮೆ ಶಮನವಾಗಿದ್ದರೂ ಅಲ್ಲಲ್ಲಿ ಒಂದೆರಡು ಗಲಾಟೆಗಳು ನಡೆಯುತ್ತಿದ್ದುವಷ್ಟೆ! ಕಳೆದ ಶುಕ್ರವಾರ ದಿನ ಮೊದಲುಗೊಂಡು ಅಲ್ಲಿ ಪುನಃ ಗಲಾಟೆಗೆ ಮೊದಲಾಗಿದೆ ಭೆಂಡಿಬಜಾರ್, ಕಲ್ಬಾದೇವಿ ಮಾರ್ಗ, ಫಲೀಸ್ಥರಗಳಲ್ಲಿ ಹಿಂದೂ ಮುಸಲ್ಮಾನರು ಹೊಡೆದಾಡಲಾರಂಭಿಸಿದರು. ತಾ. ೧ನೇ ದಿನ ಮುಸ್ಲಿಮರು ಒಂದು ಶವವನ್ನು ಹಿಂದೂಗಳ ವಠಾರದ ಮಾರ್ಗವಾಗಿ ಕೊಂಡೊಯ್ದರು. ಆ ಮುಸ್ಲಿಮರಿಗೆ ಹಿಂದೂಗಳು ಕಲ್ಲು ಬಿಸಾಡಿದರೆಂದೂ ಕೆಲವರಿಗೆ ಹೊಡೆದರೆಂದೂ ವಾರ್ತೆಯೊಂದು ಹರಡಿತು. ಮುಸ್ಲಿಮರು ರೇಗಿಬಿದ್ದರು. ಕಂಡ ಕಂಡ ಹಿಂದೂಗಳಿಗೆ ಹೊಡೆದರು. ಅಂದಿನ ದಿನ ಮೊದಲ್ಗೊಂಡು ದ್ವಿಪಕ್ಷಗಳವರೂ ಒಬ್ಬರನ್ನೊಬ್ಬರು ಹೊಡೆಯಲಾರಂಭಿಸಿದರು. ಒಂದು ಕಡೆಯಲ್ಲಿ ಇಂತಹ ದ್ವಂದ್ವಯುದ್ಧವು ನಡೆಯುವಾಗ ಪೋಲೀಸರು ಅವಸರವಾಗಿ ಕಲಹಕಾರರನ್ನು ಚದುರಿಸಲು ಪ್ರಯತ್ನವಾಯಿತು. ಆದರೆ ಗಲಭೆಗಾರರು ಹಿಮ್ಮೆಟ್ಟಲಿಲ್ಲ ಬದಲಿಗೆ ಪೋಲೀಸರ ಮೇಲ್ಬೀಳಲು ಹವಣಿಸಿದರು. ಇದನ್ನು ಕಂಡ ಪೋಲೀಸರು ಗುಂಡು ಹಾರಿಸಿದರು. ಯಾರಿಗೂ ಘಾಯವಾಗಲಿಲ್ಲ ಮಾತ್ರ ಕತ್ತಿಯ ಪೆಟ್ಟಿನಿಂದ ಇಬ್ಬರು ಮಡಿದಿದ್ದಾರೆ. ಹದಿನೆಂಟು ಮಂದಿಗಳು ಘಾಯಗೊಂಡರು. ಪೋಲೀಸರು ಕಾವಲು ಮಾಡಿದರು.

ಈ ಗಲಭೆಯಲ್ಲಿ ಸತ್ತ ಒಬ್ಬ ಮುಸಲ್ಮಾನನ ಶವವನ್ನು ಸಾವಿರಗಟ್ಟಳೆ ಮುಸ್ಲಿಮರು ಗುಂಪುಕೂಡಿ ಸ್ಮಶಾನ ಭೂಮಿಗೆ ಕೊಂಡೊಯ್ಯುತ್ತಿದ್ದರು. ಅವರು ಹಿಂದೂಗಳ ಸ್ಥಳದ ಮಾರ್ಗವಾಗಿ ಮೆರವಣಿಗೆಯನ್ನು ನಡಸಿಕೊಂಡು ಹೋಗುವರೆಂಬುದನ್ನು ಕೇಳಿ ಪೋಲೀಸರ ಫೌಜು ಅವಸರದಿಂದ ಹೋಯಿತು. ಮತ್ತು ಕಲ್ಬಾದೇವಿ ಮಾರ್ಗವಾಗಿ ಶವದ ಮೆರವಣಿಗೆಯನ್ನು ಮಾಡಬಾರದೆಂದು ಎಚ್ಚರಿಕೆ ಕೊಟ್ಟರು ಆದರೂ ಮುಸ್ಲಿಮ ತಂಡಗಳು ಕಲ್ಬಾದೇವಿಯ ಮಾರ್ಗವಾಗಿಯೇ ಶವವನ್ನು ಹೊತ್ತುಕೊಂಡು ಹೋದುವು ಒಡನೆ ಮಾಳಿಗೆ ಮೇಲಿನಿಂದ ಕಲ್ಲುಗಳು ಮುಸ್ಲಿಮರ ಮೇಲೆ ಬಿದ್ದುವು ಸೋಡಾ ಬಾಟ್ಲಿಗಳು ಎಸೆಯಲ್ಪಟ್ಟುವು ಪೋಲೀಸರು ಮುಸ್ಲಿಮರನ್ನು ತಡೆದರೂ ನಿಷ್ಫಲವಾಯಿತು. ಒಡನೆ ಪೋಲೀಸರು ಗೋಳಿಬಾರು ಮಾಡಿದರು. ನೂರಪತ್ತೆಂಟು ಮಂದಿಗಳು ಘಾಯಗೊಂಡರು. ಮುಸ್ಲಿಮರನ್ನು ಚದುರಿಸಲಾಯಿತು. ಪೋಲೀಸರು ಹೆಚ್ಚಿನ ಫೌಜುಗಳನ್ನು ಕಾವಲಿರಿಸಲಾಗಿ ತಾ. ೧೦ ಗಲಾಟೆಯು ಸ್ವಲ್ಪ ಶಾಂತವಾಯಿತು.

ತಾ. ೨ನೇ ದಿನವೂ ಮುಸ್ಲಿಮರು ಒಂದು ಶವವನ್ನು ಹೊತ್ತು ಗಿರ್ಗಾಂವ ಮಾರ್ಗವಾಗಿ ಹೋದರು. ಮೆರವಣಿಗೆಯು ಆ ಮಾರ್ಗವಾಗಿ ಹೋಗಬಾರದೆಂದು ಪೋಲೀಸರು ಅಡ್ಡ ತಡೆದರು. ಆ ಗಲಭೆಗಾರರು ಪೋಲೀಸರನ್ನು ಅತ್ತ ಇತ್ತ ಚದರಿಸಿ ತಮ್ಮ ದಾರಿಯನ್ನು ಹಿಡಿದರು. ಗಿರ್ಗಾಂವ ಮಾರ್ಗದಲ್ಲಿ ಹತ್ತು ಹೆಜ್ಜೆಗಳನ್ನು ಮುಂದಿಡುತ್ತಲೇ, ಹಿಂದೂಗಳು ಮುಸ್ಲಿಮರೆದುರು ಎದೆಗೊಟ್ಟು ನಿಂತರು. ಕಲ್ಲು, ದೊಣ್ಣೆ, ಕತ್ತಿ ಕೈದುಗಳಿಂದ ಹೋರಾಟವಾಯಿತು. ಪೋಲೀಸರು ಗುಂಡು ಹಾರಿಸಲಾಗಿ ಕೆಲವರು ಘಾಯಗೊಂಡರು. ಇಬ್ಬರು ಗಲಭೆಗಾರರು [illegible] ಮರಣ ಹೊಂದಿದರು.

ತಾ. ೩ನೇ ದಿನ ಲಾಲ್‌ಬಾಗ್ ಪೋಲೀಸ್ ಚೌಕಿ ಮೊದಲಾದ ಕಡೆಗಳಲ್ಲಿ ಹಿಂದೂ ಮುಸ್ಲಿಮರು ಹೊಡೆದಾಡಲಾರಂಭಿಸಿದರು. ಪೋಲೀಸರು ಗುಂಡು ಹಾರಿಸಿದರು. ಒಬ್ಬ ಮುಸಲ್ಮಾನನಿಗೆ ಜಖಂ ಆಯಿತು ಮೂರನೇ ದಿನ ಬೆಳಿಗ್ಗೆ ಅಲ್ಲಲ್ಲಿ ಐದು ಮಂದಿಗಳು ಮರಣಹೊಂದಿದರು. ಅನೇಕರು ಜಖಂಗೊಂಡರು. ಗಲಭೆಯನ್ನು ಕಡಿಮೆ ಮಾಡುವುದಕ್ಕಾಗಿ ಮುಸ್ಲಿಮರು ತಮ್ಮ ಶವಗಳ ಮೆರವಣಿಗೆಗಳನ್ನು ಇಂತಿಂತಹ ಮಾರ್ಗವಾಗಿಯೇ ಕೊಂಡೊಯ್ಯಬೇಕೆಂದು ಪೋಲೀಸ್ ಕಮಿಶನರು ಸೂಚಿಸಿದ್ದರು. ಆದರೂ ದಂಗೆಕಾರರು ಅವರ ಕಾನೂನು ಉಲ್ಲಂಘಿಸಿ ನಡೆದರು.

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರನ್ಸ
ಬೇಂಕ್, ಲಿಮಿಟೆಡ್
(ಜರ್ಮನಿಯಲ್ಲಿ ಸನ್ ೧೮೯೦ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ೨೮೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಪತ್ರಗಳ ಹೊತ್ತ ೯೯ ಕೋಟಿ ರೂ ಗಳಿಂತ ಹೆಚ್ಚಿಗಿರುವುದು ಒಟ್ಟು ಆಸ್ತಿ ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕಾಯ್ದೆ ಕ್ಲೇಮುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ **ಮೊರವಾನಜೆ ಆ್ಯಂಡ್ ಸನ್ಸ, ಧಾರವಾಡ,** ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

'If every Wife knew what every Widow knows every Husband would be Insured'

PLACE YOUR LIFE ASSURANCE WITH
THE SOUTH INDIAN
Securing for your clients –
1 **Low rates of Premium**
2. **Liberal Policy Conditions.**
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE
For terms of Agency please apply to—
H R K IYENGAR
Chief Agent
The S. I. G A Co. Ltd,
Sanyasiguddy, MANGALORE
Managing Agents –
K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಕರಾರುಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್ ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೊ.
7-8 ಮ್ಯಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ ಶೀತ, ನೆಗಡಿ ಕೆಮ್ಮು ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

೩೦೦ ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.
(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.
(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸತೈಲ.
ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗಳಿಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು [illegible]

ಮೂಲವ್ಯಾಧಿ

ಅಥವಾ ಕಷ್ಟನ್ನವಾದ ರಕ್ತ ಸೆಳೆಯುದು ಮತ್ತು ತ್ರಾಸ ಭಯಂಕರವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ ಅಧಿಕ ಪ್ರಶಂಸೆ ವ್ಯರ್ಥ ಗುಣಬಂದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೩—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತುರಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೈಲ ಎಂಬೌಷಧ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೨.

ವಿಳಾಸ — **ಶಕ್ತಿಸುಧಾ ಕಾರ್ಯಾಲಯ**
23 ಕಾಂಟಾರವಾಡಿ 4ನೇ ಗಲ್ಲಿ,
ಮುಂಬಯಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ
ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳವರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧ

ಎರಡನೇ, ಮೂರನೇ ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ, ಮೂರನೇ ನಾಲ್ಕನೇ, ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಜ್ಜಕಥ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಜ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ [illegible] ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ
ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾ ಗೌತಮರಾವ್ ಕೇಶವ ಆಂಡ್ ಸನ್ಸ್
ಠಾಕುರದ್ವಾರ, ಮುಂಬಯಿ ೨ ಸ್ಟೋಕಿಸ್ಟ್ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! ಮಾರಾಟಕ್ಕಿವೆ!!
ಕಾಫಿ ಪ್ಲೆಂಟರರಿಗೂ ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ,
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V S KAMATH AT M. T. A. SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—8—0 ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೫ನೇ ಶುಕ್ರವಾರ ಜುಲ್ಯೈ ೧೯೩೨ (15—7—'32.) ಸಂಚಿಕೆ ೨೮

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು:—ಉಡುಪಿ ಶಾಖೆ — ಕುಂದಾಪುರ. ಮತ್ತು ಮಂಗಳೂರು

Authorised Capital Rs. 3,50,000. Subscribed & Called up Rs. 2,25,000.

ನಿಯಮಿತ ಮೂಲಧನ ರೂ 3,50,000. ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 30TH DAY OF JUNE, 1932.

	CAPITAL AND LIABILITIES.			PROPERTY AND ASSETS	
1	Paid up Capital	Rs. 2,25,000-0 0	1	Premises, Building, Furniture etc	Rs 64,417 5 0
2	Reserve and other funds	„ 2,22,705-0-0	2	Government securities	„ 3,30,786 4 0
3	Deposits	„ 20,25,790 9 11	3	Au[illegible]ised Investments	„ 20,70,404 4 2
4	Due to Bankers	„ 19,965 6-0	4	Bills for collection	11,027 6 0
5	Sundries	„ 70,924-15 2	5	Sundries	„ 2[illegible],351 1 0
6	Bills for collection per contra	11,027- 6 0	6	Cash in hand & with bankers	72[illegible] 13 11
	Total	25,75,413- 5 1		Total	25,7[illegible],413- 5-

UDIPI 11—7—'32.

N. ANANDA RAO,
Secretary & Manager.

Regd.

ಅಮೃತಾಂಜನ.

ಶೀತ, ಕೆಮ್ಮು, ತಲೆನೋವು, ವಾತ, ಸುಟ್ಟುಹೋಗುವಿಕೆ, ಮತ್ತು ಮನುಷ್ಯರಿಗೆ ಭಂಗ್ಯಕೊಡುವ, ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳೂ, ಇವು ಎದೆಯೊಡ್ಡಿ ಅವುಗಳನ್ನು ಓಡಿಸುತ್ತವೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯುಲ್ಲ ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು — (ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ್ಯ ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಎರಡೇ ಸಲದ ತಗಲಿಸುವಿಕೆಯಿಂದ ಗುಣವಾಗುತ್ತದೆ. ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ ಟಿನ್ನಿಗೆ 0—6—0 ಡಜನಿಗೆ 3—8—0

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ. 7

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಯಿ.
ಏಜಂಟರು — ಪಾ ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office -MANGALORE, S India
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN.

Ensure the Absolute Safety, Comfort and Happiness of your Dear Ones

WANTED INFLUENTIAL AGENTS.
LIBERAL TERMS TO COMPETENT MEN

For further particulars apply to the Head Office

೧೧೦೦ ರೂ: ಬಕ್ಷೀಸು

೩೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ಮಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತಪಾಕು ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು.- ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಭಾಯ ಪರಿಣಾಮ, ಎಂಥದಾದರೂ ಪರಮ, ಮೈನಮೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ ೩೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫, ೬ ೩ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫॥ ಮಾತ್ರ ಪತ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನು ನೋಡಿರಿ

ಡಾಕ್ಟರ ಎಮ್ ಆಯ್ ಖಟಖಟೆ, ಎಲ್ ಎಮ್ ಎಂಡ್. ಎಸ್, ಜೆ. ಪಿ, ಮುಂಬಯಿ:— ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು, ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ, ಎಮ್. ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ:— ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿ ವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ —ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ, S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಬಚ್ಚಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂತಾನಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ವೈದ್ಯ ಎಲ್ ಸಿ ಪಿ ಎಸ್ ಕೊಳವಾಮಾಹಿಮ ರಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ೧ ಕ್ಕೆ ೪ ರೂ ವಿ ಪಿ ಖರ್ಚ ೦।೦

ವಿಳಾಸ— ಸಂಜೀವಿನೀ ಔಷಧಾಲಯ:. ಮು ಪೊ. ಮಿರಜ, S. M. C.

'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.

ಹಿಸ್ಟೆರೈನ್.

ಮದಕು—ಶಕ್ತಿಗೆ ಅಮೋಘ ಮದ್ದು

ಹಿಸ್ಟಿರಿಯಾ, ನಿದ್ರೆ ಇಲ್ಲದಿರ ವಿಕೆ ಹುಚ್ಚುಗಳಿಗೆ ದಿವ್ಯ ಮದ್ದು

ಕ್ರಯ—ಬಾಟ್ಲಿಗೆ ರೂ 2 8

ವಿ ಪಿ ಖರ್ಚ ಪ್ರತ್ಯೇಕ

ದಿ ಈಸ್ಟರ್ನ್ ರಿಸರ್ಚ್ ಲಬೋರೆಟರಿ
ಗಾಝಿಪುರ, ಸಂಯುಕ್ತ ಪ್ರಾಂತ್ಯ

ಪ್ರೋಟೊಗಿನ್.

ಮಕ್ಕಳಿಲ್ಲದ ಸಂತಾನಕ್ಕೊಂದು ವರ ಸೂನುಗಳಿಲ್ಲದ ಮನೆ ಕಾನನಕ್ಕೆ ಸಮಾನ ಬಾಹಂತಿಯರಿರುವಾಗ ಆಗುವ ನೋವುಗಳಿಗೆ ಅದ್ವಿತೀಯ ಮದ್ದು ಗರ್ಭವನ್ನೂ ತಾಯಿಯನ್ನೂ ಪಾಲಿಸುತ್ತದೆ ಹೆಂಗೆ ನೋವನ್ನು ಕಡಿಮೆಮಾಡಬೇಕೇ? ಗರ್ಭಸ್ರಾವವನ್ನು ನಿಲ್ಲಿಸಬೇಕೇ? ಇದನ್ನು ತೆಗೆದುಕೊಳ್ಳಿರಿ

ಕ್ರಯ ಬಾಟ್ಲಿಗೆ ರೂ 3/4 ವಿ ಪಿ ಬೇರೆ

THE EASTERN LABORATORY,
GHAZIPUR U P INDIA

Angel's Insurance Company Ltd., Delhi.

ಏಂಜಲ್ಸ್ ಇನ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್. ಡಿಲ್ಲಿ.

ದೇವತೆಗಳ ಸಹಾಯವು ನಿಮಗಿರಲಿ!

ನೀವು ಮುದುಕರಾಗುವಾಗ ನಿಮ್ಮನ್ನು ರಕ್ಷಿಸಲು ಕಂಭ!

ಇತ್ತ ನೋಡಿ! ಇತ್ತ ನೋಡಿ!

ನೀವು ಈಗಲೇ ತಕ್ಕ ವ್ಯವಸ್ಥೆಯನ್ನು ಮಾಡದೆ, ನಿಮ್ಮ ಮೇಲೆ ಹೊಂದಿಕೊಂಡಿರುವ ಕುಟುಂಬದವರು ನಿಮ್ಮ ನಂತರ ಜೀವನ ಜಲಧಿಯಲ್ಲಿ ತೇಲಾಡಿ ಬಳಲಲು ನೀವು ಬಿಡಬಹುದೇ? ಈ ದಿನವೇ ನಮ್ಮ ಒಳಗೆ ಬನ್ನಿ!— ಹಲ್ಲಿದ್ದಾಗಲೇ ಕಡಲೆ ತಿನ್ನಿ! 'Angels thrift ಮತ್ತು 'Juvenile (ಜುವೆನಿಲ್) ಕ್ರಮದ ಮೂಲಕ ನೀವು ದಿನ ಕೊಟ್ಟೊಂದಿರಾಣೆಯನ್ನು ಜೋಕೆಯಿಟ್ಟರೆ ನಿಮ್ಮ ಕುಟುಂಬವು ಸಂರಕ್ಷಿಸಲ್ಪಟ್ಟೀತು.

ಪತ್ರಕಗಳಿಗೆ ಈ ಕೆಳಗಿನವರಿಗೆ ಇಂದೇ ಬರೆಯಿರಿ

ಆರೋನ್ ಜಿ. ಮಾಬೆನ್, ಮಾಬೆನ್ ಎಂಡ್ ಸನ್ಸ್, ಜನರಲ್ ಮರ್ಚಂಟ್ಸ್
ಸೋಲ್ ಡಿಸ್ಟ್ರಿಬ್ಯೂಟರ್ಸ್ ಕಿರ್ಲೋಸ್ಕರ್ ಬ್ರದರ್ಸ ಲಿಮಿಟೆಡ್ ಉದಿಯಾವರ, ಉಡುಪಿ, ದ ಕ
ಹತ್ತಿಬೀಜ, ಬೇಸಾಯದ ಸ್ವದೇಶಿ ಸಾಮಗ್ರಿಗಳು, ಮನೆಗಳಿಗೆ ಆಸ್ಪತ್ರೆಗಳಿಗೆ ಬೇಕಾದ ಮದ್ದುಗಳನ್ನು ಮಾರುವವರು, ಮತ್ತು
ಜೀವವಿಮೆ ಏಜಂಟರು

ಓ ಸಪ್ರೂ ಜಯಕರರೇ!

ಓ ಸಪ್ರೂ ಜಯಕರರೇ, ಓ ಸಪ್ರೂ ಜಯಕರರೇ, ಓ ಶ್ರೀನಿವಾಸ ಶಾಸ್ತ್ರಿಗಳೇ, ಓ ಶಿವರಾಯರೇ, ಓ ಚಿಂತಾಮಣಿಗಳೇ, ಜಾಧವರೇ, ನೀವು ಇದೇನು ಮಾಡಿದಿರಿ? ಕನ್ಸರ್ವೇಟಿವ್ ಆಟಿಯ ಹೊಡೆತದಿಂದ ಇನ್ನೊಂದು ಇಂಗ್ಲಾಂಡು ಪ್ರವಾಸವನ್ನು ಕೈಬಿಟ್ಟಿರಲ್ಲ! ಛೀ ಛೀ ಎಂತಹ ಮೋಸಮಾಡಿದಿರಿ? ಬ್ರಿಟಿಷರಿಗೆ? - ಸರ್ ಹೋರರಿಗೆ? - ವೈಸರಾಯರಿಗೆ? ನೀವು ಹೀಗೆ ಮಾಡಬಹುದಿತ್ತೇ?

× × × ×

ನೀವು ಭಾರತೀಯರಲ್ಲ ನೀವು ಕರ್ನೊಡನೆ ಬೆರೆತುಕೊಂಡ ತಾಜಾ ಜನರು ಎಂದು ಬ್ರಿಟಿಷರು ನೆನೆಸಿದ್ದರು. ಯಾರು ಏನು ಹೇಳಿದರೂ ನೀವು ಮಾತ್ರ ನಮ್ಮ ಕಡೆಗಿರಬಹುದು ಎಂದು ಪ್ರಧಾನ ಮಂತ್ರಿ ಸರ್ ಹೋರ್ ಮೊದಲಾದವರ ಆಶೆ ಇತ್ತು ಆದರೆ ನೀವೇ ಈಗ ಕೈ ಕವಚ ಹಿಡಿದಿರಿ!

+ + + +

ನೀವು ಇಂಗ್ಲಿಷ್‌ನವರ ಬೆಟ್ಟು ಸಹಕರಿಸಿ ನಾಲ್ಕಾರು ವರ್ಷಗಳಿಂದಲೂ ಕಷ್ಟಪಟ್ಟು ಕೆಲಸಮಾಡಿದಿರಿ ನಿಮಗೆ ಸರ್ಟಿಫಿಕೇಟುಗಳೇನು ದೊರೆಯಿತು? ನಿಮ್ಮನ್ನು ಇಂಗ್ಲಿಷನವರು ಡೊಂಟ್‌ಕೇರ್ ಮಾಡಿಬಿಟ್ಟರು ಅಲ್ಲವೆ?

× × × ×

ಸರ್ ಸಾಮುವೇಲ್ ಹೋರರ ಡೊಂಟ್‌ಕೇರ್ ಪೋಲಿಸಿಯು ಎಷ್ಟರ ತನಕವಿರುತ್ತದೋ ಎಂದು ತಿಳಿದವರು ನಾವೇ? ನೀವೇ? ಆದರೂ ನಿಮಗೊಂದು ಡೊಂಟ ಕೇರ್ ಸರ್ಟಿಫಿಕೇಟು ದೊರೆಯಿತಲ್ಲ ಬಿಡಿ! ಧನ್ಯರಾದಿರಿ! ಇಂತಹ ಸರ್ಟಿಫಿಕೇಟನ್ನು ಸ್ವಾಬನೂ ಕೊಡುತ್ತಿದ್ದನಲ್ಲ !!

× × × ×

ಆಲೋಚನಾ ಸಭೆಗೆ ನೀವು ರಾಜೀನಾಮೆ ಕೊಟ್ಟು, ನಾವು ನಿಮ್ಮ ಸಭೆಗೆ ಬರುವುದಿಲ್ಲವೆಂದು ಹೇಳಿದ ಮೇಲೆ ಪತ್ರಿಕೆಗಳು ನಿಮಗೆ ಜಯಘೋಷವನ್ನೆತ್ತುತ್ತಿವೆ Welcome Liberals Your action is warmly appreciated ಎಂದು ಅನೇಕಾನೇಕ ಪತ್ರಿಕೆಗಳು ಹೇಳುತ್ತಿವೆ ಸ್ವಾಬನದ್ದೂ ನಿಮಗೊಂದು ಜೈ ಇರಲಿ

× × × ×

ಹೊಂಬರಾಟದವನು ಮಂಗನ ಸೊಂಟಕ್ಕೆ ಹಗ್ಗ ಹಾಕಿ 'ಥಾಲಿಗಾಡೋ ತಿಮ್ಮಣ್ಣ' ಎಂದು ಹೇಳಿದ ಹಾಗೆ ಅದು ಕುಣಿಯುತ್ತದೆ ಸ್ವಲ್ಪ ಸಮಯದ ಮೊದಲು ನೀವೂ ಈ ರೀತಿ ಕುಣಿದಾಡಿದಿರಿ ಸಿಕ್ಕಿತಲ್ಲವೇ ಫಲ! ನಿಮಗೆ

+ + + +

ನೀವು ಹೀಗೆ ಮಾಡಿದರೂ ನಿಮಗೆ ಜೈಲಿನ ಭಯವಿಲ್ಲ ತಿಳಿಯಿತೇ? ಅದಕ್ಕೆ ಹೆದರಬೇಡಿ! ನಿಮ್ಮನ್ನು ಜೈಲಿಗೊಯ್ಯಲಿಕ್ಕಿಲ್ಲ ನೀವು ಹಾಗೇನು ತಪ್ಪು ಮಾಡಿರುವಿರಿ? ಆದರೂ ಒಂದು ಮಾತಿದೆ ಸರ್ ಸಾಮುವೇಲ್ ಹೋರರು ಡೊಂಟ್‌ಕೇರ್ ಮಾಡಿ ಜೈಲಿನಲ್ಲಿ ನಿಮಗೊಂದಿಗೆ ಸ್ಥಳವನ್ನೇರ್ಪಡಿಸುತ್ತಿರಬಹುದು

× × + +

ಆದರೂ ನೀವು ಈ ಸಮಯದಲ್ಲಿ ರಿಜೈನ ಮಾಡಿದ್ದು ಸರಿಯೆಂದು ನನಗೆ ತೋರುವುದಿಲ್ಲ ಕಾರಣ ನಿಮಗೆ ಟೈಟಲ್ ಸಿಗಲಿಲ್ಲ ನಾಲ್ಕು ಟೈಟಲ್‌ಗಳು ಸಿಗುತ್ತಿದ್ದರೆ ಮತ್ತೆ ಬಿಟ್ಟುಬಿಟ್ಟರೂ ಚಿಂತಿಲ್ಲ ಈಗಿನ ಕಾಲದ ಜನರು ಹೇಟಾಡುವುದು ಏಕೆ? ಟೈಟಲಿಗೆ ಹಸರಿಗೆ ಹೋದರೂ ಈಗ ಚಡಪಡಿಸುತ್ತಿರುವುದೂ ಅದಕ್ಕಾಗಿಯೇ

+ + + +

ಹೋರ್ ಸಾಹೇಬರೇ, ಅಡಿಗೆ ಬಿದ್ದುಬಿಟ್ಟನಂತೆ ಬಟ್ಟ ಪೋರ ಆದರೂ ಹೇಳುತ್ತಾನಂತೆ "ನನ್ನ ಮೂಗು ಮೇಲೆ– ಮೇಲೆ–ಮೇಲೆ" ಎಂದು ಹಾಗೆ ನೀವೂ ಅವನಂತೆ ವಾದಿಸಬೇಡಿ ನಿಮ್ಮ ಚಾಲಕ್ ಮಾತುಗಳು ಸ್ವಾಬನಿಗೆ ಅರ್ಥವಾಗುತ್ತದೆ

+ + + +

ಪಾರ್ಲಿಮೆಂಟಿನಲ್ಲಿ ಮೊದಲು ನಿರ್ಧಾರವಾದುದೇನೆಂದರೆ– ಹಿಂದೂದೇಶಕ್ಕೆ ಮೊದಲು ಪ್ರಾಂತಿಕ ಸ್ವಾತಂತ್ರ್ಯ ಆ ಮೇಲೆ ಬೇಗನೆ ಕೇಂದ್ರ ಸ್ವಾತಂತ್ರ್ಯ ಎಂದು ಆದರೆ ಈಗ ನಿರ್ಧಾರವಾಗಿದೆ ಪ್ರಾಂತಿಕ ಸ್ವಾತಂತ್ರ್ಯ ಮೊದಲು, ಆ ಮೇಲೆ ಖುಶಿ ಬಂದಾಗ– ಮನಸ್ಸಾದಾಗ (ಯಾವ ಯುಗವಲ್ಲೊ?) — ಕೇ–ಂದ್ರ ಸ್ವಾ–ತಂತ್ರ್ಯ ಕೊ–ಡ–ಬ–ಹು–ದು

+ + + +

ಸರ್ ಹೋರರು ಕಡೆಗೆ ಹೊಡೆದ ಅಂತರ್‌ಲಾಗ, ಸಮ್ಮರ್ ಸೋಲ್ಟ್ ಎಂದರೆ ಇದೊಂದು ಲೇಟೆಸ್ಟ್! ಇವರ ಇಂಗನುಗಳನ್ನು ನೋಡಿ ನನ್ನಂತಹವರು ಮೆಚ್ಚಲಾರರು —'ಭೋರಿಗಳಂತಹವರಿಗಾದೀತು!

'ಸ್ವಾಬ'

* * *

THE SOUTH INDIA
CO-OPERATIVE INSURANCE SOCIETY
LIMITED MADRAS

LOCAL BOARD:—
THE SOUTH CANARA CENTRAL
CO-OPERATIVE BANK LTD, MANGALORE

Applications are invited for 'Sub Agents' from capable and energetic persons and Co-operative Institutions to canvas business on behalf of the Local Board of the Society at Mangalore

FOR TERMS APPLY TO—
The Secretary,
South Canara Central Co-operative
Bank Ltd, KODIALBAIL P O (Mangalore)
SOUTH CANARA

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ
(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ್

ENCOURAGE INDIAN COMPANIES AND INDUSTRIES.
SWADESHI MEANS PROVIDING
FOOD FOR STARVING MILLIONS
DEAL IN INDIAN GOODS AND KEEP
INDIAN MONEY IN INDIA
M V KAMATH.
SWADESHI PRACHARAK SANGHA
Kasaragod, S K

ದಿ ಖಾದಿ ವರ್ಕ್ಸ್ ಮತ್ತು
ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.
(REGISTERED UNDER COMPANY'S ACT [illegible])
ಕಾಸರಗೋಡು, ದ ಕನ್ನಡ
ಮೂಲಧನ ರೂಪಾಯಿ 50 000—0—0
ಪಾಲು 1ಕ್ಕೆ ರೂಪಾಯಿ 10—0—0 ರಂತೆ
5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸುವಂತೆ ಸಹಾಯಕರಾಗಿ, ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯು ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿರುವ ಒಂದು ಕಂಪೆನಿಯು ಇಲ್ಲವೆಂದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿತರೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನುಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯುಳ್ಳದ್ದಾಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳು ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧವಿದೆ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ —

ಮೆನೇಜಿಂಗ್ ಡೈರೆಕ್ಟರ್,
ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್
ಕಾಸರಗೋಡು, ದ. ಕ.

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.
Head Office — **MANGALORE**
Established July 1906 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು
***BRANCHES* -Karkal Kasargod, Cochin, Udipi, Gangolli Coondapur, Bombay Puttur, Calicut & Alleppey**
ಬ್ರಾಂಚುಗಳು:—
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪೆ

Authorised Capital 10 00000—0—0
Issued & paid up Capital 300 000—0 0
Reserve and other sinking
Funds Rs 526 00-0 0
Amount invested on G P
Notes Rs 121 092—12 0
Rates of interest on fixed deposits at Head Office and Branches are 6% for 2 Years 5½% 1 Year

ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ 10,00,000—0—0
ಚಂದಾ ಹಾಕಿದ ಮತ್ತು ವಸೂಲು ತಕ್ಕ
ಮೂಲಧನ ರೂ 300,000—0—0
ಕ್ಷೇಮ ನಿಧಿ ಮತ್ತು ಇತರ ಫಂಡುಗಳು [illegible]—0—0
ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ
ಹಾಕಿದ ರೂ [illegible]
ಠಾಯಿ ಡಿಪಾಜಿಟುಗಳ ಮೇಲೆ ಕೊಡಲ್ಪಡುವ ಬಡ್ಡಿ ದರ — ಎರಡು ವರುಷಗಳಿಗೆ ಸೇಕಡಾ 6 1 ವರುಷಕ್ಕೆ ಸೇಕಡಾ [illegible]

Current Account Deposits received and interest allowed on daily balance of Rs 50 and above that on multiples of Rs 10 @ 3% from 1st Janauary to 30th June and @ 2% from 1st July to 31st December No interest will be allowed unless the deposit or remain not less than Rs 50 during a period of 6 months ending either 30th June or 31st December in any year

Except by special arrangement no interest is allowed on sums exceeding Rs 10,000/ in the case of Head Office and Cochin Branch and on sums [illegible] exceeding Rs 15,000/ in the case of Bombay Branch and on sums exceeding Rs [illegible] in the case of other Branches

For further particulars please apply to —

Office of the Bank,
Mangalore 17—[illegible]—1932

K. Venkat Rao,
Secretary & Treasurer

The Pangal Nayak Bank, Ltd.

Head Office Udipi *Established 1920* **Branch Office Mangalore**

Authorised Capital Rs 2,00,000-
Issued Capital Rs 1 75,000-
Paid up Capital Rs. 1 75 000-
Reserve and other Funds Rs 1,80,000

NOTICE.

Advances on pledge of Gold are made at 8

Fixed deposits received at following rates

3 months 4½ , 6 and 9 months 5 ,
1 year and above 5½ , 2 years 6

(By order)

Office of the Bank,
Udipi, 1—[illegible]—32

P. Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಹುಡುಗ
ಮೂವತ್ತು	ರಲ್ಲಿ	ಮುಚ್ಚಟ
ನಲವತ್ತಾ	ದಾಗ	ನರಳುವನು
ಐವತ್ತು	ಆದರೆ	ಆಲಸ್ಯ
ಅರುವತ್ತು	ಕೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ
ಮದನಮಂಜರಿ ಟಾನಿಕ್ಕ
ಉಪಯೋಗಿಸಿ ಡಬ್ಬಿ 1ಕ್ಕೆ ಕ್ರಯ ರೂ 1—0—0
ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಪುಸ್ತು ಅಂಚೆ ಹಾಕಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ
ವೈದ್ಯವಿದ್ಯೆ ಎಂಬ ಪುಸ್ತಕವನ್ನು ಓದಿರಿ ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್
ಮದನಮಂಜರಿ ಮಾತ್ರೆಗಳ ಏಜಂಟರು — ಪಿ ಜಿ ಚಂದರಾವ್, ಮಿಶನ್ ಬೀದಿ, ಮಂಗಳೂರು

'ಅಶುಭಸ್ಯ ಕಾಲಹರಣಮ್'

ಶುಭವಾದುದು ತ್ವರೆಯಲ್ಲಾಗುವುದೆಂದೂ, ಅಶುಭವಾದುದು ಸುದೀರ್ಘಕಾಲದ ವರೆಗೂ ನರಳಿಕೆಯಲ್ಲೆ ಇರುವಂತಹುದೆಂದೂ ಹಿಂದಣ ಗಾದೆ. ಇದನ್ನೆ ಮೂಲಾಧಾರವಾಗಿ ಎಣಿಸಿದರೆಂಬಂತೆ, ಲಿಬರಲ್ ಪಕ್ಷದವರು ಬೊಂಬಾಯಿಯಲ್ಲಿ ಸೇರಿ, ಹೋರರ ಭಾಷಾಣಾಭಿಪ್ರಾಯಗಳನ್ನು ತೀವ್ರವಾಗಿ ಖಂಡಿಸಿ, ಇನ್ನು 'ಈ ಭಾಗದಲ್ಲಿ ನಾವಿಲ್ಲ' ಎಂದು ಮಡಿಸಿನಿಂತರು. ಕರಬತ್ತಿನ ಲಿಂಬೆಹಣ್ಣುಗಳಂತೆ, ಪರಿಷತ್ತಿನ ಮೆಂಬರರಾದ ಇವರು, ಮೇಜವಾನಿಗೆ ರುಚಿಯೊಪ್ಪುವಂತೆ ಒದಗಿದ್ದರು ವಿನಾ, ಇವರ ಪ್ರಯೋಜನ ಪಡೆದ ಬಳಿಕ, ಇವರನ್ನು ಹೊರಕ್ಕೆ ಬಿಸುಡಿದ ಹೋರರ-ಅಖಂಡ ಸ್ವೇಚ್ಛಾವರ್ತನವೆನ್ನು ಏತಕ್ಕೆ ಹೊಗಳದಿರಬೇಕು? ಅಂದೇ ದೂರವಾಗಿದ್ದು, ತಮ್ಮ ಸಾಧನೆಯೂ ಸಿದ್ಧ ಆದರ್ಶವೂ ತಮ್ಮ ಕೈಯಲ್ಲೇ ಇರುವುದಾಗಿ ಇವರು ಭಾವಿಸಿದ್ದರೆ, ಈ ವಿಪರ್ಯಾಸವಾಗುತಿರಲಿಲ್ಲವೆಂದೂ, ಇವರ ಸಹಕಾರವಿಲ್ಲದಿದ್ದಲ್ಲಿ ಸರಕಾರವು ಐರ್ವಿನರ ಧೋರಣೆ ಬಿಟ್ಟು ಮುಂದರಿಯುತಿರಲಿಲ್ಲೆಂದೂ ತೀವ್ರ ಗಾಮಿಗಳು ದೂರುವರು. ಇನ್ನೇನ? ಮುಖ್ಯ ಮುಸ್ಲಿಮರಿಲ್ಲ, ಕೊಂಗ್ರೆಸ್ ಪಕ್ಷವಿಲ್ಲ, ಕೂಲೀ ಪಕ್ಷವಿಲ್ಲ, ಲಿಬರಲರಿಲ್ಲ,—ಉಳಿದವರು ಡಾಯ್‌ಹಾರ್ಡರು, ಅಧಿಕಾರೀ ವರ್ಗ, ಅವರ ಹಸ್ತಕರಾದ ಕೆಲವರು, ಇವರು ಸೇರಿ ನಡಿಸುವ ತಿದ್ದುಪಡಿಗಳು ರದ್ದಾಗುವುದಕ್ಕೆ ಹೆಚ್ಚಿನ ಶತಾವಧಿ ಸಂವತ್ಸರಗಳು ಬೇಕೆ?

ಕಾಲಿದ್ದಾಗಲೇ ಹಬ್ಬ ಮಾಡುವ!

ಎಂದು ಕೆಲ ಮುಸ್ಲಿಮರು, ಒಟ್ಟಾವಾ ಕೊನ್ಫರೆನ್ಸಿಗೆಂದು ಈ ಸರಕಾರದ ಕಡೆಯಿಂದ ಹಿಂದೀ ಪ್ರತಿನಿಧಿಗಳಾಗಿ ಹೊರಟು, ಕ್ರೆಡೊಕರ ಅಧ್ಯಕ್ಷತೆಯಲ್ಲಿ, ಸರ್ಕಲಾರ ಹಂಚಿ, ಪಾರ್ಲಿಮೆಂಟು ಮೆಂಬರರಿಗೆ ತಮ್ಮ ತತ್ವೋಪದೇಶ ಮಾಡಿದರು. ಈ ಹಬ್ಬದ ಪ್ರಸಾದವನ್ನು ಹಂಚುವುದಕ್ಕೂ ಇವರು ಪ್ರತಿನಿಧಿಗಳಾಗಿದ್ದರೇ? ಮುಖ್ಯ, ಬ್ರಿಟನರಿರುವಲ್ಲಿ ಗುಲಾಮತನವಿಲ್ಲ, ೮೦ ಮಿಲಿಯ ಮುಸ್ಲಿಮರನ್ನು ಮಾತ್ರ ಮಿಕ್ಕವರ ಗುಲಾಮರಾಗಿಸುವಿರೇ? ಎಂದ ಪ್ರಶ್ನೆ, ವೈಸ್ರೋಯಿಗಳನ್ನೆಲ್ಲ ಕೂಡಿಸಿದರ ಹಿಂದುಗಳಗಿಂತ ಎಷ್ಟೋ ಅಧಿಕವಿರುವರು, ಆದರೂ ಹಿಂದುಗಳಿಗೇಕೆ ಪ್ರಾಮುಖ್ಯತೆ? ಎಂದು ಎರಡನೆ ಪ್ರಶ್ನೆ, ಹಿಂದೂ ಮುಸ್ಲಿಮ ವ್ಯಾಪಾರಿಗಳಾದಂತೆ ಬ್ರಿಟನರಿರುವರು ಎಂದ ಅಧ್ಯಕ್ಷರ ಅಭಿವಚನ. ಇಷ್ಟಾಗಿ ನಡೆ ಮುಗಿಯಿತು. ಲಾಭವೇನಾಯಿತ? ಹಾಜಿ ಅಬ್ದುಲ್ಲಾ ಹಾರೂನರೆಂಬ ಒಬ್ಬ ಮುಸ್ಲಿಮ— ಒಟ್ಟಾವ ಸಂಪತ್ತಿಗೆಂದ ತೆರಳಿ ಮುಸ್ಲಿಮರ 'ಮೂಲಕೇಳಿಕೆ'ಗಳನ್ನು (ಅವು ಯಾವುವೆಂದು ಪ್ರಕಟವಾಗಿಲ್ಲ) ಇಂತಹ ಕೇಳಿಕೆಗಳಿಗೆ ಮೂಲಪುರುಷವಾದ ಜಿನ್ನಾರವರು ಅಲ್ಲೇ ಇದ್ದರೂ ಅವರಿಗ ತಿಳಿಸದೆ ಹೋರರೇ ಸ್ವೇಚ್ಛಾವರ್ತನೆಗೆ ತೊಡಗುವ ಈ ಸಂದರ್ಭದಲ್ಲಿ—'ನಾವು ಕೇಳಿದುದನ್ನು ಕೊಡದಿದ್ದರೆ,—ಹೂಂ! ಎಂದು ಗುಡುಗಿಸಿದರು. ಹಿಂದುಗಳ ಕೈಗೆ ನಮ್ಮನ್ನು ಒಪ್ಪಿಸಬೇಡಿರಿ ಎನ್ನುವಾಗ, ಮುಸ್ಲಿಮರು ಅಷ್ಟು ಅಲಕ್ಷಿಸಲು ಸ್ವರಕ್ಷಣೆ ಮಾಡಲಾರದವರೂ ಎಂದು ಇವರು ದಿಪ್ಪಿಕೆಯಿಂದ ಮುಸ್ಲಿಮ ಜನತೆಯ ಗೌರವಕ್ಕೆ ಕುಂದು ತಂದರು. ಈ ಭಿಕ್ಷಾವೃತ್ತಿಯು ಬೇಡವೆಂದು ಬಂಗಾಳದ ಮುಸ್ಲಿಮ ಪತ್ರಿಕೆ ಸಾರಿದ್ದೆಲ್ಲವೂ ವ್ಯರ್ಥವಾಯಿತ! 'ಇತ್ತಂಡಗಳನ್ನು ಒಲಿಸಿಕೊಳ್ಳಲು ಯತ್ನಮಾಡಿರಿ' ಎಂದು ಬೋಧಿಸುವಾಗ ಹಾರೂನರ ವೈಸ್ರೋಯಿಗಳು ಹಿಂದುಗಳಗಿಂತ ಹೆಚ್ಚಾಗಿರುವ ಕಾರಣ ಹಿಂದುಗಳ ಹಕ್ಕುಗಳು ಉಳಿಯುವ ಹಾಗೆ ಮುಸ್ಲಿಮರು ಎಷ್ಟು ನಿಯಾಯತಿಯಲ್ಲಿ ಅಧಿಕಸ್ಥಾನಗಳನ್ನು ಅವರಿಗೆ ಕೊಡಲೊಪ್ಪಿರುವರು ಎಂದಾದರೂ ಹೇಳುವ ಧೈರ್ಯವು ಇವರ ಮೇಲ ಇಲ್ಲವೆ? ಮತ್ತು ಕ್ರೆಡೊಕರ ಮಾತುಗಳ ಗಾಳಿಯು ಹಾರಾಡಲಿ,—ಏಳು ವಾರಗಳಿಂದಲೂ ಮುಂಬಾಯಿಯಲ್ಲಿ ನಡೆವ ಹೊಡೆದಾಟಗಳನ್ನು ನೋಡಿಯೂ ಬ್ರಿಟನರು ಅಲ್ಲಿ ಪೂರ್ಣಾಧಿಕಾರ ಹೊಂದಿಲ್ಲವೆಂದು ಅವರು ಅರ್ಥಮಾಡಿಕೊಂಡಿರುವರೆ? ಪರಸ್ಪರ ವಿರುದ್ಧಾಭಿಪ್ರಾಯವುಳ್ಳ ಮಾತುಗಳಿಂದ ಈ ಇಬ್ಬರು ಮಹಾಶಯರಿಗೂ ಏನು ಸುಖ ದೊರೆಯಿತೊ, ಯಾರಿಗೂ ತಿಳಿಯದು.

ಅಸ್ಪೃಶ್ಯರ ಪರಿಷತ್ತು

ಬೊಂಬಾಯಿಯಲ್ಲಿ ಶ್ರೀ| ರಾಜಾರವರ ಅಧ್ಯಕ್ಷತೆಯಲ್ಲಿ ಸೇರಿ, ಪ್ರತ್ಯೇಕ ಪ್ರಾತಿನಿಧ್ಯವನ್ನು ಬಹಿಷ್ಕರಿಸಿ, ಹಿಂದುಗಳೊಡನೆಯೆ ತಮ್ಮ ಉದ್ಧಾರ ಅಭ್ಯುದಯಗಳಿವೆ ಎಂದೇ ತೀರ್ಮಾನಿಸಿತು. ಹಾಗೆ ಮಾಡದೆ, ಅಂಬೇಡ್ಕರರ ಮತ್ತು ಬ್ರಿಟಿಷ ವರ್ತಕರ ಬಾಲ ಹಿಡಿದು ಈ ಸಮಾಜಗಳು ಕುಣಿಯುತ್ತಲಿರುವುದು ಸಂಗತವೆ? ಯಾಕಾಗ, ಬ್ರಿಟಿಷ ಪತ್ರಿಕೆಗಳು, ಈ ಪರಿಷತ್ತು ಅಷ್ಟು ಜಯಶೀಲವಾಗಿಲ್ಲ ಎಂದುವೊ, ಆಗಲೆ ಇದು ಅಜ್ಞಜಯವನ್ನೆ ಹೊಂದಿರುವುದು ಎಂದು ಸ್ಪಷ್ಟಾರ್ಥವಾಗುತ್ತಿದೆ. ಅಂಬೇಡ್ಕರರ ಬೆಂಬಲದವರೇ ಈ ಪರಿಷತ್ತನ್ನು ಕರೆದವರೊಳಗೆ ಇರುವುದು ತೃಪ್ತಿಕರವಾಗಿದೆ. ಎಲ್ಲ ಸ್ವಾಯಸ್ಥರಿಗೆ ವೋಟಿನ ಹಕ್ಕು ದೊರೆತ, ಹಿಂದುಗಳೆಲ್ಲರೊಳಗೆ ಇವರೂ ಸೇರಿ ಚುನಾವಣೆ ಮಾಡುವಂತಾದಲ್ಲಿ, ಅತ್ಯಲ್ಪ ಬ್ರಾಹ್ಮಣರಷ್ಟೆ ಪ್ರಮುಖರಾಗಿ ಅಸ್ಪೃಶ್ಯರು ಅಭ್ಯುದಯ ಹೊಂದುವುದರಲ್ಲಿ ಸಂದೇಹವಿಲ್ಲ. ಈ ಪಥವನ್ನು ಬಿಟ್ಟು, ಸ್ವಾರ್ಥಸಾಧಕರ ಹಿಂದೆ, ಅವರಿಗೆ ಕೆಲವು ಹುದ್ದೆಗಳು ದೊರೆವಂತೆ ಇವರು ಪ್ರತ್ಯೇಕರಾಗಲು ಒಪ್ಪಿದರೆ, 'ಸರ್ವದಾ ಪ್ರತ್ಯೇಕವಾಗಿಯೆ ಪತಿತರಾಗುವರೆಂದು ಈ ಸಮಾಜದಲ್ಲಿ ಬಲ್ಲವರ ಅಭಿಪ್ರಾಯವಿದೆ. ಹೀಗಾಗಿ, ಈಗ ನಡೆದ ಪರಿಷತ್ತಿನ ತೀರ್ಮಾನಗಳು ರಾಷ್ಟ್ರೀಯತೆಯ ಪುಷ್ಟತೆಗೆ ತುಂಬ ಪರಿಪೋಷಕವಾಗಿವೆ.

ಬೊಲ್ಡವಿನ್ನರ ಭಾಷಣ

ಯುದ್ಧಸನ್ನಾಹದ ತ್ಯಾಗಕ್ಕಾಗಿ ಬೋಲ್ಡವಿನ್ನರು ಕೊಟ್ಟಿರುವ ಸೂಚನೆಗಳನ್ನು ಓದಿದರೆ, ಇವೆಲ್ಲವೂ ವ್ಯರ್ಥಾಲಾಪವೆಂದೇ ತೋರದಿರದು. ಸನ್ನಾಹ ತ್ಯಾಗವು ಸಂಪೂರ್ಣ ಫಲಕಾರಿಯಾಗಬೇಕಾದರೆ, ಅದು ಸರ್ವಾಂಗಗಳಲ್ಲೂ ಹರಡಿರಬೇಕು. ಬ್ರಿಟಿಷರು, ಇಷ್ಟು ಬೇಕು, ಇಷ್ಟು ಬೇಡ ಎನ್ನುವುದರಲ್ಲಿ ಅರ್ಥವಿಲ್ಲ. ಯುದ್ಧನಾವೆಗಳು ಬೇಕು, ಜಲಾಂತರಗಾಮಿ ನಾವೆಗಳು ವಾಯುನಾವೆಗಳ ಬೇಡ ಎಂದು ಬ್ರಿಟಿಷರು ಹೇಳುವುದೇಕೆ? ಭೂಸೈನ್ಯವನ್ನು ಇಳಿಸಿ, ನೌಕಾ ಬಲವು ಹಾಗೆಯೆ ಇರಲಿ,—ಇದೇಕೆ? ಮತ್ತೊಂದು ರಾಷ್ಟ್ರಕ್ಕಿಂತ ತಾನು ಪ್ರಬಲರಾಗುವರ ಆತ್ಮವುಳ್ಳ ಸನ್ನಾಹವನ್ನೆಲ್ಲ ಇಟ್ಟುಕೊಂಡ, ಅದು ಬಲಹೀನವಾಗುವುದಕ್ಕೆ ಅಗತ್ಯವಾಗುವಷ್ಟು ಸನ್ನಾಹವನ್ನು ಅದು ಕಡಿಮೆಮಾಡಿಕೊಳ್ಳಲಿ ಎಂದ ಸೂಚಿಸಿದರ ಅಯುದೆ ಮರುಳಾಗುವವರು ಅಮೇರಿಕದವರೇ, ಯುರೋಪೀಯರ? ಪ್ರತಿಯೊಂದು ರಾಷ್ಟ್ರವೂ ಸ್ವರಕ್ಷಣೆಯ ಏರ್ಪಾಡೆಲ್ಲವ ಬೇಕ, ಇತರರದೆಲ್ಲ ರದ್ದುಮಾಡಬೇಕ ಎಂದರ ಎಂದಿಗೆ ಕೈಗೂಡುವುದು? ಇದರಿಂದಲೆ ಜಿನಿವಾ ಪರಿಷತ್ತು ಕೊನೆಗಾಣುವುದೂ ಇಲ್ಲ, ಕಂಡರೂ ಲೋಕಹಿತವನ್ನು ಸಾಧಿಸಿ ಕೊನೆಗಾಣುವಂತಿಲ್ಲ. ಇಂತಹ ಪರಿಷತ್ತುಗಳಾದರೆ ಏಕೆ?

ಹೋಲಿಸಿ ನೋಡಿರಿ!

ಇಬ್ಬರು ಸೋಲ್ಜರರು ಅವರನ್ನು ಕೈದ ಮಾಡಿದ ಪೋಲೀಸ ಜವಾನನ ಕೈಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ—ಅವನು ಹಾರಿಸಿದರೆಂದು, ನಾಗಪುರದ ಸೆಶ್ಶನ್ ಜಡ್ಜು ಅವನ್ನು ೯ ತಿಂಗಳ ಸಜೆಗೆ ಒಳಪಡಿಸಿದರು. ಪಂಜಾಬ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದ ಸರದಾರ ಪ್ರತಾಪಸಿಂಹರು ಅವರು ಭಾಷಣ ಮುಗಿಸಿರೆಂದರೂ ಮುಗಿಸದೆ ಪೋಲೀಸರ ವಶರಾಗಿ ನಡೆಯದಿದ್ದುದಕ್ಕಾಗಿ, ಅಮೃತಸರದ ಮೆಜಿಸ್ಟ್ರೇಟರು ಎರಡು ವರ್ಷಗಳ ಸಜೆ ವಿಧಿಸಿದರು. ಎರಡೂ ತಕ್ಸೀರುಗಳನ್ನು ಹೋಲಿಸಿದರೆ—ಮೊದಲನೆಯದ ತಾಜಾ ತಕ್ಸೀರು ಕಾನೂನಿನವಾಗಿರುವ ಪಿನಲ್‌ಕೋಡು ಪ್ರಕಾರ ಮಹಾಪರಾಧ. ಎರಡನೆಯದು ರಾಜಕೀಯ ತಪ್ಪಿತ, ಒರ್ಡಿನೆನ್ಸು ವಿರುದ್ಧ. ಸರದಾರರು ಬಂದೂಕು ಹಾರಿಸಿಲ್ಲ, ಅಥವಾ ಬೇರೆ ಮನುಷ್ಯರಲ್ಲ ಎಂದು ಎರಡು ವರ್ಷವೆ? ಎಂದು ಬೊಂಬೇ ಕ್ರೋನಿಕಲಿನ ಪ್ರಶ್ನೆ. ಶಾಸನಭಂಗ ಚಳವಳಿಕ್ಕೆ ಸೇರುವವರ ಶಾಸನದ ಹೊರಗೆಂದೇ ಅರ್ಥವಾಗುವ ಕಾರಣ, ಎಂತಹ ದಂಡನೆಯನ್ನೂ ಹೊರಲೇಬೇಕೆಂಬುದೂ ಸಿದ್ಧವಷ್ಟೆ. ಮತ್ತೇ ಹೋಲಿಕೆ ಏಕೆ?

ನೋಟಗಳು

NOTE. S

ಗರ್ವವು ಸರ್ವವನ್ನು ನುಂಗುತ್ತದೆ ಎಂಬ ಹಿತಬೋಧೆಯು ಎಲ್ಲರಿಗೂ ತಿಳಿದದ್ದೇ! ಸರ್ ಸಾಮುವೇಲ್ ಹೋರರು ತನ್ನ ಗರ್ವವನ್ನು ಪ್ರದರ್ಶಿಸಿ ಅಪಹಾಸ್ಯಕ್ಕೊಳಗಾದರು. ಇಡೀ ಲೋಕವೇ ಅವರಿಗೆ ಎದುರು ನಿಂತಿದೆ—ಬಗ್ಗುವರೋ ನೋಡಲಿದೆ!

• • • •

ಎಚ್ಚೆತ್ತ ನಾಡಿನ ಎದುರು ಎದೆತಟ್ಟಿ ನಿಂತ ಪೂರ್ವದ ಯಾವ ಸರಕಾರವೂ ಯಶಸ್ವಿಯಾಗಲಿಲ್ಲ. ಚರಿತ್ರೆಯಲ್ಲಿ ಓದಿಯಾದರೂ ತಿಳಿದಿದ್ದ ಹೋರರಿಗೆ ಈ ಸಂಗತಿಯು ನೆನಪಿಲ್ಲದಿದ್ದರೆ ಅವರು ಚರಿತ್ರೆಯನ್ನು ಓದಲಿಲ್ಲ—ಎಂದು ಚಿಂತಾಮಣಿಯವರು ಹೇಳುತ್ತಾರೆ.

• • • •

ಸರ್ ಹೋರರ ಗರ್ವದ ಪ್ರತಾಪವನ್ನು ಪರಿಶೀಲಿಸಿದರೆ, ಈ ಸಾಹೇಬರಿಗೆ ಇವರ ಬೆಂಬಲವಾಗಿ ಚರ್ಚಿಲ್ ದೊರೆಗಳೂ ಅವರ ಮನೋಧಾವದ ಕೆಲವು ಕುಹಕಿಗಳೂ ಇರುವರೆಂದು ತಿಳಿದುಬರುತ್ತದೆ. ಹೋರರ! "ಎಲ್ಲ ದಾಸರು ನಂದಿ ಕುರುಡ ದಾಸ ಕಟ್ಟಿ" ಎಂಬ ದು ತಿಳಿದಿದೆಯಲ್ಲವೋ?

• • • •

'ನಾಯಿ ಬೊಗಳಿದರೆ ದೇವಲೋಕ ಹಾಳಾದೀತೇ? ಎಂದು ಸರ್ ಹೋರರ ಮೊದಲು ಹೇಳಿದ್ದರು. ನಾಯಿಗಳ ಮುಂದೇ ಬೊಗಳುವಾಗ ಇಂಗ್ಲಂಡ ಅವಿವೇಕದಾಗುವ ಸಂಭವವು ತೋರುತ್ತದೆ.

• • • •

ಈಗಿನ ಕಾಲದಲ್ಲಿ ಒಗ್ಗದವನಿಗೊಂದು ಗುದ್ದು ಹೆಚ್ಚು. ಅದನ್ನು ತಿಳಿಯದೆ ಲಿಬರಲರು ಬ್ರಿಟಿಷರೊಡನೆ ಸೇರಿ ಕೆಲಸ ಮಾಡಿದರು. ಈಗ ಸಿಕ್ಕಿತು ಅವರಿಗೆ ಫಲ!

• • • •

ಬಂಗಾಲ [illegible] ಪ್ರಾಂತಿಕರನ್ನು ಅಂದಮಾನಕ್ಕೆ ಕಳುಹಿಸಬೇಕೆಂದು [illegible] ನಿಧಾನವಾಗಿದೆ. ಅಷ್ಟು [illegible] ಇವರನ್ನು ತೆಗೆದುಕೊಂಡು ಹೋಗಲಿ.

• • • •

[illegible] ಬಂಗಾಳದಲ್ಲಿ ಒಬ್ಬ ಪ್ರತ್ಯಕ್ಷವಾದ ಹೋರ್ ದೊರೆಗಳು ಕೆಲವರನ್ನು ಅಂದಮಾನಕ್ಕೆ ಕಳುಹಿಸಬೇಕೆಂದಿದೆ ಎಂದಿದ್ದರು. ಕೆಲವರನ್ನು ಎಂಬ ಅರ್ಥವು ರಾಜಕೀಯ ಕೈದಿಗಳೇ ಎಂಬ ಹೆದರಿಕೆಯು [illegible] ಹಾರುವುದಿಲ್ಲ.

• • • •

ಚರ್ಚಿಲ್ ದೊರೆಯವರು ಗಾಂಧಿಯವರ ಅರೆ ಬೆಲೆಗೋ ದ್ವೀಪಕ್ಕೆ ಕಳುಹಿಸಬೇಕೆಂದು ಹೇಳಿದ್ದರು. ಅವರ ಕೈಗೊಂಬೆಯಾದ ಹೋರ್ ಮಂತ್ರಿಗಳು ಏನು ಮಾಡುವರೊ ಎಂಬ ಭಯಭೀತಿಯಿತ್ತು.

• • • •

'Sir Hoore is not a friend of India

ಸರ್ ಹೋರರು ಇಂಡಿಯದ ಮಿತ್ರನಲ್ಲ ಎಂದು ಜಯಕರರು ಹೇಳಿದರು. ಹಾಗಾದರೆ ವೈರಿಯೋ?

• • • •

ಕೊಂಗ್ರೆಸ್ಸನ್ನು ಬಡಿದೂ ಆಯಿತು. ಲಿಬರಲರ ಮನಸ್ಸನ್ನು ಹಾಳು ಮಾಡಿಯೂ ಆಯಿತು. ಲೋಸೇನ್ ಪರಿಷತ್ತನ್ನು ಕೊನೆಗೊಳಿಸಿಯೂ ಆಯಿತು. ಹೋರರಿಗೆ ಹೆದರಿಕೆಯಾಗಿಯೂ ಆಯಿತು. ಬ್ರಿಟಿಷ ಸರಕಾರವು ಆಲೋಚನಾ ತರಂಗದಲ್ಲಿ ಬಿದ್ದು ಆಯಿತು. ಮುಂದಕ್ಕೇನಾಗುವುದು? ಹೋಗುವುದು? ತಾಗುವುದು? ಬಾಗುವುದು? ನೋಡಲಿದೆ!

• • • •

ಶಾಲೆಗಳ ಪರಾರದಲ್ಲಿ—Drive Slowly—School Zone—ನಿಧಾನವಾಗಿ ನಡಿಸಿ, ಶಾಲಾ ಪರಾರ ಎಂದು ಮೋಟರು ವಾಹನ ಚಾಲಕರಿಗೆ ನೋಟೀಸು ಇದೆ. ಇದರ ಅರ್ಥ—ಅಡ್ಡಬರುವ ಮಕ್ಕಳ ಹಿಂಡುಗಳ ಮೇಲೆ ನಿಧಾನವಾಗಿ ಮೋಟರು ನಡಿಸಬೇಕಲ್ಲದೆ ಓಡಿಸಬಾರದು ಎಂದಿರುವುದೇ?

• • • •

'ನಿಧಾನವಾಗಿ'—ಎಂದರೆ, ಯಾವಾಗಲೂ ಇರುವ ೩೦ ಮೈಲು ವೇಗವನ್ನು ನಿಧಾನಿಸಿರಿ. ಸಾಧಾರಣ, ಗಲಿಬಿ ಏರದಿದ್ದರೆ ಆಯಿತು ಎಂದರ್ಥವೋ?

ಅಥವಾ, ಈ ನೋಟೀಸು ವಿದ್ಯಾರ್ಥಿಗಳು ನಿಧಾನವಾಗಿ ನಡೆಯಬೇಕು ಎಂದೋ?

• • • •

ಬೆಳಿಗ್ಗೆ ೯ ಗಂಟೆಯಿಂದ ೧೦, ಮಧ್ಯಾಹ್ನ ೧॥ ಗಂಟೆಯಿಂದ ೨, ಸಾಯಂಕಾಲ ೪॥ ಗಂಟೆಯಿಂದ ೫ ತನಕವಾದರೂ ಶಾಲೆಗಳ ಪರಾರದಲ್ಲಿ ಅಧಿಕಾರವುಳ್ಳ ಯಾರೂ ನಿಂತು ನೋಡಿದರೆ, ಈ ನೋಟೀಸುಗಳು ಸಾರ್ಥಕವಾದಾವು. ಇಲ್ಲದಿದ್ದರೆ, ಇವನ್ನು ಕಿತ್ತೊಗೆಯುವುದು ಉತ್ತಮ.

1. Good Riding Quality.
2. Gripping Tread.
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.


SEIBERLING SPECIAL SERVICE
SEIBERLING SPECIAL SERVICE
They Reduce cost per mile.

TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ

ಅಗ್ರಲೇಖ:

ಸಹಕಾರಿಗಳ ಅಸಹಕಾರ ೬
ಸ್ಫುಟವಿಚಾರಗಳು . . . ೪
ನೋಟಗಳು . . . ೫

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . ೬
ಒಳದೇಶ ವರ್ತಮಾನ . ೬ ೭
ದಕ್ಷಿಣ ಕನ್ನಡ – ಮಂಗಳೂರು, ಉಳ್ಳಾಲ, ಉಡುಪಿ,
ಕಾರ್ಕಳ, ಸುರತ್ಕಲ್ ೭
ವಿವಿಧ ಸಮಾಚಾರಗಳು . . ೧೧
ಓ ಸಪ್ರೂ ಜಯಕರರೆ! ೨
ಮಹಾತ್ಮರೂ ವರ್ಣಾಶ್ರಮಧರ್ಮವೂ . ೧೪
ಹಾರುವ ಚೂರು . ೯
ಸಪ್ರೂ ಜಯಕರರ ರಾಜೀನಾಮೆ . ೯

ಸ್ವದೇಶಾಭಿಮಾನಿ.

ತಾ. ೧೮ನೇ ಶುಕ್ರವಾರ ಜುಲ್ಯಾ ೧೯೩೦

ಸಹಕಾರಿಗಳ ಅಸಹಕಾರ.

ಸರ್ ಸಾಮುವೇಲರು ಬ್ರಿಟಿಷರ ಹಿಂದಿನ ವಾಗ್ದಾನಗಳನ್ನೆಲ್ಲಾ ಅಲ್ಲಗಳೆದು, ರೌಂಡ್‌ಟೇಬಲ್ ಪರಿಷತ್ತನ್ನು ಕೊನೆಗೊಳಿಸಿ, ತಾವು ತಯಾರು ಮಾಡಿದ್ದನ್ನು ಹಿಂದೂಸ್ಥಾನವು ಸ್ವೀಕರಿಸಿದರೆ ಸಾಕೆಂದು ಸೂಚಿಸಿದುದು, ಲಿಬರಲ್ ಮೂಕರಿಗೆ ಮೂಗು ಕೆರೆದಂತೆ ಆಗಿದೆ. ಕಾಂಗ್ರೆಸ್ಸಿನವರನ್ನು ಜೈಲಿಗೊಯ್ದರೂ, ತಮ್ಮ ಪ್ರಾಧಾನ್ಯವು ಬೆಳೆಯಿತಲ್ಲವೆಂಬ ಮಹಾ ಸಂತೋಷದಿಂದ ಅವರು ಹಿಗ್ಗಿದ್ದರು. ಆದರೆ ಒರೇ ಮಾತುಜಾಣರಾಗಿ ಕಾರ್ಯಜಾಣರಲ್ಲದ ಲಿಬರಲ್ ಪಕ್ಷದವರನ್ನು ಬ್ರಿಟಿಷರು ಹುದ್ದೆಗಳ ಮೂಲಕವೂ ಪುರಸ್ಕಾರಗಳ ಮೂಲಕವೂ ಮೋಹಗೊಳಿಸಿ ಸ್ವಂತ ಉದ್ದಿಷ್ಟಸಾಧನೆಗೆ ಉಪಯೋಗಿಸಿಕೊಳ್ಳುತ್ತಿದ್ದರಷ್ಟೇ ಅಲ್ಲದೆ ದೇಶದ ಹಿತದಲ್ಲಿ ಅವರ ಪ್ರಯತ್ನಗಳು ಫಲಕಾರಿಯಾಗುತ್ತಿರಲಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಒಂದು ಪಕ್ಷ ಅವರ ಮೂಲಕ ಏನೊಂದು ರಾಷ್ಟ್ರೀಯ ಲಾಭ ದೊರಕಿದರೂ ಈ ಲಾಭದ ನಿಜವಾದ ಕಾರಣವು ಯಾವಾಗಲೂ ಕಷ್ಟದಲ್ಲಿಯೇ ಬಳಲುವ ರಾಷ್ಟ್ರೀಯ ಪಕ್ಷದವರೇ ಆಗಿರುವರು.

ಇಂಗ್ಲೆಂಡಿನಲ್ಲಿ ಮಜೂರ ಸರಕಾರವು ಒದ್ದು ಹೋಗಿ, ನೆಶನಲ್–ಅಂದರೆ ನಿಜವಾಗಿ ಕನ್ಸರ್ವೆಟಿವ್–ಸರಕಾರವು ಅಧಿಕಾರಕ್ಕೆ ಬಂದು ಸರ್ ಸಾಮುವೇಲ್ ಹೋರರು ಇಂಡಿಯದ ಸೆಕ್ರೆಟರಿಯಾದ ಮೇಲೆ ಸರಕಾರದ ದೃಷ್ಟಿಕೋಣವು ಬಹಳವಾಗಿ ಬದಲಿಸಿತು. ನಮ್ಮ ಲಿಬರಲ್ ದೇಶಪ್ರೇಮಿಗಳ ವಿಶ್ವಾಸವು ಎಂದಿನಂತೆಯೇ ವಿಶಾಲವಿದ್ದಿತು. ಮಹಾತ್ಮಜೀಯವರು ತಾನು ಶಾಂತತೆಗಾಗಿ ಹೆಣಗಾಡುವೆನೆಂದು ಹೇಳುತ್ತ ಹೇಳುತ್ತ ಇರುವಾಗಲೇ ಜೈಲಿಗೊಯ್ಯಲ್ಪಟ್ಟರು. ಕಾಂಗ್ರೆಸ್ ಕಮಿಟಿಯು ಸತ್ಯಾಗ್ರಹವನ್ನು ಠರಾಯಿಸುವ ಎರಡು ದಿನಗಳ ಮೊದಲೇ ಸರಕಾರದ ಒರ್ಡಿನೆನ್ಸುಗಳು ಮುದ್ರಿಸಲ್ಪಟ್ಟು ತಯ್ಯಾರಿದ್ದುವು. ಆದರೂ ದೇಶದ ಶಾಂತತಾಭಂಗಕ್ಕೆ ಕಾಂಗ್ರೆಸ್ಸೇ ಕಾರಣವೆಂದು ಸರಕಾರದ ಆರೋಪ! ನಮ್ಮ ಲಿಬರಲರ ಪುಷ್ಟೀಕರಣ. ಹಲವು ಕಮಿಟಿಗಳ ಸದಸ್ಯತನ, ಸರಕಾರದ ಮಾನ ಮರ್ಯಾದೆ ಇತ್ಯಾದಿಗಳ ದಾಕ್ಷಿಣ್ಯವನ್ನು ಮೀರುವುದಾದರೂ ಹೇಗೆ? ಸಪ್ರೂ ಜಯಕರರೂ, ಅವರೊಡನೆ ಕೆಲ ಸಾಲಿನವರೂ ಸರಕಾರದ ಅಂತರ್ಯದೊಳಗಿನ ಮಾರ್ಪಾಟುಗಳನ್ನು ಕಾಣಲಾರದೆ ಹೋದುದರಲ್ಲಿ ಆಶ್ಚರ್ಯವಿಲ್ಲ.

ಆದರೆ ರೌಂಡ್‌ಟೇಬಲಿನ ಆ ದೊಡ್ಡ ಗೌರವವು ಪುನಃ ಲಾಭವಾಗುವಂತಿಲ್ಲ ಎಂದು ಸರ್ ಹೋರರು ಸ್ಪಷ್ಟವಾಗಿ ಹೇಳಿದುದನ್ನು ಮಾತ್ರ ನಮ್ಮ ಲಿಬರಲ್ ಧುರೀಣರು ಸಹಿಸಲಾರದಾದರು. ತಾವು ಮೆಂಬರರಾಗಿ ಸೇರಬಾರದಾದ "ಕನ್ಸರ್ವೆಟಿವ್ ಕಮಿಟಿ"ಯ ಸದಸ್ಯತನಕ್ಕೆ ಈ ಅರ್ಧಚಂದ್ರ ಪ್ರಯೋಗದ ನಂತರವೇ ಶ್ರೀಯುತ ಸಪ್ರೂ ಜಯಕರರು ಈಗ ರಾಜೀನಾಮೆಯನ್ನು ಕೊಟ್ಟಿರು. ಲಿಬರಲ್ ಪಕ್ಷದ ಧುರೀಣರೆಂದೂ, ಸರಕಾರ – ಕಾಂಗ್ರೆಸ್ಸಿನೊಳಗೆ ರಾಜಿಯನ್ನುಂಟುಮಾಡುವವರೆಂದೂ, ದೇಶದ ಹಿತವನ್ನು ಸರಿತೂಗಿದ ಉಪಾಯಗಳಿಂದ ಸಾಧಿಸುವವರೆಂದೆನಿಸಿ, ಈ ಸಪ್ರೂ ಜಯಕರರು ತಮ್ಮ ಆಗಾಗಿನ ವೈಚಿತ್ರ್ಯ ವರ್ತನಗಳಿಂದ ಅಪಹಾಸಕ್ಕೇನೇ ಕಾರಣರಾಗುತ್ತಿರುವರು.

ಶ್ರೀಯುತ ಜಯಕರರು ತಮ್ಮ ರಾಜೀನಾಮೆಯಲ್ಲಿ ಹೀಗೆನ್ನುತ್ತಾರೆ:–"ರೌಂಡ್‌ಟೇಬಲ್ ಪರಿಷತ್ತಿನ ಸಮ್ಮೇಳನದ ಮೊದಲೂ, ಸಮ್ಮೇಳನದಲ್ಲಿಯೂ ಬ್ರಿಟಿಷ ರಾಜತಂತ್ರಜ್ಞರೂ ಮುಖ್ಯವಾಗಿ ಪ್ರಧಾನ ಮಂತ್ರಿಗಳೂ, ಕೊಟ್ಟ ವಾಗ್ದಾನಗಳೂ ಮಾಡಿದ ಪ್ರತಿಜ್ಞೆಗಳೂ ಈಗ ನಿರಾಕರಿಸಲ್ಪಟ್ಟಿವೆ." ಕಾಂಗ್ರೆಸ್ಸಿನವರು ಇದನ್ನೇ ಹಲವು ತಿಂಗಳುಗಳ ಹಿಂದೆ ಹೇಳಿರುವರು. ನಮ್ಮ ಮೊಡರೇಟ್ ಬುದ್ಧಿವಂತರಿಗೆ ಮಾತ್ರ ಕತ್ತು ಹಿಡಿದು ದೂಡಲ್ಪಡುವ ವರೆಗೆ ಮನೋಗತವಾಗಲಿಲ್ಲ!

ಈಗ ಲಿಬರಲ್ ಪಕ್ಷದವರು ಎಚ್ಚರರಾದರು. ಜುಲ್ಯಾ ಹತ್ತನೇ ತಾರೀಕಿನಲ್ಲಿ ಮುಂಬಾಯಿಯಲ್ಲಿ ರೌಂಡ್‌ಟೇಬಲ್ ಪರಿಷತ್ತಿನ ಪ್ರತಿನಿಧಿಗಳ ಸಭೆಯೊಂದು ಜರಗಿತು. ಸರ್ ಸಾಮುವೇಲ್ ಹೋರರ ಈ ನೂತನ ಕ್ರಮಗಳನ್ನು ನಿವೇದಿಸಿ ಘಟ್ಟಿಯಾದೊಂದು ಠರಾವನ್ನು ಮಾಡಿಬಿಟ್ಟರು. ಆದರ ಠರಾವೇ ಘಟ್ಟಿಯಲ್ಲದೆ ಕಾರ್ಯವೇನೆಂದು ಮಾತ್ರ ಅದರಲ್ಲಿ ತಿಳಿಸಿಲ್ಲ.

> "ರೌಂಡ್‌ಟೇಬಲ್ ಪರಿಷತ್ತನ್ನು ಸೇರಿಸುವುದೇ ತಮ್ಮ ಸಹಕಾರ ಮತ್ತು ಸಹಾಯದ ಶರ್ತವಾಗಿರುತ್ತದೆ ಎಂದು ಕೆಳಗೆ ಸಹಿಹಾಕಿರುವವರು ಚೆನ್ನಾಗಿ ಆಲೋಚಿಸಿ ಘಟ್ಟಿಯಾದ ತೀರ್ಮಾನಕ್ಕೆ ಬಂದಿರುವರು."

ಇದೇ ಈ ಲಿಬರಲ್ ಪಕ್ಷದ ಘಟ್ಟಿಯಾದ ಠರಾವು. ಈ ಠರಾವಿನಲ್ಲಿ ಸಹ ನಮ್ಮ ಲಿಬರಲರು, ತಾವು ಸಂಪೂರ್ಣ ಅಸಹಕಾರಿಗಳೆಂಬ ಭಾವನೆಯು ಸರಕಾರಕ್ಕೆ ಉಂಟಾಗದಂತೆ ಬಹಳ ಜಾಗ್ರತೆಯಿಂದ ನೋಡಿಕೊಂಡಿರುವರು.

ಲಿಬರಲರು ಸಹಕರಿಸಲಿ, ಅಸಹಕರಿಸಲಿ, ಸರಕಾರದ ಈಗಿನ ವರ್ತನಗಳಲ್ಲಿ ಯಾರೂ ಪ್ರೋತ್ಸಾಹಿಸುವುದಿಲ್ಲವೆಂಬುವುದು ಇದರಿಂದ ಸ್ಪಷ್ಟವಾಯಿತು. ಇದಕ್ಕಾಗಿಯೋ ಶ್ರೀ ಪಟೇಲರು ಅಂದಂತೆ ಹಿಂದೂಸ್ಥಾನಕ್ಕೆ ಒರ್ಡಿನೆನ್ಸುಗಳು, ಸರ್ ಸಾಮುವೇಲ್ ಹೋರರಂತಹ ಅಧಿಕಾರಿಗಳೂ ಬೇಕೆನ್ನುವುದು. ಈ ಮೂಲಕವಾದರೂ ಸರಕಾರವೂ ಜನತೆಯಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲ್ಪಡುವುದು. ದೇಶಕ್ಕೆ ಇದಕ್ಕಿಂತ ಹೆಚ್ಚಿನ ಹಿತವು ಬೇರೊಂದಿಲ್ಲ.

ವಿದೇಶ ವರ್ತಮಾನ.

–ವೆಸ್ಟ್ ಲಂಡನಿನ ಒಂದು ಆಸ್ಪತ್ರೆಯಲ್ಲಿ ೨೧ ವರ್ಷ ಪ್ರಾಯದ ತರುಣಿಯೊಬ್ಬಳು ಅಸ್ವಸ್ಥಳಾಗಿದ್ದಳು. ಅವಳ ತಂದೆಯು ಅವಳನ್ನು ದಿನಾಲೂ ನೋಡಹೋಗುತ್ತಿದ್ದನು. ತಾ ೧೧ನೇ ದಿನ ತಂದೆಯು ಅವಳ ಹಾಸಿಗೆ ಬಳಿ ಹೋಗಿ, ತನ್ನ ರಿವಾಲ್ವರನ್ನು ತೆಗೆದು ಹೊಡೆದು ಮಗಳನ್ನು ಕೊಂದು ತಾನೂ ರಿವಾಲ್ವರಿನಿಂದ ಆತ್ಮಹತ್ಯೆಮಾಡಿಕೊಂಡನು.

– ಮಧ್ಯ ಯುರೋಪದಲ್ಲಿ ತನ್ನ ಮೊಜ್ಜೆವ್ಯಾಪಾರದಲ್ಲಿ ಮಿಲಿಯಾಧಿಪತಿಯೂ ಹೆನ್ರಿ ಫೋರ್ಡರಂತೆ ಕುಬೇರನೆಂಬ ಹೆಸರನ್ನು ಪಡೆದವನೂ ಆದ ಥೋಮಸ್ ಬಾಟಾ ಎಂಬವನು ಒಂದು ವಿಮಾನದಲ್ಲಿ ಸಂಚರಿಸುತ್ತಿದ್ದಾಗ ವಿಮಾನವು ಕೆಳಗೆ ಬಿದ್ದು ಅವನು ಮಡಿದನು. ಈತನ ಖಾಸಗಿ ಉಪಯೋಗಕ್ಕೆ ೧೧ ವಿಮಾನಗಳಿದ್ದುವಂತೆ. (ಬಡತನದಿಂದ ಮಿಲಿಯಾಧಿಪತಿಯ ಪದವಿಗೇರಿದ ಇವನ ಜೀವನ ಚರಿತ್ರೆಯು ಬರುವ ಸಂಚಿಕೆಯಲ್ಲಿ ಬರುವುದು.)

ಜರ್ಮನಿಯಲ್ಲಿ ರಾಜಕೀಯ ಪಂಗಡಗಳಾದ ಕಮ್ಯುನಿಷ್ಟರಿಗೂ, ರಿಪಬ್ಲಿಕನರಿಗೂ, ನಾಜಿಗಳಿಗೂ ಹತ್ತಾಹತ್ತಿಯು ನಡೆದು ಅನೇಕರು ಕೊಲ್ಲಲ್ಪಟ್ಟರು.

ಲೋಕವಿಖ್ಯಾತ ಬರ್ನಾರ್ಡ್‌ಶೋರವರು ಇಷ್ಟರ ತನಕವೂ ಒಂದು ಬಿರುದನ್ನೂ ಪಡೆಯದಿದ್ದು ಈಗ ಒಂದು ಬಿರುದನ್ನೂ ೨೦,೦೦೦ ಪೌಂಡುಗಳನ್ನು ಕೊಟ್ಟರೆ ಸ್ವೀಕರಿಸುವೆನೆನ್ನುವರು (?)

– ಹಿಂದೂದೇಶದ ಭಾಗ್ಯದ ಕುರಿತು ತಾ ೧೪ನೇ ದಿನ ಹೌಸ್ ಒಫ ಕೊಮನ್ಸ್‌ನಲ್ಲಿ ಚರ್ಚೆ ನಡೆದಿದೆ.

ಜರ್ಮನಿಯಲ್ಲಿ ಆರ್ಥಿಕ ದುಃಸ್ಥಿತಿಯು ಸರಿಯಾಗದೆ ಪ್ರಪಂಚಕ್ಕೇ ಶಾಂತಿಯಿಲ್ಲವೆಂದು ಪ್ರಧಾನ ಮಂತ್ರಿಯವರಾದ ಮೆಕ್‌ಡೊನಾಲ್ಡರು ಹೇಳಿರುವರು.

– ಲಂಡನಿನಲ್ಲಿ ಈಸ್ಟ್ ಇಂಡಿಯಾ ಎಸೋಶಿಯೇಶನಿನ ಒಂದು ಸಭೆಯು ಲೇಡಿ ಪೆಂಟ್‌ಲೆಂಡ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಕೃತ ರಾಜಕೀಯ ಚಳವಳದಲ್ಲಿ ಸ್ತ್ರೀಯರು ತೋರಿಸಿದ್ದ ಸಾಹಸ ಧೈರ್ಯಗಳು ಅಪ್ರತಿಹತವೆಂದು ಲೇಡಿ ಹರ್ಟೊಗ್ ಎಂಬವರು ಹೇಳಿದರು.

* * *

ಒಳದೇಶ ವರ್ತಮಾನ

– ಯುರೋಪ ಪ್ರವಾಸವನ್ನು ಸಂತೋಷದಿಂದ ಮುಗಿಸಿ ಹಿಂತಿರುಗಿದ ಭೋಪಾಲದ ನವಾಬರು ಮೊನ್ನೆ ತಾ. ೧೧ನೇ ದಿನ ಮುಂಬಾಯಿಗೆ ತಲಪಿದರು. ತನ್ನ ಯಾವ ಆಲೋಚನೆಯ ಕುರಿತೂ '[illegible]' ಇಲ್ಲ!

– ಪಂಡಿತ ಜವಾಹರಲಾಲರನ್ನು ಡೆಹರಾಡೂನ್ ಸೆರೆಮನೆಗೆ ಕೊಂಡೊಯ್ದ ಮೇಲೆ ಅವರ ದೇಹಸ್ಥಿತಿಯು ಮುಂಚಿಗಿಂತ ಸುಸ್ಥಿತಿಯಾಗಿದೆಯೆಂದೂ, ಅವರನ್ನು 'ಎಕ್ಸ್‌ರೇ' ಮೂಲಕ ಪರೀಕ್ಷೆಮಾಡಲಾಗುವುದೆಂದೂ ತಿಳಿದುಬಂದಿದೆ.

– ನಾಗಪುರದ ಕಂಪ್ಟಿ ಎಂಬಲ್ಲಿ ಕಳ್ಳ ನಾಣ್ಯದ ತಯಾರಿಯಾಗುತ್ತಿರುವುದನ್ನು ತಿಳಿದುಕೊಂಡ ಪೋಲೀಸರು ಒಂದು ಮನೆಯಲ್ಲಿ ಜಡ್ತಿ ನಡೆಸಿದರು. ನಾಣ್ಯ ತಯಾರಿಯ ಸಾಮಾನುಗಳನ್ನೂ ಒಬ್ಬ ಖಂಡನನ್ನೂ ಕೈದುಮಾಡಲಾಯಿತು.

– ಕಣ್ಣಾನೂರಿನಲ್ಲಿ ಪಿಕೆಟಿಂಗು ತೀವ್ರವಾಗಿ ನಡೆಯುತ್ತಿದೆ. ಅನೇಕ ಕೈದುಗಳಾಗಿವೆ.

– ಉದಯಪುರದ ಮಹಾರಾಣಾನ ಅರಮನೆಯ ಮೇಲೆ ದಂಗೆಗಾರರು ಎದ್ದು ಬಿಟ್ಟರೆಂದೂ ಗುಂಡು ಹಾರಿಸಲು ಕೆಲವರು ಜಖಂಗೊಂಡರೆಂದೂ ತಿಳಿದುಬಂದಿದೆ. ರಾಜ್ಯಭಾರದ ಕಾರಣಗಳಂತೆ!

– ಬೆಂಗಳೂರಿನಲ್ಲಿ ನಡೆದ ಕುದುರೆ ಜೂಜಿನಲ್ಲಿ ತಾವು ಹಣಕಟ್ಟಿ ಪಂಥಕ್ಕಿಳಿದು ಜೂಜಾಡಿದ ಕೆಲವರನ್ನು ಕೈದುಮಾಡಿದ್ದಾರೆ.

ಪಂಜಾಬಿನ ಗವರ್ನರರು ಅಸ್ವಸ್ಥರಾಗಿ ಬಿದ್ದಿದ್ದಾರೆ. ೯ನೇ ದಿನ ವಿಶೇಷತೆಯುದ್ಧಿತಾದರೂ ತಾ ೧೨ರೊಳಗೆ ಅವರ ದೇಹ ಪ್ರಕೃತಿಯು ಸಂಘಾತವಾದ ಸುಸ್ಥಿಗೆ ಬಂದಿದೆಯೆಂದು ತಿಳಿದುಬಂದಿದೆ.

– ಮದ್ರಾಸಿನಲ್ಲಿ ಒಬ್ಬ ಮೋಟರ್ ಡ್ರೈವರನು ಮುನ್ನೊಮಾರ್ಗವಾಗಿ ಹೋಗುತ್ತಿದ್ದಾಗ ಮೂವರು ಅವನ ಮೋಟರನ್ನು ನಿಲ್ಲಿಸಿ ಅವನಿಗೆ ಹೊಡೆದು ಅವನ ಜೇಬನ್ನು ಬರಿದುಮಾಡಿ ಕಿವಿಯುಂಗುರಗಳನ್ನು ಜಾರಿಸಿ ಪಲಾಯನಮಾಡಿದರು.

– ವೈಸರಾಯರು ಸಿಮ್ಲಾದಿಂದ ಹೊರಟು ಪ್ರಯಾಣಕ್ಕೆ ತೊಡಗಿದ್ದಾರೆ. ಇನ್ನೂ ಹದಿನೈದು ದಿನಗಳ ತನಕ ಸಂಚಾರವಿರುವುದು.

ನ್ಯೂ ಡಿಲ್ಲಿಯ ಜಮಿಯತ್-ಉಲ್ ಉಲೆಮಾದ ೮ನೇ ಡಿಕ್ಟೇಟರಾದ ಮೌಲಾನ ಅಬ್ದುಲ್ ಹಲೀಮ್ ಎಂಬವರನ್ನು ಕೈದು ಮಾಡಿದರು.

– ಅಲ್ಲಾಹಾಬಾದಿನ ಎಡ್‌ಮಂಡ್‌ಫೋರ್ಡ್ ಎಂಬಲ್ಲಿ ಭನ್‌ವಾರ್ ಸಿಂಗ್ ಎಂಬ ಕ್ರೂರ ಕ್ರಾಂತಿಕಾರನನ್ನು ಪೋಲೀಸರು ಗುಂಡು ಹೊಡೆದು ಕೊಂದಿಕ್ಕಿದರು. ಮಡಿದಾತನು ಆಗ್ರಾ ಅಲಿಘರ ಮೊದಲಾದ ಪ್ರಾಂತ್ಯಗಳಲ್ಲಿ ಮಹಾ ಹಾವಳಿಯನ್ನುಂಟುಮಾಡಿದವನೆಂದು ತಿಳಿಯಲಾಗುತ್ತದೆ.

– ಕುಮುದಲಾಲ ಭಟ್ಟಾಚಾರ್ಜಿ ಎಂಬ ಕ್ರಾಂತಿಕಾರನ ನ್ಯಾಯ ವಿಚಾರಣೆಯಾಗಿ ಬಿಡುಗಡೆಯಾದನು. ಅವನ ದುರಾಚಾರಕ್ಕಾಗಿ ಅವನನ್ನು ಪುನಃ ಹಿಡಿಯಲಾಗಿದೆ.

– ಕಲ್ಕತ್ತದ ೧೮ನೇ ಸರ್ವಾಧಿಕಾರಿಯಾದ ಶ್ರೀ ಗಣೇಶ ಪ್ರಸಾದ ಕಪೂರ್ ಎಂಬವರಿಗೆ ಕಾಯಿದೆಭಂಗಕ್ಕಾಗಿ ೬ ತಿಂಗಳ ಸಜೆ.

– ಬಾರೆಲ್ಲಿ ಜಿಲ್ಲೆಯಲ್ಲಿ ರೆವೆನ್ಯೂ ಆಫೀಸರರು ಮನೆ ಜಪ್ತಿಗೆ ಒಳನುಗ್ಗಿದಾಗ ಮನೆಯವರಿಂದ ಹೊಡೆಯಲ್ಪಟ್ಟು ಹಿಂತಿರುಗಿದರು. ಗುಂಡುಗಳನ್ನು ಹಾರಿಸದೆ ಉಪಾಯವಿರಲಿಲ್ಲ.

ಲಾಹೋರ ಪಿತೂರಿಯಲ್ಲಿ 'ಬೇಕಾಗಿದ್ದ' ಬಿಹಾರಿಲಾಲ್ ಎಂಬವನು ಎರಡು ವರ್ಷಗಳ ತನಕ ತಲೆ ತಪ್ಪಿಸಿಕೊಂಡನು. ಮೊನ್ನೆ ಅವನನ್ನು ಹಿಡಿದರು.

– ಅಜ್ಮೀರ್ ಮಾರ್‌ವಾಡದಲ್ಲಿಯ ಗನಿಯಲ್ಲಿ ಕೆಲವರು ಕೆಲಸಮಾಡುತ್ತಿದ್ದಾಗ ಅದು ಕುಸಿದು ಅವರ ಮೇಲೆ ಬಿದ್ದು ೬ ಮಂದಿಗಳು ಅಲ್ಲೇ ಮರಣಪಟ್ಟರು.

– ಮುಂಬಯಿಯಲ್ಲಿ ಪಿಕೆಟಿಂಗು ಪ್ರಾರಂಭವಾಗಿದೆ. ನಾಲ್ಕು ಮಂದಿ ಸ್ವಯಂ ಸೇವಕರಿಗೆ ಶಿಕ್ಷೆಯಾಗಿದೆ.

– ಸಿನ್ಧದಕ್ಕಳದ ಕೋಯಿಟ ಡೇಮ್ ಎಂಬ ಗೋಡೆಯು ಒಡೆದು ಸಮುದ್ರದ ನೀರು ಪಟ್ಟಣಕ್ಕೆ ಬರುತ್ತಿದೆ.

– ಪೇಶಾವರದಲ್ಲಿಯು ಪೋಲೀಸರಿಗೂ ಜನರಿಗೂ ಹತ್ತಾಹತ್ತಿಯಾಯಿತು. ತೆರಿಗೆಯನ್ನು ಹೆಚ್ಚಿಸಿದುದಕ್ಕಾಗಿ ಜನರು ದಂಗೆಯೆದ್ದಿರುವರು. ೮೦ ಮಂದಿಗಳು ವಿಶೇಷ ಜಖಂಗೊಂಡಿರುವರು.

– ಫರಿದಪುರದಲ್ಲಿ ಓಡುತ್ತಿದ್ದ ರೈಲನ್ನು ನಿಲ್ಲಿಸಿ ಲೂಟಿ ಮಾಡಿದ ಮದನಮೋಹನ ರಾಯ ಚೌಧುರಿಯೆಂಬೊಬ್ಬನಿಗೆ ೬ ವರುಷಗಳ ಕಠಿಣ ಸಜೆ ವಿಧಿಸಲ್ಪಟ್ಟಿತು.

* * *

ವಾರಕ್ಕೆ ಮೂರು ಸಲ ಹೊರಡುತ್ತಿದ್ದ 'ಮುಸಲ್ಮಾನ್' ಎಂಬ ಉರ್ದು ಪತ್ರಿಕೆಯು ದೈನಂದಿನವಾಗಿ ಹೊರಡಲಿದೆ.

ಟಪ್ಪಾಲು ದರವನ್ನು ಇಳಿಸಿದಂದಿನಿಂದ ಸರಕಾರದ ಟಪ್ಪಾಲು ಆದಾಯವು ಬಹು ಕಡಿಮೆಯಾಗಿ ನಿಂತುಬಿಟ್ಟಿದೆಯೆಂದು ತಿಳಿದು ಬರುತ್ತದೆ.

ಶೌಕತಾಲಿಯವರು ಫ್ರೀ ಪ್ರೆಸ್ ಜರ್ನಲಿನ ಸಂಪಾದಕರಾದ ಶ್ರೀ. ಸದಾನಂದರ ಮೇಲೆ ಹೂಡಿದ ಮಾನನಷ್ಟದ ವ್ಯವಹರಣೆಯು ಸಪ್ಟಂಬರ ೩ಕ್ಕೆ ಇಡಲ್ಪಟ್ಟಿದೆ

—ಬೊಬ್ಬಿಲಿಯ ಮಹಾರಾಜರು ಲೋಥಿಯನ್ ಕಮಿಟಿಯ ವರದಿಯನ್ನು ಟೀಕಿಸಿದರು. ವ್ಯವಸಾಯಗಾರರಿಗೆ ತಕ್ಕ ಸ್ಥಳವು ಅದರಲ್ಲಿಲ್ಲವೆಂದೇ ಅವರ ಆರೋಪ

ದಕ್ಷಿಣ ಕನ್ನಡ

ಮಂಗಳೂರು:—ದ ಕ ಹಿಂದೀ ಪ್ರೇಮಿ ಮಂಡಲದ ಆಶ್ರಯದಲ್ಲಿ ಹಿಂದೀ ವಾಗ್ಸ್ಪರ್ಧಿನೀ ಸಭೆಯು ಇದೇ ೯ನೇ ಶನಿವಾರ ಅಪರಾಹ್ನ ಗಂಟೆ ೫ ೩೦ಕ್ಕೆ ಆರ್ಯಸಮಾಜದಲ್ಲಿ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಯವರ ಅಧ್ಯಕ್ಷತೆಯಲ್ಲಿ ಕರೆಯಲ್ಪಟ್ಟಿತು. ಶ್ರೀ ಕೆ ರಾಘವಾಚಾರ್ಯರ ಪ್ರಾರಂಭಿಕ ಭಾಷಣದ ಬಳಿಕ ಹಿಂದೀ ವಿದ್ಯಾರ್ಥಿಗಳು ಹಿಂದೀಯಲ್ಲಿ ಚಿಕ್ಕಚಿಕ್ಕ ಭಾಷಣಗಳನ್ನು ಮಾಡಿದರು. ಶ್ರೀ ಬಿ ವಿ ಮಾಧವಬಾಳಿಗರು ನಾಟಕದ ಪಾತ್ರರಚನೆ ಚರಿತ್ರಚಿತ್ರಣದ ವಿಷಯವಾಗಿ ಸರಳಹಿಂದೀಯಲ್ಲಿ ಬೋಧಪ್ರದವಾಗಿ ನುಡಿದರು. ಶ್ರೀಗಳಾದ ಪಿ ಪುಟ್ಟಪ್ಪಯ್ಯ ಕಾರಂತ, ದೇವಪ್ಪ ಆಳ್ವ ಮತ್ತು ಕಮಲಾಕ್ಷ ಶೆಣೈಯವರು ಹಿಂದೀಯ ಆವಶ್ಯಕತೆಯ ವಿಷಯವಾಗಿ ಮಾತನಾಡಿದ ಬಳಿಕ, ಅಂದಿನ ಸಭೆಗೆ ಅತಿಥಿಯಾಗಿ ಚಿತ್ತೈಸಿದ್ದ ಶ್ರೀ ಸಂಜೀವ ಶೆಟ್ಟರು ಹಿಂದೀಯ ಸ್ಥಾನಮಾನಗಳ ಕುರಿತು ಇಂಗ್ಲೀಷಿನಲ್ಲಿ ಮಾತಾಡಿದರು. ಸಭಾಧ್ಯಕ್ಷರ ಸಮಯೋಚಿತ ಭಾಷಣ ಹಾಗೂ ಧನ್ಯವಾದ ಸಮರ್ಪಣೆಯ ನಂತರ ಸಭೆಯು ಕೊನೆಗಂಡಿತು

ಪಂಚಾಯತಕೋರ್ಟ ಪ್ರೆಸಿಡೆಂಟರೂ, ಜಮೀನುದಾರರೂ ಆದ ಉಳ್ಳಾಲ ಗೋವಿಂದಕಿಣಿಯವರು ಇದೇ ಬರುವ ತಾಲೂಕುಬೋರ್ಡಿನ ಉಳ್ಳಾಲ ಸರ್ಕಲಿನ ಓಟರರ ಪರವಾಗಿ ಚುನಾವಣೆಗೆ ನಿಲ್ಲುವರಾಗಿ ತಿಳಿದುಬರುತ್ತದೆ.

ಇದೇ ತಾ. ೨೧ನೇ ದಿನ ಮಂಗಳೂರಿಗೆ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರು ಚಿತ್ತೈಸಲಿರುವರಾಗಿಯೂ ಒಂದೆರಡು ದಿನ ಇಲ್ಲಿದ್ದು ಹಿಂತಿರುಗುವರಾಗಿಯೂ ತಿಳಿದುಬರುತ್ತದೆ.

ಈ ದಿವಸ ಪೊಪ್ಯುಲರ್ ಮೋಟರ್ ಸರ್ವಿಸಿನವರ ಒಂದು ಸರ್ವಿಸು ಬಸ್ಸು [illegible] ಹೋಗುತ್ತಿರುವಾಗ ಅಡ್ಯಾರ ಸಮೀಪ ಎದುರಿನ ಚಕ್ರಗಳಲ್ಲಿದ್ದ ಟಾಯರೊಂದು ಸ್ಫೋಟನವಾಗಿ ಬಸ್ಸು ಮಾರ್ಗದಿಂದ ಉರುಳಿ ಗದ್ದೆಗೆ ಬಿದ್ದು, ಅದರಲ್ಲಿದ್ದ ೩ ಜನ ಪೆಸೆಂಜರರಲ್ಲಿ ಒಬ್ಬನಿಗೆ ಗಾಯ ಆಗಿದೆಯೆಂದು ತಿಳಿದುಬರುತ್ತದೆ.

ಇಲ್ಲಿಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ರಾ। ಶ್ರೀ। ಉಳ್ಳಾಲ ಮಂಗೇಶರಾವ್ ಬಿ ಎ ಎಲ್ ಟಿ ಯವರು ಕೆಲಸದಿಂದ ನಿವೃತ್ತಿ ಹೊಂದಿದ ಬಗ್ಗೆಯೂ, ಇದೇ ಶಾಲೆಯ ಸಹಾಯಕ ಉಪಾಧ್ಯಾಯರಾಗಿದ್ದ ರಾ। ಎಸ್ ಬಿ ಲೋಬೋ ಬಿ. ಎ, ಎಲ್ ಟಿ ಯವರು ಸದರಿ ಶಾಲೆಯಿಂದ ಬಿಡುಗಡೆ ಹೊಂದಿದ ಬಗ್ಗೆಯೂ ಇದೇ ಕಳೆದ ತಾರೀಕು ೧೩—೬—೧೯೩೭ರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಎಜ್ಯುಕೇಶನಲ್ ಆಫೀಸರರ ಅಧ್ಯಕ್ಷತೆಯಿಂದ ವಿದಾಯ ಸಮಾರಂಭವು ಜರಗಿತು. ಸದರಿ ಸಮಾರಂಭಕ್ಕೆ ಸೆಕೆಂಡರಿ ಟ್ರೈನಿಂಗ್ ಶಾಲಾ ಅಧ್ಯಾಪಕರೂ, ಇನ್ನಿತರ ಗೃಹಸ್ಥರೂ ಚಿತ್ತೈಸಿದ್ದರು. ಅಧ್ಯಕ್ಷರನ್ನು ಈ ಶಾಲೆಯ ಬೃಹಸ್ಪತಿ ಸ್ಕಾಟು ದಳದವರು ಎದುರುಗೊಂಡ ತರುವಾಯ ಫಲಹಾರವೇ ಮೊದಲಾದ ಯಥೋಚಿತ ಸತ್ಕಾರಗಳು ನಡೆದು ಸಭೆ ಸೇರಿ ಟ್ರೈನಿಂಗ್ ಶಾಲಾ ಅಧ್ಯಾಪಕರಿಂದಲೂ ವಿದ್ಯಾರ್ಥಿ ವೃಂದದಿಂದಲೂ ಗುರುವರ್ಯರಿಬ್ಬರ ಅಗಲುವಿಕೆಯ ಕುರಿತು ವ್ಯಸನ ಸೂಚಕವಾದ ಪತ್ರಗಳನ್ನು ಓದಲಾಯಿತು. ಇತರ ಗೃಹಸ್ಥರು ಈ ಕುರಿತು ತಮ್ಮ ವಿಷಾದವನ್ನು ಸೂಚಿಸಿ ಭಾಷಣವಿತ್ತರು. ನಂತರ ಅಗಲಲಿರುವ ಮುಖ್ಯೋಪಾಧ್ಯಾಯರು ತಮ್ಮ ಶಿಷ್ಯ ವರ್ಗಕ್ಕೆ ತಕ್ಕ ಬುದ್ಧಿಮಾರ್ಗವನ್ನು ಬೋಧಿಸಿದ್ದಲ್ಲದೆ ತಾನು ಕೆಲಸದಿಂದ ನಿವೃತ್ತಿಹೊಂದಿದ ಬಗ್ಗೆ ವಿಶೇಷ ಪಶ್ಚಾತ್ತಾಪ ಪಡದೆ ತನ್ನ ಸಹಾಯಕರಾದ ರಾ। ಎಸ್ ಬಿ. ಲೋಬರವರ ಬಿಡುಗಡೆಯ ಕುರಿತು ತುಂಬಾ ವ್ಯಸನಪಟ್ಟು, ಅವರಲ್ಲಿ ತನಗಿದ್ದ ಪ್ರೇಮವನ್ನು ವ್ಯಕ್ತಗೊಳಿಸಿದರು ಮತ್ತು ತಾನು ಪ್ರತ್ಯಕ್ಷ ಕೆಲಸದಿಂದ ನಿವೃತ್ತನಾದರೂ ತನ್ನ ಮುಂದಿನ ಜೀವಮಾನವನ್ನು ಹಳ್ಳಿಯ ವಿದ್ಯಾಭ್ಯಾಸದ ಏಳಿಗೆಯ ಕಾರ್ಯದಲ್ಲಿ ಸವೆಯುವೆನೆಂದೂ ಆ ಕಾರ್ಯದಲ್ಲಿ ತನ್ನಿಂದಲೇ ಶಿಕ್ಷಿತರಾದ ಹಳ್ಳಿಯ ಶಾಲೆಗಳ ಉಪಾಧ್ಯಾಯರ ಸಹಾನುಭೂತಿಯು ದೊರಕಬಹುದೆಂದೂ ಸೂಚಿಸಿದರು. ಆ ಮೇಲೆ ಮಾನ್ಯ ಅಧ್ಯಕ್ಷ ಮಹಾಶಯರು ಇವರಿಬ್ಬರ ಅಗಲುವಿಕೆಯ ಕುರಿತು ತಮಗಿರುವ ಬೇಸರವನ್ನು ಸೂಚಿಸಿ ಇದೇ ಶಾಲೆಯ ಸಹಾಯಕರಾದ ರಾ। ಬಿ. ಪಿ. ರೊಬರ್ಟ್ಸ್ ಅವರ್ಗಳ್ ಬಿ. ಎ. ಎಲ್. ಟಿ ಯವರು ಮುಂದಿನ ಹೆಡ್ಮಾಸ್ತರರಾದ ವಿಷಯದಲ್ಲಿ ತಮಗುಂಟಾದ ಸಂತೋಷವನ್ನು ಪ್ರಕಟಿಸಿ ಭಾಷಣವೀಯಲಾಗಿ ಉಪಕಾರ ಸ್ಮರಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಇಲ್ಲಿಯ ಶ್ರೀ ಕೃಷ್ಣ ಸಿನೆಮಾದ ಪರ್ಫೆಕ್ಟ್ ಪಿಕ್ಚರ್ ಮಂದಿರದಲ್ಲಿ ಇದೇ ತಾ ೧೩ರಿಂದ ರುಡೋಲ್ಫ್ ರಿಟ್ಟರ್ ಮತ್ತು ಒಲ್ಗಾ ಶ್ಚೆಖೋವಾ ಎಂಬ ಲೋಕ ಪ್ರಸಿದ್ಧ ನಟರಿಂದ ಅಭಿನಯಿಸಲ್ಪಟ್ಟ "Fire Man" ಎಂಬ ಚಲಚಿತ್ರವು ಪ್ರದರ್ಶಿಸಲ್ಪಡುವುದು. ಇದರಲ್ಲಿ ಸಾವಿರಾರು ಮನೆಮಾರುಗಳು ಸುಡುವುದನ್ನು ನೋಡಿದರೆ ಆಶ್ಚರ್ಯವಾಗುವುದು

ತಾರೀಕು ೯—೬—'೩೭ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೩೦ ಮರಣಗಳೂ ೬೬ ಜನನಗಳೂ ಆದುವು.

ನಮ್ಮ ಚಂದಾದಾರರೂ, ನಮ್ಮ ಜಿಲ್ಲೆಯವರೂ ಆದ ಶ್ರೀ ಕೆ. ಎನ್ ಕಿಣಿಯವರು 'ಪಿ ಎಚ್ ಡಿ.' ತರಗತಿಯಲ್ಲಿ ಉತ್ತೀರ್ಣರಾಗಿರುತ್ತಾರೆಂದು ತಿಳಿದುಬರುತ್ತದೆ. ಇವರು ಈಗ ಅಮೇರಿಕದ ನ್ಯೂಯೋರ್ಕನಲ್ಲಿರುವರು. ಇವರು ಮೈಸೂರು ವಿದ್ಯಾಶಾಲೆಯವರಾಗಿದ್ದು ಪ್ರೌಢ ಶಿಕ್ಷಣಕ್ಕಾಗಿ ಅಮೇರಿಕಕ್ಕೆ ತೆರಳಿದ್ದರು. ಈ ಶುಭ ವಾರ್ತೆಯನ್ನು ಸಂತೋಷದಿಂದ ಪ್ರಕಟಿಸುತ್ತಾ "ಸ್ವದೇಶಾಭಿಮಾನಿ"ಯು ಇವರಿಗೆ ಆಯುರಾರೋಗ್ಯೈಶ್ವರ್ಯ ಪದವಿಗಳನ್ನು ಕೋರುತ್ತಿರುವಳು

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಬೆಳ್ತಂಗಡಿ ಸರ್ಕಲಿನಿಂದಲೂ, ಶ್ರೀ ಬಿ ಶ್ರೀನಿವಾಸ ಬಾಳಿಗರು ಬಂಟ್ವಾಳ ಸರ್ಕಲಿನಿಂದಲೂ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಉಮೇದ್ವಾರರಾಗಿ ನಿಲ್ಲಲಿರುವರೆಂದು ತಿಳಿದುಬರುತ್ತದೆ

ಇಲ್ಲಿಯ ಶ್ರೀ ಶಿವಭಕ್ತಯೋಗಿ ಸಂಘದ ೨ನೇ ವಾರ್ಷಿಕೋತ್ಸವವು ತಾ ೧೦ನೇ ದಿನ ಶ್ರೀ ಆನಂದ ಕಲವಾರ್, ಬಿ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಕಾರ್ಯದರ್ಶಿಗಳು ವರದಿಯನ್ನು ಓದಿದ ನಂತರ ಅಧ್ಯಕ್ಷರ ಭಾಷಣವಾಯಿತು. ತರುಣ ವಲಂಟಿಯರರ ಚುನಾವಣೆಯಲ್ಲಿಯೂ, ಕಾರ್ಯಕಾರಿ ಮಂಡಳಿಯ ಚುನಾವಣೆಯಲ್ಲಿಯೂ ಕೊಂಚ ತರ್ಕಪ್ರಸಂಗವು ಒದಗಿತು. ನವೀನ ಸೂತ್ರಗಳ ನಿರ್ಮಾಣಗಳಾದುವು. ಮುಂದೆ ಇದರ ಕೆಲಸವು ಹೇಗೆ ನಡೆಯುತ್ತದೆಯೋ ನೋಡಲಿದೆ!

ಆದಿತ್ಯವಾರ ದಿನ ಹಂಪನಕಟ್ಟೆಯ ಶೇಂದಿಯಂಗಡಿಗಳು ೧೩ ಮಂದಿ ಸ್ವಯಂಸೇವಕರಿಂದ ಪಿಕೆಟ್ ಮಾಡಲ್ಪಟ್ಟಿತು. ಎಲ್ಲರನ್ನೂ ಕೈದುಮಾಡಿ ಮರುದಿನ ಬಿಡುಗಡೆಮಾಡಲ್ಪಟ್ಟರು.

ಬುಧವಾರ ದಿನ ಬೋಳಾರದ ಶೇಂದಿಯಂಗಡಿಯಲ್ಲಿ ಪಿಕೆಟಿಂಗ್ ನಡೆದು ಕೆಲವರು ದಸ್ತಗಿರಿಮಾಡಲ್ಪಟ್ಟರು. ಅವರನ್ನು ಸಂಜೆ ಬಿಟ್ಟರು.

ಬಂಟವಾಳದಲ್ಲಿ ಕಳೆದ ಸೋಮವಾರ ಜರಗಿದ ತಾಲೂಕು ಪರಿಷತ್ತಿನ ಸಂಬಂಧವಾಗಿ ೪೧ ಮಂದಿಗಳು ಕೈದುಮಾಡಲ್ಪಟ್ಟರು. ೯ ಮಂದಿಗಳನ್ನು ಉಳಿದು ಮತ್ತೆಲ್ಲರನ್ನೂ ಬಿಟ್ಟರು. ಅಧ್ಯಕ್ಷ ಶೀನಪ್ಪ ಹೆಗ್ಗಡೆ, ಶ್ರೀ ಮಾಧವ ಪೈ, ಪದ್ಮನಾಭ ಶೆಣೈ, ಲಕ್ಷ್ಮಣಪೈ, ಶ್ರೀನಿವಾಸ ಶೆಣೈ, (ಕಾರ್ಯದರ್ಶಿ) ಶ್ರೀ ಕೇಶವಬಾಳಿಗ, ಶ್ರೀ ಕಮಲಾಕ್ಷ ಪ್ರಭು ಮತ್ತು ಶ್ರೀಮತಿ ಅಂಬಾಬಾಯಿ ಇವರಿಗೆ ಶಿಕ್ಷೆಯಾಗಿದೆ

ಪ್ರೊಫೆಸರ್ ರಾಮರಾಯರ ಮೊಕದ್ದಮೆಯು ತಾ ೮ಕ್ಕೆ ಎಂದು ಪ್ರಕಟಿಸಲ್ಪಟ್ಟಿತ್ತಷ್ಟೆ. ಅದನ್ನು ಪುನಃ ಎಂಟು ದಿನಗಳ ತನಕ ಹಿಂದಕ್ಕಿಟ್ಟರು

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರ ಬರುವ ಜನರಲ್ ಮೀಟಿಂಗು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಇದೇ ೨೪ನೇ ಶನಿವಾರ ಮಧ್ಯಾಹ್ನ ೨ ೩೦ ಗಂಟೆಗೆ ಜರಗಲಿರುವುದು

ಕಾಯಿದೆಭಂಗ ಚಳವಳವನ್ನು ಪ್ರೋತ್ಸಾಹಿಸಿದರೆಂಬ ಆರೋಪಣೆಯ ಮೇಲೆ ಶ್ರೀ. ಪಿ ರಾಮರಾಯ ಮಲ್ಯರಿಗೆ ಮಂಗಳವಾರ ದಿನ ಸಬ್ ಮೆಜಿಸ್ಟ್ರೇಟರು ೬ ತಿಂಗಳ ಕಠಿಣ ಶಿಕ್ಷೆಕೊಟ್ಟರು. ಶ್ರೀ ಮಲ್ಯರು ವ್ಯವಹರಣೆಯಲ್ಲಿ ಭಾಗವಹಿಸಲಿಲ್ಲ

ಉಳ್ಳಾಲ:—ಇಲ್ಲಿಯ ನೆರೆಗ್ರಾಮವಾದ ಸೋಮೇಶ್ವರ, ಅಡ್ಕ ಗ್ರಾಮಗಳಲ್ಲಿ ೩ ತಿಂಗಳುಗಳಿಂದ ಅನೇಕ ಹುಚ್ಚು ನಾಯಿಗಳ ಕಡಿತದಿಂದಾಗಿ ಕೆಲವರು ಮರಣಪಟ್ಟರು. ಇದೇ ಕಳೆದ ಗುರುವಾರ ದಿವಸ ಕರ್ಮಣ ಹಿತ್ಲು ಬಂಟ ಪೂಜಾರಿಗಳವರ ಮಗ ಚೆನ್ನಪ್ಪ ಪೂಜಾರಿಗಳವರು ಸಹ ಹುಚ್ಚುನಾಯಿಯು ಕಚ್ಚಿದ ವಿಷದಿಂದ ಮೃತಪಟ್ಟರೆಂಬದನ್ನು ತಿಳಿಸುವರೆ ವಿಷಾದಪಡುತ್ತೇನೆ. ಇದೂ ಅಲ್ಲದೆ ಹುಚ್ಚುನಾಯಿಯ ವಿಷದಿಂದ ಏಳೆಂಟು ದನಕರುಗಳು ಕೂಡಾ ಸತ್ತು ಹೋದುವು. ಸಾಧಾರಣ ೫೦ ಜನರು ಮದ್ದಿನಿಂದ ಗುಣಹೊಂದಿರುವರು. ಕೆಲವರಿಗೆ ಈಗ ಗುಣ ಕಂಡುಬಂದಿರುವುದಾದರೂ ಅಮಾವಾಸ್ಯೆ, ಪೂರ್ಣಿಮೆಗಳು ಬರುವ ಸಮಯದಲ್ಲಿ ಪುನಃ ಹುಚ್ಚು ಪ್ರಾರಂಭವಾಗುತ್ತಿದ್ದೆ. ಈ ರೀತಿಯ ಹುಚ್ಚುನಾಯಿಗಳ ಹೆದರಿಕೆಯಿಂದ ದಾರಿ ನಡೆಯುವವರು ಸಹ ಬಹಳ ಭಯದಿಂದಿರುವರು. ಹಲವು ದನ ಮತ್ತು ಎಮ್ಮೆಗಳಿಗೆ ನಾಯಿಗಳು ಕಚ್ಚುವುದರಿಂದ ಹೋಟೆಲಿನಲ್ಲಿ ಕಾಫಿ ಕುಡಿಯಲಿಕ್ಕೂ ಸಹ ಧೈರ್ಯವಿಲ್ಲ. ಎಂಟು ದಿವಸಗಳಿಂದೀಚೆಗೆ ಹುಚ್ಚು ಹಿಡಿದ ಆರು ನಾಯಿಗಳನ್ನು ಕೊಂದುದಲ್ಲದೆ, ಹುಚ್ಚು ನಾಯಿಯು ಕಚ್ಚಿದ ಬೇರೆ ೧೫ ನಾಯಿಗಳನ್ನು ಕೊರಗರ ಕೈಯಲ್ಲಿ ಕೊಟ್ಟು ಕೊಲ್ಲಿಸಲಾಯಿತು. ಇಷ್ಟೆಲ್ಲ ಕಷ್ಟನಷ್ಟಗಳಿಂದ ಬಡ ಗ್ರಾಮನಿವಾಸಿಗಳು ಬಳಲುತ್ತಿರುವಾಗ್ಗೆ ಗ್ರಾಮದ ಪಟೇಲರಿಗೆ ಇದೆಲ್ಲ ಗೊತ್ತಿಲ್ಲವೆಂದೇ ನಂಬಬೇಕಾಗಿದೆ. ಕಾರಣ, ದರ್ಬಾರರ ಸವಾರಿಯು ಅಂಗಡಿ ಬಳಿಗೆ ನಡ್ಕಕ್ಕೆ ಸಹ ಬರುವುದು ಕಾಣುವುದಿಲ್ಲ. ಇನ್ನು ಮುಂದಕ್ಕಾದರೂ ಮಾನ್ಯ ಸರಕಾರವು ಈ ರೀತಿಯ ಹುಚ್ಚು ನಾಯಿಗಳ ಉಪದ್ರವದಿಂದ ಬಡವರನ್ನು ರಕ್ಷಿಸಬೇಕಾಗಿ ಪ್ರಾರ್ಥನೆಯೊಂದೊಂದು ಅರಿಕೆ

ಉಡುಪಿ:—ಓರ್ವ ತರುಣ ಸನ್ಯಾಸಿಗಳು ಬಹುಕಾಲದಿಂದ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಸಂಚರಿಸುತ್ತಾ ಒಂದೆಡೆ ಶ್ರೀಮಂತ ಚೆಟ್ಟಿಯಾರರ ಮನೆಯಲ್ಲಿ ಅರ್ಜುನ ಸನ್ಯಾಸ ಕೈಕೊಂಡದಂತೆ ಯೋಗಿಯೆನಿಸಿದರೂ ಸ್ವಾಭಾವಿಕ ಭೋಗಾಪೇಕ್ಷೆಯನ್ನು ತಡೆಯಲಾರದೆ ಚೆಟ್ಟಿಯಾರರ ತರುಣಿಯೋರ್ವಳನ್ನೇ ಕೆಡಿಸಿ ಈಗ ಅವಳು ಗರ್ಭಿಣಿಯಾಗಿರುವಳಂತೆ. ಈ ತರುಣಿಯನ್ನು ಮದುವೆಯಾಗದೆ ಬಿಡೆನೆಂದು ಅವಳ ಸಂಬಂಧಿಕರ ನಿರ್ಬಂಧವಂತೆ. ಸನ್ಯಾಸಿಯು ಸಂಸಾರಿಯಾಗುವುದಾದರೂ ಹೇಗೆ? ಈಗ ಯೋಗಿಗಳು ದೊಡ್ಡ ಪೀಕಲಾಟದಲ್ಲಿ ಬಿದ್ದಿರುವರಂತೆ. ತನಗೆ ಹತ್ತಿಪ್ಪತ್ತು ಸಾವಿರ ರೂಪಾಯಿ ಕೊಟ್ಟರೆ ತನ್ನ ದೀಕ್ಷೆಯನ್ನೇ ಬಿಟ್ಟು ಸಂಸಾರಿಯಾಗಲು ಈ ತರುಣ ಸನ್ಯಾಸಿಯು ಸಿದ್ಧರಿರುವರಂತೆ? ಇನ್ನು ಸನ್ಯಾಸ ದೀಕ್ಷೆಯನ್ನು ಬಿಟ್ಟು ಬಿಡುವುದೇನೋ? ಸಹಸ್ರಪಟ್ಟು ರೂಪಾಯಿ ಕೊಡುವುದೇಕೋ? ಇದೇನು ಹಿರಿಯರು ನೆಟ್ಟ ಗೋಳಿ ಮರಕ್ಕೆ ನೇಣು ಹಾಕಿಕೊಳ್ಳುವ ಸಂಪ್ರದಾಯಾಂಧತೆಯ ವಿಪರ್ಯಾಸ! ಇಂತಹ ವಿದ್ಯಮಾನಗಳನ್ನೆಲ್ಲಾ ಪ್ರತ್ಯಕ್ಷ ಕಂಡೂ ಕಂಡೂ ಕಣ್ಮುಚ್ಚಿರುವ ಜನತೆಯ ದಾಸ್ಯ ಮನೋವೃತ್ತಿಯಾದರೂ ಅದೆಂತಹದಿರಬೇಕು? (ನವಯುಗ)

ಕಾರ್ಕಳ:—ಶ್ರೀಮದ್ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಇತರರ ಬಗ್ಗೆ ಶ್ರೀ ಕಟಪಾಡಿ ಶ್ರೀನಿವಾಸಶೆಣೈಯವರು ಹಿಂದೀ ತರಗತಿಯೊಂದನ್ನು ತೆರೆದಿರುವರು. ಪ್ರತಿ ಸಪ್ತಾಹದಲ್ಲಿ ಎರಡು ದಿನ ಪಾಠಗಳು ನಡೆಯುತ್ತಿರುವುವು. ಈಗಲೇ ಸುಮಾರು ೩೦ ಮಂದಿಗಳು ಹಿಂದೀಯನ್ನು ಅಭ್ಯಾಸಮಾಡುತ್ತಿರುವರು. ಇವರೆಲ್ಲರೂ ಬರುವ ಸಪ್ಟಂಬರ ತಿಂಗಳಲ್ಲಿ ನಡೆಯುವ ದ ಭಾ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ಕೂತುಕೊಳ್ಳುವರೆಂದು ನಿರೀಕ್ಷಿಸಲಾಗಿದೆ. ವಿದ್ಯಾರ್ಥಿಗಳಿಂದ ಯಾವ ತರದ ವೆಚ್ಚವನ್ನು ಪಡೆಯದೆ ಮುಫತ್ತಾಗಿ ಹಿಂದೀಯನ್ನು ಕಲಿಸುತ್ತಿರುವುದರಿಂದ ಇತರರೂ ಈ ಸಂದರ್ಭದ ಸದುಪಯೋಗವನ್ನು ಮಾಡಿಕೊಳ್ಳಬಹುದಾಗಿದೆ

ಸುರತ್ಕಲ್—ಗ್ರಾಮಸ್ಥರಲ್ಲಿ ವಾಚನಾಭಿರುಚಿಯು ಹುಟ್ಟುವಂತೆ ಮಾಡುವುದಕ್ಕಾಗಿ ಜನ್ಮವೆತ್ತಿರುವ ಗ್ರಾಮ ಪಂಚಾಯತ ಲೈಬ್ರರಿಯಲ್ಲಿ ಉತ್ತಮ ಪುಸ್ತಕಗಳ ಸಂಗ್ರಹವೇ ಇಲ್ಲವೆಂದೂ [illegible] ಪ್ರಕೃತ ಕೆಲವು ಸಾಮಾನ್ಯ ವಾರ್ತೆಗಳ ಮಾಸಪತ್ರಿಕೆಗಳೂ ಕೃಷಿವಾಣಿಯ ಕೆಲವು ಸಂಚಿಕೆಗಳೂ ಮಾತ್ರ ಸಂಗ್ರಹದಲ್ಲಿವೆಯೆಂದೂ ಈ ಪುಸ್ತಕ ಭಂಡಾರಕ್ಕಾಗಿ ಸುಮಾರು ೩೦೦—ರಂತೆ ವರ್ಷಾಂತರದ (ಗ್ರಾಂಟು) ಒಂದೆರಡು ವರುಷ ದೊರೆತಿದೆಯಾದರೂ—ಅವುಗಳನ್ನು ಉತ್ತಮ ಪುಸ್ತಕ ಸಂಗ್ರಹಕ್ಕಾಗಿ ಉಪಯೋಗಿಸದೆ, ಗ್ರಾಮ ಪಂಚಾಯತರು ಬೇರಾವ ಉದ್ದೇಶಕ್ಕೆ ವಿನಿಯೋಗಿಸಿರುವರೆಂಬುದು ತಿಳಿವುದಿಲ್ಲವೆಂದೂ ಇನ್ನೂ ಇತರ ಆಕ್ಷೇಪಣೆಗಳ ಸೊಲ್ಲು ಅಲ್ಲಲ್ಲಿ ಕೇಳುತ್ತಿದೆ. ಇಂತಹ ಆಕ್ಷೇಪಣೆಗಳಿಗೆ ಅವಕಾಶವಿರದಂತೆ ಇನ್ನಾದರೂ ಗ್ರಾಮ ಪಂಚಾಯತ ಕಮಿಟಿಯವರ ಕಾರ್ಯ ವಿವರಗಳನ್ನು ಪತ್ರಿಕಾ ಮೂಲಕ ಪ್ರಕಟಿಸಿ ಸರ್ವರಿಗೂ ಸಮರ್ಪಕಸಮಾಧಾನ ಪಡಿಸುವುದು ಉತ್ತಮವಲ್ಲವೇ?

ಇತ್ತೀಚೆಗೆ ವಿದ್ಯಾದಾಯಿನೀ ಶಾಲಾ ಉಪಾಧ್ಯಾಯರಾದ ಶ್ರೀ ಟಿ ರಾಮರಾಯರಿಂದ [illegible]—ಹಗಲಿನ ಮನೆಕೆಲಸಗಳಿಂದ ಬಿಡುವಿಲ್ಲದ ತರುಣರ ವ್ಯಾಸಂಗಕ್ಕಾಗಿ ರಾತ್ರಿ ಪಾಠಶಾಲೆಯು ತೆರೆಯಲಾಗಿದೆ.

ಬೋರ್ಡ ಬಾಲಿಕಾ ಪಾಠಶಾಲೆಗೋರ್ವ ಹಿಂದೂ ಶಿಕ್ಷಕಿಯ ಆವಶ್ಯಕತೆಯ ಕುರಿತು ತಾಲೂಕು ಬೋರ್ಡು ಪ್ರೆಸಿಡೆಂಟರಿಗೆ ಊರ ಪ್ರಮುಖರಲ್ಲಿ ಕೆಲವರು ಅರ್ಜಿ ಬರೆದುಕೊಂಡು ಕೆಲವು ತಿಂಗಳುಗಳು ಕಳೆದುವು. ಇತ್ತೀಚೆಗೆ ವಿದ್ಯಾದಾಯಿನೀ ಶಾಲಾ ಹೆಡ್ಮಾಸ್ತರರೂ, ತಾಲೂಕು ಬೋರ್ಡ ಮೆಂಬರರೂ ಆಗಿರುವ ಶ್ರೀ ಎಚ್ ವಿ. ರಾಯರ ಮೂಲಕ ವಿಚಾರಣೆ ನಡೆದಿರುವ ಕಾರಣ ಹಿಂದೂ ಮಕ್ಕಳೇ ತುಂಬಿರುವ ಈ ಶಾಲೆಯಲ್ಲಿ ಈಗಲಿರುವ ಅನ್ಯಮತದ ಈರ್ವರು ಅಧ್ಯಾಪಕಿಯರ ಬದಲು, ಸಂಗೀತ ಹೊಲಿಗೆ ಮೊದಲಾದ ಮನೆಕೈಗಾರಿಕೆಗಳಲ್ಲಿ ಅನುಭವವಿರುವ ಹೊಸ ತರಬೇತಿ ಹೊಂದಿದ ಓರ್ವ ಯೋಗ್ಯ ಹಿಂದೂ ಶಿಕ್ಷಕಿಯರನ್ನಾದರೂ ಶೀಘ್ರದಲ್ಲೇ ನಿಯಮಿಸುವರೆಂಬ ನಂಬುಗೆಯ ಸೊಲ್ಲು ಅಲ್ಲಲ್ಲಿ ಕೇಳುತ್ತಿದೆ.

* * *

ಶಾಲಿವಾಹನಶಕ ೧೮೫೪ನೇ ಅಂಗೀರಸ ಸಂ|| ಆಷಾಢ ಶು|| ೧೩ ಶನಿವಾರದಿಂದ, ಅಂಗೀರಸ ಸಂ|| ಆಷಾಢ ಬ|| ೫ ಶುಕ್ರವಾರದ ವರೆಗಿನ ಪಂಚಾಂಗ

(ಗಣಿತವು ಕರ್ನಾಟಕ – ಅಂಶ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯಾಂಶ	ಸೂರ್ಯ F. ಉ	ಸೂರ್ಯ F. ಅಸ್ತ
16	ಶನಿ	೧೩	೨ ೧೩	ಮೂಲಾ	೩೨ ೪೩	೧	6 13	6 59
17	ರವಿ	○	೫೪ ೪೩	ಪೂ ಷಾ	೩೧ ೨	೨	6 3	6.59
18	ಸೋಮ	೧	೫೨ ೩೨	ಉ ಷಾ	೩೦ ೦೩	೩	6.14	6 59
19	ಕುಜ	೨	೫೧ ೩೦	ಶ್ರವಣಾ	೩೦ ೩೪	೪	6. 4	6.59
20	ಬುಧ	೩	೫೧ ೪೩	ಧನಿಷ್ಠಾ	೩೨ ೧	೫	6,14	6 59
21	ಗುರು	೪	೫೩ ೧೪	ಶತಭಿಷ	೩೪ ೪೩	೬	6 15	6 58
22	ಶುಕ್ರ	೫	೫೫.೪೩	ಪೂ ಭಾ	೩೮ ೪೪	೭	6 16	6.58

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall ಮಳೆ ದಿನದ ಮಳೆ	Rainfall ಮಳೆ ಜುಮಲಾ ಮಳೆ
8	80— 5	73— 8	2—35	—
9	80— 1	72— 9	3—54	—
10	80— 7	72— 9	1—55	—
11	79— 6	74— 1	1—56	—
12	85— 6	76— 7	0—02	—
13	85— 7	79 1	0—07	—
14	86— 3	77— 3	0—13	63-98

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ	ವರೆಗೆ ರೂ. ಆ
ರಾಶಿ ಅಕ್ಕಿ	3 – 9	4 2
ಮುಸ್ಕು	4 – 8	—
ಗುಡ	4 – 0	4 – 6
ಸುಗ್ಗಿ	3 – 1	4 – 1
ಊರ ಅವಲಕ್ಕಿ ಬೆಳ್ತಿಗೆ	4 – 8	5 – 4
ರಂಗೂನು ಬೆಳ್ತಿಗೆ ಗೋಣಿ ಗಳ್ಕ	8 – 0	8 – 4
ಎಲ್ಲೂರು ಬೆಳ್ತಿಗೆ ಮುಡಿ ಗಳ್ಕ	4 – 10	4 – 12
ಗೋಧಿ ಗೋಣಿ ಗಳ್ಕ	9 – 8	12 – 8
ಕಡಲೆ ಗೋಣಿ ಗಳ್ಕ	12 – 0	12 – 8
ತುರಿಗೋಣಿ ಗಳ್ಕ	6 – 2	7 – 4
ಕಡಲೆ ಗೋಣಿ ಗಳ್ಕ	8 – 8	12 – 8
ತೊಗರಿಬೇಳೆ ಗೋಣಿ ಗಳ್ಕ	13 – 8	21 – 0
ಉದ್ದು ಗೋಣಿ ಗಳ್ಕ	11 – 8	13 – 0
ಹೆಸರು ಗೋಣಿ ಗಳ್ಕ	10 – 4	11 –
ಊರು ಬೆಲ್ಲ ಖಂಡಿ ಗಳ್ಕ	3 – 0	30 – 0
ಉಪ್ಪು ಗೋಣಿ ಗಳ್ಕ	5 – 4	5 – 8
ಬೇಳೆ ಖಂಡಿ ಗಳ್ಕ	65	72 –
ಕೊಬ್ಬರಿ ಹಿಂಡಿ ಖಂಡಿ ಗಳ್ಕ	25 – 8	26 – 0
ಎಳ್ಳಿಂಡಿ ಖಂಡಿ ಗಳ್ಕ	26 – 4	26 – 18
ಕೊಬ್ಬರಿ ಎಣ್ಣೆ ಮಣ ಗಳ್ಕ	6 – 2	6 – 6
ಎಳ್ಳೆಣ್ಣೆ ಮಣ ಗಳ್ಕ	6 – 12	7 – 0
ಜಮಖಂಡಿ ಸಕ್ಕರೆ ಗಳ್ಕ	4 – 7	8 – 12
ದೋರಂಜ ಸಕ್ಕರೆ ಮಣ ಗಳ್ಕ	4 – 2	4 – 3
ಜೀರಿಗೆ ಮೆಣಸು	4 – 0	5 – 0
ಕೊತ್ತಂಬರಿ ಮುಡಿ ಗಳ್ಕ	6 – 4	6 – 0
ನೀಟವ್ ಕಾಫಿ ಖಂಡಿ ಗಳ್ಕ	270 – 0	300 –
ಕಾಳುಮೆಣಸು ಖಂಡಿ ಗಳ್ಕ	170 – 0	180 –
ಮೆಂತ್ಯ ಮಣ ಗಳ್ಕ	27 – 0	28 –
ಗೇರುಬೀಜ ಮುಡಿ ಗಳ್ಕ	3 – 0	3 – 4
ಕೊಬ್ಬರಿ ಖಂಡಿ ಗಳ್ಕ	35 – 0	35 – 8
ತಾಂಬ್ರ ತಗಡು ಮಣ ಗಳ್ಕ	12 – 8	13 – 0
ತಾಂಬ್ರ ಪಾತ್ರೆಗಳು ಮಣ ಗಳ್ಕ	15 – 0	16 – 0
ಹಿತ್ತಾಳೆ ಸೇರು ಗಳ್ಕ	14 – 4	14 – 12
ಹಿತ್ತಾಳೆ ತಗಡು ಮಣ ಗಳ್ಕ	12 – 0	12 – 8
ಸತುವು ಗಳ್ಕ	17 – 14	17 – 14
ಮುಡಿ ಅಡಕೆ ಖಂಡಿ ಗಳ್ಕ	40 –	—
ಶಿವಮೊಗ್ಗ ಕಾಫಿ ಖಂಡಿ ಗಳ್ಕ	330 –	—
ಹಳೆ ಅಡಕೆ	150 –	205 –
ಹೊಸ ಅಡಕೆ	140 –	145 –

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ. 1 30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರ ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, 4½ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದು ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್.

ಮಂಗಳೂರು

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾಪಿತವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 **ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ,** ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧½ ದಿವಸದೊಳಗೂ **ಶಿವಮೊಗ್ಗಕ್ಕೆ** 12 **ಗಂಟೆಗಳೊಳಗೂ ತಲಪಬಹುದು.** **ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.**

Secretary,

The Canara Public Conveyance Company Ltd., Mangalore

ಸಪ್ರೂ ಜಯಕರರ ರಾಜಿನಾಮೆ!

ಸರ್ ಹೋರರ ಧೋರಣೆ! — ಮಂದಪಕ್ಷದವರ ಖಂಡನೆ!

ಬ್ರಿಟಿಷರ ಗರ್ವ!! — ಅಶಾಂತಿಯ ಪರ್ವ!!

ಬ್ರಿಟಿಷ ಸರಕಾರದ ಮಂತ್ರಾಲೋಚನೆ (ಕನ್ಸಲ್‌ಟೇಟಿವ್) ಸಭೆಗೆ ಚುನಾಯಿತರಾದ ಶ್ರೀಯುತ ಎಮ್ ಆರ್. ಜಯಕರ್, ಶ್ರೀಯುತ ತೇಜ ಬಹದ್ದೂರ್ ಸಪ್ರು, ಸಾಮದಾರ ಶ್ರೀನಿವಾಸ ಶಾಸ್ತ್ರಿ, ಶ್ರೀಯುತ ಸಿ. ವೈ ಚಿಂತಾಮಣಿ, ದಿವಾನ್ ಬಹದ್ದೂರ್ ಎಮ್ ರಾಮಚಂದ್ರ ರಾವ್, ಸರ್ ಕೌವಾಸ್ಜಿ ಜಹಾಂಗೀರ್, ಶ್ರೀಯುತ ಎ. ರಂಗಸ್ವಾಮಿ ಅಯ್ಯಂಗಾರ್, ಶ್ರೀಯುತ ಎಮ್ ಎಸ್. ಜೋಶಿ, ಶ್ರೀಯುತ ಬಿ ಶಿವರಾವ್, ಶ್ರೀಯುತ ಬಿ ಜಾಧವ್, ಸರ್ ಫಿರೋಜಶಾ ಸೇತ್ನಾ, ಶ್ರೀಯುತ ಎಸ್ ಬಿ ತಂಬೆ, ಸರ್ ಚ್ಚಿಮಾನ್‌ಲಾಲ್ ಸೆಟಲ್‌ವಾಡ್ ಇವರೆಲ್ಲರೂ ತಾವು ಆ ಸಭೆಯಲ್ಲಿ ಭಾಗವಹಿಸಲು ಸಮ್ಮತಿಸಲಾಗುವುದಿಲ್ಲವೆಂದು ರಾಜಿನಾಮೆ ಕೊಟ್ಟರು

ಚಿತ್ರ ಪರಿವರ್ತನೆ.

ಹಿಂದೀಯ ಸ್ವಾತಂತ್ರ್ಯ ಚಳವಳಿ ಶಮನಾರ್ಥವಾಗಿ ಇಂಗ್ಲಾಂಡಿನಲ್ಲಿ ಎರಡು ರೌಂಡ್‌ಟೇಬಲ್ ಪರಿಷತ್ತುಗಳು ಜರಗಿ, ಯಾವ ಬಗೆಯ ಇತ್ಯರ್ಥವೂ ನಡೆಯದೆ ಆ ಸಭೆಗಳು ಅಪಯಶಸ್ವಿಯಾದುವಷ್ಟೆ! ಈ ಪರಿಷತ್ತುಗಳಲ್ಲಿ ಭಾಗವಹಿಸಿದ್ದ ಮೇಲಿನ ಸದಸ್ಯರನ್ನು ಬ್ರಿಟಿಷ ಸರಕಾರವು ಮಂತ್ರಾಲೋಚನೆ ಸಭೆ (ಕನ್ಸಲ್‌ಟೇಟಿವ್ ಕಮಿಟಿ)ಗೆ ಪುನಃ ಚುನಾಯಿಸಿ, ಹಿಂದೀಯ ರಾಜ್ಯಾಂಗರಚನೆಯನ್ನು ನವೀನ ರೀತಿಯಿಂದ ಮಾಡಬೇಕೆಂದು ನಿರ್ಧಾರವಾಯಿತು. ೧೯೩೦ನೇ ಇಸವಿಯ ದಶಂಬರ ತಿಂಗಳಲ್ಲಿ ಪ್ರಧಾನ ಮಂತ್ರಿಯವರು ಲಂಡನಿನ ಸಭೆಯಲ್ಲಿ ಭಾಷಣಮಾಡುತ್ತಾ "ಇಂಗ್ಲಾಂಡೂ ಹಿಂದೂದೇಶವೂ ಒಟ್ಟುಗೂಡಿ ಅವುಗಳು ತಮ್ಮತಮ್ಮೊಳಗೆ ನಿರ್ಧರಿಸುವ ಮೇರೆಗೆ ಪಾರ್ಲಿಮೆಂಟಿನವರು ಹಿಂದೂದೇಶದ ನವೀನ ರಾಜ್ಯಾಂಗರಚನಾ ಕ್ರಮವನ್ನು ಶಿಫಾರಸು ಮಾಡಬೇಕು" ಎಂದಿದ್ದರು ಇವರಿಗಿಂತ ಮುಂಚೆ ಇಲ್ಲಿ ವೈಸರಾಯರಾಗಿದ್ದ ಲೋರ್ಡ್ ಅರ್ವಿನರೂ ೧೯೨೯—೩೦ರಲ್ಲಿ ಇದೇ ಅಭಿಪ್ರಾಯ ಸೂಚನೆಯನ್ನು ಮಾಡಿದ್ದರು. ಆದರೆ ೧೯೩೧ನೇ ಜೂನ್ ೨೬ನೇ ದಿನ ಹೌಸ್ ಆಫ್ ಕಾಮನ್ಸಿನಲ್ಲಿ ಭಾರತ ಸಚಿವರಾದ ಸರ್ ಸಾಮುವೇಲ್ ಹೋರರು ಭಾಷಣ ಕೊಟ್ಟು ಸೂಚಿಸಿದ ಆಲೋಚನೆಗಳು ಮೇಲಿನ ಸೂಚನೆಗಳಿಗೆ ತೀರಾ ವ್ಯತಿರಿಕ್ತವಾಗಿದ್ದುದನ್ನು ಕಂಡು ಎಲ್ಲರೂ ಆಶ್ಚರ್ಯಗೊಂಡರು. ಅವರ ಹೇಳಿಕೆಯ ಮೇರೆಗೆ "ಬ್ರಿಟಿಷ ಸರಕಾರವು ಹಿಂದೀಯರಿಗೆ ಏನನ್ನು ಕೊಡಬೇಕೆಂದು ಖಂಡಿತ ಆಲೋಚನೆಯಾಗಿದೆ! ಪ್ರಥಮದಲ್ಲಾಗಿ ಕೆಲವು ಪ್ರಾಂತ್ಯಗಳಿಗೆ ಸ್ವಾತಂತ್ರ್ಯವನ್ನು ಕೊಡಲಾದೀತು. ಮಧ್ಯ ಸರಕಾರವನ್ನು ಮಾತ್ರ ಕೊಡುವ ವಿಷಯದಲ್ಲಿ ಸರಕಾರವು ಥಕ್ಕನೆ ಮುಂದೆ ಬರಲು ಸಾಧ್ಯವಿಲ್ಲ" ಎಂಬ ಅರ್ಥವಾಯಿತು ಪ್ರಧಾನ ಮಂತ್ರಿಯವರ ಹೇಳಿಕೆಯೂ ಸರ್ ಹೋರರ ಧೋರಣೆಯೂ ಭಿನ್ನಭಿನ್ನವಾಗಿರುವುದನ್ನು ನೋಡಿ ಸಪ್ರು ಜಯಕರರು ಜಿಗುಪ್ಸೆಗೊಂಡರು ಬ್ರಿಟಿಷ ಸರಕಾರವು ನೇಮಿಸಿದ ಮಂತ್ರಾಲೋಚನೆ ಕೂಟಕ್ಕೆ ತಾವು ರಾಜಿನಾಮೆ ಕೊಟ್ಟರು.

ಮುಂಬಾಯಿ ಪರಿಷತ್ತು

ಅಷ್ಟರಲ್ಲಿ ಮುಂಬಾಯಿಯ ಸರ್ ಚಿಮಾನ್‌ಲಾಲ್ ಸೇಟಲ್‌ವಾಡರು ಹೋರರ ಈ ನೀತಿಯ ಕುರಿತು ಆಲೋಚಿಸಲು ಒಂದು ಮಹಾಸಭೆಯನ್ನು ಕರೆದರು. ಅಂದು ರೌಂಡ್ ಟೇಬಲಿಗೆ ಹೋದ ಲಿಬರಲರಾದ ಮೇಲಿನವರೆಲ್ಲಾ ಅದಕ್ಕೆ ದಯಮಾಡಿಸಬೇಕಾಗಿ ಆಮಂತ್ರಣವು ಹೋಯಿತು. ಅದೇ ಮೇರೆಗೆ ಮೇಲಿನವರೆಲ್ಲಾ ತಾ. ೧೦ನೇ ದಿನ ಮುಂಬಾಯಿಯಲ್ಲಿ ಸಭೆಗೂಡಿ ಈ ರೀತಿ ಪ್ರಕಟಿಸಿದರು.

"ಸರ್ ಸಾಮುವೇಲ್ ಹೋರರು ಜೂನ್ ತಾ. ೨೬ನೇ ದಿನ ಹೇಳಿದ ಹೇಳಿಕೆಯನ್ನೂ, ಅವರು ಅದನ್ನು ಸಮರ್ಥಿಸಿ ಇದೇ ಜುಲಾಯಿ ತಾ ೭ರಲ್ಲಿ ಮಾಡಿದ ಪ್ರಕಟಣೆಯನ್ನೂ ನಾವು ತರ್ಕಿಸಿ, ಆಲೋಚಿಸಿ ತಿಳಿದುಕೊಂಡೆವು ಅವರ ಈ ಧೋರಣೆಯು ಅಂದಿನ ಪರಿಷತ್ತಿನ ನಿರೂಪಣೆಯ ಮೇರೆಗೆ ಅಥವಾ ೧೯೨೯—೩೦ರಲ್ಲಿ ಲೋರ್ಡ್ ಅರ್ವಿನರು ಕೊಟ್ಟ ಭಾಷೆಯ ಮೇರೆಗೆ ಅಥವಾ ೧೯೩೧ರಲ್ಲಿ ಮಂತ್ರಿಯವರು ಕೊಟ್ಟ ಅಪ್ಪಣೆ ಮೇರೆಗೆ ಇಲ್ಲದೆ ಸಂಪೂರ್ಣ ಭಿನ್ನವಾಗಿರುವುದರಿಂದಲೂ, ಅವರ ಈ ಧೋರಣೆಯಿಂದಾಗಿ ಸುವ್ಯವಸ್ಥಿತ ರಾಜ್ಯರಚನೆಯು ಘಟಿಸಿ ಬರಲು ಸಾಧ್ಯವಿಲ್ಲವೆಂದು ನಮಗೆ ತೋರಿಬಂದಿರುವುದರಿಂದಲೂ, ಸರಕಾರವು ತನ್ನ ಮೊದಲಿನ ಧೋರಣೆಯನ್ನು ಹೊರತರದ ಹೊರತು ನಾವು ಮುಂದಿನ ಯಾವ ಕೂಟಗಳಲ್ಲೂ ಭಾಗವಹಿಸಿ ಸಹಕರಿಸೆವು."

ಅಲ್ಲದೆ ಇವರು ಬೇರೆ ಕೆಲವು ಠರಾವುಗಳನ್ನು ಮಂಜೂರು ಮಾಡುತ್ತಾ (೧) ಹಿಂದೂದೇಶಕ್ಕೆ ಪ್ರಾಂತಿಕ ಮತ್ತು ಕೇಂದ್ರ ಸರಕಾರವನ್ನು ಒಂದೇ ಸಮಯದಲ್ಲಿ ಕೊಡಬೇಕೆಂದೂ (೨) ಹೊಸ ಎಮರ್ಜೆನ್ಸಿ ಪವರ್ಸ್ ಓರ್ಡಿನೆನ್ಸುಗಳನ್ನು ಜಾರಿಗೆ ತರಬಾರದೆಂದೂ (೩) ಕಾಯಿದೆಭಂಗ ಚಳವಳಿ ಪ್ರಾಶಸ್ತವಾದುದಲ್ಲವೆಂದೂ ಠರಾವು ಮಾಡಿಕೊಂಡರು.

ಸಪ್ರೂಗಳ ಟೀಕೆ.

ಸರ್ ಸಪ್ರೂರವರು ಸರ್ ಹೋರರ ಧೋರಣೆಯನ್ನು ಟೀಕಿಸಿ, ಖಂಡಿಸುತ್ತಾ "ಸರ್ ಹೋರರ ಮಾತುಗಳಿಂದಾಗಿ ಅವರು ಹೇಳಿದ, ಅಲ್ಲದೆ ಹೇಳದೆ ಗೋಪ್ಯವಾಗಿಟ್ಟುಕೊಂಡ ರಹಸ್ಯಗಳೂ ನನಗೆ ತಿಳಿದಿವೆ ಪಾರ್ಲಿಮೆಂಟಿನ ಮುಂದಾಳುಗಳು ತಂದು ಹೂಡಿದ ವಾತಾವರಣದ ವರ್ಚಸ್ಸಿಗೆ ಸರ್ ಹೋರರು ಕಟ್ಟುಬಿದ್ದು ಮಾತನಾಡುತ್ತಾರೆಂದು ಸರ್ವವಿದಿತವಿದೆ. ಹೀಗೆ ಏಕೆ ಮಾಡುತ್ತಿರುವರೆಂದೂ ನನಗೆ ಗೊತ್ತಿದೆ ಹೋರರ ಧೋರಣೆಯನುಸಾರವಾಗಿ ನಾವು ನಡೆಯುವುದಾದರೆ, ಮಂತ್ರಾಲೋಚನೆಯಲ್ಲಿ ನಾವು ಚರ್ಚೆ ಮಾತ್ರ ಮಾಡಬೇಕು "ಅದು ತಪ್ಪು, ಇದು ಸರಿ ಎಂದು ಹೇಳುವ ಅಧಿಕಾರವು ಹಿಂದೀಯ ಪ್ರತಿನಿಧಿಗಳಾದ ನಮಗಿಲ್ಲ ಸರಕಾರವು ಕೊಡಲಿರುವುದನ್ನು ನಾವು ಆಲೋಚಿಸಲು ಎಡೆಯಿಲ್ಲ ಅದರ ಬದಲಿಗೆ ಸರಕಾರದ ಸಿಲೆಕ್ಟ್ ಕಮಿಟಿಯು ಪ್ರಕಟಿಸುವುದರಲ್ಲಿ ಮಾತ್ರ ನಾವು ಸಂತುಷ್ಟರಾಗಬೇಕಂತೆ. ಹಾಗಾದರೆ ನಾವೇಕೆ? ಬರೇ ಚರ್ಚೆಗೋ?

ವಾದವಿವಾದಗಳಲ್ಲಿ ದಿನಹೇರಳೆ ಮಾಡದೆ, ಕಾರ್ಯತಃ ಮುಂದೆ ಸಾಗೋಣವೆಂದು ಸರ್ ಹೋರರು ಹೇಳುತ್ತಿರುವರು. ಹಿಂದೀಯರಿಗೆ ಮೊದಲು ಆದಷ್ಟು ಬೇಗನೆ ಪ್ರಾಂತಿಕ ಸ್ವರಾಜ್ಯವನ್ನು ಕೊಡೋಣ ಎನ್ನುತ್ತಿರುವರು. ಇವರು ಈಗ ಮಾತ್ರ ಅನಾವಶ್ಯಕವಾಗಿ ಇಷ್ಟು ಅವಸರದಿಂದ ಗಜಿಬಿಜಿ ಮಾಡಿ ಕೊಡುವುದಾದರೂ ಎಂತಹದ್ದು? ೧೯೩೩ರಲ್ಲಿ ಪ್ರಾಂತಿಕ ಸ್ವಾತಂತ್ರ್ಯವನ್ನೇ? ಸರ್ ಹೋರರು ನಾವು ತಪ್ಪಾಗಿ ತಿಳಿದುಕೊಳ್ಳುತ್ತೇವೆಂದಾಲೋಚಿಸುವುದು ಬೇಡ ನಮಗೆ ಮಂದಪಕ್ಷದವರ ಮನೋಭಾವವು ಕಳೆದ ನವಂಬರದಿಂದಲೂ ತಿಳಿದಿದೆ ಈಗ ಹೋರರಾಗಲೀ, ಸರಕಾರವಾಗಲೀ, ತಾವು ತಪ್ಪು ದಾರಿಯನ್ನು ಹಿಡಿದು ಸಾಗಿದೆವೆಂದು ಒಪ್ಪಲೇ ಬೇಕಾಗಿದೆ ಮಂದಪಕ್ಷದವರು ಹಿಂದೂದೇಶದ ಕಡೆಗೆ ಬೀರುವ ತಾತ್ಸಾರವೂ ತೋರಿಸುವ ಅಭಾವವೂ ಹಿಂದೀಯ ಸಮಸ್ಯೆಯನ್ನು ಬಿಗು ಮಾಡಿ ತುಂಗದು ತರಗೊಳಿಸಿತು ಎಂದರು

ಹೋರರ "ಕ್ಷಮಾಪಣೆ"

ಇವರ ಈ ಹೇಳಿಕೆಗೆಲ್ಲ ಸರ್ ಹೋರರು ಉತ್ತರ ಕೊಡುತ್ತಾ "ನಾವು ಬ್ರಿಟಿಷರು ಏನನ್ನು ಮಾಡಿದರೂ ಈಗ ತರ್ಕಕ್ಕೆ ಗುರಿಯಾಗುತ್ತೇವೆ ಸಂಶಯಸೃಷ್ಟಿಯೇ ನಮ್ಮ ಮೇಲಿದೆ ಬ್ರಿಟಿಷ ಸರಕಾರವು ತನ್ನ ಮೊದಲಿನ ಸೂತ್ರವನ್ನು ಮುರಿದಿಲ್ಲ ಅದರ ಪ್ರಕಾರವೇ ಮುಂದೆ ಹೋಗುತ್ತಿದೆ. ಸುಮ್ಮಸುಮ್ಮಗೆ ಸಮಯವನ್ನು ಕೊಲ್ಲುವುದಕ್ಕಿಂತ ಹಿಂದೀಯ ರಾಜ್ಯಾಂಗ ರಚನೆಯನ್ನು ಆದಷ್ಟು ಬೇಗ ತೀರ್ಮಾನಿಸುವುದು ವಿಹಿತವೆಂದು ನಾವು ಹೀಗೆ ಮಾಡಿದೆವು ಆದರೇನು? ನಾವು ಹಿಂದೀಯರ ಸ್ನೇಹಿತರಲ್ಲ, ನಮಗೆ ದಾಕ್ಷಿಣ್ಯ ಇಲ್ಲ ಎಂದು ಕೆಲವರು ಹೇಳಿಯೇ ಬಿಟ್ಟರು ಅವರಿಗೆ ನಮ್ಮ ಧೋರಣೆಯ ಅರ್ಥವಾಗದೆ ಅಪಾರ್ಥವೇ ಆಯಿತೆಂದೆನ್ನಬೇಕಾಗುತ್ತದೆ. ನಾವು ಒಂದು ಅಂತ್ಯ ನಿರ್ಧಾರವನ್ನು ಮಾಡಲಿರುವಾಗ ಹಿಂದೀಯ(?) ಪ್ರತಿನಿಧಿಗಳೊಡನೆ ಆಲೋಚಿಸಿಕೊಳ್ಳದಿರಲಿಕ್ಕಿಲ್ಲ ನಮ್ಮ ಸಭೆಗಳಲ್ಲಿ ಹಿಂದೀಯ ಪ್ರತಿನಿಧಿಗಳು ಸಾಕ್ಷಿಗಾರರಾಗಿ(?) ಕುಳಿತುಕೊಳ್ಳಬಹುದು. ಅಥವಾ ಚರ್ಚೆ ನಡೆಸಲೂ ಬಹುದು ಎಂದರು.

ಪತ್ರಿಕಾಭಿಪ್ರಾಯಗಳು.

"ಹಿಂದೂ ಪತ್ರಿಕೆ" "ಸಪ್ರೂ ಜಯಕರರ ರಾಜಿನಾಮೆ ವಿಹಿತವು—ನೆಹರು ರಿಪೋರ್ಟಿನ ಮೇರೆಗೆ ಸ್ವಾತಂತ್ರ್ಯ ಸಾಧನೆಯಾಗಬೇಕು."

"ಟೈಮ್ಸ್ ಆಫ್ ಇಂಡಿಯಾ" ಸರಕಾರವು ಈಗಲಾದರೂ ಸರಿ ದಾರಿಯಲ್ಲಿ ನಡೆಯಬಹುದು.

"ಟೈಮ್ಸ್" ಇಂತಹ ಸನ್ನಿವೇಶ ಸಮಯದಲ್ಲಿ ಧೋರಣೆಯನ್ನು ಪರಿವರ್ತಿತಗೊಳಿಸಿದರೆ ಎಲ್ಲಾ ಬಣ್ಣವು ಮಸಿನುಂಗಿದಂತೆ.

ಪರಸ್ಪರಮೈತ್ರಿಯಿಂದಿದ್ದ ಹಿಂದೀಯ ಮಂದಪಕ್ಷದವರಾದ ಈ ಸದಸ್ಯರೆಲ್ಲ ತಮ್ಮೊಡನೆ ಸಹಕರಿಸಲು ಅಸಮ್ಮತಿಸಿ ತಟಸ್ಥರಾಗಿ ಕುಳಿತುಬಿಟ್ಟುದನ್ನು ನೋಡಿ ಲಂಡನಿನಲ್ಲಿ ಮಹದಾಶ್ಚರ್ಯದ ಕಾವೋರ್ಡವು ಪಸರಿಸಿಕೊಂಡಿದೆ. ತಮ್ಮ ಪಕ್ಷಕ್ಕೆ ಸಹಾನುಭೂತಿಯನ್ನು ತೋರಿರುವ ಈ ಸದಸ್ಯರನ್ನೆಲ್ಲ ಸಮಾಧಾನಗೊಳಿಸಬೇಕೆಂದೂ, ಹೋರರ ಬದಲಾಯಿಸಲ್ಪಟ್ಟ ಧೋರಣೆಯನ್ನು ಮುಂಚಿನಂತೆ ಸರಿಪಡಿಸಬೇಕೆಂದೂ ಪ್ರಧಾನಾಮಾತ್ಯರಾದ ಮೆಕ್‌ಡೊನಾಲ್ಡರ ಆಲೋಚನೆಯಿದೆಯಂತೆ ಆದರೆ ಚರ್ಚಿಲ್ ಮನೋಭಾವದ ಪಾರ್ಲಿಮೆಂಟಿನ ಮುಷ್ಟಿಯೊಳಗೆ ಸಿಲುಕಿಬಿದ್ದ ಇವರು ಯಾವ ರೀತಿಯಿಂದ ತಮ್ಮ ಕಾರ್ಯಸಾಧನೆಯನ್ನು ಮಾಡುವರೋ ತಿಳಿಯದೆಂದು ಕೆಲವರೂ, ಕೆಲವು ಪತ್ರಿಕೆಗಳೂ ಎನ್ನುತ್ತವೆ. ದೀನಬಂಧು ಸಿ. ಎಫ್ ಎಂಡ್ರೂಸರ ರಾಜಿ ಸಮ್ಮೇಳನವು ಜರಗಿ ಒಂದು ಬಗೆಯ ಸುವ್ಯವಸ್ಥೆಯು ಆಗಲೇ ಬೇಕೆಂದು ಬಯಸುತ್ತಿರುವರು ಜುಲಾಯಿ ೩೧ರೊಳಗೆ ಸರಕಾರವು ಹಿಂದೂ ಮುಸ್ಲಿಮ ಮತ್ತು ಕೋಮುವಾರು ಪ್ರಶ್ನೆಯ ಕುರಿತು ತನ್ನ ಮತವನ್ನು ಪ್ರಕಟಿಸುವುದರಿಂದ ಈ ಕಾರ್ಯವು ಹಿಂದಕ್ಕೆ ಬೀಳುವುದೆಂದು ಊಹಿಸಲ್ಪಟ್ಟಿದೆ

ಹಾರುವ ಚೂರು.

ಉಡುಪಿ, ಜುಲಾಯಿ, ೧೫—೧೯೩೧

ದಸ್ಸಗಿರಿಯ ಪ್ರಹಸನದಿಂದ ಪುರುಷಾರ್ಥವೇನೋ ತಿಳಿಯದು. ಪೋಲೆಂಟಿಯರು ಧರಿಸುವ ಬಟ್ಟೆ ಮನುಷ್ಯನನ್ನು ಒಂದೆರಡು ದಿನ ಉಪವಾಸವಿಟ್ಟು ಆನಂತರ ಹೊರಕ್ಕೆ ಬಿಡುವುದು. ಈಗ ಒಂದು ಪದ್ಧತಿಯಾಗಿ ಹೋಗಿದೆ ಕೆಲವರಿಗಂತು ಇದೇ ಒಂದು ವಿನೋದ "ಹೋದ ಪ್ರಷ್ಠೆ ಒಂದು ಪಟ್ಟೆ, ಪಟ್ಟೆಗಾಗಿಗೆ ನೀರಿಲ್ಲವೆಂದರೆ ಹೀಗಲ್ಲವೇ?

• • • •

ಶ್ರೀಮನ್ಮಧ್ವಾಚಾರ್ಯರ ಜಾತಿಯ ಬಿಳಿ ತೋರಿಸುವ ದ್ವಂದ್ವವು ಲೋಕನಿಯಮ. ಇಂತಿರಲು ಬ್ರಾಂತಿಗಿರುವುದೆಂತು? ಸನ್ಯಾಸಿಗಳೊಬ್ಬರು ಯೋಗ್ಯವನ್ನು ಬಿಟ್ಟು ಧೋರಣೆ ಹಿಡಿಯುವರಂತೆ—ಪಣಬೇಕಂತೆ—ದೀಕ್ಷೆಯನ್ನು ಬಿಟ್ಟುಕೊಡುತ್ತಾರಂತೆ ಸರಿಯಾಗಿದೆ ವಹಿವಾಟಿಯು.

• • • •

ಮಾಡುವುದು ಸತ್ಕ್ರಿಯೆ ಪಿಕೆಟಿಂಗ್! ನುಡಿಯುವುದು ಸತ್ಕ್ರಿಯೆ "ಕೋಪ! ಇನ್ನು ವಿದೇಶಿ ಸೋಪು ಬೇಡ" ವೇಟಿ ಗಳನ್ನು ತಿಳಿಯಾ ಇಷ್ಟೆ! "ಹೇಳುವುದು ಶಾಸ್ತ್ರ, ಇಕ್ಕುವುದು .." ಎಂಬಂತಾಗಿದ್ದರೆ ಸಾಕು

• • • •

ಇಲೆಕ್ಷನ್ ಬಂತು! ರಾಯರು, ಶೆಟ್ಟರು ಭಟ್ಟರು ಎಲ್ಲರೂ ಯೋಚನೆಗೆಬ್ಬಿದ್ದಾರೆ ತಾಲೂಕ್ ಬೋರ್ಡಿಗೋ? ಡಿಸ್ಟ್ರಿಕ್ಟ್ ಬೋರ್ಡಿಗೋ ಎಂದು ಕೆಲವರಿಗೆ ಇದೀಗಲೇ ಮನಸ್ಸಿನಲ್ಲಿ ಮೆಂಬರನಾಗಿ ಪ್ರೆಸಿಡೆಂಟನಾಗಲೂ? ಪ್ರೆಸಿಡೆಂಟನಾಗಿ ಮೆಂಬರನಾಗಲೂ ಎಂದು ಅಂತೂ ಮುಂದೆ ಮುಂದೆ ಎಂದಿದ್ದ ಇಲೆಕ್ಷನ್ ಒಂದೇ ಬಿಟ್ಟಿತು. ಇದರಿಂದ ಎಷ್ಟು ಜನರ ಕಲೆಕ್ಷನ್ ಬರಿದಾಗಲಿದೆಯೋ?

• • • •

ಓಟಿನ ಗಲಾಟೆಯ ಒಂದು ಹಿಂದೆ ಮೋಟಾರ್ ಬಿಡುಟ್ಟು, ದೂಳು ಹಾರಾಟವಿದ್ದಿತು. ಈಗ ನೀರು ಹಾರಾಟ, ನೋಡುವವರಿಗೆ ಕೂಗುಸಿನ ನೋಟವಾಗಿದೆ

• • • •

ಓಟರರೇ! ಕಣ್ತೆರೆದುಕೊಳ್ಳಿ! ಹೆಂಗಸಿಗೆ, ದಾಕ್ಷಿಣ್ಯಗೀಕ್ಷಣ! ಹೊಟ್ಟೆಗಿಷ್ಟು ಮುಂಚಾಪಿಗಿಂತಲೂ ಮಾತ್ರ ನೋಡಿ ಓಟು ಕೊಡಬೇಡಿರಿ ಈಗ "ಹಿಂದಿನ ಕಾಲವಲ್ಲ, ಪಂಚಾರ ಕಂಬಳವಲ್ಲ" ತಿಳಿಯಿತೇ ಜೋಕೆ!

• • • •

ಈ ಬಾರಿ ಓಟರರ ಲಿಸ್ಟ್ ಬಹು ಬೆಳೆದಿದೆ. ನಮ್ಮ ಗಂಡನೂ ಓರ್ವ ಓಟರ. ಅವನು ತನ್ನ ಓಟಿನ ಬೆಲೆ ಹೆಚ್ಚಿಸಿಕೊಳ್ಳುವುದಕ್ಕಾಗಿ ಈಗಲೇ 'ಎಡ್ವರ್ಟೈಸ್‌ಮೆಂಟ್' ಮಾಡಲಿಕ್ಕಾರಂಭಿಸಿರುವನು? ಇವನ ಓಟಿಗೆ ಎಷ್ಟು ಚಕ್ರ ಬೆಲೆ ಬರುವುದೋ ನೋಡಬೇಕು.

(೧೩ನೇ ಪುಟಕ್ಕೆ ಮುಂದುವರಿಯುದು.)

ಈ ಹೊಸ ಗ್ರಂಥಗಳನ್ನು ನೋಡಿರುವಿರಾ?

ಕಾಮುಕ ಸುಟ್ಟಿ—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ ಕೃತ ಇಂತಹ ಗಂಭೀರವಾದ ಸ್ವಾರಸ್ಯವಾದ, ಉಪಯುಕ್ತವಾದ ಕಾಮಶಾಸ್ತ್ರ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ / ಬೆಲೆ ೧೨ ಆಣೆಗಳು ಮಾತ್ರ

ಪ್ರಳಯ ತಾಂಡವ—(ಸಚಿತ್ರ) ಶ್ರೀ ಜಿ ವಾಸುದೇವರಾಯರು ಸುಂದರ ಚಿತ್ರಗಳೊಂದಿಗೆ ಅಂದವಾಗಿ ಪ್ರಕಟವಾಗಿದೆ. ಉಚ್ಚ ಭಾವಗಳನ್ನೊಳಗೊಂಡಿರುವ ಸ್ಫೂರ್ತಿದಾಯಕ ೩ ಕವನಗಳಿವೆ ಬೆಲೆ ೬ ಆಣೆಗಳು ಮಾತ್ರ ಲೈಬ್ರರಿ ಪ್ರತಿ ರೂ ೧

ಹೊಸಹುಟ್ಟು—ಶ್ರೀ. ಅ. ನ. ಕೃಷ್ಣರಾಯರು ೧೭ ಪ್ರೌಢತರ ನ್ಯಾಸಗಳು, ೮ ಸುಂದರ ಚಿತ್ರಗಳು, ಫೆದರ್‌ವೇಟ್ ಕಾಗದದ ಮೇಲೆ ೧೮೨ ಪುಟಗಳಿವೆ ಬೆಲೆ ೧ ರೂಪಾಯಿ

ವೈದ್ಯರಾಜ —(ಸಾಮಾಜಿಕ ನಾಟಕ) ಪ್ರೊಫೆಸರ್ ಜಹಗೀರ್‌ದಾರ್ ಕೃತ. ಬೆಲೆ ೧ ರೂಪಾಯಿ

ಮೋಹನಾಸ್ತ್ರ—(ಸಾಮಾಜಿಕ ನಾಟಕ) ಪಂಡಿತ ತಾರಾನಾಥ ಕೃತ ಬೆಲೆ ೧ ರೂಪಾಯಿ

ನವಜೀವನ ಗ್ರಂಥ ಭಂಡಾರದ ಅಮೌಲ್ಯ ಗ್ರಂಥಗಳು

೧	ಆಕಾಶದೊಳಗಿನ ಅದ್ಭುತ ಚಮತ್ಕಾರಗಳು	೧—೨—೦
೨	ಧರ್ಮ ಸಂಭವ	೧—೪—೦
೩	ಹಿಂದೂಸ್ಥಾನದ ಪ್ರಾಚೀನ ರಾಜ್ಯಪದ್ಧತಿಗಳು	೧—೨ ೦

ಹೆಚ್ಚಿನ ವಿಷಯಗಳಿಗೆ ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ

ವಿ ಬಿ ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ

ನಿದ್ರಿಸಹೋಗುವಾಗ 'ಓವಲ್‌ಟಿನ್ನ'ನ್ನು ಕುಡಿಯಿರಿ – ಅದು ಸ್ನಾಯುವನ್ನು ಶಾಂತಗೊಳಿಸಿ, ಶಾಂತಿಕರವಾದ ನಿದ್ರೆಯನ್ನೀಯುತ್ತದ

ಹವಾಗುಣದಿಂದಲೂ ನಮ್ಮ ಕೆಲಸಕಸಬುಗಳಿಂದಲೂ ನಮ್ಮ ಸ್ನಾಯುಗಳು ಶಾಂತಿರಹಿತವಾಗುತ್ತವೆ. ಇದರಿಂದ ನಿದ್ರೆಯು ಸಿಗುವುದಿಲ್ಲ. ನಿಮಗೆ ನಿದ್ರೆಯು ಹತ್ತದಿದ್ದರೆ ಸ್ನಾಯುಗಳು ಸರಿಯಾದ ಪೋಷಣೆಯಲ್ಲಿಲ್ಲವೆಂದು ಭಾವಿಸಿರಿ. ಅವುಗಳು ಬಳಲುತ್ತಿವೆಯೆಂದು ತಿಳಿಯಿರಿ. ಸ್ನಾಯುಗಳನ್ನು ಬಲಗೊಳಿಸಲು ನಿಮ್ಮ ಆಹಾರವು ಸಂಪುಷ್ಟಿಯುಳ್ಳದ್ದಲ್ಲವೆಂದು ತಿಳಿಯಿರಿ

ನಿಮ್ಮ ಸ್ನಾಯುಗಳನ್ನು ಚೈತನ್ಯಯುಕ್ತವಾಗಿ ಓವಲ್‌ಟಿನ್ ಮಾಡುತ್ತದೆ. ಇದನ್ನು ನಿಸರ್ಗಸಿದ್ಧವಾಗಿ ತಯಾರಿಸಲಾಗಿದೆ. ದೇಹ ಮೆದುಳುಗಳನ್ನು ದೃಢೀಕರಿಸುವ ಇದರ ಪ್ರತಿಯೊಂದು ಅಣುವೂ ಅಮೂಲ್ಯವಾದುದು

ನಿಮ್ಮ ನರಗಳನ್ನು ಈ ಪಾನೀಯದಿಂದ ಪೋಷಿಸಿರಿ. ನಿದ್ರಿಸಹೋಗುವ ಸಮಯದಲ್ಲಿ ಒಂದು ಕಪ್ ಓವಲ್‌ಟಿನ್ನನ್ನು ಕುಡಿಯಿರಿ. ಶಾಂತಿಕರ ಮತ್ತು ಸುಖನಿದ್ರೆಯು ಸಿಗುತ್ತದೆ

ಆರೋಗ್ಯ ಬಲ, ಧಾತುಪುಷ್ಟಿಗೆ ಓವಲ್ಟಿನಿನ ಹಾಗೆ ಇನ್ನೊಂದಿಲ್ಲ

ಅತ್ಯುತ್ತಮವಾದ ಓವಲ್‌ಟಿನ್ನಿಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಅನುಕರಣೀಯವಾದ ಬರೇ ಮಿಶ್ರಣವಾದ ಮತ್ತು ಸತ್ವಮಾನ ಕಡಿಮೆಯಿಂದಿರುವ ಎಲ್ಲಾ ಆಹಾರಗಳನ್ನೂ ತಿರಸ್ಕರಿಸಿರಿ

ನಿಸರ್ಗಸಿದ್ಧವಾದ ನಿದ್ರೆಯನ್ನು ಕೊಡುತ್ತದೆ

OVALTINE

TONIC FOOD BEVERAGE

ಅತೀ ಶುದ್ಧ ಮತ್ತು ಅತ್ಯುತ್ತಮ ಕರಸ್ಪರ್ಶವಾಗಿಲ್ಲ

ಏಜಂಟರು — ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಜೇಮ್ಸ್ ರೈಟ, 86ಎ ಕಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಬೊಂಬಾಯಿ ಮದ್ರಾಸ್ ರಂಗೂನುಗಳಲ್ಲಿ

ಓವಲ್‌ಟಿನ್ ರೊಟ್ಟಿಗಳು ಬಹಳ ಪೋಷಣಾ ಶಕ್ತಿಯುಳ್ಳವುಗಳು. ಅವುಗಳನ್ನು ಒಂದು ಕಪ್ "ಓವಲ್‌ಟಿನ್" ಅಥವಾ ಕಾಫಿ ಟೀ ಬೆಣ್ಣೆ ಹಣ್ಣುಗಳೊಡನೆ ಸ್ವೀಕರಿಸಿರಿ. ಅವು ಬಿಸ್ಕತ್ತುಗಳಿಗಿಂತ ಅತ್ಯುತ್ತಮ, ರುಚಿಕರ ಮತ್ತು ಜೀರ್ಣಕರ

OV/106

The Canara Bank, Ltd Kasaragod.

ದಿ ಕೆನರಾ ಬೇಂಕ್ ಲಿಮಿಟೆಡ್, ಕಾಸರಗೋಡು.

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಮೊಬಲಗುಗಳನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿ ಆಗದೆ ವಾಪಾಸು ಬಂದಿರುವದರಿಂದ ಸದ್ರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1932ನೇ ಇಸವಿ ಜುಲಾಯಿ ತಾ 29ನೇ ಶುಕ್ರವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡುಹೋಗದೆ ಇದ್ದರೆ, ಇದೇ 1932ನೇ ಇಸವಿ ಅಗೋಸ್ತು ತಾ 3ನೇ ಬುಧವಾರ ದಿವಸ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಅವುಗಳನ್ನು ಬಹಿರಂಗವಾಗಿ ಏಲಂ ಮಾಡಲಾಗುವುದು

1 ಸಾಲದ ನಂಬ್ರ 2137/30 Sham Bhat s/o Shankarnarayan Bhat Land holder Madoor Village Kasaragod P O ಅಸ್ಲು ರೂ 30

2 ಸಾಲದ ನಂಬ್ರ 2215/30 Krishna s/o Kora residing in Nellikunje Kasaragod P O ಅಸ್ಲು ರೂ 30

3 ಸಾಲದ ನಂಬ್ರ 903/30 Ibrahim Beary, s/o Ku hil Mamunhi Merchant Kalnad Village Kalnad P O ಅಸ್ಲು ರೂ 75

4 ಸಾಲದ ನಂಬ್ರ 275/30 Ramaya son of Linga a Cultivator Mulivar Village No 2 Kasaragod P O ಅಸ್ಲು ರೂ 125

5 ಸಾಲದ ನಂಬ್ರ 600/29 K Vasudeva Rao s/o Gopalakrishna Kubunuraya Land holder Kubunur Village Kurchipalla P O ಅಸ್ಲು ರೂ 125

6 ಸಾಲದ ನಂಬ್ರ 491/30 Sham Bhat s/o Shankarnarayan Bhat Land holder Kumbdaje Nekraje Village Kasaragod P O ಅಸ್ಲು ರೂ 70

7 ಸಾಲದ ನಂಬ್ರ 8 [illegible] 31 Thimmappa s/o Appanna Merchant Hosdurg Kanhangad P O ಅಸ್ಲು ರೂ 55

8 ಸಾಲದ ನಂಬ್ರ [illegible] Thimmappa s/o Appanna Merchant Hosdurg Kanhangad P O ಅಸ್ಲು ರೂ 40

9 ಸಾಲದ ನಂಬ್ರ 2585/31 Thimmappa s/o Appanna Cultivator Hosdurg Kanhangad P O ಅಸ್ಲು ರೂ 55

Office of the Bank
Kasaragod
— —1932

H S Bhat,
Agent

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O P No 35/32

1 ಲೀನಿ ಮೆಂಡೋಸ 2 ಚಾರ್ಲ್ಸ್ ಮೆಂಡೋಸ 3 ಮಿಕ್ಯಾಯೇಲ್ ಮೆಂಡೋಸ 4 ಹೆಲೆನಾ ಮೆಂಡೋಸ—ಮೈನರು ರಿಜಿನಾ ಎಂಡ್ರ್ಯೂಸ್ ಮೆಂಡೋಸರ ಮಕ್ಕಳು ಇವರ ಕ್ಷೇಮಚಿಂತಕಳ ತಾಯಿ ಮೇರಿ ಮೆಂಡೋಸ, ಉಡುಪಿ ಕಸಬೆಯಲ್ಲಿ ವಾಸ— ಅರ್ಜಿದಾರರು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ – ಅರ್ಜಿದಾರರ ತಂದೆ ಉಡುಪಿ ಕಸಬೆಯಲ್ಲಿ ತಾ 6–1–32ಲ್ಲಿ ಮೃತಪಟ್ಟ ಜಾನ್ ಎಂಡ್ರ್ಯೂಸ್ ಮೆಂಡೋಸರಿಗೆ ಜಿ ಪಿ ನಂಬ್ರ 2686ನೇ ಗವರ್ನಮೆಂಟ್ ಪ್ರೊವಿಡೆಂಟ್ ಫಂಡಿನ ಬಾಬ್ತು ಬರತಕ್ಕ ಐವೇಜಿನ ಪೈಕಿ ಮೈನರು ಅರ್ಜಿದಾರರ ಶೇರಿನ ಅಂಶದ ರೂ 235। ಇನ್ನೂರುಮೂವತ್ತೈದನ್ನು ವಸೂಲು ಮಾಡುವರೆ ಮೈನರ ಅರ್ಜಿದಾರರಿಗೋಸ್ಕರ ಅವರ ಕ್ಷೇಮಚಿಂತಕಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಮೈನರ ಅರ್ಜಿದಾರರ ಕಡೆಯಿಂದ ಕ್ಷೇಮಚಿಂತಕಳ ದಾಖಲ್ಲ ಮಾಡಿದ ಸದರಿ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾ 5–8–'32ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ಅರ್ಜಿ ತನಿಕೆ ಸಮಯ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸಲಾಗುತ್ತದೆ

Udipi S. K.
8—7—1932

H Keshava Pai,
Vakil for Petitioners.

ಜೈಲನ್ನು ಕೆಡವಿ ಹಾಕಿದರು!— ಮಿರಾಬೆನ್ನರನ್ನು ಹೊರಗೆ ಅಟ್ಟಿದರು!—ಸಬ್‌ಮೆರಿನು ಮುಳುಗಿತು!—ಮುಂಬಾಯಿ ಗಲಭೆಯು ಶಾಂತವಾಯಿತು—ಮಂದಪಕ್ಷದವರ ಅಸಹಕಾರ—ಹೋರರ ಮೇಲೆ ಭಾರೀ ಆರೋಪ—ಜವಾಹರಲಾಲರು ಸ್ವಲ್ಪ ಸೌಖ್ಯಗೊಂಡಿದ್ದಾರೆ—ಪತಿತ ಪರಿಷತ್ತಿನಲ್ಲಿ ಕಲಹ!—ಅನೇಕ ಪ್ರಾಂತ್ಯಗಳಲ್ಲಿ ಪಿಕೆಟಿಂಗ್, ಕೈದು, ಬಿಡುಗಡೆ—ಹಿಂದೂದೇಶಕ್ಕೆ ಸ್ವಾತಂತ್ರ್ಯವಿಲ್ಲ— ಚರ್ಚಿಲ್ಲರ ಅಡ್ಡಿ— ಆಯರ್ಲೇಂಡು ಶರ್ತಕಂದಾಯವನ್ನು ಕೊಡುವುದಿಲ್ಲ!—ಒಬ್ಬ ತರುಣ ಯೋಗಿನಿಯರ್ವರು ಸಂಸಾರ ಮಾಡಲಿರುವರು —ಜರ್ಮನಿಯ ಆರ್ಥಿಕ ದುಃಸ್ಥಿತಿ—ವಿ ಜೆ ಪಟೇಲರು ಆಯರ್ಲೇಂಡಿನಿಂದ ಇಂಗ್ಲಾಂಡಿಗೆ ಹೋದರು—ಪೇಶಾವರದಲ್ಲಿ ಆಸಿಸ್ಟಾಂಟ್ ಪೊಲಿಟಿಕಲ್ ಆಫೀಸರರ ಮೇಲೆ ಬೋಂಬು!—ಮಂದಪಕ್ಷದ ಅಸಹಕಾರತೆಯು ಶ್ರೀಮತಿ ಸುಬ್ಬರಾಯನರಿಂದ ಸಮರ್ಥಿಸಲ್ಪಟ್ಟಿತು—ಕೊಲೊಂಬೊದಲ್ಲಿ ವಿದ್ಯಾರ್ಥಿನಿಯರು ಮುಷ್ಕರ ಹಿಡಿದುದರಿಂದ ಶಾಲೆಯು ಮುಚ್ಚಲ್ಪಟ್ಟಿತು — ಬ್ರಿಟಿಷರ ತಳಮಳ—ಎಲ್ಲೆಲ್ಲೂ ಕಳವಳ—ಕೆಲವು ಕಡೆಗಳಲ್ಲಿ ಚಳವಳ!

ಪತಿತರ ಪರಿಷತ್ತು. ೩೦ ಜನರು ಘಾಯಗೊಂಡರು!

ಪತಿತ ವರ್ಗದವರು ಪ್ರತ್ಯೇಕ ಮತ್ತು ಜತೆಪ್ರಾತಿನಿಧ್ಯವನ್ನು ಚರ್ಚಿಸುವ ಬಗ್ಗೆ ತಾ ೧೧ನೇ ದಿನ ಮುಂಬಾಯಿಯಲ್ಲಿ ರಾವ್‌ಬಹದ್ದೂರ್ ಎಂ. ಸಿ. ರಾಜರೆಂಬ ಧುರೀಣರ ಅಧ್ಯಕ್ಷತೆಯಲ್ಲಿ ಒಂದು ಪರಿಷತ್ತನ್ನು ಜರಗಿಸಿದರು. ಡಾ| ಅಂಬೆಡಕಾರರು ಕೇಳುವ ಪ್ರತ್ಯೇಕ ಮತದಾನ ಕ್ರಮವನ್ನು ಖಂಡಿಸಲಾಯಿತು. ಪತಿತರ ಉದ್ಧಾರವಾಗಬೇಕಾದರೆ ಜತೆಮತದಾನವೇ ಅಗತ್ಯವೆಂದು ನಿರ್ಧರಿಸಲ್ಪಟ್ಟಿತು. ಆ ದಿನ ಮಧ್ಯಾಹ್ನದಲ್ಲಿ ಸುಮಾರು ೨೦೦ ಮಂದಿ ಪ್ರತ್ಯೇಕ ಮತವಾದಿಗಳು ಒಟ್ಟುಗೂಡಿ ಬಂದು ಪರಿಷತ್ತಿನ ಸಭಾಸದನಕ್ಕೆ ಪ್ರವೇಶಿಸಲು ಯತ್ನಿಸಿದರು. ಅವರನ್ನು ಬಾಗಿಲಲ್ಲಿ ತಡೆಯಲಾಯಿತು. ಒಳಗಿದ್ದ ರಾಷ್ಟ್ರೀಯವಾದಿಗಳಿಗೂ ಹೊರಗಿದ್ದ ಅಂಬೆಡ್ಕಾರ ಪಕ್ಷದವರಿಗೂ ಒಡನೆ ಮಾರಾಮಾರಿಯು ನಡೆಯಿತು. ೩೦ ಮಂದಿಗಳು ಜಖಂಗೊಂಡರು. ಇವರಲ್ಲಿ ೧೨ ಮಂದಿಗಳು ವಿಷಮಾವಸ್ಥೆಯಲ್ಲಿರುವರು. ಪೋಲೀಸರು ಧಾವಿಸಿ ಬಂದುದರಿಂದ, ಮುಂದಕ್ಕೆ ನಡೆಯಲಿದ್ದ ಸಭಾಭಂಗ ಕಾರ್ಯವೂ ಕಲಹವೂ ತಡೆಯಲ್ಪಟ್ಟಿತು. ಅಧ್ಯಕ್ಷರಿಗೆ ಕಪ್ಪು ಪತಾಕೆಗಳನ್ನು ತೋರಿಸಬೇಕೆಂದು ಬಹಳ ಪ್ರಯತ್ನವಾಯಿತು. ಆದರೆ, ಹೆಚ್ಚಿನವರು ಎಂ ಸಿ ರಾಜರ ಪಕ್ಷದಲ್ಲಿದ್ದುದರಿಂದ ಗಲಭೆಗಾರರಾದ ಹೊರಗಿನವರು ಸೋತು ಹೋದರು. ಕೆಲವರನ್ನು ಕೈದು ಮಾಡಿದ್ದಾರೆ. ಕೆಲವರಿಗೆ ಲಾಠಿ ಪೂಜೆಯಾಗಿದೆ. ಕಲ್ಲುಮುಳ್ಳುಗಳನ್ನು ಹಿಡಿದುಕೊಂಡು ಸಭಾಸದನವನ್ನು ಹೊಕ್ಕಲೆತ್ನಿಸಿದವರಲ್ಲಿ ಅನೇಕರು ಪೋಲೀಸ ಠಾಣೆಯಲ್ಲಿದ್ದಾರೆ.

* * *

ಮಿರಾಬೆನ್ನರನ್ನು ಮುಂಬಾಯಿಯಿಂದ ಹೊರಗೆ ಮಾಡಿದರು

ಶ್ರೀಮತಿ ಮಿರಾಬೆನ್ನರು ಕೆಲ ದಿನಗಳ ಹಿಂದೆ ಸೆರೆಮನೆಯಿಂದ ಹೊರಗೆಬಂದರಷ್ಟೆ! ಅವರು ಗಾಂಧಿಜೀಯವರ ಭೇಟಿಯನ್ನು ಯಾಚಿಸಿದರು. ಮುಂಬಾಯಿ ಸರಕಾರವು ಅವರಿಗೆ ಸಮ್ಮತಿಯನ್ನು ಕೊಡಲಿಲ್ಲ. ಆದರೂ ಮಿರಾಬೆನ್ನರು ನಿರಾಶರಾಗದೆ ತನ್ನ ಸ್ವದೇಶಿ ಪ್ರಚಾರ ಕಾರ್ಯವನ್ನು ನಡೆಸಿದರು. ತಾ ೧೧ನೇ ದಿನ ಅಕಸ್ಮಾತ್ತಾಗಿ ಅವರ ಮೇಲೊಂದು ನೋಟೀಸು ಜ್ಯಾರಿಯಾಗಿ, ಅವರು ೨೪ ತಾಸುಗಳೊಳಗೆ ಮುಂಬಾಯಿಯಿಂದ ಹೊರಡಬೇಕೆಂದೂ, ಅಪ್ಪಣೆ ವಿನಹ ಮುಂಬಾಯಿಗೆ ಬರಬಾರದೆಂದೂ ಅಪ್ಪಣೆ ಕೊಡಲಾಯಿತು. ಇದನ್ನು ನೋಡಿ ಮಿರಾಬೆನ್ನರಿಗೆ ಆಶ್ಚರ್ಯವಾಯಿತು. ಆ ನೋಟೀಸು ತಲಪುವ ಮುಂಚಿನ ದಿನವೇ ಅವರು ತನ್ನ ಸ್ವಕಾರ್ಯಕ್ಕಾಗಿ ಅಲ್ಲಹಾಬಾದಿಗೆ ತೆರಳುವ ಸಿದ್ಧತೆಯಲ್ಲಿದ್ದರು. ಸರಕಾರದ ನೋಟೀಸೂ, ತನ್ನನ್ನು ಮುಂಬಾಯಿಯಿಂದ ಹೊರಗೆ ಹೋಗಲಿರುವ ಕಾರ್ಯಗೌರವವೂ ಎರಡೂ ಒಂದೇ ಸಮಯದಲ್ಲಿ ತಾಗಿಬಂದುದನ್ನು ನೋಡಿ ಅವರು ಸಂತೋಷಗೊಳ್ಳುತ್ತಾ "ನಾನು ನನ್ನ ಕಾರ್ಯಾರ್ಥವಾಗಿ ಅಲ್ಲಹಾಬಾದಿಗೆ ಮೊದಲೇ ಹೊರಟಿರುವುದರಿಂದ ಮುಂಬಾಯಿಯಲ್ಲಿರಲು ಸಾಧ್ಯವಿಲ್ಲ. ಆದರೆ ನನ್ನ ಕೆಲಸಗಳು ಮುಗಿದೊಡನೆ ನಾನು ಮುಂಬಾಯಿಗೆ ಹಿಂತಿರುಗುವೆನು' ಎಂದರು. ಮಿರಾಬೆನ್ನರು ಅಲ್ಲಹಾಬಾದ್, ಆಗ್ರಾ ಮೊದಲಾದ ಪ್ರಾಂತ್ಯಗಳಿಗೆ ಹೋಗಿ ಬೇಗನೇ ಮುಂಬಾಯಿಗೆ ಹಿಂತಿರುಗಲಿರುವರು. ಶಾಯಿದೆಭಂಗವಾದೊಡನೆ ಅವರನ್ನು ಸೆರೆಯಲ್ಲಿಡುವರೆಂದೂ ಅಂದಾಜು ಮೇರೆಗೆ ಊಹಿಸಲ್ಪಟ್ಟಿದೆ.

* * *

ಫ್ರೆಂಚ್ ಸಬ್‌ಮೆರಿನು ಮುಳುಗಿತು

ಫ್ರಾನ್ಸಿನ ಚೆರ್‌ಬೋರ್ಗ್ ಎಂಬಲ್ಲಿ "ಪ್ರೊಮಿತೀ' ಎಂಬ ದೊಡ್ಡ (ಸಬ್‌ಮೆರಿನು) ಜಲಾಂತರ್ಗಾಮಿ ನಾವೆಯು ಅಕಸ್ಮಾತ್ ಮುಳುಗಿತು. ೬೨ ಮಂದಿಗಳು ನೀರಿನ ವಶವಾದರು. ಪ್ರೊಮಿತಿಯು ತನ್ನ ಪ್ರಥಮ ಪ್ರಯಾಣವನ್ನು ನೀರೊಳಗಿಂದ ಮಾಡಲು ಹೊರಟಿತು. ಅದು ಮುಳುಗುವಾಗ ಅದರ ಎದುರು ಭಾಗದಿಂದ ನೀರು ಒಳಗೆ ಸೇರಿತು. ಅದರ ಎಂಜಿನುಕೋಣೆಗೆ ನೀರು ಹೊಕ್ಕು ಎಂಜಿನು ಮೊದಲು ಸ್ತಬ್ಧವಾಯಿತು. ಒಡನೆ ಅನೇಕ ಸಾವಿರ ಗಜಗಳಡಿಯಲ್ಲಿ ನೀರೊಳಗೆ ಮುಳುಗಿ ಬಿಟ್ಟಿತು. ಲೆಫ್ಟಿನೆಂಟ್ ಡುವೇನಿಸ್‌ನಿಲ್ ಎಂಬವರೂ ಮತ್ತೆ ೬ ಜನರೂ ಈಜಾಡುತ್ತಿರುವಾಗ ಒಂದೆರಡು ದೋಣಿಗಳ ಮೂಲಕ ರಕ್ಷಿಸಲ್ಪಟ್ಟರು. 'ಡೂಸ್ಲೊ' 'ಅಟ್ಲಾಂಟಿಕ್ವೋ' ಎಂಬ ಸ್ಟೀಮರುಗಳು ಸಬ್‌ಮೆರಿನು ಮುಳುಗಿದ ಸ್ಥಳವನ್ನು ಕಂಡುಹಿಡಿಯಲೆತ್ನಿಸುತ್ತಲಿವೆ. ವಿಮಾನಗಳೂ ದೋಣಿಗಳೂ, ಮುಳುಗಿದ ಸಬ್‌ಮೆರಿನಿನ ಚಿಹ್ನೆಯನ್ನು ಹುಡುಕುತ್ತಲಿವೆ. ಸಮುದ್ರದಲ್ಲಿ ಕೆಲವು ಕಡೆಗಳಲ್ಲಿ ನೀರ ಮೇಲೆ ಎಣ್ಣೆಯು ತೇಲಾಡುತ್ತಿರುವುದರಿಂದ ಅದನ್ನು ಕಂಡುಹಿಡಿಯುವುದು ಸುಲಭವೆಂದು ತಿಳಿಯಲ್ಪಟ್ಟಿದೆ. ೬೨ ಮಂದಿಗಳ ಆಶೆ ಬಿಟ್ಟಿರುವರು. ಸರಕಾರವೂ ನೌಕಾಸೇನೆಯವರೂ ಸಹಾಯವನ್ನೀಯುತ್ತಿರುವರು. ಕಳೆದ ಜನವರಿ ೨೬ರಲ್ಲಿ ಇದೇ ಸಮುದ್ರ ಮಾರ್ಗವಾಗಿ ಹೋದ ಎಂ ೭ ಸಬ್‌ಮೆರಿನು ೬೦ ಮಂದಿಗಳೊಂದಿಗೆ ಮುಳುಗಿ ನಾಶವಾಯಿತು. ಅದರಲ್ಲಿದ್ದ ಜನರನ್ನು ಹೊರತೆಗೆಯಲಾಗಲಿಲ್ಲ. ಮೇಲಿನ ಅಪಘಾತಕ್ಕಾಗಿ ಫ್ರೆಂಚರು ದುಃಖ ಸೂಚನೆಯನ್ನು ಮಾಡುತ್ತಿರುವರು. ಪ್ರೊಮಿತಿಯು ೧೩೭೯ ಟನ್ ಭಾರವಿತ್ತು.

* * *

೧೧೨ ಜನರು ಮಡಿದರು! ೨೬೦೦ ಜನರು ಘಾಯಗೊಂಡರು!!

ಮುಂಬಾಯಿಯಲ್ಲಿ ಮೇ ೧೪ರಲ್ಲಿ ಪ್ರಾರಂಭವಾದ ಗಲಭೆಯಲ್ಲಿ ಇಷ್ಟರ ತನಕ ಒಟ್ಟು ೧೧೨ ಜನರು ಮಡಿದರೆಂದೂ ೨೬೦೦ ಜನರು ಘಾಯಗೊಂಡರೆಂದೂ ಅಂದಾಜು ಮಾಡಲಾಗಿದೆ. ಕಳೆದ ವಾರದಿಂದ ಮೊದಲ್ಗೊಂಡು ಅಲ್ಲಿ ಶಾಂತಮಯ ವಾತಾವರಣವು ಪಸರಿಸುತ್ತಿದೆ. ದ್ವಿಮತಗಳ ಮುಂದಾಳುಗಳೂ ಒಟ್ಟುಸೇರಿ ಪರ್ಮನೆಂಟ್ ಬೋರ್ಡ್ ಆಫ್ ಕೊನ್ಸಿಲಿಯೇಶನ್ ಎಂಬ ರಾಜಿ ಕೂಟವನ್ನು ಸ್ಥಾಪಿಸುವುದರಲ್ಲಿದ್ದಾರೆ. ಕಾಸಿಮ್ ಮಿಥಾರೇ ಮೊದಲಾದವರೂ ಕೂಡಾ ಸಮಾಧಾನವನ್ನು ಉಪದೇಶಿಸುತ್ತಿರುವರು. ಪುನರ್ಗಲಭೆಯ ಪ್ರೇರೇಪಕರಾಗಿಯೂ, ಭಾಗಿಗಳಾಗಿಯೂ ಕೆಲಸ ಮಾಡಿದ ೩೦ ಮಂದಿಗಳು ಕೈದು ಮಾಡಲ್ಪಟ್ಟಿರುವರು. ಒಬ್ಬ ಪಠಾಣ ಜಾತಿಯವನನ್ನು ಸೆರೆಹಿಡಿದಾಗ ಅವನ ಕೈಯಲ್ಲಿ ಒಂದು ಭಯಂಕರ ರೈಫಲ್ ಇದ್ದುದು ಕಂಡುಬಂತು. ೨೦ ಪಿಡಿಮದ್ದುಗಳೂ ದೊರೆತುವು. ಮಹಮ್ಮದೀಯ ಹುಡುಗನೊಬ್ಬನು ಒಬ್ಬ ಮಾರವಾಡಿಯ ಅಂಗಡಿಯನ್ನು ಸೂರೆಗೈಯುವುದರಲ್ಲಿ ನಿರತನಾಗಿದ್ದನು. ಅವನನ್ನು ಕೈದುಮಾಡಿ ೧೨ ಛಡಿಕೊಟ್ಟರು. ತಾ ೯ನೇ ದಿನ ನೋಡಿದಲ್ಲಿಂದ ಮುಂಬಾಯಿಯು ಸರ್ವಶಾಂತವಾಗಿದೆ. ಹೊಸದಾಗಿ ಯಾವ ಸುದ್ದಿಯೂ ಇಲ್ಲ. ಕರ್ಫ್ಯೂ ಆರ್ಡರನ್ನುಲ್ಲಂಘಿಸಿದ ಶ್ರೀ ಆರ್ ಕೆ ದಾದಾಶಂಜಿ ಎಂಬ ವಕೀಲರೊಬ್ಬರನ್ನು ಕೈದುಮಾಡಲಾಗಿದೆ. ಗಲಭೆಗೆ ಕಾರಣೀಭೂತರಾಗಿದ್ದ ೫೦ ಮಂದಿಗಳನ್ನು ಪೋಲೀಸ ಕಮಿಶನರರು ಮುಂಬಾಯಿ ಸಂಸ್ಥಾನದಿಂದಲೇ ಗಡಿಪಾರು ಮಾಡಿದರು. ಭೆಂಡಿ ಬಜಾರ್ ಕಾಲ್ಬಾದೇವಿಗಳ ಸಮೀಪ ಯಾವ ರೀತಿಯ ಗಲಾಟೆಯೂ ಇಲ್ಲ.

* * *

ಢಿಲ್ಲೀ ಜೈಲಿನಲ್ಲಿ ಗಲಭೆ!

ಕಳೆದ ವಾರಾಂತ್ಯದಲ್ಲಿ ಡಿಲ್ಲಿಯ ಜೈಲಿನಲ್ಲಿನ ಕೈದಿಗಳಲ್ಲಿ ಕೆಲವರು ಗಲಭೆಯನ್ನೆಬ್ಬಿಸಿದರು. ಗಲಭೆಯನ್ನು ನಿಲ್ಲಿಸುವ ಕೆಲಸದಲ್ಲಿ ಸಿ ಕ್ಲಾಸಿನ ೮ ಜನರಿಗೂ ಕ್ರಿಮಿನಲ್ ಕೈದಿಗಳಲ್ಲಿ ೧೧ ಜನರಿಗೂ ಜಖಂ ಮಾಡುವ ಪ್ರಸಂಗವು ಬಂದುದಿತ್ತು. ಇದರ ವಿವರ ಹೀಗಿದೆ. ತಾ ೧೧ನೇ ದಿನ ಕೆಲವು ರಾಜಕೀಯ ಕೈದಿಗಳು ತಮ್ಮ ಕೋಣೆಯಿಂದ ಇನ್ನೊಂದು ಕೋಣೆಗೆ ಪ್ರವೇಶಿಸಲೆತ್ನಿಸಿದರು. ಒಬ್ಬ ಕ್ರಿಮಿನಲ್ ಕೈದಿಯು ಎದುರಿನ ಸರಳುಗಳನ್ನು ಬಗ್ಗಿಸಿ ತುಂಡುಮಾಡಿದನು. ಇದನ್ನು ಕಂಡ ವಾರ್ಡರನೊಬ್ಬನು ಒಳಗೆ ಬಂದು ಅವರಲ್ಲಿ ಕೆಲವರಿಗೆ ಬಿಸಿ ಮಾತನ್ನು ಸುರಿದನು. ಒಬ್ಬ ಕ್ರಿಮಿನಲ್ ಕೈದಿಯು ಸಿಟ್ಟಿಗೆದ್ದು ಆ ವಾರ್ಡರನ ಮೂಗನ್ನು ಹಿಡಿದು ಸೆಳೆದು ಒಂದು ಕಲ್ಲು ಚೂರಿನಿಂದ ಅದನ್ನು ತುಂಡುಮಾಡಲು ಯತ್ನಿಸಿದನು. ಕ್ರಾಂತಿಯು ಬಾಳಲಿ ಎಂಬ ಆರ್ಭಟವಾಯಿತು. ಒಡನೆ ಜೈಲಧಿಕಾರಿಗಳು ಒಳಗೆ ಬಂದು ವಾರ್ಡರನ ಮೂಗನ್ನು ರಕ್ಷಿಸಿದರು. ಕಾನೂನುಕ್ರಮಗಳಿಗಾಗಿ ಹೋರಾಡಿದರು. ಈ ಹೋರಾಟದಲ್ಲಿ ೨೦ ಮಂದಿಗಳು ಘಾಯಗೊಂಡರು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಬಂದು ತಪ್ಪು ಮಾಡಿದವರನ್ನು ದೊಡ್ಡ ಜೈಲಿಗೆ ವರ್ಗಾಯಿಸಿದರು. ಕೋಮುವಾರು ಗಲಭೆಯಲ್ಲಿ ಮುಖ್ಯ ಪಾತ್ರವಹಿಸಿದವನೊಬ್ಬನು ತಾನು ಸರಕಾರೀ ಆಫೀಸುಗಳನ್ನು ಕೊಂದಿಕ್ಕುವೆನೆಂದು ಆರ್ಭಟಿಸಿದನು. ಅದರಿಂದಾಗಿ ಇಷ್ಟು ಗಡಿಬಿಡಿ ನಡೆಯಿತೆಂದು ತಿಳಿದುಬರುತ್ತದೆ.

* * *

೮೦೦೦ ಮೈಲು!

ಕೆಪ್ಟನ್ ಡಿ ಯೇಟ್ಸ್ ಬೆನ್‌ಯೊನ್ ಎಂಬವರು ಒಂದು ಸಣ್ಣ ಮೋಟರಿನ ಮೂಲಕ ಲಂಡನಿನಿಂದ ಕಲ್ಕತ್ತದ ವರೆಗಿನ ೮೦೦೦ ಮೈಲುಗಳನ್ನು ಭೂಮಾರ್ಗವಾಗಿ ದಾಟಲು ಯತ್ನಮಾಡುತ್ತಿರುವರು. ಬ್ರಿಟಿಷ ಇಂಡಿಯನ್ ಸ್ಟೀಮರ್, 'ಮನೋರಾ' ಎಂಬುದನ್ನು ಪ್ರತಿಭಟಿಸಬೇಕೆಂದು ಇವರ ನಿರ್ಧಾರ. ಭೂಮಾರ್ಗವಾಗಿ ಬರುವಾಗ ಇವರು ಸ್ವಿಸ್ ಮತ್ತು ಬಗ್ದಾದಿನಲ್ಲಿಯ ೫೫೦ ಮೈಲುಗಳ ಮರುಭೂಮಿಯನ್ನು ಈ ಸಾಹಸಿಯು ಹೇಗೆ ದಾಟುವರೋ ಎಂದು ಕೆಲವರು ಆಲೋಚಿಸುತ್ತಿರುವರು.

* * *

ಜಾಗ್ರತೆ! (ಈಗ ಬಂದ ವಾರ್ತೆ)

ಮುಂಬಾಯಿಯ ಗಲಾಟೆಯು ಸರ್ವಶಾಂತವಾಗಿದೆ. ರಾಜಕೂಟಗಳು ಶಾಂತತೆಗಾಗಿ ಯತ್ನಿಸುತ್ತಿವೆ. ಗವರ್ನರರನ್ನು ಕಾಸಿಮ್ ಮಿಥಾ ಮತ್ತು ಸರ್ ಇಬ್ರಾಹಿಮ್ ರಹಿಮತುಲ್ಲಾ ಎಂಬಿಬ್ಬರು ಮುಂದಾಳುಗಳು ಸಂದರ್ಶಿಸಿ ತಮ್ಮ ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಮುಂಬಾಯಿ ಸರಕಾರವು ಉದ್ರೇಕಕರ ಮತ್ತು ಅಬದ್ಧ ವಾರ್ತಾ ಪ್ರಚಾರಕಾರ್ಯವನ್ನು ತಡೆಯುವ ಇಂಗಿತದಿಂದ ಎಲ್ಲಾ ಪತ್ರಿಕೆಗಳಿಗೂ ನಿರ್ಬಂಧ ಆಜ್ಞೆಯನ್ನು ಕೊಟ್ಟಿದೆ. ಪ್ರಕ್ಷೋಭೆಯನ್ನು ಪ್ರೇರೇಪಿಸುವ ಪತ್ರಿಕಾ ಸಾಧನೆಗಳಾದರೆ ಅಂತಹ ಪತ್ರಿಕೆಗಳಿಗೆ ತಕ್ಕ ಶಿಕ್ಷೆಯಾಗುವುದೆಂದು ಪ್ರಕಟಿಸಿರುತ್ತಾರೆ.

* * *

ನಿನ್ನೆ ದಿನ ಸಂಜೆ ಹಂಪನಕಟ್ಟೆಯ ಕೇಂದ್ರ ಅಂಗಡಿಯ ಮಾರ್ಗವಾಗಿ ೧೫೪ನೇ ನಂಬ್ರದ ಖಾಲಿ ಕಾರುಗಾಡಿಯನ್ನು ಅದರ ಚಾಲಕನು ತೇರುಬೀದಿಯ ಕೋಮಲ ವಿಲಾಸದ ವರೆಗೆ ಸಂಗಾಲಾಟೋಟಿ ಏಂದೆ ಓಡಿಸಿದನು ಅವನ ಗಾಡಿಯು ಓಡುತ್ತಿರುವ ರಭಸವನ್ನು ನೋಡಿ, ಅದು ಎಲ್ಲಿಯಾದರೂ, ಯಾರ ಮೇಲಾದರೂ ಬೀಳಬಹುದೆಂದು ಭಾವಿಸಿ, ಲೆಕ್ಕವಿಲ್ಲವಷ್ಟು ಜನರು ಅದರ ಹಿಂದೆಯೇ ಓಡುತ್ತಾ ಹಾಹಾಕಾರವನ್ನೆಬ್ಬಿಸುತ್ತಿದ್ದರು. ಶ್ಯಾಮರಾವ್ ಮೂಸಿನ ವಕೇಟನ ಬಳಿ ಪೋಲೀಸ್ ಸಾರ್ಜಂಟನು ನಿಂತಿದ್ದುದರಿಂದ ಅವರು ಗಾಡಿ ಚಾಲಕನನ್ನು ಚಾರ್ಜು ಮಾಡಿದರು ಶರಾಯಿಗೂ ಗಾಡಿಚಾಲಕನಿಗೂ ಸಂಬಂಧವಾದರೆ ಇದೇ ಗತಿಯೆಂದು ಎಲ್ಲಾ ಗಾಡಿಗಾರರೂ ತಿಳಿದಿರಲಿ

ಇಲ್ಲಿಗೆ ಪೋಲೀಸ್ ಐ ಜಿ ಇವರು ಬಂದಿರುವರು

ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ ಇವರು ನಿನ್ನೆ ದಿನದ ಮೈಲ್ ಬಂಡಿಯಲ್ಲಿ ಮಂಗಳೂರಿಗೆ ತಲಪಿರುವರು. ಅವರನ್ನು ರೈಲ್ವೇ ಪ್ಲೇಟ್‌ಫೋರ್ಮಿನಲ್ಲಿ ಇಲ್ಲಿಯ ಕಾಲೇಜುಗಳ ಪ್ರಿನ್ಸಿಪಾಲರೂ ಡಿ ಇ ಓ ಇವರೂ, ಕೆನರಾ ಹೈಸ್ಕೂಲ್ ಮೊದಲಾದ ಶಾಲೆಗಳ ಮುಖ್ಯೋಪಾಧ್ಯಾಯರೂ ಮೇನೇಜರರೂ ಸ್ವಾಗತಿಸಿದರು ಡೈರೆಕ್ಟರು ಈ ದಿನ ಶಾಲೆಗಳ ಸಂದರ್ಶನಕ್ಕೆ ತೊಡಗಿರುವರು

ಇಲ್ಲಿಯ ಶ್ರೀ ಕೃಷ್ಣ ಸಿನೆಮಾದಲ್ಲಿ ನಿನ್ನೆಯಿಂದ ಸಿನೆಮಾ ನಟನೆಯಲ್ಲಿ ಲೋಕಪ್ರಖ್ಯಾತನಾದ ಸಾಲ್ಗೋ ಕಿಂಗ್ ಎಂಬವನಿಂದ ಅಭಿನಯಿಸಲ್ಪಟ್ಟ 'ದಿ ಡೆಸ್ಪರೇಟ್ ಡೇರ್‌ಡೆವಿಲ್' ಎಂಬ ಚಲಚಿತ್ರವು ಪ್ರದರ್ಶಿಸಲ್ಪಡುತ್ತಿದೆ ಚಲಚಿತ್ರಗಳಲ್ಲಿ ಇದು ಅಗ್ರಗಣ್ಯವಾಗಿರುವುದಂತೆ ಇದರಲ್ಲಿ ನಟನು ಮಾಡಿತೋರಿಸುವ ಅಂಗಸಾಧನೆಗಳು ಅಪ್ರತಿಹತವಾದುವುಗಳು

ತಾ ೨೪ನೇ ಮೊದಲ್ಗೊಂಡು ಪ್ರಚಂಡ ಪ್ರಹಸನಗಾರನಾದ ಬಸ್ಟರ್ ಕೀಟನ್ ಎಂಬವನಿಂದ ಅಭಿನಯಿಸಲ್ಪಟ್ಟ 'ಸ್ಪಾಯಿಟ್ ಮೆರೀಜ್' ಎಂಬ ಉಜ್ವಲ ಚಿತ್ರವು ಪ್ರದರ್ಶಿಸಲ್ಪಡುವುದು

ಮಂಗಳೂರು ಮುನಿಸಿಪಾಲಿಟಿ ಕೌನ್ಸಿಲರೂ, ಮಂಗಳೂರು ತಾಲೂಕು ಬೋರ್ಡು ಮೆಂಬರರೂ, ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಂ ವಿದ್ಯಾಸಂಘದ ಸೆಕ್ರೆಟರಿಯವರೂ ಆದ ಜನಾಬ್ ಎಂ. ಕಾಂಚಂಬು ಸಾಹೇಬ್ ಬಹದೂರರು ಮಂಗಳೂರು ತಾಲೂಕು ಬೋರ್ಡಿನ ಬರುವ ಚುನಾವಣೆಯಲ್ಲಿ ಕುರ್ನಾಡು ಸರ್ಕಲಿಗೆ ಉಮೇದ್ವಾರರಾಗಿ ನಿಲ್ಲುವರು

ಅಜೆಕಾರು:— ಇಲ್ಲಿಯ ಶ್ರೀಮಂತರಾದ ಶ್ರೀ ದೇವರಾಜ ಹೆಗ್ಡೆರು ನರಸಿಂಹ ರಾಜಪುರದಲ್ಲಿ ಒಂದು ಜೈನ ಮಠವನ್ನೂ ಬಸ್ತಿಯನ್ನೂ ಜೀರ್ಣೋದ್ಧಾರಮಾಡಿಸಿ, ಧಾಮ ಸಂಪ್ರೋಕ್ಷಣೆಯನ್ನು ಅತಿ ವೈಭವದಿಂದ ನೆರವೇರಿಸಿದುದಕ್ಕಾಗಿ ಮೈಸೂರು ಜೈನ ಕ್ಷೇತ್ರ ಕಮಿಟಿಯವರೂ ಮತ್ತು ಜೈನ ಎಸೋಸಿಯೇಶನ್ ಸಂಘದವರೂ ಒಂದು ಅಭಿನಂದನ ಪತ್ರಿಕೆಯನ್ನೂ ಪುರಸ್ಕಾರವಾಗಿ ಪುಷ್ಪಹಾರ ಮತ್ತು ತುರಾಯಿಯನ್ನೂ ಕೊಟ್ಟು ಸನ್ಮಾನಿಸಿರುವುದು ಅತಿ ಪ್ರಶಂಸನೀಯವೇ ಸರಿ ಶ್ರೀ ಹೆಗ್ಗಡೆಯವರು ಇಂಥಾ ಧರ್ಮಕಾರ್ಯಗಳಲ್ಲಿ ಇನ್ನೂ ನಿರತರಾಗುವಂತೆ ಶ್ರೀ ಜ್ವಾಲಾಮಾಲಿನಿದೇವಿಯು ಸದಾ ಕರುಣಿಸಿ ಪ್ರೇರೇಪಿಸಲಿ! ಆಗ ಶ್ರೀ ಹೆಗ್ಗಡೆಯವರಿಗೂ ಊರಿಗೂ ಕೀರ್ತಿಯಲ್ಲವೇ?

ಪ್ರಕೃತ ಈಗ ಎಲ್ಲಿಯೂ ಇಲ್ಲದ ಜಾನುವಾರು ರೋಗವು ಇಲ್ಲಿ ತಲೆದೋರಿದೆ ತತ್ಸಮ್ಮಂದ ಮಂಗಳೂರು ವೆಟಿನರಿ ಡಾಕ್ಟರರು ಬಂದು ತಕ್ಕ ಚಿಕಿತ್ಸೆಯನ್ನು ಮಾಡಿ ಹಿಂತೆರಳಿರುವರು.

ರೇಂಜ್ ಸಂದರ್ಶನೆಗೋಸ್ಕರ ಉಡುಪಿ ಸರ್ಕಲ್ ಎಕ್ಸೈಜ್ ಇನ್ಸ್‌ಪೆಕ್ಟರರು ಇಲ್ಲಿ ಮೊಕ್ಕಾಂಮಾಡಿದರು.

ಶೀಘ್ರದಲ್ಲೇ ಅಜೆಕಾರ ಸರ್ಕಲಿನ ಪರವಾಗಿ ಜರಗಲಿರುವ ತಾಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಉಮೇದ್ವಾರರು ಚುನಾವಣೆಯಲ್ಲಿ ಉತ್ತೀರ್ಣರಾಗುವಂತೆ ತಕ್ಕ ಪೂರ್ವ ಸಿದ್ಧತೆಗಳನ್ನು ಮಾಡಲು ಈಗಲೇ ಪ್ರಾರಂಭವಾಗಿದೆ

ಸ್ಥಳೀಕ ಶಾಲೆಯ ಮಳೆಗಾಲದ ರಜೆಮುಗಿದು ತಾ ೧೮ ೭ ೩೦ರಿಂದ ಪ್ರಾರಂಭವಾಗಿರುವುದು

ಉಡುಪಿ:— ಶ್ರೀ ಪೇಟೆ ಕಲ್ಯಾಣಜಿ ಸೇಟರ ಜವಳಿ ಅಂಗಡಿಯ ಪಹರೆಯು ತಾ ೧೭ಕ್ಕೆ ನಡೆಯಿತು ಮೂರು ಸಲ ಬಂದರ ಮೇಲೊಂದು ಪಹರೆಯು ನಡೆದು ಎಲ್ಲಾ ದೇಶಸೇವಿಕೆಯರಾ ನಾಲ್ಕು ಜನ ಸ್ವಯಂಸೇವಕರೂ ಕೈದುಮಾಡಲ್ಪಟ್ಟು ಮರುದಿನ ಬಿಡುಗಡೆ ಮಾಡಲ್ಪಟ್ಟಿರುವರು.

ತಾ ೧೮ನೇ ದಿನವೂ ಪಹರೆಗೆ ಹೊರಟವರನ್ನು ಕೈದುಮಾಡಿ ಮರುದಿನ ಬಿಡುಗಡೆ ಮಾಡಿರುವರು.

ತಾ ೨೦ನೇ ದಿನವೂ ಪಹರೆಯೂ ಕೈದುಗಳೂ ನಡೆದುವು ಶ್ರೀ ಸೇಟರು ಕಳೆದ ರಾತ್ರೆಯವರದಲ್ಲಿ ವಿಂಗಡಿಸಿ ಮೊಹರು ಮಾಡಿದ್ದ ಪರದೇಶಿ ವಸ್ತ್ರವಿಕ್ರಯವೇ ಆರಂಭವಾಗಿರುವುದಂತೆ ಇಲ್ಲಿ ಶ್ರೀ ಸೇಟರ ಅಂಗಡಿಯನ್ನು ಬಹಿಷ್ಕರಿಸಬೇಕೆಂದು ಕಾಂಗ್ರೆಸ್ ಪ್ರಕಟನಾಪತ್ರಗಳು ಸ್ವಯಂಸೇವಕರಿಂದ ಹಂಚಲಾಗಿವೆ

ಒಂದು ವಾರಕ್ಕೆ ಮೇಲ್ಪಟ್ಟು ಮಳೆಯು ಅತಿ ವಿರಳ ಬಿಸಿಲೂ ಸೆಕೆಯೂ ಇದೆ ಶೀತ ಜ್ವರ ಮೊದಲಾದ ರೋಗಗಳಿಗೂ ಕಡಿಮೆಯೇ ಇಲ್ಲ

ಕಾಸರಗೋಡು— ತಾ ೧೦ರಲ್ಲಿ ಬಂದ್ಯೋಡು ರಿಸರ್ವ್ ಕಾಡಿಗೆ ಹೋಗಿ ಜಂಗ್ಲಿ ಕಾನೂನನ್ನು ಉಲ್ಲಂಘಿಸಿದ ಸ್ವಯಂಸೇವಕರಿಂದ ಕತ್ತಿ ಮತ್ತು ರಾಷ್ಟ್ರಧ್ವಜಗಳನ್ನು ಸೆಳೆದು ಹೊಳೆ ವರೆಗೆ ಕೊಂಡುಹೋಗಿ, ಹಿಂತಿರುಗಿಸಿ ಅಲ್ಲಿಯೇ ಬಿಟ್ಟುಬಿಟ್ಟರು ಕಾಡಾಯಿ ಸ್ವಯಂಸೇವಕರು ತಾ. ೧೧ರಲ್ಲಿ ಪುನಹಾ ಕೆಲವು ಮರಗಳನ್ನು ಕಡಿದರು ಇಷ್ಟರಲ್ಲಿ ಕಾಸರಗೋಡಿನಿಂದ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರು ಕೆಲವು ಪೋಲೀಸರೊಂದಿಗೆ ಲಾಠಿ ಬೆತ್ತಗಳೊಡಗೂಡಿ ಹೋಗಿ ಸ್ವಯಂಸೇವಕರನ್ನು ಗದರಿಸಿ ಪುನಹಾ ಕೈದುಮಾಡದೆ ಅಲ್ಲಿಯೇ ಬಿಟ್ಟುಬಿಟ್ಟರು ಮರುದಿನ ತಾ. ೧೨ರಲ್ಲಿ ಕೆಲವು ಮರಗಳನ್ನು ಕಡಿದ ಕೂಡಲೇ ಸ್ಪೆಶಲ್ ರೇಂಜ್ ಆಫೀಸರರು ಅವರನ್ನೆಲ್ಲಾ ಕರೆದುಕೊಂಡು ಮುಳಿಯಾರದಲ್ಲಿ ಕೇಂಪು ಮಾಡಿರುವ ಡಿ ಫೋರೆಸ್ಟ್ ಆಫೀಸರರ ಮುಂದೆ ಹಾಜರುಪಡಿಸಲಾಗಿ ಸ್ವಯಂಸೇವಕರಿಗೆ ಆಫೀಸರರು ಬುದ್ಧಿವಾದಗಳನ್ನು ಹೇಳಿ ಅವರೆಲ್ಲರನ್ನೂ ಸಾಯಂಕಾಲ ಕಾಸರಗೋಡಿಗೆ ತಂದು ಬಿಟ್ಟುಬಿಟ್ಟರು. ತಾ ೧೬ರಲ್ಲಿ ಶ್ರೀ ಸುಬ್ರಾಯ ಪ್ರಭುಗಳ ನೇತೃತ್ವದಲ್ಲಿ ಅದೇ ಕಾಡಿಗೆ ಹೋಗಿ ಜಂಗ್ಲಿ ಕಾನೂನನ್ನುಲ್ಲಂಘಿಸಿದ ದಳವೊಂದನ್ನು ಹಿಡಿದು ಡಿ ಫೋರೆಸ್ಟ್ ಆಫೀಸರರ ಮುಂದೆ ಹಾಜರುಪಡಿಸಲಾಗಿ, ಎಚ್ಚರಿಸಿಬಿಟ್ಟ ಕಾರಣ ಅವರೆಲ್ಲಾ ಮುಳಿಯಾರು ಹಿರಿಯುಳ್ಳ ರಿಸರ್ವ್ ಕಾಡಿಗೆ ಹೋಗಿ ಗ್ರಾಮಸ್ಥರ ಸಹಕಾರದಿಂದ ಸುಮಾರು ನೂರೈವತ್ತಕ್ಕೆ ಮಿಕ್ಕಿ ಮರಗಿಡಗಳನ್ನು ಕಡಿದರಂತೆ. ಶ್ರೀಯುತರುಗಳಾದ ಬಿ ಸುಬ್ರಾಯನಾಯಕ್, ಕೆ ಗೋವಿಂದ ಪೈ, ಮತ್ತು ಎ. ಕೃಷ್ಣನ್ ನಾಯರ್, ಇವರು ಮೂವರನ್ನು ತಾ ೧೮ರಲ್ಲು ಕಾಸರಗೋಡಿಗೆ ತಂದು ಬಿಟ್ಟುಬಿಟ್ಟರು.

ಶಾಲಿವಾಹನ ಶಕ ೧೮೫೪ನೆಯ ಅಂಗೀರಸ ಸಂವತ್ಸರದ ಆಷಾಢ ಬ ೬ ಶನಿವಾರದಿಂದ ಅಂಗೀರಸ ಸಂವತ್ಸರದ ಆಷಾಢ ಬ ೧೧ ಶುಕ್ರವಾರದ ವರೆಗಿನ ಪಂಚಾಂಗ

(ಸೌರಮಾನದ ಕರ್ಕಾಟಕ—ಆಟಿ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಅಸ್ತ
23	ಶನಿ	೬	೫೯,೩೨	ಉ ಭಾ	೪೪ ೨	೯	6 15	6 58
24	ರವಿ	೭	೬೦ ೦	ರೇವತೀ	೫೯ ೪೬	೧೦	6 6	6 58
25	ಸೋಮ	೭	೪ ೨	ಅಶ್ವಿನೀ	೫೬ ೨	೧೧	6.16	6 57
26	ಕುಜ	೮	೮ ೪೬	ಭರಣೀ	೬೦ ೦	೧೨	6 16	6.57
27	ಬುಧ	೯	೧೩ ೪೪	ಭರಣೀ	೧ ೩೪	೧೩	6.16	6 57
28	ಗುರು	೧೦	೧೮,೧೬	ಕೃತ್ತಿಕಾ	೮ ೫೨	೧೪	6 17	6 57
29	ಶುಕ್ರ	೧೧	೨೨ ೧	ರೋಹಿಣೀ	೧೪ ೨	೧೫	6 17	6 56

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature ಉಷ್ಣ (ಕಾವು) Maximum ಪರಮಾವಧಿ		Minimum ಅಲ್ಪಾವಧಿ		Rainfall ಮಳೆ ದಿನದ ಮಳೆ	ಜುಮ್ಲಾ ಮಳೆ
15	84—	7	74—	5	0 - 82	—
16	85—	1	75—	8	0—25	—
17	85—	9	77—	8	0 12	—
18	85—	7	77—	3	0—18	—
19	86—	1	77—	7	0—10	—
20	86	2	79	7	—	—
21	84 —	9	73	9	0—40	65-80

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ	ಅ	ವರೆಗೆ ರೂ	ಅ
ರಾಶಿ ಅಕ್ಕಿ	3 —	8	4 —	2
ಮುಷ್ಟಿ	4 —	8	—	
ಗುಡ್ಡೆ	4 —	0	4 —	6
ಸುಗ್ಗಿ	3 —	1	4 —	
ಊರ ಅವ್ವಲ್ ಬೆಲ್ತಿಗೆ	4 —	8	6 —	9
ರಂಗೂನು ಬೆಲ್ತಿಗೆ ಗೋಣಿ ೧ಕ್ಕೆ	8 —	0	8 —	4
ಎಲ್ಲೂರು ಬೆಲ್ತಿಗೆ ಮುಡಿ ೧ಕ್ಕೆ	4 —	0	4 —	12
ಗೋಧಿ ಗೋಣಿ ೧ಕ್ಕೆ	11 —	8	14 —	8
ತೊಗರಿ ಗೋಣಿ ೧ಕ್ಕೆ	12 —	0	12 —	8
ಹುರುಳಿ ಗೋಣಿ ೧ಕ್ಕೆ	6 —	2	7 —	4
ಕಡಲೆ ಗೋಣಿ ೧ಕ್ಕೆ	8 —	8	12 —	8
ತೊಗರಿಬೇಳೆ ಗೋಣಿ ೧ಕ್ಕೆ	13 —	8	21 —	0
ಉದ್ದು ಗೋಣಿ ೧ಕ್ಕೆ	11 —	8	8 —	0
ಹೆಸರು ಗೋಣಿ ೧ಕ್ಕೆ	10 —	4	11 —	
ಊರು ಬೆಲ್ಲ ಖಂಡಿ ೧ಕ್ಕೆ	3 —	0	35 —	0
ಉಪ್ಪು ಗೋಣಿ ೧ಕ್ಕೆ	5 —	8	5 —	14
[illegible] ಖಂಡಿ ೧ಕ್ಕೆ	66		72 —	
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	29 —	8	30 —	1
ಎಳ್ಳಿಂಡಿ ಖಂಡಿ ೧ಕ್ಕೆ	26 —	4	26 —	18
ಕೊಬ್ರಿ ಎಣ್ಣೆ ಮಣ ೧ಕ್ಕೆ	5 —	8	6 —	8
ಎಳ್ಳೆಣ್ಣೆ ಮಣ ೧ಕ್ಕೆ	6 —	12	7 —	0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	4 —	7	8 —	12
ಮಾರಿಷಸ್ ಸಕ್ಕರೆ ಮಣ ೧ಕ್ಕೆ	4 —	2	4 —	3
ಹೊಸ ಮೆಣಸು	4 —	0	5 —	0
ಸಾಸಿವೆ ಮುಡಿ ೧ಕ್ಕೆ	6 —	4	6 —	8
ಪೇಟೆಂಟ್ ಕಾಫಿ ಖಂಡಿ ೧ಕ್ಕೆ	270 —	0	300 —	
ಕಾಳುಮೆಣಸು ಖಂಡಿ ೧ಕ್ಕೆ	170 —	0	180 —	
ಮೆಂತ್ಯೆ ಮಣ ೧ಕ್ಕೆ	27 —	0	28 —	
ಗೇರುಬೀಜ ಮುಡಿ ೧ಕ್ಕೆ	2 —	12	3 —	0
[illegible] ಖಂಡಿ ೧ಕ್ಕೆ	30 —	0	35 —	8
ತಾಮ್ರ ತಗಡು ಮಣ ೧ಕ್ಕೆ	12 —	8	13 —	0
ತಾಮ್ರ ಪಾತ್ರೆಗಳು ಮಣ ೧ಕ್ಕೆ	15 —	0	16 —	0
ಹಿತ್ತಾಳೆ ಸೀಸು ೧ಕ್ಕೆ	14 —	4	14 —	12
ಹಿತ್ತಾಳೆ ತಗಡು ಮಣ ೧ಕ್ಕೆ	12 —	0	12 —	8
ಪವನು ೧ಕ್ಕೆ	17 —	14	17 —	14
[illegible] ಖಂಡಿ ೧ಕ್ಕೆ	40 —		—	
[illegible] ಖಂಡಿ ೧ಕ್ಕೆ	330 —		—	
ಹಳೆ ಅಡಿಕೆ	150 —		205 —	
ಹೊಸಅಡಿಕೆ	140 —		145 —	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ.ವ. 1 30ಕ್ಕೂ ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4 30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕನ್ನನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ 4½ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಪೂರ ಗೋವಾ ಲೋಂಡ ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ 37 ಪೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾಪನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರು, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. **ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.**

Secretary,
The Canara Public Conveyance Company Ltd., Mangalore

ಥೋಮಸ್ ಬಾಟಾನ ಮರಣ!

ಲೋಕವಿಖ್ಯಾತ ಧನಿಕ — ಸಾಹಸಿ — ಗುಣಾಢ್ಯ.

ಕೆಲವರು ತಮ್ಮ ಸ್ವಂತ ಸಾಹಸದಿಂದಲೂ, ಕೆಲವರು ಇತರರ ಸಹಾಯದಿಂದಲೂ, ಮತ್ತೆ ಕೆಲವರು ಅದೃಷ್ಟದ ಶಕ್ತಿಯಿಂದಲೂ ಥಟ್ಕನೆ ಉತ್ತಮ ಪದವಿಗೇರುವಂತಹುದು ಲೋಕದಲ್ಲಿ ಕಾಣುತ್ತಿದೆ. ಅನೇಕರಿಗೆ ಸ್ವಸಾಮರ್ಥ್ಯದ ಮೇಲೆ ಭರವಸೆಯಿರುವುದಿಲ್ಲ; ಕೆಲವರಿಗೆ ಭರವಸೆಯಿದ್ದರೂ, ಅದನ್ನು ಕಾರ್ಯರೂಪವಾಗಿ ತೋರಿಸಲು ಚೈತನ್ಯವಿರುವುದಿಲ್ಲ ಕೆಲವರಿಗೆ ಅಂತಹ ಚೈತನ್ಯವಿದ್ದರೂ ಅದನ್ನು ಹೊರಗೆ ಪ್ರಕಾಶಪಡಿಸಲಿಕ್ಕೆ ಮನಸ್ಸೂ ಧೈರ್ಯವೂ ಉಂಟಾಗುವುದಿಲ್ಲ. ಮತ್ತೆ ಕೆಲವರಿದ್ದಾರೆ, ಅವರಿಗೆ ಯಾರ ಯಾವ ಒಲವೂ ಆಗತ್ಯವಿರುವುದಿಲ್ಲ. ತಮ್ಮ ಸ್ವಂತ ಸಾಹಸದಿಂದ, ತಮ್ಮ ಸ್ವಂತ ಕಲ್ಪನಾಶಕ್ತಿಯ ಬಲದಿಂದ ಅವರು ತಮ್ಮ ತಮ್ಮ ಜೀವನಮಾರ್ಗವನ್ನು ವಿಜಯಶಾಲಿಗಳಾಗಿ ಕಂಡುಹಿಡಿಯುವರು ಅವರಿಗೆ ಜೀವನವೆಂಬುದು ನೀರು ಕುಡಿದಂತೆ! ಕಷ್ಟಗಳು ಅವರನ್ನು ಹಿಂದೆ ದೂಡಲೆಡೆಯಿಲ್ಲ. ಅವುಗಳಿಗೆ ಅವರು ಹೆದರುವುದೂ ಇಲ್ಲ, ಬೆದರುವುದೂ ಇಲ್ಲ ತಮ್ಮ ಧ್ಯೇಯಸಾಧನೆಯಾಗದೆ ಅವರು ವಿಶ್ರಮಿಸುವುದೇ ಇಲ್ಲ ತಮ್ಮ ಕಲ್ಪನಾಶಕ್ತಿಯು ಎಷ್ಟು ಭರದಿಂದ ಮುಂದೋಡುತ್ತದೆಯೋ, ಅಷ್ಟೇ ರಭಸದಿಂದ ಅವರ ಕಾರ್ಯರೂಪದ ಸಾಹಸವೂ ಮುಂದೋಡುತ್ತದೆ ಅವರಿಗೆ ತಮ್ಮ ವಿಜಯಪತಾಕೆಯು ನಡುದಾರಿಯಲ್ಲಿ ಕಾಣುವುದೇ ಇಲ್ಲ. ತಮ್ಮ ಧ್ಯೇಯವು ಪೂರ್ತಿಯಾಗದೆ, ಮಧ್ಯೆ ಸಿಗುವ ಜಯಾಪಜಯಗಳಿಂದ ಅವರು ಸಂತುಷ್ಟರಾಗರು ಇಂತಹವರ ಜೀವನವು ಸುಮನೋಹರವಾದುದು—ಸೌಮ್ಯವಾದುದು—ಶ್ರೇಯಸ್ಕರವಾದುದು ಇಂತಹ ಧೀರ, ವೀರ, ವಿಭೂತಿ ವ್ಯಕ್ತಿಗಳು ಕೆಲವರ ಕುರಿತು ನಾವು ನಮ್ಮ ಹಿಂದಿನ ಕೆಲವು ಸಂಚಿಕೆಗಳಲ್ಲಿ ಉಲ್ಲೇಖಿಸಿದ್ದೇವೆ

ಜೀವನದ ವಿಜಯಮಾಲೆಯನ್ನು ಹೊಂದಬೇಕೆಂಬ ಪ್ರತಿಭಾಸಂಪನ್ನನಿಗೆ, ಧೀರಾಳುವಿಗೆ ಬಡತನವು ಒಂದು ವಿಘ್ನರೂಪದ ಬೇಲಿಯಲ್ಲ—ಅನಾನುಕೂಲತೆಗಳು ನೆವಗಳಲ್ಲ—ಅವನಿಗೆ ಅವನ ಮನೋದಾರ್ಢ್ಯವೇ ಸರ್ವಾನುಕೂಲತೆಗಳನ್ನೊದಗಿಸಿಕೊಡುವ ಕಾಮಧೇನು '(ಬಡವನಾಗಿ ಹೋದೆ, ಕಲ್ಲದಿದ್ದರೆ ನನ್ನ ಸಾಹಸವನ್ನು ನೋಡಬೇಕಿತ್ತು, ಕೈಯಲ್ಲಿ ಕಾಸಿಲ್ಲ ಮನಸ್ಸೆಲ್ಲಾ ಉಂಟು, ಏನು ಮಾಡುವುದು ಈಗ ತಕ್ಕ ಸಮಯವಲ್ಲ"ವೆಂಬ ಪೊಳ್ಳು ನೆವಗಳನ್ನೆತ್ತಿಹಿಡಿದು ಜೀವಧಾರಣೆಯನ್ನು ಮಾಡುವವನು ಅವನಲ್ಲ

೧೯೩೨ನೇ ಇಸವಿಯು ಮಹಾ ಧನಿಕರ ಮೃತ್ಯು ಸಮಯವೋ ಏನೋ! ಇದೇ ಮಾರ್ಚಿ ೧೨ರಲ್ಲಿ ಸ್ವೀಡನ್ ಬೆಂಕಿಪೆಟ್ಟಿಗೆ ಕಾರ್ಖಾನೆಯ ಮಿಲಿಯಾಧಿಪತಿ ಐವಾರ್ ಕ್ರೂಗರ್ ಎಂಬವನು ಗುಂಡಿನಿಂದ ಪ್ರಾಣತ್ಯಾಗ ಮಾಡಿದನು ಅವನಂತೆ ಕೋಡಕ್ ಫಿಲ್ಮ್ ಕಂಪೆನಿಯ ಮಿಲಿಯಾಧಿಪತಿ ಜೋರ್ಜ್ ಈಸ್ಟ್‌ಮೆನ್ ಎಂಬವನು "ನನ್ನ ಕೆಲಸವು ಮುಗಿಯಿತು ನಾನಿನ್ನು ಏಕೆ ನಿಲ್ಲಲಿ?" ಎಂದು ಕಾಗದವನ್ನು ಬರೆದಿಟ್ಟು ಪ್ರಾಣತ್ಯಾಗ ಮಾಡಿದನು ಲಿಪ್ಟನ್ ಚಹಾ ವರ್ತಕನಾಗಿ ಸಹಸ್ರ ಕಾರ್ಖಾನೆಗಳನ್ನು ನಡೆಸುತ್ತಿದ್ದ ಥೋಮಸ್ ಲಿಪ್ಟನ್ ಎಂಬವನೂ ತೀರಿಕೊಂಡನು ಇದೇ ತಾ ೧೨ನೇ ದಿನ ಪ್ರಪಂಚದ ಜನರಿಗೆ ಪಾದರಕ್ಷೆಗಳನ್ನು ತನ್ನ ಸಾವಿರಾರು ಕಾರ್ಖಾನೆಗಳಿಂದ ಒದಗಿಸಿ ಕೊಟ್ಟು ಮಿಲಿಯಾಧಿಪತಿಯೂ ಗುಣಾಢ್ಯನೂ ಎಂದು ಹೊಗಳಲ್ಪಟ್ಟ ಥೋಮಸ್ ಬಾಟಾ ಎಂಬ ಮಧ್ಯ ಯುರೋಪಿನ ವಿಖ್ಯಾತಪುರುಷನು ತಾನು ವಿಮಾನವನ್ನು ಹಾರಿಸುತ್ತಿದ್ದಾಗ, ವಿಮಾನ ಸಹಿತ ಕೆಳಬಿದ್ದು ಮೃತಿಯನ್ನೈದಿದನು ಇವನ ಕುರಿತು ಉಲ್ಲೇಖಿಸುವ

ಮಧ್ಯ ಯುರೋಪ್ ದೇಶದ ಮೊರೇವಿಯಾದಲ್ಲಿ ಮುಕುಟರಹಿತ ನೃಪತುಂಗನೆಂದರೆ ಥೋಮಸ್ ಬಾಟನೇ ಕೆಲವರು ಅವನನ್ನು ಬಾಟ್ಯಾ ಎಂದು ಕರೆಯುವುದೂ ಉಂಟು ಈತನು ತನ್ನ ಎಳೆ ಪ್ರಾಯದಲ್ಲಿ ಬಡವನೂ, ಮೋಚಿಗಾರನೂ ಆದ ತನ್ನ ತಂದೆಯೊಡನೆ ಕೆಲಸಮಾಡುತ್ತಿದ್ದನು. ಅನ್ಯವೃತ್ತಿಯಿಂದ ದೊರೆತ ಮಜೂರಿಯಿಂದ ಬದುಕಿದನು ಕ್ರಮೇಣ ಥೋಮಸನು ಮೋಚಿ ವ್ಯಾಪಾರದ ಗುಟ್ಟನ್ನರಿತುಕೊಂಡನು ಮೊದಲು ಪರರ ಅಂಗಡಿಗಳಲ್ಲಿ ಕೆಲಸ ನಡೆಸುತ್ತಿದ್ದವನು, ಕೆಲವು ವರ್ಷಗಳ ನಂತರ ಸ್ವಂತ ಅಂಗಡಿಗಳನ್ನು ಸ್ಥಾಪಿಸಿ ಕಾಲಹರಣಮಾಡಿದನು. ಕಾಲವಶಾತ್, ಅವನ ಅಂಗಡಿಗಳಲ್ಲಿ ಆಗುತ್ತಿದ್ದ ಪಾದರಕ್ಷೆಗಳು ಸರ್ವರಿಂದಲೂ ಸ್ವೀಕಾರಾರ್ಹವಾದುವು ಅವನ ವ್ಯಾಪಾರ ವ್ಯವಹಾರವು ಹೆಚ್ಚಿತು ಕೆಲವು ಸಮಯದಲ್ಲೇ ಮೊರೇವಿಯದ ಜ್ಲಿನ್ ಎಂಬ ಪಟ್ಟಣದಲ್ಲಿ ಅವನು ತನ್ನ ಮೋಚಿ ವ್ಯಾಪಾರಕ್ಕಾಗಿ ಒಂದು ದೊಡ್ಡ ಕಂಪೆನಿಯನ್ನು ಸ್ಥಾಪಿಸಿದನು. ಆ ಪಟ್ಟಣದಲ್ಲಿ ಬಾಟಾನ ಹೆಸರು ರೂಢಿಯಲ್ಲಿ ನಿಂತಿತು "ಬಾಟಾ ಶೂ" ಎಂದರೆ ಯುರೋಪ್ ದೇಶದಲ್ಲಿ ಪ್ರಖ್ಯಾತವಾಗಿ ಹೋಯಿತು ಎಲ್ಲಾ ಕಂಪೆನಿಗಳು ಅವನನ್ನು ಪ್ರೋತ್ಸಾಹಿಸಿದುವು ಪ್ರತಿಯೊಂದು ಪಟ್ಟಣದಲ್ಲೂ ಅವನು ತನ್ನ ಫೆಕ್ಟರಿಯ ಶಾಖೆ ಉಪಶಾಖೆಗಳನ್ನು ಸ್ಥಾಪಿಸಿದನು ಆಂಗ್ಲೇಯರು, ಐರಿಷರು, ಜರ್ಮನರು, ಎಂಬ ಭೇದವಿಲ್ಲದೆ ಅವನು ತನ್ನ ಕೆಲಸಕ್ಕೆ ಕೆಲಸಗಾರರನ್ನು ನೇಮಿಸಿದ್ದನು ಕ್ರಮೇಣ ದೇಶದಲ್ಲೆಲ್ಲಾ ಅವನ ಕಾರ್ಖಾನೆಯ ೨೦೦೦ ಶಾಖೆಗಳು ನಿರ್ಮಿತವಾದುವು ಅಂತೂ ಅವನ ಮಧ್ಯ ವಯಸ್ಸಿನಲ್ಲೇ ಅವನು "ಯುರೋಪಿನ ಹೆನ್ರಿ ಫೋರ್ಡ್" ಎಂಬ ಹೆಸರನ್ನು ಗಳಿಸಿದನು ಥೋಮಸ್ ಬಾಟನು ಸ್ವಲ್ಪ ಸಮಯದಲ್ಲೇ ವಿಮಾನ ಚಲನೆಯನ್ನು ಕಲಿತುಕೊಂಡನು ತನ್ನ ಕಾರ್ಯಾರ್ಥವಾಗಿ ವಿಮಾನವು ಅತ್ಯಗತ್ಯವೆಂದು ಭಾವಿಸಿದನು ತನ್ನ ಸ್ವಂತ ಉಪಯೋಗಕ್ಕಾಗಿಯೂ ತನ್ನಡಿಯಲ್ಲಿ ಕೆಲಸಮಾಡುವ ಅಧಿಕಾರಿಗಳ ಉಪಯೋಗಾರ್ಥವಾಗಿಯೂ ಅವನ ಹನ್ನೊಂದು ವಿಮಾನಗಳಿದ್ದುವು ಪಾಪ! ತಾನು ಅವುಗಳಿಂದಾಗಿಯೇ ಸಾಯುತ್ತೇನೆಂದು ಅವನಿಗೆಂತು ಗೊತ್ತು?

ಧನವತ್ತು—ನಾಗರಿಕನೆನಿಸಲು ಯಾವ ಗುಣಗಳು ಒಬ್ಬನಲ್ಲಿರಬೇಕೋ ಅವುಗಳೆಲ್ಲಾ ಬಾಟಾನಲ್ಲಿದ್ದುವು ಹೆನ್ರಿ ಫೋರ್ಡನಂತೆ ಅವನಿಗೆ ಕೆಲಸಗಾರರ ಮೇಲೆ ಬಹು ವಿಶ್ವಾಸ ಕೆಲಸವು ಹೆಚ್ಚಾಗಬೇಕೆಂದು ಅವನ ಆವಶ್ಯವಿಲ್ಲ, ಮಾಡಿದ ಕೆಲಸವು ಸಂಪೂರ್ಣ ಮತ್ತು ಸ್ವಚ್ಛವಾಗಬೇಕು ಅದೇ ಅವನ ಗುಣ ಸ್ಪರ್ಧೆಯ ಪ್ರಯೋಜನವು ಅವನಿಗೆ ಸರಿಯಾಗಿ ಗೊತ್ತಿತ್ತು ತನ್ನ ಕೆಲಸಗಾರರಲ್ಲಿ ಯಾರು ಎಷ್ಟು ಹೆಚ್ಚು ಕೆಲಸವನ್ನು ಕಡಿಮೆ ಸಮಯದಲ್ಲಿ ಉತ್ತಮ ರೀತಿಯಿಂದ ಮಾಡುವನೋ, ಅವನಿಗೆ ತಕ್ಕ ಹೆಚ್ಚಿನ ಸಂಬಳವನ್ನೂ, ತರಗತಿಯನ್ನೂ ಕೊಡುತ್ತಿದ್ದನು ಒಂದು ದಿನದ ಕೆಲಸದಲ್ಲಿ ಯಾರು ಯಾವ ತಪ್ಪನ್ನೂ ಮಾಡುವುದಿಲ್ಲವೋ ಅವರಿಗೆ ಅವನು ವಿಶೇಷ ಪ್ರತಿ ಬಹುಮಾನಗಳನ್ನು ಹಂಚುತ್ತಿದ್ದನು ಕಾರ್ಯದಕ್ಷತೆಯು ಅವನ ಅಜನ್ಮ ಗುಣ ಕಾರ್ಯಪ್ರತಿಷ್ಠೆಯೂ ಅವನಲ್ಲಿನ ಆಗರ್ಷಣಶಕ್ತಿ ಯಾವ ಕೆಲಸವೂ ಸರಿ, ಅವನಿಗೆ ಒಡನೆ ಅವಸರದಿಂದ ಆಗಿಹೋಗಬೇಕು. ವ್ಯಾಪಾರ ಕೇಂದ್ರವೊಂದನ್ನು ಹುಡುಕಿ ಅವನು ಕೆಲ ದಿನಗಳಲ್ಲೇ ಒಂದು ಕಟ್ಟೋಣವನ್ನು ನಿರ್ಮಿಸಿದ ಪ್ರಸಂಗವೂ ಇದೆ ಬಾಟಾನು ಇಂದು ಒಂದೂರಲ್ಲಿದ್ದರೆ ನಾಳೆ ವಿಮಾನದ ಮೂಲಕ ಮತ್ತೊಂದು ಊರಿಗೆ ಹಾರುವನು ಅವನ ಬಹು ಒಲವಾದ—ಅವನು ಸರಿಯಾಗಿ ನಿದ್ರೆಮಾಡುತ್ತಿದ್ದಿಲ್ಲ ಮೂರು ದಿನಗಳ ತನಕ ಅವನು ಕಣ್ಮುಚ್ಚದೆ, ದಣಿಯದೆ, ಬೇಸರದೆ, ಅಧಿಕಾರದರ್ಪವನ್ನು ತೋರಿಸದೆ, ಕೈಯಲ್ಲಿದ್ದ ತನ್ನ ಕೆಲಸವನ್ನು ಪೂರೈಸಿದ ಸಂದರ್ಭವೂ ಇದೆ ಕೆಲಸ, ಕೆಲಸ, ಕೆಲಸವೆಂಬುದೇ ಅವನ ವಿಹಾರ, ವಿಹಾರವೆಂಬುದೇ ಅವನ ಕೆಲಸ ಅವನ ಕಾರ್ಖಾನೆಗಳಲ್ಲಿ ವಾರ ಒಂದಕ್ಕೆ ೫ ದಿನಗಳ ಕೆಲಸ ದಿನವೊಂದಕ್ಕೆ ೯ ಘಂಟೆಗಳ ದುಡಿತ ಅವನ ಕಾರ್ಖಾನೆಗಳು ಬೆಳಿಗ್ಗೆ ೭ ಗಂಟೆಗೆ ತೆರೆಯಲ್ಪಡುವುವು ೧೨ ಗಂಟೆಯ ತನಕ ಕೆಲಸ ಮಾಡಿದ ಮೇಲೆ I ಗಂಟೆಯ ವಿರಾಮವು ಸಿಗುವುದು. ೧ ಗಂಟೆಗೆ ಪ್ರಾರಂಭವಾದ ಕೆಲಸವು ಸರಿಯಾದ ಗಂಟೆ ೫ಕ್ಕೆ ಅಂತ್ಯವಾಗುವುದು ಶನಿವಾರ ದಿನ ಕೆಲಸವು ಮುಗಿದ ಮೇಲೆ ಅವನ ಕೆಳ ನೌಕರರೆಲ್ಲ ಕೂಡಿಕೊಂಡು ಒಂದು 'ರೌಂಡ್ ಟೇಬಲ್' ಸಭೆಯನ್ನು ಮಾಡುವರು ಅದರಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸುವ ಬಾಟಾನು ತನ್ನ ಕೆಲಸಗಾರರಿಗೆ ಬೇಕಾದ ಕಾರ್ಯಕ್ರಮವನ್ನೂ ಸೂಚನೆಯನ್ನೂ ಕೊಡುವನು ಪ್ರತಿಯೊಂದು ವ್ಯವಹಾರದಲ್ಲಿ ತನ್ನ "ಅಡಿಯಾಳುಗಳ" ಸಮ್ಮತವನ್ನು ಪಡೆಯುವನು ಅವರನ್ನು ಪ್ರೋತ್ಸಾಹಿಸುವನು ಹೀಗಾದುದರಿಂದ ಬಾಟಾ ಕಂಪೆನಿಯ ಆಬಾಲವೃದ್ಧ ಕೆಲಸಗಾರರೆಲ್ಲ ಸದಾ ಕಾರ್ಯಪ್ರತಿಷ್ಠೆಯಲ್ಲೇ ಮಗ್ನರಾಗುವರು ತಕ್ಕ ಕೆಲಸವು ಎಂದು ಉತ್ತಮವಾಗಲಿಲ್ಲ, ತಮ್ಮ ಯಜಮಾನನನ್ನು ಎಂದು ಸಂತೋಷಪಡಿಸಲಿಲ್ಲ ಎಂಬುದೇ ಅವರ ಹಂಬಲ ಕಾರ್ಖಾನೆಗಳನ್ನು ಸಂದರ್ಶಿಸಿಕೊಂಡು ಹೋಗೋಣವೆಂದು ಬಂದ ಹೊರಗಿನ ವ್ಯಕ್ತಿಗಳ ಮುಖವನ್ನು ಕೂಡಾ ನೋಡಲು ಆ ಕೆಲಸಗಾರರು ಸಾಹಸಪಡುತ್ತಿದ್ದಿಲ್ಲವೆಂದರೆ, ಅವರಲ್ಲಿ ಕಾರ್ಯದಕ್ಷತೆಯು ಎಷ್ಟಿರಬೇಕು! ಅವರ ಕೆಲಸದ ಮೇಲಿನ ಆಸಕ್ತಿಯು ಎಂತಹದ್ದಾಗಿರಬೇಕು! ಒಳ್ಳೇ ಧನಿಕನಿಂದ ತರ್ಬೇತುಗೊಳಿಸಲ್ಪಟ್ಟ ಮಜೂರಿಗಾರರು ಈ ರೀತಿಯಾಗುವುದರಲ್ಲಿ ಸಂದೇಹವೇನು?

ಕಾರ್ಖಾನೆಯ ಒಂದು ಕಡೆಯಲ್ಲಿ ಹದವಾದ ಚರ್ಮದ ತುಂಡುಗಳು ಯಂತ್ರದ ಮೂಲಕ ಮುಂದೆ ಹೋಗುವುವು ಸಾಲಾಗಿ ನಿಲ್ಲುವ ನೂರಾರು ಕೆಲಸಗಾರರು ತಮ್ಮತಮ್ಮ ಕೈಕೆಲಸದ ಮೂಲಕ ಆ ಚರ್ಮಗಳಿಂದ ಬೂಟ್ಸುಗಳನ್ನು ತಯಾರಿಸುವರು ನಾಲ್ಕೈದು ಘಂಟೆಗಳೊಳಗೆ ಕಾರ್ಖಾನೆಯ ಇನ್ನೊಂದು ಭಾಗದಲ್ಲಿ ಸಾವಿರಗಟ್ಟಳೆ ಪೆಟ್ಟಿಗೆಗಳಲ್ಲಿ ಬೂಟ್ಸ್ ಮೊದಲಾದ ಪಾದರಕ್ಷೆಗಳು ತುಂಬುವುವು, ಪರದೇಶಗಳಿಗೆ ಅತ್ಯವಸರದಿಂದ ಹೋಗುವುವು ಕೆಲಸವನ್ನು ಹೆಚ್ಚಿಸುವ ಸಾಧನವಾಗಿ ಹೊಸ ಯಂತ್ರಗಳು ಕಂಡುಹಿಡಿಯಲ್ಪಟ್ಟರೆ, ಹಳೆಯವುಗಳು ಎಷ್ಟು ಮೌಲ್ಯವುಳ್ಳವುಗಳಾಗಲೀ, ಅವುಗಳು ಮೂಲೆಗೆ ಬೀಳುವುವು ಅವುಗಳ ಸ್ಥಳವನ್ನು ಹೊಸ ಯಂತ್ರಗಳು ಆಕ್ರಮಿಸುವುವು ಒಂದು ವೇಳೆ ಒಂದು ಯಂತ್ರಭಾಗವು ಹಾಳಾದರೆ ಅಥವಾ ಸವೆದರೆ, ಅವುಗಳ ಮೇಲ್ವಿಚಾರಕರಾಗಿ ಕೆಲಸಮಾಡುವ ಸೂಪರ್‌ವೈಸರುಗಳು ಸಮಯವನ್ನು ಹಾಳುಮಾಡದೆ, ಗ್ರಾಫುಗಳ ಮೂಲಕ ಒಡನೆ ಹೊಸ ಭಾಗಗಳನ್ನು ಕೊಂಡು ಯಂತ್ರವನ್ನು ಸರಿಪಡಿಸುವರು ಕಾರ್ಖಾನೆಯ ಪ್ರತಿ ಭಾಗದಲ್ಲಿಯೂ ಕೆಲಸದ ಹಂಚಿಕೆಯನ್ನು ತೋರಿಸುವ ಚಿತ್ರಗಳು [illegible] ತ್ತಿರುವುದರಿಂದ, [illegible] ನಿರ್ಮಿಸಲು ಸಾಹಸಪಟ್ಟವನೆಂದು ತಿಳಿದುಬರುತ್ತದೆ

ಬಾಟನಿಗೆ ೧೭ ವರ್ಷ ಪ್ರಾಯದ ಒಬ್ಬ ಮಗನಿರುವನು ಅವನು ತಂದೆಯಂತೆ ಬಹು ಸಾಹಸಿ—ನಿಪುಣನು ತಂದೆಯ ಕಾರ್ಖಾನೆಯಲ್ಲಿ ಯಾವಾಗಲೂ [illegible] ಕೆಲಸದ ಮಾಹಿತಿಯನ್ನು ಮಾಡಿಕೊಳ್ಳುವುದೇ ಅವನ ಪ್ರಕೃತ ಕೆಲಸ ಈ ಹುಡುಗನಿಗೆ ಥೋಮಸ್ ಬಾಟನು ವೈಮಾನಿಕ ಜ್ಞಾನವನ್ನು ಸಂಪೂರ್ಣವಾಗಿ ಕಲಿಸಿರುವನು. ಅಲ್ಲದೆ [illegible] ಪಡೆದ ಕಲೆಯನ್ನು ಸ್ವಪ್ರಯತ್ನದಿಂದ ಸಂಪಾದಿಸುವಂತೆಯೂ ಮಗನನ್ನು ಪ್ರೇರೇಪಿಸಿರುವನು, ತಂದೆಯಂತೆ ಮಗನೂ ಹೆಚ್ಚಿನ ಕಾಲವನ್ನು ವಿಮಾನ ಸಂಚಾರದಲ್ಲಿ ಕಳೆಯುವನು

ಬಾಟನಿಗೆ ಹಣಕಾಸಿನ ಮೇಲೆ [illegible] ಮಜೂರಿಗಾರರು, ದುಡಿಯುವವರು ದೇಶದ ಪ್ರತ್ಯಕ್ಷ [illegible] ಉತ್ಪನ್ನವೆಂದು ಅವನು ಪ್ರತಿಪಾದಿಸುತ್ತಿದ್ದನು [illegible] ವಶವಾಗುವಷ್ಟು ಹಣವು [illegible] ವೆಚ್ಚವಾಗುವುದಿಲ್ಲ.

ಬಾಟಾನ ಮನೆಯು ಅವನ ಕಾರ್ಖಾನೆಯ ಸಮೀಪವೇ ಇದೆ ಆಡಂಬರದ ಮನೆಯಲ್ಲ. ವೈಭವವು ಅವನ ಇಚ್ಛೆಯಲ್ಲ ಕೆಲವು ಮನೆಗೆಲಸಗಳನ್ನು ಅವನೇ ಮಾಡುತ್ತಿದ್ದನು. ತನ್ನಿಂದಸಾಧ್ಯವಾದ ಯಾವ ಕೆಲಸವನ್ನು ಅವನು ತನ್ನ ಕೆಲಸಗಾರರಿಂದ ಮಾಡಿಸುತ್ತಿದ್ದಿಲ್ಲ

ಥೋಮಸ್ ಬಾಟನು ಕಳೆದ ಜನವರಿ ತಿಂಗಳಲ್ಲಿ ಹಿಂದೂದೇಶಕ್ಕೆ ಬಂದಿದ್ದನು ಕಲ್ಕತ್ತ ಮೊದಲಾದ ಕಡೆಗಳಲ್ಲಿ ಸಂಚರಿಸಿ, ಹೋದ ಹೋದಲ್ಲಿ ಪ್ರಮುಖವಾದ ವ್ಯಾಪಾರ ಕೇಂದ್ರ ಸ್ಥಳಗಳನ್ನು ಆಯ್ದು ತೆಗೆದು ಕ್ರಮಕ್ಕೆ ಪಡೆದುಕೊಂಡನು ಪ್ರತಿಯೊಂದು ಪಟ್ಟಣದಲ್ಲಿಯೂ ತನ್ನ ಕಾರ್ಖಾನೆಯ ಉಪಶಾಖೆಯನ್ನು ತೆರೆಯಬೇಕೆಂದು ಅವನ ಅಭಿಲಾಷೆಯಾಗಿತ್ತು "ಹಿಂದೂದೇಶದಲ್ಲಿ ಪಾದರಕ್ಷೆಗಳನ್ನು ಉಪಯೋಗಿಸುವ ಅಭ್ಯಾಸವಿಲ್ಲದಿರುವ ೩೦೦,೦೦೦,೦೦೦ ಜನರು ನನ್ನ ಮೋಚೆಗಳನ್ನು ಉಪಯೋಗಿಸುವಂತೆ ಮಾಡುವೆನು" ಎಂದು ಅವನು ಅಂದು ಕಲ್ಕತ್ತದಲ್ಲಿ ಹೇಳಿದನು ಒಂದು ವೇಳೆ ಅವನು ಅಭಿಲಾಷಿಸಿದಂತಾಗುತ್ತಿದ್ದರೆ ಕೆಲವು ವರ್ಷಗಳಲ್ಲಿಯೇ ಹಿಂದೂದೇಶದಲ್ಲಿ ನವೀನ ಕೈಗಾರಿಕೆಯೊಂದು ಪಸರಿಸುತ್ತಿತ್ತು

ಆದರೆ ಫಲವೇನು? Man proposes God disposes ತಾನೊಂದು ನೆನೆದರೆ ದೈವವೊಂದು ಬೇರೊಂದು ನೆನೆಯುದು. ಮೊನ್ನೆ ಅವನು ವಿಮಾನದಲ್ಲಿ ಸಂಚರಿಸುತ್ತಿದ್ದಾಗ, ವಿಮಾನ ಸಹಿತ ಕೆಳಬಿದ್ದು ಅವನ ಸರ್ವ ಕಾಂಕ್ಷೆಯೂ ಮಣ್ಣುಪಾಲಾಯಿತು. ಇಂತಹ ಧನ ಮತ್ತು ಗುಣಭರಿತ ವರ್ತಕನು ಮರಣಹೊಂದಿದುದರಿಂದ ಪ್ರಪಂಚಕ್ಕೇನೇ ಒಂದು ನಷ್ಟವಲ್ಲವೇ?

* * *

ಈ ಹೊಸ ಗ್ರಂಥಗಳನ್ನು ನೋಡಿರುವಿರಾ?

ಕಾಮದ ಗುಟ್ಟು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ ಕೃತ. ಇಂತಹ ಗಂಭೀರವಾದ ಸ್ವಾರಸ್ಯವಾದ, ಉಪಯುಕ್ತವಾದ ಕಾಮಶಾಸ್ತ್ರ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ ಬೆಲೆ ೧೨ ಆಣೆಗಳು ಮಾತ್ರ.

ಪ್ರಳಯ ತಾಂಡವ—(ಸಚಿತ್ರ) ಶ್ರೀ. ಬಿ. ವಾಸುದೇವರಾಯರು. ಸುಂದರ ಚಿತ್ರಗಳೊಂದಿಗೆ ಅಂದವಾಗಿ ಪ್ರಕಟವಾಗಿದೆ ಉತ್ಕೃಷ್ಟಭಾವಗಳನ್ನೊಳಗೊಂಡಿರುವ ಸ್ಫೂರ್ತಿದಾಯಕ ೩ ಕವನಗಳಿವೆ ಬೆಲೆ ೬ ಆಣೆಗಳು ಮಾತ್ರ, ಲೈಬ್ರರಿ ಪ್ರತಿ ರೂ ೧

ಹೊಸಹುಟ್ಟು—ಶ್ರೀ ಅ ನ ಕೃಷ್ಣರಾಯರು ೧೬ ಪ್ರೌಢತರ ವ್ಯಾಸಗಳು, ೮ ಸುಂದರ ಚಿತ್ರಗಳು, ಪೆದರ್‌ವೇಟ್ ಕಾಗದದ ಮೇಲೆ ೧೮೨ ಪುಟಗಳಿವೆ ಬೆಲೆ ೧ ರೂಪಾಯಿ

ವೈದ್ಯರಾಜ—(ಸಾಮಾಜಿಕ ನಾಟಕ) ಪ್ರೊಫೆಸರ್ ಜಹಗೀರ್‌ದಾರ್ ಕೃತ ಬೆಲೆ ೧ ರೂಪಾಯಿ

ಮೋಹನಾಸ್ತ್ರ—(ಸಾಮಾಜಿಕ ನಾಟಕ) ಪಂಡಿತ ತಾರಾನಾಥ ಕೃತ. ಬೆಲೆ ೧ ರೂಪಾಯಿ

ನವಜೀವನ ಗ್ರಂಥ ಭಂಡಾರದ ಅಮೌಲ್ಯ ಗ್ರಂಥಗಳು

೧. ಆಕಾಶದೊಳಗಿನ ಅದ್ಭುತ ಚಮತ್ಕಾರಗಳು (ಪ್ರೊ ಪಾಟೀಲ ತಿರುಕುಲರಾಯರು) ೧—೨—೦
೨. ಧರ್ಮ ಸಂಭವ (ಪಂಡಿತ ತಾರಾನಾಥರಾಯರು) ೧—೪—೦
೩. ಹಿಂದೂಸ್ಥಾನದ ಪ್ರಾಚೀನ ರಾಜ್ಯಪದ್ಧತಿಗಳು (ಶ್ರೀ ವಿಷ್ಣುಹರಿ ಒಡೆಯರ) ೧—೨—೦

ಹೆಚ್ಚಿನ ವಿಷಯಗಳಿಗೆ ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ

ವಿ ಜಿ ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.



ಮಾತೃಗಳೇ,
ನಿಮ್ಮ ಮಗುವನ್ನು ಪ್ರಾಕೃತಿಕವಾಗಿ ಪೋಷಿಸಿರಿ

ತನ್ನ ಮಗುವನ್ನು ಪೋಷಿಸಬೇಕೆಂಬುದು ಪ್ರತಿಯೊಬ್ಬ ತಾಯಿಯಲ್ಲಿ ಪ್ರಕೃತಿಸಿದ್ಧವಾಗಿ ಇರುವ ಆಶೆ. ಆದರೆ ಪ್ರಾಮುಖ್ಯವಾದ ಈ ಸೇವೆಯನ್ನು ಮಾಡಲು ಹೆಚ್ಚಿನವರು ಶಕ್ತಿ ಮತ್ತು ಸಾಮರ್ಥ್ಯವುಳ್ಳವರಾಗಿರುವುದಿಲ್ಲ. ಎದೆ ಹಾಲನ್ನು ಕೊಡಲಾಗದಿದ್ದರೆ ಅದರಿಂದ ತಾಯಿಗೆ ವ್ಯಸನವೇ. ಮಗುವಿಗೂ ಕಷ್ಟವೇ. ಏಕೆಂದರೆ ಮಗುವಿಗೆ ಎದೆ ಹಾಲು ನಿಸರ್ಗಸಿದ್ಧವಾದ ಒಂದು ಆಹಾರವಾಗಿರುತ್ತದೆ. ಅದಕ್ಕೆ ಸರಿಯಾದ ಬೇರಾವ ಉತ್ತಮ ಆಹಾರವೂ ಸಿಗದು.

ಓವಲ್‌ಟಿನ್‌ನ ಸಹಾಯದಿಂದ ಪ್ರತಿಯೊಬ್ಬ ತಾಯಿಯೂ ಅವಳ ಮಗುವನ್ನು ಸಂರಕ್ಷಿಸಬಹುದು. ಮಗುವು ಹುಟ್ಟುವ ಕೆಲವು ತಿಂಗಳುಗಳ ಮೊದಲು ಅದನ್ನು ತೆಗೆದುಕೊಂಡರೆ ಎದೆಯಲ್ಲಿ ಬೇಕಾದಷ್ಟು ಹಾಲು ಉತ್ಪನ್ನವಾಗುತ್ತದೆ. ಅಲ್ಲದೆ ಮಗು ಹೆತ್ತಾದ ಮೇಲೆ ನಿಶ್ಶಕ್ತತೆಯನ್ನು ಹೋಗಲಾಡಿಸಿ ಶಕ್ತಿವಂತಳಾಗಬಹುದು.

ಓವಲ್‌ಟಿನ್ನನ್ನು ಪ್ರಕೃತಿ ಸಂಬಂಧವಾದ ಅತ್ಯುತ್ತಮ ಪೋಷಕ ಆಹಾರಗಳಿಂದಲೇ ಸಿದ್ಧಪಡಿಸಲಾಗಿದೆ. ಅದು ಇಡೀ ದೇಹವನ್ನು ಖಂಡಿತವಾಗಿಯೂ ತ್ವರೆಯಾಗಿಯೂ ರಕ್ಷಿಸಬಹುದು. ಅದು ಎಲ್ಲಾ ತಾಯಂದಿಯರಿಗೂ ಅಮೋಘವಾದ ಆಹಾರವು. ಅದರ ರುಚಿಕರ ಪರಿಮಳವು ಮನಾಹ್ಲಾದವನ್ನುಂಟುಮಾಡುವಂತಹದ್ದಿದೆ.

ಉತ್ತಮವಾದ ಓವಲ್ಟಿನ್ನಿಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಸಪ್ರಮಾಣದಿಂದ ತಯಾರಿಸಲ್ಪಡದ ಎಲ್ಲಾ ಮಿಶ್ರಣಗಳನ್ನು ತಿರಸ್ಕರಿಸಿರಿ.

ಅತ್ಯುತ್ತಮ — ಅತ್ಯಮೋಘ — ಕರಸ್ಪರ್ಶಿತವಾಗದ್ದು

OVALTINE
TONIC FOOD BEVERAGE

ತಾಯಂದಿರು ಶಿಶುಗಳನ್ನು ಎದೆ ಹಾಲಿನಿಂದಲೇ ಸಲಹಲು
ಸಹಕಾರಿಯಾಗುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜಂಟರು— ಜೇಮ್ಸ್ ರೈಟ್ ಲಿ. ೨ ಲಿಯನ್ಸ್ ರೇಂಜ್, ಕಲ್ಕತ್ತಾ ಮತ್ತು
ಮುಂಬಾಯಿ, ಮದ್ರಾಸು, ರಂಗೂನುಗಳಲ್ಲಿ

ನಿಮ್ಮ ಓವಲ್‌ಟಿನ್ನಿನೊಡನೆ "ಓವಲ್ಟಿನ್" ರೊಟ್ಟಿಗಳನ್ನೂ ತಿನ್ನಿರಿ. ಇವುಗಳು ಬಿಸ್ಕತ್ತುಗಳಿಗಿಂತಲೂ ಉತ್ತಮ. ಇವುಗಳಲ್ಲಿ ಒಳ್ಳೇ ಸುಲಭ ಜೀರ್ಣಕರ ಆಹಾರವು ಇದೆ. ಮಕ್ಕಳಿಗೆ ಹಲ್ಲು ಮೂಡುವಾಗ ಅವುಗಳನ್ನು ಬಲಪಡಿಸಲಿಕ್ಕೆ ಇವುಗಳನ್ನು ಕೊಡಬಹುದು. ಇವುಗಳು ಶಿಶುವನ್ನು ಸಂತೋಷಪಡಿಸುತ್ತವೆ.

OV/279

ಉಡುಪಿಯ ನೋಟಗಳು

ಬಾಲಾಯ ದ

ತಾ ೧೨ರಲ್ಲಿ ಶ್ರೀ ದೇವರ ಮಠದಲ್ಲಿ, ಸಾಯಂಕಾಲ ಆರು ಗಂಟೆ ಸಮಯಕ್ಕೆ, ಬೆಂಗಳೂರಿನ ಶ್ರೀ ನಾರಾಯಣ ಸ್ವಾಮಿಯವರ ಫಿಡ್ಲ್ ವಾದನ ಕಚೇರಿಯು ಜರಗಿತು. ಜನಸ್ತೋಮವು ಕಿಕ್ಕಿರಿದಿತ್ತು. ಶ್ರೀಯುತರ ಫಿಡ್ಲ್ ಬಾರಿಸುವಿಕೆಯು ಕರ್ಣಾನಂದಕರವಾಗಿದ್ದು ಅವರ ಹಸ್ತಕೌಶಲವು ಬೆರಗುಗೊಳಿಸುವಂತಹದಿದ್ದಿತು. ಆದರೆ ಈ ದಿನ ಸೋಮವಾರವಾದುದರಿಂದ ಜನರ ಗಲಾಟೆಯೂ ಗಂಟೆಗಳ ಧ್ವನಿಯೂ ಶ್ರೀಯುತರೊಡನೆ ಸ್ಪರ್ಧೆಗೆ ನಿಂತಂತೆ ಇತ್ತು.

+ + + +

ಈ ದಿನವೇ ರಾತ್ರಿ ೯ ಗಂಟೆ ಕಾಲಕ್ಕೆ ಇವರ ಗಾಯನ ಕಚೇರಿಯು ಪರ್ಯಾಯ ಶ್ರೀಗಳ ಸೋದೆಮಠದ ಮಾಳಿಗೆಯಲ್ಲಿ ನಡೆಯಿತು. ಇದು 'ಪ್ರೈವೇಟಾ'ಗಿದ್ದರೂ ವಿಸಿಟರು ಹಲವರಿದ್ದರಂತೆ!

× × × ×

ಸೋಮವಾರ ದಿವಸ ಶ್ರೀಕೃಷ್ಣನ ದರ್ಶನಾರ್ಥವಾಗಿ ಬರುವ ಜನರು ಬಹಳ. ವಿಶೇಷವಾಗಿ ಮಹಿಳಾ ವರ್ಗವು. ಆದರಲ್ಲೂ ವಾರದ ಸಿತೆಯರು ಇಂದು ಶ್ರೀಕೃಷ್ಣನ ಭೇಟಿಮಾಡಿಯೇ ತೀರಬೇಕು. ಸಂಜೆ ೫ರಿಂದ ೮ರ ವರೆಗೆ ಇವರ ಬರೋಣ ಹೋಗೋಣಗಳು ನಡೆಯುತ್ತಲೇ ಇವೆ. ಇದೇ ಸುಕಾಲದಲ್ಲಿ ಗಾಯನ ಕಚೇರಿಯು ಉಂಟೆಂದರೆ ಮತ್ತೆ ಕೇಳಬೇಕೇ?

× × × ×

ದೇವರ ದರ್ಶನ ಮಾಡಿದ ಹಾಗೂ ಆಯಿತು, ಗಾಯನ ಕೇಳಿದ ಹಾಗೂ ಆಯಿತು ಎಂದು ಪ್ರೇಕ್ಷಕರು ಉತ್ಸುಕತೆಯಿಂದ ಬರುವಂತಾಯಿತು. ಇಂಥಾ ಸುಸಂಧಿಯನ್ನು ಸರ್ವರೂ ಉಪಯೋಗಿಸದೆ ಬಿಡಲಿಲ್ಲ. ಸಂತೋಷ. ಕೆಲವರು ದರ್ಶನ ಮಾಡಿಯೋ ದರ್ಶನ ಕೊಟ್ಟೋ ಅಥವಾ ಪ್ರದರ್ಶನ ಮಾಡಿಯೋ ಹೋಗುತ್ತಿದ್ದುದು ಪ್ರೇಕ್ಷಣೀಯ ನೋಟವಾಗಿತ್ತು.

+ + + ×

ಕಣ್ಣಿನ ಕೆಲಸ ಕಿವಿಯ ಕೆಲಸ ಇದರಿಂದ ಪ್ರೇಕ್ಷಕವರ್ಗವು ತಂಬಾ ದಣಿದಿರಬೇಕು. ೦ ತಿಯ ಗಾಯನ ಕಚೇರಿಯ ವೇಳೆ ಅವರ ದಣಿವು (ಪ್ರಾಯಶಃ) ತಣಿದಿರಬೇಕು.

+ + + +

ನಮ್ಮೂರು ಕೃಷ್ಣ ದೇವರೂರಲ್ಲವೇ? ಸದಾ ಸರ್ವದಾ ದೇವರ ದರ್ಶನ ಪಿಟೀಲು ವಾದನ ಮೊದಲಾದುವು ನಡೆಯುತ್ತಲೇ ಇರುವುದೇ ಊರ ಕೀರ್ತಿಯು ಹೆಚ್ಚಲಿಕ್ಕೊಂದು ಕಾರಣವಲ್ಲವೇ?

+ + + +

ಬಂದರೆ ಮಳೆ ಹೋದರೆ ಬಿಸಿಲು ಎಂಬ ನುಡಿಯು ಸುಳ್ಳಲ್ಲ. ಒಂದು ವಾರದಲ್ಲಿ ಭಾರೀ ನೆರೆ ಇನ್ನೊಂದು ವಾರದಲ್ಲಿ ಭಾರೀ ಬಿಸಿಲು. ಜನರ ನಡೆನುಡಿಗಳೂ ಇವನ್ನೇ ಅನುಸರಿಸಿ ಮುಂಬರಿಯುತ್ತಿದೆಯೋ ಎಂದೊಂದು ಪ್ರಶ್ನೆ!

+ + + +

ಶ್ರೀ ಶರ್ಮರು ಸ್ವತಃ ಇಲ್ಲದ್ದ ಸಂಶಯ ಗಡಿಬಿಡಿ ಮಾಡಿದರು. ಈ ಪತ್ರಿಕೆಯಲ್ಲಿ ಪ್ರಾರಂಭಿಸಿದ್ದಾರೆ. ಕಳೆದ ವಾರದ ಪ್ರಶ್ನಾಮಾಲಿಕೆಯು ಸಂಬಂಧಿಸಿದವರಿಗೆ ಗಲಿಬಿಲಿಯನ್ನುಂಟುಮಾಡದಿರದು.

× × × ×

ಪ್ರಿಯ ಶರ್ಮರೇ, ನಿಮಗೇಕೆ ನಮ್ಮ ಕರ್ಮಧರ್ಮಗಳು ಸರಿಗಾಣುವುದಿಲ್ಲವಾದರೆ ಅದು ನಿಮ್ಮ ದೃಷ್ಟಿ ದೋಷ! ನಮ್ಮನ್ನು ಕೇಳಲಿಕ್ಕೂ ಹೇಳಲಿಕ್ಕೂ ನಿಮಗಾವ ಅಧಿಕಾರ? ನಾವು ಕಟ್ಟಿದ್ದೇ ಪಟ್ಟ ಕೊಟ್ಟದ್ದೇ ಮುಟ್ಟು, ತಿಳಿಯಿತೇ? ಇನ್ನಾದರೂ ನಿಮ್ಮ ದಫ್ತರ ಕಟ್ಟಿರಿ. ನವಗೆ ಕೇಳುವವರೇ ಇಲ್ಲ ಅನ್ನಿ.

× × × ×

ತಾ ೧೭ರಲ್ಲಿ ಶ್ರೀ ಪೇಲಿ ಸೇಟರ ವಿದೇಶಿ ವಸ್ತ್ರದಂಗಡಿಯನ್ನು ಶ್ರೀ ದೇವರಾಯ ಧಣಿಗಳು ಪಿಕೆಟ್ ಮಾಡುತ್ತಿದ್ದಾಗ ಪೋಲೀಸಿನವನೊಬ್ಬನು ಬಂದು "ನೀನಿಲ್ಲೇನು ಮಾಳುವೆ?" ಎಂದನಂತೆ. "ಪಿಕೆಟ್" ಎಂಬ ಉತ್ತರ ದೊರೆಯಿತು. "ಹಾಗಿದ್ದರೆ ಮಾಡುವೆನೀಗ ಅರೆಸ್ಟ್" ಎಂದು ಪೋಲೀಸಿನವನು ಪಿಕೆಟರರನ್ನು ಸ್ಟೇಷನಿಗೆ ದರದರನೆ ಎಳೆದೊಯ್ದರೆಂದು ಕೇಳುತ್ತೇವೆ. ಮರುದಿನ ಬಿಟ್ಟಿರುವರಂತೆ!

× × × ×

ಪ್ರಥಮ ಏಕಾದಶಿಯೆಂದು ವಾಡಿಕೆಯಂತೆ ಮಠದಲ್ಲಿ ಮುದ್ರಾಧಾರಣೆಯಾಯಿತು. ಒಂದು ವರ್ಷದ ಪಾಪವೆಲ್ಲಾ ಇದರಿಂದ ಪರಿಹಾರವಂತೆ! ಮೈ ಸುಟ್ಟುಬಿಟ್ಟರೆ ಪಾಪವು ಸುಟ್ಟುಹೋಗುವುದೇ ಎಂಬುದೀಗ ಪ್ರಶ್ನೆ!

ಶಾಂತಿಯಾಗಬೇಕೇ? ಸಬರ್ಮತಿ ಸಾಧುವನ್ನು ಜೈಲಿನಿಂದ ಬಿಡಿರಿ! ''

ಪೋಲೀಸರ ಮರಣ! ಕುರಿಗಳ ಹಿಂಡಿನಲ್ಲೊಂದು ಸಿಂಹ' ಸ್ವಯಂಸೇವಕರ ಜಡ್ತಿಗಳು! ಗಂಡನನ್ನು ಬಿಟ್ಟು ಓಡಿದಳು. ಮಾನವನ ಮೋಸ—ಹೋರ ನೀತಿಯ ಖಂಡನೆ—ಉಪಕಾರಕ್ಕೆ ಹೋಗಿ ಕೋರ್ಟಿಗೆಳೆಯಲ್ಪಟ್ಟರು—ಬೈ ಇಂಡಿಯನ್ ಕೊಂಗ್ರೆಸ್ ಜರಗಲಿದೆ—ಪ್ರಕೃತ ಸ್ಥಿತಿಯು ನಾಚಿಕೆಗೇಡು ಎಂದು ಠಾಗೂರರೆಂದರು—ಬ್ರಿಟಿಷರಿಗೆ ಕ್ರಮ ತಪ್ಪಿ ಬಗ್ಗಲಾರೆನೆಂದು ಡಿ'ವಲೇರಾರು ಹೇಳಿಬಿಟ್ಟರು—ರಶ್ಯಾನರು ಇನ್ನೊಂದು ಯುದ್ಧಕ್ಕೆ ಸೈನ್ಯ ಕಾಲಾಳುಗಳ ಸಿದ್ಧತೆಯನ್ನು ಮಾಡುತ್ತಿರುವರು—ಜವಾಹರಲಾಲರನ್ನು ಸೆರೆಮನೆಯಲ್ಲಿ ಅವರ ತಾಯಮ್ಮನವರೇ ಮೊದಲಾದವರು ಭೇಟಿಮಾಡಬಾರದಂತೆ—ಸುಭಾಷ್ಚಂದ್ರ ಬೋಸರು ಸೌಖ್ಯದಿಂದಿಲ್ಲ

ಸರ್ ಪುರುಷೋತ್ತಮದಾಸರು

ಸರ್ ಹೋರರ ನೀತಿಯನ್ನು ಟೀಕಿಸುತ್ತಾ, ''ಸರ್ ಹೋರರ ಪಕ್ಷೀಯರ ಸಮ್ಮತ ಮೇರೆಗೆ ಹಿಂದೀಯರು ನಡೆಯಲಾರರು; ಸರ್ ಹೋರರು ತನ್ನ ಧೋರಣೆಯನ್ನು ಬದಲಾಯಿಸದುದು ಏಕೆ? ಮತ್ತು ಯಾರ ಹೇಳಿಕೆ ಮೇರೆಗೆ? ಅವರ ಹೆಸರೇನು? ಭಾರತೀಯರಲ್ಲಿ ಹೆಚ್ಚಿನವರಿಗೆ ಸ್ವೀಕೃತವಲ್ಲದ ದಾನವನ್ನು ಕೊಟ್ಟರೆ ಸಾರ್ಥಕವಾಗಲಿಕ್ಕಿಲ್ಲ, ಸರ್ ಹೋರರು, ಮಂತ್ರಿವರ್ಯರು ಮೊದಲುಕೊಟ್ಟ ಭಾಷೆಯನ್ನು ಸಾಕವಾಗಿ ನಡೆಯಲಿಲ್ಲ ಮತ್ತು ಮಹಾತ್ಮಾಜೀಯವರನ್ನು ಸೆರೆಯಲಿಟ್ಟು ಯಾವುದನ್ನು ದಾನಮಾಡಿದರೂ ನಿಷ್ಫಲವೇ! ಶಾಂತಿ ಬೇಕಾದರೆ ಸಬರ್ಮತಿ ಸಾಧುವನ್ನು ಸೆರೆಯಿಂದ ಬಿಡಿರಿ ಅವರು ಕಾರಾಗೃಹದಲ್ಲಿದ್ದಾಗ ನೀವು ಹಿಂದೀಯರಿಗೆ ಏನು ಕೊಟ್ಟರೂ ಪ್ರಯೋಜನವಿಲ್ಲ" ಎಂದರು.

* * *

"ನಿನ್ನ ತಾಯಿತಂದೆಗಳು

ಒಂದು ಮೋಟಾರ್ ಅಪಘಾತಕ್ಕೆ ಸಿಕ್ಕಿಬಿದ್ದು ಘಾಯವಾಗಿ ವಿಪರೀತ ಸ್ಥಿತಿಯಲ್ಲಿ ಕೆ ಇ ಎಂ ಆಸ್ಪತ್ರೆಯಲ್ಲಿದ್ದಾರೆ ಎಂದು ಶ್ರೀಮತಿ ಪಾರ್ವತಿಬಾಯಿ ಎಂಬವಳಿಗೆ ಬಾಬು ಕಾಶಿನಾಥ ಮೋರೆ ಎಂಬ ಪರಿಚಿತನೋರ್ವನು ಹೇಳಿ, ಪಾರ್ವತಿಬಾಯಿಯನ್ನು ಆಸ್ಪತ್ರೆಗೆ ಕರೆದೊಯ್ದನೆಂದೂ, ಡಾಕ್ಟರರ ಫೀಸು ಕೊಡಲಿಕ್ಕೆಂದು ಅವಳಲ್ಲಿದ್ದ ೨೫೦ ರೂಪಾಯಿ ಬೆಲೆಬಾಳುವ ಆಭರಣಗಳನ್ನು ತೆಗೆದುಕೊಂಡು ಪಲಾಯನ ಮಾಡಿದನೆಂದೂ ಮುಂಬಯಿಯ ವಾರ್ತೆಯಿಂದ ತಿಳಿದು ಬರುತ್ತದೆ. ವಿಚಾರಣೆಯು ನಡೆಯುತ್ತಲಿದೆ

* * *

" ಬೈ ಇಂಡಿಯನ್ ಕೊಂಗ್ರೆಸ್ '

ಇದರ ಪ್ರಥಮಾಧಿವೇಶನವು ದಸರಾ ದಿನದಲ್ಲಿ ಕರಾಚಿಯಲ್ಲಿ ಜರಗಲಿರುವುದು ಹಿಂದೂದೇಶದಲ್ಲಿ ತಯಾರಾಗುವ ವಿವಿಧ ಸ್ವದೇಶಿ ಸಾಮಾನುಗಳು ಪ್ರದರ್ಶಿಸಲ್ಪಡುವುವು. ಲಕ್ಷಗಟ್ಟಲೆ ಜನರ ಸ್ವಾಗತಕ್ಕಾಗಿ ಏರ್ಪಾಡಾಗುತ್ತಲಿದೆ ವಸ್ತುಪ್ರದರ್ಶನಕ್ಕೆ ಹೋಗಲಿರುವವರೆಲ್ಲರೂ, ಈ ಕುರಿತು ಮಾಹಿತಿಯನ್ನರಿಯಬೇಕೆಂದಿರುವವರೂ ಸೆಕ್ರೆಟರಿಗಳಿಗೆ ಬರೆದುಕೊಳ್ಳಬಹುದು

* * *

ಮೂವರು ಪೋಲೀಸರ ಮರಣ

ಕಳೆದ ಎಪ್ರಿಲ್ ತಿಂಗಳಿನಲ್ಲಿ ಲಾಹೋರಿನಲ್ಲಿ ಓಡುತ್ತಿದ್ದ ರೈಲಿನಿಂದ ಪೋಲೀಸರ ಕೈವಶದಿಂದ ತಪ್ಪಿಸಿಕೊಂಡು ಓಡಿಹೋದ ರತನ್ ಸಿಂಗ್ ಎಂಬ ಕ್ರಾಂತಿಕಾರನನ್ನು ಹಿಡಿದುಕೊಟ್ಟವರಿಗೆ ಸರಕಾರವು ರೂಪಾಯಿ ೫೦೦೦ವನ್ನು ಕೊಡುತ್ತದೆಂದು ಪ್ರಕಟಿಸಲ್ಪಟ್ಟಿತ್ತು. ಇದೇ ೧೬ನೇ ದಿನ ಈ ಕ್ರಾಂತಿಕಾರನ ವಾಸಸ್ಥಾನವನ್ನು ಕಂಡುಹಿಡಿಯಲಾಯಿತು ಅವನನ್ನು ಸುಲಭದಿಂದ ಹಿಡಿದುತರಬಹುದೆಂದು ಕೆಲವು ಮಂದಿ ಪೋಲೀಸರು ಹೋದರು ಪೋಲೀಸರ ಆಗಮನವಾದುದನ್ನು ಕಂಡು ರತನ್‌ಸಿಂಗನು ತುಪಾಕಿಯನ್ನು ಹಾರಿಸಿ, ಅವರಲ್ಲಿ ಮೂವರನ್ನು ಕೊಂದುಹಾಕಿದನು ಪೋಲೀಸರೊಡನೆ ಹೋದ ಹಳ್ಳಿಗನೊಬ್ಬನೂ ನೆಲಸಮವಾದನು ರತನ್‌ಸಿಂಗನನ್ನು ಬಂದಿನಿಂದ ಕೊಂದುಬಿಟ್ಟರು

* * *

ಗಾಂಧೀ ಅರ್ವಿನ್ ಸಂಧಿಯನ್ನು ವಶೀಕರಿಸಿದರು.

ಕಲ್ಕತ್ತದ ದಿನಾಜಪುರದಿಂದೊಂದು ವಾರ್ತೆಯು ಅಲ್ಲಿಯ ಲಿಬರ್ಟಿ ಎಂಬ ಪತ್ರಿಕೆಯಲ್ಲಿ ಈ ರೀತಿಯಲ್ಲಿ ಪ್ರಕಟವಾಗಿದೆ—ಗಾಂಧೀ ಅರ್ವಿನ್ ಸಂಧಿಯನ್ನು ಕೆಲವು ಅಧಿಕಾರಿಗಳು ಕಂಡು ಮೆಚ್ಚುತ್ತಿದ್ದಿಲ್ಲ! ಆದರೆ ಗಾಂಧೀ ಟೋಪಿಯಂತೆ ಗಾಂಧೀ ಅರ್ವಿನ್ ಸಂಧಿಯೂ ಪೋಲೀಸರಿಗೆ ಸಂಶಯವನ್ನುಂಟುಮಾಡಿತೆಂದು ನಾವು ತಿಳಿದಿರಲಿಲ್ಲ ದಿನಾಜಪುರದ ಕೊಂಗ್ರೆಸ್ ಕಮಿಟಿಯು ಪ್ರಕಟಿಸಿದ ಬಂಗಾಳೀ ಭಾಷೆಯ ಗಾಂಧೀ ಅರ್ವಿನ್ ಸಂಧಿ ಪುಸ್ತಕವನ್ನು ಪೋಲೀಸರು ಮನೆ ಜಪ್ತಿಯ ಸಮಯ ವಶೀಕರಿಸಿಕೊಂಡರೆಂದು ಫ್ರೀ ಪ್ರೆಸ್ ವಾರ್ತೆ ಈ ಪುಸ್ತಕದ ಪ್ರತಿಗಳಿಂದ ಫಲವಾದರೂ ಏನೋ ತಿಳಿಯದು

ಬೆಕ್ಕುಗಳ ಮರಣ !

ಫರಿದ್‌ಪುರದಲ್ಲಿ ಆಕಸ್ಮಾತ್ ಒಂದು ಜಾಡ್ಯವು ಹರಡಿ [illegible] ನೂರುಗಟ್ಟಲೆ ಬೆಕ್ಕುಗಳು ಸತ್ತುವು ಮನೆಯೊಳಗೆ ಸುಖದಿಂದಿದ್ದ ಬೆಕ್ಕುಗಳೂ ಮಡಿದುಬಿದ್ದುವು ಆ ನಗರವಾಸಿಗಳೆಲ್ಲರೂ ಆಶ್ಚರ್ಯಪಟ್ಟರು. ದಿನೇ ದಿನೇ ಹಿತ್ತಲ ಮೂಲೆ ಮೂಲೆಗಳಲ್ಲಿ ಒಂದು ಬೀಳುತ್ತಿರುವ ಮೃತ ಬೆಕ್ಕುಗಳ ಸಂಖ್ಯೆಯು ಹೆಚ್ಚಾಗುತ್ತಿರುವುದನ್ನು ಕಂಡು ಅಲ್ಲಿಯ ಜನರು ಡೈರೆಕ್ಟರ್ ಒಫ್ ಪಬ್ಲಿಕ್ ಹೆಲ್ತ್ ಇವರಿಗೆ ಬರೆದುಕೊಂಡರು. ಅವರು ಉತ್ತರ ಕೊಡುತ್ತಾ ''ಇದೊಂದು ವಿಶೇಷ ಜಾಡ್ಯ ಇದರಿಂದ ಮಾಂಸಹಾರಿ ಪ್ರಾಣಿಗಳಿಗೆ ಮಾತ್ರ ಅಪಾಯವಲ್ಲದೆ ಜನರಿಗೇನೂ ಬಾಧಕವಿಲ್ಲ ಎಂದು ಬರೆದರು.

* * *

ಸ್ವಯಂಸೇವಕರು ಜಡ್ತಿಗಿಳಿದರು

ಅಹ್ಮದಾಬಾದ್, ಕಲ್ಕತ್, ದಿಲ್ಲಿಗಳಿಂದ ಒಂದು ವಿಶೇಷ ವಾರ್ತೆ ಬಂದಿದೆ ಅಹ್ಮದಾಬಾದಿನಲ್ಲಿ ಡಿಸ್ಟ್ರಿಕ್ಟ್ ಕೊಂಗ್ರೆಸ್ ಕಮಿಟಿಯ ಕಚೇರಿಯನ್ನು ಕೆಲಸಮಯದ ಹಿಂದೆ ಪೋಲೀಸರು ವಶೀಕರಿಸಿಕೊಂಡಿದ್ದರು [illegible] ಬೀಗ ಹಾಕಿ ಕಚೇರಿಯ ಬಾಗಿಲಿಗೆ ಬೀಗಮುದ್ರೆಯನ್ನೊತ್ತಿದ್ದರು ತಾ [illegible]ನೇ ದಿನ ಕೆಲವು ಸ್ವಯಂಸೇವಕರು ಒಟ್ಟುಗೂಡಿ ಜಯ ಘೋಷವನ್ನೆತ್ತುತ್ತಾ ಬೀಗವನ್ನು ಮುರಿದು ಬೀಗ ಒಡೆದು ಮಂದಿರಕ್ಕೆ ಹೊಕ್ಕರು. ಇವರಲ್ಲಿ ಕೆಲವರನ್ನು ಕೈದುಮಾಡಲಾಗಿದೆ ಕಲ್ಕತ್ತದಲ್ಲಿಯೂ ಇದೇ ರೀತಿಯಾಗಿ ಕೆಲವರು ಸೆರೆಹಿಡಿಯಲ್ಪಟ್ಟರು. ದಿಲ್ಲಿಯ ೧೫ ಮಂದಿ ಸ್ವಯಂಸೇವಕರು ಒಂದು ಧರ್ಮಶಾಲೆಗೆ ಹೊಕ್ಕು ಅದರ [illegible] ನೋಡುತ್ತಿದ್ದ ಇಬ್ಬರು ಪೋಲೀಸರಲ್ಲಿ ಒಬ್ಬನನ್ನು ಹಿಡಿದರು ಒಬ್ಬನು ಈ ವಾರ್ತೆಯನ್ನು ಕೊಡಲು ಸ್ಟೇಷನಿಗೆ ಓಡಿದನು ಸ್ವಯಂಸೇವಕರು ಒಳಹೊಕ್ಕು ಜಯಘೋಷವನ್ನೆತ್ತಿದರು ಪೋಲೀಸರು ಬಂದು ೧೧ ಮಂದಿಗಳನ್ನು ಕೈದುಮಾಡಿದ್ದಾರೆ

* * *

ಮಾನವನ ಮೋಸ !

ಪಾಟ್ನಾದಿಂದೊಂದು ವಾರ್ತೆ— [illegible] ಉದ್ಯೋಗಸ್ಥನು ಕಲ್ಕತ್ತದಲ್ಲಿದ್ದಾನೆ ಅವನ ಸಹವರ್ತಿಯೆನಿಸಲ್ಪಟ್ಟ [illegible] ಎಂಬವನು ಒಂದು ತಂತಿಯನ್ನು [illegible] ಕೊಂಡನು. [illegible] ಮಾನವನ [illegible] ವಿಶೇಷ ಕೆಲಸಕ್ಕೆ [illegible] ರೂಪಾಯಿಯನ್ನು ತಂತಿ [illegible] ಪೋಸ್ಟಾಫೀಸಿನಲ್ಲಿ [illegible] ಹಣವನ್ನು ಕೊಡಲೊಪ್ಪಲಿಲ್ಲ [illegible] ಸಂಶಯತೋರಿ ಆ ಹಣವನ್ನು [illegible] ಇದನ್ನು ಕಂಡು [illegible] ಕೊಂಡನು [illegible] ಒಡನೆ [illegible] ತನ್ನ [illegible] ಅವನೊಬ್ಬ ಪೋಲೀಗಾರನೆಂದೂ ತಿಳಿದುಬಂತು ಅಪರಾಧಿತನನ್ನು ಸೆರೆಹಿಡಿದಿದ್ದಾರೆ.

* * *

ಗಂಡನನ್ನು ಕೋಣೆಯೊಳಗೆ ಹಾಕಿ ಓಡಿದಳು'

ಕಲ್ಕತ್ತದ ಹರಿದಾಸನೆಂಬವನು ತನ್ನ ಯೌವನೆ ಪತ್ನಿ ಭೂಲದಾಸಿಯೆಂಬವಳೊಡನೆ ಸುಖವಾಗಿದ್ದನು ಹಾಗೂ ಹೀಗೂ ಒಂದು ದಿನ ಭೂಲದಾಸಿಗೆ ನೀಲಕಮಲದಾಸನೆಂಬವನ ಮೇಲೆ ಕಣ್ಣು ಬಿತ್ತು ದಾಸನೂ ದಾಸಿಯೂ ಊರುಬಿಟ್ಟು ಹೊರಡಬೇಕೆಂಬ ಪಿತೂರಿಯು ಅವರೊಳಗೆ ಗೂಢವಾಗಿ ನಡೆಯಿತು ತಾ ೧೬ನೇ ದಿನ ರಾತ್ರಿ ಸುಮಾರು ೩ ಘಂಟೆಗೆ ನೀಲಕಮಲದಾಸನು ದಾಸಿಯ ಮನೆಯ ಕಿಟಕಿ ಬಳಿ ಬಂದು ನಿಂತು ಸಂಜ್ಞೆಮಾಡಿದನು ದಾಸಿಗೆ ಎಚ್ಚರವಾಯಿತು. ತನ್ನ ಉಪಾಯವು ಕೈಗೂಡಿಬಂತೆಂದು ನೆನಸಿ ತಟ್ಟನೆ ಎದ್ದು ಗಂಡನಿಗೆ ಎಚ್ಚರವಾಗದಂತೆ ಜಾಗ್ರತೆಯಿಂದ ಹೊರಗೆ ಹೋಗಿ, ಹೊರಗಿನಿಂದ ಬೀಗ ಹಾಕಿದಳು. ಆ ಅಗ್ಗತೆಯಲ್ಲಿ ದಾಸದಾಸಿಯರು ಮಾಯವಾದರು. ಬೆಳಿಗ್ಗೆ ಹರಿದಾಸನು ಎದ್ದುನೋಡುತ್ತಾನೇನನ್ನು? ಮಲಗಿದ್ದ ಹೆಂಡತಿಯು ಕಾಣೆಯಾಗಿದ್ದಾಳೆ. ಅವಳನ್ನು ಬಹಳವಾಗಿ ಹುಡುಕಲಾಯಿತು. ಆದರೆ ದಾಸಿಯು ಕಾಣೆ ಕೊನೆಗೆ ದಾಸದಾಸಿಯರನ್ನು ಹಿಡಿಯಲಾಯಿತು. ವಿಚಾರಣೆಯು ನಡೆಯುತ್ತಲಿದೆ

* * *

ಕುರಿಗಳ ಹಿಂಡಿನಲ್ಲೊಂದು ಸಿಂಹ '

ಕಲಕತ್ತದಲ್ಲಿ ಕೆಲವು ಕಾಂಗ್ರೆಸ್ ಸ್ವಯಂಸೇವಕರು [illegible] ಕೆಲಸ ನಡೆಸುತ್ತಿದ್ದರು. ಆದರೆ ಅವರು ಮಾಡುತ್ತಿದ್ದ ಗೂಢವ್ಯವಹಾರವೆಲ್ಲ ಹೇಗೋ ಪೋಲೀಸರಿಗೆ ತಿಳಿಯುತ್ತಿತ್ತು ಇದಕ್ಕೆ ಕಾರಣವೇನೆಂದು ಅವರಿಗೆ ತಿಳಿಯದೆ ಹೋಯಿತು ಕೊನೆಗೆ ಒಂದು ದಿನ ಕುರಿಗಳ ಹಿಂಡಿನಲ್ಲಿರುವ ಸಿಂಹದಂತಿದ್ದ ಹಿರಾಲಾಲ್ ಸುರ್ ಎಂಬ ಅವರೊಳಗಿನ ಸ್ವಯಂಸೇವಕನೊಬ್ಬನ ಮೇಲೆ ಅವರಿಗೆ ಸಂದೇಹ ಹುಟ್ಟಿ ಅವನನ್ನು ಹಿಡಿದು ವಿಚಾರಿಸಿದರು ಗುಟ್ಟು ರಟ್ಟಾಯಿತು. ಸ್ವಯಂಸೇವಕನಾಗಿದ್ದರೂ ಕೊಂಗ್ರೆಸ್ಸಿನ ಗುಟ್ಟುಗಳನ್ನೆಲ್ಲ ಪೋಲೀಸರಿಗೆ ಹಿರಾಲಾಲನೇ ಕೊಡುತ್ತಿದ್ದನಂತೆ. ತಿಳಿದುಬಂದು ಕೆಲವು ಸ್ವಯಂಸೇವಕರು ಒಟ್ಟು ಸೇರಿದರು—ಹಿರಾಲಾಲನ ಮುಖಕ್ಕೆ ಮಸಿಯನ್ನು ಬಳಿದರು. ಚಪ್ಪಲಿಗಳ ಮಾಲೆಯನ್ನು ಮಾಡಿ ಅವನ ಕೊರಳಿಗೆ ಹಾಕಿ, ಅವನನ್ನು ಮೆರವಣಿಗೆಯಲ್ಲಿ ಕೊಂಡೊಯ್ದರು. [illegible] ನಂತರ ಹಿರಾಲಾಲನು [illegible] ಮಾಡಿದನು [illegible] ಅದರಲ್ಲಿ ಹಿರಾಲಾಲನು ತಾನು ಅನೇಕ ಸಮಯದಿಂದ ಈ [illegible] ಕೆಲಸದಲ್ಲಿ ನಿರತನಾಗಿದ್ದೆನೆಂದೂ ಅಪರಾಧಿಕರಾದ ಸ್ವಯಂಸೇವಕರಿಗೆ ತಕ್ಕ ಶಿಕ್ಷೆಯನ್ನು ಕೊಡ[illegible] ಅದನ್ನವರು ಸಂತೋಷದಿಂದ ಸ್ವೀಕರಿಸಿದರು ಕಲ್ಕತ್ತ [illegible] ಕುರಿಗಳ ಹಿಂಡಿನ [illegible] ಸುದ್ದಿಯೇ!

* * *

ಉಪಕಾರಕ್ಕೆ ಹೋಗಿ ಅಪಕಾರ

ಜಬ್ಬಲ್‌ಪುರದಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ಸೋಶಿಯಲ್ ಸರ್ವಿಸ್ ಲೀಗ್ ಎಂಬುದರ ಅಧ್ಯಕ್ಷ, ಸೆಕ್ರೆಟರಿ ಮತ್ತಿಬ್ಬರು ರಘುವರನೆಂಬವನ ಉಪಕಾರಕ್ಕೆ ಹೋಗಿ ಕೋರ್ಟಿಗೆಳೆಯಲ್ಪಟ್ಟರು. ಕತೆಯೊಂದು ಬಂದಿದೆ ರಘುವರನಿಗೆ ಒಬ್ಬಳು ಪತ್ನಿಯಿದ್ದಳು. ಎಂಟು ವರ್ಷಗಳ ತನಕ ಅವನೊಡನಿದ್ದ ಮೇಲೆ ಆ ಪತ್ನಿಗೆ [illegible] ನೆರೆಹೊರೆಯಲ್ಲಿದ್ದ [illegible] ಬ್ರಾಹ್ಮಣನೊಬ್ಬನ ಮೇಲೆ ಪ್ರೇಮ[illegible] ಬೀರಿದಳು—ಇಬ್ಬರೂ ಕೂಡಿ ಒಂದು ಪ್ರತ್ಯೇಕ ಮನೆ ಮಾಡಿಕೊಂಡು ಸುಖದಿಂದಿದ್ದರು. ಇದನ್ನು ನೋಡಿ ರಘುವರನಿಗೆ ಆಶ್ಚರ್ಯವೂ [illegible] ಸೋಶಿಯಲ್ ಸರ್ವಿಸ್ ಲೀಗಿಗೆ ಅರ್ಜಿ [illegible] ಲೀಗಿನವರು ಒಡನೆ ಸಹಾಯಕ್ಕೆ ಹೊರಟರು ರಘುವರನ ಪತ್ನಿಯಿದ್ದಲ್ಲಿಗೆ ಹೋಗಿ ತಾವು ಸರಕಾರಿ ಅಧಿಕಾರಿಗಳೆಂದೂ ತಮ್ಮೊಡನೆ ಒಡನೆ ಹೊರಟುಬರಬೇಕೆಂದೂ ಅವಳಿಗೆ ಹೇಳಿದರು ಆ ಸ್ತ್ರೀಗೆ ಭಯ ಉಂಟಾಗಿ ತನ್ನ ಪ್ರಿಯನು ಮನೆಯಲ್ಲಿಲ್ಲದಿದ್ದರೂ [illegible] ಅವರೊಡನೆ ಹೊರಟಳು. ಲೀಗಿನವರು ಅವಳನ್ನು ಲೀಗಿನ ಆಶ್ರಯದಲ್ಲಿರಿಸಿದರು. ಆದರೆ ಅವಳು ಅಲ್ಲಿಂದ ತಪ್ಪಿಸಿಕೊಂಡು ಹೋಗಿ ಪೋಲೀಸರಿಗೆ [illegible] ದೂರನ್ನು [illegible] ರಘುವರನೂ ಅಧಿಕಾರಿಗಳೂ ಕೋರ್ಟಿಗೆಳೆಯಲ್ಪಟ್ಟಿದ್ದಾರೆ

* * *

ಮುಂಬಾಯಿಯಲ್ಲಿ ಅಗ್ನಿಯ ಅನಾಹುತ'

ಕಳೆದ ಆದಿತ್ಯವಾರ ಬೆಳಿಗ್ಗೆ ಮುಂಬಾಯಿಯ [illegible] ಹೌಸಿನಲ್ಲಿ ಬೆಂಕಿಯೆದ್ದಿತು. ಅದರಲ್ಲಿ [illegible] ಥಿಯೇಟರಿನವರು ನಾಟಕಗಳನ್ನು ಆಡುತ್ತಿದ್ದರು. ಬೆಂಕಿಗೆ ಕಾರಣವೇನೆಂದು ತಿಳಿದುಬಂದಿರುವುದಿಲ್ಲ. ಅದು ಸ್ವಲ್ಪ ಸ್ವಲ್ಪ ಉರಿಯುತ್ತಿರುವಾಗಲೇ ಶ್ರೀ [illegible] ಎಂಬವರು ನೋಡಿ ಬೊಬ್ಬೆಯಿಟ್ಟು ನಂದಿಸಲು ಜನರನ್ನು ಕರೆದರು ಫಯರ್ ಬ್ರಿಗೇಡುಗಳು ಬಂದುವು. ಸ್ಟೇಜನ್ನು ಸುಡುತ್ತಿದ್ದ ಬೆಂಕಿಯನ್ನು ಕೂಡಲೇ ನಂದಿಸಲಾಯಿತು ಕೆಲವು ಪರದೆಗಳು ಸುಟ್ಟುಹೋದುವು ಸುಮಾರು ೩೦,೦೦೦ ರೂಪಾಯಿಯ ನಷ್ಟವಾಗಿದೆಯೆಂದು ತಿಳಿದುಬಂದಿದೆ ೩೦೦ ರೂಪಾಯಿಯ ನಷ್ಟವು ಕಟ್ಟೋಣಕ್ಕೆ ಸಂಭವಿಸಿದೆ

* * *

ಪರೀಕ್ಷಿಸಿರಿ! ಪ್ರಾತ್ರಿಯಾಗುವದು!!

ಕೆಮ್ಮೆಟ್ಟು ಅಗ್ಗ ಮುಖ್ಯಸ್ಥರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಶಿಷ್ಯರು ... ಅನುಭವಶಾಲಿಯಾದ ವೈದ್ಯರಿಂದ ... ಎಲ್ಲಾ ತರದ ವ್ಯಾಧಿಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ವಸ್ತ್ರ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಕ್ಕುತ್ತವೆ. ತಯಾರ ... ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ರೋಗಿಗೆ ಕಾಲ, ಪ್ರಾಯ, ... ಆಹಾರ ಕ್ರಮ, ವೃತ್ತಿ ಇವುಗಳು ಮೊದಲಾದ ... ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮುಖ್ಯ ... ವಿವರಗಳು ... ಚಿಕಿತ್ಸೆ ನಡಿಸುವರೆಯೂ ... ಕೆಳಗಿನ ವಿಳಾಸಕ್ಕೆ ... ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ... ಮದ್ದುಗಳನ್ನು ... ಹೆಚ್ಚಿನ ವಿವರಕ್ಕೆ ... ವ್ಯವಹಾರ ನಡಿಸಬಹುದು

ಶಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ ಕ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ತುಂಬಾ

ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ?

ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿ

ಯನ್ನು ತೆಗೆದುಕೊಳ್ಳಿರಿ

ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ

ಬರೆದುಕೊಳ್ಳಿರಿ

Wanted.

Agents for 'Swadeshabhimani' throughout the South Kanara District and elsewhere Apply Sharp — You are sure to secure substantial Commission

MANAGER,
Swadeshabhimani,
Mangalore

ವಿಕೃತವಾದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧಗಳಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್

ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dadar Bombay, 14

ತಂತಿ ವಿಳಾಸ – CAVASPUR' Bombay

ಕವಸ್ಪೂರ್ಜಿ ಎಚ್. ಎಲ್. ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್

ಲೋಧ್ರ — ... ಎಲ್ಲಾ ... ರೋಗಗಳನ್ನು ... ಆರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ — ... ಎಲ್ಲಾ ತರದ ಜ್ವರಗಳನ್ನು ... ದೇಹವನ್ನು ಬಿಡ್ಡಿಗೊಳಿಸುತ್ತದೆ

ಅಮೃತ — ... ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works Ltd, Bombay,14

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು

ಇದು ಅವಲಕ್ಕಿ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ ... ನಾನಾ ವಿಧವಾದ ... ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ... ರಕ್ತಕ್ಷೀಣತೆ, ಪುಷ್ಟಿಹೀನತೆ ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪೌ ಜಾಡಿ ರೂ 10/– ಕ್ರಯ 1 ಪೌನು ಸೀಸೆ ರೂ 2/8 ½ ಪೌ ರೂ. 1/5 ¼ ಪೌ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು

ಶಿರ್ಸಿ ಏಜಂಟರು — ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು—ಮೈಸೂರು ಏಜಂಟರು—ಟಿ ಸಿ ನಟರಾಜ್ ಅಂಡ್‌ಕೊ, ಸಯಾಜಿರಾವ್ ರೋಡ್

ಬೆಂಗಳೂರು ಏಜಂಟರು — ಬಿ ಪೋಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ಚಳವಳದ ಸುದ್ದಿ.

ಕೈದು! ಶಿಕ್ಷೆ! ಬಿಡುಗಡೆ!

ಲಾಹೋರಿನಲ್ಲಿ

ಪೋಲೀಸರು ಜಪ್ತಿ ನಡೆಸಿದರು. ಅನೇಕ ಮನೆ ಮಠಗಳು ಪರಿಶೋಧನೆಗೊಳಗಾದುವು. ಒಟ್ಟು ೩೧ ಮಂದಿಗಳು ಕೈದುಮಾಡಲ್ಪಟ್ಟರು.

ಕರಾಚಿಯಲ್ಲಿ

ಐದು ಮಂದಿ ಮುಂದಾಳು ಕಾಂಗ್ರೆಸ್‌ವಾಲರ ಮೇಲೆ ನೋಟೀಸು ಜಾರಿಯಾಗಿ, ಅವರು ಕರಾಚಿ ಕಾಂಗ್ರೆಸ್ ಕಮಿಟಿಯ ಕೆಲಸಗಳಲ್ಲಿ ಭಾಗವಹಿಸಬಾರದಾಗಿ ಅಪ್ಪಣೆಯಾಗಿದೆ. ಅಲ್ಲದೆ ಅವರಲ್ಲಿ ನಾಲ್ವರು ಕರಾಚಿ ಪಟ್ಟಣವನ್ನು ಬಿಟ್ಟು ಹೊರಗೆ ಹೋಗಬಾರದಾಗಿ ಹುಕುಂ ಆಗಿದೆ. ಐದನೇಯವರಾದ ಶ್ರೀ. ತ್ರಿಭುವನ ಪಟೇಲರೆಂಬ ವಿದ್ಯಾರ್ಥಿಯೊಬ್ಬರು ೨೪ ಘಂಟೆಗಳೊಳಗೆ ಊರು ಬಿಟ್ಟು ಹೋಗಬೇಕಾಗಿ ಆಜ್ಞಾಪಿಸಿದ್ದಾರೆ. ಆದರೆ ಅವರು ಹಾಗೆ ಮಾಡದೆ ರಾಷ್ಟ್ರಧ್ವಜಾರೋಹಣ ಮಾಡಿ ಕೈದಿಯಾದರು.

ರಾಜಕೀಯ ಕೈದಿಗಳ ದಿನಾಚರಣೆಗಾಗಿ

ಕರಾಚಿಯಲ್ಲಿ ಡಾ| ಎನ್. ಆರ್. ದೇವೂ ಭಂಕರ್ ಎಂಬವರ ಮುಂದಾಳುತನದಲ್ಲಿ ೩೨ ಮಂದಿಗಳು ಸರಕಾರದ ಕೈಯಲ್ಲಿದ್ದ ಕಾಂಗ್ರೆಸ್ ಆಫೀಸನ್ನು ವಶೀಕರಿಸಿಕೊಳ್ಳಲು ಯತ್ನಿಸಿದರು ಮತ್ತು ಮೆರವಣಿಗೆಯನ್ನು ಮಾಡಿದರು. ಎಲ್ಲರೂ ಶಿಕ್ಷೆಗೊಳಗಾಗಿದ್ದಾರೆ

ಶ್ರೀ ಸುಭಾಸ ಬೋಸರು

ಅಸ್ವಸ್ಥರಾಗಿರುವುದರಿಂದ ಅವರನ್ನು ಜಬ್ಬಲ್‌ಪುರದ ಕಾರಾಗ್ರಹದಿಂದ ಮದ್ರಾಸಿಗೆ ಕೊಂಡೊಯ್ದರು. ಶ್ರೀಯುತರು ಬಹಳ ಕ್ಷೀಣವಾಗಿದ್ದಾರಾಗಿಯೂ ವಿವರ್ಣಗೊಂಡಿದ್ದಾರೆಂದೂ ತಿಳಿದುಬಂದಿದೆ. ಅವರನ್ನು ಎಕ್ಸ್‌ರೇ ಮೂಲಕ ಪರೀಕ್ಷೆಮಾಡುವರು.

ಮಥುರೆಯಲ್ಲಿ

ಮೆರವಣಿಗೆಯನ್ನು ಮಾಡಿದ ನಾಲ್ಕು ಮಂದಿ ಸ್ವಯಂಸೇವಕರು ಶಿಕ್ಷೆಗೊಳಗಾದರು. ಕೋರ್ಟಿನೊಳಗೆ ಹೋಗಿ ಕರಪತ್ರಗಳನ್ನು ಹಂಚಿದ ಕೆಲವು ತರುಣರನ್ನು ಕೈದುಮಾಡಿದ್ದಾರೆ.

ಬೆಳಗಾಂವಿಯ

ಸೆರೆಮನೆಯಲ್ಲಿದ್ದ ಡಾ| ಎನ್. ಎಸ್. ಹರ್ಡೀಕರರನ್ನೂ ಶ್ರೀ ಆರ್. ಎಸ್. ಹುಕ್ಕೇರಿಕರ್‌ರವರನ್ನೂ ಬೆಂಗಳೂರು ಪೂನಾ ಎಕ್ಸ್‌ಪ್ರೆಸ್ಸಿನ ಮೂಲಕವಾಗಿ ಕೊಂಡೊಯ್ದರು. ಸಬರ್ಮತಿ ಕಾರಾಗ್ರಹಕ್ಕೆ ಕೊಂಡೊಯ್ದಿರಬಹುದೆಂದು ತಿಳಿದುಬಂದಿದೆ.

ಕಣ್ಣಾನೂರಿನಲ್ಲಿ

ವಿದೇಶಿ ವಸ್ತ್ರದಂಗಡಿಗಳನ್ನು ಪಿಕೆಟ್‌ಮಾಡಿದ ಕೆಲವು ಸ್ವಯಂಸೇವಕ ತಂಡಗಳನ್ನು ಕೈದುಮಾಡಿದ್ದಾರೆ. ಶ್ರೀಮತಿ ಅಂಗಾಜಿ ಅಮ್ಮ ಮತ್ತು ಶ್ರೀಮತಿ ಕಾಮಾಕ್ಷಿ ಅಮ್ಮ ಎಂಬಿಬ್ಬರು ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಿರುವರು.

ಪೆರಲಸ್ಸೆರಿ ಪರಿಷತ್ತು

ಕಣ್ಣಾನೂರಿನ ಬಳಿ ಪೆರಲಸ್ಸೆರಿ ಎಂಬಲ್ಲಿ ಜರಗಲಿದ್ದ ರಾಜಕೀಯ ಪರಿಷತ್ತನ್ನು ನಿಷಿದ್ಧಪಡಿಸಿರುವರು. ಬಹುಮಂದಿಗಳನ್ನು ಕೈದುಮಾಡಿರುವರಾಗಿ ತಿಳಿದುಬಂದಿದೆ

ಮದ್ರಾಸಿನ

"ಸ್ವರಾಜ್ಯ" ಪತ್ರಿಕೆಯ ಸಂಪಾದಕರಾದ ಶ್ರೀ. ಟಿ. ಪ್ರಕಾಶಂರವರನ್ನು ಎಲ್ಲೂರು ಜೈಲಿನಿಂದ ಬಿಡುಗಡೆಮಾಡಿರುವರು.

ಕಲ್ಕತ್ತದ

ಅಮೃತ ಬಜಾರ ಪತ್ರಿಕೆಯು ಕೋರ್ಟು ತಿರಸ್ಕಾರವನ್ನು ಮಾಡುವ ಲೇಖನಗಳನ್ನು ಪ್ರಕಟಿಸಿರುತ್ತದೆಂದು ಅದನ್ನು ಶಿಕ್ಷೆಗೆಳೆಯಲು ನೋಟೀಸು ಹೋಗಿದೆ.

ಕಟ್ಟಕ್‌ನಲ್ಲಿ

ಸ್ಪೆಶಲ್ ಮೆಜಿಸ್ಟ್ರೇಟರ ಕೋರ್ಟನ್ನು ಹೊಕ್ಕು 'ಜಪ್ತಿ' ನಡೆಸಿದ ಎಂಟು ಮಂದಿ ಸ್ವಯಂಸೇವಕರಲ್ಲಿ ಇಬ್ಬರಿಗೆ ಶಿಕ್ಷೆಯಾಯಿತು. ಉಳಿದವರಿಗೆ ಎಂಟೆಂಟರಂತೆ ಛಡಿ ಕೊಡಲಾಯಿತು.

ಮುಂಬಾಯಿಯಲ್ಲಿ

ವಿದೇಶಿ ವಸ್ತ್ರದಂಗಡಿಗಳನ್ನು ಪಿಕೆಟ್ ಮಾಡಿದುದಕ್ಕಾಗಿ ಮೂರು ಮಂದಿ ಸ್ವಯಂಸೇವಕರು ಕೈದುಮಾಡಲ್ಪಟ್ಟಿದ್ದಾರೆ.

ಜಬ್ಬಲ್‌ಪುರದಲ್ಲಿ

ಕಾಂಗ್ರೆಸ್ ಕೆಲಸದಲ್ಲಿ ಭಾಗವಹಿಸಿದ ಸೇಠ್ ಗೋವಿಂದದಾಸ್ ಎಂಬ ಮುಂದಾಳುವು ಕಳೆದ ಜನವರಿಯಲ್ಲಿ ಒಂದು ವರ್ಷದ ಸಜೆಗೂ ೨೦೦೦ ರೂಪಾಯಿ ಜುಲುಮಾನೆಗೂ ಗುರಿಯಾಗಿದ್ದು ಕಾರಾಗ್ರಹವಾಸವನ್ನನುಭವಿಸುತ್ತಿದ್ದರು. ಅವರ ಪತ್ನಿಯ ಅಸ್ವಸ್ಥ ಸಂಬಂಧವಾಗಿ ಅವರನ್ನು ಬಿಡಲಾಗಿದೆ.

ನ್ಯೂಡಿಲ್ಲಿಯಲ್ಲಿ

ಜಮೀಯತ್ ಉಲ್‌ಉಲೇಮಾದ ಆಫೀಸಿನಲ್ಲಿ ಮೌಲಾನಾ ಮುಜಾಹಿರ್ ರಹಿಮಾನ್ ಎಂಬವರನ್ನು ಕೈದುಮಾಡಿದರು. ಇವರು ಅಲ್ಲಿಯ ಕಾಂಗ್ರೆಸ್ ಸರ್ವಾಧಿಕಾರಿಯ ಸಂದೇಶವನ್ನು ಓದಿ ಹೇಳುತ್ತಿರುವಾಗಲೇ ಕೈದುಮಾಡಲ್ಪಟ್ಟರು.

ಕಾನ್‌ಪುರದಲ್ಲಿ

ವಿದ್ಯಾರ್ಥಿಗಳ ಕೈಯಲ್ಲಿ ಸೈಕ್ಲೊಸ್ಟೈಲ್ ಕರಪತ್ರಕಗಳು ಕಾಣಸಿಗುತ್ತವೆ. ಎಲ್ಲಿಂದ ಬರುತ್ತವೆಂದು ತಿಳಿದುಬಂದಿಲ್ಲ.

ಅಹ್ಮದಾಬಾದಿನಲ್ಲಿ

ಮುಂಬಾಯಿ ಕ್ರೊನಿಕಲಿನ ವಾರ್ತಾವಾಹಕರಲ್ಲೊಬ್ಬರಾದ ಶ್ರೀ| ಕಪಿಲಪ್ರಸಾದರೆಂಬವರು ತಾನು ಪತ್ರಿಕೆಗಳಿಗೆ ಕಳುಹಿಸುವ ವಾರ್ತೆಯನ್ನು ಜಾಗ್ರತೆಯಿಂದ ಬರೆದು ಕಳುಹಿಸಬೇಕೆಂದು ನೋಟೀಸು ಹೋಗಿದೆ.

ರಾಜಾರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ.

ಲೇಖಕರು - ಶ್ರೀ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ
ಮಂಗಳೂರು.

ಭಾರತವರ್ಷದ ಮತಸುಧಾರಕರಲ್ಲಿ ರಾಜಾರಾಮಮೋಹನರಾಯ, ಕೇಶವ ಚಂದ್ರಸೇನ, ಸ್ವಾಮಿ ದಯಾನಂದ ಸರಸ್ವತಿಯವರೇ ಪ್ರಮುಖರೆನ್ನಬಹುದು. ಸಾಮಾಜಿಕ ಸುಧಾರಣೆಯಲ್ಲಿ ರಾಮಮೋಹನರು ಪ್ರಥಮ ಪುರುಷರು, ಅಂದರೆ ಈ ಮಹಾಪುರುಷರ ಮೊದಲು ಯಾರೊಬ್ಬರೂ ಈ ಯುಗದಲ್ಲಿ ಸಮಾಜಸುಧಾರಣೆಯ ಕಾರ್ಯವನ್ನು ಕೈಕೊಂಡದ್ದಿಲ್ಲ. ಕ್ರೈಸ್ತ ಮತದಲ್ಲಿ (John Wycliff) ಎಂಬವನಂತೆ ಹಿಂದೂ ಮತದಲ್ಲಿ ರಾಮಮೋಹನರು ಹುಟ್ಟಿದರು. ಭಾರತೀಯರ ಸುಧಾರಣೆಯ ಪವಿತ್ರ ಕಾರ್ಯದಲ್ಲಿ ರಾಮಮೋಹನರು ಪ್ರಾತಃಕಾಲದ ನಕ್ಷತ್ರ "Morning star of Reformation"ದಂತಿದ್ದರು. ಈ ಮಹನೀಯರು ಹಿಂದೂ ಧರ್ಮದ ಉದ್ಧಾರಾರ್ಥವಾಗಿ ಏನೇನು ಮಾಡಿದರೆಂಬುದನ್ನು ತಿಳಿಯುವ ಮೊದಲು ನಾವು ಹಿಂದೂ ಧರ್ಮದ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಳ್ಳಬೇಕು.

ಪ್ರಾಚೀನವಾದ ವೈದಿಕಧರ್ಮ ತತ್ವವು ಲುಪ್ತವಾಗಿ ಕೆಲವು ಸಾವಿರ ವರ್ಷಗಳು ಕಳೆದು ಹೋಗಿದ್ದುವು. ಅದರ ಬಾಹ್ಯಸ್ವರೂಪವು ಮಾತ್ರ ಹಿಂದೂಧರ್ಮವೆಂದು ಹೇಳಿಸಿಕೊಳ್ಳಲ್ಪಡುತ್ತಿತ್ತು. ಅದ್ವಿತೀಯವಾಗಿಯೂ ಪರಮ ಮಂಗಲವಾಗಿಯೂ ಇರುವ ಯಾವ ಒಬ್ಬನೇ ಪರಸ್ವರೂಪಿ ಪರಮಾತ್ಮನನ್ನು ರಾಮ, ಕೃಷ್ಣಾದಿ ಸತ್ಪುರುಷರು ಉಪಾಸಿಸುತ್ತಿದ್ದರೋ ಅವನ ಆರಾಧನೆಯನ್ನು ಬಿಟ್ಟು ಜನರು ಆ ಪುರುಷರನ್ನೇ ದೇವರೆಂದು ಪೂಜಿಸತೊಡಗಿದ್ದರು. ಪರಮ ಪವಿತ್ರವಾದ ವೈದಿಕ ಯಜ್ಞದ ಹೆಸರಲ್ಲಿ ಸಾವಿರಾರು ಮೂಕ ಪ್ರಾಣಿಗಳು ಬಲಿಯಾಗಿ ಅರ್ಪಿಸಲ್ಪಡುತ್ತಿದ್ದುವು. ಲಕ್ಷಾಂತರ ಕೋಣ ಆಡ ಇತ್ಯಾದಿಗಳು ದೇವಿ ದೇವತೆಗಳ ಪದತಲದಲ್ಲಿ ಮಡಿಸಲ್ಪಡುತ್ತಿದ್ದುವು. ಪುರಾತನವಾದ ವರ್ಣಾಶ್ರಮವು ನಾಶವಾಗಿ ಅದರ ಬದಲಿಗೆ ಲೆಕ್ಕವಿಲ್ಲದಷ್ಟು ಜಾತಿಗಳು ಎದ್ದು ನಿಂತಿದ್ದುವು. ವಿವಾಹಾದಿ ಶುದ್ಧ ಸಂಸ್ಕಾರಗಳು ವೇದಮಂತ್ರದಲ್ಲಿಯೇ ಆಗುತ್ತಿದ್ದರೂ, ಅವು ವಿಧಿಪೂರ್ವಕವಾಗಿ ಅನುಷ್ಠಾನದಲ್ಲಿ ಆಗುತ್ತಿದ್ದಿಲ್ಲ. ಅಂದರೆ ತೋರಿಕೆಗೆ ಮಾತ್ರ ಒಂದೆರಡು ಮಂತ್ರಗಳನ್ನು ಪುರೋಹಿತರೇ ಉಚ್ಚರಿಸಿ, ದೊರೆಯುವ ದಕ್ಷಿಣೆಗೆ ತಕ್ಕ ಕೆಲಸಮಾಡಿಬಿಡುತ್ತಿದ್ದರು. ಮುಖ್ಯವಾಗಿ ಶಿಶುತನದಲ್ಲಿ ಮದುವೆಯಾಗಿ ಯೌವನವನ್ನು ಹೊಂದುವುದರೊಳಗೆ ಅನೇಕ ಕನ್ಯೆಯರು ವಿಧವೆಯರಾಗುತ್ತಿದ್ದರಲ್ಲದೆ, ಪತಿವ್ರತಾಧರ್ಮವೆಂಬುದು ನಾಮಮಾತ್ರಕ್ಕಿತ್ತು. ಕೆಲವು ಕಡೆಗಳಲ್ಲಿ ಪುರೋಹಿತರು ಮರಣಪಟ್ಟ ಗಂಡನೊಡನೆ ಅವನ ಪತ್ನಿಗೆ ಸ್ವರ್ಗಕ್ಕೆ ಹೋಗುವ ಆಶೆಯನ್ನು ತೋರಿಸಿ, ಅಥವಾ ಸಮಾಜ ವಿಧಿಸುವ ದಂಡನೆಯ ಹೆದರಿಕೆಯನ್ನು ಹುಟ್ಟಿಸಿ, ಬಲಾತ್ಕಾರದಿಂದ ಪತಿಶವದೊಂದಿಗೆ ಪತ್ನಿಯನ್ನು ಜೀವಸಹಿತ ಸುಟ್ಟು ಹಾಕಿ ತಮ್ಮ ಸ್ವಾರ್ಥದ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಿದ್ದರು, ಮತ್ತು ಬಾಹ್ಯ ಆಡಂಬರಕ್ಕೆ ಬೇಕಾಗಿ "ಸತೀ" "ಸತೀ" ಎಂದು ಘೋಷಣೆಮಾಡುತ್ತಿದ್ದರು.

ಭಯಂಕರವಾದ ಈ ಪರಿಸ್ಥಿತಿಗಳು ಕೆಲವು ಶತಮಾನಗಳಿಂದ ಹಿಂದೂ ಸಮಾಜದಲ್ಲಿ ನಡೆಯುತ್ತಾ ಇದ್ದುವು. ಮಹಾತ್ಮಾ ಬುದ್ಧದೇವನೂ, ಮಹಾವೀರನೂ ಬೌದ್ಧ ಮತ್ತು ಜೈನ ಧರ್ಮವನ್ನು ಸ್ಥಾಪನೆಮಾಡಿ ಹಿಂದೂ ಜಾತಿಯ ಸುಧಾರಣೆಯನ್ನು ಮಾಡಲೆಚ್ಚಿಸಿದರು. ವೇದಗಳನ್ನು ವೈದಿಕ ಯಜ್ಞ ವಿಧಿಗಳನ್ನು ಇವರಿಬ್ಬರೂ ತಿರಸ್ಕರಿಸಿದರು. ವೈದಿಕ ಸಂಸ್ಕೃತಿಯನ್ನು ಮಾತ್ರ ಚೆನ್ನಾಗಿ ಅಭ್ಯಾಸಮಾಡಿದರು. ಶಂಕರ, ರಾಮಾನುಜ ಮುಂತಾದ ಆಚಾರ್ಯರುಗಳು ಪುನಃ ವೈದಿಕ ಧರ್ಮವನ್ನು ಸ್ಥಾಪನೆಮಾಡಿದರು. ಈ ಪ್ರಕಾರ ಹಿಂದೂ ಧರ್ಮದಲ್ಲಿ ಅನೇಕ ಸಾಂಪ್ರದಾಯಗಳು ಆಗಿ ಹೋದುವು. ಆದರೆ ವೈದಿಕ ಸಂಸ್ಕೃತಿಯು ಈ ಸಂಪ್ರದಾಯಗಳಿಂದಾಗಿ ಬಹಳವಾಗಿ ದೂಷಿಸಲ್ಪಡುತ್ತಿದ್ದರೂ, ಅದು ನಷ್ಟವಾಗಿ ಗೌಣವಾಗಿ ಉಳಿಯಿತು. ವೇದ, ಉಪನಿಷತ್ ಇತ್ಯಾದಿಗಳ ಹೆಸರನ್ನು ಮಾತ್ರ ಜನರು ಮರೆಯಲಿಲ್ಲ. ಧರ್ಮದ ವೃಕ್ಷವು ಒಣಗತೊಡಗಿದ್ದರೂ, ಅದರಲ್ಲೂ ಅಲ್ಪ ಸ್ವಲ್ಪ ವಾಸನೆ ಇತ್ತು.

ಈ ಸಂದರ್ಭದಲ್ಲಿ ಅಕಸ್ಮಾತ್ತಾಗಿ ಒಂದು ಹೊಸ ರೀತಿಯ ವಿಪ್ಲವವು ಉಂಟಾಗಿ ವೃಕ್ಷವು ಬುಡಸಮೇತವಾಗಿ ಅಲುಗಾಡತೊಡಗಿತು. ಮಹಮ್ಮದೀಯ ಮತ್ತು ಕ್ರೈಸ್ತರ ರೀತಿನೀತಿಗಳು ಹಿಂದೂಸ್ಥಾನದ ಮೇಲೆ ಪಸರಿಸುತ್ತಾ ಬಂದಂತೆ ನೈತಿಕ ಪರಿವರ್ತನೆಗಳುಂಟಾಗಿ ಥಕ್ಕನೇ ಧಾರ್ಮಿಕ ಭಾವನೆಗಳೂ ಅಡಿಮೇಲಾಗತೊಡಗಿದುವು. ಹಿಂದೂ ಧರ್ಮದ ವೃಕ್ಷವು ಒಣಗಿ ಜರ್ಝರಿತವಾಗಿರುವುದನ್ನು ವಿದೇಶದಿಂದ ಬಂದವರು ನೋಡಿ, ಈ ರೀತಿ ಶುಷ್ಕವಾಗಿರುವ ಮರವನ್ನು ಇಟ್ಟು ಪ್ರಯೋಜನವೇನು? ಇದನ್ನು ಬೇರುಸಹಿತ ಕಿತ್ತು, ಸುಟ್ಟು ಹಾಕಿ ಇದರ ಬದಲಿಗೆ ನವೀನ ಚಿಗುರುಗಳಿಂದ ಶೋಭಾಯಮಾನವಾದ ಬಲಶಾಲಿ ವೃಕ್ಷವನ್ನು ನೆಟ್ಟರೆ ಒಳ್ಳೆಯದಲ್ಲವೇ ಎಂದು ಅಲ್ಲಲ್ಲಿ ಪರಾಮರ್ಶಿಸ ತೊಡಗಿದರು.

ಇವರು ಮಾಡಿದ ಪರಾಮರ್ಶೆಯನ್ನು ಒಬ್ಬೊಬ್ಬರು ಒಂದೊಂದು ವಿಧದಲ್ಲಿ ಸ್ವಾಗತಮಾಡಿದರು. ಕೆಲವರು ಇದನ್ನು ಮುಕ್ತ ಕಂಠದಿಂದ ಒಪ್ಪಿಕೊಂಡರು. "ಇದು ತಂದೆ ತೋಡಿದ ಬಾವಿ ಆಗಿರುವುದರಿಂದ ನಾನು ಇದೇ ಬಾವಿಯ ನೀರನ್ನು ಕುಡಿಯುವೆನು. ಬಾವಿಯ ನೀರು ಉಪ್ಪಾಗಲೀ, ಸಪ್ಪೆಯಾಗಲೀ ಇದನ್ನು ನಾನು ಬಿಡಲಾರೆ ಎಂಬ ಅಂಧ ಶ್ರದ್ಧೆಯಿಂದ ತನ್ನ ಹಾನಿ ಮಾಡಿಕೊಳ್ಳುವುದಕ್ಕಿಂತ ತನ್ನ ವಿಚಾರವನ್ನು ಪರಿವರ್ತನೆಗೊಳಿಸುವುದು ಒಳ್ಳೇಯದಲ್ಲವೇ?" ಎಂದು ಕೆಲವರು ಹೇಳತೊಡಗಿದರು. ಇಂಥಾ ಅಭಿಪ್ರಾಯವುಳ್ಳ ಹಿಂದುಗಳೂ ಒಬ್ಬೊಬ್ಬರಾಗಿ ತಮ್ಮ ಹಿಂದೂ ಧರ್ಮವನ್ನು ತ್ಯಜಿಸಿ ಕ್ರೈಸ್ತ ಮತಕ್ಕೆ ಸೇರಿದರು. ಪರಂತು ಕೆಲವರು "ಅಜ್ಜ ನೆಟ್ಟ ಗೋಳೀಮರವಾದ್ದರಿಂದ ನಾನು ಇದೇ ಮರದಡಿಯಲ್ಲಿ ಪ್ರಾಣಬಿಡುವೆನು' ಎಂಬ ವಿಶ್ವಾಸದಿಂದ ಹಿಂದೂ ಧರ್ಮದಲ್ಲಿಯೇ ಉಳಿದರು. ಒಣಗಿ ಹೋಗಿರುವ ಹಿಂದೂಧರ್ಮವೆಂಬ ವೃಕ್ಷವು ಇಂದಲ್ಲದಿದ್ದರೆ ನಾಳೆಯಾದರೂ ಜೀವಗೊಂಡೀತು ಎಂಬ ಒಂದು ನಂಬುಗೆಯಿಂದ "ಯಾವಾಗ ಮಳೆ ಬಂದೀತು, ಯಾವಾಗ ನಮ್ಮ ಮರವು ಚಿಗುರೀತು" ಎಂದು ಗಗನವನ್ನು ನೋಡುತ್ತಾ ಅವರು ಕುಳಿತುಬಿಟ್ಟರು ವಿನಹ ತಮ್ಮ ಕರ್ತವ್ಯ ಶಕ್ತಿಯನ್ನು ಎಳ್ಳಷ್ಟೂ ಉಪಯೋಗಕ್ಕಿಡಲಿಲ್ಲ. ಇಂಥವರನ್ನು ನಾವು "ಲಕೀರ್‌ಕೇ ಫಕೀರ್" ಎಂಬ ಬಿರುದಿನಿಂದ ಕರೆದರೆ ತಪ್ಪಾಗುವುದೇ? ಎಂದಿಗೂ ಆಗಲಿಕ್ಕಿಲ್ಲ.

ಸಶೇಷ.

ALLIANZ UND STUTTGARTER
Life Insurance Bank, Ltd.

ಅಲಿಆನ್ಸ್ ಉಂಡ್ ಸ್ಟುಟಗಾರ್ಟರ ಲೈಫ್ ಇನ್ಶೂರನ್ಸ್
ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟದು)

ಒಟ್ಟು ವಿಮಾ ಹಣವು ೨೮೯ ಕೋಟಿ ರೂ ಗಳಿಗಿಂತ ಹೆಚ್ಚಾಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೧೯ ಕೋಟಿ ರೂ. ಗಳಿಂತ ಹೆಚ್ಚಾಗಿರುವುದು. ಒಟ್ಟು ಪ್ರಾಪ್ತಿ ೮೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿರುವುದು

ವಿಮಾ ಪತ್ರಕಗಳ ಪೋಲಿಸಿ ಕಾಯಿದ್ದಿಟ್ಟ ಕ್ಲೇಮುಗಳು ಹಿಂದೀ ಶಾಖೆಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ್, ಧಾರವಾಡ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲೈಫ್ ಇನ್ಶೂರನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured'

PLACE YOUR LIFE ASSURANCE WITH

THE SOUTH INDIAN

Securing for your clients –

1. **Low rates of Premium**
2. **Liberal Policy Conditions.**

AND FOR YOURSELF

An Agency with attractive Terms. of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H R K IYENGAR
Chief Agent

The S I G A Co, Ltd,
Sanyasiguddy MANGALORE

Managing Agents –

K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರೀಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ

ಧಾರಾಳವಾದ ಕಮಿಶನ್ನೂ ತೃಪ್ತಿಕರ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು.

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ ನೆಗಡಿ ಕೆಮ್ಮು, ಅಜೀರ್ಣ, ಶೀತವಾಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

“ಬಿಷಕ್‌ರತ್ನ” ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟವನಿಗೆ ಮಾತ್ರ.

ಮೂಲವ್ಯಾಧಿ

ರಕ್ತ, ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ಶಸ್ತ್ರಸಾಧ್ಯವಾಯಕವಿದ್ದರೂ ಫಕ್ತ ಬಮ್ಮ್ ಸೇವನವು ಮಾಡುವುದರಿಂದ ಆಶ್ಚರ್ಯಕರ ಪರಿಣಾಮವಾಗುವುದು ೬ ಮೂರು ದಿನಗಳಲ್ಲಿ ರೋಗ ಸಹಿತ ನಾಶವಾಗುವುದು ' ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ. ವ್ಯರ್ಥ ಗುಣಬಾರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨-೦-೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯುಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಜ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ. ೩.

ವಿಳಾಸ — **ಶಕ್ತಿ ಸುಧಾ ಕಾರ್ಯಾಲಯ**
23 ಕಾಂದಾರವಾಡಿ 4ನೇ ಗಳ್ಳಿ
ಮುಂಬಯಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ ಯಂ ಗಣಪತಿರಾವ್ ಐಗಳ ರಿಂದ ಬರೆಯಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ ಮೂರನೇ ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

ಎರಡನೇ ಮೂರನೇ ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಧಗಳಲ್ಲದೆ ಹೊಸಕನ್ನಡ (೧ನೇ, ೨ನೇ ಭಾಗ)— ಅಲ್ಲದೆ ಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ


DR. WAMAN GOPAL
COMPOUND LIQUID EXTRACT OF RED MALT AND RED SARSAPARILLA

ಐಓಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್
ಕೇಶವರವರ,
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೪ ಸ್ಟೋಕಿಸ್ಟ - ಪಾ ಕಂಪನಿ
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೇಂಟರರಿಗೂ, ತೋಟದವರಿಗೂ
ಬೇಕಾಗುವಂಥ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರೊಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ. ದರವಿಡಿ
ಕೃಪೆಯಿಟ್ಟು, ಇತರ ಮಾಹಿತಿಗಳಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible]
[illegible] ಮುಕ್ತಿ ವಿಷ್ಣುವ ಸುಧುಕ [illegible] ।
[illegible] ತೊರೆದು ವೀರರು [illegible] ।

ಪುಸ್ತಕ ೨೬. ಮಂಗಳೂರ ತಾ ೨೯ನೇ ಶುಕ್ರವಾರ ಜುಲಾ ೧೯೩೨ (29-7-'32) ಸಂಚಿಕೆ [illegible]

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office.—UDIPI. Branches. COONDAPOOR & Mangalore

ಹೆಡ್ ಆಫೀಸು ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರ

Authorised Capital Rs 3,50,000 Subscribed & Called up Rs [illegible]25,000

[illegible]

STATEMENT OF ASSETS & LIABILITIES AS ON 30TH DAY OF JUNE 193[illegible]

	CAPITAL AND LIABILITIES			PROPERTY AND ASSETS	
	Paid up Capital	Rs 2,25,00[illegible]		Premises Building Furniture etc	Rs [illegible]
2	Reserve and other funds	[illegible]	2	Government securities	[illegible]
3	Deposits	[illegible]	3	[illegible] investments	[illegible]
4	Due to Banks	[illegible]	4	[illegible]	
5	[illegible]	[illegible]	5	[illegible]	[illegible]
6	[illegible]	[illegible]	6	Cash in hand & with banks	
	Total	[illegible]		Total	[illegible]

Udipi [illegible] 32

N. ANANDA RAO
[illegible]

Regd

ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು — [illegible]

[illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
, ಗಿರಗಾಂವ [illegible]

[illegible] — [illegible] ಕಂಪೆನಿ, ಮಂಗಳೂರ

[illegible]

The Popular Insurance Co. Ltd
Head Office MAN[illegible]
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT FULLY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Off

೧೧೦೦ ರೂ ಬಕ್ಷೀಸು

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಮದನಮಸ್ತ ಪಾಕು ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮು, ಎಂಥದಾದರೂ ಪರಮು, ಮೈನೂಸ್ಪೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ ೨೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫, ಟಿ ಖ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನು ನೋಡಿರಿ

ಡಾಕ್ಟರ ಎಮ್ ಆಯ್ ಟಿಪಟೆ, ಎಲ್ ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಬಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ,— ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ —ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ. ರಜಪೂತ ಇವರ [ಹಣವಾಪಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನ ಮಾಡಿದರೂ ಗರ್ಭವಾಗುವದಿಲ್ಲ ಮೊದಲು ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಲ್ಹಾಮಾಹಿಮ ರಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕೆ ೪ ರೂ ವಿ ಪಿ ಖರ್ಚ ೦।೦

ವಿಳಾಸ— ಸಂಜೀವಿನೀ ಔಷಧಾಲಯ. ಮು., ಪೊ. ಮಿರಜ, S. M C

'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.

ಹಿಸ್ಟೆರೈನ್.

ಮೆದುಳು ಶಕ್ತಿಗೆ ಅಮೋಘ ಮದ್ದು

ಹಿಸ್ಟಿರಿಯಾ ನಿದ್ರೆ ಇಲ್ಲದಿರುವಿಕೆ, ಹುಚ್ಚು ಇವುಗಳಿಗೆ ದಿವ್ಯ ಮದ್ದು

ಕ್ರಯ—ಬಾಟ್ಲಿಗೆ ರೂ 2/8

ವಿ ಪಿ ಖರ್ಚ ಪ್ರತ್ಯೇಕ

ದಿ ಈಸ್ಟರ್ನ್ ರಿಸರ್ಚ ಲೆಬೊರೆಟರಿ,
ಗಾಝಿಪುರ ಸಂಯುಕ್ತ ಪ್ರಾಂತ್ಯ

ಫ್ರೋಟೊಗಿನ್.

ಮಕ್ಕಳಿಲ್ಲದ ಸಂತಾನಕ್ಕೊಂದು ಮ ಸೂನುಗಳಿಲ್ಲದ ಮ ವೈಕೋನಕ್ಕೆ ಸನಾಟಾಣಂತಿಯರಿರುವ ಗ ಆಗುವ ನೋವುಗಳಿಗೆ ಅದ್ವಿತೀಯ ಮದ್ದು ಗರ್ಭವನ್ನೂ ತಾಯಿಯನ್ನೂ ಪಾಲಿಸುತ್ತದೆ ಹೆಂಗೆ ನೋವನ್ನು ಕಡಿಮೆಮಾಡಬೇಕೇ? ಗರ್ಭಸ್ರಾವವನ್ನು ನಿಲ್ಲಿಸಬೇಕೇ? ಇದನ್ನು ತೆಗೆದುಕೊಳ್ಳಿರಿ
ಕ್ರಯ ಬಾಟ್ಲಿಗೆ ರೂ 3 4 ವಿ ಪಿ ಖ ಬೇರೆ

The Eastern Research Laboratory
GHAZIPUR U P INDIA

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O P No 3" 32

ಅರ್ಜಿದಾರ—ಅನಂತಕೃಷ್ಣ ಯಾನೆ ಕುಪ್ಪಣ್ಣ (ಮ್ಯಾನರ) ತಂಮಣ್ಣಯ್ಯನ ಮಗ ಇವನ ಗಾರ್ಡಿಯನ ನಾರಾಯಣಪ್ಪಯ್ಯ—ಬೈಕಾಡಿ ವೆಂಕಟ್ರಾಯರ ಮಗ ಉಡುಪಿ ಕಸಬಾ ತೆಂಕಪೇಟೆ—

ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೇಲ್ಕಾಣಿಸಿದ ಮ್ಯಾನರ ಅನಂತಕೃಷ್ಣ ಯಾನೆ ಕುಪ್ಪಣ್ಣನ ತಂದೆ ಉಡುಪಿ ಕಸಬಾ ಕಡೆಕೊಪ್ಪಲದಲ್ಲಿದ್ದು, ತಾರೀಕು 24—5—'32ರಲ್ಲಿ ಮೃತನಾದ ತಂಮಣ್ಣಯ್ಯನ ಸಕಲ ಸ್ಥಿರ ಚರಸೊತ್ತುಗಳಿಗೆ ಅತನಿಗೆ ಒಬ್ಬನೆ ಮಗನಾದ ಸದ್ರಿ ಮ್ಯಾನರನು ಹಕ್ಕುದಾರನಾದುದರಿಂದ ಸದ್ರಿ ತಂಮಣ್ಣಯ್ಯನ ಬಾಬ್ತು ಈ ಕೆಳಗೆ ಕಾಣಿಸಿದ ಐವಜುಗಳು ಸದ್ರಿ ಮ್ಯಾನರನ ಕಡೆಯಿಂದ ವಸೂಲಿ ಬಗ್ಗೆ (1925ನೇ ಇಸವಿ 39ನೇ ಆಕ್ಟು ಪ್ರಕಾರ) ಸರ್ಟಿಫಿಕೇಟು ಕೊಡಿಸಬೇಕಾಗಿ ಸದ್ರಿ ಮ್ಯಾನರ ಕಡೆಯಿಂದ ಸದ್ರಿ ಗಾರ್ಡಿಯನ ನಾರಾಯಣಪ್ಪಯ್ಯನು ದಾಖಲು ಮಾಡಿದ ಈ ಅರ್ಜಿಯು 2-8 1932ಕ್ಕೆ ತನ್ನಿಗ ಇಟ್ಟಿರುವುದರಿಂದ ಆ ಬಗ್ಗೆ ಆಕ್ಷೇಪ ಇರುವ ಜನರು ಸದ್ರಿ ದಿವಸ ಬೆಳಿಗ್ಗೆ ಗಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು

(ಸರ್ಟಿಫಿಕೇಟಿಗೆ ಕಾರಣವಾದ ಐವಜುಗಳ ವಿವರ)

ದಿ ಬೊಂಬಾ ಲೈಫ ಎಶ್ಯೂರೆನ್ಸ್ ಕಂಪೆನಿಯ ಬಾಬ್ತು ಮೃತ ತಂಮಣ್ಣಯ್ಯನ ಹೆಸರಿನ ನಂಬ್ರ 18154ನೇ ಪೋಲಿಸಿಯ ಬಾಬ್ತು ರೂ 1000 0—0

ಮೃತ ತಂಮಣ್ಣಯ್ಯನು ಮ್ಯೂಚುವಲ್ ಬೆನಿಫಿಟ್ ಫಂಡ್ ಉಡುಪಿ ಇದರಲ್ಲಿ ಕರೆಂಟ್ ಎಕೌಂಟಿನಲ್ಲಿ ಡಿಪೋಜಿಟ ಇಟ್ಟಿರುವ ಐವಜು ವ ಇದರ ಬಡ್ಡಿ ಕೂಡಾ ಸುಮಾರು ರೂ 510—0 0

ಜುಮ್ಲಾ 1510—0—0

Udipi, S K
23—7—32

ಬಿ ಭುಜಂಗರಾವ್
ಅರ್ಜಿದಾರನ ಕಡೆ ವಕೀಲ್

ಕಲ್ಲು ಬಿತ್ತು!!

ಮೇಲಿನಿಂದಲೋ, ಕೆಳಗಿನಿಂದಲೋ, ಲಂಡನಿನಿಂದಲೋ, ಸಿಮ್ಲಾದಿಂದಲೋ, ಮುಂಬಾಯಿಯಿಂದಲೋ ಎಲ್ಲಿಂದೆಂದು ತಿಳಿದುಬರುವುದಿಲ್ಲ

× × × ×

ಈ ಕಲ್ಲು ಹಿಂದೂಗಳ ತಲೆಗೋ, ಮುಸ್ಲಿಮರ ತಲೆಗೊ ಅಥವಾ ಯಾರ ತಲೆಗೆ ಬಿದ್ದು ಘಾಯಪಡಿಸಿಯದೆ, ಪಡಿಸಲಿದೆಯೆಂದು ಗೊತ್ತಿಲ್ಲ. ಇದರಲ್ಲಿ ಫೋರ್ಟೀನ್ ಪ್ಲ್ಯಾಂಟ್ ಜಿನ್ನಾರವರ ೧೪ ಪ್ಲಾಯಿಂಟುಗಳೂ ಅಡಗಿವೆ, ಇದರಲ್ಲಿ ಶೌಕತಾಲಿಯವರು ಇಷ್ಟು ಸಮಯವೂ ಕೇಳುತ್ತಿದ್ದ ಪ್ಲಾಯಿಂಟುಗಳೂ ಇವೆ ಮತ್ತು—ಇದರಲ್ಲಿ 'ಡಿವೈಡ್ ಎಂಡ್ ರೂಲ್" ಎಂಬ ಬ್ರಿಟಿಷರ ಪೊಲಿಸಿಯೂ ಅಡಗಿಕೊಂಡಿದೆ

× × × ×

ಈ ಕಲ್ಲನ್ನು ಮೆಕ್‌ಡೊನಾಲ್ಡ ದೊರೆಗಳೂ ಸರ್ ಹೋರ್ ದೊರೆಗಳೂ ಒಟ್ಟುಕೂಡಿ ಆಲೋಚಿಸಿ ಆ ಮೇಲೆ ಬಿಸಾಡಿಬಿಟ್ಟರಂತೆ! ಅದು ಸೀದಾ ಬಂದು ಹಿಂದೂಮುಸ್ಲಿಮರ ತಲೆಗೆ ಬಿತ್ತಂತೆ! ಆ ಕಲ್ಲು ಯಾವುದೆಂದು ತಿಳಿದಿರುವುದೇ? ಮುಸ್ಲಿಮರಿಗೆ ಐದು ವರ್ಷಗಳ ಪ್ರತ್ಯೇಕ ಪ್ರಾತಿನಿಧ್ಯ

+ \+ \+ \+

ನಮಗೆ ಪ್ರತ್ಯೇಕ ಪ್ರಾತಿನಿಧ್ಯವನ್ನೂ ಇತರ ೧೩ ಪ್ಲಾಯಿಂಟುಗಳನ್ನೂ ಕೊಡಿ ನಾವು ಎಂದೂ ಕಬಾಯಿಯಿಂದ ತಪ್ಪುತ್ತೇವೆ ಅವರು ನಮ್ಮನ್ನು ಸಹ್ಯ ಮಾಡುತ್ತಾರೆ ಎಂದು ಜಿನ್ನಾ ಸಾಹೇಬರು ಒಮ್ಮೆ ಕೂಗಿದ್ದರು ನಾನು ಶಾಂತಿಗಾಗಿ ಬದುಕಿದವನು ಹಿಂದೂಗಳು ನನ್ನನ್ನು ಲಗಾಡಿ ತೆಗೆಯುತ್ತಾರೆ ನಮಗೆ—ಮುಸಲ್ಮಾನರಿಗೆ ಪ್ರತ್ಯೇಕ ಪ್ರಾತಿನಿಧ್ಯವೇ ಬೇಕಾದುದು" ಎಂದು ಶೌಕತಾಲಿಯವರು ಹೇಳಿದ್ದರು ಬೇಡ ಪ್ರತ್ಯೇಕ ಪ್ರಾತಿನಿಧ್ಯ ಬೇಡ ನಾವೂ ಮುಸಲ್ಮಾನರೂ ಒಂದೇ ಎಂದು ಗಾಂಧಿ ಮೊದಲಾದ ಹಿಂದೂಗಳು ಅರಿಕೆ ಮಾಡಿದ್ದರು

+ \+ \+ ×

ಈ ಕೂಗು ಈ ಬೇಡಿಕೆ ಪತ್ರ ಈ ಅರಿಕೆಗಳನ್ನು ಕಿವಿಗೆ ತೆಗೆದುಕೊಂಡು ಮಿಸ್ಟರ್ ಮೆಕ್‌ಡೊನಾಲ್ಡರೂ ಸರ್ ಹೋರರೂ ಧೀರ್ಘ ಆಲೋಚಿಸಿದಂತೆ ಹಿಂದೂಮುಸಲ್ಮಾನರನ್ನು ಐಕ್ಯಗೊಳಿಸಬೇಕೆ ತಮ್ಮ ದರ್ಬಾರ್ ನಡೆಯಬೇಕಲ್ಲ, ಸ್ವಾತಂತ್ರ್ಯದ ಸಂಧಿಯು ಅಡಗಿಹೋಗಬೇಕಲ್ಲ, ಬ್ರಿಟಿಷರ ಹೊಟ್ಟೆ ತುಂಬಬೇಕಲ್ಲ ಆದಕಾರಣ ಮುಸ್ಲಿಮರಿಗೆ ಕಲ್ಲ ಐದ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟರಂತೆ

+ \+ \+ \+

ಪ್ರತ್ಯೇಕ ಪ್ರಾತಿನಿಧ್ಯ ಅಂದರೇನು?—ಅದೇನಿಲ್ಲ ಕೌನ್ಸಿಲು ಮೊದಲಾದವುಗಳಿಗೆ ತಮ್ಮ ಮೆಂಬರರನ್ನು ಚುನಾಯಿಸಲು ಮುಸ್ಲಿಮರಿಗೆ ಹಕ್ಕು ಹಿಂದೂಮುಸಲ್ಮಾನರು ಒಟ್ಟುಗೂಡಿ ಒಟ್ಟು ಸದಸ್ಯರನ್ನು ಚುನಾಯಿಸುವುದಲ್ಲ ಮುಸಲ್ಮಾನರು ತಮಗೆ ಬೇಕಾದವರನ್ನು ಪ್ರತ್ಯೇಕವಾಗಿ ಚುನಾಯಿಸುವುದು ಇದೇ ಪ್ರ ಪ್ರ

+ \+ \+ \+

ಹೇಗೂ ಇರಲಿ ಮುಸ್ಲಿಮರ ಸ್ವಾರ್ಥದಿಂದಲೋ ನಿಸ್ವಾರ್ಥದಿಂದಲೋ ಈ ಕಲ್ಲನ್ನು ಬರಮಾಡಿಕೊಂಡರು ಇದು ಯಾರ ತಲೆಗೆ ಬಿದ್ದು ಅದನ್ನು ಎರಡು ಹೋಳುಗಳಾಗಿ ಮಾಡುತ್ತದೆಂದು ನನಗೆ ಹೇಳಲಸಾಧ್ಯ ಐದು ವರ್ಷಗಳ ತನಕ ಮುಸ್ಲಿಮರಿಗೆ ಈ ಹಕ್ಕಂತೆ!

+ \+ \+ \+

ಶಹಬಾಸ್ ಹೋರ್ ಮಂತ್ರಿಗಳೇ ಶಹಬಾಸ್! ನೀವೇ ಧನ್ಯರು! ಮುಸ್ಲಿಮರನ್ನು ನಿಮ್ಮ ಅಂಗೈ ಮೇಲಿಟ್ಟು ಆಡಿಸಿ ಹಾಡಿಸಿ ಮೋಡಿಸಿ ಓಡಿಸಿಬಿಡುವ ನೀವೇ ಧನ್ಯರು ನಿಮ್ಮ ಬಾಲವು ಯಶಸ್ವಿಯಾಗಲೀ

× × × ×

ಮುಸ್ಲಿಮರಿಗೆ ಮತದಾನ ಕೊಟ್ಟಿರಿ ಇನ್ನು ಅಸ್ಪೃಶ್ಯರ ತಲೆಗೊಂದು ದೊಡ್ಡ ಕಲ್ಲೆಸೆದು ಬಿಟ್ಟರೆಂದರೆ ಅಂಬೇಡ್ಕರರೆಂತೂ ನಿಮ್ಮೊಡನೆಯೇ ಬಂದಿಳಿದಿರುವರು ಅವರಿಗೂ ಮತದಾನದ ಅದರಲ್ಲೂ ಪ್ರತ್ಯೇಕ ಮತದಾನದ ಹಕ್ಕನ್ನು — ಕಲ್ಲನ್ನು—ಕೊಟ್ಟುಬಿಟ್ಟರೆಂದರೆ ಮತ್ತೆ ನಿಮಗೆ—ಬ್ರಿಟಿಷರಿಗೆ—ಹೋರರಿಗೆ ದಿಗ್ವಿಜಯವೇ ಸರಿ! ಬಾಳಿರಿ—ಬಾಳಿರಿ ನನ್ನ ಆಶೀರ್ವಾದವಿರಲಿ

× × × ×

ಆದರೆ ಆದರೆ ಹಿಂದೂಗಳಿಗೆ ಹೆದರಿ, ಬೆದರಿ ಬೆಪ್ಪಾಗುವ ಪತಿತರೂ ಮುಸ್ಲಿಮರೂ ಪ್ರತ್ಯೇಕ ಪ್ರಾತಿನಿಧ್ಯವನ್ನು ಸೆರಗೊಡ್ಡಿ ಸ್ವೀಕರಿಸುವಾಗ ಸೆರಗು ಹರಿದುಹೋದೀತೆಂಬುದನ್ನು ನೆನಪಿನಲ್ಲಿಡಲಿ! ಪ್ರತ್ಯೇಕ ಪ್ರಾತಿನಿಧ್ಯವೆಂಬುದು ಸ್ವಾತಂತ್ರ್ಯದ ರಥಕ್ಕೆ ಬ್ರಿಟಿಷರಿಂದ ಕಟ್ಟಲ್ಪಟ್ಟ ಬ್ರೇಕ್ ಎಂದು ಅವರು ತಿಳಿದುಕೊಳ್ಳಲಿ ಅಲ್ಲಾಹೋ ಅಕ್ಬರ್

'ಸ್ವಾಬ'

THE SOUTH INDIA CO-OPERATIVE INSURANCE SOCIETY, LIMITED MADRAS

LOCAL BOARD:—

THE SOUTH CANARA CENTRAL CO OPERATIVE BANK LTD MANGALORE

Applications are invited for Sub Agents from capable and energetic persons and Co operative Institutions to canvas business on behalf of the Local Board of the Society at Mangalore

FOR TERMS APPLY TO

The Secretary
South Canara Central Co operative
Bank Ltd KODIALBAIL P O (Mangalore)
SOUTH CANARA

The Udipi Mutual Benefit Fund, UDIPI

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್ ಉಡುಪಿ

(Regd 1918

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ನಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಸಲ್ಪಡುತ್ತವೆ ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು

ಎಂ ಮುಖ್ಯಪ್ರಾಣಭಟ್ಟ ಪ್ರೊಪ್ರೈಟರ್

ENCOURAGE INDIAN COMPANIES AND INDUSTRIES.

SWADESHI MEANS PROVIDING FOOD FOR STARVING MILLIONS
DEAL IN INDIAN GOODS AND KEEP INDIAN MONEY IN INDIA

M V KAMATH
SWADESHI PRACHARAK SANGHA
Kasargod, S

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.

(REGISTERED UNDER COMPANY S ACT 913)
ಕಾಸರಗೋಡು, ದ ಕನ್ನಡ
ಮೂಲಧನ ರೂಪಾಯಿ 50 000–0–0
ಪಾಲು 1ಕ್ಕೆ ರೂಪಾಯಿ 10–0–0 ರಂತೆ
5000 ಪಾಲುಗಳು

ದೇಶಸೇವೆ ಮಾಡಿ ದೇಶವನ್ನು ವೃದ್ಧಿಗೊಳಿಸುವಂತೆ ಸಹಾಯಕರಾಗಿ, ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧ ಖಾದಿಯ ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿರುವ ಒಂದು ಕಂಪೆನಿಯೂ ಇಲ್ಲವೆಂದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿಗಳೆಂದು ಅಭಿಮಾನಪಡುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಬಾರದು ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯು ಹಿಂದೂಸ್ಥಾನದಲ್ಲಿ ತಯಾರಾಗದ ಸಾಮಾನುಗಳಲ್ಲಿ ವ್ಯಾಪಾರ ಮಾಡಕೂಡದೆಂಬ ನಿಬಂಧನೆಯುಳ್ಳದಾಗಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳ ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧವಿದೆ

ಇತರ ಪೂರಾ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ –

ಮೆನೇಜಿಂಗ್ ಡೈರೆಕ್ಟರ್,
ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್
ಕಾಸರಗೋಡು, ದ ಕ

Canara Bank Limited.

ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal Kasargod, Cochin Udipi Gangolli Coondapur Bombay Puttur Calicut & Alleppey**

ಬ್ರಾಂಚುಗಳು –
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪಿ

Authorised Capital 10 00000—0—0
Issued & paid up Capital 300 000—0 0
Reserve and other sinking Funds Rs 526 000 0 0
Amount invested on G P Notes Rs 1210 092—12 0
Rates of interest on fixed deposits at Head Office and Branches are 6% for 2 Years 5½% Year

ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ 0 0 0 —
ಚಂದಾ ಕಾಣಿದ ಮತ್ತು ಪೂರ್ಣ ಕೊಟ್ಟ ಮೂಲಧನ ರೂ 3
ರಿಸರ್ವ ನಿಧಿ ಮತ್ತು ಇತರ ಫಂಡುಗಳು 5 0
ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 1 92—
ಕಾಯಂ ಠೇವಣಿಗಳ ಮೇಲೆ ಕೊಡುವ ಬಡ್ಡಿ 2 ವರ್ಷ ವರೆಗೆ 6 ವರ್ಷ 1 ವರ್ಷಕ್ಕೆ 5½

Current Account Deposits received and interest allowed on daily balance of Rs 50 and above that on multiples of Rs 10 @ 3% from 1st January to 30th June and @ 2% from 1st July to 31st December No interest will be allowed unless the depositor is not less than Rs 50 during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000 in the case of Head Office and Cochin Branch and on sums not exceeding Rs 15 000 in the case of Bombay Branch and on sums exceeding Rs 000 in the case of other Branches

For further particulars please apply to

Office of the Bank,
Mangalore 7-1-1932

K Venkat Rao
Secretary & Treasurer

The Pangal Nayak Bank, Ltd.

Head Office Udipi *Established 1920* **Branch Office Mangalore**

Authorised Capital Rs 2 00,000
Issued Capital Rs 1 75 000-
Paid up Capital Rs. 1 75 000-
Reserve and other Funds Rs 1,80 000

NOTICE.

Advances on pledge of Gold are made at 8

Fixed deposits received at following rates

3 months 4½ %,	6 and 9 months 5
1 year and above 5½ %,	2 years 6

(By order)

Office of the Bank
Udipi 1 – 32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಮೊಡವೆ
ಮೂವತ್ತು	ರಲ್ಲಿ	ಮುಚ್ಚಟ
ನಲವತ್ತು	ದಾಗ	ನರಳುವದು
ಐವತ್ತು	ಆದರೆ	ಆಲಸ್ಯ
ಅರುವತ್ತು	ತೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಕು

ಉಪಯೋಗಿಸಿ ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯೆ** ಎಂಬ ಪುಸ್ತಕವನ್ನು ಓದಿರಿ

ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್

ಮದನಮಂಜರಿ ಔಷಧಿಗಳ ಏಜಂಟರು — ವಿ ಜಿ ಚಂದರಾನಾ, ಮಿಶನ್ ಬೀದಿ, ಮಂಗಳೂರು

ಹೋರರ 'ಪರಮಾಸ್ತ್ರರು' ಯಾರು?

ಸರ್ವಪಕ್ಷಗಳೂ ಒಪ್ಪಿಕೊಂಡ ವಿಧಿವಿಧಾನಗಳನ್ನು ಬದಿಗೊತ್ತಿ, ಸ್ವೇಚ್ಛೆಯಾಗಿ ತಯಾರಿಸುವ ಯಾವುದೋ ಒಂದು ಬಗೆಯ ರಿಫೊರ್ಮು ಖಾದ್ಯವನ್ನು ಒತ್ತಾಯದಿಂದ ಹಿಂದೀಯರ ಗಂಟಲಲ್ಲಿ ತುರುಕಿಸ ಹೊರಟ ಹೋರರು, ತಮ್ಮ ಬೆಂಬಲವು ಸಾಕಷ್ಟು ಇದೆ, ಇನ್ನು ಬೇಗನೆ ಸಾಗಲಿ ಎಂದವರಿದ್ದಾರೆ, ಪರಿವರ್ತ್ತೀ ಬೇಡವೆಂದವರಿದ್ದಾರೆ,—ಎಂದರಷ್ಟೆ. ಆದರೆ, ಮುಖ್ಯವಾಗಿ ವ್ಯಾಪಾರಗಳಲ್ಲಿ ಮುಖಂಡರೂ, ರಾಜಕುಲಗಳೂ ತಮ್ಮ ಬೆಂಬಲಕ್ಕಿವೆ ಎಂದು ಪದೇ ಪದೇ ಸಾರಿದರು. ಈಗ ಯಾವುದೊಂದು ವರ್ತಕ ಸಂಘದ ಹೆಸರಲ್ಲಿ ಅಥವಾ ಸ್ವಂತ ಅಭಿಪ್ರಾಯದಿಂದ ಯಾವನೊಬ್ಬ ವರ್ತಕ ಶಿರೋಮಣಿಯು ಮುಂದೆ ಬಂದು ಹೋರರ ನೀತಿ ಸರಿಯೆಂದು ಇದು ವರೆಗೂ ತಿಳಿಸಿಲ್ಲ. ಅತ್ತ, ಸ್ವದೇಶೀಯ ರಾಜಮಾನ್ಯರುಗಳಲ್ಲಾದರೂ ಒಬ್ಬರೇ ಒಬ್ಬರು ಹೋರರ ರೀತಿ ಒಪ್ಪಿಕೊಂಡುದೂ ಇಲ್ಲ. 'ಪ್ರಿನ್ಸ'ರ ಪರವಾಗಿಯೇ ಹೊಸತಾಗಿ ರಚನೆಹೊಂದಿರುವ ಪಾಯನೀಯರ್ ಪತ್ರಿಕೆಯು, ಒಂದು ಮುಖ್ಯ ಲೇಖನವನ್ನು ನರೇಂದ್ರಮಂಡಲಕ್ಕೆ ಸಂಬಂಧವುಳ್ಳವರಿಂದಲೇ ಪ್ರಕಟಿಸಿದ್ದು,—ಹೋರರ ಈ ಹೊಸ ರೀತಿಯನ್ನು ಯಾವ ನರೇಂದ್ರನೂ ಅನುಮೋದಿಸಿಲ್ಲ ಎಂದೂ, ಅದು ಯಶಸ್ವಿಯಾಗಲಾರದೆಂದೂ ಸಾರಿ ಬಿಟ್ಟಿದೆ. ಖಾಸಗಿ ಚರ್ಚೆಯಿಂದ ನಮ್ಮ ವಂಶಪರಂಪರೆಯ ಹಕ್ಕುಗಳನ್ನು ನಿರ್ಧರಿಸಲಾಗುವಂತಿಲ್ಲ, ಮೊಡರೇಟರೂ ಪ್ರಿನ್ಸರೂ ಒಲ್ಲದ ಯಾವ ಸುಧಾರಣೆಗಳನ್ನೂ ಭಾರತೀಯರ ಮೇಲೆ ಹೊರಿಸ ಸಾಧ್ಯವಿಲ್ಲ ಎಂದು ಈ ಮಹನೀಯರು ಟೀಕಿಸಿ, ಯಾವ ಕೊನ್ಫರೆನ್ಸಿಗೆ ನಮ್ಮನ್ನು ಕರೆದರೂ ಸರ್ವಪ್ರತಿನಿಧಿಗಳೊಡನೆ ನಾವೂ ಸಮಾನವಾಗಿ ಚರ್ಚಿಸತಕ್ಕವರು, ಹೀಗಿರುವುದರಿಂದ ಜೊಯಿಂಟ್ ಕಮಿಟಿಯ ಮಾತೇ ಇಲ್ಲಿ ಅಗತ್ಯವಿಲ್ಲ ಎಂದು ಖಂಡಿತ ತೋರಿಸಿಕೊಟ್ಟಿರುವರು. ಒಂದೇ ಒಂದು 'ಸ್ಟೇಟ್ಸ್ಮೇನ್' ಪತ್ರಿಕೆ,—ಇದರ ಸೂಚನೆಯಿಂದ "ಬ್ಲಾಕೆಳೆಗೆ ಜನವರಿಯಲ್ಲಿ ಪ್ರಾರಂಭವಾಗಿದ್ದಿತ. ಈ ಪತ್ರಿಕೆಯ ಸಂಪಾದಕರು ಮೊನ್ನೆ ಸರ್ ಬಿರುದೂ ಪಡೆದರು,—ಹೊರತು ಇಂಡಿಯನ್ ಮತ್ತು ಎಂಗ್ಲೊ ಇಂಡಿಯನ್ ಪತ್ರಿಕೆಗಳೂ, ರಾಜವಂಶದವರೂ, ಭಾರತೀಯರೂ ಹೋರರ ಹೊಸ ರೀತಿಗೆ ವಿರುದ್ಧರಾಗಿಯೇ ಇರುವರು. "ಪರಿಸ್ಥಿತಿಯು ಹೀಗಿರುವಾಗ, ಫೆಡರೇಶನನ್ನು ನಿರ್ಧರಿಸಿ, ಅದನ್ನು ನಡೆಸಿಬರುವುದು ಹೇಗೆಂದು ಹೋರರೇ ಮಾತ್ರ ಬಲ್ಲರೇನೋ? ಎಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಕೇಳುವುದರಲ್ಲಿ ಅರ್ಥವಿದೆ.

ಒಟ್ಟಾವಾ ಪರಿಷತ್ತು

ಕೂಗಿದುವು ಬಹಳಗಳು! ಕಳೆದ ಗುರುವಾರ ಇಂಪೀರಿಯಲ್ ಇಕೊನೊಮಿಕ್ ಕೊನ್ಫರೆನ್ಸ್ ಪ್ರಾರಂಭವಾಯಿತು. ಸಾಮ್ರಾಜ್ಯದ ಎಲ್ಲ ಭಾಗಗಳೊಳಗೆ ಸಂಪೂರ್ಣ ಸಹಕಾರವಾಗಬೇಕೆಂಬ ಹೇಚಾಟಕ್ಕಾಗಿ ಈ ಪರಿಷತ್ತು. ಪ್ರಥಮದಲ್ಲೇ ದುಃಖವೆಂದರೆ,—ಸಾಮ್ರಾಜ್ಯದ ಅಧಿರಾಜ್ಯ ಇಂಗ್ಲೆಂಡು ಮೊದಲನೆದಾಗಿ ಐರ್ಲಂಡಿಗೆ ಸುಂಕಗಳ ಯುದ್ಧಕ್ಕೆ ಕರೆದೇ ಈ ಪರಿಷತ್ತು ತೆರೆವ ಹಾಗಾಯಿತು. ಸಾಮ್ರಾಜ್ಯದ ಸಂದೇಶದಲ್ಲಿ,—"ಸಹಕಾರದ ತತ್ವದ ಮೇಲೆ ಬ್ರಿಟಿಷ ಸಾಮ್ರಾಜ್ಯವು ಆಧರಿಸಿಕೊಂಡಿದೆ, ಸಾಂಪತ್ತಿಕ ವಿಚಾರಗಳಲ್ಲಿ ಈ ತತ್ವಕ್ಕೆ ನಿಮ್ಮಿಂದಾಗುವಷ್ಟು ಬಲ ಕೊಡಿರಿ" ಎಂದಿದೆ. ಸಹಕಾರ ಮಾಡುವವರೆಲ್ಲರಿಗೆ ಸ್ವಾತಂತ್ರ್ಯವಿದ್ದರೇ ನಿಜವಾದ ಸಹಕಾರವು ಲಭಿಸುವುದು, ಡೊಮಿನಿಯನುಗಳಷ್ಟೆ ಪೂರ್ಣವಾಗಿ ಸ್ವತಂತ್ರವಾದಂದು, ಇಂಡಿಯವು ಈ ಭಾಗದಲ್ಲಿ ನಿಜವಾಗಿ ಸಹಕರಿಸಬಹುದು. ಹೊರತು, ಈಗ ಇಂಡಿಯದ ಪ್ರತಿನಿಧಿಗಳೆಂದು ಹೋದವರು ವ್ಹ! ಯಾವಾಗಲಾದರೆ ಇಂತಹ ಪ್ರತಿನಿಧಿಗಳ ತಲೆಯಾಗಿ ಕರಣೀಕರು ಬರುತ್ತಿದ್ದರು, ಈಗ ಹಿಂದೀಯರೇ ಅಧ್ಯಕ್ಷರಾಗಿ ಬಂದಿರುವುದೂ ವಿಶೇಷ ಎಂದು ಸರ್ ಅತುಲ ಚಟರ್ಜಿಯವರು ಹೇಳಿರುವರಾದರೂ, ಇವರೆಲ್ಲ ಯಾರ ಪ್ರತಿನಿಧಿಗಳೋ ಎಂದು ಯಾರಿಗೂ ತಿಳಿದಿಲ್ಲ, ಇವರ ಕ್ರಮನೋಡಿ ತಿಳಿಯಬಹುದು.

ಸಾಮ್ರಾಜ್ಯದ ವ್ಯಾಪಾರಕ್ಕೆ ಅಗ್ರತಾಂಬೂಲ

ಎಂಬುದಿದು ಮಿ| ಬಾಲ್ಡ್ವಿನರ ಪ್ರಸ್ತಾಪ. ದಕ್ಷಿಣಾಫ್ರಿಕದ ಪ್ರತಿನಿಧಿಯವರು "ಅಹುದು, ಮೊದಲಾಗಿ, ನಮ್ಮ ರಾಜ್ಯದಿಂದ ಸಾಮಾನು ಕೊಂಡುಕೊಳ್ಳುವ ಇತರರಿಂದ ನಾವು ತರಿಸಬೇಕಾಗಿರುವ ಸರಕುಗಳಲ್ಲಿ ಯಾವುವು ಇಂಗ್ಲೆಂಡಿನಿಂದಲೂ ಬರಲಿಕ್ಕಿವೆ ಎಂಬುದನ್ನು ಮೊದಲಾಗಿ ನೋಡಬೇಕು. ಏಕೆಂದರೆ, ನಮ್ಮ ರಫ್ತು ಅವರಿಗೆ, ಆಮದು ಇವರಿಂದ ಎಂತಾದರೆ, ನಮ್ಮ ವ್ಯಾಪಾರ ಅಲ್ಲಿಗೇ ಮುಗಿಯಬಹುದು" ಎಂದರು. "ಐರ್ಲೆಂಡಿನ ಪ್ರಜೆಗಳ ಹಿತವನ್ನು ಮೊದಲಾಗಿ ನೋಡಬೇಕು, ಅನಂತರ ಎಲ್ಲ ತಾರೀಫು (Tarrif)" ಎಂದು ಐರಿಷ ಪ್ರತಿನಿಧಿಗಳು ಎಂದರು. ಇಂಡಿಯದ ಪ್ರತಿನಿಧಿಗಳು ಬಹು ದೀರ್ಘ ಪ್ರದಕ್ಷಿಣೆ ಮಾಡಿದರೇ ವಿನಾ, ಖಂಡಿತವಾದ ಅಭಿಪ್ರಾಯವನ್ನೇನೂ ತಿಳಿಸಲಿಲ್ಲ. "ಕೆನಡಾದವರು ತಯಾರಿಸುವ ಯಾವ ಸರಕನ್ನು ಸ್ಪರ್ಧಿಸಲಾರದೋ ಅಂತಹ ಇಂಗ್ಲಿಷ ಕೈಗಾರಿಕೆಯನ್ನು ಅವಶ್ಯವಾಗಿಯೂ ಕೆನಡವು ಪ್ರೋತ್ಸಾಹಿಸಬೇಕು" ಎಂದು ಕೆನಡದ ಮಂತ್ರಿಗಳೆಂದರು. ಈ ಮಧ್ಯೆ ಲಂಕೆಶಯರಿನಿಂದ ಕೆಲವರ್ತಕ ಶಿರೋಮಣಿಗಳು ಅತ್ತ ತೆರಳಿದ್ದು, ತಮ್ಮ ಬಟ್ಟೆ ಪ್ರಸ್ತಾಪವೆತ್ತುವುದರೊಳಗಾಗಿ, ಕೆನಡಕ್ಕೆ ಬಟ್ಟೆಬರೆಗಳ ವ್ಯಾಪಾರವೇ ಇಂಗ್ಲೆಂಡಿನಿಂದ ಬೇಡ ಎಂದು ಉತ್ತರ ದೊರೆತು, ಪರಿಷತ್ತು ಸೇರುವ ಮೊದಲನೇ ದಿನವೇ ಇವರು ಯಾವ ಊರಿಗೆ ತೆರಳಿರುವರೋ ಗೊತ್ತಾಗಿಲ್ಲ. ಲೊಸಾನ ಪರಿಷತ್ತು ಬಹು ದಿನ ಸೇರಿ, ಲುಕ್ಸಾನು ಪರಿಷತ್ತಾಗಿ ನಿಂತಿದೆ, ಒಟ್ಟಾವವೂ ಸಹ ಹಲವು ದಿನ ಸೇರಿ ಒಟ್ಟಾರೆ ಏನೂ ಇಲ್ಲವಾಗುವುದೇ?

ಮುಸ್ಲಿಮರಿಗೆ ಎವೊರ್ಡು

ಇಂದೋ ನಾಳೆಯೋ ಮುಖ್ಯ ಮಂತ್ರಿಗಳಿಂದ ಸಿಗುವುದಕ್ಕಿದೆ, ಎಂದೂ, ಅದರ ಪ್ರಾಮುಖ್ಯ ವಿಷಯಗಳನ್ನು ಮೊದಲಾಗಿ ತಿಳಿದು ಹೇಳಿದವರೊಬ್ಬರ ಅಭಿಪ್ರಾಯದಿಂದ,— ಮಹಾತ್ಮಾಜಿಯವರು ಲಂಡನಿಗೆ ಹೋಗುವ ಮೊದಲೇ ಇಲ್ಲಿ ಅವರೊಡನೆ ಸಂಭಾಷಿಸಿದವರು ಕೊಂಗ್ರೆಸ್ಸಿನ ಹೆಸರಲ್ಲಿ ಅವರಿಂದ ಒಪ್ಪಿಸಿಕೊಂಡು ೧೪ ಪೋಯಿಂಟುಗಳನ್ನು ನೋಡಿದರೆ, ಈಗ ಎವೊರ್ಡು ದೊರೆವುದರಲ್ಲಿ ಬರೇ ೭ ಪೋಯಿಂಟುಗಳು ಮಾತ್ರವಿರುವ ಕಾರಣ ಕೊಂಗ್ರೆಸ್ ಒಪ್ಪಿಕೊಂಡ ರಿಯಾಯತಿಗಳಿಗೂ ಕಡಿಮೆಯಾಗಿಯೇ ಮುಖ್ಯ ಮಂತ್ರಿಯವರು ಎವೊರ್ಡು ಕೊಡುವುದೆನ್ನಬೇಕು. ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಂಗ್ರೆಸ್ ಅಂದು ಒಪ್ಪಿರಲಿಲ್ಲ, ಇಂದೂ ಒಪ್ಪದು. ಮುಸ್ಲಿಮರಲ್ಲೇ ಎಷ್ಟೋ ಮುಖಂಡರು ಜಂಟಿ ಪ್ರಾತಿನಿಧ್ಯವೇ ಬೇಕೆಂದಿರುವರು. ಹೀಗಿರುವಾಗ ಈ ಎವೊರ್ಡಿನಿಂದ ಲಾಭವೇನಿದೆ ಎಂದು ಮುಸ್ಲಿಮರು ಆಲೋಚಿಸಿ ನೋಡಲಿ. ಈಗಲಾದರೂ, ಕೊಂಗ್ರೆಸ್ ಪಕ್ಷದವರೊಡನೆ ಮುಸ್ಲಿಮ ಮುಖಂಡರು ತಾವಾಗಿಯೇ ಆಲೋಚಿಸಿದರೆ, ಅತ್ಯುತ್ತಮವಾಗಿ ಸರ್ವಸಮ್ಮತವಾಗುವ ಎವೊರ್ಡನ್ನು ತಾವೇ ಮಾಡಿಕೊಂಡು ಸುಖಿಸಬಹುದು.

ಯೇಸುಸ್ವಾಮಿಯು ಇತ್ತ ಬಂದರೆ?

ಎರಡು ಸಾವಿರ ವರ್ಷಗಳ ಧರ್ಮ ಪ್ರಚಾರದ ಫಲವಾಗಿ ಜಗತ್ತು ಹೇಗಾಗಿದೆ ಎಂದು ನೋಡಿಕೊಳ್ಳಲು ಯೇಸ ಸ್ವಾಮಿಯು ಇತ್ತ ಬಂದರೆ,—'ಅವನು ಬಹುಕಾಲ ಉಳಿಯನು. ಅತಿ ಭಯಂಕರವಾದ ಯುದ್ಧದ ಫಲವಾಗಿ ಜನರು ಇನ್ನೂ ನರಳಿಕೊಂಡಿರುವರೆಂದು ಅವನು ಕಂಡು ದುಃಖಿಸುವನು. ಧ್ವಂಸವಾಗುವುದೆಷ್ಟೋ ಅದು ಆಗಿದೆ, ಅದನ್ನು ಹಿಂಬಾಲಿಸಿ ಈಗ ಉಪವಾಸವಾಗಿದ್ದು ಸಾಯುವ ದುರವಸ್ಥೆಯು ಹಲವರಿಗೆ! ಜನರೆಲ್ಲ ಪಶ್ಚಾತ್ತಾಪದಿಂದ ಮಾನಸಾಂತರ ಹೊಂದುವ ಬದಲಾಗಿ, ಸೋದರತೆಯಿಂದ ಇರುವ ಬದಲಾಗಿ, ಇನ್ನೂ ಇನ್ನೂ ಭಯಂಕರ ಹೊಸ ರೀತಿಯ ಆಯುಧಗಳನ್ನು ತಯಾರಿಸುವುದರಲ್ಲೇ ಅವರ ಆಸಕ್ತರು! ಶಾಂತಿರಾಜನ ಎರಡು ಸಾವಿರ ವರ್ಷಗಳ ಆಳಿಕೆಯ ನಂತರವೂ ಇದೇಯೆ? ಇಂತಹ ಕೊಲೆಗಡಿಗರೆಲ್ಲ ಯಾವ ಮತದವರು? ಮುಸ್ಲಿಮು, ಬೌದ್ಧ, ಹಿಂದೂಮತದವರೆ? ಛೆ! ಅವರೆಲ್ಲರು ನಿರ್ಗತಿಕರು! ಯುದ್ಧ ವಿಷಯ ಅವರ ಗುರುಗಳು ಅವರಿಗೆ ಕಲಿಸಿಲ್ಲ. ಇವರೆಲ್ಲರು ಯೇಸುವಿನ ಶಿಷ್ಯರು,—ಮದ್ದು ಗುಂಡು ತುಪಾಕಿಗಳಿಂದ ಯುದ್ಧ ಮಾಡುವುದಷ್ಟೆ ಇವರ ಉದ್ಯೋಗ. ಜನಾಂಗಗಳೊಳಗೆ ಸಂದೇಹ, ವಿದ್ವೇಶ ಅಸೂಯೆ, ಭಯ, ಮತ್ಸರ ಇತ್ಯಾದಿಗಳಲ್ಲ ಬಲವಾಗುತ್ತ ಬರುತ್ತಿವೆ. ಇದು ಪ್ರತಿಹಿಂಸೆಯ ಯುಗ!' ಎಂದು ಲೋಯ್ಡ ಜೋರ್ಜರೇ ಭಾಷಣಮಾಡಿರುವರು.

ನೋಟಗಳು.

NOTE . S

ಸರ್ ಸಾಮುವೇಲ್ ಹೋರರು ಕುದುರೆ ವ್ಯಾಪಾರಿಗಳೆಂದು ಗೊತ್ತಿರಲಿಲ್ಲ. ದರ ಕಡಿಮೆ, ಅಲಭ್ಯಲಾಭ, ಕುದುರೆಗಳನ್ನೇ ಮಾರುತ್ತಾರಂತೆ. ಆದರೆ ಯಾವ ಕುದುರೆಗಾದರೂ ಕಾಲು ಮೂರೆ!

* * * *

ಹೋರರ ಹೊಸ ರೀತಿ ಆಗದೆಂದು ಸಪ್ರೂಗಳೇ ಮೊದಲಾದ ಲಿಬರಲರು 'ಖಂಡತುಂಡ' ತಿಳಿಸಿಯಾಯಿತು. ಈಗ ಹಳೇ ರೀತಿಗೆ ಬನ್ನಿ, ನಾವೂ ಬರುತ್ತೇವೆ, ಹೂಂ, ಸಮಯ ಕೊಟ್ಟಾಯಿತು. ಇಲ್ಲದಿದ್ದರೆ, ಇದೀ ದೇಶದಲ್ಲಿ ನಿಮ್ಮೊಡನೆ ಒಬ್ಬರೂ ಸಹಕರಿಸುವವರಿಲ್ಲ ಎಂದು ತೋರಿಸುತ್ತೇವೆಂದು ನೋಟೀಸು. ಎಂತೂ, ಅವರೊಮ್ಮೆ ರೀತಿ ಬದಲಿಸಿದ್ದರೆ, ನಾವು ಹೋಗುತ್ತಿದ್ದೆವೆಂದು ಕುತೂಹಲ. ಹೋರರು ತಮ್ಮ ಕುದುರೆಗಳನ್ನು ಕಳಿಸಿಕೊಟ್ಟು ಇವರನ್ನು ಕರೆಯಬೇಕು.

* * * *

'ಹೊಸ ರೀತಿ' ಎಂದ ಕೂಡಲೇ, ಆ ಹೊಸರೀತಿಯ ಜೋಯಿಸರ ನೆನಪಾಯಿತು. ಪುಣ್ಯಾತ್ಮರು ಮಹಾತ್ಮಾಜಿಯವರನ್ನು ಬಿಡುಗಡೆ ಮಾಡಿ ಜೂನ್ ತಾ ೨೦ರಿಂದ ಸುಮ್ಮನೆ ಕೂತಿದ್ದಾರೆ. ಮಹಾತ್ಮಾಜಿಯವರು ಜೈಲಿನಿಂದ ಹೊರಗೆ ಬಂದಿಲ್ಲವಾದರೆ ಜೋಯಿಸರೇನು ಮಾಡಬಹುದು?

* * * *

'ಇನ್ನೊಂದು ಕೊನ್ಫರೆನ್ಸ್ ಆಗುತ್ತದೆ. ಕೊನ್ಫರೆನ್ಸು ಬೇಡ ಎಂದರೂ ಮಹಾತ್ಮರು ಹೋಗುತ್ತಾರೆ. ಅಷ್ಟಾಯಲ್ಲಿ ೧೩ ಆಣೆ ಸ್ವರಾಜ್ಯ ಸಿಕ್ಕುತ್ತದೆ' ಎಂದು ಜೋಯಿಸರು ಎಂದರು. ಪೈವರ್ಟೇಬಲ್ ಹಿಡಿದು ನೋಡಿರಿ, ಇದರಂತೆ ಆಗುತ್ತದೆ. ಇಷ್ಟು ಖಾತ್ರಿ ಹೇಳುವ ಜೋಯಿಸರನ್ನು ಸರಕಾರವು ತಮ್ಮ ವಶ ಇಡಿಸಿಕೊಳ್ಳುವುದ ಉತ್ತಮ. ಇವರ ಮಾತ [illegible] ಜನರಲ್ಲಿ ಆವೇಶ ಉಂಟಾಗುವುದು.

* * * *

ನಿಜವಾಗಿಯೂ ನಮ್ಮ ವಿದ್ಯಾ ಇಲಾಖಾ ಡೈರೆಕ್ಟರರು ಒಂದು [illegible] ದಿನ ಇದ್ದು ಹೋದರು! [illegible] ಯಾವಲ್ಲ, ಇವರಿಗ ಟೀಪಾರ್ಟಿಯೂ ಇಲ್ಲವೆ?

* * * *

ಈ ಹತ್ತು ವರ್ಷಗಳಲ್ಲಿ ಇವರಿಗ ಎಷ್ಟು ಕಾರ್ಯಭಾರವಾಗಿದೆ ಎಂದರೆ ಮಂಗಳೂರಿಗೆ ರೈಲು ಹತ್ತಿ ಬಂದು ರೈಲು ಹತ್ತಿ ಹೋಗುವಷ್ಟು ಮಾತ್ರ ಅವಕಾಶ ಸಿಕ್ಕಿದ್ದು ನಮ್ಮ ಪುಣ್ಯ.

* * * *

ಬೇರೆ ಯಾವ ಕೆಲಸವಾದರೂ ಆವ [illegible] ಕಟ್ಟಿಸಿದ ಕೆಲಸ ಮುಗಿಯದೆ ಹೋಯಿತು.

* * * *

ಹೊಸಹೊಸ [illegible] ಅಭ್ಯಾಸವಿಲ್ಲದಿದ್ದರೆ ಸುತ್ತಿಕೊಂಡು [illegible] ನೋಡಿ ತಿಳಿದು [illegible] ಮಾಸ್ತರರು ಕಾದೇ [illegible] ಯಲ್ಲಿ ಕಾದೇ ಕುತರು [illegible], ಸಂದರ್ಶನೆಯಿಲ್ಲ!

* * * *

ಗ್ರೇಂಟು ಕಡಿಮೆಯಿಂದ ಹತ್ತು ಸಲ ಅರ್ಜಿ ಬರೆದು ಹತ್ತು ಶಾಲ ಮೆನೆಜ ಮಾಡಿದರು. ತಮ್ಮ ಜಾತ ಲೆಕ್ಕಪತ್ರಗಳನ್ನೂ, ಹಲವು ಶಾಲೆಗಳ ಹಾಜರಿಯನ್ನೂ ಮುಖತಾ ತೋರಿಸಬೇಕೆಂದಿದ್ದರು. ಆದರೆ ಡೈರೆಕ್ಟರಿಗೆ ಪುರುಸೊತ್ತು ಇಲ್ಲ, ಇವರ ಶಾಲೆಗಳನ್ನು ಒಮ್ಮೆಲೇ ಇಲ್ಲಿಂದಿತ್ತ ತರಲೂ ಸಾಧ್ಯವಾಗಿಲ್ಲ. ಅತ್ತ ಇವರ ಸಿಕ್ಕಿದರೆ, ಹೇಗೂ ಶಾಲೆಗಳನ್ನು ಬೈದು ಖರಾಬಿ ಬರಿಸಬಹುದಿತ್ತು. ಅಂತೂ ಕಡಿಮೆ ಗ್ರೇಂಟು ಕಡಿಮೆಯೇ ಉಳಿಯಿತು. ಇನ್ನೇನು ಮಾಡೋಣ?

* * * *

ಶಾಲೆಗಳ ಸಂಖ್ಯೆ ಹೆಚ್ಚಿಸುವುದು ಒಂದೇ ಉಪಾಯ ಉಳಿದಿದೆ. ಹತ್ತು ಶಾಲೆಗೆ ನೂರು ರೂಪಾಯಿ ಇದೆ. ಅನ್ನಿ ಇಪ್ಪತ್ತು ಮಾಡಿದರೆ ಇನ್ನೂರು ಸಿಗುವುದಲ್ಲವೆ? ಹತ್ತರ ಮಕ್ಕಳು ಇಪ್ಪತ್ತಕ್ಕು ಪೂರೈಸುವಂತಿದೆ, ಈ ಕಾಲದಲ್ಲಿ.

* * * *

ಕೌನ್ಸಿಲಿನಲ್ಲಿ ಹಿತಚಿಂತಕರಿರುವಾಗ, ಡೈರೆಕ್ಟರರು ಬಾರದೆ ಹೋದರೂ ಕಡಿಮೆಯೇನು?

* * * *

ಜ್ಯೂರಿಗೆ ಸಮ್ಮನ್ಸುಗಳು ಹೊರಟಿವೆ. ಪೋಲೀಸನೊಬ್ಬನು ಸಮ್ಮನ್ಸುಗಳ ಕಟ್ಟವನ್ನು ಹಿಡಿದುಕೊಂಡು ತಿರುಗುತ್ತಿದ್ದಾನೆ.

* * * *

ಜ್ಯೂರಿ ಮೆಂಬರರಿಗೆ ಜ್ಯಾರಿಮಾಡಲು ಬಂದ ಪೋಲೀಸನಿಗೆ "ಮೆಂಬರರು ಊರಲ್ಲಿಲ್ಲ. ಪರಊರಲ್ಲಿದ್ದಾರೆ" ಎಂದು ಹೇಳಿ ಪೋಲೀಸನನ್ನು ವಾಪಾಸುಮಾಡಿದೆ. ಪಾಪ ಮುದುಕ ಪೋಲೀಸು!

* * * *

ಮಾರನೆ ದಿವಸ ಯೌವ್ವನ ಪೋಲೀಸನೊಬ್ಬನು ಅದೇ ಮೆಂಬರರ ಮೇಲೆ ಪುನಃ ಜ್ಯೂರಿ ನೋಟೀಸು ಜ್ಯಾರಿಮಾಡಲು ಬಂದ. ಇವನಿಗೂ ಹೇಳಿದ್ದು ಮೇಲಿನಂತೆಯೇ.

* * * *

ಆದರೆ ಈ ಪೋಲೀಸನಿಗೆ ಬಂತು ಸಿಟ್ಟು! "ನೋಟೀಸು ಇನ್ಕಾರುಮಾಡಿದ್ದಾರೆ ಎಂದು ಬರೆದು ರವಾನಿಸುತ್ತೇನೆ!!!" ಎಂದು ಗದರಿಸಿ ಹೇಳಿದ.

* * * *

ಊರಲ್ಲಿಲ್ಲದ ಮೆಂಬರರು ಇಲ್ಲ ಎಂದು ಹೇಳಿದರೆ 'ಇನ್ಕಾರು ಮಾಡಿದ್ದಾರೆ' ಎಂದು ಬರೆದು ಕಳುಹಿಸುವ ಕಾನೂನು ಯಾವುದೋ? ಹೊಸದಾಗಿ ನಿರ್ಮಿಸಿರುವ ಆರ್ಡಿನೆನ್ಸಿನ ಯಾವುದಾದರೊಂದು ಮೂಲೆಯಲ್ಲಿ ಇಂತಹ ಕಾನೂನು ಇರಬಹುದೇ?

1. Good Riding Quality.
2. Gripping Tread
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE
Seiberling's Exclusive Quality.



TRIED & PROVED.

USE A Seiberling Tube
IN
A Seiberling Tire.

You cannot find a better combination.

ಅನುಕ್ರಮಣಿಕೆ.

ಸ್ವಲೇಖ
ಜ್ಯೋತಿಷ ೬
ಸ್ಫುಟವಿಚಾರಗಳು ೮
ನೋಟಗಳು ೧
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೬
ಒಳದೇಶ ವರ್ತಮಾನ ೭
ದಕ್ಷಿಣ ಕನ್ನಡ—ಮಂಗಳೂರು, ಬಂಟ್ವಾಳ, ಉಡ್ಪಿ, ಕಾಪು, ಕಟಪಾಡಿ, ಕಾರ್ಕಳ, ಕಾಸರಗೋಡು . . ೮
ವಿವಿಧ ಸಮಾಚಾರಗಳು . . . ೧೧
ಕಲ್ಲು ಬಿತ್ತು!! . . ೨
ರಾಜಾರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ . . ೧೪
ಜರ್ಮನಿಯಲ್ಲಿ ಪ್ರಚಂಡ ವಿಪ್ಲವ! . . ೯
ಪತ್ರವ್ಯವಹಾರ . . ೧೦

ಸ್ವದೇಶಾಭಿಮಾನಿ.

ತಾ. ೨೯ನೇ ಶುಕ್ರವಾರ ಜುಲ್ಯಾ ೧೯೩೨

ಜ್ಯೋತಿಷ.

ಭವಿಷ್ಯವನ್ನು ಕೇಳುವ ಕುತೂಹಲವು ಎಲ್ಲರಿಗೂ ಇದ್ದೇ ಇದೆ. ಅದರಲ್ಲೂ ತಮ್ಮ ಸ್ವಂತ ಜೀವಮಾನದ ಮುಂದಿನ ಸ್ಥಿತಿ ಏನಾಗಿರಬಹುದೆಂದು ಮುಂದಾಗಿ ತಿಳಿದರೆ ತಮಗೆ ಬರಬಹುದಾದ ಹಾನಿಗಳನ್ನು ತಪ್ಪಿಸಿ, ತಮ್ಮ ಪಾಲಿಗಿರುವ ಲಾಭಗಳನ್ನು ಹೆಚ್ಚಿಸಬಹುದೆಂಬ ಆಶೆಯು ಇಲ್ಲವೆನ್ನಲಾಗುವುದಿಲ್ಲ. ಇಂತಹ ಭವಿಷ್ಯವನ್ನು ಹಲವು ರೀತಿಗಳಲ್ಲಿ ಕಂಡುಹಿಡಿಯಲು ಯತ್ನಿಸುವರು. ಕೈಗೆರೆಗಳನ್ನು ನೋಡಿ ಹೇಳುವವರು, ಮುಖಛಾಯೆಯನ್ನು ನೋಡಿ ಹೇಳುವವರು, ಪ್ರಶ್ನೆಸಮಯವನ್ನು ನೋಡಿ ಹೇಳುವವರು, ಅಂಜನ ಮೂಲಕ ಹೇಳುವವರು, ಇತ್ಯಾದಿ ಹಲವು ವಿಧಗಳಿಂದ ಇಂತಹ ಭವಿಷ್ಯವನ್ನು ತಿಳಿಯುವರೆಂದು ಹೇಳಿಕೊಳ್ಳುವರು. ಆದರೆ ಭವಿಷ್ಯ ಹೇಳುವ ಬಗ್ಗೆ ರಚಿಸಲ್ಪಟ್ಟ ವಿಜ್ಞಾನಗಳಲ್ಲಿ ಜ್ಯೋತಿಷ, ಅಂದರೆ ಜನ್ಮಕಾಲ ಹಿಡಿದು ಗ್ರಹಗತಿಗಳ ಮೂಲಕ ಗುಣಿಸಲ್ಪಡುವ ವಿಜ್ಞಾನವೇ ಅತ್ಯಂತ ಪ್ರಾಮುಖ್ಯವಾದುದಾಗಿದೆ.

ಆಧುನಿಕ ನಾಗರಿಕತೆಯ ವಿಜ್ಞಾನಯುಗದಲ್ಲಿ ಈ ಭವಿಷ್ಯ ಹೇಳುವುದಕ್ಕೆ ಹೆಚ್ಚಿನ ಮರ್ಯಾದೆಯಿಲ್ಲ. ಆದರೆ ಮರ್ಯಾದೆಯಿಲ್ಲವೆಂಬುವುದು ಒರೇ ಬಾಯಿಮಾತು. ಎಂತಹ ವೈಜ್ಞಾನಿಕನಾದರೂ, ಒಂದಲ್ಲ ಒಂದು ಸಂದರ್ಭದಲ್ಲಿ ತನ್ನ ಭವಿಷ್ಯವನ್ನು ತಿಳಿಯುವ ಆತುರ ತೋರುವನು. ಎಷ್ಟೋ ಜನರು ಹೊರಗಿನ ತೋರಿಕೆಗೆ ಅದರಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಒಳಗೊಳಗೆ ಅದರೊಡನೆ ಮಂತ್ರಾಲೋಚನೆ ಮಾಡುವರು. ಆಧುನಿಕ ನಾಗರಿಕತೆಯ ಜನ್ಮಸ್ಥಾನವಾದ ಪಾಶ್ಚಾತ್ಯರಲ್ಲಿ ಕೂಡ ಇದು ವಿಶೇಷ ಪ್ರಚಾರದಲ್ಲಿದ್ದು, ಭವಿಷ್ಯ ಹೇಳುವವರು ಕಣಿ ಹೇಳುವವರು, ಅಂಜನ ಹಾಕುವವರು ತುಂಬಾ ಜನರಿದ್ದಾರೆ.

ಆದುದರಿಂದ ಈ ಭವಿಷ್ಯ ಹೇಳುವ ಹಲವು ಉಪಾಯಗಳ ಸತ್ಯಾಸತ್ಯತೆಯನ್ನೂ ಸಾಧ್ಯಾಸಾಧ್ಯತೆಯನ್ನೂ ವಿಜ್ಞಾನ ರೀತ್ಯಾ ಪರಿಶೀಲಿಸುವುದು ಅತೀ ಅಗತ್ಯವಾಗಿರುತ್ತದೆ. ಇಲ್ಲದಿದ್ದರೆ ಗೊತ್ತಿದ್ದವರು ಯಾರು, ಗೊತ್ತಿಲ್ಲದವರು ಯಾರು ಎಂಬ ಭೇದ ತಿಳಿಯದೆ ಸಾವಿರಾರು ಜನರು ಹಲವು ಮೋಸಗಾರರಿಂದ ವಂಚಿಸಲ್ಪಡುತ್ತಿರುವರು. ಹಿಂದೆ ಇವರು ಬರೇ ತಮ್ಮ ಕೀರ್ತಿಯಿಂದಲೋ ಅಪಕೀರ್ತಿಯಿಂದಲೋ ಗಿರಾಕಿಗಳನ್ನು ಆಕರ್ಷಿಸುತ್ತಿದ್ದರು, ಈಗ ಪತ್ರಿಕೆಗಳಲ್ಲಿ ಪ್ರಕಟಿಸಿ ಕೊಟ್ಟು ವಿಶಾಲಕ್ಷೇತ್ರದಿಂದ ಗಿರಾಕಿಗಳನ್ನು ಹೊಂದುತ್ತಿರುವರು. ಇವರ ಕೆಲಸಗಳು ಜನರಿಗೆ ಬರೇ ದುಡ್ಡಿನ ನಷ್ಟಕ್ಕೆ ಕಾರಣವಾಗುತ್ತಿದ್ದುದಾದರೆ ಚಿಂತೆಯಿರುತ್ತಿರಲಿಲ್ಲ; ಆದರೆ ಇವರ ಭವಿಷ್ಯದ ಮೇಲೆ ಹೊಂದಿದ ಜನರ ಮಾನಸಿಕ ಬಾಧೆಗೂ ಇವರು ಕಾರಣರಾಗುವುದರಿಂದ, ಇವರ ಉಪಾಯಗಳ ಪರಿಶೀಲನೆಯು ಸಾರ್ವಜನಿಕ ಆವಶ್ಯಕತೆಯೆಂದು ತಿಳಿಯದಿರದು.

ಈ ಭವಿಷ್ಯ ಹೇಳುವ ಸಾಧನೆಗಳಲ್ಲಿ ಜ್ಯೋತಿಷದ ಸತ್ಯಾಸತ್ಯತೆಯನ್ನು ನೋಡಲು ಅನುಕೂಲವಿದೆ. ಏಕೆಂದರೆ ಅದು ಸ್ಥಿರವಾದ ಸೂತ್ರಗಳ ಮೇಲೆ ಹೊಂದಿರುತ್ತದೆ. ಅದರ ನಿಜತ್ವವನ್ನು ನೋಡಬೇಕಾದರೆ, 'ಅದರ ಆಧಾರತತ್ವವೇನೆಂದು ನೋಡಬೇಕು. ಎಲ್ಲಾ ಗ್ರಹಗಳ ಗತಿಗೂ, ವ್ಯಕ್ತಿಯೊಬ್ಬರ ಜೀವನ ಗತಿಗೂ ಸಂಬಂಧವಿದೆಯೇ? Law of coincidence, ಸಂಯೋಗ ಸೂತ್ರವೆಂಬ ತತ್ವವೆಂಬುದೊಂದಿದೆಯೇ? ಎಂಬುದು ಮುಖ್ಯವಾದ ಪ್ರಶ್ನೆ. ಏಕೆ ಇಂತಹ ತತ್ವವಿರಬೇಕೆಂಬುದು ಮುಖ್ಯವಲ್ಲ. ವಿಜ್ಞಾನಗಳು ಎಲ್ಲಾ "ಏಕೆ?" ಎಂಬ ಪ್ರಶ್ನೆಗೆ ಉತ್ತರ ಕೊಡುವುದಿಲ್ಲ. ಹಾಗೆಯೇ ಜ್ಯೋತಿಷದ ವಿಜ್ಞಾನವಾದರೂ ತನ್ನ ಆಧಾರ ತತ್ವದ ಕಾರಣಗಳನ್ನು ಕೊಡಬೇಕೆಂದೇನೂ ಇಲ್ಲ. ಆದರೆ ಅಂತಹ ತತ್ವವು ಇದೆಯೇ ಎಂದು ಕಂಡುಹಿಡಿಯುವುದು ಅಸಾಧ್ಯವಾಗಲಾರದು.

ಕೆಲವು ಕನ್ನಡ ಪತ್ರಿಕೆಗಳು ಜ್ಯೋತಿಷದಲ್ಲಿ ಕೈ ಹಾಕಿವೆ. ಆದರೆ ಅವು ಬ್ರಹಜ್ಜಾತಕ ರೀತ್ಯಾ ವ್ಯಕ್ತಿಯ ಜೀವನ ಶೋಧೆ ನಡೆಸುವುದರಲ್ಲಿ ತೃಪ್ತವಾಗಿವೆಯೇ ಹೊರತು, ವ್ಯಕ್ತಿಯ ಜೀವನವನ್ನು ತಿಳಿದು ಬೃಹಜ್ಜಾತಕವನ್ನು ಶೋಧಿಸಲು ಹೋಗಿಲ್ಲ. ಈ ಎರಡನೆಯ ತರದ ಶೋಧನೆಯು ಅತ್ಯಾವಶ್ಯಕ, ಆ ಮೂಲಕ ಜ್ಯೋತಿಷದ ಸತ್ಯಾಸತ್ಯತೆಯು ತಿಳಿಯಬಹುದು, ಬೃಹಜ್ಜಾತಕದ ಸುಧಾರಣೆಯೂ ಆವಶ್ಯವಾಗಬಹುದು.

ಜ್ಯೋತಿಷದೊಡನೆ ಹಲವು ಸಾಂಪ್ರದಾಯಗಳು ಬೆಳೆದಿವೆ. ವಿವಾಹಕ್ಕೆ, ಮೇಲ್ಜಾತಿ ಹಿಂದೂಗಳಲ್ಲಿ ಜ್ಯೋತಿಷವೇ ಮೂಲಾಧಾರ. "ಜೋಯಿಸನ ಮಗಳು ವಿಧವೆ" ಎಂಬ ನಾಣ್ಣುಡಿ ಇದ್ದು ಕಣ್ಣಾರೆ ಉದಾಹರಣೆಗಳಿದ್ದರೂ ಜನತೆಯ ವಿಶ್ವಾಸವು ಕಡಿಮೆಯಾಗಿಲ್ಲ. ಎಷ್ಟೋ ಉತ್ತಮ ಸಂಬಂಧಗಳಾಗಬಲ್ಲ ಸಂದರ್ಭಗಳು ಈ ಜ್ಯೋತಿಷದಿಂದ ಒಡೆಯಲ್ಪಟ್ಟಿವೆ. ಜ್ಯೋತಿಷ ನೋಡಿ ಆದ ವಿವಾಹಗಳಲ್ಲಿ ಸಂಸಾರ ತಾಪತ್ರಯಗಳಾಗಲೀ, ಸಂಕಷ್ಟಗಳಾಗಲೀ, ನಿವಾರಣೆಯಾದುದು ಕಂಡುಬರುವುದಿಲ್ಲವಾದರೂ ಆ ವಿಶ್ವಾಸವು ಹೋಗಿಲ್ಲ. ಆದುದರಿಂದ ಇದರ ಯಥಾರ್ಥತೆಯನ್ನು ಕಂಡುಹಿಡಿಯುವುದು ಆವಶ್ಯಕವು. ಜ್ಯೋತಿಷವು Law of coincidence ಅಂದರೆ ಸಂಯೋಗ ಸೂತ್ರದ ಮೇಲೆ ಹೊಂದಿರುವುದಾದರೆ, ಅದರ ಸಂಬಂಧದ coincidence ಸಂಯೋಗಗಳು ಸಹಜವಾಗಿ ಬರಬೇಕಲ್ಲದೆ ಒತ್ತಾಯದಿಂದ ಉಂಟುಮಾಡಿದರೆ ಫಲವು ಇಷ್ಟತರ ರೀತಿಯಲ್ಲಿ ಒದಗಲಾರದೇನೇ? ಎಂಬುದು ಈ ವೈವಾಹಿಕ ಜ್ಯೋತಿಷಕ್ಕೆ ಸಂಬಂಧವಾದ ಪ್ರಶ್ನೆ. ಅಂದರೆ ಗಂಡು—ಹೆಣ್ಣಿನ ವಿವಾಹವು ಸಂಯೋಗಧರ್ಮ (coincidence) ರೀತ್ಯಾ ಒದಗುವ ಬದಲು ಒತ್ತಾಯ ಪೂರ್ವಕಮಾಡುವುದು ಜ್ಯೋತಿಷದ ಆಧಾರತತ್ವವನ್ನೇ ಕಾಸಿದು ಹಾಕಿದಂತೆ ಆಗಲಾರದೇ?

ಇದೇ ರೀತಿಯ ಹಲವು ಸಾಂಪ್ರದಾಯಗಳಿವೆ. ಇವುಗಳ ಯುಕ್ತಾಯುಕ್ತತೆಯ ಶೋಧವು ನಡೆಯಬೇಕು. ಇಂತಹ ಶೋಧಗಳನ್ನು ನಡೆಸಲಿಕ್ಕೆ ಅನುಕೂಲವಾದ ಉಪಾಯಗಳಿವೆ. ಜ್ಯೋತಿಷದಲ್ಲಿ ಆಸಕ್ತರಿರುವ ಪತ್ರಿಕೆಗಳು ಇವನ್ನು ಕೈಕೊಳ್ಳಬಹುದು, ಸಾರ್ವಜನಿಕ ಹಿತದ ದೃಷ್ಟ್ಯಾ ಆವಶ್ಯಕವೂ ಆಗಿದೆ.

ವಿದೇಶ ವರ್ತಮಾನ.

–ಹಂಗೇರಿಯಾದಿಂದೊಂದು ವಾರ್ತೆ! ಅಲ್ಲಿಯ ಟೋಡಾ ಎಂಬಲ್ಲಿನ ಸಂಸ್ಥಾನಾಧಿಪತಿಗಳು ಸಂಬಳವಿಲ್ಲದೆ ೩ ಮೂರು ತಿಂಗಳು ಬಳಲಿದರಂತೆ. ತಮ್ಮ ರಕ್ಷಕರಿಗೆ ಸಂಬಳ ಸಿಗಲಿಲ್ಲವೆಂದು ಅವರ ಮಕ್ಕಳು ಶಾಲಾ ಸಂಬಳವನ್ನು ಕೊಡಲಿಲ್ಲ. ಶಾಲಾಧಿಕಾರಿಗಳು ಕೆಲ ಚಿಮ್ಮಕ್ಕಳನ್ನು ಬೀಗಮುದ್ರೆಯೊಡನೆ ಕೋಣೆಯೊಳಗೆ ಹಾಕಿ, ಅವರ ತಾಯಿತಂದೆಗಳು ಸಂಬಳ ಕೊಡದಿದ್ದರೆ ಆ ಶಾಲಾಮಕ್ಕಳಿಗೆಲ್ಲ ಅನ್ನ ನೀರನ್ನೇ ಕೊಡಲಾಗುವುದಿಲ್ಲವೆಂದು ಪ್ರಕಟಿಸಿದರು.

- ಇಷ್ಟರ ತನಕ ಕಟ್ಟಲ್ಪಡದಷ್ಟು ದೊಡ್ಡದಾದ ಒಂದು ಅದ್ಭುತ ವಿಮಾನವು ರೋಚೆಸ್ಟರ್ ಎಂಬಲ್ಲಿ ನಿರ್ಮಿತವಾಗಿದೆ. ಇದು ೩೩ ಟನ್ನುಗಳಷ್ಟು ಭಾರವಿದೆಯಂತೆ. ಎಂದರೆ ಸಾಧಾರಣ ಲೋರಿಗಳ ಇಪ್ಪತ್ತು ಪಾಲಷ್ಟು ದೊಡ್ಡದಾಯಿತು. ಇದರ ಬಾಲವು ೧೨೦ ಅಡಿ ಉದ್ದವಿದೆ. ವಿಮಾನದ ದೇಹವು ೮೯ ಅಡಿಗಳಷ್ಟು ಉದ್ದವಿದೆ. ಈ ವಿಮಾನವು ತನ್ನ ಅತೀ ಕುದುರೆ ಶಕ್ತಿಯಿಂದಾಗಿ ಎಂತಹ ಗಾಳಿಮಳೆಯನ್ನಾದರೂ ಧಿಕ್ಕರಿಸಲು ಸಮರ್ಥವಾಗಿದೆಯೆಂದು ತಿಳಿದುಬಂದಿದೆ.

– ದಕ್ಷಿಣ ಆಫ್ರಿಕದಲ್ಲಿ ಮತವಾರ ಪ್ರಶ್ನೆಯೆದ್ದು ಕೆಲವು ಪಂಗಡಗಳು ಹೊಡೆದಾಡುತ್ತಿವೆ. ವಿಮಾನಗಳ ಮೂಲಕ ಸರಕಾರೀ ನೌಕರರನ್ನು ಕಳುಹಲಾಗಿದೆ.

–"ಗಾಂಧಿಯವರನ್ನು ಕತ್ತಲೆಯ ಸೆರೆಯಲ್ಲಿಟ್ಟು ನಾವು ಹಿಂದೀಯರಿಗೆ ಏನನ್ನು ಕೊಟ್ಟರೂ ನಿಸ್ವಾರ್ಥಕ; ದಬ್ಬಾಳಿಕೆಯು ನಿರರ್ಥಕ"ವೆಂದು ಬ್ರೈಲ್ಸ್‌ಫೋರ್ಡ್ ಪ್ರಭೃತಿಗಳು ಲಂಡನಿನಲ್ಲಿ ಪ್ರಕಟಿಸಿರುವರು.

– ಫ್ರಾನ್ಸ್ ದೇಶದ ಅಧ್ಯಕ್ಷರನ್ನು ಗುಂಡಿನಿಂದ ಕೊಂದ ಗೊರ್ಗೊಲೊಫನ ನ್ಯಾಯವಿಚಾರಣೆಯಾಗುತ್ತಿದೆ. ಸೆರೆಯಲ್ಲಿ ಅವನು ಹುಚ್ಚನಂತಾಚರಿಸುತ್ತಿದ್ದನು. ಜೈಲಿನ ಕೋಣೆಯಲ್ಲಿದ್ದ ಒಂದು ಜೇಡನೊಡನೆ ಈ ಅಪಾದಿತನು ಆಡುತ್ತಿದ್ದನಂತೆ. ಅಲ್ಲದೆ ವಿಚಾರಣೆಯ ಸಮಯದಲ್ಲೂ ಅದನ್ನು ಹಿಡಿದುಕೊಂಡಿದ್ದನು.

– ಜರ್ಮನಿಯ ಎಕ್ಸ್ ಕೈಸರನು ರಾಜಕೀಯಾಂಗಣದಲ್ಲಿ ಪುನಃ ತನ್ನ ಚಟುವಟಿಕೆಗಳನ್ನು ತೋರಿಸುತ್ತಿದ್ದಾನೆಂದು ತಿಳಿದು ಬಂದಿದೆ. ಅವನನ್ನು ತಡೆಯುವ ಯತ್ನವಾಗುತ್ತಿದೆ.

ಬರ್ಲಿನ್ ನಗರದಲ್ಲಿದ್ದ ಮಾರ್ಶೆಲ್‌ಲೋವನ್ನು ಸರಕಾರವು ಹಿಂತೆಗೆದಿದೆ. ನಾಜಿಗಳಿಗೂ ಮತವಾದಿಗಳಿಗೂ ಯುದ್ಧವಾಗುತ್ತಿದೆ.

ಇದೇ ಬರುವ ಆಗೋಸ್ತು ತಾ. ೬ಕ್ಕೆ ದಕ್ಷಿಣ ಅಮೇರಿಕಾದ ಬೊಲಿವಿಯಾ ದೇಶದವರು ಪಾರಾಗ್ವಾ ದೇಶದವರ ಮೇಲೆ ಯುದ್ಧ ಹೂಡಲಿರುವರು.

– ಅಮೇರಿಕಾದಲ್ಲಿ ಹೆಲೆನ್ ಎಂಬ ಹದಿನೆಂಟು ವರ್ಷದ ಹುಡುಗಿಯೊಬ್ಬಳು ಮನೆಯಿಂದ ಪರಾರಿಯಾಗಿ ಒಂದೆರಡು ವರ್ಷಗಳನ್ನು ಪುರುಷ ವೇಷದಲ್ಲೇ ದಾಟಿದಳು. ಇವಳನ್ನೀಗ ಇತ್ತಲಾಗೆ ಕಂಡು ಹಿಡಿದಿದ್ದಾರೆ.

ಒಳದೇಶ ವರ್ತಮಾನ

— ಲಾಹೋರಿನ ಲಜಪತರೈ ಹೋಲಿನಲ್ಲೊಂದು ಮಹಾಸಭೆಯು ಲೆಜಿಸ್ಲೇಟಿವ್ ಎಸೆಂಬ್ಲಿ ಮೆಂಬರರಾದ ಶ್ರೀ ಭಗತ್‌ರಾಂ ಪುರಿಯವರ ಅಧ್ಯಕ್ಷತೆಯಲ್ಲಿ ಜರಗಿ ಸರ್ ಜೋರದ ಪ್ರಕೃತ ಧೋರಣವು ಖಂಡಿಸಲ್ಪಟ್ಟು, ಅವರು ಸದ್ಮಾರ್ಗಕ್ಕೆ ಬರದೆ ತಮ್ಮ ಸಹಕಾರವಿಲ್ಲವೆಂದು ಠರಾವಾಯಿತು.

ಲಾಹೋರಿನಲ್ಲಿ ಕಮರುದ್ದೀನ್ ಎಂಬ ಕಳ್ಳನೊಬ್ಬನು ಸೆರೆಗೂಡಿಗಾಗಿ, ಅವಧಿ ಮುಗಿದು ಹೊರಬಂದು, ಪುನಹ ತನ್ನ ವೃತ್ತಿಗಿಳಿದನು. ಪುನಹ ಅವನನ್ನು ಹಿಡಿದು ಅಂಡಮಾನಕ್ಕೆ ಕಳುಹಿಸಬೇಕೆಂದು ಆಲೋಚನೆಯಾಗುವಾಗ ನನ್ನನ್ನು ಮಕ್ಕಕ್ಕೆ ಕಳುಹಿಸಿರಿ ಎಂದನು.

ನಮ್ಮ ಮಾನ್ಯ ವೈಸರಾಯರೂ ಅವರ ಪತ್ನಿಯವರೂ ಕಲ್ಕತ್ತದಿಂದ ಸಿಮ್ಲಾಕ್ಕೆ ತಾ. ೩ನೇ ದಿನ ಹೋಗಿರುವರು.

— ಶ್ರೀಮತಿ ಕಮಲಾನೆಹರೂರವರು ವಿಷಮ ಕಾಯಿಲೆಯಲ್ಲಿ ಇದ್ದರೆಂದೂ ಈಗ ಗುಣಮುಖವಾಗುತ್ತಿರುವರೆಂದೂ ತಿಳಿದುಬಂದಿದೆ.

– ತಿನ್ನವೆಲ್ಲಿಯಲ್ಲಿ ರಾತ್ರಿಯಲ್ಲಿ ಬೆಂಕಿಯೆದ್ದು ೯ ಮನೆಗಳು ಅಗ್ನಿಗಾಹುತಿಯಾದುವು. ತರುಣಿಯೊಬ್ಬಳು ಮನೆಯಿಂದ ಹೊರಬರಲಾರದೆ ಸುಟ್ಟು ಮೃತಪಟ್ಟಳು.

— [illegible] ಬೈ ಇಂಡಿಯನ್ ಲೀಗಿನ ಸಂಬಂಧವಾಗಿ ಬಹಿಷ್ಕಾರ ಬೋಧೆಯನ್ನು ಮಾಡಿದ ಈಶ್ವರದಾಸ ಎಂಬವರಿಗೆ ೨೦೦ ರೂ ಜುಲುಮಾನೆಯೂ ೩ ತಿಂಗಳ ಶಿಕ್ಷೆಯೂ ಆಗಿತ್ತು. ಮೊನ್ನೆ ಮದರಾಸಿನ ಜಸ್ಟೀಸ್ ಸರ್ ವಿ. ಪಿ. ರಮೇಶನ್ ಎಂಬವರು ಈ ಶಿಕ್ಷೆಯನ್ನು ರದ್ದುಪಡಿಸಿ 'ಬರೇ ಬಹಿಷ್ಕಾರ ಬೋಧೆಯನ್ನು ಮಾಡುವುದರಿಂದಾಗಿ ಒಬ್ಬನು ನಿಷಿದ್ಧ ಸಂಸ್ಥೆಗೆ ಸಹಾಯ ಮಾಡಿದಂತಾಗುವುದಿಲ್ಲ. ನಿಷಿದ್ಧ ಸಂಸ್ಥೆಯು ಇಲ್ಲದೆಯೇ, ಅದರ ಇರುವಿಕೆಯನ್ನು ತಿಳಿಯದೆಯೇ ಒಬ್ಬನು ಬಹಿಷ್ಕಾರ ಬೋಧೆಯನ್ನು ಮಾಡಬಹುದು, ಒಂದು ಸಂಸ್ಥೆ ಮತ್ತು ಒಬ್ಬ ವ್ಯಕ್ತಿಗಳೊಳಗೆ ಸಂಬಂಧವಿದ್ದು, ಅಂತಹ ಸಂಬಂಧದಿಂದಾಗಿ ಆ ವ್ಯಕ್ತಿಯು ಬಹಿಷ್ಕಾರೋಪದೇಶ ಮಾಡಿದನೆಂಬುದಕ್ಕೆ ಸಮರ್ಥಕವಾದ ಸಾಕ್ಷ್ಯವು ಬೇಕು' ಎಂದರು.

—ಕ್ರಾಂತಿಕಾರಕ ಭಾಷಣವನ್ನಿತ್ತರೆಂಬ ಆರೋಪಣೆಯ ಮೇಲೆ ನಾಗಪುರದ ಮಜೂರ ಪಕ್ಷೀಯರಾದ ಶ್ರೀ ಆರ್. ಎಸ್. ರುಯಿಕರ್ ಇವರಿಗೆ ೨ ವರ್ಷಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ.

ನಾಗಪುರದ ಡಿಸ್ಟ್ರಿಕ್ಟ್ ಸಿವಿಲ್ ಕೋರ್ಟಿನ ಮೇಲೆ ಹಾರಾಡುತ್ತಿದ್ದ ಯೂನಿಯನ್ ಜಾಕ್ ಬಾವುಟೆಯನ್ನು ಎಳೆದುತೆಗೆದ ಬಾಸ ಬಾಲಕೃಷ್ಣ ಬೆಳ್ಸರೆ ಎಂಬ ತರುಣನಿಗೆ ೮ ಛಡಿಗಳು ದೊರೆತುವು.

— ಕಲಕತ್ತದಲ್ಲಿ ೧೯ನೇ ಸರ್ವಾಧಿಕಾರಿಯಾಗಿ ಕಾಂಗ್ರೆಸ್ ಚಟುವಟಿಕೆಗಳಲ್ಲಿ ನಿರತನಾಗಿದ್ದ ನಿತ್ಯಾನಂದ ಷಾ ಎಂಬವನಿಗೆ ಆರು ವಾರಗಳ ಸಜೆಯಾಯಿತು.

ಕಲ್ಕತ್ತದಲ್ಲಿ 'ಹವಿಲ್ದಾರ' ಎಂಬ ಸ್ಟೀಮರಿನಲ್ಲಿ ಇದ್ದ ಯುರೋಪಿಯನ ಕೆಲಸಗಾರರನ್ನು ಬಿಸಿಲಲ್ಲಿ ಕೆಲಸ ಮಾಡಿಸಿದ್ದಕ್ಕೆ ಅದರ ಚೀಫ್ ಆಫೀಸರರಿಗೆ ೩೦ ರೂಪಾಯಿ ಜುಲುಮಾನೆಯೂ ಎರಡು ವಾರಗಳ ಕಠಿಣ ಸಜೆ ವಿಧಿಸಲಾಗಿದೆ.

* * *

ದಕ್ಷಿಣ ಕನ್ನಡ.

ಇಲ್ಲಿಯ ಮಿಶ್ಯನ್ ಹೈಸ್ಕೂಲಿನ ಉಪಾಧ್ಯಾಯರಾಗಿ ಅನೇಕ ವರ್ಷಗಳ ತನಕ ಕೆಲಸ ನಡೆಸಿ ಇತ್ತೀಚೆಗೆ ಕೆಲಸದಿಂದ ನಿವೃತ್ತರಾದ ರಾ. ಕೆ. ಗಣಪ್ಪಯ್ಯ ಇವರ ಹಿರೇಮಗ ಶ್ರೀ ನರಸಿಂಗರಾಯರು ನಾಗಪಟ್ಟಣದಲ್ಲಿ ಕಸ್ಟಮ್ ಇನ್ಸ್‌ಪೆಕ್ಟರರಾಗಿರುತ್ತಾ, ಇದೇ ತಾ ೨೦ರಲ್ಲಿ ಹೃದ್ರೋಗದಿಂದ ಅಕಾಲ ಮರಣಕ್ಕೆ ತುತ್ತಾರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಚಿರಶಾಂತಿಯು ದೊರಕಲೆಂದು ಬೇಡುವೆವು.

ಮಂಗಳೂರು:— ಇಲ್ಲಿಯ ಕೊಂಗ್ರೆಸ್ ವಾಲರ ಮುಂದಾಳುವೆಂದೆಣಿಸಲ್ಪಟ್ಟಿದ್ದ ಶ್ರೀ ಮಾರಪ್ಪ ಪಕ್ಕಳರ ನ್ಯಾಯವಿಚಾರಣೆ ನಡೆದು ೪ ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ.

ಶ್ರೀ ಬಿ ವೆಂಕಪ್ಪಶೈಗಳು ಚಳವಳಿ ಪ್ರೋತ್ಸಾಹಕರೆಂದು ಭಾವನೆಯಿಂದ ಕೈದುಮಾಡಿ ಜಾಮೀನಿನ ಮೇಲೆ ಬಿಟ್ಟಿರುವರು. ತಾ ೪ಕ್ಕೆ ವಿಚಾರಣೆ.

ಇಲ್ಲಿಯ ತೋಟಿಗಳು ಆಗಾಗ್ಗೆ ಸಂಬಳ ಮೊದಲಾದ ಅನುಕೂಲತೆಗಳ ಸಲುವಾಗಿ ಚಡಪಡಿಸಿ ಮುಷ್ಕರ ಹಿಡಿಯುತ್ತಾರಾಗಿ ತಿಳಿದುಬಂದುದರಿಂದ ಮುನಿಸಿಪಾಲಿಟಿಯವರು ಕೆಲವು ತೋಟಿಗಳನ್ನು ಮದ್ರಾಸಿನಿಂದ ಕರೆತಂದಿದ್ದಾರೆ.

ಇಲ್ಲಿಯ ಶ್ರೀ ಕೃಷ್ಣ ಸಿನೆಮದಲ್ಲಿ ತಾ ೩೧ನೇ ದಿನ 'ಕಾರ್ಮನ್' ಎಂಬ ಉತ್ತಮ ಚಿತ್ರವು ಪ್ರದರ್ಶಿಸಲ್ಪಡುವುದು. ಇದನ್ನು ತಯಾರಿಸಲು ಸಾವಿರಾರು ಪೌಂಡುಗಳು ವೆಚ್ಚವಾದುವು.

ದ ಕ ಹಿಂದೀ ಪ್ರೇಮಿ ಮಂಡಲದ ಆಶ್ರಯದಲ್ಲಿ ಸ್ಥಾಪಿತವಾದ ಹಿಂದೀ ವಾಗ್ವರ್ಧಿನಿ ಸಭೆಯ ಎರಡನೆಯ ಅಧಿವೇಶನವು ಇದೇ ತಾ ೨೪ನೇ ಆದಿತ್ಯವಾರ ಅಪರಾಹ್ನ ಘಂಟೆ ೫ ೩೦ಕ್ಕೆ ಆರ್ಯ ಸಮಾಜ ಮಂದಿರದಲ್ಲಿ ಶ್ರೀ ಕೆ ಪದ್ಮನಾಭ ಕಿಣಿ, ಅಧ್ಯಾಪಕ ಕೆನರಾ ಹೈಸ್ಕೂಲ್ ಇವರ ಅಧ್ಯಕ್ಷತೆಯಲ್ಲಿ ಜರಗಿ 'ಇಂಗ್ಲಿಷು ಹಿಂದೂಸ್ಥಾನದ ರಾಷ್ಟ್ರಭಾಷೆಯಾಗಬೇಕು' ಎಂಬ ವಿಷಯದ ಮೇಲೆ ಮನೋರಂಜಕ ಹಾಗೂ ದೀರ್ಘವಾದ ವಾದವಿವಾದ ನಡೆದು ಕೊನೆಗೆ ಪ್ರಸ್ತಾವವು ಬಹುಮತದಿಂದ ಬಿದ್ದು ಹೋಯಿತು. ಉಕ್ತ ಸಭೆಯಲ್ಲಿ ಹಲವು ವಿದ್ಯಾರ್ಥಿಗಳು ಭಾಗವನ್ನು ವಹಿಸಿದ್ದರು. ಶ್ರೀಗಳಾದ ಬಿ ವಿ ಮಾಧವ ಬಾಳಿಗ ಎಮ್ ಪುರುಷೋತ್ತಮ ಪೈ ಕೆ ಗಂಗಾಧರ ಕೆ ಚಂದ್ರಶೇಖರ ಇವರು ವಿಷಯದ ಪರವಾಗಿಯೂ, ಶ್ರೀಗಳಾದ ದೇವಪ್ಪ ಆಳ್ವ, ಕೆ ರಾಘವಾಚಾರ್, ಯು ರಾಮಪ್ಪ ಪಿ ಶ್ರೀಧರಭಟ್ ಇವರು ವಿರೋಧವಾಗಿಯೂ ಹಿಂದೀಯಲ್ಲಿ ಮಾತಾಡಿದರು. ಪ್ರಧಾನ ವಕ್ತೃಗಳಾದ ಶ್ರೀ ಬಾಳಿಗರ ಭಾಷಣವು ಬೋಧಪ್ರದವಿದ್ದು ಸಕಲ ಪ್ರಶಂಸೆಗೆ ಪಾತ್ರವಾಗಿದ್ದಿತು.

ತಾ ೨೧ನೇ ಗುರುವಾರ ಸಾಯಂಕಾಲ ೪ ಗಂಟೆಗೆ [illegible] ಸೇನೆಯ ಸ್ವಯಂಸೇವಕರಾದ ಕೆ ವಾಸು ಪದ್ಮನಾಭ, ಕೊಂಡಪ್ಪ ಲಕ್ಷ್ಮಣ, ಆನಂದ ಮೊದಲಾದ ಎಂಟು ಮಂದಿ ಉಳ್ಳಾಲದ ಗುತ್ತಿಯನ್ನು ಪಹರೆಮಾಡಿ ಕೈದುಮಾಡಲ್ಪಟ್ಟಿದ್ದರು. ಈ ಪೈಕಿ ವಾಸು ಎಂಬ ಒಬ್ಬ ಸ್ವಯಂಸೇವಕನಿಗೆ ಪೋಲೀಸರ ಹೊಡೆದಿರುತ್ತಾರೆಂದು ತಿಳಿದುಬರುತ್ತದೆ. ತಾ ೨೪ರಲ್ಲಿ ಉಳ್ಳಾಲ ಪೊಲೀಸ್ ಸ್ಟೇಶನಿನ ಮೇಲೊಂದು ರಾಷ್ಟ್ರೀಯ ಪತಾಕೆಯು ನಿರ್ಭಯವಾಗಿ ಹಾರಾಡುತ್ತಿತ್ತು.

ತಾ ೨೦ರಲ್ಲಿ ಬಿ ರಾಮ ಸುಬ್ಬಯ ಶೆಟ್ಟಿ ರಾಮರಾವ್ ಯೋಗೀಶ ಇವರು ಹಂಪನಕಟ್ಟೆಯ ಗುತ್ತಿಯನ್ನು ಪಹರೆಮಾಡಿದರು. ಸಂಜೆಗೆ, ಸುಮಾರು ೩ ೩೦ ಗಂಟೆಗೆ ಡಿವಿಜನಲ್ ಪೋಲೀಸರು ಬಂದು ಮೊದಲಿನ ಪಂಗಡದ ಇಬ್ಬರನ್ನು ಕೈದು ಮಾಡಿದೆವೆಂದರು. ಇವರು ಕದಲಲಿಲ್ಲ. ಕೈಹಿಡಿದು ಎಳೆದರು. ಇವರು ಬಿದ್ದುಕೊಂಡರು. ಅಲ್ಲಿಂದಲೂ ಎಳೆದುಕೊಂಡು ಹೋಗಿ ದೂರ ನಿಲ್ಲಿಸಿದರೂ ಪುನಃ ಹಿಂತಿರುಗಿ ಬರುವುದನ್ನು ನೋಡಿ ತ್ರಾಸಿ ಆನಂದರಾಯರು (ಸ ಇ) ಬಂದು ದಸ್ತಗಿರಿಮಾಡಿ ಸ್ಟೇಶನಿಗೊಯ್ದರು. ಈ ದೃಶ್ಯವನ್ನು ನೋಡುವುದಕ್ಕಾಗಿ ಜನರು ಕಿಕ್ಕಿರಿದು ನೆರೆದಿದ್ದರು. ಜೇಡಿಗುಡ್ಡೆಯ ಗುತ್ತಿಯಲ್ಲಿ ಪಹರೆಮಾಡುತ್ತಿದ್ದ ಶೇಷಪ್ಪ ಶೆಟ್ಟಿ ಬಿ ಕೆ ಬಾಳಿಗ, ಮರ್ಕಪ್ಪ ನಾಯ್ಕ, ಸುಬ್ಬಯ ಶೆಟ್ಟಿ, ಇವರನ್ನೂ ಪೋಲೀಸರು ಮೇಲಿನವರಂತೆಯೇ ಬಲಪ್ರಯೋಗ ಮಾಡಿ ಎಳೆದೊಯ್ದರೂ, ಥಂಡಿ ಹಿಡಿದು ತಮ್ಮ ಕಾರ್ಯವನ್ನು ನಿರ್ವಹಿಸುವುದನ್ನು ಕಂಡು ಕಡೆಗೆ ದಾರಿ ಕಾಣದೆ ಜಟ್ಕಾ ಗಾಡಿಯಲ್ಲಿ ಕುಳ್ಳಿರಿಸಿ ಪೋಲೀಸು ಠಾಣ್ಯಕ್ಕೆ ಕೊಂಡೊಯ್ದರು. ಮರುದಿನ ಎಲ್ಲರನ್ನು ಬಿಡಲ್ಪಟ್ಟರು.

ತಾ ೨೬ರಲ್ಲಿ ಶ್ರೀ ವಿಶ್ವನಾಥ ಹೆಗ್ಡೆ ಮತ್ತು ಯಂ ಮೋಹನ ರಾಯರು ಡಿಸ್ಟ್ರಿಕ್ಟ್ ಮುನ್ಸೀಫರ ಕೋರ್ಟಿಗೆ ನಿರಾತಂಕವಾಗಿ ಪ್ರವೇಶಿಸಿ ಮುನ್ಸೀಫರ ಹಸ್ತ ಮತ್ತು ವಕೀಲರೆಲ್ಲರಿಗೆ ಕೂಡ ಸಂದೇಶ ಪತ್ರಗಳನ್ನು ಕೊಟ್ಟು ಧ್ವಜವೆತ್ತಿ ಜೈ ಹಾಕಿ ಹಿಂತೆರಳಿದರಂತೆ. ಮುನ್ಸೀಫರು ಮೊದಲು ಭಯಗ್ರಸ್ತರಾಗಿ ಮತ್ತೆ ಕಿಂಕರರಿಗೆ ಗದರಿಸಿದರಂತೆ. ಮಧ್ಯಾಹ್ನ ೨ ಗಂಟೆಗೆ ಸದರಿ ಶ್ರೀ ವಿಶ್ವನಾಥ ಹೆಗ್ಡೆ ಮತ್ತು ರಾಮರಾಯರು ಸಬ್ ಜಡ್ಜರ ಕೋರ್ಟಿಗೆ ಹೋಗಿ ಪತ್ರವನ್ನು ಕೊಡಲು ಮುಂದೊತ್ತುವಾಗ ದಫೇದಾರರು ತಡೆದರೆಂದು ತಿಳಿದುಬರುತ್ತದೆ. ಅಲ್ಲಿಯೂ ಧ್ವಜವೆತ್ತಿ ಜೈಕಾರ ಹಾಕಿದರು. ಸಂಜೆ ಮೂರು ಘಂಟೆ ೨ ಸಮಯಕ್ಕೆ ಬೆಂಚ್ ಕೋರ್ಟಿಗೆ ಶ್ರೀ ರಾಮ ಬಿ. ಮರ್ಕಪ್ಪನಾಯ್ಕ ಇವರು ಹೊಕ್ಕು ಧೈರ್ಯದಿಂದ ಎಲ್ಲರಿಗೂ ಕರಪತ್ರ ಹಂಚಿ, ಜೈಕಾರ ಹಾಕಿ ಪತಾಕೆ ಎತ್ತಿ ಹಿಂತೆರಳಿದರು. ಆಗ ಇವರ ಹಸ್ತ ಇದ್ದ ರಾಷ್ಟ್ರ ಧ್ವಜವನ್ನು ದಫೇದಾರರು ಕಸಗೊಂಡರಂತೆ.

ತಾ ೨೭ರಲ್ಲಿ ಇಲ್ಲಿಯ ಜೈಲಿನಲ್ಲಿದ್ದ ಬಸಪ್ಪ ಮತ್ತು ವೈಕುಂಠ ಇವರು ಅವಧಿ ಮುಗಿದು ಬಿಡುಗಡೆಹೊಂದಿರುತ್ತಾರೆ.

ಶ್ರೀಯುತ ಎ ಆನಂದರಾಯರ ಮೇಲೆ ಪೋಲೀಸರುಮಾಡಿದ ನಂಬ್ರದ ವಿಚಾರಣೆಯು ೨೫ನೇ ತಾರೀಕಿಗೆ ಜರಗಬೇಕಿದ್ದುದು ಅದನ್ನು ಯಾವುದೋ ಕಾರಣದಿಂದ ಸಬ್ ಮೆಜಿಸ್ಟ್ರೇಟರು ತೆಗೆದುಹಾಕಿ ಬಿಡಲ್ಪಟ್ಟಿರೆಂದು ತಿಳಿದುಬರುತ್ತದೆ. ಇವರ ಮೇಲೆ ಆ ಭಾಗದಲ್ಲಿ ಯಾವ ಅಪಾದನೆಯೂ ಉಳಿದಿರುವುದಿಲ್ಲ.

ತಾ ೨೮ರಲ್ಲಿ ಬೋಳಾರ, ಹಂಪನಕಟ್ಟೆ, ಜೇಡಿಗುಡ್ಡೆ ಬಿಕ್ಕನಾಯ್ಕನ ಕಟ್ಟೆ ಈ ಗುತ್ತಿಗಳನ್ನು ಕಾಂಗ್ರೆಸ್ ಸ್ವಯಂ ಸೇವಕರು ಪಹರೆಮಾಡಿದರು. ನಾರಾಯಣ ಸಪಲ್ಯ, ಪದ್ಮಪ್ಪ ಮೆಂಡನ್ ಶಿವಪ್ಪ ನಾಯ್ಕ ಮರ್ಕಪ್ಪ ಸೊಯ್ಯ ಸುಬ್ಬಯ್ಯ ಶೆಟ್ಟಿ, ಸುಬ್ರಾಯ, ಶಾಂತಪ್ಪ ಬಂಗೇರ, ಮೋನಪ್ಪ ಮೊಯಿಲಿ ಮೊದಲಾಗಿ ೧೧ ಮಂದಿ ದಸ್ತಗಿರಿ ಮಾಡಲ್ಪಟ್ಟರು. ಬಿಕ್ಕನಾಯ್ಕನ ಕಟ್ಟೆಯಲ್ಲಿ ಪಹರೆಮಾಡಿದ ಕೃಷ್ಣ ನಾಯರ್, ಪದ್ಮಪ್ಪ ಸುವರ್ಣ, ಪದ್ಮನಾಭಯ್ಯ, ಬಾಲು ಕೊಟ್ಯಾರಿ ಬಿ ರಾಮ ಮಹಾಬಲ ಭಂಡಾರಿ ಮೊದಲಾದವರು ದಸ್ತಗಿರಿಮಾಡಲ್ಪಡಲಿಲ್ಲ.

ಇಲ್ಲಿಯ ಕದ್ರೀ ಸಂಕದ ಬಳಿ ಹೊಳೆಯಲ್ಲಿ ನಿನ್ನೆ ಒಂದು ಗಂಡಸಿನ ಶವವು ದೊರೆತಿರುತ್ತದೆ. ಅದನ್ನು ಆಸ್ಪತ್ರೆಗೆ ತರಲಾಗಿದೆ ಶವವು ನಾರುತ್ತಿದ್ದಿತು.

ಬಂಟ್ವಾಳ— ಮಂಗಳೂರು ತಾಲೂಕು ಬೋರ್ಡಿನ ಈ ಸಾರಿಯ ಚುನಾವಣೆಗೆ ಬಂಟ್ವಾಳ ಸರ್ಕಲಿಗೆ ರಾ. ಶೇಣವಿ ಸುಬ್ರಾಯ ಬಾಳಿಗರೂ ಮಾಜಿ ಮೆಂಬರರಾದ ರಾ. ವೆಂಕಟೇಶ ಸರ್ವೋತ್ತಮ ಬಾಳಿಗರು ಉಮೇದುವಾರರಾಗಿರುವರು. ಕಾವಳಕಟ್ಟೆ ಸರ್ಕಲಿಗೆ ರಾ. ಡೊಕ್ಟರ ಬಿ ಎಚ್ ವಾಸುದೇವ ಪೈಗಳೂ ರಾಯಿ ಸರ್ಕಲಿಗೆ ರಾ. ಅರ್ಲ ಧರ್ಮಪಾಲ ಶೆಟ್ರು ಉಮೇದುವಾರರಾಗಿರುವರು. ವೋಟುಗಳನ್ನು ಸಂಗ್ರಹಿಸುವ ಕೆಲಸವು ಭರದಿಂದ ನಡೆಯುತ್ತಲಿದೆ.

ಉಡುಪಿ:— ತಾ ೧೮ರಲ್ಲಿ ಇಬ್ಬರು ಸಬ್ ಇನ್ಸ್‌ಪೆಕ್ಟರರು ಮೂವರು ಪೋಲೀಸ್ ಕೊನ್ಸ್‌ಟೇಬಲರೊಂದಿಗೆ ಕಟಪಾಡಿಗೆ ಹೋಗಿ ಶ್ರೀಮತಿ ಬಾಂಗಾಳ ಮನೋರಮಾ ಬಾಯಿಯವರ ನಾಲ್ಕು ಬೆಲೆ ಸೀರೆಗಳನ್ನು ಜಪ್ತಿಮಾಡಿಕೊಂಡು ಹೋಗಿರುತ್ತಾರೆ. ಸದ್ರಿ ಮಹಿಳೆಯು ಸತ್ಯಾಗ್ರಹ ನಿಮಿತ್ತ ಕಾರಾಗೃಹದಲ್ಲಿದ್ದಾರೆ, ಶಿಕ್ಷೆ ವಿಧಿಸಲ್ಪಟ್ಟಾಗಲೇ ರೂ ೧೦೦ರ ಜುಲ್ಮಾನೆಯೂ ವಿಧಿಸಲಾಗಿದ್ದುದರ ಬದಲಿಗೆ ಈ ಜಪ್ತಿ ನಡೆದಿರುವುದೆಂದು ತಿಳಿದುಬರುತ್ತದೆ.

ಶ್ರೀ [illegible] ರಾವ [illegible] ಬೇರ್ಪಡಿಸಿ, ಮ. ಪೈ ಹಾಕಿಸಿಟ್ಟಿದ್ದ ಪರದೇಶಿ ವಸ್ತ್ರವನ್ನು ವಿಕ್ರಯಿಸುತ್ತಿರುವ ಬಗ್ಗೆ, ಅವರ ಅಂಗಡಿಯೆದುರು ಪಹರೆಯು ನಡೆಯುತ್ತಲಿದೆ. ಪೋಲೀಸರು ಸದರಿಯವರನ್ನು ಕೈದುಮಾಡಿ ರಾತ್ರೆ ಜೈಲಿನಲ್ಲಿಟ್ಟು ಮರುದಿನ ಬಿಡುಗಡೆ ಮಾಡುವರು. ಶ್ರೀ ಕೆ ವೆಂಕಟ್ರಾಯ ಪೈಗಳ ಅಂಗಡಿಯೆದುರು ಪರದೇಶಿ ಸಕ್ಕರೆಗಾಗಿ ಪಹರೆಯೂ, ಕೈದೂ, ಮರುದಿನ ಬಿಡುಗಡೆಯೂ ಆಗುತ್ತಲಿದೆ.

ಇದೇ ತಾ ೪ರಲ್ಲಿ ೧೪೪ನೇ ಸೆಕ್ಷನನ್ನು ಉಲ್ಲಂಘಿಸಿ ಮೆರವಣಿಗೆ ಮಾಡಿದ ಮತ್ತು ಕೈದು ಮಾಡಲ್ಪಟ್ಟು ಬಿಡುಗಡೆ ಹೊಂದಿದವರ ಪೈಕಿ ಶ್ರೀ ಐರೋಡಿ ರಾಮದಾಸ ಪೈ, ವಾಮನಭಟ್ಟರು ಮತ್ತು ದೇವರಾಯ ಕಮ್ತಿಯವರು ತಾ ೨೦ಕ್ಕೆ ಇಲ್ಲಿನ ಮೆಜಿಸ್ಟ್ರೇಟ ಕೋರ್ಟಿಗೆ ಹಾಜರಾಗಬೇಕಾಗಿ ನೋಟೀಸು ಜ್ಯಾರಿಯಾದುದಕ್ಕೆ ಸದ್ರಿಯವರು [illegible] ಕಾಲಕ್ಕೆ ಹಾಜರಾಗಿದ್ದರು. ತನಿಖೆಯು ಇದೇ ತಾ ೨೫ಕ್ಕೆ ಮುಂದರಿಸಲ್ಪಟ್ಟದ್ದು, ಪುನಹ ತಾ ೨೮ಕ್ಕೆ ಮುಂದರಿಸಲಾಗಿದೆ.

ತಾ ೨೩ನೆಗೆ ಮೆರವಣಿಗೆ ನಡೆಸಿದ ಐವರನ್ನು ಮತ್ತು ಪಹರೆ ಮಾಡಿದ ಮೂವರನ್ನೂ ಕೈದುಮಾಡಿ ಮರುದಿನ ಬಿಡುಗಡೆ ಮಾಡಿರುವರು. ತಾ ೨೪ನೆಗೂ ಪ್ರಾತಃಕಾಲ ಪ್ರಭಾತಫೇರಿಯು ಉತ್ಸಾಹದಿಂದ ಜರುಗಿ, ವಿಸರ್ಜನೆಯಾದ ವೇಳೆ ಒಬ್ಬನನ್ನು ಕೈದುಮಾಡಿ ಸ್ಟೇಶನಿಗೊಯ್ದು ಬಿಡುಗಡೆ ಮಾಡಿದರು.

ಆಗೋಸ್ತು ೧ಕ್ಕೆ ಶೇಂದಿಯಂಗಡಿಗಳ (ಉಡುಪಿ ತಾಲೂಕಿನ) ಹರಾಜು ನಡೆಯಲಿಕ್ಕಿದೆ.

ಕಾಪು— 'ಅಬ್ಕಾರಿ ಇಲಾಖೆಯವರ ವಸತಿ ಈಗ ಕಾಪಿನಲ್ಲಿ ಪರಂತು ಗುತ್ತಿಗೆಯೊಳಗೆ ಮೂರುವರೆ ಗಂಟೆಗೇನೇ ಹೆಂಗಸರ ತಂಡ ತಂಡದ ಪ್ರವೇಶಕ್ಕಾರಂಭವಾಗುತ್ತದೆ. ದೀಪ ಹಚ್ಚುವ ಸಮಯ ಕೊಡ ಕೊಡ ತುಂಬಿ ಶೇಂದಿಯು ಗುತ್ತಿಗೆಯಿಂದ ಅಬ್ಕಾರಿಯವರ ಕಣ್ಣ ಮುಂದೆ ಎಂಬಂತೆ ಕೊಂಡುಹೋಗುತ್ತಾರೆ. ಇತ್ತಲಾಗೆ ಒಬ್ಬ ಅಬ್ಕಾರಿ ಜವಾನನೊಬ್ಬೆಂದು ನಂಬ್ರವನ್ನು ಹಿಡಿದು, ಕೂಡಲೇ ಕಾರಣಾಂತರಗಳಿಂದ ಬಿಟ್ಟಿರುವನೆಂದು ಗುಜುಗುಜು ವರ್ತಮಾನವಿದೆ. ಇನ್ನಾದರೂ ಹಾಗಾಗದಿರಲಿ.

ಕಾಪು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಎಸ್ ಎಲ್ ಸಿ ಪರೀಕ್ಷೆ ಮುಗಿಯಿತು. ಇನ್ನು ಮಾಮೂಲು ಪ್ರಕಾರ ಪರೀಕ್ಷೆಗೆ ನಿಂತ ಎಲ್ಲಾ ವಿದ್ಯಾರ್ಥಿಗಳಿಗೂ ಸರ್ಟಿಫಿಕೇಟು ಸಿಗುವುದೊಂದು ಬಾಕಿ. ನಡೆಯತಕ್ಕ ಪೂಜೆ ಪುರಸ್ಕಾರಗಳು ನಡೆದಿದ್ದಾವೆ.

ಕಟಪಾಡಿ: ಇದೇ ಬರುವ ಉಡುಪಿ ತಾಲೂಕು ಬೋರ್ಡ್ ಚುನಾವಣೆಗೆ ಕಟಪಾಡಿ ಸರ್ಕಲಿನಿಂದ ಇಲ್ಲಿಯ ಶ್ರೀ ವೆಂಕಟ್ರಮಣ ಸ್ವಾಮಿಯ ಹಾಯರ್ ಎಲಿಮೆಂಟರಿ ಶಾಲೆಯ ಕರಸ್ಪೊಂಡೆಂಟರಾಗಿರುವ ಶ್ರೀಯುತ ಬಾಂಗಾಳ ರಾಮದಾಸ ನಾಯಕ್, ಬಿ ಎ ಎಲ್ ಟಿ ಯವರು ಉಮೇದ್ವಾರರಾಗಿ ನಿಲ್ಲಲಿಕ್ಕಿರುವರೆಂದು ತಿಳಿದು ಬರುತ್ತದೆ.

ಕಾರ್ಕಳ:— ಇಲ್ಲಿಯ ತಾಲೂಕು ಬೋರ್ಡು ಉಪಾಧ್ಯಾಯರ ತಲಬನ್ನು ರೂಪಾಯಿಗೆ ಎರಡಾಣೆಯಂತೆ ಕಡಿಮೆ ಮಾಡಿರುವರು. ಅದೂ ತಾತ್ಕಾಲಿಕವಾಗಿಯಂತೆ! ಇನ್ನೂ ಹೆಚ್ಚಿಗೆ ಕಡಿಮೆ ಮಾಡುವ ಆಲೋಚನೆಯೂ ನಡೆದಿದೆಯಂತೆ! ಪಾಪದ ಉಪಾಧ್ಯಾಯರು ಮೊದಲೇ ಬಡತನದಿಂದ ನರಳುತ್ತಿದ್ದವರು. ಇನ್ನು ಹೆಂಡತಿ ಮಕ್ಕಳನ್ನಾಗಲೀ ತಮ್ಮನ್ನಾಗಲೀ ಉಪವಾಸ ಹಾಕಿಕೊಂಡರಾಯಿತು. ಮಕ್ಕಳಿಗೆ ಬರಹ ಬಂತೆಂದು ಇನ್ನು ಹೆತ್ತವರು ಹಿಗ್ಗಬೇಕಾಗಿಲ್ಲ. ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯಾಗುವದೆಂದು ಈಗಲೇ ಭವಿಷ್ಯವಾಣಿಯಾಗಿದೆ! ಎಚ್ಚರವಿರಲಿ.

ಇಲ್ಲಿಯ ಬೋರ್ಡು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ೨೩ನೇ ದಿನ ಸಾಯಂಕಾಲ ಶ್ರೀನಿವಾಸ ಹಾ [illegible] ಯವರು ಮನುಷ್ಯನಿಗೆ ವಿದ್ಯಾಭ್ಯಾಸ ಸಂದೇಶ ಎಂಬುದರ ಕುರಿತು ಇಂಗ್ಲಿಷಿನಲ್ಲಿ ಭಾಷಣವಿತ್ತರು. ಇಂಗ್ಲೀಷ ಬಲ್ಲ ತುಂಬಾ ಮಂದಿ ಸಭೆಗೆ ಚಿತ್ತೈಸಿದ್ದರು.

ಕಾಸರಗೋಡು— ಈ ತಾಲೂಕಿನ [illegible] ಕೋಟೆಕಾರು [illegible] ಮತ್ತು [illegible] ಗ್ರಾಮದ [illegible] ಈ ತಾ ೨೧ನೇ ಬೆಳಗ್ಗೆ ಬೇರೆ ಕೆಲವು ಜನರೊಡನೆ ಹೊಸದುರ್ಗಕ್ಕೆ ಹೋಗುವರೇ [illegible] ತನ್ನ ಮನೆಯಿಂದ [illegible] ಸ್ಟೇಶನಿಗೆ [illegible] ಮನೆಯ [illegible] ಹಾದಿಯಲ್ಲಿ [illegible] ಒಂದಾಕನ್ನು [illegible] ಈ ಕುರಿತು ಪೋಲೀಸು ತನಿಖೆ ನಡೆಯುತ್ತಿದೆ.

ಶ್ರೀಯುತ [illegible] ನಾರಾಯಣ ನಾಯರ್ [illegible] ಸ್ಟೇಶನರಿ ಸಬ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಈ [illegible] ಅರ್ಜಿಯು [illegible] ಇದೇ ತಾ ೨೮ರಲ್ಲಿ [illegible] ಸ್ವಯಂಸೇವಕ [illegible] ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲ್ಲ ಮಾಡಿದ [illegible] ಮೇಲೆ ಮಾಡಿದ ರಿವಿಜನ್ ಅರ್ಜಿಯು [illegible] ಇರುತ್ತದೆ.

ತಾ ೨೪ರ ಬೆಳಗ್ಗೆ ಸ್ವಯಂಸೇವಕರಿದ್ದರು [illegible] ಕಾಡಿಗೆ ಹೋಗಿ ಕೆಲವು ಗಿಡಗಳನ್ನು ಕಡಿಯುತ್ತಿದ್ದಾಗ ಫಾರೆಸ್ಟ್ ಗಾರ್ಡರು ಬಂದು ಸ್ವಯಂಸೇವಕರನ್ನು ಕೈದುಮಾಡಿ ಮಧ್ಯಾಹ್ನಕ್ಕೆ ಬಿಟ್ಟುಬಿಟ್ಟರಾಗಿಯೂ, ಸ್ವಯಂಸೇವಕರು ಸಾಯಂಕಾಲ ೫ ಘಂಟೆಗೆ ಪುನ ಕಾಡಿಗೆ ಹೋಗಿ ಗಿಡಗಳನ್ನು ಕಡಿಯುತ್ತಿದ್ದ ವೇಳೆ ಇವರನ್ನು ಕೈದುಮಾಡಿ ಕಾಸರಗೋಡಿಗೆ ಕೊಂಡು ಹೋಗುವಾಗ [illegible] ಯಿಂದಲೇ ಸುಮಾರು ೬ ಮೈಲಿಗಳ ವರೆಗೆ ನಡೆಸಿ [illegible] ಎಂಬಲ್ಲಿ [illegible] ಕತ್ತಲೆಯಾದುದರಿಂದ ಸ್ವಯಂಸೇವಕರನ್ನು ಅಲ್ಲಿಯೇ ಬಿಟ್ಟುಹೋದರಾಗಿ ತಿಳಿದುಬರುತ್ತದೆ.

ಕಳೆದ ೩೦ನೆ ೨೪ಕ್ಕೆ ಪ್ರಾರಂಭವಾದ ಕಾಡಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಶಿಕ್ಷೆಗೊಳಗಾಗಿ ಮಂಗಳೂರು ಸಬ್ ಜೈಲಿನಲ್ಲಿ ಕಾರಾಗೃಹವಾಸವನ್ನು ಅನುಭವಿಸುವ ತಾಲೂಕು ೧ನೇ ಸರ್ವಾಧಿಕಾರಿ ಶ್ರೀ ಕೃಷ್ಣ ಮನೋಳಿತ್ತಾಯರ ಜುಲ್ಮಾನೆ ರೂ [illegible] ಬಗ್ಗೆ ಇವರ ಸಹೋದರ ಶ್ರೀ ಸುಬ್ರಾಯ ಮನೋಳಿತ್ತಾಯರ ಮನೆಯ [illegible] ಸೊತ್ತು ಮತ್ತು ಸ್ವಯಂಸೇವಕ ಶ್ರೀ ಕೆ ರಾಮ [illegible] ಜುಲ್ಮಾನೆ [illegible] ಬಗ್ಗೆ ಇವರ ತಂದೆ ಮಂಜುನಾಥ ಹೆಗ್ಡೆಯವರ ಮನೆಯ [illegible] ಗಳನ್ನು ಪೋಲೀಸರು ಜಪ್ತಿಮಾಡಿದ್ದರು. ಈ ಕುರಿತು ಸದ್ರಿ ಸುಬ್ರಾಯ ಮನೋಳಿತ್ತಾಯ ಮತ್ತು ಮಂಜುನಾಥ ಹೆಗ್ಡೆ ಇವರಿಬ್ಬರು ಇಲ್ಲಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲ್ಲ ಮಾಡಿದ ಆಕ್ಷೇಪಣೆ ಅರ್ಜಿಗಳು ತಾ ೧೯ಕ್ಕೆ ತನಿಖೆಗೆ ಬಂದಾಗ ಜಪ್ತಿಯ ಸೊತ್ತುಗಳು ಸಂಬಂಧಪಟ್ಟವರಿಗೆ ಬಿಟ್ಟುಕೊಡುವದಾಗಿ ತೀರ್ಪು ಆಗಿರುತ್ತದೆ. ಮನೋಳಿತ್ತಾಯ ಕಡೆಯಿಂದ ವಕೀಲ ಶ್ರೀ ಕೆ ದೇವದಾಸ ಶೆಣೈಯವರೂ ಹೆಗಡೆಯವರ ಕಡೆಯಿಂದ ವಕೀಲ ಶ್ರೀ ಕೆ ಸುಂದರರಾಮ ಶೆಟ್ಟಿ ಇವರೂ ವ್ಯವಹರಿಸಿದ್ದರು.

* * *

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂವತ್ಸರದ ಆಷಾಢ ಬ|| ೧೩ ಶನಿವಾರದಿಂದ ಅಂಗೀರಸ ಸಂವತ್ಸರದ ಶ್ರಾವಣ ಶು|| ೩ ಶುಕ್ರವಾರದ ವರೆಗಿನ ಪಂಚಾಂಗ

(೫೦೩೩ನೆಯ ಕರ್ನಾಟಕ—ಅಬ್ದ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ	ಸೂರ್ಯ ಅಸ್ತ
30	ಶನಿ	೧೩	೨೪.೪೬	ಮೃಗಶಿರಾ	೧೮ ೩೦	೦೫	6.17	6 58
31	ರವಿ	೧೪	೨೬ ೩೦	ಆರ್ದ್ರಾ	೨೨ ೧	೦೬	6 7	6.58
1	ಸೋಮ	೧೦	೨೬ ೪೬	ಪುನರ್ವಸು	೨೪ ೦೬	೦೭	6.18	6 56
2	ಕುಜ	●	೨೫ ೪೫	ಪುಷ್ಯಾ	೨೫ ೧೪	೧೮	6.18	6.56
3	ಬುಧ	೧	೨೩ ೪೪	ಅಶ್ಲೇಷಾ	೨೫ ೦	೧೯	6.18	6 55
4	ಗುರು	೨	೨೦ ೩೨	ಮಘಾ	೨೩.೩೨	೨೦	6.18	6 54
5	ಶುಕ್ರ	೩	೧೬.೩೧	ಪುಬ್ಬಾ	೨೧ ೦೪	೨೧	6 18	6.54

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಅಧಿಕತಮ		Minimum ಅಲ್ಪತಮ		Rainfall ಮಳೆ ದಿನದ ಮಳೆ	ಜುಮಲಾ ಮಳೆ.
22	83—	6	73—	3	0- 82	—
23	84 -	7	74 -	9	0—29	—
24	85—	1	77 -	1	0 14	—
25	85—	0	75	0	0—53	—
26	84—	8	76	1	0—82	—
27	81	8	77	3	0 65	—
28	84 —	8	76 -	9	0—02	69—07

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ	ವರೆಗೆ ರೂ. ಆ
ರಾಶಿ ಅಕ್ಕಿ	3— 8	4 —
ಮುಸ್ಕಿ ..	4— 8	4—14
ಗುಚ್ಚು	4— 0	4— 6
ಸುಗ್ರಿ	3—1	4—
ಊರ ಅವ್ವಲ್ ಬೆಳ್ತಿಗೆ	4—12	5— 9
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8— 0	8— 4
ಎಂಜಾರುಬೆಳ್ತಿಗೆ ಮುಡಿ ೧ಕ್ಕೆ	4—10	4—12
ಗೋಧಿ ಗೋಣಿ ೧ಕ್ಕೆ ..	9— 8	12— 8
ತೊಗರಿ ಗೋಣಿ ೧ಕ್ಕೆ ..	12— 0	14— 8
ಹುರುಳಿಗೋಣಿ ೧ಕ್ಕೆ ...	6— 2	7— 4
ಕಡಲೆ ಗೋಣಿ ೧ಕ್ಕೆ	8— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	13— 8	21— 0
ಉದ್ದು ಗೋಣಿ ೧ಕ್ಕೆ	11— 8	13— 0
ಹೆಸರು ಗೋಣಿ ೧ಕ್ಕೆ	10— 4	11—
ಊರು ಬೆಲ್ಲ ಖಂಡಿ ೧ಕ್ಕೆ	[illegible]— 0	35— 0
ಉಪ್ಪು ಗೋಣಿ ೧ಕ್ಕೆ	5—10	5—14
ಕೊಪ್ರ ಖಂಡಿ ೧ಕ್ಕೆ	65	72—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ..	—	33— 0
ಎಳ್ಳಿಂಡಿ ಖಂಡಿ ೧ಕ್ಕೆ	2[illegible]— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ	6— 8	6— 8
ಎಳ್ಳೆಣ್ಣೆ ಮಣ ೧ಕ್ಕೆ	6—12	7— 0
ಹರಳೆಣ್ಣೆ ದೀಪಕ್ಕೆ ೧ಕ್ಕೆ ..	4— 7	8—12
ತುಂಬಿದ ಸಕ್ಕರೆ ಮಣ ೧ಕ್ಕೆ	4— 4	4— 5
ಜೀನಿ ಮಣು ..	4— 0	5— 0
ಸಾಸಿವೆ ಮುಡಿ ೧ಕ್ಕೆ	5— 4	6— 8
ಚೇಟಿದ್ ಅಡಕೆ ಖಂಡಿ ೧ಕ್ಕೆ	27[illegible]—0	300—
ಕಾಳುಮೆಣಸು ಖಂಡಿ ೧ಕ್ಕೆ	170— 0	180—
ಮೆಣಸು ಮಣ ೧ಕ್ಕೆ	27— 0	28—
ಗೇರುಬೀಜ ಮುಡಿ ೧ಕ್ಕೆ	4—12	5— 0
ಚಕ್ಕೆ ಖಂಡಿ ೧ಕ್ಕೆ	30— 0	35— 8
ತಾಮ್ರ ತಗಡು ಮಣ ೧ಕ್ಕೆ ..	12— 8	13— 0
ತಾಮ್ರ ಪಾತ್ರೆಗಳು ಮಣ ೧ಕ್ಕೆ	15— 6	16—0
ಹಿತ್ತಾಳೆ ಸೀರು ೧ಕ್ಕೆ ..	14— 4	14—12
ಹಿತ್ತಾಳೆ ತಗಡು ಮಣ ೧ಕ್ಕೆ	14— 0	12— 8
ತವರು ೧ಕ್ಕೆ	17—14	18—10
ಹುಣಿಸೆ ಹುಳಿ ಖಂಡಿ ೧ಕ್ಕೆ ...	40—	—
ಪಿಬೇರಿ ಕಾಫಿ ಖಂಡಿ ೧ಕ್ಕೆ ...	380—	—
ಹಳೆ ಅಡಕೆ ...	180—	205—
ಹೊಸಅಡಕೆ ...	140—	145—

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲಿ 1ʼʼ 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಬದಿ ಧರ್ಮಸ್ಥಳ ರೋಡಿಗೆ ದಿವ 1 30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಪಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, 4½ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಢರಪೂರ ಗೋವಾ ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎಸ್ ಹನುಮಂತಪ್ಪ, ಫ್ಲೋರಡೂನ್ ಸೂರಾಟ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO, LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ್ದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧|| ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪುತ್ತದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

“ಸ್ವಾತಂತ್ರ್ಯಸಾಧನೆಯಾಗಬೇಕೆ? ಹಿಂಸೆಗಿಳಿಯಬೇಕು! ಹಿಂಸೆಯಿಂದಲೇ ಸ್ವಾತಂತ್ರ್ಯ! ಯುದ್ಧದಿಂದಲೇ ಜಯ, ಪುಕ್ಕುತನದಿಂದ ಅಪಜಯ!”ವೆಂದು ಅನ್ಯ ರಾಷ್ಟ್ರಗಳ ಹೇಳಿಕೆ. ಆದರೆ ಹಿಂದೂದೇಶವು ಹಾಗೆನ್ನುವುದಿಲ್ಲ. ಅದು ಮಹಾತ್ಮಾಗಾಂಧಿಯವರ ಮುಂದಾಳುತನದಿಂದ “ಅಹಿಂಸೆಯೇ ಸರ್ವಸಾಧಕವು. ಎಲ್ಲಿ ಹಿಂಸೆಯಾಯಿತೋ ಅಲ್ಲಿ ಸುಖವಿಲ್ಲ—ಸ್ವಾತಂತ್ರ್ಯವಿಲ್ಲ—ನೀತಿಯಿಲ್ಲ, ಆತ್ಮಶಕ್ತಿಯೇ ಮಹಚ್ಛಕ್ತಿ—ಹಿಂದೀಯರು ಆತ್ಮಾವಲಂಬಿಗಳು—ಅವರು ಹಿಂಸೆಗಿಳಿಯಬಾರದು. ಅವರು ಒಂದು ಹಿಂಸಾಕಾರ್ಯವನ್ನು ಮಾಡಿದರೆ, ಸ್ವಾತಂತ್ರ್ಯವು ಹತ್ತು ವರ್ಷಗಳಿಗೆ ಹಿಂದೆ ಹೋಯಿತು” ಎನ್ನುತ್ತದೆ—ಅನ್ಯ ದೇಶಗಳಿಗೂ ಹಿಂದೀಯರಿಗೂ ಇರುವ ಭೇದವೆಂದರೆ ಇಷ್ಟೇ—ಅವರು ದೇಹಬಲ, ಶಕ್ತಿಬಲವನ್ನು ನಂಬುವವರು, ಹಿಂದೀಯರು ಆತ್ಮಬಲ, ತೇಜೋಬಲದಲ್ಲಿ ವಿಶ್ವಾಸವಿದ್ದವರು.

ಜರ್ಮನಿಯಲ್ಲಿ ಪ್ರಚಂಡ ವಿಪ್ಲವ!

ರಾಷ್ಟ್ರೀಯ ಪಕ್ಷದ ವಿಜಯ! ನಿರಂಕುಶಪ್ರಭುತ್ವವನ್ನು ನಿರ್ಬಂಧಿಸಿದರು! ಸರಕಾರೀ ಅಧಿಕಾರಿಗಳ ಬಂಧನ! ಪ್ರಶ್ಯಾ ರಾಜ್ಯಾಡಳಿತೆಯು ನೆಲಸಮವಾಯಿತು! ರಾಷ್ಟ್ರೀಯವಾದಕ್ಕೆ ಜಯ! ಮತವಾದಕ್ಕೆ ಅಪಜಯ!

ಸಿವಿಲ್ ಯುದ್ಧಗಳ ಭಯ!

ನಾಜಿಗಳ ಗಲಭೆ!

೧೯೧೪ರಲ್ಲಿ ನಡೆದ ವಿಪ್ಲವಕಾರಕ ಮಹಾಯುದ್ಧವು ಮುಗಿದ ನಂತರ ಜರ್ಮನಿಯು ನೆಲಸಮವಾಗಿದ್ದಿತು. ತನ್ನ ಮದಾಂಧತೆಯಿಂದ ಅದು ಪುಂಡನಂತೆ ವರ್ತಿಸಿದುದರಿಂದ ಇಂದಿನ ದಿನದಲ್ಲಿ ಅದಕ್ಕೆ ಅಧೋಗತಿಯು ಸನ್ನಿಹಿತವಾಯಿತು.

ಜರ್ಮನಿಯು ಸಾಲದ ಹೊರೆಯಿಂದ ಬಗ್ಗಿಹೋಗಿತ್ತು. ಯುದ್ಧದ ದೆಸೆಯಿಂದ ಅದು ಸಾಲಕ್ಕೊಳಗಾಗಿ ಫ್ರಾನ್ಸ್ ಮೊದಲಾದ ದೇಶಗಳಿಗೆ ತಲೆತಗ್ಗಿಸಿ ನಡೆಯಬೇಕಾಯಿತು. ಸಾಲಗಾರ (Debtor Country) ಜರ್ಮನಿಯು ಮೂಲಗಾರ (Creditor Country), ದೇಶಗಳಿಗೆ ತಲೆತಗ್ಗಿಸಿ ನಡೆಯುತ್ತಿರುವುದನ್ನು ನೋಡಿ, ಅಲ್ಲಿಯ ಧೀರ ರಾಷ್ಟ್ರೀಯವಾದಿಗಳು ಎದ್ದು ನಿಂತರು. ತಮ್ಮ ಪಿತೃ ಸಮಾನವಾದ ಭೂಮಿಯು ಅನ್ಯರಿಗೆ ತಲೆತಗ್ಗಿಸಬೇಕೆ? ಆ ಸಾಲವನ್ನು ಕೊಡದಿದ್ದರೇನು? ಎಂಬ ಪ್ರಶ್ನೆಯು ಅವರನ್ನು ಬಾಧಿಸಿತು. ಕ್ರಮೇಣ ಜರ್ಮನಿಯಲ್ಲಿ (Nazis) ನಾಜಿಗಳು ಎಂಬ ರಾಷ್ಟ್ರೀಯ ಪಕ್ಷೀಯರು ಹೆಚ್ಚುತ್ತಾ ಬಂದರು. ತಮ್ಮ ಸರಕಾರವು ಅನ್ಯದೇಶಗಳಿಗೆ ಬಗ್ಗುತ್ತಿರುವುದನ್ನು ಕಂಡು ಖಂಡಿಸಿದರು. ಅಧಿಕಾರದಲ್ಲಿದ್ದ ಪ್ರಶ್ಯನ್ ರಾಜ್ಯಾಡಳಿತವನ್ನು ನಿರ್ಮೂಲಿಸಲು ಬಗೆದರು. ‘ಸೋಶಿಯಲಿಸ್ಟ್ ರಾಜ್ಯಾಧಿಕಾರವು ಜರ್ಮನಿಯನ್ನಾಳಸುವಂತಿಲ್ಲ, ಅದನ್ನು ಕೊನೆಗಾಣಿಸಬೇಕು’ ಎಂದು ಹಟಹಿಡಿದರು. ಪ್ರಚಂಡ ಚಳವಳವನ್ನು ಹೂಡಿದರು. ರಾಷ್ಟ್ರೀಯ ಪಕ್ಷದ (Herr Hitler) ಹೆರ್ ಹಿಟ್ಲರ್ (Herr Hugenberg) ಹರ್ ಹ್ಯುಗೇನ್‌ಬರ್ಗ ಎಂಬ ಪ್ರಬುದ್ಧ ಶಕ್ತಿಯ ಮುಂದಾಳುಗಳು ಇದೇ ಚಳವಳವನ್ನೆಬ್ಬಿಸಿ ಬಿಟ್ಟರು. ಮೊದಲಾಗಿ, ತಮ್ಮ ದೇಶವು ಅಂದಿನ ಸಾಲವನ್ನು ಇಂದು ತೀರಿಸುವುದು ಬೇಡ, ತನ್ನಲ್ಲಿ ಹಣವಿದ್ದರೆ ಮಾತ್ರ ಸಾಲ ತೀರಿಸಬೇಕು. ಇಲ್ಲದಿದ್ದರೆ ತಟಸ್ಥವಾಗಿ ಕುಳಿತುಬಿಡಬೇಕೆಂದರು.

ಈ ಬೋಧನೆಯು ಬಹುಪಕ್ಷೀಯರಿಗೆ ಸರಿಯೆಂದು ತೋರಿತು. ಅಲ್ಪಪಕ್ಷೀಯರಿಗೆ ಅಸಮಂಜಸವೆಂದು ತೋರಿತು. ಈ ಅಲ್ಪಪಕ್ಷೀಯರಲ್ಲಿ ಹೆಚ್ಚಿನವರು ಮತವಾದಿಗಳೂ ಸರಕಾರೀ ಉದ್ಯೋಗಸ್ಥರೂ ಆಗಿದ್ದುದರಿಂದ, ಅವರಲ್ಲಿ ಸ್ವಾರ್ಥದೃಷ್ಟಿಯು ತುಂಬಿಕೊಂಡಿದ್ದುದರಿಂದ, ರಾಷ್ಟ್ರೀಯವಾದಿಗಳು ಅವರನ್ನು ಕಂಡಕಂಡಲ್ಲಿ ಓಡೋಡಿಸಿದರು. (Communists) ಮತಪಕ್ಷದವರಲ್ಲಿ ಅನೇಕರೂ, ರಾಷ್ಟ್ರೀಯ ಪಕ್ಷದವರಲ್ಲಿ ಬಹುಮಂದಿಗಳೂ ಗುಂಡಿನೇಟಿನಿಂದ ಬಿದ್ದು ಮಡಿದರು. ಬಹುಮಂದಿ ರಾಷ್ಟ್ರೀಯವಾದಿಗಳು ಸೆರೆಯನ್ನು ಹೊಕ್ಕರು. ಸರಕಾರವು ಅಲ್ಪಪಕ್ಷೀಯರ ಪರವಾಗಿ ನಿಂತು ಬಹುಪಕ್ಷೀಯರಾದ ರಾಷ್ಟ್ರೀಯ ವಾದಿಗಳನ್ನು ಧಿಕ್ಕರಿಸಿತು. ಅಂತೂ, ಕೆಲವು ತಿಂಗಳುಗಳಲ್ಲೇ ಜರ್ಮನಿಯಲ್ಲಿ ಪ್ರಚಂಡ ಕ್ರಾಂತಿಯು ತಲದೋರಿತು.

ಇದನ್ನು ಕೊನೆಗಾಣಿಸುವುದಕ್ಕೂ, ವ್ಯಾಪಾರದ ಅಡಿಗಲ್ಲನ್ನು ಸರಿಗೊಳಿಸುವುದಕ್ಕೂ ಹತ್ತಿಪ್ಪತ್ತು ದಿನಗಳ ಹಿಂದೆ ಲೌಸೇನ್ ಪರಿಷತ್ತು ಒಂದು ಅಂತರ್ರಾಷ್ಟ್ರೀಯ ಪ್ರಾತಿನಿಧ್ಯದಿಂದ ಜರಗಿತು. ಜರ್ಮನಿಯ ರಾಷ್ಟ್ರೀಯವಾದಿಗಳ ದೆಸೆಯಿಂದಾಗಿ ತಮಗೆ ಬರಲಿರುವ ಮಿಲಿಯಗಟ್ಟಳೆ ದ್ರವ್ಯವು ನಷ್ಟವಾಗುವುದು ಬೇಡ, ಸಿಕ್ಕಿದುದು ಸಿಗಲೆಂದು ಅಂದು ಜರ್ಮನಿಗೆ ಸಾಲ ಕೊಟ್ಟವರು ಜರ್ಮನಿಯು ವಾರ್ಷಿಕ ಕಪ್ಪವನ್ನು ಕೊಡುವ ಕ್ರಮವನ್ನು ನಿಲ್ಲಿಸಿದರು. ಅಲ್ಲದೆ ಜರ್ಮನಿಯು ತಮಗೆ ಕೊಡುತ್ತಿದ್ದ ನಷ್ಟದ್ರವ್ಯದ ವಿಷಯದಲ್ಲೂ ಕೆಲವು ಸುಲಭ ದಾರಿಗಳನ್ನು ಕಲ್ಪಿಸಿ ಜರ್ಮನಿಗೆ ಅದಷ್ಟು ಸಹಾಯವನ್ನು ಮಾಡಿದರು. ಹೀಗಿದ್ದರೂ, ಜರ್ಮನಿಯು ನಷ್ಟದ್ರವ್ಯವನ್ನು ಸ್ವಲ್ಪ ಮಟ್ಟಿಗಾದರೂ ಸರಿ, ಕೊಟ್ಟೇ ತೀರಬೇಕೆಂಬ ನಿರ್ಧಾರವಾದುದನ್ನು ಜರ್ಮನಿಯ ರಾಷ್ಟ್ರೀಯ ವಾದಿಗಳು ನೋಡಿ ಪುನಃ ಎದೆಯೊಡ್ಡಿ ಎದ್ದು ನಿಂತರು. ನಷ್ಟದ್ರವ್ಯವನ್ನು ಪರದೇಶಿಗರು ತಮ್ಮ ಮೇಲೆ ಹೊರಿಸಿದುದು ಅನ್ಯಾಯವೆಂದರು.

ಲೌಸೇನ್ ಪರಿಷತ್ತು ಜರಗಿ ಒಂದು ವಾರಾಂತ್ಯವಾಗುವುದರೊಳಗೆ ಜರ್ಮನಿಯಲ್ಲಿ ಪ್ರಜಾಧಿಪತ್ಯದ ಧ್ವಜವು ಸ್ಥಾಪಿಸಲ್ಪಟ್ಟಿತು. ರಾಷ್ಟ್ರೀಯವಾದಿಗಳಾದ ಹಿಟ್ಲರ್ ಹ್ಯುಗೆನ್‌ಬರ್ಗರು ತೀವ್ರ ಚಳವಳವನ್ನೆಬ್ಬಿಸಿ, ಕ್ರಾಂತಿಯನ್ನುತ್ಪನ್ನ ಮಾಡಿ, ಬಲಾತ್ಕಾರದಿಂದ ಪ್ರಜಾ ಸರ್ವಾಧಿಕಾರವನ್ನು ಸ್ಥಾಪಿಸಿದರು. ಪ್ರಶ್ಯಾ ಸರಕಾರವು ತಳ್ಳಿಹಾಕಲ್ಪಟ್ಟಿತು. ಪೋಲೀಸ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸೆರೆಹಿಡಿಯಲಾಯಿತು. ಬರ್ಲಿನ್ ಪೋಲೀಸರ ಚೀಫ್ ಕಮಿಶನರರನ್ನು ಕೈದುಮಾಡಲಾಯಿತು. ಪ್ರಶ್ಯನ್ ಮಂತ್ರಿಮಂಡಲವೂ ನ್ಯಾಯಮಂಡಲವೂ ಭಿನ್ನವಾಗಲ್ಪಟ್ಟಿತು. ಹೆರ್ ವೊನ್ ಪಾಪೆನ್ ಎಂಬ [illegible]ನನ್ನು ಸರ್ವಾಧಿಕಾರ ಸಹಿತವಾಗಿ ‘ಅಧ್ಯಕ್ಷ’ ಪದವಿಗೇರಿಸಿದರು. ಸೋಶಿಯಲಿಸ್ಟ್ ಧೋರಣೆಯಿಂದಾಗಿ ಅಧಿಕಾರಕ್ಕೆ ಬಂದ ಎಲ್ಲಾ ಅಧಿಕಾರಿಗಳನ್ನು “ಡಿಸ್‌ಮಿಸ್” ಮಾಡಲಾಯಿತು. ಪ್ರಶ್ಯನ್ ಪ್ರೆಸ್ ಡಿಪಾರ್ಟ್‌ಮೆಂಟಿನ ಎಲ್ಲಾ ಅಧಿಕಾರಿಗಳನ್ನೂ ಕೆಲಸದಿಂದ ತಳ್ಳಿದರು. ಹೊಸ ರಾಜ್ಯಾಧಿಕಾರಿಗಳನ್ನು ಮೆಶಿನ್ ಗನ್ನುಗಳ ಭದ್ರತೆಯಿಂದಲೋ, ವಿಶೇಷ ರೀತಿ ಪೋಲೀಸ್ ಭದ್ರತೆಯಿಂದಲೋ ಇಡಲಾಯಿತು.

ಪ್ರಶ್ಯನ್ ಸರಕಾರವು ಬಲುಗುಂದಿ ಬಿದ್ದಿರುವುದಾದರೂ, ಅದು ರಾಷ್ಟ್ರೀಯವಾದಿಗಳ ವರ್ತನೆಯನ್ನು ಖಂಡಿಸಿ ಶ್ರೇಷ್ಠನ್ಯಾಯಾಧಿಕಾರಿಗಳ (Supreme Court)ಕ್ಕೆ ಅರ್ಜಿ ಮಾಡಿಕೊಂಡಿದೆ.

ಜರ್ಮನಿಯ ಈ ರೀತಿಯ ಆಕಸ್ಮಿಕ ವಿಪ್ಲವದಿಂದಾಗಿ ಯುರೋಪ್‌ಖಂಡದಲ್ಲಿ ಮಹಾ ಆಂದೋಲನವು ಪ್ರಾರಂಭವಾಗಿದೆ. ಜರ್ಮನಿಯಲ್ಲಿ ಮಾರ್ಶಲ್ ಲಾ ರೂಪದಂತಿರುವ ಶಾಸನವು ಜಾರಿಮಾಡಲ್ಪಟ್ಟಿದೆ. ಹೊಸ ಅಧಿಕಾರಿಗಳು ತಾವು ಸದ್ಯಕ್ಕೆ ಪ್ರಜಾಜನಕ್ಕೆ ಭದ್ರತೆಯನ್ನು ಕೊಟ್ಟೇವೆಂದು ಹೇಳಲಿಕ್ಕಾಗುವುದಿಲ್ಲವೆಂದು ಹೇಳಿರುವರು.

ಇದೇ ತಾ ೩೧ನೇ ದಿನ ಜರ್ಮನ್ ಪಾರ್ಲಿಮೆಂಟಿನ ಸದಸ್ಯರ ಚುನಾವಣೆಯು ಜರುಗುತ್ತದೆ. ಸೋಶಿಯಲಿಸ್ಟ್ ಮತ್ತು ಹಿಟ್ಲರ್ ಪಕ್ಷಗಳವರು ಪ್ರತಿಭಟಿಸಿ ನಿಂತಿರುವರು. ಸಮಗ್ರ ಅಂತರ್ರಾಷ್ಟ್ರೀಯರುಗಳ ದೃಷ್ಟಿಯು ಆ ಕಡೆಗೆ ಹೋಗಿರುತ್ತದೆ. ಮತವಾದಿಗಳು ವಿಜಯಿಗಳಾಗುತ್ತಾರೋ, ರಾಷ್ಟ್ರೀಯವಾದಿಗಳೇ ಗೆಲ್ಲುತ್ತಾರೋ ಎಂದು ಎಲ್ಲರೂ ಲವಲವಿಕೆಯಿಂದ ನಿರೀಕ್ಷಿಸುತ್ತಿರುವರು. ರಾಷ್ಟ್ರೀಯ ಪಕ್ಷೀಯರು ಜಯಿಸಿದರೆ, ಪ್ರಾಯಶಃ ಜರಗಿದ ಲೌಸೇನ್ ಪರಿಷತ್ತಿನ ನಿರ್ಣಯಗಳನ್ನು ಪುನಃ ಪೆಟ್ಟಿಯಲ್ಲಿ ಹಾಕಬೇಕಾಗುವುದು. ಜರ್ಮನಿಯ ಪರವಾಗಿ ಆ ಪರಿಷತ್ತಿನಲ್ಲಿ ನಡೆದ ಯಾವ ಕರಾರುಗಳೂ ಆ ರಾಷ್ಟ್ರಪಕ್ಷೀಯರು ಒಪ್ಪುವಂತಿಲ್ಲ.

ದೇಶದಲ್ಲುತ್ಪನ್ನವಾದ ಕ್ರಾಂತಿ ಶಮನಾರ್ಥವಾಗಿ ತಕ್ಕ ಭದ್ರತೆಗಳನ್ನು ಮಂಜೂರುಮಾಡಲು ಹೆರ್ ವೊನ್ ಪಾಪೆನ್ನರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಜನರು ದಂಗೆಯೇಳುವ ಸಂದರ್ಭವಿದ್ದರೆ ಅಂತಹ ದಂಗೆಖೋರರ ಮುಖಂಡರನ್ನು ಸೆರೆಹಿಡಿಯಬೇಕೆಂದು ನಿರ್ಧಾರವಾಯಿತು. ಪ್ರಕೃತದ ಸರಕಾರದ ಮೇಲೆ ಮುನಿದೆದ್ದು ಬಿದ್ದ ಕೆಲವು ಪೂರ್ವಸರಕಾರದ ವಿಧೇಯಿಗಳನ್ನು ಕೈದುಮಾಡಲಾಗಿದೆ. ಪೋಲೀಸ ಜನರಲನು ಬಂಧನದಲ್ಲಿದ್ದಾನೆ. ಪ್ರಶ್ಯನ್ ಅಧಿಕಾರಿಗಳನ್ನು ಪದವಿಗಳಲ್ಲಿ ಡಬಾಂದರಾಗಿ ಛಲವು ನಡೆಯುತ್ತಿದೆ. ಸಾಮಾನ್ಯ ಚುನಾವಣೆಯು ಇದೇ ೩೧ನೇ ದಿನ ನಡೆಯಲೇಬೇಕೆಂದು ಠರಾವಾಗಿದೆ. ಪ್ರಶ್ಯನ್ ಸರಕಾರದವರು “ಸುಪ್ರೀಮ್ ಕೋರ್ಟ್”ಗೆ ಮನವಿಯನ್ನು ಮಾಡುತ್ತಾ—“ಈಗ ಅಧಿಕಾರಕ್ಕೆ ಬಂದಿರುವ ಹೆರ್ ವೊನ್ ಪಾಪೆನ್ನನು ಮಂಜೂರುಮಾಡುವ ಮಂಜೂರಾತಿಗಳಿಂದ ದೇಶಿಗರು ಉರಿದೇಳುವ ಸಂಭವವಿದೆಯಾದುದರಿಂದ ಅವನ ನಿರಂಕುಶತನಕ್ಕೆ ತಡೆಯನ್ನಿಡಬೇಕೆಂದರು—ಆದರೆ “ಸುಪ್ರೀಮ್ ಕೋರ್ಟ್” ಈ ಮನವಿಯನ್ನು ತಳ್ಳಿಹಾಕಿ ರಾಷ್ಟ್ರೀಯವಾದಿಗಳನ್ನು ಪ್ರಬಲೀಕರಿಸಿತು.

ಬ್ರಿಟನರ ಸಂಕಷ್ಟ

ಜರ್ಮನಿಯಲ್ಲಿ ಅನಿರೀಕ್ಷಿತವಾಗಿ ಇಂತಹ ಮಾರ್ಪಾಟುಗಳಾದುದರಿಂದ ಬ್ರಿಟನರಿಗೆ ಜರ್ಮನರ ಮೇಲೆ ಯಾವ ತರದ ಅಧಿಕಾರ ದರ್ಪವನ್ನು ತೋರಿಸಲೆಡೆಯಿಲ್ಲದಂತಾಗಿದೆ. ಲೌಸೇನ್ ಪರಿಷತ್ತಿನಲ್ಲಿ ಬ್ರಿಟನರು ಜರ್ಮನಿಯ ಜುಟ್ಟನ್ನು ಸಂಪೂರ್ಣವಾಗಿ ಬಿಡದಿರುವುದರಿಂದ ಮುಂದಕ್ಕೆ ಜರ್ಮನಿಯು ಬ್ರಿಟನರೊಡನೆ ಸ್ನೇಹದಿಂದಿರುವುದು ಅಸಂಭವವೆಂದೂಹಿಸಬಹುದು. ಕೆಲವು ವರ್ಷಗಳ ಹಿಂದೆ ಸರ್ವಸಮ್ಮತ ಸಾಮ್ರಾಜ್ಯಾಧಿಕಾರಿಗಳೆಂದು ಕರೆಯಲ್ಪಡುತ್ತಿದ್ದ ಬ್ರಿಟನರಿಗೆ ಇಂದು ಯಾವ ಪ್ರಕೃತಿಯಿಂದಲೋ, ಎಲ್ಲ ಕಡೆಗಳಿಂದಲೂ ವಿರೋಧದ ಬಿಕ್ಕಟ್ಟುಗಳೇ ಎದುರಿಸುತ್ತಿರುವುವು. ಒಂದು ಕಡೆಯಿಂದ ಹಿಂದೀಯರು ಸ್ವಾತಂತ್ರ್ಯ ಹೋರಾಟದ ಚಳವಳಿಸುವಿಕೆ, ಒಂದು ಕಡೆಯಿಂದ ಐರ್ಲೆಂಡಿನವರು ಪ್ರತಿಜ್ಞಾಭಂಗದ ಬಡಬಡಿಸುವಿಕೆ, ಒಂದು ದಿಕ್ಕಿನಿಂದ ಅಮೇರಿಕನರಿಗೆ ಸಲ್ಲಿಸಲಿರುವ ಸಾಲದ ಭಾರ, ಒಂದು ಕಡೆಯಿಂದ ಸ್ವದೇಶಿಗಳಲ್ಲಿ ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿರುವ ನಿರುದ್ಯೋಗದ ಸಮಸ್ಯೆ, ಒಂದು ಕಡೆಯಿಂದ ತಮ್ಮ ಕಾಲದಿಂದಲೂ ನಿರ್ಮಿಸಿಟ್ಟ ಹಡಗು, ನಾವೆ, ಸ್ಟೀಮರು, ವಿಮಾನ, ಮದ್ದು ಗುಂಡುಗಳೇ ಮೊದಲಾದುವುಗಳ ಬಗ್ಗೆ ಪರಿಷತ್ತಿನ ದೆಸೆಯಿಂದಾಗಿ ಮೂಲೆಪಾಲಾಗುವ ಪಶ್ಚಾತ್ತಾಪ, ಅದರೊಡನೆ ರಶ್ಯಾ, ಅಮೇರಿಕಾ, ಫ್ರಾನ್ಸುಗಳು ದಿನೇ ದಿನೇ ಪ್ರಬಲವಾಗುವ ಭಯ! ಇವುಗಳಿಂದ ತಿಳಿದು ಬಿಡುವುದಾದರೂ ಹೇಗೆ?

ಐರ್ಲೆಂಡಿಗೂ ಇಂಗ್ಲೆಂಡಿಗೂ ಇದ್ದ ಸಂಬಂಧವು ಬೇಗನೆ ಕಡಿದುಹೋಗುವುದೆಂದು ಪ್ರಚಲಿತ ವಿದ್ಯಮಾನಗಳನ್ನು ಪರಿಶೀಲಿಸುವಾಗ ತಿಳಿದುಬರುತ್ತದೆ. ಇಷ್ಟು ಕಾಲದಿಂದಲೂ ಇಂಗ್ಲೆಂಡು ಅದರೊಡನೆ ವ್ಯಾಪಾರ ವಹಿವಾಟುಗಳನ್ನು ಮಾಡುತ್ತಿದ್ದಿತು. ಈಗ ಅಲ್ಲಿಯ ಅಧ್ಯಕ್ಷರಾದ ಡಿವೆಲರಾರವರು ಕಾಣಿಕೆ ಕಪ್ಪಗಳನ್ನು ಕೊಡಲೊಪ್ಪುವುದಿಲ್ಲವೆಂದು ಖಂಡಿತವಾಗಿ ಹೇಳಿಬಿಟ್ಟುದರಿಂದ ಇಂಗ್ಲೆಂಡು, ಐರ್ಲೆಂಡಿನೊಡನಿದ್ದ ವ್ಯಾಪಾರ ವಾಣಿಜ್ಯವನ್ನು ನಿಲ್ಲಿಸಬೇಕೆಂದಿದೆ. ಐರ್ಲೆಂಡು ಮಾತು ಶಾಸನವನ್ನು ಕೊಟ್ಟು ಪ್ರತಿಜ್ಞಾಪತ್ರದ ಕರಾರುಗಳನ್ನುಲ್ಲಂಘಿಸುವುದಾದರೆ, ಇನ್ನು ಮುಂದೆ ಐರ್ಲೆಂಡಿನಿಂದ ಇಂಗ್ಲೆಂಡಿಗೆ ಬರುವ ಆಹಾರಸಾಮಾಗ್ರಿಗಳ ಮೇಲೂ ಇನ್ನಿತರ ಸರಕುಗಳ ಮೇಲೂ ಹೆಚ್ಚಿನ ಕರವನ್ನು ಹೇರಿಸಿ, ತಮ್ಮ ಖಜಾನೆಯನ್ನು ಭರ್ತಿಮಾಡಿಕೊಳ್ಳುವೆವೆಂದು ಬ್ರಿಟನರು ಹೇಳಿದರು. ಇದನ್ನು ಕೇಳಿದ ಡಿವೆಲರಾರವರೋ ಎದೆಗುಂದದೆ, “ಚಿಂತಿಲ್ಲ. ನೀವು ನಮ್ಮ ಸರಕುಗಳನ್ನು ಬಹಿಷ್ಕರಿಸಬಹುದು. ನಮಗೆ ನಿಮ್ಮಿಂದ ಬರುವ ಶಿಲ್ಲಿಂಗೂ ಬೇಡ” ಎಂದು ಹೇಳಿಬಿಟ್ಟರು. ಈ [illegible] ವಹಿವಾಟಿನಿಂದಾಗಿ ಬ್ರಿಟನಿಗೆ ಮಿಲಿಯಗಟ್ಟಳೆ ಪೌಂಡುಗಳು ದೊರೆಯುತ್ತಿದ್ದುವು. ಆದರೆ ಡಿವೆಲರಾರವರು ಖಚಿತಪೂರ್ವಕ ನಿರ್ಧಾರವನ್ನು ಮಾಡಿಬಿಟ್ಟರೆ ಮತ್ತೆ ಬ್ರಿಟನಿಗೆ ಅದೂ ಒಂದು ಮಹಾ ನಷ್ಟವೇ ಸರಿ. ಐರಿಷರೆಂದರೋ, ತಮ್ಮ ವ್ಯಾಪಾರ ಕೇಂದ್ರಗಳನ್ನು ಈಗಲೇ ಅನ್ಯದೇಶಗಳಲ್ಲಿ ತೆರೆದಿರುವರು. ಜರ್ಮನಿ ಮೊದಲಾದ ದೇಶಗಳವರೊಡನೆ ಅವರು ಈಗ ಬಹಳ ವ್ಯಾಪಾರವನ್ನು ನಡೆಸುತ್ತಿರುವರು. ಐರ್ಲೆಂಡು ಕೈ ತಪ್ಪುವುದೆಂದರೆ ಬ್ರಿಟನಿಗೆ ನಿಜವಾಗಿಯೂ ಪಶ್ಚಾತ್ತಾಪದ ಸಂಗತಿಯೇ. ಅಂತೂ ಬ್ರಿಟನರು ರಾಷ್ಟ್ರೀಯವಾದಿಗಳ ವಾದಕ್ಕೆ ಗಮನವನ್ನೀಯದೆ, ತಮ್ಮ ಸ್ವಯಂಪ್ರತಿಷ್ಠೆಯಿಂದ ಸ್ವಯಂ ಶ್ರದ್ಧೆಯಿಂದ ಸ್ವಾಭಿಮಾನದಿಂದ ಎಷ್ಟರ ತನಕ ನಡೆಯುತ್ತಾರೋ ಅಷ್ಟರ ತನಕ ಅವರು ಒಂದೊಂದೇ ರಾಜ್ಯವನ್ನು ಕಳೆದುಕೊಳ್ಳುವುದು ಸಂಭವನೀಯ ಸಂಗತಿಯೆಂದು ತಿಳಿದುಬರುತ್ತದೆ.

* * *

ಈ ಹೊಸ ಗ್ರಂಥಗಳನ್ನು ನೋಡಿರುವಿರಾ?

ಕಾಮದ ಗುಟ್ಟು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ ಕೃತ. ಇಂತಹ ಗಂಭೀರವಾದ ಸ್ವಾರಸ್ಯವಾದ, ಉಪಯುಕ್ತವಾದ ಕಾಮಶಾಸ್ತ್ರ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ. ಬೆಲೆ ೧೨ ಆಣೆಗಳು ಮಾತ್ರ.

ಪ್ರಳಯ ತಾಂಡವ—(ಸಚಿತ್ರ) ಶ್ರೀ. ಜಿ. ವಾಸುದೇವರಾಯರು. ಸುಂದರ ಚಿತ್ರಗಳೊಂದಿಗೆ ಅಂದವಾಗಿ ಪ್ರಕಟವಾಗಿದೆ. ಉಚ್ಚಭಾವಗಳನ್ನೊಳಗೊಂಡಿರುವ ಸ್ಫೂರ್ತಿದಾಯಕ ೩ ಕವನಗಳಿವೆ. ಬೆಲೆ ೬ ಆಣೆಗಳು ಮಾತ್ರ. ಲೈಬ್ರರಿ ಪ್ರತಿ ರೂ. ೧.

ಹೊಸಹುಟ್ಟು—ಶ್ರೀ. ಅ. ನ. ಕೃಷ್ಣರಾಯರು. ೧೬ ಪ್ರೌಢತರ ವ್ಯಾಸಗಳು, ೮ ಸುಂದರ ಚಿತ್ರಗಳು, ಫೆದರ್‌ವೇಟ್ ಕಾಗದದ ಮೇಲೆ ೧೮೨ ಪುಟಗಳಿವೆ. ಬೆಲೆ ೧ ರೂಪಾಯಿ.

ವೈದ್ಯರಾಜ—(ಸಾಮಾಜಿಕ ನಾಟಕ) ಪ್ರೊಫೆಸರ್ ಜಹಗೀರ್‌ದಾರ್ ಕೃತ. ಬೆಲೆ ೧ ರೂಪಾಯಿ.

ಮೋಹನಾಸ್ತ್ರ—(ಸಾಮಾಜಿಕ ನಾಟಕ) ಪಂಡಿತ ತಾರಾನಾಥ ಕೃತ. ಬೆಲೆ ೧ ರೂಪಾಯಿ.

ನವಜೀವನ ಗ್ರಂಥ ಭಂಡಾರದ ಅಮೌಲ್ಯ ಗ್ರಂಥಗಳು

೧ ಆಕಾಶದೊಳಗಿನ ಅದ್ಭುತ ಚಮತ್ಕಾರಗಳು (ಪ್ರೊ. ಪಾಟೀಲ ತಿರುಕುಲರಾಯರು) ೧—೨—೦
೨ ಧರ್ಮ ಸಂಭವ (ಪಂಡಿತ ತಾರಾನಾಥರಾಯರು.) ೧—೪—೦.
೩ ಹಿಂದೂಸ್ಥಾನದ ಪ್ರಾಚೀನ ರಾಜ್ಯಪದ್ಧತಿಗಳು (ಶ್ರೀ| ವಿಷ್ಣುಹರಿ ಒಡೆಯರು) ೧—೨—೦

ಹೆಚ್ಚಿನ ವಿಷಯಗಳಿಗೆ ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ.

ವಿ. ಜಿ. ಟಿ. ಜನರಲ್ ಏಜನ್ಸಿ, ಬಳೇಪೇಟೆ, ಬೆಂಗಳೂರು ಸಿಟಿ.

ಅಸ್ವಸ್ಥದ ನಂತರ—
"ಓವಲ್ಟಿನ್ನು" ಬಹು ತ್ವರೆಯಿಂದ ಸಂಪೂರ್ಣ ಚೈತನ್ಯವನ್ನೀಯುತ್ತದೆ.

ಅಸ್ವಸ್ಥದಲ್ಲಿ ಬಿದ್ದಾದ ಮೇಲೆ, ಮೈಕೈಗಳು ಸ್ವಲ್ಪ ಬಲಗೊಂಡು, ಕುಳಿತುಕೊಳ್ಳಲು ಚೈತನ್ಯಯುಕ್ತರಾದ ಕೂಡಲೇ ಸಾಮಾನ್ಯವಾದ ಆಹಾರವನ್ನು ಜೀರ್ಣಿಸುವಷ್ಟು ಶಕ್ತಿಯು ಬರುವುದಿಲ್ಲ. ಸಾಮಾನ್ಯ ಆಹಾರಗಳು ಸರಿಯಾದ ಮತ್ತು ಸಮತೂಕದ ಆಹಾರತತ್ವದಗಿಸಿಕೊಡುವುದಿಲ್ಲವಾದುದರಿಂದ ಅದನ್ನು ಸ್ವೀಕರಿಸುವುದೂ ಸರಿಯಲ್ಲ.

'ಓವಲ್ಟಿನ್ನಿ'ನಲ್ಲಿರುವ ಉತ್ತಮವಾದ ಆಹಾರ ಭಾಗವು ಅದರ ರುಚಿಯಿಂದ ಶಿಶುಗಳಿಗೂ, ಅಶಕ್ತವಂತರಿಗೂ ಅತ್ಯುತ್ಕೃಷ್ಟ ಮತ್ತು ಆಶ್ಚರ್ಯಕರ ಆಹಾರವನ್ನಾಗಿ ಮಾಡುತ್ತದೆ.

"ಓವಲ್ಟಿನ್ನು" ಬಹು ಕ್ಷೀಣವಾದ ದೇಹವನ್ನು ಶಕ್ತಿ ತುಂಬಿ ಬಲವಾಗುವ ತನಕ ಪೋಷಿಸುತ್ತದೆ. ಇದು ಸರಿಯಾದ ಮತ್ತು ಪ್ರಕೃತಿ ಸಂಬಂಧವಾದ ಉತ್ಕೃಷ್ಟ ಟೋನಿಕ್ ಆಹಾರ. ಬೇಗನೇ ಕರಗಿ ಜೀರ್ಣಿಸುತ್ತದೆ. ಅಸ್ವಸ್ಥದಿಂದೆದ್ದು "ಶಕ್ತಿ"ಯನ್ನನುಭವಿಸುವವರ ಜೀರ್ಣಶಕ್ತಿಯನ್ನು ವೃದ್ಧಿಪಡಿಸುವಂತೆ ಸಹಕಾರಿಯಾಗಿದೆ. ಬಹು ನಿಶ್ಶಕ್ತಿಯನ್ನು ಹೊಂದಿದ ವ್ಯಕ್ತಿಯೂ ಓವಲ್ಟಿನ್ನನ್ನು ಕುಡಿಯುವುದರಿಂದ ಶಕ್ತಿವಂತನಾಗುತ್ತಾನೆ.

OVALTINE
TONIC FOOD BEVERAGE

ಆರೋಗ್ಯಕ್ಕೆ, ಶಕ್ತಿಗೆ, ಧಾತುಪುಷ್ಟಿಗೆ!

ಅತೀ ಶುದ್ಧ ಮತ್ತು ಅತ್ಯುತ್ತಮ ಕರಸ್ಪರ್ಶಿತವಾದುದಲ್ಲ.

ಎಲ್ಲಾ ಕೆಮಿಸ್ಟರುಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಲ್ಪಡುತ್ತಿದೆ.

ಏಜಂಟರು— ಜೇಮ್ಸ್ ರ್‍ಯಾಟ್ ೬೬ಎ ರಿಪನ್ ಸ್ಟ್ರೀಟ್, ಕಲ್ಕತ್ತಾ
ಮತ್ತು ಮುಂಬಾಯಿ, ಮದ್ರಾಸ್, ರಂಗೂನುಗಳಲ್ಲಿ

ರುಚಿಕರ ಹಾಗೂ ಅತ್ಯುತ್ತಮವಾದ 'ಓವಲ್ಟಿನ್'ಗೆ ಸರಿಯಾದ ಪಾನೀಯವು ಬೇರೊಂದಿಲ್ಲ. ಮಿಶ್ರಣವೂ, ಸತ್ವಮಾರಕವೂ ಆಗಿರುವ ಎಲ್ಲಾ ನಕಲಿ ವಸ್ತುಗಳನ್ನು ತಿರಸ್ಕರಿಸಿರಿ

OV/122

ನಿಶ್ಶಕ್ತಿಯ ಸಮಯದಲ್ಲಿ 'ಓವಲ್ಟಿನ್' ರೊಟ್ಟಿಗಳನ್ನು ತಿನ್ನಿರಿ. ಅಧಿಕ ಪೋಷಕದಿಂದ ಜೀರ್ಣಶಕ್ತಿಯು ಸುಲಭದಿಂದಾಗುತ್ತದೆ. ಅದರ ಪರಿಮಳಭರಿತ ರುಚಿಯು ಮನಾಹ್ಲಾದವನ್ನುಂಟುಮಾಡುತ್ತದೆ. ಬಿಸ್ಕತುಗಳಿಗಿಂತ ಇವುಗಳು ಅತ್ಯುತ್ತಮ. ಓವಲ್ಟಿನ್ನಿನಂತೆ ಅವುಗಳು ಪುಷ್ಟಿಕೊಡುತ್ತವೆ.

ಪತ್ರವ್ಯವಹಾರ.

[ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಅಯ್ಯಾ! ವಾಚಕ ವೃಂದಾ!

ಇದೇ ಕಳೆದ ಜೂನ್ ತಾ ೨೪ನೇ "ಸ್ವದೇಶಾಭಿಮಾನಿ"ಯ ಸಂಚಿಕೆಯಲ್ಲಿ ನಮ್ಮ "ಇಡ್ಯ ಸುರತ್ಕಲ್" ಗ್ರಾಮದ ಪಂಚ್ಯಾತದ ವಿಷಯ ಇಡ್ಯ ಗ್ರಾಮಸ್ಥನು ಕೇಳಿದ ಪ್ರಶ್ನೆಗಳನ್ನು ನೀವು ಓದಿರಬಹುದು. ಆದರೆ "ಗಂಟೆಗೆ ಒಂದೇ ಸ್ವರ" ಎಂಬಂತೆ ಈಗಲೂ ಒಂದೇ. ಈ ಪಂಚ್ಯಾತರ ವಿಷಯ ನಿಮಗೆ ಸ್ವಲ್ಪ ಪರಿಚಯ ಮಾಡಿಕೊಡುತ್ತೇನೆ. ಇದು ೨೦ ಜನರ ಒಂದು ಕೂಟ. ಸಿರಿವಂತರು, ಸಾಹುಕಾರರು, ಸಾಗುವಳಿದಾರರು ಇತ್ಯಾದಿಯವರಿರುವರು. "ದುಡ್ಡೇ ದೊಡ್ಡಪ್ಪ" ಎನ್ನುವ ಈ ಸಿರಿವಂತರಿಗೆ ಗ್ರಾಮಾಭ್ಯುದಯದ ಚಿಂತೆ ಏಕೆ? ಸಾಹುಕಾರರು ಅಂಗಡಿ ಬಿಟ್ಟು ಕದಲರು. ಹುಚ್ಚರ ಹಾಗೆ ಗ್ರಾಮದಲ್ಲಿ ತಿರುಗಾಡಿಕೊಂಡಿರುವುದು ನಮಗೇಕೆ ಎಂದು ವರ್ಗದಾರರಿಗಾಯಿತು. ಹೀಗಾದ ಮೇಲೆ ಈ ಮೆಂಬರುಗಳಿಂದೇನು ಫಲ! ಇನ್ನು ಪ್ರೆಸಿಡೆಂಟರು— ಇವರ ಮಾತೇ ಬೇರೆ. ಆದಿಯಿಂದಂತ್ಯದ ವರೆಗೆ ಜೇಬು ಭರ್ತಿ ಮಾಡುವ ಆಲೋಚನೆ. ಎಂದರೆ, ವ್ಯಕ್ತಿಗಳಿಗೆ, ಮರದ ಏಲಮಿನ ಹಣ ತೆಗೆದಿಡುವುದು. ತಮ್ಮ ತೋಟಕ್ಕೆ ಸೊಪ್ಪನ್ನು ಸಾಲು ಮರಗಳಿಂದ ಸಾಗಿಸುವುದು. ಇವು ಇಷ್ಟು ಜಮಾ ಲೆಕ್ಕ. ಇನ್ನು ಖರ್ಚಿನ ಲೆಕ್ಕ. ತಮಗೇನಾದರೂ ಇನ್ನೊಬ್ಬನಿಂದ ಮಹತ್ವದ ಕೆಲಸವಾಗಬೇಕೆಂದಿದ್ದರೆ ಅವರೊಬ್ಬರಿಗಾಗಿಯೇ ಅವರ ಮನೆಯ ವರೆಗೆ ರಸ್ತೆ ಮಾಡಿಸುವುದು. ಅದೂ ಸಾರ್ವಜನಿಕೋಪಯೋಗಕ್ಕಿದ್ದ ಮೈದಾನಿನ ಮಧ್ಯದಿಂದ ಹಾದುಹೋಗುವುದು. ಈ ಮೈದಾನಿನಲ್ಲಿ ಮಾರ್ಗವಿಲ್ಲದಿದ್ದರೇನೆ ಸ್ವಲ್ಪ ಹೆಚ್ಚಿನ ಉಪಕಾರ. ಆಯಿತು ಖರ್ಚಿಗೆ ದಾರಿ.

ನಮ್ಮ ಗ್ರಾಮಗಳ ಆರೋಗ್ಯಚಿಂತಕರೆಂದರೆ ಈ ಮೆಂಬರ ಪ್ರೆಸಿಡೆಂಟರುಗಳೇ! ಆಹಾ ಇವರ ಕರ್ತವ್ಯನಿಷ್ಠೆ [illegible] ಮಾರ್ಗದ ಮಧ್ಯದಲ್ಲಿ [illegible] ಇಡ್ಯಗ್ರಾಮದ ಟ್ರಾವೆಲರ್ಸ್ ಬಂಗಲೆಯೆದುರಿರುವ ಹಳ್ಳದಲ್ಲಿ [illegible] ಶಾಲಾಮಕ್ಕಳು ಅದೇ ದಾರಿಯಾಗಿ ಹೋಗಬೇಕು. ಇತರರೂ ಹಾಗೆ. ನಾಯಿ ಚಿಕ್ಕ ಪ್ರಾಣಿ ಎಷ್ಟು ದೊಡ್ಡದು. [illegible] ಪಂಚಾಯ್ತಿ ಮೆಂಬರರೇ! ನಿಮ್ಮನ್ನು ಆ ಸ್ಥಾನಕ್ಕೆ ನೇಮಕ ಮಾಡಿದ ಮೇಲೆ ಎಷ್ಟು ಸಲ ಕೂಡಿದಿರಿ? ಯಾವ ನಿರ್ಣಯವು ಮಂಜೂರಾಯಿತು? ಯಾವವುಗಳು ಬಾಕಿಯುಳಿದಿವೆ? ಮಳೆಗಾಲದಲ್ಲಿ ಹೊರಗೆ ಬಂದರೆ ಜಾರಿ ಬೀಳುವ ಕೆಸರಿನಲ್ಲಿ [illegible] ಗಾಲವು ಕ್ರಿಸ್ಮಸ್ ರಜಾಕಾಲ. ಆಹಾ! ಮಹಾಪುರುಷರು ನೀವು! ಹೀಗೆಲ್ಲಾ ಮಾಡುವುದಕ್ಕಿಂತ ನಿಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬಾರದೇ? 'ನಾನೊಬ್ಬ ಪಂಚಾಯತ ಮೆಂಬರ' ಎಂಬ ಬಿರುದು ನಿಮಗೇಕೆ?

ಇಂತಹ ಈ ನಿರಂಕುಶಪ್ರಭುತ್ವದ ಪಂಚ್ಯಾತ ಕೂಟಕ್ಕೆ ಯಾವ ಮೇಲಿನ ಅಧಿಕಾರಸ್ಥರೂ ಇಲ್ಲವೆಂದು ಕಾಣುತ್ತಿದೆ. ಇಲ್ಲವಾದರೆ, ಅವರು ವರುಷಕ್ಕೊಂದಾವರ್ತಿಯಾದರೂ ಲೆಕ್ಕಪತ್ರ ಕೇಳಿ ತನಿಖೆ ನಡೆಸಿ ಸರಿಯಾದ ವಿಚಾರಣೆ ಮಾಡದಿರುತ್ತಿದ್ದರೇ? 'ಅಕ್ಕಿಗೊಂದು ಕಾಲ'

ಅಂತೂ ಸಾಕು. ಇಂತಹ ಪಂಚ್ಯಾತದ ಕೂಟ, ಜನರಿಗೆ ಮಾಟ, ಶಾಲಾ ಮಕ್ಕಳಿಗೆ ಹೊಡೆದ ಪತ್ರದ ಓಟ [illegible] ಬರೆಯುವವನಿಗೊಂದು ನೋಟ. 'ಇಡ್ಯ ಗ್ರಾಮ ನಿವಾಸಿ'

ನೋಟೀಸು.

ಪುತ್ತೂರು ಡಿ ಮುನ್ಸೀಫ್ ಕೋರ್ಟಿನಲ್ಲಿ

I P No 11/32

ಎಸ್ ಕೆ ವೆಂಕಟ್ರಮಣ ಭಟ್ಟ—ಅರ್ಜಿದಾರ
ಸಂಪು ಗಣಪತಿ ಭಟ್ಟ ಕೂಡಾ—ಎದ್ರಿರು.

ಸದ್ರಿ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕಾಗಿ ಕೊಟ್ಟ ಮೇಲಿನ ಅರ್ಜಿಯು ತಾ 4—8—1932ಕ್ಕೆ ತನಿಖೆಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪವುಳ್ಳವರು ಸದ್ರಿ ತಾರೀಕಿನ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಸ್ವತಹ ಆಗಲೀ, ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ವ್ಯವಹರಿಸತಕ್ಕದ್ದೆಂತ ಇದರಿಂದ ತಿಳಿಸಲಾಗುತ್ತದೆ.

ಪುತ್ತೂರು
೨೧-೭-೩೨

C. S. Shastry.
Vakil for Petitioner.

ಸುಸಂಧಿ! ಕೆಲವೇ ಪ್ರತಿಗಳು!
ಶಾಲಾ ಕೊಲೇಜು, ಲ್ಯಾಬ್ರರಿಗಳಿಗೂ, ಗ್ರಂಥಕರ್ತರಿಗೂ ನಮ್ಮ ಜಿಲ್ಲೆಯ ಅನುಭವವನ್ನು ಮಾಡಲಿಚ್ಛಿಸುವವರಿಗೂ, ಬೇಕಾಗಿರುವ ಕ್ರೌನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ವೆಂಬ ಉದ್ಗ್ರಂಥ! ಬೆಲೆ ಪ್ರತಿಯೊಂದಕ್ಕೆ ಟ. ಖ. ಸಹಿತರೂ. 2.
ಶಾರದಾ ಛಾಪಖಾನೆ,
ಮಂಗಳೂರು.

'ದಮನ ನೀತಿಯು ನಿಷ್ಪ್ರಯೋಜಕ! ಅರಬತ್ತಲೆಯವನನ್ನು ಬಿಡಿರಿ'

ಹೆರೋಲ್ಡ್ ಲಸ್ಕಿ.

'ಗಾಂಧಿಯನ್ನು ಬಿಡಿರಿ'—ಗಾಂಧಿಜೀಯವರು ಸೆರೆಯಿಂದ ಬರೆದುದೇನು?—ಮುಂಬಾಯಿಯ ಯೂರೋಪಿಯನರು ಹಿಂದೂಗಳನ್ನು ಬಹಿಷ್ಕರಿಸುತ್ತಾರೆ— "ಕೊಂಗ್ರೆಸ್ಸೂ ರಾಷ್ಟ್ರಧ್ವಜವೂ ನಿಷಿದ್ಧವಲ್ಲ!"—ಫ್ರೀಪೆಸ್ಸಿನ ಆರು ಸಾವಿರ ರೂಪಾಯಿ ವಶೀಕರಿಸಲ್ಪಟ್ಟಿತು—ಎಲ್ಲೆಲ್ಲೂ ಹೋರರಿಗೆ ವಿರೋಧ!—ಕೆಲವು ಕಡೆಗಳಲ್ಲಿ ಕೈದು—ಬಿಡುಗಡೆ—ಕೊಂಗ್ರೆಸ್‌ವಾಲರು ತಮ್ಮ ನಿಲಯಗಳನ್ನು ವಶೀಕರಿಸಲೆತ್ನಿಸಿದರು—ಹೋರ್ ಧೊರೆಯವರು ತನ್ನ ಘೋರಣೆಯನ್ನು ಬಿಡಲಿಲ್ಲ—ಜರ್ಮನಿಯಲ್ಲಿ ವಿಪ್ಲವ!—ಆಹಾಕಾರ!

ವ್ಯಾಪಾರಸ್ಥರಿಗೆ ಸುಸಂಧಿ!
ದೀಪಾವಳಿಯು ಸಮೀಪಿಸಿತಲ್ಲವೇ? ನಿಮಗೆ ಬೇಕಾಗುವ ವರ್ಗ, ಊಳಿಗ ಪುಸ್ತಕಗಳೂ, ಆಮಂತ್ರಣ ಪತ್ರಿಕೆಗಳೂ ಅಗ್ಗದಲ್ಲಿ, ಅನುಕೂಲಾನುಸಾರವಾಗಿ, ಕ್ಲಪ್ತ ಸಮಯಕ್ಕೆ ಸಿಗಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬನ್ನಿರಿ. ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ.
ಶಾರದಾ ಛಾಪಖಾನೆ,
ಮಂಗಳೂರು.

'ಗಾಂಧಿಯನ್ನು ಬಿಡಿರಿ'

ಸುಪ್ರಸಿದ್ಧ ಗ್ರಂಥಕರ್ತರೂ, ಪತ್ರಿಕಾ ಲೇಖಕರೂ ಮತ್ತು ಆಂಗ್ಲ ಪ್ರಭೃತಿಗಳೂ ಆದ ಹೆರೊಲ್ಡ್ ಲಸ್ಕಿಯವರು ಲಂಡನಿನಲ್ಲಿ ಒಂದು ಉಪನ್ಯಾಸವನ್ನು ಕೊಡುತ್ತಾ, "ಸರ್ ಸಾಮುವೇಲ್ ಹೋರರ ಈ ರೀತಿಯ ದಮನನೀತಿಯು ನಿಷ್ಪ್ರಯೋಜಕ! ಗಾಂಧಿಯನ್ನು ಬಿಟ್ಟು, ಅಂದು ಗಾಂಧಿಯು ಲಂಡನಿನಲ್ಲಿ ಹೇಳಿದಂತೆ ನಡೆದುಕೊಳ್ಳುವುದು ಕ್ಷಮ. ಈ ರೀತಿಯ ದಬ್ಬಾಳಿಕೆಯು ಎಷ್ಟರ ತನಕ ನಡೆದೀತು? ನಮಗೆ ಅನುಭವವಿದ್ದ ಮಟ್ಟಿಗೆ, ಇದರಿಂದ ಹಿಂದೂದೇಶದ ಪ್ರಗತಿ ಗಡಿಯಾರದ ಮುಳ್ಳು ಹಿಂದಹಿಂದಕ್ಕೇನೇ ಇಂಗಿಲ್ಪಡುವುದಲ್ಲದೆ ಮತ್ತೆ ಬೇರೆಯಲ್ಲ. ಸಾಮುವೇಲ್ ಹೋರರ ಘೋರಣೆ ಮೇರೆಗೆ ಸಭೆಗಳೂ ಠರಾವುಗಳೂ ನಡೆದಾವು. ಕಾರ್ಯರೂಪವಾಗಿ ಯಾವುದನ್ನೂ ಮಾಡಬೇಕಾದರೆ ಬಹು ಸಂಖ್ಯಾಕರ ಸಮ್ಮತಿಬೇಕು. ಬಹು ಸಂಖ್ಯಾತರಾದವರನ್ನು ಪ್ರತಿನಿಧಿಸುವವರೆಲ್ಲರೂ ಕಾರಾಗೃಹದಲ್ಲಿದ್ದರೆ, ಹೋರರ ಘೋರಣೆಯ ದಾನವನ್ನು ಸ್ವೀಕರಿಸುವವರಾದರೂ ಯಾರು? ಹೋರರ ಘೋರಣೆಯ ಮೇರೆಗೆ ಚುನಾವಣೆಗಳನ್ನು ನಡೆಸಬೇಕಂತೆ. ಈ ಚುನಾವಣೆಗೆ ತಲೆಯೊಡ್ಡುವವರಾದರೂ ಯಾರು? ಹೀಗೆ ಮಾಡಿದರೆ ಇಂಗ್ಲಿಷರಿಗೆ ಯಾರ ಬೆಂಬಲವೂ ದೊರೆಯಲಾರದು. ಈಗ ಹಿಂದೂದೇಶದ ಸ್ಥಿತಿಯು ಅಂದು ಐಯರ್ಲೆಂಡು ಇದ್ದ ಪರಿಸ್ಥಿತಿಗಿಂತ ಹತ್ತು ಪಾಲಷ್ಟು ವಿಶೇಷತೆಯುಳ್ಳದ್ದು. ನಮ್ಮ ತಲೆಯ ಮೇಲೆ ಮೊದಲೇ ಅಮೇರಿಕನ್ ಮತ್ತು ಯೂರೋಪಿಯನ್ ಸಮಸ್ಯೆಗಳಿವೆ. ಹಾಗಿರುವುದರಿಂದ ಹೋರರ ಈ ರೀತಿಯ ನೀತಿಯನ್ನು ಬದಲಾಯಿಸಿ ನಾವು ಏನಾದರೊಂದು ನ್ಯಾಯಯುಕ್ತವಾದ ಇತ್ಯರ್ಥವನ್ನು ಮಾಡುವುದೊಳ್ಳೆಯದು. ಸಮಯವು ದಾಟಿಹೋಗುವ ಮೊದಲು ನಾವು ಈ ಇತ್ಯರ್ಥವನ್ನು ಮಾಡಬೇಕು. ರಾಜಕೀಯ ಕೈದಿಗಳನ್ನೂ ಗಾಂಧಿಯನ್ನೂ ಸೆರೆಮನೆಯಿಂದ ಬಿಡಬೇಕು - ಅವರು ಹಿಂಸೆಯನ್ನುಪದೇಶಿಸಿದವರಲ್ಲ. ಗಾಂಧಿಯವರೊಡನೆಯೂ ಕೊಂಗ್ರೆಸ್ ಪಕ್ಷದ ಒಡನೆಯೂ ನಾವು ಸಹಕರಿಸಿ ನಡೆಯಬೇಕು - ಸರ್ ಹೋರರೊಡನೆ ರಾಜಿಮಾಡಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಗಾಂಧಿಯವರನ್ನು ಶಾಂತಪಡಿಸಲು ಸುಲಭವಲ್ಲ - ಅವರು ಹೋರರಿಗಿಂತಲೂ ಮಿಗಿಲಿನವರು. ಗಾಂಧಿಯವರ ಕೇಳಿಕೆಯನ್ನು ನಾವು ನಿರಾಕರಿಸಲು ಸಾಧ್ಯವೇ ಇಲ್ಲ" ಎಂದರು.

* * *

ಸೆರೆಯಿಂದ ಗಾಂಧಿಜೀಯವರ ಪತ್ರ

ಮಹಾತ್ಮಾ ಗಾಂಧಿಯವರು ಕಳೆದ ವರ್ಷ ಲಂಡನಿಗೆ ಹೋಗಿದ್ದು, ಅಲ್ಲಿ ಅನೇಕ ಆಂಗ್ಲ ಮಕ್ಕಳುಮರಿಗಳಿಗೆ ಮಮತೆಯ ಪರಿಚಿತರಾದರಷ್ಟೆ! ಕಿಂಗ್ಸ್‌ಲಿ ಹೋಲ್ ಮೊದಲಾದ ಕಡೆಗಳಲ್ಲಿ ಅವರು ಭೇಟಿ ಮಾಡಿದ ಮಕ್ಕಳು ಅವರನ್ನು ಇನ್ನೂ ಮರೆಯಲಿಲ್ಲ. ಗಾಂಧಿಜೀಯವರು ಆ ಮಕ್ಕಳೊಡನೆ ತಾನೂ ಒಬ್ಬ ಮಗುವಿನಂತೆ ಆಡಿ, ನಲಿದು, ನೆಗೆದಿದ್ದುದರಿಂದಾಗಿ ಆ ಮಕ್ಕಳಿಗೆಲ್ಲರಿಗೂ ಗಾಂಧಿಜೀಯವರು ಬಹಳ ಮಿತ್ರರಾಗಿರುವರು. ಗಾಂಧಿಜೀಯವರು ಕಾರಾಗೃಹದಲ್ಲಿರುವವರಾದರೂ, ಅಲ್ಲಿಗೂ ಕೂಡ ಲಂಡನಿನ ಆ ಮಕ್ಕಳು ತಮ್ಮ ಕಾಗದಗಳನ್ನು ಕಳುಹಿಸುತ್ತಿರುವರು. ಹಾಗೆ ಬಂದ ಒಂದು ಕಾಗದಕ್ಕೆ ಮೊನ್ನೆ ಗಾಂಧಿಜೀಯವರು ಉತ್ತರ ಕೊಡುತ್ತಾ - "ಸೆರೆಮನೆಯಿಂದ ನಾನು ನಿಮಗೆ ಪತ್ರಗಳನ್ನು ಬರೆಯುವುದೆಂದರೆ ಹಾಸ್ಯಜನಕ ಸಂಗತಿಯಲ್ಲವೇ? ನಾನು ಕಾರಾಗೃಹದಲ್ಲಿರುವೆನಾದರೂ, ನಾನೊಬ್ಬ ಕೈದಿಯೆಂದು ನನಗೆ ಭಾಸವಾಗುವುದಿಲ್ಲ. ಕಾರಣ, ನಾನು ಯಾವ ತಪ್ಪನ್ನೂ ಮಾಡಿರುವುದಿಲ್ಲವೆಂದು ನನಗೆ ಗೊತ್ತು. ಮಕ್ಕಳೇ, ನಾನು ಲಂಡನಿನಲ್ಲಿ ನಿಮ್ಮೊಡನೆ ಮಾಡಿದ ಪ್ರಶ್ನೋತ್ತರಗಳೂ, ಅವುಗಳಿಗೆ ನೀವು ಕೊಟ್ಟಿದ್ದ ಉತ್ತರಗಳೂ, ನನ್ನ ಮನಸ್ಸಿನಲ್ಲಿ ಈಗಲೂ ಇವೆ. ನೀವು ನನಗೆ ಅಂದು ಕೊಟ್ಟ ಬಹುಮಾನಗಳ ಉಪಕಾರಾರ್ಥ ಸ್ಮರಣೆಯೊಂದನ್ನು ಮಾಡಲು ನನಗೆ ಸಮಯವು ದೊರೆಯಲಿಲ್ಲ. ಅಂತಹ ಉಪಕಾರ ಸ್ಮರಣೆಯನ್ನು ನಾನು ಈಗ ಸೆರೆಮನೆಯಿಂದ ಮಾಡುತ್ತಿರುವೆನು. ನೀವು ಕೊಟ್ಟ ಇನಾಮುಗಳನ್ನೆಲ್ಲಾ ನಾನು ನನ್ನ ಆಶ್ರಮದ ಮಕ್ಕಳಿಗೆ ಕೊಡಬೇಕೆಂದಿದ್ದೆ. ಆದರೆ ಮಾಡಲೇನು? ಆಶ್ರಮಕ್ಕೂ ಹೋಗಲು ನನಗಾಗಲಿಲ್ಲ.

ನಿಮ್ಮ ಪ್ರೇಮಾಭಿಲಾಷಿ,

ನೀವು ಅಂಕಲ್ ಗಾಂಧಿ ಎಂದು ಕರೆಯುತ್ತಿದ್ದವ.

ಯೂರೋಪಿಯನರು ಹಿಂದೂಗಳನ್ನು ಬಹಿಷ್ಕರಿಸುತ್ತಾರೆ

ಮುಂಬಾಯಿಯಿಂದೊಂದು ನವೀನ ರೀತಿಯ ವಾರ್ತೆ. ಅಲ್ಲಿನ ಹಿಂದೂಗಳು ಕೊಂಗ್ರೆಸ್ಸಿಗೆ ಸಹಾಯವನ್ನೀಯುತ್ತಿದ್ದಾರೆಂದು ತಿಳಿದ ಕೆಲವು ಯೂರೋಪಿಯನರು ಸಭೆಗೂಡಿ, ಇನ್ನು ಮುಂದೆ ಹಿಂದೂಗಳನ್ನು ಬಹಿಷ್ಕರಿಸಬೇಕೆಂದು ಆಲೋಚಿಸಿದ್ದಾರೆ. ತಮ್ಮ ಆಡಿಯಾಳುಗಳಾಗಿರುವ ಹಿಂದೂಗಳಿಗೂ, ತಾವು ವ್ಯಾಪಾರ ನಡೆಸುವ ಹಿಂದೂ ದಲ್ಲಾಳಿಗಳಿಗೂ ಈ ಯೂರೋಪಿಯನರು ನೋಟೀಸು ಕೊಟ್ಟು, ಇನ್ನು ಮುಂದೆ ನಿಮ್ಮ ಸಹಕಾರವು ನಮಗೆ ಆಗತ್ಯವಿಲ್ಲ"ವೆಂದು ಹೇಳಿರುವರು. ಹಿಂದೂಗಳ ಬದಲಿಗೆ ಮುಸ್ಲಿಮರಿಗೇನೆ ತಮ್ಮ ಆಫೀಸುಗಳಲ್ಲಿ ಉದ್ಯೋಗವನ್ನು ಕೊಡಬೇಕೆಂದೂ, ಈ ರೀತಿಯಿಂದಾಗಿ ಮುಸ್ಲಿಮರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದೂ ಆಲೋಚಿಸಿರುವರು. ಪ್ರತಿಯೊಬ್ಬ ಆಂಗ್ಲನೂ ಮುಸ್ಲಿಮ ವರ್ತಕರೊಡನೆಯೇ ವ್ಯಾಪಾರ ವಹಿವಾಟವನ್ನು ನಡೆಸಬೇಕೆಂದು ನಿರ್ಧಾರವಾಗಿದೆ. ಈ ನಿರ್ಧಾರವಾದುದನ್ನು ಕೇಳಿ ಅಂದು ಇಂಗ್ಲಾಂಡಿಗೆ ತೆರಳಿದ ವಿಲ್ಲಿಯರ್ಸ್ ದೊರೆಗಳು ಬಹಳ ಆನಂದಗೊಂಡಿದ್ದಾರಂತೆ. ಪ್ರತಿಯೊಬ್ಬ ಯೂರೋಪಿಯನೂ ಮುಸ್ಲಿಮರನ್ನೇ ಪ್ರೋತ್ಸಾಹಿಸಿದರೆ, ಮುಂದಕ್ಕೆ ದ್ವಿಪಕ್ಷಗಳವರಿಗೂ ಶ್ರೇಯಸ್ಸಿದೆ (?) ಎಂದು ವಿಲ್ಲಿಯರ್ಸರು ಅಭಿಪ್ರಾಯಪಟ್ಟಿದ್ದಾರೆಂದು ತಿಳಿದುಬಂದಿದೆ.

* * *

ಸುಳ್ಳೋ ಸತ್ಯವೋ?

ತನ್ನ ಕೆಲಸದಿಂದ ನಿವೃತ್ತನಾದ ಯುರೋಪಿಯನ್ ಪೋಲೀಸ್ ಅಧಿಕಾರಿಯು ಹಿಂದೂದೇಶದಲ್ಲಿ ನಡೆಯುವ ಕಳ್ಳಾಟಿಕೆಯ ಕುರಿತು ಈ ಕಥೆಯನ್ನು ಹೇಳಿದ್ದಾನೆ. 'ಪಂಜಾಬಿನ ಒಬ್ಬ ಬಡಗಿಯು ಒಬ್ಬ ಮನುಷ್ಯನು ಅವಿತುಕೊಳ್ಳುವಷ್ಟು ದೊಡ್ಡದಾದ ಒಂದು ಪೆಟ್ಟಿಗೆಯನ್ನು ತಯಾರಿಸಿದನು. ಅದರೊಳಗೆ ಗಾಳಿ ಬರುವಂತೆ ತಕ್ಕ ಉಪಾಯಗಳನ್ನು ಮಾಡಿ, ಅದರೊಳಗೆ ತನ್ನ ಅನೇಕ ಶಿಷ್ಯರಲ್ಲೊಬ್ಬನನ್ನು ಕುಳ್ಳಿರಿಸಿ, ಒಂದು ದಿನ ಅದನ್ನು ರೈಲಿಗೆ ಹತ್ತಿಸಿದನು. ಈ ಸಂಗತಿ ತನಗೆ ಗೊತ್ತಿದ್ದರೂ, ರೈಲ್ವೇ ಕ್ಲಾರ್ಕನು ಬೇರೆಯವರಿಗೆ ಹೇಳದಂತೆ ಅವನಿಗೆ ಲಂಚ ಕೊಡಲಾಯಿತು! ರೈಲು ನಡೆಯುತ್ತಿರುವಾಗ ಪೆಟ್ಟಿಗೆಯೊಳಗಿದ್ದ ಮನುಷ್ಯನು ಮೆಲ್ಲಗೆ ಹೊರಬಂದು, ಸಿಕ್ಕಿದುದನ್ನು ದೋಚಿಕೊಂಡು ಪುನಃ ಪೆಟ್ಟಿಗೆಯೊಳಗೆ ಅಡಗುವನು. ಒಂದು ನಿಲ್ದಾಣದಲ್ಲಿ ಈ ಪಂಗಡದವರಲ್ಲಿ ಕೆಲವರು ಈ ಪೆಟ್ಟಿಗೆಯನ್ನು ಕೆಳಗಿಳಿಸಿ, ಪೆಟ್ಟಿಗೆರಾಯನು ಸಂಗ್ರಹಿಸಿದ ಸಾಮಾನುಗಳನ್ನು ಇದೀ ಪಂಗಡದವರೊಳಗೆ ಹಂಚಿಕೊಳ್ಳುವರು. ಒಂದು ದಿನ ರೈಲ್ವೇ ಕ್ಲಾರ್ಕನು ತನಗೆ ಸಿಕ್ಕಿದ ಲಂಚದಿಂದ ಅಸಂತುಷ್ಟನಾಗಿ ಪೆಟ್ಟಿಗೆಯನ್ನು ರೈಲಿಗೆ ಹತ್ತಿಸದೆ ಕೆಳಸದನರಿಂದ ಅಡಿಮೇಲಾಗಿ ಮಾಡಿಸಿದನು. ಅಷ್ಟರಲ್ಲಿ ಒಬ್ಬ ಪೋಲೀಸನು 'ಇದೇನು ಮಾಡಿದಿರಿ'ಎಂದು ವಿಚಾರಿಸಲು, ಪೆಟ್ಟಿಗೆಯೊಳಗೆ ಆರ್ಭಟವಾಗುವುದನ್ನು ಕೇಳಿ, ಅದನ್ನು ಒಡೆದನು. ಮುಂದಕ್ಕೆ ಅಂತಹ ಕಳ್ಳರು ನನಗೆ ನೋಡಸಿಗಲಿಲ್ಲ" ಇದು ಸತ್ಯವೋ ಸುಳ್ಳೋ ಎಂದು ತಿಳಿದುಬಂದಿಲ್ಲ.

* * *

'ಕೊಂಗ್ರೆಸ್ಸೂ ರಾಷ್ಟ್ರಧ್ವಜವೂ ನಿಷಿದ್ಧವಲ್ಲ.

ಅಹ್ಮದಾಬಾದಿನ ಡಾ। ಬಿ. ಎನ್. ಕಾನುಗಾ ಎಂಬವರೆಹಟ್ಟರ ಮನೆಯ ಮಾಡಿನ ಮೇಲೆ ಕಳೆದ ೩ ವರ್ಷಗಳಿಂದಲೂ ರಾಷ್ಟ್ರಧ್ವಜವೊಂದು ಹಾರ್‍ಯಾಡುತ್ತಿತ್ತು. ಇವರು ಕಳೆದ ಚಳವಳದಲ್ಲಿ ಭಾಗವಹಿಸಿದ್ದರಾದರೂ ಈ ಸಲ ಮಾತ್ರ ಚಳವಳಕ್ಕೆ ಸೇರಲಿಲ್ಲ. ಆದರೆ ಇವರ ಪತ್ನಿಯವರು ಮಾತ್ರ ಡಿಕ್ಟೇಟರರಾಗಿ ಸೆರೆಮನೆಗೆ ತೆರಳಿರುವರು. ಮಾಡಿನ ಮೇಲಿನಿಂದ ರಾಷ್ಟ್ರಧ್ವಜವನ್ನು ತೆಗೆಯಲು ಸರಕಾರದ ಅಪ್ಪಣೆಯಾಯಿತು. ಅದಕ್ಕೆ ಡಾಕ್ಟರರು ಒಪ್ಪಲಿಲ್ಲ. ಇಷ್ಟಾದೊಡನೆ, ಇವರು ಚಳವಳ ಪ್ರೋತ್ಸಾಹಕರೆಂಬ ಆರೋಪಣೆಯಾಗಿ ೧೦೦೦ ರೂಪಾಯಿ ಜುಲುಮಾನೆ ವಿಧಿಸಲಾಯಿತು. ಚೀಫ್ ಜಸ್ಟೀಸರವರ ಕೋರ್ಟಿನಲ್ಲಿ ನ್ಯಾಯವಿಚಾರಣೆಯಾಯಿತು. ಜಸ್ಟೀಸ್ ಜಡ್ಜರು - "ಕೊಂಗ್ರೆಸ್ಸನ್ನಾಗಲೀ, ರಾಷ್ಟ್ರಧ್ವಜವನ್ನಾಗಲೀ ಸರಕಾರವು ನಿಷಿದ್ಧಪಡಿಸಲಿಲ್ಲ. ಡಾ। ಕಾನುಗರ ಮನೆಯ ಮೇಲೆ ರಾಷ್ಟ್ರಧ್ವಜವು ಕಳೆದ ಎರಡು ವರ್ಷಗಳಿಂದಲೂ ಹಾರಾಡುತ್ತಿದೆ. ಅವರು ರಾಷ್ಟ್ರಧ್ವಜವನ್ನು ತೆಗೆಯಬೇಕೆಂದಿಲ್ಲ; ಅವರು ತೆಗೆಯಲೊಪ್ಪದಿದ್ದುದು ಒಂದು ತಪ್ಪೇ ಅಲ್ಲ. ಅವರ ಮೇಲೆ ಹೊರಿಸಲ್ಪಟ್ಟ ೧೦೦೦ ರೂಪಾಯಿ ಜುಲುಮಾನೆಯು ಇಷ್ಟರಲ್ಲೇ ಕೊಡಲಾಗಿದ್ದರೆ, ಅದನ್ನು ಕೂಡಲೇ ಹಿಂದೆಕೊಡಬೇಕು' ಎಂದರು.

* * *

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ.

O. P. No 43/32.

ಸುಬ್ರಾಯ ಶ್ಯಾನುಭಾಗ—ಅರ್ಜಿದಾರ

ಮತ್ತು

ರಾಮಪ್ಪಯ್ಯ ಶ್ಯಾನುಭಾಗ - ಪ್ರತಿವಾದಿ

ಇವರೊಳಗ

ಮೇಲ್ಕಂಡ ಅರ್ಜಿಪ್ರಕಾರ ಅರ್ಜಿದಾರನ ತಂದೆ ಮೃತ ರಾಘವೇಂದ್ರ ಶ್ಯಾನುಭಾಗರಿಗೆ ಬೆಳ್ಮಣ್ಣು ಕಮಲಮ್ಮನು ತಾ 5-1-1925ರಲ್ಲಿ ರೂ 388—0—0ಕ್ಕೆ ಬರೆಕೊಟ್ಟ ಪ್ರೋಮಿಸರಿ ನೋಟಿನ ಮೇಲೆ ಸದ್ರಿ ಅರ್ಜಿದಾರನು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್ O. S. No 646/1929 A. S. No 49/31ನೆಗೆ ಪಡೆದ ಡಿಕ್ರಿಗಳ ಮೇಲೆ ಅಮಲ್‌ಜಾರಿ ನಡೆಸುವರೆ ಅರ್ಜಿದಾರನ ತನಗೆ ಸಕ್ಸೆಶನ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ಕೊಟ್ಟ ಸದ್ರಿ ಅರ್ಜಿಯು ತಾರೀಕು 17—8—32ಕ್ಕೆ ತನ್ನಿಗ ಇಟ್ಟಿರುವುದರಿಂದ ಆಕ್ಷೇಪ ಹೇಳುವವರು ಆ ದಿವಸ ಕೋರ್ಟಿನ ಮುಂದೆ ಹಾಜರಾಗಿ ಪ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗಿಯದೆ

ತಾ-2-'32
ಉಡುಪಿ

P. Padmanabha Rao,
Vakil for Petitioner.

ನಮ್ಮ ಖಿದ್ದರ್ ರೇಶ್ಮೆ ಮಡಿಗಳಿಗೆ ಗಮನ ಕೊಡಿರಿ.
S. U. N. & CO.
Choukhumba, Benares City
ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1 ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರಿ ಕೆಲಸಗಳಿಂದ ತಯಾರಾಗುವ ರೇಶ್ಮೆ ಸೀರೆಗಳೂ, ಖಣ, ಮಡಿ, ಕದಪಾಪ್ಪಿ, ಪೇಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಉಲ್ಲನ್ ಚೌಕ, ಧಾವಳ, ನಾಮರ್ದ, ತರತರದ ಪಿತಾಂಬರಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಖಿದ್ದರ್ ಮಡಿ—6 ಮೊಳ, 2 ಮೊಳ ಅಗಲ ರೂ 2ರಿಂದ ರೂ 8. ಮೊಳ 8ರಿಂದ 2-12-0ರಿಂದ ರೂ. 4 10 ಮೊಳ, 2½ ಅಗಲ ರೂ. 4ರಿಂದ ರೂ. 5. ಮೊಳ 12 + 2½ ರೂ. 5ರಿಂದ 6-8-0. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ, ಸಾಮಾನುಗಳನ್ನು ಸಂಯಾದ ಸುಲಭ ದರದಿಂದ ಕಳುಹಿಸಲಾಗುವುದು.
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಕಂಬಾ, ಬನಾರಸ್ (ಕಾಶೀ)

ಪರೀಕ್ಷಿಸಿರಿ! ಶಾಶ್ವತಗುಣವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R)

ಆಯುರ್ವೇದ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ [illegible] ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರಿಗೆ ಶಿಷ್ಯರಾಗಿ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ [illegible] ಈ ಸ್ಥಾಪನೆ [illegible] ಸರ್ವ [illegible] ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ ಎಲ್ಲಾ ತರದ [illegible] ತೈಲಗಳು, ಘೃತಗಳು, [illegible], ಭಸ್ಮ, [illegible] ತಯಾರ [illegible] ನಮ್ಮಲ್ಲಿ ಯಾವಾಗಲೂ [illegible] ತಯಾರ ಇರುವವು. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, [illegible] ಕಾಲ, ಪ್ರಾಯ, [illegible] ಪದಾರ್ಥಗಳ [illegible] ಕ್ರಮ, ಪ್ರಕೃತಿ [illegible] ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು [illegible] ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ [illegible] ನಡಿಯಲಿಕ್ಕೆ ಶಕ್ತಿ [illegible] ಎಂಬ [illegible] ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು [illegible] ಸಂಗತಿಗಳಲ್ಲಿ [illegible] ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ [illegible] ಸಂದರ್ಶಿಸಬೇಕಾದ ಸಂಗತಿಗಳಲ್ಲಿ [illegible] ಕೆಳಗಿನ ವಿಳಾಸಕ್ಕೆ [illegible] ಪತ್ರವ್ಯವಹಾರ ನಡಿಸಿದಲ್ಲಿ [illegible] ಕೊಡಲಾಗುವದಲ್ಲದೆ [illegible] ಗರೀಬರಿಗೆ ಅವರ ಅಗತ್ಯದ [illegible] ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ಏವರಿಸಿ ಅದನ್ನು ಸೇವಿಸುವ ಎಲ್ಲಾ [illegible] ತಿಳಿಸುವರೆಯೂ ಸದಾ ಈ ವೈದ್ಯಶಾಲೆಯು [illegible] ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು [illegible] ಕೊಡುವರೆ [illegible] ಇತರ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

[illegible] ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ತುಂಬಾ

ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ? ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿಯನ್ನು ತೆಗೆದುಕೊಳ್ಳಿರಿ.

ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ

Wanted.

Agents for 'Swadeshabhimani' throughout the South Kanara District and elsewhere

Apply Sharp — You are sure to secure substantial Commission

MANAGER,
Swadeshabhimani,
Mangalore

ವಿಕ್ರಯಿಸುವ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ/ಔಷಧದಲ್ಲಿ ಪ್ರಾಶಸ್ತಿ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರಕಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್ ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L. Batliwalla, Sons & Co., Ltd.
Kadell Road, P O. Dadar Bombay, 14.

ತಂತಿ ವಿಳಾಸ — 'CAVASPUR' Bombay

ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ — ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್



ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಪಥ್ಯವು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ — ಇದು ಎಲ್ಲಾ ತರದ ಜ್ವರಗಳನ್ನು ನಿವಾರಣೆ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ — ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd . Bombay,14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ [illegible] ಇತರ ಮೂಲಿಕೆಗಳನ್ನು [illegible] ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ ನಾನಾ ವಿಧವಾದ ದುರ್ಬಲತ್ವ ಕೆಮ್ಮು ಎದೆ ನೆಗಡಿ ಸ್ವರಭಂಗ [illegible] ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವದು. [illegible] ರಕ್ತಕ್ಷೀಣತೆ, ವೀರ್ಯಹೀನತೆ [illegible] ಕಡಿಮೆಯಾಗೋಣ [illegible] ಈ ಲೇಹವು ಸುಪ್ರಸಿದ್ಧವಾದುದು, ಎಲ್ಲಾ ಅಶಕ್ತತೆಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು [illegible] ಮಾಡಲಿಕ್ಕೆ [illegible] ಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು [illegible] ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

6 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ 2/8, ½ ಪಾ. ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು — ಮೆಸರ್ಸ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು:— ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು.— ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ
ಸಬ್ ಏಜಂಟರು—ಮೈಸೂರು ಏಜಂಟರು — ಟಿ. ಸಿ ನಟರಾಜ್ ಅಂಡ್ ಕೊ, ಸಯ್ಯಾಜೀರಾವ್ ರೋಡ್.
ಬೆಂಗಳೂರು ಏಜಂಟರು — ದಿ ಪ್ರೊಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ

ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ರಾಜಾ ರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ.

ಲೇಖಕರು — ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ
ಮಂಗಳೂರು

— ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು —

ಹತ್ತೊಂಭತ್ತನೇ ಶತಮಾನದಲ್ಲಿನ ಹಿಂದೂಸ್ಥಾನದ ಪರಿಸ್ಥಿತಿಯನ್ನು ಪರಿಶೀಲಿಸುವ—ಇಂಗ್ಲಿಷ ಸರಕಾರದ ಅಧಿಕಾರವು ಹಿಂದೂಸ್ಥಾನದ ಕೆಲವು ಕಡೆಗಳಲ್ಲಿ ಬೇರೂರಿ ಹೋಗಿತ್ತು ಮತ್ತೆ ಕೆಲವು ಕಡೆಗಳಲ್ಲಿ ಹಾಗೆ ತಲೆ ಎತ್ತುತ್ತಿತ್ತು. ವಿಶೇಷವಾಗಿ ಬಂಗಾಳ ಪ್ರಾಂತ್ಯವೆಲ್ಲವೂ ಬಹಳ ಸಮಯದ ಮೊದಲಿನಿಂದಲೇ ಪಾಶ್ಚಾತ್ಯ ಸಂಸ್ಕೃತಿ, ಸಭ್ಯತೆ ಮುಂತಾದವುಗಳಿಂದ ಪ್ರಭಾವಿತವಾಗಿ ಹೋಗಿತ್ತು. ಉತ್ತರಹಿಂದೂದೇಶಗಳಲ್ಲಿ ಇಂಗ್ಲಿಷರ ಪ್ರಾಬಲ್ಯವು ಪ್ರಥಮತಃ ಬಂಗಾಳದಲ್ಲಾಯಿತು. ಎಲ್ಲರಿಗಿಂತ ಮೊದಲು ಬಂಗಾಳಿಗಳೇ ಇಂಗ್ಲಿಷ್ ಅಭ್ಯಾಸವನ್ನು ಮಾಡಿದರು. ಮೊತ್ತಮೊದಲು ಬಂಗಾಳದಲ್ಲೇ ಕ್ರೈಸ್ತಮತದ ಪ್ರಚಾರವಾಯಿತು. ಕ್ರೈಸ್ತರ ಅನ್ಯೋನ್ಯ ಸಂಸ್ಥೆಗಳು ಮೊದಲು ಅಲ್ಲಿಯೇ ತೆರೆಯಲ್ಪಟ್ಟುವು. ಬಂಗಾಳದ ಆಗಿನ ಕಾಲದ ರಾಜನೈತಿಕ ಮತ್ತು ಧಾರ್ಮಿಕ ಜಟಿಲ ಪರಿಸ್ಥಿತಿಗಳನ್ನು ರಾಮಮೋಹನರು ಪ್ರಥಮ ಕಂಡುಕೊಂಡರು. ಎಲ್ಲೆಲ್ಲಿಯೂ ಹಿಂದೂ ಧರ್ಮದ ಅಧಃಪತನವೂ ಕ್ರೈಸ್ತಧರ್ಮದ ಮತ್ತು ಇಂಗ್ಲಿಷ ಸರಕಾರದ ದಿಗ್ವಿಜಯವೂ ಆಗುವುದು ಅವರಿಗೆ ಕಾಣತೋರಿ ಬಂತು. ಆಗಿನ ಕಾಲದಲ್ಲಿನ ಹಿಂದೂಧರ್ಮದ ದುಃಸ್ಥಿತಿಯು ಹಿಂದೂಮತವನ್ನೂ ದೇಶವನ್ನೂ ಅತ್ಯಂತ ಶೀಘ್ರವಾಗಿ ರಸಾತಲಕ್ಕೆ ಒಯ್ಯುವುದೆಂಬುದರಲ್ಲಿ ಸಂದೇಹವಿಲ್ಲವೆಂಬುದನ್ನು ತಿಳಿದವರು ಈ ಮಹಾಪುರುಷರೇ! ಇವರು ರೂಢಿಯ ಪೂಜಕರಾಗಿರದೆ ಪ್ರತಿಯೊಂದು ವಿಷಯವನ್ನೂ ವಿವೇಕ ರೀತಿಯಲ್ಲಿ ತಿಳಿದುಕೊಳ್ಳುತ್ತಿದ್ದರು. "ಪ್ರಚಲಿತ ಕಾಲದಲ್ಲಿರುವ ಬಂದಿರುವ ವಿಧದ ರೂಢಿಗಳೇ ಹಿಂದೂಧರ್ಮದ ನಿಜವಾದ ಸಿದ್ಧಾಂತವಾಗಿರುವುದಾದರೆ, ಇಂಥಾ ಧರ್ಮಕ್ಕೆ ಅತಿ ಬೇಗನೇ ತಿಲಾಂಜಲಿಯನ್ನೀಯುವುದೇ ಸರಿ" ಎಂಬ ಸಿದ್ಧಾಂತವನ್ನು ಮಾಡಿಕೊಂಡರು. ಇವರು ದೀರ್ಘದರ್ಶಿಗಳಾಗಿದ್ದುದರಿಂದ ಹಿಂದೂಗಳ ಎಲ್ಲಾ ಪರಿಸ್ಥಿತಿಗಳನ್ನು ಚೆನ್ನಾಗಿ ಪರಿಶೀಲಿಸಿ ನೋಡಿಯೇ ಈ ತರದ ಅಭಿಪ್ರಾಯವನ್ನು ಮನಸ್ಸಿನಲ್ಲಿಯೇ ಧಾರಣೆ ಮಾಡಿಕೊಂಡರು. ಆದರೆ ಆಗಿನ ಸಮಯದಲ್ಲಿ ಅವರ ಮುಂದೆ ತೋರುತ್ತಿದ್ದ ಹೊಸ ವಿಚಾರ ಎಂದರೆ ಕ್ರೈಸ್ತಧರ್ಮದ ಅಥವಾ ಪಾಶ್ಚಾತ್ಯ ಸಭ್ಯತೆಯು ಅವರಿಗೆ ಹಿತವೆಂದು ಕಂಡು ಬರಲಿಲ್ಲ. ಏಕೆಂದರೆ ಅವರ ವಿಶಾಲವಾದ ಮತ್ತು ಪವಿತ್ರವಾದ ಹೃದಯವು ದೇಶಪ್ರೇಮದಿಂದಲೂ ಹಿಂದೂಮತ ಪ್ರೇಮದಿಂದಲೂ ತುಂಬಿ ತುಳುಕಾಡುತ್ತಿತ್ತು. ಹಿಂದೂಗಳ ಕುರೀತಿಗಳನ್ನು ಈ ರೀತಿಯಾಗಿ ಪಾದ್ರಿಗಳು ಜನರ ಮುಂದೆ ವರ್ಣನೆ ಮಾಡತೊಡಗಿದಲ್ಲಿ ಅವರ ಹೃದಯವು ದುಃಖದಿಂದ ಉದ್ವೇಗಗೊಳ್ಳುತ್ತಿತ್ತು.

ಇದನ್ನೆಲ್ಲಾ ನೋಡುತ್ತಾ ರಾಜಾ ರಾಮಮೋಹನರ ಮನಸ್ಸು ಸಹಿಸಲಾರದಾಯಿತು. ಅವರ ಅಂತರಾತ್ಮನು ದಿನೇ ದಿನೇ ಅವರನ್ನು [illegible] ಮಾಡುತ್ತಿದ್ದ. [illegible] ಒಂದು ಮಹಾಶಕ್ತಿಯು ಅವರ ಅಂಗಾಂಗಗಳಲ್ಲಿ ಸಂಚರಿಸ ತೊಡಗಿತು. ಅವರನ್ನು ಚೇತನಗೊಳಿಸಿತು. ಒಂದು ದಿನ ಹಠಾತ್ತಾಗಿ ರಾಮ ಮೋಹನರು ತನ್ನ ಮನೋದಾರ್ಢ್ಯವನ್ನು ನಿಶ್ಚಿತಗೊಳಿಸಿ ಧರ್ಮಯುದ್ಧಕ್ಕೆ ಸೊಂಟಕಟ್ಟಿದರು. ನಮ್ಮ ಹಿಂದೂಧರ್ಮ ಹಿಂದೂ ಸಂಸ್ಕೃತಿ ಮುಂತಾದವುಗಳನ್ನು ಪೂರ್ವಕಾಲದಲ್ಲಿದ್ದಂತೆ ಪುನಃ ಮುಂದೆ ಪ್ರಕಾಶಿತ ರೂಪದಲ್ಲಿಡಬೇಕಾದರೆ ವರ್ತಮಾನ ಕಾಲದ ಹಿಂದೂಸಮಾಜದ ಸುಧಾರಣೆಯ ಕಾರ್ಯವನ್ನು ಅತ್ಯಂತ ತೀವ್ರ ರೀತಿಯಲ್ಲಿ ಪ್ರಾರಂಭಿಸಿ, ಮತ್ತು ಪಾಶ್ಚಾತ್ಯರಲ್ಲಿರುವ ಒಳ್ಳೇ ಗುಣಗಳನ್ನೆಲ್ಲಾ ನಾವು ಕಲಿತುಕೊಳ್ಳಬೇಕು ಎಂದು ನಿಶ್ಚಯಮಾಡಿಕೊಂಡರು. ಪಾಶ್ಚಾತ್ಯ ಸಭ್ಯತೆಯನ್ನು ನೋಡಿದ ಮಾತ್ರದಿಂದ ಹೆದರಿ ಅಥವಾ ಅಸಹ್ಯಪಟ್ಟು ಓಡಿಹೋಗುವುದರಿಂದಾಗಲೀ, ಯಾ ಹಿಂದೂ ಜಾತಿಯ ಪ್ರಕೃತದ ಹೀನಸ್ಥಿತಿಯನ್ನು ಹಾಗೆಯೇ ಬಿಡುವುದರಿಂದಾಗಲೀ, ಅಥವಾ ಹಿಂದೂಧರ್ಮವನ್ನು ತ್ಯಾಗ ಮಾಡಿ ಕ್ರೈಸ್ತಧರ್ಮವನ್ನು ಸ್ವೀಕರಿಸುವುದರಿಂದಾಗಲೀ, ಹಿಂದೂಗಳಲ್ಲಿ ಅಥವಾ ಹಿಂದೂಸ್ಥಾನದಲ್ಲಿ ಯಾವ ತರದ ಉನ್ನತಿಯೂ ಆಗಲಿಕ್ಕಿಲ್ಲ; ಇದಕ್ಕೆ ಬದಲಾಗಿ ಸರ್ವ ನಾಶವಾದೀತು ಎಂಬುದನ್ನು ಇವರು ತನ್ನ ಮನಸ್ಸಿಗೆ ಚೆನ್ನಾಗಿ ತಂದುಕೊಂಡರು. ಇಂಗ್ಲಿಷರ ಉನ್ನತಿಯ ಮಾರ್ಗವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದಕ್ಕನುಸರಿಸಿ ಹಿಂದೂಸಮಾಜವನ್ನು (ಅದರ ವಾಸ್ತವಿಕ ಗೌರವವು ನಷ್ಟವಾಗದಂತೆ ನೋಡಿಕೊಳ್ಳುತ್ತಾ) ಸುಧಾರಣೆ ಮಾಡಬೇಕೆಂಬ ಒಂದು ನವೀನ ಕಾರ್ಯಕ್ರಮವನ್ನು ಅವರು ನಿಶ್ಚಯಿಸಿದರು.

ರಾಜಾರಾಮ ಮೋಹನ ರೋಯರು ಒಬ್ಬ ಪ್ರತಿಭಾಶಾಲಿ ವ್ಯಕ್ತಿಯಾಗಿದ್ದರು. ಅವರ ಬುದ್ಧಿಚಾತುರ್ಯವು ಅತ್ಯಂತ ವಿಶೇಷ ತರದ್ದಾಗಿತ್ತು. ಅತ್ಯಂತ ದೀರ್ಘ ವಿಚಾರವೂ ಅವರಲ್ಲಿ ತುಂಬಿತ್ತು. ತನ್ನ ಜೀವಮಾನದ ಕಾಲದಲ್ಲಿ ಅವರು ಹಿಂದೂಜನತೆಯ ಉದ್ಧಾರಕ್ಕಾಗಿ ಅವರು ಯಾವ ಉತ್ತಮೋತ್ತಮವಾದ ಕಾರ್ಯಕ್ರಮವನ್ನು ಜ್ಯಾರಿಯಲ್ಲಿಟ್ಟಿದ್ದರೋ ಅದೆಲ್ಲವನ್ನು ನಾವು ನಿಷ್ಪಕ್ಷಪಾತಬುದ್ಧಿಯಿಂದ ತಿಳಿದು ನೋಡಿದ್ದಲ್ಲಿ ಅವರು ಮಹಾ ಪುರುಷರಾಗಿದ್ದರೆಂದೇ ಪ್ರತಿಯೊಬ್ಬನ ಮನಸ್ಸಿಗೂ ಭಾಸವಾಗದಿರದು.

ಹೆಚ್ಚು ಕಡಿಮೆ ಕ್ರಿ ಶ ೧೭೭೪ರಲ್ಲಿ ಇವರು ಜನ್ಮವೆತ್ತಿದರು. ಯಾವ ಸಮಯದಲ್ಲಿ ಹಿಂದೂಜನಾಂಗದ ಸಾಮಾಜಿಕ, ಧಾರ್ಮಿಕ ಮತ್ತು ರಾಜನೈತಿಕ ಸುಧಾರಣೆಯನ್ನು ಮಾಡಲಿಕ್ಕೆ ಈ ಮಹಾಪುರುಷರು ಜನ್ಮವೆತ್ತಿದರೋ ಅದೇ ಸಮಯದಲ್ಲಿ ಹಿಂದೂಸ್ಥಾನದಲ್ಲಿ ಬ್ರಿಟಿಷರ ಆಳಿಕೆಯನ್ನೂ ಅವರ [illegible] ವೈಮನಸ್ಯದಿಂದ ತುಂಬಿದ ಸಭ್ಯತೆಯನ್ನೂ ಮತ್ತಷ್ಟು ಬಲಪಡಿಸಲಿಕ್ಕಾಗಿ "ಲಾರ್ಡ್ ವಾರನ್ ಹೆಸ್ಟಿಂಗ್ಸನು ಇಂಗ್ಲಿಷರ ಮೊದಲನೇ ಗವರ್ನರ್ ಜನರಲ್ನಾಗಿ ಭಾರತವರ್ಷಕ್ಕೆ ಬಂದನು. ಇವನಿಂದಲೇ ಬ್ರಿಟಿಷರ ಕಠಿಣ ರಾಜ್ಯಭಾರವು ಒಳ್ಳೇ ರೀತಿಯಿಂದ ಕ್ರಿಯಾತ್ಮಕವಾಗಿ ಪ್ರಾರಂಭಿಸಿತೆಂದು ಹೇಳಬಹುದು.† ಬಾಲ್ಯದಲ್ಲಿ ರಾಮ ಮೋಹನರಿಗೆ ಅರಬಿ, ಫಾರ್ಸಿ ಮತ್ತು ಸಂಸ್ಕೃತ ಈ ಮೂರು ಭಾಷೆಗಳಲ್ಲಿ ಶಿಕ್ಷಣವು ದೊರೆಯಿತು. ಇವರು ತನ್ನ ೧೬ನೇ ವರ್ಷ ಪ್ರಾಯದಲ್ಲಿ "ವಿಗ್ರಹಾರಾಧನೆಯನ್ನು ಖಂಡಿಸಿ ಒಂದು ಉತ್ತಮ ಪುಸ್ತಕವನ್ನು (ಅದು ಆ ಕಾಲದಲ್ಲಿ ಮುದ್ರಣವಾಗಲಿಲ್ಲ) ಬರೆದರು. ಇದರಿಂದಲೇ ಇವರಲ್ಲಿದ್ದ ಬುದ್ಧಿಯ ಚಮತ್ಕಾರವು ಜನತೆಯ ಮುಂದೆ ಹೊಳೆಯಿತು. ಆ ಪುಸ್ತಕವನ್ನು ಬರೆದ ಕಾರಣದಿಂದಲೇ ಇವರ ತಂದೆಯವರು ಇವರಲ್ಲಿ ಕೋಪಗೊಂಡರು. ಇದರಿಂದ ಇವರು ತನ್ನ ಗೃಹವನ್ನೂ ಮಾತಾಪಿತೃ ಬಂಧುಗಳೇ ಮುಂತಾದ ಸರ್ವಸ್ವವನ್ನೂ ತ್ಯಜಿಸಿ ದೇಶದೇಶಾಂತರದಲ್ಲಿ ತಿರುಗಾಡುವಂಥಾ ಪ್ರಸಂಗವೊದಗಿತು. ಈ ಸಮಯದಲ್ಲಿ ಬ್ರಿಟಿಷರ ಕಾರ್ಯ ಮತ್ತು ಆಳ್ವಿಕೆಯಲ್ಲಿಯೂ ಇವರಿಗೆ ಒಂದು ತರದ ತಿರಸ್ಕಾರವು ಉಂಟಾಗಿತ್ತು. ಅಂತೂ ೨೦ನೇ ವರ್ಷದ ಪ್ರಾಯದಲ್ಲಿ ಇವರ ತಂದೆಯು ಪುನಃ ಇವರನ್ನು ಮನೆಗೆ ಕರೆದುಕೊಂಡರು. ಅಂದಿನಿಂದ ಇವರಿಗೆ ಹೆಚ್ಚಾಗಿ ಆಂಗ್ಲೇಯರ ಸಹವಾಸವು ಲಭಿಸಿದ್ದರಿಂದ ಮೊದಲು ಇವರಲ್ಲಿದ್ದ ಆದೊಂದು ತಿರಸ್ಕಾರವು ಕಡಿಮೆಯಾಗುತ್ತಾ ಬಂತು. ಒಮ್ಮೆ ಇವರು ಒಂದು ಪತ್ರವನ್ನು ಬರೆದಿದ್ದರು. ಅದರಲ್ಲಿ —

'Find them generally more intelligent more steady and moderate in their conduct I have up my prejudice against them and became inclined in their rule though a foreign yoke would lead more speedily and surely to the amelioration of the native inhabitants;'

ಅಂದರೆ "ಇಂಗ್ಲಿಷರು ಹೆಚ್ಚು ಬುದ್ಧಿವಂತರೂ, ಧೈರ್ಯಶಾಲಿಗಳೂ, ಒಳ್ಳೇ ಸುಶೀಲವಂತರೂ ಆಗಿರುವರೆಂಬುದು ನನಗೆ ಗೊತ್ತಾದ ಕೂಡಲೇ ನನ್ನಲ್ಲಿ ಅವರ ಮೇಲಿದ್ದ ಅಸಹ್ಯತನವು ಮಾಯವಾಯಿತು ಮತ್ತು ನಾನು ಅವರಿಗೆ ಅನುಕೂಲವಾಗುತ್ತಾ ಬಂದೆನು. ಅವರ ರಾಜ್ಯಭಾರವು ವಿದೇಶದಿಂದ ಭಾರತೀಯರಿಗಾಗಿ ಬಂದ ಒಂದು ಪಾಶವಾಗಿರುವುದೆಂಬುದನ್ನು ನಾನು ತಿಳಿದಿದ್ದರೂ, ಇದರಿಂದ ನಮ್ಮ ಸ್ವತಂತ್ರತೆಯನ್ನು ನಾವು ಶೀಘ್ರವಾಗಿ ದೊರಕಿಸಿಕೊಳ್ಳಬಹುದು. ಅಂದರೆ ನಮ್ಮ ಸ್ವಾತಂತ್ರ್ಯ ಸಂಪಾದನೆಗೆ ಆ ರಾಜ್ಯಭಾರವು ನಮಗೆ ಒಂದು ಉತ್ತಮವಾದ ಸಾಧನೆಯಾಗಿರುವುದೆಂಬುದು ನನ್ನಲ್ಲಿ ಖಚಿತವಾಯಿತು" ಎಂದು ಬರೆದಿರುವರು.

ಆದರೆ ಮೂರ್ತಿಪೂಜೆಯ ಮೇಲೆ ಇವರಿಗೆ ಸ್ವಲ್ಪವಾದ ಅವಿಶ್ವಾಸವಿತ್ತು. ಅದರ ಕುರಿತು ಅವರು ಒಂದು ಕಡೆಯಲ್ಲಿ ಬರೆಯುವರು—,

After my father's death I opposed the advocates of idolatory with still greater boldness Availing myself of the art of printing now estatblished in India, I published various works and pamphlets against their errors, in the native and foreign languages This raised such a feeling, against me, that I was at last deserted by every person except two or three scotch friends, to whom, and the nation which they belong, I always feel grateful"

[ಸಶೇಷ.]

---

†ಹೇಸ್ಟಿಂಗ್ಸನ ಆಳಿಕೆಯು ಭಾರತೀಯರಿಗೆ ಎಷ್ಟು ದುಃಖಕರವಾಗಿತ್ತೆಂಬುದನ್ನು ನಾನು ಈ ಮೊದಲೊಮ್ಮೆ ರಾಷ್ಟ್ರಬಂಧುವಿನಲ್ಲಿ "ಭಾರತೀಯ ಸ್ವಾತಂತ್ರ್ಯ ಯುದ್ಧ" ಎಂಬ ಲೇಖನದಲ್ಲಿ ಪ್ರಕಟಗೊಳಿಸಿರುವೆನು. ಆದುದರಿಂದ ಅವನ ಕುರಿತು ಇಲ್ಲಿ ವಿವರಿಸುವುದು ಉಚಿತವಲ್ಲ. (ಅನುವಾದಕ)

ಅ	ಗ	ದಂ	ಕಾ	ರ	●	ದ	ಶ	ವ	ದ	ನ
ಪ	ವ	ಧಿ	ಸು	●	ಮ	●	ಶ	ರ	ವು	ಯು
ಗ	ಳ	ಸು	●	ಮಾ	ದಿ	ಗ	●	ಹ	ನ	ನ
ವು	ಗ	●	ಚ	ತು	ರಾ	ನ	ನ	●	ಕಂ	ಜ
ನ	●	ಚ	ಪ	ಲ	●	ಹ	ವ	ನ	●	ಲ
●	ಬಿ	ರ	ಲ	●	●	●	ನೀ	ರ	ದ	●
ಹ	●	ಕ	ತ	ಕ	●	ಪಾ	ತ	ಳ	●	ಇ
ಸ್ತ	ನ	●	ನ	ರ	ಪಾ	ಲ	ಕ	●	ಜ	ನ
ಲಾ	ಲಿ	ಸು	●	ಮ	ಶ	ಕ	●	ಅ	ನ	ತ
ಭ	ಸ	ರ	ಸ	●	ಕೆ	●	ಮು	ಧು	ಪಾ	ನ
ವ	ಜ	ನು	ದಾ	ರ	●	ಸು	ರ	ಸಿ	ಲ	ಪ

ಕಳೆದ ಸಲದ ೧ನೇ ಒಗಟಿಗೆ ಸಮರ್ಪಕವಾದ ಉತ್ತರವನ್ನಿತ್ತವರು:—

೧ ಶ್ರೀಯುತರಾದ ವಾಮನ ವಾಸುದೇವ ನಾಯಕ್, ಮರ್ಚೆಂಟ್, ಪಾಣೆಮಂಗಳೂರು. ೨ ಕೆ ಟಿ ಕರ್ಕೇರ, ಮುಂಬಾಯಿ ೩ ಪಿ ರಾಮಕೃಷ್ಣ, [illegible] ೪ ಎಮ್ ರಂಗಾಚಾರಿ, ಮಂಗಳೂರು ೫, ಕೆ ಎಲ್ ರಮಾನಾಥ, ಮಂಗಳೂರು ೬ ಸ ಚಿತ್ರನ್ ಬಿ [illegible] ೭ ಜಗನ್ನಾಥ [illegible], ಕಾರ್ಕಳ ೮ ಬಿ ಆರ್ ಪೆರ್ಮುದೆ ಸುರತ್ಕಲ್

ಈ ಒಗಟು ಕಷ್ಟಕರವಾದ್ದೆಂದು ತೋರಿದುದರಿಂದ, ಇದನ್ನು ಈ ಸಲ ಶ್ರಮವಹಿಸಿ ಬಿಡಿಸಿದ ಪ್ರತಿಯೊಬ್ಬರಿಗೂ, ಬಹುಮಾನವಾಗಿ 'ಹಿಂದೂ ವ್ರತವಿವೇಕ'ದ ಒಂದೊಂದು ಪ್ರತಿಯನ್ನು ಕೊಡಲಾಗಿದೆ ಮೆನೇಜರ್ ಸ್ವ

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಶೂರೆನ್ಸ್-ಬೇಂಕ್, ಲಿಮಿಟೆಡ್

(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದು.)

ಒಟ್ಟು ವಿಮಾ ಹಣವು ೩೯೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು. ವಾರ್ಷಿಕ ವಿಮಾ ಪತ್ರಗಳ ಹಣವು ೯೯ ಕೋಟಿ ರೂ. ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕಾಯ್ದಿಟ್ಟ ಠೇವುಗಳು ಹಿಂದೀ ಕಾರಖಾನೆಗಳಲ್ಲಿಯೇ ತೊಡಗಿಸಲ್ಪಡುವುವು

ಬೇಕಾಗಿದೆ. ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ, ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ [illegible] ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN
Securing for your clients
1. Low rates of Premium
2. Liberal Policy Conditions.

AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE

For terms of Agency please apply to—
H R. K. IYENGAR
Chief Agent
The S. I. G A Co. Ltd,
Sanyasiguddy, MANGALORE

Managing Agents –
K. C PANDALAI & CO.
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರೀಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು.

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡೆಸಿರಿ)

ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ,
ದಿ ಎಸ್ ಐ. ಜಿ. ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ಪಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದಲೂ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—9—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0

"ಭಿಷಕ್‌ರತ್ನ" ವಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು [illegible]

ಮೂಲವ್ಯಾಧಿ

ರಕ್ತ, ಅರ್ಧವ್ಯಾಧಿಜನ್ಯವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇರಿನ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯಿಡುವುದು, ಭಯಂಕರ ನೋವು, ಮತ್ತು ಕಿವುಡತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಧಿರೋದ್ದೀಪನ ತೇಲ ಉಪಯೋಗಿಸಿದ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ, ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
೭ ಕಾಂದಾರವಾಡಿ ೪ನೇ ಗಲ್ಲಿ
ಮುಂಬಯಿ.

ಕೊ-ಓಪರೇಟಿವ್ ಸೊಸೈಟಿಗಳಿಗೆ

ಒಳ್ಳೇದಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ಲೆಡ್ಜರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಮದ್ರಾಸ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಠ್ಯಕ್ರಮಾನುಸಾರವಾಗಿ, ಯಂ ಗಣಪತಿರಾವ್ ಐಗಳವರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ, ಐದನೇ ದರ್ಜೆಯ ರೀಡರ್ಸ್ ಮತ್ತು ನೀತಿಬೋಧ

ಎರಡನೇ ಮೂರನೇ ನಾಲ್ಕನೇ ದರ್ಜೆಗಳ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು [illegible]ಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಜ್ಜಕಥ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು.

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ
ಶಕ್ತಿ ರಕ್ತಕ್ಕೆ ಮಹೌಷಧ ಲಕ್ಷಾವಧಿ ಜನರು ಉಪಯೋಗಿಸಿ [illegible] ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಪುಷ್ಟಿಟಾನಿಕ್.

ಡಾ ಗೌತಮರಾವ್ ಕೇಶವ ಆಂಡ್ ಸನ್ಸ್,
ಫಾರ್ಮಸಿಷ್ಟ— ಮುಂಬಾಯಿ ೪ ಸ್ಟೋಕಿಸ್ಟ ಪೈ ಕಂಪೆನಿ,
[[illegible] ಇಂಗ್ಲಿಷ್ ಔಷಧಾಲಯದ [illegible]] ಮಂಗಳೂರು

ಮಾರಾಟಕ್ಕಿವೆ ! ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ । ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ? ಸುಧೆಯನು । ಪಡೆದು ತಪ್ಪದ್ರವರ ಕೆರದಿ ಕುಳಿತರೆ ತೆರಳ ಬಲ್ಲರೆ? ತೊರೆದ ಧೀರರು ನಿಶ್ಚಿತಾರ್ಥವನು ॥ ೨

ಪುಸ್ತಕ ೨೬. ಮಂಗಳೂರು ತಾ ೫ನೇ ಶುಕ್ರವಾರ ಆಗೋಸ್ಟ್ ೧೯೩೨ (5 8—'32.) ಸಂಚಿಕೆ ೩೨

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**
ಹೆಡ್ ಆಫೀಸು: - ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರು

Authorised Capital Rs 3,50,000- Subscribed & Called up Rs. 2,25,000
ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅಪ್ಪಿಸಿದ ವ ವಸೂಲಾದ ಮೂಲಧನ ರೂ 2,25,000-

STATEMENT OF ASSETS & LIABILITIES AS ON 30TH DAY OF JUNE 1932

	Capital and Liabilities			Property and Assets	
1	Paid up Capital	Rs. 2,25,000-0 0	1	Premises Building, Furniture etc	Rs 64 417 0- 0
2	Reserve and other funds	" 2,22,705 0-0	2	Government securities	" 3,30,788 4 0
3	Deposits	" 20,25 790 9 11	3	Authorised Investments	" 20 70 404 4 2
4	Due to Bankers	" 19 965 6-0	4	Bills for collection	11 027 6 0
5	Sundries	" 70,924-15 2	5	[illegible]	" 26 301 1 0
6	Bills for collection per contra	11 027 6 0	6	[illegible] hand & with bankers	" 72 394 13 11
		Total 25,75,415- 5 1			Total 25,75,413 5-1

UDIPI 11-7 '32

N. ANANDA RAO,
Secretary & Manager

ಅಮೃತಾಂಜನ.

ಇದು ತಲೆ ಶಿರೋವೇದನೆ [illegible] ವಾತ [illegible] ನೋವು [illegible] ಹಲ್ಲುನೋವು, ವಿಪರೀತ ಥಂಡಿ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲ [illegible], ಲಂಬಾಗೋ ಮೊದಲಾದ ಎಲ್ಲಾ ತರ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ [illegible] ತೊಳಗೆ ಗುಣಪಡಿಸುತ್ತದೆ

ದಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—4—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.
ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು
ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಾಯಿ.
ಏಜಂಟರು — [illegible] ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office MANGALORE, S. India
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety, Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office



ಅಸ್ವಸ್ಥದ ನಂತರ ಸೊಗಸಾದ ಓವಲ್‌ಟಿನ್ ಕುಡಿದು ನಿಮ್ಮ ಶಕ್ತಿಯನ್ನು ಪುನಃ ಸಂಪಾದಿಸಿರಿ

ವಿಪರೀತವಾದ ಕಾಯಿಲೆಯು ದೇಹಪ್ರಕೃತಿಯನ್ನೆಲ್ಲ ನಿಶ್ಶಕ್ತಿಗೊಳಿಸುತ್ತದೆ ಸರಿಯಾದ ಆರೋಗ್ಯ ಮತ್ತು ಶಕ್ತಿಗಳನ್ನು ಉತ್ಪನ್ನಗೊಳಿಸದೆ ಇದ್ದರೆ ಆ ಕಾಯಿಲೆಯು ಪುನಃ ತಿರುಗಿ ನಿಲ್ಲುವ ಅಪಾಯವಿದೆ

ಅಶಕ್ತಿಯಿಂದಿರುವ ದೇಹವನ್ನು ಪುನಃ ಸಜ್ಜುಗೊಳಿಸಬೇಕು ಹೊಸ ಚೈತನ್ಯವನ್ನೂ ವೀರ್ಯವನ್ನೂ ಉತ್ಪನ್ನಗೊಳಿಸಬೇಕು ಈ ಸಮಯದಲ್ಲಿ ದೇಹವನ್ನು ಸರಿಯಾದ ಸ್ಥಿತಿಗೆ ತರಲು ಓವಲ್ಟಿನ್ ಅತ್ಯಮೋಘವಾದ ಪ್ರಯೋಜನವಾದ ವಸ್ತುವಾಗಿದೆ ಓವಲ್ಟಿನ್ ಸಂಪೂರ್ಣವಾದ ಆಹಾರವಾಗಿರುತ್ತದೆ ಜೀರ್ಣಕರವಾದ ಶಕ್ತಿಯುತ ಪೋಷಣೆಯನ್ನು ಕೊಡುತ್ತದೆ ಅದರ ಪರಿಮಳವು ಹಸಿವಿಲ್ಲದವರಿಗೂ ಹಸಿವನ್ನುಂಟುಮಾಡುತ್ತದೆ

ಇದನ್ನು ನಿಸರ್ಗದ ಅತ್ಯುತ್ತಮ ಆಹಾರಗಳಿಂದಲೇ ಸಂಪೂರ್ಣ ಶುದ್ಧತೆಯಿಂದಲೇ ತಯಾರಿಸಲಾಗಿದೆ ಅಲ್ಪಾಯುಸ್ಥರಿಗೂ ಅನಾರೋಗ್ಯವಂತರಿಗೂ 'ಓವಲ್ಟಿನ್' ಎಂಬುದು ಅಸಮಾನವಾದ ಪಾನೀಯವಾಗಿದೆ ಅಸ್ವಸ್ಥದ ನಂತರ ದೇಹವನ್ನು ಪುನರ್ರಚಿಸುವುದರಲ್ಲಿ ಅತ್ಯಮೂಲ್ಯ ವಸ್ತುವೆಂದು 'ಓವಲ್ಟಿನ್' ಭೂಲೋಕದ ಎಲ್ಲಾ ಆಸ್ಪತ್ರೆಗಳಲ್ಲಿ ಗಣಿಸಲ್ಪಟ್ಟಿದೆ

ಅತೀ ರುಚಿಕರವಾದ 'ಓವಲ್‌ಟಿನ್ನಿಗೆ ಸರಿಸಮಾನವಾದುದು ಇಲ್ಲ ಎಲ್ಲಾ ನಕಲಿ ಟಿನ್ನುಗಳನ್ನು ತ್ಯಜಿಸಿಬಿಡಿರಿ ಅವುಗಳು ಬರೇ ಮಿಶ್ರಣ ಅವುಗಳು ಶಾಸ್ತ್ರೀಯ ರೀತ್ಯಾ ತಯಾರಿಸಲ್ಪಟ್ಟಿಲ್ಲ

ಅತೀ ಶುದ್ಧ ಅತ್ಯುತ್ತಮ ಕರಸ್ಪರ್ಶಿತವಲ್ಲ

OVALTINE
TONIC FOOD BEVERAGE

ಏಜಂಟರು— ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್ ರೈಟ್ 85ಎ ರಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಬೊಂಬಾಯಿ ಮದ್ರಾಸ್ ರಂಗೂನುಗಳಲ್ಲಿ

'ಓವಲ್ಟಿನ್' ರೊಟ್ಟಿಗಳನ್ನು ಅಶಕ್ತಿಯ ಸಮಯದಲ್ಲಿ ತಿನ್ನಬಹುದು ರುಚಿಕರ ಉತ್ತಮ ಪರಿಮಳಯುಕ್ತ ಮತ್ತು ಸೊಗಸಾಗಿದೆ ಬಿಸ್ಕೂಟುಗಳಿಗಿಂತ ಇವುಗಳು ಬಹು ಉತ್ತಮ ನಿಮ್ಮ ಓವಲ್‌ಟಿನ್ನನ್ನು ಟೀ, ಕಾಫಿ ಬೆಣ್ಣೆ, ಹಣ್ಣುಗಳೊಡನೆ ಸೇವಿಸಿರಿ

OV/65

ನೋಟೀಸು

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಉಡುಪಿ.

ಈ ಕೆಳಗೆ ಹೆಸರ ಕಾಣಿಸಿದವರು ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡದ ಸಾಲದ ಅಸಲು ಹಣ ಅಥವಾ ಬಡ್ಡಿ ಹಣ ವಾಯಿದೆಗೆ ಕೊಡದೆ ಇದ್ದ ಕಾರಣವೂ, ಅವರಿಗೆ ಕಳುಹಿಸಿದ ಟಪ್ಪಾಲು ರಿಜಿಸ್ಟ್ರಿ ನೋಟೀಸು "ಜ್ಯಾರಿಗೆ ತಪ್ಪಿಸಿಕೊಳ್ಳುತ್ತಾರೆ, ಊರಿನಲ್ಲಿ ಇಲ್ಲ, ಹಿಂದೂಸ್ಥಾನ ಬಿಟ್ಟು ಪರದೇಶಕ್ಕೆ ಹೋಗಿದ್ದಾರೆ" ಎಂಬ ವಗೈರೆ ಸಬೂಬುಗಳಿಂದ ಜ್ಯಾರಿಯಾಗದೆ ಮರತು ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಸದ್ರಿಯವರ ಬಾಬ್ತು ಈ ಕೆಳಗೆ ವಿವರಿಸಿದ ಸಾಲಗಳ ಅಸಲು, ಬಡ್ಡಿ, ವ ನೋಟೀಸುಗಳ ಖರ್ಚು ಸಹಾ ಇದೇ ಬರುವ ತಾ 20—8—'32ನೇ ಶನಿವಾರ ಅಪರಾಹ್ನ ಗಂಟೆ 2ರ ಒಳಗೆ ಬೇಂಕಿಗೆ ತಂದುಕೊಡದೆ ಇದ್ದಲ್ಲಿ ಅಡವಿಟ್ಟ ನಗಗಳನ್ನು ಇದೇ ಬರುವ ತಾ. 22—8—32ನೇ ಸೋಮವಾರ ಅಪರಾಹ್ನ ಘಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಏಲಂ ಅದೇ ದಿವಸ ಪೂರ್ಣವಾಗದಿದ್ದರೆ ನಂತರದ ದಿವಸಗಳಲ್ಲಿ ಮುಂದುವರಿಸಲಾದೀತು

ಸಾಲದ ನಂಬ್ರ 337/29 ಕೊಟ್ಟಕಾರ್ ದೇವದಾಸಪ್ಪ ಕೊಟ್ಟಕಾರ್ ಬಿಟ್ಟಪ್ಪಪ್ಪಗಳ ಮಗ, ಜಮಾನದಾರ ಬ್ರಹ್ಮಾವರ ಸಾಲದ ಮೊಬಲಗು 300—0—0 ಬಡ್ಡಿ ಬಾಕಿ ಆದ ತಾರೀಕು 16 1—'31

ಸಾಲದ ನಂಬ್ರ 82/29 ಕಾಡೂರು ರಾಮಚಂದ್ರ ಉಡುಪ, ಕೃಷ್ಣ ಉಡುಪರ ಮಗ ಕಾಡೂರು ಬ್ರಹ್ಮಾವರ ಪೋಸ್ಟ್ ಸಾಲದ ಮೊಬಲಗು ರೂ 45 ಬಡ್ಡಿ ಬಾಕಿ ಆದ ತಾ 9—6—'32.

ಸಾಲದ ನಂಬ್ರ 167/31 ಕಡೇಕಾರ ಶೀನಪ್ಪಶೆಟ್ಟಿ, ದಾಬ ಶೆಟ್ಟಿ ಮೊಮ್ಮಗ, ಕಡೇಕಾರು ಉಡುಪಿ ಪೋಸ್ಟ್ ಸಾಲದ ಮೊಬಲಗು ರೂ 60 ಬಡ್ಡಿ ಬಾಕಿ ಆದ ತಾರೀಕು 4—10—31

ಸಾಲದ ನಂಬ್ರ [illegible]1/31 ಗ್ರೆಗರಿ ಕೋಡ್ರಾ, ಜಾಕಿನ್ ಕೋಡ್ರರ ಮಗ ಕೆಮ್ಮಣ್ಣು ಪೋಸ್ಟ್ ಪಡುತೋನ್ಸೆ ಸಾಲದ ಮೊಬಲಗು ರೂ 30 ಬಡ್ಡಿ ಬಾಕಿ ಆದ ತಾರೀಕು 20—10—31

ಸಾಲದ ನಂಬ್ರ 633/31 ಕುತ್ಯಾರ ಮುದ್ದಣ್ಣ ಶೆಟ್ಟಿ, ರಾಮಯ್ಯ ಶೆಟ್ಟಿ ಅಳಿಯ ಕುತ್ಯಾರು ವಿದ್ಯಾದಾಯಿನಿ ಶಾಲೆಯ ಉಪಾಧ್ಯಾಯರು, ಶಿರ್ವ ಪೋಸ್ಟ್ ಸಾಲದ ಮೊಬಲು ರೂ. 26 ಬಡ್ಡಿ ಬಾಕಿ ಆದ ತಾ 8—9—'31

ಸಾಲದ ನಂಬ್ರ 143/29 ಪೌಲ್ ಕರ್ನೆಲ್, ಕೈಕ, ಶಿವಳ್ಳಿ ಕಕ್ಕುಂಜೆ ಗ್ರಾಮ, ಕಲ್ಯಾಣಪುರ ಪೋಸ್ಟ್ ಸಾಲದ ಮೊಬಲು ರೂ. 26—8—0 ಬಡ್ಡಿ ಬಾಕಿ ಆದ ತಾರೀಕು 7—3—'32

ಸಾಲದ ನಂಬ್ರ 262/32 ಬಿ. ಹೂವಪ್ಪ ಬಿ. ವೀಕ್ಷರಯ್ಯನವರ ಮಗ, ಪೋಲೀಸ್ ಕೊನ್ಸಟೇಬಲ್, ನಂಬ್ರ 665 ಪೋಲೀಸ್ ಸ್ಟೇಶನ್ ಉಡುಪಿ, ಸಾಲದ ಮೊಬಲಗು ರೂ—25 ಬಡ್ಡಿ ಬಾಕಿ ಆದ ತಾರೀಕು 25—4—'32.

ಬೇಂಕಿನ ಆಫೀಸು ಉಡುಪಿ,
28—7—1932

P. Lakshman Nayak,
ಸೆಕ್ರೆಟರಿ.

ಅಳುವ ಮಗು—ಇದೆಂತಹುದು?

The Crying Child—What is it?

ಒಂದು ಮಗುವಿತ್ತಂತೆ— ಅದಕ್ಕೆ ಒಂದೇ ರೋಗವಂತೆ ಯಾವಾಗಲೂ ಕೂಗುವುದಂತೆ—ತಾಯಿ ಮೊಲೆ ಕೊಟ್ಟರೂ ಅದು ಕೂಗುವುದಂತೆ—ತಂದೆ ಗಾಡಿಯಲ್ಲಿ ಕುಳ್ಳಿರಿಸಿ ತಿರುಗಾಡಿಸಿದರೂ, ಅದು ಅರ್ಭಟಿಸುವುದಂತೆ—ದಾದಿ ತೊಟ್ಟಿಲಲ್ಲಿಟ್ಟು ತೂಗಿದರೂ ಅದು ಬೊಬ್ಬಿಡುವುದಂತೆ— ಕೂಗುವುದಂತೆ — ಕೂಗುವುದಂತೆ ಕೂಗುವುದಂತೆ

+ + + +

ಇದೇನು ಬಾಲಗ್ರಹವೆಂದು ತಂದೆತಾಯಿಗಳು ಜೋಯಿಸನೊಡನೆ ಕೇಳಿದರಂತೆ! ಜೋಯಿಸನೆಂದನಂತೆ "ಇದಕ್ಕೆ ಬೇಕಾದುದು ಒಂದು ಹರಕೆ" ಎಂದನಂತೆ

× × × ×

ಹೆತ್ತವರು ಒಂದು ಹರಕೆ ಹೇಳಿಕೊಂಡರಂತೆ— ಮಗುವನ್ನು ಸಮಾಧಾನಪಡಿಸಿದರಂತೆ ಆದರೆ ಅಂತೆ— ಮಗುವು ಮಾತ್ರ ಕೂಗುತ್ತಾ ಇತ್ತಂತೆ ಭಾರೀ ಬೊಬ್ಬೆಯಂತೆ!

+ + + ×

ಮಗುವಿಗೆ ಭಾಷೆ ಕೊಟ್ಟರಂತೆ "ಮಗೂ, ನಿನಗೆ ಬೇಕಾಗುವುದನ್ನು ಕೊಡುತ್ತೇನೆ" ಎಂದು ಮಗುವು ಒಮ್ಮೆ ಶಾಂತಿಯಾತಂತೆ! ಆದರೆ ಸ್ವಲ್ಪ ದಿನಗಳಲ್ಲಿ ಪುನಹ ಅಳಲಾರಂಭಿಸಿತಂತೆ.

+ + + +

ಕೊನೆಗೆ ಮಗುವಿನ ಉಪಟಳವನ್ನು ತಡೆಯಲಾರದ ತಂದೆತಾಯಿಗಳು ಪರಪೂರಿನಿಂದೊಂದು ಕಮಿಶನನ್ನು ತರಿಸಿ ಮಗುವನ್ನು ಪರೀಕ್ಷಿಸಿದರಂತೆ ಲಕ್ಷಗಟ್ಟಳೆ ಹಣ ಸೀಲುಹಾಲಾಯಿತಂತೆ ನಾಡಿ ನೋಡಿದ ಕಮಿಟಿಯವರೆಂದರಂತೆ 'ಮಗುವಿಗೆ ಸ್ವತಂತ್ರ್ಯರೋಗದ ಮಹಾ ಬಾಲಗ್ರಹ!'

+ + + +

ಬಂದ ಕಮಿಶನು ಕಮಿಟಿಗಳು ಹಿಂದೆ ನಡೆದುವಂತೆ—ಬಂದ ಜೋಯಿಸರು ಕಾಲನ್ನು ಹಿಂದಿಟ್ಟರಂತೆ ಮಗುವು ಮಾತ್ರ ಕೂಗುತ್ತಾ ಇತ್ತಂತೆ

× × + +

ಕೊನೆಗೆ ಮಗುವಿನ ತಂದೆಯು ಒಂದು ಲಾಠಿಯನ್ನು ತೆಗೆದುಕೊಂಡನಂತೆ—ತಾಯಿಯು ಬೇಡವೆಂದರೂ ತಂದೆಯು ಮಗುವಿಗೆ ಬಧ ಬಧಾ ಹೊಡೆದನಂತೆ ಆದರೆ ಆಶ್ಚರ್ಯದಲ್ಲೊಂದು ಮಹದಾಶ್ಚರ್ಯ! ಇದರಲ್ಲೊಂದು ಚಿಕಲಾಟ— ಮಗುವು ಮಾತ್ರ ಆ ಲಾಠಿಯ ಪೆಟ್ಟಿನಿಂದಲೂ ಸಾಯಲಿಲ್ಲವಂತೆ!

+ + + +

ಅದು ಕೂಗುತ್ತಾ ಅಳುತ್ತಾ ಅಳುತ್ತಾ—ಕೂಗುತ್ತಾ ಇತ್ತಂತೆ

× × × ×

ಆ ಮೇಲೆ ಆ ಮಗುವನ್ನು ಕತ್ತಲೆಯ ಕೋಣೆಯಲ್ಲಿ ಹಾಕಿದರಂತೆ ಅದಕ್ಕೆ ಸರಿಯಾದ ಆಹಾರವನ್ನೂ ಕೊಡಲಿಲ್ಲವಂತೆ—ಮಗು ಮಾತ್ರ ಅಳುತ್ತಾ ಇತ್ತಂತೆ! ಈ ಮಗುವು ಇದರ ರಕ್ಷಕರಿಗೆ ದೊಡ್ಡ ಸಂಕಟವಾಯಿತಂತೆ!

× × × ×

ಕೆಲವು ಬುದ್ಧಿವಂತರನ್ನು ಕರೆದು ಒಂದು 'ರೌಂಡ್ ಟೇಬಲ್' ಮಾಡಿಸಿ ಅದರ ಸುತ್ತಲೂ ಅವರನ್ನು ಕುಳ್ಳಿರಿಸಿ, ತಂದೆತಾಯಿಗಳು ಆಲೋಚಿಸಿದರಂತೆ 'ಮಗುವಿನ ಬಾಯಿಗೊಂದು ಬೀಗ ಹಾಕಬೇಕೆಂದು ನಿರ್ಧಾರವಾಯಿತಂತೆ'—ದೊಡ್ಡ ಬೀಗ ಮಾಡಿದರಂತೆ

× × × ×

ಮಗುವಿನ ಬಾಯಿಗೆ ಆ ಬೀಗವನ್ನು ಹಾಕಿದರಂತೆ—"ಮುಗಿಯಿತು ಸಂತೆ!" ಎಂದರಂತೆ ಆದರೆ ಅದೆಂತಹ ಮಗುವೋ? ಅದು ಏಕ್ ದಮ್ ದಮ ಕಟ್ಟಿ ಕೂಗುತ್ತಾ ಇತ್ತಂತೆ — ಬೊಬ್ಬಿಡುತ್ತಾ ಇತ್ತಂತೆ

× + + +

ಒಂದು ದಿನ ಹೋರಾಶಾಸ್ತ್ರಿಗಳೆಂಬವರು ಮಗುವಿಗೆ ಮದ್ದರೆದರಂತೆ! ಮೆಣಸಿನ ಮುದ್ದೆ ಮಾಡಿದರಂತೆ—ಮಗುವಿನ ಕಣ್ಣಿಗೆ ಇಟ್ಟರಂತೆ—ಆದರೆ ಮಗುವು ಸುಮ್ಮನಿರುವ ಬದಲಿಗೆ ಬಹಳ ಗಟ್ಟಿಯಾಗಿ ಅತ್ತು ಬಿಟ್ಟಿತಂತೆ—ಅದರ ಬೊಬ್ಬೆಯು ಹಬ್ಬೆಯ ಬೊಬ್ಬೆಗಿಂತಲೂ ವಿಪರೀತವಾಯಿತಂತೆ

+ × × ×

ಮೆಣಸನ್ನಿಟ್ಟ ಕೈಯನ್ನು ಮಿಸ್ಟರ್ ಹೋರಾಶಾಸ್ತ್ರಿಗಳು ಒರಸಿಕೊಳ್ಳಲು ಮರೆತರಂತೆ ಕಣ್ಣಿಗೊಂದು ಕಸಬಿತ್ತೆಂದು ಮೆಣಸಿದ್ದ ಕೈಯನ್ನು ಕಣ್ಣಿಗಿಟ್ಟರಂತೆ—ಉರಿಯಿತಂತೆ. ಅವರೂ ಬೊಬ್ಬಿಡಲಾರಂಭಿಸಿದರಂತೆ

+ + + +

ಇತ್ತ ಮಗುವೂ, ಬಂದ ಶಾಸ್ತ್ರಿಗಳೂ ಕೂಗುತ್ತಿರುವುದನ್ನು ಕಂಡು, ಸಭಾಸದ ನಿಂತವರೂ ಕೂಗಿದರಂತೆ, ಸತ್ಯಾಗ್ರಹಿಯೆಕ್ಕರಂತೆ ಕೆಲವು ಅತಿಥಿಗಳು ಈ ಕೂಗಾಟವನ್ನು ಕಂಡು ನಾವೂ ಓಡುವೆವೆಂದು ಓಡಿದರಂತೆ — ತಹಶೀಲನೆಂದರಂತೆ

× × × ×

ಅಬ್ಬಾ! ಕೂಗುವ ಮಗು!! ಇದೆಂತಹುದು?

'ಧೂಮಕೇತು'

THE SOUTH INDIA
CO-OPERATIVE INSURANCE SOCIETY,
LIMITED MADRAS

LOCAL BOARD:—

THE SOUTH CANARA CENTRAL
CO-OPERATIVE BANK LTD MANGALORE

Applications are invited for Sub Agents from capable and energetic persons and Co-operative Institutions to canvas business on behalf of the Local Board of the Society at Mangalore

FOR TERMS APPLY TO —

The Secretary,
South Canara Central Co operative
Bank Ltd, KODIALBAIL P O (Mangalore)
SOUTH CANARA

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ
(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ನಾಡಿಕೆಯಾದ ಎಲ್ಲಾ ತರದ ವಹಿವಾಟು [illegible] ನಡೆಯುವಲ್ಲದು [illegible] ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು

ಎಂ ಮುಕ್ಯಪ್ರಾಣಭಟ್ಟ ಪ್ರೊಪ್ರೈಟರ್

ಅಚ್ಚಿನಲ್ಲಿದೆ! **ಅಚ್ಚಿನಲ್ಲಿದೆ**
ಇದೇ ತಿಂಗಳ [illegible] ಪ್ರಕಟವಾಗುವುದು

ಅಭಿನಯಗೀತಾವಳಿ
(ಶ್ರೀ ಜಿ ಎನ್ ಲಕ್ಷ್ಮಣಪ್ಪ ವಿರಚಿತ)
ಕ್ರಯ ೦—೩—೬ ಕ್ರ[illegible] ೦—೩—೬

ಚಿಕ್ಕ ವ [illegible] ಸಂಗೀತಜ್ಞರು [illegible] ಗಾರ್ಟನ್ [illegible] ಪುಸ್ತಕ [illegible] ದೆಂದರೆ [illegible]

ನಮ್ಮ ಇತರ ಪುಸ್ತಕಗಳು—

ಸಚಿತ್ರ ಕನ್ನಡ ಪದ್ಯರತ್ನಾವಳಿ
3, 4, 5ನೆ ದರ್ಜೆಗಳ [illegible] } ೦—೩—

ಕೀರ್ತನಾಂಜಲಿ
(ಉತ್ತಮ ಭಜನೆಗೀತ [illegible]) } ೦—೩—೦

ಹರಿಹರ ಛಾಪಖಾನೆ, ಮತ್ತು ಪುಸ್ತಕಾಲಯ,
[illegible]

ತಂಬಾ
ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ?
ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿ
ಯನ್ನು ತೆಗೆದುಕೊಳ್ಳಿರಿ
ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ
ಬರೆದುಕೊಳ್ಳಿರಿ

Wanted.
Agents for 'Swadeshabhimani' throughout the South Kanara District and elsewhere.
Apply Sharp — You are sure to secure substantial Commission

MANAGER,
Swadeshabhimani,
Mangalore.

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.
Head Office — **MANGALORE**
Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal Kasargod, Cochin, Udipi Gangolli Coondapur, Bombay Puttur Calicut & Alleppey**
ಬ್ರಾಂಚುಗಳು —
ಕಾರ್ಕಳ, ಕಾಸರಗೋಡು ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲಪೆ

Authorised Capital 10 00000—0—0
Issued & paid up Capital 300 000—0 0
Reserve and other sinking Funds Rs 526 000 0 0
Amount invested on G P Notes Rs 1210 092—12 0
Rates of interest on fixed deposits at Head Office and Branches are 6% for 2 Years 5½% 1 Year

ಅಧಿಕೃತ ಶೇರುಗಳಲ್ಲಿ ಮೂಲಧನ ರೂ 10 00 000—0—0
ಚಂದಾ ಪಾವತಿ ಮತ್ತು ಮಾರಲ್ಪಟ್ಟ [illegible] 0—0
ರಿಸರ್ವ ಫಂಡ್ [illegible] 0—0
ಗವರ್ನಮೆಂಟ್ ಪ್ರಾಮಿಸರಿ ನೋಟು [illegible] 1 192—12
[illegible] ಬಡ್ಡಿ
[illegible] 2 [illegible]

Current Account Deposits received and interest allowed on daily balance of Rs 50 and above that on multiples of Rs 10 @ 3% from 1st January to 30th June and @ 2% from 1st July to 31st December No interest will be allowed unless the deposit amounts to not less than Rs 5/ during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000/ in the case of Head Office and Cochin Branch and on sums not exceeding Rs 15 000 in the case of Bombay Branch and on sums exceeding Rs [illegible] 000 in the case of other Branches

For further particulars please apply to

Office of the Bank,
Mangalore 17—6—932

K Venkat Rao,
Secretary & Treasurer

The Pangal Nayak Bank, Ltd.

Head Office Udipi, — *Established 19[illegible]* — **Branch Office Mangalore**

Authorised Capital Rs 2 00 000
Issued Capital Rs 1 75,000
Paid up Capital Rs 1 75 000-
Reserve and other Funds Rs 1,80 000

NOTICE.

Advances on pledge of Gold are made at 8

Fixed deposits received at following rates

3 months 4½ — 6 and 9 months 5
1 year and above 5½ — 2 years [illegible]

(By order)

Office of the Bank
Udipi 1—7—32

P Laxman Nayak,
Secretary

ಈ ಹೊಸ ಗ್ರಂಥಗಳನ್ನು ನೋಡಿರುವಿರಾ?

ಕಾಮದ ಗಟ್ಟಿ—[illegible] ವಿದ್ವಾನ್ [illegible] ಲಕ್ಷ್ಮಣ [illegible] ಉಪಯುಕ್ತವಾದ ಕಾಮಶಾಸ್ತ್ರ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ [illegible] ಮಾತ್ರ

ಪ್ರಳಯ ತಾಂಡವ—(ಸಚಿತ್ರ) ಶ್ರೀ [illegible] ಚಿತ್ರ [illegible] ಪ್ರಕಟವಾಗಿದೆ ಉಚ್ಚ ಧಾವ[illegible] ಬೆಲೆ [illegible] ಪ್ರತಿ [illegible] ೧

ಹೊಸಹುಟ್ಟು—ಶ್ರೀ [illegible] ಕಾಗದದ ಮೇಲೆ [illegible] ಪುಟಗಳಿವೆ ಬೆಲೆ ೧ ರೂಪಾಯಿ

ವೈದ್ಯರಾಜ —(ಸಾಮಾಜಿಕ ನಾಟಕ) ಪ್ರೊ[illegible] ಕೃತ ಬೆಲೆ ೧ ರೂಪಾಯಿ

ಮೋಹನಾಸ್ತ್ರ—(ಸಾಮಾಜಿಕ ನಾಟಕ) ಪಂಡಿತ ತಾರಾನಾಥ ಕೃತ ಬೆಲೆ ೧ ರೂಪಾಯಿ

ನವಜೀವನ ಗ್ರಂಥ ಭಂಡಾರದ ಅನುಪಮ ಗ್ರಂಥಗಳು

೧ **ಆಕಾಶದೊಳಗಿನ ಅದ್ಭುತ ಚಮತ್ಕಾರಗಳು** (ಪ್ರೊ [illegible]) ೧—೨—೦
೨ **ಧರ್ಮ ಸಂಭವ** (ಪಂಡಿತ ತಾರಾನಾಥರಿಂದ) ೧ ೪—೦
೩ **ಹಿಂದೂಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು** (ಶ್ರೀ [illegible]) ೧—೨ ೦

ಹೆಚ್ಚಿನ ವಿಷಯಗಳಿಗೆ ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ

ವಿ. ಜಿ.ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ಅಖಿಲಭಾರತದ ಸಂಯೋಜನೆಯು

ಸುಲಭಸಾಧ್ಯವೇ ಅಲ್ಲ. ಮೂರು ಕಮಿಟಿಗಳು ಸೇರಿ ಬರೆದ ರಿಪೋರ್ಟನ್ನು ಓದಿದರೆ, ಕಮಿಟಿ ಮೆಂಬರರು ಒಳ್ಳೇ ವಿದ್ಯಾಭ್ಯಾಸ ಪಟ್ಟವರೆಂದೂ, ಇಂಗ್ಲಿಷು ಬರೆಯಬಲ್ಲವರೆಂದೂ ಮಾತ್ರ ಹೇಳಬಹುದಲ್ಲದೆ ಈ ರಿಪೋರ್ಟುಗಳು ಹೆಚ್ಚಿನ ಉಪಯೋಗಕ್ಕೆ ಕಾರ್ಯತಃ ಬೀಳುವಂತಿಲ್ಲ. ಏಕೆಂದರೆ ವಸ್ತುಸ್ಥಿತಿಗೂ ಈ ರಿಪೋರ್ಟುಗಳಲ್ಲಿ ಬರೆದಿರುವುದಕ್ಕೂ ಅಜಗಜಾಂತರವಿದೆ. ಎಂತಹ ರಾಜ್ಯಭಾರವನ್ನು ಯಾರಿಗೆ ತರಬೇಕೆಂದರೂ ಅದರಲ್ಲಿ ವಾಸ್ತವ ವಿಶ್ವಾಸದಿಂದ ಅದನ್ನು ಅಂಗೀಕರಿಸಿ ನಡೆಸ್ಕೆ ಬರುವ ಹಿಂವೀಯರು ದೊರೆಯಬೇಡವೇ? ಹಾಗಿಲ್ಲದಿರುವಾಗ ಈಗಣ ದ್ವಿಮುಖೀ ರಾಜ್ಯಭಾರದಲ್ಲೇನು ಕಡಿಮೆ? ಈ ಸಂಯೋಜನೆಯಲ್ಲಿ ಹೆಚ್ಚಿನದೇನು? ಕಮಿಟಿಗಳು ಕೆಲವು ಅಂಕೆಸಂಖ್ಯೆ ಕೂಡಿಸಿಕೊಟ್ಟಿವೆ, ನಿಜ, ಆದರೆ ಕಟ್ಟೋಣ ರಚಿಸುವುದೆಲ್ಲಿ? ಸಾಹಾರಾ ಮರುಭೂಮಿಯಲ್ಲಿ ಇಂದ್ರಭವನ ಕಟ್ಟುವುದುಂಟೆ?

ಸ್ವರಾಜ್ಯಕ್ಕೆ ಯೋಗ್ಯರು ಯಾರು?

ಕಳೆದ ಯುದ್ಧಕಾಲದಲ್ಲಿ ಸೇವೆಮಾಡಿದ ೨೦,೦೦೦ ಸೈನಿಕರು ಈಗ ನಿರುದ್ಯೋಗಿಗಳಾಗಿ ಬಾಳುವುದು ಕಷ್ಟವೆಂದು, ನಾನ್ನೂರು ಮಿಲ್ಲಿಯ ಡೊಲ್ಲರು ಬಹುಮಾನ ದ್ರವ್ಯ ಕೊಡದೆ ೧೯೪೫ರ ವರೆಗೂ ಮನೆಗೆ ಮರಳುವುದಿಲ್ಲೆಂದು ಯುನೈಟೆಡ್ ಸ್ಟೇಟ್ಸಿನ ಅಧ್ಯಕ್ಷರ ಅರಮನೆಯ ಮುಂಭಾಗದಲ್ಲಿ ಸತ್ಯಾಗ್ರಹ ಹಿಡಿದು ಸುಮಾರು ವಾರಗಳಿಂದ ಕೂತಿರಲು,—ಅಧ್ಯಕ್ಷರು ಕೂಡಲೆ ಇವರನ್ನು ಚದರಿಸ ಹೇಳಿದರು. ಅವರು ಪೋಲೀಸರಿಗೆ ಕಳ್ಳಿಸಿದರು. ಕೂಡಲೆ, ಸೈನಿಕರು 'ಮೆಶಿನ್' ಗನ್ ತೋಪಿಗಳನ್ನು ತಂದು, ಗುಂಡುಹಾರಿಸಿದರು. ಕಣ್ಣೀರು ಹೊರಡಿಸುವಂತಹ ಉರಿಯುವ ಹೊಗೆಯನ್ನು ಉಂಟುಮಾಡುವ ಬೊಂಬುಗಳನ್ನು ಎಸೆದು, ಈ ಮಾಜಿ ಸೈನಿಕರ ಹಿಂಡನ್ನೆಲ್ಲ ಚದರಿಸಿಬಿಟ್ಟರು. ಅವರು ಅಲ್ಲಿ ಇರಲು ಕಟ್ಟಿಕೊಂಡಿದ್ದ ಹಂಗಾಮಿ ಗುಡಿಸಲುಗಳೂ ಸುಟ್ಟುಹೋದುವು. ಈ ಗಲಾಟೆಯಲ್ಲಿ ಮಾಜಿ ಸೈನಿಕರಲ್ಲಿ ಒಬ್ಬನು ಮಡಿದು ಆರು ಮಂದಿಗೆ ಗಾಯಗಳಾದುವು, ಪೋಲೀಸರಲ್ಲೂ ಮೂವರಿಗೆ ಗಾಯಗಳಾದುವು. ಅಮೇರಿಕಾ ಚಕ್ರಾಧಿಪತ್ಯದ ಅಧ್ಯಕ್ಷರ ಅರಮನೆಯ ಎದುರಲ್ಲಿಯೆ Law and Order ಕಾನೂನು ಕ್ರಮ ಮೀರಿ ನಡೆವ ಪ್ರಖ್ಯಾತ ಸೈನಿಕರಿರುವರಾದರೆ,—ಹೀಗೆ ಇದ್ದರೇನೆ ಅಮೇರಿಕವು ಸ್ವರಾಜ್ಯಕ್ಕೆ ಯೋಗ್ಯವಾಗಿದೆ ಎಂದೆನ್ನಲು ಕಾರಣವೆ?

ದೇವರು ಕೈಬಿಟ್ಟ ಮೇಲೆ?

ಪಾರ್ಲಿಮೆಂಟಿನ ಸದಸ್ಯರಾದ ಲೆನ್ಸಬರಿಯವರು ಕ್ರೈಸ್ತ ಧರ್ಮ ಸಂಪ್ರದಾಯಗಳ ಮುಖ್ಯ ಗುರುಗಳನ್ನು ಕುರಿತಾಗಿ,—ಇಂಗ್ಲೆಂಡು ಐರ್ಲೆಂಡುಗಳೊಳಗೆ ಈಗ ಉಂಟಾಗಿರುವ ಆರ್ಥಿಕ ವೈಷಮ್ಯವನ್ನು ಹೋಗಲಾಡಿಸಲು ದೈವಿಕ ಹಾಗೂ ಧಾರ್ಮಿಕ ಶಕ್ತಿಯು ಉಪಯೋಗವಾಗುವಂತೆ ಪ್ರಯತ್ನಿಸಬೇಕೆಂದು ಅರಿಕ ಮಾಡಿದರು. ಕ್ರೈಸ್ತಧರ್ಮದ ಪ್ರಾಬಲ್ಯವೆಂಬುದು ಉಂಟೇ? ಎಂಬುದನ್ನು ಉತ್ತರಿಸುವುದಕ್ಕೆ ಈ ಧರ್ಮಾಧಿಕಾರಿಗಳು ಕೊಟ್ಟಿರುವ ಉತ್ತರಗಳೇ ಸಾಕು. "ಮಾಡಲಿಕ್ಕಿರುವುದನ್ನೆಲ್ಲ ಮೆಕ್ ಡೊನಾಲ್ಡರು ಮಾಡಿ ಆಗಿದೆ, ಡಿವೆಲರು ವಿವೇಕವನ್ನು ತಳೆಯಲಿಲ್ಲ' ಎಂದು ಕೆಂಟರ್ಬರಿಯ ಆರ್ಚ ಬಿಷಪರ ಸೂಚನೆ. 'ಈಗಣ ಪರಿಸ್ಥಿತಿಯಲ್ಲಿ ಧರ್ಮಸಂಸ್ಥೆಗಳು ಇದರಲ್ಲಿ ಕೈಯಿಕ್ಕುವುದು ಸರಿಯಲ್ಲ" ಎಂದು ಫ್ರೀಚರ್ಚ ಪಂಗಡಗಳ ಧರ್ಮಾಧಿಕಾರಿಗಳ ಅಭಿಪ್ರಾಯ. ಪ್ರಾಮುಖ್ಯ ಯೆಹೂದ್ಯರಬ್ಬಿಗಳು "ನಾನೇನು ಮಾಡಿದರೂ ಶಾಂತಿ ಉಂಟಾಗುವುದು ಹೇಗೆ? ಎಂದು ಒರೆದರು. ಅಂತು ಈ ಮೂವರೂ ದೈವಿಕ ಅಥವಾ ಧಾರ್ಮಿಕ ಶಕ್ತಿಯನ್ನು ಪ್ರಯೋಗಿಸಲು ದುರ್ಬಲರು. ನಿಜವಾಗಿಯೂ ವಿವೇಕಿಗಳೆಂದರೆ ಪೋಪಸ್ವಾಮಿಯವರು, ಅವರು ನಿರುತ್ತರರಾಗಿ ಭಗವನ್ನಾಮಸ್ಮರಣೆ ಮಾಡುತ್ತಿರುವರು. ದೇವರು ಇವರಲ್ಲಿ ಯಾರಿಗೆ ಸಿಗುವರು?

ಬಂಗಾಳದ ಗವರ್ನರರು

ಬಂಗಾಳದ ಸದ್ಯಸ್ಥಿತಿ ಯಾವುದೋ ಅಂತಹ ಸ್ಥಿತಿಯಲ್ಲಿ ಐರ್ಲೆಂಡು ಇದ್ದಾಗ ಅಲ್ಲಿ ಮಿಲಿಟರಿ ಅಧಿಕಾರಿ ನಡೆಸಿದವರು, ಬಂಗಾಳದ ಪೋಲೀಸ ಫೌಜನ್ನು ಮೊನ್ನೆ ಕೊಂಡಾಡುತ್ತಾ ಅವರು ಐರ್ಲೆಂಡಿನಲ್ಲಿ ತಮ್ಮ ಕೈಕೆಳಗಿದ್ದ ಪೋಲೀಸ ಫೌಜಿನೊಡನೆ ಇವರನ್ನು ಹೋಲಿಸಿದಾಗ, ಪೋಲೀಸರು ಬಹುಶಃ ತಮ್ಮನ್ನು ಕೊಂಡಾಡಿದರೆಂದು ಹಿಗ್ಗಿದರೇನೋ! ಆದರೆ, ಐರ್ಲೆಂಡಿನಲ್ಲಿ ಆ ಪೋಲೀಸರೆಂದರೆ ಕ್ರೂರತನ ದಬ್ಬಾಳಿಕೆ ಅತ್ಯಾಚಾರಗಳಿಗಾಗಿ ಕೀರ್ತಿಶೇಷರಾದವರೆಂದು ಇವರಿಗೆ ಗೊತ್ತಿರಲಿಕ್ಕಿಲ್ಲ. ಪೋಲೀಸರ ಮೇಲೆ ಎಷ್ಟೋ ದೂರುಗಳು ಒರುತ್ತಿವೆ; ಅವರನ್ನು ಇಲಾಖೆಯ ಮೂಲಕ (ಬಹಿರಂಗವಾಗಿ ಪ್ರಜೆಗಳ ಹೇಳಿಕೆಯಿಂದಲ್ಲ) ವಿಚಾರಿಸಿದ್ದಲ್ಲಿ, ನಿರಾಧಾರವಾದ ದೂರುಗಳೆಂದು ಗವರ್ನರರು ತಿಳಿಯುತ್ತಾರೆ. ಮದ್ರಾಸು ಕೌನ್ಸಿಲಿನಲ್ಲಿ ಇದುವರೆಗೂ ನೂರಾರು ದೂರುಗಳು ಇವೇ ಬಗೆಯಾಗಿ ನಿರಾಧಾರವಾಗಿವೆ ಎಂದು ಸರ್ ಮಹಮ್ಮದ್ದುಸ್ಮಾನರು ಹೇಳಿದ್ದುಂಟು. ಇಲಾಖಾ ಮುಖಾಂತರ ಪೋಲೀಸರು ನಿರಪರಾಧಿಗಳೆಂದಲ್ಲದೆ ಬೇರೆ ನಿರ್ಧಾರ ಮಾಡಲು ಆಧಾರಗಳು ಸಿಗುವುದು ಕಷ್ಟತರವೇ. ಆದರೂ ಈಗ ಗವರ್ನರರು ಹೇಳುತ್ತಾ —'ತಮ್ಮ ಕೆಳ ನೌಕರರನ್ನು ಕಾಪಾಡುವ ಭಾರವು ಸರಕಾರಕ್ಕಿದೆ ನಿಜ, ಇದು ಕಾರಣವೇ, ಪ್ರಜೆಗಳ ಕಡೆಗೂ ತಮ್ಮ ಫೌಜಿನ ಗೌರವದ ಕಡೆಗೂ ಪೋಲೀಸರು ವಿಶೇಷ ಜವಾಬುದಾರಿಯಿಂದ ನಡೆಯತಕ್ಕದಾಗಿದೆ. ಅಂತಹ ಜವಾಬುದಾರಿಯನ್ನು ಅವರು ಕಳೆದುಕೊಂಡರೆ ಅವರನ್ನು ಖಂಡಿತ ದಂಡಿಸಬೇಕಾಗುತ್ತದೆ. ನೆನಪಿರಲಿ' ಪ್ರಜೆಗಳ ಕೇಳಿಕೆಯೂ ಇಷ್ಟೇ ಇರುವುದು, ಅನ್ಯಾಯ ಮಾಡಿದವರು ದಂಡನೆಗೆ ಒಳಗಾಗಬೇಕು.

ಬಿಹಾರದ 'ಕಂಟ್ರೀ ಲೀಗ್'

ಎಂಬುದು ಕೃತಜ್ಞತಾ ಬದ್ಧರಾದ ರಾಜಭಕ್ತರ ಸಂಘ. ಯಾವಾಗಲೂ ಈ ಜಮೀನ್ದಾರರೇ ಮೊದಲಾದವರು, ಸರಕಾರಕ್ಕೆ ಅನಾವಶ್ಯಕವಾಗಿಯೇ, ಆದರೂ ತಮ್ಮ ಭಕ್ತಿಯನ್ನು ಒಪ್ಪಿಸಿ ಠರಾವು ಬರೆವುದರಲ್ಲಿ ಅಗ್ರಗಣ್ಯರು. ಹೋರು ಹೊಸ ಕ್ರಮಗಳ ಕುರಿತು ಇಂಡಿಯವೆಲ್ಲವೂ ಅಸಂತೃಪ್ತಿ ತೋರಿಸುವಾಗ, ಇವರು ಸುಮ್ಮನಿರಲಾದೀತೆ? ಇವರು ಹೋರರಿಗೆ ಒಂದು ನಿರ್ಣಯವನ್ನು ಮಂಜೂರಿ ಮಾಡಿ ಕಳುಹಿಸಿರುವರು. 'ಈಗ ಉಂಟಾಗಿರುವ ಇಕ್ಕಟ್ಟನ್ನು ದೂರಗೊಳಿಸುವುದಕ್ಕಾಗಿ ಹೇಗೂ ಒಂದು ಉಪಾಯವನ್ನು ಹುಡುಕಬೇಕಲ್ಲವೇ? ಹಾಗೆ ಮಾಡಿ, ನಮ್ಮ ಲೀಗಿನ ಕೆಲವು ಪ್ರತಿನಿಧಿಗಳನ್ನು ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯೊಡನೆ ಕೂತುಕೊಳ್ಳಲು ಕರೆಯಿರಿ, ಬೇರೊಂದು ಕೊನ್ಫರನ್ಸನ್ನು ಕೂಡಿಸುವಿರಾದರೂ ನಮ್ಮ ಕೆಲವು ಪ್ರತಿನಿಧಿಗಳನ್ನು ಕರೆದುಕೊಳ್ಳಿರಿ!' ಠರಾವುಗಳು ಹೀಗಿರಬೇಕು. ಹೇಗೂ ಮಾಡಿ ಭಕ್ತಿಪ್ರದರ್ಶನದಿಂದ ಬೆಂಬಲಕ್ಕೆ ನಿಂತುದರ ಸಂಬಳವಾಗಿ, ತಮ್ಮಲ್ಲಿನ ಕೆಲವರನ್ನು ಪ್ರತಿನಿಧಿಗಳನ್ನಾಗಿ ಇಂಗ್ಲೆಂಡ ಯಾತ್ರೆಗೆ ಕರೆಸಿಕೊಂಡರೆ, ಎಲ್ಲವೂ ತೃಪ್ತಿಕರವಾಗಿ ಸಾಗುವುದೆಂದು ಇವರ ವಿಶ್ವಾಸ. ರೀತಿ ಯಾವುದೂ ಇರಲಿ, ತಿದ್ದುಪಾಟುಗಳು ಆಗಲಿ ಹೋಗಲಿ, ಆದರೆ, ಇವರಲ್ಲಿ ಕೆಲವರು ಲೋಕನಾಯಕರಾಗಿ ಸರಕಾರದ ಖರ್ಚಿನಿಂದ ಲಂಡನ್ ಸಂಚಾರಮಾಡಿ ಬಂದರೆಂದರೆ ಎಲ್ಲವೂ ತೃಪ್ತಿಕರ! 'ಲೀಗ್' ಎಂದರೆ ನಡತೆ ಹೀಗಿರಬೇಕೆ?

ಆಗೋಸ್ತಿನ ಮೂರನೆ ವಾರದಲ್ಲಿ

ಮೈನೊರಿಟಿಗಳ ಎವಾರ್ಡು! ಎಂದೀಗ ವಾರ್ತೆ. ಜೂನ್ ತಾ ೩೦ರೊಳಗೆ ಎವಾರ್ಡು ದೊರೆಯದಿದ್ದರೆ 'ಸೀದಾ ಮುಂದರಿಸುವ'ರೆಂದು ಹೇಳಿದ ಆ ಮುಸ್ಲಿಮ ಮುಖಂಡರು ಈಗ ದೇಶದಲ್ಲಿಲ್ಲವೆ? ಅವರ ಮಾತೇ ಇಲ್ಲ. ಬದಲಾಗಿ, ಅದೇ ಪಕ್ಷದ ಕೆಲವರು ಸಂಪೂರ್ಣ ಸ್ವಾತಂತ್ರ್ಯವು ಈ ದೇಶಕ್ಕೂ, ಜಂಟೀ ಪ್ರಾತಿನಿಧ್ಯವೂ ಸಿಗದಾದರೆ ತಮ್ಮ ಬಾಧೆಯೇ ಬೇರೆಯಿದೆ ಎಂದು ಒಂದು ಸ್ವತಂತ್ರ ಪಕ್ಷವನ್ನು ಮಾಡಿಕೊಂಡಿದ್ದಾರೆ. ಇತ್ತ, ಕ್ರೋನಿಕಲ್‌ನಲ್ಲಿ ಎವಾರ್ಡಿನ ಲಕ್ಷಣಗಳು ಹೀಗಿರುವುವಂತೆ ಎಂದು ಪ್ರಕಟವಾದ ವಾರ್ತೆ ಕೇಳಿಯೆ, ಸಿಕ್ಖರು ತಮ್ಮ ೧೪ ಪೊಯಿಂಟುಗಳಂತೆ ಸುಧಾರಣೆಗಳಾಗದಿದ್ದಲ್ಲಿ, ಒಂದೂವರೆ ಲಕ್ಷ ಜನರು ಈ ಸಾಧನೆಗಾಗಿ ಬಲಿಯಾಗಲು ಸಿದ್ಧರೆನ್ನುತ್ತಾರೆ, ಘಜ್ನಾವಿಯವರು ತಮ್ಮ ೧೪ ಪೊಯಿಂಟುಗಳಂತೆ ಸುಧಾರಣೆ ದೊರೆಯದಿದ್ದರೆ, ಮಹಮ್ಮದ್ ಘಜ್ನಿಯ ವಂಶದವರು ಇನ್ನೂ ಇದ್ದಾರೆಂದು ಎಚ್ಚರ ಹೇಳುತ್ತಾರೆ. ಒಳಗುಟ್ಟು ನೋಡಿದರೆ, ಮುಸ್ಲಿಮರಿಗೆ ಪಂಜಾಬು, ಬಂಗಾಳಗಳಲ್ಲಾದರೂ ಶೇಕಡಾ ೫೧ರಷ್ಟು ಸ್ಥಾನಗಳು ಸಿಗುವುದು ದುರ್ಲಭವಂತೆ, ಇವರಿಗೆ ೫೧ ಬೇಕು! ಅಂತೂ, ಮಂತ್ರಿಮಂಡಲವು ತೀರ ಗೊಂದಲದಲ್ಲಿ ಬಿದ್ದಿದೆ. ಮೆಕ್‌ಡೊನಾಲ್ಡರಿಗೆ ಮುಂದೇನು ಮಾಡುವುದಕ್ಕೂ ಸೂಚಿಸುವುದಿಲ್ಲ. ಎವಾರ್ಡು ಯಾರಿಗೂ ತೃಪ್ತಿಕೊಡುವ ಹಾಗಿಲ್ಲ. ರಾಷ್ಟ್ರದ ನರಳಿಕೆಯು ಹೆಚ್ಚುವಂತೆ ಸಾಧಿಸುವವರಿಗೆ ಕಾಸಿನ ಲಾಭವೂ ದೊರೆಯುವಂತಿಲ್ಲ.

ನೋಟಗಳು.

NOTE....S

ಮದ್ರಾಸು ಕೌನ್ಸಿಲು ಸಭೆ ಕೂಡಿದ್ದೇ ತಡ; ನಮ್ಮ ಮೆಂಬರು ಭಟ್ರು ಪೋಲೀಸರ ಸದಾಚಾರಗಳನ್ನು ಕುರಿತಾಗಿ ಸ್ವಸ್ತಿವಾಚನ ತೊಡಗಿದರು. ಮೊದಲನ ಅರ್ಧ ಡಜನು ಪ್ರಶ್ನೆಗಳು ನಮ್ಮ ಜಿಲ್ಲೆಯಲ್ಲಿ ಪೋಲೀಸರ ಸದ್ವರ್ತನೆ ಕುರಿತಾಗಿಯೆ.

* * * *

ಸರ್ ಹೋರರು ಲಂಡನಿನಲ್ಲಿ, ಸರ್ ಉಸ್ಮಾನರು ಮದ್ರಾಸಿನಲ್ಲಿ—ಇಂತಹ ಪ್ರಶ್ನೆಗಳನ್ನು ಕೇಳಿದ ಕೂಡಲೇ, ತಮ್ಮ ಹಳೆ ಗಂಟೆಯನ್ನು ಹೊರ ತೆಗೆದು ಬಾರಿಸುವರು. ಅಲ್ಲಿಂದಿಲ್ಲಿಗೂ ಅಂದಿನಿಂದ ಇಂದಿಗೂ ಗಂಟೆಯ ಸ್ವರ ಒಂದೇ.

* * * *

ಸದ್ವರ್ತನ ಇಲ್ಲದೆ ಪೋಲೀಸರು ಪೋಲೀಸರೆನಿಸುವರೆ? ಹಾಗಿದ್ದರೂ, ಈ ಪ್ರಶ್ನೆಗಳನ್ನು ಕೇಳಿಯೇ, ಕೌನ್ಸಿಲಿನ ಸಮಯವನ್ನೆಲ್ಲ ಆ ಗಂಟೆಯ ಸ್ವರ ಕೇಳುತ್ತಲೆ ಕಳೆಯಬೇಕೆ? ಕೇಳಬೇಕಾಗಿರುವ ಪ್ರಶ್ನೆಗಳೇ ಬೇರೆ ಇವೆ.

* * * *

ಮದ್ರಾಸಿನಲ್ಲಿ ಸಿಕ್ಕುವ [illegible] ಕೊಂಡಚೇಳುಗಳೂ ಕಡಿಯುವ ಸುಖಗಳೂ ಇಲ್ಲಿಯ ಜೈಲುಗಳಲ್ಲಿ ಏಕೆ ದೊರೆವುದಿಲ್ಲ? ನಮ್ಮ ಜಿಲ್ಲಾ ಜೈಲು ವಾಸಿಗಳ ಸುಖಕ್ಕಿರುವ ಹಾಗೆ ಅಲ್ಲಿಂದ ಕೆಲವು ಆ ಪ್ರಾಣಿಗಳನ್ನು ಸಕುಟುಂಬವಾಗಿ ಇತ್ತ ವರ್ಗಾಯಿಸಬಾರದೇಕೆ?

* * * *

ದಿನಕ್ಕೆ ಒಂದೆರಡಾದರೂ ಮೋಟರು ಘಾತಗಳು ನಡೆದು ಮದ್ರಾಸು ತನ್ನ ಶಹರ ಹೆಸರನ್ನು ಮೆರೆಸುವಾಗ, ಇಲ್ಲಿಯೂ ಒಂದೆರಡು ಘಾತಗಳು ಉಂಟಾಗದಿದ್ದರೆ ಮಂಗಳೂರನ್ನು ಇನ್ನೂ ಶಹರೆಂದು ಕರೆವುದೂ ತಪ್ಪು, ಇಲ್ಲಿ ಮ್ಯುನಿಸಿಪಾಲಿಟಿ ಇರುವುದೂ ತಪ್ಪು,—ಈ ಪ್ರಮಾದವನ್ನು ತಿದ್ದಬಾರದೇಕೆ?

* * * *

ಇಂತಹ ಪ್ರಶ್ನೆಗಳನ್ನು ಕೇಳಿದರೆ ಏನುತ್ತರ?

ಉತ್ತರ —ಇದೆಲ್ಲ ಸರಕಾರದ ತಿಳುವಳಿಕೆಗೆ ಬಂದಿಲ್ಲ.

ಪ್ರಶ್ನೆ —ಇಷ್ಟು ಸಮಯವಾದರೂ ಇನ್ನೂ ಮಾಹಿತಿ ಪಡೆಯಲಿಲ್ಲವೇಕೆ?

ಉತ್ತರ —ಇಷ್ಟು ಸಮಯವಾದ ಬಳಿಕ ಇನ್ನೇಕೆ? ಆದರೂ ಪ್ರಾಯಿವೇಟ್ ಡಿಪಾರ್ಟಮೆಂಟಿನ ತನಿಖೆ ನಡಿಸಿ, ಬಂದ ಅಭಿಪ್ರಾಯವನ್ನು ಮೇಜಿನ ಮೇಲಿಡುವೆವು. (ಚಪ್ಪಾಳೆಗಳು.)

* * * *

ಸುಮಾರು ೧೫೦ ಮಂದಿ ಸ್ವಯಂಸೇವಕರು ಗುತ್ತಿಗೆ ವಿಲೆವಾರಿ ದಿನ ಪಿಕೆಟಿಂಗ್ ನಡೆಸಿದ್ದರ ಫಲವಾಗಿ ಕಳೆದ ವರ್ಷಕ್ಕಿಂತ ಈ ವರ್ಷ ಸರಕಾರದ ಆದಾಯವು ನಮ್ಮ ಊರಲ್ಲೇ ೬೫೦೦ ರೂಪಾಯಿ ಹೆಚ್ಚಿದೆ! ಈ ಸ್ವಯಂಸೇವಕರ ಶ್ರಮಕ್ಕಾಗಿ ಅವರಿಗೊಂದು ಟೀಪಾರ್ಟಿಯನ್ನು ಅಬಕಾರಿ ಇಲಾಖೆಯವರು ಕೊಡಬಾರದೇ?

* * * *

ಒಬ್ಬನ ತಲೆ, ಇನ್ನೊಬ್ಬನ ಎರಡು ಇಜಾರೆಗಳು ಬಲಹೀನವಾದುವು,—ಇವರುಗಳ ತಲೆ, ಇಜಾರುಗಳನ್ನಾದರೂ ಈ ಅಧಿಕ ಹಣದಿಂದ ಹೊಸತಾಗಿ ತೆಗಿಸಿ ಕೊಡಬಾರದೆ?

* * * *

ಲೋಕಪ್ಪಿನಲ್ಲಿ ೧೨೦ ಮಂದಿಯನ್ನು ಒಂದೇ ಕಾಲದಲ್ಲಿ ಇದ್ದರಂತೆ. ನಂಬಹುದೆ? ಅದೇನು ಎರಡನೆ ಬ್ಲೆಕ್ ಹೋಲ್ ಕೋಣೆಯೆ?

* * * *

ಬರುತ್ತದೆ, ಬೇಗನೇ ಬರುತ್ತದೆ, ಕರಾಚಿಯಿಂದ ಮದ್ರಾಸಿಗೆ ವಿಮಾನ ಟಪ್ಪಾಲು. ನಾಲ್ಕು ದಿನಗಳು ಬೇಕಾಗಿರುವ ಕಾಗದ ಪ್ರಯಾಣವು ಇನ್ನು ಮೂವತ್ತು ತಾಸುಗಳಲ್ಲೇ ಮುಗಿಯುವುದು. ಇನ್ನು ಮಂಗಳೂರಿನಿಂದ ಮದ್ರಾಸಿಗೆ ಬರೆವ ಕಾಗದಗಳನ್ನು ಸೀದಾ ಕರಾಚಿಗೆ ಕಳುಹಿಸಿ, ಅಲ್ಲಿಂದು ೩೦ ತಾಸುಗಳಲ್ಲಿ ವಿಮಾನದ್ವಾರಾ ಅವು ಮದ್ರಾಸಿಗೆ ಹೋಗಲು ಅನುಕೂಲ. ಅತಿ ಸಂತೋಷದ ಸುದ್ದಿ ಮಂಗಳೂರಿಗೆ. ಈ ಸುಸಂದರ್ಭ ಕಳೆಯಬೇಡಿ.

* * * *

ಜಸ್ಟಿಸ್ ಪಕ್ಷದೊಳಗೇ ಜಸ್ಟಿಸ್ ಕಡಿಮೆಯಾಗಿದೆ ಎಂದು ಪಾರ್ಟಿಯಲ್ಲಿ ಗಡಿಬಿಡಿ—ಹೆಸರಿಗೆ ತಕ್ಕಂತೆ!

* * * *

ಪುನಃ ಟೋಲ್ ಗೇಟುಗಳನ್ನು ಪ್ರಾರಂಭಿಸುವರಂತೆ, ಈಗಿನ ಮೋಟರ್ ಟೇಕ್ಸಿನಿಂದ ಲಾಭ ಕಡಿಮೆಯಂತೆ. ಸರಕಾರವು ಕೊಂಚ ತಡೆಯಬಾರದೆ? ಈಗ ಚಲಾವಣೆಯಲ್ಲಿರುವ ಕೆಲವು ಬಸ್ಸು ಕಂಪೆನಿಗಳೂ ನಿರ್ನಾಮವಾದ ಬಳಿಕ, ಗೇಟುಗಳಿಗೆ ಆರಂಭ ಮಾಡಿದರೆ,—ಅಲ್ಲೇ ಗೇಟುಗಳೂ ನಿರುದ್ಯೋಗಿಗಳಾಗಿ ಮುಕ್ತಾಯ ಹೊಂದುವುವು.

1. Good Riding Quality.
2. Gripping Tread.
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE
Seiberling's Exclusive Quality.



TRIED & PROVED.

USE A Seiberling Tube
IN
A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ

- ಪ್ರಾಥಮಿಕ ವಿದ್ಯಾಭ್ಯಾಸ . . . ೬
- ಸ್ಫುಟವಿಚಾರಗಳು . . ೯
- ನೋಟಗಳು ,,

ವರ್ತಮಾನ ಸಂಗ್ರಹಗಳು.

- ವಿದೇಶ ವರ್ತಮಾನ . ೬
- ಒಳದೇಶ ವರ್ತಮಾನ . . ,
- ದಕ್ಷಿಣ ಕನ್ನಡ— ಮಂಗಳೂರು, ಉಡುಪಿ, ಸುರತ್ಕಲ್, ಕಾಸರಗೋಡು . . ೭
- ವಿವಿಧ ಸಮಾಚಾರಗಳು ೧೧
- ಆಳುವ ದುಗು—ಇದೆಂತಹುದು?!! ೨
- ರಾಜಾರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ , ೧೪
- ಹಿಂದೂದೇಶದಲ್ಲಿ ರಕ್ತಪಾತ! . ೯
- ಉಡುಪಿಯ ನೋಟಗಳು ,,
- ಪತ್ರವ್ಯವಹಾರ ೧೦

ಸ್ವದೇಶಾಭಿಮಾನಿ.

ತಾ. ೫ನೇ ಶುಕ್ರವಾರ ಆಗೋಸ್ಟ್ ೧೯೩೨

ಪ್ರಾಥಮಿಕ ವಿದ್ಯಾಭ್ಯಾಸ.

ನಾವು ಪ್ರಾಥಮಿಕ ವಿದ್ಯಾಭ್ಯಾಸದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು ಬಹಳ ಕಡಿಮೆ ಏಕೆಂದರೆ ಅದು ಅತ್ಯಂತ ಕೆಳತರಗತಿಯದಾಗಿದ್ದು ಅದಕ್ಕೆ ವಿಶೇಷ ಪರಿಶ್ರಮ ಇದೆಯೆಂಬ ಅರಿವು ಹೆಚ್ಚಿನವರಿಗೆ ಇರುವುದಿಲ್ಲ ಆದರೆ ಪ್ರೌಢವಿದ್ಯಾಭ್ಯಾಸಕ್ಕೆ ಇದು ಮೂಲಾಧಾರವಲ್ಲದೆ, ಪ್ರೌಢವಿದ್ಯಾಭ್ಯಾಸವನ್ನು ಮರೆತರೂ, ಇಡೀ ಜನಾಂಗದ ನಾಗರಿಕತನಕ್ಕೂ, ಬೆಳವಣಿಗೆಗೂ, ಇದು ಅತ್ಯಂತ ಪರಿಣಾಮಕಾರಿಯಾದುದಾಗಿರುತ್ತದೆ ಆದುದರಿಂದ ವಿಶ್ವವಿದ್ಯಾಲಯಗಳ ರಚನೆಗಿಂತಲೂ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ

ಆದರೆ ಈ ಪ್ರಾಮುಖ್ಯತೆಯನ್ನು ಹಿಂದೀಯ ಸಾರ್ವಜನಿಕ ಕೆಲಸಗಾರರು ತಿಳಿದುಕೊಂಡಿರುವುದಿಲ್ಲ ಲಕ್ಷಾವಧಿ ಹಣವನ್ನು ವ್ಯಯಿಸಿ ಕಾಲೇಜುಗಳ ಸ್ಥಾಪನೆ ಬಗ್ಗೆ ಹೆಣಗಾಡುವುದರಲ್ಲಿ ನಾವು ಕಾಣುವ ಗೌರವ ಮತ್ತು ಆತ್ಮತೃಪ್ತಿಯು ಕೆಲವು ಚಿಕ್ಕ ಪಾಠಶಾಲೆಗಳ ಸುವ್ಯವಸ್ಥೆಯಲ್ಲಿ ಕಾಣುವುದಿಲ್ಲ ಫಲವಾಗಿ ಪ್ರಾಥಮಿಕ ವಿದ್ಯಾಭ್ಯಾಸವು, ತುಂಬಾ ತಿರಸ್ಕೃತವಾಗಿ ನಿಶ್ಚೇತನವಾಗಿರುತ್ತದೆ ಮುಂದಿನ ಜನಾಂಗರಚನೆಗೆ ಅನುಕೂಲವಾದ ಮಕ್ಕಳ ತರಬೇತಿಯನ್ನು ಅದು ಕೊಡುವುದಿಲ್ಲ

“ಹಿಂದೀಯ ಶಾಲೆಗಳ ಮಕ್ಕಳಲ್ಲಿ ಚಟುವಟಿಕೆಯಾಗಲಿ, ಚೇತನವಾಗಲಿ ಕಾಣುವುದಿಲ್ಲ ಸ್ಮಶಾನಸದೃಶ ನಿಶ್ಶಬ್ದತೆಯನ್ನು ಮಕ್ಕಳ ಮೇಲೆ ಸ್ವಭಾವ ವಿರೋಧವಾಗಿ ಹೊರಿಸಲ್ಪಡುತ್ತದೆ, ಎಂದು ಒಬ್ಬರು ಪಾಶ್ಚಾತ್ಯರು ಇಲ್ಲಿಯ ಶಾಲೆಗಳನ್ನು ನೋಡಿ ಹೇಳುವರು ಶಾಲೆಗಳ ವ್ಯವಸ್ಥೆ ನೋಡಿದರೂ, ಮಕ್ಕಳ ಚಟುವಟಿಕೆಯನ್ನು ಪ್ರೋತ್ಸಾಹಿಸಬಲ್ಲ ಯಾವ ವಿಷಯವೂ ಕಾಣುವುದಿಲ್ಲ

ಪ್ರಾಥಮಿಕ ಶಾಲೆಗಳ ಆಡಳಿತವು ಕೆಲವು ಖಾಸಗಿ ಮೆನೇಜರರ ಕೈಯಲ್ಲೂ ಕೆಲವು ತಾಲೂಕು ಬೋರ್ಡುಗಳ ಕೈಯಲ್ಲಿ ಇವೆ. ಖಾಸಗಿ ಮೆನೇಜರರಲ್ಲಿ ಹೆಚ್ಚಿನವರು ಅತ್ಯಂತ ಬಡವರು, ಅವರಿಗೆ ಅರ್ಜನೆಯ ಯೋಚನೆಯೇ ಹೆಚ್ಚು, ತಾಪತ್ರಯಗಳು ಬಹಳ, ಶಾಲೆಯ ಉತ್ಪತ್ತಿಯನ್ನು ಹೆಚ್ಚಿಸಿ, ಗ್ರೇಂಟುಗಳನ್ನು ಹೆಚ್ಚಿಸಿ ಖರ್ಚು ಕಡಿಮೆಮಾಡುವುದು ಹೇಗೆಂಬ ಯೋಚನೆಯೇ, ವಿದ್ಯಾಭ್ಯಾಸವನ್ನು ಹೇಗೆ ತೃಪ್ತಿಕರವಾಗಿ ನಡಿಸಲಿ ಎಂಬ ಯೋಚನೆಗಿಂತಲೂ ಪ್ರಬಲವಾಗಿದೆ ಹೀಗಾಗಿ ಮಕ್ಕಳ ಸಂಖ್ಯೆ ನೇಮಿಸಲ್ಪಟ್ಟ ಉಪಾಧ್ಯಾಯರ ಸಂಬಳ ಮತ್ತು ಮೇಲ್ವಿಚಾರ, ಹಾಜರಿ, ಇತ್ಯಾದಿಗಳು ಶಾಲಾ ಇನ್ಸಪೆಕ್ಟರರ ಸಂದರ್ಶನ ಸಮಯದಲ್ಲಿ, ಆಗ ಅವರಿಗೆ ಕೊಡಬೇಕಾದ ಸ್ವಾಗತ, ಉಪಚಾರ, ಸಂಗ್ರಹಗಳೊಡನೆ, ಅವರ ತೃಪ್ತಿ ಬಗ್ಗೆ ಮಾತ್ರವಾಗಿರುತ್ತದಲ್ಲದೆ, ವಿದ್ಯಾಭ್ಯಾಸದ ಕಾರ್ಯಕಾರಿತೆಯ ಬಗ್ಗೆಯಲ್ಲ ಅದರಲ್ಲಿಯೂ ಈಗಿನ ರಿಟ್ರೆಂಚ್‌ಮೆಂಟ್ ಸಮಯದಲ್ಲಿ ಇದರ ಪರಿಸ್ಥಿತಿ ಬೇರೆ ಊಹಿಸಬೇಕಾಗಿಲ್ಲ.

ಹಾಗೆಂದು ತಾಲೂಕು ಬೋರ್ಡುಗಳ ಆಡಳಿತೆಯು ಇದಕ್ಕಿಂತ ಉತ್ತಮತರದ್ದೆಂದು ಹೇಳಲಾಗುವುದಿಲ್ಲ. ಬೋರ್ಡು ಆಡಳಿತವು ಪ್ರೆಸಿಡೆಂಟರ ಕೈಕೆಳಗೆ ಈ ಪ್ರೆಸಿಡೆಂಟರು ಆರಿಸಿ ಬಂದವರು. ಈ ಆರಿಸುವಿಕೆಯೆಂದರೆ “ಹೋದರೆ ಒಂದು ಕಲ್ಲು, ಬಂದರೆ ಒಂದು ಹಣ್ಣು” ಎಂಬ ಗಾದೆಯು ಹಾಗೆ. ಹಣ್ಣು ಬರುವುದೇ ಅಪರೂಪ. ದುಡ್ಡು, ಜಾತಿ, ದಾಕ್ಷಿಣ್ಯಗಳೊಡನೆ, ಯಾರೊಬ್ಬನೂ ಪ್ರೆಸಿಡೆಂಟನಾಗುತ್ತಾನೆ. ಅದೃಷ್ಟವಶಾತ್ ಶಕ್ತಿವಂತರಾರಾದರೂ ಆರಿಸಲ್ಪಟ್ಟರೆ ಸರಿ. ಇಲ್ಲವಾದರೆ ಶಾಲೆಯ ಗತಿ ದೇವರೇ ಬಲ್ಲ. ಪ್ರೆಸಿಡೆಂಟರ ಬದಲಾವಣೆಯೊಡನೆ ಧೋರಣೆಯ ಬದಲಾವಣೆ ಹೆಡ್ ಕ್ಲಾರ್ಕರ ಸ್ವಾರ್ಥದೊಡನೆ ಉಪಾಧ್ಯಾಯರಿಗೆ ಪೀಡೆ, ಬೋರ್ಡಿನ ಆರ್ಥಿಕ ಗೊಂದಲಗಳಲ್ಲಿ ಉಪಾಧ್ಯಾಯರ ಸಂಬಳ ತಿಂಗಳುಗಟ್ಲೆ ಬಾಕಿ, ಇದರ ವೇಳೆ ಮೇಲ್ವಿಚಾರ ಶೂನ್ಯ ಹುಡುಗರಿಲ್ಲದಿದ್ದರೂ ಹಾಜರಿ ಪಟ್ಟಿಯಲ್ಲಿ ಸಂಖ್ಯೆ, ಶಾಲೆಗೆ ಹುಡುಗರನ್ನು ಕೂಡಿಸಬಹುದಾದರೂ ಉಪಾಧ್ಯಾಯರ ಪ್ರಯತ್ನವಿಲ್ಲ ಮೇಲ್ವಿಚಾರವಿಲ್ಲದೆ, ಉಪಾಧ್ಯಾಯರು ಕಲಿಸುವಿಕೆಗಿಂತಲೂ ಸ್ವಂತ ಕೆಲಸದಲ್ಲಿ ಆಸಕ್ತಿ ತೋರಿಸುವರು. ಹೀಗಾಗಿ ಈ ಶಾಲೆಗಳ ಪರಿಸ್ಥಿತಿಯು ಅತ್ಯಂತ ಚಿತ್ತವೇಧಕವಿದೆ

ಇತ್ತ ಪಠ್ಯ ಪುಸ್ತಕಗಳ ಹಾವಳಿಯೂ ವಿಶೇಷ ಪಠ್ಯ ಪುಸ್ತಕಗಳ ಲೆಕ್ಕವೇ ಇಲ್ಲ ವರ್ಷ ವರ್ಷ ಬದಲು, ಈ ಬದಲಿಸುವಿಕೆಯೂ ಕೆಲವು ಲೇಖಕರ ಮತ್ತು ಪ್ರಕಾಶಕರ ಕೈಯಲ್ಲಿ. ಪರಿಣಾಮವಾಗಿ ಪಠ್ಯ ಪುಸ್ತಕಗಳ ನಿರ್ಣಯವು, ನಿರ್ಣಯಿಸುವವರ ಲಾಭದ ದೃಷ್ಟ್ಯಾ ಆಗುತ್ತಿದೆಯಲ್ಲದೆ ವಿದ್ಯಾಭ್ಯಾಸದ ಹಿತದ ದೃಷ್ಟ್ಯಾ ಆಗುವುದಿಲ್ಲ ತನ್ನ ಪುಸ್ತಕ, ತನ್ನ ಪುಸ್ತಕ ಎಂಬ ಮೇಲಾಟವು ಹೆಚ್ಚು

ಇವೆಲ್ಲ ಸ್ಥಿತಿಗತಿಗಳನ್ನು ನೋಡಿದರೆ ಪ್ರಾಥಮಿಕ ವಿದ್ಯಾಭ್ಯಾಸದ ವ್ಯವಸ್ಥೆಗಳಲ್ಲಿ ಸಂಪೂರ್ಣ ಬದಲಾವಣೆಯಾಗುವುದು ಅವಶ್ಯವಿದೆಯೆಂಬುದು ತೋರದಿರದು ಅಂತಹ ಬದಲಾವಣೆಯು ಶೀಘ್ರದಲ್ಲಿ ಆಗದಿದ್ದರೆ ಪ್ರಾಥಮಿಕ ವಿದ್ಯಾಭ್ಯಾಸವು ನಿಶ್ಚೇತನವಾಗಿ ಹೋಗುವುದೆಂಬುದರಲ್ಲಿ ಸಂದೇಹವಿಲ್ಲ

ವಿದೇಶ ವರ್ತಮಾನ.

— ಜರ್ಮನಿಯ ಇಲೆಕ್ಷನಿನಲ್ಲಿ ನಾಜಿಗಳ ಪಂಗಡಗಳೇ ವಿಜಯಿಗಳಾಗಿವೆಯೆಂದೂ ಕಮ್ಯೂನಿಸ್ಟರು ಪರಾಜಿತರಾದರೆಂದೂ ತಿಳಿದು ಬಂದಿದೆ ಚುನಾವಣಾ ಸಂದರ್ಭದಲ್ಲಿ ನಡೆದ ಗಲಭೆಗಲಾಟೆಗಳಿಂದ ಅನೇಕರು ಮೃತಹೊಂದಿದರು ನೂರುಗಟ್ಟಳೆ ಜನರಿಗೆ ಜಖಂ ಆಗಿದೆ.

ಸಿಲೋನಿಗೆ ಆಮದಾಗುವ ಅಕ್ಕಿಯ ಮೇಲೆ ಹೆಚ್ಚಿನ ಸುಂಕವನ್ನೇರಿಸಬೇಕೆಂದು ಗವರ್ನರರ ಹಟ! ಅದು ಕೂಡದೆಂದು ಕೌನ್ಸಿಲ ಸದಸ್ಯರುಗಳ ಛಲ!

ಬ್ರಿಟಿಷ ಮೆಡಿಕಲ್ ಎಸೋಸಿಯೇಶನಿನ ಒಂದು ಮಹಾಸಭೆಯು ಲಂಡನಿನಲ್ಲಿ ೨೦೦೦ ವೈದ್ಯಕೀಯ ವ್ಯಕ್ತಿಗಳ ಕೂಡುವಿಕೆಯಿಂದ ಜರಗಿತು. ಡಾಕ್ಟರರ ವೃತ್ತಿಯಲ್ಲಿ ಕೆಲವು ಸುಧಾರಣೆಗಳಾಗಲಿವೆ

— ಸ್ಟೋಕೋಮಿನಲ್ಲಿ ದಿವೆಂಟ್ ಎಂಬ ಜಲಾಂತರ್ಗಾಮಿ ನಾವೆಯೊಂದು ಫ್ಲಿಜಿಯಾ ಎಂಬ ಸ್ಟೀಮರಿಗೆ ಢಿಕ್ಕೆ ಹೊಡೆದು ೨೫೦ ಅಡಿಗಳ ಆಳದಲ್ಲಿ ಮುಳುಗಿತು ಅದರಲ್ಲಿ ಹತ್ತಿಪ್ಪತ್ತು ಮಂದಿಗಳಿದ್ದರು ಸಾಹಸಿಗಳಾದ ನಾವಿಕರು ಸಬ್‌ಮೆರಿನಿನ ಅಡಿಯಲ್ಲಿದ್ದ ಭಾರವಾದ ಬೀಡನ್ನು ಅಡಿಯಿಂದ ತಪ್ಪಿಸಿ ಸಬ್‌ಮೆರಿನು ನೀರಿನ ಮೇಲ್ಗೇಳುವಂತೆ ಮಾಡಿ ರಕ್ಷಣೆ ಹೊಂದಿದರು

— ಫ್ರಾನ್ಸಿನ ಅಧ್ಯಕ್ಷರನ್ನು ಕೊಂದ ಗೊರ್ಗೊಲೋಫನು ತಪ್ಪಿತಸ್ಥನೆಂದು ಕಂಡುಹಿಡಿಯಲ್ಪಟ್ಟಿದೆ ಅಪರಾಧಿತನನ್ನು ಗಿಲ್ಲೋಟಿನ್ (ಯಂತ್ರ ಶಕ್ತಿ) ನ ಬಾಯಿಗೆ ಕೊಡಲಿರುವರು ಅವನು ಹುಚ್ಚನಂತೆ ನಟಿಸುತ್ತಾನೆಂದು ತಿಳಿದುಬಂದಿದೆ

— ಲಂಡನಿನ ಬರ್ಲಿ ಎಂಬಲ್ಲಿನ ಗಿರಣಿಗಳ ೨೫೦೦೦ ಗಿರಣಿಗಾರರು ಮುಷ್ಕರ ಹಿಡಿದಿರುವರು ಗಿರಣಿ ಮಾಲೀಕರು ಆರ್ಥಿಕ ದುರವಸ್ಥೆಗೆ ಸಿಲುಕಿ, ಸಂಬಳದಲ್ಲಿ ವ್ಯತ್ಯಾಸವನ್ನುಂಟುಮಾಡಿದುದೇ ಇದಕ್ಕೆ ಕಾರಣವೆಂದು ತಿಳಿದುಬಂದಿದೆ

— ಅಮೇರಿಕದ ವಾಶಿಂಗ್ಟನ್‌ನಲ್ಲಿ ಕೆಲಸಗಾರರು ತಮ್ಮ ಬೋನಸ್ಸಿಗಾಗಿ ಹೋರಾಡುತ್ತಿದ್ದರು ಈ ಹೋರಾಟವು ಮುಷ್ಕರಗಳಾಗಿ ಪರಿಣಮಿಸಿ ದೇಶದಲ್ಲೆಲ್ಲಾ ಅನಾಹುತಕ್ಕಾರಂಭವಾಗಿದೆ. ಬೋನಸ್ ಛಳವಳಿಕ್ಕೆ ಸಾವಿರಗಟ್ಲೆ ಜನರು ಸೇರಿ, ಒಂದು ರೀತಿಯ ಸೈನ್ಯವೇ ನಿರ್ಮಿಸಲ್ಪಟ್ಟಿದೆ

— ವೆನಿಸ್ ನಗರದಲ್ಲಿ ರೀನ್ ಮಚ್‌ನಾರ್ ಎಂಬ ವೈಮಾನಿಕ ಸೋರ್ಜನು ವಿಜ್ಞಾನದೃಷ್ಟ್ಯಾ ೫ ಮೈಲು ಎತ್ತರಕ್ಕೆ ಹೋದ ವಿಮಾನದಿಂದ ಕೆಳಹಾರಿದನು. “ಹಾರುವಾಗ ಇವನು” ಒಂದು ಕೊಡೆಯನ್ನು ಹಾಕಿದ್ದನು. ಗಾಳಿಯಬಲದಿಂದ ೧೩ ಮೈಲುಗಳ ದೂರದೇಶಕ್ಕೆ ಎಸೆಯಲ್ಪಟ್ಟು, ಇವನೊಂದು ಬಯಲಿನಲ್ಲಿ ಸುರಕ್ಷಿತವಾಗಿ ಇಳಿದುದು ಎಲ್ಲರಿಗೂ ಸಂತೋಷಕರ ಸುದ್ದಿ!

— ಒಂಟೇರಿಯೋದಲ್ಲಿ ೬೫ ಅಡಿಗಳ ಎತ್ತರದ ಒಂದು ದೀಪಸ್ತಂಭದಿಂದ ೧೭ ವರ್ಷ ಪ್ರಾಯದ ಜೋನ್ ಸಿಂಡರ್ ಎಂಬ ಹುಡುಗನು ಪಕ್ಕನೆ ಕೆಳಹಾರಿಬಿದ್ದನು ಅರ್ಧ ಗಂಟೆಯಲ್ಲಿ ಅವನು ಸ್ಮೃತಿಗೊಂಡು ಸೌಖ್ಯಗೊಂಡನು.

ಒಳದೇಶ ವರ್ತಮಾನ

— ಅಲ್ಲಹಾಬಾದಿನ ‘ಸ್ವರಾಜ್ಯ ಭವನ’ವನ್ನು ಕಾಂಗ್ರೆಸ್‌ವಾಲರು ವಶೀಕರಿಸಲೆತ್ನಿಸಿದರು ಸೆರೆಗೊಳಗಾದರು

— ಡಕಾಯಿತಿ ನಡೆಸಿದ ಒಂದು ನ್ಯಾಯವಿಚಾರಣೆಯನ್ನು ಮಾಡುವಾಗ್ಗೆ ರಂಗೂನಿನಲ್ಲಿ ಅಪರಾಧಿಯೊಬ್ಬನು ಮೆಜಿಸ್ಟ್ರೇಟರ ಮುಖಕ್ಕೆ ಪಾದರಕ್ಷೆಯನ್ನೆಸೆದನು

— ಪ್ರಕೃತದ ರಾಜಕೀಯ ವಾತಾವರಣವು ಸುಸ್ಥಿತಿಯಲ್ಲಿಲ್ಲದಿರುವುದರಿಂದ ಸರಕಾರವು ಮತದಾನವನ್ನು ಮಾಡುವ ನಿರ್ಧಾರವನ್ನು ಹಿಂದಕ್ಕಿಟ್ಟಿದೆ

— “ಮುಂದಕ್ಕೇನು? ಎಂಬ ಪ್ರಶ್ನೆಯ ಕುರಿತು ಇಂಡಿಯಾ ಸರಕಾರವೂ ಬ್ರಿಟಿಷ ಸರಕಾರವೂ ಆಲೋಚಿಸುತ್ತಿವೆ

— ಮುಂಬಾಯಿಯಲ್ಲಿ ತಾ ನೇ ದಿನ ನಡೆದ ರಾಷ್ಟ್ರಧ್ವಜ ವಂದನೆಯಲ್ಲಿ ೩೮ ಮಂದಿಗಳು ರಿಮಾಂಡಿನೊಳಗಿರುವರು

— ಕೆಲವರನ್ನು ಅಂಡಮಾನಕ್ಕೆ ಕಳುಹಿಸಬೇಕೆಂದಾಲೋಚನೆಯಿದೆಯೆಂದು ಭಾರತ ಮಂತ್ರಿಗಳು ಮೊನ್ನೆ ಹೇಳಿದ್ದರಷ್ಟೆ ಆ ‘ಕೆಲವರ’ ಅಂದರೆ ನೂರು ಮಂದಿಗಳ ಪಟ್ಟಿಯೊಂದು ಕಲ್ಕತ್ತದ ಅಧಿಕಾರಿಗಳಿಂದ ತಯಾರಿಯಾಗಿದೆ ಬಾಂಬು ಇಂದು ಪಿಸ್ತೂಲುಗಳನ್ನು ಪ್ರಯೋಗಿಸಿ ಕ್ರಾಂತಿಯೆಬ್ಬಿಸಿದವರನ್ನು ಮಾತ್ರ ಕಳುಹಿಸಲಿರುವರೆಂದು ತಿಳಿದು ಬಂದಿದೆ

— ಫಿಲ್ಮ್ ಅಭಿನಯಗಾತಿಯಾದ ಮಿಸ್ ಎರ್ಮೆಲಿನಳು ಕಳೆದ ಎಪ್ರಿಲ್ ೩೦ರಲ್ಲಿ ಕಾಯಿದೆ ವಿರೋಧವಾದ ವೇಗದಿಂದ ಮೋಟರನ್ನು ಓಡಿಸಿ ಒಂದು ಕಡೆಯಲ್ಲಿ ಢಿಕ್ಕೆ ಬಡೆದಿದ್ದಳು. ವಿಚಾರಣೆಯಾಗಿ ೮೦ ರೂಪಾಯಿ ಜುಲ್ಮಾನೆಯಾಯಿತು ಢಿಕ್ಕೆ ಬಡೆದ ಕೂಡಲೇ ಅಲ್ಲಿಗೆ ಬಂದು ಚಾರ್ಜುಮಾಡಿದ ಪೋಲೀಸನ ಕೆನ್ನೆಗೆ ತಪರಾಕಿ ಕೊಟ್ಟಳೆಂದೂ ಆಗ ಅವಳು ಮದ್ಯದ ಪ್ರಭಾವಕ್ಕೊಳಗಾಗಿದ್ದಳೆಂದೂ ಸಾಕ್ಷಿಗಾರರ ಸಾಕ್ಷ್ಯ

ತಾ ೨ನೇ ದಿನ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ! ಶ್ರೀ ಯು ಪಿ ಎಸ್ ಭಟ್, ಶ್ರೀ ಎ ಬಿ ಶೆಟ್ಟಿಗಳವರು ಚಳವಳಿಗಾರರಿಗೆ ಪೋಲೀಸರು ಹೊಡೆದ ವಿಷಯಕವಾಗಿ ಹೋಮ್ ಮೆಂಬರರಿಗೆ ಸ್ವಚ್ಛಂದವಾಗಿ ಪ್ರಶ್ನೆಗಳನ್ನು ಹಾಕಿದರು

— ಸ್ವರಾಜ್ಯ ಭವನದ ಮೇಲೆ ಧಾಳಿ” ನಡೆಸಲು ಅಲ್ಲಹಾಬಾದಿಗೆ ಇನ್ನಿತರ ಕಡೆಗಳಿಂದ ಬಂದ ೮೬ ಸ್ವಯಂಸೇವಕರನ್ನು ಕೈದು ಮಾಡಲಾಗಿದೆ

ಪೋಲೀಸ್ ಬಲವಾದ ಕಾವಲಿದ್ದರೂ ಕೂಡಾ ಅಲ್ಲಹಾಬಾದಿನ ಕಾಂಗ್ರೆಸ್ ಭವನವನ್ನು ಸ್ವಾಧೀನಪಡಿಸಲು ಹೊರಟಿದ್ದ ೫೦ ಮಂದಿ ಸ್ವಯಂಸೇವಕರನ್ನು ಕೈದುಮಾಡಿದ್ದಾರೆ

— ಕಾಂಗ್ರೆಸ್ ಮಂದಿರದ ಧಾಳಿ ನಡೆಸಿದುದಕ್ಕಾಗಿ ಕರಾಚಿಯಲ್ಲಿ ೩೪ ಮಂದಿ ಕಾಂಗ್ರೆಸ್‌ವಾಲರನ್ನು ಕೈದುಮಾಡಿ ವಿವಿಧಾವಧಿಯ ಶಿಕ್ಷೆಯನ್ನು ವಿಧಿಸಿರುವರು

ಅಲ್ಲಹಾಬಾದಿನಲ್ಲಿಯ ಹಿಂದೂಬೋರ್ಡಿಂಗ್ ಹೌಸಿನವರು ನಗರಕ್ಕೆ ದಾನವಾಗಿ ಕೊಟ್ಟ ಪಂಡಿತ ಮೋತಿಲಾಲನೆಹರೂರವರ ಶಿಲಾಮೂರ್ತಿಯನ್ನು ಪಂಡಿತ ಕುನ ಜ್ರುರವರು ಆವರಣ ಮಾಡಿ, ದಿವಂಗತರನ್ನು ಹೃದಯಂಗಮವಾಗಿ ಶ್ಲಾಘಿಸಿ ಮಾತನಾಡಿದರು

ರಂಗೂನಿನಲ್ಲಿಯ ಮೆಡಿಕಲ್ ಕಾಲೇಜನ್ನೂ ಕೆಲವು ಮನೆಗಳನ್ನೂ ಶೋಧಿಸಿ ಪೋಲೀಸು ಇಬ್ಬರು ಬಂಗಾಳೀ ವೈದ್ಯಕೀಯ ಯುವಕರನ್ನು ರಾಜಕೀಯ ಸಂಬಂಧವಾಗಿ ಕೈದುಮಾಡಿದರು

— ರಂಗೂನಿನಲ್ಲಿ ಬರ್ಮೀಯ ಧರ್ಮಗುರುಗಳೊಬ್ಬರನ್ನು ಯಾರೋ ಕೆಲವರು ಜನರಲ್ ಆಸ್ಪತ್ರೆಯ ಬಳಿ ಕೊಂದಿಕ್ಕಿದ್ದರು ಗುರುಗಳಿಗೆ ೫೬ ವರ್ಷ ಪ್ರಾಯ

— ನಾಗಪುರದ ವರ್ಧಾದಲ್ಲಿ ರೈಲಿನ ಕಂಬಿಯನ್ನು ತಪ್ಪಿಸಿದರೆಂಬ ವಾರ್ತೆಯನ್ನು ಕೇಳಿದ ಪೋಲೀಸರು ರಾತ್ರಿ ಸಮಯ ಆ ಸ್ಥಳದಲ್ಲಿ ಕಾವಲು ನೋಡಿ, ಪರಿಶೋಧಿಸಲು, ಇಬ್ಬರು ಕಳ್ಳರು ಸಿಕ್ಕಿಬಿದ್ದರು.

ಚಿಟ್ಟಗಾಂಗಿನಲ್ಲಿ ಕ್ರಾಂತಿಕಾರರೆಂದು ಆರೋಪಿಸಲ್ಪಟ್ಟಿರುವ ೩೩ ಮಂದಿ ಯುವಕರನ್ನು ಸೆರೆ ಹಿಡಿದುಕೊಟ್ಟವರಿಗೆ ೫೦ರಿಂದ ೫೦೦ ರೂಪಾಯಿಗಳ ಬಹುಮಾನವನ್ನೀಯಲಾಗುವುದೆಂದು ಸರಕಾರವು ಪ್ರಕಟಿಸಿಯದೆ.

— ಮುಂಬಾಯಿಯ ಕೆಲವು ಪ್ರಮುಖ ಬುಲ್ಲಿಯನ್ ವರ್ತಕರನ್ನು ಅಲ್ಲಿಯ ಕಮಿಶನರರು ಬರಮಾಡಿಕೊಂಡು ಅವರು ಕಾಂಗ್ರೆಸ್ಸಿನ ಬಹಿಷ್ಕಾರಕ್ಕೆ ಬಗ್ಗಲು ಕಾರಣವೇನೆಂದು ವಿಚಾರಿಸಿದರೆಂದೂ, ಅದಕ್ಕುತ್ತರವಾಗಿ ವರ್ತಕರು "ಕಾಂಗ್ರೆಸ್‌ವಾಲರು ಅನಿರೀಕ್ಷಿತವಾಗಿ, ಆಕಸ್ಮಾತ್ ಬಂದು ಪೇಟೆಯಲ್ಲೆಲ್ಲಾ ನಮ್ಮ ಹೆಸರುಗಳನ್ನು ಪ್ರಕಟಿಸಿ, ನಮ್ಮನ್ನು ಬಹಿಷ್ಕರಿಸಬೇಕೆಂದು ಸಾರುತ್ತಾರೆ" ಎಂದು ತಿಳಿಸಿದರೆಂದೂ ತಿಳಿದುಬರುತ್ತದೆ

— ಪೇಶಾವರದ ಸಿವಿಲ್ ಸರ್ಜನರಾದ ಕೆಪ್ಟನ್ ಕೊಲ್ಡ್‌ಸ್ಟ್ರೀಮ್ ಎಂಬವರನ್ನು ಕೊಂದ ಅಪಾದನೆಗೆ ಸಿಕ್ಕಿದ ಅಬ್ದುಲ್ ರಶೀದನೆಂಬವನಿಗೆ ಫಾಶಿ ಶಿಕ್ಷೆಯು ವಿಧಿಸಲ್ಪಟ್ಟಿದೆ ಅಪಾದಿತನು ಸಂಪೂರ್ಣ ನಿವೇದನೆಯನ್ನು ಮಾಡಿರುವನು

— ಡಾರ್ಜಿಲಿಂಗಿನ ಎಸ್ಟೇಟ್ ಒಂದರಲ್ಲಿ ಕೂಲಿಗಾರರು ಸಂಬಳದ ಸಂಬಂಧವಾಗಿ ಜುಗುಪ್ಸೆಹೊಂದಿ ಅದರ ಯುರೋಪಿಯನ್ ಮೇನೆಜರ್ ಮತ್ತು ಗುಮಾಸ್ತರ ಕೊಟಡಿಯಲ್ಲಿ ರಾತ್ರಿ ಹೊತ್ತು ಧಾಳಿ ನಡೆಸಿ ಅವರನ್ನು ಘಾಯಗೊಳಿಸಿದರು ೧೩ ಮಂದಿಗಳು ಬೇಡಿಗೊಳಗಾಗಿರುವರು

— ಪಂಡಿತ ಜವಾಹರಲಾಲರ ದೇಹಸ್ಥಿತಿಯು ಈಗ ಉತ್ತಮವಾಗಿರುತ್ತದೆಂದೂ, ಅವರನ್ನು ಒಬ್ಬಂಟಿಗನನ್ನಾಗಿ ಸೆರೆಯಲಿಡದೆ ದೆಹಾರಾದೂನ್‌ನಲ್ಲಿ ಪಂಡಿತ ಗೋವಿಂದಾನಂದ ಪಂಡಿತರೊಂದಿಗಿರಿಸಿದ್ದಾರೆಂದೂ ತಿಳಿದುಬಂದಿದೆ

— "ಪಶ್ಚಿಮೋತ್ತರ ಗಡಿನಾಡಿನಲ್ಲೇನು ನಡೆಯುತ್ತಿದೆ?" ಎಂದು ಫಾದರ್ ಎಲ್ವಿನರೆಂಬ ಆಂಗ್ಲ ಪ್ರಭೃತಿಗಳ ಪ್ರಕಟಿಸಿದ ಪುಸ್ತಕವೂ ಪೇಶಾವರದ ಕಾಂಗ್ರೆಸ್ಸಿನವರು ಪ್ರಕಟಿಸಿದ 'ವಿದ್ಯಾರ್ಥಿಗಳಲ್ಲೊಂದು ಅರಿಕೆ" ಎಂಬ ಕರಪತ್ರಗಳೂ ನಿಷಿದ್ಧವೆಂದು ಸರಕಾರವು ಪ್ರಕಟಿಸಿಯದೆ

— ಸಿಂಗಾಪೂರಿನಿಂದ ರಂಗೂನಿಗೆ ತಲಪಿದ ಬದರ್ನಾ ಎಂಬ ಸ್ಟೀಮರಿನಲ್ಲಿ ಸಿ. ಐ. ಡಿ. ಗಳು ಜಪ್ತಿ ನಡೆಸಿ ೬ ನಳಿಗಳ ಒಂದು ರಿವಾಲ್ವರನ್ನು ಕಂಡುಹಿಡಿದಿದ್ದಾರೆ

— ಶ್ರೀಯುತ ಜೆ. ಎಮ್. ಸೇನಗುಪ್ತರ ಆರೋಗ್ಯ ಸ್ಥಿತಿಯು ಆಶಾತುರಕ್ಕೆ ಕಾರಣೀಭೂತವಾಗಿದೆಯೆಂದೂ ಅವರು ಈಗ ಕಲ್ಕತ್ತದ ಬಕ್ಸ್ ಜೈಲಿನಲ್ಲಿ ಪತ್ತೆ ಸಮೀಕ್ಷವಾದ ಚಿಕಿತ್ಸೆಯಲ್ಲಿರುವರೆಂದೂ ಪ್ರಕಟವಾಗಿದೆ.

— ಮುಂಬಾಯಿಯಲ್ಲಿ ವಿ. ಕೆ. ಜವೇರಿ ಎಂಬ ಸ್ವಯಂಸೇವಕನು ಕಾಂಗ್ರೆಸ್ ಕರಪತ್ರಗಳನ್ನು ಕೊಂಡೊಯ್ಯುತ್ತಿರುವಾಗ ಪೋಲೀಸರು ಅವನ ಕಾರನ್ನು ನಿಲ್ಲಿಸಿ ಜಪ್ತಿ ನಡೆಸಿದರು ೩೦೦೦ ಬುಲ್ಲೆಟಿನುಗಳು ದೊರೆತುವು

— ಮುಂಬಾಯಿಯ ಕಾಂಗ್ರೆಸ್ಸಿಗೆ ಆಧಾರಭೂತವಾಗಿದ್ದು ಅದರ ಕೆಲಸಗಳನ್ನು ಗುಪ್ತವಾಗಿ ಮುಂದರಿಸುತ್ತಿದ್ದ ಶ್ರೀ ಉಮಾಶಂಕರ ದೀಕ್ಷಿತ್ ಎಂಬವರನ್ನು ನಾಸಿಕ ಜೈಲಿಗೆ ವರ್ಗಾಯಿಸಿದರು

— ಪಂಡಿತ ಮಾಲವೀಯರು ಬೇಗನೆ ಮುಂಬಾಯಿಗೆ ಹೋಗಿ ಅಲ್ಲಿಯ ವರ್ತಕರೊಡನೆ ಮಾತುಕತೆಗಳನ್ನು ನಡೆಸಲಿರುವರೆಂದು ತಿಳಿದುಬರುತ್ತದೆ

— ಕೇರಳ ಪ್ರಾಂತ್ಯದ ಸೂರಲ್‌ಪೇಟೆಯೆಂಬಲ್ಲಿ ಕಡಲು ಉಕ್ಕಿ ಇಳಿದುಹೋದುದರಿಂದಾಗಿ ಕಡಲತಡಿಯಲ್ಲಿ ರಾಶಿಬಿದ್ದ ಗೋಣಿಗೋಣಿ ಉಪ್ಪನ್ನು ಅಲ್ಲಿಯ ಮೂರು ನಾಲ್ಕು ಸಾವಿರ ಜನರು ಹೊತ್ತುಕೊಂಡು ಹೋಗುತ್ತಿದ್ದರು ಒಂದೆರಡು ದಿನಗಳ ತನಕ ಇದು ನಡೆದ ಮೇಲೆ ಉಪ್ಪಿನ ಅಧಿಕಾರಿಗಳಿಗೆ ಇದು ತಿಳಿದು ಬಂದೊಡನೆ ಪೋಲೀಸ ಫೌಜು ಅಲ್ಲಿಗೆ ಓಡಿತು ಅಷ್ಟು ಸಾವಿರ ಜನರಲ್ಲಿ ೧೮೭ ಮಂದಿಗಳನ್ನು ಕೈದುಮಾಡಿ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ - ಲಾಠಿ ಚಾರ್ಜು ನಡೆಯಿತು!

— ತಿನ್ನೆವೆಲ್ಲಿಯಲ್ಲಿನ ನಂಗುನೇರಿಯಲ್ಲಿ ಭೂಮಿಯ ಕುರಿತು ಚರ್ಚೆಯೆದ್ದು ೬ ಮಂದಿಗಳು ಜಗಳಮಾಡಿ ಗುಂಡಿನಿಂದ ಬಿದ್ದರು. ೪ ಮಂದಿಗಳು ತಿವಿಯಲ್ಪಟ್ಟರು

— "ಓರ್ಡಿನೆನ್ಸ್ ದಿನಾಚರಣೆ"ಯನ್ನು ಪೇಶಾವರದಲ್ಲಿ ನಡೆಸಿದುದಕ್ಕಾಗಿ ನವಜೀವನ ಭಾರತ ಸಭೆಯ ಮಿ|| ಅಬ್ದುಲ್ಲಾ ಖಂಜಾರ್ ಎಂಬವರನ್ನು ಕೈದುಮಾಡಿದ್ದಾರೆ

— ಕಣ್ಣಾನೂರಿನ ಕ್ರಿಮಿನಲ್ ಬಂಧಿಗಳೊಳಗೆ ಜಗಳವುಂಟಾಗಿ ಅದರಲ್ಲಿ ವಾರ್ಡನರಿಗೂ ಪೆಟ್ಟು ಬಿದ್ದು ೩೦ ಮಂದಿಗಳು ಘಾಯಗೊಂಡರು ರಾಜಕೀಯ ಕೈದಿಗಳು ಬೇರೆ ಇದ್ದುದರಿಂದ ಅವರಿಗೇನೂ ಬಾಧೆಯುಂಟಾಗಲಿಲ್ಲ

ದಕ್ಷಿಣ ಕನ್ನಡ.

ಮಂಗಳೂರು: — ದಕ್ಷಿಣಕನ್ನಡ ಜಿಲ್ಲಾ ಮತ್ತು ಮಲಬಾರ ಪೋಸ್ಟಲ್ ಸುಪರಿಂಟೆಂಡೆಂಟರು ಕಳೆದ ತಿಂಗಳಲ್ಲಿ ಇಲ್ಲಿಗೆ ಚಿತ್ತೈಸಿದ್ದು, ಉಡುಪಿ, ಕುಂದಾಪುರವತ್ತ ಕಡೆ ಸಂಚರಿಸಿ ಕೊಡಿಯಾಲಬೈಲ್ ಪೋಸ್ಟಾಫೀಸಿನ ವರ್ಷಾವಧಿ ತನಿಖೆ ನಡೆಸಿ ತಾ ೨ನೇ ದಿನ ಬೆಳಿಗ್ಗೆ ಕಣ್ಣಾನೂರಿಗೆ ತೆರಳಿದರು

ಕಂಕನಾಡಿ ಪೋಸ್ಟು ಮಾಸ್ಟರರಾದ ಮಿ|| ಎಸ್. ಪಿ. ಲೋಬೋರವರು ಕೆಲಸದಿಂದ ನಿವೃತ್ತರಾದ ಕಾರಣ ಅವರಿಗೆ ಅಲ್ಲಿಯ ಪೋಸ್ಟಾಫೀಸಿನ ಉದ್ಯೋಗಸ್ಥರು ಯೋಗ್ಯವಾದ ವಿದಾಯ ಸತ್ಕಾರವನ್ನು ಮಾಡಿದರು

ಶ್ರೀಗಳಾದ ಎಚ್. ಆರ್. ಶೆಟ್ಟಿ, ವೇಣುಗೋಪಾಲರಾವ್ ಮತ್ತು ಬೆಳ್ಳೆ ಕೃಷ್ಣರಾವ್ ಇವರ ಕಡೆಯಿಂದ ಮಾಡಿದ ಅಪೀಲಿನಲ್ಲಿ ಅಪಾದಿತರಿಗೆ ಗುಣಸಿಗದೆ ಸೆಶ್ಶನ್ಸ್ ಜಡ್ಜರಿಂದ ಶಿಕ್ಷೆಯು ಕಾಯಂ ಆಯಿತು.

ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ ಶಾರದಾ ಮತ್ತು ಕೊಹಿನೂರು ಫಿಲ್ಮ ಕಂಪೆನಿಯ ನಟಿಯರಾದ ಮಿಸ್ ಸಾಲು ಮತ್ತು ಮಿಸ್ ಹೀರಾ ಎಂಬವರ ಗಾನ ನರ್ತನವು ಪ್ರಾರಂಭವಾಗಿದೆ ಇದರೊಡನೆ ಜಗತ್ಪ್ರಸಿದ್ಧನಾದ ಎಡ್ಡಿ ಪೋಲೋವಿನಿಂದ ಅಭಿನಯಿಸಲ್ಪಟ್ಟ ದಿ ಮೆಟರ್ ಆಫ್ ಲೈಫ್ ಎಂಡ್ ಡೆತ್ ಎಂಬ ಚಲಚಿತ್ರವು ಪ್ರದರ್ಶಿಸಲ್ಪಡುತ್ತಿದೆ.

ಈ ಸಲದ ಗುತ್ತೆ ಏಲಂ ಇಲ್ಲಿಯ ತಾಲೂಕು ಆಫೀಸಿನಲ್ಲಿ ಮಂಗಳವಾರ ದಿನ ನಡೆಯಿತು. ಎಲ್ಲಾ ಗುತ್ತೆಗಳು ಕಳೆದ ವರ್ಷಕ್ಕಿಂತ ಹೆಚ್ಚಿನ ಮೊಬಲಗಿಗೆ ಏಲಂ ಆಯಿತೆಂದು ತಿಳಿದುಬಂದಿದೆ

ಕಾಸರಗೋಡಿನ ದಿ ಖಾದಿ ವರ್ಕ್ಸ್ ಎಂಡ್ ಸ್ವದೇಶಿ ಸ್ಟೋರ್ಸ್ ಲಿಮಿಟೆಡ್ ಎಂಬ ಸ್ವದೇಶಿ ಸಂಸ್ಥೆಯು ಕಳೆದ ವರ್ಷ ಸಂಸ್ಥಾಪಿಸಲ್ಪಟ್ಟದ್ದು, ಅದು ತನ್ನ ಕೆಲಸವನ್ನು ಯೋಗ್ಯರೀತಿಯಿಂದ ನಡೆಸಿಕೊಂಡು ಬರುತ್ತದಷ್ಟೆ! ಆ ಸಂಸ್ಥೆಯ ಹೆಡ್ ಆಫೀಸನ್ನು ಕಾಸರಗೋಡಿನಿಂದ ಬೇಗನೆ ಇಲ್ಲಿಗೆ ವರ್ಗಾಯಿಸಲಿರುವರೆಂದೂ, ಅದನ್ನು ಇಲ್ಲಿಯ ಬೈ ಇಂಡಿಯನ್ ಲೀಗಿನ ಅಧಿಕಾರಕ್ಕೊಳಪಡಿಸಲಿರುತ್ತಾರೆಂದೂ ತತ್ಸಂಬಂಧವಾಗಿ ಆ ಕಂಪೆನಿಯ ಮೆನೆಜಿಂಗ್ ಡೈರೆಕ್ಟರರಿಗೂ ಬೈ ಇಂಡಿಯನ್ ಲೀಗಿನ ಅಧ್ಯಕ್ಷರಿಗೂ ಪತ್ರವ್ಯವಹಾರವು ನಡೆಯುತ್ತಲಿರುವುದೆಂದೂ ತಿಳಿದುಬಂದಿದೆ ಶೇರು ಒಂದಕ್ಕೆ ಹತ್ತು ರೂಪಾಯಿಯ ೫೦೦೦ ಶೇರುಗಳ ೫೦,೦೦೦ ರೂಪಾಯಿ ಮೂಲಧನವಾದವನ್ನಿಟ್ಟು ಕಾರ್ಯರಂಗಕ್ಕಿಳಿಯಬೇಕೆಂದು ಸದರಿ ಸಂಪೆನಿಯು ಆಶೆಯಾಗಿತ್ತಾದರೂ, ಈಗಿನ ಆರ್ಥಿಕ ದುಸ್ಥಿತಿಯಿಂದಾಗಿ ಬರೇ ೫೦೦ ಶೇರುಗಳಿಂದ ಕೆಲಸವನ್ನು ಮುಂದೊತ್ತುವ ಸಂದಿಗ್ಧ ಸ್ಥಿತಿಯು ಒದಗಿದೆ ಲೀಗಿನ ಉದ್ದೇಶವೂ ಸ್ಟೋರಿನ ಆದರ್ಶವೂ ಸ್ವದೇಶಿ ಪ್ರಚಾರವೇ ಆಗಿರುವುದರಿಂದ ಇವೆರಡೂ ಸಂಸ್ಥೆಗಳು ಸಮ್ಮಿಳಿತವಾಗುವುದು ಅತ್ಯಂತ ಶ್ರೇಯಸ್ಕರವಾಗುತ್ತದೆ

ಕಳೆದ ತಾ ೩೧ನೇ ದಿನ ಇಲ್ಲಿಯ ಮಿತ್ರ ಮಂಡಳಿಯವರ ವರ್ಷಾರಂಭ ಸಭೆಯು ಕೆನರಾ ಹೈಸ್ಕೂಲಿನ ಶ್ರೀ ಭುವನೇಂದ್ರ ಸಭಾಸದನದಲ್ಲಿ ನಡೆಯಿತು ಶ್ರೀ ಉಳ್ಳಾಲ ಮಂಗೇಶರಾಯರು ವರ್ಷಾರಂಭದ ಭಾಷಣವಿತ್ತು ಮಂಡಳಿಯವರಿಗೆ ಉತ್ತಮ ಸಲಹೆಗಳನ್ನು ಕೊಟ್ಟರು

ಮಂಗಳೂರು ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯ ಎರಡು ಸ್ಥಾನಗಳಲ್ಲಿ ಒಂದಕ್ಕೆ ಡಾ|| ವಿಠ್ಠಲ ಶೆಟ್ಟಿಯೂ, ಇನ್ನೊಂದಕ್ಕೆ ರಾವ್ ಬಹದೂರ ನೆಲ್ಲಿಕಾಯಿ ವೆಂಕಟರಾಯರೂ ಉಮೇದ್ವಾರರಾಗಿ ನಿಲ್ಲಲಿರುತ್ತಾರೆಂದು ತಿಳಿದುಬರುತ್ತದೆ

ತುಳುಭಾಷಾ ಪ್ರಚಾರಾರ್ಥವಾಗಿ ಮದ್ರಾಸಿನ ಡಾಕ್ಟರ್ ಯು. ರಾಮರಾವ್ ಇವರು ರೂಪಾಯಿ ಐವತ್ತನ್ನು ದಾನವಾಗಿ ಕೊಟ್ಟಿರುತ್ತಾರಾಗಿಯೂ, ಇದೇ ರೀತಿಯನ್ನನುಸರಿಸಿ ಇತರ ಉದಾರ ತುಳುಭಾಷಾಭಿಮಾನಿಗಳೂ ಔದಾರ್ಯದಿಂದ ಸಹಾಯವನ್ನು ಕರುಣಿಸಬೇಕಾಗಿಯೂ ತುಳುವ ಮಹಾಸಭೆಯ ಕಾರ್ಯದರ್ಶಿಯವರು ಅರಿಕೆ ಮಾಡಿಕೊಂಡಿರುತ್ತಾರೆ.

ಕಾಯಿದೆಭಂಗ ಪ್ರೋತ್ಸಾಹಕರೆಂಬ ಅಪಾದನೆಯ ಮೇಲೆ ೬ ತಿಂಗಳ ಶಿಕ್ಷೆಗೆ ಗುರಿಯಾಗಿದ್ದ ಶ್ರೀ ಕೆ. ತಿಮ್ಮಪ್ಪ ಶೆಟ್ಟರು ಸೆಶ್ಶನ್ಸ್ ಜಡ್ಜರಲ್ಲಿ ಅಪೀಲುಮಾಡಿ ಈಗ ವಿಮುಕ್ತರಾದರೆಂದು ತಿಳಿದುಬಂದಿದೆ

ಪ್ರತಿ ತಿಂಗಳಾಂತ್ಯದ ರವಿವಾರ ಜರಗುವ ಧ್ವಜವಂದನೆಯು ಕಳೆದ ಆದಿತ್ಯವಾರ ದಿನ ದೊಡ್ಡ ಮೈದಾನಿನಲ್ಲಿ ನಡೆಯಿತು ಕೈದುಗಳಾಗಿವೆ

ಮಂಗಳವಾರ ದಿನ ಗುತ್ತೆ ಏಲಂ ಅಷ್ಟೆ! ನಗರದಲ್ಲೆಲ್ಲಾ ಹರತಾಳವಾಚರಿಸಲ್ಪಟ್ಟಿದ್ದಿತು ಗುತ್ತೆದಾರರನ್ನು ಪಿಕೆಟ್‌ಮಾಡಲೆತ್ನಿಸಿದ ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟಿದ್ದಾರೆ

ಕಾಸರಗೋಡಿನ ಶ್ರೀಯುತ ನಾರಾಯಣ ನಾಯ್ಕರೆಂಬ ವರ್ತಕರೊಬ್ಬರು ತಾನು ತನ್ನ ಅಂಗಡಿಯಲ್ಲಿ ಕುಳಿತಿದ್ದಾಗ ಮಿ|| ಸಿಲ್ವರೆಂಬ ಪ್ರೊಬೇಶನರಿ ಸಬ್ ಇನ್ಸ್‌ಪೆಕ್ಟರರು ಬಂದು ತನಗೆ ನಿಷ್ಕಾರಣವಾಗಿ ಹೊಡೆದುಹೋದರೆಂದು ಕಾಸರಗೋಡು ಸಬ್ ಮೆಜಿಸ್ಟ್ರೇಟರಲ್ಲಿ ನಡೆಸಿದ ಖಟ್ಲೆಯನ್ನು "ಅಪಾದಿತರು ಒಬ್ಬ ಜವಾಬ್ದಾರಿ ಆಫೀಸರರು; ಇವರೊಳಗೆ ಯಾವ ದ್ವೇಷವೂ ಇರಲಿಲ್ಲವಾದ ಕಾರಣ, ಹೊಡೆಯುವ ಕಾರಣವೂ ಇಲ್ಲ, ಹುಚ್ಚರು ಮಾತ್ರ ಹಾಗೆ ಮಾಡುವರು" ಎಂದು ತೆಗೆದು ಹಾಕಿದ್ದರು. ಮಂಗಳೂರು ಸೆಶ್ಶನ್ಸ್ ಜಡ್ಜರಲ್ಲಿ ಅಪ್ಪೀಲಾಗಲು "ಖಟ್ಲೆಯನ್ನು ತೆಗೆದುಹಾಕಿದುದು ಸರಿಯಲ್ಲ ರಾಜಕೀಯ ಚಳವಳಿಯ ಈ ಹಸಿಬಿಸಿ ದಿನಗಳಲ್ಲಿ ಪೋಲಿಸ್ ಅಧಿಕಾರಿಗಳಾದರೂ ಹಾಗೆ ಮಾಡುವುದು ಅಸಂಭವನೀಯವಲ್ಲ" ಎಂಬರ್ಥದ ಅಭಿಪ್ರಾಯದ ಮೇಲೆ ಖಟ್ಲೆಯ ಪುನರ್ವಿಚಾರಣೆಗೆ ಅಪ್ಪಣೆಕೊಟ್ಟಿರುವರೆಂದು ತಿಳಿದುಬರುತ್ತದೆ.

ಇಲ್ಲಿಯ 'ಜವಾಹರಲಾಲ್ ಕೊಟೇಜ್ ಇಂಡಸ್ಟ್ರೀಸ್' ಎಂಬ ಸ್ವದೇಶಿ ಸಂಸ್ಥೆಯವರ ಸ್ವದೇಶಿ ಗುಂಡಿಗಳ ಪ್ರಾಶಸ್ತಿಗಾಗಿ ಮದ್ರಾಸಿನಲ್ಲಿ ನಡೆದ ಸ್ವದೇಶಿವಸ್ತುಪ್ರದರ್ಶನದಲ್ಲಿ ಸುವರ್ಣಪದಕವು ದೊರೆತಿದೆಯಾಗಿ ತಿಳಿದುಬರುತ್ತದೆ

ತಾರೀಕು ೩೦-೭-೧೯೩೨ನೇ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೩೨ ಮರಣಗಳೂ ೬೦ ಜನನಗಳೂ ಆಗಿವೆ

ಇಲ್ಲಿಯ ಸೆರೆಯಲ್ಲಿ ಶಿಕ್ಷೆಯನ್ನನುಭವಿಸುತ್ತಿದ್ದ ಶ್ರೀ ಕೆ. ನಾರಾಯಣಶೆಟ್ಟಿ, ಶ್ರೀ ತಿಮ್ಮಪ್ಪ ಶೆಟ್ಟಿ, ಶ್ರೀ ನರಸಿಂಹ ಪ್ರಭು ಇವರನ್ನು ಕಣ್ಣಾನೂರು ಜೈಲಿಗೂ, ಶ್ರೀಗಳಾದ ಕೋಚಣ್ಣ ಭಂಡಾರಿ, ಬಿ. ಎ. ಅನಂತ ರೈ ಇವರನ್ನು ವೆಲ್ಲೂರಿನ ಜೈಲಿಗೂ ಕೊಂಡೊಯ್ದಿರುವರು ಶ್ರೀಮತಿ ಮನೋರಮಾ ಬಾಯಿಯವರನ್ನೂ ವೆಲ್ಲೂರಿಗೆ ವರ್ಗಾಯಿಸಿರುವರು

ಪ್ರೊಫೆಸರ್ ರಾಮರಾಯರ ಖಟ್ಲೆಯ ವಿಚಾರಣೆಯು ಬರುವ ತಿಂಗಳಿಗೆ ಇರಿಸಲ್ಪಟ್ಟಿತೆಂದೂ ಶ್ರೀ ಎ. ಆನಂದರಾಯರ ಮೇಲಿನ ತನಿಖೆಯೂ ಹಿಂದಕ್ಕಿರಿಸಲ್ಪಟ್ಟಿತೆಂದೂ ತಿಳಿದುಬರುತ್ತದೆ

ಸುರತಕಲ್ — ಇಡ್ಯ ಹೊಸಬೆಟ್ಟು ಗ್ರಾಮಗಳಲ್ಲಿ ಸಾಧಾರಣ ೨೦ ದಿನಗಳಿಂದೀಚೆಗೆ ಹುಚ್ಚು ನಾಯಿಗಳ ಕಾಟವು ಬಹಳವಾಗಿದೆ. ಅದರೆ, ಈಗೀಗ ಹೊಸಬೆಟ್ಟು ಗ್ರಾಮದ ಪಟೇಲರ ಮತ್ತು ರಘು ದಾಮೋದರರಾಯರ ಚಟುವಟಿಕೆಗಳಿಂದ ನಿಲ್ಲುತ್ತಾ ಬಂದಿದೆ. ಇಡ್ಯ ಗ್ರಾಮಕ್ಕೆ ಪಂಚಾಯತರಿರುವಾಗ ಪಟೇಲರ ಅಗತ್ಯವಿಲ್ಲ ಪಂಚಾಯತರು ಬೆಚ್ಚಗಿದ್ದಾರೆ ನಾಯಿಗಳನ್ನು ಕೊಲ್ಲಿಸುವ ಯಾವ ವ್ಯವಸ್ಥೆಯೂ ಇಲ್ಲದಿರುವುದು ಬಹಳ ವ್ಯಸನಾಸ್ಪದ

ಇಲ್ಲಿ ಪ್ರತಿ ಒಂದು ಮನೆಯಲ್ಲೆಂಬಂತೆ ವಿಷಮಜ್ವರವು ಇದ್ದು ಗ್ರಾಮವು ನಿದ್ರಾವಸ್ಥೆಯಲ್ಲಿದ್ದಂತೆ ತೋರುವುದು ಕಾಲಸ್ಥಿತಿ

ಉಡುಪಿ: — ಇಲ್ಲಿಂದ ಸತ್ಯಾಗ್ರಹಕ್ಕಾಗಿ ೪ ತಿಂಗಳ ಕಠಿಣ ಸಜೆಯನ್ನನುಭವಿಸಿದ ಶ್ರೀ ಎಚ್. ಪಾಂಡುರಂಗ ಭಟ್ಟರು ಬಿಡುಗಡೆ ಹೊಂದಿದ್ದು ಇಲ್ಲಿಗೆ ಮರಳಿರುತ್ತಾರೆ.

ಕಳೆದ ತಾ ೪ರಲ್ಲಿ ಮೆರವಣಿಗೆ ನಡೆಸಿದರಾಗಿ ಸಮನ್ಸು ಮೇರೆಗೆ ತಾ ೨೮ಕ್ಕೆ ಮುಂದರಿಸಲಾದ ವಿಚಾರಣೆಯ ಫಲವಾಗಿ ಶ್ರೀಗಳಾದ ಐರೋಡಿ ರಾಮದಾಸಪ್ಪ ಮತ್ತು ಕೆ. ದೇವರಾಯ ಕಮ್ತಿಯರ ಮೇಲೆ ತಪ್ಪು ಸ್ಥಾಪನೆಯಾಗಿ, ೧೪೩ ಕ್ರಿ. ಪ್ರೋ. ಕೋ. ಮತ್ತು ೧೭ (೧) ಕ್ರಿ. ಲೋ. ಎ. ಆಕ್ಟಿನ ಮೇರೆಗೆ ಮೂರು ಮೂರು ತಿಂಗಳ ಮತ್ತು ೧೮೫ ಕ್ರಿ. ಪ್ರೋ. ಕೋಡಿನ ಮೇರೆಗೆ ೬ ತಿಂಗಳ ಕಠಿಣ ಸಜೆಯು ಇಬ್ಬರ ಮೇಲೂ ಹೊರಿಸಲಾಯಿತು ಇಬ್ಬರೂ ಈಚೆಗೆ ಬಂಧವಿಮುಕ್ತರಾಗಿ ಬಂದವರಿರುತ್ತಾರೆ ಸಜೆಯು ಒಮ್ಮೆಯೇ ಅನುಭವಿಸತಕ್ಕದ್ದಾಗಿದೆ

ತಾ ೨೮ನೆಗೆ ಬಿ. ತಿಮ್ಮಪ್ಪ ಹೆಗ್ಡೆಯರ ಮೇಲೂ ಅದೇ ತಕ್ಸೀರಿನ ಮೇಲೆ ತಪ್ಪುಸ್ಥಾಪನೆಯಾಗಿ ೪ ತಿಂಗಳ ಕಠಿಣ ಸಜೆಯು ವಿಧಿಸಲಾಯಿತು.

ಅದೇ ತಾ ೩ನೆಗೆ ಶ್ರೀ ವಾಮನಭಟ್ಟರನ್ನು ಶಾಸನೋಲ್ಲಂಘನ ಸಲುವಾಗಿ ೩ ತಿಂಗಳ ಕಠಿಣ ಸಜೆಗೆ ಗುರಿಮಾಡಲಾಯಿತು

ತಾ ೩೧ನೆ ಆದಿತ್ಯವಾರ ಮುಂಜಾಗ್ರತವಾಗಿ ಪೋಲೀಸರ ಪಹರೆ ಇದ್ದಿತಾದರೂ ಬೆಳಿಗ್ಗೆ ೮ ಘಂಟೆಗೆ ವಾಡಿಕೆಯಂತೆ ಧ್ವಜವಂದನೆಯೂ ಇತ್ತು, ಅಂದೇ ಬೆಳಿಗ್ಗೆ ಪ್ರಭಾತಫೇರಿಯೂ ಇತ್ತು

ಅಗಿಂದಾಗ ಶ್ರೀ ವೆಲ್ಲಿಸೇಟರಲ್ಲಿ, ಪರದೇಶೀ ವಸ್ತ್ರಕ್ಕಾಗಿ ಪಹರೆಯೂ ಕೈದೂ ಮರುದಿನ ಬಿಡುಗಡೆಯೂ ಆಗುತ್ತಲಿವೆ

ಪರದೇಶೀ ವಸ್ತ್ರದ ಪಹರೆ ನಿಮಿತ್ತವಾಗಿ ೩ ತಿಂಗಳ ಶಿಕ್ಷೆಯನ್ನನುಭವಿಸಿದ ಶ್ರೀ ಅಂಬಾಬಾಯಿ ಮತ್ತು ಗಿರಿಜಾಬಾಯಿಯವರು ತಾ ೩೦ಕ್ಕೆ ಬಿಡುಗಡೆಹೊಂದಿ ಇಲ್ಲಿಗೆ ಬಂದಿರುವರು

ಕಾಸರಗೋಡು — (ತಾ ೨೯) ಮುಹಮ್ಮದ ಪೈಗಂಬರರ ಜನ್ಮದಿನಾಚರಣೆಯು ಈ ಮೊದಲೇ ನಿಶ್ಚಯವಾದಂತೆ, ಆ ಬಗ್ಗೆ ನಿಯಮಿತವಾದ ಕಮಿಟಿಯವರ ಉತ್ಸಾಹದಿಂದ ಈ ದಿನ ಸಾಯಂಕಾಲ ೫ ಘಂಟೆಗೆ ಕಾಸರಗೋಡು ಕ್ಲಬ್ಬಿನ ವಠಾರದಲ್ಲಿ ಜಿಲ್ಲಾ ಕಲೆಕ್ಟರ್ ಮಿ|| ಜೆ. ಹುಸೈನ್ ಸಾಹೇಬ್ ಬಾರ್ ಎಟ್ ಲೋ ಇವರ ಅಧ್ಯಕ್ಷತೆಯಲ್ಲಿ ಜರಗಿತು

ಶಾಲಿವಾಹನಶಕ ೧೮೫೪ನೆಯ, ಅಂಗೀರಸ ಸಂ|ರದ ಶ್ರಾವಣ ಶು|| ೪ ಶನಿವಾರದಿಂದ ಅಂಗೀರಸ ಸಂ|ರದ ಶ್ರಾವಣ ಶು|| ೧೧ ಶುಕ್ರವಾರದ ವರೆಗಿನ ಪಂಚಾಂಗ

(ಗಾಣಿತಿಕೆಯ ಕರ್ಣಾಟಕ — ೮೯).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
6	ಶನಿ	೪	೦೦ ೩೧	ಉತ್ತರಾ	೧೮ ೧೩	೨೨	6 19	6 54
7	ರವಿ	೫	೩ ೧೪	ಹಸ್ತಾ	೦೪ ೪೩	೨೩	6 9	6 53
8	ಸೋಮ	೬	೦ ೧೩	ಚಿತ್ರಾ	೧೧ ೨	೨೪	6 19	6 53
9	ಕುಜ	೮	೪೮ ೧೪	ಸ್ವಾತೀ	೩ ೪೩	೨೫	6 19	6 53
10	ಬುಧ	೯	೪೨ ೧೮	ವಿಶಾಖಾ	೨ ೪೦	೨೬	6 19	6 52
11	ಗುರು	೧೦	೩೩ ೪೪	ಜ್ಯೇಷ್ಠಾ	೫೫ ೩೧	೨೭	6 19	6 5
12	ಶುಕ್ರ	೧೧	೩೨ ೨	ಮೂಲಾ	೫೧ ೪೪	೨೮	6 19	6 1

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ/ಶಾವು Maximum ಹೆಚ್ಚಾದದ್ದು	Temperature ಉಷ್ಣ/ಶಾವು Minimum ಅಲ್ಪದ	Rainfall ಮಳೆ ದಿನದ ಮಳೆ	Rainfall ಮಳೆ ಜುಮಲಾ ಮಳೆ
29	84— 7	74— 9	0—82	—
30	85— 0	76— 5	0—16	—
31	85— 6	75 - 7	0—38	—
1	84 – 5	75— 9	0—20	—
2	85— 2	73 9	0—53	—
3	83— 5	75 1	0—18	—
4	81— 4	73— 2	0— 83	72–17

ಮಂಗಳೂರಿನ ಪೇಟೆ ಧಾರಣಿ.

ಜಿನಸು	ಇಂದ ರೂ	ಇಂದ ಆ	ವರೆಗೆ ರೂ	ವರೆಗೆ ಆ
ರಾಶಿ ಅಕ್ಕಿ	3	8	4	2
ಮುಸ್ಸತಿ	4	8	4	14
ಗುಡ್ಡ	4	0	4	6
ಸುಗ್ಗಿ	3	1	4	1
ಊರೆ ಅವ್ವಲ್ ಬೆಳ್ತಿಗೆ	4	12	5	9
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8	0	8	4
ಎಕ್ಸ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4	10	4	12
ಗೋಧಿ ಗೋಣಿ ೧ಕ್ಕೆ	4	8	14	8
ತೊಗರಿ ಗೋಣಿ ೧ಕ್ಕೆ	12	0	14	8
ಹುರುಳಿ ಗೋಣಿ ೧ಕ್ಕೆ	6	2	7	4
ಕಡಲೆ ಗೋಣಿ ೧ಕ್ಕೆ	8	8	12	8
ತೊಗರಿಬೇಳೆ ಗೋಣಿ ೧ಕ್ಕೆ	13	8	21	0
ಉದ್ದು ಗೋಣಿ ೧ಕ್ಕೆ	11	8	13	
ಹೆಸರು ಗೋಣಿ ೧ಕ್ಕೆ	10	4	11	
ಊರುಬೆಲ್ಲ ಖಂಡಿ ೧ಕ್ಕೆ	32	8	36	0
ಉಪ್ಪು ಗೋಣಿ ೧ಕ್ಕೆ	5	14	6	0
ಕೊಬ್ರಿ ಖಂಡಿ ೧ಕ್ಕೆ	66		7	
ಕೊಬ್ರಿ, ಒಂದಿ ಖಂಡಿ ೧ಕ್ಕೆ	—		33	8
ಎಳ್ಳಂಡಿ ಖಂಡಿ ೧ಕ್ಕೆ	20	0	—	
ಕೊಬ್ರಿ ಎಣ್ಣೆ ಮಣ ೧ಕ್ಕೆ	5	8	6	8
ಎಳ್ಳೆಣ್ಣೆ ಮಣ ೧ಕ್ಕೆ	6	12	7	
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	4	7	8	1
ಮಾರೀಶಸ್ ಸಕ್ಕರೆ ಮಣ ೧ಕ್ಕೆ	4	4	4	5
ಜೋನಿ ಮೆಣಸು	4	0	6	0
ಸಾಸಿವೆ ಮುಡಿ ೧ಕ್ಕೆ	5	4	6	8
ಪೇಟೆಂಟ್ ಕಾಫಿ ಖಂಡಿ ೧ಕ್ಕೆ	270	0	300	
ಕಾಳುಮೆಣಸು ಖಂಡಿ ೧ಕ್ಕೆ	170	0	180	
ಯೇಲಕ್ಕಿ ಮಣ ೧ಕ್ಕೆ	27	0	28	
ಗೇರುಬೀಜ ಮುಡಿ ೧ಕ್ಕೆ	2	12	3	0
[illegible] ಖಂಡಿ ೧ಕ್ಕೆ	35	0	36	8
ಜಾಂವ್ಸು ತಗಡು ಮಣ ೧ಕ್ಕೆ	12	8	13	0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	16	0	16	0
ಹಿತ್ತಾಳೆ ಸೇರು ೧ಕ್ಕೆ	14	4	14	12
ಹಿತ್ತಾಳೆ ತಗಡು ಮಣ ೧ಕ್ಕೆ	12	0	14	
ಜಸತು ೧ಕ್ಕೆ	17	14	18	0
[illegible] ಖಂಡಿ ೧ಕ್ಕೆ	40		—	
[illegible] ಖಂಡಿ ೧ಕ್ಕೆ	340		—	
ಹಳೆ ಅಡಿಕೆ	150		205	
ಹೊಸ ಅಡಿಕೆ	140		145	

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಂಬಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಯಲ್ಲಿ ನಿರ್ಮಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ದೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ [illegible] ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧| ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary

The Canara Public Conveyance Company Ltd Mangalore

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು(M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು, ಬೆಳ್ತಂಗಡಿ ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು ೬ ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಾ 1 30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪|| ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದಲ್ಪಟ್ಟಿದ್ದು ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಪುರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಶೆಟ್ಟಿ—ಪ್ರೊಪ್ರೈಟರ್ಸ್.

ಹಿಂದೂದೇಶದಲ್ಲಿ ರಕ್ತಪಾತ.

ಜೈನವರಿಗೆ "ಅಹಿಂಸೆ"ಯೆಂಬುದರ ಅರ್ಥವೇ ತಿಳಿದಿಲ್ಲ. ತಮ್ಮಂತಹ ಮನುಷ್ಯ ಪಾತ್ರರಾದವರಿಗೆ ಹಿಂಸೆಮಾಡದಿರುವುದು ಅಹಿಂಸೆಯೆಂದು ಕೆಲವರೆನ್ನುವರು ಒಬ್ಬನಿಗೆ ಕೈಯಲ್ಲಿ ಗುದ್ದಿದರೆ ಹಿಂಸೆಯಾಗಲಾರದೆಂದು ಹಲವರೆನ್ನುವರು ಕತ್ತಿ, ಖಡ್ಗಗಳನ್ನುಪಯೋಗಿಸಿದ ವಿನಹಾ ಹಿಂಸೆಯಾಗಲಾರದೆಂದು ಮತ್ತೆ ಕೆಲವರು ಅಭಿಪ್ರಾಯಪಡುವರು ಮತ್ತೂ ಕೆಲವರಿರುವರು, ಪ್ರಾಣವುಳ್ಳ ಯಾವ ಪ್ರಾಣಿಗೂ ಹಾನಿಯನ್ನು ಬಯಸಬಾರದೆಂದು ಅವರು ಪ್ರತಿಪಾದಿಸುವರು ಅಹಿಂಸೆಯ ನಿಜಾರ್ಥವನ್ನು ಬಲ್ಲವರು ಇವರೇ

ಹಿಂದೂದೇಶದಲ್ಲಿ ನಡೆಯುವ ರಕ್ತಪಾತಕ್ಕೆಡೆಯಿಲ್ಲ ವೈದಿಕ ಧರ್ಮವಿರುದ್ಧವೆಂಬ ಹೆದರಿಕೆಯಿಂದ ಹಿಂದೀಯರು ಜನಹಾನಿಯನ್ನುಂಟುಮಾಡುವುದರಲ್ಲಿ ಪ್ರವೃತ್ತರಾಗಿಲ್ಲವಾದರೂ, ಹಿಂದೀಯರು ರಕ್ತಪಾತಕ್ಕೆ ಬೆದರುವರಾದರೂ, ಅವರು ಮೃಗಪಕ್ಷಿಗಳನ್ನು ಕೊಂದು ಘಳಿಸುವ ಪಾತಕಕ್ಕೆ ಮಿತಿಯಿರುವುದಿಲ್ಲ ಸನಾತನ ಧರ್ಮಾವಲಂಬಿಗಳಾಗಿರುವ ಜನರ ವಾಸಸ್ಥಾನವಾದ ಹಿಂದೂದೇಶದಲ್ಲಿ ನಡೆಯುವ ಈ ಪ್ರಾಣಿಹಿಂಸೆಯು ನಿಜವಾಗಿಯೂ, ಹಿಂದೀಯರಿಗೆ ಅಪಯಶಸ್ಸನ್ನು ತರದಿರುವಂತಹುದಲ್ಲ

ಧರ್ಮದ ನೆವದಿಂದ ಮಿಲಿಯಗಟ್ಟಳೆ ಪ್ರಾಣಿಗಳು ದೇವಿದೇವತೆಗಳ ಮೂರ್ತಿಗಳೆದುರು ವಧಿಸಲ್ಪಡುವ ರೀತಿನಿಯಮಗಳೆಂತೂ ಇವೆಯಷ್ಟೆ! ಜನರ ಆಹಾರಾರ್ಥವಾಗಿ ಆಗಿಹೋಗುವ ಪ್ರಾಣಿಹಿಂಸೆಯೆಂತೂ ಇದೆಯಷ್ಟೆ! ನಮ್ಮ ಜನರು ವಿಹಾರಾರ್ಥವಾಗಿ ಮಾಡುವ ಪ್ರಾಣಿವಧೆಯು ಎಷ್ಟಿರುವುದೆಂದು ಆಲೋಚಿಸೋಣ!

ಭಗವಂತನು ಸೃಷ್ಟಿನಿಯಮವನ್ನು ಅಸಮಾನವಾದ, ಅತುಲವಾದ ಅವಿವೇಕದಿಂದಲೇ ಮಾಡಿರುತ್ತಾನೆ ತನ್ನ ಭೂಮಿಯಲ್ಲಿ ಎಷ್ಟು ಪ್ರಾಣಿಗಳು ಸುಖದಿಂದ ಜೀವಿಸಲು ಸಾಧ್ಯವಿದೆಯೋ, ಅಷ್ಟು ಪ್ರಾಣಿಗಳಿಗೆ ತಕ್ಕ ಆಹಾರವನ್ನೂ ಸ್ವಭಾವವನ್ನೂ ಅವನು ಒದಗಿಸಿಕೊಡುತ್ತಿರುತ್ತಾನೆ ಯಾವ ರೀತಿಯಲ್ಲೂ ನಿಸರ್ಗದ ತೂಗುತಕ್ಕಡಿ (Balance of Nature) ಯು ಮೇಲೆ ಅಥವಾ ಕೆಳಗಾಗದಂತೆ ನೋಡುವುದೇ ಅವನ ಕೆಲಸವಾಗಿರುತ್ತದೆ ಒಂದಕ್ಕೆ ಹುಟ್ಟನ್ನಿತ್ತರೆ ಒಂದಕ್ಕೆ ಸಾವನ್ನೀಯುವುದು ಅವನ ಲೀಲೆಯಾಗಿರುವುದು

ಭಗವಂತನ ಅಂತಹ ನಿಸರ್ಗ ತಕ್ಕಡಿಯನ್ನು ವಿವೇಕವುಳ್ಳ ಜನರು ಅವಿವೇಕಿಗಳಾಗಿ ಎಷ್ಟೊಂದು ಪ್ರಯತ್ನದಿಂದ ಮುರಿದು ಹಾಕುವುದಿಲ್ಲ? ಅವನ ಸೃಷ್ಟಿಯನ್ನು ಎಷ್ಟೊಂದು ಕಳಂಕಗೊಳಿಸುವುದಿಲ್ಲ?

ಬ್ರಿಟಿಷರು ಹಿಂದೂದೇಶಕ್ಕೆ ಬರುವ ಮೊದಲು ಹಿಂದೀಯರಲ್ಲಿ ಭೇಟೆಯ ಅಭ್ಯಾಸವೊಂದಿತ್ತು ಬ್ರಿಟಿಷರು ಬಂದ ಮೇಲೆ ಈ ಭೇಟೆಯು Sporting recreation ಎಂಬುದಾಗಿ ಮಾರ್ಪಾಟು ಹೊಂದಿತು ಮುಂಚಿನ ಕಾಲದಲ್ಲಿ ಭೇಟೆಯೆಂದರೆ ಒಬ್ಬನ ಸಾಮರ್ಥ್ಯಪರೀಕ್ಷೆಯಾಗಿತ್ತಾದರೂ, ಈಗಿನ ದಿನಗಳಲ್ಲಿ ಅಂತಹ ಭೇಟೆಗಳು ಪುರುಷತ್ವ(Manliness)ಇಲ್ಲದ ಆಟವಾಗಿ ಹೋಗಿದೆ

ವಿದೇಶೀಯರ ಗಂಧಗಾಳಿಯು ತಗಲಿದ ಐಶ್ವರ್ಯವಂತರಲ್ಲನೇಕರು ತಮ್ಮ ಜೀಲಗಳನ್ನೂ, ಬಂದೂಕುಗಳನ್ನೂ ಹಿಡಿದುಕೊಂಡು ತಮ್ಮ ಪರಿವಾರ ಸಮೇತವಾಗಿ ವನಗಳನ್ನು ಹೊಕ್ಕು, ಮರದಡ್ಡದಲ್ಲೋ ಕಲ್ಲಿನ ಮರೆಯಲ್ಲೋ ನಿಂತು ವಿಹಾರದ ಸಂತೋಷದಿಂದ ತಿರುಗಿದ ತಲೆಯುಳ್ಳವರಾಗಿ, ಮರಗಳ ಮೇಲೆ ಚಿಲಿಪಿಲಿ ಗುಟ್ಟುತ್ತ, ಇಂಪಾದ ಗಾನವನ್ನು ಮಾಡುತ್ತ, ಮರದಿಂದ ಮರಕ್ಕೆ ಹಾರಿ, ನಲಿದು, ಸಂತೋಷದಿಂದ ಕಾಲಹರಣ ಮಾಡುವ ಅಂದವಾದ ಪಕ್ಷಿಗಳನ್ನು ನಿರ್ದಯಿಗಳಾಗಿ ಕಲ್ಲು ಹೃದಯಿಗಳಾಗಿ ಧಮ್ಮನೆ ಕೊಂದಿಕ್ಕುವುದನ್ನು ನಾವು ಕಾಣುತ್ತೇವೆ. ಅಹಿಂಸಾ ಧರ್ಮಾವಲಂಬಿಗಳೆಂದು ಪೇಟೆಯಲ್ಲಿ ಮೆರೆಯುವ ಕೆಲವರು ತಮ್ಮ ಅವಿಚಾರಪರವರ್ತನೆಯನ್ನು ಸ್ವಯಂ ತಿಳಿಯಲಾರದೆ, ವನಗಳನ್ನು ನುಗ್ಗಿ ಮೃಗಪಕ್ಷಿಗಳನ್ನು ಬರೇ ತಮ್ಮ ಸಂತೋಷಾರ್ಥವಾಗಿ ಮೃತ್ಯುಶಯ್ಯೆಯಲ್ಲಿ ಮಲಗಿಸುವುದನ್ನು ನಾವು ನೋಡುತ್ತೇವೆ. ಕೊಂದಿಕ್ಕಿದ ಮೃಗಪಕ್ಷಿಗಳನ್ನು ಅವುಗಳ ಮರಣ ಸ್ಥಳದಲ್ಲೇ ಕೊಳೆಯ ಬಿಟ್ಟು ಒಂದನ್ನು ಕೊಂದ ಆನಂದದಿಂದ ಉಬ್ಬಿದ ಹೃದಯವುಳ್ಳವರಾಗಿ ವನಮಧ್ಯೆ ಪುನಃ ಧಾವಿಸಿ ಮತ್ತಿತರ ಮೂಕ ಪಕ್ಷಿಪ್ರಾಣಿಗಳನ್ನು ಅಂತ್ಯಗೊಳಿಸುವುದನ್ನು ನಾವು ಕಾಣುತ್ತೇವೆ ಆದರೂ, ಈ ವಿಹಾರ 'ಸ್ಪೋರ್ಟಿಂಗ್'ದ ಅಭ್ಯಾಸವನ್ನು ನಿಲ್ಲಿಸುವವರಿದ್ದಾರೆಯೋ?

ವಿಹಾರಾರ್ಥವಾಗಿ ನಮ್ಮ ಜನರು ಕೊಲ್ಲುವ ಪಕ್ಷಿಗಳು ಜನರಿಗೆಷ್ಟು ಉಪಕಾರಿಗಳಾಗಿವೆಯೆಂದು ಅಮೇರಿಕದಲ್ಲಿ ನಡೆದ ಈ ಒಂದು ಶೋಧೆಯಿಂದ ತಿಳಿದುಬರುತ್ತದೆ ಅಲ್ಲಿಯ ವ್ಯವಸಾಯ ಇಲಾಖೆಯವರು ಪಕ್ಷಿಗಳ ಪ್ರಯೋಜನವು ಬೇಸಾಯಗಾರರಿಗೆಯೇ ಎಂದು ಪರಿಶೋಧಿಸುವುದಕ್ಕಾಗಿ ಎರಡು ಭೂಮಿಗಳನ್ನು ಆಯ್ದು ತೆಗೆದು, ಒಂದರಲ್ಲಿ ಪಕ್ಷಿಗಳ ಹೆಸರು ಕೂಡಾ ಇಲ್ಲದಂತೆಯೂ ಒಂದರಲ್ಲಿ ಪಕ್ಷಿಗಳೆಲ್ಲಾ ಬಂದು ನೆಲೆನಿಲ್ಲುವಂತೆಯೂ ಸಾಹಸವನ್ನು ಮಾಡಿದರು ಮೊದಲನೆಯ ವ್ಯವಸಾಯ ಭೂಮಿಗೆ ಪಕ್ಷಿಗಳು ಬಂದುವೆಂದೊಡನೆ ಅವುಗಳನ್ನು ಒಡನೆ ಕೊಂದಿಕ್ಕಿದರು ಆದರೆ ಎರಡನೆಯ ಭೂಮಿಗೆ ಬಂದ ಪಕ್ಷಿಗಳು ಅಲ್ಲೇ ವಾಸಿಸುವಂತೆ ಅನುಕೂಲಿಸಿದರು ಮೂರು ವರುಷಗಳ ಪರಿಣಾಮವೇನು? ಪಕ್ಷಿಗಳಿಲ್ಲದ ಭೂಮಿಯಲ್ಲಿ ಬೆಳೆಯೇ ಆಗಲಿಲ್ಲ ಪಕ್ಷಿಗಳಿದ್ದ ಭೂಮಿಯಲ್ಲಿ ಬೆಳೆಯು ಹುಲುಸಾಗಿ ಬೆಳೆಯಿತು! ಇದಕ್ಕೆ ಕಾರಣವಾದರೂ ಏನು?

ಮೊದಲನೆಯ ಭೂಮಿಯಲ್ಲಿ ವೃದ್ಧಿಸುತ್ತಿರುವ ಕ್ರಿಮಿಕೀಟಗಳನ್ನು ಅಧ್ವಂತಪಿಸಲು ಪಕ್ಷಿಗಳಿಲ್ಲವಾಯಿತು. ಎರಡನೆಯ ಭೂಮಿಯಲ್ಲಿ ಕ್ರಿಮಿಕೀಟಗಳ ನಾಮಾವಶೇಷವೂ ಕೂಡಾ ಈ ಪಕ್ಷಿಗಳ ದೆಸೆಯಿಂದಾಗಿ ಉಳಿಯಲಾರದಾಯಿತು. ಇದರಿಂದಾಗಿಯೇ ಆ ಎರಡು ಭೂಮಿಗಳಲ್ಲಿ ಅಂತಮ್ಯವು ಕಂಡುಬಂತು

ಗೋದಾವರಿಯ ಸಮೀಪ "ಕಾಕತೋಟಂ" ಎಂಬ ತೆಂಗಿನ ತೋಟವಿದೆ ತೆಂಗಿನ ಮರಗಳೇ ಆ ಭೂಮಿಯ ಹುಟ್ಟು ಮರಕ್ಕೆ ಹತ್ತಿ ತೆಂಗಿನಕಾಯಿಗಳನ್ನು ತೆಗಯಬಾರದೆಂದೇ ಇದರ ಮಾಲಿಕನ ಕಟ್ಟಪ್ಪಣೆ ತೋಟದಲ್ಲಿರುವ ಪಕ್ಷಿಗಳಿಗೆ ವಾಸಿಸುವರೇ ಯಾವ ಅಭ್ಯಂತರವೂ ಆಗಬಾರದೆಂದೂ ಅವುಗಳು ಕ್ರಿಮಿಗಳನ್ನು ಕೊಲ್ಲುತ್ತಾ ಇದ್ದರೆ ಮಾತ್ರ ತನ್ನ ತೋಟವು ಉಳಿದೀತೆಂದೂ, ಅವನ ಪ್ರತಿಪಾದನೆ—ಪರಿಣಾಮವಾಗಿ—ಕಾಕತೋಟಂನಲ್ಲಿ ಆಗುವಷ್ಟು ತೆಂಗಿನ ಕಾಯಿಗಳು ಅಲ್ಲಿಯ ಯಾವ ಭೂಮಿಯಲ್ಲೂ ಆಗುವುದಿಲ್ಲ ಪಕ್ಷಿಗಳನ್ನು ಕೊಲ್ಲುವ ವಿಹಾರ ಹುಚ್ಚರು ಇದನ್ನು ಲಕ್ಷಿಸುವರೇ?

ಜನ್ಮಭೂಮಿಯು ಪವಿತ್ರವಾಗಬೇಕಾದರೆ, ಶುಚಿರ್ಭೂತವಾಗಬೇಕಾದರೆ, ಮೊದಲು ಹಿಂದೂದೇಶದ ಎಲ್ಲೆಡೆಗಳಲ್ಲೂ ಸ್ವೇಚ್ಛಾಪ್ರೀತಿಯಿಂದ, ಮನಃಪೂರ್ವಕವಾಗಿ ನಡೆಯುವ ಹಿಂಸಾಕಾರ್ಯಗಳು ನಿಲ್ಲಬೇಕು ಜನರು ಕ್ಷಣಭಂಗುರವಾದ ಸುಖಕ್ಕಾಗಿ ಸೃಷ್ಟಿಕರ್ತನ ಜೀವಜಂತುಗಳನ್ನು ಭೇಟೆಯಾಡುವ ರೂಢಿಯು ಕೊನೆಗಾಣಬೇಕು

* * *

ಉಡುಪಿಯ ನೋಟಗಳು.

("ನೋಟಕ" — ನಿಂದ)

"ರಾಮಬಾಣ"ವು ಈ ವಾರವೂ ಹೊಂಟಿರುತ್ತದೆ. ಕಳೆದ ವಾರದ ಸಂಚಿಕೆಯೆಂದರೆ ನಿಜವಾಗಿಯೂ ಅದೊಂದು ತೀಕ್ಷ್ಣಬಾಣ! ಸ್ವಯಂಸೇವಕರೊಬ್ಬರಿಗೆ ಮುಕ್ಕಾಲಿನ ಸಕ್ಕರೆ ಕೊಡಲೊಪ್ಪದ ಸಾವುಕಾರರೊಬ್ಬರೂ "ಸೀಲ್" ಮಾಡಿದ ವಿದೇಶಿ ವಸ್ತ್ರದ ಗೂಟನ್ನು ಬಿಚ್ಚಿ "ಸೇಲ್" ಮಾಡಲು ಪ್ರಾರಂಭಿಸಿದ ಸೇಟರೊಬ್ಬರೂ ಬಾಣಹತಿಗೆ ತುತ್ತಾಗಿರುವರು ಅವರನ್ನು ಜರೆದು, ಹಂಗಿಸಿ, ಭಂಗಿಸಿ, ಕಠಿಣವಾಗಿ ಟೀಕಿಸಿದುದಕ್ಕಾಗಿ ನಾನು ಯಾರನ್ನೂ ಅಭಿವಂದಿಸಲಾರೆನು

○ ○ ○ ○

"ದೇಶ ಸೇವೆ"ಯು ಇದೇ ರೀತಿ ಮುಂದುವರಿದರೆ ಹತ್ತು ಹಲವರೊಡನೆ ನಿಷ್ಠುರ ಕಟ್ಟಿಕೊಳ್ಳಬೇಕಾಗಿ ಬರುವುದಲ್ಲದೆ ಸಾರ್ವಜನಿಕರ ಬೆಂಬಲವನ್ನೂ ಕಳೆದುಕೊಳ್ಳಬೇಕಾಗಿ ಬರುವುದೋ ಎಂಬ ಸಂಶಯವುಂಟಾಗುವುದು

○ ○ ○ ○

ದಿನನಿತ್ಯವೂ, ಪಹರ, ದಸ್ತಗಿರಿಯ ವಿನೋದಗಳ ನಡೆಯುತ್ತಲೇ ಇವೆ

○ ○ ○ ○

ಇದು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಲವು! ಇನ್ನೊಬ್ಬರ ಅಧೀನದಲ್ಲಿರುವ [illegible] ಮನಸ್ಸು ಬಗ್ಗದಾಗಿದೆ ಅದಕ್ಕಾಗಿಯೇ ಹೋರಾಟ, ಬಡಿದಾಟಗಳು ನಡೆಯುತ್ತಲಿವೆ ಕಳೆದ [illegible] ನಿಶಾಕಾಲದಲ್ಲಿ ಸ್ವತಂತ್ರಪ್ರಿಯ "ಗುಬ್ಬಿ"ಯೊಂದು ಗೂಡಿನಿಂದ ಹಾರಿಹೋಗಿರುವುದಂತೆ

○ ○ ○ ○

ಮಾತೃಬಂಧ ವಿಮೋಚನೆಗಾಗಿ ಲೋಕವೇ ಹೋರಾಡುತ್ತಿದೆ ಈ "ಗುಬ್ಬಿ"ಯು "ಮಾತೃಬಂಧನ"ದಿಂದ ತಪ್ಪಿಸಿಕೊಳ್ಳಲು ನಿಶಾಚರರ ಶರಣು ಹೊಡೆದು ಹಾರಿ ಹೋದ ದೀರ್ಘ ಅತ್ಯಾಶ್ಚರ್ಯ! ಇದ [illegible] ಗಿಳಿಯಂತೆ! ರಾಮಧ್ಯಾನವಾಗಲೀ ಶಿವಧ್ಯಾನವಾಗಲೀ ಬೇಕು ವುದೇನು? ಇಲ್ಲವೇ 'ಶಿವರಾಮ [illegible]' ಸ್ಮರಣೆಯು ಗೊತ್ತಿರುವುದೇ?

○ ○ ○ ○

ಕೆಲವು ವರ್ಷಗಳ ಹಿಂದೆ ಬೋರ್ಡ ಮೆಂಬರ [illegible] ವುದೆಂದರೆ ಅದೊಂದು 'ಭೂಷಣ' ಆಗಿತ್ತು, "ಘನತೆ" ಆಗಿತ್ತು ಈಗ ಅವೆರಡೂ ತಗ್ಗಿವೆ ಈ ಕಾಲದಲ್ಲಿ ಅದಕ್ಕೆ ಅಷ್ಟೊಂದು ಮೇಲಾಟ ನಡೆಯುವಂತೆ ತೋರುವುದಿಲ್ಲ ಜನರ ಉತ್ಸಾಹವು ತಗ್ಗಿದೆ ವಿದ್ಯಾವಂತರೆನಿಸುವವರೂ ಯೋಗ್ಯರೆನಿಸುವವರೂ ಕೆಲವರು ಹಿಂದೆಯೇ ಉಳಿದು [illegible] ಆಗ ಮಾಧ್ಯಮಿಕರು [illegible] ಬೇಕಾಗುತ್ತದೆ ಯಾವಾಗಲೂ ಚುನಾವಣೆಯೊಂದು [illegible] "ಪಸ್ಟ್" ಈ ಬಾರಿಯ [illegible] "ಫೀಸ್ಟ್" ಆಗಲಿದೆ

○ ○ ○ ○

ಪೇಟಾ ಕಟ್ಟಬಲ್ಲವರೂ ಕೋಟ್ ಹಾಕಬಲ್ಲವರೂ ಸೀಟ್ ಬೆಚ್ಚಗೆ ಮಾಡಬಲ್ಲವರೂ ದಸ್ಕತಿಗೆ ಬೇಕಷ್ಟು ಓದಬಲ್ಲವರೂ ಆದ ತಿಪ್ಪಯ್ಯ ಭಟ್ಟರು ಒಬ್ಬ ಉಮೇದ್ವಾರರಂತೆ! ಓಟರರೆಲ್ಲರೂ ಇವರನ್ನು ಚುನಾಯಿಸಲು ನನ್ನ ಓಟೂ ಇದೆ

○ ○ ○ ○

ಇವರನ್ನು ಚುನಾಯಿಸಿದರೆ ಇವರಿಗೆ ಧನವ್ ಬೇಡ "ಘನತೆ" ಬೇಡ ಕೀರ್ತಿ ಬೇಡ ಪ್ರತಿಷ್ಠೆ ಬೇಡ ಇವರ ಊರವರ ಸಂತುಷ್ಟವನ್ನು ಪರಿಶೀಲಿಸಲು ತನ್ನ ಆಯುಷ್ಯಮಾನವನ್ನೇ [illegible] ಪತ್ರ ಸಂಬಳ ಹೆಚ್ಚಿಸುವರು, [illegible] ಡಿಸುವರು, ಶಾಲೆ ಕಟ್ಟಿಸುವರು ಲಾಟೀನು [illegible] ನೆಡಿಸುವರು ಇತ್ಯಾದಿ ಇತ್ಯಾದಿ ಮಾಡಿಸುವರು ಸರ್ಕೀಟ, ಸ್ಕೂಲ್ ವಿಸಿಟ್ ತಪ್ಪದೆ ಮಾಡುವರು ದಯವಿಟ್ಟು ಓಟು ಕೊಡಿ

○ ○ ○ ○

ಗುರುಗಳ ಆರಾಧನೆಯು ವಿಧಾನ ಸಾಂಗವಾಗಿ ನೆರವೇರಿತು "ಅನ್ನದಾನಕ್ಕಿಂತ ಮೇಲು ದಾನವಿಲ್ಲ" ಎಂದು ಸರ್ವಜ್ಞ ಕವಿಯು ಹಾಡಿರುವನು ಒಂದೇ ಬಾರಿ ಸಾವಿರಾರು ಜನರಿಗೆ ದಾನಗೈದ ಈ ಪುಣ್ಯರಾಶಿಯು ಎಲ್ಲಿ ತುಂಬುತ್ತಿರುವುದೋ? ಒಂದು ತುಂಬುವಾಗ ಇನ್ನೊಂದು ಬರಿದಾಗುವುದೇಕೋ?

○ ○ ○ ○

ಹಿಂದಣವರು ದೇಗುಲ ಕಟ್ಟಿಸಿ, ಮಠಮಹಲ್ ನಿರ್ಮಿಸಿ, ಊರು ಪರಿಮಾಣದ ಸ್ಥಿರಾಸ್ತಿಯನ್ನು ಸಹ ಮಾಡಿಸಿ ಹಾಕಿದ್ದರು. ಸಾರ್ವಜನಿಕರ ಸೊತ್ತು ಇದರಲ್ಲಿ ಇಲ್ಲವೆಂದಿಲ್ಲ ಆದರೆ ಈಗ ಆದಾವ ಸಾರ್ವಜನಿಕ ಕಾರ್ಯವು ನಡೆಯುತ್ತಿದೆಯೋ ಬಲ್ಲವರಾರು? ಜಾತೀಯವಾದ ಕೋಲೇಜೊಂದಿದೆ ಶ್ರೀ ಶರ್ಮರ ಪಿಕಲಾಟವು ಅಪ್ರಶಸ್ತವೆಂದು ಹೇಳುವುದಕ್ಕಿಲ್ಲ

○ ○ ○ ○

ಯಾವ ಸಾರ್ವಜನಿಕ ಕಾರ್ಯವೂ ಇಲ್ಲದೆ, ಎಂಟುಗಳೆಲ್ಲಾ ರೊಕ್ಕದ ಸಾವುಕಾರರಿಗೆ ಗಂಟುಬೀಳುತ್ತಿರುವುದನ್ನು ನೋಡಿದರೆ ದುಂದುಗಾರಿಕೆಯು ಒಡೆದು ತೋರುವುದಿಲ್ಲವೇ?

○ ○ ○ ○

ಕೆಲವರ ಹಣವು ಹಿಂದಣ ಶುಷ್ಕ ಆಚಾರನಿಷ್ಠೆಗಳಿಗಾಗಿ ಬರಿದಾಗಬಹುದು ಕೆಲವರದ್ದು ಚಿನ್ನಾಭರಣಗಳಿಗೂ 'ಫೆಶನ್'ನ ಕಟ್ಟಡಗಳಿಗೂ (ಕೇರಿಗಳಲ್ಲಿ) ವೆಚ್ಚವಾಗಬೇಕಲ್ಲವೇ? ಹೀಗೆಯೇ ಆದರೆ ಭವಿತವ್ಯವೇನೋ ಆಶಾಜನಕವಾಗಿದೆ

○ ○ ○ ○

ಚಿಕ್ಕಪ್ರಾಯದಲ್ಲೇ ರೊಕ್ಕದ ವ್ಯಾಪಾರಿಗಳಾಗಿ ಅಕ್ಕಪಕ್ಕದವರ ಅಕ್ಕರೆಗೆ ಪಕ್ಕಾಗಿ, ಕೆಲವೊಂದು ಚೊಕ್ಕ ಕಾರ್ಯಗಳನ್ನು ಮನವಿಕ್ಕಿ ಮಾಡಿ ಮೆರೆದಾಡಿಕೊಂಡಿದ್ದ ಮಹನೀಯರೋರ್ವರು ಈಗ ತನ್ನ ಗತವೈಭವವನ್ನು ಸ್ಮರಣೆಗೆ ತಂದುಕೊಳ್ಳುವ ಸುಸಂದರ್ಭವನ್ನು ಸಂಪಾದಿಸಿಕೊಂಡಿರುವರೆಂದು ತಿಳಿಯುತ್ತದೆ. ವಿಧಿವೈಚಿತ್ರ್ಯವೇ ಹೀಗಿದೆ ಅವರೊಡನೆ ನನ್ನ ಸಹಾನುತಾಪವಿದೆ

* * *

೧೧೦೦ ರೂ ಬಕ್ಷೀಸು

೩೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೩೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತ ಪಾಕು. ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ್ಮ, ಮೈನೂಸೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ. ೩೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫, ಟ ಖ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧॥ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನು ನೋಡಿರಿ

ಡಾಕ್ಟರ ಎಮ್ ಆಯ್ ಟಕಟಿ, ಎಲ್ ಎಮ್ ಎಂಡ್. ಎಸ್, ಜೆ ಪಿ., ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ. ಎನ್. ದತ್ತ, ಎಮ್. ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯೂ ಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿ ವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ —ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಒಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಒಹಳ ಚಿಕ್ಕತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯ ಆಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ, ಪೂರಾ ವಿಚಾರವಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಲ್ಹಾಪೂರ ರಾಣೀ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಕೆ ೪ ರೂ ವಿ. ಪಿ ಖರ್ಚ ೦॥೦

ವಿಳಾಸ— ಸಂಜೀವಿನೀ ಔಷಧಾಲಯ. ಮು. ಪೊ. ಮಿರಜ, S. M. C.

'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.

ಹಿಸ್ಟೆರೈನ್.

ಮೆದುಳು--ಶಕ್ತಿಗೆ ಅಮೋಘ ಮದ್ದು.

ಹಿಸ್ಟೀರಿಯಾ, ನಿದ್ರೆ ಇಲ್ಲದಿರುವಿಕೆ, ಹುಚ್ಚು ಗಳಿಗೆ ದಿವ್ಯ ಮದ್ದು

ಕ್ರಯ—ಬಾಟ್ಲಿಗೆ ರೂ 2/8

ವಿ ಪಿ ಖರ್ಚ ಪ್ರತ್ಯೇಕ

ದಿ ಈಸ್ಟರ್ನ್ ರಿಸರ್ಚ ಲೆಬೊರೆಟರಿ,
ಗಾಝಿಪುರ, ಸಂಯುಕ್ತ ಪ್ರಾಂತ್ಯ

ಫ್ರೋಟೊಗಿನ್..

ಮಕ್ಕಳಿಲ್ಲದ ಸಂತಾನಕ್ಕೊಂದು ವರ

ಸೂನುಗಳಿಲ್ಲದ ಮನೆ ಕಾನನಕ್ಕೆ ಸಮಾನ

ಬಾಣಂತಿಯರಿರುವಾಗ ಆಗುವ ನೋವುಗಳಿಗೆ ಅದ್ವಿತೀಯ ಮದ್ದು. ಗರ್ಭವನ್ನೂ ಕಾಯಿಲೆಯನ್ನೂ ಪಾಲಿಸುತ್ತದೆ. ಹೆಂಗೆ ನೋವನ್ನು ಕಡಿಮೆ ಮಾಡಬೇಕೇ? ಗರ್ಭಸ್ರಾವವನ್ನು ನಿಲ್ಲಿಸಬೇಕೇ? ಇದನ್ನು ತೆಗೆದುಕೊಳ್ಳಿರಿ

ಕ್ರಯ ಬಾಟ್ಲಿಗೆ ರೂ 3/4 ವಿ ಪಿ ಖ ಬೇರೆ

The Eastern Research Laboratory
GHAZIPUR U P INDIA

ಪುತ್ತೂರಿನಲ್ಲಿ ಸದೇಶಾಭಿಮಾನಿಯ ಏಜಂಟರನ್ನಾಗಿ

ಶ್ರೀ ಜಿ. ಎನ್. ಲಕ್ಷ್ಮಣ ಪೈ ಇವರನ್ನು ನೇಮಿಸಲಾಗಿದೆ.

ಮೇನೇಜರ್

ಬರೇ ರೂ. 3-6-0ಕ್ಕೆ ಈ 3 ವಾಚುಗಳೂ ಸಾಮಾನುಗಳೂ.

ಆಶ್ಚರ್ಯಕರ ನಿಜ! ಆದರೆ ಸತ್ಯ!

ಒಟ್ಟೊ ಸುಗಂಧ ರಾಜಾ ಎಂಬುದು ೩ ದಿನಗಳ ತನಕ ಪರಿಮಳಿಸುವ ಸುಗಂಧ ದ್ರವ್ಯ — ಬಾಟ್ಲಿಗೆ ೩ ಆಣೆ. ಮುಟ್ಟಿಸಿದ ೧೩ ತಾಸುಗಳೊಳಗೆ ರಿಂಗ್‌ವರ್ಮನ್ನು ಗುಣಪಡಿಸುವ ಮುಲಾಂ ಡಬ್ಬಿಗೆ ೩ ಆಣೆ. ಮೇಲಿನ ೧೮ ಬಾಟ್ಲಿ ಅಥವಾ ಎರಡೂ ಕೂಡಿ ೧೮ನ್ನು ತರಿಸುವವರಿಗೆ ಭಂಗಾರದ ನಿಬ್ ಇರುವ ಫೌಂಟನ್ ಪೆನ್, ೫೦೦ ಗಜಗಳ ದೂರಕ್ಕೆ ಪ್ರಕಾಶವನ್ನೆಸವ ಟೋರ್ಚ್ ಲೈಟ್ ೧, ಫೇನ್ಸಿ ರಿಸ್ಟ್‌ವಾಚು ೧, ಟಮಾರ್ ಟೈಂಪೀಸ್ ಒಂದು ಅಥವಾ ಕೈರ್ಸೀ ಮೈಲ್‌ಗಾರ್ಡ್ ಲಿವರ್ ಪೋಕೆಟ್ ವಾಚ್ ಒಂದು ಧರ್ಮಾರ್ಥ ಸಿಗುವುದು. ಪ್ರತಿಯೊಂದು ವಾಚಿಗೆ ೧೦ ವರ್ಷಗಳ ಗೇರಂಟಿ ಇದೆ. ನಾಕಬೂಲಿಯಾದರೆ ಹಣ ವಾಪಾಸ. ಟಪ್ಪಾಲ್ ಖರ್ಚ ಪ್ರತ್ಯೇಕ.

ವಿಳಾಸ:— **Sharma Brothers & Co,**
Post Box 9418, section 58 CALCUTTA

ಪತ್ರವ್ಯವಹಾರ

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ನಮ್ಮ ಆರೋಗ್ಯ.

ಮಾನ್ಯ ಸ್ವದೇಶಾಭಿಮಾನಿಯೇ,

ನಮ್ಮ ಮಂಗಳೂರು ಮುನಿಸಿಪಾಲಿಟಿಯು ಹೆಸರುವಾಸಿಯಾದ ಮುನಿಸಿಪಾಲಿಟಿ! ಅದಕ್ಕೆ ೩೨ ಕೌನ್ಸಿಲರೂ ಒಬ್ಬ ಫಸ್ಟ್ ಕ್ಲಾಸ್ ಹೆಲ್ತ ಆಫೀಸರರೂ ಇರುವರು. ಈ ಹೆಲ್ತ ಆಫೀಸರರು ಯಾವ ಕಾರ್ಯವನ್ನು ಸಾಗಿಸುತ್ತಿರುವರು? ಎಂದು ತಿಳಿದು ಬರುವುದಿಲ್ಲ. ಇವರನ್ನು ಕೇಳುವವರಾರು? ಇವರನ್ನು ಕೇಳಲು ಕೌನ್ಸಿಲರರಿಗೆ ಅಧಿಕಾರವಿಲ್ಲವಂತೆ. ಚೆಯರ್‌ಮೇನರಿಗಾದರೂ ಇರಬಹುದೇ? ಇವರಿಗೂ ಇಲ್ಲವಂತೆ.

ಅದಿರಲಿ ಮುನಿಸಿಪಾಲಿಟಿಯ ಕೇಂದ್ರಸ್ಥಾನವಾದ ಮಾರ್ಕೆಟು ವಾರ್ಡಿನ ಆರೋಗ್ಯವನ್ನೇನೆಂದು ಹೇಳಲಿ? ಈ ವಾರ್ಡಿನ ಒಂದು ಸುತ್ತು ತೆಗೆದಾತನಿಗೆ ಗೊತ್ತು. ಒಂದು ಸುತ್ತು ತೆಗೆದರೆ ಮತ್ತು ಆ ರೋಗವೇ ಸರಿ. ಅದರಲ್ಲಿಯೂ ವೆಜಿಟೆಬ್ಲ್ ಮಾರ್ಕೆಟಿನ ದುರವಸ್ಥೆಯನ್ನು ಬರೆಯಲು ಸಾಧ್ಯವೇ ಇಲ್ಲ. ಮಾತನಾಡಿದರೆ 'ದುಡ್ಡಿಲ್ಲ — ಇಲ್ಲದಿರುತ್ತಿದ್ದರೆ ಎಲ್ಲವನ್ನೂ ಸರಿಮಾಡಬಹುದಿತ್ತು" ಎಂಬ ಉತ್ತರ. ಕೆಲಸಕ್ಕೆ ನೌಕರರನ್ನು ನೇಮಿಸಿದ್ದಾರೆ. ಹೆಲ್ತಿಗೆ ಪ್ರತ್ಯೇಕ — ದೀಪ ಉರಿಸುವರೇ ಪ್ರತ್ಯೇಕ — ಕಸಗುಡಿಸುವರೇ ಪ್ರತ್ಯೇಕ. ಹೀಗೆ ಒಂದೊಂದು ಕೆಲಸಕ್ಕೆ ಪ್ರತ್ಯೇಕಪ್ರತ್ಯೇಕ ಜನರು. ಹೀಗಾಗಿ ಮೇಲಿನ ಮಾರ್ಕೆಟು ಪ್ರತ್ಯೇಕವಾಗಿಯೇ ಇದೆ.

ಐಶ್ವರ್ಯವನ್ನು ಕೊಡುವುದು ದೇವರು. ಬುದ್ಧಿಯನ್ನು ಕೊಡುವುದು ದೇವರೇ? ಇದ್ದುದನ್ನು ನಿರ್ಮಲವಾಗಿಡಲು ದೇವರೇ ಬರಬೇಕೆ? ಮಾರ್ಕೆಟಿಗೆ ಹೋಗುವ ಗೇಟಿನ ಒಳಯಲ್ಲಿಯೇ ನೀರು ನಿಂತು ಅದರಲ್ಲಿ ಕೊಳೆಯುತ್ತಿರುವ ಕಸದ ನಾರುವಿಕೆಯಿಂದ ಅಲ್ಲಿ ನಿಲ್ಲಲು ಸಾಧ್ಯವೇ ಇಲ್ಲ. ಅದರಲ್ಲಿಯೂ ಈ ಗೇಟಿನ ಬಳಿಯಲ್ಲಿಯೇ ಹಣ್ಣುಹಂಪಲು ತಿಂಡಿಪದಾರ್ಥ ಮೊದಲಾದವುಗಳನ್ನಿಟ್ಟು ಮಾರುವವರಿದ್ದಾರೆ. ಇವರು ಮಾರುವ ಈ ಹಣ್ಣುಹಂಪಲುಗಳಲ್ಲಿ ಈ ರೋಗದ ಅಣುಗಳು ಹುಟ್ಟಿದರೆ, ಮತ್ತೆ ಹೇಳಬೇಕೇ? ಮಾರ್ಕೆಟಿನ ಒಂದು ಸುತ್ತು ತೆಗೆದರೆ ಒಪರೇಶನ್ ಮಾಡುವ ಸಮಯದಲ್ಲಿ ಕ್ಲೋರೋಫೋರ್ಮ್ ಕೊಟ್ಟಂತೆಯೇ ಸರಿ. ಇದನ್ನು ನಮ್ಮ ಹೆಲ್ತ ಆಫೀಸರರು ಎಂದಾದರೂ, ಒಮ್ಮೆಯಾದರೂ ಇತ್ತ ಕಾಲ್ನಡೆಯಿಂದ ತಿರುಗಾಡಿ ನೋಡಿರುವರೇ? ಅಥವಾ ದೂರದಿಂದಲೇ ಕೇಳಿ ತನ್ನ ಹೆಲ್ತಿಗೇನೇ ಹಾನಿ ತಗಲಬಹುದೆಂಬ ಅಂಜಿಕೆಯಿಂದ ಆ ಸ್ಥಳಕ್ಕೆ ಹೋಗಲಿಲ್ಲವೋ ಎಂದು ತಿಳಿಯುವುದಿಲ್ಲ. ನಾನೇ ಹೋಗಿ ನೋಡುವೆನು ಎಂದು ತನ್ನ ದಿವ್ಯವಾದ ಕಾರಿನಲ್ಲಿ ಡರ್ಬಿನ ಸವಾರಿ ಹೋದಲ್ಲಿ ಎಲ್ಲಾ ಸಂಗತಿಗಳನ್ನು ಪರಾಮರ್ಶಿಸಿ ನೋಡಲು ಸಾಧ್ಯವಿಲ್ಲ. ಹಾಗೆ ಹೋಗಲು ಸಾಧ್ಯವೇ ಇಲ್ಲವಾದರೆ ತನ್ನ ಕೈಕೆಳಗಿನ ಕೆಲಸಗಾರರಿಂದಾಗಲೀ ಈ ಭಾಗವು ಶುಚಿಯಾಗಿರಲಿಡುವಂತೆ ಏರ್ಪಾಡನ್ನಾದರೂ ಮಾಡಬಹುದಲ್ಲವೇ? ಈ ವಿಷಯದಲ್ಲಿ ಬಹಳ ಕಷ್ಟದಿಂದ ಚುನಾವಣೆಯಾಗಿ ಹೋದ ವಾರ್ಡ ಕೌನ್ಸಿಲರರು ಏಕೆ ಇಷ್ಟರ ವರೆಗೆ ಸುಮ್ಮನಿರುವರು? ಕೌನ್ಸಿಲರೇ ನೀವು ಇಂತಿತ್ತ ಹಿಂತಿರುಗಲು ಹೋಗುವ ಮಾರ್ಗವು ಇದಲ್ಲವೇ? (ನಿಮ್ಮ ವಾರ್ಡಿನ ಕುಂದುಕೊರತೆಗಳನ್ನು ಹೇಳಬೇಕೆಂದು ಕೋಪಿಸಬೇಡಿ! ಕ್ರಿಕೆಟ್ ಬೇಕ್ಸರ ವಾರ್ಡ, ಸೆಂಟ್ರಲ್ ವಾರ್ಡ ಇತ್ಯಾದಿ ಇನ್ನು ಬರೆಯತಕ್ಕ ವಾರ್ಡುಗಳು ಬಾಕಿ ಇವೆ) ಆದುದರಿಂದ ಈ ಮಾರ್ಕೆಟಿನ ಪರಾರದ ಸ್ವಚ್ಛತೆಯ ಕಡೆಗೆ ನೀವು ಲಕ್ಷ್ಯಗೊಟ್ಟು ಸರಿಯಾದ ಯೋಜನೆಯನ್ನು ಹೂಡಿ ನಮ್ಮ ಹೆಲ್ತ ಆಫೀಸರರು ವಾರದಲ್ಲಿ ಎರಡು ಮೂರಾವರ್ತಿಯಾದರೂ ಬಂದು ತಪ್ಪ ನೋಡಿ ಸಾಧ್ಯವಿದ್ದ ಮಟ್ಟಿಗೆ ಆರೋಗ್ಯವನ್ನು ಕಾಪಾಡುವಂತೆ ಮಾಡುವ ಭಾರವು ನಿಮ್ಮ ಮೇಲಿದೆ. ಈ ಕಾರ್ಯವನ್ನು ಇಂದೇ ಹಿಡಿದರೆ ಹೆಲ್ತ ಆಫೀಸರರಿಗೊಂದು ಕೀರ್ತಿಯಲ್ಲವೇ?

ಮಾರ್ಕೆಟು ವಾರ್ಡಿನವರಲ್ಲೊಬ್ಬ

ನೋಟೀಸು

ಪುತ್ತೂರು ಡಿ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ ೫೦/'೩೨ *R E P No 466/'32*

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್ ಪುತ್ತೂರು—ವಾದಿ.

ಎದ್ರು

1 ಮಂಗಳೂರ ಕೇಶವ ಕಮ್ತಿ, 2 ಮಂಗಳೂರ ಮಾಧವ ಕಮ್ತಿ 3. ಹರೇಕಳ ವಾಮನಪೈ—ಪ್ರತಿವಾದಿರು

ಸದ್ರಿ ಅಮ್ಲುಜಾರಿಯ 1, 2ನೇ ಪ್ರತಿವಾದಿರ ಹಕ್ಕಿನ 'ಶ್ರೀ ಶಾರದಾ ಮೋಟರ್ ಸರ್ವಿಸ್'ನ ಬಾಬ್ತು ವ್ಯಾಜ್ಯದಲ್ಲಿ ಜಪ್ತು ಆಗಿ ಕ್ಯಾಮಿಶನುದಾರರ ಸ್ವಾಧೀನ ಇರುವ ಮೋಟರ್ ಬಸ್ಸುಗಳು ವ ಇತರ ಸಾಮಾಗ್ರಿಗಳು ಸಹಾ ಸದ್ರಿ ಸರ್ವಿಸಿನ ಬಸ್ಸುಗಳು ಚಲಾವಣೆಮಾಡುವ ಲೈಸೆನ್‌ಗಳ ಹಕ್ಕು ಸಮೇತ ಸದ್ರಿ ಕೋರ್ಟಿನವರಿಂದ ತಾ 22—8—'32ಲ್ಲಿ ಪುತ್ತೂರಲ್ಲಿ ಬಹಿರಂಗವಾಗಿ ಏಲಂಮಾಡಿಸೋಣಾಗುವುದು. ಎಂಬ ಸಂಗತಿ ಕೋರ್ಟು ಹುಕುಂ ಮೇರೆಗೆ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಿಯದೆ.

ಪುತ್ತೂರು }
೨೦-೭-೩೨. }

H. Ganapathi Rao,
Vakil for Pltf.

ಸುಸಂಧಿ! ಕೆಲವೇ ಪ್ರತಿಗಳು!
ಶಾಲಾ ಕಾಲೇಜು, ಲೈಬ್ರರಿಗಳಿಗೂ, ಗ್ರಂಥಕರ್ತರಿಗೂ ನಮ್ಮ ಜಿಲ್ಲೆಯ ಅನುಭವವನ್ನು ಮಾಡಲಿಚ್ಛಿಸುವವರಿಗೂ ಬೇಕಾಗಿರುವ ಕ್ರೌನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ವೆಂಬ ಉದ್ಗ್ರಂಥ! ಬೆಲೆ ಪ್ರತಿಯೊಂದಕ್ಕೆ ಟಪಾ ಸಹಿತರೂ 2
ಶಾರದಾ ಛಾಪಖಾನೆ,
ಮಂಗಳೂರು

ಪೋಲೀಸ್ ಅಧಿಕಾರಿಗೆ ಗುಂಡು ಹಾಕಿದರು!

ಮದ್ರಾಸು ಗರ್ವನರು ಕೌನ್ಸಿಲರುಗಳನ್ನು ನಿರ್ಬಂಧಿಸಿದರು!— ಮುಂಬಾಯಿಯಲ್ಲಿ ಭೀಕರ ಕೊಲೆ' - ಕಿವುಡಿ ಮತ್ತು ಕುರುಡಿ, ಆದರೆ ಕೇಳುತ್ತಾಳೆ, ನೋಡುತ್ತಾಳೆ ಅರಸನು ಐಶ್ವರ್ಯವನ್ನು ಕಳೆದುಕೊಂಡ—ತಲ್ಲೇರಿಯಲ್ಲಿ ಸ್ತ್ರೀಯೋರ್ವಳನ್ನು ಮೊಸಳೆಯು ನುಂಗಿತು—ಮದುರೆಯ ಪುಂಡರ ಸೆರೆ—ಕೇರಳ ಪ್ರಾಂತ್ಯದ ಸೂರಲ್ ಎಂಬಲ್ಲಿ ಉಪ್ಪನ್ನು ಹೆಕ್ಕಿದುದಕ್ಕೆ ೧೨೭ ಮಂದಿಗಳ ಬಂಧನ' ಮುಂಬಾಯಿಯಲ್ಲಿ ೩೦೦೦ ಕರಪತ್ರಗಳು ಸಿಕ್ಕಿದುವು!

ವ್ಯಾಪಾರಸ್ಥರಿಗೆ ಸುಸಂಧಿ!
ದೀಪಾವಳಿಯು ಸಮೀಪಿಸಿತಲ್ಲವೇ? ನಿಮಗೆ ಬೇಕಾಗುವ ವರ್ಗ, ಊಳಿಗ ಪುಸ್ತಕಗಳೂ, ಆಮಂತ್ರಣ ಪತ್ರಿಕೆಗಳೂ ಅಗ್ಗದಲ್ಲಿ, ಅನುಕೂಲಾನುಸಾರವಾಗಿ, ಕ್ಲಪ್ತ ಸಮಯಕ್ಕೆ ಸಿಗಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬನ್ನಿರಿ
ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ
ಶಾರದಾ ಛಾಪಖಾನೆ,
ಮಂಗಳೂರು

'ಸುಪರಿಂಟೆಂಡೆಂಟರಿಗೆ ಗುಂಡು ಹಾಕಿದರು'

ಬಂಗಾಳದ ಕೊಮಿಲ್ಲದಲ್ಲಿ ಇ. ಬಿ ಎಲ್ಲಿಸನ್ ಎಂಬ ಯೂರೋಪಿಯನ್ ಎಡಿಶನಲ್ ಸುಪರಿಂಟೆಂಡೆಂಟರು ತಾ ೩ನೇ ದಿನ ಒಂದು ಸೈಕಲಿನ ಮೇಲೆ ಸವಾರಿ ಮಾಡುತ್ತಾ ಮಧ್ಯಾಹ್ನ ಮನೆಗೆ ಹೋದರು ಮಧ್ಯೆ, ದಾರಿಯಲ್ಲಿ ಅವರಿಗೆ ಗುಂಡೇಟುಗಳ ಶಬ್ದವು ಕೇಳಿಬಂತು ಹಿಂದೆ ತಿರುಗುವಷ್ಟರಲ್ಲಿ ಅವರ ಹೊಟ್ಟೆ ಮತ್ತು ಭುಜಗಳಿಗೆ ರಿವಾಲ್ವರ್ ಗುಂಡುಗಳು ಬಂದು ಬಿದ್ದವು ಆದರೂ ಅವರು ತನ್ನಲ್ಲಿದ್ದ ರಿವಾಲ್ವರನ್ನು ತೆಗೆದು ಕೊಲೆಗಡುಕರ ಮೇಲೆ ಹಾರಿಸಿದರು — ನಿಷ್ಪ್ರಯೋಜಕವಾಯಿತು ಛಂಡಾಯಗಾರರು ಎಲ್ಲಿಯೋ ಮರೆಸಿಕೊಂಡರು ಅವರನ್ನು ಒಡನೆ ಆಸ್ಪತ್ರೆಗೆ ಕೊಂಡೊಯ್ಯಲಾಯಿತು ತೀವ್ರ ಪರಿಶೋಧನೆಯೂ ತನಿಖೆಯೂ ನಡೆದ ಮೇಲೆ ಆರೇಳು ಜನರನ್ನು ಸೆರೆಹಿಡಿದಿರುವರೆಂದು ತಿಳಿದುಬಂದಿದೆ ಎಲ್ಲಿಸನರು ವಿಷಮಾವಸ್ಥೆಯಲ್ಲಿರುವರು (ಈಗ ಅವರ ಸ್ಥಿತಿಯು ಒಳ್ಳೇದಾಗುತ್ತಿದೆಯೆಂದು ವಾರ್ತೆ ಬಂದಿದೆ)

ಕೌನ್ಸಿಲರುಗಳನ್ನು ನಿರ್ಬಂಧಿಸಿದರು

ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ತಾ ೨೯ನೇ ದಿನ ಒಂದು ಠರಾವು ಮುಂದೆ ಬಂದಿತು ಬ್ರಿಟಿಷ ಸರಕಾರದ ಪ್ರಕೃತ ನೀತಿಯು ಸರಿಯಲ್ಲವೆಂದೂ ಆದರ ಕುರಿತು ಸಭೆಯಲ್ಲಿ ಪರ್ಯಾಲೋಚಿಸಬೇಕೆಂದೂ ಕೆಲವು ಮಂದಿ ಸಭಿಕರ ಅಭಿಮತವಾಯಿತು ಇದನ್ನು ತಿಳಿದ ಮದ್ರಾಸ್ ಗವರ್ನರರು 'ಪ್ರಕೃತದ ರಾಜಕೀಯಾವಸ್ಥೆಯ ವಿಷಯ ಕೌನ್ಸಿಲಿನಲ್ಲಿ ಚರ್ಚಿಸಬಾರದೆಂದೂ, ಅಂತಹ ಚರ್ಚೆಯು ಬ್ರಿಟಿಷ ಸರಕಾರ ಮತ್ತು ಹಿಂದೀಯ ಸರಕಾರಗಳಿಗೆ ಮಾತ್ರ ಸಂಬಂಧಪಟ್ಟುದೆಂದೂ ಅಲ್ಲದೆ ಅಂತಹ ಚರ್ಚೆಯಿಂದಾಗಿ ಮುಂದಿನ ಸಂಧಿಸಭಾನುಸರಣೆಗೆ ವಿಘ್ನವುಂಟಾಗುತ್ತದೆ"ಂದೂ ಹೇಳಿ, ಅಂತಹ ತರ್ಕವನ್ನು ಸಭೆಯಲ್ಲಿ ತರಬಾರದೆಂದು ಆಜ್ಞೆಯಿತ್ತು ನಿರ್ಬಂಧಿಸಿದರು

ಭೀಕರ ಕೊಲೆ

ಮುಂಬಾಯಿಯಲ್ಲಿನ ಮಹಾಂ ಭ್ಗರಿಯಲ್ಲಿ ಬಲ್ಲಿಯನ್ ವರ್ತಕನೊಬ್ಬನ ಅಂಗಡಿಯು ಕಳೆದ ಸೋಮವಾರ ಬೆಳಿಗ್ಗೆ ನಿತ್ಯದಂತೆ ತೆರೆಯಲ್ಪಡಲಿಲ್ಲ ಗ್ರಾಹಕರಿಗೆ ಆಶ್ಚರ್ಯವಾಯಿತು! ಅವನ ಮನೆಯಲ್ಲಿ ತನಿಖೆ ನಡೆಸಲು, ಅವನು ಮುಂಚಿನ ರಾತ್ರಿ ಮನೆಗೆ ಬರಲೇ ಇಲ್ಲವೆಂಬ ಸುದ್ದಿಯು ಸಿಕ್ಕಿತು ಎಲ್ಲೆಲ್ಲೂ ಹುಡುಕಿದರೂ ಅವನ ಪತ್ತೆಯಾಗಲಿಲ್ಲ ವರ್ತಮಾನವನ್ನು ಪೋಲೀಸರಿಗೆ ತಿಳಿಸಲಾಯಿತು — ಅವರು ತನಿಖೆ ನಡೆಸಿ ಅವನ ಅಂಗಡಿಯ ಬಾಗಿಲನ್ನು ಒಡೆದರು ಸಾಮಾನುಗಳು ಅಸ್ತವ್ಯಸ್ತವಾಗಿದ್ದುದನ್ನು ಕಂಡು ಏನೋ ವಿಶೇಷವು ನಡೆದಿರಬೇಕೆಂದು ಭಾವಿಸಿಕೊಂಡರು ಬೀಗ ಹಾಕಲ್ಪಟ್ಟಿದ್ದ ಒಂದು ಟ್ರಂಕನ್ನು ತೆರೆದರು ವರ್ತಕನ ಮೃತಶರೀರವು ಘಾಯಗೊಳಿಸಲ್ಪಟ್ಟು ಮುರಿಯಲ್ಪಟ್ಟು ಆ ಟ್ರಂಕಿನೊಳಗೆ ತುರುಕಿರಿಸಲ್ಪಟ್ಟಿದ್ದಿತು ಶುಕ್ರವಾರ ರಾತ್ರಿಯಲ್ಲಿ ಕೊಲೆಗಡುಕರು ಈ ಭೀಕರ ಕೊಲೆಯನ್ನು ಗೈದರಾಗಿ ತಿಳಿದುಬಂದಿದೆ. ತನಿಖೆಯು ನಡೆಯುತ್ತಲಿದೆ.

ಅದ್ಭುತ ಸ್ತ್ರೀ!

"ಅಮೇರಿಕದ ಅದ್ಭುತಕರ ಸ್ತ್ರೀ ಎಂದು ಪ್ರಖ್ಯಾತಳಾದ ಮಿಸ್ ಹೆಲೆನ್ ಕೆಲ್ಲರ್ ಎಂಬವಳಿಗೆ ಮೊನ್ನೆ ಗ್ಲಾಸ್ಗೊ ವಿಶ್ವವಿದ್ಯಾಲಯದ ಎಲ್ ಎಲ್ ಡಿ. ಪದವಿಯು ಕೊಡಲಾಯಿತು ಹೆಲೆನಳು ತನ್ನ ಒಂಭತ್ತನೇ ತಿಂಗಳ ಪ್ರಾಯದಲ್ಲಿ ಕುರುಡಿಯೂ ಕಿವುಡಿಯೂ ಆದಳು ಈಗ ಅವಳಿಗೆ ೫೭ ವರ್ಷ ಪ್ರಾಯ ಮುಂಚಿನಂತೆ ಕುರುಡಿ ಮತ್ತು ಕಿವುಡಿ—ಆದರೆ ಕಣ್ಣಿಲ್ಲದಿದ್ದರೂ ಲೋಕವ್ಯವಹಾರಗಳನ್ನು ನೋಡುತ್ತಾಳೆ ಸೃಷ್ಟಿಸೌಂದರ್ಯವನ್ನು ಸೌಮ್ಯವಾಗಿ ಬಣ್ಣಿಸುತ್ತಾಳೆ ಕಿವುಡಿಯಾದರೂ ಹಾರ್ಮೋನಿಯಮ್ ಬಾರಿಸುತ್ತಾಳೆ ಪಿಯಾನೋ ರಾಗವು ಸುಮಧುರಮಧುರವೆನ್ನುತ್ತಾಳೆ ಪುಷ್ಪಗಳನ್ನು ಕಂಡು ಸುಂದರವಾಗಿವೆಯೆನ್ನುವಳು ಹೆಲೆನಳ ಪಾತ್ರಳಾಗಿ ಮಿಸ್ ಪೋಲಿ ಥೊಂಪ್ಸನ್ ಎಂಬವಳು ಬಾಲ್ಯದಿಂದಲೇ ಇರುವಳು ಈ ಥೊಂಪ್ಸನಳ ಮೂಲಕವೇ ಹೆಲೆನಳು ಎಲ್ಲವುಗಳನ್ನೂ ಅರಿತುಕೊಳ್ಳುವಳು ಹೆಲೆನಳೊಡನೆ ಯಾರಾದರೂ ಮಾತನಾಡಲು ಬಂದರೆ, ಥೊಂಪ್ಸನಳು ಆ ಸಂಗತಿಯನ್ನು ಅವಳಿಗೆ ತಿಳಿಸುವಳು ಎಂದವರ ಅಭಿಪ್ರಾಯಗಳನ್ನು ಥೊಂಪ್ಸನಳು ಹೇಳುವಾಗ, ಹೆಲೆನಳು ತನ್ನ ಕೈಬೆರಳುಗಳನ್ನು ಅವಳ ತುಟಿಯ ಮೇಲಿಡುವಳು ಹಾಗೆ ಅವಳ ತುಟಿಯ ಮೇಲಿಟ್ಟ ಬೆರಳುಗಳಿಂದಾಗಿ ಅವಳಿಗೆ ಸಕಲ ಮಾತುಗಳು ಮನದಟ್ಟಾಗುವುವು ಹೆಲೆನಳ ವಸ್ತುಗಳ ಸೌಂದರ್ಯವನ್ನು ಬೆರಳಿನ ಸ್ಪರ್ಶದಿಂದಲೇ ಅರಿಯುವಳು ಕಣ್ಣಿದ್ದು ನೋಡುವವರಿಗಿಂತಲೂ ವಿವರ ಸಂಗತಿಗಳನ್ನು ಅವಳು ವಿಸ್ತೃತಪೂರ್ವದಿಂದಾಗಿ ಹೇಳುವಳು ಅವಳು ಅನೇಕ ಗ್ರಂಥಗಳನ್ನು ಬರೆದಿರುವಳು ಎಲ್ಲವೂ ಎಲ್ಲರಿಂದಲೂ ಶ್ಲಾಘಿಸಲ್ಪಟ್ಟಿವೆ ಅನವರತವೂ ಜ್ಞಾನಸಂಪಾದನೆಯ ಜಿಜ್ಞಾಸೆಯುಳ್ಳವಳಾದುದರಿಂದಾಗಿ ಅವಳು ಇಷ್ಟೊಂದು ತೀಕ್ಷ್ಣ ಬುದ್ಧಿಯುಳ್ಳವಳಾದಳೆಂದು ತಿಳಿದುಬರುತ್ತದೆ

ಅಲ್ಫೋನ್ಸರ ಸೊತ್ತು ಸ್ವಾಧೀನವಾಯಿತು

ಸ್ಪೈನ್ ದೇಶದ ಅರಸರಾದ ಅಲ್ಫೋನ್ಸರು ಸಿಂಹಾಸನಚ್ಯುತರಾಗಿ ದೇಶಾಟನಕ್ಕೆ ಹೊರಟಿದ್ದು ಅವರನ್ನು ಗಡಿಪಾರು ಮಾಡಲಾದುದು ತಪ್ಪೆ! ಅವರು ದೇಶದಿಂದ ಹೊರಡುವಾಗ ಖಾಲಿಯ ಗಟ್ಟಿಗೆ ಪೌಂಡುಗಳು ಅವರಲ್ಲಿದ್ದುವೆಂದು ತಿಳಿದ ಸ್ಪೇನಿನ ಸರಕಾರವು ಆ ಹಣವನ್ನು ಸ್ವಾಧೀನಪಡಿಸಲಿಚ್ಛಿಸಿ ನಿರಾಶೆಗೊಂಡಿತು ಮೊನ್ನೆ ಅಲ್ಫೋನ್ಸರ ಮನೆಯಲ್ಲಿದ್ದ ಅಮೂಲ್ಯ ವಸ್ತುಗಳನ್ನೆಲ್ಲಾ ಸ್ವಾಧೀನಪಡಿಸಿತು ಒಂದು ಖಜಾನೆಯೊಳಗೆ ಸುಮಾರ ೩೭೫೦ ಪೌಂಡಿನ ನೋಟುಗಳು ದೊರಕಿವೆ ಪಾಲುಭಂಡವಾಳಕ್ಕೆ ಸೇರಿ ದೊರೆತ ಕೆಲವು ಸಾವಿರ ಪೌಂಡುಗಳ ಪತ್ರವೂ ಇದರೊಡನೆ ದೊರಕಿವೆ ಅಲ್ಲದೆ ಒಂದು ವಿಜ್ಞಾನ ಕೋಣೆಯಲ್ಲಿ ಕೆಲವು ಸಾವಿರ ಪೌಂಡು ಬೆಲೆಬಾಳುವ ಅಮೂಲ್ಯ ವಸ್ತ್ರಗಳೂ ಸಾಮಾನುಗಳೂ ದೊರಕಿವೆ ಮುತ್ತು ರತ್ನ ಖಚಿತವಾದ ಒಂದೆರಡು ಬೀಗದಕ್ಕೈಗಳೂ ದೊರಕಿದೆ ಇವುಗಳೂ ಇನ್ನಿತರ ಸೊತ್ತುಗಳೂ ಪ್ರಜಾಧಿಪತ್ಯದವರಿಂದ ವಶೀಕರಿಸಲ್ಪಟ್ಟವೆ

ಪುಂಡರ ಸೆರೆ

ಮದುರೆ ರಾಮನಾಡು ಮೊದಲಾದ ಕಡೆಗಳಲ್ಲಿ ಕೊಲೆ ದರೋಡೆಗಳನ್ನು ಮಾಡುತ್ತಾ ತನ್ನ ಹಲವು ಮಂದಿ ಸಂಗಡಿಗರೊಡನೆ ದಿನ ಹರಣ ಮಾಡುತ್ತಿದ್ದ ಕರುಪ್ಪಸ್ವಾಮಿ ತೇವನ್ ಎಂಬ ಪ್ರಮುಖ ದರೋಡೆಗಾರನನ್ನು ಕೆಲವು ಶಿಷ್ಯರ ಸಮೇತ ಅಲ್ಲಿಯ ಪೋಲೀಸರು ಸೆರೆಹಿಡಿದಿರುವರು ಅವನ ಗುಂಪಿನವರಿಗೆ ಒಂದು ಸ್ಟೇಷನಿನಲ್ಲಿರುವಷ್ಟು ಮದ್ದು ಗುಂಡು, ಕೋವಿಗಳು ಇವೆಯಂತೆ ಪೋಲೀಸರನ್ನು ಗುಂಡೆಸತದಿಂದಲೇ ಹೊಡೆದೋಡಿಸಿ ಅನೇಕ ಸಲ ವಿಜಯಿಗಳಾದ ಇವರು ಒಬ್ಬ ಸಿ ಐ ಡಿ ಯ ಬಲೆಗೆ ಸಿಕ್ಕಿದರು

ಮೊಸಳೆಯು ನುಂಗಿತು

ತಲ್ಲೇರಿಯ ಎರಿಂಜೋಳಿ ಎಂಬಲ್ಲಿಯ ನದಿಯಲ್ಲಿ ಒಬ್ಬಳು ಸ್ತ್ರೀಯು ಸ್ನಾನಮಾಡಲಿಳಿದಳು ಸ್ವಲ್ಪ ದೂರದಲ್ಲಿ ಇನ್ನಿತರ ಕೆಲವರು ಸ್ನಾನ ಮಾಡುತ್ತಿದ್ದರು ಅಷ್ಟರಲ್ಲಿ ಆ ಸ್ತ್ರೀಯ ಆರ್ತನಾದವು ಎದ್ದಿತು ಜನರು ಹತ್ತಿರ ಓಡಿಬರುವಷ್ಟರಲ್ಲಿ ಆ ಸ್ತ್ರೀಯು ಒಂದು ದೊಡ್ಡ ಮೊಸಳೆಯಿಂದ ಹಿಡಿಯಲ್ಪಟ್ಟು ನಿಮಿಷ ಮಾತ್ರದಲ್ಲಿ ನೀರಿನಲ್ಲಿ ಕಾಣದಾದಳು ಜನರು ಭಯಭ್ರಾಂತರಾಗಿ ಆ ನದಿಯ ದಡದಿಂದ ಕೂಡಲೇ ಓಡಿದರು

'ಅನುಭವಾಮೃತ'

ನಾವು ಕೊನೆಗೆ ಸೆರೆಮನೆಯನ್ನು ಹೊಕ್ಕಿದೆವು ಒಂದು ಕೊಟಡಿಯಲ್ಲಿ ೩೦ ಮಂದಿ ಶಿಕ್ಷಿತರಿದ್ದರು ಅವರು ಏನೋ ಕೆಲಸದಲ್ಲಿದ್ದಂತೆ ಕಂಡುಬಂದಿತಾದರೂ ಹೆಚ್ಚಿನವರು ಪರಸ್ಪರ ಸಂಭಾಷಣೆಗೆ ತೊಡಗಿದ್ದರು ಎಲ್ಲರೂ ಗಾಂಧಿ ಟೋಪ್ಪಿ ಮತ್ತು ಖಾದಿಯನ್ನು ಧರಿಸಿದ್ದರು ಅವರು ಬಹಳ ಶಾಂತರಾಗಿದ್ದಂತೆ ಕಂಡುಬಂತ ನಾನು ನನ್ನ ವಿದ್ಯಾರ್ಥಿಗಳೊಡನೆ ಅವರ ಹತ್ತಿರ ನಿಂತೆನು ಅಷ್ಟರಲ್ಲಿ ಮಹತ್ಕಟಾಕ್ಷಪೂರ್ಣವಾದ ಯುವಕನೊಬ್ಬನು ವೀರಾವೇಶದಿಂದ "ನೀವು ಇಂಗ್ಲಿಷರು ಬೈ ಬ್ರಿಟಿಷ್ ಚಳವಳವನ್ನು ಸಾರುವುದಿಲ್ಲವೇ? ನಾವು ನಮ್ಮ ದೇಶಮಾತೆಗಾಗಿ ಕೆಲಸ ಮಾಡುವುದು ತಪ್ಪೇ? ಖಾದಿಕತನದಿಂದ ಹುಂಬರಾಗಿರೆಂದು ಬೋಧಿಸಿದರೆ ಅದೊಂದು ತಪ್ಪೇ?" ಎಂದು ಬಿರುಸಾದ ಇಂಗ್ಲಿಷಿನಲ್ಲಿ ಪ್ರಶ್ನಿಸಿದನು ಪುನಃ ನನ್ನ ಬಳಿಯಿದ್ದ ಹುಡುಗಿಯರನ್ನು ಕಂಡು 'ಸಹೋದರಿಯರೇ ನೀವು ಖಾದಿ ಧರಿಸುವುದಿಲ್ಲವೇಕೇ? ನೀವು ನಿಮ್ಮ ದೇಶಮಾತೆಯನ್ನು ಪ್ರೀತಿಸುವುದಿಲ್ಲವೇ? ಅವಳು ಸಂಕಲೆಯಿಂದ ಬಿಗಿಯಲ್ಪಟ್ಟಿರುವುದು ಕಾಣುವುದಿಲ್ಲವೇ?" ಎಂದು ಪ್ರಶ್ನಿಸಿದನು ಅಷ್ಟರಲ್ಲಿ ವಾರ್ಡರರು ಬಂದರು" ಎಂದು ಹಿಂದೂದೇಶದ ಸೆರೆಮನೆಯನ್ನು ಕಂಡು ಲಂಡನಿಗೆ ಹಿಂತಿರುಗಿದ ಆಂಗ್ಲೇಯನೊಬ್ಬನು ಮೆಂಚೆಸ್ಟರ ಗಾರ್ಡಿಯನ್ ಪತ್ರಿಕೆಯಲ್ಲಿ ಪ್ರಕಟಿಸಿದ ಅನುಭವ

Notice.

"Sealed Tenders are invited by the undersigned for the supply of drugs & raw materials required for K T B Perdal Ayurvedic Dispensary The tenders will be opened on 20th August at 2 p m in the Dispensary

Apply for further particulars—

PERDAL S K
2-8-1937
G A AIAH,
Physician



ಕಟ್ಟಿದ ಹಲ್ಲುಗಳು.

ಡಾಕ್ಟರ್ ಬಿ. ವೆಂಕಟರಾವ್,
ಎಲ್ ಎಮ್ ಪಿ, ಎಲ್ ಡಿ ಎಸ್ ಸಿ (ಮದ್ರಾಸ್)
ಫಿಸಿಶಿಯನ್, ಸರ್ಜನ್ ಮತ್ತು ದಂತವೈದ್ಯ,
ಹಳೆಯ ಟಪ್ಪಾಲುಕಟ್ಟೆಯ ಕಟ್ಟೋಣ,
ರಥಬೀದಿ, ಮಂಗಳೂರು.
ಇವರು ಎಲ್ಲಾ ತರದ ಹಲ್ಲು ರೋಗಗಳಿಗೆ ಶಾಸ್ತ್ರೀಯ ರೀತಿಗನುಸಾರವಾಗಿ ಚಿಕಿತ್ಸೆ ಮಾಡುತ್ತಾರೆ, ಮತ್ತು ಬೇಕಾದಲ್ಲಿ ಹೊಸ ಕೃತಕ ಹಲ್ಲುಗಳನ್ನೂ ಚಿನ್ನದ ಹಲ್ಲುಗಳನ್ನೂ ಕಟ್ಟುತ್ತಾರೆ

ಪರೀಕ್ಷಿಸಿರಿ! ತೃಪ್ತಿಯಾಗುವದು!!
ಕ್ರಯವು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಞ್ಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಞ್ಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ಎಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರುಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕೃಷ್ಣ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ವಸ್ತ್ರ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಶಿಲುಕಿನಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ರೋಗದ ಕಾಲ ಪ್ರಾಯ, ಸಿಕ್ಕ ಆಹಾರದ ಕ್ರಮ, ವೃತ್ತಿ ಹಿಗರೆಟು ಮೊದಲಾದ ಆಯಾಯ ಪದಾರ್ಥಗಳ ಅಭ್ಯಾಸವಿದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಗೆ ಪಥ್ಯ ನಡಿಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ಇವೇ ಮೊದಲಾದ ಸಂಗತಿಗಳಲ್ಲಿ ಎಷ್ಟು ಸ್ಪಷ್ಟ ನಮಗೆ ಅಂಥಾ ವಿವರಗಳು ಸಹಾ ಸಿಕ್ಕ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮುದ್ದು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಸಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿಗೆ ಸಹಾಯಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ರಿಯಾಯಿತಿಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ಬಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಞ್ಞಂಗಾಡ (ದ. ಕ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಖದ್ದರ್ ರೇಶ್ಮೆ ಮುಡಿಗಳಿಗೆ ಗಮನ ಕೊಡಿರಿ.

S U N & CO.

Choukhumba Benares City

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1 ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ, ಕದಪಾಮ್ಮು, ಪೀಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಊಲ್ಲನ್ ಚೌಕ, ಧಾವಳಿ, ನಾರ್ಮುದಿ, ಶತ ತರದ ರುದ್ರಾಕ್ಷಿಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಖದ್ದರ್ ಮಡಿ–6 ಮೊಳ, 2 ಮೊಳ ಅಗಲ ರೂ. 2ರಿಂದ ರೂ 3. ಮೊಳ 8ರಷ್ಟು 2–12–0ರಿಂದ ರೂ 4 10 ಮೊಳ, 2½ ಅಗಲ ರೂ. 4ರಿಂದ ರೂ. 5. ಮೊಳ 12 + 2½ ರೂ. 5ರಿಂದ 6–8–0. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ, ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಕಂಬಾ, ಬನಾರಸ್ (ಕಾಶೀ)

ವಿಕ್ಕಳಿದ ಎಲ್ಲವನ್ನು ಬಹಿಷ್ಕರಿಸಿ ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು;
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೆ ಏಜನ್ಸಿಗೂ ಬರೆಯಿರಿ.
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ. ಆ ದಾದರ್ ಮುಂಬಾಯಿ 14.

Dr H L. Batliwalla, Sons & Co., Ltd.
Kadell Road, P O Dadar, Bombay, 14.

ತಂತಿ ವಿಳಾಸ.–"CAVASPUR" Bombay
ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ–ಮುಖ್ಯ ಮನೆಜಿಂಗ್ ಡ್ಯಾರೆಕ್ಟರ್.



ಸ್ತ್ರೀಯರ ಮೂರು ರತ್ನಗಳು.

ಕೇಸರಿ ಕುಠೀರಂ
ಎಗ್ಮೋರ್ ಮದರಾಸು,
ಎಲ್ಲಾ ಔಷದಿ ಮಾರಾಟದವರಲ್ಲಿ ದೊರೆಯುತ್ತದೆ

ಲೋಧ್ರ—ಇದು ಸ್ತ್ರೀಯರ ಗರ್ಭದೋಷಗಳಿಗೆ ... ಪಥಿಯಾ ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ... ಪಡಿಸಿ ಅವರಿಗೆ ಆಯುರಾರೋಗ್ಯ ಸಂದರ್ಭಗಳನ್ನು ಕೊಡ...

ಅರ್ಕ—ಇದು ಎಲ್ಲಾ ತರದ ಜ್ವರಗಳನ್ನು ಸಹ ... ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ—ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd., Bombay, 14

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಳೆ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವ ಈ ... ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ ನಾನಾ ವಿಧವಾದ ಕೆಮ್ಮು, ... ಎದೆ ನೋವು ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವ ... ಮತ್ತು ... ರಕ್ತಕ್ಷೀಣತೆ ಪುಷ್ಟಿಹೀನತೆ ಪ್ರಾಯಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ವೃದ್ಧರನ್ನು ತರುಣರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾಉಂಡಿನ ರೂ. 10/– ಕ್ರಯ 1 ಪಾನು ಸೀಸೆ ರೂ. 2/8. ½ ಪಾ. ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು.—ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು.—ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು:—ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು:—ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ
ಸಬ್ ಏಜಂಟರು–ಮೈಸೂರು ಏಜಂಟರು:—ಟಿ ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು:—ಬಿ. ಪೋಪಟ್‌ಲಾಲ್ ಕಂಪೆನಿ, ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ರಾಜಾರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯ್ಯಾನಂದ ಸರಸ್ವತಿ.

ಲೇಖಕರು —ಗಂಗಾಪ್ರಸಾದ ಉಪಾಧ್ಯಾಯ, ಎಮ್ ಎ. ಅಲ್ಲಾಹಾಬಾದ್

ಅನುವಾದಕರು —ಶ್ರೀ, ಬಿ ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ ಮಂಗಳೂರು

ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು —

ಅರ್ಥಾತ್ "ತಂದೆಯವರು ಸ್ವರ್ಗಸ್ಥರಾದ ನಂತರ ನಾನು ಮೂರ್ತಿಪೂಜೆಯ ಪಕ್ಷಪಾತಿಗಳನ್ನು ಮತ್ತಷ್ಟು ಪ್ರಬಲವಾಗಿ ವಿರೋಧಿಸಿದೆನು ಆ ಸಮಯದಲ್ಲಿ ಭಾರತವರ್ಷದಲ್ಲಿ ಮುದ್ರಣಾಲಯದಲ್ಲಿ ಮುದ್ರಣ ಪ್ರಾರಂಭಿಸಲ್ಪಟ್ಟಿತ್ತು ಮೂರ್ತಿಪೂಜಕರ ತಿಳಿಗೇಡಿತನವನ್ನು ಅವರಿಗೇನೇ ಚೆನ್ನಾಗಿ ತಿಳಿಸಲಿಕ್ಕಾಗಿ ದೇಶೀ ಮತ್ತು ವಿದೇಶೀಯ ಭಾಷೆಗಳಲ್ಲಿ ಕೆಲವು ಪುಸ್ತಕಗಳನ್ನೂ ಕರಪತ್ರಿಕೆಗಳನ್ನೂ ಮುದ್ರಿಸಿ ಪ್ರಕಟಪಡಿಸಿದೆನು ಇದರಿಂದ ಜನರಿಗೆ ನನ್ನಲ್ಲಿ ಅತ್ಯಂತ ದ್ವೇಷವುಂಟಾಯಿತ ಎಲ್ಲರೂ ನನ್ನನ್ನು ದೂರೀಕರಿಸಿದರು ಸ್ಕೋಟ್ಲೇಂಡಿನ ನನ್ನ ಇಬ್ಬರು ಮಿತ್ರರ ಹೊರತು ಬೇರೆ ಎಲ್ಲರೂ ಅತ್ಯಂತ ದೂರೀಕರಿಸಿದರು ಈ ಇಬ್ಬರು ಮಿತ್ರರು ಸದಾಸಮಯ ನನ್ನ ಒಟ್ಟಿಗೇ ಇದ್ದರು ಇವರು ನನಗ ಮಾಡಿದ ಸಹಾಯಗಳಿಗಾಗಿ ನಾನು ಇವರಿಗೂ ಇವರ ಜಾತಿಗೂ ಸದಾ ಕೃತಜ್ಞನಾಗಿರುವೆನು." ಎಂದು ಬರೆದಿದ್ದಾರೆ ಮೂರ್ತಿಪೂಜೆಯ ಖಂಡನೆಯ ಕುರಿತು ಅವರ ಅಭಿಪ್ರಾಯವು ಹೇಗಿತ್ತು ಎಂಬುದನ್ನು ಅವರ ವಾಕ್ಯಗಳಿಂದಲೇ ನಾವಿಲ್ಲಿ ವಿವರಿಸುವುದು ಉಚಿತವೆಂದು ತೋರುತ್ತದೆ

The ground which I took in all my controversies was not that of opposition to Brahminism but to a perversion of it, and I endeavoured to show that the idolatory of the Brahmins was contrary to the practice of their ancestors and the principles of the ancient books and authorities which they profess to revere and obey '

ತಾತ್ಪರ್ಯವೇನೆಂದರೆ "ಎಲ್ಲಾ ಶಾಸ್ತ್ರಾರ್ಥಗಳಲ್ಲಿಯೂ ನನ್ನ ಪಕ್ಷವು ಹಿಂದೂಧರ್ಮಕ್ಕೆ ವಿರೋಧವಾಗಿರುವುದಿಲ್ಲ ಪರಂತು ಹಿಂದೂಧರ್ಮದಲ್ಲಿನ ಪ್ರಕೃತದ ಉಪಾಧಿ ವಿವಾದಗಳೊಡನೆ ಮಾತ್ರ ವಿರೋಧವಾಗಿರುತ್ತದೆ ಪ್ರಚಲಿತ ಕಾಲದ ಬ್ರಾಹ್ಮಣರು ಯಾವ ತರದ ವಿಗ್ರಹಾರಾಧನೆಯನ್ನು ಮಾಡುತ್ತಿದ್ದಾರೋ ಅದೆಲ್ಲವೂ ಅವರ ಪೂರ್ವಜರ ಪದ್ಧತಿಗಳಿಗೆ ವಿರುದ್ಧವಾಗಿವೆ ಮತ್ತು ಈ ಬಗ್ಗೆ ಪ್ರಾಚೀನ ಗ್ರಂಥಗಳ ಆಧಾರವನ್ನು ಕೊಡುವ ಅವರ ಪ್ರಯತ್ನವೂ ಸರಿಯಲ್ಲವೆಂಬುದನ್ನು ನಾನು ಜನತೆಗ ತೋರಿಸಲು ಪ್ರಯತ್ನಮಾಡಿದೆನು" ಇವರ ಈ ಅಭಿಪ್ರಾಯಗಳಿಂದ ಮುಖ್ಯತಃ ಮೂರು ವಿಷಯಗಳು ನಮ್ಮ ದೃಷ್ಟಿಗೆ ಗೋಚರವಾಗುತ್ತವೆ

೧ ಇವರು ಉತ್ತಮೋತ್ತಮವಾದ ಪ್ರಾಚೀನ ಸಂಸ್ಕೃತ ಗ್ರಂಥಗಳನ್ನು ಓದಿದ್ದರು

೨ ವರ್ತಮಾನ ಕಾಲದ ವಿಗ್ರಹಾರಾಧನೆಯೂ ಇತರ ರೀತಿ ರಿವಾಜುಗಳೂ ಇವರು ಓದಿದ ಗ್ರಂಥಗಳಿಗೆ ಪ್ರತಿಕೂಲವಾಗಿವೆ ಎಂಬುದು ಇವರಿಗೆ ಕಂಡುಬಂತು

೩ ಇವರು ಕ್ರೈಸ್ತಧರ್ಮದ ಗ್ರಂಥಗಳನ್ನು ಓದಿದರಿಂದ ಮೂರ್ತಿಯ ಖಂಡನೆಯನ್ನು ಮಾಡಿದ್ದಲ್ಲ

ಇವರು ಅರಬಿ ಮತ್ತು ಫಾರ್ಸಿ ಭಾಷೆಯ ಗ್ರಂಥಗಳನ್ನು ಓದಿದ್ದರು ಕೆಲವರ ಅಭಿಪ್ರಾಯವೇನೆಂದರೆ—ರಾಮ ಮೋಹನರಾಯರು ಮಹಮ್ಮದೀಯ ಮತಗ್ರಂಥಗಳನ್ನು ಚೆನ್ನಾಗಿ ಓದಿದ್ದರು ಮತ್ತು ಆ ಮತದ ಮೇಲೆ ಅವರಲ್ಲಿ ಒಳ್ಳೇ ಪ್ರಭಾವವಿತ್ತು ಅದರ ಆಧಾರದಿಂದ ಅವರು ಹಿಂದೂಗಳ ವಿಗ್ರಹಾರಾಧನೆಯನ್ನು ಖಂಡಿಸಿದರು, ಇತ್ಯಾದಿ

ಆದರೆ ಇವರಿಗಿಂತ ಮೊದಲು ಬಂದ ಯಾವ ಮಹಾಪುರುಷರೂ ಕೂಡ ಇಸ್ಲಾಮೀ ಧರ್ಮದಲ್ಲಿ ಪ್ರಭಾವಿತರಾಗಿ ಭಾರತೀಯರ ವಿಗ್ರಹಾರಾಧನೆಯನ್ನು ಖಂಡಿಸಿದ ದಾಖಲೆಯು ನಮಗೆ ದೊರೆಯುವುದಿಲ್ಲ. ಇವರಿಗಿಂತ ಮೊದಲು ಅನೇಕ ಜನರು ಮಹಮ್ಮದೀಯ ಮತಕ್ಕೆ ವಿರೋಧಿಗಳಾಗಿಯೂ ಹಿಂದೂ ಧರ್ಮಕ್ಕೆ ರಕ್ಷಕರಾಗಿಯೂ ಇದ್ದರು ಪರಂತು ಇವರೆಲ್ಲರೂ ವಿಗ್ರಹಾರಾಧನೆಯು ಹಿಂದೂಧರ್ಮದ ಪರ್ಯಾಯ ವಾಚಕ ಶಬ್ದವಾಗಿದೆ ಎಂಬ ಅಭಿಪ್ರಾಯಪಟ್ಟಿದ್ದಾರೆ

ರಾಮ ಮೋಹನರಾಯರಿಗೆ, ಬಾಲ್ಯದಲ್ಲಿಯೇ ಮೂರ್ತಿಪೂಜೆಯು ವೇದವಿರುದ್ಧವಾಗಿರುವುದೆಂದೂ ಇದು ಜಾತಿಯ ಮತ್ತು ದೇಶದ ಉನ್ನತಿಗೆ ಘಾತಕಸ್ವರೂಪವಾಗಿದೆ ಎಂದೂ ತಿಳಿದುಬಂತು ಈ ತರದ ತಿಳುವಳಿಕೆಯೇ ದೈವಿಕ ಘಟನೆಯೆನ್ನಬೇಕು ಅವರು ಕೆಲವು ಉಪನಿಷತ್ ಗ್ರಂಥಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ ಅವುಗಳಿಂದ ಕೆಲವು ವಾಕ್ಯಗಳನ್ನು ನಾವಿಲ್ಲಿ ಪ್ರಕಟಿಸುತ್ತೇವೆ ಈ ವಾಕ್ಯಗಳನ್ನು ಓದಿದಲ್ಲಿ ರಾಮ ಮೋಹನರ ಯಥಾರ್ಥವಾದ ಉದ್ದೇಶವು ವಾಚಕರಿಗೆ ಗೊತ್ತಾಗದಿರದು ಇವರು ಈಶೋಪನಿಷತ್ತಿನ ಭಾಷಾಂತರವನ್ನು ಇಂಗ್ಲಿಷ ಭಾಷೆಯಲ್ಲಿ ಮಾಡಿದ್ದರು ಇದು ಕ್ರಿ ಶ ೧೮೧೬ರಲ್ಲಿ ಮುದ್ರಿತವಾಗಿತ್ತು ಅದರ ಮುಖಪತ್ರದಲ್ಲಿ ಇವರು ಬರೆದಿರುವುದೇನೆಂದರೆ —

Establishing the unity and incomprehensiblity of the Supreme Being and that His Worship alone can lead to Eternal beatitude ಇದೇ ವಾಕ್ಯವು English works of Raja Ram Mohan Rai by H C Sarkar, Brahma Samaj Centenary Committee 1928' ಎಂಬುದರಲ್ಲಿದೆ

ಅಂದರೆ "ಒಬ್ಬನೇ ಪರಬ್ರಹ್ಮನು ಆತನು ಅಜ್ಞೇಯನಾಗಿರುತ್ತಾನೆ ಮತ್ತು ಆತನ ಉಪಾಸನೆಯನ್ನೇ ಮಾಡಿದರೆ ಆನಂದ ಪ್ರಾಪ್ತಿಯಾಗುತ್ತದೆ ಎಂದು ಈಶೋಪನಿಷತ್ತಿನಲ್ಲಿ ಬರೆದದೆ' ಇದೇ ಉಪನಿಷತ್ತಿನ ಇಂಗ್ಲೀಷ್ ಭಾಷಾಂತರದ ಭೂಮಿಕೆಯಲ್ಲಿ ರಾಜಾ ರಾಮ ಮೋಹನರಾಯರು ಬರೆದಿರುವುದೇನೆಂದರೆ—

The most learned Vyasa shows in his work of the Vedant that all the texts of the Ved with one consent prove but the divinity of that being who is out of the reach of comprehension and beyond all description It is evident from those authorities that sole regulator of the universe is but one who is omnipresent far surpassing our powers of comprehension above external sense and whose worship is the chief duty of mankind and the sole cause of eternal beatitude and that all that bear figure and appelation are inventions (P 67)

ಮಹಾ ವಿದ್ವಾಂಸರಾದ ವೇದವ್ಯಾಸ ಮಹರ್ಷಿಗಳು ತಮ್ಮ ವೇದಾಂತ ದಲ್ಲಿ ಬರೆದಿರುವುದೇನೆಂದರೆ ಯಾವ ಪುರುಷನ ಅಂದರೆ ಪರಮಾತ್ಮನ ದೇವತ್ವವು ಮನುಷ್ಯನ ಬುದ್ಧಿಶಕ್ತಿಯ ಮತ್ತು ವಾಕ್‌ಶಕ್ತಿಯ ಮೇರೆಗಿಂತ ಬಹಳ ಹೊರಗೆ (ಅಪಾರವಾಗಿ) ಇದೆ ಎಂದು ಎಲ್ಲಾ ಶ್ರುತಿಗಳಲ್ಲಿ ನಿರ್ದೇಶಿಸಲ್ಪಟ್ಟಿದೆ ಜಗನ್ನಿಯಾಮಕನಾದ ಪರಮಾತ್ಮನು ಒಬ್ಬನೇ ಎಂಬುದನ್ನೂ ಆತನು ಸರ್ವವ್ಯಾಪಕನಾಗಿ ಮನೆಂದೂ ಯಾವ ಬ್ರಹ್ಮನು ಮಾನವೀಯ ಸೃಷ್ಟಿಗೆ ಅಗೋಚರನಾಗಿರುವನೋ ಅಂಥವನನ್ನೇ ಉಪಾಸಿಸುವುದು ಮಾನವನ ಪರಮ ಕರ್ತವ್ಯವೂ, ನಿತ್ಯಾನಂದ ಸಂಪಾದನೆಗೆ ಮುಖ್ಯ ಸಾಧನೆಯಾಗಿದೆಯೆಂದೂ, ಆತನ ಹೊರತು ಉಲ್ಲೇಖಿಸಲ್ಪಟ್ಟ ಕೆಲವು ಹೆಸರುಗಳು ಕಾಲ್ಪನಿಕ ಹೆಸರುಗಳಾಗಿವೆಯೆಂದೂ ಆ ಗ್ರಂಥಗಳು ಚೆನ್ನಾಗಿ ವಿವರಿಸುತ್ತವೆ

ಪರಮಾತ್ಮನ ಪ್ರಾಪ್ತಿಯು ಅತ್ಯಂತ ಅಸಾಧ್ಯಕರವೆಂದು ಅನೇಕರು ಅಭಿಪ್ರಾಯಪಡುತ್ತಾರೆ ಮತ್ತು ಪರಮಾತ್ಮನ ವಿಷಯದ ಕುರಿತು ಏನೂ ಯೋಚಿಸುವುದಿಲ್ಲ ಈ ಕುರಿತು ರಾಮ ಮೋಹನರಾಯರು ತಮ್ಮ ಅಭಿಪ್ರಾಯ ಕೊಡುತ್ತಾರೆಂದರೆ —

Should the Idolator say that the acquisiton of a knowledge of God although it is not impossible is most difficult of comprehension I will agree with him in that point but infer from it that we ought therefore the more to exert ourselves to acquire that knowledge but I highly lament to observe that so far from endeavouring to make such an acquisition, the very proposal frequently excites his anger and displeasure " (P 69)

"ಪರಮಾತ್ಮನ ಜ್ಞಾನವನ್ನು (ಪರಮಾತ್ಮನನ್ನು ತಿಳಿದುಕೊಳ್ಳುವುದು) ಅಸಂಭವವಲ್ಲ ಆದರೂ ಅತ್ಯಂತ ಕಠಿಣತರವಾಗಿರುವುದು ಎಂಬುದಾಗಿ, ಮೂರ್ತಿ ಪೂಜಕರು ಒಂದು ವೇಳೆ ಹೇಳುವುದಾದರೆ, ಅವರ ಅಭಿಪ್ರಾಯವನ್ನು ನಾನು ಒಪ್ಪುವೆನು.

[ಸಶೇಷ]

ಒಗಟು ನಂ ೨

ನಿಯಮಗಳು.—೧ ದೂರದೇಶ ನಿವಾಸಿಗಳ ಉತ್ತರಗಳು ಸ್ವಸ್ತಕಾಲಕ್ಕೆ ಸಿಗುವಂತೆ ಉತ್ತರದ ಅವಧಿಯನ್ನು ೨೦ ದಿವಸಗಳ ತನಕ ಇಟ್ಟಿರುತ್ತದೆ ಇದರ ಉತ್ತರವನ್ನು ತಾ ೨೬—೮—೧೯೩೨ನೇ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಇದರ ಉತ್ತರವನ್ನು ತಾರೀಕು ೨೧—೮—೧೯೩೨ ಒಳಗೆ ಕಳುಹಿಸಿಕೊಡತಕ್ಕದ್ದು

೨ ಒಂದೇ ಸ್ಥಳದಲ್ಲಿ ಅಥವಾ ಊರಿನಲ್ಲಿರುವ ಹಲವು ಮಿತ್ರರು ತಮ್ಮ ಉತ್ತರಗಳನ್ನು ಒಂದೇ ಲಕೋಟೆಯಲ್ಲಿ ಹಾಕಿ (ಭಾರವು ಜಾಸ್ತಿ ಆಗದ ಹಾಗೆ ನೋಡಿ) ಪ್ರತಿಯೊಬ್ಬನೂ ಅರ್ಧಾಣೆ ಸ್ಟಾಂಪಿನೊಂದಿಗೆ ಕಳುಹಿಸಬಹುದು

೩ ಕಳುಹಿಸುವ ಉತ್ತರಗಳು ಮನೇಜರರೊಡನೆ ಇರುವ ಉತ್ತರಕ್ಕೆ, ಅಕ್ಷರಕ್ಕೆ ಅಕ್ಷರಗಳು ಒಪ್ಪಬೇಕು ಅಂತಹವುಗಳೇ ಉತ್ತರಗಳೆಂದು ಗಣಿಸಲ್ಪಡುವುವು

ಒಗಟುಗಾರ — ಎಮ್ ಅನಂತ ಶೈ

1		2	3	✿	4	5		6
	✿	7		8			✿	
9	10		✿		✿	11	12	
13		✿	14		15	✿	16	
✿	17			✿	18			✿
19		✿	20	21		✿	22	2
24		25	✿		✿	26		
	✿	27	28		29		✿	
30				✿	31			

ಸೂಚನೆಗಳು —

ಎಡದಿಂದ ಬಲಕ್ಕೆ—	ಮೇಲಿಂದ ಕೆಳಕ್ಕೆ—
೧ ಶವ ೪ ಕೇದಾರ ೭ ಕಾಡ್ಗಿಚ್ಚು	೧ ಪಕ್ಷಿಗಳಲ್ಲೊಂದು ೨ ಕಾಯಿ ಪಲ್ಯಗಳಲ್ಲೊಂದು
೯ ಪಂಚೇಂದ್ರಿಯಗಳಲ್ಲೊಂದು ೧೧ ರಕ್ತ	೩ ನೀನಾದ ೪ ಶರೀರ ೫ ಪ್ರಾಣಗಳಲ್ಲೊಂದು
೧೩ ಹಿಂದಿ ೧೪ ವರೆಗೆ ೧೫ ನಗುವಿಕೆಯ ಪ್ರತಿಧ್ವನಿ	೬ ಕುರುಳ ೮ ಭೇಟಿ ೧೦ ಸಾಗಮಾನ (ತಕ್ಷಮ)
೧೭ ಉರುಟು ಕಿಟಕಿ ೧೮ ಸುಡುವಿಕೆ	೧೨ ಸುಗ್ರೀವ ೧೪ ಅಷ್ಟ ಘನೆಯರಲ್ಲೊಬ್ಬ
೧೯ ತ್ರಿಗುಣಗಳಲ್ಲೊಂದು ೨೦ ಕವಿತೆ	೧೬ ಯುದ್ಧ ೧೯ ಅವಸರಪಡ ೨೧ ಕತ್ತರ
೨೨ ಪುಷ್ಪ ೨೪ ಕಮಲ ೨೬ ಹಿರಿಯರ ಆಸ್ತಿ	೨೩ ಕ್ರೋಧ ೨೫ ರಾಜ ೨೬ ವೇಷಧಾರಿಗಳ ಉಡುಪು
೨೭ ಸರ್ಪ ೩೦ ದೇವೇಂದ್ರ ೩೧ ಅರಳಿದ	೨೮ ಸನ್ಯಾಸಿ ೨೯ ಸಭಾ ಸಪ್ತಾಂಗಗಳಲ್ಲೊಂದು

೪ ಅವಧಿಯ ಕೊನೆಯ ದಿವಸದ ವರೆಗೆ ಕಾದು ನಿಲ್ಲದೆ ಉತ್ತರಗಳನ್ನು ಆದಷ್ಟು ಬೇಗನೇ ಕಳುಹಿಸಿಕೊಡತಕ್ಕದ್ದು ಇದರ ಬಿಚ್ಚುಗರಿಗೆ ಪ್ರಥಮ ಬಹುಮಾನವಾಗಿ ೧ ಕೇತ ಧಂಗ, ಎರಡನೇ ಬಹುಮಾನವಾಗಿ ಕುಮುದಂ, ಮೂರನೇ ಬಹುಮಾನವಾಗಿ ಟಂಕಿ ಪೆಟ್ಟಿಗೆ ತಯಾರಿಸುವ ವಿಧಾನವೆಂಬ ಉತ್ತಮ ಮತ್ತು ಹಳ್ಳಿನ ಬೆಲೆಬಾಳುವ ಗ್ರಂಥಗಳು ಕೊಡಲ್ಪಡುವುವು

೫ ಎಲ್ಲರೂ ವ್ಯವಸ್ಥಾಪಕರ ನಿಯಮಗಳಿಗೆ ಒಳಗಾಗಿರತಕ್ಕದ್ದು ಮೇಲಿನ ನಿಯಮಗಳನ್ನು ಸಮಯಾನುಸಾರ ಬದಲಾಯಿಸುವ ಹಕ್ಕು ವ್ಯವಸ್ಥಾಪಕರಿಗಿದೆ

೬ ಸಮಯಾನುಸಾರವಾಗಿ ಒಗಟುಗಳು ಆಗಾಗ್ಗೆ ಪ್ರಕಟಿಸಲ್ಪಡುವುವು.

ALLIANZ UND STUTTGARTER
Life Insurance Bank, Ltd.
ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್ ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ [illegible]ರಲ್ಲಿ ಸ್ಥಾಪಿಸಲ್ಪಟ್ಟಿದು.)

ಒಟ್ಟು ವಿಮಾ ಹಣವು ೨೦೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಹಪ್ತೆಗಳ ಜಮೆಯು ೯ ೯ ಕೋಟಿ ರೂ. ಗಳಿಂತ ಹೆಚ್ಚಿಗಿರುವುದು ಒಟ್ಟು ಸ್ವತ್ತು ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಿಕೆಗಳ ಮೇಲಿನ ಕಾಯ್ದೆಬಟ್ಟ ಕ್ಲೇಮುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೆ॥ ರವಾನಜಿ ಅ್ಯಂಡ್ ಸನ್ಸ್ ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN

Securing for your clients
1. **Low rates of Premium**
2. **Liberal Policy Conditions.**

AND FOR YOURSELF
An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to:—

H R K IYENGAR
Chief Agent

The S I. G A Co, Ltd,
Sanyasiguddy, MANGALORE

Managing Agents –

K. C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರೀಮಿಯಂ ದರಗಳು ಕಡಿಮೆ!
ಶರ್ತಗಳ ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು—

ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ ಟಿ. ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ ಕೆಮ್ಮು, ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಅತ್ಯಧಿಕ ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು [illegible] ಮಾರ್ಕೆಟ್.

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ, ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ, ಅಧಿಕ ಪ್ರಶಂಸೆ. ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ. ೨—೦—೦.

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು [illegible], ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೈಲ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಕಾಂಬಾರವಾಡ 4ನೇ ಗಲ್ಲಿ
ಮುಂಬಯಿ.

ಕೋ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಎಂ. ಗಣಪತಿರಾವ್ ಐಗಳರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ ಮೂರನೇ ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ, ಮೂರನೇ ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ ೨ನೇ ಭಾಗ)— ಚಿಕ್ಕ ಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತಕ್ಕಷ್ಟು ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಮಹೌಷಧ ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್,

ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಪೈ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ ತೋಟದವರಿಗೂ
ಬೇಕಾಗುವಂತಹ
ಚೆಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

[illegible] — ವರ್ಷ ಒಂದಕ್ಕೆ ರೂಪಾಯಿ ೨—0—0 [illegible] ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಂ ॥ ಸುಧಾಂ ವಿನಾ [illegible] ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥
ದೊರೆಯಲುನುಪಮರತ್ನಗಳು ಸಾ । ಗರದ [illegible]
[illegible]

ಪುಸ್ತಕ ೨೬. ಮಂಗಳೂರು ತಾ ೧೨ನೇ ಶುಕ್ರವಾರ ಆಗೋಸ್ಟ್ ೧೯೩೨ (12—8—'32.) ಸಂಚಿಕೆ ೩೩

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: —UDIPI. **Branches:—COONDAPOOR & Mangalore**

ಹೆಡ್ ಆಫೀಸು: - ಉಡುಪಿ ಶಾಖೆ - ಕುಂದಾಪುರ, ಮತ್ತು ಮಂಗಳೂರು.

Authorised Capital Rs. 3,50,000. Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000. ಚಂದಾ ಕಾಣಿಕೆಗೆ ಅರ್ಪಿಸಿದ ಮತ್ತು [illegible] ಮೂಲಧನ ರೂ. 2,25,[illegible]

STATEMENT OF ASSETS & LIABILITIES AS ON 31ST DAY OF JULY 1932

	CAPITAL AND LIABILITIES.			PROPERTY AND ASSETS	
1	Paid up Capital	Rs. 2,25,000-0-0	1	Premises Building, Furniture etc	Rs. [illegible]
2	Reserve and other funds	" 2,22,725-0-0	2	Government securities	" [illegible]
3	Deposits	[illegible]	3	Authorised Investments	[illegible]
4	Due to Bankers	" [illegible]	4	Bills for collection	[illegible]
5	Sundries	" 73,47[illegible]	5	Sundries	[illegible]
6	Bills for collection per contra	[illegible]	6	Cash in hand & with bankers	[illegible]
	Total	[illegible]		Total	[illegible]

UDIPI [illegible]—'32

N. ANANDA RAO,
Secretary & Manager

ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು — [illegible]

[illegible]

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಾಯಿ.

ಏಜಂಟರು — ಸಾ ಕಂಪೆನಿ, ಮಂಗಳೂರು

[illegible]

The Popular Insurance Co. Ltd.

Head Office - MANGALORE S. India

First of its kind in the West Coast

CHAIRMAN

Dewan Bahadur N. Subba Rao.

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN.

Ensure the Absolute Safety, Comfort and Happiness of your Dear Ones

WANTED INFLUENTIAL AGENTS.
LIBERAL TERMS TO COMPETENT MEN

For further particulars apply to the Head Office

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್
ಬೇಂಕ್, ಲಿಮಿಟೆಡ್.
(ಜರ್ಮನಿಯಲ್ಲಿ ಸನ್ ೧೮೯೦ರಲ್ಲಿ ಸ್ಥಾಪಿಸಲ್ಪಟ್ಟಿದು.)

ಒಟ್ಟು ವಿಮಾ ಹಣವು ೩೯೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ. ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕಾಯ್ದಿಟ್ಟ ತೀರ್ಪುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ್, ಧಾರವಾಡ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured'

PLACE YOUR LIFE'ASSURANCE WITH
THE SOUTH INDIAN
Securing for your clients
1 Low rates of Premium
2. Liberal Policy Conditions.
AND FOR YOURSELF
An Agency with attractive Terms
of Commission and Salary in
The South Indian
General Assurance Co, Ltd.,
Any where in CANARA DISTRICTS &
HYDERABAD STATE
For terms of Agency please apply to —
H R K IYENGAR
Chief Agent.
The S I G A Co, Ltd,
Sanyasiguddy, MANGALORE
Managing Agents –
K. C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್
ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ
ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳ ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ
ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ
ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ. ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್, ಜಿ ಟಿ. ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ ನೆಗಡಿ ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

800 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.
(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)
ಆತ್ಯ ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.
(ಪ್ಲೇಗಿಗೆ)
ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಶಂಖುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.
ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಕ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು, ಬಿಜೈಗೆ ಮಾತ್ರ.

ಮೂಲವ್ಯಾಧಿ

ರಕ್ತ, ಅಥವಾ ತಣ್ಣನ್ನವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೆ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ ಅಧಿಕ ಪ್ರಶಂಸೆ. ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ. ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಜ ಎಮೋಫ್ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ.
23 ಕಾಂಬಾರವಾಡೆ 4ನೇ ಗಲ್ಲಿ
ಮುಂಬಯಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪದ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ,

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ ೨ನೇ ಭಾಗ)— ಅಚ್ಚುಕಟ್ಟೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು



ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಡ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ ೪೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ
ಡಾಕ್ಟರ್ ಗೌತಮರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
ಘಾಕುರದ್ವಾರ, ಮುಂಬಾಯಿ ೨ ಸ್ಟೊಕಿಸ್ಟ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! ಮಾರಾಟಕ್ಕಿವೆ!!
ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಚಂದಾ ನಿಯಮವು:—ವರ್ಷ ಒಂದಕ್ಕೆ ರೂಪಾಯಿ 2—0—0 ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗವರ್ । ಹರುಷವಾಯಿತೆ? ಮತ್ತೆ ವಿಷದ ಸುಡುತ ಬರುತಿರುವ ॥
ಗರಳಕತರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕಳೆತರೆ । ತೆರಳಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೨೬. ಮಂಗಳೂರು ತಾ ೧೨ನೇ ಶುಕ್ರವಾರ ಆಗೋಸ್ಟ್ ೧೯೩೨ (12—8—'32.) ಸಂಚಿಕೆ ೩೩

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**
ಹೆಡ್ ಆಫೀಸು:– ಉಡುಪಿ ಶಾಖೆ – ಕುಂದಾಪುರ. ಮತ್ತು ಮಂಗಳೂರು

Authorised Capital Rs. 3,50,000. Subscribed & Called up Rs. 2,25,000.
ನಿಯಮಿತ ಮೂಲಧನ ರೂ 3,50,000. ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF JULY, 1932.

	CAPITAL AND LIABILITIES			PROPERTY AND ASSETS	
1	Paid up Capital	Rs. 2,25,000-0-0	1	Premises Building, Furniture etc	Rs. 64,460 6-6
2	Reserve and other funds	„ 2,22,705-0-0	2	Government securities	„ 3,30,788 4 0
3	Deposits	„ 21,10,093 9 7	3	Authorised Investments	„ 20,33,156 15 6
4	Due to Bankers	„ 1,610 10-4	4	Bills for collection	6,486 0 0
5	Sundries	„ 73,971 1 0	5	Sundries	„ 25,015 13 11
6	Bills for collection per contra	6,486 0 0	6	Cash in hand & with bankers.	„ 1,79,958 13-0
	Total	26,39,866 4 11		Total	26,39,866-4 11

UDIPI 4-8-'32

N. ANANDA RAO,
Secretary & Manager

(Regd

ಅಮೃತಾಂಜನ.

ಇದು ತಲೆ ಶಿರೋವೇದನೆ, ಕಣ್ಣುಕೆಂಪಿನ ವಾತ, ಬಾಲ ನೋವು, ವಿಶೇಷ ಉಳುಕು, ಅಸಾಧ್ಯ ಹಲ್ಲುನೋವು, ವಿಷಜಂತು ಘಾಯ, ಬಹು ಶೀತ ಸಹಿತವಾದ ಚಳಿ, ಕೈಕಾಲು ಮುರಿಕಟ್ಟುವುದು, ಲಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಶೀಘ್ರದಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು – ಇದು ಹುಳುಕಡ್ಡಿಯನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ವಾರದ ಸಲವುಟ್ಟುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು
ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಾಯಿ.
*ಏಜಂಟರು – ಶಾ ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office -MANGALORE, S India.
First of its kind in the West Coast

CHAIRMAN
Dewan Bahadur N. Subba Rao

STRIKING FEATURES

Policy Conditions Liberal
Claims Settlement Prompt!

MANAGEMENT PURELY INDIAN.

Ensure the Absolute Safety, Comfort and Happiness of your Dear Ones

WANTED INFLUENTIAL AGENTS.
LIBERAL TERMS TO COMPETENT MEN

For further particulars apply to the Head Office

ಮೊಲೆಯುಣ್ಣಿಸುವ ತಾಯಂದಿಯರಿಗೆ ರುಚಿಕರವಾದ ಓವಲ್ಟಿನ್' ಬೇಕು

ಮಗು ಜನಿಸುವ ಮೊದಲೂ ಅನಂತರವೂ ತಾಯಿಗೆ ಅವಳ ಎದೆಹಾಲು ಹೆಚ್ಚಲಿಕ್ಕೂ, ಆಯಾಸದ ದಣುವನ್ನು ಆರಿಸಲಿಕ್ಕೂ ಮತ್ತು ಅವಳ ಆರೋಗ್ಯವನ್ನು ವೃದ್ಧಿಸಲಿಕ್ಕೂ ಹೆಚ್ಚಿನ ಪೋಷಣೆಯು ಅಗತ್ಯವಿರುತ್ತದೆ

'ಓವಲ್ಟಿನ್' ಎಂಬುದು ಪ್ರಕೃತಿಗನುಗುಣವಾದ ಟೊನಿಕ್ ಆಹಾರವಾಗಿದೆ. ಅದು ಮೊಲೆಯುಣ್ಣಿಸುವ ತಾಯಿಗೆ ಬೇಕಾದ ಎಲ್ಲಾ ವಿಧದ ಉತ್ತಮ ಪೋಷಣೆಯನ್ನು ಒದಗಿಸುತ್ತದೆ

ಹೆರುವ ಮೊದಲೂ ಹೆತ್ತ ಮೇಲೂ 'ಓವಲ್ಟಿನ್'ನನ್ನು ಸೇವಿಸಿದರೆ, ಖಂಡಿತವಾಗಿಯೂ ಮಗುವಿನ ಆರೋಗ್ಯಕ್ಕೆ ಪ್ರಯೋಜನವಿದೆ. ಕಾರಣ ಪ್ರಕೃತಿಸಿದ್ಧ ರೀತಿಯಿಂದ ಮಗುವನ್ನು ಪೋಷಿಸಿದರೆ ಮಗುವಿನ ಜೀವನಾರಂಭವು ಆರೋಗ್ಯಕರವಾಗುತ್ತದೆ

ರುಚಿಕರವಾದ ಓವಲ್ಟಿನ್‌ನ ಎದುರಿಗೆ ಯಾವ ಆಹಾರವೂ ಸರಿಸಮಾನತೆಯಿಂದ ನಿಲ್ಲದು. ಆರೋಗ್ಯ ಶಕ್ತಿ, ಧಾತುಪುಷ್ಟಿಗೆ ಯಾವಾಗಲೂ ಅತ್ಯುತ್ತಮ ಪಾನೀಯವು.

ರುಚಿಕರವಾದ 'ಓವಲ್ಟಿನ್'ಗೆ ಸರಿಯಾದುದಿಲ್ಲ. ಸಪ್ರಮಾಣದಿಂದ ತಯಾರಿಸಲ್ಪಡದ ಎಲ್ಲಾ ನಕಲಿ ಪಾನೀಯಗಳನ್ನು ತ್ಯಜಿಸಿರಿ

'ಓವಲ್ಟಿನ್' ಟೊನಿಕ್ ಆಹಾರ ಪಾನೀಯವು

OVALTINE
TONIC FOOD BEVERAGE

ಏಜಂಟರು — ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್ ರ್‍ಯಾಟ್‌ಕ್ಲಿಫ್ ಎ, ರಿಪನ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸ್ ರಂಗೂನುಗಳಲ್ಲಿ

ನಿಮ್ಮ ಓವಲ್ಟಿನ್ ಸೇವನೆಯ ಸಮಯದಲ್ಲಿ ಸುಲಭವಾಗಿ ಜೀರ್ಣವಾಗುವ 'ಓವಲ್ಟಿನ್ ರೊಟ್ಟಿ'ಗಳನ್ನೂ ತಿನ್ನಿರಿ. ಹಲ್ಲು ಮೂಡುವಾಗ ಅವುಗಳನ್ನು ಮಗುವಿಗೂ ಕೊಡಿರಿ. ಅವುಗಳು ಮಗುವನ್ನು ಸುಖದಿಂದಿರಿಸಿ ಅದರ ಹಲ್ಲುಗಳನ್ನು ಶಕ್ತಿವಂತವಾಗಿ ಮಾಡುತ್ತದೆ. 'ಓವಲ್ಟಿನ್ ರೊಟ್ಟಿ'ಗಳು ರುಚಿಕರ ಶುದ್ಧ ಮತ್ತು ಅತ್ಯುತ್ತಮ

OV/75

ಪುತ್ತೂರಿನಲ್ಲಿ ಸ್ವದೇಶಾಭಿಮಾನಿಯ ಏಜಂಟರನ್ನಾಗಿ
ಶ್ರೀ ಜಿ. ಎನ್. ಕೃಷ್ಣ ಪೈ ಇವರನ್ನು ನೇಮಿಸಲಾಗಿದೆ.
ಮೇನೇಜರ್

ಕಟ್ಟಿದ ಹಲ್ಲುಗಳು.

ಡಾಕ್ಟರ್ ಬಿ. ವೆಂಕಟ್ರಾವ್,
ಎಲ್ ಎಮ್ ಪಿ, ಎಲ್ ಡಿ ಎಸ್ ಸಿ. (ಮದ್ರಾಸ್,)
ಫಿಸಿಶಿಯನ್, ಸರ್ಜನ್ ಮತ್ತು ದಂತವೈದ್ಯ,
ಹಳೆಯ ಟಪ್ಪಾಲುಕಟ್ಟೆಯ ಕಟ್ಟೋಣ,
ರಥಬೀದಿ, ಮಂಗಳೂರು.

ಇವರು ಎಲ್ಲಾ ತರದ ಹಲ್ಲು ರೋಗಗಳಿಗೆ ಶಾಸ್ತ್ರೀಯ ರೀತಿಗನುಸಾರವಾಗಿ ಚಿಕಿತ್ಸೆ ಮಾಡುತ್ತಾರೆ, ಮತ್ತು ಬೇಕಾದಲ್ಲಿಗೆ ಹೊಸ ಕೃತಕ ಹಲ್ಲುಗಳನ್ನೂ ಚಿನ್ನದ ಹಲ್ಲುಗಳನ್ನೂ ಬಹಳ ಕಡಿಮೆ ದರದಲ್ಲಿ ಕಟ್ಟುತ್ತಾರೆ

ಒಂದಲ್ಲ!— ಎರಡಲ್ಲ!!— ಮೂರು!!!

ಹಿಂದೀಯರಿಗೆ ೩ರ ಮೇಲೆ ನಂಬಿಕೆ ಬಹಳ; ದೇವಸ್ಥಾನದ ಸುತ್ತನ್ನು ೩ ಸಲ ತಿರುಗಬೇಕು, ಎಷ್ಟು ಚಂದಕ್ಕೆ ಏನಾದು ಕಣ್ಣು ಹಾಕಿದರೆ ೩ ಸಲ ಹೇಳಿದರೆ ಅದು ಪರಿಹಾರ!—ನಾಮಗಳು ೩ನ್ನೇ ಹಾಕಬೇಕು. ಇತ್ಯಾದಿ ಇತ್ಯಾದಿ—ಎಲ್ಲಾ ೩!!!

+ + + +

ಯಾವುದೂ ಸರಿ!— ಒಂದು ಅಥವಾ ಎರಡರಲ್ಲಿ ಯಾವುದೂ ಕೊನೆಗಾಣಬಾರದು — 3 ಸಲ ಮಾಡಿದರೇನೆ ಅದರಿಂದ ಫಲ! ಇದು ನಮ್ಮ ಹಿರಿಯರು ಮಾಡಿಟ್ಟ ಕಾನೂನು! — ಕಟ್ಟಳೆ.

× × × ×

ಈ ಕಟ್ಟಳೆಯ ಒಳಗುಟ್ಟನ್ನು ಬ್ರಿಟಿಷರು ಕೂಡಾ ತಿಳಿದುಕೊಂಡಿದ್ದಾರೆ. ಅವರು ಒಂದು ಸಲ ಅಲ್ಲ, ಎರಡು ಸಲ ಭಾಷೆ ಕೊಟ್ಟರು — ಅದು ಸರಿ ಬರಲಿಲ್ಲ. ಎರಡು ಭಾಷೆಗಳಿಗೂ ಕಿಚ್ಚು ಹೊಡೆಗಿತು

+ + + ×

ಮೂರಾಗದೆ ಮುಹೂರ್ತವಿಲ್ಲ. ಒಂದು ರೌಂಡ್‌ಟೇಬಲ್ಲು ಆಯಿತು — ಮುರಿದು ಬಿತ್ತು — ಎರಡನೇ ರೌಂಡ್ ಟೇಬಲ್ ರೌಂಡ್ ರೌಂಡ್ ಆಗಿ ಆಯಿತು. ಅದಕ್ಕೆ ಒಂದು ಪೌಂಡ್ ಬೆಲೆಯು ಬರದೆ ಅದು ಮುರಿಯಲ್ಪಟ್ಟಿತು. ಈಗ ಬೇಗ ಹೇಗೋ, ಏಕೋ, ಎಲ್ಲಿಯೋ ಇನ್ನೊಂದು 3ನೇ ರೌಂಡ್ ಟೇಬಲ್ ಆಗುತ್ತದಂತೆ!

+ + + +

3ರಲ್ಲಿ ಮುಕ್ತಾಯ. ನನ್ನ ಆಸೆಯಲ್ಲಿ "ತೃತೀಯೋ ಮುಕ್ತಾಯ!" ಓಂ ನಮೋ ಭಗವತೇ ನಮಾಯ ರೌಂಡ್ ಟೇಬಲ್ ಶಿವಾಯ! ಶಾಂತಿ! ಶಾಂತಿ! ಶಾಂತಿ!

+ + + +

ಅಂತೂ ಇಂತೂ ಲಂಡನ್ ಕಾಣದವರಿಗೆ ಇದೊಂದು ಬೆಸ್ಟ್ ಚಾನ್ಸ್ ಎನ್ನಿ. ಕೈಯಿಂದ ಒಂದು ಪೈಯಾದರೂ ವೆಚ್ಚವಾಗದೆ ೮೦೦೦ ಮೈಲು ದೂರಕ್ಕೆ ಹೋಗುವುದೆಂದರೆ — ಅದು ಕೂಡಾ ಇಂಗ್ಲಾಂಡಿಗೆ! ಎಷ್ಟು ಪುಣ್ಯವಿರಬೇಕು ನೀವೇ ತಿಳಕೊಳ್ಳಿ.

× × + +

ಪಾರ್ಲಿಮೆಂಟಿನಲ್ಲಿ ಒಬ್ಬ ಸಾಹೇಬರು ಹೇಳಿಯೇ ಬಿಟ್ಟರಂತೆ!— "ಏನು? ಸಪ್ರೂ ಜಯಕರರೇ ಮೊದಲಾದವರನ್ನು ನಾವು ಧರ್ಮಾರ್ಥವಾಗಿ ಟ್ರಾವೆಲಿಂಗ್ ಎಲೋವೆನ್ಸ್ ಕೊಟ್ಟು ಲಂಡನಿಗೆ ಬರಮಾಡಲಿಲ್ಲವೇ!" ಎಂದು. ರೌಂಡ್ ಟೇಬಲಿಗೆ ವೆಚ್ಚವಾದ ಹಣವು ಈ ಸಾಹೇಬರ ಖಜಾನೆಯದ್ದೋ?

+ + + +

ಎರಡು ರೌಂಡ ಟೇಬಲಿಗೆ ಹತ್ತಿಪ್ಪತ್ತು ಲಕ್ಷ, ಸೈಮನ್, ಲೊಥಿಯನ್, ಡೇವಿಡ್ಸನ್ ಕಮಿಟಿಗೆ ಹತ್ತಿಪ್ಪತ್ತು ಲಕ್ಷ ರೂಪಾಯಿಗಳು ಲಕ್ಷ ಲಕ್ಷವಾಗಿ ಲಕ್ಷ್ಯವಿಲ್ಲದೆಯೇ ವೆಚ್ಚವಾದುವು. ಈ ಹಣವು ಲಂಡನಿನವರದ್ದಲ್ಲ — ಹಿಂದೀಯರದ್ದು. ಇದನ್ನು ಲಂಡನಿನವರು ತಿಳಿಯುವರೇ?

× × × ×

ವನ್ ಟೂ!! ತ್ರೀಯಲ್ಲಿ ನಾವು ಫ್ರೀ ಆಗದಿದ್ದರೆ ನನ್ನಂತಹ ದಗ ಪುಣ್ಯವೇ ಪುಣ್ಯ

× × × ×

ತೃತೀಯ ರೌಂಡ್‌ಟೇಬಲ್ ಪರಿಷತ್ತು ಜರಗುವ ನಿಶ್ಚಿತ ದಿನವು ಪ್ರಕಟವಾಗಲಿಲ್ಲ. ಈ ಪರಿಷತ್ತು ಆಗಲಿರುತ್ತದೆಂಬ ವಾರ್ತೆಯನ್ನು ಕೇಳಿ ಎಷ್ಟು ಜನ ಪ್ರತಿನಿಧಿಗಳು ಈಗಲೇ ಪಟ್ಟಿಗೆ ಕಟ್ಟುತ್ತಿರುವರೂ ಯಾರಿಗೆ ಗೊತ್ತು?

× × × ×

ಶ್ರೀಯುತ ಮೆಕ್ಡೊನಾಲ್ಡರೇ, ಸರ್ ಸ್ಯಾಮುವೆಲ್ ಹೋರ್ ಮಹಾಶಯರೇ, ತೃತೀಯ ಪರಿಷತ್ತಿಗೆ ನಮ್ಮ ಕೌಶಾಲಿಯವರನ್ನು ಕರೆಯಲು ಮರೆಯಬೇಡಿ

× + + +

ಪಂಜಾಬದ ಸಿಖ್ಖರ ಮೇಲೂ ಹಿಂದೀಯರ ಮೇಲೂ ಅವರು ಕೋಪಗೊಂಡಿದ್ದಾರೆ. ಒಂದು ಸ್ಟೇಟ್‌ಮೆಂಟನ್ನು ಮಾಡಿ ಹಿಂದೂಗಳಿಗೆ ಎಚ್ಚರವಿತ್ತು ಅಜ್ಞಾತವಾಸಸ್ಥಾನಕ್ಕೆ ಹೋಗಿರುತ್ತಾರೆ. ಅವರು ಶಾಂತರಾಗಬೇಕಾದರೆ ಇಂಗ್ಲೆಂಡಿನ ಗಾಳಿಯೇ ಅವರಿಗೆ ಬೇಕಾದುದು ತಿಳಿದಿರಲಿ.

+ × × ×

ಲೋರ್ಡ್ ವಿಲ್ಲಿಂಗ್ಡನ್ ದೊರೆಯವರೂ ಈ ವಿಷಯವಾಗಿ ಗಮನಕೊಡುವರೆಂದು ನಂಬುವೆನು.

+ + + +

ಕಾರಣ,— ಕೌಶಾಲಿ, ಅಂಬೇಡ್ಕರರು ಇದ್ದರೇನೇ ರೌಂಡ್ ಟೇಬಲ್‌ನಲ್ಲಿ ವಿಜಯ! ಗೊತ್ತುಂಟಲ್ಲವೇ? ಒಂದು! ಎರಡು!! ಮೂರು!!! ಓಂ ಶಾಂತಿ ಶಾಂತಿ!

'ಧೂಮಕೇತು'

THE SOUTH INDIA CO-OPERATIVE INSURANCE SOCIETY, LIMITED, MADRAS

LOCAL BOARD:—

THE SOUTH CANARA CENTRAL
CO-OPERATIVE BANK LTD MANGALORE

Applications are invited for 'Sub Agents from capable and energetic persons and Co-operative Institutions to canvas business on behalf of the Local Board of the Society at Mangalore.

FOR TERMS APPLY TO:—

The Secretary,
South Canara Central Co operative
Bank, Ltd, KODIALBAIL P O (Mangalore)
SOUTH ANARA

The Udipi Mutual Benefit Fund, UDIPI.

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ,ಕುರಿಫಂಡುಗಳೂ ನಡೆಯುಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್

ಅಚ್ಚಿನಲ್ಲಿದೆ! ಅಚ್ಚಿನಲ್ಲಿದೆ!

ಇದೇ ತಿಂಗಳ ಮೂರನೆ ವಾರದಲ್ಲಿ ಹೊರಬೀಳುವುದು.

ಅಭಿನಯಗೀತಾವಳಿ

(ಶ್ರೀ ಬಿ ಎಸ್ ಲಕ್ಷ್ಮಣಯ್ಯ ವಿರಚಿತ)

ಕ್ರಯ ೦—೨—೬ ಕ್ರಯ ೦-೨-೬

ಚಿಕ್ಕ ಮಕ್ಕಳಲ್ಲಿ ವಿಷಯಜ್ಞಾನ, ಭಾಷಾಜ್ಞಾನ ಮತ್ತು ಸಂಗೀತಜ್ಞಾನವು ಏಕಕಾಲದಲ್ಲಿ ಉಂಟಾಗುವಂತೆ ಕಿಂಡರ್‍ಗಾರ್ಟನ್ ಪಾಠವನ್ನು ಅನುಸರಿಸಿ ರಚಿಸಲ್ಪಟ್ಟ ಹಾಡುಗಳ ಪುಸ್ತಕ ಇದರೊಳಗಿನ ಗೀತಗಳನ್ನು ಹಾಡಿ, ನಲಿಯುವುದೆಂದರೆ ಮಕ್ಕಳಿಗೊಂದು ಹಬ್ಬವೇ ಸರಿ.

ನಮ್ಮ ಇತರ ಪುಸ್ತಕಗಳು—

ಸಚಿತ್ರ ಕನ್ನಡ ಪದ್ಯರತ್ನಾವಳಿ
3, 4, 5ನೆ ದರ್ಜೆಗಳ ಒಗ್ಗೆ ಪದ್ಯಪುಸ್ತಕ } ೦—೩—೬

ಕೀರ್ತನಾಂಜಲಿ
(ಉತ್ತಮ ಭಜನಾಗೀತಗಳ ಕೈಪಿಡಿ) } ೦—೩—೦

ಹರಿಹರ ಛಾಪಖಾನೆ, ಮತ್ತು ಪುಸ್ತಕಾಲಯ,
ಪುತ್ತೂರ, ದ ಕ.

ತುಂಬಾ

ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ?
ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿ
ಯನ್ನು ತೆಗೆದುಕೊಳ್ಳಿರಿ.
ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ
ಬರೆದುಕೊಳ್ಳಿರಿ

Wanted.

Agents for 'Swadeshabhimani' throughout the South Kanara District and elsewhere.

Apply Sharp — You are sure to secure substantial Commission

MANAGER,
Swadeshabhimani,
Mangalore.

Canara Bank Limited.

ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal Kasargod, Cochin, Udipi, Gangolli Coondapur, Bombay Puttur, Calicut & Alleppey**

ಬ್ರಾಂಚುಗಳು:-
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬ್ಯಾ. ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised Capital 10,00000—0—0	ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ 10, 0000—0—0
Issued & paid up Capital 300,000-0-0	ಚಂದಾ ಪಾಸಿದ ಮತ್ತು ಪೂರ್ಣ ಕಟ್ಟ ಮೂಲಧನ ರೂ 300,000 0—0
Reserve and other sinking Funds Rs 526,000—0—0	ರಿಸರ್ವ್‌ನಿಧಿ ಮತ್ತು ಇತರ ಫಂಡುಗಳು 526,000—0—0
Amount invested on G P Notes Rs 1210,092—12—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 1210 092— 2—0
Rates of interest on fixed deposits at Head Office and Branches are 6% for 2 Years 5½% 1 Year	ಬಡ್ಡಿ ದೀರ್ಘ ಠೇವಣಿ ಮೇಲೆ ಕೊಡತಕ್ಕ ಬಡ್ಡಿ ದರ— ಎರಡು ವರುಷಗಳ ಠೇವಣಿಗೆ 6% 1 ವರುಷಕ್ಕೆ ಠೇವಣಿ 5½.

Current Account Deposits received and interest allowed on daily balance of Rs 50 and above that on multiples of Rs 10 @ 3% from Ist Janauary to 30th June and @ 2% from Ist July to 31st December No interest will be allowed unless the depositor earns not less than Rs 5/ during a period of 6 months ending either 30th June or 31st December in any year.

Except by special arrangement no interest is allowed on sums exceeding Rs. 10 000/ in the case of Head Office and Cochin Branch and on sums not exceeding Rs. 15 000 in the case of Bombay Branch and on sums exceeding Rs 3000 in the case of other Branches

For further particulars please apply to —

Office of the Bank,
Mangalore 17—1—1932

K. Venkat Rao,
Secretary & Treasurer

The Pangal Nayak Bank, Ltd.

Head Office Udipi,

Established 1920

Branch Office Mangalore

Authorised Capital Rs 2 00,000-
Issued Capital Rs 1 75,000-
Paid up Capital Rs. 1,75 000-
Reserve and other Funds Rs 1,80,000

NOTICE.

Advances on pledge of Gold are made at 8%

Fixed deposits received at following rates

3 months 4½%, 6 and 9 months 5%,
1 year and above 5½%, 2 years 6 %

(By order)

Office of the Bank,
Udipi, 1—7—'32

P Laxman Nayak,
Secretary

ಈ ಹೊಸ ಗ್ರಂಥಗಳನ್ನು ನೋಡಿರುವಿರಾ?

ಕಾಮದ ಗುಟ್ಟು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ ಕೃತ ಇಂತಹ ಗಂಭೀರವಾದ ಸ್ವಾರಸ್ಯವಾದ, ಉಪಯುಕ್ತವಾದ ಕಾಮ ಶಾಸ್ತ್ರ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ ಬೆಲೆ ೧೨ ಆಣೆಗಳು ಮಾತ್ರ.

ಪ್ರಳಯ ತಾಂಡವ—(ಸಚಿತ್ರ) ಶ್ರೀ ಜಿ ವಾಸುದೇವರಾಯರು [illegible] ಚಿತ್ರಗಳೊಂದಿಗೆ ಅಂದವಾಗಿ ಪ್ರಕಟವಾಗಿದೆ. ಉಚ್ಚಭಾವನೆಗಳನ್ನೊಳಗೊಂಡಿರುವ ಸ್ಫೂರ್ತಿದಾಯಕ ಕವನಗಳಿವೆ ಬೆಲೆ ೬ ಆಣೆಗಳು ಮಾತ್ರ ಲೈಬ್ರರಿ ಪ್ರತಿ ರೂ ೧.

ಹೊಸಹುಟ್ಟು—ಶ್ರೀ ಅ ನ ಕೃಷ್ಣರಾಯರು [illegible] ಪ್ರೌಢತರ ವ್ಯಾಸಗಳು, ೮ ಸುಂದರ ಚಿತ್ರಗಳು, ಫೆದರ್‌ವೇಟ್ ಕಾಗದದ ಮೇಲೆ ೧೪೨ ಪುಟಗಳಿವೆ ಬೆಲೆ ೧ ರೂಪಾಯಿ

ವೈದ್ಯರಾಜ —(ಸಾಮಾಜಿಕ ನಾಟಕ) ಪ್ರೊಫೆಸರ್ ಜಹಗೀರ್‌ದಾರ್ ಕೃತ. ಬೆಲೆ ೧ ರೂಪಾಯಿ

ಮೋಹನಾಸ್ತ್ರ—(ಸಾಮಾಜಿಕ ನಾಟಕ) ಪಂಡಿತ ತಾರಾನಾಥ ಕೃತ ಬೆಲೆ ೧ ರೂಪಾಯಿ.

ನವಜೀವನ ಗ್ರಂಥ ಭಂಡಾರದ ಅಮೌಲ್ಯ ಗ್ರಂಥಗಳು

೧ **ಆಕಾಶದೊಳಗಿನ ಅದ್ಭುತ ಚಮತ್ಕಾರಗಳು** (ಪ್ರೊ ಪಾಟೀಲ ತಿರುಕುಲರಾಯರು) ೧—೨—೬.
೨ **ಧರ್ಮ ಸಂಭವ** (ಪಂಡಿತ ತಾರಾನಾಥರಾಯರು) ೧—೪—೦.
೩ **ಹಿಂದೂಸ್ಥಾನದ ಪ್ರಾಚೀನ ರಾಜ್ಯಪದ್ಧತಿಗಳು** (ಶ್ರೀ ವಿಷ್ಣು ಹರಿ ಒಡೆಯರ) ೧—೨—೦.

ಹೆಚ್ಚಿನ ವಿಷಯಗಳಿಗೆ ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ.

ಎ. ಜಿ. ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

'ಪಾರ್ಟಿ'ಗಳೆಂಬ ಅಣಬೆಗಳು

ಮೊಳೆವುದಕ್ಕೆ ಈ ಕಾಲವೇ, ಈ ಋತುವೇ ಉತ್ತಮವೆ? ಅಖಿಲಭಾರತದ ಮುಸ್ಲಿಮ ಪರಿಷತ್ತೆಂಬುದು ಹೇಗೆ ಜೀವನ ಧರಿಸಿ ಇಷ್ಟು ಕಾಲವಿದ್ದಿತೋ ಅದು ತಿಳಿಯದೆ ಹೋದರೂ, ಈಗ ಅದು ಮುರಿದುದೇ ನೂರಾರು ಪಕ್ಷಗಳು ಹೊರಡಲುದ್ಯುಕ್ತವಾಗಿವೆ. ಹಸ್ರತ್ ಮೊಹಾನಿಯವರು ಸ್ವತಂತ್ರ್ಯ ಮುಸ್ಲಿಮ ಪಕ್ಷ ಸ್ಥಾಪಿಸಿದ ಕೂಡಲೆ, ಮೌಲಾನಾ ಶಾಫಿ ದಾವೂದಿಯವರು ಹೊಸದೊಂದು ಮುಸ್ಲಿಮ ಪಕ್ಷವನ್ನು ಸ್ಥಾಪಿಸಿರುವರು. ಇನ್ನೆಷ್ಟೋ ಪಕ್ಷಗಳೋ ಪಕ್ಷಿಗಳೋ ಈ ಗೂಡಿನಿಂದ ಹೊರ ಬೀಳಲಿವೆ. ಇತರ ಸಮಾಜಗಳೊಡನೆ ಸ್ಪರ್ಧೆಗೆ ನಿಂದು 'ಪೈಂಟು'ಗಳನ್ನು ಹೊರಗೆಡಹಿ, ಸಡ್ಡು ಹೊಡೆದು ನಿಂತಿದ್ದ ಮುಸ್ಲಿಮ ಪಕ್ಷವು ಒಡೆದು, ಚೂರು ಪಕ್ಷಗಳು ಚೀರುತ್ತಾ ಹಾರುವುದನ್ನು ಕಂಡರೆ, ತಮ್ಮೊಳಗೇ ಪ್ರಬಲವಾದ ಒಡಕು ಇದ್ದೂ ಇತರ ಬಹುಸಂಖ್ಯಾಕರನ್ನು ಮುರಿದಿಕ್ಕಲು ಇದುವರೆಗೆ ಇವರು ಯತ್ನ ಮಾಡುತ್ತಿದ್ದರೆಂದು ತೋರದಿರುವುದೆ! ಇದೆಷ್ಟಕ್ಕುಳಿದಿದೆ ಎಂದರೆ, ಇನ್ನು ಪ್ರತಿಯೊಬ್ಬ ಮುಸ್ಲಿಮನ ಒಂದೊಂದು ಬೇರೇ ಪಕ್ಷ ಉಂಟಾಗಲೂ ಅವಕಾಶವಿದೆ. ರಾಷ್ಟ್ರೀಯತೆಯೇ ಧ್ಯೇಯವಾಗಿದ್ದಲ್ಲಿ ಹಲವು ಪಕ್ಷಗಳುಂಟಾಗಲು ಅವಕಾಶವಿರುತಿರಲಿಲ್ಲ, ಕೊಂಗ್ರೆಸ್ಸಿನಲ್ಲೇ ಆದರೂ ಎಷ್ಟು ಭಿನ್ನ ಮತೀಯರೂ ಸಾಮಾಜಿಕರೂ ಇರುವರಾದರೂ ಅವರು ಒಂದಾಗಿರುವಂತೆ ಬಂಧಿಸಿಟ್ಟುದೇ ರಾಷ್ಟ್ರೀಯತೆ. ಅದೊಂದಿಲ್ಲದೆ, ಮುಸ್ಲಿಮರಲ್ಲಿ ಪಕ್ಷಗಳಾದುವು!

ರೂಪಾಯಿಗೂ ಪವನಿಗೂ ನಿರಖು ಧಾರಣೆ

ಇಟ್ಟು, ಚಿನ್ನಕ್ಕೆ ಬೆಲೆ ಅಗತ್ಯ ತೋರಿದಂತೆ ಬದಲಾಯಿಸಿ ಬರುವುದರಿಂದ, ಹಿಂದೂದೇಶದ ದುರ್ದಶೆಯು ಹೆಚ್ಚುತ್ತ ಬರುವಂತಾಗಿದೆ. ಬಜೆಟ್ಟು ಮುಗಿದ ನಂತರದ ಇವೇ ಮೂರು ತಿಂಗಳಲ್ಲಿ ಹಿಂದೂದೇಶದಿಂದ ಪರದೇಶಕ್ಕೆ ಸಾಗುವ ಸಾಮಾನಿನ ಬೆಲೆಯು ಮುಕ್ಕಾಲಂಶಕ್ಕೆ ಇಳಿದಿದೆ, ಆಮದುಗಳ ಬೆಲೆ ಮೂವತ್ತರಲ್ಲೊಂದಂಶ ಏರಿದೆ. ನಮ್ಮ ಸರಕು ಪರದೇಶಗಳಿಗೆ ಹೋಗುವುದರಲ್ಲೀಗ ಹತ್ತು ಕೋಟಿ ರೂಪಾಯಿ ಕಡಿಮೆಯೂ, ಆಮದುಗಳ ಬೆಲೆಯಲ್ಲಿ ಒಂದು ಕೋಟಿ ರೂಪಾಯಿ ಹೆಚ್ಚೂ ಆದಂತೆ ತೋರುತ್ತಿದೆ. ಇದು ಇನ್ನಷ್ಟು ತಿಂಗಳು ಹೀಗೆಯೆ ಸಾಗಿದರೆ, ವ್ಯಾಪಾರದ ದುರವಸ್ಥೆ ಹೇಳತೀರದಾಗುವುದು, ಸಾಂಪತ್ತಿಕ ಸ್ಥಿತಿಯು ಬಹಳ ಹಾಳಾಗುವುದು. ೬೬ ಕೋಟಿ ರೂಪಾಯಿ ಮೌಲ್ಯದ ಚಿನ್ನವಂತೂ ಹಿಂದಣ ವಾರದ ತನಕ ಈ ದೇಶವನ್ನು ಈ ಯುಗಕ್ಕೆಂಬಂತೆ ತೊಲಗಿಯೇ ಹೋಯಿತು. ಚಿನ್ನವು ರಫ್ತಾಗುವುದು ಕಡಿಮೆಯಾದರ, ಆಮದಾಗುವ ಸರಕುಗಳ ಬೆಲೆ ಕೊಡುವವರಾರು? ಹಾಗೆಂದು ಚಿನ್ನವನ್ನು ಇನ್ನಷ್ಟು ಕಾಲ ಇದೇ ರೀತಿ ರಫ್ತುಮಾಡಲು ಬಂದೀತು? ಇವೇ ಮೂರು ತಿಂಗಳೊಳಗೆ ಹನ್ನೆರಡು ಕೋಟಿ ರೂಪಾಯಿ ಮೌಲ್ಯದ ವ್ಯಾಪಾರವು ಕಡಿಮೆಯಾಗಿರುವಾಗ, ಪ್ರಜೆಗಳಿಗೆ ಉಂಟಾಗಬಹುದಾದ ಬಡತನಕ್ಕೇನೂ ಕಡಿಮೆಯಾಗುವುದುಂಟೆ?

ಒರ್ಡಿನೆನ್ಸುಗಳು

ಅನಗತ್ಯ, ಅನಾವಶ್ಯಕ, ಅವನ್ನು ಮತ್ತೂ ಬದುಕುವಂತೆ ಸಂಜೀವನ ಕೊಟ್ಟಿರುವುದು ಪರಮ ಅನ್ಯಾಯ. ಸರಕಾರದ ಒಕ್ಕಣೆಯಲ್ಲಿ, ಈ ಒರ್ಡಿನೆನ್ಸುಗಳನ್ನು ಎಷ್ಟು ಪ್ರಯೋಗಿಸುವ ಅಗತ್ಯ ಅಡಚಣೆಗಳಾಗಲಿ ಸಂಭವಗಳಾಗಲಿ ಇದ್ದಿಲ್ಲವೆಂದು ಬರೆದಿದೆ. ಶಾಂತಿ ಸಮಾಧಾನಗಳ ಪಾಲನೆಗೆ ಇದ್ದ ಕಾನೂನುಗಳೇ ಸಾಕಾಗಿವೆ, ಯಥೇಷ್ಟವಿವೆ. ಮುಂದಣ ರಾಜ್ಯಭಾರ ಕ್ರಮವನ್ನು ಚರ್ಚಿಸಿ ನಿರ್ಧರಿಸುವುದಕ್ಕಾಗಲಿ, ಹೊಸ ಕ್ರಮಗಳನ್ನು ಬಳಕೆಗೆ ತರುವುದಕ್ಕಾಗಲಿ ಈ ಒರ್ಡಿನೆನ್ಸುಗಳೇ ಆತಂಕಗೊಳಿಸುತ್ತಿವೆ. ಜನತೆಯು ಅಂಗೀಕರಿಸಬಹುದಾದಂತಹ ರಾಜ್ಯಭಾರಕ್ರಮವು ಹುಟ್ಟಿ ಬಾಳಿ ಹೊರಡಬೇಕಾದರೆ, ಕೊಂಗ್ರೆಸ ಪಕ್ಷ ಸಹಾ ಎಲ್ಲ ಪಕ್ಷಗಳ ಅಭಿಪ್ರಾಯಾದಿ ಸಹಕಾರವು ಅಗತ್ಯವಿದೆ. ಇದಕ್ಕಾಗಿಯೆ ಒರ್ಡಿನೆನ್ಸುಗಳನ್ನು ರದ್ದುಗೊಳಿಸಬೇಕೆನ್ನುವುದು. ಕೊಂಗ್ರೆಸ್ ಪಕ್ಷವು ಈ ದೇಶದಲ್ಲಿನ ಪಕ್ಷಗಳಲ್ಲೆಲ್ಲ ಉದ್ದಾಮ ಪಕ್ಷವಾಗಿದೆ. ಅದರೊಡನೆ ಸಂಧಾನಮಾಡುವ ಸಂಧಾನಾದಿ ಕ್ರಮಗಳನ್ನು ಸರಕಾರವು ಕೈಗೊಂಡು ಮುಂದಣ ಸುಧಾರಣೆಗಳನ್ನು ಘಟಿಸಿ ತರುವುದಕ್ಕೆ ಸಹಕಾರವನ್ನು ಸರಕಾರವು ಸಾಧಿಸಿಕೊಳ್ಳಬೇಕು — ಎಂಬುದಿದು ಮದ್ರಾಸಿನ ಯುನೈಟೆಡ್ ನೇಶನಲಿಸ್ಟ್ ಪಕ್ಷದ (ಮದ್ರಾಸು ನ್ಯಾಯವಿಧಾಯಕ ಸಭಾಮೆಂಬರರ ಪಕ್ಷ) ಅಭಿಪ್ರಾಯವಾಗಿದ್ದು, ಪ್ರಕಟವಾಗಿದೆ.

ಲಂಡನ್ ಯೆರವಾಡಾ ಪತ್ರವ್ಯವಹಾರವು

ಕೆಲವು ತಿಂಗಳುಗಳಿಂದಲೂ ನಡೆಯುತ್ತಿದೆ ಎಂದೂ, ಕೊನೆಯ ಉತ್ತರವು ಸರ್ ಸಾಮುವೆಲ್ ಹೋರರಿಗೆ ಮಹಾತ್ಮಾಜೀಯವರಿಂದ ಹತ್ತು ದಿನಗಳ ಹಿಂದೆ ರವಾನೆಯಾಗಿದೆಯೆಂದೂ ಬೊಂಬೇ ಕ್ರೋನಿಕಲ್ ಪತ್ರದಲ್ಲಿ ಮಿ॥ ಹೊರ್ನಿಮೆನರ ಲೇಖವಿದೆ. 'ಇರ್ವಿನ ಗಾಂಧೀ ಕರಾರಿನ ಶರ್ತಗಳೊಳಗೇ ಕೊಂಗ್ರೆಸ್ಸಿನ ಹೇಳಿಕೆಯನ್ನು ಸರಕಾರವು ಅಂಗೀಕರಿಸುವುದಕ್ಕೆ ಸಿದ್ಧವಿದ್ದು, ೧೯೩೧ರಲ್ಲಿದ್ದಂತೆಯೆ ಮುಂದೆಯೂ ಇರಲಿಚ್ಛಿಸುವುದು, ಆದರೆ ಪ್ರಾಂತಿಕ ಸ್ವರಾಜ್ಯದಷ್ಟೇ ಸುಧಾರಣೆಗೆ ಕೊಂಗ್ರೆಸು ಒಪ್ಪಿಕೊಳ್ಳಬೇಕು,—ಎಂದು ಹೋರರ ಸೂಚನೆಯಿದೆ. ಗಾಂಧಿಯವರು ಇದನ್ನೊಪ್ಪಿಕೊಳ್ಳಬೇಕೆಂದು ಬಹುಜನರ ಒತ್ತಾಯವೂ ನಡೆದಂತಿದೆ. ಏಕೆಂದರೆ, ಪ್ರಾಂತಿಕ ಸ್ವರಾಜ್ಯವನ್ನಷ್ಟೆ ಒಪ್ಪಿಕೊಂಡು, ಅದನ್ನು ನಡೆಸುತ್ತ ಉಂಟಾಗುವ ಅನುಭವದಿಂದ ಮುಂದಣ ಫೆಡರೇಶನ್ ವಗೈರೆ ಕ್ರಮವನ್ನು ಅನುಸರಿಸಲು ಅನುಕೂಲವಾಗುವುದಾಗಿ ಇವರು ಒತ್ತಾಯಮಾಡುತ್ತಾರಂತೆ. ಈ ಸಂಧಿಯಲ್ಲಿ, ಕೇಂದ್ರದಲ್ಲಿ (ವರಿಷ್ಠ ಸರಕಾರದ) ಈಗಿನಷ್ಟೆ ನಿರಂಕುಶವಾಗಿ ಆಳುವ ಸರಕಾರವನ್ನೆ ಪ್ರತಿಷ್ಠಿಸುವುದೆಂದೂ ಅದು ಫೆಡರೇಶನು ಸ್ಥಾಪನೆ ಹೊಂದುವ ತನಕವೂ ಇರಬೇಕೆಂದೂ (೨೦ ವರ್ಷದ ವರೆಗೆ ಎಂದು ಇನ್ನೊಬ್ಬರ ಹೇಳಿಕೆಯಿದೆ) ಸೂಚಿಸಲಾಗಿದೆ. ಕೌನ್ಸಿಲುಗಳಿಂದ ಚುನಾವಣೆಹೊಂದುವ ಮೆಂಬರರನ್ನೆ ಚುನಾಯಿಸಿ ಫೆಡರೇಶನನ್ನು ಘಟಿಸಿ ತರುವರಂತೆ! ಗಾಂಧಿಜಿಯವರು ಕೇಂದ್ರವು ಎಸೆಂಬ್ಲಿಗೆ ಜವಾಬ್ದಾರಿಯುಳ್ಳದ್ದಾಗಿಲ್ಲದೆ ಪ್ರಾಂತಿಕ ಸ್ವರಾಜ್ಯವು ಬೇಡವೆಂದೂ ಮೊದಲೇ ಸಾರಿದವರು. ಈಗ ಅವರ ಉತ್ತರದಲ್ಲಿ ಏನಿರಬಹುದೆಂದು ಈ ಅಭಿಪ್ರಾಯದಿಂದಲೇ ತಿಳಿದುಕೊಳ್ಳಬಹುದಾಗಿದೆ—ಎಂದು ಹೊರ್ನಿಮೆನರು ಬರೆದಿರುವರು.

ಇದೂ ಓರ್ಡಿನೆನ್ಸಿನಲ್ಲಿದೆಯೆ?

ಮಿಡ್ನಾಪುರದ ಜಿಲ್ಲಾ ಕಲೆಕ್ಟರರು ಒಂದು ಹಳ್ಳಿಯ ಗೃಹಸ್ಥರಿಗೆ ಕೊಟ್ಟ ಅಪ್ಪಣೆ ಹೀಗಿದೆ — 'ಆನಂದಪುರದ ಪೇಟೆಯ ಸಂತೆಯಲ್ಲಿ ಪ್ರತಿದಿನವೂ ಕಾಯಿಪಲ್ಯವನ್ನು ನೀವು ಮಾರುತ್ತಿದ್ದುದೂ ತಿಳಿದಿದೆ. ಈಗ ನೀವು ನಿಮ್ಮ ಸ್ವಇಚ್ಛೆಯಿಂದಲೋ ಇತರರ ಪ್ರೇರೇಪಣೆಯಿಂದಲೋ ಆನಂದಪುರದಲ್ಲಿ ಕಾಯಿಪಲ್ಯಗಳನ್ನು ಮಾರುವುದಿಲ್ಲವೆಂದೂ ತಿಳಿದಿದೆ. ಹೀಗೆ ಮಾಡುವುದರಿಂದ ಜನತೆಯಲ್ಲಿ ಶಾಂತತಾ ಭಂಗಕ್ಕೆ ಕಾರಣವಾಗುವುದರಿಂದ, ಈ ನೋಟೀಸು ತಲ್ಪಿದ ಒಂದು ತಿಂಗಳ ತನಕ, ಕೊನೆಯ ಪಕ್ಷ ವಾರಕ್ಕೆರಡು ಸಲ ಕಾಯಿಪಲ್ಯಗಳನ್ನು ಆನಂದಪುರದಲ್ಲಿ ಮಾರಲೇಬೇಕೆಂದೂ, ಹಾಗೆ ಮಾರಲು ಬಂದಾಗ ಅಲ್ಲಿಯ ಸಬ್ ರಿಜಿಸ್ಟ್ರಾರರಿಗೆ ನಿಮ್ಮ ಹಾಜರಿ ಕೊಡಬೇಕೆಂದೂ ೧೯೩೨ನೇ ಓರ್ಡಿನೆನ್ಸು ೪ನೇ ಸೆಕ್ಷನ್ ಪ್ರಕಾರ ನಿಮಗೆ ತಿಳಿಸಲಾಗಿದೆ. ಇಂತಹ ಇನ್ನೊಂದು ಅಪ್ಪಣೆಯನ್ನು ಕೇಳಿದವರಿಲ್ಲ. ಹಳ್ಳಿಯವನೊಬ್ಬನ ಕಾಯಿಪಲ್ಯದೊಳಗೆ ಶಾಂತಿಯನ್ನುಂಟುಮಾಡುವ ವಸ್ತುವಿಟ್ಟಿದೆಯೆ?

ಯುದ್ಧ ಸನ್ನಾಹ ತ್ಯಾಗದ ಕೊನ್ಫರೆನ್ಸು

ಇದರ ಮೊದಲಿನ ಅಧಿವೇಶನವು ಕಳೆದ ಡಿಸೆಂಬರಿನಿಂದ ಮೊನ್ನೆಯ ತನಕ ಕೂತು, ಕೊನೆಗೆ ಒಂದು ನಿರ್ಣಯವು ಹೊರಟಿತು. ಜನಾಂಗ ಪ್ರತಿನಿಧಿಗಳಲ್ಲಿ ಕೆಲವರು ಇದಕ್ಕೆ ಸಹಿಹಾಕಿದರು, ೧೬ ಜನಾಂಗಗಳು ಇದಕ್ಕೂ ಸಹಿಹಾಕಲಿಲ್ಲ. ಇಟಲಿಯೂ ಜರ್ಮನಿಯೂ ಇದಕ್ಕೊಪ್ಪಿಲ್ಲ. ಇಂಗ್ಲಿಷರೂ ಫ್ರೆಂಚರೂ ಸೇರಿ ಒಂದು ಕಂಪೆನಿ ನಡೆಸುವ ಹಾಗೆ, ಲೀಗ್ ಒಫ್ ನೇಶನ್ಸನ್ನು ನಡೆಸಿ ಬರುವ ಕಾರಣ, ನಮಗೇಕೆ ಇಲ್ಲಿ ಊಳಿಗ?" ಎಂದು ಇಟಲಿಯ ಪ್ರತಿನಿಧಿಯು ಕ್ರೋಧದಿಂದ ನುಡಿದು ಹೋಗಿರುವರು. ಇಟಲೀಗೆ ಈ ಜನಾಂಗ ಸಭೆಯೇ ಬೇಡವಾಗಿದೆ ಎನ್ನುತ್ತಾರೆ. ಕೆಲವು ದೇಶಗಳ ಪ್ರತಿನಿಧಿಗಳು ಇಂತಹ ಕೊನ್ಫರೆನ್ಸು ಕರೆದುದೇ ನ್ಯಾಯವಲ್ಲವೆಂಬಂತೆ ಭಾಷಣ ಮಾಡಿದರು. ಒಂದು ಚೂರಿಯನ್ನು ಮಡಚಿಟ್ಟುಕೊಳ್ಳುವುದು ಕೂಡದೆಂಬಷ್ಟು ಕಠಿಣವಾಗಿ ಇವರ ಟೀಕೆಯಾಗಿದೆ. ಆರು ತಿಂಗಳ ಪರಾಮರ್ಶೆ, ಸಂಚಾರ, ಖರ್ಚು, ದಣಿವು ಎಲ್ಲವೂ ಅನಾವಶ್ಯಕವಾಗಿರಲಿಲ್ಲವೆ?

ನೋಟಗಳು.

NOTE....S

ಸಹ ವ್ಯವಸಾಯಿ "ಕಂಠೀರವ"ನು, 'ರಾಷ್ಟ್ರಬಂಧು'ವಿನ "ಕುತರ್ಕಕ್ಕೆ ಸಮಾಧಾನ" ಕೊಟ್ಟಿದ್ದಾನೆ.

* * * *

Provincial Taxನಿಂದಲೂ, ಡಿಸ್ಟ್ರಿಕ್ಟ ಬೋರ್ಡಿನ License feesನಿಂದಲೂ ಮೋಟರ ಸಂಸ್ಥೆಗಳಿಗೆ ಕ್ಷಯರೋಗ ಹಿಡಿದಿದೆಯೆಂದೂ, ಇವತ್ತು ಈ ಕಂಪೆನಿ ಡೈರೆಕ್ಟರ ದಸ್ಕತು ಹಾಕಿ ಹಣ ಪಡೆಯುತ್ತಿದೆಯೆಂದೂ, ಆ ಕಂಪೆನಿ ತನ್ನ ಕಟ್ಟೋಣಗಳನ್ನು ಅಡವು ಹಾಕುತ್ತಿದೆಯೆಂದೂ, ಮಗದೊಂದು ಕಂಪೆನಿ ತನ್ನ ಮನೆಮಾರನ್ನು ಮಾರಲೆಣಿಸುತ್ತಿದೆಯೆಂದೂ ಕಂಠೀರವನ ಅಂಬೋಣ

* * * *

ಈ ತೆರಿಗೆಗಳ ಭಾರದಿಂದ ಮೋಟರು ವ್ಯಾಪಾರಗಳು ಸರ್ವವಿಧದಲ್ಲಿಯೂ ಕಷ್ಟಕ್ಕೀಡೆಯಾಗಿವೆ ಎಂಬುದು ನಿಸ್ಸಂದೇಹ

* * * *

ಸುಪ್ರಸಿದ್ಧ ವ್ಯಕ್ತಿಗಳು ವೈರ್‌ಲೆಸ್ ಮೂಲಕ ಭಾಷಣಮಾಡುವರಾದರೆ, ಒಂದೊಂದು ಭಾಷಣಕ್ಕೆ ೫೦ ಪವನು ಕೊಟ್ಟು, ಇಡೀ ಇಂಗ್ಲಂಡಿನಲ್ಲಿ ಅವರ ಭಾಷಣ ಕೇಳಿಸುವಂತೆ ಮಾಡುವರು. ಚರ್ಚಿಲ್ಲರಂತಹ ಸುಪ್ರಸಿದ್ಧರು ಕಡಿಮೆ. ಆದರೆ, ಇವರು ತಾವೇ ೫೦ ಪವನು ಫೀಸ ತೆರಲು ಸಮ್ಮತಿಸಿದರೂ, ಇವರು ಭಾಷಣಮಾಡುವುದು ಅಗತ್ಯವಿಲ್ಲವೆಂದು ಆ ಕಂಪೆನಿಯವರು ತಿಳಿಸಿದರು. ಭಾಷಣದ ವಿಷಯ — ಹಿಂದೂಸ್ಥಾನದ ಈಗಿನ ಸ್ಥಿತಿ ಮತ್ತು ಧಂಗೆಗಳು.

* * * *

ಜರ್ಮನಿಯ ಪಾರ್ಲಿಮೆಂಟು ಚುನಾವಣೆಯಲ್ಲಿ ಪಂಗಡಗಳ ನಡುವೆ ಕಾಳಗಳಾಗಿ ಸತ್ತವರು ೧೮೦, ಗಾಯಪಟ್ಟವರು ೨೦೦೦. ಇನ್ನೂ ಆ ದೇಶಗಳಲ್ಲಿ ಸಿಡಿಮದ್ದುಗಳ ಹಾರಾಟವು ಮುಗಿದಿಲ್ಲ. ಸ್ವತಂತ್ರ್ಯವು ಇಲ್ಲಿಯ ತನಕ ಇರುವುದುಂಟೆ?

* * * *

ಆಸ್ತ್ರಾಲ್ಯ ಪ್ರಾಂತ್ಯಗಳಲ್ಲಿ ನಿರುದ್ಯೋಗಿಗಳ ರಾಶಿ ಹೆಚ್ಚಾಗಿದೆ ಎಂದು ಅವರನ್ನು ಒಂದು ತಿಂಗಳೊಳಗೆ ಬೇರೆ ಪ್ರಾಂತ್ಯಕ್ಕೆ ಹೋಗುವ ಶರ್ತದ ಮೇಲೆ ಪ್ರತಿ ಪ್ರಾಂತ್ಯದ ಸರಕಾರವು ಊಟಕ್ಕಾಗಿ ಹಣ ಕೊಡುತ್ತದೆ. ಈಗ ಈ ಭಿಕ್ಷುಕ ನಿರುದ್ಯೋಗಿಗಳು [illegible] ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸಂಚರಿಸಿ, [illegible] ಪ್ರಾರಂಭಿಸಿಯದೆ

* * * *

ಇನ್ನು ಯುದ್ಧಗಳೇ ಉಂಟಾಗದಂತೆ ಮಾಡುವ ಒಂದೇ ಒಂದು ಸುಲಭ ಉಪಾಯವಿದೆ ಎಂದು ಪಾರ್ಲಿಮೆಂಟಿನ ಮೆಂಬರರೊಬ್ಬರು ತಿಳಿಸುತ್ತಾರೆ. 'ಯುದ್ಧ ಪ್ರಾರಂಭವಾಗಲಿ ಎಂದು ಯಾವ ರಾಜ್ಯದವರು ಹೇಳುವರೋ ಆ ರಾಜ್ಯದ ಪಾರ್ಲಿಮೆಂಟ್ ಕಟ್ಟಡವನ್ನೇ ಮೊದಲಿಗೆ ವಿಮಾನದಿಂದ ಧ್ವಂಸ ಮಾಡಿದರಾಯಿತು! ಮತ್ತೆ ಯುದ್ಧಗಳಿಲ್ಲವು

* * * *

ಹತ್ತು ಲಕ್ಷ ರೂಪಾಯಿ ಧಾರಾವಳದ ಮೂಲಕ ಬ್ರಿಟಿಷ ಒಪ್ಪಿಗೆಗಳನ್ನ ಇಲ್ಲಿ ತಂದು ಮಾರಬೇಕೆಂಬ ಈಸ್ಟ್ ಎಂಡ್ ವೆಸ್ಟ್ ಕೊರ್ಪೊರೇಶನ್ ಆಫೀಸನ್ನು ಮೊನ್ನೆ [illegible] ಒಂದು ಅಮಲ್ದಾರನಿಗಾಗಿ ಜಪ್ತಿಮಾಡಿದರು. ಆಫೀಸಿನ ಕುರ್ಚಿ ಮೇಜುಗಳನ್ನೆ ಜಪ್ತಿ ಮಾಡಲು, ಮೊಬಲಗು ತರಲಾಯಿತ. ಲಂಕೇಶಾಯರ ಒಪ್ಪಿಗೆ ಕುರ್ಚಿ ಮೇಜುಗಳನ್ನೆ ಮಾರಿಸಬಹುದಿತ್ತೇ? ಮರದ ಸಾಮಾನು ಈ ಕಂಪೆನಿಗೆ ಏಕೆ?

* * * *

ಸರಕಾರವು ನಿಮ್ಮನ್ನೆಲ್ಲ ಕಾಪಾಡಲೊಪ್ಪದಿದ್ದರೆ ಬ್ರಿಟಿಷ ಹೆಂಗಸರು ಇನ್ನು ತಾಯಂದಿರಾಗಲೇ (ಗರ್ಭಿಣಿಯರಾಗಲೇ) ಒಪ್ಪಬಾರದು ಎಂದು ಬರ್ನಾರ್ಡ ಶೋರವರ ಆಶೀರ್ವಾದ

* * * *

ನಮ್ಮ ಮ್ಯುನಿಸಿಪಾಲಿಟಿಯಲ್ಲಿ ತೋಟಿಗಳ ಮುಷ್ಕರದ ಕುರಿತೂ, ಪರಪ್ರಾಂತ್ಯದಿಂದ ೬೦ ತೋಟಿಗಳನ್ನು ತರಿಸಿದ ಕುರಿತೂ ಪ್ರಕಟಿಸಲು ಯಾವ ಪತ್ರಿಕೆಯೂ ಏಕೆ ಹೇಗೆ ಸುಮ್ಮಗಿದೆಯೋ ಯಾರಿಗೆ ಎಲ್ಲಿ ಗೊತ್ತು?

* * * *

ನಮ್ಮ ಮ್ಯುನಿಸಿಪಾಲಿಟಿಯ ಚರಿತ್ರೆಯು ಹೊಸತಾಯಿತು ಮುಂದಕ್ಕೆ ???

* * * *

ಬಂದದ್ದೆಲ್ಲಾ ಬರಲಿ—ಮುಷ್ಕರ ರಾಜನ ಕೃಪೆಯೊಂದಿರಲಿ" ಎಂದು ತೋಟಿಗಳು ಮೈದಾನುಗಳಲ್ಲಿ ಸಭೆಗೂಡಿ ಬೊಬ್ಬಿಡುತ್ತಿದ್ದಾರೆ!

* * * *

ಆದರೆ, ಮುಷ್ಕರವಾದರೂ ಪಟ್ಟಣಕಾತರ ಪಾಯಖಾನೆಗಳನ್ನು ಈ ಕಾಲದಲ್ಲಿಯೂ ಎರಡಾವರ್ತಿ ಎಂಬಂತೆ ಕ್ಲೀನ್ ಮಾಡಲಾಗುತ್ತದೆ. ನಾವೂ ಮ್ಯುನಿಸಿಪಲ್ ಕೌನ್ಸಿಲರಾಗಬಹುದಿತ್ತು!!!

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ

ಇನ್ನೊಂದು ಮಹಾಯುದ್ಧದ ಪೀಠಿಕೆಯೇ?. . . . ೩
ಸ್ಫುಟವಿಚಾರಗಳು ೪
ಸೋಟಗಳು . . . . ,,

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೫
ಒಳದೇಶ ವರ್ತಮಾನ . . . . ,,
ದಕ್ಷಿಣ ಕನ್ನಡ — ಮಂಗಳೂರು, ಉಡುಪಿ, ಕಾರ್ಕಳ, ಪುತ್ತೂರು, ಬಡಗ ಉಳಿಪಾಡಿ . ೬
ವಿವಿಧ ಸಮಾಚಾರಗಳು . . . ೧೧
ಒಂದಲ್ಲ! — ಎರಡಲ್ಲ!! — ಮೂರು!!! . ೨
ರಾಜಾರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ . . ೧೪
ಯುವಕರ ದವಲತ್ತು — ಮುದುಕರ ಮದೋನ್ಮತ್ತು ,,
ಗಾಂಧೀ ಸರಕಾರಗಳ ರಾಜಿಪ್ರಸ್ತಾಪ! . . ೯

ಸ್ವದೇಶಾಭಿಮಾನಿ.

ತಾ. ೧೨ನೇ ಶುಕ್ರವಾರ ಆಗೋಸ್ಟ್ ೧೯೩೨

ಇನ್ನೊಂದು ಮಹಾಯುದ್ಧದ ಪೀಠಿಕೆಯೆ?

ಕಳೆದ ಘೋರ ಮಹಾ ಯುದ್ಧವು ಪ್ರಾರಂಭವಾದ ೧೯೧೪ನೇ ಇಸವಿಯ ಆರಂಭದಲ್ಲಿ ಜರ್ಮನಿಯಲ್ಲಿ ಕೈಗಾರಿಕೆಗಳ ಅಪೂರ್ವ ಬೆಳವಣಿಗೆಯುಂಟಾಗಿ ಜರ್ಮನಿಯು ಲೋಕದ ರಾಷ್ಟ್ರಗಳಿಗೆ ಪ್ರಬಲವಾದ ಪ್ರತಿಸ್ಪರ್ಧಿಯಾಗಿ ಪರಿಣಮಿಸಿದ್ದಿತು. ಕೈಗಾರಿಕೆಗಳ ಮೂಲಸ್ಥಾನವು ಇಂಗ್ಲೆಂಡು ಆಗಿದ್ದು, ಇಂಗ್ಲೆಂಡಿನ ಅನುಕರಣದಲ್ಲಿ ಇಂಗ್ಲೆಂಡಿಗಿಂತಲೂ ಮುಂದಾಗಿ ಜರ್ಮನಿಯು ನಡೆದಿರಲು ಸ್ವಭಾವತಃ ಜರ್ಮನಿಯು ಇಂಗ್ಲೆಂಡಿನ ಮತ್ಸರದ ದೃಷ್ಟಿಗೆ ಗುರಿಯಾಗಿದ್ದಿತು. ಇಂಗ್ಲೆಂಡು ಬೆಲ್ಜಿಯಮಿನಂತಹ ನಿರ್ಬಲ ರಾಷ್ಟ್ರದ ಸಹಾಯಕ್ಕೆಂದೋ ಫ್ರಾನ್ಸಿನಂತಹ ಸ್ನೇಹಿಯ ರಕ್ಷಣೆಗೆಂದೊ, ಎಷ್ಟೋ ನಿಸ್ವಾರ್ಥ ಕಾರಣಗಳನ್ನು ತೋರಿಸಿ ಆ ಮಹಾ ಯುದ್ಧದಲ್ಲಿ ಸೇರಿತಾದರೂ, ಇಂಗ್ಲೆಂಡಿನ ಅಂತರ್ಯದೊಳಗಿನ ಭಾವನೆಯು ಈ ನಿಸ್ವಾರ್ಥತೆಯಾಗಿರಲಿಲ್ಲ, ಅದು ಮತ್ಸರ ಮತ್ತು ಸ್ವಂತ ವ್ಯಾಪಾರವನ್ನು ಉಳಿಸಿಕೊಳ್ಳುವ ಸಾಧನೆಯಾಗಿದ್ದಿತೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಅಂತೂ ಮಹಾಯುದ್ಧದ ಆ ಪ್ರಚಂಡ ರೂಪಕ್ಕೆ ಒಂದೇ ಕಾರಣ— ವ್ಯಾಪಾರ. ಜರ್ಮನಿಗೆ ಯುದ್ಧವನ್ನು ಗೆದ್ದು ಲೋಕದ ವ್ಯಾಪಾರವನ್ನು ಬೆಳೆಸಬೇಕೆಂಬ ಕಾಂಕ್ಷೆಯಿದ್ದಿತು, ಇಂಗ್ಲೆಂಡಿಗೆ ಪ್ರತಿ ಸ್ಪರ್ಧಿಯೊಬ್ಬನನ್ನು ಮುರಿಯಬೇಕೆಂಬ ಕಾಂಕ್ಷೆ ಇದ್ದಿತು.

ಇದರ ಪರಿಣಾಮವು ಇಚ್ಛೆಸಿದಂತಾಗಲಿಲ್ಲ. ಜರ್ಮನಿಯಂತು ಸೋತು ಸರ್ವಸ್ವವನ್ನು ಕಳಕೊಂಡಿತು, ಆದರೆ ಇಂಗ್ಲೆಂಡು ಗೆದ್ದು ಲಾಭ ಹೊಂದಲಿಲ್ಲ, ಒದಲಿಗೆ ಮತ್ತೂ ವ್ಯಾಪಾರವನ್ನು ಕಳಕೊಂಡಿತು. ಜರ್ಮನಿಯು ಈ ಮೊದಲು ಪ್ರತಿಸ್ಪರ್ಧಿಯಾಗಿದ್ದದಾದರೆ, ಈಗ ಅಮೇರಿಕವು ಪ್ರತಿಸ್ಪರ್ಧಿಯಾಯಿತು. ಫ್ರಾನ್ಸಿಗೂ ಯುದ್ಧದಿಂದ ಬಹಳ ನಷ್ಟವಾಯಿತೆನ್ನಲು ಸಂದೇಹವಿಲ್ಲ; ಅದರ ವ್ಯಾಪಾರ ಕೈಗಾರಿಗಳು ಬಹಳ ಅವ್ಯವಸ್ಥೆಯನ್ನು ಹೊಂದಿದುವು.

ಯುದ್ಧವು ಮುಗಿದ ಮೇಲೆ ಗೆದ್ದ ರಾಷ್ಟ್ರಗಳಾಗಲಿ, ಸೋತ ರಾಷ್ಟ್ರಗಳಾಗಲಿ ತಮ್ಮ ವ್ಯಾಪಾರ ಮತ್ತು ಕೈಗಾರಿಕೆಗಳು ಹೀನಸ್ಥಿತಿಗೆ ಬಂದುದನ್ನು ಕಂಡವು. ಈ ಹೀನ ಸ್ಥಿತಿಯನ್ನು ಪ್ರಯತ್ನಪೂರ್ವಕ ಸುಧಾರಿಸಬಹುದಿತ್ತು. ಅದರ ಬದಲಾಗಿ ಅವರು ಸುಲಭ ಉಪಾಯಗಳಿಂದ ಈ ಸುಧಾರಣೆಯನ್ನು ಸಾಧಿಸಿದರು. ಪ್ರತಿ ರಾಷ್ಟ್ರವೂ ತನ್ನ ವ್ಯಾಪಾರ ಮತ್ತು ಕೈಗಾರಿಕೆಯ ರಕ್ಷಣೆಗೆಂದೂ, ವ್ಯಯಾಧಿಕ್ಯ ಬಜೆಟುಗಳ ಆಯವ್ಯಯ ಸಮತೆಯ ಬಗ್ಗೂ ಆಮದುಗಳ ಮೇಲೆ ಕರವನ್ನು ಹೊರಿಸಲಾರಂಭಿಸಿತು. ಒಂದು ರಾಷ್ಟ್ರವು ಈ ರೀತಿ ಕರ ಹೊರಿಸಿ ಆ ರಾಷ್ಟ್ರಕ್ಕೆ ವ್ಯಾಪಾರ ಕಳುಹಿಸುತ್ತಿದ್ದ ಇನ್ನೊಂದು ರಾಷ್ಟ್ರಕ್ಕೆ ನಷ್ಟವಾಗಲಾರಂಭಿಸಿದ ಕೂಡಲೆ, ಆ ಇನ್ನೊಂದು ರಾಷ್ಟ್ರವು ಬದಲಿಗೆ ತನ್ನ ಆಮದುಗಳ ಮೇಲೆ ಕರ ಹೊರಿಸಲಾರಂಭಿಸಿತು. ಈ ರೀತಿಯಲ್ಲಿ ವ್ಯಾಪಾರ ಜಿನಸುಗಳ ಮೇಲೆ ಕರ ಹೊರಿಸುವುದೇ ಇತ್ತೀಚೆಗೆ ಒಬ್ಬರ ಮೇಲೊಬ್ಬರು ಆರ್ಥಿಕ ರೂಪದಲ್ಲಿ ಹೊಡೆದಾಡಿಕೊಳ್ಳುವ ಕ್ರಮವಾಗಿ ಪರಿಣಮಿಸಿರುತ್ತದೆ.

ಈ ನೂತನ ಹೊಡೆದಾಟದಲ್ಲಿ, ಶತಮಾನಗಳಿಂದ Free Trade ಎಂದರೆ ಸರಾಗ ವ್ಯಾಪಾರದಲ್ಲಿ ವಿಶ್ವಾಸದಿಂದಿದ್ದ ಇಂಗ್ಲೆಂಡೂ ಸೇರಿ ಇತ್ತೀಚೆಗೆ ಈ ಕರ ಹೊರಿಸುವ ಕ್ರಮವನ್ನೇ ಸ್ವೀಕರಿಸಿತು. ಕೃಷಿ ಉತ್ಪತ್ತಿಯು ಬಹಳ ಕಡಿಮೆಯದಾಗಿದ್ದು ರಫ್ತಿನಿಂದಲೇ ಜೀವಿಸಬೇಕಾಗಿದ್ದ ಇಂಗ್ಲೆಂಡು ಆಮದಿನ ಮೇಲೆ ಕರ ಹೊರಿಸಿದುದರಿಂದ, ಅವರ ರಫ್ತಿನ ಮೇಲೆ ಇತರ ರಾಷ್ಟ್ರಗಳು ಕರ ಹೊರಿಸುವಂತಾಯಿತು. ಆದ್ದರಿಂದ ಇಂಗ್ಲೆಂಡಿನ ವ್ಯಾಪಾರವು ಈ ಕರಗಳಿಂದ ಅಭಿವೃದ್ಧಿ ಹೊಂದಿಲ್ಲ.

ಇದನ್ನು ನೋಡಿ ಇಂಗ್ಲೆಂಡು ತನ್ನ ಸಾಮ್ರಾಜ್ಯದ ವಿಶಾಲತೆಯ ಲಾಭವನ್ನು ಹೊಂದಲು ಪ್ರಯತ್ನಿಸುತ್ತಿದೆ. ಅಂದರೆ ಸಾಮ್ರಾಜ್ಯಾಂಗಗಳೆಲ್ಲ ಒಂದರೊಡನೊಂದು ಸಹಕರಿಸಿ ಒಬ್ಬರಿಗೊಬ್ಬರು ಸಹಾಯ ಮಾಡಿ, ಸಾಮ್ರಾಜ್ಯದ ಹೊರಗಿನವರನ್ನು ದೂರವಿರಿಸಿ, ತಮ್ಮ ತಮ್ಮ ವ್ಯಾಪಾರಗಳನ್ನೆ ಅಭಿವೃದ್ಧಿಗೊಳಿಸಬೇಕೆಂಬುದೇ ಇದರ ಧ್ಯೇಯ. ಈಗಿನ ವ್ಯಾಪಾರವು ಇಡೀ ಲೋಕಕ್ಕೇನೇ ಸಂಬಂಧಪಟ್ಟಿರುವಾಗ ಹೊರಗಿನವರನ್ನು ದೂರವಿರಿಸುವುದು ಹೇಗೆ ಶಕ್ಯ? ಮತ್ತು ಸಾಮ್ರಾಜ್ಯದ ಬೇರೆ ಬೇರೆ ಅಂಗಗಳಿಗೆ ಹೇಗೆ ಹಿತಕಾರಿಯಾಗಬಹುದು? ಎಂಬುದು ಇನ್ನೂ ಚರ್ಚಿಸಬೇಕಷ್ಟೆ! ಆದರೆ ಇದರ ಮುಖ್ಯ ತಾತ್ಪರ್ಯವು ಲೋಕ ಬಹಿಷ್ಕಾರವೆಂದಾಗುತ್ತದೆ. ಚೀನಾದ ಜಪಾನ್ ಬಹಿಷ್ಕಾರವೇ ಚೀನಾ-ಜಪಾನ್ ಯುದ್ಧಕ್ಕೆ ಕಾರಣವಾಗಿರುವಾಗ, ಹಿಂದೂಸ್ಥಾನದ ಬ್ರಿಟಿಷ್ ಬಹಿಷ್ಕಾರವು ಆರ್ಡಿನೆನ್ಸುಗಳಿಗೆ ಕಾರಣವಾಗುವಾಗ, ಬ್ರಿಟಿಷ ಸಾಮ್ರಾಜ್ಯದ — Ottawa Conferenceನ—ಲೋಕ ಬಹಿಷ್ಕಾರವು ಯಾವ ಪರಿಣಾಮವನ್ನುಂಟುಮಾಡಬಹುದೆಂದು ಯೋಚಿಸಿದರೆ ಸ್ವಲ್ಪ ನಡುಕು ಉಂಟಾಗುತ್ತದೆ.

ಸ್ಥಳೀಕ ಬೋರ್ಡುಗಳ ಚುನಾವಣೆ

ಮೊಳಹಳ್ಳಿ ಶಿವರಾಯರು

ಶ್ರೀ ಮೊಳಹಳ್ಳಿ ಶಿವರಾಯರು ಕೊಕ್ಕಡ ಸರ್ಕಲಿನಲ್ಲಿ ಪುತ್ತೂರು ತಾಲೂಕು ಬೋರ್ಡಿನ ಉಮೇದ್ವಾರರಾಗಿಯೂ ಕೊಕ್ಕಡ ಮತ್ತು ಧರ್ಮಸ್ಥಳ ಸರ್ಕಲಿನ ಜಿಲ್ಲೆ ಬೋರ್ಡಿನ ಉಮೇದ್ವಾರರಾಗಿಯೂ ನಿಂತಿರುವರೆಂದು ನಾವು ತಿಳಿಯುತ್ತೇವೆ. ಇವರ ಉಮೇದ್ವಾರಿಕೆಯ ಬಗ್ಗೆ ನಾವು ಮೇಲಿನ ಎರಡೂ ಸರ್ಕಲುಗಳನ್ನು ಅಭಿನಂದಿಸುತ್ತೇವೆ. ಶ್ರೀಯುತರ ಯೋಗ್ಯತೆಯ ಬಗ್ಗೆ ನಾವು ಪ್ರತ್ಯೇಕ ಹೇಳಬೇಕಾಗಿಲ್ಲ. ಇವರು ಹಲವು ವರ್ಷದಿಂದ ಪುತ್ತೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿರುವರು. ಈ ಸ್ಥಾನದಲ್ಲಿ ಇವರು ಪಟ್ಟಿರುವ ಮತ್ತು ಪಡುತ್ತಿರುವ ಪರಿಶ್ರಮವನ್ನು ನಾವು ಇಂತಹ ಸ್ಥಾನದಲ್ಲಿದ್ದ ಇತರ ಯಾರಲ್ಲಿಯೂ ಕಂಡಿರುವುದಿಲ್ಲ. ಬೋರ್ಡುಗಳ ಹೆಚ್ಚಿನ ಚುನಾವಣೆಯು ಯೋಗ್ಯತೆಯನ್ನು ಕಂಡು ಆಗುವುದಕ್ಕಿಂತಲೂ ದಾಕ್ಷಿಣ್ಯದ ಬಲಾತ್ಕಾರದಿಂದ ಆಗುವುದು ಹೆಚ್ಚು. ಅಂತಹ ಸ್ಥಿತಿಯಲ್ಲಿ ಶ್ರೀಯುತರಂತಹರು ಕೆಲವರಾದರೂ ಚುನಾಯಿಸಲ್ಪಡದಿದ್ದರೆ ಬೋರ್ಡುಗಳಿರುವುದಕ್ಕಿಂತಲೂ ಇಲ್ಲದಿರುವುದೇ ಮೇಲು. ಮೇಲಿನ ಸರ್ಕಲಿನ ಮತದಾರರು ತಮಗೆ ಸಿಕ್ಕಿದ ಈ ಸುಸಂಧಿಯಲ್ಲಿ ಶ್ರೀಯುತರನ್ನು ಚುನಾಯಿಸಿ ಕೃತಕೃತ್ಯರಾಗುವರಾಗಿ ನೆನಸುವೆವು.

ವಿದೇಶ ವರ್ತಮಾನ.

— ಬ್ರಿಟಿಷ್ ಸರಕಾರಕ್ಕೆ ಒಪ್ಪಿಸಬೇಕಾದ ಭೂಕಂದಾಯವನ್ನು ಆಯರ್ಲೇಂಡಿನ ಡಿವೆಲೆರಾರವರು ಕೊಡುವುದಿಲ್ಲವೆಂದರು. ರೈತರು ಕಂದಾಯವನ್ನು ತನ್ನ ಸರಕಾರಕ್ಕೆ ಕೊಡಬೇಕೆಂದೂ ಅಪ್ಪಣೆಮಾಡಿರುವರು.

— ಡಿವೆಲೆರಾರವರ ನಿರಂಕುಶಪ್ರಭುತ್ವದ ಪರಿಣಾಮವಾಗಿ ಆಯರ್ಲೇಂಡಿನಲ್ಲಿ ಅಶಾಂತಿಯ ಚಿಹ್ನೆಯು ತೋರುತ್ತಿದೆ.

— ಸಾಮ್ರಾಜ್ಯದವರ ಪ್ರಸ್ತುತ ಧೋರಣವು ಪ್ರಸಕ್ತವಲ್ಲವೆಂದು ಲಂಡನಿನಲ್ಲಿ ಎರಿಕ್ ಹೇಲೋನ್ ಎಂಬ ರಾಜನೀತಿವಿಶಾರದರು ಹೇಳಿದರು.

ಇದೇ ವಾರದೊಳಗೆ ಬ್ರಿಟಿಷ್ ಸರಕಾರವು ಮತವಾರ ಪ್ರಶ್ನೆಯನ್ನು ಇತ್ಯರ್ಥಿಸುವುದಕ್ಕಾಗಿ ಆಯಾಯ ಮತಗಳಿಗೆ ಎವೊರ್ಡುಗಳನ್ನು ಕೊಡಲಿರುವುದು.

— ತನ್ನಭಿಮತಗಳನ್ನು ಮಿಗಿಲೆನಿಸಿ ಬೇರೆ ಯಾವ ಯೋಗ್ಯಾಭಿಪ್ರಾಯಗಳನ್ನು ರಾಜ್ಯಾಂಗರಚನಾ ಕ್ರಮದ ಬಗ್ಗೆ ಸೂಚಿಸಿದರೆ ಅದನ್ನು ಸ್ವೀಕರಿಸಲಾಗುವುದೆಂದು ಸರ್ ಹೋರರೆಂದರು.

“ಹೋಲಿವುಡ್” ಎಂಬ ಚಲಚಿತ್ರ ನಟಿಯಾದ ಮಿಸ್ ಗ್ರೆಟಾ ಗಾರ್ಬೊ ಎಂಬವಳು ಸ್ವೀಡನಿಗೆ ತಲಪಿದಳು. ಅವಳನ್ನು ಸ್ವೀಕರಿಸಲು ಸಾವಿರಗಟ್ಟಲೆ ಜನರೂ, ಛಾಯಾಚಿತ್ರಗಾರರೂ ಮುತ್ತು ಕಟ್ಟಿದರು; ಇವಳು ಮಹಾ ನಟಿಯಂತೆ.

ಬ್ರಿಟನಿನಲ್ಲಿ ಎಮರ್ಜೆನ್ಸಿ ಕಸ್ಟಮ್ಸ್ ಕಂದಾಯವನ್ನು ಹೊರಿಸಿದುದರಿಂದ ಈಗ ಅಲ್ಲಿಯ ವ್ಯಾಪಾರವು ಸುವ್ಯವಸ್ಥಿತ ಸ್ಥಿತಿಗೆ ಬಂದಿರುತ್ತದೆ.

— ಒಟ್ಟಾವಾದಲ್ಲಿ ಆಯರ್ಲೇಂಡಿನ ಪ್ರತಿನಿಧಿಗಳು ಸಭೆಸೇರಿದ್ದರು. ಅವರಿಗೆ ಡಿವೆಲೆರಾರವರು ಅವಸರದ ತಂತಿಬಿಟ್ಟು, ಅವರು ಕೂಡಲೇ ಸ್ವನಾಡಿಗೆ ಹಿಂದಿರುಗಬೇಕೆಂದು ಅಪ್ಪಣೆಕೊಟ್ಟರು.

ಒಳದೇಶ ವರ್ತಮಾನ

— ಗಾಂಧಿ ಮತ್ತು ಸರಕಾರಗಳೊಳಗೆ ರಾಜಿ ಪ್ರಸ್ತಾಪದ ಗೂಢ ಪತ್ರ ವ್ಯವಹಾರಗಳು ನಡೆಯುತ್ತಿವೆಯೆಂದೂ, ತಾನು ಸದಾ ಶಾಂತಿಸ್ಥಾಪನೆಗೆ ಸಿದ್ಧನಿದ್ದು ಜನರೇಳಿಗೆಯನ್ನು ನಿಶ್ಚಂದಂತೆ ಬಯಸುತ್ತಿರುವೆನೆಂದೂ ಮಹಾತ್ಮರು ಎರವಾಡದಿಂದುತ್ತರವಿತ್ತಿರುವರಾಗಿಯೂ ತಿಳಿದುಬಂದಿದೆ.

ಪಾಟ್ನಾದಲ್ಲಿ ಒಂದು ಸರಕಿನ ಜಹಜು ಗಂಗಾನದಿಯ ಪ್ರಚಂಡ ಪ್ರವಾಹಕ್ಕೆ ಸಿಲುಕಿ ಮುಳುಗಿತು. ಅದರಲ್ಲಿದ್ದ ಹದಿನೈದು ಮಂದಿಗಳು ನೀರುಪಾಲಾದರು. ನಾಲ್ಕು ಮಂದಿಗಳೇನೋ ಅರೆಜೀವವಾಗಿ ರಕ್ಷಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಶ್ರೀನಗರದಲ್ಲಿ ಒಬ್ಬ ಪೋಲೀಸ್ ಅಧಿಕಾರಿಯು ಒಕ್ಕೋಟಿಗೆ ಮುದೆಯನ್ನು ಹೊಡೆಯುವಾಗ ಅದರೊಳಗಿದ್ದ ಅಗ್ನಿಕಾರಕವಸ್ತುವು ಒಡೆದು ಅವನ ಕೈಗೆ ಜಖಂ ಆಯಿತು.

— ಲಾಹೋರಿನಲ್ಲಿ ಡಾ। ಗುರುಮುಖಸಿಂಗರೆಂಬವರು ಮಧ್ಯದ ಮತ್ತಿನಿಂದ ಶರವೇಗದಿಂದ ತನ್ನ ಕಾರನ್ನು ಭರದಿಂದೋಡಿಸುತ್ತಾ ಒಂದು ಕಡೆಯಲ್ಲಿ ಸ್ವಸ್ಥಚಿತ್ತರಾಗಿ ಮಲಗಿದ್ದ ೬ ಮಂದಿ ಕೂಲಿಯಾಳುಗಳ ಮೇಲಿಂದ ಕೊಂಡೊಯ್ದರು. ೬ ತಿಂಗಳ ಕಠಿಣ ಸಜೆಯೂ ೧೦೦ ರೂಪಾಯಿ ಜುಲ್ಮಾನೆಯೂ ಸಿಕ್ಕಿ ಅವರು ಕೆಳಗಿಳಿಯುವ ಜಖಂಗೊಂಡವರಲ್ಲಿ ಒಬ್ಬನು ಮೃತನಾದನು.

Latest News.

ಈಗ ಬಂದ ಬಿಸಿ ಬಿಸಿ ವಾರ್ತೆ.

— ಪೂನೆಯ ಸರ್ವಂಟ್ಸ್ ಒಫ್ ಇಂಡಿಯಾ ಸೊಸೈಟಿಯವರು ಅನೇಕ ಸಾರೀಜಾರ ಸಹಿಸಮೇತ ಒಂದು ಪ್ರಕಟನೆಯನ್ನು ಮಾಡುತ್ತಾ “ಸರ್ ಹೋರರ ಧೋರಣೆಗೊಪ್ಪಿ ಯಾರೂ ಅವರೊಡನೆ ಮುಂದಕ್ಕೆ ಸಹಕರಿಸಬಾರದು” ಎಂದಿದ್ದಾರೆ.

— ಹಿಂದೂದೇಶದ ಸ್ವಾತಂತ್ರ್ಯಕಾಂಕ್ಷೆಯು ಸಹಜ ಮತ್ತು ನ್ಯಾಯವಾದುದು. ಮಹಾತ್ಮಾ ಗಾಂಧಿಯವರೊಡನೆ ರಾಜಿಯಾಗದಿದ್ದರೆ ಹಿಂದೂದೇಶವು ಇಂಗ್ಲಾಂಡಿನ ಕೈಯಿಂದ ತಪ್ಪುವುದು. ಎಂದು ಲಂಡನಿನಲ್ಲಿ ಡಾ. ಫೋರೆಸ್ಟರ್ ಪೀಟರ್ಸರವರು ಹೇಳಿದರು.

೨೭ನೆಯ ತಾರೀಕು ಮತವಾರ ಸಮಸ್ಯೆಯ ಎವಾರ್ಡನ್ನು ಸರಕಾರವು ಪ್ರಕಟಿಸುವುದು.

ಬಂಗಾಳದಲ್ಲಿ ಜನವರಿಯಿಂದ ಈ ತನಕ ರಾಜಕೀಯ ಸಂಬಂಧವಾಗಿ ೯,೬೧೭ ಪುರುಷರನ್ನೂ ೬೩೧ ಮಂದಿ ಸ್ತ್ರೀಯರನ್ನೂ ಶಿಕ್ಷಿಸಲಾಯಿತೆಂದು ತಿಳಿದುಬಂದಿದೆ.

ಸೈನ್ಯದಿಂದ ಹೊರತಳ್ಳಲ್ಪಟ್ಟು ಈಗ ಇಂಗ್ಲೆಂಡಿಗೆ ತೆರಳಲಿರುವ ಕೆಲವು ಯುರೋಪಿಯನರಿಗೆ ಮುಂಬಾಯಿಯಲ್ಲಿ ಟ್ರಾಮುಗಳನ್ನು ಚಲಿಸುವ ವಿದ್ಯೆಯನ್ನು ಕಲಿಸುತ್ತಿರುವರಾಗಿಯೂ, ಇದರಿಂದಾಗಿ ಕೆಲವು ಹಿಂದೀಯ ಕೆಲಸಗಾರರಿಗೆ ಅಶ್ಚರ್ಯವಾಗಿದೆಂದಾಗಿಯೂ ತಿಳಿದುಬಂದಿದೆ.

ಲಾಹೋರಿನ ಮುನಿಸಿಪಾಲಿಟಿಯ ಮಂದಿರದಲ್ಲಿ ದಿವಂಗತ ಪಂಡಿತ ಮೋತಿಲಾಲರ ಭಾವಚಿತ್ರವನ್ನು ಕಮ್ಮಿಟಿಯ ವೆಚ್ಚದಿಂದಿರಿಸಲು ಸರಕಾರವು ಅಸಮ್ಮತಿಸಿದ್ದುದೆ ಸಾರ್ವಜನಿಕ ನಿಧಿಯಿಂದಾಗಿ ಅದನ್ನು ಅಲ್ಲಿರಿಸಬೇಕಾಗಿ ಸಾಧನೆಯಾಗುತ್ತಿದೆ.

— ನೆಹೊಕೋಲಿಯಲ್ಲಿ ಕಳೆದ ವಾರಾಂತ್ಯದಲ್ಲಿ ಒಂದು ದೋಣಿಯು ಕವಚಿಬಿತ್ತಷ್ಟೆ! ಆ ಅನಾಹುತದಿಂದಾಗಿ ಅದರಲ್ಲಿದ್ದ ೩೪೬ ಜನರಲ್ಲಿ ೨೩೬ ಜನರು ಮುಳುಗಿ ನೀರು ಪಾಲಾದರೆಂಬ ವಿವರವು ಬಂದಿದೆ. ಕೆಲವು ಶವಗಳು ಆಗಾಗ್ಗೆ ನೀರಮೇಲೇಳುತ್ತಿವೆ.

— ಗಾಂಧಿಜೀಯವರು ಸೆರೆಯಿಂದ ಹೊರಗೆ ಕಳುಹಿಸುತ್ತಿದ್ದ ಪ್ರತ್ಯವ್ಯವಹಾರಗಳು ಇಷ್ಟರ ತನಕ ಸರಕಾರದಧಿಪಗಳಿಂದ ತೆರೆಯಲ್ಪಟ್ಟು ಪರಿಶೋಧಿಸಲ್ಪಟ್ಟು ಕಳುಹಿಸಲ್ಪಡುತ್ತಿದ್ದುವು. ಕೆಲವು ದಿನಗಳಿಂದ ಈ ಅಭ್ಯಾಸವನ್ನು ನಿಲ್ಲಿಸಲಾಗಿ ಅವರ ಕಾಗದಪತ್ರಗಳು ಸರ್ವಿಚ್ಛೆಯಾಗಿ ಹೊರಗಿನವರಿಗೆ ತಲಪುತ್ತವೆ.

— ಅಹ್ಮದಾಬಾದಿನಲ್ಲಿ ಚಾಮು ಎಂಬ ಸ್ತ್ರೀಯೊಬ್ಬಳು ತನ್ನಿಬ್ಬರು ಹೆಣ್ಮಕ್ಕಳಿಗೆ ಬಾಲ್ಯವಿವಾಹ ಮಸೂದೆಯ ವಿರುದ್ಧವಾಗಿ ವಿವಾಹ ಮಾಡಿ ಅಳಿಯಂದಿರೂ ಅವರ ತಂದೆಯವರೂ ತಾನೂ ನೂರು ನೂರು ರೂಪಾಯಿಯ ಶಿಕ್ಷೆಗೊಳಗಾಗಬೇಕಾಯಿತು

— ಪಂಡಿತ ಜವಾಹರಲಾಲ ನೆಹರುರವರ ಪತ್ನಿ ಶ್ರೀಮತಿ ಕಮಲಾ ನೆಹರುರವರು ವಿಷಮ ಕಾಯಿಲೆಯಲ್ಲಿದ್ದರಾದರೂ ಈಗ ಗುಣಹೊಂದುತ್ತಾರೆ

— ಶೇಕ್‌ಪುರದಲ್ಲಿ ಒಬ್ಬ ಧನಿಕ ಮಾರ್ವಾಡಿಯು ಹೊರಗೆ ಹೋಗಿದ್ದ ಸಮಯದಲ್ಲಿ ರಾತ್ರಿ ಕೆಲವು ದರೋಡೆಗಾರರು ಬಂದು ಅವನ ಮನೆಹೊಕ್ಕು, ಅವನ ಹೆಂಡತಿಯನ್ನೂ ಮಗಳನ್ನೂ ಕೊಂದು ಇದ್ದುದನ್ನು ದೋಚಿಕೊಂಡು ಪಲಾಯನ ಮಾಡಿದರು

— ಬಂಗಾಳದಲ್ಲಿ ಹುಸೇನ್ ಎಂಬ ತರುಣನು ಹೊಸ್ನಬೀಬಿ ಎಂಬ ತರುಣಿಯನ್ನು ಕದ್ದೊಯ್ದು ಸಿಕ್ಕಿ ಕೋರ್ಟಿಗೆಳೆಯಲ್ಪಟ್ಟನು ನ್ಯಾಯವಿಚಾರಣೆಯಲ್ಲಿ ಹುಡುಗಿಯು 'ನನಗೆ ಅವನನ್ನೇ ವಿವಾಹವಾಗಬೇಕೆಂದಿದೆ' ಎಂದು ಹೇಳಿದೊಡನೆ, ಎಲ್ಲರ ಆಶ್ಚರ್ಯದೊಡನೆ ಅವರಿಬ್ಬರೂ ಬಿಡಲ್ಪಟ್ಟರು ಅವರಿಬ್ಬರೂ ಕೋರ್ಟಿನಿಂದ ಹೊರ ಹೋಗುವಾಗ ಒಬ್ಬರಿನ್ನೊಬ್ಬರ ಹೆಗಲ ಮೇಲೆ ಕೈಹಾಕಿ ನಗುತ್ತಾ ಹೋದರು

— ಕಾನ್‌ಪುರದಲ್ಲಿ ೩೦ ವರ್ಷ ಪ್ರಾಯದ ಮಾಜೀ ಪೋಲೀಸನಾದ ಅಮ್ಜಾದ್ ಅಲಿ ಎಂಬವನು ೮ ವರ್ಷದ ಬಾಲಕನಿಗೆ ಸರಿಯಾಗಿ ಹೊಡೆದು ಮೂರ್ಛೆಬೀಳಿಸಿದನು ಅದಕ್ಕಾಗಿ ಪೋಲೀಸನಿಗೆ ನಾಲ್ಕು ವರುಷಗಳ ಕಠಿಣ ಶಿಕ್ಷೆ ಸಿಕ್ಕಿದೆ

— "ಯುದ್ಧದ ಮಾತನ್ನೇ, ಹುಟ್ಟನ್ನೇ ಅಡಗಿಸಿ ಬಿಡಬೇಕು" ಹಾಗಾದರೆ ಎಲ್ಲಾ ಪಾರ್ಲಿಮೆಂಟು ಮಂದಿರಗಳಿಗೂ ಸಮರ ಮಂದಿರಗಳಿಗೂ ಬಾಂಬು ಹಾಕಬೇಕು" ಎಂದು ಕೆಪ್ಟನ್ ಎ ಜಿ ಗ್ರೇಂಟ್ ಎಂಬವನ ಅಭಿಮತ!

— ಕಲ್ಕತ್ತದ ಜನರಲ್ ಆಸ್ಪತ್ರೆಯಲ್ಲಿ ಸರಕಾರದ ರಿಟ್ರೆಂಚ್‌ಮೆಂಟ್ ಸೂತ್ರಾನುಸಾರವಾಗಿ ೨೯ ಮಂದಿ ಯುರೋಪಿಯನ್ ಕ್ಷಯರೋಗಿಗಳನ್ನು ಆಸ್ಪತ್ರೆಯ ಹೊರಗೆ ಹಾಕಲಾಯಿತು ಯುರೋಪಿಯನರೂ ಕ್ರೈಸ್ತರೂ ಅವರೆಲ್ಲರನ್ನು ದೂರೀಕರಿಸಿದರೂ ಒಬ್ಬ ಬಂಗಾಲೀ ಮಹನೀಯರು ಅವರೆಲ್ಲರಿಗೆ ಆಶ್ರಯವನ್ನಿತ್ತರೆಂದು ತಿಳಿದು ಬಂದಿದೆ

— ಮಿಡ್ನಾಪುರದಲ್ಲಿ ಮುಖ್ಯ ಮಾರ್ಗಗಳಲ್ಲಿ ಪೋಲೀಸ್ ಪಹರೆ ಇದೆಯೆಂದು ಎಡ್ವಾನ್ಸ್ ಪತ್ರಿಕೆಯನ್ನುತ್ತದೆ

— ಡಾ ಅನ್ಸಾರಿಯವರು ಆರೋಗ್ಯಲಾಭಕ್ಕಾಗಿ ಯೂರೋಪಿಗೆ ಹೋಗುವ ಮೊದಲು ಎರವಾಡದಲ್ಲಿನ ಗಾಂಧಿಜೀಯವರ ದರ್ಶನ ಲಾಭಮಾಡಲಿಕ್ಕಾಗಿ ಸರಕಾರದೊಡನೆ ಅಪ್ಪಣೆ ಕೇಳಲು ಆ ಅರಿಕೆಯು ತಿರಸ್ಕೃತವಾಯಿತು

— ಒರ್ಡಿನೆನ್ಸು ನೀತಿಯ ಬಗ್ಗೆ ವ್ಯಸನಸೂಚನೆಯನ್ನು ಮಾಡಲು ಡಿಲ್ಲಿಯ ರಾಷ್ಟ್ರೀಯವಾದಿ ಮುಸ್ಲಿಮರು ಒಂದು ಸಭೆಯನ್ನು ಜರಗಿಸಿದರು ಕೈದುಗಳಾಗಲಿಲ್ಲ

ಸೂರತ್ತಿನಲ್ಲಿ ೫ನೇ ಸರ್ವಾಧಿಕಾರಿಯಾದ ಸುರೇಶಚಂದ್ರ ದಾಸನೆಂಬವನು ಗಾಂಧಿ ದಿನಾಚರಣೆಯ ಸಂಬಂಧವಾಗಿ ತಾ ೪ನೇ ದಿನ ಸಭೆಯೊಂದನ್ನು ಜರಗಿಸಿದುದಕ್ಕಾಗಿ ಕೈದುಮಾಡಲ್ಪಟ್ಟನು

— ಜಬ್ಬಲ್‌ಪುರದಲ್ಲಿ ಬಹು ಐಶ್ವರ್ಯವಂತ ಕುಟುಂಬಕ್ಕೆ ಸೇರಿದ ಸೇಠ್ ಗೋವಿಂದ ದಾಸ್ (ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರರು) ಎಂಬವರು ಸೆರೆಮನೆಯಿಂದ ಹಿಂದಿರುಗುತ್ತಾ ತನ್ನ ತಂದೆಯು ತನ್ನಿಚ್ಛೆಗೆ ವಿರುದ್ಧವಾಗಿ ಕಂದಾಯ ಪಾವತಿ ಮಾಡಿದುದಕ್ಕಾಗಿ, ತನ್ನ ಪಾಲಿಗೆ ಬಂದ ಒಂದು ಕೋಟಿ ರೂಪಾಯಿಯನ್ನೂ ತಂದೆಯ ಆಸ್ತಿಯ ಪಾಲನ್ನೂ ಸ್ವೀಕರಿಸಲಾರೆನೆಂದು ಹೇಳಿ ಮನೆಗೂ ಕೂಡಾ ಹೋಗದೆ ಒಂದು ದೇವಸ್ಥಾನದಲ್ಲಿ ಇದ್ದು ದಿನಹರಣಮಾಡುತ್ತಿರುವರು

ದಕ್ಷಿಣ ಕನ್ನಡ

ಸ್ವೀಕಾರ

ಮೈಸೂರಿನ ಸುಪ್ರಸಿದ್ಧ ಕಾದಂಬರೀ ಸಂಗ್ರಹವನ್ನೊದಗೂಡಿ, ಶ್ರೀ ಎಮ್ ಎನ್ ಕಾಮತ್, ಇವರು ಅನುವಾದಿಸಿದ 'ಕ್ಷತ್ರತೇಜ'ವೆಂಬ ಉತ್ತಮ ಕಥೆ ಪುಸ್ತಕವು ನಮ್ಮ ಹಸ್ತಗತವಾಗಿದೆ ಬೆಲೆ ೮ ಆಣೆ

ಮುಲ್ಕಿಯ ಶ್ರೀ ದುರ್ಗಾದೇವಿ ಫ್ರೀ ರಾತ್ರಿ ಶಾಲೆಯ ಐದನೇ ವರ್ಷದ ವರದಿಯು ಹಸ್ತಗತವಾಗಿದೆ ಸಂಸ್ಥೆಯ ಮೇಲ್ವಿಚಾರಕರ ಸಾಹಸೋದ್ಯಮವು ಪ್ರಶಂಸನೀಯವಿದೆ ಆರ್ಥಿಕ ಮುಗ್ಗಟ್ಟಿನೊಳಗೆ ಸಿಲುಕಿದ ಬಹುಪ್ರಯೋಜನಕಾರಿಯಾದ ಈ ಶಾಲೆಯನ್ನು ಕಾಪಾಡಿಕೊಳ್ಳುವುದು ಮುಲ್ಕಿಯ ವಿದ್ಯಾಭಿಮಾನಿಗಳ ಮತ್ತು ಇನ್ನಿತರರ ಧರ್ಮವಿರುತ್ತದೆ. ಇದು ಮುಂದಕ್ಕೂ ಶ್ರೇಯಸ್ಸನ್ನು ಹೊಂದಲೆಂದು ನಾವು ಹಾರೈಸುವೆವು.

ಬೆಂಗಳೂರಿನಲ್ಲಿ ಶ್ರೀ ತಿರುಮಲೆ ಗೋಪಾಲಾಚಾರ್ಯ ಶರ್ಮರ ಸಂಪಾದಕತ್ವದಲ್ಲಿ ಹೊರಟು ಒಂದು ವರ್ಷವನ್ನು ಮುಗಿಸಿದ "ವಿನೋದ ಪ್ರಪಂಚ"ವೆಂಬ ಕನ್ನಡ ಮಾಸಿಕದ ಸಂಚಿಕೆಗಳು ನಮಗೆ ಬರುತ್ತಿವೆ ಚಂದಾ ಹಣ ಅಂಚೆ ವೆಚ್ಚ ಸೇರಿ ೧-೪-೦, ಇದರ ಹೆಸರು ಮಾತ್ರದಿಂದಲೇ ಇದರ ವರ್ಣನೆಯಾಗುತ್ತದೆ ಬಂಧುವನ್ನು ಕನ್ನಡಿಗರು ಪ್ರೋತ್ಸಾಹಿಸಲಿ

ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿಯವರ ಸಂಪಾದಕತ್ವದಲ್ಲಿ ಹೊರಡುವ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ೬ನೇ ಪುಸ್ತವಾಗಿ "ಆರ್ಯಸಮಾಜವೆಂದರೇನು?" ಎಂಬ ಚಿಕ್ಕ ವಹಿಯು ಪ್ರಕಟವಾಗಿದೆ ಕ್ರಯ ೬ ಪೈ ಅಲ್ಲಹಾಬಾದಿನ ಶ್ರೀ ಗಂಗಾಪ್ರಸಾದ ಉಪಾಧ್ಯಾಯ ಎಂ ಎ ಇವರಿಂದ ಹಿಂದೀಯಲ್ಲಿ ಬರೆಯಲ್ಪಟ್ಟ ಲೇಖನದ ಅನುವಾದವಿದು ಶುದ್ಧ ಆರ್ಯಸಮಾಜವೆಂದರೆ ಪರಮತ ಸಹಿಷ್ಣುತೆಯ ಮತವೆಂದು ಇದರ ವಾಚನದಿಂದ ತಿಳಿದುಬರದಿರದು

ಮಂಗಳೂರು: — ಹಿಂದೀ ವಿದ್ಯಾರ್ಥಿನಿ ಮಂಡಲದ ಅಧಿವೇಶನವು ಕಳೆದ ತಾ. ೩೦ರಲ್ಲಿ ಮಹಿಳಾ ಸಭೆಯಲ್ಲಿ ಜರ್ಮನಿ ಮಹಿಳೆಯಾದ ಶ್ರೀಮತಿ ರೋಲಿಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಮತಿ ನಳಿನಿದೇವಿಯ ಸುಮಧುರ ಹಿಂದೀ ಗೀತೆಗಳೂ, ಶ್ರೀಮತಿ ಮಂಜೇಶ್ವರ ಪಾರ್ವತಿ ದೇವಿಯ ಆಧುನಿಕ ಬಾಲಿಕೆಯ ವಿಷಯವಾಗಿ ಬರೆದ ಪ್ರಬಂಧವೂ, ಹಿಂದೀ ವಿದ್ಯಾರ್ಥಿನಿಯರ ಹಿಂದೀ ಸಂಭಾಷಣೆ ಪಠನಗಳೂ ಸಭೆಯನ್ನು ಆನಂದಗೊಳಿಸಿದುವು ಅಧ್ಯಕ್ಷರ ಪರವಾಗಿ ಶ್ರೀಮತಿ ಶಾಂಭವಿ ಪುಂಜರು ನಾಲ್ಕು ಮಾತುಗಳನ್ನಾಡಿದರು ಕೊನೆಗೆ ಹಿಂದೀ ಪ್ರಚಾರಕರಾದ ಶ್ರೀ ರಾಘವಾಚಾರ್ಯರು ಮಂಡಲದ ಮುಂದಿನ ಕಾರ್ಯಕ್ರಮದ ವಿಷಯವಾಗಿ ಭಾಷಣಮಾಡಿದರು. ಕವಿ ರವೀಂದ್ರರ "ಜನಗಣಮನ" ಗೀತದಿಂದ ಸಭಾವಿಸರ್ಜನೆಯಾಯಿತು

ಹಿಂದೀ ವಿದ್ಯಾರ್ಥಿನಿ ಮಂಡಲಿಯ ಮೂರನೇ ಸಭೆಯು ಕಳೆದ ಶನಿವಾರ ೩ನೇ ತಾರೀಕಿಗೆ ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಬಿ ಮಾಧವ ಬಾಳಿಗ, ಬಿ ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು ಕಳೆದ ಸಭೆಯ ವರದಿಯನ್ನು ಓದಿದ ಬಳಿಕ ಆ ದಿನದ ವಿಷಯವಾದ "ನಗರ ವಾಸವು ಗ್ರಾಮವಾಸಕ್ಕಿಂತ ಶ್ರೇಷ್ಠವು" ಎಂಬುದರ ಕುರಿತಾಗಿ ಸದಸ್ಯರು ಭಾಷಣಗಳನ್ನು ಕೊಟ್ಟರು ಶ್ರೀಗಳಾದ ಚಂದ್ರಶೇಖರ ರಾಮಪ್ಪ ಕಮಲಾಕ್ಷ ಶೆಣೈ ಶಂಕರಭಟ್ಟ ರಾಘವಾಚಾರ್ ದೇವಪ್ಪ ಆಳ್ವ ಮೊದಲಾದವರು ಪಕ್ಷವಿಪಕ್ಷಗಳಲ್ಲಿ ಮಾತನಾಡಿದ ಬಳಿಕ ಅಧ್ಯಕ್ಷರು ತಮ್ಮ ಸರಳ ಹಾಗೂ ಗಂಭೀರ ಶೈಲಿಯಲ್ಲಿ ನಗರ ಗ್ರಾಮವಾಸಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಸೂಚಿಸಿ, ಹಿಂದೂದೇಶದ ಗ್ರಾಮಗಳ ಉದ್ಧಾರದ ಕುರಿತಾಗಿ ಒಂದೆರಡು ಮಾತುಗಳನ್ನಾಡಿದರು ಧನ್ಯವಾದ ಸಮರ್ಪಣೆಯ ಬಳಿಕ ಸಭೆಯು ಮುಕ್ತಾಯವಾಯಿತು

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನ ಬಗ್ಗೆ ಮಂಗಳೂರು ಸರ್ಕಲಿನಿಂದ ಚುನಾಯಿಸಬೇಕಾದ ಮಹಮ್ಮದೀಯರ ಪರವಾಗಿರುವ ಸೀಟಿಗೆ ಮಂಗಳೂರು ತಾಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಮೆಂಬರರಾದ ಬಂಟ್ವಾಳ ಬಿ ಎಲ್ ಹಮೀದ್ ಸಾಹೇಬರವರು ಉಮೇದ್ವಾರರಾಗಿ ನಿಲ್ಲಲಿರುವರೆಂದು ತಿಳಿದುಬರುತ್ತದೆ

ಅಸ್ಪೃಶ್ಯತಾ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯ ವಿಶೇಷಾಧಿವೇಶನ — ಈ ಸಭೆಯು ಇದೇ ತಾ [illegible]ನೇ ಭಾನುವಾರ ಸಾಯಂಕಾಲ ಘಂಟೆ ೫-೩೦ಕ್ಕೆ ಉಳ್ಳಾಲದ ಅದ್ವೈತಾಶ್ರಮದ ಭವನದಲ್ಲಿ ಕೆಲವು ಮುಖ್ಯ ವಿಷಯಗಳನ್ನು ಪರ್ಯಾಲೋಚಿಸಿ ನಿರ್ಧರಿಸುವುದಕ್ಕೋಸ್ಕರ ಜರಗುವುದರಿಂದ, ಸದಸ್ಯರೆಲ್ಲರೂ ಅವಶ್ಯ ಆ ದಿವಸ ಬಂದು ಕಾರ್ಯನಿರ್ವಹಿಸಬೇಕಾಗಿ ಕಾರ್ಯದರ್ಶಿಯವರ ವಿನಂತಿ ಇದೆ

ಇಲ್ಲಿಯ ಮುಲೇರಿಯಾನಾ ಕಂಪೆನಿಯವರು ಡಾಕ್ಟರ್ ಜಿ ಜೆ ವಾಸ್ ಸರ್ಜನ್, ಐಸ್ಪೆಶಲಿಸ್ಟ ಇವರ ಮುಖ್ಯ ವೈದ್ಯಕೀಯದಲ್ಲಿ ಕಂಕನಾಡಿ ಶಾಲೆಯ ಮುಂಭಾಗದ ಕಟ್ಟಡದ ಮಾಳಿಗೆಯಲ್ಲಿ ನೇತ್ರರೋಗ ಪರೀಕ್ಷಾಸಂಬಂಧವಾಗಿ ಪ್ರತ್ಯೇಕ ಆಸ್ಪತ್ರೆಯೊಂದನ್ನು ತೆರೆದಿರುತ್ತಾರಾಗಿಯೂ, ಇಲ್ಲಿ ಮದ್ದು ಒಪರೇಶನ್‌ಗಳಿಂದ ರೋಗಿಗಳನ್ನು ಚಿಕಿತ್ಸೆಮಾಡಲಾಗುವುದೆಂದೂ ತಿಳಿದುಬರುತ್ತದೆ ಆಫೀಸು ಸಮಯ ಬೆಳಿಗ್ಗೆ ೯ರಿಂದ ೧೨ರ ತನಕ ಮಧ್ಯಾಹ್ನ ೧ರಿಂದ ೬ರ ತನಕ ಪರವೂರುಗಳ ರೋಗಿಗಳೂ ಚಿಕಿತ್ಸಿಸಲ್ಪಡುವರು

ಇಲ್ಲಿಯ ಹೆಸರುವಾಸಿ ಕೆನರಾ ಬೇಂಕಿನ ಉಪಶಾಖೆಗಳು ಚಿಕ್ಕಮಗಳೂರಿನಲ್ಲಿ ಬರುವ ತಿಂಗಳ ತಾ ೧೪ಕ್ಕೂ ಎರನಾಕುಲಂನಲ್ಲಿ ಇದೇ ತಾ ೨೬ಕ್ಕೂ ಇಲ್ಲಿಯ ಬಂದರದಲ್ಲಿ ಇದೇ ತಾ ೨೧ಕ್ಕೂ ತೆರೆಯಲ್ಪಡುವುದಾಗಿ ತಿಳಿದುಬಂದಿದೆ

ನಿನ್ನೆ ದಿವಸ ಇಲ್ಲಿಯ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ೫—೬ ಸ್ವಯಂಸೇವಕರು ಕೋರ್ಟಿನೊಳಗೆ ಹೊಕ್ಕು ಕಾನೂನು ವಿರುದ್ಧವಾಗಿ ಕೋರ್ಟಿನ ಗದ್ದುಗೆಯನ್ನು ಪ್ರವೇಶಿಸಲು ಹವಣಿಸುತ್ತಿದ್ದಾಗ ಎಲ್ಲರೂ ಕೈದುಮಾಡಲ್ಪಟ್ಟರೆಂದು ತಿಳಿದುಬರುತ್ತದೆ

ಪುತ್ತೂರು ತಾಲೂಕು ಬೋರ್ಡ್ ಪ್ರೆಸಿಡೆಂಟರಾದ ಮ. ರಾ. ನೊಳಪಳ್ಳಿ ಶಿವರಾಯರು ಇದೇ ತಾ ೨೬ರಲ್ಲಿ ನಡೆಯಲಿರುವ ಕೊಕ್ಕಡ ಸರ್ಕಲಿನಿಂದ ತಾಲೂಕು ಬೋರ್ಡು ಚುನಾವಣೆಗೂ, ಅದೇ ಸರ್ಕಲಿನಿಂದ ಕೊಕ್ಕಡ ಮತ್ತು ಧರ್ಮಸ್ಥಳ ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡ ಚುನಾವಣೆಗೂ ಉಮೇದ್ವಾರರಾಗಿ ನಿಲ್ಲಲಿರುತ್ತಾರೆಂದು ತಿಳಿದುಬಂದಿದೆ

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಉಡುಪಿ, ಲಿಮಿಟೆಡ್ ಉಡುಪಿ ಇದರ ಉಪಶಾಖೆಗಳು ಮದ್ರಾಸ್ ಮತ್ತು ಶಿವಮೊಗ್ಗದಲ್ಲಿ ಇದೇ ತಾ ೧೯ಕ್ಕೆ ತೆರೆಯಲ್ಪಡುವುದಾಗಿ ತಿಳಿದುಬಂದಿದೆ

ಸದ್ಯ ಜರಗಲಿಕ್ಕಿರುವ ಚುನಾವಣೆಯಲ್ಲಿ ಪುತ್ತೂರು ಸರ್ಕಲಿನಿಂದ ಹೆಂಗಸರ ಸ್ಥಾನಕ್ಕೆ ತಾಲೂಕು ಬೋರ್ಡಿಗೂ, ಡಿಸ್ಟ್ರಿಕ್ಟ್ ಬೋರ್ಡಿಗೂ ಶ್ರೀಮತಿ ಆನಂದಲಕ್ಷ್ಮಿ ಅಮ್ಮಾಳ್ ಕಾಂಚಾನ ಇವರು ಉಮೇದ್ವಾರರಾಗಿ ನಿಲ್ಲಲಿರುವರು

ಕಾರ್ಕಳ: — ಈ ತಾಲೂಕು ಬೋರ್ಡು ಉಪಾಧ್ಯಾಯರ ಸಭೆಯು ಇದೇ ತಾ ೨೬ನೇ ಶನಿವಾರ ಅಪರಾಹ್ನ ಘಂಟೆ ೨ಕ್ಕೆ ಸರಿಯಾಗಿ ಕಾರ್ಕಳ ಬೋರ್ಡು ಮೈನ್ ಶಾಲೆಯಲ್ಲಿ ಜರಗುವುದು ಈ ಸಭೆಗೆ ಬೋರ್ಡಿಗೆ ಸಂಬಂಧಪಟ್ಟ ಎಲ್ಲಾ ಟ್ರೈನ್ಡ್ ಉಪಾಧ್ಯಾಯರು ತಪ್ಪದೆ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ

ಉಡುಪಿ: — ಕಳೆದ ಜುಲಾಯಿ ತಿಂಗಳ ೨೦ನೇ ಗುರುವಾರ ಇಲ್ಲಿನ ಬೋರ್ಡು ಎಲಿಮೆಂಟರಿ ಮೈನ್ ಶಾಲೆಯ ೫ನೇ ತರಗತಿಯ ಒಬ್ಬ ವಿದ್ಯಾರ್ಥಿಯು ಆ ಶಾಲೆಯ ಒಂದು ಸಣ್ಣ ಮಗುವಿನ ಕುತ್ತಿಗೆಯಿಂದ ಭಂಗಾರದ ಗೋಪನ್ನು ಜಾರಿಸಿದನೆಂದೂ ಪುನಃ ೨೧ನೇ ದಿನವೂ ಆ ಹುಡುಗನು ಮತ್ತೊಬ್ಬ ಹುಡುಗನ ಗೋಪನ್ನೂ ಜಾರಿಸಿದನೆಂದೂ, ಈ ವಿಷಯವಾಗಿ ಹೆಡ್ ಮಾಸ್ತರರು ತನಿಖೆ ನಡೆಸಲಿಲ್ಲವೆಂದೂ ಮೊದಲಾದ ವಿವರಗಳನ್ನೊಳಗೊಂಡ ಪತ್ರವೊಂದು ನಮಗೆ (ಸ್ವದೇಶಾಭಿಮಾನಿಗೆ) ಬಂದಿದೆ ಅದನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ

ತಾ ೫ನೆಗೆ ಉಡುಪಿ ತಾಲೂಕಿನ ಶೇಂದಿ ಅಂಗಡಿಗಳ ಏಲಂ ಡಿವಿಜನಲ್ ಆಫೀಸರರವರಿಂದ ತಾಲೂಕು ಕಚೇರಿಯಲ್ಲಿ ನಡೆಸಲ್ಪಟ್ಟಿತು. ಇದರ ನಿಷೇಧ ಸೂಚನೆಗಾಗಿ ಆ ದಿನ ಹರತಾಳವು ಆಚರಿಸಲ್ಪಟ್ಟಿತ್ತು, ಆದರೆ ಎಂದಿನಂತೆ ಅಂಗಡಿಗಳನ್ನು ಮುಚ್ಚಿದ್ದುದರಿಂದ ಸ್ವಯಂ ಸೇವಕರು ಪಹರೆಮಾಡಿದ್ದು ಕೆಲವು ಅಂಗಡಿಗಳನ್ನು ಮುಚ್ಚಿಸದೆ, ಹಲವರು ತೆರೆದೇ ಇದ್ದರು. ಗುತ್ತಿಗೆ ಏಲಮಿಗೆ ಬಿಲ್ಲ ಬಾರದಾಗಿ ಅಲ್ಲಲ್ಲಿ ಪಿಕೆಟಿಂಗ ಪತ್ರಗಳು ಗೋಡೆಗಳಿಗೆ ಅಂಟಿಸಲಾಗಿದ್ದವು, ಅಲ್ಲದೆ ಏಲಮಿನ ಕಾಲಕ್ಕೆ ಕಚೇರಿಯ ಆವಾರದಲ್ಲಿ ವಿನಂತಿ ಪತ್ರಗಳು ಸ್ವಯಂ ಸೇವಕರಿಂದ ಜನರಿಗೆ ಹಂಚಲ್ಪಟ್ಟವು, ಸ್ವಯಂ ಸೇವಕರ ಕೈದೂ ಆಯಿತು. ಶ್ರೀ ಲಕ್ಷ್ಮೀನಾರಾಯಣ ಬಲ್ಲಾಳ ಕೇಶವ ನಾಯಕ ಶ್ರೀ ಎ ಬಾಬು ಫಾರಿದಿಯವರು ಮೊದಲಾದವರ ಮುಂದಾಳುತನದಲ್ಲಿ ಬೇರೆ ಬೇರೆ ಕಡೆಗಳಿಂದ ಜಯಕಾರಗಳೊಡನೆ ಮೆರವಣಿಗೆಗಳು ಹೊರಟು ಒಂದರ ನಂತರ ಮತ್ತೊಂದು ಕೈದುಮಾಡಲ್ಪಟ್ಟುವು. ಮೆರವಣಿಗೆ ಮತ್ತು ಪಹರೆ ನಿಮಿತ್ತವಾಗಿ ಅಂದು ಒಟ್ಟಿಗೆ ೧೩ ಮಂದಿ ಕೈದು ಮಾಡಲ್ಪಟ್ಟಿದ್ದರು

ಇವರಲ್ಲಿ ಶ್ರೀ ಲಕ್ಷ್ಮೀನಾರಾಯಣ ಬಲ್ಲಾಳ ಮತ್ತು ಕೇಶವ ನಾಯಕರ ಹೊರತಾಗಿ ಉಳಿದ ೧೧ ಮಂದಿಯನ್ನು ಮರುದಿನ ಮುಚ್ಚಳಿಕೆ ನಂತರ ಬಿಡುಗಡೆ ಮಾಡಿದರು. ಗುತ್ತಿಗೆಗಳ ಏಲಮಿನಲ್ಲಿ ಕೆಲವಕ್ಕೆ ಹೆಚ್ಚಿನ ಬೇಡಿಕೆಯು ಇತ್ತು, ಆದರೆ ಸ್ವಲ್ಪ ಅಂಗಡಿಗಳಿಗೆ ತೀರಾ ಕಡಿಮೆಯ ಬೇಡಿಕೆಯಿದ್ದುದರಿಂದ ಏಲಂ ಕಾಯಂ ಆಗಲಿಲ್ಲ ಸ್ವಲ್ಪ ಅಂಗಡಿಗಳಿಗೆ ಬೇಡಿಕೆಯೇ ಇಲ್ಲ. ಅಂತಹ ೬ ಕಡೆ ಅಂಗಡಿಗಳ ಹರಾಜು ಇದೇ ತಾ ೧೫ಕ್ಕೆ ಮುಂದರಿಸಲಾಗಿದೆ

ಶ್ರೀ ವೇಲ್ಡ ಸೇಟರ ಅಂಗಡಿಯೆದುರು ವಿದೇಶಿ ವಸ್ತ್ರಕ್ಕಾಗಿ ಆಗಾಗ ಪಹರೆ ನಡೆಯುತ್ತಲಿದೆ ಕೈದುಗಳೂ ಬಿಡುಗಡೆಗಳೂ ಆಗುತ್ತಿವೆ

ತಾ ೯ನೆಗೆ ರಾಮಬಾಣ ಪತ್ರಕಗಳನ್ನು ಹಂಚುತ್ತಿರುವ ವೇಳೆಗೆ ಶ್ರೀ ಅಂತಯ್ಯ ಸೆಟ್ಟಿಯವರನ್ನು ಕೈದುಮಾಡಿ ತಾ ೧೦ನೆಗೆ ಇವರ ವಿಚಾರಣೆಯಾಗಿ ೩ ತಿಂಗಳ ಸಜೆಯು ವಿಧಿಸಲಾಗಿದೆ

ಶ್ರೀ [illegible] ದೇವಸ್ಥಾನದಲ್ಲಿ ಮಾಡಿಕೆಯ ಪ್ರಕಾರ ಭಜನೆ ಸಪ್ತಾಹವು ಪ್ರಾರಂಭವಾಗಿದ್ದು ಇದೇ ೧೯ನೇ ಶನಿವಾರ [illegible] ಮಂಗಲೋತ್ಸವವು ಜರಗತಕ್ಕದ್ದಿದೆ

ಪುತ್ತೂರು — ಈ ತಾಲೂಕು ಕೆದಿಲ ಗ್ರಾಮದ ಯುವಕ ಸಭೆಯ ೪ನೇ ಮಾಸಿಕ ಸಭೆಯು ಮೊನ್ನೆ ಜರಗಿತು. ಸಭೆಯ ಕಡೆಯಿಂದ ಒಂದು ಪುಸ್ತಕ ಭಂಡಾರವು ತೆರೆಯಲಾಗಿದೆ

ಬಡಗ ಉಳಿಪಾಡಿ — ಈ ಗ್ರಾಮದ ಪಟ್ಟಕಾಡಿನಲ್ಲಿ ನಾಲ್ಕು ಹುಲಿಗಳು ಅವುಗಳ ೩ ಮರಿಗಳ ಸಮೇತವಿದ್ದು ಆಗಾಗ್ಗೆ ಹಗಲು ರಾತ್ರಿಯೆನ್ನದೆ, ಅನೇಕ ದನಕರು, ಸಣ್ಣ ಜಾತಿಯ ಎಮ್ಮೆ ಕೋಣಗಳನ್ನೂ, ನಾಯಿ ಆಡುಗಳನ್ನೂ ಕೊಂದು, ಹಾವಳಿಮಾಡುತ್ತಿದ್ದುವು ಇವುಗಳನ್ನು ಹಿಡಿಯುವುದಕ್ಕಾಗಿ ಈ ಗ್ರಾಮಸ್ಥರಾದ ತೆಂಕುಳಿಪಾಡಿ ಬೋರ್ಡು ಶಾಲಾ ಮಾಸ್ತರ್ ಮ. ರಾ. ರಾ ಯಂ ವೆಂಕಟಪ್ಪಯ್ಯರು ಆ ಕಾಡಿನಲ್ಲಿ ಒಂದು ಗೂಡನ್ನಿಡಿಸಿ ಬಹಳ ಸಮಯದಿಂದ ಸಾಧನೆಮಾಡುತ್ತಿದ್ದರು ಇದೇ ತಿಂಗಳ ತಾ ೨ನೇ ಬುಧವಾರ ದಿನ ಸುಮಾರು ೬ ಫೀಟು ಉದ್ದದ ಒಂದು ಹುಲಿಯು ಆ ಗೂಡಿನಲ್ಲಿ ಬಿದ್ದಿರುತ್ತದೆ ಉಳಿದವುಗಳು ದೊಡ್ಡವಿದ್ದು ಅವುಗಳನ್ನು ಹಿಡಿಯುವ ಪ್ರಯತ್ನವು ನಡೆಯುತ್ತದೆ

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂವತ್ಸರದ ಶ್ರಾವಣ ಶು| ೧೩ ಶನಿವಾರದಿಂದ ಅಂಗೀರಸ ಸಂವತ್ಸರದ ಶ್ರಾವಣ ಬ| ೩ ಶುಕ್ರವಾರದ ವರೆಗಿನ ಪಂಚಾಂಗ

(೧೯೩೨ನೆಯ ಕರ್ಕಾಟಕ—೩೨).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಅಸ್ತ
13	ಶನಿ	೧೩	೨೬ ೪೬	ಪೂ ಷಾ	೫೦ ೪೬	೨೯	6 20	6 51
14	ರವಿ	೧೪	೨೪ ೩೨	ಉ ಷಾ	೪೯ ೪೪	೩೦	6 20	6.50
15	ಸೋಮ	೧೫	೨೨ ೦	ಶ್ರವಣ	೪೯ ೩೨	೩೧	6.20	6 50
16	ಕುಜ	○	೨೦ ೪೬	ಧನಿಷ್ಠಾ	೫೦ ೫೦	೩೨	6.20	6.49
17	ಬುಧ	೧	೨೧ ೨	ಶತಭಿಷ.	೫೩ ೧೪	೧	6.20	6 49
18	ಗುರು	೨	೨೨ ೩೦	ಪೂ. ಭಾ.	೫೭ ೨	೨	6 20	6 48
19	ಶುಕ್ರ	೩	೨೫ ೧೪	ಉ ಭಾ	೬೦ ೦	೩	6 20	6.45

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall ಮಳೆ ದಿನದ ಮಳೆ	ಜುಮುಲಾ ಮಳೆ.
5	76—7	72—1	2—47	—
6	81—5	72—9	1—65	—
7	79—1	72—6	1—50	—
8	83—8	74—3	0—03	—
9	84—8	75—6	0—42	—
10	81—7	75-6	0—50	—
11	84—0	74—3	0—25	78-99

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಅ	ವರೆಗೆ ರೂ. ಅ
ರಾಶಿ ಅಕ್ಕಿ	3—9	4—2
ಮುಷ್ಕ	4—8	5—0
ಗುಡ್ಡ	4—0	4 6
ಸುಗ	3—10	4—2
ಊರ ಅಪ್ಪಲ್ ಬೆಳ್ತಿಗೆ	4—12	5—9
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8—0	8—4
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4—10	4—12
ಗೋಧಿ ಗೋಣಿ ೧ಕ್ಕೆ	9—8	14—8
ತೊಗರಿ ಗೋಣಿ ೧ಕ್ಕೆ	12—0	12—8
ಹುರುಳಿ ಗೋಣಿ ೧ಕ್ಕೆ	6—2	7—4
ಕಡಲೆ ಗೋಣಿ ೧ಕ್ಕೆ	8—8	12—8
ತೊಗರಿಬೇಳೆ ಗೋಣಿ ೧ಕ್ಕೆ	13—8	21—0
ಉದ್ದು ಗೋಣಿ ೧ಕ್ಕೆ	11—8	13—0
ಹೆಸರು ಗೋಣಿ ೧ಕ್ಕೆ	10—4	11—
ಊರುಬೆಲ್ಲ ಖಂಡಿ ೧ಕ್ಕೆ	34—8	36—0
ಉಪ್ಪು ಗೋಣಿ ೧ಕ್ಕೆ	6—14	8—0
ಕೊಬ್ರಿ ಖಂಡಿ ೧ಕ್ಕೆ	65—	7—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	—	33—8
ಎಳ್ಳಿಂಡಿ ಖಂಡಿ ೧ಕ್ಕೆ	22—8	25—12
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	5—8	6—8
ಎಳ್ಳೆಣ್ಣೆ ಮುಡಿ ೧ಕ್ಕೆ	6—12	7—0
ಚಿಮಿಣಿಎಣ್ಣೆ ಡಬ್ಬಿಗೆ ೧ಕ್ಕೆ	4—7	8—12
ಮೋರಿಸ ಸಕ್ಕರೆ ಮಣ ೧ಕ್ಕೆ	4—4	4—6
[illegible]	4—0	5—0
ಸಾಸಿವೆ ಮುಡಿ ೧ಕ್ಕೆ	5—4	5—8
ನೇಟಿವ್ ಕಾಫಿ ಖಂಡಿ ೧ಕ್ಕೆ	275—0	300—
ಕಾಳುಮೆಣಸು ಖಂಡಿ ೧ಕ್ಕೆ	170—0	180—
ಯೇಲಕ್ಕಿ ಮಣ ೧ಕ್ಕೆ	27—0	28—
ಗೇರುಬೀಜ ಮುಡಿ ೧ಕ್ಕೆ	2—12	3—0
ಕಬ್ಬಿಣ ಖಂಡಿ ೧ಕ್ಕೆ	25—0	25—8
ತಾಂಬ್ರ ತಗಡು ಮಣ ೧ಕ್ಕೆ	11—0	11—8
ತಾಂಬ್ರ ಪಾತ್ರಗಳು ಮಣ ೧ಕ್ಕೆ	15—0	16—0
[illegible] ಸೇರು ೧ಕ್ಕೆ	14—4	14—12
ಹಿತ್ತಾಳೆ ತಗಡು ಮಣ ೧ಕ್ಕೆ	11—8	12—0
[illegible] ೧ಕ್ಕೆ	17—14	18—0
ಹುಣಸೆ ಹುಳಿ ಖಂಡಿ ೧ಕ್ಕೆ	40—	—
[illegible] ಕಾಫಿ ಖಂಡಿ ೧ಕ್ಕೆ	340—	—
ಹಳೆ ಅಡಿಕೆ	180—	205—
ಹೊಸ ಅಡಿಕೆ	140—	145—

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ [illegible] ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕು ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ಹೋಗಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗ ತಲಪುವಿರಿ ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯ ಸರ್ವಿಸಿಗೂ ಕನೆಕ್ಷನ್ ಇರುತ್ತದೆ ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರು ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನೇಕ ತರ ಫಲವನ್ನು ಪಡೆಯಲು ಸುಲಭವಾಗಿದೆ.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ [illegible] 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರಿನ ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary
The Canara Public Conveyance Company Ltd Mangalore

Chikmagalur Public Conveyance Motor Service
CHIKMAGALUR
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು(M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಿಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಚಾರ್ಮಾಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು, ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಅದ ಧರ್ಮಸ್ಥಳ ರೋಡಿಗೆ ದಿ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪| ಗಂಟೆ ಒಳಗ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಢರಾಪೂರ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಶೆಟ್ಟಿ—ಪ್ರೊಪ್ರೈಟರ್ಸ್.

ಗಾಂಧೀ - ಸರಕಾರದವರ ರಾಜಿಪ್ರಸ್ತಾಪ!

ಗೂಢ ವ್ಯವಹಾರ

"ಸರಕಾರವು ಕಳೆದ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಮುಂದಿಟ್ಟ ಶರ್ತಗಳಿಗೆ ಕೊಂಗ್ರೆಸ್ಸಿನವರು ಒಪ್ಪಬೇಕು, ಕಾಯಿದೆ ಭಂಗ ಚಳವಳಿಯನ್ನು ಹಿಂತೆಗೆಯಬೇಕು—ಎಲ್ಲರೂ ಹಿಂದೀಯ ನವ ರಾಜ್ಯಾಂಗರಚನೆಗಾಗಿ ಯತ್ನಿಸಬೇಕು" ಎಂದು ಸರಕಾರ ಗಾಂಧಿಯವರೊಳಗೆ ಶರ್ತಗಳಾಗುತ್ತಿವೆಯೆಂದು ಜವಾಬ್ದಾರೀ ಪಕ್ಷದಿಂದ ತಿಳಿದುಬಂದಿದೆ. ಈ ಸುದ್ದಿಯನ್ನು ಪ್ರಕಟಿಸುವಾಗ, ಸಾಮ್ರಾಜ್ಯ ಪ್ರಭುತ್ವದ ಇಷ್ಟರತನಕದ ಕಾರ್ಯಕಲಾಪಗಳ ಸಿಂಹಾವಲೋಕನವನ್ನು ಮಾಡಿದರೆ ಅಪ್ರಸಕ್ತವಾಗಲಾರದು.

ಮಹಾತ್ಮಾ ಗಾಂಧಿಯವರ ಕಾಯಿದೆಭಂಗ ಚಳವಳಿಯು ೧೯೩೦ನೇ ಇಸವಿ ಎಪ್ರಿಲ್ ತಾ. ೬ರಲ್ಲಿ ನಡೆಯಿತು. ಪ್ರಾರಂಭದಲ್ಲಿ ಚಳವಳಿಯು ಉಪ್ಪಿನ ಕಾಯಿದೆಯ ಮೇಲೆ ಕೇಂದ್ರೀಕೃತವಾಗಿತ್ತಾದರೂ, ಅದರ ವೃದ್ಧಿಸುವಿಕೆಯಿಂದಾಗಿ ದಿನೇ ದಿನೇ ಬ್ರಿಟಿಷ ಬಹಿಷ್ಕಾರವೂ ಸಹಾನುವರ್ತಿಯಾಗಿ ನಡೆಯಿತು. ಈ ಕಾನೂನುಲ್ಲಂಘನಾ ಚಳವಳಿಯು ಯಶಸ್ವಿಯಾಗಲಾರದೆಂದು ಹೆಚ್ಚಿನವರು ತಿಳಿದುಕೊಂಡಿದ್ದರಾದರೂ, ಕ್ರಮೇಣ ಅದರ ಪ್ರತಿಭೆಯು ಪ್ರಚಂಡ ತರದ್ದಾಯಿತು. ಅದನ್ನು ಅಡಗಿಸುವುದಕ್ಕಾಗಿ ಅದರ ಮುಂದಾಳುಗಳಾದ ಗಾಂಧಿಜೀಯವರನ್ನೂ ಇನ್ನಿತರ ದೇಶಧುರೀಣರನ್ನೂ ಸೆರೆಮನೆಗೆ ಕಳುಹಿಸಲಾಯಿತು. ಆದರೂ ಶಾಂತಿಯುಂಟಾಗಲಿಲ್ಲ. ತನ್ಮಧ್ಯೆ ಪ್ರಥಮ ರೌಂಡ್ ಟೇಬಲ್ ಪರಿಷತ್ತು ಜರಗಿತು. ಇದರ ಪರಿಣಾಮವಾಗಿ ಮಂತ್ರಿಯವರ ಪ್ರಕಟಣೆಯ ಮೇರೆಗೆ ಮಹಾತ್ಮಾ ಗಾಂಧಿಯವರನ್ನೂ ಇನ್ನಿತರ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಲಾಯಿತು. ಅಲ್ಲದೆ ದ್ವಿತೀಯ ಪರಿಷತ್ತನ್ನು ಜರಗಿಸಲಾಗುವುದೆಂದೂ, ಅದರಲ್ಲಿ ಕೊಂಗ್ರೆಸ್ಸಿನ ಮುಂದಾಳುಗಳು ಭಾಗವಹಿಸಿ ತಮ್ಮಿಚ್ಛೆಯನ್ನು ಪ್ರಭುತ್ವದವರಿಗೆ ತಿಳಿಯಪಡಿಸಬೇಕೆಂದೂ ನಿರ್ಧಾರವಾಯಿತು. ಅದೇ ಸಮಯದಲ್ಲಿ ಅಂದರೆ ೧೯೩೧ನೇ ಇಸವಿ ಮಾರ್ಚ ಮೂರನೇ ದಿನ ಮಹಾತ್ಮಾ ಗಾಂಧಿಯವರು ಲೋರ್ಡ್ ಅರ್ವಿನರೊಡನೆ ವ್ಯವಹಾರವನ್ನು ನಡೆಸಿ, ತನ್ನ ಕೊಂಗ್ರೆಸ್ ಮತ್ತು ಸರಕಾರಗಳೊಳಗ ಸಂಧಿಯನ್ನುಂಟುಮಾಡಿದರು. ಇದರಿಂದಾಗಿ ಮಹಾತ್ಮಾ ಗಾಂಧಿಯವರು ದ್ವಿತೀಯ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಭಾಗವಹಿಸಬೇಕೆಂಬುದಾಗಿ ನಿಷ್ಕರ್ಷಿಸಲ್ಪಟ್ಟಿತು. ಅದೇ ವರುಷ ಆಗೋಸ್ಟು ೨೯ನೇ ದಿನ ಮಹಾತ್ಮಾ ಗಾಂಧಿಯವರು ಲಂಡನಿಗೆ ತೆರಳಿದರು. ಅವರು ಅಲ್ಲಿ ಕೊಂಗ್ರೆಸಿನ ಧ್ಯೇಯಗಳನ್ನೂ ಕೋರಿಕೆಗಳನ್ನೂ ಕೂಲಂಕುಷವಾಗಿ ತಿಳಿಯಪಡಿಸಿ ಸಾಮ್ರಾಜ್ಯ ಪ್ರಭುತ್ವದವರು ತಮ್ಮ ಶರ್ತಗಳಿಗೆ ಸಮ್ಮತಿಸುವರಾದರೆ ಮುಂದಕ್ಕೆ ಶಾಂತಿಯುಂಟೆಂದರು. ಸೈನ್ಯ, ಸಂಪತ್ತು, ಬಹಿಷ್ಪ್ರಪಂಚದ ವ್ಯವಹಾರಗಳ ಸಂಪೂರ್ಣ ಹಕ್ಕನ್ನು ಹಿಂದೀಯರಿಗೆ ಕೊಡಬೇಕೆಂದೂ ಪ್ರಭುತ್ವದವರೊಡನೆ ಕೇಳಿಕೊಂಡರು. ಮಹಾತ್ಮಾ ಗಾಂಧಿಯವರ ಈ ರೀತಿಯ ಅನಿರೀಕ್ಷಿತವಾದ ಮಹಾ ಕೋರಿಕೆಗಳನ್ನು ಪ್ರಭುತ್ವದವರು ಕೇಳಿ ಅತ್ಯಾನಿರಾಶರಾದರು. ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲು ಸಮಯವು ಪರಿಪಕ್ವವಾಗಿರುವುದಿಲ್ಲವೆಂದು ದೃಢವಾಗಿ ನಂಬಿದ ಸಾಮ್ರಾಜ್ಯಾಧಿಪತಿಗಳು ಮತ್ತೆ ಯಾವ ಘೋಷಣೆಯನ್ನೂ ಮುಂದಿಡದೆ ಪರಿಷತ್ತನ್ನು ಅಂತ್ಯಗೊಳಿಸಿದರು. ಇಷ್ಟರವರೆಗೆ ಹಿಂದೂದೇಶದಲ್ಲಿ ಕಂದಾಯ ನಿರಾಕರಣಾ ಚಳವಳಿಯು ನಡೆಯುತ್ತಿದ್ದಿತು. ಆರ್ಥಿಕ ಮುಗ್ಗಟ್ಟಿನಿಂದಾಗಿ ಸಂಯುಕ್ತ ಪ್ರಾಂತ್ಯದಲ್ಲಿ ದುರ್ಭಿಕ್ಷೆಯು ಒಂದೊದಗಲು ಅಲ್ಲಿಯ ಬೇಸಾಯಗಾರರು ಸರಕಾರಕ್ಕೆ ಕಂದಾಯ ಕೊಡುವುದನ್ನು ತಡದರು. ಇವರ ಇಂತಹ ತಡೆಯುವಿಕೆಗೆ ಪಂಡಿತ ಜವಾಹರಲಾಲರೇ ಕಾರಣೀಭೂತರೆಂದು ಅವರನ್ನು ದಶಂಬರದಲ್ಲಿ ಪ್ರಥಮದ್ದಾಗಿ ಕೈದುಮಾಡಲಾಯಿತು. ಅವರ ಬಂಧನದಿಂದಾಗಿ ಮತ್ತೊಂದು ಚಳವಳಿಯು ಪ್ರಾರಂಭವಾಗುವ ಚಿಹ್ನೆಯು ಕಂಡು ಬಂತು. ಅಷ್ಟರಲ್ಲಿ ಪಶ್ಚಿಮೋತ್ತರ ಗಡಿನಾಡಿನಲ್ಲಿ 'ಗಡಿನಾಡಿನ ಗಾಂಧಿ' ಯೆಂದೆಣಿಸಲ್ಪಟ್ಟ ಅಬ್ದುಲ್ ಘಫರಖಾನರನ್ನು ಬಂಧಿಸಿ ಎಲ್ಲಿಗೋ ಕೊಂಡೊಯ್ದರು. ಈ ಘಟನೆಗಳಿಂದಾಗಿ ಎಲ್ಲೆಲ್ಲೂ ಅಶಾಂತಿಯು ತಲೆದೋರಿತು. ಅನೇಕರು ಕಾರಾಗೃಹಗಳನ್ನು ಹೊಕ್ಕರು. ಈ ಮಧ್ಯೆ ಗಾಂಧಿಜಿಯವರು ಲಂಡನಿನಿಂದ ಹಿಂತಿರುಗಿ ೨೮-೧೨-೩೧ರಲ್ಲಿ ಹಿಂದೂದೇಶದಲ್ಲಿಳಿದರು.

ಸಂಧಿಯಾಗುವ ಚಿಹ್ನೆಯಿದೆ

ಗಾಂಧಿಜೀಯವರ ನಿಶ್ಚಲವೂ ಗಂಭೀರವೂ ಆದ ಕೋರಿಕೆಗಳನ್ನು ನೋಡಿ ಬ್ರಿಟಿಷ ಮತ್ತು ಇಂಡಿಯಾ ಸರಕಾರಗಳು ಮೊದಲೇ ಅಸಂತುಷ್ಟಿಗೊಂಡಿದ್ದವು. ಎರಡನೇ ಚಳವಳಿಯು ಅಪರಿಹಾರ್ಯವಾಗಿ ನಡೆಯಲಿದೆ ಎಂದು ಅವುಗಳು ಕಂಡುಕೊಂಡವು. ಅಂತಹ ಚಳವಳಿಗಳನ್ನು ನಿರೋಧಿಸಲು ಬೇಕಾದ ಸಿದ್ಧತೆಗಳನ್ನು ಮಾಡಿಟ್ಟುಕೊಂಡವು. ಹಿಂದೂದೇಶದಲ್ಲಿಳಿದೊಡನೆಯೇ ಅಂದರೆ ೩೦-೧೨-೩೧ರಲ್ಲಿ ಗಾಂಧಿಜಿಯವರು, ಹೊಸ ವೈಸರಾಯರಾಗಿ ಹಿಂದೂದೇಶಕ್ಕೆ ಬಂದಿದ್ದ ಲೋರ್ಡ್ ವಿಲ್ಲಿಂಗ್ಡನರೊಡನೆ ಮಾತುಕತೆ ನಡೆಸಬೇಕೆಂದು ಬಗೆದರು—ತನ್ನಭಿಪ್ರಾಯವನ್ನು ವೈಸರಾಯರಿಗೆ ತಿಳುಹಿಸಿದರು. ಇಷ್ಟೆಲ್ಲ ನಡೆಯುವ ಮೊದಲೇ ಇಂಡಿಯಾ ಸರಕಾರವು ಬಂಗಾಳ ಓರ್ಡಿನೆನ್ಸನ್ನೂ ಇನ್ನಿತರ ಓರ್ಡಿನೆನ್ಸುಗಳನ್ನೂ ದೇಶದಲ್ಲಿ ಜ್ಯಾರಿಮಾಡಿದ್ದಿತು. ಈ ಶಾಸನಗಳನ್ನು ಹಿಂತೆಗೆಯುವಂತೆ ಮಾಡಬೇಕೆಂದೂ, ಅಲ್ಲದೆ ಎರಡನೇಯ ಚಳವಳಿಯನ್ನು ಘಟಿಸಬಿಡಬಾರದೆಂದೂ ಗಾಂಧಿಜೀಯವರು ಭಾವಿಸಿ ವೈಸರಾಯರೊಡನೆ ಒಂದು ಭೇಟಿಯನ್ನು ಕೇಳಿಕೊಂಡರು. ಆದರೆ ಹೊಸ ವೈಸರಾಯರಾದ ವಿಲ್ಲಿಂಗ್ಡನರು ಗಾಂಧಿಜೀಯವರ ಈ ಕೋರಿಕೆಗೊಪ್ಪದೆ, "ಬಂಗಾಳ ಓರ್ಡಿನೆನ್ಸ್ ಮೊದಲಾದವುಗಳನ್ನು ಹಿಂತೆಗೆಯುವ ಪ್ರಯತ್ನವನ್ನು ಮಾಡುವುದಾದರೆ, ನೀವು ನನ್ನನ್ನು ಸಂದರ್ಶಿಸುವುದು ಬೇಡ, ಸಾಮ್ರಾಜ್ಯ ಸರಕಾರದ ಪ್ರಕಟಣೆಯ ಸೂತ್ರಗಳನುಸಾರವಾಗಿ ಸಹಕರಿಸುವುದಾದರೆ, ನೀವು ನನ್ನನ್ನು ಭೇಟಿಯಾಗಬಹುದು" ಎಂದರು. ಇಲ್ಲಿಗೆ ಗಾಂಧಿ ಅರ್ವಿನ್ ಸಂಧಿಯೂ, ಎರಡನೇಯ ಪರಿಷತ್ತಿನ ಫಲಗಳೂ ನೆಲಸಮವಾದುವು. ಎರಡನೆಯ ಚಳವಳಿಯು ಪ್ರಾರಂಭವಾಗುವುದೆಂದಾಯಿತು. ಜನವರಿ ೪ನೇ ದಿನ ಗಾಂಧಿಜೀಯವರನ್ನೂ ಅಖಿಳ ಭಾರತ ಕೊಂಗ್ರೆಸ್ಸಿನ ಅಧ್ಯಕ್ಷರಾದ ವಲ್ಲಭಾಯಿ ಪಟೇಲರನ್ನೂ, ಇನ್ನಿತರ ಮುಂದಾಳುಗಳನ್ನೂ ದಸ್ತಗಿರಿ ಮಾಡಿ ಎರವಾಡಾ ಸೆರೆಯೊಳಗಿಡಲಾಯಿತು. ಇದರಿಂದ ೧೮ ಓರ್ಡಿನೆನ್ಸುಗಳು ಒಂದರ ಹಿಂದೆ ಒಂದರಂತೆ ಜ್ಯಾರಿಯಾದುವು. ಗಾಂಧೀ ಅರ್ವಿನ್ ಸಂಧಿಯಲ್ಲಿ ಪಿಕೆಟಿಂಗ್ ಎಂಬುದು ಕಾಯಿದೆ ವಿರುದ್ಧವಲ್ಲವೆಂದಿದ್ದರೂ, ಈ ಎರಡನೆಯ ಚಳವಳಿ ಸಮಯದಲ್ಲಿ ಅದು ನಿಷಿದ್ಧವೆಂದೆಣಿಸಲ್ಪಟ್ಟಿತು. ಕೆಲವು ತಿಂಗಳುಗಳಿಗಾಗಿ ಹಿಂದೂದೇಶವು ಮೊದಲು ಕಾಣದಿದ್ದ ತೀವ್ರ ದಮನನೀತಿಗೊಳಗಾಗುವ ಪ್ರಸಂಗವೊದಗಿತು. ಆದರೂ ಎರಡನೆಯ ರೌಂಡ್‌ಟೇಬಲ್ ಪರಿಷತ್ತಿನ ನಿರ್ಧಾರಾನುಸಾರವಾಗಿ ಸರಕಾರದ ಕಾರ್ಯಕಲಾಪಗಳು ನಡೆದವೆಂಬ ಭಾವನೆಯು ಎಲ್ಲರಲ್ಲಿದ್ದಿತು. ಸರಕಾರದೊಡನೆ ಸಹಕರಿಸಿ ನಡೆದ ಮಂದಪಕ್ಷೀಯರೂ ಹಾಗೆಯೇ ಭಾವಿಸಿ, ಎರಡನೆಯ ಚಳವಳಿಯು ಕೊಂಗ್ರೆಸ್ಸಿನಿಂದಾಗಿಯೇ ಜನಿತವಾಯಿತೆಂದು ಪ್ರಕಟಿಸಿದರು. ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲು ಮತವಾರ ಪ್ರಶ್ನೆಗಳು ಮಹಾ ವಿಘ್ನಕಾರಿಗಳಾಗಿವೆಯೆಂದು ಸಾಮ್ರಾಜ್ಯ ಸರಕಾರದವರು ಪ್ರಕಟಿಸಿದರು. ಇಲ್ಲಿಯ ಜನಸ್ಥಿತಿಗತಿ, [illegible], ಮತ್ತು ಆಗತ್ಯ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ರೌಂಡ್ ಟೇಬಲ್ ಪರಿಷತ್ತಿನ ಉಪಶಾಖಾ ಕಮಿಟಿಯಾಗಿ ಲೂಥಿಯನ್ ಕಮಿಟಿಯೊಂದು ಲೋರ್ಡ್ ಲೋಥಿಯನ್ ಎಂಬವರ ಮುಂದಾಳುತನದಿಂದ ಇಲ್ಲಿಗೆ ಎರಡು ಮೂರು ತಿಂಗಳ ಹಿಂದೆ ಬಂದಿತ್ತು. ಈ ಕಮಿಟಿಯು ಮತವಾರ ಪ್ರಶ್ನೆಗಳನ್ನರಿತುಕೊಂಡು ಕೌನ್ಸಿಲ್ ಸಭೆಗಳಲ್ಲಿ ಒಂದೊಂದು ಮತದವರಿಗೆ ಎಷ್ಟು ಪ್ರಾತಿನಿಧ್ಯದ ಹಕ್ಕುಗಳನ್ನು ಕೊಡಬೇಕೆಂದು ಇಲ್ಲಿಯ ಜನರಿಂದ ತಿಳಿದುಕೊಂಡು ಲಂಡನಿಗೆ ಹೋಗಿ "ಹಿಂದೀಯರ ಮೇಲೆ ಬೇಗನೇ ಯೋಜನೆಯನ್ನಿಡದೆ ಹೋದರೆ ಕೆಲಸವು ಕೆಟ್ಟುಹೋದೀತು" ಎಂದು ಮೊದಲಾಗಿ ಪ್ರಕಟಿಸಿತು. ಈ ಕಮಿಟಿಯು ಹಿಂದೂದೇಶದ ಮೇಲೆ ಸಹಾನುಭೂತಿಯನ್ನು ತೋರಿಸಿದ ಪರಿಣಾಮವಾಗಿಯೋ ಎಂಬಂತೆ ಇದರ ಮುಂದಾಳುಗಳನ್ನು ಇಂಗ್ಲೆಂಡಿನ ಕೆಲ ಅಧಿಕಾರಿಗಳು ದೂಷಿಸಿದರು. ಲೂಥಿಯನ್ ಕಮಿಟಿಯ ನಿರ್ಧಾರಗಳು ಹಿಂದೂದೇಶದ ಅನೇಕ ಕಡೆಗಳಲ್ಲಿ ಸ್ವಾಗತೀಕರಿಸಲ್ಪಟ್ಟುವು. ಹೀಗಾದುದರಿಂದ ದುರಾದೃಷ್ಟವಶಾತ್ ಈ ಕಮಿಟಿಯ ನಿರ್ಧಾರಗಳೂ ಕಪಾಟಿನೊಳಗಿಡಲ್ಪಟ್ಟುವು.

ಇನ್ನೊಂದು ಪರಿಷತ್ತು

ಇದೇ ಕಳೆದ ಜುಲಾಯಿ ತಿಂಗಳಲ್ಲಿ ಭಾರತ ಸಚಿವರಾದ ಪ್ರಖ್ಯಾತಿಹೊಂದಿದ ಸರ್ ಸಾಮುವೇಲ್ ಹೋರರು ಹಿಂದೀಯ ಸಮಸ್ಯೆಯನ್ನು ಆದಷ್ಟು ಬೇಗನೆ ಇತ್ಯರ್ಥಿಸಬೇಕೆಂದು ಭಾವಿಸಿ, ದ್ವಿತೀಯ ಪರಿಷತ್ತಿನ ನಿರ್ಧಾರಗಳಿಗೆ ಬದ್ಧ ವಿರುದ್ಧವಾದ ಕೆಲವು ಘೋಷಣೆಗಳನ್ನು ಮುಂದಿಟ್ಟರು. "ಹಿಂದೂದೇಶಕ್ಕೆ ಮೊದಲು ಪ್ರಾಂತಿಕ ಸ್ವರಾಜ್ಯವನ್ನು ಕೊಡಲಾದೀತೆಂದೂ ಯಾವ ಆಲೋಚನೆಯಲ್ಲೂ ಸಾಮ್ರಾಜ್ಯ ಸರಕಾರಕ್ಕೇನೇ ಸರ್ವ ನಿರಂಕುಶ ಅಧಿಕಾರವಿರಬೇಕೆಂದೂ ಸರ್ ಹೋರರು ಪ್ರಕಟಿಸಿದರು. ದ್ವಿತೀಯ ಪರಿಷತ್ತಿನಲ್ಲಿ ಈ ನಿರ್ಧಾರವಾದರಲ್ಲ—, "ಹಿಂದೀಯರ ಪ್ರತಿನಿಧಿಗಳ ಶಿಫಾರಸ ಮೇರೆಗೆ ಹೊರಬೀಳುವ ಕೋರಿಕೆಗಳನ್ನು ಸರಕಾರಗಳು ಆಲೋಚಿಸಿ ಕೊಡುವುವು" ಎಂದು ಮೊದಲಾಗಿ ದ್ವಿತೀಯ ಪರಿಷತ್ತಿನಲ್ಲಿ ಪ್ರಕಟವಾಗಿತ್ತು. ಸರ್ ಹೋರರ ಪ್ರಕಟಣೆಯಿಂದಾಗಿ ಹಿಂದೀಯರ ಬಾಯಿಗೆ ಪುನಃ ಬೀಗಮುದ್ರೆಯನ್ನೊತ್ತಿದಂತಾಯಿತು. ಇದನ್ನು ನೋಡಿ ಸರಕಾರದೊಡನೆ ಸಹಕರಿಸಿ ನಡೆದ ಸಪ್ರೂ ಜಯಕರ ಜಿಂನಾ ಸೆಟಲ್‌ವಾದ್ ಮೊದಲಾದ ಎಲ್ಲಾ ಮಂದಪಕ್ಷದ ಮಹನೀಯರುಗಳು ಬೇಸರಗೊಂಡರು. ಜುಲಾಯಿ ತಿಂಗಳಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸುತ್ತಾ "ಸರ್ ಹೋರರ ಈ ರೀತಿಯ ಘೋಷಣೆಗಳುವುದಾದರೆ ಸಾಮ್ರಾಜ್ಯ ಸರಕಾರದ ಸಂತೋಷ ಸಹಿತವಾಗಿ ಲಂಡನಿನಲ್ಲಿ ಜರುಗಿರುವ ಕನ್ಸಲ್ಟೇಟಿವ್ ಕಮಿಟಿಯಲ್ಲಿ ನಾವು ಭಾಗವಹಿಸೆವೆಂದು ನಿರ್ಧರಿಸಿ ಸುಮ್ಮನೆ ಕುಳಿತರು. ಮೊದಲಿನ ಪ್ರಕಟಣೆಗೆ ಸರ್ ಹೋರರು ವಿರುದ್ಧವಾಗಿ ನಡೆದುದರಿಂದಾಗಿ ಹಿಂದೂದೇಶದಲ್ಲಿ ಅಂತರ್ಗತವಾಗಿ ಅಸಹಕಾರದ ಕಾರ್ಮುಗಿಲು ಎಲ್ಲೆಲ್ಲೂ ಕವಿದುಕೊಂಡಿತು. ಸರ್ ಸಾಮುವೇಲರು ತನ್ನ ಘೋಷಣೆಗಳ ಸ್ಪಷ್ಟೀಕರಣಾರ್ಥವಾಗಿ ಎಷ್ಟು ಹೇಳಿಕೊಂಡರೂ, ಮಂದಪಕ್ಷದವರು ಒಗ್ಗಲಿಸದಾದರು. "ಎಷ್ಟರ ತನಕ ಹೋರರ ನೀತಿಯು ತ್ಯಜಿಸಲ್ಪಡುವುದಿಲ್ಲವೋ ಅಷ್ಟರ ತನಕ ನಮ್ಮ ಸಹಕಾರವಿಲ್ಲ" ವೆಂದರು.

ಈ ರೀತಿಯ ಸಹಕಾರದಿಂದಾಗಿ ಸರಕಾರಗಳೂ ಬೆಪ್ಪಾದುವು. ಅವುಗಳ ಮುಂದಿನ ಕೆಲಸವು ಯಾವ ಸದ್ಯಕ್ಕೂ ಕಾಣಲಸಾಧ್ಯವಾಯಿತು.

ಈ [illegible] ಕೋಮುವಾರು ಪ್ರಶ್ನೆಗಳನ್ನು ಇತ್ಯರ್ಥಗೊಳಿಸಲು ಯತ್ನಿಸುತ್ತಿದೆಯೆಂದು ಮುಂಬಾಯಿ ಕ್ರಾನಿಕಲ್ ಹೇಳುತ್ತಿದೆ. ಬ್ರಿಟಿಷ ರಾಜನೀತಿಜ್ಞರು ಈ ಸಲ ಮುಸಲ್ಮಾನರನ್ನೂ, ಅಲ್ಪಸಂಖ್ಯಾಕರನ್ನೂ ಸಂತುಷ್ಟಿಗೊಳಿಸುವುದರಲ್ಲಿದ್ದಾರೆಂದೂ, ಬಂಗಾಲ ಪಂಜಾಬ ಸಿಂದ್ ಪ್ರಾಂತ್ಯಗಳಲ್ಲಿ ಕೇಳುವ ಪ್ರಾತಿನಿಧ್ಯಗಳ ಹಕ್ಕುಗಳನ್ನು ಅವರಿಗೆ ನಿರ್ವಿಘ್ನವಾಗಿ ಕೊಡಲಾಗುವುದೆಂದೂ ಪ್ರಕಟವಾಗಿದೆ [ಸಶೇಷ]

(೧೪ನೇ ಪುಟವನ್ನು ನೋಡಿರಿ)

ಇನ್ನು ನಮ್ಮ ವೃದ್ಧರನ್ನು ಮರೆತುಬಿಡುವುದು ಹಿತವಲ್ಲ. ಅವರ ಮುಂದಿನ ಉನ್ನತಿಗೆ ಕಾರಣವಾಗುವ ಒಂದು ಆವಶ್ಯಕತೆಯೊಂದು ಮೊದಲು ಸೂಚಿಸುವೆನು. ಅದಾವುದೆಂದರೆ ಮನುಷ್ಯನು ಹಣ್ಣಾಗುತ್ತಾ ಬಂದಂತೆ ಮಣ್ಣಿನಾಶೆಯು ಬದಲು ಹೆಣ್ಣಿನಾಶೆಯು ಯುಕ್ತವಲ್ಲ. ಅದರಲ್ಲೂ ಪುತ್ರಿ ಸಮಾನರಲ್ಲಿ ಕಾಮುಕವೃತ್ತಿಗೆಡೆಯನ್ನೀಯದೆ, ಕಿರಿಯರಿಗೆ ಯೋಗ್ಯ ನೀತಿ, ಧರ್ಮಮಾರ್ಗವನ್ನು ಬೋಧಿಸುತ್ತಾ ದೇಹಬಲವನ್ನಂತೂ ಮಾತೃಸೇವೆಗಾದರೂ ವಿನಿಯೋಗಿಸಿ, ಕೀರ್ತಿಯನ್ನು ಗಳಿಸುವ [illegible] ಕನ್ಯಾನಿಸುವರು, ಜಗಜ್ಜನನಿಯು ಮೆಚ್ಚುವಳು.

ವಿಮೆಯ ಮೇಲಿನ ಭರವಸೆಯಿಂದ ಹೆಣ್ಣು ಕೊಡುವ ಮಾತಾಪಿತರೂ ಜಾಗ್ರತೆಯಿಂದಿರಬೇಕಾಗುವುದು. ಬಂದವರು ಕಂತುಗಳು (Premia) ತುಂಬಿಸದೆ ಹೋದಲ್ಲಿ ವಿಮೆಯ ಒಂದು ಹಣಕ್ಕೆ ಬಳಿ ನಾಮವನ್ನಿಳಿದುಕೊಳ್ಳಬೇಕಾಗುವುದು. ಹಣದ ಆಶೆಯಿಂದ ಗುಣವತಿ ಹುಡುಗಿಯರನ್ನು ಹಣಕ್ಕೆ ಧಾರೆಯನ್ನೆರೆದೀಯುವುದು ಹಿತವಲ್ಲವು.

ಅತ್ಯುತ್ಕೃಷ್ಟ ಮುದ್ರಣ ಬೇಕೆ? ಶಾರದಾ ಪ್ರೆಸ್ ಮಂಗಳೂರು, ಇಲ್ಲಿ ವಿಚಾರಿಸಿ.

೧೦೦೦ ರೂ ಬಕ್ಷೀಸು

೨೦ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ಸಾಂಗಲಿ ಸರಕಾರೀ ವೈದ್ಯ
ಸೋಹನಲಾಲಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ
ನಾದರಂತೆ ಅಮೂಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತ ಪಾಕ. ರಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ, ಮೈನಸೋಣ, ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ಸಾಹಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫. ಟ ಖ. ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರೆ ಡಬ್ಬಿಗೆ ರೂ ೧೫॥ ವಿನಾ ಕಡ್ಡಿಲ್ಲ. ಅನುಭಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್ ಆಯ್ ಬಟಲಿ, ಎಲ್. ಎಮ್. ಎಂಡ್ ಎಸ್., ಜೆ ಪಿ, ಮುಂಬಯಿ:— ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವವು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ ಎನ್ ದತ್ತ ಎಮ್. ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿ ವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ — ವೈದ್ಯ ಸೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಚಿಕ್ಕತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ ಮೊದಲೆ ಪೂರಾ ವಿಚಾರ ಮಾಡಿ ಔಷಧಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಲ್ಹಾಪೂರ ಬರೆಯುತ್ತಾರೆ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ ಖರ್ಚ ०॥०

ವಿಳಾಸ — ಸಂಜೀವಿನೀ ಔಷಧಾಲಯ. ಮು. ಪೋ. ಮಿರಜ, S. M C.

‘ಸ್ವದೇಶಾಭಿಮಾನಿ’ ಪತ್ರಿಕೆಗೆ ಚಂದಾದಾರರಾಗಿರಿ.

FOETOGENE.
A vigilant guard to the ailments of PREGNANCY
The remedy to neutralise the toxins of PREGNANCY thereby minimising the chances of Abortions & Miscarriages
Dose—Preventive 1 dr every morning Curative 2 drm thrice a day

THROLOGE
for Sore throat Cough, & Cold & other long affections

HYSTERINE
A Tried Remedy for Hysteria & Epilepsy very useful Brain sedative in Insomnia & Mental derangements
Dose—1 to 2 dram adult 10 drops child thrice daily

MONOCAFISPIN
A Nondepressant Nervine Sedative Magical cure for Headaches & Neuralgia Found useful in all pains of whatever origin it may be
Dose—1 to 2 tablets.

THE EASTERN RESEARCH LABORATORY,
GHAZIPUR U P INDIA



ಬರೇ ರೂ. 3-6-0ಕ್ಕೆ ಈ 3 ವಾಚುಗಳೂ ಸಾಮಾನುಗಳೂ

ಆಶ್ಚರ್ಯಕರ ನಿಜ! ಆದರೆ ಸತ್ಯ!

ಒಟ್ಟೊ ಸುಗಂಧ ರಾಜಾ ಎಂಬುದು ೩ ದಿನಗಳ ತನಕ ಪರಿಮಳಿಸುವ ಸುಗಂಧ ದ್ರವ್ಯ — ಬಾಟ್ಲಿಗೆ ೩ ಆಣೆ. ಮುಟ್ಟಿಸಿದ ಕೂಡಲೆ ತಾಸುಗಳೊಳಗೆ ರಿಂಗ್‌ವರ್ಮನ್ನು ಗುಣಪಡಿಸುವ ಮಲಾಂ ಡಬ್ಬಿಗೆ ೩ ಆಣೆ ಮೇಲಿನ ೧೮ ಬಾಟ್ಲಿ ಅಥವಾ ಎರಡೂ ಕೂಡಿ ೧೮ನ್ನು ಕೊಳ್ಳುವವರಿಗೆ ಭಂಗಾರದ ನಿಬ್ ಇರುವ ಫೌಂಟನ್ ಪೆನ್ ೫೦೦ ಗಜಗಳ ದೂರಕ್ಕೆ ಪ್ರಕಾಶವನ್ನೀಯುವ ಟೋರ್ಚ್ ಲೈಟ್ ೧ ಫೇನ್ಸಿ ರಿಸ್ಟ್‌ವಾಚು ೧, ಬರ್ಮಾ ಟೈಂಪೀಸ್ ಒಂದು, ಅಥವಾ ಕ್ರೈಸ್ತೀ ಮೈಲ್‌ಗಾರ್ಡ ಲಿವರ್ ಪೊಕೆಟ್ ವಾಚ್ ಒಂದು ಧರ್ಮಾರ್ಥ ಸಿಗುವುದು ಪ್ರತಿಯೊಂದು ವಾಚಿಗೆ ೧೦ ವರ್ಷಗಳ ಗೇರಂಟಿ ಇದೆ ನಾಪಸಂತಿಯಾದರೆ ಹಣ ವಾಪಾಸ್ ಟಪಾಲ್ ಖರ್ಚ ಪ್ರತ್ಯೇಕ

ವಿಳಾಸ.— **Sharma Brothers & Co,**
Post Box 8419, section 58, CALCUTTA

ನೋಟೀಸು

ಕಾರ್ಕಳ ತಾಲೂಕು ಶಿರ್ತಾಡಿ ಗ್ರಾಮದ ಬೀಡು ಶಾಂತಿರಾಜ ಪೂವಣಿರ ಅಳಿಯ ನೇಮಿರಾಜ ಪೂವಣಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಮಾವ ಬೀಡು ಶಾಂತಿರಾಜ ಪೂವಣಿಯರು ನಮ್ಮ ಕುಟುಂಬದ ಸರ್ವಾದಿ ಸ್ಥಿರಚರ ಆಸ್ತಿಯ ಪ್ರಕೃತ ಆಡಳಿತೆದಾರರು. ಸದ್ರಿಯವರು ಸುಮಾರು 80 ವರ್ಷ ಪ್ರಾಯದ ವೃದ್ಧಾಪ್ಯದ ಕಣ್ಣು ಕಾಣದ ಕೆಪ್ಪನುಪ್ಪಿನವರಿರುತ್ತಾರೆ. ಸದ್ರಿಯವರ ಹೆಸರಲ್ಲಿ ನಮ್ಮ ಕುಟುಂಬದ ಸಮುಷ್ಟಿ ಹಕ್ಕಿನ ಸುಮಾರು 450 ಮುಡಿ ಅಕ್ಕಿಯೂ ನಗದಿಯಿಂದ ಸುಮಾರು 200/- ರೂಪಾಯಿ ಗೇಣಿ ಬರುವ ಆಸ್ತಿಗಳು ಶಿರ್ತಾಡಿ ಗ್ರಾಮದಲ್ಲಿ, ಕರಿಂಜೆಗ್ರಾಮ, ಹೊಸಪಟ್ಣ, ನಾರಾವಿ, ಈ ನಾಲ್ಕು ಗ್ರಾಮಗಳಲ್ಲಿರುತ್ತಾ, ಅದರ ಪಟ್ಟಾದಾಕ್ಲೆಯು ಅಳಿಯ ಕಟ್ಟಿಗೆ ಅನುಸರಿಸಿ ಈ ವರೆಗೂ ಅವರ ಹೆಸರಲ್ಲೇ ಇರುತ್ತದೆ. ಈಗ ಕೆಲವು ಸಮಯದ ಲಾಗಾಯ್ತು ಸದ್ರಿ ಶಾಂತಿರಾಜ ಪೂವಣಿರು ವೃದ್ಧಾಪ್ಯದ ದೆಸೆಯಿಂದ ಬುದ್ಧಿಸ್ವಾಧೀನತೆ ಇಲ್ಲದೆ ಅವರ ಮಕ್ಕಳು 1 ನಾಗರಾಜ ಭಂಗ, 2 ದೇವರಾಜ ಭಂಗ ಕೂಡಾ 2 ಜನರು ಕೂಡಿಕೊಂಡು ಅಕ್ರಮಲಭ್ಯ ಹೊಂದುವ ಇರಾದೆಯಿಂದ ನಮ್ಮ ಕುಟುಂಬದವರಿಗೂ ನಮ್ಮ ಮಾವನಿಗೂ ದ್ವೇಷಗಳನ್ನು ಹುಟ್ಟಿಸಿ ಸದ್ರಿ ಮೇಲೆ ಕಾಣಿಸಿದ ಆಸ್ತಿಗಳ ಹುಟ್ಟುವಳಿಯನ್ನೂ ಮತ್ತು ನಮ್ಮ ಶಿರ್ತಾಡಿ ಗ್ರಾಮದ ಬೀಡು ಎಂಬ ಕಾಯಂ ವಾಸ್ತವ್ಯದ ಮನೆಯಲ್ಲಿ ಇರುವ ಸುಮಾರು 2000 ರೂಪಾಯಿ ಕ್ರಯದಾಳುವ ಚರಸೊತ್ತುಗಳನ್ನೂ ಸದ್ರಿ ಶಾಂತಿರಾಜ ಪೂವಣಿರಿಂದ ಬರೆಯುವರಿಗೆ ಪರಾಧೀನ (ಪವರ್ ಪೆಟನ್ಟ) ಗೇಣಿ ವಸೂಲಿ ಹಕ್ಕು ಪರಾಬಾರೆ ಯಾ ಡಿಮಾಂಡು ನೋಟು ವಗೈರೆ ಮಾಡಿಸಿ ನಮ್ಮ ಕುಟುಂಬಕ್ಕೆ ಹೇರಳ ನಷ್ಟಪಡಿಸಬೇಕೆಂತಲೂ ಸದ್ರಿಯವರ ಮಕ್ಕಳು ಅಕ್ರಮಲಭ್ಯ ಹೊಂದುವ ಇರಾದೆಯಲ್ಲಿದ್ದಾರೆ ಆದುದರಿಂದ ಮೇಲೆ ಕಾಣಿಸಿದ ನಮ್ಮ ಮಾವನ ಮಕ್ಕಳ ಹೆಸರಲ್ಲಾಗಲೀ ಯಾ ಬೇರೆ ಜನರ ಹೆಸರಲ್ಲಾಗಲೀ ಈ ಮುಂಚೆ ಯಾ ಇನ್ನು ಮುಂದೆ ಮಾಡಿಕೊಂಡ ಪರಾಧೀನಗಳು ನಮ್ಮ ಸಮುಷ್ಟಿ ಹಕ್ಕಿನಸ್ಥಿರಚರ ಸೊತ್ತುಗಳ ಮೇಲಾಗಲೀ, ನಮ್ಮ ಮೇಲಾಗಲೀ ಬಾಧಿಸತಕ್ಕದ್ದಲ್ಲ. ಅಂಥಾ ಪರಾಧೀನಗಳು ಮಾಡಿದ್ದಲ್ಲಿ ಅವು ಸಿಂಧುವಲ್ಲ. ಅವರಿಂದ ಯಾವ ತರದ ಯಾ ಏನೊಂದು ರೂಪದ ಭದ್ರತೆ ವ ಪರಾಧೀನಗಳು ಮಾಡಿಕೊಂಡವರಿಗೆ ಏನೊಂದು ಸಿಂಧುವಾಗತಕ್ಕದ್ದಲ್ಲ ಎಂಬ ಸಂಗತಿಯನ್ನು ಈ ಮೂಲಕ ಸರ್ವ ಜನರ ಜಾಹೀರಾತಿ ಬಗ್ಗೆ ತಿಳಿಯಪಡಿಸುತ್ತೇನೆ

ಶಿರ್ತಾಡಿ ಬೀಡು, 2 8 1932 } ನೇಮಿರಾಜ ಪೂವಣಿ ರುಜು

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಉಡ್ಪಿ ಲಿಮಿಟೆಡ್,
ಉಡುಪಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗ ಕೊಡದೆ ಇದ್ದುದರಿಂದಲೂ ಸದರಿಯವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸು ಅವರಿಗೆ ಪಾವತಿ ಆಗದೆ ಇರುವ ಕಾರಣದಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ- ಸದರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ ವಿವೇಜು, ರಿಜಿಸ್ತ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ವ ಇತ್ಯಾಗೆ ಬಡ್ಡಿ ಕೂಡಿಸಿ ಇದೇ ತಾ 31–8–1932ರ ಒಳಗೆ ತಂದುಕೊಟ್ಟು, ಅಡವಿಟ್ಟ ನಗಗಳನ್ನು ಸದರಿಯವರು ಬಿಡಿಸಿಕೊಂಡು ಹೋಗದಿದ್ದರೆ, ಸದರಿಯವರು ಈಡಾಗಿಟ್ಟ ನಗಗಳು ಇದೇ ತಾ 13–9–1932ನೇ ಮಂಗಳವಾರ ಮಧ್ಯಾಹ್ನ ಘಂಟೆ 1ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುವು

ಕಟ್ಟಿಂಗೇರಿ ಸೀತಾರಾಮ ಹೆಬ್ಬಾರ್, J L. No. 674/29
ಮೊಬಲಗು ರೂ 60/-

ಹೇರೂರು ಮದಗದ ಸಂಕಯ್ಯಶೆಟ್ಟಿ, J. L No 716/29.
ಮೊಬಲಗು ರೂ 30/-

ಬಿಕು ಪೂಜಾರಿ, J L No. 023/30 ಮೊಬಲಗು 20/-

ಅಂಚಾರ್ ಕೃಷ್ಣಯ್ಯ ಶೆಟ್ಟಿ, J. L. No. 930/30.
ಮೊಬಲಗು ರೂ 112/

Office of the Corporation 8—8—1932 } **M. Shrinivas Prabhu,**
Agent.

ಸುಸಂಧಿ! ಕೆಲವೇ ಪ್ರತಿಗಳು!
ಶಾಲಾ ಕಾಲೇಜು, ಲ್ಯಾಬ್ರರಿಗಳಿಗೂ, ಗ್ರಂಥಕರ್ತರಿಗೂ ನಮ್ಮ ಜಿಲ್ಲೆಯ ಅನುಭವವನ್ನು ಮಾಡಲಿಚ್ಛಿಸುವವರಿಗೂ, ಬೇಕಾಗಿರುವ ಕ್ರೌನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ವೆಂಬ ಉದ್ಗ್ರಂಥ! ಬೆಲೆ ಪ್ರತಿಯೊಂದಕ್ಕೆ ಟ. ಪಿ. ಸಹಿತ ರೂ.2.
ಶಾರದಾ ಛಾಪಖಾನೆ,
ಮಂಗಳೂರು.

ಕಲ್ಕತ್ತದಲ್ಲಿ ಇನ್ನೊಬ್ಬರ ಮೇಲೆ ಗುಂಡು

ಕೊಲೆಗಾರನ ಪ್ರಾಣಹತ್ಯ!! ಎಲ್ಲಿಸನರ ಮರಣ!!!

ಶೌಕತಾಲಿಯವರ ಗುಟ್ಟು—ಮಗಳನ್ನು ಬಿಟ್ಟು ಅತ್ತೆಯನ್ನೇ ವಿವಾಹ!—ಇಜ್ಞೋಡಿ ಮಗ್ಗದ ಶೋಧನೆ!—ಹಿಂದೀಯರ ಸ್ನೇಹಕ್ಕಾಗಿ 'ಡಿಸ್‌ಮಿಸ್'!—ನೆಹೊಕಾಲಿಯಲ್ಲಿ 242 ಮಂದಿಗಳ ಜಲಸಮಾಧಿ—ಖಾದಿಯ ದುರ್ದೆಶೆ—ಮತವಾದವನ್ನು ಶಮನಗೊಳಿಸಲು ಬ್ರಿಟಿಷ ಸರಕಾರದ ಕ್ಷಿಪ್ರ ಯತ್ನ!—ವಿಠಲ್‌ಭಾಯಿಯವರ ಅಮೇರಿಕಾ ಸಂಚಾರ—ಡಾ। ಅನ್ಸಾರಿಯವರ ಗಾಂಧೀ ಭೇಟಿ ತಿರಸ್ಕಾರ—

ವ್ಯಾಪಾರಸ್ಥರಿಗೆ ಸುಸಂಧಿ!
ದೀಪಾವಳಿಯು ಸಮೀಪಿಸಿತಲ್ಲವೇ? ನಿಮಗೆ ಬೇಕಾಗುವ ವರ್ಗ, ಊರಿಗ ಪುಸ್ತಕಗಳೂ, ಆಮಂತ್ರಣ ಪತ್ರಿಕೆಗಳೂ ಅಗ್ಗದಲ್ಲಿ, ಅನುಕೂಲಾನುಸಾರವಾಗಿ, ಕ್ಲಪ್ತ ಸಮಯಕ್ಕೆ ಸಿಗಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬನ್ನಿರಿ. ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ.
ಶಾರದಾ ಛಾಪಖಾನೆ,
ಮಂಗಳೂರು.

ಕಲ್ಕತ್ತದಲ್ಲಿ ಗುಂಡು!

ಕಲ್ಕತ್ತದ ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕರಾದ ಸರ್ ಆಲ್ಫ್ರೆಡ್ ವಾಟ್ಸನ್‌ರವರು ತಾ. ೫ನೇ ದಿನ ಅಪರಾಹ್ನ ೪ ಘಂಟೆಗೆ ಮನೆಯಲ್ಲಿ ಊಟ ತೀರಿಸಿ, ತನ್ನ ಮೋಟರ್ ಕಾರಿನಲ್ಲಿ ಕುಳಿತು ಆಫೀಸಿಗೆ ಹೋದರು, ಅವರ ಆಫೀಸಿನ ಬಳಿ ಕಾರು ನಿಂತೊಡನೆ ಅಲ್ಲಿಗೆ ಒಬ್ಬ ಬಂಗಾಳೀ ತರುಣನು ತಟ್ಟನೆ ಓಡಿಬಂದು ತನ್ನ ಜೇಬಿನಿಂದ ರೈಫಲ್ ಒಂದನ್ನು ತೆಗೆದು ಕಾರಿನ ಮಗ್ಗುಲ ಕಿಟಕಿಯೊಳಗೆ ಕೈಯಿಕ್ಕಿ ಗುಂಡುಗಳನ್ನು ಸರಸರನೆ ಎಸೆದನು ದಿಗಿಲುಗೊಂಡರೂ ಭಯಭ್ರಾಂತರಾಗದ ವಾಟ್ಸನರು ಆ ಗುಂಡುಗಳನ್ನು ಹೇಗೋ ತಪ್ಪಿಸಿಕೊಂಡರು, ಅವರು ತಟ್ಟನೆ ಕೆಳಗಿಳಿದು ಆ ತರುಣನು ಮಗದೊಮ್ಮೆ ಗುಂಡುಗಳನ್ನು ಹಾರಿಸುವುದರೊಳಗೆ, ಅವನನ್ನು ಕೆಲವರ ಸಹಾಯದಿಂದ ಹಿಡಿಸಿದರು. ಸಮೀಪದಲ್ಲಿದ್ದ ಪೋಲೀಸನೂ ಅವರ ರಕ್ಷಣೆಗೆ ಬಂದನು, ಯುವಕನನ್ನು ಹಿಡಿಯಲಾಯಿತು ಅವನನ್ನು ಆಫೀಸಿನೊಳಗೆ ಎಳೆದೊಯ್ಯಬೇಕೆಂದಿದ್ದಾಗ, ಅವನು ಬಹಳವಾಗಿ ಹೋರಾಡಿ ತನ್ನ ಕೈಯನ್ನು ಜೇಬಿನೊಳಗೆ ತಟ್ಟನೆ ಹಾಕಿ ಏನನ್ನೋ ತೆಗೆದು ನುಂಗಿಬಿಟ್ಟನು – ಕೂಡಲೇ ಮೃತನಾದನು ಅವನು ಉಪಯೋಗಿಸಿದ ರಿವಾಲ್ವರು ಕಾರಿನೊಳಗಿತ್ತು. ಕೊಲೆಗಾರನ ಹೆಸರು ಅತುಲಕುಮಾರ ಸೇನನೆಂದೂ, ದೊಡ್ಡ ಕುಟುಂಬಸ್ಥನೆಂದೂ, ಕಲ್ಕತ್ತದ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯೆಂದೂ ತಿಳಿದುಬಂದಿದೆ ಅವನು ನುಂಗಿದುದು Potassium Cyanide ಎಂದು ಪರೀಕ್ಷೆಯ ನಂತರ ತಿಳಿದುಬಂದಿತು ಯುವಕನ ಜೇಬಿನಲ್ಲಿ ಮತ್ತೂ ಕೆಲವು ಗುಂಡುಗಳಿದ್ದುವು. ಒಂದು ಧೋತಿಯನ್ನೂ ಒಂದು ಕೋಟನ್ನೂ ಧರಿಸಿದ್ದನು ಸರ್ ವಾಟ್ಸನರು ಸುರಕ್ಷಿತರಾಗಿದ್ದು ನಿಚ್ಚದಂತೆ ತನ್ನ ಪತ್ರಿಕಾ ವ್ಯವಸಾಯದಲ್ಲಿ ಮಗ್ನರಾಗಿದ್ದಾರೆ

ಎಲ್ಲಿಸನರು ತೀರಿಕೊಂಡರು!

ಕಳೆದ ವಾರ ಪ್ರಕಟಿಸಿದ್ದಂತೆ ಟಿಪ್ಪೆರಾದಲ್ಲಿನ ಪೋಲೀಸ ಸುಪರಿಂಟೆಂಡೆಂಟರು ಗುಂಡಿನಿಂದ ಹೊಡೆಯಲ್ಪಟ್ಟು ಆಸ್ಪತ್ರೆಯನ್ನು ಸೇರಿದ್ದರಷ್ಟೆ! ಅವರನ್ನು ಢಕ್ಕಾದಲ್ಲಿ ಒಪರೇಶನ್ ಮಾಡಲಾಗಿ, ಅವರ ಬೆನ್ನಿನಿಂದಾಗಿ ಹೊಟ್ಟೆಯೊಳಗೆ ಸೇರಿಕೊಂಡ ಗುಂಡುಗಳನ್ನು ಹೊರತೆಗೆಯಲಾಯಿತು. ಒಪರೇಶನ್ ನಡೆದಾದ ಮೇಲೆ ಅವರು ಹೆಚ್ಚಿನ ಸೌಖ್ಯಗೊಂಡಂತೆ ಕಂಡುಬಂದಿತಾದರೂ ತಾ ೪ನೇ ದಿನ ಸ್ಮೃತಿಯನ್ನು ಕಳೆದುಕೊಂಡು ಪ್ರಾಣಾಪಾಯವೊದಗಿದ ಸೂಚನೆಯನ್ನು ಮಾಡಿದರು ತಾ ೫ನೇ ದಿನ ಸಂಜೆ ೬ ಅಂಕ್ಕೆ ಮರಣಹೊಂದಿದರು. ಮೃತರಿಗೆ ೪೦ ವರ್ಷ ಪ್ರಾಯ ೧೯೩೨ನೇ ದಸಂಬರ ೭ಕ್ಕೆ ಹಿಂದೂದೇಶಕ್ಕೆ ಬಂದಿದ್ದು, ಒಂಭತ್ತು ತಿಂಗಳ ಹಿಂದೆ ಟಿಪ್ಪೆರಾಕ್ಕೆ ವರ್ಗಾಯಿಸಲ್ಪಟ್ಟಿದ್ದರು. ಇವರ ಶವಸಂಸ್ಕಾರವು ಮಿಲಿಟರಿ ಗೌರವದಿಂದ ಢಕ್ಕಾದಲ್ಲಿ ಅನೇಕರ ಕೂಡುವಿಕೆಯಿಂದ ನಡೆಯಿತು ಸಹತಾಪ ತಂತಿಗಳನೇಕ ಬಂದಿದ್ದುವು. ಮೃತರಿಗೆ ಇಬ್ಬರು ಮಕ್ಕಳಿರುವರು ಸೋಮವಾರ ದಿನ ಅಲ್ಲಿಯ ಸರಕಾರೀ ಆಫೀಸುಗಳಿಗೆ ರಜೆಯಿದ್ದಿತು.

'ದೈವಭಕ್ತ'ರಿಗೆ ಸುಳ್ಳೇಕೆ?

ಅಲಿಘರದ ಹಕೀಮ್ ಡಾ। ಮುಖಿಸುದ್ದೀನ್ ಸರ್ಕಾರ್ ಎಂಬ ಮುಸಲ್ಮಾನ ಗೃಹಸ್ಥರೊಬ್ಬರು ತನ್ನೂರಾದ ಅಲಿಘರದಲ್ಲಿ ನಡೆದ ಒಂದು ವಿಚಿತ್ರ ಸುದ್ದಿಯನ್ನು ಈ ರೀತಿ ಪ್ರಕಟಿಸಿರುತ್ತಾರೆ 'ಪ್ರಥಮ ರೌಂಡ್‌ಟೇಬಲ್ ಪರಿಷತ್ತು ಜರಗಿದ ಕೆಲವು ತಿಂಗಳುಗಳ ನಂತರ ಅಲಿಘರದ ಯೂನಿಯನ್ ಕ್ಲಬ್ಬಿನಲ್ಲಿನ ಹಬೀಬ್ ಮಂದಿರದಲ್ಲಿ ಮೌಲಾನಾ ಶೌಕತಾಲಿ, ಸರ್ ಮಹಮದ್ ಶಾಫಿ, ಶೆರ್ವಾನಿ ಮೊದಲಾದ ಮುಂದಾಳುಗಳ ಸದಸ್ಯತನದಿಂದ ಒಂದು ಸಭೆಯು ಜರಗಿತು ಪ್ರತ್ಯೇಕ ಪ್ರಾತಿನಿಧ್ಯವೇ ಬೇಕಾದುದೆಂದು ಕೆಲವರು ಅಭಿಪ್ರಾಯಪಟ್ಟರು, ಆದರೆ ಶೆರ್ವಾನಿಯವರು ಜತೆಪ್ರಾತಿನಿಧ್ಯವನ್ನು ಸಮರ್ಥಿಸಿ ನುಡಿದರು. ಕೊನೆಗೆ ವೋಟು ತೆಗೆಯಲು, ಜತೆಪ್ರಾತಿನಿಧ್ಯವೇ ಬೇಕೆಂದು ನಿರ್ಧಾರ ಮಾಡಲಾಯಿತು. ತಮಗೆ ಸೋಲುಬಂದುದನ್ನು ಕಂಡು ಶೌಕತಾಲಿಯೇ ಮೊದಲಾದವರು ದಿಗ್ಭ್ರಮೆಗೊಂಡರು ಅವರೆಲ್ಲರೂ ಒಂದಾಗಿ ಜತೆಪ್ರಾತಿನಿಧ್ಯ ಸ್ವೀಕಾರದ ಠರಾವನ್ನು ಮುಂಜೂರಾಗಲು ಬಿಡಲಿಲ್ಲ. ಸಭೆಯು ಮುಕ್ತಾಯವಾಯಿತು. ಕೆಲವು ದಿನಗಳು ದಾಟಲು, ಪತ್ರಿಕೆಗಳಲ್ಲಿ "ಪ್ರತ್ಯೇಕ ಪ್ರಾತಿನಿಧ್ಯದ ಸಮರ್ಥನೆಯ ಠರಾವುಗಳಾದುವ"ೆಂದು ಸುಳ್ಳು ವಾರ್ತೆಯನ್ನು ಪ್ರಕಟಿಸಿದರು. ಈ ವಿಷಯವಾಗಿ ನಾನು ಶೌಕತಾಲಿಯವರೊಡನೆ ಕೇಳಲು, ಅವರು "ಬೇಗನೇ ನಾನು ಅಲಿಘರಕ್ಕೆ ಬರುವವನಿದ್ದೇನೆ ಆಗ ಎಲ್ಲಾ ವ್ಯವಸ್ಥೆ ಮಾಡುತ್ತೇನೆ" ಎಂದರು ಆದರೆ ಈ ಪುಣ್ಯಾತ್ಮರು ಇಷ್ಟರ ತನಕವೂ ಅಲಿಘರಕ್ಕೆ ಬಂದಿರುವುದೇ ಇಲ್ಲ"

ಮಗಳ ಬದಲಿಗೆ ಅತ್ತೆಯನ್ನೇ—

ಬಂಡಿಯೆಂಬಲ್ಲಿಂದ ವಿಚಿತ್ರವಾರ್ತೆಯೊಂದು - ಅಬ್ದುಲ್ ಘಫರ್ ಎಂಬ ತರುಣನೊಬ್ಬನು ೬ ವರುಷಗಳ ಹಿಂದೆ ಭರತಪುರದ ಎಬಾದತ್ ಶೇಕ್ ಎಂಬವರ ಮೂರು ವರುಷ ಪ್ರಾಯದ ಎಳೆಗೂಸನ್ನು ವಿವಾಹವಾದನು ಮಾವನ ಮನೆಯಲ್ಲೇ ಉಳಕೊಂಡನು ದಿನಗಳು ಕಳೆಯುತ್ತಾ ಅವನ ಪ್ರೇಮಬಾಣವು ಅತ್ತೆಯ ಕೊರಳನ್ನು ಸುತ್ತತೊಡಗಿತು ಅತ್ತೆ ಬಾನುಬೀಬಿಗೂ ಸಂತೋಷವಾಯಿತು – ಪ್ರೇಮದಲ್ಲಿ ಅವಳೂ ಹಿಂದೆಬೀಳಲಿಲ್ಲ ಒಂದು ದಿನ ಮಾವನು ಪರವೂರಿಗೆ ಹೋಗಿದ್ದ ಸುಸಂದರ್ಭದಲ್ಲಿ ಈ ವಿಚಿತ್ರ ಪ್ರಾಣಿಗಳು "ನಿಕಾ" ಕ್ರಮದಂತೆ ಮದುವೆಯಾಗಿಬಿಟ್ಟರು ಎಬಾದತ್ ಶೇಕರು ಬಂದು ನೋಡುತ್ತಾರೇನನ್ನು?— ಅವರ ತಲೆಗೆ ಸಿಡಿಲು ಬಡೆದಂತಾಯಿತೆಂದು ಬೇರೆ ಹೇಳಲವಶ್ಯವಿಲ್ಲ – ಪ್ರಣಯಿ ಪುರುಷ ಮತ್ತು ಪ್ರಣಯಿನಿಯರ ಮೇಲೆ ದಾವೆ ಹೂಡಿದ್ದಾರೆ ಮೆಜಿಸ್ಟ್ರೇಟರು ಸರ್ಕಲ್ ಆಫೀಸರರನ್ನು ಕಳುಹಿಸಿ ತನಿಕೆ ನಡೆಸುತ್ತಿದ್ದಾರೆ

ಎರಡು ವಸ್ತ್ರಗಳನ್ನು ನೇಯುವ ಮಗ್ಗ

ಅಮೃತಸರದ ಗವರ್ನಮೆಂಟು ಸೆಂಟ್ರಲ್ ವೀವಿಂಗ್ ಇನ್ಸ್ಟಿಟ್ಯೂಟ್ ಇದರ ಪ್ರಿನ್ಸಿಪಾಲರಾದ ಶ್ರೀ ಎನ್. ಬೆನರ್ಜಿ ಎಂಬವರು ೨ ವಸ್ತ್ರಗಳನ್ನು ಏಕಸಮಯದಲ್ಲಿ ನೇಯುವ ಮಗ್ಗವೊಂದನ್ನು ಕಂಡುಹಿಡಿದಿದ್ದಾರೆ ಇದನ್ನು ಅವರ ಹೆಸರಿನಲ್ಲಿ ಪೇಟೆಂಟ್ ಮಾಡಲಾಗಿದೆ ಹಿಂದೂದೇಶದ ಯಾವ ಮಗ್ಗದಲ್ಲೂ ಆಗದ ರೀತಿಯಲ್ಲಿ ಇದು ಎರಡು ವಸ್ತ್ರಗಳನ್ನು ನೇಯ್ದುಕೊಳ್ಳುವ ರೀತಿಯು ಆಶ್ಚರ್ಯಕರವಾಗಿದೆ ಇದನ್ನು ಪ್ರಯೋಗಿಸಲು ಕಷ್ಟವಿಲ್ಲ ಸಾಧಾರಣ ಮಗ್ಗಗಳಲ್ಲಿ ನೇಯಲು ಗೊತ್ತಿದ್ದವನಿಗೆ ಇದರಲ್ಲೂ ನೇಯಲು ಸಾಧ್ಯವಿದೆ ಇದರ ಜನನದಿಂದಾಗಿ ಮುಂದಿನ ಕೈಮಗ್ಗಗಳಲ್ಲಿ ನವಸುಧಾರಣೆಗಳಾಗಲಿರುವುವು ನಿರುದ್ಯೋಗಿಗಳಿಗೂ ಇದು ಸಹಾಯಕರವಾಗುವುದೆಂದು ತಿಳಿದುಬಂದಿದೆ.

"ಹಿಂದೀಯರ ಸ್ನೇಹವೇಕೆ?"

ಲಂಡನಿನಲ್ಲಿ 'ಸಾಮ್ರಾಜ್ಯ ದಿನ'ವು ಜರಗಿತು ಸಾವಿರಗಟ್ಟಳೆ ಜನರು ಆ ಸಮಾರಂಭದಲ್ಲಿ ಭಾಗವಹಿಸಿದರು ಆದರೆ ಅಲ್ಲಿಯ ಕೊವೆಂಟ್ರಿಯ ಶಾಲೆಯ ಉಪಾಧ್ಯಾಯಿನಿಯಾದ ಮಿಸ್ ಏಲ್‌ವಾರ್ಡ್ ಎಂಬವರು ತನ್ನ ಶಿಷ್ಯರ ಸಮೇತ ಅದರಲ್ಲಿ ಭಾಗವಹಿಸದೆ ಸುಮ್ಮನಿದ್ದಳು ಬೇರೆಯವರು ಕರೆದರೂ ಅವಳು ಅದಕ್ಕೊಪ್ಪಲಿಲ್ಲ ತಾನು ಮತಸುಧಾರಕಳೆಂದೂ, ಧರ್ಮಪಾಲನೆಯೇ ತನ್ನ ಹಟವೆಂದೂ ಆದರಿಂದ ತಾನು ಅಂತಹ ಸಮರಭಾವದ 'ಸಾಮ್ರಾಜ್ಯ ದಿನ'ದಲ್ಲಿ ಭಾಗವಹಿಸಲಾಗುವುದಿಲ್ಲವೆಂದೂ ಅವಳ ಪ್ರತಿಪಾದನೆ ಇದರಿಂದಾಗಿ ಅವಳನ್ನು ಕೆಲಸದಿಂದ ತೆಗೆದುಹಾಕಲಾಯಿತು ಈ ವಿಷಯವಾಗಿ ಬರ್ಮಿಂಗ್‌ಹೇಮಿನ ಬಿಷಪರೂ ಇನ್ನಿತರ ಅಧಿಕಾರಿಗಳೂ ಪಶ್ಚಾತ್ತಾಪಗೊಂಡು ವಿದ್ಯಾಸಮಿತಿಯವರು ಮಾಡಿದ ಕೃತ್ಯವು ಖಂಡನೀಯವೆಂದರು ಚರ್ಚೆ ನಡೆಯಿತು – ವಿದ್ಯಾಖಾತೆಯ ಅಧ್ಯಕ್ಷರು "ಮಿಸ್ ಏಲ್‌ವಾರ್ಡಳು ಧಾರ್ಮಿಕ ವಿಚಾರಪರವಾಗಿ ಹಟಸ್ಥಳಾದುದಲ್ಲ; ಅವಳ ಹಿಂದೆ ಹಿಂದೀಯ ಮಿತ್ರತ್ವವಿದೆ ಅದರಿಂದಾಗಿಯೇ ಅವಳು ಹೀಗೆ ಮಾಡಿದಳು" ಎಂದರು

ಖಾದಿಯ ದುರ್ದೆಶೆ

"ಸೆರೆಮನೆಯಿಂದ ಹೊರಗೆ ಬಂದೊಡನೆ ನನಗೆ ಕಾಣಸಿಕ್ಕಿದ ಜನಭರಿತ ಮದ್ಯದಂಗಡಿಗಳೂ, ಖಾದಿ ಕೇಂದ್ರಾಲಯಗಳಲ್ಲಿ ವಿಕ್ರಯವಾಗದೆ ಬಿದ್ದುಕೊಂಡಿರುವ ಖಾದಿ ರಾಶಿಯೂ ನನ್ನನ್ನು ವ್ಯಸನಕ್ಕೀಸಿದುವು. ಕೆಲವು ಖಾದಿ ಭಂಡಾರಗಳಲ್ಲಿ ವ್ಯಾಪಾರವಾಗದೆ ಕೆಲಸಗಾರರನ್ನು ಹಿಂದೆ ಕಳುಹಿಸಿರುವರು ಖಾದಿ ಧರಿಸುವವರನ್ನು ವಕ್ರದೃಷ್ಟಿಯಿಂದ ನೋಡುವುದರಿಂದಾಗಿ ಹೀಗಾಯಿತೆಂದು ನನಗೆ ತಿಳಿದುಬಂದಿದೆ ಅನಪಾಯಕರ ಜೀವನವನ್ನು ನಡೆಸಬೇಕಾದರೆ ಖಾದಿಯನ್ನುಡದಿರಬೇಕೆಂದು ಕೆಲವರು ತಿಳಿದುಕೊಂಡಿರುವರು ಇಂತಹ ಭಯಭೀತಿಗೊಳಗಾಗುವುದಕ್ಕಿಂತ ಮಿಗಿಲಾದ ಅನ್ಯಾಯವು ಬೇರೊಂದಿಲ್ಲ ಸರಕಾರಗಳು ಖಾದಿ ಧರಿಸುವ ತನ್ನ ಕೆಲಸಗಾರರನ್ನು ಬಹಿಷ್ಕರಿಸಲು ಸಾಧ್ಯವಿಲ್ಲ ಸ್ವದೇಶೀ ಪ್ರಚಾರವು ಎಲ್ಲರಿಂದಲೂ ಸ್ವಾಗತವಾಗಿದೆ, ಹಾಗಿರುವಾಗ ಉದ್ಯೋಗಸ್ಥರೂ ವಿದ್ಯಾರ್ಥಿಗಳೂ ಇನ್ನಿತರರೂ ಇಂತಹ ಭಯವನ್ನು ಕಟ್ಟಿಕೊಳ್ಳುವುದು ಅಸಂಗತವು ಗಿರಣಿಬಟ್ಟೆಗಳನ್ನುಡುವುದರಿಂದಾಗಿ ದೇಶಸೇವೆಯನ್ನು ಮಾಡಿದಂತಾಗುವುದಿಲ್ಲ ಆದುದರಿಂದ ಎಲ್ಲರೂ ಶುದ್ಧ ಖಾದಿಯನ್ನೇ ಉಡಬೇಕು" ಎಂದು ಶ್ರೀಯುತ ಸಿ. ರಾಜಗೋಪಾಲಾಚಾರ್ಯರು ಪ್ರಕಟಿಸಿರುವರು

ವಿ. ಜೆ. ಪಟೇಲರು

ಶ್ರೀಯುತರು ಹಿಂದೂದೇಶದ ಪರಿಸ್ಥಿತಿಗಳ ಕುರಿತು ವಿದೇಶಗಳಲ್ಲಿ ಸುಳ್ಳುವಾರ್ತೆಯನ್ನೂ ಹರಡುವುದನ್ನು ತಡೆಯುವುದಕ್ಕಾಗಿ ಡಬ್ಲಿನ್ ಮತ್ತು ಅಮೇರಿಕಗಳಲ್ಲಿ ತಕ್ಕ ಹಿಂದೀಯ ಅಧಿಕಾರೀ ಸಂಸ್ಥೆಯನ್ನು ನಿರ್ಮಿಸಲಿರುವರು

Notice.

"Sealed Tenders are invited by the undersigned for the supply of drugs & raw materials required for K T. B. Perdal Ayurvedic Dispensary. The tenders will be opened on 20th August at 2 p. m. in the Dispensary

Apply for further particulars:—

PERDAL S. K
2—8—1932

G. A AIAH,
Physician.

ನೀವು ಉಡುಪಿಗೆ ಬಂದಲ್ಲಿ, ಸೌಖ್ಯ ಮತ್ತು ಭದ್ರತೆಯನ್ನು ಪಡೆಯಲು
ಮರೆಯಬೇಡಿರಿ!!!

ಮೈಸೂರು ಕ್ಲಬ್, ಉಡುಪಿ.

ಯೋಗ್ಯವಾದ ಊಟ, ಸ್ನಾನ, ಟಿಫಿನ್, ಉಳಕೊಳ್ಳುವ, ಸಸ್ಯಾಹಾರ ವಿಶ್ರಾಂತಿ, ಮೇಜು, ಮಂಚ, ದೀಪ ಇತ್ಯಾದಿ ಸಹಿತ.
Up-to-date Boarding and Lodging. When you visit Udipi, be at home.
MYSORE CLUB, UDIPI.

[illegible] ಶಾಸ್ತ್ರೀಯವಾಗುವವು!!

ಶಿಮ್ಮತ್ತು ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಂ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಶಾಸ್ತ್ರದಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ [illegible] ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ನಡೆಯುತ್ತಿರುವ ಈ ಸ್ಥಾಪನೆಯಲ್ಲಿ ಸರ್ವ [illegible] ಬಾಧೆ ಕೊಡುವಂತಹಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹ್ಯಗಳು, ಘೃತಗಳು, ಚೂರ್ಣ, ವಟಿಕೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿನಲ್ಲಿ ತಯಾರ ಇರುವವು ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, [illegible] ಕಾಲ, ಪ್ರಾಯ, [illegible] ಕ್ರಮ, ಪ್ರಕೃತಿ ಇತ್ಯಾದಿ ಮೊದಲಾದ ಅವಶ್ಯ ವಿವರಗಳ ಅಭ್ಯಾಸ [illegible] ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು [illegible] ಬಹಳ ದಿನ [illegible] ಎಂಬ [illegible] ಸಂಗತಿಗಳಲ್ಲಿ ಎಷ್ಟು ಸ್ಪಷ್ಟ ಬರೆದರೆ ಅಂತಹ ವಿವರಗಳು [illegible] ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವದೆಯೂ [illegible] ಸಂಗತಿಗಳಲ್ಲಿ [illegible] ವ್ಯವಹಾರ ನಡೆಸಿದಲ್ಲಿ [illegible] ಕೊಡಲಾಗುವದಲ್ಲದೆ ಅವಶ್ಯ [illegible] ಅವರ ಅಗತ್ಯದ ಮದ್ದಿನ ಮಾಹಿತಿಗಳನ್ನು ಕೊಡುವದರಿಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವದರಿಯೂ ಸದಾ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ [illegible] ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು

[illegible] ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಂ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ ಕ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಖದ್ದರ್ ರೇಶ್ಮೆ ಮಡಿಗಳಿಗೆ ಗಮನ ಕೊಡಿರಿ

S U N & CO

Choukhumba Benares City

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕೆಟಲಾಗು 1 ಕಾಶೀನಕ್ಷೆ 1, ವಿಶ್ವೇಶ್ವರ ಪಟ 1 ಈ 3 ಸಾಮಾನಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ, ಕದಪಾಮ್ಸ್ ಪೇಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಊಲ್ಲನ್ ಚೌಕ, ಧಾವಳಿ, ನಾನಾ ತರ ತರದ ರುದ್ರಾಕ್ಷಿಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಖದ್ದರ್ ಮಡಿ–6 ಮೊಳ, 2 ಮೊಳ ಅಗಲ ರೂ 2ರಿಂದ ರೂ 3 ಮೊಳ 8ರದ್ದು 2–12–0ರಿಂದ ರೂ 4 10 ಮೊಳ, 2½ ಅಗಲ ರೂ 4ರಿಂದ ರೂ 5 ಮೊಳ 12 + 2½ ರೂ 5ರಿಂದ 6–8–0 ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತೆ, ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಕಂಬಾ, ಬನಾರಸ್ (ಕಾಶೀ)

ಮಿಶ್ರಣದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ಚಳಿಯ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೊ. ಆ. ದಾದರ್ ಮುಂಬಾಯಿ 14

Dr. H. L. Batliwalla, Sons & Co., Ltd.
Kadell Road, P O Dadar Bombay, 14

ತಂತಿ ವಿಳಾಸ–"CAVASPUR" Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ–ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್



ಲೋಧ್ರ–ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯೌಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದ ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ–ಇದು ಎಲ್ಲಾ ತರದ ಜ್ವರಗಳನ್ನು ನಿವಾರಣೆ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ–ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd, Bombay, 14

ದಿ ಝೂಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು'

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಇದು ಆಮಲಕ ಅನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯುನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ ನಾನಾ ವಿಧವಾದ ಮರ್ಬಲತ್ವ ಕೆಮ್ಮು ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ ಪುಷ್ಟಿಹೀನತೆ ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/– ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ 1/5 ¼ ಪಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು–ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು–ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು–ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು–ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು–ಮೈಸೂರು ಏಜಂಟರು–ಟಿ ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು–ಬಿ ಪೂಜಚ್‌ಲಾಲ್ ಕಂಪೆನಿ, ಚಿಕ್ಕಪೇಟೆ

☞ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ರಾಜಾ ರಾಮ ಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ

ಲೇಖಕರು:—ಗಂಗಾಪ್ರಸಾದ ಉಪಾಧ್ಯಾಯ, ಎಮ್ ಎ. ಅಲ್ಲಾಹಾಬಾದ್

ಅನುವಾದಕರು:—ಶ್ರೀ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ, ಮಂಗಳೂರು.

ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು. —

ಆದರೆ ಈ ಪರಿಣಾಮದಿಂದ ನಾನು ಯಾವ ಅಭಿಪ್ರಾಯವನ್ನು ತೆಗೆಯುವೆನೆಂದರೆ: ಪರಮಾತ್ಮನನ್ನು ತಿಳಿದುಕೊಳ್ಳಲಿಕ್ಕೆ ಮೂರ್ತಿಪೂಜೆಗಿಂತಲೂ ಹೆಚ್ಚಿನ ಉದ್ಯೋಗವನ್ನು ಮಾಡಬೇಕು. ಪರಂತು ಈ ತರದ ಉದ್ಯೋಗ ಮಾಡುವುದಂತಿರಲಿ, ಅದರ ಕುರಿತುಬರುವ ಪ್ರಸ್ತಾಪದಿಂದಲೇ ಅವರು ಕ್ರುದ್ಧರೂ ಅಪ್ರಸನ್ನರೂ ಆಗುವುದು ನೋಡಿದರೆ ಮನಸ್ಸಿಗೆ ಬಹಳ ದುಃಖವುಂಟಾಗುತ್ತದೆ.

ಲೇಖಾಂಕ ೨

“ನಾವು ಮೂರ್ತಿಯನ್ನು ದೇವರೆಂದು ನಂಬುವುದಿಲ್ಲ. ಅದು ನಮ್ಮ ಮಾನಸಿಕ ಏಕಸತೆಗೆ ಒಂದು ಮುಖ್ಯ ಸಾಧನೆ ಎಂದು ಅದರ ಮೇಲೆ ವಿಶ್ವಾಸವಿಡುತ್ತೇವೆ” ಎಂದು ಕೆಲವರು ಹೇಳುತ್ತಾರೆ. ಆದರೆ ರಾಮಮೋಹನ ರೋಯಿಗಳು ಈ ಅಭಿಪ್ರಾಯವನ್ನು ಸ್ವೀಕರಿಸುವುದಿಲ್ಲ. ಅವರು ಈ ಕುರಿತು ಏನು ಹೇಳುತ್ತಾರೆಂದರೆ: —

“Hindus of the present age, with a very few exceptions, have not the least idea that it is the attributes of the supreme Being, as figuratively represented by shapes corresponding to the nature of those attributes, they offer adoration and worship under the denomination of gods and goddesses. On the contrary, the slightest investigation will clearly satisfy every inquirer that it makes a material part of their system to hold as articles of faith all those particular circumstances, which are essential to belief in the independant existance of the objects of their idolatory as deities clothed with divine power (P.71)

ಅರ್ಥಾತ್ “ವರ್ತಮಾನ ಕಾಲದಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಮಿಕ್ಕ ಹಿಂದೂಗಳಲ್ಲಿ, ತಾವು ಯಾವ ದೇವಿ ದೇವತೆಗಳನ್ನು ಪೂಜಿಸುತ್ತೇವೋ ಅವು ಪರಬ್ರಹ್ಮನ ಗುಣಗಳ ಪ್ರತಿನಿಧಿ ರೂಪಗಳಾಗಿವೆ ಎಂಬ ಜ್ಞಾನವು ಸ್ವಲ್ಪವೂ ಇಲ್ಲ. ಇವರು ಅವುಗಳ ಸ್ವತಂತ್ರ ಸಂಸ್ಥೆಗಳನ್ನೇ (ಅವುಗಳೇ ದೇವರೆಂದು) ಪೂಜೆ ಮಾಡುತ್ತಾರೆಂಬ ವಿಷಯವು ಸ್ವಲ್ಪ ಮಾತ್ರವೇ ಶೋಧಿಸಿ ನೋಡಿದ್ದಲ್ಲಿ ತಿಳಿಯುವುದು”

“Locality of habitation and a mode of existance analogous to their own views of earthly things, are uniformly ascribed to each particular god Thus the devotees of Siva misconceiving the spirit of the scriptures, not only place an implicit credence in the seperate existance of Siva, but even regard him as an omnipotent being, the greatest of all the divinities, who, as they say, inhabit the northern mountains of Cailas, and that he is accompained by two wives and several children and surrounded with numerous attendants. In like manner the followers of Vishnu, mistaking the allegorical representations of the shastras for relation of real facts beleive him to be chief over all other gods and that he resides with ~~his wife and attendants on the summit of~~ heaven, Similar opinions are also held by the worshippers of Cali, in respect to that goddess. (P. 72)

ಲೋಕದಲ್ಲಿರುವ ಪ್ರತಿಯೊಂದು ಜೀವಿಗೆ ಜೀವಿಸಲಿಕ್ಕೆ ಒಂದು ಪ್ರತ್ಯೇಕ ಸ್ಥಾನ ಯಾ ವ್ಯವಸ್ಥೆಯು ಬೇಕಾಗುವಂತೆ ಪ್ರತಿಯೊಂದು ದೇವೀ ದೇವತೆಗಳಿಗೂ ಒಂದು ಸ್ಥಾನವು ಬೇಕಾಗುತ್ತದೆ. ಉದಾಹರಣಾರ್ಥವಾಗಿ ಶಿವನ ಆರಾಧನೆಯ ನಿಜವಾದ ತತ್ವವನ್ನು ಅರಿಯದೆ ಅಂಥವನೊಬ್ಬನು ಪ್ರತ್ಯೇಕ ಇದ್ದಾನೆ ಎಂದು ನಂಬುತ್ತಾರಲ್ಲದೆ ಆತನು ಸರ್ವ ಶಕ್ತಿವಂತನೂ ದೇವ ದೇವೋತ್ತಮನೂ, ಕೈಲಾಸವಾಸಿಯೂ, ಮಡದಿಮಕ್ಕಳು ದಾಸ ದಾಸಿಯರಿಂದ ಕೂಡಿದ ವ್ಯವಸ್ಥೆಯುಳ್ಳವನಾಗಿರುತ್ತಾನೆಂದು ವರ್ಣಿಸುತ್ತಾರೆ. ಇದೇ ಪ್ರಕಾರ ವೈಷ್ಣವರು ಶಾಸ್ತ್ರಗಳ ಆಲಂಕಾರಿಕ ತತ್ವಗಳನ್ನು ತಿಳಿದುಕೊಳ್ಳದೆ ವಿಷ್ಣು ಎಂಬವನು ಪತ್ನೀ ಸಮೇತನಾಗಿ ಸ್ವರ್ಗದಲ್ಲಿದ್ದು ದೇವಾದಿ ದೇವತೆಗಳಿಗೆಲ್ಲಾ ಒಡೆಯನೆಂದು ಹೇಳುತ್ತಾರೆ. ಕಾಳೀ ದೇವಿಯನ್ನು ಇದೇ ಪ್ರಕಾರ ಒಂದು ಪ್ರತ್ಯೇಕ ವಿಶೇಷಣದಿಂದ ಪ್ರತ್ಯೇಕ ಸ್ಥಾನದಲ್ಲಿ ಪೂಜಿಸುತ್ತಾರೆ. (ವಿಷ್ಣು ಶಿವಾದಿಗಳ ಕುರಿತು ಗ್ರಂಥಮಾಲೆಯಿಂದ ಹೊರಬಿದ್ದಿರುವ “ಪುರಾಣಗಳ ಲೀಲೆ” ಎಂಬ ಪುಸ್ತಕದಲ್ಲಿ ಪ್ರತ್ಯೇಕ ವರ್ಣಿಸುವೆವು. ಅನುವಾದಕ)

When they meet in such holy places as Haridwar, Prayag, Siva-canchi or Vishucanchi in the Dekhin, the adjustment of the part of precedence not only occasions the warmest verbal altercations, but sometimes even blows and violence (P 72)

ಇವರೆಲ್ಲರೂ ದಕ್ಷಿಣದ ಹರಿದ್ವಾರ, ಶಿವಕಾಂಚಿ, ವಿಷ್ಣುಕಾಂಚಿ, ಮುಂತಾದ ಕಡೆಗಳಲ್ಲಿ ಒಟ್ಟಿಗೆ ಸೇರುವಾಗ ಮುಂದಾಳುಗಳು ಯಾರಾಗಬೇಕು ಎಂಬುದರ ಕುರಿತು ಬರೇ ಮಾತಿನಿಂದಲೇ ಜಗಳವಲ್ಲದೆ ಹೊಡೆದಾಟವೂ ಕೂಡ ಆಗುತ್ತದೆ.

[ಸಶೇಷ]

ಯುವಕರ ದವಲತ್ತು! ಮುದುಕರ ಮದೋನ್ಮತ್ತು!!

ಲೇಖಕರು ಶ್ರೀ ಎಂ. ಬಿ. ಶೆಟ್ಟಿ, ಮುಂಬಾಯಿ.

ಜನತೆಯ ಹಾನಿಯೇ ದೇಶದ ಹಾನಿ ಎಂದು ಒಪ್ಪುವಿರಾದರೆ, ಯುವಕರೇ, ನೀವು ದವಲತ್ತಿಗಾಗಿ ಪಡೆಯುವ “ವರದಕ್ಷಿಣೆ” ಎಂಬ ರಾಕ್ಷಸೀ ಸ್ವಭಾವದ ಕುರಿತು ಒಂದಿಷ್ಟು ಚಿಂತಿಸಿರಿ! “ಪತಿಗರ್ಧ ಪತಿ, ಪತಿಗರ್ಧ ಸತಿ” ಎಂಬ ಮಾತಿಗನುಸಾರವಾಗಿ ಆಕೆಯ ಪಿತ್ರಾರ್ಜಿತ ಆಸ್ತಿಪಾಸ್ತಿಗಳಲ್ಲಿ ಅರ್ಧಾಂಶಕ್ಕೆ ತಾವು ಭಾಗಿಗಳಾಗುವಿರೇನು? ನಾಗರೀಕತೆಯು ತಲೆದೋರುತ್ತಾ ಬಂದಂತೆ ಯುವಕರು ರಾಕ್ಷಸೀ ಪದ್ಧತಿಗಳನ್ನು ಸ್ವಾಗತೀಕರಿಸುವುದೆಂದರೆ, ಹಾಸ್ಯಾಸ್ಪದವು. ಹಲವು ಮಾತಾಪಿತರು ಹೆಣ್ಣು ಮಕ್ಕಳನ್ನು ಪಡೆದು ಆ ಮಕ್ಕಳ ಜೀವಮಾನವನ್ನೇ ಮಣ್ಣುಪಾಲು ಮಾಡುತ್ತಿರುವುದಕ್ಕಾದರೂ, ನವಯುವಕರೇ ಕಾರಣೀಭೂತರೆಂದರೆ ತಪ್ಪಾಗದು.

ಈಗಿನ ಕಾಲದಲ್ಲಿ ಹೆಚ್ಚಾಗಿ ಆಂಗ್ಲ ವಿದ್ಯಾಭ್ಯಾಸಕ್ಕೊಳಪಟ್ಟ ಯುವಕರೇ ಇಂತಹ ಅನಾಚಾರಕ್ಕೆ ಎಡೆಕೊಟ್ಟು ತಮ್ಮ ವರದಕ್ಷಿಣೆಯನ್ನು ಏರಿಸುತ್ತಿರುವರು. ಇದನ್ನು ಕಂಡ (ಅಳಿಯ ಕಟ್ಟಿನ ಆಚಾರದ ಮೇರೆಗೆ ಬಂದು ಬೇಸತ್ತು ಕೇವಲ ಮೂರು ಸಲ ಭೋಜನದ ಆಶ್ರಯವುಳ್ಳ) ಬಡ ಕುಂಟಿಬರು ಕೂಡಾ ಸತಿಗೆ ಕೈನೀಡಬೇಕಾದರೆ, ಹಣದ ಚೀಲವು ಮುಂಚಿತವಾಗಿ ಕೈಗೆ ಬರಬೇಕೆಂಬರು. ಹಲವರು ಇದೇ ರೀತಿ ಎರಡು ಮೂರು ಮದುವೆಗಳನ್ನು ಮಾಡಿಕೊಂಡು ಈ ವಿವಾಹ ವ್ಯಾಪಾರದಿಂದಲೇ ಕೆಲವು ರೂಪಾಯಿಗಳನ್ನು ಸಂಪಾದಿಸುವುದೂ ಉಂಟು. ಹಲವು ವ್ಯಾಪಾರಗಳಂತೆ ಈಗ ಮದುವೆ ವ್ಯಾಪಾರವೊಂದು ಕೂಡಾ ಜಾರಿಗೆ ಬಂದಿದೆ ಎನ್ನಬೇಕಾಗುವುದು.

ಯುವಕರ ಈ ಅಶ್ರದ್ಧೆಯು ಮುದುಕರಿಗೊಂದು ಬೆಣ್ಣೆಯ ಮುದ್ದೆ. ಬಡ ತಾಯಿತಂದೆಯರು ತಮ್ಮ ಹೆಣ್ಣುಮಕ್ಕಳನ್ನು ವರಿಸುವ ವರನ ದಕ್ಷಿಣೆಯ ಕುರಿತು ಒಲುತರವಾಗಿ ದುಃಖಿಸುವಂತಾದರೂ ಕೇಳುವವರಾರು? ಇದೇ ಸುಸಮಯವೆಂದು ಹೊಂಚುಹಾಕುತ್ತಿರುವ, ಬಿಳೀ ಮೀಸೆ ಭೀಮಕಾಯ ವೃದ್ಧಯುವಕರು ತಮ್ಮ ವಿನಯವೊಂದನ್ನು ಮಾನಿನೀಮಣಿಯರ ಮಾತಾಪಿತರಿಗೆ ತೋರಿಸಿ, ಎಳೆಪ್ರಾಯದ ಸುಮಂಗಲೆಯರಿಗೆ ಕೈನೀಡಿ ಕರದೊಯ್ದು ಅವರ ಮನಸ್ಸನ್ನೇ ಕರಗಿಸಿ ಕಡೆಗೆ ಅವರು ತಮ್ಮ ಜೀವಮಾನವೇ ವ್ಯರ್ಥವೆಂದು ಕೊರಗಿ ಸಾಯುವಂತೆ ಕನ್ಯೆಯರ ವ್ಯವಸ್ಥೆಯನ್ನು ಮಾಡಿಬಿಡುವರು. ಇದಲ್ಲವೇ ಮುದುಕರಿಗೊಂದು ಮದೋನ್ಮತ್ತಿನ ಸಮಯವು?

ಇಷ್ಟಾದರೂ ಕೂಡಾ ನವಯುವಕರು ಒಂದಿಷ್ಟು ವಿಚಾರಿಸಲು ತೊಡಗಲೆಂದರೆ ಎಂತಹ ಅವಮಾನ! ಮುದುಕರ ಮೋಹದ ಗರ್ವದಿಂದಲೂ ಅಥವಾ ವರದಕ್ಷಿಣೆಯ ಆಶೆಯಿಂದಲೂ ತರುಣರು ತಮ್ಮ ವಯಸ್ಸಿಗೂ ಮಿಕ್ಕಿದ ಹೆಣ್ಣುಗಳನ್ನು ವರಿಸುತ್ತಿರುವರು. ಆದರೆ, ಅಲ್ಲಿ ಕೂಡಾ ಹೆಣ್ಣಿನ ನಿಶ್ಚಯಕ್ಕೂ ಮುಂಚಿತವಾಗಿ ವರದಕ್ಷಿಣೆಯು ನಿಶ್ಚಯವಾಗಬೇಕು. ಹಲವರೇನೋ ವರದಕ್ಷಿಣೆಯನ್ನು ತ್ಯಜಿಸುವೆವೆಂದು ಹೇಳುವರು. ಆದರೆ, ಕಾರ್ಯತಃ ಕೈಜಾರಿ ಮಾಡುವೆವೆಂಬ ಸಾಮರ್ಥ್ಯವು ಅವರಲ್ಲಿಲ್ಲ. “ಹಣ ಕಂಡರೆ ಹೆಣ ಬಾಯಿ ಬಿಡುವುದು” ಎಂಬ ನಾಣ್ಣುಡಿಯಂತೆ ಇವರು ಉಭಯ ಸಂಕಷ್ಟಗಳಿಗೊಳಗಾಗಿರಲೂ ಸಾಕು. ಅಗ್ನಿವೇದಿಕೆಯ ಮೇಲೆ ನಿಂತು ವರದಕ್ಷಿಣೆ, ಬಾಲ್ಯ ವಿವಾಹ ಇತ್ಯಾದಿಗಳನ್ನು ಸಂಸದ್ಭಾಷಣದಿಂದ ಖಂಡಿಸಿ ಮಾತಾಡಿದ ನವೀನ ಉಜ್ವಲ ಸುಧಾರಕ ಪಂಡಿತರುಗಳೇ ಕಡೆಗೆ ಇಂತಹ ಕುರೀತಿಗಳಿಗೊಳಪಡುತ್ತಲಿರುವರು! ವಿಚಾರಿಸಿದರೆ ಇವರ ಅಂತಹ ಭಾಷಣಗಳು ಕಡೆಗೆ ಪಾಷಾಣವನ್ನೆ ಪಾನಮಾಡಿದಂತಾಗುವುದು ನಿಜವಲ್ಲವೇ? ಶಾಲೆಯೊಳ್ಳಿಂದು ಮನೆಯೊಳಗೊಂದು ಬಗೆದರೆ ಕಡೆಗೆ ಹುಲ್ಲು ಮೇಯುವ ಮೂಕಪ್ರಾಣಿಗಳಿಗೊಂದಕ್ಕೆ ಸಮಾನನಲ್ಲವೇ?

ಕೆಲವರು ಹಿರಿಯರ ಒತ್ತಾಯದ ಮೇಲೆ ಹೊತ್ತೆವೆಂಬರು. ಬಾಳುಗೆಡಿಸುವ ಹಾಳು ಪದ್ಧತಿಗಳನ್ನುಪದೇಶಿಸುವ ಹಿರಿಯರ ಪಶುವಿಯುಕ್ತರನ್ನು ಹಿರಿಯರೆಂದು ಭಾವಿಸಿ ವಿಧೇಯರಾಗಿರುವುದು ಕಿರಿಯರ ಲಕ್ಷಣವೆಂದು ನಾನೆಂದೂ ಹೇಳಲಾರೆ. ಪೂರ್ವಿಕರಿಂದ ನಡೆದು ಬಂದ ವರದಕ್ಷಿಣೆಯ ಕಟ್ಟನ್ನು ಬಿಡಬಾರದೆಂದುಸುರುವ ಮಹನೀಯರೆಷ್ಟು ಮಂದಿ ಬೇಕು? ಇವರು ಹಿರಿಯರಿಂದ ಇಂತಹ ಕೆಲವು ನೀಚ ಕಾರಗಳನ್ನು ಮಾತ್ರ ಕಲಿತಿರುವರೇ ಹೊರತು ಇನ್ನೆಷ್ಟೋ ಪ್ರಮುಖ್ಯ ವಿಷಯಗಳಲ್ಲಿ ಅವರನ್ನು ಹಿಂಬಾಲಿಸದಿರುವುದು ಶೋಚನೀಯವು.

ದೃಢಕಾಯರೂ, ಶ್ರಮಸಹಿಷ್ಣುಗಳೂ, ಉತ್ಸಾಹಶೀಲರೂ ಆದ ನಮ್ಮ ಹಿರಿಯರನ್ನು ಹಿಂಬಾಲಿಸುವ ಕಿರಿಯರು ನಾವೇ! ಅವರಲ್ಲಿದ್ದ ಲಕ್ಷಣಗಳು ನಮ್ಮನ್ನೇಕೆ ಅಗಲಿರುವುವು? ನಮ್ಮ ಹಿರಿಯರಿಗೆ ಹಾಲು, ತುಪ್ಪ, ಮಧು, ಇತ್ಯಾದಿಗಳೇ ಮರ್ಯಾದಾರ್ಥವಾಗಿ ಸಾಕಾಗಿದ್ದುವು. ಈ ನವನಾಗರೀಕತೆಯ ಪ್ರಧಾನಾಂಗವಾಗಿರುವ ಸಿಗರೇಟ್, ಬೀಡಿ, ಚಾ, ಕಾಫಿ, ಮದ್ಯ ಇತ್ಯಾದಿಗಳ ವ್ಯವಹಾರದಿಂದ ಅವರು ಸಂಪೂರ್ಣ ಅನಭಿಜ್ಞರಾಗಿದ್ದರು. ಮನೋರಂಜನೆಗಾಗಿ ಅರಣ್ಯಸಂಚಾರ, ಸಮುದ್ರದಡದಲ್ಲಿ ಹವಾ ತೆಗೆದುಕೊಳ್ಳಲು ಸಂಚರಿಸುವುದು, ಜಲಪೂರ್ಣವಾದ ನದಿಯನ್ನು ಈಜಾಡಿ ಪಾರಾಗುವುದು ಇತ್ಯಾದಿ ವ್ಯಾಯಾಮಗಳಿದ್ದುವು. ಈಗಿನ ದುರಾಚಾರ ಮಾರ್ಗಪ್ರದರ್ಶಕ ಸಿನೆಮ, ನಾಟಕ ನರ್ತನ ಇತ್ಯಾದಿಗಳು ಆವಿಷ್ಕಾರಗೊಂಡಿರಲಿಲ್ಲ. ‘ಸಮಾಜಸುಧಾರಕ’ರೆಂದೆನಿಸಿಕೊಂಡಿರುವ ಈಗಿನ ನವಯುವಕರು ಇಂತಹ ವಿಷಯಗಳಲ್ಲಿ ಕಣ್ಣುಮುಚ್ಚಿ ನಿದ್ದೆಹೋಗ ತೊಡಗಿದ್ದಲ್ಲಿ ಆ ನಾಮಧೇಯವು ಎಂದೂ ಒಪ್ಪುವ ಹಾಗಿಲ್ಲ. “ಸಮಾಜ ಪತನರು” ಎಂಬ ಬಿರುದಾವಳಿಯೇ ಉತ್ತಮವು.

ದಕ್ಷಿಣೆಯನ್ನೀಯದ ಊಟವು ಹೇಗೆ ಬ್ರಾಹ್ಮಣನಿಗೆ ರುಚಿಸದೋ, ಅಂತೆಯೇ ವರದಕ್ಷಿಣೆಯನ್ನು ಪಡೆಯದೆ ತೃಪ್ತರಾಗದ ಯುವಕರು ಇನ್ನಾದರೂ ಎಚ್ಚತ್ತು ತಮ್ಮ ದಿವ್ಯದೃಷ್ಟಿಯನ್ನು ಈ ಪದ್ಧತಿಯು ಅಳಿದುಹೋಗಿರುವ ಕೆಲವು ಸಮಾಜಗಳ ಕಡೆಗಿಟ್ಟು ಅವರ ಜೀವಮಾನವು ಎಷ್ಟು ಸುಗಮವಾಗಿರುವುದೆಂದು ಊಹಿಸುವುದುತ್ತಮವು. ಪುರಾತನ ಕಾಲದಿಂದಲೂ ಕೊಂಡಾಡಲ್ಪಟ್ಟ ಗೃಹಸ್ಥಾಶ್ರಮವನ್ನು ಇಂದು ನಿಂದೆಗೊಳಪಡಿಸಿದ್ದಲ್ಲಿ ಇದೀಗ ನವೀನ ಗೃಹಸ್ಥಾಶ್ರಮವೆಂದೇ ಕರೆಯಲಾಗುವುದು. ಸುಜ್ಞಾನಿಗಳೂ, ಶ್ರೀಮಂತರೂ, ಸಮಾಜದೇಳಿಗೆಯನ್ನು ಬಯಸಬೇಕು ಈ ಹಾಳು ಪದ್ಧತಿಯು ಇನ್ನು ಹೆಚ್ಚು ಕಾಲ ಬಾಳದಂತೆ ಕಿತ್ತೊಗೆಯಬೇಕು. ಆಗ ಮಾತ್ರ ದಾಂಪತ್ಯವು ಸುಗಮವಾಗುವುದು. ಸಮಾಜದ ಉನ್ನತಿಯನ್ನು ಬಯಸದ ಮನುಷ್ಯನು ದೇಹದ ಹಾಗೂ ದೇಶದ ಹಿತವನ್ನು ಬಯಸುವನೆಂದು ತಿಳಿಯಲಾಗದು.

ಭಾಗ್ಯಹೀನ ಭಾರತ ಯುವಕರೇ! ಎದ್ದೇಳಿರಿ! ನಮ್ಮ ಜನಾಂಗವು ನಮ್ಮಿಂದಲೇ ಉನ್ನತಿಯಾಗಲಿರುವುದರಿಂದ, ತೀಳಗೇಡಿಗಳಂತೆ ಮುಗ್ಗರಿಸದೆ, ಅನ್ಯ ಜನಾಂಗದವರಂತೆ ಮುಂದುವರಿಯಲು ಯತ್ನಿಸಿರಿ. ಒಡವರನೇಕರ ಕತ್ತನ್ನು ಮುರಿಯುವ ವರದಕ್ಷಿಣೆಯ ಹೆಸರೇ ತಲೆದೋರದಿರಲಿ! ಇನ್ನೂ ಅನೇಕ ಅನಾಗರೀಕ ಪದ್ಧತಿಗಳು ನಮ್ಮ ಸಮಾಜಗಳಲ್ಲಿ ಲಭಿಸುವುದು; ಅಂಥವುಗಳನ್ನು ವಿಮರ್ಶಿಸುವ ಭಾರವು ನಮ್ಮ ಮೇಲೆ ಹೊಂದಿಕೊಂಡಿದೆ. ಆಗ ಮಾತ್ರ ದೇಹಬಲವನ್ನು ಹೆಚ್ಚಿಸುವ ಆಶೆಯು ತಲೆದೋರುವುದು. ದೇಹಬಲವೇ ದೇಶಬಲಕ್ಕೆ ಮೂಲ ಕಾರಣವಾಗಿರುವುದರಿಂದ ತನ್ನಷ್ಟಕ್ಕೆ ತಾನೇ ದೇಶದ ಹಿತಚಿಂತನೆಯು ಮೊಳಕೆಗೊಳದಿರದು.

(೯ನೇ ಪುಟವನ್ನು ನೋಡಿರಿ)

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಶೂರೆನ್ಸ್ ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದು.)

ಒಟ್ಟು ವಿಮಾ ಹಣವು ೩೦೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು. ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ. ಗಳಿಂತ ಹೆಚ್ಚಿಗಿರುವುದು. ಒಟ್ಟು ಪ್ರಾಪ್ತಿ ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಕೆಗಳ ಮೇಲಿನ ನ್ಯಾಯ್ಯುಕ್ತ ಕ್ಲೇಮುಗಳು ಹಿಂದೀ ನಾಣ್ಯಗಳಲ್ಲಿಯೇ ಕೊಡಗಿಸಲ್ಪಡುವುವು.

ಬೇಕಾಗಿದೆ. ಧಾರವಾಡ, ವಿಜಾಪುರ, ಬೆಳಗಾಂವ್, ಕಾರವಾರ, ಸೋಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು. ಹೆಚ್ಚಿನ ಮಾಹಿತಿಗಾಗಿ ಮುರವಾನಜಿ ಕ್ಯಾಂಡ ಸನ್ಸ, ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

"If every Wife knew what every Widow knows every Husband would be Insured.'

PLACE YOUR LIFE ASSURANCE WITH

THE SOUTH INDIAN.

Securing for your clients: –

1. **Low rates of Premium**
2. **Liberal Policy Conditions.**

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to:—

H. R. K. IYENGAR.
Chief Agent
The S. I. G A Co. Ltd.,
Sanyasiguddy, MANGALORE.

Managing Agents –

K. C. PANDALAI & CO.
7 8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ಡನಲ್ಲಿ ವಿಮೆಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ **ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು.**

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ,
ದಿ ಎಸ್ ಐ. ಜಿ. ಎ. ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡ ಮಂಗಳೂರು

ಮೇನೇಜಿಂಗ್ ಏಜಂಟರು.—

ಕೆ. ಸಿ. ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ. ಟಿ. ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0

"ಬಿಷಕ್‌ರತ್ನ" ಸಾಳ್ವದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್; ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಊರಿಗೆ ಮಾತ್ರ.

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ನಮ್ಮ ಸೇವನೆಮಾಡುವುದರಿಂದ ಜಾದುವಿನಂತೆ ಪರಿಣಾಮವಾಗುವುದು ಮೂರು ದಿವಸಗಳಲ್ಲಿ ಬೇನೆ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ. ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ. ೨—೦—೦.

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ಸಿಂಡಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ಧೀಪನ ತೇಜ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೩.

ವಿಳಾಸ:— **ಶಕ್ತಿಸುಧಾ ಕಾರ್ಯಾಲಯ.**
23 ಕಾಂಬಾರವಾಡಿ 4ನೇ ಗಲ್ಲಿ,
ಮುಂಬಯಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳರಿಂದ ರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ,

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಜ್ಜಿಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು.

ಪುಸ್ತಕ ದೊರೆಯುವ ಸ್ಥಳ.—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ - ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚೆಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಸ್ಥಳೀಯ—ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. [illegible] ಟಪ್ಪಾಲು ಹಾಸಲು ಸೇರಿ ರೂಪಾಯಿ 2-12-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲ್ಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುಕ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೯ನೇ ಶುಕ್ರವಾರ ಆಗೋಸ್ಟ್ ೧೯೩೨ (19-8-'32.) ಸಂಚಿಕೆ ೩೪

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR. & Mangalore**

ಹೆಡ್ ಆಫೀಸು: — ಉಡುಪಿ. ಶಾಖೆ — ಕುಂದಾಪುರ. ಮತ್ತು ಮಂಗಳೂರು.

Authorised Capital Rs. 3,50,000. Subscribed & Called up Rs. 2,25,000.

ನಿಯಮಿತ ಮೂಲಧನ ರೂ. 3,50,000- ಚಂದಾ ಹಾಕಲಿಕ್ಕೆ ಅರ್ಪಿಸಿದ ನ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST DAY OF JULY, 1932.

	CAPITAL AND LIABILITIES.			PROPERTY AND ASSETS	
1	Paid up Capital	Rs. 2,25,000-0-0	1	Premises, Building, Furniture etc.	Rs. 64,460- 6- 6
2	Reserve and other funds	" 2,22,705-0-0	2	Government securities	" 3,30,788- 4- 0
3	Deposits	" 21,10,093- 9-7	3	Authorised Investments	" 20,33,156 15- 6
4	Due to Bankers	" 1,610-10-4	4	Bills for collection	6,486- 0- 0
5	Sundries	" 73,971- 1-0	5	Sundries	" 25,015-13-11
6	Bills for collection per contra	6,486- 0-0	6	Cash in hand & with bankers.	" 1,79958-13-0
	Total	26,39,866-4-11		Total	26,39,866-4-11

UDIPI 4-8-'32.

N. ANANDA RAO,
Secretary & Manager.

(Regd.

ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೀ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

[illegible] — [illegible] ಕಂಪೆನಿ, ಮಂಗಳೂರು.

INSURE WITH

The Popular Insurance Co. Ltd.

Head Office:-MANGALORE, S. India.

First of its kind in the West Coast.

CHAIRMAN:
Dewan Bahadur N. Subba Rao.

STRIKING FEATURES

Policy Conditions Liberal!
Claims Settlement Prompt!

MANAGEMENT PURELY INDIAN.

Ensure the Absolute Safety, Comfort and Happiness of your Dear Ones.

WANTED INFLUENTIAL AGENTS.
LIBERAL TERMS TO COMPETENT MEN

For further particulars apply to the Head Office.

ಆಯಾಸಗೊಂಡರೆ ನಿಮ್ಮ ನರಗಳು ವಿಶ್ರಾಂತಿಯನ್ನೂ ನಿದ್ರೆಯನ್ನೂ ಕೊಡುವುದಿಲ್ಲ:

ದಿನಂಪ್ರತಿಯ ಸುಖಜೀವನಕ್ಕೆ ಅಗತ್ಯವಿರುವ ದೈಹಿಕ ಸಮಾಧಾನವೂ ಮಾನಸಿಕ ವಿಶ್ರಾಂತಿಯೂ, ರಾತ್ರಿ ಶಾಂತತೆಯೂ, ಸುಖನಿದ್ರೆಯೂ ನಿಮ್ಮ ನರಗಳು ಸುಕ್ರಮವಾಗಿದ್ದರೆ ಮಾತ್ರ ಲಭಿಸುವುವು

ಅಶಾಂತತೆಯನ್ನುಂಟುಮಾಡುವ ನರಗಳೂ, ಅಸುಖವನ್ನುಂಟುಮಾಡುವ ನರಗಳೂ, ನಿದ್ರೆಯನ್ನು ಅಸಾಧ್ಯವಾಗಿ ಮಾಡುವ ನರಗಳೂ ಸರಿಯಾದ ಪೋಷಣೆಯಿಲ್ಲದವುಗಳು. ಕೆಲಸ, ಬೇಸರ, ಆವೇಶಗಳಿಂದ ಉದ್ವಿಗ್ನಗೊಂಡ ನರಗಳ ಅಣುಗಳನ್ನು ಪೋಷಿಸಬೇಕು, ನರಗಳನ್ನು ಸಾಕುವುದರಿಂದಾಗಿ ಮಾತ್ರ ಇದು ಸಾಧ್ಯವಾಗುತ್ತದೆ

"ಓವಲ್‌ಟಿನ್"ನನ್ನು ನೀವು ಸೇವಿಸುವುದರಿಂದ ನಿಮ್ಮ ನರಗಳಿಗೆ ಎಲ್ಲಾ ಬಗೆಯ ಪೋಷಣೆಯೂ ಸಿಕ್ಕಿ ನಿಮ್ಮ ನರಗಳು ದೃಢವಾಗುವುವು. ಈ ಅಮೂಲ್ಯ ಟೋನಿಕ್ಕು, ನಿಸರ್ಗದ ಅತ್ಯುತ್ತಮ ಪಾನೀಯ ಇದರ ಸಂಪೂರ್ಣ ಶುದ್ಧತೆಯ ವಿಷಯ 'ಗೇರಂಟಿ'ಯಿದೆ ಇದು ನರಗಳನ್ನು ಸಲಹುತ್ತದೆ, ಅವುಗಳನ್ನು ಶಾಂತಗೊಳಿಸಿ ಬಲಪಡಿಸುತ್ತವೆ, ನಿಮಗೆ ಶಾಂತಿಯನ್ನೂ, ಸಮಾಧಾನವನ್ನೂ, ಸುಖನಿದ್ರೆಯನ್ನೂ ಕೊಡುತ್ತದೆ, ಆರೋಗ್ಯವೂ ಶಕ್ತಿಯೂ "ಓವಲ್‌ಟಿನ್"ನನ್ನು ಉಪಯೋಗಿಸುವುದರಿಂದ ಲಭಿಸುತ್ತದೆ.

ಅತ್ಯುತ್ತಮವಾದ "ಓವಲ್‌ಟಿನ್"ಗಿಂತ ಬೇರೊಂದು ವಸ್ತುವಿಲ್ಲ. ಎಲ್ಲಾ ಬಗೆಯ ಅನುಕರಣೀಯ ಪಾನೀಯಗಳನ್ನು ತಿರಸ್ಕರಿಸಿರಿ, ಅವುಗಳು ಶಾಸ್ತ್ರೀಯ ರೀತ್ಯಾ ತಯಾರಿಸಲ್ಪಟ್ಟವುಗಳಲ್ಲ.

ಅತೀ ಶುದ್ಧ ಮತ್ತು ಅತ್ಯುತ್ತಮ—
ಕೈ ಸೋಂಕದಿರುವಂತಹದ್ದು

OVALTINE
TONIC FOOD BEVERAGE

ಏಜಂಟರು
ಜೇಮ್ಸ್ ರೈಟ್ 8೦ ಎ. ರಿಪನ್ ಸ್ಟ್ರೀಟ್, ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸು ಮತ್ತು ರಂಗೂನಿನಲ್ಲಿ

ಎಲ್ಲಾ ಕೆಮಿಸ್ಟರದಲ್ಲಿಯೂ, ಸ್ಟೋರುಗಳಲ್ಲಿಯೂ ದೊರೆಯುತ್ತದೆ.

"ಓವಲ್‌ಟಿನ್" ಸೇವಿಸುವಾಗ ಅದರೊಡನೆ "ಓವಲ್‌ಟಿನ್" ರಸ್ಕುಗಳನ್ನೂ ಸೇವಿಸಿರಿ. ಅವುಗಳು ನರಗಳನ್ನು ಶಕ್ತಿಯುತವಾಗಿ ಮಾಡುತ್ತವೆ ಬಹಳ ಫಲಕಾರಿ, ಶುದ್ಧ ಮತ್ತು ಅತ್ಯುತ್ತಮ ಸುವಾಸನೆಯುಳ್ಳದ್ದು ಬೆಣ್ಣೆ ಅಥವಾ ಹಣ್ಣುಗಳೊಡನೆ ತೆಗೆದುಕೊಳ್ಳಬಹುದು. ಬಿಸ್ಕೂಟುಗಳಿಗಿಂತ ಅತ್ಯಂತ ಉತ್ತಮವಿರುತ್ತದೆ.

OV/83

ಪುತ್ತೂರಿನಲ್ಲಿ ಸ್ವದೇಶಾಭಿಮಾನಿಯ ಏಜಂಟರನ್ನಾಗಿ
ಶ್ರೀ ಜಿ. ಎಸ್. ಲಕ್ಷ್ಮಣ ಪೈ ಇವರನ್ನು ನೇಮಿಸಲಾಗಿದೆ.
ಮೇನೇಜರ್

ಕಟ್ಟಿದ
ಹಲ್ಲುಗಳು.

ಡಾಕ್ಟರ್ ಬಿ. ವೆಂಕಟ್ರಾವ್,
ಎಲ್. ಎಮ್. ಪಿ., ಎಲ್. ಡಿ. ಎಸ್. ಸಿ. (ಮದ್ರಾಸ್,)
ಫಿಸಿಶಿಯನ್, ಸರ್ಜನ್ ಮತ್ತು ದಂತವೈದ್ಯ,
ಹಳೆಯ ಟಪ್ಪಾಲುಕಟ್ಟೆಯ ಕಟ್ಟೋಣ,
ರಥಬೀದಿ, ಮಂಗಳೂರು.

ಇವರು ಎಲ್ಲಾ ತರದ ಹಲ್ಲು ರೋಗಗಳಿಗೆ ಶಾಸ್ತ್ರೀಯ ರೀತಿಗನುಸಾರವಾಗಿ ಚಿಕಿತ್ಸೆ ಮಾಡುತ್ತಾರೆ; ಮತ್ತು ಬೇಕಾದಲ್ಲಿಗೆ ಹೊಸ ಕೃತಕ ಹಲ್ಲುಗಳನ್ನೂ ಚಿನ್ನದ ಹಲ್ಲುಗಳನ್ನೂ ಬಹಳ ಕಡಿಮೆ ದರದಲ್ಲಿ ಕಟ್ಟುತ್ತಾರೆ.

ಬಿಸಿಲುಕುದುರೆ

"ಅದೋ! ದೂರದಲ್ಲಿ ಜಲಾಶಯವೂ ಸರೋವರವೂ ಅದರ ಬಳಿ ಸುಂದರವಾದ ಅರಮನೆಯೂ ಕಾಣುತ್ತಿದೆ, ಬಹಳ ತೃಷೆಯಾಯಿತು, ಬೇಗ ಓಡೋಣ, ಓಡೋಣ!

ಛಿ, ಛಿ! ಅದು ಜಲಾಶಯವೂ ಅಲ್ಲ, ಸರೋವರವೂ ಅಲ್ಲ, ಬಹಳ ಸುಂದರವಾದ ಅರಮನೆಯೂ ಅಲ್ಲ. ಅದು ಬಿಸಿ [illegible] ಥಳಥಳಿಸುವಿಕೆಯಿಂದುಂಟಾದ, ಮಾಯಾಜಾಲದ [illegible] ಬಿಸಿಲುಕುದುರೆ! ಅದನ್ನು ನಂಬಬೇಡ. ಈ ಮರುಭೂಮಿಯಲ್ಲಿ ಸರೋವರವೆಲ್ಲಿಂದ? ಅರಮನೆಯೆಲ್ಲಿಂದ?

* * * *

ಅದೋ, ಆ ಅರಮನೆಯ ಹೊರಗಡೆ ತೂಗಹಾಕಲ್ಪಟ್ಟಿರುವ ಪಟ್ಟಿಯಲ್ಲಿ "ಸ್ವಾತಂತ್ರ್ಯ ಸರೋವರ"ವೆಂದು ಬರೆಯಲ್ಪಟ್ಟಿರುವುದು ಕಾಣುತ್ತಿದೆಯಲ್ಲ, ಸುಳ್ಳೇ?

* * * *

ಮೂರ್ಖ! ಅದು ಕಾಣುವುದು ಮಾತ್ರ. ನಾವು ಮುಂದ ಮುಂದಕ್ಕೆ ಹೋದಂತೆ ಅದು ಹಿಂದಹಿಂದಕ್ಕೆ ಹೋಗುತ್ತದೆ. ಎಷ್ಟು ದೂರ ನಡೆದರೂ, ಎಷ್ಟು ದಣಿದರೂ ಸರೋವರವಾದರೂ ಅರಮನೆಯಾದರೂ ಕಾಣಲಾರವು

* * * *

ಹಾ! ದಾಹವಾಗುತ್ತಿದೆ ಸಾಯುತ್ತಿರುವೆನು. ಸ್ವಾತಂತ್ರ್ಯ ಸರೋವರವೇ! ಹಿಂದೆ ಹಿಂದೆ ಹೋಗಬೇಡ. ನನ್ನ ಬಳಿಗೆ ಬಾ' ಬಾ! ಬಾ! ನನ್ನಾಣೆ ಬಾ ಬಾ.

* * *

ಪ್ರಿಯ ಸಹೋದರ! ಅದಕ್ಕಾಗಿ ಪಡಬೇಡ ಅದು ಸಿಗುವಂಥದಲ್ಲ ಅದು ಅಸ್ತಿತ್ವದಲ್ಲೇ ಇಲ್ಲ ನಿನ್ನ ಕಣ್ಣಿನ [illegible] ಭ್ರಮೆಯ ಭೂಮಿ! ತೃಷೆಯನ್ನು ಸಹಿಸಿಕೋ."

* * *

ಇದು ಮರುಭೂಮಿ ಸಂಚಾರಕ್ಕೆ ಹೊರಟ ಪ್ರಯಾಣಿಕರಿಬ್ಬರ ಹೃದಯದ್ರಾವಕ ಸಂವಾದ, ಬಿಸಿಲುಕುದುರೆಯನ್ನು ಕಂಡು ಒಬ್ಬನು ಸರೋವರ, ಅರಮನೆಯೆಂದು ಹೊಂದಲೆತ್ನಿಸುತ್ತಿರುವನು. ವಿವೇಕಿಯಾದ ಮಗುದೊಬ್ಬನು ಅವನಿಗೆ ಸುಬೋಧವನ್ನೀಯುತ್ತಿರುವನು.

* * *

ರೌಂಡ್‌ಟೇಬಲ್ ಬಿಸಿಲುಕುದುರೆಯು ಹಿಂದೂದೇಶದ ಅನೇಕರನ್ನು ಆಶೆಯ ನಡುದಾರಿಯಲ್ಲಿ ಬಿಟ್ಟಿದೆ "ಅದು ಮಾಯಾಜಾಲ"ವೆಂದು ಹಲವರೆಂದರೂ ಕೆಲವರು ಕೇಳುವಂತಿಲ್ಲ.

* * * *

ಸಾಮಂತ ಸ್ವಾತಂತ್ರ್ಯವನ್ನಾದರೂ ಕೈವಶಪಡಿಸಬೇಕೆಂದು ಕೆಲವರ ಮಹದಾಶೆ ಆದರೆ ಅದು, ಅವರು ಮುಂದೆ ಮುಂದಕ್ಕೆ ನಡೆದಂತೆ ಹಿಂದೆ ಹಿಂದಕ್ಕೋಡುತ್ತಿದೆ

* * * *

ಸಾಮಂತ ಸ್ವಾತಂತ್ರ್ಯವಾಗಲೀ ಪ್ರಾಂತಿಕ ಸ್ವಾತಂತ್ರ್ಯವಾಗಲೀ ಸಂಪೂರ್ಣ ಸ್ವಾತಂತ್ರ್ಯವಾಗಲೀ ಕಣ್ಣಿಗೆ ಮಾತ್ರ ಕಾಣುತ್ತಿರಬಹುದು. ಅವುಗಳು ಕೈಗೆ ಸಿಗುವುದೆಂತು? ನನಗೆ ತಿಳಿಯದು

* * * *

ಒಬ್ಬ ಜೋತಿಷ್ಯರು ರಾಷ್ಟ್ರದ ಭವಿಷತ್ತನ್ನು ನುಡಿಯುತ್ತಾ "ನಾಲ್ವತ್ತು ವರ್ಷಗಳ ತನಕ ಸಾಮಂತಸ್ವರಾಜ್ಯವೂ ದೊರೆಯಲಾರದು" ಎಂದಿದ್ದರೆ ನಾಲ್ವತ್ತಲ್ಲ, ಸಾವಿರದನಾಲ್ವತ್ತಾದರೂ ಬಿಸಿಲುಕುದುರೆಯು ಕೈಗೆ ಬರುವುದುಂಟೇ ಎಂದು ಇವರಿಗೆ ತಿಳಿದಿಲ್ಲವೇಕೋ!

* * * *

ಬಿಸಿಲುಕುದುರೆಯಂತಹ ಎರಡು ರೌಂಡ್‌ಟೇಬಲ್‌ಗಳನ್ನು ಸರ್ ಹೋರರೇ ಮೊದಲಾದ ಸ್ವಾರ್ಥಿಗಳು ವಧಿಸಿಹಾಕಿಬಿಟ್ಟರು, ಇನ್ನೊಂದು ಸಣ್ಣ ಬಿಸಿಲುಕುದುರೆಯು ಹುಟ್ಟಲಿದೆ! ಕಣ್ಣಿಗೆ ತೋರಿ ತೋರದಿರುವ ಕೈಗೆ ಸಿಕ್ಕಿ ಸಿಕ್ಕದಿರುವ ಬಿಸಿಲುಕುದುರೆಯನ್ನುಂಟುಮಾಡುವ ವಿಚಿತ್ರ ಶಕ್ತಿಯಾದರೂ ಎಷ್ಟು ಪ್ರಬಲವಾದುದು? ಈ ಶಕ್ತಿಯ ಕೌಟಿಲ್ಯವಾದರೂ ಎಷ್ಟು ವಿಪರೀತವಾದುದು ಎಂದು ನನಗೆ ಆಶ್ಚರ್ಯ!

* * * *

ಮರುಳುಕಾಡಿನ ಬಿಸಿಲುಕುದುರೆಯನ್ನು ಹಿಡಿಯಲು ಡಾ. ಅಂಬೇಡ್ಕರ್, ಡಾ ಮುಂಜೆಗಳು ಲಂಡನಿನ ಮರುಭೂಮಿಗೆ ಓಡಿರುವರು. ಜಿನ್ನಾರವರು ಅಲ್ಲಿದ್ದು ಇಷ್ಟು ಸಮಯದಿಂದಲೂ ಯತ್ನಿಸುತ್ತಿದ್ದಾರೆ ವ್ಯರ್ಥ! ಅದು ಯಾರಿಗೂ ಸಿಕ್ಕುವುದಿಲ್ಲ..

* *

ಹಿಂದೂದೇಶದ ಹಿಂದೂಮುಸಲ್ಮಾನರಿಬ್ಬರಿಗೆ ಈ ಬಿಸಿಲುಕುದುರೆಯು ಪ್ರತ್ಯಕ್ಷವಾಗಲಿದೆಯೆಂದು ತಿಳಿದುಬಂದಿದೆ. [illegible] (ಗಿ - ಅ - ಕಾನಲ್ಲ) ಅದು ಕಾಣಸಿಕ್ಕಲಿ. ಎಷ್ಟು [illegible] ಮುದಿಹಲ್ಲುಗಳು ಕಳೆದೀಗಲಿವೆಯೋ ಆ ಬಿಸಿಲುಕುದುರೆಗೇನೇ ಗೊತ್ತು.

ಇಂತಿ ಜಿಜ್ಞಾಸು,
ಧೂಮಕೇತು.

THE SOUTH INDIA CO-OPERATIVE INSURANCE SOCIETY, LIMITED, MADRAS.

LOCAL BOARD:—

THE SOUTH CANARA CENTRAL CO-OPERATIVE BANK. LTD., MANGALORE.

Applications are invited for 'Sub Agents' from capable and energetic persons and Co-operative Institutions to canvas business on behalf of the Local Board of the Society at Mangalore.

FOR TERMS APPLY TO:—

The Secretary,
South Canara Central Co-operative
Bank, Ltd., KODIALBAIL P. O (Mangalore)
SOUTH CANARA

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ
(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ್

ಅಚ್ಚಿನಲ್ಲಿದೆ! **ಅಚ್ಚಿನಲ್ಲಿದೆ!**
ಇದೇ ತಿಂಗಳ ಮೂರನೆ ವಾರದಲ್ಲಿ ಹೊರಬೀಳುವುದು.

ಅಭಿನಯಗೀತಾವಳಿ

(ಶ್ರೀ ಜಿ. ಎನ್. ಲಕ್ಷ್ಮಣಪೈ ವಿರಚಿತ)

ಕ್ರಯ ೦—೨—೬. ಕ್ರಯ ೦—೨—೬.

ಚಿಕ್ಕ ಮಕ್ಕಳಲ್ಲಿ ವಿಷಯಜ್ಞಾನ, ಭಾಷಾಜ್ಞಾನ ಮತ್ತು ಸಂಗೀತಜ್ಞಾನವು ಏಕಕಾಲದಲ್ಲಿ ಉಂಟಾಗುವಂತೆ ಕಿಂಡರ್ ಗಾರ್ಟನ್ ಪಾಠವನ್ನು ಅನುಸರಿಸಿ ರಚಿಸಲ್ಪಟ್ಟ ಹಾಡುಗಳ ಪುಸ್ತಕ. ಇದರೊಳಗಿನ ಗೀತಗಳನ್ನು ಹಾಡಿ, ನಲಿಯುವುದೆಂದರೆ ಮಕ್ಕಳಿಗೊಂದು ಹಬ್ಬವೇ ಸರಿ.

ನಮ್ಮ ಇತರ ಪುಸ್ತಕಗಳು—

ಸಚಿತ್ರ ಕನ್ನಡ ಪದ್ಯರತ್ನಾವಳಿ
3, 4, 5ನೆ ದರ್ಜೆಗಳ ಬಗ್ಗೆ ಪಠ್ಯಪುಸ್ತಕ } ೦—೩—೬.

ಕೀರ್ತನಾಂಜಲಿ
(ಉತ್ತಮ ಭಜನಾಗೀತಗಳ ಕೈಪಿಡಿ) } ೦—೩—೦

ಹರಿಹರ ಛಾಪಖಾನೆ, ಮತ್ತು ಪುಸ್ತಕಾಲಯ,
ಪುತ್ತೂರು, ದ. ಕ.

ತುಂಬಾ

ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ? ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿಯನ್ನು ತೆಗೆದುಕೊಳ್ಳಿರಿ.
ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

Wanted.

Agents for 'Swadeshabhimani' throughout the South Kanara District and elsewhere.
Apply Sharp — You are sure to secure substantial Commission.

MANAGER,
Swadeshabhimani,
Mangalore.

Canara Bank Limited.
ಕೆನರಾ ಬ್ಯಾಂಕ್ ಲಿಮಿಟಡ್.

Head Office:— **MANGALORE.**

Established July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal, Kasargod, Cochin, Udipi, Gangolli, Coondapur, Bombay, Puttur, Calicut & Alleppey.**

ಬ್ರಾಂಚುಗಳು:—
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised Capital 10,00000—0—0
Issued & paid up Capital. 300,000—0—0
Reserve and other sinking Funds Rs. 526,000—0—0
Amount invested on G. P. Notes Rs. 1210,092—12—0
Rates of interest on fixed deposits at Head Office and Branches are 6% for 2 Years. 5½% „ 1 Year

ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ 10, 0000—0—0
ಚಂದಾ ಹಾಕಿದ ಮತ್ತು ವಸೂಲು ಆದ ಮೂಲಧನ ರೂ. 300,000 0—0
ರಿಜರ್ವ ಮತ್ತು ಇತರ ಫಂಡುಗಳು. 526,000—0—0
ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 1210,092—2—0
ಖಾಯಂ ಠೇವಣಿಗಳ ಮೇಲೆ ಕೊಡಲ್ಪಡುವ ಬಡ್ಡಿದರ— ಎರಡು ವರುಷಗಳಿಗೆ ಸೇಕಡಾ 6%, 1 ವರುಷಕ್ಕೆ ಸೇಕಡಾ 5½.

Current Account Deposits received and interest allowed on daily balance of Rs 50 and above that on multiples of Rs 10/-@ 3% from 1st Janauary to 30th June and @ 2% from 1st July to 31st December. No interest will be allowed unless the depositor earns not less than Rs. 5/ during a period of 6 months ending either 30th June or 31st December in any year.

Except by special arrangement, no interest is allowed on sums exceeding Rs. 10,000/ in the case of Head Office and Cochin Branch and on sums not exceeding Rs. 15,000/ in the case of Bombay Branch and on sums exceeding Rs 3000/- in the case of other Branches.

For further particulars please apply to —

Office of the Bank,
Mangalore 17—6—1932

K. Venkat Rao,
Secretary & Treasurer.

The Pangal Nayak Bank, Ltd.

Head Office. Udipi. *Established 1920.* **Branch Office Mangalore**

Authorised Capital: Rs. 2,00,000.
Issued Capital: Rs. 1,75,000.
Paid up Capital: Rs. 1,75,000.
Reserve and other Funds Rs 1,80,000

NOTICE.

Advances on pledge of Gold are made at 8%.

Fixed deposits received at following rates

3 months 4½%, 6 and 9 months 5%,

1 year and above 5½%, 2 years 6 %.

(By order)

Office of the Bank,
Udipi, 1—7—'32

P. Laxman Nayak,
Secretary.

ಈ ಹೊಸ ಗ್ರಂಥಗಳನ್ನು ನೋಡಿರುವಿರಾ?

ಕಾಮದ ಗುಟ್ಟು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ ಕೃತ ಇಂತಹ ಗಂಭೀರವಾದ ಸ್ವಾರಸ್ಯವಾದ, ಉಪಯುಕ್ತವಾದ ಕಾಮಶಾಸ್ತ್ರ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ. ಬೆಲೆ ೧೨ ಆಣೆಗಳು ಮಾತ್ರ.

ಪ್ರಳಯ ತಾಂಡವ—(ಸಚಿತ್ರ) ಶ್ರೀ. ಬಿ. ವಾಸುದೇವರಾಯರು. ಸುಂದರ ಚಿತ್ರಗಳೊಂದಿಗೆ ಅಂದವಾಗಿ ಪ್ರಕಟವಾಗಿದೆ. ಉಚ್ಚಭಾವಗಳನ್ನೊಳಗೊಂಡಿರುವ ಸ್ಫೂರ್ತಿದಾಯಕ ೩ ಕವನಗಳಿವೆ ಬೆಲೆ ೬ ಆಣೆಗಳು ಮಾತ್ರ. ಲೈಬ್ರರಿ ಪ್ರತಿ ರೂ ೧.

ಹೊಸಹುಟ್ಟು—ಶ್ರೀ ಅ. ನ. ಕೃಷ್ಣರಾಯರು, ೧೬ ಪ್ರೌಢತರ ವ್ಯಾಸಗಳು, ೮ ಸುಂದರ ಚಿತ್ರಗಳು, ಪೆವರ್‌ವೇಟ್ ಕಾಗದದ ಮೇಲೆ ೧೪೦ ಪುಟಗಳಿವೆ. ಬೆಲೆ ೧ ರೂಪಾಯಿ.

ವೈದ್ಯರಾಜ —(ಸಾಮಾಜಿಕ ನಾಟಕ) ಪ್ರೊಫೇಸರ್ ಜಹಗೀರ್‌ದಾರ್ ಕೃತ. ಬೆಲೆ ೧ ರೂಪಾಯಿ.

ಮೋಹನಾಸ್ತ್ರ—(ಸಾಮಾಜಿಕ ನಾಟಕ) ಪಂಡಿತ ತಾರಾನಾಥ ಕೃತ. ಬೆಲೆ ೧ ರೂಪಾಯಿ.

ನವಜೀವನ ಗ್ರಂಥ ಭಂಡಾರದ ಅಮೌಲ್ಯ ಗ್ರಂಥಗಳು

೧. **ಆಕಾಶದೊಳಗಿನ ಅದ್ಭುತ ಚಮತ್ಕಾರಗಳು** (ಪ್ರೊ. ಪಾಟೀಲ ತಿರುಕುಲಧ್ಯಾಯರು.) ೧—೩—೬
೨. **ಧರ್ಮ ಸಂಭವ** (ಪಂಡಿತ ತಾರಾನಾಥರಾಯರು.) ೧—೪—೦
೩. **ಹಿಂದೂಸ್ಥಾನದ ಪ್ರಾಚೀನ ರಾಜ್ಯಪದ್ಧತಿಗಳು** (ಶ್ರೀ ವಿಷ್ಣುಹರಿ ಒಡೆಯರ.) ೧—೨ ೦

ಹೆಚ್ಚಿನ ವಿಷಯಗಳಿಗೆ ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ.

ಎ. ಜಿ. ಬಿ. ಜನರಲ್ ಏಜನ್ಸಿ, ಬಳೇಪೇಟೆ, ಬೆಂಗಳೂರು ಸಿಟಿ.

ಗಾಂಧೀ ಸರಕಾರದವರ ರಾಜಿಪ್ರಸ್ತಾಪ!

ಕಳೆದ ಸಂಚಿಕೆಯಿಂದ ಮುಂದರಿದು ಕೊನೆಗೊಂಡುದು

ಮುಂಬಾಯಿ ಕ್ರಾನಿಕಲಿಗೆ ಕಳೆದ ವಾರ ಕೆಲವು ಜವಾಬ್ದಾರೀ ಪಕ್ಷೀಯರಿಂದ ದೊರೆತ ವಾರ್ತೆಯಿಂದಾಗಿ ಸರ್ ಸಾಮುವೇಲ್ ಹೋರರೂ, ವೈಸರಾಯರೂ ಸೆರೆಮನೆಯ ಗಾಂಧಿಯವರೊಡನೆ ಪತ್ರವ್ಯವಹಾರವನ್ನು ನಡೆಸುತ್ತಿದ್ದರಾಗಿ ತಿಳಿದುಬಂದಿದೆ ಈ ವಾರ್ತೆಯ ಪ್ರಕಟಣೆಯನ್ನು ಎಸೋಶಿಯೇಟೆಡ್ ಪ್ರೆಸ್ ಒಫ್ ಇಂಡಿಯಾ ಎಂಬ ವಾರ್ತಾವಾಹಕ ಕಂಪೆನಿಯವರು ಏಕೋ ಅಲ್ಲಗಳೆದಿರುವರಾಗಿಯೂ, ಈ ವಾರ್ತೆಯು ಬರೇ ಸುಳ್ಳೆಂದು ಪ್ರತಿಪಾದಿಸಿರುವರಾಗಿಯೂ ತಿಳಿದುಬಂದಿದೆ ಸರ್ ಸಾಮುವೇಲ್ ಹೋರರನ್ನು ಪ್ರಶ್ನಿಸಲು, ತಾನು ಸ್ನೇಹಾಚಾರದ ಪತ್ರವ್ಯವಹಾರವನ್ನು ಗಾಂಧಿಯವರೊಡನೆ ನಡೆಸಿದುದು ಹೌದೆಂದು ಒಪ್ಪಿಸಿಕೊಂಡರು ಆದರೆ ಹಿಂದೀಯ ಪ್ರಭುತ್ವದವರು ಅದನ್ನೊಪ್ಪಿಕೊಂಡಿರುವುದಿಲ್ಲ ಈ ವಿಷಯವಾಗಿ ಫ್ರೀಪ್ರೆಸ್ ಜರ್ನಲ್ ಬರೆಯುತ್ತಾ "ಗಾಂಧಿಜೀಯವರಂತಹ ಮಹಾಪುರುಷನೊಡನೆ ಪತ್ರವ್ಯವಹಾರವನ್ನು ನಡೆಸಿದೆವೆಂದೊಪ್ಪಲು ಅವಮಾನವಿಲ್ಲ" ಎಂಬರ್ಥವನ್ನು ಹೊರಹಾಕಿದೆ ಅಂತೂ ಇಂತೂ ದ್ವಿಪಕ್ಷಗಳೊಳಗೆ ಗೂಢ ವ್ಯವಹಾರವು ನಡೆಯುತ್ತಿದೆಯೆಂದು ಸ್ಫುಟವಾಗಿ ತಿಳಿದುಬರುತ್ತದೆ

ರೌಂಡ್‌ಟೇಬಲ್ ಸೂತ್ರಗಳನ್ನು ತ್ಯಜಿಸಿ ತನ್ನ ಸ್ವಯಂಪಾಕದ ಸೂತ್ರಗಳನ್ನು ಸರ್ ಸಾಮುವೇಲ್ ಹೋರರು ಪ್ರಕಟಿಸಿ ಬಹಳ ತರ್ಕಶರಗಳ ಹಾರಾಟಕ್ಕೆಡೆಗೊಟ್ಟರಷ್ಟೆ! ಅವರ ಈ ಧೋರಣೆಗೆ ಯಾರೂ ಒಪ್ಪಲಾರದೆ ಹೋದರಷ್ಟೆ! ಇದರಿಂದಾಗಿ ಮಂತ್ರಿಮಂಡಲವು ಬಹಳ ಯೋಚನೆಗಿಟ್ಟಿತು ತಮ್ಮ ನಿರೀಕ್ಷಣೆಯನುಸಾರವಾಗಿ ಯಾರೂ ತಮ್ಮ ಧೋರಣೆಗೆ ಸಮ್ಮತಿಸದಿರುವುದನ್ನು ಕಂಡು ರಾಮ್ಸೇ ಮೆಕ್ಡೊನಾಲ್ಡರು ಮೂರನೇ ರೌಂಡ್‌ಟೇಬಲ್ ಸಭೆಯನ್ನು ಕೂಡಿಸಬೇಕಾಗಿ ಆಲೋಚಿಸಿರುವರು ಇದು ಬರುವ ಎರಡು ಮೂರು ತಿಂಗಳುಗಳೊಳಗೆ ಸೇರುವುದಾಗಿಯೂ ಇದಕ್ಕೆ ಬರೇ ಮೂವತ್ತು ಜನರು ಸದಸ್ಯರನ್ನು ಆರಮಾಡುವರಾಗಿಯೂ ತಿಳಿದುಬಂದಿದೆ ಈ ತೃತೀಯ ಪರಿಷತ್ತಿನಲ್ಲಿ ಹಿಂದೀಯರಾರೂ ಸಹಕರಿಸಬಾರದಾಗಿ ಹೆಚ್ಚಿನ ಎಲ್ಲಾ ದೇಶಧುರೀಣರು ಠರಾಯಿಸಿಕೊಂಡಿರುವರು ಕೆಲವರು ಆ ಸಭೆಯ ಸದಸ್ಯತನವನ್ನು ಈಗಾಗಲೇ ಬಿಟ್ಟಿರುವರು ಈ ಮೂರನೇ ರೌಂಡ್‌ಟೇಬಲಿನ ವ್ಯವಹಾರದಿಂದಾಗಿ ಹಿಂದೀಯರ ಗಡುತರ ರಾಜಕೀಯ ಸಮಸ್ಯೆಯು ಸುಲಭಸಾಧ್ಯವಾಗಿ ಇತ್ಯರ್ಥಿಸಲ್ಪಡುವುದಾಗಿ ಆಂಗ್ಲಮುಖಂಡರೂ ಇನ್ನಿತರ ಮಂದಪಕ್ಷೀಯರೂ ಅಭಿಪ್ರಾಯಪಡುತ್ತಿರುವರು ಆದರೆ ಅನೇಕರು ಮಾತ್ರ ಈ ತೃತೀಯ ಸಭೆಯಿಂದಲೂ ಗಡಚಾದ ಹಿಂದೀಯ ಸಮಸ್ಯೆಯು ಕೊನೆಗೊಳ್ಳಲಾರದೆಂದೂ, ರೌಂಡ್‌ಟೇಬಲ್‌ಗಳೆಂಬುವುಗಳು ಮರುಳುಕಾಲದ ಬಿಸಿಲುಕುದುರೆಗಳೆಂದೂ ಅಭಿಪ್ರಾಯಪಡುತ್ತಿರುವರು ಹಾಗೂ ಹೀಗೂ ಮೂರನೇ ಪರಿಷತ್ತು ಪುನಃ ಲಂಡನಿನಲ್ಲಿ ಸೇರಲಿರುವುದು

ಕೆಲವು ದಿನಗಳ ಹಿಂದೆ ಶ್ರೀ ಸಿ ರಾಜಗೋಪಾಲಾಚಾರ್ಯರವರು ಸೆರೆಯಿಂದ ಹೊರಬಂದರು ಮದ್ರಾಸು ಗವರ್ನರರು ಅವರನ್ನೂ ಇನ್ನಿತರ ಮುಂದಾಳುಗಳನ್ನೂ ತನ್ನಲ್ಲಿಗೆ ಬರಮಾಡಿಕೊಂಡು ರಾಜಕೀಯ ವಿಷಯಕವಾಗಿ ಸುಮಾರು ಒಂದು ಘಂಟೆಯ ಪರಿಯಂತರ ಮಾತುಕತೆ ನಡೆಸಿದರಾಗಿ ತಿಳಿದುಬಂದಿದೆ. ಭಾವೀ ರಾಜ್ಯಾಂಗರಚನೆಯಲ್ಲಿ ಯಾವ್ಯಾವ ಸೂತ್ರಗಳು ಸ್ವೀಕಾರಾರ್ಹವಾಗುವುವು ಯಾವ್ಯಾವುವು ತಿರಸ್ಕೃತವಾಗುವುವು ಎಂಬ ಸೂಚನೆಯನ್ನರಿಯಲು ಗವರ್ನರರು ಹೀಗೆ ಮಾಡಿದರಂತೆ ಅಂತೂ ಹೊರಹೊರಗೆ ಸಂಧಿಯ ಪ್ರಸ್ತಾಪವು ತಲೆದೋರಿದೆಯಾಗಿ ಬಹಿರಂಗದಲ್ಲಲ್ಲವಾದರೂ ಪರದೆಯೊಳಗಿಂದ ಕಾಣುತ್ತಿದೆ.

ಈಗಿನ ರಾಜಕೀಯ ಸಂದಿಗ್ಧತೆಯನ್ನು ನಿವಾರಿಸಲು ದಶದಿಕ್ಕುಗಳಿಂದಲೂ ಯತ್ನದ ಆಂದೋಲನವು ನಡೆಯುತ್ತಿದೆ ಸರ್ ಸಾಮುವೇಲ್ ಹೋರರು ತನ್ನ ಧೋರಣೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದೇ ಎಲ್ಲರ ಹಟ ಕೇಳಿಕೆ ಲಂಡನಿನಲ್ಲಿ ದೀನಬಂಧು ಸಿ. ಎಫ್. ಎಂಡ್ರ್ಯೂಸರು ಪದೇ ಪದೇ ವ್ಯಾಖ್ಯಾನೋಪನ್ಯಾಸಗಳನ್ನು ಕೊಡುತ್ತಾ, ಫಾದರ್ ಎಲ್ವಿನರು ತನ್ನ ಹೃದಯದ್ರಾವಕ ಉಪದೇಶವನ್ನು ಮಾಡುತ್ತಾ, ಪಾರ್ಲಿಮೆಂಟಿನ ಲೇನ್ಸ್‌ಬರಿ ದೊರೆಯವರು ಕರುಣಾರಸಭರಿತವಾದ ಸಹಾನುಭೂತಿಕರ ಬೋಧೆಯನ್ನು ಕೊಡುತ್ತಾ, ಫೆನ್ನರ್ ಬ್ರೋಕ್ವೇ ಮೊದಲಾದ ಸಾಂಘಿಕರು ಪದೇ ಪದೇ ತಮ್ಮ ಉಚ್ಚಾಭಿಮತವನ್ನು ಪ್ರಕಟಿಸುತ್ತಾ ಈಗಿನ ದುಃಸ್ಥಿತಿಯನ್ನು, ಕಗ್ಗಟ್ಟು ಮುಗ್ಗಟ್ಟನ್ನು ಪರಿಹರಿಸಲೆತ್ನಿಸುತ್ತಿರುವರು. ಹಿಂದೂದೇಶದಲ್ಲಿ ಸಾರ್ವಭೌಮ ಕವಿಪುಂಗವರಾದ ರವೀಂದ್ರನಾಥ ಠಾಕೂರರೂ, ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿಯವರೂ, ಮಂದಪಕ್ಷದ ಎಲ್ಲಾ ಪ್ರಭೃತಿಗಳೂ, ರಾಷ್ಟ್ರೀಯವಾದಿ ದೇಶಧುರೀಣರೂ ಇದರ ಶಮನಾರ್ಥವಾಗಿ ಅನವರತವೂ ದುಡಿಯುತ್ತಿರುವರು ಕೆಲವು ಪತ್ರಿಕೆಗಳು ಸರಕಾರವು ಕೊಂಗ್ರೆಸ್ಸನ್ನು ಒಂದು ಕಡೆಯಿಂದ ಎಷ್ಟು ದಬ್ಬಾಳಿಸುತ್ತಿದ್ದರೂ ಇನ್ನೊಂದು ಕಡೆಯಿಂದ ಅಷ್ಟೇ ಭರದಿಂದ ಶಾಂತಿಸ್ಥಾಪನಾಕಾರ್ಯದಲ್ಲಿ ಪ್ರವೃತ್ತವಾಗಿದೆಯೆನ್ನುತ್ತಿವೆ ಕೆಲವು ಪತ್ರಿಕೆಗಳು ಸರಕಾರವು ತನ್ನ ಗೌರವಪಾಲನಾರ್ಥವಾಗಿಯೇ ಇಷ್ಟು ಹೊಣಗಾಡುವುದಲ್ಲದೆ, ಆಂತರಿಕವಾಗಿ ಸಂಧಿಯನ್ನು ತಂದೊಡ್ಡಲು ಹಲವು ಬಗೆಯ ಹವಣಿಕೆಗಳನ್ನೂ ಯೋಜನೆಗಳನ್ನೂ ಮಾಡುತ್ತಿದೆಯೆನ್ನುತ್ತಿವೆ ಕೆಲವೊಂದು ಪತ್ರಿಕೆಗಳು ಗಾಂಧಿಜೀಯವರು ಪ್ರಾಂತಿಕ ಸಾಮಂತಸ್ವರಾಜ್ಯವನ್ನು ತಾತ್ಕಾಲಿಕವಾಗಿ ಸ್ವೀಕರಿಸಿ ಸರಕಾರದೊಡನೆ ಸಹಕರಿಸುವುದಾದರೆ ಒಡನೆ ಸಂಧಿಯುಂಟಾಗುವುದರಲ್ಲಿ ಸಂದೇಹವಿಲ್ಲಯೆನ್ನುತ್ತಿವೆ ನಾಲ್ಕೈದು ತಿಂಗಳ ಹಿಂದೆ ಹಿಂದೂದೇಶದಲ್ಲಿದ್ದು ಇಲ್ಲಿಯ ಆಗಿನ ಪರಿಸ್ಥಿತಿಯನ್ನು ಕಂಡು, ಮನಕರಗಿ, ಹಿಂತಿರುಗಿದ ಡಾ| ಫ್ಲೋರೆನ್ಸ್ ಪೇಟನ್ ದೊರೆಯವರು ಲಂಡನಿನ ಡಾಲ್‌ಹೌಸಿ ಎಂಬಲ್ಲಿ ಒಂದು ದೊಡ್ಡ ಸಭೆಯಲ್ಲಿ ಭಾಷಣಮಾಡುತ್ತಾ ಸಂದರ್ಭೋಚಿತವಾಗಿ "ನಾವು ಬ್ರಿಟಿಷರು ಗೌರವಪಾಲನಾ ವ್ಯಕ್ತಿಗಳು ನಮ್ಮ ಗೌರವ ರಕ್ಷಣಾ ಹಟದಿಂದಾಗಿ ನಮ್ಮ ಪಕ್ಷೀಯರಾಗಿ ಹಲವು ಸಮಯದಿಂದಿದ್ದ ಅಧಿಕಾಂಶ ಸಹಕಾರಿಗಳನ್ನು ಕಳೆದುಕೊಂಡೆವು ಈ ಗೌರವದಿಂದಾಗಿ ನಾವು ನಮ್ಮವರೇ ಆದ ಹಿಂದೀಯರೊಡನೆ ಮಿಳಿತವಾಗಿ ನಡೆಯಲು ದುಸ್ಸಾಧ್ಯವಾಗಿದೆ ಇದರ ಪರಿಣಾಮವಾಗಿ ಪ್ರಸ್ತುತ ಸಮಯದಲ್ಲಿ ಪರಸ್ಪರ ಅನನ್ಯೋನ್ಯವೂ ಅಸ್ವೈಕ್ಯವೂ ಪಸರಿಸಿಕೊಂಡಿವೆ ಹಿಂದೂದೇಶವು ತನ್ನ ಉತ್ಕರ್ಷನಿಯನ್ನಿತ್ತ ಸ್ವಾತಂತ್ರ್ಯವನ್ನು ಕೇಳುವುದು ಸುಮ್ಮಗಲ್ಲ ತನ್ನ ಕಷ್ಟಪರಂಪರೆಗಳನ್ನು ಪರಿಹರಿಸುವುದಕ್ಕಾಗಿ! ಅದಕ್ಕೆ ಈಗ ನಮ್ಮ ಮಂತ್ರಿಮಂಡಲದವರು ಮಾಡುವ ದಾನವು ಅಗತ್ಯವಿಲ್ಲವೆಂದು ತೋರಿದೆ ಓರ್ಡಿನೆನ್ಸುಗಳ ನವನದ ರೂಪದಿಂದ ಹಿಂದೂದೇಶದಲ್ಲಿ ಸಾರ್ವತ್ರಿಕವಾಗಿ ನಡೆಯುವ ದಮನನೀತಿ ದಬ್ಬಾಳಿಕೆಯು ಸಾಮುದಾಯಿಕ ಜಿಗುಪ್ಸೆಯನ್ನು ಹುಟ್ಟಿಸಿದೆ ಗಾಂಧಿಯವರಾದರೋ ಕ್ರಾಂತಿಗೇಳುತ್ತಿರುವವರನ್ನು ತಡೆಯುತ್ತಿರುವರು ಅಂತಹವರಿಗೆ ಸಂಧಿಯ ಕರವನ್ನೊಡ್ಡಿದರೆ ಮುಂದಕ್ಕೆ ಬ್ರಿಟನು, ಹಿಂದೂದೇಶದವರ ಸೌಗುಣ್ಯಲಾಭವನ್ನು ಮಾಡಿಕೊಂಡಂತಾಗುವುದು ನಮ್ಮ ಈಗಿನ ಸಾಂಪತ್ತಿಕ ಮೋದಂಡತೆಯ ಪರಿಹಾರಾರ್ಥವಾಗಿ ಒಂದು ಎಡೆಯು ದೊರೆಯುವುದು" ಎಂದರು.

ಕೆಲವು ದಿನಗಳ ಹಿಂದೆ ಇಂಗ್ಲೆಂಡಿನ ಕೆಲವು ಬ್ರಿಟಿಷರು ಒಟ್ಟುಗೂಡಿಕೊಂಡು ಒಂದು ಪತ್ರವನ್ನು ಸರ್ ತೇಜಬಹದ್ದೂರ್ ಸಪ್ರೂ ಜಯಕರ್ ಮೊದಲಾದ ಅಸಹಕಾರಿ ಮಂದಪಕ್ಷದವರಿಗೆ ಬರೆಯುತ್ತಾ "ಸರ್ ಸಾಮುವೇಲ್ ಹೋರರ ಧೋರಣಾ ಪರಿವರ್ತನೆಯನ್ನು ಕಂಡು ನಾವು ಕೂಡಾ ಸಂತೋಷಗೊಂಡೆವೆಂದೆನ್ನಲು ಸಾಧ್ಯವಿಲ್ಲ ಆದರೂ, ನಿಮ್ಮ ಅಸಹಕಾರಕ್ಕೆ ನೀವು ಅವರನ್ನೂ ಅವರ ಧೋರಣೆಗಳನ್ನೂ ತಪ್ಪಾಗಿ ತಿಳಿದುಕೊಂಡಿರುವುದೇ ಕಾರಣವಾಗಿರುವುದೆಂದೂ ಹೇಳಬೇಕಾಗುತ್ತದೆ. ನೀವು, ಬರುವ ಕನ್ಸಲ್‌ಟೇಟಿವ್ ಸಭೆಗೆ ಬರುವುದುತ್ತಮ ಪ್ರಕೃತದ ತ್ರಿಶಂಕು ಸ್ವರ್ಗವನ್ನು ನಿವಾರಿಸಬೇಕೆಂಬ ಕುತೂಹಲಾಧಿಕ್ಯದಿಂದಲೇ ನಾವಿಂದು ನಿಮಗೆ ಅರಿಕೆಯನ್ನು ಮಾಡಿಕೊಂಡಿರುವೆವು" ಎಂದರು ಈ ಪತ್ರವು ತಮಗೆ ತಲುಪಿದೊಡನೆ ಸಪ್ರೂ ಜಯಕರರೇ ಮೊದಲಾದವರು ಒಟ್ಟುಗೂಡಿ ಈ ಪತ್ರಕ್ಕೆ ಸಮರ್ಪಕವಾದ ಉತ್ತರವನ್ನು ಬರೆಯುತ್ತಾ, "ನಾವು ತಪ್ಪಾಗಿ ತಿಳಿದುಕೊಂಡೆವೆನ್ನುವುದು ಸರಿಯಾದುದಲ್ಲ. ಸರ್ ಹೋರರು ತನ್ನ ನೀತಿ ಪಲ್ಲಟನೆಯ ವರ್ತನವನ್ನು ತ್ಯಜಿಸಿ ಬಿಡದ ವಿನಹಾ ನಾವು ಯಾವುದರಲ್ಲೂ ಸಹಕರಿಸಲು ಸಾಧ್ಯವಿಲ್ಲ" ಎಂದರು ಕೆಲವರು "ಈಗ ಸರ್ ಸಪ್ರೂ ಮೊದಲಾದ ಪ್ರತಿಭಾ ಸಂಪನ್ನರಾದ ಹಿಂದೀಯರನ್ನು ಕೈವಶಮಾಡಬೇಕೆಂದು ಇಂಗ್ಲೆಂಡಿನವರ ಹವಣಿಕೆಯಾಗಿರುತ್ತದೆ ಈ ಪತ್ರವನ್ನು ಬರೆದಿರುವುದು ಅವರನ್ನು ತಮ್ಮ ಮಾಯಾಜಾಲದೊಳಗೆ ಹಾಕಿಕೊಳ್ಳುವ ಅಭಿಪ್ರಾಯದಿಂದಲ್ಲದೆ ಮತ್ತೆ ಬೇರೆಯಲ್ಲ. ಬುದ್ಧಿವಂತರಾದ ಆ ಆಂಗ್ಲರ ಚತುರತನವು ವಿಚಿತ್ರವಾಗಿದೆ" ಎಂದು ಹೇಳುತ್ತಿರುವರು.

ಮೊನ್ನೆ ಬಿಡುಗಡೆ ಹೊಂದಿದ ಡಾ| ಅನ್ಸಾರಿಯವರು ಆರೋಗ್ಯ ಸಂಪಾದನೆಗಾಗಿ ಯುರೋಪ ಖಂಡಕ್ಕೆ ತೆರಳಿದರು ಅವರನ್ನು ವಾರ್ತಾಸಂಗ್ರಹಕರೊಬ್ಬರು ಸಂದರ್ಶಿಸಿದಾಗ ಅವರು ಇಂದಿನ ದಿನದ ಪರಿಸ್ಥಿತಿಯ ಸಿಂಹಾವಲೋಕವನ್ನು ಮಾಡುತ್ತಾ "ಸರ್ ಹೋರರ ಧೋರಣಾ ಪರಿವರ್ತನೆಯು ಒಂದು ದೃಷ್ಟಿಯಿಂದ ಮಹಾ ಫಲಕಾರಿಯೇ ಆಯಿತು ಅವರ ಅಂತಹ ಆಚಾರದಿಂದಾಗಿ ಮಂದಪಕ್ಷೀಯರು ಕೂಡಾ ಕೊಂಗ್ರೆಸ್ಸಿನ ಚಟುವಟಿಕೆಗಳನ್ನು ಮನ್ನಿಸುವಂತಾಯಿತು. ಕೊಂಗ್ರೆಸ್ಸು ತನ್ನ ಸನ್ಮಾರ್ಗವನ್ನು ಬಿಟ್ಟುಹೋಗಲಿಲ್ಲವೆಂಬ ವಿಷಯವು ಈ ಮಂದಪಕ್ಷೀಯ ಮಹನೀಯರುಗಳಿಗೆ ಈಗಿನ ಬಿಕ್ಕಟ್ಟಿನ ಸಂದರ್ಭದಲ್ಲಾದರೂ ತಿಳಿಯದಿರದು ಅವರು ಇದೇ ರೀತಿ ತಮ್ಮ ಅಸಹಕಾರದ ತಳಹದಿಯ ಮೇಲೆ ದೃಢವಾಗಿ ನಿಂತುಬಿಟ್ಟರೆ ಅದರಿಂದ ಅಪ್ರತಿಹತ ಪರಿಣಾಮಗಳು ಘಟಿಸಿಬಿಡುವುದರಲ್ಲಿ ಸಂದೇಹವಿಲ್ಲ ಸರಕಾರವು ೧೯೩೧ನೇ ಇಸವಿಯ ನವಂಬರ ತಿಂಗಳಲ್ಲೇ ಓರ್ಡಿನೆನ್ಸುಗಳನ್ನು ಸಿದ್ಧಮಾಡಿಕೊಂಡಿದ್ದಿತು ಓರ್ಡಿನೆನ್ಸು ಶಾಸ್ತ್ರಾವಳಿಯ ಪ್ರತಿ ನಕಲೇ ನನಗೆ ಆ ಸಮಯದಲ್ಲಿ ದೊರಕಿತ್ತು ಗಾಂಧಿಜೀಯವರು ಲಂಡನಿನಲ್ಲಿರುವಾಗಲೇ ಈ ಶಾಸನರಾಜ್ಯವು ಸಿದ್ಧಿಯ ಕುಲುಮೆಯಲ್ಲಿದ್ದಿತು ಆ ನಕಲು ನನಗೆ ದೊರಕಿದೊಡನೆ ನಾನದನ್ನು ಪಂಡಿತ ಜವಾಹರಲಾಲ್, ವಲ್ಲಭಭಾಯಿ ಪಟೇಲ, ಅಬ್ದುಲ್ ಘಫರ್‌ಖಾನ್ ಮೊದಲಾದ ರಾಷ್ಟ್ರೀಯವಾದಿಗಳಿಗೆ ತೋರಿಸಿದೆನು ಇಂತಹ ಸಿದ್ಧತೆಯಿಂದಾಗಿ, ಮುಂದಕ್ಕೆ ಮಹಾತ್ಮರು ಲಂಡನಿನಿಂದ ಹಿಂದಿರುಗಿದೊಡನೆ ಏನೆಲ್ಲ ನಡೆಯಿತೆಂದು ಲೋಕವಿದಿತವಿದೆ ಕೊಂಗ್ರೆಸ್ಸು ಸದಾಸರ್ವದಾ ಶಾಂತಿಯನ್ನೇ ನಿರೀಕ್ಷಿಸುತ್ತಿದೆ" ಎಂದರು

ಈಗ ಎಲ್ಲರೂ ಹಿಂದೂದೇಶದ ಪರಿಸ್ಥಿತಿಯ ಮೇಲೆಯೇ ಕಣ್ಣಿಟ್ಟವರಾಗಿದ್ದಾರೆ ಇದೇ ತಿಂಗಳ ಅಂತ್ಯದೊಳಗೆ ಇಲ್ಲಿಗೆ ಇಂಗ್ಲೆಂಡಿನ ಇಂಡಿಯಾ ಲೀಗ್ ಎಂಬ ಸಂಸ್ಥೆಯ ಪ್ರತಿನಿಧಿಗಳಾಗಿ ಮಿಸ್ ಎಲ್ಲನ್ ವಿಲ್ಕಿನ್‌ಸನ್, ಮಿಸ್ ಮೊನಿಕಾ ವಾಲ್ಲಿ, ಮಿಸ್ಟರ್ ಲಿಯೊನಾರ್ಡ್ ಮೆಟರ್ಸ್ ಮತ್ತು ಶ್ರೀ ವಿ ಕೆ ಕೃಷ್ಣ ಮೆನೊನ್ ಎಂಬವರು ಹಿಂದೂದೇಶಕ್ಕೆ ಬಂದು ಇಲ್ಲಿಯ ಸ್ಥಿತಿಗತಿಗಳನ್ನು ತಿಳಿದು ಹಿಂತೆರಳಲಿರುವರು ಇವರ ವೆಚ್ಚಕ್ಕೆ ಬೇಕಾದ ನಿಧಿಯನ್ನು ಪಂಡಿತ ಮಾಲವೀಯರೂ ಇನ್ನಿತರ ಆಂಗ್ಲಧುರೀಣರೂ ಎತ್ತಿರುವರೆಂದು ತಿಳಿದುಬಂದಿದೆ ದೀನಬಂಧು ಸಿ. ಎಫ್ ಎಂಡ್ರ್ಯೂಜರೇ ಮೊದಲಾದ ಅನೇಕಾನೇಕ ಘನವ್ಯಕ್ತಿಗಳು ತಮ್ಮ ಅನುಭವವನ್ನು ಹೇಳಿದ ಮೇಲೂ ಇಂಗ್ಲೆಂಡಿನವರು ಎಚ್ಚತ್ತಿಲ್ಲವೆಂದಿರುವಾಗ ಪುನಃ ಈ ಪ್ರತಿನಿಧಿಗಳನ್ನು ಇಲ್ಲಿಗೆ ಭಾರವಾದ ವೆಚ್ಚದಿಂದ ತರಿಸಿಕೊಂಡುದರಿಂದ ಏನು ಫಲವೋ ತಿಳಿಯದೆಂದು ಕೆಲವರೆನ್ನುತ್ತಿರುವರು ಅಂತೂ ಇದರ ಪ್ರಯೋಜನವು ಮುಂದಕ್ಕೆ ತಿಳಿದೀತು

ಕಾಯುತ್ತಿರಿ

ಬರುವ ವಾರದ (೨೬-೮-೩೨)ನೇ ಶುಕ್ರವಾರ ಸ್ವದೇಶಾಭಿಮಾನಿಯು ಅತ್ಯುತ್ತಮವಾದ ಕಥೆಕಾದಂಬರಿಗಳನ್ನೊಳಗೊಂಡ ಸಾಹಿತ್ಯ ಸಂಚಿಕೆಯೊಡನೆ ಹೊರಡುವುದು

ಮೆನೇಜರ—

ಅತ್ಯುತ್ಕೃಷ್ಟ ಮುದ್ರಣ ಬೇಕೆ? ಶಾರದಾ ಪ್ರೆಸ್ ಮಂಗಳೂರು, ಇಲ್ಲಿ ವಿಚಾರಿಸಿ.

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

I N

A Seiberling Tire.

You cannot find a better combination.

ಬ್ರಿಟಿಷ ನಿರುದ್ಯೋಗಿಗಳು

ದಿನೇ ದಿನೇ ಹೆಚ್ಚುತ್ತಲಿದ್ದಾರೆ ಮೇ ತಿಂಗಳಿಗಿಂತ ಜೂನಿನಲ್ಲಿ ೮೦೦೦ ಮಂದಿ ಹೆಚ್ಚು, ಅಂದರೆ ಕಳೆದ ಜೂನ್ ತಿಂಗಳಿಗಿಂತ ಈ ಜೂನಿನಲ್ಲಿ ೩೨೦೦೦ ಮಂದಿ ಹೆಚ್ಚಿದರು. ಆಹಾರ ಜಿನಸುಗಳು ಅತ್ಯಗತ್ಯವಾಗಿವೆ; ಕಚ್ಚಾ ಸಾಮಾನು ಧಾರಾಳವಾಗಿ ಸಿಗಬೇಕಾಗಿದೆ ಹೀಗೆ ಆಮದುಗಳು ಹೆಚ್ಚಲೇ ಬೇಕಾಗಿದೆ. ಇವು ಬಾರದೆ, ಅತಿಕಡಿಮೆ ಸಂಖ್ಯೆಯೆಂದರೂ ಮೂವತ್ತು ಲಕ್ಷ ಜನರು ಈಗಲೆ ಕೆಲಸವಿಲ್ಲದೆ, ಎಲ್ಲ ಜನ ಸಂಖ್ಯೆಯ ಕಾಲಂಶವು ನಿರಾಧಾರವಾಗಿದೆ ಇತ್ತ ಇಂಡಿಯ ಅತ್ತ ಐರ್ಲೆಂಡು ಎರಡೂ ಬಹಿಷ್ಕಾರವ್ರತವನ್ನಾಚರಿಸಿವೆ, ಇತರ ಪ್ರತಿಯೊಂದೂ ದೇಶವು ಕೈಗಾರಿಕೆಗಳಲ್ಲಿ ಸಂಪನ್ನವಾಗುತ್ತ ಬಂದು, ಅಧಿಕ ಬೆಲೆಯ ಅಧಿಕ ಸುಂಕದ ಇಂಗ್ಲಿಷ್ ಕೈಗಾರಿಕೆಯ ಸಾಮಾನುಗಳನ್ನು ಕೊಂಡುಕೊಳ್ಳುವುದಿಲ್ಲ ಸಾಮ್ರಾಜ್ಯದ ಇತರ ಅಂಗಗಳು ಬ್ರಿಟಿಷ ಹೊಟ್ಟೆಯನ್ನು ಪೋಷಿಸುವವೊ ಎಂದರೆ,—ಪ್ರತಿಯೊಂದು ವಸಾಹತೂ ತನಗೆ ಬೇಕಾದುದನ್ನು ಕೇಳುತ್ತಲಿ ಇದೆ ವಿನಾ ಈ ಹೊಟ್ಟೆಗೆ ಬೇಕಾದ್ದುದನ್ನು ಒದಗಿಸಲು ಅಷ್ಟು ಆಸಕ್ತಿ ಇಲ್ಲದೆ ಇದೆ ಎಂದು ಒಟ್ಟಾವಾ ಕೊನ್ಫರೆನ್ಸಿನಿಂದ ತೋರುತ್ತಿದೆ ಅಲ್ಲಲ್ಲಿ ಬಿತ್ತಿದ ದುಡ್ಡಿನ ಬಡ್ಡಿಯಿಂದ ಜೀವಿಸೋಣವೆಂದರೆ, ಬಡ್ಡಿಯ ಮೊಬಲಗು ಕಂತುಗಳಲ್ಲಿ ಸಿಗಲಾರಂಥವಾಗಿದೆ ಸುಂಕವೇರಿಸಿದುದರ ಫಲವಾಗಿ ಎರಡು ಮಿಲ್ಲಿಯ ಪವನಿನಷ್ಟು ವ್ಯಾಪಾರವು ಒಂದೇ ತಿಂಗಳಲ್ಲಿ ಕಡಿಮೆಯಾಯಿತು. ಇನ್ನು ಅಭ್ಯುದಯೋಪಾಯಗಳೇನಿವೆ?

ಉಪಾಯಗಳಿವೆ; ಕೈಗೊಳ್ಳುವವರಿಲ್ಲ

ಕುಬೇರನ ಭಂಡಾರದಂತಿದ್ದ ಇಂಡಿಯವು ಪುನಃ ಕೈಗೆ ನಿಲುಕಬೇಕಾದರೆ, ಸಂಧಾನದ ಉಪಾಯವೊಂದಿದೆ, ಚೀನದಲ್ಲಿ ಸಂಪಾದನೆ ಹೆಚ್ಚಬೇಕಾದರೆ, ಸೈಮನರು ಅಂಗೀಕರಿಸಿ ನಿರ್ವಹಿಸುವ ಜಾಪಾನು ಸಖ್ಯವನ್ನು ಸ್ವಲ್ಪ ಕುಂದಿಸಬೇಕು, ಅಮೇರಿಕವು ಸೂಚಿಸಿದಂತೆ ಯುದ್ಧ ಸನ್ನಾಹ ತ್ಯಜಿಸುವುದರ ಮೂಲಕ ಯುದ್ಧ ಸಾಲಗಳನ್ನು ರದ್ದುಮಾಡಿಕೊಳ್ಳಬೇಕು, ಸುಂಕಗಳನ್ನಿಳಿಸಿ ವ್ಯಾಪಾರವು ತಡೆಯಿಲ್ಲದೆ ಸಾಗುವಂತೆ ಯತ್ನಿಸಬೇಕು, ಐರ್ಲೆಂಡಿನ ವಾಣಿಜ್ಯ ಸಮರೋದ್ಯೋಗವನ್ನು ತಡೆಯಲು, ಅಂತಹ ನೆರೆಯ ರಾಜ್ಯದೊಡನೆ ಸಮಾಧಾನದಿಂದ ಸಖ್ಯ ಬೆಳೆಸಿಕೊಳ್ಳಬೇಕು ಇದೊಂದನ್ನು ಕೈಗೊಳ್ಳಲು ಈಗಣ ಪುರೋಹಿತ ಮಂಡಲಿಗೆ ಹಿತವೆನಿಸದಿರುವಾಗ, ಬೇರೇನು ವಿಹಿತವಾದುದನ್ನು ಸಾಧಿಸಲು ಬರೇ ಪರಿಷತ್ತುಗಳನ್ನು ಕೂಡಿಸಿ ಯತ್ನಿಸಲಿದೆ?

ಮೂರನೆ ತರಗತಿಯ ರೈಲ್ವೆ ಪ್ರಯಾಣಿಕನು

ನಮ್ಮ ದೇಶದಲ್ಲಿ ಗಾಡಿಗೆ ಒಂದ ಜಂತು! ಆ ತರಗತಿಯ ಗಾಡಿಯೊಳಗೆ ನುಗ್ಗಿದರೆ,—ನುಗ್ಗುವರೆ ಜನ ಸಂಖ್ಯೆ ಬಹಳ, ಕೂತರೆ ದೂಳು, ತಗಣೆ, ನಿಂತರೆ ನಾತ, ಹೊಯ್ದಾಟ, ಮಲವಿಸರ್ಜನೆಗೆ ಸ್ಥಳಯಿದೆ, ನೀರು ಕೆಲವೇಳೆ ಇರದು, ಈ ತರಗತಿಯ ಗಾಡಿಗಳ ಸಂಖ್ಯೆಯೇ ಕಡಿಮೆ, ರಾತ್ರಿ ವೇಳೆ ಮಲಗುವರೆ ಸ್ಥಳವೇ ಸಿಗದು ಗಾಡಿ ಹೊರಡಲು ವೇಳೆ ಇದೆ ಎಂತಾದರೆ, ಪ್ರಯಾಣಿಕರು ಕುಳ್ಳಿರಲು ಸ್ಥಳವೇ ಇಲ್ಲ ಟಿಕೇಟು ಪಡಕೊಳ್ಳುವುದಾದರೆ, ಅದೊಂದು ಪುನರ್ಜನ್ಮ'' ಎಂದೀ ಟೀಕೆಯನ್ನು ಆಗಾಗ ಸೇರುವ ಪ್ರಯಾಣಿಕರ ಪವಿತ್ರನಲ್ಲಿ ಓದಿ ಬೇಸರವಾದರೂ, ಈ ತರಗತಿಯ ಪ್ರಯಾಣಿಕರು ಸ್ವತಃ ಯಾವ ಸುಧಾರಣೆಮಾಡಿಕೊಳ್ಳಲು ಸಿದ್ಧರಾಗಿಲ್ಲವೇಕೆ? ಕುಳ್ಳಿರಬಹುದಾಗಿ ಸೂಚಿತವಾಗುವ ಸಂಖ್ಯೆಗಿಂತ ಅಧಿಕ ಸಂಖ್ಯೆಯ ಪ್ರಯಾಣಿಕರು ಟಿಕೇಟು ಪಡೆದುಕೊಂಡೂ ಗಾಡಿಗಳ ಸಂಖ್ಯೆ ಏರಿಸ ಹೇಳದೆ, ಎಡೆಬಿದ್ದಲ್ಲಿ ನುಗ್ಗುವದೇಕೆ? ಮೂರನೆ ತರಗತಿಯ ಟಿಕೇಟುಗಳನ್ನು ಕೇಳಿದಾಗ ಸಿಗುವಂತೆ ಏರ್ಪಾಡನ್ನು ಮಾಡಿದರೆ ಸುಖವಾಗಿ ಟಿಕೇಟನ್ನೂ ಚಿಲ್ಲರೆಯನ್ನೂ ಪಡೆಯಬಹುದು. ಕಂಪೆನಿಯವರಿಗೆ ಈ ಬಗ್ಗೆ ಒತ್ತಾಯವಮಾಡುವವರಾರು? ಯುರೋಪ, ಅಮೇರಿಕಗಳಲ್ಲಿ ತಾಸಿಗೆ ನೂರು ಮೈಲು ಓಡುವ ರೈಲುಗಳಿರುವಾಗ, ಇಂಡಿಯದಲ್ಲಿ ರೈಲ್ವೆ ಗಾಡಿಗಳ ಓಟವು ಸರಾಸರಿ ಹತ್ತೇ ಮೈಲು! ಎಂದು ಸೇಲಮಿನಲ್ಲಿ ಸೇರಿದ ರೈಲ್ವೆ ಪ್ರಯಾಣಿಕರ ಪರಿಷತ್ತಿನ ಗೋಳಾಟ!

ಜಪಾನಿನ ಜಂಬ!

ಅತಿ ಕಡಿಮೆ ಕ್ರಯಕ್ಕೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಹತ್ತೀ ಬಟ್ಟೆಯ ರಾಶಿಗಳನ್ನು ಮುಂಬಾಯಿಯ ಬಂದರಕ್ಕೆ ಜಪಾನು ಕಳುಹ ತೊಡಗಿದ್ದರಿಂದ, ಇಲ್ಲಿಯ ಗಿರಣಿಗಳ ಹತ್ತೀ ಬಟ್ಟೆಗಳಿಗೆ ಗಿರಾಕಿಗಳು ಕಡಿಮೆ; ಇದನ್ನು ಸರಕಾರಕ್ಕೆ ಧ್ವನಿಸಿ, ಜಪಾನು ಸರಕಿನ ಮೇಲೆ ಹೆಚ್ಚಿನ ಸುಂಕವೇರಿಸಲು ಪ್ರಾರ್ಥಿಸಿ; ಅದರಂತೆ ವಿಚಾರ ನಡೆದು, ಇನ್ನು ಇತ್ಯರ್ಥ ಮಾತ್ರ ಉಳಿದಿದೆ. ಇದನ್ನು ತಿಳಿದ ಜಪಾನು,—ಇಂಡಿಯದಿಂದ ಆಮದು ಮಾಡುತ್ತಿದ್ದ ಹದಿನೈದು ಲಕ್ಷ ಮೂಟೆ (ಮೂಟೆಗೆ ೪೦೦ ರಾತ್ಲು) ಹತ್ತಿಯನ್ನು ಇನ್ನು ಕೊಂಡುಕೊಳ್ಳುವುದಿಲ್ಲವೆಂದು ಬೆದರಿಸಿಯದೆ. ಈ 'ಬೆದರಿಕೆ' ನಿರರ್ಥಕ. ತನಗೆ ಅಗತ್ಯವೆಂದು ಕಂಡರೆ, ಇಂಡಿಯದ ಕಡಿಮೆ ಕ್ರಯದ ಹತ್ತಿಯನ್ನು ಬೇಕಾದಂತೆ ಜಪಾನು ಕೊಂಡುಕೊಳ್ಳುವುದು. ಇಲ್ಲಿಂದ ಆಮದು ಮಾಡುತ್ತಿದ್ದ ಕಬ್ಬಿಣದ ಅದುರಿನ ಮೇಲೆ ಸೇಕಡಾ ೪೦೦ರ ಸುಂಕ ಹೊರಿಸುವಾಗ, ಜಾಪಾನು ಯಾವ ಶಾಸ್ತ್ರಾಧಾರದಿಂದ ಈ ಬಗೆಯಾಗಿ ಮೈತ್ರಿ ಸಾಧಿಸಲು ಯತ್ನಿಸಿತೆಂದು ತಿಳಿಸೀತೆ?

ಸಕ್ಕರೆ

ನಮಗೆ ಪರದೇಶದಿಂದ ಬರುತ್ತಿರುವ ಸಾಮಾನುಗಳಲ್ಲಿ ಮೊದಲನೆಯದು ಅರಳೇ ಬಟ್ಟೆ, ಎರಡನೆಯದು ಸಕ್ಕರೆ ದೇಶದಲ್ಲಿ ತಯಾರಾಗುವ ಸಕ್ಕರೆಯು ಬರೇ ಒಂದು ಲಕ್ಷ ಖಂಡಿ, ಜಾಪಾನದಿಂದ ತರಿಸಲಾಗುವುದು ಹತ್ತು ಲಕ್ಷ ಖಂಡಿ! ಇನ್ನೂ ಇನ್ನೂ ಸಕ್ಕರೆಯ ಉಪಯೋಗವು ಹೆಚ್ಚಾಗುತ್ತಲೇ ಬರುತ್ತಿದೆ, ಮುಂದೂ ಬೆಳೆಯುವುದು ಕಳೆದ ಎಸೆಂಬ್ಲಿಯ ಸಭೆಯಲ್ಲಾದ ಚರ್ಚೆಯ ಫಲವಾಗಿ, ವಿದೇಶದ ಸಕ್ಕರೆಯ ಮೇಲೆ ಸುಂಕವೇರಿಸಿದ ಕಾರಣ, ಇಲ್ಲಿ ಸಕ್ಕರೆಯ ಕೈಗಾರಿಕೆಗೆ ತುಂಬ ಬೆಲೆ ಸಿಗುವುದೆಂದು, ಇಷ್ಟರಲ್ಲಿ ಇಪ್ಪತ್ತು ಹೊಸ ಕಾರ್ಖಾನೆಗಳು ಉತ್ತರ ಹಿಂದುಸ್ಥಾನದಲ್ಲಿ ತಲೆಯೆತ್ತುತ್ತಿವೆ ಮಹಾರಾಷ್ಟ್ರವು ಪ್ರತಿ ವರ್ಷ ೧೫೦ ಲಕ್ಷ ಖಂಡಿ ಸಕ್ಕರೆಯನ್ನು ಉಪಯೋಗಿಸುವುದಾದರೂ, ಹವಾಗುಣವು ಉತ್ತಮವಾಗಿದೆಯಾದರೂ, ಅಲ್ಲೇಕೆ ಈ ಕೈಗಾರಿಕೆ ಇನ್ನೂ ಉಂಟಾಗಿಲ್ಲ? ಸರಕಾರದ ಕೈಗಾರಿಕೆ ಇಲಾಖೆಯು ಈ ಕಡೆಗೆ ಗಮನಕೊಟ್ಟಿಲ್ಲವೆಂದೂ, ಲಕ್ಷಾಧೀಶರಿರುವ ಮಹಾರಾಷ್ಟ್ರವು ದೂರಿದರೆ ಅದು ಶೋಭಿಸುವುದೆ? ದಕ್ಷಿಣದಲ್ಲಿ ಹತ್ತು ಕೋಟಿ ರೂಪಾಯಿ ವ್ಯಯಿಸಿ ಕಾಲುವೆಗಳನ್ನು ಕಡಿಸಿದ ಸರಕಾರವು ಅವುಗಳ ನೀರಿನಿಂದ ಕಬ್ಬಿನ ಕೃಷಿಯನ್ನೇಕೆ ಮಾಡಿಸಲಾಗದು? ಅಪಾರ ಹಣವು ನೀರುಪಾಲಾಯಿತು, ಅದೇ ನೀರಿನಿಂದ ಸಕ್ಕರೆಯ ಸವಿಯೂ ಹೊರಟರೆ, ಇನ್ನು ಹತ್ತು ಹದಿನೈದು ವರ್ಷಗಳೊಳಗೆ ಸುಮಾರು ೨೦ ಕೋಟಿ ರೂಪಾಯಿಗಳನ್ನು ಪರದೇಶದವರ ಚೀಲದಲ್ಲಿ ಬೀಳದಂತೆ ಉಳಿಸಬಹುದು ಎಂದು ಮಹಾರಾಷ್ಟ್ರ ವರ್ತಕ ಮಂಡಲಿಯ ಸೂಚನೆ ಸೂಚನೆಯು ಸಕ್ಕರೆಗಿಂತಲೂ ಸವಿ.

ಸರಕಾರೀ ಸೋಡ್ತಿಗಳು

ಮದ್ರಾಸು ಕೌನ್ಸಿಲಿನ ಅಧಿವೇಶನದಲ್ಲಿ, ಪ್ರಜಾಭ್ಯುದಯಕ್ಕೆ ಕಾರಣವಾಗಿರುವ ಇಲಾಖೆಗಳ ಖರ್ಚಿಗೆ ಸಾಕಷ್ಟು ಹಣವು ಖಜಾನೆಯಲ್ಲಿ ಇಲ್ಲದಿರುವ ಕಾರಣ, ಸರಕಾರವು ಸೋಡ್ತಿಯ ಮೂಲಕ ಹಣವನ್ನೆತ್ತಬಾರದೆ? ಎಂದು ಸೂಚನೆ ಬರಲು, ಅದು ಮಹಾ ಪಾತಕವೆಂದಾಯಿತು ಮುಂಬಾಯಿ ಮ್ಯುನಿಸಿಪಾಲಿಟಿಯಲ್ಲಿರುವ ಆಸ್ಪತ್ರೆಗಳ ಸಹಾಯಕ್ಕಾಗಿ ಇಂತಹ ಸೋಡ್ತಿಯನ್ನೆತ್ತುವುದೂ ಪಾತಕವೆಂದು ಅಲ್ಲಿಯೂ ಇತ್ಯರ್ಥವಾಯಿತು ಬರ್ಮಾದಲ್ಲಿ? ಸರಕಾರವು ಸೋಡ್ತಿ ಎತ್ತಬಹುದಾಗಿ ಸೂಚನೆಯು ಕೌನ್ಸಿಲಿನಲ್ಲಿ ಮಂಜೂರಾಯಿತು ಅಲ್ಲಿ ಬೌದ್ಧಮತೀಯರು ಬಹಳವಿರುವುದರಿಂದ, ಅರ್ಥ ಸಚಿವರು ಬೌದ್ಧ ಧರ್ಮಸೂತ್ರಗಳಿಗೆ ಅರ್ಥ ಹೇಳಿಕೊಡುತ್ತಾ, ಅದು ಧರ್ಮವಿರುದ್ಧವೆಂದರು ಆದರೆ, ಬೌದ್ಧಮತೀಯರಾದ ಅವರೇಕೆ ಬೌದ್ಧಮತೀಯರಲ್ಲದವರ ಅರ್ಥಕ್ಕೆ ಕಿವಿಗೊಡುವರು? ನ್ಯಾಯಶಾಸ್ತ್ರ ವಿಶಾರದರಾದ ಸರಕಾರೀ ಕೌನ್ಸಿಲರರು ಈ ಸೋಡ್ತಿಗಳ ದೆಸೆಯಿಂದಲೇ ಬರ್ಮಾದ ಅರಸುಗಳು ರಾಜ್ಯ ಭ್ರಷ್ಟರಾದರೆಂದರು ಆ ಕಾಲದಲ್ಲಿ ಬರ್ಮಾದಲ್ಲಿ ಹಣಕ್ಕೆ ಅಭಾವವಿಲ್ಲದೆ ಪ್ರಜೆಗಳಿಗೆ ಇಷ್ಟವಾದ ಕಾರ್ಯಗಳು ಸೋಡ್ತಿಯಿಂದಲಾದರೂ ಸಾಗುತ್ತಿದ್ದುದರಿಂದಲೇ ಅವರು ತೀರ್ಮಾನಿಸಿದರು ಐರ್ಲೆಂಡಿನಲ್ಲಿ ಕೋಟ್ಯಂತರ ಪವನುಗಳನ್ನು ಸರಕಾರವು ಆಸ್ಪತ್ರೆಗಳಿಗಾಗಿ ಸೋಡ್ತಿ ಮೂಲಕವೇ ಎತ್ತಿದೆ, ಅದು ಬಹಳ ಖರ್ಚಿನ ಮಾರ್ಗವೆಂದು ಸರಕಾರೀ ಮೆಂಬರರೆಂದರು; ಜುಗಾರಿನ ದೆಸೆಯಿಂದ ಬರ್ಮಾದಲ್ಲಿ ಹತ್ಯೆಗಳಾಗುತ್ತಿವೆ, ಸೋಡ್ತಿಯಿಂದ ಹೆಚ್ಚುವುವೆಂದು ಬೆದರಿಸಿದರು. ಮಹಾಧಿಕಾರಿಗಳೂ ಕುದುರೇ ಜೂಜಿನಿಂದ ಹಣ ಸಂಪಾದಿಸುವವರನ್ನು ಪುಣ್ಯವಂತರೆನ್ನುವಾಗ, ಪ್ರಜಾಕೋಟಿಯ ಹಿತಕ್ಕಾಗಿ ಒಂದು ಸೋಡ್ತಿ ಎತ್ತಿದರೆ ಅನ್ಯಾಯವೇನು ಎಂದು ಕೌನ್ಸಿಲು ಸೂಚನೆಯನ್ನು ಮಂಜೂರು ಮಾಡಿತು!

ನೋಟಗಳು

NOTE...S

ಹಣ್ಣುಗಳನ್ನು ಕೊಳೆಯದಂತಿರುವ ನವೀನ ಕ್ರಮದಂತೆ ಕಳೆದ ವರ್ಷ ೧೬೦೦೦ ಪೆಟ್ಟಿಗೆ ಮಾವಿನಹಣ್ಣು ಲಂಡನಿಗೆ ಬೊಂಬಾಯಿಯಿಂದ ತಲುಪಿತು. ಬೆಲೆ ರೂ ೩ ಲಕ್ಷ. ನಷ್ಟ ಸೇಕಡಾ ೪೦ ವಿಲಾಯತಿಯವರು ಹಣ್ಣು ನುಂಗಲು ತೊಡಗಿದರೆ, ನಮ್ಮೂರಲ್ಲಿ ಮಾವಿನಹಣ್ಣು ಮಾವನ ಹೆಣ್ಣಿಗಿಂತಲೂ ಪ್ರಿಯವಾಗುವುದು.

* * * *

ಮಂಗಳೂರು Hampankatta ಹಂಪನಕಟ್ಟೆಯು ಒಂದು ಸ್ಮಾರಕಾರ್ಥವಾಗಿಯೋ ಎಂಬಂತೆ ಮದ್ರಾಸಿನ ಹಿಂದೂ ಪತ್ರಿಕೆಯ ಮಂಗಳೂರು ಬಾತ್ಮಿಯಲ್ಲಿ Thampankatta ತಂಪನಕಟ್ಟೆಯೆಂದೇ ಛಾಪೆಯಾಗಿದೆ ಇನ್ನು ಮ್ಯುನಿಸಿಪಲ್ ಕೌನ್ಸಿಲು ಅದಕ್ಕೆ ಯೋಗ್ಯ ನಾಮಕರಣ ಸಮಾರಂಭ ಮಾಡಲಿ.

* * * *

ಮೌಂಜೀ ಬಂಧನವೆಂದರೆ ಉಪನಯನ ಡಾ| ಮುಂಜೇಯವರು ಹಿಂದು ಮಹಾಸಭಾಧ್ಯಕ್ಷರಾಗಿಯೂ, ಸ್ವೇಚ್ಛೆಯಾಗಿ ಲಂಡನಿಗೆ ತೆರಳಿ ಹದ್ದು ಮೀರಿದರೆಂದು ಈಗ ಅವರು ಸ್ವತಃ ರಾಜೀನಾಮೆ ಕೊಟ್ಟು ಮೌಂಜೀ ಬಂಧನ ಮಾಡಿಕೊಂಡರು. ಉಪನಯನವಾದ ಮೇಲೆ ಇನ್ನು ಎವಾರ್ಥನ ಲಗ್ನಮುಹೂರ್ತ

* * * *

ಸಿಕ್ಖರು ಹೆಸರಲ್ಲೇ ಯಾವಾಗಲೂ ಸಿಕ್ಖರು ಇವರು ಕೊಂಗ್ರೆಸಿನ ಪ್ರೇರಣೆಯಿಂದ ಪಂಜಾಬಿನಲ್ಲಿ ಅಧಿಕ ಸ್ಥಾನಗಳನ್ನು ಲಭಿಸಿಕೊಳ್ಳಲು ಪ್ರಯತ್ನಿಸುತ್ತಾರೆಂದು, ಅವರಿಗೂ ಹಿಂದೂಗಳಿಗೂ ಇದ್ದ ವಿವಾದವು ಮುಗಿಯಿತೆಂದು ತೋರುವುದಾಗಿ, ಲಾಹೋರಿನ ಆಂಗ್ಲೋ ಇಂಡಿಯನ್ ಪತ್ರಿಕೆ ಎನ್ನುತ್ತದೆ ಸಿಕ್ಖರು ಕೊಂಗ್ರೆಸಿಗೂ ಸಿಕ್ಕರು ಎಂದು ಸಿಕ್ಖರೇ ಹೇಳಿದುದಲ್ಲದೆ ಮುಸ್ಲಿಮ ಪತ್ರಿಕೆಗಳೂ ಎಂದಿವೆ ಎಂಗ್ಲೋ ಇಂಡಿಯನರಿಗೆ ಸಿಕ್ಖರು ಸಿಕ್ಕರೆಂದು ಈ ಅಪವಾದವೆ?

* * * *

ವಕೀಲರು: ಒಂದು ದನದಂತಹ ಪ್ರಾಣಿಯ ನಾಲಗೆಯ ಚಿಕ್ಕ
ತುಂಡು ಕಡಿದರೆ, ಅದು ತಕ್ಸೀರಾಯಿತೆ?
ಕಲ್ಕತ್ತದ ಹೈಕೋರ್ಟು ಜಡ್ಜರು ಸೃಷ್ಟಿಯಲ್ಲಿರುವ ಕೆಲವು
ಜೀವಿಗಳ ನಾಲಗೆಯನ್ನೆ ಕಡಿದರೂ (ವಕೀಲರನ್ನು
ಕುರಿತು) ಅದು ಅಷ್ಟು ಅನ್ಯಾಯವಾಗದು ಆದರೆ
ದನದ ನಾಲಗೆ ಅಂತಹ ನಾಲಗೆಯಲ್ಲ
ಅಪರಾಧಿಗೆ ಕಠಿಣ ಸಜೆ ವಿಧಿಸಲಾಯಿತು

* * * *

ಸ್ವೀಡನ್ ಪ್ರಭುಗಳು,—ಬ್ರಿಟಿಷರು ಮದ್ಯಪಾನ, ಜುಗಾರುಗಳಿಗಾಗಿ ವಾರ್ಷಿಕ ಐವತ್ತು ಕೋಟಿ-ಪವನುಗಳನ್ನು ವ್ಯಯಿಸುತ್ತಾರೆಂದು ಪ್ರಕಟಿಸಿದ್ದಾರೆ ಇಂಡಿಯದಲ್ಲಿ ಅಷ್ಟು ರೂಪಾಯಿಗಳನ್ನಾದರೂ ಆ ಸಲುವಾಗಿ ವ್ಯಯಿಸಬೇಡವೆ? ಏನನ್ಯಾಯ!

* * * *

ಮುಂಬಾಯಿಯಲ್ಲಿ ಗುಜರಾಥಿ ಹುಡುಗಿಯೊಬ್ಬಳು ಮದುವೆಯಾಗಿ ಎರಡು ತಿಂಗಳಲ್ಲೇ ಮಗುವನ್ನು ಹೆತ್ತುದು ಜಾತಿಬಹಿಷ್ಕಾರಕ್ಕೆ ಕಾರಣವಾದೀತೆಂದು ಹೆದರಿ, ಮಗುವನ್ನು ಕೊಂದಿರಲು, ಅವಳ ಪರಿವಾರವನ್ನೆಲ್ಲ ಕೈದುಮಾಡಿರುವರು ಮದುವೆಯಾಗುವ ಮೊದಲೇ ಮಗುವನ್ನು ಹೆತ್ತು ಸುಖವಾಗಿರುವ ಕನ್ನೆಯರು ಇಲ್ಲಿ ಕಡಿಮೆಯಾದರೂ ವಿಲಾಯತಿಯಲ್ಲಿ ಎಷ್ಟಿಲ್ಲ?

* * * *

ಉಡುಪಿಯಲ್ಲಿ ವಿಧವಾ ವಿವಾಹ ಆದ ಸುದ್ದಿಯು ಎಲ್ಲರಿಗೂ ತಿಳಿದಿರಬೇಕು

* * * *

ಮಂಗಳೂರಲ್ಲಿಯೂ ಸದ್ಯದಲ್ಲಿಯೇ ಯೋಗ್ಯ ಮನೆತನದವರ ವಿಧವೆಯನ್ನು ಯೋಗ್ಯನಾದ ವಿಧುರನಿಗೊಬ್ಬನಿಗೆ (ದಕ್ಷಿಣ ಕನ್ನಡದ ಹೊರಗೆ) ಕೊಟ್ಟು ವಿವಾಹ ನಡೆಯುವುದಾಗಿ ವಾರ್ತೆ ಮಂಗಳೂರಿನವರ ಇಂದಿನ ಬಾಯಿ ಮಾತು ಇದೇ ಆಗಿದೆ

* * * *

ಈಗ ಒಂದು ಮಾತು—ವಿಧವೆಯರಿಗೆ ಪುನಃ ಮದುವೆಯಾಗುವುದಾದರೆ—ಮದುವೆಯಾಗಲು ಉಳಿದ ಹೆಣ್ಣುಮಕ್ಕಳ ಪಾಡೇನು?

* * * *

ವಿಧವೆಯರನ್ನು ವಿಧುರರೇ ಮದುವೆಯಾಗುವುದು ಉತ್ತಮ. ಮದುವೆಯಾಗದ ಯುವಕರು ಈ ಕಡೆಗೆ ಗಮನ ಕೊಡಲಾರರೆಂದು ನಂಬುಗೆ

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಬ್ ಕೋರ್ಟಿನಲ್ಲಿ.

O. S. No. 41/1927. R. E. p. No. 142/22

ನೇ ವ್ಯವಹರಣೆಯಲ್ಲಿ ಆದ ಸ್ಕೀಮು ರೂಲು ಮೇರೆಗೆ ಉಡುಪಿ ತಾಲೂಕು ಕಾಪು ಪೇಟೆಯ ಗೌಡಸಾರಸ್ವತ ಬ್ರಾಹ್ಮಣ ವೃಂದಕ್ಕೆ ಸೇರಿದ ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಆಡಳಿತೆಯ ಬಾಬ್ತು ತಾರೀಕು **1–8–31**ರಿಂದ ತಾರೀಕು **28–7–32**ರ ವರೆಗೆ ನಡೆದ ಜಮಾ ಖರ್ಚಿನ ಲೆಕ್ಕದ ನಕಲು.

ಈ ದಿನ ಕೂಡಿದ ಮಹಾಸಭೆಯ ಮೆಂಬರರು ಇಪ್ಪತ್ತೊಂಬತ್ತು. (29)

ನಂಬ್ರ	ವಿವರ.	ಜಮೆ.			ಖರ್ಚು.		
1	ತಾ. 1–8–31ಕ್ಕೆ ಸಿಲ್ಕು ಉಳಿದ ನಗದು ರೂಪಾಯಿ	280	1	2			
2	ಗದ್ದಿಗೆ ಪೂಜೆ ಬಾಬ್ತು ಜಮಾ ವ ಖರ್ಚು.	1881	13	0	189	6	0
3	ಕುಂಕುಮಾರ್ಚನೆಯ ಬಾಬ್ತು	84	15	0	57	0	0
4	ತಾ. 1–8–31ಕ್ಕೆ ಶಿಲ್ಕು ಉಳಿದ ಹರಿಕೆ ಚಿನ್ನಾಭರಣ ನಂತರ ಈ ವರೆಗೆ ಬಂದ ಚಿನ್ನಬೆಳ್ಳಿ ಕೂಡ ಮಾರಾಟದಿಂದ ಬಂದ ರೂಪಾಯಿ.	546	9	0			
5	ನವರಾತ್ರಿ ಸಂಬಂಧ	9	5	0	134	3	5
6	ವ್ಯವಹರಣೆ ಸಂಬಂಧ ಖರ್ಚು				168	15	0
7	ಮಾರಿಪೂಜೆ ಬಾಬ್ತು ಜಮೆ.	528	14	0	363	7	2
8	ಭಂಡಾರದ ಆಸ್ತಿ ಸರಕಾರ ತೀರ್ವೆ ಖರ್ಚು.				182	12	0
9	ಚಪ್ಪರದ ಬಿದಿರು, ಮಡಲು, ವ ಇತರ ಖರ್ಚಿನ ಬಗ್ಗೆ ಕೂಡಾ				241	8	6
10	ಚಪ್ಪರದ ಬಿದಿರು, ಮಡಲು ವಗೈರೆ ವಿಕ್ರಿತ ಜಮೆ	40	15	6			
11	ಶ್ರೀ ವೆಂಕಟರಮಣ ದೇವರ ಭಂಡಾರದ ಕೈಕಡ ಜಮೆ	860		0			
12	ಸಪ್ರಿ ದೇವರ ಪ್ರತಿಷ್ಠೆ ಸಂಬಂಧವಾದ ಖರ್ಚು				265	4	8
13	ನಗದು ಗೇಣಿ, ಜಮೆ ವಕ್ಲ ಅಕ್ಕಿ ಮಾರಾಟದ ಜಮೆ ಕೂಡಾ	773	7	0			
14	ಭಂಡಾರದಿಂದ ಸಲತಕ್ಕ ಗೇಣಿ ನಗದು ವ ಅಕ್ಕಿ 1–2–8¼				33	0	0
15	ನರಸಿಂಹ ಶ್ಯಾನುಭಾಗ ವಗೈರೆ ಆದಾಯಿನ ಪೈಕಿ	240	5	4			
16	ನೌಕರರಿಗೆ ಸಂದ ನಗದಿ ಅಕ್ಕಿ ತಲಬು ಬಗ್ಗೆ ಖರ್ಚು ನಗದು ಅಕ್ಕಿ ಮುಡಿ 24–1–7 ಕೂಡಾ (ಅಕ್ಕಿ ಕ್ರಯ ಇದರಲ್ಲಿ ಸೇರಲಿಲ್ಲ.]				591	8	1
17	ಪಡುಗ್ರಾಮದ S. No. 44/4ನೇ ಬಾಗಾಯ್ತಿನಲ್ಲಿ ಖರ್ಚು				209	5	7
18	ಮಲ್ಲಾರು ಸ॥ ನಂಬ್ರ 12/9ನೇ ಸ್ಥಳದಲ್ಲಿ ಖರ್ಚು.				16	8	0
19	ಪಡುಗ್ರಾಮದ S No 5/13ನೇ ಸ್ಥಳದಲ್ಲಿ ಖರ್ಚು				97	9	10
20	ಮಾರಿಗುಡಿ ತೆಂಕು ಬದಿ ನೀರು ಹೋಗುವ ತೂಂಬಿಗೆ				43	7	6
21	ದೇವಸ್ಥಾನದ ತೆಂಕಬದಿ ಮಲ್ಲಾರು ಗ್ರಾಮದ S. No. 32/8–10 33/6ನ ಸ್ಥಳದಲ್ಲಿ ಕಟ್ಟೋಣದ ಬಗ್ಗೆ				1728	8	2
22	ದೇವಸ್ಥಾನದಲ್ಲಿ ಬಡ ಗೋಪರದ ಬಗ್ಗೆ ನಗದಿ ಖರ್ಚು ಅಕ್ಕಿ ಮುಡಿ 7–0–8¼				1405	6	7
23	ಉಡುಪಿ ಸಿಂಡಿಕೇಟ ಬೇಂಕಿನ ಬಾಬ್ತು ಜಮಾ ಖರ್ಚು	500		0	15	0	0
	ಜುಮ್ಲಾ ರೂಪಾಯಿ	**5746**	**5**	**0**	**5742**	**9**	**6**
	ತಾ. 28–7–32ಕ್ಕೆ ಬಾಕಿ ಶಿಲ್ಕು ರೂ. ಹರಿಕೆ ಆಭರಣ ಮೂಗುತ್ತಿ 2, ಕರಿಮಣಿ 1 ಕೂಡಾ	3	11	6			

ಶ್ರೀಧರ ಶ್ಯಾನುಭಾಗ, ಪಟೇಲ,
ಪ್ರೆಸಿಡೆಂಟ್.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಬ್ ಕೋರ್ಟಿನಲ್ಲಿ.

O. S. No. 47/1921. ***R. E. P, 142/22.***

ನೇ ಮೊಕದಮೆಯಲ್ಲಿ ಆದ ಸ್ಕೀಮ್ ರೂಲು ಮೇರೆಗೆ ಉಡುಪಿ ತಾಲೂಕು ಕಾಪು ಪೇಟೆಯ ಗೌಡ ಸಾರಸ್ವತ ವೃಂದಕ್ಕೆ ಸೇರಿದ ಕಾಪು ಶ್ರೀ ವೆಂಕಟರಮಣ ದೇವರ ಭಂಡಾರದ ಆಡಳಿತೆಯ ಬಾಬ್ತು ತಾ. **1–8–31**ರಿಂದ ತಾ. **28–7–32**ರ ವರೆಗೆ ನಡೆಸಿದ ಜಮಾ ಖರ್ಚಿನ ಲೆಕ್ಕದ ನಕಲು.

ಈ ದಿನ ಕೂಡಿದ ಮಹಾಸಭೆಯ ಮೆಂಬರರು ಇಪ್ಪತ್ತೊಂಭತ್ತು (29)

ನಂಬ್ರ	ವಿವರ.	ಜಮೆ.			ಖರ್ಚು.		
1	ತಾ. 1–8–1931ಕ್ಕೆ ಸಿಲ್ಕು ಉಳಿದ ನಗದು ರೂಪಾಯಿ ಬೆಳ್ತಿಗೆ ಅಕ್ಕಿ ಮುಡಿ 6–1–1¼ ಕೈಕಡ 0–1–1 ಕೂಡಾ ವಕ್ಲಗಳಿಂದ ವಸೂಲಾದ ಅಕ್ಕಿ ಮುಡಿ 21–0–8¼ ಅಮೃತಪಡಿ ಬಾಬ್ತು 2–0–6 ಮಾರಿಯಮ್ಮ ದೇವರ ಭಂಡಾರದ ಬಾಬ್ತು ಮುಡಿ 2 ನಗದಿ ಪಡೆದ ಅಕ್ಕಿ ಮುಡಿ 11–1–7ಕ್ಕೆ ಖರ್ಚು ಸಮಾರಾಧನೆಗೆ 0–2–1, ಅಮೃತಪಡಿಗೆ 38–2–9¼ ಮತ್ತು	1163	15	4			
2	ನಗದಿ ಕ್ರಯಕ್ಕೆ ಮಾರಿದ ಅಕ್ಕಿ ಮುಡಿ 4ರ ರೂ	13	8	0			
	ಅಮೃತಪಡಿ ಬಗ್ಗೆ ನಗದಾಗಿ ಪಡೆದ ಅಕ್ಕಿ ಮುಡಿ 11–1–7ರ ಕ್ರಯ				57	4	0
3	ವಕ್ಲಗಳಿಂದ ಬಂದ ನಗದು ಗೇಣಿ, ಎಣ್ಣೆ ಕ್ರಯ ಕೂಡಾ	74	4	0			
4	ತಸ್ದೀಕು ಜಮೆ	30	0	0			
5	ಶ್ರೀಧರ ಶ್ಯಾನುಭಾಗರಿಂದ ಕೈಕಡ ಜಮೆ	47	8	0			
6	ಡಬ್ಬಿ ಕಾಣಿಕೆ ಜಮೆ	47	12	0			
7	ಸ್ಥಿರಾಸ್ತಿಯ ಸರಕಾರ ತೀರ್ವೆಗೆ				18	8	0
8	ನಂದಾದಿಪ್ತಿ ಬಗ್ಗೆ ತರಿಸಿದ ಎಣ್ಣೆ ಬಗ್ಗೆ				167	0	0
9	ಎಂಡೋಮೆಂಟ್ ಆಫೀಸಿಗೆ ಖರ್ಚು				19	8	0
10	ಸಮಾರಾಧನೆ ಖರ್ಚು				64	7	6
11	ಹಣಕಟ್ಟಿದ ಬ್ರಾಹ್ಮಣ ಸಂತರ್ಪಣೆಗೆ				6	8	0
12	ಉತ್ಸವ ಮತ್ತು ವಸವಂತದ ಬಗ್ಗೆ				80	12	2
13	ಅರ್ಚಕರಿಗೆ ಸಂದ ತಲಬು				48	0	0
14	ಸಮರ್ಪಣೆ ಕಾಯಿಗೆ				14	6	9
15	ಸಮರ್ಪಣೆಯ ಎಲಡ್ಕೆ, ಬತ್ತಿಗೆ ಕೂಡಾ				12	14	7
16	ಚಪ್ಪರದ ಮಡಲು, ಬಿದಿರು, ಕೂಲಿಯರ ಖರ್ಚು ಕೂಡಾ				23	8	6
17	ವ್ಯವಹರಣೆ ಸಂಬಂಧ ಖರ್ಚು				0	4	9
18	ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರಕ್ಕೆ ಕೈಕಡ ಖರ್ಚು				860	0	0
	ಜುಮ್ಲಾ	**1376**	**15**	**4**	**1373**	**2**	**8**
	ತಾ. 28–7–32ಕ್ಕೆ ಬಾಕಿ ಶಿಲ್ಕು ಉಳಿದ ರೂಪಾಯಿ	3	13	1			

ಶ್ರೀಧರ ಶ್ಯಾನುಭಾಗ, ಪಟೇಲ.

ಪ್ರೆಸಿಡೆಂಟ್.

ಅನುಕ್ರಮಣಿಕೆ.

ಅಗ್ರಲೇಖ

ಜಾತೀಯ ಸಮಸ್ಯೆಯ ತೀರ್ಮಾನ . . . ೨
ಸ್ವಾಭಿಪ್ರಾಯಗಳು . . . ೩
ಟೀಕೆಗಳು . . . . ,,

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೩
ಒಳದೇಶ ವರ್ತಮಾನ . . . . ,,
ದಕ್ಷಿಣ ಕನ್ನಡ— ಮಂಗಳೂರು, ಬಂಟ್ವಾಳ, ಸುರತ್ಕಲ್, ಕಾರ್ಕಳ, ಪುತ್ತೂರು, ಪಲಿಮಾರು, ಮೂಲ್ಕಿ, ಪಡುಬಿದ್ರಿ, ಉಡುಪಿ
ವಿವಿಧ ಸಮಾಚಾರಗಳು . . . ೧೧
ಬಿಸಿಲುಕುದುರೆ . . . ೬
ರಾಜಾರಾಮಮೋಹನ ರಾಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ . . ೧೨
ಶೂಲ್ಲಿನ ಗುಲ್ಲು. ಪುತ್ತೂರು ಬಂಟ್ವಾಳ ಕೋರ್ಟಿನ ಚಳವಳ ,,
ಗಾಂಧೀ ಸರಕಾರಗಳ ರಾಜಿಪ್ರಸ್ತಾಪ! . ೯
ಹಿಂದೂ ಮುಸಲ್ಮಾನ ಪ್ರಶ್ನೆ! ಸರಕಾರದ ತೀರ್ಪು! ೧೪

ಸ್ವದೇಶಾಭಿಮಾನಿ

ತಾ. ೧೯ನೇ ಶುಕ್ರವಾರ ಆಗೋಸ್ಟ್ ೧೯೩೨

ಜಾತೀಯ ಸಮಸ್ಯೆಯ ತೀರ್ಮಾನ.

ಹಿಂದೀ ಮುಖಂಡರು ಜಾತೀಯ ಪ್ರಾತಿನಿಧ್ಯದ ವಿಷಯದಲ್ಲಿ ತಮ್ಮೊಳಗೆನೇ ಯಾವ ಒಪ್ಪಂದಕ್ಕೂ ಬಾರದೆ ಇದ್ದುದರಿಂದ ಬ್ರಿಟಿಷ ಪ್ರಧಾನ ಮಂತ್ರಿಗಳು, ಹಿಂದೂಸ್ಥಾನದ ಮುಖಂಡರೊಳಗೆ ಒಮ್ಮತವಿಲ್ಲದಿದ್ದರೆ ತಾವಾದರೂ ತಮ್ಮ ತೀರ್ಮಾನವನ್ನು ಕೊಟ್ಟುಬಿಡುವೆವೆಂದು ಹೇಳಿದ್ದರು. ಆ ವರೆಗೆ ಕಾದದ್ದೂ ಆಯಿತು. ಆದರೂ ಹಿಂದೂಸ್ಥಾನದಲ್ಲಿ ಜಾತೀಯ ಸಮಸ್ಯೆಯ ತೀರ್ಮಾನವಾಗುವ ಬದಲು ಮತ್ತಷ್ಟು ಗಹನವಾಗುತ್ತ ಬಂದಿತು. ಜಾತಿ ಜಾತಿಗಳೊಳಗಿನ ಭೇದಗಳೂ, ಸ್ವಾರ್ಥಗಳೂ ಮತ್ತಷ್ಟು ಬೆಳೆದುವು ಬ್ರಿಟಿಷ ಪ್ರಧಾನ ಮಂತ್ರಿಗಳು ತಮ್ಮ ಮಾತಿಗೆ ಅನುಗುಣವಾಗಿ ಮುಂದಿನ ಹೊಸ ರಾಜಕೀಯ ವ್ಯವಸ್ಥೆಯಲ್ಲಿ ಜಾತಿಗಳ ಪ್ರಾತಿನಿಧ್ಯವು ಹೇಗಿರಬೇಕೆಂಬುದರ ಬಗ್ಗೆ ತಮ್ಮ ತೀರ್ಮಾನವನ್ನು ಕೊಟ್ಟಿದ್ದಾರೆ

ಈ ಲೇಖನವನ್ನು ಬರೆಯುವ ಹೊತ್ತಿಗೆ ಈ ತೀರ್ಮಾನದ ಪೂರ್ವಾಂಶ ಮಾತ್ರ ನಮ್ಮ ಮುಂದೆ ಇದೆಯಲ್ಲದೆ ಅದರ ಉತ್ತರಾಂಶ ಇರುವುದಿಲ್ಲ ಆದುದರಿಂದ ಈ ತೀರ್ಮಾನದ ಸಾಧಕ ಬಾಧಕಗಳನ್ನು ನಾವು ಸರಿಯಾಗಿ ಈಗ ನಿರ್ದೇಶಿಸಲಾರೆವು. ಆದರೆ Separate Electorates ಅಂದರೆ ಜಾತಿಗಳನ್ನು ಪ್ರತ್ಯೇಕಿಸಿಡುವ ಮತದಾನ ವಿಧಾನವನ್ನು ಬ್ರಿಟಿಷ ಮಂತ್ರಿ ಮಂಡಳವು ತನ್ನ ತೀರ್ಮಾನಕ್ಕೆ ಆಧಾರವಾಗಿಟ್ಟುಕೊಂಡಿದೆಂಬುದು ಈಗ ಸ್ಪಷ್ಟವಾಗಿ ಕಂಡುಬರುತ್ತದೆ ಪ್ರಾಯಶಃ ಹಿಂದೂಸ್ಥಾನದೊಳಗಿನ ಬ್ರಿಟಿಷ ಆಳುವಿಕೆಯಲ್ಲವಾಗಿದ್ದುದಾದರೆ ಜಾತೀಯ ಸಮಸ್ಯೆಯು ಇಷ್ಟು ಅಭೇದ್ಯವಾಗುತ್ತಿರಲಿಲ್ಲ ಏಕೆಂದರೆ ಬ್ರಿಟಿಷರ ಆಳುವಿಕೆಯ ಆಧಾರವೇ Divide and Rule ಅಂದರೆ ಭೇದೋಪಾಯವಾಗಿರುತ್ತದೆ ಹಿಂದೂಸ್ಥಾನದ ಈ ವಿಶಾಲ ಪ್ರಜಾ ಜನತೆಯೊಳಗೆ ಇಷ್ಟು ಭೇದಗಳನ್ನು ಪೋಷಿಸಿದ್ದುದಲ್ಲವಾದರೆ ಈ ದೊಡ್ಡ ಸಮುದಾಯವನ್ನು ನಿರ್ಬಂಧಿಸುವುದು ಸುಲಭವಿರಲಿಲ್ಲ ಶಸ್ತ್ರ ನಿಷೇಧದ Arms Act ಕಾನೂನಾಗಲಿ, ಬ್ರಿಟಿಷರ ಪ್ರಬಲ ಸೈನ್ಯ ಮತ್ತು ನೌಕಾಪಡೆಗಳಲ್ಲಿ ಅಖಂಡ ಹಿಂದೀ ಜನಾಂಗದ ಸ್ವಾತಂತ್ರ್ಯವನ್ನು ತಡೆಯಲಾರವಿತ್ತು. ಆದರೆ ಹಿಂದೂ ಮುಸಲ್ಮಾನ, ಬ್ರಾಹ್ಮಣ ಬ್ರಾಹ್ಮಣೇತರ, ಸ್ಪೃಶ್ಯ-ಅಸ್ಪೃಶ್ಯ ಮೊದಲಾದ ಭೇದಗಳು ಹಿಂದೀ ಜನಾಂಗದ ಶಕ್ತಿಯನ್ನು ಅಪಹರಿಸಿವೆ ಹಿಂದೀ ಜನಾಂಗವು ಶ್ರೀ ರವೀಂದ್ರನಾಥ ಠಾಗೂರರ ಕತೆಯೊಳಗಿನ ಕುದುರೆಯ ಹಾಗೆ ಬ್ರಿಟಿಷರ ಅಧೀನತೆಯಿಲ್ಲದೆ ಬಾಳಲಾರದಂತಹ ಸ್ಥಿತಿಗೆ ಬಂದಿದೆ.

ಪ್ರಜಾ ಸತ್ತಾತ್ಮಕ ರಾಜ್ಯಾಡಳಿತವು ಕೇವಲ ಬೇರೆ ಬೇರೆ ರಾಜ್ಯ ಸೂತ್ರಗಳ ಅವಲಂಬನದಿಂದುಂಟಾದ ಪಕ್ಷಗಳ ವ್ಯವಸ್ಥೆಯ ಮೇಲೆ ಹೊಂದಿಕೊಂಡಿರುತ್ತದೆ. "ನಾನು ಚುನಾಯಿಸಲ್ಪಟ್ಟರೆ, ರಾಜ್ಯ ಸೂತ್ರದಲ್ಲಿ ಹೀಗೆ ಬದಲಾವಣೆಮಾಡಿ ಜನಾಂಗದ ಹಿತವನ್ನು ಸಾಧಿಸುವೆನು" ಎಂಬುದೇ ಪ್ರತಿ ಉಮೇದ್ವಾರನ ಹಲವು ಮಾತುಗಳ ತಾತ್ಪರ್ಯ. ಈಗ, ಈ ಜಾತೀಯ ಪ್ರಾತಿನಿಧ್ಯದ ಪ್ರಕಾರದ ಪರಿಣಾಮವೇನು? ಜನಾಂಗದ ಹಿತವೆಂಬ ಮಾತು ಮರೆಯಲ್ಪಡುವುದು. ಬದಲಿಗೆ "ನಾನು ಚುನಾಯಿಸಲ್ಪಟ್ಟ ರಾಜ್ಯ ಸೂತ್ರದಲ್ಲಿ ಬದಲಾವಣೆ ಮಾಡಿ ತನ್ನ ಜಾತಿಗೆ ಹಿತವನ್ನು ಸಾಧಿಸುವೆನು" ಎಂದೀಗ ಪ್ರತಿ ಉಮೇದ್ವಾರನು ಹೇಳಬೇಕಾಗುವುದು. ಹೀಗೆ ಜನಾಂಗದ ಸಮಷ್ಟಿ ಹಿತವನ್ನು ಉದ್ದೇಶಿಸುವ ಬದಲು ಪ್ರತಿ ಉಮೇದ್ವಾರನೂ, ಚುನಾಯಿಸಲ್ಪಟ್ಟವನೂ, ರಾಜ್ಯಾಧಿಕಾರಿಯೂ ಸಂಕುಚಿತವಾದ ಜಾತಿ ಹಿತಸಾಧನೆಯನ್ನೆ ಉದ್ದೇಶಿಸುವಂತಾಗುವುದು. ಪುನಃ ಇದರ ಪರಿಣಾಮವೇನು? ದೇಶವೆಂದರೆ ಸ್ವಾರ್ಥದಿಂದಲೂ, ಮತ್ಸರದಿಂದಲೂ ತುಂಬಿದ ಹಲವು ಜಾತಿಗಳಿಂದ ತುಂಬಿಹೋಗಿ, ದೇಶಪ್ರೇಮ, ರಾಷ್ಟ್ರಪ್ರೇಮ, ಅಖಂಡ ಜನಾಂಗ ರಚನೆಯ ಧ್ಯೇಯಗಳು ಅಳಿದು ಹೋಗಿ ಅಂತಃಕಲಹ civil warಗಳಿಗೆ ಎಡೆಕೊಟ್ಟಂತಾಗುವುದಲ್ಲದೆ, ಸಮಯಾನುಸಾರದಲ್ಲಿ ಜನಾಂಗವು ನಿರ್ಬಲವಾಗಿ, ಹೊರಗಿನ ಜನಾಂಗಗಳಿಗೆ ಪುನಃ ಸೋತು ಅಧೀನವಾಗುವ ಪರಿಸ್ಥಿತಿಯೂ ಉಂಟಾಗಬಹುದು.

ಮುಸಲ್ಮಾನರ ಹಟಸಾಧನೆಯಿಂದ ಅವರಿಗೆ ಪ್ರತ್ಯೇಕ ಜಾತೀಯ ಪ್ರಾತಿನಿಧ್ಯವು ಬೇಕೆಂತಾಯಿತು ಅವರು ಬೇಕೆನ್ನುವಾಗ ಸಿಕ್ಖರೂ ಬೇಕೆನ್ನುವರು. ಉಳಿದ ಹಿಂದೂಗಳನ್ನೂ ಬಿಡಲಾಗುವುದೇ ಜನಾಂಗವನ್ನು ಸೀಳುವ ಕೆಲಸವು ಅಲ್ಲಿಗೆ ನಿಲ್ಲಲಿಲ್ಲ. ರೌಂಡ್‌ಟೇಬಲ್ ಪರಿಷತ್ತಿಗೆ ಡಾ| ಅಂಬೇಡಕರರೆಂಬವರು ಅಸ್ಪೃಶ್ಯರ ಪರವಾಗಿಯೆಂದು ಸರಕಾರದಿಂದ ನೇಮಿಸಲ್ಪಟ್ಟರು ·ಯಾರ ಪ್ರೇರಣೆಯಿಂದಲೋ! ಅವರು ಅಸ್ಪೃಶ್ಯರಿಗೂ ಪ್ರತ್ಯೇಕ ಪ್ರಾತಿನಿಧ್ಯ ಬೇಕೆಂದರು ಫಲವಾಗಿ ಹಿಂದೂಗಳ ಬಲವು ಕಡಿಮೆಯಾಯಿತು ಬಹುಸಂಖ್ಯಾತರೆನ್ನುವ ಹಿಂದೂಗಳು ಬಹುಮಟ್ಟಿಗೆ ಅಲ್ಪ ಸಂಖ್ಯಾತರಾಗಿ ಬಂದಿರುವರು

ಈ ರೀತಿಯಲ್ಲಿ ಬ್ರಿಟಿಷ ಪ್ರಧಾನ ಮಂತ್ರಿಗಳ ತೀರ್ಮಾನದ ಪ್ರಕಾರ ಮಹಮ್ಮದೀಯರು, ಸಿಕ್ಖರು, ಇಂಡಿಯನ್ ಕ್ರಿಸ್ತೀಯರು, ಎಂಗ್ಲೊ ಇಂಡಿಯನರು ಮತ್ತು ಯುರೋಪಿಯನರು ಇವರಿಗೆಲ್ಲ ಪ್ರತ್ಯೇಕ ಮತದಾರ ವರ್ಗವಿದೆ. ಅಸ್ಪೃಶ್ಯರಿಗೂ ಕೆಲವುಮಟ್ಟಿಗೆ ಪ್ರತ್ಯೇಕ ಮತದಾರ ವರ್ಗವಿದೆ ಹೀಗಾಗಿ, ಹಿಂದೂಸ್ಥಾನದ ರಾಜಕೀಯ ರಚನೆಯ ಬೆಳವಣಿಗೆಯು ತಡೆದಿಟ್ಟಂತಾಯಿತು. ಮತ್ತು ಜಾತೀಯ ದ್ವೇಷಾಸೂಯೆಗಳನ್ನು ಪೋಷಿಸಿದಂತಾಯಿತು.

ಬ್ರಿಟಿಷ ಪ್ರಧಾನಮಂತ್ರಿಗಳು ತಮ್ಮ ಈ ತೀರ್ಮಾನದಲ್ಲಿ ಧೈರ್ಯವನ್ನಾಗಲಿ, ನ್ಯಾಯಪರತೆಯನ್ನಾಗಲಿ, ಹಿಂದೀ ಜನಾಂಗದ ಹಿತವನ್ನಾಗಲಿ ಲಕ್ಷಿಸಿಲ್ಲವೆಂದು ಧಾರಾಳವಾಗಿ ಹೇಳಬಹುದು ಎಲ್ಲಾ ಜಾತಿಗಳೂ ಒಕ್ಕಟ್ಟಾಗಿ ತಮ್ಮ ಸೂಚನೆಗಳನ್ನು ಇನ್ನು ಮುಂದಾದರೂ ತಂದರೆ ಅವನ್ನು ಈ ತಮ್ಮ ತೀರ್ಮಾನದ ಬದಲಿಗೆ ಸ್ವೀಕರಿಸಲು ತಯ್ಯಾರಿರುವೆನೆಂದು ತಮ್ಮ ನ್ಯಾಯಪರತೆಯನ್ನು ತೋರಿಸಲು ಮಿ| ಮೆಕ್ಡೊನಾಲ್ಡರು ಪ್ರಯತ್ನಿಸಿರುವರು ಆದರೆ ಜಾತಿಗಳೆಲ್ಲಾ ಒಗ್ಗಟ್ಟಾಗುವುದು ಸಾಧ್ಯವಿದ್ದುದಾದರೆ ಇಷ್ಟೆಲ್ಲಾ ತೊಂದರೆ ಇರುತ್ತಿರಲಿಲ್ಲ, ಒಗ್ಗಟ್ಟಾಗುವುದು ಸಾಧ್ಯವಿಲ್ಲವೆಂಬುವುದು ಅವರಿಗೆ ತಿಳಿಯದ ವಿಷಯವಲ್ಲ, ಪ್ರಧಾನಮಂತ್ರಿಗಳು ಈ ಮಾತುಗಳನ್ನು ಹೇಳುವ ಅವಶ್ಯಕತೆಯೂ ಇರಲಿಲ್ಲ

ಇನ್ನೊಂದು ಮುಖ್ಯ ವಿಷಯವೆಂದರೆ Central Government ಅಂದರೆ ಕೇಂದ್ರ ಸರಕಾರದ ವಿಷಯ ಯಾವ ಸೂಚನೆಯೂ ಈ ತೀರ್ಮಾನದಲ್ಲಿಲ್ಲ ಇದರ ಅರ್ಥವೇನು ಹಿಂದೀ ಸ್ವಾತಂತ್ರ್ಯವು ಪ್ರಾಂತಿಕ ಸ್ವಾತಂತ್ರ್ಯ ಅಂದರೆ Provincial Autonomyಯಿಂದಲೇ ಅರಂಭವಾಗಿ ಅಲ್ಲಿಯೇ ಮುಗಿಯುವುದೇ? Federation ಆಲೋಚನೆಯು ಛಿದ್ರಹೋಗುವುದೇ? ಈ ವಿಷಯವನ್ನೂ ಈಗಲೇ ಚೆನ್ನಾಗಿ ಆಲೋಚಿಸಿಕೊಳ್ಳುವುದು ಒಳ್ಳೆಯದು

ವಿದೇಶ ವರ್ತಮಾನ.

ಬ್ರಿಟಿಷರು ಐಯರ್ಲೆಂಡಿನ ಸಾಮಾನಿನ ಮೇಲೆ ಸುಂಕವನ್ನೇರಿಸಿದುದಕ್ಕಾಗಿ ಐಯರ್ಲೆಂಡಿನ ಐರಿಷ್ ರೇಸ್‌ಕನ್ವೆನ್‌ಷನ್ ಸಂಸ್ಥೆಯವರು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಲೇಬೇಕೆಂದು ನಿರ್ಧರಿಸಿದರು

ಮತದಾನವಾದನಂತರ ಮೆಕ್‌ಡೊನಲ್ಡರು ಬಹಳ ಗೆಲುವಿನಲ್ಲಿರುವರೆಂದೂ, ೧೯೩೩ರಲ್ಲಿ ಹೊಸ ರಾಜ್ಯಾಂಗ ರಚನೆಯನ್ನು ಸಾರ್ವಭೌಮರಿಂದಲೇ ನಿರ್ಮಾಣ ಮಾಡಿಸುವೆನೆಂದು ಹೇಳುತ್ತಿರುವರೆಂದೂ ತಿಳಿದುಬಂದಿದೆ

ಸರ್. ಜೋಶೀರ ಕೆಸ್ತಿಯನ್ ಈಗ ಇಂಗ್ಲಾಂಡಿನಲ್ಲಿ ಕುಂದುತ್ತಿದೆಯಾಗಿ ವಾರ್ತೆ. ಅವರು ತನ್ನ ಬಲವನ್ನು ಕ್ರಮೇಣ ಬಿಡುವ ಚಿಹ್ನೆಯು ಕಂಡು ಬರುತ್ತಿದೆ.

ಇಟಲಿಯ ನಿರಂಕುಶಪ್ರಭುವಾದ ಸಿನಿಯರ್ ಮುಸೋಲಿನಿಯು ಹೊಸ ರಾಜನೀತಿಜ್ಞರನ್ನು ತನ್ನ ಸರಕಾರದೊಳಗೆ ಸ್ವೀಕರಿಸುವುದಕ್ಕಾಗಿ ಎಲ್ಲಾ ಎಂಬಾಸೆಡೊರ್‍ಗಳನ್ನು ಕೆಲಸದಿಂದ ತೆಗೆದಿರುವನು.

ಸ್ಪೇನ್ ದೇಶದಲ್ಲಿ ಪ್ರಜೆಗಳು ಕ್ರಾಂತಿಯನ್ನೆಬ್ಬಿಸುತ್ತಿರುವರು; ಎಲ್ಲೆಲ್ಲೂ ಪೋಲೀಸ್ ಸೈನ್ಯದ ಪಹರೆ!

ರೊನಾಲ್ಡ್ ಮೆಕೆನ್ಜೆ ಎಂಬ ಪ್ರಸಿದ್ಧ ಚಲಚಿತ್ರನಟನು ಮೋಟರ್ ಅಪಘಾತದಿಂದಾಗಿ ಮಡಿದನು

ಒಳದೇಶ ವರ್ತಮಾನ

— ಹತ್ತಿಯ ಮಸೂದೆಯೊಂದನ್ನು ಸರಕಾರದವರು ತರಲೆತ್ನಿಸಿ ಹತ್ತಿ ಸಂಘದ ಡೈರೆಕ್ಟರರುಗಳ ಅಧಿಕಾರವನ್ನು ಕೀಳಲಿರುವಾಗ ಬೊಂಬಾಯಿಯ ಎಲ್ಲಾ ಹತ್ತಿ ವ್ಯಾಪಾರಿಗಳು ಅದು ಕೂಡದೆಂದು ಪ್ರತಿಭಟಿಸಿದರು

— ಅಲ್ಲಹಾಬಾದಿನ ಕಾಂಗ್ರೆಸ್‌ಭವನವನ್ನು ಪೋಲೀಸರು ಒಟ್ಟು ೧೫ ಸಲ ಜಪ್ತಿ ಮಾಡಿದರು!!

ಕಾನ್‌ಪುರದಲ್ಲಿ ಪೋಲೀಸರು ಅನೇಕ ಮನೆಗಳನ್ನು ಜಪ್ತಿ ನಡೆಸಿ ಹಲವರನ್ನು ಕೈದುಮಾಡಿರುವರು. ಮದ್ದುಗುಂಡುಗಳು ದೊರೆತಿವೆ ಒಬ್ಬ ವಿದ್ಯಾರ್ಥಿಯ ಮನೆಯಲ್ಲಿ ೧೫೦ ಸಿಡಿಮದ್ದುಗಳಿದ್ದುವು

-ಬನಾರೆಸ್‌ನಲ್ಲಿ ಪಂಡಿತ ಮಾಲವೀಯ ಮೌಲಾನಾ ಅಬ್ದುಲ್ ಕಲಂ ಆಜಾದ್ ಡಾ ಕಿಚಲು ಶ್ರೀಮತಿ ಮೀರಾಬೆನ್ ಸಿ ರಾಜಗೋಪಾಲಾಚಾರ್ಯರ್ ಡಾ ಸಯ್ಯದ್ ಮಹಮೂದ್ ಶಿವಪ್ರಸಾದ ಗುಪ್ತ ಮೊದಲಾದ ದೇಶಧುರೀಣರು ಕಳೆದ ಬುಧವಾರ ದಿನ ಸಭೆಗೂಡಿ ಪ್ರಕೃತ ಪರಿಸ್ಥಿತಿಯಲ್ಲಿ ಕರ್ತವ್ಯಭಾರವೇನಿರಬಹುದೆಂದು ಆಲೋಚಿಸಿಕೊಂಡರು

— ಶ್ರೀ ವಲ್ಲಭಭಾಯಿ ಪಟೇಲರ ಪುತ್ರಿ ಶ್ರೀಮತಿ ಮಣಿಬೆನ್ ಪಟೇಲರು ಕಾನೂನುಲ್ಲಂಘನೆ ಮಾಡಿದುದಕ್ಕೆ ಮುಂಬಾಯಿಯಲ್ಲಿ ೧೫ ತಿಂಗಳ ಕಠಿಣ ಸಜೆಗೊಳಗಾದರು.

ಮುಂಬಾಯಿಯಲ್ಲಿ ಶ್ರೀ ನರಿಮಾನರಿಗೆ - ವರ್ಷದ ಕಠಿಣ ಸಜೆ ಮತ್ತು - ದಂಡ!

— ದಿಲ್ಲಿಯಲ್ಲಿ ಡಾ ಕಿಚಲೂರವರ ಸೆಕ್ರೆಟರಿಯವರಾದ ಮಹಮದ್ ಸಿದ್ದಿಕ್ ಅಲಿಯವರು ೨೪ ತಾಸುಗಳೊಳಗೆ ದಿಲ್ಲಿಯಿಂದ ಹೊರಗೆ ಹೋಗಬೇಕೆಂದಪ್ಪಣೆ

— ಬರ್ಮಾದ ಪೆಗು ಎಂಬಲ್ಲಿ ಒಬ್ಬಳು ಸ್ತ್ರೀಯು ನಾಲ್ಕು ಕೈ ಮತ್ತು ನಾಲ್ಕು ಕಾಲುಗಳ ಮಗುವನ್ನು ಹೆತ್ತಳು ಆ ಮಗು ೧೫ ನಿಮಿಷಗಳ ಕಾಲ ಜೀವಿಸಿತ್ತು

— ಪೇಶಾವರದ ಕಮಿಶನರ್ ಇನ್ನು ಕೆಲವು ಅಧಿಕಾರಿಗಳಿಗೂ ಭಯೋತ್ಪಾದಕ ಪತ್ರಗಳು ಬಂದಿವೆ "ದಬ್ಬಾಳಿಕೆಯನ್ನು ನಿಲ್ಲಿಸಿರಿ" ಎಂಬುದೇ ಇದರ ಸಾರಾಂಶ

ಕೊಲೆಮಾಡಲ್ಪಟ್ಟ ಎಲ್ಲಿಸನ್ ರ ಅಸ್ಥಿಪುಷ್ಪಗಳು ಕಳೆದ ವಾರ ಇಂಗ್ಲಾಂಡಿಗೆ ತೆರಳಿದುವು

— ಲಾಹೋರಿನಲ್ಲಿ ಗುತ್ತಿಗೆಯ ವಸೂಲನ್ನು ಮಾಡಿ ಹಿಂತಿರುಗುತ್ತಿದ್ದ ವಲ್ಲಭ ಎಂಬವರು ಯಾರಿಂದಲೋ ಕೊಲೆಮಾಡಲ್ಪಟ್ಟರು

ಮದ್ರಾಸಿನ ಶಂಕರಕೋಯಿಲ್ ಎಂಬಲ್ಲಿನ ದೇವಸ್ಥಾನಕ್ಕೆ ಒಬ್ಬ ಗೃಹಸ್ಥನು ತನ್ನ ಪತ್ನಿ ಮತ್ತು ಶಿಶುವಿನೊಂದಿಗೆ ಪೂಜೆಗೆಂದು ಹೋಗಿ, ಮಗುವನ್ನು ಭಿಕ್ಷುಕನ ಕೈಯಲ್ಲಿ ಕೊಟ್ಟು ಗುಡಿಯೊಳಗೆ ಹೊಕ್ಕು ಹಿಂದೆಬರುವಾಗ ಮಗುವೂ ಪೂಜಾರಿಯೂ ಇರಲಿಲ್ಲ ಹುಡುಕಲಾಗಿ ಮಗುವಿನ ಶವವು ಸಮೀಪದ ಕೆರೆಯಲ್ಲಿದ್ದುದರಿಂದ ದುಃಖದಿಂದ ತಾಯಿಯು ಆ ಕೆರೆಗೆ ಹಾರಿ ಪ್ರಾಣತ್ಯಾಗಮಾಡಿದಳು, ಮನೆಗೆ ಹೋಗಿ ತಂದೆಯೂ ಆತ್ಮಹತ್ಯೆ ಮಾಡಿಕೊಂಡನು

— ಖಾದಿಯ ಮೇಲೆ ಸುಂಕವನ್ನು ಹೊರಿಸಬಾರದಾಗಿ ಅಲ್ಲಹಾಬಾದ್ ಮುನಿಸಿಪಾಲಿಟಿಯ ನಿರ್ಧಾರ ಸಂಯುಕ್ತ ಪ್ರಾಂತ್ಯದಲ್ಲಿ ೧೫ ಮುನಿಸಿಪಾಲಿಟಿಗಳು ಈಗಾಗಲೇ ಇದರಂತೆ ನಿರ್ಧರಿಸಿವೆ

— ಬರೋಡಾ ಮಹಾರಾಜರು ಬೈ ಇಂಡಿಯನ್ ಲೀಗನ್ನು ಸನ್ಮಾನಿಸಿ, ಪ್ರೋತ್ಸಾಹಿಸಿ ತನ್ನ ಸಂಸ್ಥಾನದಲ್ಲೂ ಅದರ ಸ್ಥಾಪನೆಗಾಗಿ ಸಿದ್ಧರಾಗಿರುವರೆಂದು ತಿಳಿದುಬರುತ್ತದೆ

— ಮುಂಬಾಯಿಯ ಫ್ರೀಪ್ರೆಸ್ ಜರ್ನಲಿನ ಆಶ್ರಯದಲ್ಲಿ 'ನವಭಾರತ' ಎಂಬ ಗುಜರಾತಿ ದೈನಂದಿನ ಪತ್ರಿಕೆಯು ನಾಳೆ ಪ್ರಕಟವಾಗಲಿದೆ

-ಜಮ್ನಾಲಾಲ್ ಬಜಾಜರ ಕುಮಾರಿಯಾದ ಶ್ರೀಮತಿ ಜಾನಕೀಬಾಯಿಯವರು ಸೆರೆಯಿಂದ ಬಿಡುಗಡೆಹೊಂದಿದರು

* * *

LATEST NEWS.

ಈಗ ಬಂದ ಬಿಸಿ ಬಿಸಿ ವಾರ್ತೆ.

ತಂತಿಯ ಮೂಲಕ.

ತಾ. ೧೯—೮—೩೦ ಶಿವಮೊಗ್ಗ.

ಉಡುಪಿಯಲ್ಲಿ ಸ್ಥಾಪಿತವಾದ ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ ಉಪಶಾಖೆಯು ಈ ದಿನ ಬೆಳಿಗ್ಗೆ ಇಲ್ಲಿಯ ಡಿಸ್ಟ್ರಿಕ್ಟ ಕಮಿಶನರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಈ ಸಮಾರಂಭಕ್ಕೆ ಸ್ಥಳೀಕ ಉದ್ಯೋಗಸ್ಥರೂ ಮಾನ್ಯ ಸದ್ಗೃಹಸ್ಥರನೇಕರೂ ಬಂದಿದ್ದರು ಬ್ಯಾಂಕನ್ನು ಸ್ಥಾಪಿಸಲು ಉಡುಪಿಯಿಂದ ವಕೀಲ ಕೇಶವಪೈ, ಡಾ ಸುಂದರರಾಯಪೈ ಸದ್ರಿ ಬ್ಯಾಂಕಿನ ಏಜಂಟ ಶ್ರೀ ಶ್ರೀನಿವಾಸ ಪ್ರಭುಗಳು ಬಂದಿರುವರು ಸದ್ರಿ ಬ್ಯಾಂಕಿನ ಡಾಯರೆಕ್ಟರರಲ್ಲೊಬ್ಬರಾದ ಡಾಕ್ಟರ್ ಪದ್ಮನಾಭ ಮಲ್ಯರು ಈ ಮೊದಲೇ ಇಲ್ಲಿ ಬಂದು ತಕ್ಕ ಸುವ್ಯವಸ್ಥೆಯನ್ನು ಮಾಡಿಸಿದ್ದರು ಅಧ್ಯಕ್ಷರಿಗೆ ಹೂವಿನ ಮಾಲೆಯನ್ನು ಹಾಕಿದರು ಕೊನೆಗೆ ಅಧ್ಯಕ್ಷರು ಬ್ಯಾಂಕಿನ ಅಭಿವೃದ್ಧಿಯನ್ನು ಬಯಸಿ ಭಾಷಣಮಾಡಿ ತಾಂಬೂಲಸತ್ಕಾರದೊಡನೆ ಸಭಾವಿಸರ್ಜನೆಯಾಯಿತು

ತಾ. ೧೯—೮—೩೦ ಮದ್ರಾಸು

ಇಲ್ಲಿ ನಿನ್ನೆ ದಿವಸ ಕೆನರಾ ಬ್ಯಾಂಕಿಂಗ ಕೋರ್ಪರೇಶನಿನ ಉಪಶಾಖೆಯನ್ನು ತೆರೆಯಲು ಮಂಗಳೂರಿನಿಂದ ಸದ್ರಿ ಬ್ಯಾಂಕಿನ ಡಾಯರೆಕ್ಟರರಾದ ಶ್ರೀಯುತ ನಾಗೇಶ ಪೈ ಕೊಚ್ಚಿಕಾರ ಪದ್ಮನಾಭ ಪೈ, ಎನ್ ಅನಂದರಾವ್ ಮೊದಲಾದ ಸದ್ಗೃಹಸ್ಥರು ಬಿತ್ತೈಸಿದ್ದರು. ಈ ದಿನ ಪ್ರಾತಃಕಾಲ ಪರಸುವಾಕಮಿನಲ್ಲಿರುವ ಒಂದು ಭವ್ಯವಾದ ಕಟ್ಟಡದಲ್ಲಿ ಡಾ. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಇಲ್ಲಿ ಒಂದು ಉಪಶಾಖೆಯು ತೆರೆಯಲ್ಪಟ್ಟಿತು ಸಭೆಯಲ್ಲಿ ನೆರೆದ ಕೆಲಮಂದಿ ಗೃಹಸ್ಥರೂ ಕೊಚ್ಚಿಕಾರ ಪದ್ಮನಾಭ ಪೈಗಳವರೂ ಬ್ಯಾಂಕಿನ ಪರವಾಗಿ ಕೆಲವು ಮಾತುಗಳನ್ನಾಡಿದ ತರುವಾಯ ಅಧ್ಯಕ್ಷರ ಭಾಷಣವಾಗಿ ತಾಂಬೂಲಾದಿಗಳ ಸತ್ಕಾರಗಳೊಡನೆ ಸಭೆಯು ಮುಕ್ತಾಯವಾಯಿತು

ದಕ್ಷಿಣ ಕನ್ನಡ

ಮಂಗಳೂರು:— ದಕ್ಷಿಣ ಕನ್ನಡ ಜಿಲ್ಲಾ ವೈದಕೀಯ ಸಭೆಯ ಒಂದು ಸಭೆಯು, ಇದೇ ತಾ ೨೦—೮—೩೦ನೇ ದಿನ ಸಂಜೆ ೫-೩೦ಕ್ಕೆ ಇಲ್ಲಿಯ ವೆನ್‌ಲೋಕ್ ಅಸ್ಪತ್ರೆಯಲ್ಲಿ ಜರಗುವುದು ಡಾ| ಕೆ ಎಮ್ ಮಾತುಲ್ಲಾ ಎಲ್ ಎಮ್ ಎಂಡ್ ಎಸ್ ಇವರು ಭಾಷಣಮಾಡಲಿರುವರು

ಈ ಸಲದ ಮಂಗಳೂರು ತಾಲೂಕು ಬೋರ್ಡು ಚುನಾವಣೆಯಲ್ಲಿ ಕುನ್ನಾಡು ಸರ್ಕಲಿನ ಒಂದು ಮೆಂಬರಿಕೆಗೆ ಮ| ರಾ| ರಾ| ಪಚ್ಚನಾಡಿ ವೆಂಕಟರಾವ್ ಬಿ ಎ ಬಿ ಎಲ್ ವಕೀಲ್ ಇವರು ಉಮೇದುವಾರರಾಗಿ ನಿಲ್ಲುತ್ತಾರೆಂದು ತಿಳಿಯುತ್ತೇವೆ ಇವರು ಸದ್ರಿ ಕುನ್ನಾಡು ಸರ್ಕಲಿಗೆ ಸೇರಿದ ಮಂಟಿಗ್ರಾಮದಲ್ಲಿ ಪ್ರಸಿದ್ಧ ವರ್ಗದಾರ ವಕೀಲ್ ವಾಸುದೇವಯ್ಯನವರ ಮಗನಾಗಿಯೂ ಸದ್ರಿ ಸರ್ಕಲಿನವರಾಗಿಯೂ ಹೆಚ್ಚಿನ ವೋಟರರಿಗೆ ಪರಿಚಿತ ಉಳ್ಳವರಾಗಿಯೂ ಇರುತ್ತಾರೆ

ಹೊಸ ತೋಟಿಗಳು ಈಗಾಗಲೇ ಕೆಲಸವನ್ನಾರಂಭಿಸಿದ್ದು ಇನ್ನೂ ಒಂದು ತಿಂಗಳ ತನಕ ಅವರು ಅನುಭವಿಗಳಾಗುವ ವರೆಗೆ ಅವರ ಕೆಲಸವು ಸಂತೃಪ್ತಿಕರವಾಗಿರಲಿಕ್ಕಿಲ್ಲವೆಂಬುದನ್ನು ಸಾರ್ವಜನಿಕರು ಗಮನಿಸಬೇಕಾಗಿ ಮುನಿಸಿಪಾಲಿಟಿಯು ಅರಿಕೆಯು ಹೊರಡಿಸಿತ್ತಾದರೂ ಮುಂಚಿನ ತೋಟಿಗಳು ಶ್ರೀ ಸೂರ್ಯನಾರಾಯಣರ ಮಧ್ಯಸ್ಥಿಕೆಯಿಂದಾಗಿ ಮುನಿಸಿಪಾಲಿಟಿಯವರೊಡನೆ ಸಂಧಿಮಾಡಿಕೊಂಡಿರುವರಾಗಿಯೂ ಹೊಸ ತೋಟಿಗಳನ್ನು ತರಿಸಿಕೊಂಡ ವೆಚ್ಚ ೭೫೦ ರೂಪಾಯಿಯನ್ನು ಈಗಿನ ತೋಟಿಗಳು ಕೊಡಲು ಸಿದ್ಧರಾಗಿರುವರಾಗಿಯೂ ತಿಳಿದುಬಂದಿದೆ ಆದರೂ ಹಳಬರನ್ನು ಇನ್ನೂ ತನಕ ಕೆಲಸಕ್ಕೆ ಪುನಃ ತೆಗೆದುಕೊಳ್ಳಲಾಗಲಿಲ್ಲವೆಂದು ತಿಳಿದು ಬಂದಿದೆ

ಬೋಳೂರಿನ ಮಾಬೆನ್ ಕೋಟ್ಯಾನ ಎಂಬ ಸಣ್ಣ ಹುಡುಗನು ಅನೇಕ ಮನೆಮಠಗಳನ್ನು ಹೊಕ್ಕು ಕಳವು ಮಾಡಿದ್ದು ಮೊನ್ನೆ ಸಿಕ್ಕಿಬಿದ್ದು ಕೋರ್ಟಿಗೆ ಕಳುಹಲ್ಪಟ್ಟಿರುವನು

ಹವೆಯು ಅನುಕೂಲವಿದ್ದರೆ ಮುಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೀಮರು ಚಲಾವಣೆಯು ಬರುವ ತಿಂಗಳ ತಾ ೧೩ರಿಂದ ಪ್ರಾರಂಭವಾಗುವುದೆಂದೂ, ಮೊದಲನೇ ಪೆಸೆಂಜರ್ ಕಾರ್ಗೋ ಸ್ಟೀಮರು ಮಂಗಳೂರಿಗೆ ತಾ ೧೫ನೇ ದಿನ ತಲಪಿ ಮರುದಿನ ಮುಂಬಾಯಿಗೆ ಹೊರಡಲಿರುವುದೆಂದೂ ತಿಳಿದುಬಂದಿದೆ

ಗವರ್ನಮೆಂಟ್ ಕೋಲೇಜಿನ ಇಂಗ್ಲಿಷ್ ಪ್ರಧಾನಾಧ್ಯಾಪಕರಾದ ಶ್ರೀ ಕೆ. ಪಿ. ಜಿ. ಮೆನನ್‌ರವರಿಗೆ ಅನಂತಪುರದ ಕೋಲೇಜಿಗೆ ವರ್ಗವಾಗಿದೆ ರಾಜಮಹೇಂದ್ರಿ ಕೋಲೇಜಿನಿಂದ ಶ್ರೀ ಉಳ್ಳಾಲ ಮಂಗೇಶರಾಯರು ಇಲ್ಲಿಗೆ ಬರುವರು

ಇಲ್ಲಿಯ ರಿಟೈರ್ಡ ಸಾರ್ಜಂಟರಾದ ಮಿ ಗ್ರೀನ್‌ರವರು ಕಳೆದ ಶುಕ್ರವಾರ ದಿನ ಅಸ್ಪತ್ರೆಯಲ್ಲಿ ಕಾಲವಾದರು,

ಇಲ್ಲಿಯ ಸ್ಥಳೀಕ ಶ್ರೀ ಕೃಷ್ಣ ಸಿನೇಮದಲ್ಲಿ ನಿನ್ನೆ ದಿವಸ ಮಾತಾಡುವ ಚಲಚಿತ್ರದ ಮೆಶಿನುಗಳೆಲ್ಲವೂ ಬಂದಿರುತ್ತವೆ ಸದ್ಯದಲ್ಲಿ ಟೋಕಿ ಚಲಚಿತ್ರಗಳು ಪ್ರಾರಂಭವಾಗುವುದಾಗಿ ತಿಳಿದು ಬರುತ್ತದೆ ಅಲ್ಲದೆ ಈ ದಿವಸದಿಂದ 'ದಿ ಮಿಸ್ಟೀರಿಯಸ್ ಬೇಂಡಿಟ್' ಎಂಬ ಚಲಚಿತ್ರದೊಡನೆ ನರ್ತನದಲ್ಲಿ ಪ್ರಖ್ಯಾತರಾದ ಇಂಗ್ಲೀಷ ಮಹಿಳೆಯರ ರಾಧಾಕೃಷ್ಣ ನರ್ತನವು ಇರುವುದು ಮಿ| ವಾಲೇಸ್ ಇವರು ಹಿಂದೀ ಹಾಡನ್ನು ಮಧುರವಾಗಿ ಹಾಡುವರು

ಬಂಟ್ವಾಳ— ಮಂಗಳೂರು ತಾಲೂಕು ಬೋರ್ಡಿನ ಬಂಟವಾಳ ಸರ್ಕಲಿನ ಚುನಾವಣೆಗೆ ಇಲ್ಲಿಯ ಮೆಂಬರರಾದ ರಾ| ವೆಂಕಟೇಶ ಬಾಳಿಗರೂ, ಉಮೇದುವಾರರಾದ ರಾ| ಶೇಷಗಿರಿ ಸುಬ್ರಾಯ ಬಾಳಿಗರೂ ಉಮೇದುವಾರ ಮೆಂಬರರಾಗಿದ್ದರು ಓಟುಗಳನ್ನು ಸಂಗ್ರಹಿಸುವ ಕೆಲಸವು ಭರದಿಂದ ನಡೆಯಿತು ಎರಡೂ ಕಡೆಯ ಏಜಂಟ್ರುಗಳೂ ರಾತ್ರಿ ಹಗಲು ಭಗೀರಥ ಪ್ರಯತ್ನ ಮಾಡಿ ಎರಡೂ ಕಡೆ ಓಟು ಸಂಗ್ರಹಿಸಿದರು, ಆದರೆ ಈ ಮಧ್ಯೆ ಬಂಟವಾಳದ ಕೆಲವು ಆಢ್ಯ ಮನುಷ್ಯರು ಮಧ್ಯದಲ್ಲಿ ಪ್ರವೇಶಿಸಿ ರಾ| ಶೇಷಗಿರಿ ಬಾಳಿಗರು ಉಮೇದುವಾರಿಕೆಯನ್ನು ಹಿಂತೆಗೆಯುವಂತೆ ಮಾಡಿದರು ಅತ್ತ ಶೇಷಗಿರಿ ಬಾಳಿಗರು ಹಿಂತೆಗೆಯಬೇಕಾದರೆ ಟೆಂಪಲ ಹೈಸ್ಕೂಲ ಫಂಡಿಗೆ ರಾ| ವೆಂಕಟೇಶ ಬಾಳಿಗರು ರೂ ೧೦೦ ಡೋನೇಶನ್ ಕೊಡಬೇಕೆಂದು ತೀರ್ಮಾನಿಸಿದರು ರಾಜಿಪಂಚಾತಿಕೆಯನ್ನು ಆಢ್ಯರೆಲ್ಲರೂ ಕೂಡಿ ಮಾಡುವಾಗ ಓಟಿಗಾಗಿ ಏಜಂಟ್ರ ಕೆಲಸಮಾಡಿದವರಿಗೆ ಈ ಸಂಗತಿ ತಿಳಿಸಲೇ ಇಲ್ಲ ಇವರೇ ನಾಲ್ಕೈದು ಮಂದಿ ಕೂಡಿ ಯಾರೋ ಒಬ್ಬನ ಲೆಕ್ಕಕ್ಕೆ ಕಾಫಿ ಕುಡಿದರು ಇನ್ನು ಯಾರಾದರೂ ಉಮೇದುವಾರರಾಗಿ ನಿಂತರೆ ಶಾಲಾ ಫಂಡಿಗೆ ಇನ್ನು ಸ್ವಲ್ಪ ಹಣ ದೊರೆಯುತ್ತಿತ್ತು, ಆದರೆ ಕಾಫಿ ಬೀಡಿ, ಬೀಡಾ ಅಂಗಡಿಯವರಿಗೆ, ರಾಜಿಯಿಂದ ಸುಮಾರು ರೂ ೩೦೦ ನಷ್ಟವಾದಂತಾಯಿತು

ಕೊಟ್ರುಪದ ಗಂಡಿ ತುಂಬೆ ಮಾರ್ಗವು ದುರುಸ್ತಿಯಾಗಿ ಒಳ್ಳೇ ನಾಜೂಕಾಗಿಯದೆ ಕಂಟ್ರಾಕ್ಟರರಿಗೆ ಒಂದು ಥೇಂಕ್ಸ್

ಕಾವಳಕಟ್ಟೆ.— ಈ ಸರ್ಕಲಿನ ತಾಲೂಕು ಬೋರ್ಡು ಮೆಂಬರಿಕೆಗೆ ಬಂಟ್ವಾಳ ವಕೀಲರಾದ ರಾ| ಬಳಂಜೆ ರಾಮ ಭಟ್ ಬಿ ಎ ಬಿ ಎಲ್ ರವರೂ ರಾ| ಡೊಕ್ಟರ್ ಬಿ ಎಚ್ ವಾಸುದೇವ ಸುಬ್ರಾಯ ಪೈ ಎಲ್ ಎಮ್ ಪಿ ಯವರು ಉಮೇದುವಾರರಾಗಿರುವರು

ಸುರತ್ಕಲ್— ಬರುವ ತಾಲೂಕು ಬೋರ್ಡಿನ ಮೆಂಬರಿಕೆಯ ಚುನಾವಣೆಯಲ್ಲಿ ನಮ್ಮ ಸುರತ್ಕಲ್ ಸೆಂಟರಿನಿಂದ ರಾ| ಹೊಸಬೆಟ್ಟು ದಾಮೋದರ ರಾಯರು (ಆರ್ಯವಿದ್ಯಾದಾಯಿನೀ ಶಾಲಾ ಹೆಡ್ ಮಾಸ್ಟರ್) ಉಮೇದ್ವಾರರಾಗಿ ನಿಲ್ಲುತ್ತಾರೆಂದು ತಿಳಿದುಬರುತ್ತದೆ ಇವರು ಈ ಮೊದಲೂ ಇದೇ ತಾಲೂಕು ಬೋರ್ಡಿನ ಮೆಂಬರರಾಗಿದ್ದಾರೆ ಜನಪ್ರಿಯರಾದ ಇವರನ್ನು ಪ್ರೋತ್ಸಾಹಿಸುವುದುತ್ತಮ

ಶ್ರೀಕೃಷ್ಣ ಲೈಬ್ರರೀ ಈ ಪುಸ್ತಕ ಭಂಡಾರದ ವರ್ಷೋತ್ಸವವು ಇದೇ ತಾ ೨೫ನೇಯ ಶ್ರೀಕೃಷ್ಣಜಯಂತೀ ದಿನ ಇಲ್ಲಿಯ 'ಚಿತ್ತರಂಜನ ಸ್ಟೋರ್ಸ್'ನ ಮಹಡಿಯಲ್ಲಿ ನೆರವೇರಲಿದೆ ವೇದ ವಾಚನ ಶ್ರೀಕೃಷ್ಣ ಚರಿತೆಯ ಕುರಿತು ಭಾಷಣ, ಭಜನಾದಿ ಕಾರ್ಯಕ್ರಮಗಳಿವೆ ಸರ್ವರಿಗೂ ಸುಸ್ವಾಗತವಿದೆ

ಇಲ್ಲಿಯ ಅಬ್ಕಾರೀ ಇಲಾಖಾ ಸಬ್ ಇನ್ಸಪೆಕ್ಟರರಾಗಿರುವ ಶ್ರೀ ಎ ಎಸ್ ಬಂಗೇರರು ಅನಾರೋಗ್ಯದ ನಿಮಿತ್ತ ರಜೆಯಲ್ಲಿದ್ದು ಈ ಸ್ಥಾನಕ್ಕೆ ಮ| ರಾ| ಶ್ರೀ ಕೆ ಗೋವಿಂದಶೆಟ್ಟರು ವರ್ಗಾಯಿಸಲ್ಪಟ್ಟು ಬಂದು ಚಾರ್ಜು ವಹಿಸಿಕೊಂಡಿದ್ದಾರೆ

ಕಾರ್ಕಳ:— ಕಾರ್ಕಳದಲ್ಲಿ ಕಳೆದ ಒಂದು ವರ್ಷದಿಂದ ಅಲ್ಪಸ್ವಲ್ಪವಾಗಿಯಾದರೂ ರಾಷ್ಟ್ರಭಾಷೆಯಾದ ಹಿಂದೀಯ ಪ್ರಚಾರವಾಗುತ್ತಿದೆ ಎಂಬುದು ತಮಗೆಲ್ಲರಿಗೂ ತಿಳಿದ ಸಂಗತಿಯಾಗಿದೆ ಕಳೆದ ಫೆಬ್ರುವರಿ ತಿಂಗಳಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ನಡೆಯಿಸಿದ ಬೇರೆ ಬೇರೆ ಪರೀಕ್ಷೆಗಳಲ್ಲಿ ೧೧ ಮಂದಿ ತೇರ್ಗಡೆಹೊಂದಿದ್ದಲ್ಲದೆ ಬರುವ ಅಕ್ಟೋಬರ ತಿಂಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ಒಟ್ಟು ೩೭ ಮಂದಿಗಳು ನಿಂತಿರುವರು ಆದುದರಿಂದ ಈ ತಾಲೂಕಿನಿಂದ ದ ಭಾ ಹಿಂದೀ ಪ್ರಚಾರ ಸಭೆಯವರ "ರಾಷ್ಟ್ರಭಾಷಾ ಮತ್ತು "ವಿಶಾರದ ಮೊದಲಾದ ಉಚ್ಚಶ್ರೇಣಿಯ ಪರೀಕ್ಷೆಗಳಿಗೆ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ತಮ್ಮ ಭಾಷಾಜ್ಞಾನವನ್ನು ವೃದ್ಧಿಸಲಿಕ್ಕೆ ಉತ್ತಮ ಸಾಹಿತ್ಯ ಗ್ರಂಥಗಳ ಅಭಾವವಿರುವ ಪ್ರಯುಕ್ತ ಇಲ್ಲೊಂದು ಹಿಂದೀ ಪುಸ್ತಕಾಲಯವನ್ನು ಏರ್ಪಡಿಸಬೇಕೆಂದು ಆಲೋಚಿಸಲಾಗಿದೆ ಈ ಕಾರ್ಯಕ್ಕೆ ಪ್ರಥಮತಃ ಕಡಿಮೆ ಎಂದರೂ ೩೫ ರೂಪಾಯಿಗಳು ಬೇಕಾಗಬಹುದೆಂದು ನಿರ್ಣಯಿಸಲಾಗಿದೆ ಆದುದರಿಂದ ಉದಾರ ಮಹನೀಯರು ಈ ಕಾರ್ಯಕ್ಕೆ ನೆರವಾಗಬೇಕೆಂದು ವಿನಂತಿಮಾಡುತ್ತೇವೆ

ಹಿಂದೀ ಪುಸ್ತಕಾಲಯ, ಕಾರ್ಕಳ ಈ ಪುಸ್ತಕಾಲಯಕ್ಕೆ ತಾ ೬—೮—೩೦ರ ವರೆಗೆ ಧನಸಹಾಯಮಾಡಿದ ಮಹನೀಯರುಗಳ ಹೆಸರುಗಳು. ಒಂದು ರೂಪಾಯಿಯಂತೆ ಕೊಟ್ಟವರು— ೧ ಶ್ರೀಮತಿ ಶಾರದಾದೇವಿ ಗೋಳಿಕೆರೆ, ೨ ಶ್ರೀಯುತರುಗಳಾದ ಯಂ ಯಸ್ ಅಧಿಕಾರಿ, ೩ ಡಾ. ಯಸ್. ಎಮ್. ಅನಂತರಾಯರು, ೪ ಒಬ್ಬ ಸಿಂಪತೈಸರರು ಎಂಟಾಣೆಯಂತೆ ಕೊಟ್ಟವರು ಶ್ರೀಯುತರುಗಳಾದ ೧ ಡಾಕ್ಟರ ಕೆ. ನಾರಾಯಣರಾವ್ ೨ ಪಿ ರಾಮಚಂದ್ರರಾವ್, ೩ ಕಟಪಾಡಿ ಶ್ರೀನಿವಾಸ ಶೆಣೈ ೪ ಕೆ. ವಾಸುದೇವ ಉಪಾಧ್ಯಾಯರು ೫ ಕೆ ವೆಂಕಟಪ್ಪ ಹೆಗ್ಡೆ ೬ ಪಿ ಸಾಂಬ ಭಟ್ಟ ೭ ಎ ಯಸ್. ಸೀತಾರಾಮ ಆಚಾರ್ ೮ ಯಂ ಮಾಧವ ಭಟ್ಟ ೯ ಬಿ ವೆಂಕಟೇಶ ಭಟ್ಟ ೧೦ ಯಸ್ ನಂಜಪ್ಪ ಶೆಟ್ಟಿ ೧೧ ಯಸ್. ಶಾಮರಾಯನಾಯಕ ೧೨ ಬಿ ನಾರಾಯಣ ನಾಯಕ ೧೩ ಕೆ ಬಾಬುರಾಯ ಜೋಶಿ ೧೪ ಕೆ ಬಿ ಶೇಷಗಿರಿ ಪ್ರಭು ೧೫ ಕೆ ಸಾಂತಯ್ಯ ಕಾಮತ್ ೧೬ ಕೆ ಮಹಾಬಲ ಹೆಗ್ಡೆ ೧೭ ಯಂ ಮುಕುಂದ ಕಾಮತ್ ನಾಲ್ಕಾಣೆಯಂತೆ ಕೊಟ್ಟವರು— ಶ್ರೀಯುತ ಕೆ ಆದಿರಾಜ್ಯ, ಡಾಕ್ಟರ್ ಒಂದಾಣೆಯಂತೆ ಕೊಟ್ಟವರು— ಶ್ರೀಯುತ ಆಢ್ಯ ವಾಸುದೇವಯ್ಯ ಒಟ್ಟು ವಸೂಲಾದ ರೂಪಾಯಿ ೧೩ ೧೨ ೦

ಈ ಕಾರ್ಯಕ್ಕೆ ಧನಸಹಾಯಮಾಡಿದ ಮಹನೀಯರ ಹೆಸರುಗಳನ್ನೂ ಪರಿಶೋಧಿಸಿದ ಲೆಖ್ಖಪತ್ರಗಳನ್ನೂ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸುವೆವು ಎಂದು ಕಾರ್ಕಳ ಹಿಂದೀ ಪ್ರೇಮಿಮಂಡಲದ ಪರವಾಗಿ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

ಪುತ್ತೂರು— ಇಲ್ಲಿಯ ವಕೀಲ್ ಎಮ್ ಪುಂಡರೀಕ ಭಟ್ ಇವರು ಪುತ್ತೂರು ಸರ್ಕಲಿನಿಂದ ಪುತ್ತೂರು ತಾಲೂಕು ಬೋರ್ಡಿಗೆ ಉಮೇದ್ವಾರರಾಗಿರುತ್ತಾರೆಂದು ತಿಳಿಸುಬರುತ್ತದೆ

ಫಲಿಮಾರು:— ಇದೇ ತಾ ೧೫ನೇ ಶುಕ್ರವಾರ ಬೆಳಿಗ್ಗೆ ೮-೩೦ಕ್ಕೆ ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದ ಗೋಪುರದಲ್ಲಿ ಒಂದು ಹಿಂದೀ ಶಾಲೆಯು ಸ್ಥಾಪಿಸಲ್ಪಟ್ಟಿತು ಈ ಮೊದಲು ಕಾರ್ಕಳ ಶ್ರೀನಿವಾಸ ಆಶ್ರಮದಲ್ಲಿ ಸಂಸ್ಕೃತ ಪಂಡಿತರಾಗಿದ್ದು ಈಗ ಫಲಿಮಾರು ಮಠದಲ್ಲಿರುವ ಉಡುಪಿ ವಾಸುದೇವ ಆಚಾರ್ಯರು ಅಧ್ಯಾಪಕತನವನ್ನು ವಹಿಸಿಕೊಂಡಿರುವರು ಈ ದಿನವೇ ಸುಮಾರು ೨೫ ಮಂದಿ ಊರ ಮಹನೀಯರು ಹಿಂದೀಯನ್ನು ಕಲಿಯಲು ವಿದ್ಯಾರ್ಥಿಗಳಾಗಿ ಸೇರಿರುವರು ಊರಿನವರ ಪ್ರೋತ್ಸಾಹದಿಂದಲೇ ತೆರೆಯಲ್ಪಟ್ಟ ಈ ಶಾಲೆಯು ಚಿರಸ್ಥಾಯಿಯಾಗಿ ಬಾಳಲಿ

ಮೂಲ್ಕಿ: ಬರುವ ತಾಲೂಕು ಬೋರ್ಡು ಡಿಸ್ಟ್ರಿಕ್ಟ ಬೋರ್ಡುಗಳ ಚುನಾವಣೆಗೆ ಮೂಲ್ಕಿ ಸರ್ಕಲಿನಿಂದ ರಾ| ಯಂ ಆರ್ ಪುಂಜರು ಉಮೇದುವಾರರಾಗಿ ನಿಲ್ಲುವರೆಂಬ ವದಂತಿ ಇದೆ ಈ ಮಹನೀಯರು ಹಿಂದೊಮ್ಮೆ ತಾ| ಲೂಕು ಬೋರ್ಡು ಪ್ರೆಸಿಡೆಂಟರಾಗಿದ್ದು ವ ಪ್ರೊಪಗಂಡ ಕಮ್ಮಿಟಿಯ ಚೆಯರ್ಮೆನ್‌ರಾಗಿದ್ದು ಮಾಡಿದ ಅತ್ಯಮೂಲ್ಯ ಕಾಮಗಾರಿಗಳನ್ನು ದೃಷ್ಟಿಪಥದಲ್ಲಿಟ್ಟುಕೊಂಡವರು ಓಟರರು ಇವರನ್ನು ಸಮುದಾಯವಾಗಿ ಆರಿಸಿ ಕೃತಕೃತ್ಯರಾಗಬೇಕಾಗಿ ಕೋರಿಕೆ

ಪಡುಬಿದ್ರಿ:— ಬರುವ ಉಡುಪಿ ತಾಲೂಕು ಬೋರ್ಡು ಚುನಾವಣೆಗೆ ಈ ಕೇಂದ್ರಕ್ಕೆ ನಮ್ಮ ಬೀಡಿನ ಶ್ರೀಮಾನ್ ಆದಿರಾಜ ಅರಸು ಕಿನ್ಯಕ್ಕ ಬಲ್ಲಾಳರವರು ಉಮೇದುವಾರರಾಗಿ ನಿಲ್ಲುವರು

ಶ್ರೀಯುತ ನಂದಿಕೂರು ಭೋಜರಾಜಯ್ಯನವರು ಉಡುಪಿ ತಾಲೂಕು ಬೋರ್ಡಿಗೆ ಉಮೇದುವಾರರಾಗಿ ನಿಲ್ಲುವಂತೆ ತಿಳಿದು ಬರುತ್ತದೆ

ಉಡುಪಿ:— ತಾ ೧೩ನೆಗೆ ಶ್ರೀ ವೇಲ್ಜಿ ಸೇಟರ ಅಂಗಡಿಯನ್ನು ವಿದೇಶಿ ವಸ್ತ್ರದ ಸಲುವಾಗಿ ಪಹರೆಮಾಡಿದಕ್ಕಾಗಿ ನಾಲ್ವರ ಕೈದು ಆಯಿತು, ಇವರನ್ನು ಮರುದಿನ ಬಿಡುಗಡೆ ಮಾಡಿದರು

ಮುಂದರಿಸಲಾದ ಗುತ್ತಿಗೆಗಳ ಏಲಂ ತಾ ೧೫ಕ್ಕೆ ನಡೆಯಿತು, ಆರೇಳು ಅಂಗಡಿಗಳಿಗೆ ತೃಪ್ತಿಕರವಾದ ಬೇಡಿಕೆಗಳಿಲ್ಲದುದರಿಂದ, ಅವುಗಳ ಏಲಂ ಬಾಕಿ ಇಡಲಾಗಿದೆಯಾದರೂ ಒಟ್ಟಾರೆ ಈ ವರ್ಷದ ಸರಕಾರಿ ಉತ್ಪನ್ನವು ಕಳೆದ ವರ್ಷಕ್ಕಿಂತ ಸ್ವಲ್ಪ ಹೆಚ್ಚಿಗೆಯೇ ಆಗಿದೆಯೆಂದು ಸುದ್ದಿ ಹರಾಜಿನ ವೇಳೆಗೆ ಕಚೇರಿ ಬಳಿ ಪೋಲೀಸು ಬಂದೋಬಸ್ತು ಇದ್ದಿತ್ತಾದರೂ, ಶ್ರೀ ಅಂಬಾಬಾಯಿ, ಯಮುನೆ ಭಾಗೀರಥಿಯಮ್ಮ, ದೇವರಾಯ ಭಂಡಾರಿ ಶೀನಸೆಟ್ಟಿ ಮತ್ತು ಕೃಷ್ಣಯ್ಯನವರು ವಿನಂತಿ ಪತ್ರಗಳನ್ನು ಮಂದಿರದೊಳಹೊಕ್ಕು ಏಲಮುದಾರರಿಗೆ ಹಂಚಿದರು, ಸದ್ರಿಯವರನ್ನು ಕೈದುಮಾಡಿಯೂ ಮರುದಿನ ಬಿಡುಗಡೆ ಮಾಡಿದರು ತಾ ೫ನೆಗೆ ಗುತ್ತಿಗೆಗಳ ನಿಷೇಧಾರ್ಥವಾಗಿ ಮಾಡಿದ ಮೆರವಣಿಗೆ ಕರಪತ್ರ ಹಂಚೋಣ ವಿದೇಶಿ ವಸ್ತ್ರದಂಗಡಿ ಪಹರೆ ಕಾಫಿ ಹೋಟೆಲಿನ ಪಹರೆಗಳ ಬಗ್ಗೆ ಕೈದುಮಾಡಲಾದ ೧೯ ಜನರ ಪೈಕಿ ೧೭ ಮಂದಿಯನ್ನು ಮರುದಿನ ಬಿಡುಗಡೆಮಾಡಿ ಉಳಿದಿಬ್ಬರಾದ ಶ್ರೀ ಲಕ್ಷ್ಮೀನಾರಾಯಣ ಬಲ್ಲಾಳ ಮತ್ತು ಕೇಶವನಯ್ಯರನ್ನೂ ತಾ ೩ನೆಗೆ ವಿಚಾರಣೆ ಮಾಡಿ ಮೂರು ತಿಂಗಳ ಸಜೆ ಮತ್ತು ಐದು ರೂಪಾಯಿ ದಂಡದಂತೆ ವಿಧಿಸಲಾಯಿತು ದಂಡದ ಬಗ್ಗೆ ಶ್ರೀ ಕೇಶವನಯ್ಯರ ಕಿವಿಪಂಟಿಗಳನ್ನು ತೆಗೆದಿರುತ್ತಾರಂತೆ

ವಿದೇಶಿ ವಸ್ತ್ರದ ಪಹರೆಗಾಗಿ ಕಾರಾವಾಸ ಶಿಕ್ಷೆಯನ್ನು ಅನುಭವಿಸುತ್ತಿರುವ ಶ್ರೀ ಮನೋರಮಾಬಾಯಿಯವರ ಮೇಲೆ ಹೊರಿಸಲಾದ ರೂ ೧೦೦ರ ದಂಡದ ಬಗ್ಗೆ ಅವರ ನಾಲ್ಕು ಬೆಲೆಬಾಳತಕ್ಕ ಸೀರೆಗಳನ್ನು ಈ ಮೊದಲೇ ಜಪ್ತಿಮಾಡಿದ್ದು, ತಾ. ೧೫ಕ್ಕೆ ನಾಲ್ಕೂ ಸೀರೆಗಳು ರೂ. ೫೧—೫೦ಕ್ಕೆ ಹರಾಜು ಮಾಡಲಾದುವು,

* * *

ವೈದ್ಯ ಮೋಹನಲಾಲರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ
ಪಾಚಕ ಅಮೂಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತ ಪಾಕು. ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೋಟ್ಟಿಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಜರಮ, ಪ್ರಮೇಹ, ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ಸಾಬಾಗುತ್ತದೆ ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ ೩೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫ ಟಿ ಖ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫॥ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಬಟಬುಟ್ಟಿ, ಎಲ್ ಎಮ್ ಎಂಡ್ ಎಸ್, ಜೆ. ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್. ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಪತ್ತೆ —ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ, S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಹುಡುಗತನದಲ್ಲಿ ವಿಶೇಷ ಮಕ್ಕಳಾಗವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೆ ಪೂರಾ ವಿಚಾರ ಮಾಡಿ ಔಷಧಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೆಳವಾಮಾಹಿಮ ರಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ ಖರ್ಚ ೦॥೦

ಶ್ರೀಧನ್ವಂತರ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ ಕ್ಲೇಶ ಮ್ಯಯಲ್ಲಿ ನೋವು ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿಯ ದೋಷ ಗರ್ಭಧಾರಣವಾಗದಿರೋಣ ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ ಮುಖ್ಯ ಸರ್ಟಿಫಿಕೇಟ ಮೆ॥ ರಾ ಎ ಎಮ್ ಇನ್ಸಪೆಕ್ಟರ ಬೆಳಗಾಂವ -ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೨ ಟಿ ಖ ಆಣೆ ೮

ವಿಳಾಸ — ಸಂಜೀವಿನೀ ಔಷಧಾಲಯ. ಮು ಪೋ ಮಿರಜ, S M C

FOETOGENE
A vigilant guard to the ailments of PREGNANCY
The remedy to neutralise the toxins of PREGNANCY thereby minimising the chances of Abortions & Miscarriages
Dose—Prevent ve 1 d every morning Curative 2 drm. thrice a day

THROLOGE
for Sore throat Cough & Cold & other long affections

HYSTERINE
A Tried Remedy for Hysteria & Epilepsy very useful Brain sedative in Insomnia & Mental derangements
Dose—1 to 2 dram adult 10 drops child thrice day

MONOCAFISPIN
A Nondepresant Nervine Sedative Magical cure for Headaches & Neutagia Found useful in all pains of whatever origin it may be
Dose—1 to 2 tablets.

THE EASTERN RESEARCH LABORATORY,
GHAZIPUR U P INDIA

ಬರೇ ರೂ. 3-6-0ಕ್ಕೆ ಈ 3 ವಾಚುಗಳೂ ಸಾಮಾನುಗಳೂ
ಆಶ್ಚರ್ಯಕರ ನಿಜ! ಆದರೆ ಸತ್ಯ!

ಒಟ್ಟೊ ಸುಗಂಧ ರಾಜಾ ಎಂಬುದು ೪ ದಿನಗಳ ತನಕ ಪರಿಮಳಿಸುವ ಸುಗಂಧ ದ್ರವ್ಯ — ಬಾಟ್ಲಿಗೆ ೧ ಆಣೆ ಮುಟ್ಟಿಸಿದ ೧೩ ತಾಸುಗಳೊಳಗೆ ರಿಂಗ್‌ವರ್ಮನ್ನು ಗುಣಪಡಿಸುವ ಮುಲಾಂ ಡಬ್ಬಿಗೆ ೩ ಆಣೆ ಮೇಲಿನ ೧೪ ಬಾಟ್ಲಿ ಅಥವಾ ಎರಡೂ ಕೂಡಿ ೧೪ನ್ನು ಕೊಳ್ಳುವವರಿಗೆ ಭಂಗಾರದ ನಿಬ್ ಇರುವ ಫೌಂಟನ್ ಪೆನ್ ೫೦೦ ಗಜಗಳ ದೂರಕ್ಕೆ ಪ್ರಕಾಶವನ್ನೀವ ಟೋರ್ಚ್ ಲೈಟ್ ೧ ಫೇನ್ಸಿ ರಿಸ್ಟ್‌ವಾಚು ೧, ಬಮ್ಮಾ ಟೈಂಪೀಸ್ ಒಂದು, ಅಥವಾ ರೈಲ್ವೇ ಮೈಲ್‌ಗಾರ್ಡ್ ಲಿವರ್ ಪೋಕೆಟ್ ವಾಚ್ ಒಂದು ಧರ್ಮಾರ್ಥ ಸಿಗುವುದು ಪ್ರತಿಯೊಂದು ವಾಚಿಗೆ ೧೦ ವರ್ಷಗಳ ಗೇರಂಟಿ ಇದೆ ನಾಂತುಷ್ಟಿಯಾದರೆ ಹಣ ವಾಪಾಸ್ ಟಪ್ಪಾಲ್ ಖರ್ಚ ಪ್ರತ್ಯೇಕ

ವಿಳಾಸ — **Sharma Brothers & Co,**
Post Box 6112, section 68, CALCUTTA

NOTICE.

In the Court of the District Munsiff of Mangalore.

O S *No. 279/32.*

BETWEEN

Mulki Venkatraya Prabhu Plaintiff

AND

1 Sheshu, niece of Sanada Thimmappa Poojary 2 Sanada Thimmappa Poojary, nephew of Koraga Poojary 3- Thankaru, sister of Koraga Poojary 4 Ramappa, son of 3rd defendant 5 Ambaju alias Angara Shettathi, daughter of Appu (female) No 1 to 4 reside in Boloor village Mangalore Taluk No 5 resides in Hosabettu Village Mangalore Taluk ——Defendants

Notice is hereby given that the Plaintiff has instituted the above suit for recovery of possession with arrears of rent etc or the property enjoyed by Defendants on mulageni *and has also applied for permission to sue* the defendants 1 to 4 also as representing all other members of their joint Aliya Santhana family and hat the petition I A No 660/32 and the above suit have been posted to the 7th day of September 1932

Mangalore
11 8-1932

B Venkatarao Baliga
Vakil for Plaintiff

In the High Court of Judicature Madras

(Ordinary Original Jurisdiction)

O P No 105 *of* 1932

The above petition for confirmation by the High Court of the alterations in the memorandum of association of the Canara Bank Ltd Mangalore comes on for hearing on or after the 26th instant Anybody interested and wishing to have a say in the matter may appear before the Chamber Court on that day Copy of the altered memorandum can be had either from the Registered Office or from me at 46 Big Street Triplicane

Madras
12-8-1932

K P Sarvotham Rao,
Advocate for Petitioner

ನೋಟೀಸು

ಮದ್ರಾಸ್ ಹ್ಯಾಕೋರ್ಟ್ ಒಫ್ ಜುಡಿಕೇಚರ್‌ನಲ್ಲಿ

(ಒರ್ಡಿನೆರಿ ಒರಿಜಿನಲ್ ಜುರಿಸ್ಡಿಕ್ಶನ್)

O P No 165 *of* 1932

ದಿ ಕೆನರಾ ಬೇಂಕ್ ಮಂಗಳೂರು, ಇದರ ಮೆಮೋರಂಡಮ್ ಒಫ್ ಎಸೋಶಿಯೇಶನ್‌ನೊಳಗಣ ಬದಲಾವಣೆಗಳನ್ನು ಕಾಯಂ ಮಾಡುವ ಬಗ್ಗೆ ಕೊಟ್ಟಿರುವ ಮೇಲಿನ ಅರ್ಜಿಯು ಇದೇ ತಿಂಗಳ ತಾ 26ಕ್ಕೆ ಅಥವಾ ಆ ಮೇಲೆ ತನಿಖೆ ಬಗ್ಗೆ ಇಡೋಣಾಗಿಯದೆ ಈ ವಿಷಯದಲ್ಲಿ ಸಂಬಂಧಪಟ್ಟವರು ಮತ್ತು ಜ್ಯಾಹೀರು ಮಾಡಲಿಕ್ಕೆ ಇಚ್ಛಿಸುವವರು ಸದರಿ ದಿನ ಹೈಕೋರ್ಟಿನ ಚೇಂಬರ್ ಕೋರ್ಟಿನ ಮುಂದೆ ಹಾಜರಾಗಬಹುದು ಬದಲಾಯಿಸಲ್ಪಟ್ಟ ಮೆಮೊರಂಡಮಿನ ಪ್ರತಿಯನ್ನು ಬೇಂಕಿನ ರಿಜಿಸ್ಟರ್ಡ್ ಆಫೀಸಿನಲ್ಲಿಯಾಗಲೀ, 46 ಬಿಗ್ ಸ್ಟ್ರೀಟ್, ಟ್ರಿಪ್ಲಿಕೇನ್, ಈ ನನ್ನ ವಿಳಾಸಕ್ಕೆ ಬರೆದು ನನ್ನಿಂದಾಗಲೀ ಪಡಕೊಳ್ಳಬಹುದು

ಮದ್ರಾಸು,
12-8-1932

K P Sarvotham Rao,
ಅರ್ಜಿದಾರರ ಎಡ್ವೊಕೇಟು.

ಸುಸಂಧಿ! ಕೆಲವೇ ಪ್ರತಿಗಳು!
ಶಾಲಾ ಕಾಲೇಜು, ಲೈಬ್ರರಿಗಳಿಗೂ, ಗ್ರಂಥಕರ್ತರಿಗೂ ನಮ್ಮ ಜಿಲ್ಲೆಯ ಅನುಭವವನ್ನು ಮಾಡಲಿಚ್ಛಿಸುವವರಿಗೂ, ಬೇಕಾಗಿರುವ ಕ್ರೌನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ವೆಂಬ ಉದ್ಗ್ರಂಥ! ಬೆಲೆ ಪ್ರತಿಯೊಂದಕ್ಕೆ ಟ. ಖ. ಸಹಿತ ರೂ. 2.
ಶಾರದಾ ಛಾಪಖಾನೆ,
ಮಂಗಳೂರು.

ಮೀರಾಬೆನ್ನರು ಮುಂಬಾಯಿಯಲ್ಲಿಳಿಯುತ್ತಲೇ ಕೈದು ಮಾಡಲ್ಪಟ್ಟರು.

ಶ್ರೀಯುತ ವಿ. ಜೆ. ಪಟೇಲರು ಲಂಡನಿನಲ್ಲಿ "ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರವೇ ಶಾಂತಿದಾಯಕವು" ಎಂದೂ ನಿಜವಾದ ವಾರ್ತೆಯು ಲಂಡನಿಗೆ ಬರುವುದೇ ಇಲ್ಲವೆಂದೂ ಹೇಳಿದರು! ಮಂತ್ರಿವರ್ಯರ ಮತದಾನ ವಿಷಯವು ಲಂಡನಿನಲ್ಲಿ ಸಂತೋಷಚಿತ್ತದಿಂದ ಸ್ವಾಗತೀಕರಿಸಲ್ಪಟ್ಟಿದೆ.

ವಾಚನ್ನು ನುಂಗಿದುದು—ಚರ್ಚಿಲ್ಲರಿಗೆ ತಕ್ಕ ಪಾಠ—ಕ್ಲಾರಿಕನ ಜಾಲ!—ನೂರು ಜನರು ನೀರುಪಾಲಾದರು—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚುನಾವಣೆಯ ಗೊಂದಲ!

ವ್ಯಾಪಾರಸ್ಥರಿಗೆ ಸುಸಂಧಿ!
ದೀಪಾವಳಿಯು ಸಮೀಪಿಸಿತಲ್ಲವೇ? ನಿಮಗೆ ಬೇಕಾಗುವ ವರ್ಗ, ಊಳಿಗ ಪುಸ್ತಕಗಳೂ, ಆಮಂತ್ರಣ ಪತ್ರಿಕೆಗಳೂ ಅಗ್ಗದಲ್ಲಿ, ಅನುಕೂಲಾನುಸಾರವಾಗಿ, ಕ್ಲಪ್ತ ಸಮಯಕ್ಕೆ ಸಿಗಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬನ್ನಿರಿ. ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ
ಶಾರದಾ ಛಾಪಖಾನೆ,
ಮಂಗಳೂರು.

ದಾಸಿಯು ಒಡತಿಯಾದಳು

ಜೋರಾಬಾಗನ್‌ನ ಕೋರ್ಟಿನಲ್ಲಿ ಶಾಂಡಬಾಲಾ ದಾಸಿ ಎಂಬವಳು ತನ್ನ ಒಡೆಯನ ಮೇಲೆ ಫಿರ್ಯಾದು ನಡೆಸಿದುದರಿಂದ ಅವಳ ಒಂದು ಕಥೆಯೇ ಹೊರಬಿದ್ದಿದೆ. ಅವಳ ಹೇಳಿಕೆಯೇನೆಂದರೆ "ಪಂಚು ಗೋಪಾಲ ಕುಮಾರೆಂಬವರ ಮನೆಯಲ್ಲಿ ನಾನು ಕೆಲವು ತಿಂಗಳುಗಳ ತನಕ ದಾಸಿಯಾಗಿದ್ದೆ. ಕೆಲವು ತಿಂಗಳುಗಳು ದಾಟುತ್ತಲೇ ಗೋಪಾಲ ಕುಮಾರರ ಹೆಂಡತಿಯು ಮೃತಳಾದಳು. ವಿಧವೆಯಾಗಿದ್ದ ನನ್ನನ್ನು ಗೋಪಾಲ ಕುಮಾರರು ಹೆಂಡತಿಯಂತಿರಲು ಕೇಳಿಕೊಂಡರು. ಒಂದು ವರ್ಷವು ದಾಟಿದ ಮೇಲೆ ನಾನು ಗರ್ಭಿಣಿಯಾದೆ. ಇದನ್ನು ಕಂಡು ಕುಮಾರರು ನನ್ನನ್ನು ಎಲ್ಲಿಯೋ ದೂರದ ಒಂದು ಮನೆಯಲ್ಲಿರಿಸಿದರು. ಕೆಲವು ದಿನಗಳ ತನಕ ಮಾತ್ರ ನನ್ನ ವೆಚ್ಚವನ್ನು ನೋಡಿದರು. ಆ ಮೇಲೆ ಬಿಟ್ಟೇ ಬಿಟ್ಟರು. ಈಗ ನನಗೂ ನನ್ನ ಮಗುವಿಗೂ ಅಶನಾರ್ಥವು ದೊರೆಯಲೇಬೇಕು"

ಚರ್ಚಿಲ್ಲರಿಗೆ ಪಾಠ!

ಚರ್ಚಿಲ್ಲರೆಂದರೆ ಲಂಡನಿನ ಕೆಲವು ಅಧಿಕಾರಿಗಳ ಬಲಗೈ. ಸರ್ ಸಾಮುವೇಲ್ ಹೋರರ ಬಹು ಮಿತ್ರ. ಈ ಚರ್ಚಿಲ್ ದೊರೆಯವರನ್ನು ಅವರ ಬಾಂಧವರೇ ಬಹಿಷ್ಕರಿಸಿದ ಒಂದು ಕಥೆಯು ಹೇಗೋ ಹೊರಬಿದ್ದಿದೆ. ಮಾತ್ರ ಅದನ್ನು ಬ್ರಿಟಿಷರು ಪ್ರಕಟಗೊಳಿಸಲಿಲ್ಲ. ಬ್ರಿಟಿಷ್ ಬ್ರೋಡ್ ಕಾಸ್ಟಿಂಗ್ ಕಂಪೆನಿಯ ವಯರ್‌ಲೆಸಿನಲ್ಲಿ ಯಾರಾದರೂ ಉಚ್ಚವ್ಯಕ್ತಿಗಳು ಭಾಷಣ ಕೊಡುವುದಾದರೆ ಆ ಕಂಪೆನಿಯವರು ಅವರಿಗೆ ಕಡಿಮೆಯೆಂದರೆ ೫೦ ಪೌಂಡುಗಳನ್ನಾದರೂ ಕೊಡುವ ಪದ್ಧತಿ! ಇತ್ತಲಾಗೆ ಆ ಬ್ರೋಡ್ ಕಾಸ್ಟಿನಲ್ಲಿ ಮಾತನಾಡಿ ಏನೋ ಉಪದೇಶವನ್ನು ಪ್ರಚಾರಮಾಡಬೇಕಾಗಿ ಚರ್ಚಿಲ್ಲರಿಗೆ ಮನಸ್ಸಾಯಿತು. ಕಂಪೆನಿಯವರಿಂದ ಅಪ್ಪಣೆ ಬೇಡಿದರು. ಆದರೆ ಕಂಪೆನಿಯವರು ಅವರ ಬೇಡಿಕೆಯನ್ನು ತಿರಸ್ಕರಿಸಿ, "ನೀವು ನಮ್ಮ ವಯರ್‌ಲೆಸ್ಸಿನಲ್ಲಿ ಮಾತನಾಡಲು ಸದ್ಯಕ್ಕೆ ಸಾಧ್ಯವಿಲ್ಲ"ವೆಂದುಬಿಟ್ಟರು. "ನೀವು ನನಗೆ ಏನನ್ನೂ ಕೊಡುವುದು ಬೇಡ. ನಾನೇ ಬೇಕಾದರೆ ನಿಮಗೆ ೫೦ ಪೌಂಡುಗಳನ್ನು ಕೊಡುತ್ತೇನೆ"ಎಂದು ಚರ್ಚಿಲ್ಲರು ಬರೆದರು. ಪುನಃ ಬೇಡಿಕೆಯನ್ನು ಕಂಪೆನಿಯವರ ತಿರಸ್ಕರಿಸಿಬಿಟ್ಟರು. ಹಣ ಕೊಟ್ಟರೂ ಚರ್ಚಿಲ್ಲರ ಬೇಳೆಯನ್ನು ಬೇಯಿಸುವವರು ಇಂಗ್ಲೆಂಡಿನಲ್ಲೂ ಇಲ್ಲದಿರುವುದು ಆಶ್ಚರ್ಯವೆಂದು ಒಂದು ಪತ್ರಿಕೆಯು ಹೇಳಿದೆ.

ಇದೂ ಶಸ್ತ್ರಸನ್ಯಾಸದ ಚಿಹ್ನೆಯೋ?

ಪ್ರಪಂಚದ ಜನಾಂಗಗಳು ಮುಂದಕ್ಕೆ ಯುದ್ಧಮಾಡಬಾರದು, ಸರ್ವತ್ರ ಶಾಂತಿಯಿರಬೇಕು ಎಂದು ಎಲ್ಲಾ ರಾಷ್ಟ್ರಗಳು ತಿರಿನಾಲಿಗೆಯಿಂದ ಹೇಳುತ್ತಿವೆಯಾದರೂ ಕೆಲವು ಒಳನಾಲಿಗೆಯಿಂದ ತಮ್ಮ ತಮ್ಮ ಶಸ್ತ್ರಗಳನ್ನು ಹೆಚ್ಚಿಸಲು ಅಪ್ಪಣೆಕೊಡುತ್ತಿವೆ. ಅಮೇರಿಕಾ ದೇಶದ ಜೆ. ವಾಲ್ಟರ್ ಎಂಬವನು ಒಂದು ವಿಮಾನವನ್ನು ಕಂಡು ಹಿಡಿದಿದ್ದಾನೆ. ಇವರಲ್ಲಿ ಯುದ್ಧಸಾಮಗ್ರಿಗಳನ್ನು ಅತಿರೇಕವಾಗಿ ತುಂಬಿ ಮೇಲೆ ಕೊಂಡೊಯ್ಯಬಹುದು ಮತ್ತು ಭೂತಲದಲ್ಲಿನ ಎಷ್ಟು ದೊಡ್ಡ ಸೈನ್ಯವನ್ನಾದರೂ ಒಂದೇಟಿನಿಂದ ಬೀಳಿಸಬಹುದು. ಶಸ್ತ್ರ ಸಂಹಾರಾರ್ಥವಾಗಿ ಇಷ್ಟರ ತನಕ ಏನೆಲ್ಲ ಸಿದ್ಧತೆಗಳೂ ಶೋಧನೆಗಳೂ ಪ್ರಯೋಗಗಳೂ ಆಗಿವೆಯೋ ಅವುಗಳೆಲ್ಲವನ್ನೂ ಇವನ ಈ ಹಾರಾಡುವ ಶಸ್ತ್ರಾಲಯವು ಸೋಲಿಸಲು ಸಮರ್ಥವಿದೆ. ಇವನಿಗೆ ಯಾವುದೋ ಒಂದು ಸರಕಾರವು ಸಹಾಯಮಾಡುತ್ತಿದೆಯಂತೆ. ಅದರ ಹೆಸರೇನೆಂದು ಅವನಿಗೊಬ್ಬನಿಗಲ್ಲದೆ ಮತ್ತಾರಿಗೂ ತಿಳಿದಿಲ್ಲ. ಇಷ್ಟರಲ್ಲೇ ಅವನಿಗೆ ೧ ಲಕ್ಷ ಪವನು ಸಹಾಯವು ದೊರೆತಿದೆ. ಇದು ಶಸ್ತ್ರತ್ಯಾಗದ ಒಂದು ಚಿಹ್ನೆಯಾಗಿರಬಹುದೇ? ಎಂದೊಬ್ಬರು ಕೇಳುತ್ತಿದ್ದಾರೆ!

ಜಾಲ.

ದಿಲ್ಲಿಯ ಮುಂಡಿಯಿಂದೊಂದು ವಾರ್ತೆ. ದಿಲ್ಲಿಯ ಧರ್ಮಶಾಲೆಯಲ್ಲುಳಕೊಂಡಿದ್ದ ಒಬ್ಬ ತರುಣನ ಬಳಿ ಒಬ್ಬ ಕ್ಲಾರಿಕನು ಹೋಗಿ 'ಕ್ಷೌರಮಾಡಬೇಕೆ?' ಎಂದು ಕೇಳಿದನು. ತರುಣನಿಗೆ ಹೆಚ್ಚಿನ ಗಡ್ಡವು ಬಂದಿದ್ದುದರಿಂದ ಅವನು ಒಪ್ಪಿಕೊಂಡನು. ಕ್ಷೌರವಾದೊಡನೆ ಆ ಕ್ಲಾರಿಕನು ಆ ತರುಣನಿಗೆ ಒಂದು ಸಿಗರೇಟನ್ನು ಕೊಟ್ಟನು. ಮಿತ್ರತ್ವದ ಸಂಭಾಷಣೆಯೊಂದಿಗೆ ತರುಣನು ಸಿಗರೇಟನ್ನು ಸೇದಿದ. ಐದು ನಿಮಿಷಗಳಲ್ಲೇ ಸ್ಮೃತಿತಪ್ಪಿ ಬಿದ್ದುಬಿಟ್ಟ. ಅವನ ಸ್ಥಿತಿಯು ಹೀಗಾಗುವಾಗ ಅತ್ತಲಾಗಿನಿಂದ ಕ್ಲಾರಿಕನು ತರುಣನ ಬಟ್ಟೆಬರೆ ಸಾಮಾನುಗಳನ್ನೂ, ದುಡ್ಡು ಕಾಸುಗಳನ್ನೂ ಹಿಡಕೊಂಡು ಎತ್ತಲೋ ನಡೆದುಬಿಟ್ಟ. ಒಂದು ದಿನ ಈ ತರುಣನೂ ಕ್ಲಾರಿಕನೂ ಕ್ವೀನ್ಸ್ ಗಾರ್ಡನ್ಸ್ ಎಂಬಲ್ಲಿ ಅನಿರೀಕ್ಷಿತವಾಗಿ ಭೇಟಿಯಾದರು. ತರುಣನು ಏನೋ ಒಂದು ಉಪಾಯದಿಂದ ಅವನನ್ನು ಸ್ಟೇಶನಿನ ತನಕ ಮಾತುಕತೆಯಲ್ಲೇ ಕರೆದೊಯ್ದು ಪೋಲೀಸರ ವಶ ಒಪ್ಪಿಸಿಬಿಟ್ಟ. ಈಗ ಅವನು ಕ್ಲಾರಿಕನಲ್ಲವೆಂದೂ ಇದೇ ಮಾಟಗಾರ್ತನದ ಜಾಲವನ್ನು ಅನೇಕರ ಮೇಲೆ ಉಪಯೋಗಿಸಿ ಗೆದ್ದವನೆಂದೂ ತಿಳಿದುಬಂದಿದೆ.

ಬಿಸಿಲುಕುದುರೆ

ಲೋಕದಲ್ಲಿನ ವೈಚಿತ್ರ್ಯಗಳು ವರ್ಣನಾತೀತವಾದುವುಗಳು. ಅವುಗಳಲ್ಲಿ ಬಿಸಿಲುಕುದುರೆ (mirage) ಎಂಬ ಸೃಷ್ಟಿ ಚಮತ್ಕಾರದ ವೈಚಿತ್ರ್ಯವು ಮತ್ತೂ ವೈಶೇಷವನ್ನುಳ್ಳದು. ಇದು ಸಹಾರ ಮರುಭೂಮಿಯಲ್ಲೇ ಕಂಡುಬರುವುದೆಂಬ ಪ್ರತೀತಿಯಿತ್ತು. ಆದರೆ ಈಗ ಅದು ಇಂಗ್ಲಾಂಡಿನಲ್ಲೂ ಕಂಡುಬರುತ್ತಿದೆ. ನಾರ್ಫೋಕಿನ ಬ್ರೆಂಕಿನ ಮಾರ್ಷಸ್ ಎಂಬ ನಾರುಭೂಮಿಯಲ್ಲಿ ನಾಲ್ಕು ಮಂದಿಗಳು ಸಂಚಾರ ಮಾಡುತ್ತಿದ್ದಾಗ ದೂರದಲ್ಲಿ ಒಂದು ಸುಂದರ ಸರೋವರವೂ ಅದರ ಹಿಂದೆ ಒಂದು ರಮ್ಯವಾದ ವನವೂ ಒಂದು ಅರಮನೆಯೂ ದಿವ್ಯ ಕಟ್ಟಡಗಳೂ ಕಂಡುಬಂದುವು. ಆ ಬಂಜರು ಸ್ಥಳದಲ್ಲಿ ಅವುಗಳಿರಲು ಸಂದರ್ಭವೇ ಇಲ್ಲದಿರುವಲ್ಲಿ, ಇಂತಹ ಸೌಂದರ್ಯಾತಿಶಯದ ನಿರ್ಮಾಣವೆಲ್ಲಿಂದೆಂದು ಸಂಚಾರಿಗಳಿಗಾಶ್ಚರ್ಯವಾಯಿತು. ಮರುದಿನ ಅವರು ಆ ವಿಚಿತ್ರ ಸ್ಥಳಕ್ಕೆ ಪಯಣಬೆಳೆಸಿ, ಪರಿಶೋಧಿಸಿ ನೋಡಲಾಗಿ, ಅದು ಅದ್ಭುತವಾದ ಬಿಸಿಲುಕುದುರೆಯೆಂದು ಕಂಡುಕೊಂಡರು. ವಾತಾವರಣವು ಉಷ್ಣವಾಗಿರುವಾಗಲೂ ಬಿಸಿವಾಯುವಿನ ಮೇಲೆ ಸೂರ್ಯಕಿರಣಗಳು ಪ್ರತಿಬಿಂಬಿಸುವಾಗಲೂ ಇಂತಹ ವೈಚಿತ್ರ್ಯಗಳುಂಟಾಗುತ್ತಿವೆ.

ವಾಚನ್ನು ನುಂಗಲು ಸಾಧ್ಯವೇ?

ದಿಲ್ಲಿಯಲ್ಲಿನ ನೋಟಿಫೈಡ್ ಏರಿಯಾ ಕಮಿಟಿಯ ಟೇಕ್ಸ್ ಸುಪರಿಂಟೆಂಡೆಂಟರಾದ ನ್ಯೂಟನ್ ಎಂಬವರು ಕಿಶನ್ ಸಿಂಗ್ ಎಂಬ ಗೃಹಸ್ಥನೊಬ್ಬನ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ನ್ಯೂಟನರು ಕಿಶನ್ ಸಿಂಗನ ಮೇಲೆ ಉಗ್ರ ಫಿರ್ಯಾದು ಮಾಡಿದ್ದಾರೆ. ಸಾರಾಂಶ ಹೀಗೆ 'ಬಾಡಿಗೆಯ ಬಾಕಿಯಾದುದನ್ನು ವಸೂಲಿಮಾಡಲು ನನ್ನ ಮನೆಗೆ ಬಂದ ಕಿಶನ್ ಸಿಂಗನು ನನ್ನ ಬಳಿಯಲ್ಲಿದ್ದ ಬೆಲೆಬಾಳುವ ನನ್ನ ಸ್ವಿಸ್ ವಾಚನ್ನು ಮೆಲ್ಲನೆ ತೆಗೆದು ನುಂಗಿಬಿಟ್ಟನು. ನಾನದನ್ನು ನೋಡಿಲ್ಲವಾದರೂ ನನ್ನ ಕೆಲಸದವರು ನೋಡಿ ಒಡನೆ ಕಿಶನ್ ಸಿಂಗನ ಕೆನ್ನೆಗೆ ನಾಲ್ಕು ಪೆಟ್ಟುಗಳನ್ನು ಕೊಟ್ಟನು. ತತ್‌ಕ್ಷಣವೇ ಕಿಶನ್ ಸಿಂಗನು ವಾಚನ್ನು ಕಾರಿಬಿಟ್ಟನು. ಕೂಡಲೇ ಫೋನಿನ ಮೂಲಕ ಪೋಲೀಸರನ್ನು ಕರೆದು ಅವನನ್ನು ಹಿಡಿಸಿದೆನು." ಈ ವಿಚಾರಣೆಯು ಅಲ್ಲಿರುವ ಕೋರ್ಟಿಗೆ ಹೋಗಿದೆ. ಸದ್ಗೃಹಸ್ಥನು ವಾಚನ್ನು ಕಳವು ಮಾಡ್ಯಾನೆ? ಅದನ್ನು ಅವನು ನುಂಗಲೂ ಸಾಧ್ಯವೇ ಎಂಬ ಪ್ರಶ್ನೆಯು ಎಲ್ಲರ ಬಾಯಲ್ಲೂ ಇದೆ. ದ್ವೇಷದಿಂದ ಹೀಗಾಯಿತೆಂದು ಕೆಲವರ ಹೇಳಿಕೆ.

ನೂರು ಜನರು ನೀರಿಗಾಹುತಿ!

ಕೊಲ್ಹಾಪುರದ ಅಂಕ್ಲಿ ಎಂಬಲ್ಲಿಂದ ಮಂಜ್ರಿ ಎಂಬಲ್ಲಿಗೆ ತಾ. ೧೫ನೇ ದಿನ ಒಂದು ಮಂಜಿಯು ೧೩೦ ಮಂದಿಗಳನ್ನು ಹೊತ್ತುಕೊಂಡು ನದಿಯಲ್ಲಿ ಹೋಗುತ್ತಿದ್ದಿತು. ನೆರೆಯ ಭರದಿಂದ ನದಿಯು ಉಕ್ಕಿಕೊಂಡಿದ್ದಿತು. ನಡು ನದಿಯಲ್ಲಿ ನೀರಿನ ಪ್ರವಾಹವು ಕೊಚ್ಚಿಕೊಂಡು ಬಂದ ಒಂದು ದೊಡ್ಡ ಮರವು ತೇಲಾಡಿಕೊಂಡು ಬಂದು ಮಂಜಿಗೆ ತಾಗಿತು. ದೋಣಿಗಾರನು ಎಷ್ಟು ಯತ್ನಿಸಿದರೂ ಮಂಜಿಯು ಮರಕ್ಕೆ ತಾಗಿಯೇ ಹೋಯಿತು. ಒಡನೆ ಮರದ ಗೆಲ್ಲಿನಲ್ಲಿ ಜೀವರಕ್ಷಣೆಯನ್ನು ಮಾಡಿಕೊಂಡಿದ್ದ ಒಂದು ದೊಡ್ಡ ಹಾವು ಮಂಜಿಗಿಳಿಯಿತು. ಅದನ್ನು ಕಂಡು ಮಂಜಿನ ಜನರು ಗಾಬರಿಗೊಂಡರು. ಎಲ್ಲರೂ ದಿಗಿಲುಗೊಂಡು ಮಂಜಿನ ಒಂದು ಪಾರ್ಶ್ವವನ್ನೇ ಸೇರಿದರು. ಕೂಡಲೇ ಹಾವೂ ಮಂಜಿಯೂ ಜನರೂ ನೀರುಪಾಲಾಗಬೇಕಾಯಿತು. ಒಬ್ಬಿಬ್ಬರಲ್ಲದೆ ಎಲ್ಲರೂ ಜಲಕ್ಕಾಹುತಿಯಾದರು ಎಂಬ ವ್ಯಸನಕರ ಸುದ್ದಿಯನ್ನು ಈಜಾಡಿಕೊಂಡು ಬಂದಿದ್ದವನೊಬ್ಬನು ಹೇಳಿದ್ದಾನೆ.

ಒರ್ಡಿನೆನ್ಸು ರಾಜ್ಯ!

ಪ್ರಚಲಿತ ಸ್ಥಿತಿಯ ನಿಷೇಧಾರ್ಥವಾಗಿ ಎಲ್ಲೆಲ್ಲೂ ಯತ್ನಗಳಾಗುತ್ತಿವೆಯಷ್ಟೆ. ಲಂಡನಿನಲ್ಲೂ ಈ ಗಾಳಿಯು ಬೀಸುತ್ತಿದೆ. ಕಳೆದ ವರ್ಷ ಗಾಂಧಿಜಿಯವರು ಲಂಡನಿಗೆ ಹೋದಾಗ ಅಲ್ಲಿಯ ಕಿಂಗ್ಸಿಲಿ ಹೋಲ ಎಂಬ ಬಡವರ ಮನೆಯಲ್ಲುಳಕೊಂಡದ್ದಷ್ಟೆ. ಮೊನ್ನೆ ಅಲ್ಲಿಯ ಮುಖ್ಯಸ್ಥೆಯಾದ ಮ್ಯುರಿಯೆಲ್ ಲೆಸ್ಟರ್‌ರ ಮುಂದಾಳುತನದಲ್ಲಿ ಒಂದು ಪ್ರಚಂಡ ಮೆರವಣಿಗೆಯಾಯಿತು. ಮೆರವಣಿಗೆಗಾರರು ಹಿಂದೂಸ್ಥಾನದ ಈಗಿನ ಸ್ಥಿತಿಯ ವರ್ಣನಾಸಂಬಂಧವಾದ ಪದಗಳನ್ನು ಹಾಡಿದರು. "ಲೋಕವಂದ್ಯ ಯೇಸು ಕ್ರಿಸ್ತನು ಈಗಿನ ಸಂದಿಗ್ಧತೆಯನ್ನು ಕಂಡರೆ ಏನೆನ್ನುತ್ತಿದ್ದನು?" ಎಂಬ ಪ್ರಶ್ನಾರ್ಥದ ಜಾಹೀರಾತುಗಳನ್ನು ಪ್ರಕಟಿಸಿದರು. ಸಭೆಗಳು ಜರಗಿಸಲ್ಪಟ್ಟವು. "ಬ್ರಿಟನಿನಂತೆ ಹಿಂದೂದೇಶವು ಏಕೆ ಸ್ವತಂತ್ರ್ಯವನ್ನನುಭವಿಸಬಾರದು? ಹಿಂದೀಯರಿಗೆ ಸ್ವಾತಂತ್ರ್ಯವನ್ನು ಕೊಟ್ಟರೆ ಸುಖವುಂಟು. ಹಿಂದೂದೇಶವು ಬ್ರಿಟಿಷ ಸರಕುಗಳಿಗೆ ಉತ್ಕೃಷ್ಟವಾದ ಮಾರ್ಕೆಟು" ಎಂದು ಪ್ರಚುರಿಸಲಾಯಿತು. ಈ ಮೆರವಣಿಗೆ ಸಭೆಗಳು ಶುದ್ಧ ಆಂಗ್ಲೇಯರಿಂದಲೇ ನಡೆಯಿತು. ಯಾವ ಹಿಂದೀಯನೂ ಅವುಗಳಿಗೆ ಸೇರಲಿಲ್ಲ. ಪೋಲೀಸರು ಮೆರವಣಿಗೆಗಾರರಿಗೆ ಸಕಲ ಅನುಕೂಲತೆಗಳನ್ನೊದಗಿಸಿಕೊಟ್ಟರು.

Wanted.

For the Sun Rise Banking Company Limited, Bangalore, in the Districts of South Kanara, Malabar and Coorg, three Superintendents of Branches and fifteen Taluk Branch Managers, on a Monthly Salary of Rs. 60–20–300 and Rs. 55 10—150 plus Rs 50 and 22-8-0 respectively as Office and Conveyance Allowance Also 75 Village Agents on a salary of Rs 20-3–50 Only influential business men who can hold Savings Bank Deposit Certificate of this Company of Rs. 500, Rs. 150 and Rs. 12–8–0 repectively need only apply personally or with six annas postage stamps to the Secretary now camping at the office of the Chairman,

Mr C. Vedaji, Rao Sahib B. A. B. L.
First Class Hony, Magistrate,
Falnir, MANGALORE S. K

ನೀವು ಉಡುಪಿಗೆ ಬಂದಲ್ಲಿ, ಸೌಖ್ಯ ಮತ್ತು ಭದ್ರತೆಯನ್ನು ಪಡೆಯಲು
ಮರೆಯಬೇಡಿರಿ!!!

ಮೈಸೂರು ಕ್ಲಬ್, ಉಡುಪಿ.

ಯೋಗ್ಯವಾದ ಊಟ, ಸ್ನಾನ, ಟಿಫಿನ್, ಉಳಕೊಳ್ಳುವ, ಸಸ್ಯಾಹಾರ ಏರ್ಪಾಡು, ಮೇಜು, ಮಂಚ, ದೀಪ ಇತ್ಯಾದಿ ಸಹಿತ.

Up-to-date Boarding and Lodging. When you visit Udipi, be at home.

MYSORE CLUB, UDIPI.

[illegible] ೨೦ನೆಯ ಆಂಗೀರಸ ಸಂವತ್ಸರದ [illegible] ಶನಿವಾರದಿಂದ ಆಂಗೀರಸ ಸಂವತ್ಸರದ ಶ್ರಾವಣ ೨೬ನೇ ಶುಕ್ರವಾರದ ವರೆಗಿನ ಪಂಚಾಂಗ

(ರವಿ ಮಾಸವು ಸಿಂಹ—ಸೋಣ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
20	ಶನಿ	೪	೨೮ ೪೪	ಉ. ಭಾ	೨ ೨	೪	6 20	6 47
21	ರವಿ	೫	೩೩ ೧೪	ರೇವತಿ	೭ ೩೧	೫	6 20	6.47
22	ಸೋಮ	೬	೩೮ ೦೬	ಅಶ್ವಿನಿ	೧೩ ೪೭	೬	6 20	6 46
23	ಕುಜ	೭	೪೩ ೨	ಭರಣೀ	೨೦ ೧೫	೭	6.20	6.46
24	ಬುಧ	೮	೪೭ ೪೪	ಕೃತ್ತಿಕಾ	೨೬ ೪೦	೮	6,40	6 45
25	ಗುರು	೯	೫೧ ೪೬	ರೋಹಿಣೀ	೩೦.೪೭	೯	6 20	6 45
26	ಶುಕ್ರ	೧೦	೫೫ ೧೪	ಮೃಗಶಿರಾ	೩೬ ೪೪	೧೦	6 41	6 44

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಪರಮಾವಧಿ	Temperature. ಉಷ್ಣ (ಕಾವು) Minimum ಅಲ್ಪಾವಧಿ	Rainfall ಮಳೆ ದಿನದ ಮಳೆ	Rainfall ಮಳೆ ಜುಮಲಾ ಮಳೆ
12	83— 7	75— 6	0—03	—
13	84— 4	75— 9	—	—
14	84— 3	73— 8	0—08	—
15	83— 1	74— 8	—	—
16	84— 1	76— 2	—	—
17	83— 7	76— 6	—	—
18	85— 0	75— 9	—	79—15

ಮಂಗಳೂರಿನ ಪೇಟೆ ಧಾರಣೆ.

ಬೇಳಸು	ಇಂದ ರೂ ಅ	ವರೆಗೆ ರೂ ಅ
ರಾಶಿ ಅಕ್ಕಿ	3— 9	4— 2
ಮುಸ್ಕು	4— 8	5— 0
ಗುಡ್ಡ	4— 0	4 6
ಸುಗ	3—10	4— 2
ಊರ ಅಪ್ಪಲ್ ಬೆಳ್ತಿಗೆ	4—12	5— 3
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8— 0	8— 4
ನೆಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4—12	4—14
ಗೋದಿ ಗೋಣಿ ೧ಕ್ಕೆ	9— 8	12— 8
ತೊಗರಿ ಗೋಣಿ ೧ಕ್ಕೆ	10— 8	12— 0
ಹುರುಳಿ ಗೋಣಿ ೧ಕ್ಕೆ	6—12	7— 4
ಕಡಲೆ ಗೋಣಿ ೧ಕ್ಕೆ	8— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	13— 8	21— 0
ಉದ್ದು ಗೋಣಿ ೧ಕ್ಕೆ	11— 8	13— 0
ಹೆಸರು ಗೋಣಿ ೧ಕ್ಕೆ	10— 4	11—
ಊರುಬೆಲ್ಲ ಖಂಡಿ ೧ಕ್ಕೆ	33—12	36— 4
ಉಪ್ಪು ಗೋಣಿ ೧ಕ್ಕೆ	6— 0	6— 4
ಕೊಬ್ರಿ ಖಂಡಿ ೧ಕ್ಕೆ	65—	7—
ಕೊಬ್ರಿ ಹಿಂಡಿ ಮುಡಿ ೧ಕ್ಕೆ	33—	33— 8
ಎಳ್ಳಿಂಡಿ ಖಂಡಿ ೧ಕ್ಕೆ	22— 8	23—12
ಕೊಬ್ರಿ ಎಣ್ಣೆ ಮಣ ೧ಕ್ಕೆ	5— 8	6— 8
ಎಳ್ಳೆಣ್ಣೆ ಮಣ ೧ಕ್ಕೆ	6—12	7— 0
[illegible] ಪಟ್ಟೆಗೆ ೧ಕ್ಕೆ	4— 7	8—14
[illegible] ಸಕ್ಕರೆ ಮಣ ೧ಕ್ಕೆ	4— 4	4— 6
ಹೊಸ ಮೆಣಸು	4— 0	5— 0
ಸಾಸಿವೆ ಮುಡಿ ೧ಕ್ಕೆ	5— 4	6— 8
ನೇಟಿವ್ ಕಾಫಿ ಖಂಡಿ ೧ಕ್ಕೆ	275— 0	300—
ಕಾಳುಮೆಣಸು ಖಂಡಿ ೧ಕ್ಕೆ	170— 0	180—
ಮೆಂತ್ಯೆ ಮಣ ೧ಕ್ಕೆ	27— 0	28—
ಗೇರುಬೀಜ ಮುಡಿ ೧ಕ್ಕೆ	2—12	3— 0
[illegible] ಖಂಡಿ ೧ಕ್ಕೆ	25— 0	26— 8
ತಾಂಬ್ರ ಹಳತು ಮಣ ೧ಕ್ಕೆ	11— 0	11— 8
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	15— 0	16—0
ಹಿತ್ತಾಳೆ ಹಳತು ೧ಕ್ಕೆ	14— 4	14—12
ಹಿತ್ತಾಳೆ ತಗಡು ಮಣ ೧ಕ್ಕೆ	11— 8	12— 0
ಸತುವು ೧ಕ್ಕೆ	17—14	18— 0
[illegible] ಖಂಡಿ ೧ಕ್ಕೆ	40—	—
[illegible] ಕಾಫಿ ಖಂಡಿ ೧ಕ್ಕೆ	340—	—
ಹಳೆ ಅಡಿಕೆ	180—	205—
ಹೊಸ ಅಡಿಕೆ	140—	145—

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗ ಕನೆಕ್ಷನ್ ಕೂಡಾ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಯಲ್ಲಿ ನಿರ್ಮಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವವರು ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗೆಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary
The Canara Public Conveyance Company Ltd Mangalore

Chikmagalur Public Conveyance Motor Service.
CHIKMAGALUR
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು(M. S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು, ಬೆಳ್ತಂಗಡಿ ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು, ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪॥ ಗಂಟೆ ಒಳಗ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಲ್ಲದೆ, ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿನ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಡಿ. ಎಸ್. ಹನುಮಂತಪ್ಪ, ಪ್ಯಾರಡೋಸ್ ಸೂರಾಜ್, ಕೆ. ಸೂರಪ್ಪ ಶೆಟ್ಟಿ—ಪ್ರೊಪ್ರೈಟರ್ಸ್

ಹಿಂದೂ ಮುಸಲ್ಮಾನ ಪ್ರಶ್ನೆ: ಸರಕಾರದ ತೀರ್ಪು!

ಹಿಂದೂಗಳ ಅಸಂತುಷ್ಟಿ!

ವೈಸರಾಯರ ಪ್ರಕಟಣೆ!

ಇದೇ ತಾರೀಖು ೧೬ನೇ ದಿನ ಬ್ರಿಟಿಷ ಸಾಮ್ರಾಜ್ಯದವರು ಹಿಂದೂ ಮುಸಲ್ಮಾನ್ ಪ್ರಶ್ನೆಯನ್ನು ತನ್ನಿಚ್ಛೆಯಂತೆ ಇತ್ಯರ್ಥಿಸಿದರು, ಇದರಿಂದಾಗಿ ಮುಂದಕ್ಕೆ ಹಿಂದೂ ಮುಸಲ್ಮಾನ್ ಐಕ್ಯವು ಸ್ಥಾಪಿತವಾಗಲಿರುವುದೆಂದು ಕೆಲವರೆನ್ನುವರು, 'ಕೆಲವರು ಇದು ಅಸಮಾಧಾನಕರ'ವೆನ್ನುತ್ತಿರುವರು

ಹಿಂದೀಯ ಜನಾಂಗವು ಕಳೆದ ೬೦ ವರುಷಗಳಿಂದಲೂ ಸ್ವಾತಂತ್ರ್ಯಸಾಧನೆಗಾಗಿ ಟೊಂಕಕಟ್ಟಿದ್ದು, ತನ್ನ ದೇಹಸಾಧನೆಯಲ್ಲಿ ನಿರಂತರವೂ ಪ್ರಯತ್ನಿಸುತ್ತಿದೆಯಷ್ಟೆ! ಆದರೆ ಈ ಸಾಧನೆಯು ಸರ್ವತೋಮುಖವಾಗಿ ನಡೆಯಬೇಕಾದರೆ ಮೊದಲು ಹಿಂದೂ ಮುಸ್ಲಿಮ್ ಸಮಸ್ಯೆಯನ್ನು ತೀರ್ಮಾನಿಸಬೇಕು ದೇಶದ ಪ್ರಬಲ ಪಕ್ಷಗಳಾದ ಹಿಂದೂ ಮುಸಲ್ಮಾನರು ತಮ್ಮ ಹೇಳಿಕೆಕೇಳಿಕೆಗಳಲ್ಲಿ ಒಮ್ಮತದ ಒಂದು ಒಪ್ಪಂದಕ್ಕೆ ಬರಬೇಕು, ಆ ಮೇಲೆ ದ್ವಿಪಕ್ಷಗಳೂ ಒಟ್ಟುಗೂಡಿ ಸ್ವಾತಂತ್ರ್ಯದ ಪಥವನ್ನು ಹಿಡಿಯಬೇಕು ಎಂಬುದಾಗಿ ದೇಶದ ಪ್ರಮುಖರು ಕಂಡುಕೊಂಡರು ಈ ಸಮಸ್ಯೆಯನ್ನು ಬಿಡಿಸಲು ಎಂತೆಂತಹ ಪ್ರಭೃತಿಗಳು ಯತ್ನಿಸಿದರೂ ಅದು ಇಷ್ಟರ ತನಕವೂ ಬಿಡಿಸಲ್ಪಡಲಿಲ್ಲ ಮಹಾತ್ಮಾ ಗಾಂಧಿಯವರು ೧೯೨೦ನೇ ಇಸವಿ ಮೊದಲುಗೊಂಡು ಈ ವಿಚಾರದಲ್ಲಿ ಒಳ್ಳೆವಾಗಿ ಹೆಣಗಾಡಿದರು ಶೌಕತಾಲಿ ಮಹಮ್ಮದಾಲಿ ಮೊದಲಾದ ಮುಸ್ಲಿಮ್ ಮುಖಂಡರನ್ನು ತನ್ನ ಒಲವಿಗೆ ಪಾತ್ರರನ್ನಾಗಿ ಮಾಡಿಕೊಂಡು, ಆ ರೀತಿಯಿಂದಲೂ ಮತವಾದವನ್ನು ಕೊನೆಗೊಳಿಸಬೇಕೆಂದು ಯತ್ನಿಸಿದರು ಒಂದು ಸಮಯದಲ್ಲಿ ಹಿಂದೂ ಮುಸಲ್ಮಾನ ಐಕ್ಯವು ಸನ್ನಿಹಿತವಾಯಿತೋ ಎಂದೆನ್ನುವ ಅವಕಾಶವನ್ನಿತ್ತ ಸನ್ನಿವೇಶನಗಳ ಸಮಾಗಮವಾಯಿತು ಆದರೆ ಮರುವರುಷವೇ ಹಿಂದೂ ಮುಸ್ಲಿಮ ಭೇದವು ಪುನಃ ತಲೆದೋರಿ ಅದು ದಿನೇ ದಿನೇ ಪ್ರಬಲವಾಯಿತು ಕೊಂಗ್ರೆಸ್ಸಿನ ಚಳವಳದ ದೆಸೆಯಿಂದಾಗಿ ಹಿಂದೂದೇಶಕ್ಕೆ ಸಾಮಂತಸ್ವರಾಜ್ಯದ ಹಾದಿಯನ್ನಾದರೂ ತೋರಿಸಿಕೊಡಬೇಕೆಂದು ಬ್ರಿಟಿಷ ಸಾಮ್ರಾಜ್ಯವು ಒಗೆಯುತ್ತಾದರೂ, ಆ ಕಾಲದಲ್ಲಿ ಅಸ್ತಿತ್ವದಲ್ಲಿ ಒಂದ ಪ್ರಚಂಡ ಹಿಂದೂ ಮುಸ್ಲಿಮ ಭೇದಬೀಜವು ಘೋರವಾಗಿ ಬೆಳೆದುದರಿಂದ ಬ್ರಿಟಿಷ ಸರಕಾರದ ಇಂಗಿತವು ಆ ಮರದ ನೆಳಲಡಿಯಲ್ಲೇ ಮಲಗಿಬಿಟ್ಟಿತು

೧೯೨೭ರಲ್ಲಿ ತಲೆದೋರಿದ ಒಡಕು, ಹಿಂದೂ ಮುಸಲ್ಮಾನರೊಳಗೆ ಮತ್ತೆ ದಿನೇ ದಿನೇ ದೊಡ್ಡದಾಗುತ್ತಾ ಬಂತು ಸ್ವಾತಂತ್ರ್ಯದ ಹಾದಿಯನ್ನು ಹಿಂದೀಯರಿಗೆ ತೋರಿಸಿಕೊಡುವೆನೆಂದು ಹೇಳಿದ ಬ್ರಿಟಿಷ ಸರಕಾರವು ಇದನ್ನು ಕಂಡು "ನಾವು ಹಿಂದೂದೇಶವನ್ನು ಸ್ವಾತಂತ್ರ್ಯಸಾಧನೆಯಲ್ಲಿ ಅಭಿನಂದಿಸುವೆವು ಅಲ್ಲದೆ ಅದಕ್ಕೆ ಇತರ ಸಾಮಂತರಾಜ್ಯಗಳಂತೆ ಸ್ವಾತಂತ್ರ್ಯರಾಜ್ಯವನ್ನು ಕೊಡುವೆವು ಆದರೆ, ಹಿಂದೂದೇಶವು ತನ್ನಲ್ಲಿನ ಹಿಂದೂ ಮುಸ್ಲಿಮ ಕಲಹವನ್ನು ತಣಿಸದೆ ಯಾವುದು ಮಾಡಲೂ ಸಾಧ್ಯವಿಲ್ಲ, ನಾವು ಸ್ಥಾಪಿಸಿದ ಹಿಂದೀಯ ಸಾಮ್ರಾಜ್ಯವು ಆಂದೋಲನಕ್ಕೊಳಗಾಗದೆ ಅದು ಸರ್ವ ಶಾಂತಿಯುತವಾಗಬೇಕೆಂದೇ ನಮ್ಮ ಇಚ್ಛೆ! ಆದುದರಿಂದ ಈ ಪಂಗಡಗಳೆರಡು ಮೊದಲು ತಮ್ಮತಮ್ಮೊಳಗಿನ ಭೇದಾಭಿಪ್ರಾಯವನ್ನು ಕೊನೆಗಾಣಿಸಿದೊಡನೆ ಎಲ್ಲಾ ವಿಷಯಕ್ಕೂ ಮುಂದಕ್ಕೆ ಯೋಚಿಸಲಾದೀತು" ಎಂದಿತು.

ಹಿಂದೂ ಮುಸಲ್ಮಾನ್ ಸಮಸ್ಯೆಯನ್ನು ಸುಲಭದಿಂದ ತೀರ್ಮಾನಿಸಬಹುದಿತ್ತು ಆದರೆ ಮುಸಲ್ಮಾನರೊಳಗೆನೇ ಅನೇಕಾನೇಕ ಪಂಗಡಗಳಿರುವುದರಿಂದ ಹಿಂದೂಗಳು ಅವುಗಳೆಲ್ಲವನ್ನು ಸಮಾಧಾನಪಡಿಸಲು ಅಸಾಧ್ಯವೆಂದು ಕಂಡುಕೊಂಡರು ರಾಷ್ಟ್ರಪಕ್ಷೀಯ ಮುಸ್ಲಿಮರು ಹಿಂದೂಗಳ ಮೇಲೆ ವಿಶ್ವಾಸವನ್ನುಳ್ಳವರಾಗಿದ್ದರೂ, ಅವರ ಪ್ರತಿಪಕ್ಷಿಗಳಾದ ಅನೇಕ ಮುಸ್ಲಿಮರು ಹಿಂದೂಗಳಿಗೆ ವಿರೋಧರಾಗಿ ನಿಂತರು. ಪ್ರಥಮದಲ್ಲಿ ಶೌಕತಾಲಿಯವರು ಕೊಂಗ್ರೆಸ್ಸಿನೊಡನೆ ಸೇರಿಕೊಂಡರಾದರೂ, ಕಾಲಕ್ರಮೇಣ ಅಂದರೆ ೧೯೨೦—೨೧ರೊಳಗೆ ಅವರು ಮಾನಸ ಪರಿವರ್ತನೆಯನ್ನು ಹೊಂದಿದುದರಿಂದ ಅವರ ಪ್ರಚಾರದ ಪ್ರತಿಘಟನೆಯಿಂದಾಗಿ ಹಿಂದೂಗಳಿಗೆ ಯಾವ ಮಾರ್ಗವೂ ಕಾಣದಂತಾಯಿತು ಇಷ್ಟಾಗುವಾಗ ಅಲ್ಪಸಂಖ್ಯಾತರ ಹಳವಳವು ತಲೆದೋರಿತು ಹಿಂದೂದೇಶದ ನವೀನ ರಾಜ್ಯಾಂಗರಚನೆಯಲ್ಲಿ ಹಿಂದೂಗಳಿಗೂ ಮುಸಲ್ಮಾನರಿಗೂ ಎಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರವನ್ನು ತಮಗೂ ಕೊಡಬೇಕೆಂಬ ಅವರ ಕೇಳಿಕೆಯೂ ಆಯಿತು ಕೊಂಗ್ರೆಸ್ಸು ಹಿಂದೂಗಳನ್ನು ಪ್ರತಿನಿಧಿಸುವ ಸಂಸ್ಥೆಯೆಂದು ಭಾವಿಸಲಾಯಿತು ಡಾ| ಅಂಬೇಡ್ಕರ್, ಶೌಕತಾಲಿ, ಮಹಮ್ಮದ್ ಷಫೀ ಮೊದಲಾದವರು ತಮ್ಮದೇ ಆದ ಪಂಗಡಗಳನ್ನು ಸೃಷ್ಟಿಸಿಕೊಂಡರು. ಅಂತೂ ಇಂತೂ—ಹಿಂದೂಗಳು, ಮುಸಲ್ಮಾನರು—ಪತಿತವರ್ಗದವರು ಎಂಬ ಮೂರು ಪಂಗಡಗಳು ಹಿಂದೂದೇಶದಲ್ಲಿ ಪರಸ್ಪರ ಕಲಹವನ್ನಬ್ಬಿಸಿದುವು

ಪ್ರಥಮ ಮತ್ತು ದ್ವಿತೀಯ ರೌಂಡ್‌ಟೇಬಲ್ ಕೊನ್ಫರೆನ್ಸುಗಳ ಇಂಗ್ಲೆಂಡಿನಲ್ಲಿ ಜರಗಿದುವಷ್ಟೆ! ಅವುಗಳಲ್ಲೂ ಹಿಂದೂ ಮುಸಲ್ಮಾನ್ ಪ್ರಶ್ನೆಯೇ ಪ್ರಾಮುಖ್ಯಸ್ಥಾನವನ್ನು ಹೊಂದುವಂತೆ ಮಾಡಲಾಯಿತು "ನಮ್ಮ ನಮ್ಮ ಕಲಹವನ್ನು ನಾವು ನಾವು ಇತ್ಯರ್ಥಿಸಿಕೊಳ್ಳುವೆವು ಸ್ವಾತಂತ್ರ್ಯವನ್ನು ಮಾತ್ರ ಮೊದಲು ನೀವು ಕೊಡಿ" ಎಂದು ಮಹಾತ್ಮಾ ಗಾಂಧಿಯವರು ಲಂಡನಿನಲ್ಲಿ ಹೇಳಿದರೂ, "ಹಿಂದೂ ಮುಸಲ್ಮಾನ್ ಮೈನೊರಿಟಿ ಪ್ರಶ್ನೆಗಳನ್ನು ಮೊದಲು ಇತ್ಯರ್ಥಿಸಿಕೊಂಡು ಬನ್ನಿ, ಆ ಮೇಲೆ ಎಲ್ಲವನ್ನೂ ಆಲೋಚಿಸೋಣ" ಎಂದು ಸರಕಾರದ ಉತ್ತರವಾಯಿತು

ಶ್ರೀ ಕೆ ನಾರಾಯಣ ಕಿಣಿ, ಎಮ್ ಎ ಪಿಎಚ್ ಡಿ.

ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಮೊನ್ನೆ ಶಾನೆ ಪಿ ಎಚ್ ಡಿ ಪದವಿಯನ್ನು ಹೊಂದಿ, ಯುರೋಪಿನಿಂದ ಸಪ್ಟಂಬರ ತಿಂಗಳಲ್ಲಿ ಸ್ವದೇಶಕ್ಕೆ ಬರಲಿರುವರು.

(ಪಡಿಯಚ್ಚಿಗಾಗಿ 'ಜಯ ಕರ್ನಾಟಕ'ಕ್ಕೆ ಕೃತಜ್ಞತೆ)

ಇಷ್ಟರ ವರೆಗೂ ಹಿಂದೂ ಮುಸ್ಲಿಮ ಭೇದವು ಕೊನೆಗೊಂಡಿರುವುದಿಲ್ಲವಷ್ಟೆ! ಇದನ್ನು ಕಂಡು ನವೀನ ರಾಜ್ಯವನ್ನು ಹಿಂದೀಯರಿಗೆ ಆದಷ್ಟು ತ್ವರೆಯಿಂದ ಕೊಡಬೇಕೆಂದು ನಿರ್ಧರಿಸಿದ ಬ್ರಿಟಿಷ ಸರಕಾರವು "ಹಿಂದೂ ಮುಸಲ್ಮಾನ ಪತಿತವರ್ಗದವರು ತಂತಮ್ಮೊಳಗಿನ ಭೇದವನ್ನು ಕಿತ್ತೊಗೆದು ಒಂದು ಒಪ್ಪಂದಕ್ಕೆ ಬರಲು ಇಷ್ಟರ ವರೆಗೂ ತಪ್ಪಿದರು ಆದುದರಿಂದ ಈ ಸಮಸ್ಯೆಯನ್ನು ಬ್ರಿಟಿಷ ಸರಕಾರವೇ ತೀರ್ಮಾನಿಸುವುದು ಈ ತೀರ್ಮಾನದಿಂದ ಎಲ್ಲಾ ಮತಗಳಿಗೂ ನಾವು ಸಮರ್ಪಕವಾದ ಸಂತುಷ್ಟಿಯನ್ನುಂಟುಮಾಡಲಾರೆವೆಂದು ನಮಗೆ ತಿಳಿದಿರುವುದಾದರೂ, ನಮ್ಮ ಇತ್ಯರ್ಥವನ್ನು ಅಲ್ಲಗಳೆಯಲು ಯಾರೂ ಮನಸ್ಸುಮಾಡಲಿಕ್ಕಿಲ್ಲವೆಂದು ಭಾವಿಸಿ ನಮ್ಮ ಕಾರ್ಯಭಾರವನ್ನಿಳಿಸುವೆವೆಂದು ಹೇಳಿ ಇದೇ ತಾ ೧೬ನೇ ದಿನ ಈ ಪ್ರಕಟಣೆಯನ್ನು ಮಾಡಿತು ಅಧಿಕಾಂಶ ಜನರು ಸರಕಾರದ ಈ ತೀರ್ಮಾನಗಳಿಗೆ ಸಮ್ಮತಿಸಲಾರದಾದರೆ ಈ ತೀರ್ಮಾನದ ನಿರ್ಣಯಗಳು ಮತ್ತು ಸುಧಾರಣೆಗೆ ಬರುವುವು ಎಂದೂ ಸರಕಾರವು ಪ್ರಕಟಿಸಿರುತ್ತದೆ.

ಸರಕಾರದ ಪ್ರಕಟಣೆ.

೧ "ದ್ವಿತೀಯ ಪರಿಷತ್ತಿನಲ್ಲಿ ಪ್ರಧಾನ ಮಂತ್ರಿವರ್ಯರು, ಹಿಂದೂದೇಶದ ಕೋಮುವಾರು ಪ್ರಶ್ನೆಯು ಅಲ್ಲಿಯ ಜನಾಂಗದವರಿಂದ ಇತ್ಯರ್ಥಿಸಲ್ಪಡಲಸಾಧ್ಯವೆಂದು ಕಂಡುಬಂದರೆ ಈ ವಿಷಯಕವಾಗಿ ಸಾಮ್ರಾಜ್ಯ ಸರಕಾರವು, ಭಾವೀ ರಾಜ್ಯಾಂಗರಚನೆಯನ್ನು ತ್ವರೆಗೊಳಿಸುವುದಕ್ಕೆ ತನ್ನ ತೀರ್ಮಾನವನ್ನು ಮಾಡುವುದು" ಎಂದು ಪ್ರಕಟಿಸಿದ್ದರು

೨ ಅಲ್ಪ ಸಂಖ್ಯಾತರ ಸಮಸ್ಯೆಯನ್ನು ತೀರ್ಮಾನಿಸದೆ ಗತ್ಯಂತರವಿಲ್ಲವೆಂದು ಸರಕಾರವು ನಿರ್ಧರಿಸಿದೆ

೩ ಹಿಂದೀಯ ರಾಜ್ಯಾಂಗರಚನೆಯ ನವೀನ ಸೂತ್ರಗಳನ್ನು ಪಾರ್ಲಿಮೆಂಟಿನೆದುರು ಇಡಲಾಗುವುದು ಈ ಸೂತ್ರಗಳಲ್ಲಿ ಬ್ರಿಟಿಷ ಹಿಂದೀಯ ಮತಗಳ ಪ್ರತಿನಿಧಿಗಳನ್ನು ಪ್ರತಿನಿಧಿಸಲಾಗುವುದು.

೪. ಮತವಾದವನ್ನು ತೀರ್ಮಾನಿಸಬೇಕೆಂದು ಬ್ರಿಟಿಷ ಸರಕಾರದ ಮನದಾಸೆ ಆದರೂ ಸರ್ವಾನುಮತಿರಹಿತವಾದ ತಿದ್ದುಪಾಟುಗಳನ್ನು ಮಾಡಬೇಕೆಂದು ಪ್ರತಿನಿಧಿಸಿದರೆ ಅದಕ್ಕೆ ಸರಕಾರವು ಜವಾಬ್ದಾರಿಯಾಗಿಲ್ಲ ಆದರೂ ಹೊಸ ಇಂಡಿಯಾ ಗವರ್ನಮೆಂಟು ಎಕ್ಟ್ ಎಂಬುದು ಪಾರ್ಲಿಮೆಂಟಿನಲ್ಲಿ ಬರುವ ಮೊದಲು ಆಯಾಯ ಮತಗಳು ತಮ್ಮ ಸುಧಾರಿತ ತೀರ್ಮಾನವನ್ನು ಪರಸ್ಪರವಾಗಿ ಮಾಡಿಕೊಂಡರೆ ಸಂತೋಷವಿದೆ ಅದನ್ನು ಪಾರ್ಲಿಮೆಂಟಿಗೆ ಶಿಫಾರಸು ಮಾಡಲಾದೀತು

ನ್ಯಾಯವಿಧಾಯಕ ಸಭೆ ಮುಂತಾದುವುಗಳಿಗೆ, ಮಹಮ್ಮದೀಯ, ಯುರೋಪೀಯ, ಸಿಖ್ಖ ಪ್ರತಿನಿಧಿಗಳನ್ನು ಪ್ರತ್ಯೇಕ ಪ್ರಾತಿನಿಧ್ಯದ ಮೂಲಕವಾಗಿಯೇ ಚುನಾಯಿಸಲಾಗುವುದು

ನ್ಯಾಯವಿಧಾಯಕ ಸಭೆಗಳಲ್ಲಿ ಸ್ತ್ರೀ ಪ್ರತಿನಿಧಿಗಳಿಗೆ ಸಣ್ಣ ಸ್ಥಾನವನ್ನಾದರೂ ಕೊಡಬೇಕೆಂದು ಸರಕಾರದ ಆಶೆಯಾಗಿದೆ ಇತ್ಯಾದಿ ಇತ್ಯಾದಿ

ಚುನಾವಣೆಯಲ್ಲಿ ಸುಧಾರಣೆಗಳನ್ನು ೧೦ ವರ್ಷಗಳ ನಂತರ ತರಲು ವ್ಯವಸ್ಥೆ ಮಾಡಲಾಗುವುದು ಇದರಲ್ಲಿ ಮೈನೊರಿಟಿಗಳ ಅಭಿಮತವನ್ನು ಪಡೆಯಲಾಗುವುದು

ಮದ್ರಾಸಿನ ಪ್ರಾಂತಿಕ ನ್ಯಾಯವಿಧಾಯಕ ಸಭೆಯಲ್ಲಿ ಪ್ರತ್ಯೇಕಿಸಲ್ಪಡುವ ಸೀಟುಗಳು—

ಜನರಲ್ ಸೀಟುಗಳು ೧೩೪ (೬ ಮಂದಿ ಸ್ತ್ರೀಯರು ಕೂಡಿ) ಪತಿತವರ್ಗದವರು ೧೮ ಹಿಂದಣ ಜನಾಂಗ ೧ ಮಹಮ್ಮದೀಯರು ೨೯ (ಒಬ್ಬಳು ಸ್ತ್ರೀಯು ಕೂಡಿ) ಆಂಗ್ಲ ಇಂಡಿಯನರು ೨ ಯುರೋಪಿಯನರು ೩ ವ್ಯಾಪಾರ, ಕೈಗಾರಿಕೆ, ಗಣಿಕೆಲಸ, ಬೇಸಾಯದವರು ೬. ಜಮೀನುದಾರರು ೬. ಯುನಿವರ್ಸಿಟಿಯವರು ೬ ಲೇಬರ್ ೬ ಒಟ್ಟು ೨೧೫

ಪ್ರಧಾನ ಮಂತ್ರಿಯವರ ಈ ಮತದಾನವು ಹಿಂದೂದೇಶದಲ್ಲಿ ಒಂದು ಬಗೆಯ ತಾತ್ಕಾಲಿಕ ಆಂದೋಲನಕ್ಕೆ ಕಾರಣವಾಗಿದೆ ಕೆಲವು ಪತ್ರಿಕೆಗಳು "ಬ್ರಿಟಿಷ ಸರಕಾರದ ಈ ಪ್ರಕಟಣೆಯಿಂದಾಗಿ ಹಿಂದೀಯರಿಗೆ ಸದ್ಯಕ್ಕೆ ಸಿಗಲಿರುವುದು ಪ್ರಾಂತಿಕ ಸ್ವಾತಂತ್ರ್ಯವೆಂದೂ, ಇದರಲ್ಲಿ ಹಿಂದೀಯರಿಗೆ ಕೇಂದ್ರದಲ್ಲಿ ಜವಾಬ್ದಾರಿಯನ್ನು ಕೊಡಲಿರುವ ಸೂಚನೆಯೇ ಇಲ್ಲವೆಂದೂ ಹೇಳಿವೆ ಶ್ರೀ ಎಮ್ ಸಿ ರಾಜರು ಇದರ ಕುರಿತು "ಪ್ರಧಾನ ಮಂತ್ರಿಯವರ ಪ್ರಕಟಣೆಯು ನನಗೆ ಸಂತೋಷಪಡಿಸುವಂತಿಲ್ಲ, ಇದು ಮುಸ್ಲಿಮರನ್ನು ಸಮಾಧಾನಪಡಿಸಲು ಟೋರಿಗಳ ಛತ್ರಾಯದಿಂದ ಹೊರಟ ಪ್ರತಿಜ್ಞೆ" ಎಂದರು.

* * *

[illegible]

ಸ್ಥಾಪಿತ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಜಂಗಾಡ (ದ. ಕ.)
ರೈಲ್ವೆ ಸ್ಟೇಷನ್ ಕಾಂಜಂಗಾಡ (S.I.R.)

ಆಯುರ್ವೇದ ವೈದ್ಯ [illegible] ಮುಖ್ಯವಾಗಿ [illegible] 'ವೈದ್ಯ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ' ಅವರ [illegible] ಎಲ್ಲಾ ತರದ [illegible] ಕ್ಷಯ, ವಾತ, [illegible] ನಮ್ಮಲ್ಲಿ [illegible] ದೂರ ದೇಶದ ರೋಗಿಗಳು [illegible] ಚಿಕಿತ್ಸೆ [illegible] ರೋಗಗಳ [illegible] ಸಂಗತಿಗಳಲ್ಲಿ [illegible] ಮದ್ದುಗಳನ್ನು [illegible] ವ್ಯವಹಾರ ನಡಿಸಲಾಗುವುದು.

[illegible] ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಜಂಗಾಡ (ದ. ಕ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಲಸವನ್ನೂ, ಅಂದವಾದ ರೀತಿಯ ವಿವಾಹ ಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ಯಾರಿಸಿಕೊಡುವೆವು.

ಹೆಚ್ಚಿನ ವರ್ತಮಾನಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಖದ್ದರ್ ರೇಶ್ಮೆ ಮಡಿಗಳಿಗೆ ಗಮನ ಕೊಡಿರಿ.

S. U. N. & CO.

Choukhumba, Benares City

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1. ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ, ಕದಪಾಮ್ಮ, ಶೀಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಊಲ್ಲನ್ ಚೌಕ, ಧಾವಳಿ, ಸಾಮರ್ಣಿ, ತರತರದ ರುದ್ರಾಕ್ಷಿಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಖದ್ದರ್ ಮಡಿ—6 ಮೊಳ, 2 ಮೊಳ ಅಗಲ ರೂ. 2ರಿಂದ ರೂ. 8, ಮೊಳ 8ರದ್ದು 2-12-0ರಿಂದ ರೂ. 4 10 ಮೊಳ, 2¼ ಅಗಲ ರೂ. 4ರಿಂದ ರೂ. 5. ಮೊಳ 12 + 2¼ ರೂ. 5ರಿಂದ 6-8-0. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ, ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ, ಬನಾರಸ್ (ಕಾಶೀ)

ವಿಕ್ಕಳಿದ ಎಲ್ಲವನ್ನು ಬಹಿಷ್ಕರಿಸಿ ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ.

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರಕಿವೆ. ಕ್ರಯ ಸೂಚಿಗೂ ಏಜನ್ಸಿಗೂ ಬರಿಯಿರಿ.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೊ. ಆ. ದಾದರ್ ಮುಂಬಾಯಿ 14.

Dr. H. L. Batliwalla, Sons & Co., Ltd.
Kadell Road, P. O. Dadar, Bombay, 14.

ತಂತಿ ವಿಳಾಸ.—"CAVASPUR" Bombay.

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ—ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಕೇಸರಿಯವರ ಮೂರು ರತ್ನಗಳು.



ಲೋಧ್ರ:—ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯೌಷಧಿಯು. ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ.

ಅರ್ಕ:—ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ.

ಅಮೃತ:—ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು.

ಕೇಸರಿ ಕುಟೀರಂ.
ಎಗ್ಮೋರ್ ಮದರಾಸು,

ಎಲ್ಲಾ ಔಷಧಿ ಮಾರಾಟಗಾರರಲ್ಲಿ ದೊರೆಯುತ್ತದೆ.

The Zandu Pharmaceutical Works, Ltd., Bombay, 14.

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! **ಅಮೋಘ ಟಾನಿಕ್ಕು!!**

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ನಾಡಿ ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

6 ಪಾ.ಜಾಡಿ ರೂ. 10/- ಕ್ರಯ 1 ಪೌನು ಸೀಸೆ ರೂ. 2/8, ½ ಪಾ. ರೂ. 1/5 ¼ ಪಾ. ಆ. 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:—ದಾಮೋದರ್ ಅಂಡ್ ಕಂಪೆನಿ, 78 [illegible] ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು:—ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು:—ಎಸ್. ಎಲ್. ಧಾಕಪ್ಪ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು;—ಬಿ. ಸಿ. ನಟರಾಜ್ ಅಂಡ್ ಕೊ., ಸಯ್ಯಾಜಿರಾವ್ ರೋಡ್.
ಬೆಂಗಳೂರು ಏಜಂಟರು:—ಬಿ. ಫೂಲಚಂದ್ ಕಂಪೆನಿ, ಚಿಕ್ಕಪೇಟೆ

☞ ಕೆಟಲಾಗು ಎಲ್ಲಾ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ರಾಜಾರಾಮ ಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ.

ಲೇಖಕರು:—ಗಂಗಾಪ್ರಸಾದ ಉಪಾಧ್ಯಾಯ, ಎಮ್. ಎ. ಅಲ್ಲಾಹಾಬಾದ್.
ಅನುವಾದಕರು:—ಶ್ರೀ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ
ಮಂಗಳೂರು.

— ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು. —

For whatever Hindoo purchases an idol in the market, or constructs one with his own hands, or has one made under his own superintendence, it is his invariable practice to perform certain ceremonies called Pran-Pratishtha, or the endowment of animation by which he believes that its nature is changed from that of the mere materials of which it is formed, and that it requires not only life but supernatural powers. Shortly afterwards, if the idol be of the masculine gender, he marries it to a feminine one, with no less and pomp and magnificence. Then he celebrates the nuptials of his own children. The mysterious process is now complete and the god and goddess are esteemed the arbiters of his destiny and continually receive his most ardent adroation. (P. 72).

ಒಬ್ಬ ಹಿಂದೂವು ಪೇಟೆಯಿಂದ ಮೂರ್ತಿಯನ್ನು ಕೊಂಡುಕೊಂಡಾಗ, ಯಾ ತನ್ನ ಕೈಯಿಂದಲೇ ಮಾಡಿದಾಗ ಅಥವಾ ತನ್ನ ನಿರೀಕ್ಷಣೆಯಲ್ಲಿ ಇನ್ನೊಬ್ಬನಿಂದ ಮಾಡಿಸುವಾಗ ಯಾವಾಗಲೂ ಅದಕ್ಕೆ ಪ್ರಾಣಪ್ರತಿಷ್ಠೆಯನ್ನು ಮಾಡುತ್ತಾನೆ. ಇದರ ತಾತ್ಪರ್ಯವೇನೆಂದರೆ ಮೂರ್ತಿಯಲ್ಲಿ ಪ್ರಾಣಪ್ರತಿಷ್ಠೆಯನ್ನು ಮಾಡಿದ ಮೇಲೆ ಮೂರ್ತಿಯ ಪ್ರಕೃತಿಯು ಬದಲಾಗುತ್ತದೆ. ಮತ್ತು ಅದಕ್ಕೆ ಬರೇ ಪ್ರಾಣ ಮಾತ್ರ ಬರುವುದಲ್ಲದೆ ಅದರಲ್ಲಿ ದೇವತ್ವವೂ ಕೂಡ ಬಂದುಬಿಡುತ್ತದೆಂಬುದನ್ನು ಮೂರ್ತಿಪೂಜಕನು ನಂಬುತ್ತಾನೆ. ಆ ಮೂರ್ತಿಯು ಪುಲ್ಲಿಂಗ (ಪುರುಷ ಮೂರ್ತಿ)ವಾಗಿದ್ದರೆ ಸ್ತ್ರೀಲಿಂಗ (ಸ್ತ್ರೀ) ಮೂರ್ತಿಯೊಡನೆ ಅದರ ವಿವಾಹವನ್ನು ಮಾಡಿಬಿಡುತ್ತಾನೆ. ಅದರಲ್ಲಿದ್ದ ರಹಸ್ಯಮಯವಾದ ಕ್ರಿಯೆಯೂ ಮೂರ್ತಿಯಾಗುತ್ತದೆ. ಅಂದಿನಿಂದ ಅತನು ಆ ಮೂರ್ತಿಯನ್ನು ತನ್ನ ಭಾಗ್ಯದ ಅಧ್ಯಕ್ಷವೆಂಬುದಾಗಿ ಭಾವಿಸಿ ಅದನ್ನು ಬಹಳ ಭಕ್ತಿಯಿಂದ ಆರಾಧಿಸುತ್ತಾನೆ.

The acts and speeches of the idols, and their assumption of various shapes and colours, are gravely related by the Brahmins, and with all the marks of vaneration are firmly blieved by their deluded followers. (P. 73).

ಬ್ರಾಹ್ಮಣರು ಮೂರ್ತಿಗಳ ಕೆಲಸವನ್ನೂ, ಆಕಾರ ಮತ್ತು ಬಣ್ಣಗಳನ್ನೂ ಪರಿವರ್ತನೆಗೊಳಿಸಲು ಗಂಭೀರವಾದ ಭಾಷಣಗಳನ್ನೂ, ವರ್ಣನೆಗಳನ್ನೂ ಮಾಡುತ್ತಾರೆ. ಇವರುಗಳ ಭಾಷಣಗಳ ಮೇಲೆ ಅಂಧವಿಶ್ವಾಸಕರಾದ ಇವರ ಭಕ್ತರು ಬಹಳ ವಿಶ್ವಾಸವನ್ನಿಡುತ್ತಾರೆ.

Other practices they have with regard to those idols which decency forbids me to explain. (P. 73).

ಈ ಮೂರ್ತಿಗಳ ಕುರಿತು ಇರುವಂಥಾ ಕೆಲವು ಪದ್ಧತಿಗಳನ್ನು ಇಲ್ಲಿ ವ್ಯಾಖ್ಯೆ (ವರ್ಣನೆ) ಮಾಡುವುದು ಶಿಷ್ಟತೆಗೂ ಕೂಡ ವಿರುದ್ಧವಾಗಿರುವುದು. ಮೂರ್ತಿಪೂಜೆಯಲ್ಲಿ ಒಂದು ಗೂಢವಾದ ಪ್ರಯೋಜನವಿದೆಯೆಂದು ಅದರ ಪೂಜಕರು ಹೇಳುವಂಥಾದ್ದು ಕೇವಲ ಸುಳ್ಳು ಮಾತಾಗಿರುವುದು ಎಂಬುದನ್ನು ಸ್ಪಷ್ಟಪಡಿಸಲಿಕ್ಕಾಗಿಯೇ ರಾಮ ಮೋಹನರಾಯರು ಈ ಎಲ್ಲಾ ಅಭಿಪ್ರಾಯಗಳನ್ನು ಬರೆದರು. "ಮನಸ್ಸಿನ ಏಕಾಗ್ರತೆಗೆ ಮೂರ್ತಿಪೂಜೆಯು ಆವಶ್ಯಕವೆಂದು ಕೆಲವರೂ, ಸಾಕಾರದಲ್ಲಿಯೇ ನಿರಾಕಾರನ ಧ್ಯಾನವುಂಟಾಗುತ್ತದೆಂದು ಇನ್ನು ಕೆಲವರೂ ಪರಮಾತ್ಮನು ಸರ್ವವ್ಯಾಪಕನಾಗಿದ್ದಾನೆ, ಆದುದರಿಂದ ಮೂರ್ತಿಯ ಮುಖಾಂತರ ಆತನನ್ನು ನೋಡುತ್ತೇವೆಂದು ಮತ್ತೆ ಕೆಲವರೂ ಹೇಳುತ್ತಿದ್ದಾರೆ. ಆದರೆ ಈ ಎಲ್ಲಾ ಅಭಿಪ್ರಾಯಗಳು ಇತರರನ್ನು ಮೋಸಗೊಳಿಸಲಿಕ್ಕಾಗಿ ಹೊರತು ಮೂರ್ತಿಪೂಜೆಯ ಯಥಾರ್ಥ ರೂಪವು ಅವನ್ನು ಪೂಜಿಸುವವರ ಚೇಷ್ಟೆ (ವ್ಯವಹಾರ)ಯಿಂದಲೇ ಗೊತ್ತಾಗುತ್ತದೆಂದು ರಾಮ ಮೋಹನ ರೋಯಿಗಳು ಹೇಳುತ್ತಾರೆ. ಮೂರ್ತಿಪೂಜೆಯ ವೈಜ್ಞಾನಿಕ ಯಾ ದಾರ್ಶನಿಕ ಸ್ವರೂಪವು ಭಾಷಣಗಳ ಮತ್ತು ಶಾಸ್ತ್ರಾರ್ಥಗಳ ಮೂಲಕ ಪದೇ ಪದೇ ನಿರೂಪಿಸಲ್ಪಡುತ್ತದೆ. ಇದು ವರ್ತಮಾನ ಕಾಲದ ಮೂರ್ತಿಪೂಜಕರ ವ್ಯವಹಾರಗಳಿಂದ ಸರ್ವಥಾ ಪ್ರತ್ಯಕ್ಷವಾಗಿರುತ್ತದೆ. ವಿಗ್ರಹಾರಾಧನೆಯ ಕುರಿತು ರಾಮ ಮೋಹನರಾಯರು ಎಷ್ಟು ವಿರೋಧಿಗಳಾಗಿದ್ದರೆಂಬುದು ಅವರ ಈ ಕೆಳಗಿನ ಅಭಿಪ್ರಾಯದಿಂದ ವಿದಿತವಾಗುತ್ತದೆ.

Idolatory, as now practised by our countrymen, and which the learned Brahman so zealously supports as conducive to morality, is not only rejected by the Shastras universally, but mut also he looked upon with great horror by common sence as leading directly to immorality and destructive of social comforts. For every Hindoo who devotes himself to this absurd worship, constructs for that purpose a couple of male and female idols, sometimes in form as representatives of his favourite deities; he is taught and enjoined from his infancy to contemplate and repeat the history of these, as well as of their follow deities; though the actions described to them be only a continued series of debauchary, sensuality, falsehood, ingratitude, breach of trust, and treachery to friends. (Monotheistical system of the Vedas-centenary works. (P. 123).

"ನಮ್ಮ ದೇಶವಾಸಿಗಳಲ್ಲಿ ಯಾವ ಮೂರ್ತಿಪೂಜೆಯು ವಾಡಿಕೆಯಲ್ಲಿದೆಯೋ, ಯಾವ ವಾಡಿಕೆಯನ್ನು ಇಲ್ಲಿಯ ಕೆಲವು ಬ್ರಾಹ್ಮಣ ವಿದ್ವಾಂಸರುಗಳು ಸದಾಚಾರದ ಸಾಧನೆಗಳೆಂಬುದಾಗಿ ಉತ್ಸಾಹ ತೋರಿಸುತ್ತಿದ್ದಾರೋ, ಅದು ಎಲ್ಲಾ ಶಾಸ್ತ್ರಗಳಲ್ಲಿಯೂ ನಿಷಿದ್ಧವಾಗಿದೆ ಹೊರತು ಬಹಳ ಭಯಂಕರವಿರುತ್ತದೆಂಬುದು ಸಾಧಾರಣ ತರದ ಬುದ್ಧಿಗೂ ತೋರಿಬರುತ್ತಿದೆ. ಕಾರಣವೇನೆಂದರೆ, ಇದರಿಂದ ದುರಾಚಾರ ಹೆಚ್ಚಿ ಸಾಮಾಜಿಕ ಸುಖದ ಹಾನಿಯುಂಟಾಗುತ್ತದೆ. ಯಾವ ಹಿಂದೂವು ಮೂರ್ತಿಯನ್ನು ಪೂಜಿಸುತ್ತಾನೋ ಅವನು ತನ್ನ ಆರಾಧನೆಗೆ ಬೇಕಾದ ಇಷ್ಟದೇವತೆಯನ್ನು ಪುಲ್ಲಿಂಗ, ಸ್ತ್ರೀಲಿಂಗ (ಪುರುಷ ಮತ್ತು ಸ್ತ್ರೀ) ಈ ರೀತಿ ಇಬ್ಬರು ದೇವತೆಗಳ ಪ್ರತಿನಿಧಿಗಳ ಸ್ವರೂಪಗಳನ್ನು ಸಿದ್ಧಗೊಳಿಸುತ್ತಾನೆ. ಕೆಲವು ಕಡೆಗಳಲ್ಲಿ ಈ ವಿಗ್ರಹಗಳು ಅತ್ಯಂತ ಅಶ್ಲೀಲ ರೀತಿಯಲ್ಲಿರುತ್ತವೆ. ಇವುಗಳ ಇತಿಹಾಸಗಳಲ್ಲಿ ವ್ಯಭಿಚಾರಾದಿ ಇಂದ್ರಿಯ ವಿಲಾಸ, ಅಸತ್ಯ ವರ್ತನೆ, ಕೃತಘ್ನತೆ, ವಿಶ್ವಾಸಘಾತಕತನ, ಮಿತ್ರದ್ರೋಹ ಇತ್ಯಾದಿ ವರ್ಣನೆಗಳೇ ತುಂಬಿರುತ್ತವೆ. ಈ ತರದ ಶಿಕ್ಷಣಗಳೇ ವಿಗ್ರಹಾರಾಧಕರಿಗೆ ಬಾಲ್ಯದಿಂದಲೂ ದೊರೆಯುತ್ತದೆ." ಮಹಾದೇವ ಪಾರ್ವತಿಯರ ರೂಪಗಳಂತೂ ಭಯಂಕರವಾಗಿವೆ. ಮೂರ್ತಿಪೂಜೆ ಮತ್ತು ಪುರಾಣ ಕಥಾಶ್ರವಣದಿಂದ ಸದಾಚಾರದ ಶಿಕ್ಷಣವು ದೊರೆಯುತ್ತದೆಂದು ಆಶಿಸುವುದು "ಮಳಲಲ್ಲಿ ಮನೆ ಕಟ್ಟಿದಂತೆ"ಯೇ ಸರಿ. ಮೂರ್ತಿಪೂಜೆಯ ಕುರಿತು ರಾಜಾರಾಮ ಮೋಹನರಾಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ಒಬ್ಬ ಬ್ರಾಹ್ಮಣ ಮಹೋದಯರು ಒಮ್ಮೆ ಒಂದು ಲೇಖನದಲ್ಲಿ

"As a mighty emperor travels through his kingdom in the garb of a peasant, to effect the welfare of his subjects, so the king of kings pervades the universe, assuming a divine, or even a human form, for the same benevolent purpose." [ಸಶೇಷ]

ಸೊಲ್ಲಿನ ಗುಲ್ಲು.

ತಿಂಗನು ಬಾಗುತ | ಕಂಗನು ತಾಗುತ | ದಿಸಿಬುಸು ಗುಟ್ಟುತ | ಸ್ವಾಮಿಯ ನೋಡುತ | ರಾಗವ ಹಾಡುತ | ಖಂಡಿತ ಮಾಡುತ | ಬಂದರು ಶರ್ಮರು | ಬಂದರು ಶರ್ಮರು | ಉಡುಪಿಗೆಲ್ಲೊ | ಬಂದರು ಬಂದರು ಉಡುಪಿಗೆಲ್ಲೊ |

○ ○ ○ ○

ಇದು ಪರಕವಿಯಾದ ನನ್ನದೊಂದು ಪದಾ ಅಷ್ಟೆ. "ಇದರ ದಾಟಿ: ತಿಂಕಣ ಸೀಮೆಯ | ಕೊಂಕಣ ಗಾಳಿಯು || ಕಿಂಕಿಣಿಯೆನ್ನುತ ಬಂತೈ ಬಂತೈ ಬಂತೈ ಎಂಬ ಹಾಗೆ!

○ ○ ○ ○

ನಾಲ್ಕೈದು ತಿಂಗಳುಗಳ ಹಿಂದೆ ನಮ್ಮ ಉಡುಪಿಗೆ ಬಂದು, "ಚಟ್ಟಿ ಪೋಡಾ"ವನ್ನೋ, ಭೋಜನಸಮಾರಂಭವನ್ನೋ, ಪಂಜರದ ಗಿಳಿಯನ್ನೋ ಕಂಡು, ಬೆದರಿ, ಗಲಾಟೆಯನ್ನೆಬ್ಬಿಸಿ, ೧೪೪ರ ಬಾಯಿಗೆ ಬುಳುಕ್ಕನೆ ಬಿದ್ದ ನಮ್ಮ ಅಂಕುರಾಜ ಸುಬ್ರಾಯ ಶರ್ಮರು ಮೊನ್ನೆ ಪುನಃ ಉಡುಪಿಗೆ ಬಂದಿದ್ದಾರೆ.

○ ○ ○ ○

ಶರ್ಮರನ್ನು ಕಂಡು ಅಷ್ಟದಿಕ್ಪಾಲಕರಲ್ಲೊಬ್ಬರಾದರೂ ಕೋಪಿಸಿಗೊಳ್ಳದಿರಲಾರರು. ಅಗ್ನೇಯನು ಈಗಲೇ ಟೊಂಕ ಕಟ್ಟುತ್ತಿರಬಹುದು. ಅಂಕುರಾಜರೇ, ಮಂಕುಬೂದಿಯ ಬಿಂಕತನದ ಆದೊಂದು ಕೋಕಂ ನಿಮ್ಮೆದುರು ನಿಲ್ಲಬಹುದು. ಜಾಗ್ರತೆ!

○ ○ ○ ○

'ಸತ್ಯಮೇವ ಜಯತೇ ನಾನೃತಂ' ಎಂದು ನೀವು ಹೇಳುತ್ತಿರಬಹುದು. ಆದರೆ, 'ಅಷ್ಟ ದಿಕ್ಪಾಲಕಂ ಮಹಾ ವೀರಂ, ಶೂರಂ, ಜಾರಂ | ಬಿಟ್ಟರೆ ಹೋಗಂ | ಹೋದರೆ ಬಾರಂ | ಎಂಬುದೂ ನಿಮಗೆ ತಿಳಿದಿರಲಿ.—ಇತಿ ತಮ್ಮ ಹಿತೈಷಿ

"ಪಕ್ಷಿಪಾಲ"

ಪುತ್ತೂರು ಪಂಚಾಯತ ಬೋರ್ಡು ಗಡಿಬಿಡಿ.

ಗಡಿಬಿಡಿಯಪ್ಪಾ ಗಡಿಬಿಡಿ! ಪಂಚಾಯತ ಬೋರ್ಡು ಇಲೆಕ್ಷನ್ ಗಡಿಬಿಡಿ!! ಈ ಮೊದಲು ಪುರುಸೊತ್ತು ಇದ್ದ ಕೆಲ ಮೆಂಬರು ಸೇರೋಣ; ಕೆಲವರು ಕೆಲವರ ಹೆಸರುಗಳನ್ನು ಸೂಚಿಸೋಣ; ಕೆಲವರು ಅನುಮೋದಿಸೋಣ; ಕೈಗಳನ್ನು ಎತ್ತೋಣ—ಮೆಂಬರರನ್ನು ಚುನಾಯಿಸೋಣ—ಈ ಕ್ರಮ ವಿದ್ದಿತು. ಈ ಬಾರಿಯಾದರೋ (ಕ್ರಮ ತಪ್ಪಿ ಕೆಲವು ಹೆಸರುಗಳು ಬಿದ್ದಿದ್ದರೂ) ಕ್ರಮಪ್ರಕಾರದ ವೋಟರರ ಪಟ್ಟಿ; ನೋಮಿನೇಶನ್ ಪೇಪರ್; ಮಾತ್ರವಲ್ಲ—ಇಲೆಕ್ಷನ್ ಆಫೀಸರರ ಪ್ರತ್ಯಕ್ಷ ಹಾಜರಿ. ಈ ಕಾರಣಗಳಿಂದಲೇ ಈ ಗಡಿಬಿಡಿ.

○ ○ ○ ○

ತಾ. ೧೩-೮-'೩೭ನೇ ಶುಕ್ರವಾರ—ಇಲೆಕ್ಷನ್ ದಿನ. ಪಾರ್ಟಿಗಳ ಭಯವನ್ನೊಳಗೊಂಡ ಉತ್ಸಾಹವು ಉಕ್ಕೇರುವ ದಿನ. "ಕೊಟ್ಟ ಭಾಷೆಗೆ ತಪ್ಪಲಾರೆನು" ಎಂದು ವೋಟರರು ಹೆಮ್ಮೆಯಿಂದ ಹೇಳುವ ದಿನ. ಅಂದಿನ ಗಲಭೆಯೇನು? ಪಕ್ಷಿಗಳ ಓಡಾಟ—ಉಮೇದ್ವಾರರ ಹಾರಾಟ—ವೋಟರರ ಪತ್ರನೋಟ—ಕಾಫಿ ಕ್ಲಬ್ಬುಗಳಲ್ಲಿ ಮತ್ತೆ ಕೂಟ—ಇವುಗಳನ್ನು ಬಣ್ಣಿಸಲು ಕಾದಂಬರಿಕಾರನೇ ಬರಬೇಕು. ಅಂತು ಇಲ್ಲದ ಗದ್ದಲ. ಪ್ರಾತಃಕಾಲ ೭ ಗಂಟೆಯಿಂದಾರಂಭಿಸಿ ಸಾಯಂಕಾಲ ೬ ಗಂಟೆಯ ತನಕ ವೋಟರರು ಪೋಲಿಂಗ್ ಸ್ಟೇಶನಿಗೆ ಬಂದರು—ಹೋದರು. ಅಂತು ವೋಟರರ ಭಾರ ತಗ್ಗಿತು. ಆದರೂ ರಿಸಲ್ಟ್ ಗೊತ್ತಾಗದೆ ಆಯಾ ಪಾರ್ಟಿಯವರ ಚಿಂತೆ ಕಡಿಮೆಯಾಗುವುದೆಂತು?

○ ○ ○ ○

ತಾ. ೧೪-೮-'೩೭ನೇ ಶನಿವಾರ ಸಾಯಂಕಾಲ ಫಲಿತಾಂಶವೂ ಪ್ರಕಟವಾಯಿತು. ೧೪ ಮಂದಿಯ ಪಾರ್ಟಿಯಲ್ಲಿ ೧೨ ಜನರೂ ೭ ಮಂದಿಯ ಪಾರ್ಟಿಯಲ್ಲಿ ಇಬ್ಬರೂ ಗೆದ್ದರು. ಪಾರ್ಟಿಯಲ್ಲಿದ್ದ ಪಾರ್ಟಿಯವರು—ಪಾಪ—ಸೋತರು. ಮೊದಲನೆ ಪಾರ್ಟಿಯ ಮೆಂಬರರಿಗೆ ವೋಟುಗಳ ಸಂಖ್ಯೆ ಜಾಸ್ತಿಯಿದ್ದುದರಿಂದಲೂ ಆ ಪಾರ್ಟಿಯಿಂದಲೇ ಹಲವು ಮೆಂಬರರು ಆರಿಸಲ್ಪಟ್ಟಿರುವುದರಿಂದಲೂ ಅದೇ 'ಇನ್‌ಫ್ಲುಯೆನ್ಶಲ್' ಪಾರ್ಟಿ ಎಂದಾಯಿತು. ಗೆದ್ದವರ ಹೆಸರುಗಳು:—೧. ಶ್ರೀ. ಬಿ. ಪ್ರಭಾಕರ ರಾವ್, ೨. ಮಿ. ಪುತ್ತೂರು ಹುಸೇನ್ ಸಾಹೇಬ್, ೩. ಶ್ರೀ. ಬಿ. ಅಚ್ಯುತ ಬಾಳಿಗ, ೪. ಶ್ರೀ. ಎಚ್. ಪುಂಡರೀಕ ಭಟ್ಟ, ೫. ಶ್ರೀ. ಕೆ. ರಾಮ ಕುಡ್ವ, ೬. ಡಾಕ್ಟರ್ ಕೆ. ಶ್ರೀನಿವಾಸ ಪೈ, ೭. ಶ್ರೀ. ಎಮ್. ಸದಾಶಿವ್ ರಾವ್, ೮. ಮಿ. ಎಸ್. ಬ್ರಗಾಂಜ ೯. ಶ್ರೀ. ಕೆ. ಗಣಪತಿ ಕುಡ್ವ, ೧೦. ಶ್ರೀ. ಬಿ. ಮಂಗೇಶ್ ರಾವ್ ೧೧. ಶ್ರೀ. ಪಿ. ನರಸಿಂಗ ರಾವ್, ೧೨. ಶ್ರೀ. ಬಿ. ದಾಸ ಪೈ, ೧೩. ಶ್ರೀ. ಎ. ಪಾಂಡುರಂಗ ರಾವ್, ೧೪. ಮಿ. ವಿಕ್ಟರ್ ಫೆರ್ನಾಂಡಿಸ್.

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ್ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್ ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೮೯ರಲ್ಲಿ ಸ್ಥಾಪಿಸಲ್ಪಟ್ಟಿದ್ದು.)

ಒಟ್ಟು ವಿಮಾ ಹಣವು ೨೦೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು. ವಾರ್ಷಿಕ ವಿಮಾ ಪತ್ರಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಿಗಿರುವುದು. ಒಟ್ಟು ಆಸ್ತಿ ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕಾಯ್ದೆಶೀರ ತೀರ್ವುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು.

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು. ಹೆಚ್ಚಿನ ಮಾಹಿತಿಗಾಗಿ ಮೆರವಾನಜಿ ಆ್ಯಂಡ್ ಸನ್ಸ, ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಶೀನಿಯರ ಏಜಂಟರು, ಇವರಿಗೆ ಬರೆಯಬೇಕು.

"If every Wife knew what every Widow knows every Husband would be Insured."

PLACE YOUR LIFE ASSURANCE WITH

THE SOUTH INDIAN

Securing for your clients –

1. **Low rates of Premium**
2. **Liberal Policy Conditions.**

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H. R. K. IYENGAR.
Chief Agent

The S. I G A. Co. Ltd,
Sanyasiguddy, MANGALORE

Managing Agents –

K. C PANDALAI & CO.
7 8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಸೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ **ಧಾರಾಳವಾದ ಕಮಿಶನೂ ಕೈತುಂಬಾ ಸಂಬಳವೂ ದೊರಕುವುದು.**

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ.)

ಚೀಫ್ ಏಜೆಂಟರು—

ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು:—

ಕೆ. ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ, ಸೀಸೆ 1ಕ್ಕೆ ರೂ. 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ,
ಹೆಡ್‌ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು.—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು [illegible]

ಮ[illegible]ವಾದಿ

ರಕ್ತ ಅಥವಾ ಶುಕ್ಲಸ್ರಾವ, ಅತ್ಯಂತ ಉರಿಯುದು ಮತ್ತು ತ್ರಾಸದಾಯಕವಿದ್ದರೂ ಫಕ್ತ ನಮ್ಮ ಸೇವನೆಮಾಡುವುದರಿಂದ ತಾಡುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ. ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ. ೨—೦—೦.

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯಿಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೈಲ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೨.

ವಿಳಾಸ.— . **ಶಕ್ತಿಸುಧಾ ಕಾರ್ಯಾಲಯ.**
23 ಕಾಂಬಾರವಾಡೆ 4ನೇ ಗಲ್ಲಿ
ಮುಂಬಯಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ.

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಜ್ಜಿಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಷಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! **ಮಾರಾಟಕ್ಕಿವೆ!!**

ಕಾಫಿ ಪ್ಲೇಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Edited, Printed & Published by V. S. Kamath at M. T. A. Sharada Press, Mangalore.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾಗರದ ಮಥಿಸಲು ಸುರಂಗದರಿಂ । ಹರುಷವಾಯಿತೆ' ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ' ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬.   ಮಂಗಳೂರು ತಾ ೨೬ನೇ ಶುಕ್ರವಾರ ಆಗೋಸ್ಟ್ ೧೯೩೨   (26 – 8 – '32.)   ಸಂಚಿಕೆ ೩೫

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.   **Branches:—Coondapoor, Mangalore, Shimoga & Madras**

ಹೆಡ್ ಆಫೀಸು – ಉಡುಪಿ   ಶಾಖೆ – ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs 3,50,000   Subscribed & Called up Rs. 2 25,000

ನಿಯಮಿತ ಮೂಲಧನ ರೂ 3,50 000.   ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ 2,25 000

STATEMENT OF ASSETS & LIABILITIES AS ON 31ST DAY OF JULY 1932

	CAPITAL AND LIABILITIES.			PROPERTY AND ASSETS	
1	Paid up Capital	Rs 2,25,000-0 0	1	Premises Building, Furniture etc	Rs 64 460 6 6
2	Reserve and other funds	„ 2,22,705 0-0	2	Government securities	„ 3 30,788 4 0
3	Deposits	21 10,093 9 7	3	Authorised Investments	20 33 156 15 6
4	Due to Bankers	1 610 10 4	4	Bills for collection	6 486 0 0
5	Sundries	73 971 1 0	5	Sundries	25 01 13 11
6	Bills for collection per contra	6 486 0 0	6	Cash in hand & with bankers	1 79958 15 0
	Total	26 39 866 4 11		Total	20,39 866 4 11

UDIPI 20 - 8 – '32

N. ANANDA RAO,
Secretary & Manager

(Regd

ಅಮೃತಾಂಜನ.

ಇದು ಕಟ್ಟು ಶಿರೋವೇದನೆ, -ಷ್ಣಕೂಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಝುಂಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು – ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲವುಪ್ಪಿಸುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ   ಡಜನಿಗ ರೂ 3–8–0   ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ.

ಮದರಾಸು   **ಮತ್ತು**   **ಬೊಂಬ್ಯಾ.**

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು – ಶಾ. ಕಂಪೆನಿ, ಮಂಗಳೂರು.

INSURE WITH

The Popular Insurance Co. Ltd.

Head Office -MANGALORE S India

First of its kind in the West Coast

CHAIRMAN

Dewan Bahadur N Subba Rao

STRIKING FEATURES

Policy Conditions Liberal!
Claims Settlement Prompt!

MANAGEMENT PURELY INDIAN

Ensure the Absolute Safety, Comfort and Happiness of your Dear Ones

WANTED INFLUENTIAL AGENTS.
LIBERAL TERMS TO COMPETENT MEN

For further particulars apply to the Head Office

ನಿಮ್ಮ ಮನೆಯಲ್ಲಿನ ಆರೋಗ್ಯಕ್ಕಾಗಿ ಈ ಅಸದೃಶವಾದ ಪಾನೀಯವನ್ನು ಸೇವಿಸಿರಿ.

ದೈಹಿಕ ಮತ್ತು ಮಾನಸಿಕ ಶಕ್ತಿಯುಂದಿರಲು ನಮ್ಮ ಸಾಮಾನ್ಯ ಮತ್ತು ನಿತ್ಯದ ಆಹಾರಗಳು ಬೇಕಾದಷ್ಟು ಪರಿಪೋಷಿಸುವುದಿಲ್ಲವೆಂದು ನಿಮಗೆ ಗೊತ್ತಿರುವುದೇ? ಅಲ್ಲದೆ ನಮ್ಮ ಸಾಮಾನ್ಯ ಊಟಉಪಚಾರಗಳಿಂದಲೂ, ನಮಗೆ ಸರಿಯಾದ ಪೋಷಣೆಯೂ ಸಿಗುವುದಿಲ್ಲ.

ಸ್ತ್ರೀಪುರುಷ ಬಾಲರಾದಿಗಳ ಸದಾರೋಗ್ಯವು ಹೆಚ್ಚಾಗಿ ಅವರ ಸರಿಯಾದ ಮತ್ತು ಪರಿಮಾಣಕ್ಕೆ ತಕ್ಕ ಪೋಷಣೆಯ ಮೇಲೆ ಹೊಂದಿಕೊಂಡಿರುತ್ತದೆ. ನಮ್ಮ ಹವಾಗುಣವು ನಮ್ಮ ಶಕ್ತಿ ಮತ್ತು ಚೈತನ್ಯದ ಮೇಲೆ ವಿಶೇಷ ಪರಿಣಾಮಕಾರಿಯಾಗಿರುವಾಗ, ನಾವು ದಿನಂಪ್ರತಿ ಹೊರಗೂ ಒಳಗೂ ಆರೋಗ್ಯದಿಂದಿರಬೇಕಾದರೆ, ದೇಹ, ಮೆದುಳು, ಮತ್ತು ಸ್ನಾಯುಗಳು ಸರಿಯಾದ ಪೋಷಣೆಯಲ್ಲಿರಬೇಕು.

ಆದುದರಿಂದ ನಿಮ್ಮ ಅನುನಿತ್ಯದ ಸಾಧಾರಣವಾದ ಆಹಾರದೊಡನೆ "ಓವಲ್ ಟಿನ್"ನನ್ನು ಸೇವಿಸಿರಿ. ಇದು ನಿಸರ್ಗಸಿದ್ಧವಾದ ಆಹಾರ ಅಲ್ಲದೆ ಸಂಪೂರ್ಣವಾದ ಆಹಾರವೂ ಆಗಿರುತ್ತದೆ. ಇದು ಸ್ವಚ್ಛವಾದ ಮತ್ತು ಅತೀ ಶುದ್ಧವಾದ ಆಹಾರವನ್ನು ಧಾರಾಳವಾಗಿ ಒದಗಿಸಿಕೊಡುತ್ತದೆ. ಅಸಮಾನವೂ ಅತ್ಯುತ್ತಮವೂ ಆಗಿರುವ ಈ ಪಾನೀಯವನ್ನು ಕ್ರಮಪ್ರಕಾರ ಸೇವಿಸುತ್ತಾ ಬಂದರೆ, ನೀವೂ ನಿಮ್ಮ ಕುಟುಂಬವೂ ದೃಢಕಾಯರಾಗಿ ಆರೋಗ್ಯದಿಂದಿರುವಿರಿ. ಸರಿಯಾದ ಶಾಂತಮಯ ನಿದ್ರೆಹತ್ತಲು ನಿದ್ರಿಸಹೋಗುವ ಮೊದಲು ಇದನ್ನು ಸೇವಿಸಿರಿ.

ಅತೀ ಉತ್ತಮವಿರುವ "ಓವಲ್ ಟಿನ್"ಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಅನುಕರಣೀಯವಾದ, ಬರೀ ಮಿಶ್ರಣವಾದ ಮತ್ತು ಸರಿಸಮ ತೂಕದಿಂದಿರದ ಆಹಾರಗಳನ್ನು ತಿರಸ್ಕರಿಸಿರಿ.

OVALTINE
TONIC FOOD BEVERAGE

ಅತೀ ಶುದ್ಧ ಮತ್ತು ಅತ್ಯುತ್ತಮ—ಕೈಸೋಂಕದಿರುವಂತಹದ್ದು
ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ
ಏಜಂಟರು – ಜೇಮ್ಸ್ ರೈಟ್, 8೯ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ
ಮತ್ತು ಮುಂಬಾಯಿ, ಮದ್ರಾಸ್, ರಂಗೂನುಗಳಲ್ಲಿ

"ಓವಲ್ ಟಿನ್ ರಸ್ಕ್"ಗಳನ್ನೂ ನಿಮ್ಮ "ಓವಲ್ ಟಿನ್"ನೊಡನೆ ತಿನ್ನಿರಿ. ಬಿಸ್ಕತ್ತುಗಳಿಗಿಂತಲೂ ಅದು ನಿಮಗೆ ಒಳ್ಳೇಯದು. ಬಹಳ ಪರಿಮಳಯುಕ್ತ ವಸ್ತು. ಸುಲಭದಲ್ಲಿ ಜೀರ್ಣವಾಗುತ್ತದೆ. ಸಂಪೂರ್ಣತೆಯುಳ್ಳದ್ದು. ಹಲ್ಲುಗಳಿಗೂ ಓವಲ್ ಟಿನ್" ರಸ್ಕ್ ಒಳ್ಳೇಯದು. ಅದು ಹಲ್ಲುಗಳನ್ನು ಹಾಳಾಗದಂತಿರಿಸಲು ಸಹಾಯಕವಾಗುತ್ತದೆ.

OV/91

ಪುತ್ತೂರಿನಲ್ಲಿ ಸ್ವದೇಶಾಭಿಮಾನಿಯ ಏಜಂಟರನ್ನಾಗಿ
ಶ್ರೀ ಜಿ. ಎನ್. ಲಕ್ಷ್ಮಣ ಪೈ ಇವರನ್ನು ನೇಮಿಸಲಾಗಿದೆ.
ಮೇನೇಜರ್

ನೀವು ಉಡುಪಿಗೆ ಬಂದಲ್ಲಿ, ಸೌಖ್ಯ ಮತ್ತು ಭದ್ರತೆಯನ್ನು ಪಡೆಯಲು
ಮರೆಯಬೇಡಿರಿ!!!
ಮೈಸೂರು ಕ್ಲಬ್, ಉಡುಪಿ.
ಯೋಗ್ಯವಾದ ಊಟ, ಸ್ನಾನ, ಟಿಫಿನ್, ಉಳಕೊಳ್ಳುವ, ಸಸ್ಯಾಹಾರ ಏರ್ಪಾಡು, ಮೇಜು, ಮಂಚ, ದೀಪ ಇತ್ಯಾದಿ ಸಹಿತ.
Up-to-date Boarding and Lodging When you visit Udipi, be at home.
MYSORE CLUB, UDIPI.

ಭೇಷ್ ರಾಜಾ ಭೇಷ್!

[illegible] ಕಲಹವನ್ನು ಹಿಂದೂ-ಮುಸಲ್ಮಾನರು ತಾವಾಗಿಯೇ ತೀರ್ಮಾನಿಸಲಾರದಾದರು. ಆದರೆ, ಅದನ್ನು ಮೆಕ್ಡೊನಾಲ್ಡರು ತೀರ್ಮಾನಿಸಿಯೇ ಬಿಟ್ಟರು!

ಹಿಂದೂಗಳೆಂದರೆ ಆಂಗ್ಲೇಯರಿಗೊಂದು ಮುದ್ದೆ ಸುಣ್ಣದಂತೆ! ಅದೂ ಕೂಡಾ ಈ ಹಿಂದೂಗಳ, ಈ ಕಾಂಗ್ರೆಸಿನ, ಈ ಗಲಾಟೆಯಿಂದ ಅವರಿಗೆ ಹಿಂದೂಗಳೆಂದರೆ ಮೆಣಸಿನ ಮುದ್ದೆ!

× × × ×

ಅಂತಹ ಆಂಗ್ಲರ ಕೈಯೊಳಗೆಯೇ ಹಿಂದೂಗಳ ಶಕ್ತಿ ಸಿಕ್ಕಿ ಹೋಯಿತೆಂದರೆ, ಏನಾದರೊಂದು ಮಾಡದೆ ಸುಮ್ಮನಿರುವುದು ಯಾರಿಗೆ ಸಾಧ್ಯ? ನೀವೇ ಹೇಳಿ! ಅಲ್ಲದಿದ್ದರೆ ನಾನೇ ಹೇಳುತ್ತೇನೆ.

+ + + +

ಹಿಂದೂ-ಮುಸಲ್ಮಾನ ತೀರ್ಪು ಮೊನ್ನೆ ಆಗಿಯೇ ಹೋಯಿತು. ಹೋಯಿತೆಂದರೆ ಹೋಗಿಬಿಟ್ಟಿತೆಂದಲ್ಲ. ಉಂಟು, ಅದು ಮುಸಲ್ಮಾನರಿಗೆ ಫೇವರೇಬಲ್ ಅಂತೆ. ಹಿಂದೂಗಳಿಗೆ ಅನ್‌ಫೇವರೇಬಲ್ ಅಂತೆ!

+ + + +

ಮಿಸ್ಟರ್ ಹಿಂದೂಗಳೇ, ನೀವು ನಿಮ್ಮ ಮತದವರಾದ ಎಷ್ಟು ಲಕ್ಷ ಜನರನ್ನು ಅಸ್ಪೃಶ್ಯರೆಂದು ಭಾವಿಸಿ ದಣಿಸಿಲ್ಲ—ದಣಿಸುತ್ತಿಲ್ಲ ದಣಿಸಲಿರುವುದಿಲ್ಲ? ಎಂದಾಗ ನಿಮ್ಮನ್ನು ಮಹನೀಯರುಗಳಾದ ಟಕ್ಕ ಮುತ್ಸದ್ದಿಗಳು ದಣಿಸುವುದು ತಪ್ಪೆಂದು ಯುಕ್ತರಾಷ್ಟ್ರೀಯ [illegible]ರುವ ಯಾರೂ ಹೇಳಲಾರರು!

+ + + +

ಹಿಂದೂಗಳ ಕಷ್ಟವು ಪರಿಹಾರವಾಗಬೇಕೇ? ಎಲ್ಲರೂ ಕೂಡಿ ನನ್ನಿಂದ ಒಂದು ಸತ್ಯನಾರಾಯಣವ್ರತವನ್ನಾಚರಿಸಬೇಕು. ಎಲ್ಲಾ ಸರಿಯಾಗುತ್ತದೆ.

+ + × ×

ಹಾಗಾದರೆ ಮಾತ್ರ, ಈಗ ಹಿಂದೂದೇಶವನ್ನು ಬಗ್ಗಿಸಿಟ್ಟ ಸರ್ ಹೋರರು ಶಾಂತರಾದಾರು. ಹಾಗಾದರೆ ಮಾತ್ರ ಸಾಧುವರ್ಯರಾದ ಮೆಕ್ಡೊನಾಲ್ಡರು ತನ್ನ ತಪಸ್ಸನ್ನು ಬಿಟ್ಟಾರು. ಹಾಗಾದರೆ ಮಾತ್ರ ಆ ಚರ್ಚಿಲ್ ದೊರೆಯವರು ಸುಮ್ಮಗಾಗುವರು.

+ + + +

ಕ್ರಾಂತಿಯನ್ನುಂಟುಮಾಡುವವರೆಂದು ಆರೋಪಿಸಲ್ಪಟ್ಟ ೧೦೦ ಮಂದಿ ಬಂಗಾಳಿಗಳನ್ನೋ ಇನ್ನಿತರರನ್ನೋ ಅಂಡಮಾನಕ್ಕೆ ಕಳುಹಿಸಿಯೇ ಬಿಟ್ಟರು. ಅವರೊಟ್ಟಿಗೆ ಚರ್ಚಿಲ್ಲರ ಸುತ್ತಮುತ್ತಲಿನವರಲ್ಲೊಬ್ಬರನ್ನಾದರೂ ತಮಾಷೆಗಾಗಿ ಕಳುಹಿಸದಿರುವುದು ನನಗೆ ದುಃಖಕರ!

× × × ×

ಬಂಗಾಳದಲ್ಲಿ ಕ್ರಾಂತಿಯುಂಟಾಗುತ್ತದೆಂದೂ, ಅಲ್ಲಿ ಅಧಿಕಾರಿಗಳನ್ನು ಇನ್ನೂ ವಧಿಸುತ್ತಿರುವರೆಂದೂ ಅಲ್ಲಿಗೆ ಹೆಚ್ಚಿನ ಬ್ರಿಟಿಷ ಮಿಲಿಟರಿಯವರನ್ನು ಕಳುಹಿಸಿರುವರು. ಅಬ್ಬಾ ಬಂಗಾಳವೇ!!!

× × × ×

ಹಿಂದೂ ಮಹಾಸಭೆಯ ಡಾ। ಮುಂಜೆಯವರು ತನ್ನ ಉದ್ದುದ್ದ ಗಡ್ಡವನ್ನು ಧರಿಸಿಕೊಂಡು ಲಂಡನಿಗೆ ಹೋಗಿರುವರು. ಅಲ್ಲಿ ಏನೇನೋ ಕಿತಾಪತಿ ಮಾಡುತ್ತಿರುವರು. ಅಯ್ಯಾ ಮುಂಜೆಯವರೇ, ಮುಂಚೆ ನಿಮ್ಮ ಗಡ್ಡವನ್ನು ಸ್ವಲ್ಪ ಸಣ್ಣದು ಮಾಡಿ!

× × × ×

ಮುಂಜೆಯವರು ಹಿಂದೂಮಹಾಸಭೆಗೆ ತನ್ನ ರಾಜಿನಾಮೆಯನ್ನು ಕೊಟ್ಟರು. ಲಂಡನಿನಲ್ಲಿದ್ದೊಡನೆ ಡಾ। ಮುಂಜೆಯವರ ರಾಷ್ಟ್ರಭಕ್ತಿಯ ಬಣ್ಣವು ಕಳಗಿಳಿಯಿತು. ಭೇಷ್ ರಾಜಾ ಭೇಷ್!

+ + + ×

"ಸರ್ ಹೋರರ ನೀತಿಪರಿವರ್ತನೆಯು ತ್ಯಾಜ್ಯವಾಗದಿದ್ದರೆ ನಾವು ಬ್ರಿಟಿಷರ ಕನ್ಸರ್‌ವೇಟಿವ್ ಪಕ್ಷದಲ್ಲಿ ಭಾಗವಹಿಸುವುದಿಲ್ಲ" ವೆಂದು ಲಿಬರಲರು ಹೇಳಿ ದೃಢಮಾಡಿದರು. ಆದರೆ ಡಾ। ಮುಂಜೆಯವರೇ ನಿಮ್ಮ ಬ್ರಿಟಿಷ ಭಕ್ತಿಯೇನೆಂಟೆ! ಭೇಷ್ ರಾಜಾ ಭೇಷ್!

+ × × ×

ಲಂಡನ್ನಿನ ಗಾಳಿಯು ಭಾರೀ ತಂಪು. (ನನಗೆ ಗೊತ್ತುಂಟು) ಆದುದರಿಂದಲೇ "ನನ್ನ ದೇಶ ನನ್ನ ಭೂಮಾತೆ!"ಯೆಂದು ಒಂದು ಕಾಲದಲ್ಲಿ ರೌಂಡ್‌ಟೇಬಲಿನಲ್ಲಿ ಕುಳಿತು ಜಂಭಿಸಿದ ಮುಂಜೆಯವರ ಮನಸ್ಸು ಈಗ ತಿರುಗಿರಬೇಕು.

+ + + +

"ಮುಖ್ಯಪ್ರಧಾನ ಮೆಕ್ಡೊನಾಲ್ಡರು ಕೋಮುವಾರು ಕೂಸನ್ನು ಅಲ್ಲ ಭೂತವನ್ನು ಹೆತ್ತರು. ಈ ಪ್ರಸವ ಕಂಡು ಭಾರತವೇ ಕಲ್ಲವಿಸಿ ಹೋಯಿತು. ಈ ಭೂತದೇವತೆಯಿಂದೆಷ್ಟು ಹೊಡೆದಾಟಗಳಾಗಬೇಕೋ ಎಷ್ಟು ರಕ್ತ ಧಾರೆಧಾರೆಯಾಗಿ ಹರಿಯಬೇಕೋ ಎಂದು ಅನೇಕ ರಾಷ್ಟ್ರಹಿತೈಷಿಗಳು ಹಂಬಲಿಸುತ್ತಿದ್ದಾರೆ, ಆದರೆ, ಕೋಮುವಾರು ವಿಷಪಾನ ಮತ್ತರಾದ ಮುಸಲ್ಮಾನರೂ ಅಕಲಿಸರೆಂಬ ಹೆಮ್ಮೆಯಿಂದ ಬೀಗುವ ಐರೋಪ್ಯರೂ ಈ ಭೂತವನ್ನಾಲಿಂಗಿಸಿ ಮುದ್ದಾಡುತ್ತಿರುವರು" ಎಂದು 'ವಿಶ್ವಕರ್ನಾಟಕ' ವೆಂದಿದೆ.

'ಧೂಮಕೇತು'

THE SOUTH INDIA
CO-OPERATIVE INSURANCE SOCIETY,
LIMITED, MADRAS.

LOCAL BOARD:—

THE SOUTH CANARA CENTRAL
CO-OPERATIVE BANK. LTD, MANGALORE.

Applications are invited for 'Sub Agents' from capable and energetic persons and Co-operative Institutions to canvas business *on behalf of the Local Board of the Society* at Mangalore

FOR TERMS APPLY TO—

The Secretary,
South Canara Central Co operative
Bank, Ltd., KODIALBAIL P O (Mangalore)
SOUTH CANARA

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ
(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್

ಅಚ್ಚಿನಲ್ಲಿದೆ! **ಅಚ್ಚಿನಲ್ಲಿದೆ!**
ಇದೇ ತಿಂಗಳ ಮೂರನೆ ವಾರದಲ್ಲಿ ಹೊರಬೀಳುವುದು

ಅಭಿನಯಗೀತಾವಳಿ

(ಶ್ರೀ ಜಿ ಎನ್ ಲಕ್ಷ್ಮಣಪೈ ವಿರಚಿತ)

ಕ್ರಯ ೦–೨–೬ ಕ್ರಯ ೦–೨–೬

ಚಿಕ್ಕ ಮಕ್ಕಳಿಗೆ ವಿಷಯಜ್ಞಾನ, ಭಾಷಾಜ್ಞಾನ ಮತ್ತು ಸಂಗೀತಜ್ಞಾನವು ಏಕಕಾಲದಲ್ಲಿ ಉಂಟಾಗುವಂತೆ ಕಿಂಡರ್ ಗಾರ್ಟೆನ್ ಪಾಠವನ್ನು ಅನುಸರಿಸಿ ರಚಿಸಲ್ಪಟ್ಟ ಹಾಡುಗಳ ಪುಸ್ತಕ ಇದರೊಳಗಿನ ಗೀತಗಳನ್ನು ಹಾಡಿ, ನಲಿಯುವುದೆಂದರೆ ಮಕ್ಕಳಿಗೊಂದು ಹಬ್ಬವೇ ಸರಿ

ನಮ್ಮ ಇತರ ಪುಸ್ತಕಗಳು—

ಸಚಿತ್ರ ಕನ್ನಡ ಪದ್ಯರತ್ನಾವಳಿ
3, 4, 5ನೆ ದರ್ಜೆಗಳ ಬಗ್ಗೆ ಪದ್ಯಪುಸ್ತಕ } ೦—೩—೬

ಕೀರ್ತನಾಂಜಲಿ
(ಉತ್ತಮ ಭಜನಾಗೀತಗಳ ಕೈಪಿಡಿ) } ೦—೩—೦

ಹರಿಹರ ಛಾಪಖಾನೆ, ಮತ್ತು ಪುಸ್ತಕಾಲಯ,
ಪುತ್ತೂರು, ದ ಕ.

ತುಂಬಾ

ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ?
ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿ
ಯನ್ನು ತೆಗೆದುಕೊಳ್ಳಿರಿ.
ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ
ಬರೆದುಕೊಳ್ಳಿರಿ.

Wanted.

Agents for 'Swadeshabhimani' throughout the South Kanara District and elsewhere.

Apply Sharp — You are sure to secure substantial Commission.

MANAGER,
Swadeshabhimani,
Mangalore.

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906. **1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು**

***BRANCHES* -Karkal, Kasargod, Cochin, Udipi, Gangolli, Coondapur, Bombay Puttur, Calicut & Alleppey -**

ಬ್ರಾಂಚುಗಳು:-

ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised Capital 10,00000–0–0	ಅಧಿಕಾರಕೊಡಲ್ಪಟ್ಟ ಮೂಲಧನ ರೂ, 10, 0000–0–0
Issued & paid up Capital. 300,000–0–0	ಚಂದಾ ಹಾಕಿದ ಮತ್ತು ವಸೂಲು ಕೊಟ್ಟ ಮೂಲಧನ ರೂ 300,000 0–0
Reserve and other sinking Funds Rs 526,000–0–0	ಕ್ಷೇಮನಿಧಿ ಮತ್ತು ಇತರ ಫಂಡುಗಳು 526,000–0–0
Amount invested on G P Notes Rs 1210,092–12–0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 1210,092–2–0
Rates of interest on fixed deposits at Head Office and Branches are 6% for 2 Years 5½%, 1 Year	ಖಾಯಂ ಠೇವಣಾತಿಗೆ ಕೊಡೋಣಾಗುವ ಬಡ್ಡಿ ದರ– ಎರಡು ವರುಷಗಳಿಗೆ ನೂರಕ್ಕೆ 6% 1 ವರುಷಕ್ಕೆ ನೂರಕ್ಕೆ 5½

Current Account Deposits received and interest allowed on daily balance of Rs 50 and above that on multiples of Rs 10/ @ 3% from Ist Janauary to 30th June and @ 2% from Ist July to 31st December No interest will be allowed unless the depositor earns not less than Rs. 5/ during a period of 6 months ending either 30th June or 31st December in any year

Except by special arrangement no interest is allowed on sums exceeding Rs 10,000/ in the case of Head Office and Cochin Branch and on sums not exceeding Rs 15 000/ in the case of Bombay Branch and on sums exceeding Rs 3000/ in the case of other Branches

For further particulars please apply to—

Office of the Bank,
Mangalore 17—6—1932

K. Venkat Rao,
Secretary & Treasurer

The Pangal Nayak Bank, Ltd.

Head Office.
Udipi,

Established 1920

Branch Office
Mangalore

Authorised Capital Rs 2,00,000-
Issued Capital Rs 1,75,000-
Paid up Capital Rs. 1 75,000-
Reserve and other Funds Rs 1,80,000

NOTICE.

Advances on pledge of Gold are made at 8%

Fixed deposits received at following rates

3 months 4½%, 6 and 9 months 5%,

1 year and above 5½%, 2 years 6 %

(By order)

Office of the Bank,
Udipi, 1–7–'32

P Laxman Nayak,
Secretary

KIRLOSKAR BROTHERS, LIMITED

Sole Distributers **Maben & Sons, Udyavar**

ಸ್ವದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್, ಇವರ ಸ್ವದೇಶೀ ಕಾರಖಾನೆಯಲ್ಲಿ ತಯಾರಿಸಲ್ಪಟ್ಟ ಉತ್ತಮ ಮತ್ತು ನಾಜೂಕಾದ ಮನೆಗಳಿಗೂ, ಶಾಲೆಗಳಿಗೂ, ಆಸ್ಪತ್ರೆಗಳಿಗೂ ಅಗತ್ಯವಿರುವ ಉಕ್ಕಿನ ಕುರ್ಚಿಗಳು ಮೇಜುಗಳು, ಮಂಚಗಳು ಮೊದಲಾದ ಸಾಮಗ್ರಿಗಳಲ್ಲದೆ, ಬೇಸಾಯಗಾರರಿಗೆ ಅಗತ್ಯವಿರುವ ಹೊಸ ಮಾದರಿಯ ಉಕ್ಕಿನ ನೇಗಿಲು, ಪಂಪುಗಳು ಮೊದಲಾದ ಸಾಮಗ್ರಿಗಳು ನಮ್ಮಲ್ಲಿ ಮಾರಾಟಕ್ಕಿವೆ

ಗೆದ್ದಲಿನ ಉಪದ್ರವವೂ ತುಕ್ಕು ಹಿಡಿಯುವ ಭಯವೂ ಈ ಉಕ್ಕಿನ ಸಾಹಿತ್ಯಗಳಿಗಿರುವುದಿಲ್ಲ ಉತ್ತಮವೂ ಅಂದವೂ ಸುಲಭವಾದ ಕ್ರಯಕ್ಕೆ ಸಿಗುವ ಈ ಸ್ಟೂಲುಗಳು ಯಾರಿಗೆ ಬೇಡವಾಗಿದೆ? ಒಮ್ಮೆ ಬಂದು ಪರೀಕ್ಷಿಸಿರಿ

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೋ, ಮಂಗಳೂರು ದ ಕ –
ಮಂಗಳೂರು ತಾಲೂಕು ಡಿಸ್ಟ್ರಿಬ್ಯೂಟರ್ಸ್,

ತಾಲೂಕು ಪ್ರತಿನಿಧಿಗಳು —

ಕೆ ರಾಮನಾಯಕ್—ಜನರಲ್ ಮರ್ಚೆಂಟ್ ಕಾಸರಗೋಡು ಸದಾಶಿವ ರಾವ್—ಗೌರವ ಅಧ್ಯಕ್ಷ, ಸ್ವದೇಶೀ ಪ್ರಚಾರಕ ಸಂಘ, ಪುತ್ತೂರು ಯುಸ್. ಡೇವಿಡ್—ಉಡುಪಿ ಮಿಶನ್ ಕೋಸ್, ವಿ. ವಿ ಶೆಣೈ—ಬುಕ್ ಸೆಲ್ಲರ್, ಎಂಡ್ ಜನರಲ್ ಮರ್ಚೆಂಟ್ ಕಾರ್ಕಳ, ಬಿ. ಕೃಷ್ಣಯ್ಯ, ಬಿ. ನ್ಯೂ ಸೈಕಲ್ ಸ್ಟೋರ್ಸ್— ಮೂಡಬಿದ್ರಿ



ಸೋಡ್ತಿಯಲ್ಲಿ ಕುಬೇರನಾಗಿ ಫಲ

ವರ್ಲ್ಲಂಡಿನ ಅದೊಂದು ಸರಕಾರಿ ಸೋಡ್ತಿಯಲ್ಲಿ ೩೦೦೦೦ ಪವನು ಗೆದ್ದ ಜೋರ್ಜ್ ಹರ್ಬರ್ಟ ಕಫಿನನೆಂಬಾತನ ಲೀಲೆಯು ಸೋಡ್ತಿ ಪ್ರಿಯರಿಗೆ ಮನನೀಯವಾಗಿದೆ. ಅವನ ಹಣವೇ ಅವನಿಗೆ ಅವಸಾನವನ್ನೊದಗಿಸಿತೆಂದು ಕೋರ್ಟಿನಲ್ಲಿ ತಿಳಿಸಲಾಗಿದೆ. ಸೋಡ್ತಿ ಗೆಲ್ಲುತ್ತಲೇ ಅವನು ವಿಶೇಷ ಕುಡಿಯಲು ಪ್ರಾರಂಭಿಸಿ 'ಅಲಿ'ನಾದನು. ಹೆಂಡತಿಯನ್ನು ಒಡೆದಿಕ್ಕುವುದೇ ಅವನ ಒಂದೇ ಒಂದು ಕೆಲಸವಾಯಿತು. "ಡಜನಿಗೆ ನಾಲ್ಕು ಪೆನ್ನಿನಂತೆ ಹೆಂಡಿರು ಸಿಗುವರೆಂದೂ ತಿಳಿಸಿದನು." ಹೆಂಡತಿಗೂ ಮೂವರು ಮಕ್ಕಳಿಗೂ ಅಶನಾರ್ಥಕ್ಕಾಗಿ ಹಣ ಕಳುಹಿಸಿ ಕೊಡುತ್ತಾ, ಜೂನ್ ನಂತರ ಅದನ್ನೂ ಮರೆತನು. ಕಫಿನನು ತಾನು ಹಾಗೇನೂ ಮಾಡಿಲ್ಲವೆಂದು ಕೋರ್ಟಿಗೆ ತಿಳಿಸಲು, ಹೆಂಡತಿಯು "ಹಣ ಸಿಗುವ ಮೊದಲು ನಾವು ಇದ್ದಂತೆ ಹಣ ದೊರೆತ ನಂತರ ಇರಲಿಕ್ಕಾಗಲಿಲ್ಲ. ಅವನಿಗೆ ಸೋಡ್ತಿ ದೊರೆಯದೆ ಇದ್ದಿದ್ದರೆ ಚೆನ್ನಾಗುತ್ತಿತ್ತು" ಎಂದಳು. ಕಫಿನನಿಗೆ ಈ ಮದುವೆಯ ಮೊದಲೇ, ಮೊದಲನೆ ಹೆಂಡತಿಯಿಂದಾದ ಮೂವರು ಹೆಣ್ಣು ಮಕ್ಕಳೂ ಚೆನ್ನಾಗಿದ್ದರು. ಹಣ ದೊರೆತ ಬಳಿಕ, ಈ ಎರಡನೇ ಹೆಂಡತಿಯು ಮಕ್ಕಳ ಸಲುವಾಗಿ ಆ ಹಣಕ್ಕೊಂದು ಜಗಳಹುಟ್ಟಿ ಈ ಗತಿಯಾಯಿತೆಂದನು. ಇದನ್ನೆಲ್ಲ ಕೇಳಿ, ಕೋರ್ಟಿನವರು ಪ್ರತಿವಾರವೂ ಕಫಿನನು ಕುಟುಂಬ ಪೋಷಣೆಗಾಗಿ ಮೂರೂವರೆ ಕೊಡಬೇಕಾಗಿ ವಿಧಿಸಿದರು. ಹಣ ಕಂಡರೆ ಹೆಣ ಬಾಯಿ ಬಿಡುವುದೇ ಅಲ್ಲ, ಹಣ ಪಡೆದು ಹೆಣಕ್ಕೂ ಕಡೆಯಾಗುವ ಸಂಭವವಿದೆ!

ದೇಶದ ಉತ್ಪನ್ನಗಳ ಮಾರಾಟ

ಹಿಂದೂದೇಶದ ವಾರ್ಷಿಕ ಕೃಷಿ ಉತ್ಪನ್ನಗಳ ಬೆಲೆ ಒಂದು ಸಾವಿರ ಕೋಟಿ ರೂಪಾಯಿ; ಇದರಲ್ಲಿ, ಒರೇ ೨೦೦ ಕೋಟಿ ರೂಪಾಯಿ ಬೆಲೆಯ ಜೀನಸುಗಳನ್ನು ಮಾತ್ರ ಪರದೇಶಗಳಿಗೆ ಮಾರಲಾಗುತ್ತಿದೆ. ಕಾರಣವೇನು? ಇತರ ದೇಶಗಳಲ್ಲಿರುವಂತೆ, ಪೈದಾಸ್ತಾದ ಜೀನಸುಗಳನ್ನು ಮಾರಲು ನಮ್ಮಲ್ಲಿನ್ನೂ ಯೋಗ್ಯ ವ್ಯವಸ್ಥೆಯಾದುದಿಲ್ಲ. ಹೊರದೇಶಗಳಲ್ಲಿ ನಮ್ಮ ಸಾಮಾನು ಮಾರಲಾರದಂತಹ ಪ್ರಚಾರವೂ ನಡೆಯುತ್ತಿದೆ; ನಮ್ಮಲ್ಲಿ ಹುಟ್ಟುವ ಕೆಲವು ಜೀನಸುಗಳ ಗುಣವೂ ಅಷ್ಟು ಚೊಕ್ಕವಾಗಿಲ್ಲ ಬೇರೆ ಕೆಲವು, ಆದೊಡನೆಯೇ ಎಲ್ಲರೂ ಒಂದೇ ಸವನೆ ಜೀನಸುಗಳನ್ನು ರಾಶಿ ರಾಶಿಯಾಗಿ ಮಾರತರುವರು, ಇದರಿಂದ ಜೀನಸುಗಳನ್ನು ಅಗ್ಗವಾಗಿ ಮಾರಬೇಕಾಗುವುದು ಆದರೆ, ಹೀಗೆ ರಾಶಿಯಾಗಿ ಒಂದೆ ಸಲ ತರುವರೇಕೆ? ಸಾಲಗಾರನ ಒತ್ತಾಯ, ಇತರ ಜೀವನೋಪಾಯ ರಹಿತತೆ ಹೀಗಾಗಿ ಪೈರಿನ ಬೆಲೆ ಕಡಿಮೆಯಾಗುವುದು ಸ್ವಾಭಾವಿಕ, ಮುಂದಾಗಿ ಕಂಟ್ರಾಕ್ಟುಗಳನ್ನು ಮಾಡುತ್ತ ರೈತನು ಕೆಡುವುದೂ ಹೀಗೆಯೇ. ವ್ಯಾಪಾರದಲ್ಲಿ, ವರ್ತಕನೇ ಮೇಲ್ಕೈಯವನಾಗುವನು, ಅವನ ಮಾತಿನಂತೇ ಕೃಷಿಕನು ವಿಧೇಯನಾಗಿ ವರ್ತಿಸಬೇಕಾಗುವುದು ಉದಾಹರಣೆಗಾಗಿ ಹೊಗೆಸೊಪ್ಪು, ನಾರು ಇವೆರಡರ ಈಗಣ ದುಸ್ಥಿತಿಯನ್ನು ಆಲೋಚಿಸಿರಿ. ಇದನ್ನು ವಿಚಾರಿಸಿಕೊಂಡರೆ ಕೃಷಿಯುತ್ಪನ್ನಗಳ ಸಮರ್ಪಕ ಮಾರಾಟದ ವಿಷಯ ಉತ್ತಮ ಕ್ರಮಗಳು ತಿಳಿದು ಬರುವುವು—ಎಂದು ಶ್ರೀ ರಾಮದಾಸ ಪಂತ್ಲು ರವರ ಬೋಧೆ

ಕೆಂಡಲಳ ಕೆಂಡಸೇವೆ

ಅಮೇರಿಕದಲ್ಲಿ ಲೋಕಪೂಜ್ಯರೂ ಲೋಕ ಹಿತೇಚ್ಛುಗಳೂ ಇರುವ ಹಾಗೆಯೆ, ಕೆಲವು ಭೂತಗಳೂ ಇವೆ; ಹುಚ್ಚಂಗಿಯ ನಾನಾ ವಿಕಾರ ರೂಪಗಳು. ಇವುಗಳಲ್ಲಿ ಮೇಯೋ ಮಾಯೆಯೊಂದು ಒಂದು, ನಮ್ಮ ದೇಶದ ಕೊಳೆ ನಾತವನ್ನೆಲ್ಲ ಸಂಗ್ರಹಿಸಿ, ಅದನ್ನು ಅಮೇರಿಕದ ಮಿರುಗು ಹಚ್ಚಿ, ಅನುಕೂಲವಾಗುವ ಹಾಗೆ ಪ್ರಪಂಚದಲ್ಲೆಲ್ಲ ಹರಡಿಸಿತು. ಕೆಂಡಲ್ ಎಂಬ ಮತ್ತೊಂದು ಭೂತವೂ ಇತ್ತ ಬಂದಿದ್ದಿತು. ಇದೂ ತನ್ನ ಕೆಂಡ ಸೇವೆಯ ಮೂಲಕ ಭಾರತಮಾತೆಯ ಸನ್ಮುಖದಲ್ಲಿ ತನ್ನ ಜೀವನದ ಹರಿಕೆಯನ್ನು ಸಲ್ಲಿಸಿದೆ. ಪುರಿಗೆ (ಜಗನ್ನಾಥ) ತೆರಳಿ ಮಿಶ್ನರಿಯಿಂದ, ಪುಲ್ಲಿಂಗ-ಸ್ತ್ರೀಲಿಂಗಗಳ ವಿಚಾರವನ್ನು ತಿಳಿದುಕೊಂಡು, ಕೃತಾರ್ಥನಾಗಿ, ಹಿಂದುಗಳು ಆರಾಧಿಸುವುದೂ ಹಣೆಗೆ ಗುರುತುಮಾಡಿಕೊಳ್ಳುವುದೂ ಈ ಅಂಗಗಳ ಕುರುಹುಗಳೆಂದೂ ನಿರ್ಧರಿಸಿ ಹೊರಟೀತೇ! ೫೦೦೦ ವರ್ಷಗಳಿಂದಲೂ ಭಾರತ ಇತಿಹಾಸವೇನಿಸ್ಸುವುದೋ ಅದನ್ನು ಪುನಃ ರಚಿಸಿ, ಇಸತ್ತಿಗೆ ಮರುಳು ಹೇಸಿದಳೇ! ಆ ಮರುಳು ಎಷ್ಟೆಂದರೆ, ವಿಲಾಯತಿಯಲ್ಲೆಲ್ಲ ಛಿಸ್ತಾಲ್ಬದ ಅಥವಾ ಅರ್ಜೆಂಟೀನದ ಗೋಮಾಂಸದಂತೆ ಇದು ಅತಿ ಪ್ರಿಯವಾಗಿದೆ. ಮುಖ್ಯ ತತ್ವ:— ಬ್ರಿಟಿಷ ಕುಲವು ಇತರ ಯಾವತ್ತು ಮಾನವ ಕುಲಗಳಿಗಿಂತ ಶ್ರೇಷ್ಠ; ಹಿಂದೀಯರು ಎಂದೂ ಸ್ವತಂತ್ರವಾಗಿ ಆಳಲರಿತುದಿಲ್ಲ, ಇನ್ನು ಆಳುವವರೂ ಅಲ್ಲ; ಪುಸ್ತಕವು, ಇಂಡಿಯವು ಈ ಸತ್ಯವನ್ನು ತಿಳಿದೂ ಆತ್ಮೋದ್ಧಾರಮಾಡಿಕೊಳ್ಳಲೆಂದು ಬರೆದುದು. ಈ ಗ್ರಂಥವನ್ನು ಬರೆದಾಗ, ಭಾರತವರ್ಷದ ಪವಿತ್ರ ಪುಣ್ಯಮಯ ಹೆಸರನ್ನು ಹಲವು ಸಲ ಬರೆದುದರಿಂದ, ಈ ಭೂತವು ಈ ಜನ್ಮವನ್ನು ಬಿಟ್ಟು, ಉತ್ತಮ ಗತಿಗೆ ತೆರಳಬಹುದೆಂದೇ ಹಿಂದೀಯರು ನಂಬಿದ್ದು, ಇದರ ಇತರ ಪಾಪಕೃತ್ಯವನ್ನೆಲ್ಲ ಅನ್ಯಾಯಗಳನ್ನೆಲ್ಲ ಮನ್ನಿಸಿರುವರು.

ಶ್ರೀಮತಿ ರಾಧಾಬಾಯಿ ಸುಬ್ಬರಾಯನ್‌ನವರು

ಸ್ತ್ರೀಯರ ಚುನಾವಣೆಗಾಗಿ ಸರಕಾರವು ನಡೆಸಿದ ಏರ್ಪಾಡನ್ನು ನೋಡಿ ಇವರು ಸಂತಾಪಗೊಂಡಿರುವರು. ಮಹಿಳೆಯರ ಸಹಕಾರವು ಕೌನ್ಸಿಲುಗಳಲ್ಲಿ ಅಗತ್ಯವೆಂದು ಸರಕಾರವು ತಿಳಿದುದು ಸರಿಯಾದರೂ, ಈ ಅಭಿಪ್ರಾಯಗಳು ಮಾತ್ರ ಸರಿಯಾಗಿಲ್ಲ. ಸ್ತ್ರೀಯರಿಗೆ ಸ್ಥಾನಗಳನ್ನು ಮೀಸಲಾಗಿರಿಸಿದರೆ, ಜಾತಿಗಳಂತೆ ಪಾಲಾಗುವುದೆಂದು ಮೊದಲೇ ತಿಳಿದು, ಅದಕ್ಕಾಗಿಯೆ ಇಡೀ ಭಾರತವರ್ಷದ ಸ್ತ್ರೀ ಸಮಾಜಗಳು ಇಂತಹ ವಿಪತ್ತು ಬೇಡವೆಂದೇ, ಜಂಟೀ ಮತ್ತು ಸಮಾನ ಪ್ರಾತಿನಿಧ್ಯವೇ ಅಗತ್ಯವೆಂದೂ ತಿಳಿಸಿದ್ದಿತು. ಸರಕಾರಗಳೂ ಸರಕಾರೀ ಕಮ್ಮಿಟಿಗಳೂ ಇದನ್ನೆ ದೃಢೀಕರಿಸಿದ್ದುವು. ಬ್ರಿಟಿಷ ಸರಕಾರವು ಇದೊಂದನ್ನು ಬಗೆಯಲೇ ಇಲ್ಲ. ಸರಕಾರದ ಏರ್ಪಾಡಿನ ಈ ಅಂಶವನ್ನು ಪ್ರೋತ್ಸಾಹಿಸುವುದಿರಲಿ, ಅಂಗೀಕರಿಸುವವರಿಲ್ಲ ಹೀಗಿದ್ದು, ಸ್ತ್ರೀಯರ ಮೇಲೆ ಇದೊಂದು ಸುಧಾರಣೆಯ ಬಲತ್ಕಾರವೇತಕ್ಕೆ? ದೇಶಕ್ಕೆ ಚಿರಕಾಲವೂ ಅಪಾಯವಾಗುವ ಸುಧಾರಣೆಗಳನ್ನು ಅಂಗೀಕರಿಸುವ ಬದಲಾಗಿ, ಪ್ರಾತಿನಿಧ್ಯವೇ ಬೇಡವೆಂದು ಸ್ತ್ರೀಯರೆನ್ನುವರು. ಅನಂಗೀಕೃತವಾಗುವ ಮತ್ತು ಅನಪೇಕ್ಷಿತವಾದ ಈ ಸುಧಾರಣೆಯನ್ನು ಈಗಲೆ ಸರಕಾರವು ಹಿಂತೆಗೆವುದೆಂದು ಮುಖ್ಯ ಮಂತ್ರಿಗಳಿಗೂ ಬಿನ್ನವಿಸಿ, ಇವರು ಇದ್ದ ದೋಷವನ್ನು ಶಾಸನಗೊಳಿಸಬಾರದಾಗಿ ವಿನಂತಿಸಿದ್ದಾರೆ

ಇಂಡಿಯಾ ಲೀಗ್ ಪ್ರತಿನಿಧಿಗಳು

ಲಂಡನಿನಿಂದ ಮುಂಬಾಯಿಗೆ ಒಂದಿಳಿದಿರುವರು. ಇವರು ಪ್ರಮುಖರನ್ನು ಕಂಡಾಯಿತು. ಈಗಣ ಬ್ರಿಟಿಷ ಸರಕಾರವು ಪೂರ್ಣಾವಧಿ ತನಕ ನಡೆವುದಾದರೂ, ಮಂತ್ರಿಮಂಡಲದಲ್ಲಿ ಬದಲಾವಣೆಗಳಾಗುವುವು. ಮುಖ್ಯಮಂತ್ರಿ ಮೆಕ್‌ಡೊನಾಲ್ಡರು ಮುಂದೆ ಲೋರ್ಡರಾಗಬಹುದು, ಇಂಡಿಯಾ ವೈಸ್ರಾಯರೂ ಆಗಬಹುದು. ಆದರೆ ಅವರು ಲೇಬರ್ ಪಕ್ಷಕ್ಕೆ ಸೇರುವಂತಿಲ್ಲ, ಲೇಬರ್ ಪಕ್ಷಕ್ಕೂ ಅವರು ಬೇಡವಾಗಿದೆ. ಜರ್ಮನಿಯಲ್ಲಿ ಇನ್ನೂ ಅಂಧಕಾರವು ಹುಟ್ಟುತ್ತಿರುವ ಕಾರಣ, ಬ್ರಿಟನ್ನಿಗೆ ಕಣ್ಣು ಕಟ್ಟುವುದೂ ಸಹಜ. ಪ್ರಜೆಗಳಿಗೆ ತೆರಕ್ಕ ಸಾಲವನ್ನು ಸರಕಾರವು ಮತ್ತೊಂದು ಅವಧಿಗಾಗಿ ಮುಂದರಿಸಿ ಬಡ್ಡಿಯ ಅಂಶವನ್ನು ಇಳಿಸಿಕೊಂಡಿರುವುದಾದರೂ, ಅಷ್ಟು ಹಣವು ವ್ಯಾಪಾರವಹಿವಾಟುಗಳಿಗೆ ದೊರೆವುತ್ತಿದ್ದುದನ್ನು ತಡೆದಂತಾಗಿ ಇನ್ನು ಆರ್ಥಿಕ ಅಡಚಣೆ ಹೆಚ್ಚದಿರದು. ಸದ್ಯಕ್ಕೆ ಮೂರು ಮಿಲ್ಲಿಯ ಜನರು ನಿರುದ್ಯೋಗಿಗಳಾಗಿ ನಿರಾಶ್ರಿತರು; ಲಂಕೇಶಯರಿನ ಮಜೂರರ ಮುಗ್ಗಟ್ಟಿನಿಂದ ಇನ್ನೂ ೨೦,೦೦೦ ಹೆಚ್ಚುವರೆಂದೇ ಬೆದರಬೇಕಾಗಿದೆ. ಒಟ್ಟಾವಾ ಕೊನ್ಫರೆನ್ಸಿನಿಂದ ಕಾಸಿನ ಉಪಕಾರವೂ ಉಂಟಾಗಿಲ್ಲ,—ಎಂಬದಿಷ್ಟು ಅವರ ಸಂಭಾಷಣಾಭಿಪ್ರಾಯ.

ಹಿಂದೀ ಹಡಗು ಕಂಪೆನಿಗಳು

ಈಗ ಇಂಗ್ಲಿಷ ಹಡಗು ಕಂಪೆನಿಯವರ ಮೇಲಾಟದ ಸೆಣಸಾಟಕ್ಕೊಳಪಟ್ಟಿವೆ ಹಿಂದೀಯರ ಹಡಗುಗಳೇ ಮಾತ್ರ ಇಲ್ಲಿನ ಕರಾವಳಿ ವ್ಯಾಪಾರವನ್ನು ನೈಯುವ ಹಾಗೆ ವಿಧಿಸಲು ಒಂದು ಮಸೂದೆಯು ಎಸೆಂಬ್ಲಿಯ ಮುಂದೆ ತರಲಾಗಿದ್ದಿತು. ಸರಕಾರವು ಈ ವಿಷಯವಾಗಿ, ಹಿಂದೀ ಹಡಗುಗಳ ಅಭಿವೃದ್ಧಿಗಾಗಿ ಬೇರೆ ಉಪಾಯ ಹುಡುಕುವುದಾಗಿ ಸೂಚಿಸಿತು. ಒಂದು ಕೊನ್ಫರೆನ್ಸು ಸೇರಿತ್ತು,ಏನೂ ಉಪಾಯವಾಗಲಿಲ್ಲ. ಒಂದುವರ್ಷ ಕಳೆದ ಬಳಿಕ ಅದನ್ನು ರೌಂಡ್‌ಟೇಬಲ್ ಕೊನ್ಫರೆನ್ಸಿನಲ್ಲಿ ಚರ್ಚಿಸುವರೆಂದು ವಾಣಿಜ್ಯ ಇಲಾಖಾ ಮೆಂಬರರೆಂದರು. ಇನ್ನೊಂದು ವರ್ಷದಾಟಿತು. ಆ ಕೊನ್ಫರೆನ್ಸು ಗಾಳೀಪರದಂತೆ ಹಾರಾಡಿತು. ಈಗ, ಬ್ರಿಟಿಷ ಇಂಡಿಯಾ ಹಡಗು ಕಂಪೆನಿಯು ಕೊರಳು ಹಿಸುಕುವುದಾಗಿ ಹಿಂದೀಹಡಗುಗಳ ಮಾಲಿಕರ ಗೋಳಾಟವಿದೆ. ಇಲ್ಲಿಗೆ ಬಂದು, ನಮ್ಮವರ ವ್ಯಾಪಾರವನ್ನು ತಡೆದು ನಿರ್ಮೂಲಿಸುವ ಪ್ರಯತ್ನಮಾಡುವ ಯುರೋಪೀಯರು ನಮ್ಮ ಸಹಕಾರವನ್ನು ಸೆಳೆದುಕೊಳ್ಳುವ ಯತ್ನಮಾಡುತ್ತಾರೆಂದು ಹೇಗೆನಂಬುವ?

ನೋಟಗಳು

NOTES

ಹಿಂದೂದೇಶದಲ್ಲಿ ಹಿಂದೂಗಳು 'ಮೈನರ'ರ ಅಧಿಕಾರದಿಂದಿರಬೇಕು; ಆದರೆ 'ಮೇಜರ'ರಾಗಿ ಬೆಳೆಯಬೇಕು, ಎಂದು ಎವೋರ್ಡಿನ ಅಭಿಪ್ರಾಯ.

* * * *

ಅಸ್ಪೃಶ್ಯರೆಂದರೆ ಒಂದು ಸಮಾಜದ ಅಂಗವೆ? ಒಂದು ಸಮಾಜವೆ? ಅವರು ಹಿಂದೂ ಸಮಾಜದಲ್ಲಿ ಸೇರಿಯೂ ಪ್ರತಿನಿಧಿ ಆರಿಸುವರು; ಸೇರದೆಯೂ ಬೇರೆ ಪ್ರತಿನಿಧಿಗಳನ್ನು ಆರಿಸುವರು. ಇದೂ ಎವೋರ್ಡಿನ ವಿಚಿತ್ರ.

* * * *

ಸೈಮನು ಕಮಿಶನ್ನು ಮತ್ತು ನೆಹರು ಕಮಿಟಿ ಇವರಿಬ್ಬರ ರಿಪೋರ್ಟಿನಲ್ಲಿ ಏಕಾಭಿಪ್ರಾಯವಿದ್ದ ಸಂಗತಿ ಒಂದೇ: ಯಾವುದೊಂದು ಸಮಾಜದ ಪ್ರತಿನಿಧಿಗಳ ಸಂಖ್ಯೆ ಮಹಾಮತವುಳ್ಳದ್ದಾಗಬಾರದು. ಪಂಜಾಬು ಸರಕಾರವು ಮುಸ್ಲಿಮರಿಗೆ ಎರಡು ಪ್ರತಿನಿಧಿಗಳನ್ನು ಹೆಚ್ಚಿಗೆ ಕೊಟ್ಟಿತು; ಎವೋರ್ಡು ಕೊಟ್ಟ ಹೆಚ್ಚಿಗೆ ಸೀಟುಗಳು ೧೧!

* * * *

ಒಟ್ಟಾರೆ ಅಭಿಪ್ರಾಯ — ಬೇಡವಾದ ರೀತಿಯಲ್ಲಿ ಬೇಡ; ಪ್ರಾತಿನಿಧ್ಯ ರೋಗವಿಲ್ಲದವರಿಗೆ ಡಬ್ಬಲ್ ಡೋಜು; ಕಠಿಣ ರೋಗಿಗಳಿಗೆ ಒಂದು ತಟಕು; ಒಂದೇ ರೋಗವಿದ್ದ ಹಲವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪ್ರಕಾರದ ಚಿಕಿತ್ಸೆ—ಡಾಕ್ಟರ್ ಮೆಕ್‌ಡೊನಲ್ಡರ ಔಷಧೋಪಚಾರ.

* * * *

ಬೆಳಗಣಿಕೆಯ ಪ್ಲಾಂಟರರಿಗೆ ಒಹಳ ಮಂಜೂರಿಕೆಗಳು ದೊರೆತು ಒಂದು ಅಪಹಾಸ್ಯವಾಗಿದೆ. ಆದರೂ ಅವರಿಗೆ ಇನ್ನು ಹಲವು ಸ್ಥಾನಗಳು ಬೇಕಾಗಿವೆ ಎಂದು ಅವರ ಹಟ. ಜಮೀನ್ದಾರರಿಗೆ ಕೌನ್ಸಿಲೂ ಒಂದು ಉಂಬಳಿಯಾಗಿದೆ, ಹಿಂದೂಗಳಿಗೆ ಅದೇ ಒಂದು ಕಂಬಳಿ!

* * * *

ಒರ್ಮವು ಪ್ರತ್ಯೇಕವಾಗಬೇಕೋ ಬೇಡವೊ ಎಂಬ ಇದೆ ಸ್ಥನಾಗಿ ನಿಶ್ಚಯವಾಗಬೇಕು. ಆದರೆ ಈ ಎವೋರ್ಡಿನಲ್ಲಿ, ಅದರ ಸುದ್ದಿ ಇಲ್ಲ ಅದನ್ನು ಇಂಗ್ಲೆಂಡಿನಲ್ಲಿ ಮೇಪಿನಿಂದ ಕತ್ತರಿಸಿ ಬೇರೆ ಇಟ್ಟಿದೆ

* * * *

ಸಿಂಧವನ್ನು ಪ್ರತ್ಯೇಕ ಮಾಡಿದರೆ ಹೀಗೆ, ಬೊಂಬಾಯಿಗೆ ಸೇರಿದ್ದರೆ ಹೀಗೆ ಎಂದು ಎರಡೂ ನಮೂನೆ ಸ್ಥಾನಹಂಚಿಕೊಡಲಾಗಿದೆ ಬರ್ಮಕ್ಕೆ ಹಾಗೆಯೇ ಮಾಡಲಿಲ್ಲವೇಕೆ? ಬರ್ಮವು ಬೇರೆಯಾಗಬೇಕೆಂದು ನಿರ್ಧಾರ.

* * * *

ಇಷ್ಟಾದರೂ ಎಲ್ಲವೂ ಮಾಯೆಯೆ! ಸುಧಾರಣೆಗಳ ಮೂಲ ಎಲ್ಲಿ? ಗೊತ್ತಿಲ್ಲ. ಎಸೆಂಬ್ಲಿಯ ವಿಚಾರವೆಂತು? ಗೊತ್ತಿಲ್ಲ ಫೆಡರೇಶನೋ? ತಿಳಿದಿಲ್ಲ

* * * *

ಅಡಿಸ್ಥಳವಿಲ್ಲ ದೊಡ್ಡ ಬಂಗಲೆ ಕಟ್ಟಿ, ಬಿಡಾರಕ್ಕೆ ಕೋಣೆ ಹಂಚಿ ಆಯಿತು. ಮೇಲೆ ಮಾಡು ಇಲ್ಲ, ಮಳೆಗೆ ಉಂಟಾದರೂ ಎಷ್ಟು ದೊಡ್ಡದೆಂದೂ ಇಲ್ಲ. ಬಿಡಾರದವರಲ್ಲಿ ನಾಲ್ವತ್ತು ಮಂದಿಗೆ ಒಂದು ಕೋಣೆ; ಒಬ್ಬನಿಗೆ ನಾಲ್ವತ್ತು ಕೋಣೆ ಹೀಗಿರಬೇಕಾಗಿದೆ. ಮನೆಯೊಳಗ ಕೊಡೆ ಹಿಡಿದುಕೊಂಡು ತಿರಗಬೇಕು! ಇದು ಎವೋರ್ಡು ಮಂದಿರದ ಸುಂದರ ಚಿತ್ರ

* * * *

ಕೆಲವು ವಾರದ ಹಿಂದೆ ನಮ್ಮ 'ನೋಟಗಳಲ್ಲಿ' ಶಾಲೆ ಮರಾರದಲ್ಲಿ ಹಚ್ಚಿದ 'Drive slowly, School Zone' ಎಂಬದರ ವಿಷಯ ಟೀಕಿಸಿದ್ದೆವೆ.

* * * *

ಬುಧವಾರ ತಾರೀಕು (೨೯-೮-'೩೨)ನೇ ಬೆಳಿಗ್ಗೆ ೯ ಗಂಟೆಗೆ ಈ ಸ್ಥಾನ್‌ಬೋರ್ಡಿನ ಮೇಲೆ ಬರೆದಕತೆಯೇ ಮೋಟರಕಾರು ಮಾಲಕನೊಬ್ಬನು ಒಬ್ಬ ವಿದ್ಯಾರ್ಥಿಯ ಮೇಲೆ ತನ್ನ ಕಾರನ್ನು 'Slowly drive' ಮಾಡಿದನು. ಸ್ಥಾನ್‌ಬೋರ್ಡಿನ ಸಾರ್ಥಕವು ಆದುತು—ದೈವವಶಾತ್ ವಿದ್ಯಾರ್ಥಿಗೆ ಹೆಚ್ಚಿನ ಉಪಾಯವಾಗಲಿಲ್ಲ.

* * * *

ಇನಿಷ್ಟದರೂ ಬಸ್ಸುಡ್ರಾಯ್ವರರೂ ಕಾರು ಡ್ರಾಯ್ವರರೂ ಈ ಬೋರ್ಡಿನ 'Drive slowly' ಎಂಬ ಅರ್ಥವನ್ನು 'ನಿಧಾನವಾಗಿ ಓಡಿಸಿರಿ' ಎಂದು ತಿಳಿದರೆ ಇನ್ನುಮುಂದಕ್ಕೆ ಇಂಥಾ ಅಪಾಯಗಳು ಸಂಭವಿಸಲಿಕ್ಕೆ ಎಡೆ ಇಲ್ಲವೆಂತಾಗುವುದು. ಆ ಬೋರ್ಡಿನ ಬಳಿ ಕಾರನ್ನು ನಿಲ್ಲಿಸಿ, ನಂತರ ಹೊರಟರೆ ರಗಳೆ ಇರದು.

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE
Seiberling's Exclusive Quality.



TRIED & PROVED.

USE A Seiberling Tube
IN
A Seiberling Tire.

You cannot find a better combination.

ಅಗ್ರಲೇಖ
ಶ್ರೀ ಕೃಷ್ಣ
ಸ್ಫುಟವಿಚಾರಗಳು
ಟೀಕೆಗಳು . . . .
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೩
ಒಳದೇಶ ವರ್ತಮಾನ ೩
ದಕ್ಷಿಣ ಕನ್ನಡ — ಮಂಗಳೂರು, ಕಾಸರಗೋಡು, ಸುರತ್ಕಲ್, ಉಡುಪಿ, ಸೋಮೇಶ್ವರ, ಬಂಟ್ವಾಳ, ಪಾಣೆಮಂಗಳೂರು, ಕಾವಳಕಟ್ಟೆ, ಸಾವೂರು ೬
ವಿವಿಧ ಸಮಾಚಾರಗಳು ೧೧
ಛೀಃ ರಾಜಾ ಛೀಃ! ೨
ರಾಜಾರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ ೧೪
ವಿ. ಜೆ. ಪಟೇಲರ ಸ್ಫುಟವಾಕ್ಯ! . . . ೯

ಸ್ವದೇಶಾಭಿಮಾನಿ.

ತಾ. ೨೬ನೇ ಶುಕ್ರವಾರ ಆಗೋಸ್ಟ್ ೧೯೩೨

ಶ್ರೀ ಕೃಷ್ಣ.

ಶ್ರೀ ಕೃಷ್ಣಾಷ್ಟಮಿಯು ಸಕಲ ಹಿಂದೂಗಳಿಗೂ ಪವಿತ್ರವಾದ ದಿನ, ಅಂದು ಸಮಸ್ತರೂ ಉಪವಾಸವಿದ್ದು, ಶ್ರೀ ಕೃಷ್ಣನ ಜನ್ಮಮುಹೂರ್ತವನ್ನು ಕಾಯುವರು. ಹಿಂದೂಗಳಲ್ಲಿ ಇತರ ಯಾವ ಮಹಾತ್ಮನ ವರ್ಧಂತಿಯನ್ನು ಕೂಡ ಈ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಆಚರಿಸುವುದಿಲ್ಲ. ಏಕೆಂದರೆ ಶ್ರೀ ಕೃಷ್ಣನು ಬ್ರಾಹ್ಮಣರ ದೇವರು ಮಾತ್ರವಾಗಿಲ್ಲ; ಅವನು ಕ್ಷತ್ರಿಯರಿಗೆ ಆದರ್ಶಪುರುಷನೂ, ವೈಶ್ಯರಿಗೆ ಆಶಯಪೂರ್ಣನೂ, ಶೂದ್ರರಿಗೆ ಸಂರಕ್ಷನೂ ಆಗಿದ್ದಾನೆ. ಆದುದರಿಂದ, ಶ್ರೀಕೃಷ್ಣನಿಗೆ ಇಂದು ಆಸೇತುಹಿಮಾಚಲ ಪರ್ಯಂತ ಗೌರವವೂ ಭಕ್ತಿಯೂ ಪೂಜೆಯೂ ಇದೆ.

ನಮ್ಮ ಕಲ್ಪನೆಯನ್ನು ಹುರಿದುಂಬಿಸುವವನೂ, ನಮ್ಮ ಬುದ್ಧಿಶಕ್ತಿಯನ್ನು ಪ್ರಜ್ವಲಿಸುವವನೂ, ನಮ್ಮ ಸಂಕಷ್ಟಗಳಲ್ಲಿ ಆಶೆಯನ್ನುಸುರುವವನೂ, ಆ ದೇವರು ಹಿಂದೂಗಳಿಗೆ ಬೇರೊಬ್ಬನಿಲ್ಲವೆಂದರೂ ಸಲ್ಲುವುದು. ಸೋದರ ಮಾವನ ಬೆದರಿಕೆಯಲ್ಲಿ ಜೈಲಿನ ಬಂಧನದೊಳಗೆ ಜನಿಸಿ, ಯಶೋದೆಯ ಮಡಿಲಿನ ವಿನೀತತೆಯಲ್ಲಿ ಬೆಳೆದು, ಗೋವುಗಳ ಮೇಯಿಸುವಿಕೆಯಲ್ಲಿ ಬಾಲ್ಯವನ್ನು ಕಳೆದು, ನಂದನವನ್ನು ತನ್ನ ಕೊಳಲಿನ ಗೀತಾರವದಿಂದಲೂ, ತನ್ನ ಪ್ರೇಮದ ಪರಮಾವಧಿಯಿಂದಲೂ, ತನ್ನ ಸೇವಾತುರತೆಯಿಂದಲೂ ಮುಗ್ಧಗೊಳಿಸಿದ ಕೃಷ್ಣನ ಪೂರ್ವಜೀವನದ ದೃಶ್ಯದ ಮಾಧುರ್ಯ! ಮೋಹ! ಮುಗ್ಧತೆ!

ಕೌರವ—ಪಾಂಡವರ ಹಗೆತನದಲ್ಲಿ ಭಾರತದಲ್ಲಿ ಪ್ರೇರಿಸಲ್ಪಡುತ್ತ ಮಹಾ ಸಮರಾಗ್ನಿ, ಇಕ್ಕಡೆಗಳಿಂದಲೂ ಪ್ರೋತ್ಸಾಹಕರೂ, ಅನುಯಾಯಿಗಳೂ ಕೂಡಿ ಇಡೀ ಹಿಂದೂದೇಶದ ವೀರಯೋದ್ಧರನ್ನೇ ಬಲಿಯಾಗಿ ಪಡೆಕೊಳ್ಳ ಬಲ್ಲ ಸಂದರ್ಭ, ಈ ಸಂದರ್ಭವನ್ನು ತಪ್ಪಿಸಲು ದೇಶದ ಶಾಂತತೆಯ ಯೋಚನೆಯ ಉದ್ದೇಶದಿಂದ ಕೌರವ ಸಂಧಾನಕ್ಕಾಗಿ ಹೊರಟ ಆ ಮಹಾ ರಾಜನೀತಿಜ್ಞ, ಅಲ್ಲಿಂದ ತಿರಸ್ಕೃತನಾಗಿ ಕಳುಹಿಸಲ್ಪಟ್ಟರೂ, ಮನಸ್ಥೈರ್ಯದಿಂದಲೂ, ಅಸಾಮಾನ್ಯ ಯುಕ್ತಿವಾದದಿಂದಲೂ ಪಾಂಡವರ ಹಿತಬೋಧಕನಾಗಿ ಯುದ್ಧರಂಗದಲ್ಲಿ ಇಳಿದ ಆ ಮಹಾನ್ ಭಾರತ ಸಾರಥಿ, ಯುದ್ಧದಲ್ಲಿ ಚತುರನೆಂದೆಣಿಸಲ್ಪಟ್ಟರೂ, ಕೌರವರ ಸೈನ್ಯದ ವಿಶಾಲ ಪಡೆಯೊಳಗಿನ ಬಂಧುಬಾಂಧವರನ್ನು ನೋಡಿ, ಮೋಹದಿಂದ ಮನಗುಂದಿದ ಅರ್ಜುನನಲ್ಲಿ ವೀರಾವೇಶವನ್ನುಸುರಲು, ಮೋಹವನ್ನು ಪರಿಹರಿಸಲು ಘನ ಗಂಭೀರವಾಗಿ ಉಚ್ಚರಿಸಿದ ಗೀತೆಯ ಅಸಮಾನ ತತ್ವಬೋಧಕನು; ಕೌರವರ ಕಡೆಯ ಅತ್ಯಂತ ಪ್ರಬಲರಾಗಿದ್ದ ಕರ್ಣಭೀಷ್ಮರನ್ನು ನಿರ್ಬಲರಾಗಿ ಮಾಡಿದ ಚತುರ ಯುಕ್ತಿವಾದಿ; ಆ ಆ ಕುರುಕ್ಷೇತ್ರದ, ಧರ್ಮಕ್ಷೇತ್ರದ ಸಮರಾಂಗಣದಲ್ಲಿ ಅಭಿಮನ್ಯುವಿನ ಹತ್ಯೆಯ ಅಧರ್ಮವನ್ನು— ಕರ್ಣನ ಹತ್ಯೆಯ [illegible] ಸೋಲಿಸಿಯೂ ಪಾಂಡವರನ್ನು ಗೆಲಿಸಿಯೂ ಧರ್ಮರಾಜ್ಯವನ್ನು ಸ್ಥಾಪನೆಮಾಡಲು ಕಾರಣನಾದ, ಮಹಾಭಾರತ ಸೂತ್ರಧಾರನಾಗಿದ್ದ ಕೃಷ್ಣನ ಉತ್ತರ ಜೀವನದ ದೃಶ್ಯದ ಮಹತ್ವ! ಗಾಂಭೀರ್ಯ! ಅಗಾಧತೆ!

ಅವನು ಸಂಸಾರಿಗಳಿಗೆ ಶ್ರೇಷ್ಠ ಸಂಸಾರಿಯು; ತ್ಯಾಗಿಗೆ ಶ್ರೇಷ್ಠತ್ಯಾಗಿಯು, ರಾಜನೀತಿಯಲ್ಲಿ ಅವನ ವಿಶಾರದತೆ ಇನ್ನೊಬ್ಬರಿಗಿಲ್ಲ—ಅದು ಅಮಾತ್ಯ-ಚಾಣಾಕ್ಷರ ಸ್ವಾರ್ಥಮಯ, ಅಧರ್ಮಮಯ, ತಂತ್ರವಲ್ಲ; ನ್ಯಾಯದ, ಶ್ರೇಷ್ಠ ಉದ್ದೇಶವುಳ್ಳ ರಾಜನೀತಿ, ಅದರಲ್ಲಿ ಚಾಣಾಕ್ಷಣ ಹಗೆತನದ ಕೇಶಪ್ರತಿಜ್ಞೆಯಿಲ್ಲ; ಪಾಂಡವರನ್ನು ಈ ವಿಶಾಲ ಭಾರತದೊಳಗಣ ಐದೇ ಗ್ರಾಮಗಳಿಂದ ಸಂತುಷ್ಟಿಪಡಿಸಿಯಾದರೂ ಸಂಧಾನವನ್ನು ಹೊಂದುವ ವಿನೀತತೆಯಿದೆ, ಚಾಣಾಕ್ಷನಿಗಿಂತಲೂ ಕಡಿಮೆಯಾಗದ ದೃಢಸಂಕಲ್ಪದೊಡನೆ ಚಾಣಾಕ್ಷನಲ್ಲಿ ಕಂಡುಬಾರದ ಮಾನವ ಪ್ರೇಮವು ಅವನಲ್ಲಿದೆ. ಶ್ರೀ ಕೃಷ್ಣನ ಯುಕ್ತಿವಾದದಲ್ಲಿ ದೈವೀಕತೆ ಇದೆ

ಶ್ರೀ ಕೃಷ್ಣ ಗೀತೆಯು ಲೋಕದ ಎಲ್ಲಾ ಮತಾನುಯಾಯಿಗಳಿಂದಲೂ ಮಾನಿಸಲ್ಪಟ್ಟಿದೆ. ಅದರ ಗಹನ ತತ್ವಗಳು, ಅದರ ಉತ್ತೇಜಕ ವಾಕ್ಯಗಳು ಮತ್ತು ಅದರ ಸಂಸ್ಕಾರೋತ್ತಾರಕ ಬೋಧೆಗಳು ಪ್ರತಿವ್ಯಕ್ತಿಗೂ, ಸಮುದಾಯಕ್ಕೂ ಸಹಾಯಕವಾದುವುಗಳಾಗಿವೆ. ತಿಲಕನು ಅದರಲ್ಲಿ ಯುಕ್ತಿವಾದವನ್ನು ಕಾಣುವನು, ಅರವಿಂದನು ಅದರಲ್ಲಿ ಶಕ್ತಿವಾದವನ್ನು ಕಾಣುವನು, ಗಾಂಧಿಯು ಅದರಲ್ಲಿ ಅಹಿಂಸೆಯನ್ನು ಕಾಣುವನು ಆದರೆ ಕೃಷ್ಣನ ಮೂರ್ತಿಯು ಈ ಗೀತೆಯ ಎಲ್ಲಾ ತತ್ವಗಳನ್ನೂ ಒಳಗೊಂಡಿದೆ 'ಆ ಸಹಾಸ್ಯವದನದ ಪ್ರೇಮ, ಆ ಶುಭ್ರ ವಿಶಾಲ ಲಲಾಟದ ಅಂತರ್ಯದೊಳಗಿನ ಜ್ಞಾನ, ಬಲಗೈಯೊಳಗಿನ ಚಕ್ರ; ಎಡಗೈಯೊಳಗಿನ ಶಂಖ, ಇವು ಅಪ್ರತಿಮಯೋಧನನ್ನು ಚಿತ್ರಿಸುತ್ತಿವೆ.

ನಾವಾದರೂ ಅವನಂತೆಯೇ ಆಗಬೇಡವೇ?

ವಿದೇಶ ವರ್ತಮಾನ.

— ಅಮೇರಿಕಾದಲ್ಲಿ ಲಿಂಡ್‌ಬರ್ಗ್ ಮಗುವಿನ ಸರಚೋರಿಯ ಕಥೆಯು ಲೋಕವಿಖ್ಯಾತವಾದುದಷ್ಟೆ! ದುಷ್ಟರು ಆ ಮಗುವನ್ನು ಕೊಂದು ಇಡೀ ಲೋಕವನ್ನೇ ದಗ್ಧಗೊಳಿಸಿದ್ದರು ಇದೇ ತಾ ೨೬ನೇ ದಿನ ಆ ಮಗುವಿನ ತಾಯಿಯು ಇನ್ನೊಂದು ಗಂಡುಮಗುವನ್ನು ಹೆತ್ತಿದ್ದಾಳೆ ಈ ವಾರ್ತೆಯನ್ನು ಕೇಳಿ ಅಮೇರಿಕಾವು ಆನಂದಗೊಂಡಿದೆ

—ಲಂಕಶಯರ್ ಮುಷ್ಕರವು ದಿನೇ ದಿನೇ ಪ್ರಬಲವಾಗುತ್ತಿದೆ ಸಂಬಳ ಕಡಿಮೆಮಾಡಿದರೆ ಕೆಲಸಕ್ಕೆ ಬಾರೆವೆಂದು ಕೆಲಸಗಾರರೆಂದಿದ್ದಾರೆ. ೨೦೦,೦೦೦ ಜನರು ಕಟಿಬದ್ಧರಾಗಿದ್ದಾರೆ

— "ನಾವೇನು ಮಾಡಬೇಕು? ಜಾತೀಯ ವಾದವನ್ನು ಮುಗಿಸಿರಿ! ಎಂದು ಇಂಡಿಯದವರೇ ನಮಗೆ ಹೇಳಿದರು ನಾವು ಮುಗಿಸಿದೆವು ಕೆಲವರು ದೂರುತ್ತಾರೆ ಕೆಲವರು ಹೊಗಳುತ್ತಾರೆ" ಎಂದು ಸಾಮುವೇಲ್ ಹೋರ್ ಲಂಡನಿನಲ್ಲಿ ಹೇಳಿದರು.

— ಒಟ್ಟಾವಾ ಪರಿಷತ್ತು ಮುಗಿಯಿತು ಪ್ರತಿನಿಧಿಗಳಿಗೆ ಮಂಗಲ ಬಯಸಲಾಯಿತು ಬ್ರಿಟನರಿಗೆ ನಿಜವಾಗಿಯೂ ಜಯವಾಯಿತೆಂದು ಎಲ್ಲಾ ಪ್ರತಿನಿಧಿಗಳೂ ಹೇಳಿದರು.

— ಇಂಗ್ಲೆಂಡಿನಲ್ಲಿ ಭಾರೀ ಸೆಕೆ ೨೧ ವರ್ಷಗಳಲ್ಲಿ ಇಂತಹ ಉಷ್ಣವೇರಲಿಲ್ಲವಂತೆ ಆಫೀಸುಗಳ ನೌಕರರು ನೆಕ್ಟಾಯಿ ಕೊಲ್ಲರುಗಳನ್ನು ಮೂಲೆಗಿಟ್ಟು ಬರೇ ಶರ್ಟಿನಿಂದಲೇ ಆಫೀಸಿಗೆ ತೆರಳುತ್ತಿರುವರು ಸ್ತ್ರೀಪುರುಷರು ಪ್ರತಿದಿನವೂ ನೀರಲ್ಲೇ ಮುಳುಗುತ್ತಿರುವರು. ಮಕ್ಕಳು ಮೈಮೇಲೆ ವಸ್ತ್ರವನ್ನಿಡಲು ಸಮ್ಮತಿಸುವುದಿಲ್ಲ ೧೯೧೧ನೇ ಆಗೋಸ್ಟು ೯ರಲ್ಲಿ ಇಂತಹ ಸೆಕೆಯು ಹುಟ್ಟಿದ್ದಿತಂತೆ! ಅದನ್ನು ಕೂಡ ಈ ಸಲದ ಸೆಕೆಯು ಮೀರುತ್ತಿದೆ.

— ಪಾರ್ಲಿಮೆಂಟಿನ ಸದಸ್ಯರಾದ ಅಮೆರಿ ಎಂಬವರ ಮಗನಾದ ಜೋರ್ಜ್ ಅಮೆರಿ ಎಂಬವನು ಚಲಚಿತ್ರ ಕಂಪೆನಿಯಲ್ಲಿದ್ದ ಲೂಸಿ ಇವೆಲೈನ್ ವಿಂಗ್ ಎಂಬವಳನ್ನು ವಿವಾಹವಾಗುವೆನೆಂದು ರಿಜಿಸ್ಟ್ರಾರರ ಬಳಿಗೆ ಹೋದನು. ಈ ಸುದ್ದಿಯು ತಂದೆತಾಯಿಗಳಿಗೆ ತಿಳಿಯಲು ಅವರು ಅವಾಕ್ಕಾಗಿ ರಿಜಿಸ್ಟ್ರಾರರಿಗೆ ತಂತಿಯಿತ್ತು ವಿವಾಹವನ್ನು ತಡೆದರು.

—ಜರ್ಮನಿಯಲ್ಲಿ ಕಮ್ಯೂನಿಸ್ಟರನ್ನು ಕೊಂದ ೫ ಮಂದಿ ನಾಜಿಗಳಿಗೆ ಮರಣಶಿಕ್ಷೆ ವಿಧಿಸಲ್ಪಟ್ಟಿತು, ಅಲ್ಲಿ ಬಹು ಕ್ಷೋಭೆಯುದ್ಭವಿಸಿದೆ.

ವಿಮಾನದ ಮೂಲಕ ಹೋಗಲಿರುವರೆಂದು ತಿಳಿಯಬರುತ್ತದೆ.

ಒಳದೇಶ ವರ್ತಮಾನ

— ಮುಂಬಾಯಿಯಲ್ಲಿ ಪಿಕೆಟಿಂಗ್ ಕೆಲಸವು ನಡೆಯುತ್ತಿದೆ. ಅನೇಕರು ಸೆರೆಮನೆಗೆ ನಡೆದಿರುವರು ಕಳೆದ ಗುರುವಾರ ಕೊಂಗ್ರೆಸ್ ದಿನಾಚರಣೆಯೂ ಅತ್ಯಂದೂ ಹರ್ತಾಳವಾಚರಿಸಲ್ಪಟ್ಟಿತ್ತೆಂದೂ ವಾರ್ತೆಯಿದೆ.

— ಶ್ರೀ ವಲ್ಲಭಭಾಯಿ ಪಟೇಲರ ಪುತ್ರಿ ಶ್ರೀ ಮಣಿಬೆನ್ ಪಟೇಲರನ್ನು ಬೆಳಗಾವಿಯ ಜೈಲಿಗೆ ಕೊಂಡೊಯ್ದರು.

— ಅಹ್ಮದಾಬಾದಿನಲ್ಲಿ ದರ್ಶನ ದಿನಾಚರಣೆಯು ತಾ ೨೩ರಲ್ಲಿ ನಡೆದು ೫ ಮಂದಿಗಳು ಸೆರೆಹಿಡಿಯಲ್ಪಟ್ಟರು

—ಲಕ್ನೋವಿನ ಟ್ರೆಜರಿ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನೇರಿಸಿದುದಕ್ಕಾಗಿ ಸಮರಸಂಸ್ಥೆಯ ಅನೇಕರನ್ನು ಸೆರೆಹಿಡಿದಿರುವರು

—ಅಖಿಲ ಭಾರತ ಕಾಂಗ್ರೆಸ್ಸಿನ ಸದ್ಯದ ಅಧ್ಯಕ್ಷರಾದ ಡಾಕ್ಟರ್ ಕಿಚಲುರವರು ತನ್ನ ದಸ್ತಗಿರಿಯನ್ನು ನಿರೀಕ್ಷಿಸಿ ಸೆರೆಯ ಸಾಮಾಗ್ರಿಗಳ ಸಮೇತ ದಿಲ್ಲಿಗೆ ಹೋಗಿ ಕಾನೂನು ಉಲ್ಲಂಘಿಸಿರುವರು

- ಜಾತೀಯ ಸಮಸ್ಯೆಯ ತೀರ್ಮಾನದಿಂದ ಹಿಂದೂ ದೇಶದಲ್ಲಿ ಭಾವೀರಾಜ್ಯಾಂಗ ರಚನೆಯೂ ಪ್ರಜಾಪ್ರಭುತ್ವದ ಸೊಲ್ಲೂ ಅಡಗಿಯೇ ಹೋಗುವುದೆಂದು ಹೆಚ್ಚಿನ ದೇಶಧುರೀಣರ ಅಭಿಮತ

— ಶ್ರೀ ಸುಭಾಷ್‌ಚಂದ್ರ ಬೋಸರ ಸ್ಥಿತಿಯು ಸೆರೆಮನೆಯಲ್ಲಿ ವಿಷಮವಾಗಿದೆಯೆಂದೂ ಅವರಲ್ಲಿ ಕ್ಷಯರೋಗದ ಚಿಹ್ನೆಯು ಕಾಣಬರುತ್ತಿದೆಯೆಂದೂ ಪ್ರಕಟವಾಗಿದೆ

— ಬಂಗಾಳದಲ್ಲಿ ಒಟ್ಟು ೧೧೦೦೦ ಜನರನ್ನು ರಾಜಕೀಯ ಚಳವಳದ ಸಂಬಂಧವಾಗಿ ಸೆರೆಹಿಡಿಯಲಾಯಿತೆಂದೂ ಅವರಲ್ಲಿ ೯೯೬೭ ಜನರನ್ನು ಶಿಕ್ಷಿಸಲಾಯಿತೆಂದೂ ಪ್ರಕಟನೆ!

— ಓಡುತ್ತಿರುವ ರೈಲಿನಲ್ಲಿದ್ದ ಒಬ್ಬ ವರ್ತಕನು ೧೦,೦೦೦ ರೂಪಾಯಿಯ ನೋಟನ್ನು ಜೇಬಿನಲ್ಲಿಟ್ಟಿದ್ದ ಹೈದರಾಬಾದಿನಲ್ಲಿಳಿಯುವಾಗ ಅವನ ಜೇಬು ಬರಿದು! ಪೋಲೀಸರು ತನಿಖೆ ನಡೆಸುತ್ತಿದ್ದಾರೆ

—ತ್ರಿಚ್ಚಿಕೇರಿನಲ್ಲಿ ಒಂದು ಬಸ್ಸು ಓಡುತ್ತಿರುವಾಗ ಟಿಪ್ಪು ಸಾಹೇಬನೆಂಬವನು ಒಬ್ಬನ ಕಿಸೆಯಿಂದ ಪಕೇಟೊಂದನ್ನು ಬಾರಿಸಿ, ಬಸ್ಸಿನಿಂದ ಕೆಳಹಾರಲಿರುವಾಗ ಅವನನ್ನು ಹಿಡಿದು ಕೈದುಮಾಡಿದರು

— ದಿಲ್ಲಿಯ ಕೇಂಪ್ ಜೈಲಿನಲ್ಲಿ ರಾಜಕೀಯವಾದಿಗಳು ಅಶ್ರದ್ಧೆಯಿಂದ ನಡೆದುದಕ್ಕಾಗಿ ಲಾಠಿ ಚಾರ್ಜು ನಡೆದಿದೆಯಾಗಿ ತಿಳಿದುಬಂದಿದೆ

ಪಂಡಿತ ಮಾಲವೀಯರು ಕಲ್ಕತ್ತದಲ್ಲಿ ಒಂದು ಸ್ವದೇಶಿ ವ್ಯಾಪಾರಿಕ ಮ್ಯೂಸಿಯಮನ್ನು ತೆರೆದರು

—ಆಂಧ್ರದೇಶದಲ್ಲಿ ತೆನಾಲಿ ಎಂಬಲ್ಲಿ ತಾಲೂಕು ಪರಿಷತ್ತು ಜರಗಿ ಮೆರವಣಿಗೆ ಹೋಗುವಾಗ ಲಾಠೀ ಪ್ರಹರವಾಗಿ ೬೦ ಮಂದಿಗಳು ಘಾಯಗೊಂಡರು ಕೆಲವರು ಸೆರೆಹಿಡಿಯಲ್ಪಟ್ಟರು

—ಉದಕಮಂಡಲದಲ್ಲಿನ ಶ್ರೀ ಕೃಷ್ಣ ವಿಲಾಸ ಸ್ಟೋರ್ಸಿನ ಪ್ರೊಪ್ರೈಟರ್, ಮಾಧವನ್ ಎಂಬವನು ಹಣದಡಚಣೆಯ ಬೇನೆಯಿಂದಾಗಿ ಅಂಗಡಿಯೊಳಗೆ ಕತ್ತಿಗೆ ನೇಣುಹಾಕಿಕೊಂಡು ಮಡಿದನು.

—ಮುಂಬಾಯಿಯಲ್ಲಿ ಪೋಲೀಸರು ಶೋಧನೆನಡೆಸಿ ಒಂದು ಮನೆಯಿಂದ ರಾಶಿರಾಶಿ ಕರಪತ್ರಗಳನ್ನು ಹೊರತಂದರು

— ಕಣ್ಣನೂರು ಜೈಲಿನಲ್ಲಿ ತಾ ೧೧ರಿಂದ ೨೩ರ ತನಕ ಕೆಲವು ಸ್ವಯಂಸೇವಕರು ನಿರಶನವ್ರತವನ್ನು ಕೈಗೊಂಡರು ಶ್ರೀ ಕೆ ಕೇಳಪ್ಪನ್ ಎಂಬವರು ಅವರನ್ನು ಸಮಾಧಾನಪಡಿಸಿರುವರು ಸಿ ಕ್ಲಾಸ್ ಕೈದಿಗಳ ಅಸಮರ್ಪಕವಾದ ರಕ್ಷಣೆಯ ನಿಷೇಧಾರ್ಥವಾಗಿ ಈ ವ್ರತವಂತೆ

ಅಂಥಮಾನ ದ್ವೀಪಕ್ಕೆ ತನ್ನ ೧೪ನೇ ವರ್ಷ ಪ್ರಾಯದಲ್ಲಿ ೧೯೦೬ರಲ್ಲಿ ವರ್ಗಾಯಿಸಲ್ಪಟ್ಟ ಲಕ್ಷ್ಮೀನರಸ ರೆಡ್ಡಿಯೆಂಬವನ ಹೇಳಿಕೆ ಮೇರೆಗೆ ಅಲ್ಲಿ ಒಟ್ಟು ೪೦೦೦೦ ಜನ ಸಂಖ್ಯೆಯಿದೆಯೆಂದೂ, ಅವರಲ್ಲಿ ಸುಮಾರು ೧೪೦೦೦ ಜನರು ವಿವಿಧ ಶಿಕ್ಷೆಗೊಳಗಾದ ಕ್ರಾಂತಿಕಾರರೆಂದೂ, ಒಟ್ಟು ೧೯ ರಾಜಕೀಯ ಕೈದಿಗಳೂ ಅಲ್ಲಿರುವರೆಂದೂ ತಿಳಿದುಬಂದಿದೆ ಅಲ್ಲಿ ಮಲೇರಿಯಾವು ಸರ್ವತ್ರವಿದೆಯೆಂದೂ ಅವನು ಹೇಳಿರುವನು

— ತಾ. ೨೪ರಲ್ಲಿ ಢಕ್ಕಾದಲ್ಲಿ ನಡೆದ ಗುಂಡೆಸೆತದ ಮೆಚ್ಚು ಸೂಚನೆಗಾಗಿ ಗ್ರೇಸ್‌ಬಿಯವರಿಗೆ ಗವರ್ನರರು ತಂತಿ ಕೊಟ್ಟಿದ್ದಾರೆ.

ಮುಜಾಫರ್‌ಪುರ ಡಿಸ್ಟ್ರಿಕ್ಟಿನ ಸೆಕ್ರ ಎಂಬ ಹಳ್ಳಿಯಲ್ಲಿ ಒಬ್ಬಳು ಸ್ತ್ರೀಯು ಹೆರಿಗೆ ನೋವಿನೊಡನೆ ಒಂದು ಮಗುವನ್ನು ಹೆತ್ತಳು ಅದು ಬಹಳ ಸಣ್ಣದಾಗಿತ್ತು, ಮಧ್ಯಾಹ್ನವಾಗುವುದರೊಳಗೆ ಇನ್ನೊಂದು ಮಗುವನ್ನು ಹೆತ್ತಳು. ಸಂಕಟವು ವಿಪರೀತವಾಗುತ್ತಿರಲು ಕತ್ತಲೆಯಾಗುತ್ತಲೇ ಮತ್ತೂ ಒಂದು ಮಗುವನ್ನು ಹಡೆದಳು ಮೂರು ಶಿಶುಗಳೂ ಇಷ್ಟರ ತನಕ ಸೌಖ್ಯವಾಗಿವೆ ತಾಯಿಯು ಮಾತ್ರ ಬಹು ವೇದನೆಗೊಳಗಾಗಿದ್ದಾಳೆ.

ಫೋರ್ಟ ಆರ್ಯ ಸಮಾಜ ಮುಂಬೈ

ಈ ವರ್ಷದಲ್ಲಿಯೂ ಶ್ರೀಯುತರುಗಳಾದ ವಾಸುದೇವ, ಆರ್ ಕೆ ಸುವರ್ಣ, ನಾರಾಯಣ ಬಂಗೇರ, ಕೆ ಅಪ್ಪಣ್ಣ ಮತ್ತು ಕೆ ಶಟ್ಟಿಚ ಎಂಬ್ಬ ಐದು ಮಹನೀಯರುಗಳು ಹೊಸವಾಗಿ ಯಜ್ಞೋಪವೀತಧಾರಣೆಗೈದು ಶ್ರೇಷ್ಠವಾದ ಆರ್ಯಧರ್ಮಾಚರಣೆಯಿಂದ ನಡೆಯಲಿಕ್ಕೆ ಪ್ರತಿಜ್ಞೆ ಮಾಡಿಕೊಂಡರೆಂಬುದು ಬಹಳ ಶ್ಲಾಘನೀಯವಾಗಿರುತ್ತದೆ

— ಮುಂಬ್ಬಾಯಲ್ಲಿ ವಿದೇಶಿ ಸ್ಟೀಮರಿನ ಮೂಲಕ ಅಕ್ಕಿ ತರಿಸುತ್ತಿದ್ದ ಅಕ್ಕಿ ವ್ಯಾಪಾರಿಗಳ ಅಂಗಡಿಗಳು ಪಿಕೆಟ್ ಮಾಡಲ್ಪಡುತ್ತಿವೆ

— ಶ್ರೀ ಶಿವಪ್ರಸಾದ ಗುಪ್ತರನ್ನು ಕೈದುಮಾಡಿದುದಕ್ಕಾಗಿ ಬನಾರಿಸ್‌ನಲ್ಲಿ ಹರ್ತಾಳವಾಚರಿಸಲ್ಪಟ್ಟಿತು

— ಮುಂಬಾಯಿಯಲ್ಲಿ ಸದ್ಯದಲ್ಲೇ 'ರಾಷ್ಟ್ರೀಯ ಕರ್ನಾಟಕದವರ ಸೇವಾಸಂಘ'ವೆಂಬ ಸಂಸ್ಥೆಯೊಂದು ಶ್ರೀ ವಾಸುದೇವರಾವ್ ಬರೂರ್‌ಕರ್ ಇವರ ನೇತೃತ್ವದಲ್ಲಿ ಜರಗಲಿರುವುದು

ಡಿಲ್ಲಿ ಮುನಿಸಿಪಾಲ ಕಮಿಟಿಯ ಸದಸ್ಯರಾದ ಲಾಲಾ ದೇಶಬಂಧು ಎಂಬವರು ಚಳವಳಿಕ್ಕೆ ಸಹಾನುಭೂತಿಯನ್ನೀಯುವವರೆಂಬ ಅಪಾದನೆಯ ಮೇಲೆ ಆ ಸದಸ್ಯತನದಿಂದ ತೆಗೆದುಹಾಕಲ್ಪಟ್ಟಿರುವರು

— ಡಿಲ್ಲಿಯಲ್ಲಿ 'ಹಿಂದಿ ಸಂದೇಶ'ವೆಂಬ ವೃತ್ತಪತ್ರಿಕೆಯು ೬೦೦ ರೂಪಾಯಿ ಭದ್ರತೆ ಕೊಡಬೇಕೆಂದಾಜ್ಞೆಯಾಗಿದೆ.

ಕಲ್ಕತ್ತಾ ಬನಾರಿಸ್ ಮುದ್ರಾಸು ಮೊದಲಾದೆಡೆಗಳಲ್ಲಿ ಮೊನ್ನೆ ಓಡುವ ರೈಲುಗಳನ್ನು ಸ್ವಯಂಸೇವಕರು ಸರಪಣಿ ಎಳೆದು ನಿಲ್ಲಿಸಿದರು ಅನೇಕರನ್ನು ಕೈದುಮಾಡಲಾಗಿದೆ

— ಕಾಂಗ್ರಾ ಜಿಲ್ಲೆಯಲ್ಲಿ ತರುಣಿಯೊಬ್ಬಳು ಸಾಯ ವರಣದಿಂದ ದುಃಖಿತಳಾಗಿ ನಿಶ್ಯಕ್ತಳಾಗಿ ಮಲಗಿರುವಳು ಆಹಾರವನ್ನು ಸೇವಿಸದೆ ಒಂದು ತಿಂಗಳು ದಾಟಿತು

— ಕಾನ್ಪುರದಲ್ಲಿ ಹರ್ತಾಳಗಳಾಗದಂತೆ ಎಚ್ಚರಪಡಲು ಕೆಲವು ಮಹನೀಯರುಗಳು ಒಟ್ಟುಗೂಡಿ ಒಂದು ಸಂಘ ಸ್ಥಾಪನೆ ಮಾಡಲಿರುವರು

— ಕಳೆದ ವಾರ ಕಲಕತ್ತದಲ್ಲಿ ಭೂಕಂಪನವು ಆಯಿತು ಅಲ್ಲಿಂದ ೪೦೦ ಮೈಲು ದೂರವಿರುವ ವಿಟ್ಸುಗಡ ಎಂಬಲ್ಲೂ ಬಹಳ ಭೂಕಂಪ!

ಬರ್ಮಾ ದಂಗೆಯಲ್ಲಿ ಭಾಗವಹಿಸಿದವರಲ್ಲಿ ೩೭ ಮಂದಿಗಳನ್ನು ದ್ವೀಪಾಂತರಕ್ಕೂ ೯ ಮಂದಿಗಳನ್ನು ಪಾಶಿಗೂ ಕಳುಹಿಸಲಿರುವರು

— ನಾಗಪುರದ ಸೆರೆಯಲ್ಲಿದ್ದ ಬೆರಿಸ್ಟರ್ ಅಭ್ಯಂಕರರು ವಿಷಮ ಕಾಯಿಲೆಗೊಳಗಾಗಿರುವುದರಿಂದ ಅವರನ್ನು ಬಿಡುಗಡೆ ಮಾಡಿರುವರು

— ಮುಂಬಯಿಯಲ್ಲಿ ಹತ್ತಿದಿವಸರು ಕಕ್ಷಿಗಳ ಜೊತೆಯನ್ನು ಹೊತ್ತಿದ್ದ ಅಪಾದಿತನೊಬ್ಬನು ಅಲ್ಲಿಯ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮೇಲೆ ಪಾದರಕ್ಷೆಯನ್ನೆಸೆದು ಓಡಲು ಯತ್ನಿಸಿ ಸೋತನು

ಅಲ್ಲಹಾಬಾದಿನಲ್ಲಿ ಜಿ ಐ ಪಿ ರೈಲ್ವೆಯ ಎಫ್ ಡಿಗೋ ಎಂಬವರನ್ನು ರಾತ್ರಿ ಮನೆಯೊಳಗೆ ಯಾರೋ ಕೊಂದು ನಗನಾಣ್ಯಗಳನ್ನು ಸೂರೆಗೈದರು

ಕಲ್ಕತ್ತದಲ್ಲಿ ಕ್ರಾಂತಿಕರನ್ನು ಕಂಡು ಹಿಡಿಯುವುದಕ್ಕಾಗಿ ಪೋಲೀಸರ ಶೋಧೆಯಾಗುತ್ತಲಿದೆ ಕೆಲವು ವಿದ್ಯಾರ್ಥಿಗಳು ಕೈಗೆ ಸಿಕ್ಕಿರುವರು

— ೧೬೫ ಗಿಳಿಗಳನ್ನು ಒಂದೇ ಗೂಡಿನಲ್ಲಿ ಹಾಕಿ ಅವುಗಳಿಗೆ ಸಂಕಷ್ಟವನ್ನುಂಟುಮಾಡಿದುದಕ್ಕಾಗಿ ಕೊಲೊಂಬೊದಲ್ಲಿ ಒಬ್ಬನಿಗೆ ಇಡೀ ೯ ರೂಪಾಯಿ ಜುಲುಮಾನೆಯಾಯಿತು

— ಕಲ್ಕತ್ತದಲ್ಲಿ ಡೋಗ್ಲಸರನ್ನು ಕೊಂದ ಪ್ರದ್ಯೋತ್ ಕುಮಾರ್ ಭಟ್ಟಾಚಾರ್ಯನಿಗೆ ಪಾಶಿ ಶಿಕ್ಷೆಯು ಖಾಯಂ ಆಯಿತು.

— ಜಬ್ಬಲಪುರದಲ್ಲಿ ಓಡುತ್ತಿದ್ದ ರೈಲು ಕಾಂಗ್ರೆಸ್‌ವಾಲರಿಂದ ನಿಲ್ಲಿಸಲ್ಪಟ್ಟಿತು.

— ಇಂಡಿಯಾ ಲೀಗ್ ಡೆಲೆಗೇಶನ್ ಒಂದು ಹಿಂದೂದೇಶದ ಪರಿಸ್ಥಿತಿಯನ್ನು ಕಾಣಲು ಬಂದಿದೆಯಷ್ಟೆ! ಇದರ ಸದಸ್ಯರು ಗಾಂಧೀಜಿಯವರನ್ನು ಕಾಣಲಿರುವರು

Latest News.

ಈಗ ಬಂದ ಬಿಸಿ ಬಿಸಿ ವಾರ್ತೆ.

ಅಪ್ಪಣೆ ವಿನಹ ಮುಂಬಾಯಿಗೆ ಬಂದಿದುದಕ್ಕಾಗಿ ಮಿಸ್ ಬೆನ್ನರಿಗೆ ಒಂದು ವರ್ಷದ ಸಾಧಾ ಸಜೆ ವಿಧಿಸಲಾಗಿದೆ ಇವರು ನಾನು ತಪ್ಪಿತಸ್ಥಳು ಹೌದೆಂದರು ಇವರನ್ನು ಎರವಾಡದ 'ಎ' ಕ್ಲಾಸಿನಲ್ಲಿರಿಸಲಿರುವರು

ಡೆಕ್ಕಾದಲ್ಲಿ ಎಡಿಶನಲ್ ಸುಪರಿಂಟೆಂಡೆಂಟರಾದ ಮಿ। ಸಿ ಜಿ ಗ್ರೇಸ್‌ಬಿ ಎಂಬವರು ಕಾರಿನಲ್ಲಿ ಕುಳಿತು ಮನೆಗೆ ಹಿಂತಿರುಗುವಾಗ ಯಾರಿಂದಲೋ ಗುಂಡಿನಿಂದ ಹೊಡೆಯಲ್ಪಟ್ಟು ಮುಖದಲ್ಲಿ ಘಾಯಗೊಂಡರು ಘಾತುಕನನ್ನು ಹಿಂಬಾಲಿಸಿ ಗುಂಡುಹೊಡೆದು ಜಖಂಗೊಳಿಸಿ ಹಿಡಿದಿರುವರು ಅವನ ಪರಿಚಯವಾಗಲಿಲ್ಲ ಗ್ರೇಸ್‌ಬಿಯವರು ಸುರಕ್ಷಿತವಾಗಿರುವರು

ಪಂಜಾಬ ರಾಜಕೀಯ ಪರಿಸತ್ತಿನ ಅಧ್ಯಕ್ಷತನವನ್ನು ವಹಿಸಿದ ಡಾ। ಕಿಚುಲೂರವರನ್ನು ಅಮೃತಸರದಲ್ಲಿ ಸೆರೆಹಿಡಿದರು

ಜಿಲ್ಲಾ ಕಲೆಕ್ಟರ್ ದೊರೆಗಳವರು ಮಂಗಳೂರಿನ ಕಸಬಾ ಬಜಾರ ಪಂಚಾಯತ ಕೋರ್ಟಿನ ಮೆಂಬರರೆಲ್ಲರನ್ನೂ ಕಾರಣಾಂತರದಿಂದ ರದ್ದುಪಡಿಸಿರುವರಾಗಿಯೂ ಅದೇ ಕೋರ್ಟಿನ ೧ನೇ ಕ್ಲಾರ್ಕರಾಗಿರುವ ಶಂಕರನಾರಾಯಣರಾಯರನ್ನು ಕೆಲಸದಿಂದ ನಿವೃತ್ತಿಪಡಿಸಿರುವರಾಗಿಯೂ ಆ ಸಂಬಂಧವಾಗಿ ಎಲ್ಲಾ ಮೆಂಬರರಿಗೂ, ಸದ್ರಿ ಕ್ಲಾರ್ಕರಿಗೂ ನೋಟೀಸು ಮೂಲಕ ತಿಳಿಸಿರುವರಾಗಿ ತಿಳಿಯಬರುತ್ತದೆ

ದಕ್ಷಿಣ ಕನ್ನಡ

ಮಂಗಳೂರು: — ಮುನಿಸಿಪಾಲಿಟಿಯು ಬಾವಟೆಗುಡ್ಡೆಯ ಲೈಬ್ರರಿಯನ್ನು ತೆರೆಯಲು ಸಿದ್ಧತೆಯನ್ನು ಮಾಡಿದೆಯಾಗಿಯೂ ಇಷ್ಟರಲ್ಲೇ ೨೧೧–೯–೩ ಮೌಲ್ಯದ ಗ್ರಂಥಗಳನ್ನು ಕೊಂಡುಕೊಂಡಿರುವುದಾಗಿಯೂ ತಿಳಿಸಲು ತುಂಬಾ ಸಂತೋಷವಾಗುತ್ತದೆ

ಸ್ವದೇಶಿ ಪ್ರಚಾರ ಉದ್ದೇಶದಿಂದ ಇಲ್ಲಿ "ದಕ್ಷಿಣ ಕನ್ನಡ ಸ್ವದೇಶಿ ಯುವಕ ಸಂಘ"ವೆಂಬದೊಂದು ಸಂಸ್ಥೆಯು "ಬೈ ಇಂಡಿಯನ್" ಲೀಗಿನಂತಹ ಕೆಲಸಗಳನ್ನು ನಡೆಸಲು ತಲೆದೋರಿದೆಯಾಗಿ ತಿಳಿದುಬಂದಿದೆ

ಪ್ರೊಫೆಸರ ರಾಮರಾಯರ ವಿಚಾರಣೆಯು ಮೊನ್ನೆ ಮುಗಿದು ಅವರಿಗೆ ಆರು ತಿಂಗಳ ಸಜೆ ವಿಧಿಸಲಾಯಿತು.

ಸರ್ಕಲ್ ಇನ್ಸ್‌ಪೆಕ್ಟರರ ಮೇಲೆ ರಾಮರಾಯರು ಹೂಡಿದ ಖಟ್ಲೆಯು ಇನ್ನೂ ತೀರ್ಮಾನಿಸಲ್ಪಡದೆ ಬಾಕಿಯಿದೆಯಾಗಿ ತಿಳಿದು ಬಂದಿದೆ

ಈ ವರುಷದ ಮುದ್ರಾಸು ವಿಶ್ವವಿದ್ಯಾಲಯದ ಬಿ ಎ ಒನರ್ಸ್ ಪರೀಕ್ಷೆಯ ಗಣಿತಶಾಖೆಯಲ್ಲಿ ಉಪ್ಪಿನಂಗಡಿ ಶ್ರೀ ಉಪೇಂದ್ರ ಭಟ್ಟರವರು ಎರಡನೇಯ ತರಗತಿಯಲ್ಲಿ ಉತ್ತೀರ್ಣರಾದರೆಂದು ಪ್ರಕಟಗೊಳಿಸಲ್ಪಟ್ಟಿತ್ತಷ್ಟೆ! ಕಳೆದ ಬುಧವಾರದ ಫೋರ್ಟ್ ಸೈಂಟ್ ಜೋರ್ಜ್ ಗಜೇಟಿನಲ್ಲಿ ಶ್ರೀಯುತರು ಒಂದನೇ ತರಗತಿಯಲ್ಲಿ ಉತ್ತೀರ್ಣರಾಗಿರುವರೆಂದು ಪ್ರಕಟವಾಗಿದೆಯೆಂದು ತಿಳಿಯಿಸಲು ಸಂತೋಷಪಡುತ್ತೇವೆ ಶ್ರೀಯುತರು ಉಪ್ಪಿನಂಗಡಿ ದಿವಂಗತ ಸಾಹುಕಾರ ಗೋಪಾಲಭಟ್ಟರ ಪುತ್ರರು ಇವರು ಬಂಟ್ವಾಳದ ಎಸ್ ವಿ ಎಸ್ ಟೆಂಪಲ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದಾರೆ

ಇಲ್ಲಿಯ ಶ್ರೀ ಕೃಷ್ಣಾ ಸಿನೇಮ ಮಂದಿರದಲ್ಲಿ ಬೇಗನೇ 'ಭಕ್ತ ಸೂರ್‌ದಾಸ' ಅಥವಾ 'ಬಿಲ್ವಮಂಗಲ' ಎಂಬ ೧೩ ರೀಲ್ಸುಗಳ ಉತ್ಕೃಷ್ಟ ಮಾತನಾಡುವ ಚಲಚಿತ್ರವು ಪ್ರದರ್ಶಿಸಲ್ಪಡಲಿದೆ ಈ ದಿನ (೨೬–೮–೩೨) ದಿಂದ ಜಗತ್ಪ್ರಸಿದ್ಧನಾದ ಕಾರ್ಲೋ ಅಲ್ಡಿನಿಯಿಂದ ಅಭಿನಯಿಸಲ್ಪಟ್ಟ "ಫ್ಯಾಟಿಂಗ್ ಎಗೈನ್‌ಸ್ಟ್ ಬರ್ಲಿನ್" ಎಂಬ ಉತ್ತಮ ಚಲಚಿತ್ರವು ಪ್ರದರ್ಶಿಸಲ್ಪಡಲಿದೆ ನಿನ್ನೆ ಮತ್ತು ಮೊನ್ನೆ ಶ್ರೀ ಕೃಷ್ಣ ಜಯಂತಿಯ ಸಮಾರಂಭವು ಸಿನೆಮಾ ಮಂದಿರದಲ್ಲಿ ಸಂಭ್ರಮದಿಂದ ಜರಗಿತು

ಇಲ್ಲಿಯ ಸ್ಥಳೀಕ ಕಸಬಾ ಬಜಾರು ಪಂಚಾಯತ ಕೋರ್ಟಿನ ಮೆಂಬರರಾಗಿದ್ದ ಶ್ರೀಯುತ ಯಂ. ರಾಘವೇಂದ್ರ ಪೈಗಳವರೂ ಮತ್ತು ಎ ಆರ್ ಡಿಸೋಜರೂ ತಮ್ಮ ಮೆಂಬರಿಕೆಗೆ ರಾಜಿನಾಮೆ ಇತ್ತಿರುವರಾಗಿ ತಿಳಿದು ಬರುತ್ತದೆ.

ಕಾಸರಗೋಡು— ತಾ ೨೧ರಲ್ಲಿ ಮಂಗಳೂರಿನಿಂದ ಹೊರಟ ಮೈಲು ಬಂಡಿಯು ಸ್ವಯಂಸೇವಕರಿಂದ ಉಳ್ಳಾಲದಲ್ಲಿ ನಿಲ್ಲಿಸಲ್ಪಟ್ಟಿತ್ತಷ್ಟೆ! ಅದೇ ರೀತಿಯಲ್ಲಿ ಅದೇ ಬಂಡಿಯು ಇಲ್ಲಿಂದ ಆರು ಮೈಲುಗಳ ದೂರದಲ್ಲಿ ಶ್ರೀಯುತರಾದ ಶಿವಶಂಕರ ಪೈ ಮತ್ತು ಪದ್ಮನಾಭ ನಕ್ಷತ್ರಾಯ ಎಂಬವರಿಂದ ಅಪಾಯಸೂಚಕ ಸರಪಣಿಯು ಎಳೆಯಲ್ಪಟ್ಟು ನಿಲ್ಲಿಸಲ್ಪಟ್ಟಿತು. ಸ್ವಯಂಸೇವಕರು ಕೂಡಲೇ ಬಂಡಿಯಿಂದಿಳಿದು ಪ್ರಯಾಣಿಕರಿಗೆ ಕರಪತ್ರಗಳನ್ನು ಹಂಚಲು ಅವರನ್ನು ಕೈದು ಮಾಡಿ ಹೊಸದುರ್ಗದಲ್ಲಿ ಹೆಸರು ವಿಳಾಸಗಳನ್ನು ಕೇಳಿ ಬಿಟ್ಟರು ಮರುದಿನ ಕಾಸರಗೋಡಿನಲ್ಲಿ ಅವರೀರ್ವರ ದಸ್ತಗಿರಿಯಾಗಿ ಮಂಗಳೂರಿಗೆ ಕೊಂಡೊಯ್ಯಲ್ಪಟ್ಟರು

ತಾ ೨೪ರಲ್ಲಿ ಕಾರಡ್ಕದಲ್ಲಿ ಫೋರೆಸ್ಟು ಸತ್ಯಾಗ್ರಹ ದಿನ"ವನ್ನಾಚರಿಸಿದರು ಬೆಳಿಗ್ಗೆ ಧ್ವಜವಂದನೆಯಾಯಿತು ಸಾಯಂಕಾಲ ಮೆರವಣಿಗೆಯೂ ೫೦೦ ಜನರಿದ್ದ ಸಭೆಯೂ ಆಯಿತು ಇಲ್ಲಿಂದ ಅಧಿಕಾರಿಗಳು ಹೋಗಿ ಕೂಡಿದ ಜನರ ಮೇಲೆ ಬೆತ್ತದ ಚಾರ್ಜಾಯಿತು. ಸ್ವಯಂಸೇವಕರನ್ನು ಕೈದುಮಾಡಿ ಇಲ್ಲಿಗೆ ತಂದು ರಿಮಾಂಡಿನಲ್ಲಿಟ್ಟಿರುವರು ಇಲ್ಲಿ ಪೋಲೀಸ ದಳವು ಸಾಲದೆ ಹೊಸದುರ್ಗದಿಂದ ತರಿಸಲಾಯಿತು ಈ ದಿನ ಬೆಳಿಗ್ಗೆ ಶ್ರೀ [illegible] ನಾಯರನ್ನು ಬಿಟ್ಟಿರುವರು

ಸುರತ್ಕಲ್ — ಇದೇ ಬರುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಸುರತ್ಕಲ್ ಸರ್ಕಲಿನ ಪರವಾಗಿ ರಾ। ಶ್ರೀ ಟಿ ಆರ್ ರಂಗನಾಥ ಪುಂಜರು ಉಮೇದುವಾರರಾಗಿರುವರೆಂದು ತಿಳಿದುಬರುತ್ತದೆ

ಕಳೆದ ತಾ. ೧೮ನೆಯ ಗುರುವಾರದಿನ ಗಂಟೆ ೩ಕ್ಕೆ ಇಲ್ಲಿಯ ಧರ್ಮಶಾಲೆಯಲ್ಲಿ ಶ್ರೀ ಎಸ್. ಎನ್. ಕ್ಯಾಣಿಯವರಿಂದ ನಡೆಯಿಸಿ ಕೊಂಡು ಬರುತ್ತಿದ್ದ ಶ್ರೀಮದುತ್ತರ ರಾಮಚರಿತವಾಚನದ ಮಂಗಲ ಸಮಾರಂಭವು ಸಂಭ್ರಮದಿಂದ ಜರಗಿತು

"ಅಖಿಲ ಸುರತ್ಕಲ್ ಗ್ರಾಮ ಪಂಚಾಯತ ಸಮಿತಿ" ಈ ಸಮಿತಿಯವರು ಕಳೆದ ತಾ ೧೩ ಮತ್ತು ೧೪ನೆಯ ಎರಡು ದಿನಗಳಲ್ಲೊಟ್ಟು ಇಲ್ಲಿಯ ಸಮೀಪದ ಕರಾವಳಿಯಲ್ಲಿನ ೧೮ ನಿರ್ಗತಿಕ ನಾಯಿಗಳನ್ನು ಕೊಲ್ಲಿಸಿದರು ಈ ಶವಗಳು ಸದುಪಯೋಗವಾಗಲೆಂದು ಸಮಿತಿಯ ಶ್ರೀಮಂತ ಸದಸ್ಯರೋರ್ವರು ತಮ್ಮ ಹಿತ್ತಿಲಲ್ಲೇ ಹೂಳಿಸಿಕೊಳ್ಳುವುದರೊಂದಿಗೆ ಅನಾಥ ಪ್ರೇತಸಂಸ್ಕಾರದ ಪುಣ್ಯ ಸಂಪಾದಿಸಿಕೊಂಡು ಧನ್ಯರಾದರು ಈಗ ರಾಜಬೀದಿ, ಹೆಚ್ಚು ಜನಸಂಚಾರದ ಹಾದಿಗಳಲ್ಲಿ ಹುಚ್ಚು ನಾಯಿಗಳು ಅಡ್ಡಾಡುತ್ತಿವೆಯಾದರೂ ಸಮಿತಿಯವರು ತಟಸ್ಥರಾಗಿರುವುದರಿಂದ ಇವರ ಪ್ರಕಟಣಾ ನಿಯಮೋಲ್ಲಂಘನೆಗೆ ಅನೇಕರಿಗೆ ಎಡೆದೊರೆತಂತಾಗಿದೆ ಎರಡು ತಿಂಗಳ ಅವಧಿಯ ಪ್ರಕಟಣಾ ಕಾರ್ಯಗಳನ್ನು ಎರಡೇ ದಿನಗಳಲ್ಲಿ ಮುಗಿಸಿರುವ ಈ ಸಮಿತಿಯ ವಿಧ್ಯಮಾನಗಳೇನೋ ಬೋಧ್ಯವೇ!

ಕಾವಳಕಟ್ಟೆ, — ತಾ ೨೧–೮–೧೯೩೨ನೇ ಆದಿತ್ಯವಾರ ೩ ಗಂಟೆ ಸಮಯಕ್ಕೆ ಕಾವಳಕಟ್ಟೆಯಲ್ಲಿ ಮಿ। ರಾ ರಾ। ವಕೀಲ ಕೆ ಆರ್ ಆಚಾರ್ ಯಂ ಎ ಯಲ್ ಎಲ್ ಬಿಯವರ ಅಧ್ಯಕ್ಷತೆಯಲ್ಲಿ ಕಾವಳಕಟ್ಟೆ ಸೆಂಟರಿಗೆ ಉಮೇದುವಾರರಲ್ಲಿ ಯಾರನ್ನು ಚುನಾಯಿಸಬೇಕೆಂದು ನಡೆದ ಓಟರರ ಸಭೆಯಲ್ಲಿ, ಉಮೇದುವಾರರಾದ ಬಂಟ್ವಾಳದಲ್ಲಿರುವ ವಕೀಲ ರಾಮಭಟ್ಟ ಬಿ ಎ ಬಿ ಎಲ್ ಯವರನ್ನೇ ಮಂಗಳೂರು ತಾಲೂಕ ಬೋರ್ಡಿಗೆ ಚುನಾಯಿಸಬೇಕೆಂದು ನಿರ್ಣಯವಾಯಿತು

ಸೋಮೇಶ್ವರ — ವರ್ಷಂಪ್ರತಿ ಶ್ರಾವಣ ಬ ೩೦ ದಿವಸ ಸೋಮೇಶ್ವರ ಶ್ರೀ ಸೋಮನಾಥ ದೇವಸ್ಥಾನದ ಹತ್ತಿರ ಜರಗುವ ಸಮುದ್ರಸ್ನಾನ ಮಹೋತ್ಸವವು ಈ ವರ್ಷ ತಾ ೩೧–೮–೩೨ನೇ ಬುಧವಾರ ದಿವಸ ಜರಗುತ್ತದೆ ಭಜಕರು ಸರ್ವರೂ ಬಂದು ಶ್ರೀ ದೇವರ ತೀರ್ಥಪ್ರಸಾದವನ್ನು ಸ್ವೀಕರಿಸಬೇಕಾಗಿ ಸದ್ರಿ ದೇವಸ್ಥಾನದ ಆಡಳಿತ ಮೊಕ್ತೇಸರ ಕೆ ಸುಬ್ಬಯ್ಯನವರು ತಿಳಿಸುತ್ತಾರೆ ಯಾತ್ರಸ್ಥರ ಅನುಕೂಲತೆಗಾಗಿ ಸದ್ರಿ ದಿನ ಮೈಲುಬಂಡಿಗಳೂ ಕೂಡಾ ನಿಲ್ಲಿಸಲ್ಪಡುತ್ತವೆ

ಉಡುಪಿ: — ನಮ್ಮ ೧೨ ೮ ೩೨ರ ಸಂಚಿಕೆಯಲ್ಲಿ ಉಡುಪಿಯ ಬಾತ್ಮಿಯಲ್ಲಿ ಉಡುಪಿ ಬೋರ್ಡ ಮೈನ್ ಶಾಲೆಯಲ್ಲಿ ನಡೆದ ನಗಗಳ ಕಳವಿನ ಸಂಬಂಧವಾಗಿ ಅದರ ಹೆಡ್ ಮಾಸ್ತರರು ಒಂದು ವಿವರ ಪತ್ರವನ್ನು ಬರೆಯುತ್ತಾ ಸಂಗತಿಯು ಹಾಗೆ ನಡೆದಿದ್ದಲ್ಲವೆಂದೂ ನಗಗಳನ್ನು ಕಳವು ಮಾಡಿದವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಲಾಗಿದೆಯೆಂದೂ ಬರೆದಿರುವರು (ಸಂ ಸ್ವ)

ಮೋಟಾರು ದರಗಳು ತೀರಾ ಕಡಿಮೆಯಿರುವುದಾಗಿ ಹಳೇ ಹರಕೆಗಳನ್ನು ಪೂರೈಸಿಕೊಳ್ಳುವ ಜನರ ಭಾಗ್ಯವೇ ಭಾಗ್ಯ ನಮ್ಮೂರ ಶ್ರೀ ಕೃಷ್ಣನ ವಿಟ್ಲಪಿಂಡಿ ಹಬ್ಬಕ್ಕೂ ಭಾರಿ ಜನರ ಗೊಂದಲ!

ಬಂಟ್ವಾಳ — ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಇದೇ ತಾರೀಕು ೨೦ರಲ್ಲಿ ಬಂಟವಾಳ ಬೋರ್ಡು ಶಾಲೆಯಲ್ಲಿ ಜರಗಿತು

ಬಂಟವಾಳದಲ್ಲಿರುವ ಹಳೇ ಮಿಶನ ಶಾಲೆಯ ಕಟ್ಟಡ ಮತ್ತು ಹಿತ್ತಿಲನ್ನೂ ಉಪದೇಶಕರ ಮನೆಯಿದ್ದ ಕಂಪೌಂಡನ್ನೂ ಬಹಿರಂಗವಾಗಿ ಏಲಂ ಮಾಡುವರೆಂಬ ಅರಸಿನ ಬಣ್ಣದ ನೋಟೀಸುಗಳನ್ನು ಇಲ್ಲಿಯ ಅವರ ಏಜಂಟರೊಬ್ಬರು ಅಲ್ಲಲ್ಲಿ ಹಚ್ಚಿರುವರು

ನಾವೂರು — ಬಂಟ್ವಾಳ ಪಂಚಾಯತು ಕೋರ್ಟಿನಿಂದ ಅತ್ಯಂತರವಾದ ಸರಪಾಡಿ, ನಾವೂರು, ಮೂಡನಡುಗೋಡು ಗ್ರಾಮದ ನಿವಾಸಿಗಳು ಈ ಮೂರು ಗ್ರಾಮಗಳನ್ನು ಬಂಟವಾಳ ಪಂಚಾಯತು ಕೋರ್ಟಿನ ಜರ್ಬಂದಿಯಿಂದ ವಿಂಗಡಿಸಿ ಒಂದು ಪ್ರತ್ಯೇಕ ಪಂಚಾಯತು ಕೋರ್ಟನ್ನು ಮಧ್ಯಸ್ಥಳವಾದ ಮಣಿಹಳ್ಳದಲ್ಲಿ ಸ್ಥಾಪಿಸಬೇಕೆಂದು ಮಂಗಳೂರು ಡಿವಿಜನಲ್ ಆಫೀಸರರಿಗೆ ಮನವಿಯು ತಯಾರಾಗಿ ದಸ್ಕತುಗಳು ಆಗುತ್ತಲಿವೆ ಮಾನ್ಯ ಡಿವಿಜನಲ್ ಆಫೀಸರರು ಈ ಕಡೆಗೆ ಗಮನ ಕೊಟ್ಟು ಈ ೩ ಗ್ರಾಮನಿವಾಸಿಗಳ ಮನಸ್ಸನ್ನು ಸಮಾಧಾನಗೊಳಿಸುವುದು ಒಳ್ಳೇದು

ಪಾಣೆಮಂಗಳೂರು: — ಈ ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡ ಮೆಂಬರಿಕೆಗೆ ರಾ। ಎ ಬಿ ಶೆಟ್ಟಿಯವರು ಉಮೇದುವಾರರಾಗಿ ನಿಂತಿರುವರು ರಾ। ಅಡಿಗರವರು ಮಾಡಿಸದೆ ಇರುವ ನಂದಾವರ ಸಂಕ ಇವರಾದರೂ ಮಾಡಿಸ್ಯಾರೇ?

[illegible]

([illegible])

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ. ಉ	ಅಸ್ತ
27	ಶನಿ	೧೧	೫೩.೧೪	ಆರ್ದ್ರಾ	೪೦ ೩೨	೧೧	6.21	6.44
28	ರವಿ	೧೨	೫೩.೪೨	ಪುನರ್ವಸು	೪೭ ೨	೧೨	6.21	6.43
29	ಸೋಮ	೧೪	೫೩ ೨	ಪುಷ್ಯ	೪೪ ೧೩	೧೩	6.21	6 43
30	ಮಂಗಳ	೧೪	೫೪ ೧	ಆಶ್ಲೇಷಾ	೪೪ ೩೧	೧೪	6.21	6.42
31	ಬುಧ	●	೫೦ ೦	ಮಘಾ	೪೩ ೧೩	೧೫	6.21	6 41
1	ಗುರು	೧	೪೫ ೨	ಪುಬ್ಬಾ	೨೩ ೩೦	೧೬	6 21	6 40
2	ಶುಕ್ರ	೨	೪೨ ೩೨	ಉತ್ತರಾ	೩೦,೪೫	೧೭	6 21	6.40

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಅಧಿಕತಮ		Minimum ಅಲ್ಪತಮ		Rainfall ಮಳೆ ದಿನದ ಮಳೆ	ಜುಮಲಾ ಮಳೆ.
19	83— 6		75	4	0—32	—
20	81— 9		75	8	0— 2	—
21	84— 2		76 —	1	0—28	—
22	84 — 7		78—	1	0— 3	—
23	85— 5		76—	0	—	—
24	87 — 7		76	9	—	—
25	85— 0		75—	9	—	9—15

ಮಂಗಳೂರಿನ ಪೇಟ ಧಾರಣೆ.

ಜೀನಸು	ಇಂದ ರೂ. ಆ	ವರೆಗೆ ರೂ. ಆ.
ರಾಶಿ ಅಕ್ಕಿ	3— 9	4— 2
ಮುಸ್ಸು	4— 8	[illegible]— 0
ಗುಡ್ಡ	4— 0	4— 6
ಸುಗ	3—10	4— 2
ಊರ ಅಪ್ಪಲ್ ಬೆಳ್ತಿಗೆ	4 —12	5— 9
ರಂಗೂನು ಬೆಳ್ತಿಗೆ ಗೋಣಿ ಒಕ್ಕೆ	8— 0	8— 4
ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ	4—12	4—14
ಗೋಧಿ ಗೋಣಿ ಒಕ್ಕೆ	9— 8	14— 8
ತೊಗರಿ ಗೋಣಿ ಒಕ್ಕೆ	1 — 8	12— 0
ಹುರುಳಿ ಗೋಣಿ ಒಕ್ಕೆ	6—12	7— 4
ಕಡಲೆ ಗೋಣಿ ಒಕ್ಕೆ	8— 8	12— 8
ತೊಗರಿಬೇಳೆ ಗೋಣಿ ಒಕ್ಕೆ	18— 8	21— 0
ಉದ್ದು ಗೋಣಿ ಒಕ್ಕೆ	11 — 8	13— 0
ಹೆಸರು ಗೋಣಿ ಒಕ್ಕೆ	10— 4	11—
ಊರುಬೆಲ್ಲ ಖಂಡಿ ಒಕ್ಕೆ	33—12	36— 4
ಉಪ್ಪು ಗೋಣಿ ಒಕ್ಕೆ	6— 0	6— 4
ಕೊಬ್ರಿ ಖಂಡಿ ಒಕ್ಕೆ	65—	7—
ಕೊಬ್ರಿ ಹಿಂಡಿ ಖಂಡಿ ಒಕ್ಕೆ	33 —	33— 8
ಎಳ್ಳಿಂಡಿ ಖಂಡಿ ಒಕ್ಕೆ	22— 8	23—12
ಕೊಬ್ರಿ ಎಣ್ಣೆ ಮಣ ಒಕ್ಕೆ	5— 8	6— 8
ಎಳ್ಳೆಣ್ಣೆ ಮಣ ಒಕ್ಕೆ	6—12	7— 0
ಚಿಮಣಿಎಣ್ಣೆ ಪೆಟ್ಟಿಗೆ ಒಕ್ಕೆ	4— 7	8—12
ದೋರಿನ ಸಕ್ಕರೆ ಮಣ ಒಕ್ಕೆ	4— 4	4— 6
ಹೊಸ ಮೆಣಸು	4— 0	6— 0
ಸಾಸಿವೆ ಮುಡಿ ಒಕ್ಕೆ	6— 4	6— 8
ಸೇಲಮ್ ಶಾಫ ಖಂಡಿ ಒಕ್ಕೆ	275— 0	300—
[illegible] ಖಂಡಿ ಒಕ್ಕೆ	170— 0	180—
ಮೆಲುಕ್ಕೆ ಮಣ ಒಕ್ಕೆ	27— 0	28—
ಗೇರುಬೀಜ ಮುಡಿ ಒಕ್ಕೆ	2—12	3— 0
[illegible] ಖಂಡಿ ಒಕ್ಕೆ	25 — 0	25— 8
ತಾಂಬ್ರ ತಗಡು ಮಣ ಒಕ್ಕೆ	11 0	11— 8
ತಾಂಬ್ರ ಪಾತ್ರೆಗಳು ಮಣ ಒಕ್ಕೆ	15— 0	16—0
ಹಿತ್ತಾಳೆ ಸೀರು ಒಕ್ಕೆ	14— 4	14—12
ಹಿತ್ತಾಳೆ ತಗಡು ಮಣ ಒಕ್ಕೆ	11— 8	12— 0
[illegible] ಒಕ್ಕೆ	17—14	18— 0
ಹುಣಸೆ ಹುಳಿ ಖಂಡಿ ಒಕ್ಕೆ	40—	—
[illegible] ಶಾಫ ಖಂಡಿ ಒಕ್ಕೆ	340—	—
ಹಳೆ ಅಡಿಕೆ	150—	205—
ಹೊಸ ಅಡಿಕೆ	140	145

THE CANARA PUBLIC CONVEYANCE CO., LTD. MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 [illegible] ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ [illegible] ಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕಾನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಜಿಗದಂಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, [illegible] ಉತ್ತರ [illegible] ಬಸ್ಸುಗಳಲ್ಲಿ [illegible]

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿ [illegible] ಮಂಗಳೂರಿನಿಂದ [illegible] 7 ಘಂಟೆ [illegible] 12 ಘಂಟೆಗೆ [illegible] ಮೈಸೂರಿಗೆ 12 [illegible] 8 [illegible] 11 [illegible] ಚಿಕ್ಕಮಗಳೂರಿಗೆ 8 [illegible] ಕೊಲ್ಲೂರಿಗೆ [illegible] ಗೋಕರ್ಣಕ್ಕೆ [illegible] 12 ಗಂಟೆ ತಲಪಬಹುದು [illegible] ಮಾಹಿತಿಗೆ [illegible] ಬರೆದರೆ [illegible] ತಿಳಿಸಲಾಗುವುದು.

Secretary

The Canara Public Conveyance Company Ltd. Mangalore

Chikmagalur Public Conveyance Motor Service

CHIKMAGALUR

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗೋಸ್ಕರ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರುತ್ತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ. 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, 4½ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ, ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ ಮ್ಯಾನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಯ್ಯ, ಮ್ಯಾನೇಜಿಂಗ್ [illegible], ಕೆ. ಹೂರಪ್ಪ ಶೆಟ್ಟಿ—ಪ್ರೊಪ್ರೈಟರ್.

ಶ್ರೀ. ವಿ. ಜೆ. ಪಟೇಲರ ಸ್ಫುಟವಾಕ್ಯ.

'ಕಾಂಗ್ರೆಸ್ ಬಿಕ್ಕಟ್ಟು—ಬರೇ ಬಾಯಿ ಮಾತು—ಪತ್ರಿಕೆಗಳ ಗೂಢಪ್ರಚಾರ—ಕಾಂಗ್ರೆಸ್ಸಿನ ಮೇಲೆ ಸಹಾನುಭೂತಿಯು ಹೆಚ್ಚಾಗುತ್ತಿದೆ. ಕಾಂಗ್ರೆಸ್ಸಿನ ಕೇಳಿಕೆಗಳು ಸಿಗಲಾರವೆ? ಎಲ್ಲವೂ ಸರಕಾರದ ಕೈಯಲ್ಲಿದೆ—ಸ್ವಾತಂತ್ರ್ಯವಿಲ್ಲದೆ ಐರ್ಲೆಂಡು ಈಜಿಪ್ಟು ಮತ್ತು ಹಿಂದೂದೇಶದಲ್ಲಿ ಶಾಂತಿಯಿಲ್ಲವೆಂಬುದು ನನ್ನ ಅಭಿಪ್ರಾಯ' ಎಂದರು ಪಟೇಲರು.

ಕಾಂಗ್ರೆಸ್ಸಿನ ಮಾಜೀ ಅಧ್ಯಕ್ಷರಾದ ಶ್ರೀ. ವಿ. ಜೆ. ಪಟೇಲರು ಆರೋಗ್ಯಲಾಭಕ್ಕಾಗಿ ಇಂಗ್ಲಾಂಡಿಗೆ ಹೋಗಿರುತ್ತಾರಷ್ಟೆ. ಅವರು "ಹಿಂದೂ" ಪತ್ರಿಕೆಯ ಒಬ್ಬ ಪ್ರತಿನಿಧಿಗೆ ಭೇಟಿಯನ್ನು ಕೊಡುತ್ತಾ; ಪ್ರಕೃತದ ರಾಜಕೀಯ ಸ್ಥಿತಿಯ ಕುರಿತು ತನ್ನ ಅಭಿಪ್ರಾಯವನ್ನು ಕೊಟ್ಟರು. ಆ ಪತ್ರಿಕಾ ಪ್ರತಿನಿಧಿಯವರು ಹೀಗೆ ಬರೆಯುತ್ತಾರೆ "ಶ್ರೀಯುತ ವಿಠ್ಠಲಭಾಯಿ ಪಟೇಲರು ಈಗಿನ ರಾಜಕೀಯ ರಂಗದಲ್ಲಿ ತನ್ನ ಕಾರ್ಯವನ್ನು ಟೊಂಕಕಟ್ಟಿ ನಡೆಸಬೇಕೆಂದು ದುರಂಧರತೆಯಿಂದ ಸಿದ್ಧರಾದಂತಿದೆ. ಸರಕಾರವನ್ನು ತೋರಿಸಿ ಹಿಂದೆ ನಿಂತ ಮಂದಪಕ್ಷದವರ ಮೇಲೆ ವಿಠ್ಠಲಭಾಯಿಯವರಿಗೆ ಭರವಸೆಯಿಲ್ಲ. ಅವರಿಗೆ ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯವೇ ಒಂದು ಹಂಬಲ! ಇನ್ನಿತರ ಎಲ್ಲಾ ಪಂಚಾಯಿತಿಗಳನ್ನು ಅವರು ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ. ಸಮಯಾನುಸಾರಕ್ಕೆ ಮಹಾತ್ಮಾ ಗಾಂಧಿಯವರು ಕೂಡಾ ಸರಕಾರದೊಡನೆ ರಾಜಿಗೆ ಬರಲು ಸಾಕೆಂದೂ, ಗಾಂಧಿಯವರ ವಿಶ್ವಾಸನೀಯರಾದ ಶ್ರೀ. ಸಿ ರಾಜಗೋಪಾಲಾಚಾರ್ಯರು ಮದ್ರಾಸು ಗವರ್ನರರೊಡನೆ ಭೇಟಿ ನಡೆಸಿದ ಸಂಗತಿಯು ತನ್ನಿಂದ ಅಲ್ಲಗಳೆಯಲ್ಪಡಲಸಾಧ್ಯವೆಂದರು. ಈಗಿನ ಸ್ಥಿತಿಯಂತೆ, ಸರಕಾರದ ತೀಕ್ಷ್ಣ ಶಾಸನಗಳ ಬೆಸೆಯಿಂದ ಕಾಂಗ್ರೆಸು ಧ್ವಂಸವಾಯಿತೆಂಬ ವಿಷಯವನ್ನು ನಾನು ಪಟೇಲರ ಅವಗಾಹನೆಗೆ ತಂದೆನು. ಅದಕ್ಕುತ್ತರವಾಗಿ ಅವರು "ಅಹುದು ಇಂಗ್ಲಾಂಡಿನಲ್ಲಿ ಅಂತಹ ಭಾವನೆಯೊಂದು ಹರಡಿದೆ. ಕಾರಣವು ತಿಳಿದಿರುವುದೇ? ಇಲ್ಲಿಯ ಪತ್ರಿಕೆಗಳ ಪಿತೂರಿ, ಅದರಿಂದಾಗಿ ಹಿಂದೂಸ್ಥಾನದಲ್ಲಿನ ಘಟನೆಗಳ ನಿಜವಾರ್ತೆಯು ಇಲ್ಲಿಗೆ ಬರುವುದೇ ಇಲ್ಲ. ಇಲ್ಲಿಯ ಪತ್ರಿಕೆಗಳೂ ಸರಕಾರವೂ ಹಿಂದೂದೇಶದ ನಿಜ ಸುದ್ದಿಯು ಬ್ರಿಟಿಷ ಸಾರ್ವಜನಿಕರಿಗೆ ತಲಪದಂತೆ ಜತನದಿಂದ್ದಾರೆ. ಓರ್ಡಿನೆನ್ಸು, ಸೆನ್ಸರ್‌ಶಿಪ್ ಇವುಗಳಿದ್ದರೂ, ಕಾಂಗ್ರೆಸ್ಸಿನ ಮೇಲೆ ಇಷ್ಟರತನಕ ಬೀರಲ್ಪಡದ ಸಹಾನುಭೂತಿ ಸೃಷ್ಟಿಯು ಬೀರಲ್ಪಟ್ಟಿದೆ" ಎಂದರು.

'ಈ ಪರಿಸ್ಥಿತಿಯು ಎಷ್ಟರ ತನಕ ಮುಂದುವರಿಸಲ್ಪಡಲಿದೆ?' ಎಂದು ನಾನು ಕೇಳಿದೆ. ಅದಕ್ಕವರು "ಅದು ನನ್ನಿಂದ ಹೇಳಲು ಅಸಾಧ್ಯ, ಕಾಂಗ್ರೆಸ್ಸು ಈ ಸಲ ಮಣ್ಣುಮುಕ್ಕೀತೆಂದು ನಾನೆಣಿಸುವುದಿಲ್ಲ. ಒಂದೋ ಸರಕಾರವು ಓರ್ಡಿನೆನ್ಸುಗಳ ಮೂಲಕ ರಾಜ್ಯವನ್ನು ತೀವ್ರವಾಗಿ ಆಳಬೇಕು. ರಾಜ್ಯದ ಪ್ರತಿನಿಧಿಗಳಾದ ಸ್ತ್ರೀಪುರುಷರುಗಳನ್ನು ಸೆರೆಯಲ್ಲಿಡಬೇಕು; ಒಂದೋ ಕಾಂಗ್ರೆಸ್ಸಿನ ಕೇಳಿಕೆಗಳನ್ನು ಸಂಪೂರ್ಣವಾಗಿ ಅರ್ಪಿಸಬೇಕು. ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವುದೂ, ದೇಶವನ್ನು ದಮನನೀತಿಗೊಳಪಡಿಸಿ ಆಳುವುದೂ ಎಲ್ಲವೂ ಸರಕಾರದ ಕೈಯಲ್ಲಿ ಹೊಂದಿಕೊಂಡಿದೆ. ಹಿಂದೂದೇಶದ ಸ್ಥಿತಿಗತಿಯು ಈಗ ಹಾಳಸ್ಥಿತಿಯಿಂದ ನಿರ್ಮೂಲಸ್ಥಿತಿಯಲ್ಲಿ ನಿಂತಿದೆ, ಮಂದಪಕ್ಷದವರು ಕೂಡಾ ಕನ್ಸಲ್ಟೇಟಿವ್ ಕಮಿಟಿಗೆ ರಾಜಿನಾಮೆಯನ್ನು ಕೊಟ್ಟು ತಮ್ಮ ಅಸಹಕಾರವನ್ನು ವ್ಯಕ್ತಪಡಿಸುವ ಸಂದಿಗ್ಧತೆಯೊದಗಿತು. ಇವರ ಈ ಅಸಹಕಾರವು ಕೊನೆಯ ತನಕ ಬಾಳುವುದೆಂದಾಶಿಸುವೆನು. ಆದರೂ ಕಾಂಗ್ರೆಸ್ಸು ಮತ್ತು ಬ್ರಿಟಿಷ ಸರಕಾರಗಳೊಳಗೆ ಶಾಂತಿಸ್ಥಾಪನೆಯಾಗದೇ ಹಾದರೆ ಕರಾಚಿಯ ಕಾಂಗ್ರೆಸ್ಸಿನಲ್ಲಾದ ಸಂಪೂರ್ಣ ಸ್ವಾತಂತ್ರ್ಯದಾನವಿಲ್ಲದೆ ಗತ್ಯಂತರವಿಲ್ಲ. ಹಿಂದೂದೇಶದಲ್ಲಿ ಪ್ರತ್ಯೇಕತೆಯ ಅದೊಂದು ಭಾವನೆಯು ಬೇರೂರಿಕೊಂಡಿದೆಯೆಂದು ನನ್ನ ಸಂಕಲ್ಪವಾಗಿರುತ್ತದೆ. ಆ ದಾನವಲ್ಲದೆ ಮತ್ತಾವುದೂ ಜನರನ್ನು ಸಮಾಧಾನಪಡಿಸುವಂತಿಲ್ಲ" ಎಂದರು. "ನಿಮ್ಮಂತೆಯೇ ಎಲ್ಲಾ ಮುಖಂಡರೂ ಈ ಅಭಿಪ್ರಾಯವನ್ನುಳ್ಳವರೇ?" ಎಂದು ನಾನು ಪ್ರಶ್ನಿಸಿದೆ. ಅದಕ್ಕೆ ಪಟೇಲರು "ಎಲ್ಲರೂ ಸಂಕಲ್ಪವನ್ನುಳ್ಳವರೆಂದು ಹೇಳಲಸಾಧ್ಯ! ಕಾಂಗ್ರೆಸ್ಸಿನ ಕೆಲವು ಮುಖಂಡರು ಸಾಮ್ರಾಂತ ಸ್ವರಾಜ್ಯಕ್ಕಾದರೂ ಒಪ್ಪಬಹುದು. ಆದರೆ ಒಂದು ವಿಧದ ಅಭಿಪ್ರಾಯ ಚುನಾವಣೆಯನ್ನು ಮಾಡಿದರೆ ಬಹುಸಂಖ್ಯಾತರು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿಯೇ ಹೆಣಗಾಡುವರೆಂದು ನನ್ನ ದೃಢತೆಯಾಗಿರುತ್ತದೆ. ನಾನು ಐರಿಷ್ ಪ್ರಮುಖರೊಡನೆ ಸಂಧಾನಿಸಿದ ನಂತರ ಅಯರ್ಲೆಂಡಿನಲ್ಲೂ ಈಜಿಪ್ಟ್, ಹಿಂದೂದೇಶಗಳಲ್ಲೂ ಶಾಂತಿಯು ನೆಲೆಗೊಳ್ಳಬೇಕಾದರೆ ಈ ರಾಷ್ಟ್ರಗಳು ಸಂಪೂರ್ಣ ಸ್ವಾತಂತ್ರ್ಯವಾಗದೆ ನಿರ್ವಾಹವೇ ಇಲ್ಲ ಎಂದು ಖಚಿತನಾದೆನು. ಈ ವಿಷಯಕವಾಗಿ ಈ ರಾಷ್ಟ್ರಗಳೆಲ್ಲಾ ಯೋಚನೆಯಲ್ಲಿ ಬಿದ್ದಿರುವುವೆಂದು ನನಗೆ ತಿಳಿದಿದೆ.

ಶ್ರೀ ಪಟೇಲರು ಬೇಗನೇ ಅಮೇರಿಕಕ್ಕೆ ಹೋಗಲಿರುವರು. ಬ್ರಿಟಿಷ ವಸ್ತು ಬಹಿಷ್ಕಾರಕ್ಕೆ ಯುನೈಟೆಡ್ ಸ್ಟೇಟ್ಸಿನಲ್ಲಿ ಸಹಾನುಭೂತಿಯಿದೆಯೆಂದೂ, ಅಲ್ಲಿ ಅಂತಹ ಚಳವನ್ನು ತಾನು ತಲೆದೋರಿಸುವೆನೆಂದೂ ಪಟೇಲರ ಹೇಳಿಕೆ. ಇಂತಹ ಚಳವಳವು ಜನಿತವಾದರೆ ಇದರಲ್ಲಿ ಮಿಲಿಯಗಟ್ಟಳೆ ಐರಿಷರೂ ಅಮೇರಿಕನರೂ ಸೇರುವರೆಂದೂ ಅವರ ಅಭಿಮತ. ಇಂಗ್ಲಾಂಡು ತನ್ನ ಕೈಕೆಳಗಿನ ಸ್ವಾತಂತ್ರ್ಯ ಇಲ್ಲದ ರಾಜ್ಯಗಳಿಗೆ ಪ್ರಜಾಪ್ರಭುತ್ವವನ್ನು ಕೊಡಲು ಮನಸ್ಸು ಮಾಡದ ವಿನಹಾ ಅದು ಅಮೇರಿಕಕ್ಕೆ ಕೊಡಲಿರುವ ಯುದ್ಧದ ಸಾಲವನ್ನು ರದ್ದುಪಡಿಸಲಾಗದಂತೆ ಯೋಜನೆಮಾಡಬಹುದೆಂದೂ ಅವರು ಹೇಳುತ್ತಾರೆ "ನನ್ನ ತಿಳುವಳಿಕೆಯ ಮಟ್ಟಿಗೆ ಯುದ್ಧದ ಸಾಲಕ್ಕೂ ಶಸ್ತ್ರತ್ಯಾಗಕ್ಕೂ ಮತ್ತು ಸ್ವಾತಂತ್ರ್ಯಕ್ಕೂ ಮಧ್ಯೆ ಯಾವ ಭಿನ್ನತೆಯೂ ಇಲ್ಲ, ಎಲ್ಲವೂ ಸಂಯೋಜಿತವಾಗಿದೆ. ಪ್ರಪಂಚದ ೧೫೦೦ ಮಿಲಿಯ ಜನಾಂಗದಲ್ಲಿ ೬೦೦ ಮಿಲಿಯ ಜನರು ಮಾತ್ರ ಸ್ವಾತಂತ್ರ್ಯವನ್ನು ಅನುಭವಿಸುವವರಾಗಿದ್ದಾರೆ. ಮಿಕ್ಕುಳಿದ ೯೦೦ ಮಿಲಿಯ ಜನರು ಅನ್ಯ ಜನಾಂಗದ ಅಧಿಕಾರದ ಮುಷ್ಟಿಯೊಳಗಿರುತ್ತಾರೆ. ಪ್ರತಿಯೊಂದು ರಾಷ್ಟ್ರವೂ ತನ್ನ ಗೃಹಕೃತ್ಯಗಳನ್ನು ತಾನು ನೋಡಿಕೊಳ್ಳುವಂತಹ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವಷ್ಟರವರೆಗೆ, ಶಸ್ತ್ರಸನ್ಯಾಸ, ಯುದ್ಧ ಸಾಲ ರದ್ದು, ಶಾಂತಿಸ್ಥಾಪನೆಗಳ ಸುದ್ದಿಯನ್ನು ಕೂಡಾ ಎತ್ತುವುದು ಪರಿಹಾಸ್ಯಕರ ವಿಷಯವಾಗಿರುತ್ತದೆ. ಪ್ರತಿಯೊಂದು ದೇಶದಲ್ಲೂ ರಾಷ್ಟ್ರದೇಳಿಗೆಯಾಕಾಂಕ್ಷಿತರಾಗಿರುವವರೂ, ಭಾವೀ ಸಮರಗಳನ್ನು ತಡೆಯುವ ಪ್ರಯತ್ನದಲ್ಲಿರುವವರೂ ವಿಶ್ವಶಾಂತಿಯ ಧ್ವಜವನ್ನು ನೆಡಬೇಕೆಂಬ ಹಂಬಲದಲ್ಲಿರುವ ಸಾವಿರಗಟ್ಟಳೆ ಜನರೂ, ಸಂಘಗಳೂ, ತಂಡಗಳೂ ಇವೆ. ಆದರೆ ಅವುಗಳ ಕಾರ್ಯಲಾಪಗಳ ಮೇಲೆ ನನಗೆ ಅಧಿಕವಾದ ಶ್ರದ್ಧೆಯಿದೆಯಾದರೂ, ಎಷ್ಟರ ತನಕ ದೊಡ್ಡ ರಾಷ್ಟ್ರವು ತಲೆಯೆತ್ತಿ ನಿಂತು ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯಾಪಹರಣವಾಗುತ್ತಿದೆಯೋ ಅಷ್ಟರ ತನಕ ಈ ಶಾಂತಿಸ್ಥಾಪನಾ ಸಂಘಗಳು ವಿಜಯವನ್ನು ಹೊಂದುವಂತಿಲ್ಲವೆಂದು ನನಗನ್ನಿಸುತ್ತಿದೆ. ಇಂತಹ ನಿರಂಕುಶ ಪ್ರಭುತ್ವವನ್ನು ಹೋಗಲಾಡಿಸಿ ಸಾಂಕುಶ ಪ್ರಭುತ್ವವನ್ನು ಬರಮಾಡಿಕೊಳ್ಳಲು ಸರ್ವತೋಮುಖವಾದ ಕಾರ್ಯಗಳು ನಡೆಯಬೇಕು.

"ಪ್ರಪಂಚ ಸಮರ ವಿರೋಧ ಮಹಾ ಸಭೆಯೊಂದು ಯುರೋಪುಖಂಡದ ಕೇಂದ್ರಸ್ಥಾನದಲ್ಲಿ ಶೀಘ್ರದಲ್ಲೇ ಜರಗಲಿರುವುದೆಂದೂ, ಅದು ಪ್ರಾಯಶಃ ಪೆರಿಸ್ ನಗರದಲ್ಲಿ ಸ್ಥಾಪಿತವಾಗುವುದೆಂದೂ ತಿಳಿಯಲಾಗಿದೆ. ಹೇಗೂ ಇರಲಿ, ಎಂತಹ ಪ್ರತಿಭಾಮಯ ಸಂಸ್ಥೆಯೇ ಜನನಕ್ಕೆ ಬರಲಿ,—ಒಂದು ದೊಡ್ಡ ಶಕ್ತಿಯುತ ರಾಷ್ಟ್ರವು ಅಶಕ್ತಿಯುತವಾದ ಇನ್ನೊಂದು ಸಣ್ಣ ರಾಷ್ಟ್ರವನ್ನು ನಿರಂಕುಶತೆಯಲ್ಲಿಡುವ ತನಕ ಯಾವುವೂ ಫಲಕಾರಿಯಾಗಲೊಲ್ಲದು" ಎಂದು ಅವರು ಹೇಳಿದರು.

ವಿ ಜೆ. ಪಟೇಲರು ಐರ್ಲೆಂಡಿನಲ್ಲಿ ಇಂಡಿಯನ್ ಐರಿಷ್ ಇಂಡಿಪೆಂಡೆಂಟ್ಸ್ ಲೀಗ್ ಎಂಬ ಸ್ವಾತಂತ್ರ್ಯಕಾಂಕ್ಷಿತ ಸಂಘವನ್ನೇರ್ಪಡಿಸಿರುವರು. ಇದಕ್ಕೆ ಐರ್ಲೆಂಡಿನ ಅನೇಕ ಸದ್ಗೃಹಸ್ಥರು ಸದಸ್ಯರಾಗಿರುವರು. ಅವರ ಸಂಕ್ಷೇಪ ಠರಾವು ವೆಂತೆಂದರೆ—"ಹಿಂದೂಸ್ಥಾನ ಮತ್ತು ಐರ್ಲೆಂಡುಗಳಿಗೆ ಸ್ವಾತಂತ್ರ್ಯಲಾಭವಾಗಲು ಸರ್ವತೋಮುಖವಾದ ಕಾರ್ಯಕಲಾಪಗಳನ್ನು ನಡೆಯಿಸಬೇಕು. ಬ್ರಿಟಿಷ ಸಾಮ್ರಾಜ್ಯದ ವಿರೋಧವಾದ ಹೆಣಗಾಟದಲ್ಲಿ ಐರ್ಲೆಂಡು ಇಂಡಿಯಾಗಳು ಪರಸ್ಪರ ಒಗ್ಗಟ್ಟಿನಿಂದ ಮುಂದೊತ್ತಬೇಕು."

ಈ ಸಂಸ್ಥೆಯು ಅಯರ್ಲೆಂಡಿನಲ್ಲಿ "ಇಂಡಿಯನ್ ಇನ್‌ಫೋರ್ಮೇಶನ್ ಬ್ಯೂರೋ ಎಂಬುದನ್ನು ಬೇಗನೇ ಸಂಸ್ಥಾಪಿಸಿ, ಹಿಂದೂದೇಶ ಅಯರ್ಲೆಂಡುಗಳೊಳಗಿನ ಸಾಂಪತ್ತಿಕ ಸ್ಥಿತಿಯ ಪುರೋಭಿವೃದ್ಧಿಯನ್ನು ಸಾಧಿಸಬೇಕೆಂದೂ ಹವಣಿಕೆಮಾಡುತ್ತಿದೆ. ಮತ್ತು ಇದು ಅಯರ್ಲೆಂಡು ಮೊದಲಾದ ದೇಶಗಳಲ್ಲಿಯೂ ಬ್ರಿಟಿಷ ವಸ್ತು ಬಹಿಷ್ಕಾರ ಚಳವಳವನ್ನು ನಡೆಸುವುದು. ಹೀಗೆ ದ್ವಿಪಕ್ಷಗಳು ಏಕಮುಖವಾಗಿ ಕಾರ್ಯರಂಗಕ್ಕಿಳಿದರೆ ಹೆಚ್ಚಿನ ಶ್ರೇಯಸ್ಸಿದೆಯೆಂದೂ ಈ ಲೀಗಿನವರ ಭಾವನೆಯಿದೆ. ಹಿಂದೀಯ ಜನಾಂಗದ ಸ್ವಾತಂತ್ರ್ಯ ಸಾಧನೆಯಲ್ಲಿ ತಮ್ಮ ಸಂಪೂರ್ಣ ಸಹಾನುಭೂತಿಯಿದೆಯೆಂದು ವಿ. ಜೆ ಪಟೇಲರಿಗೆ ಆಶ್ವಾಸನೆಯು ಅನೇಕ ಸದ್ಗೃಹಸ್ಥರಿಂದ ದೊರೆತಿದೆಯೆಂದು ತಿಳಿಯಲಾಗಿದೆ. ಡ್ಲಬಿನ್‌ನಲ್ಲಿ ಜರಗಲಿರುವ ಮಹಾಸಭೆಗೆ ಎಲ್ಲಾ ರಾಷ್ಟ್ರಗಳವರೂ, ಪ್ರತಿನಿಧಿಗಳನ್ನು ಕಳುಹಿಸಬೇಕೆಂದು, ಅನೇಕರಿಗೆ ಆಮಂತ್ರಣವು ಹೋಗಿದೆ. ಬ್ರಿಟಿಷ್ ವಿರೋಧದ ಚಳವಳವು ಅಯರ್ಲೆಂಡಿನಲ್ಲಿ ಸರ್ವತರದ ಜಾಹೀರಾತು ಸಭೆ, ಉಪನ್ಯಾಸ, ಪ್ರಚಾರಗಳ ಮೂಲಕ ನಡೆಯಲಿರುವುದು. ಇದಕ್ಕೆ ಡಿ ವೆಲೆರಾರವರ ಸಹಾನುಭೂತಿಯೂ ಇದೆಯಂತೆ. ಈ ಸಂಸ್ಥೆಯು ಅಹಿಂಸಾತ್ಮಕವಾಗಿ ವರ್ತಿಸುತ್ತಾ ಬ್ರಿಟನಿನ ಸಾಂಪತ್ತಿಕತೆಯು ಕೆಳಸೆಳತಕ್ಕಾಗಿಯೇ ಗುರಿಯಿಡುವುದು.

ಪಟೇಲರು ಸ್ಫುಟನುಡಿಗಳನ್ನಾಡುತ್ತಾ "ಪ್ರಧಾನಿಯಾದ ರೇಮ್ಸೆ ಮೆಕ್‌ಡೊನಾಲ್ಡ್‌ರು ಯುದ್ಧದ ಸಾಲದ ರದ್ದಿನ ವಿಷಯಕವಾಗಿ ಎಂತಹ ಅಭಿಲಾಷೆಯುಳ್ಳವರೇ ಇರಲಿ, ಎಷ್ಟರ ತನಕ ಅನ್ಯರಾಷ್ಟ್ರಗಳನ್ನು ಅವರು ಸಾಮ್ರಾಜ್ಯತ್ವದ ಬಂಧನದಿಂದ ವಿಮುಕ್ತಗೊಳಿಸಲಾರರೋ, ಅಷ್ಟರ ತನಕ ಅವರು ಸಾಲ ರದ್ದಾಗುವ ಸಂಗತಿಯನ್ನು ಮರೆಯಲಿ' ಎಂದರು.

ಶ್ರೀ ಪಟೇಲರು ಬ್ರಿಟನಿನ ಬದ್ಧವಿರೋಧಿಯಾದ ಅಯರ್ಲೆಂಡಿನೊಡನೆ ಸಹಕರಿಸಿ ನಡೆಯುವುದನ್ನು ನೋಡಿ 'ಅನೇಕ ಆಂಗ್ಲರು ಪಟೇಲರ ಮೇಲೆ ಜುಗುಪ್ಸೆಯ ದೃಷ್ಟಿಯನ್ನು ಬೀರಿರುವರು. ಅಲ್ಲದೆ ಪಟೇಲರ ಕಾರ್ಯರಂಗವು ಅಲ್ಲಿ ಯಶಸ್ವಿಯಾಗಲಿಕ್ಕಿಲ್ಲವೆಂದೂ ಅವರ ಭಾವಿಸುತ್ತಾರೆ.

ಉಡುಪಿಯ ಕಿಡಿಗಳು

ಶ್ರೀ ಶರ್ಮರು ಇದೀಗ ದ್ವಿತೀಯ ಬಾರಿ ಉಡುಪಿಗೆ ನಡೆತಂದಿರುವರು. ಹಿಂದಿನಂತೆ ಒಂದವರೆ ತಾರೀಕು ೧೮ರಿಂದ ಭಾಷಣವಾರಂಭಿಸಿದರು. ಭೂಷಣಪ್ರಿಯರಿಗೆ ಇವರಭಿಭಾಷಣವು "ಪಾಷಾಣ"ವಾಗದಿರುವುದೇ? ಇಲ್ಲವಾದರೆ ದೂಷಣವೇಕೆ?

○ ○ ○ ○

ಶರ್ಮರು "ಕಾಲಕ್ಕೆ ತಕ್ಕ ಕೋಲಕಟ್ಟಬೇಕೆ"ನ್ನುವ ವರ್ಗೀಕರು. ಇವರು ಬರೇ ಬಾಯಿ ಬಡುಕರಲ್ಲ, ಅಂತೆ ಕಟ್ಟಿಯೂ ತೋರಿಸುತ್ತಾರೆ. ಹಿಂದಿನ "ಖಾದಿ ವೇಷ"ವೂ ಇಂದಿನ "ನೂತನ ವೇಷ"ವೂ ಇದಕ್ಕೆ ಉಜ್ವಲ ನಿದರ್ಶನ. ಇಂತಹ ಪ್ರದರ್ಶನಗಳಿಲ್ಲದ್ದರೆ ಸೃಷ್ಟಿಯೇ ನಿಸ್ಸಾರ! ವೇಷ ಬದಲಾವಣೆಯಾಗಲೇಬೇಕು.

○ ○ ○ ○

ಬಣ್ಣ ಬದಲಾಯಿಸದಿದ್ದರೆ ಬನ್ನ ಪಚ್ಚೆಂಟು ಪಿಲ್ಲಪಿಂಡಿಯಲ್ಲಿಯೂ ಹಲವು ವೇಷಗಳೊಂದಿಗೆ ಶರ್ಮರದೂ ಒಂದು ವೇಷ! ಅತ್ಯುತ್ತಮ ಸನ್ನಿವೇಶ! ಕೆಲಬರ ಮನಃತೋಷ! ಅಮುಕಾರಣ ಪರಿತೋಷ!!

○ ○ ○ ○

ದೋಷ ಹೇಳಿ ಭೂಷಣ ಪಡೆವುದು ಲೇಸೇ? ಭೂಷಣ ಸಾರಿ ಪಾರಿತೋಷಗಳಿಸುವುದು ವಾಸಿಯೇ? ಎಂಬುದು ವಿಚಾರಿಸತಕ್ಕುದ್ದಾಗಿದೆ. ಹೊಗಳಿಕೆಗೆ ಭಗವಂತನು ಕೂಡ ಹಿಗ್ಗುವನು. ಅದುದರಿಂದಲೇ ಅವನಿಗೆ ಸಹಸ್ರನಾಮಗಳು ಸಿದ್ಧವಾಗಿವೆ. "ಧರ್ಮಾವತಾರಿ" ಶರ್ಮರೇನಂತೆ? ಅರಣ್ಯರೋದನವೇ? ಫಲಪ್ರಾಪ್ತಿಯಿದೆಯೋ?

ಅತ್ಯುತ್ಕೃಷ್ಟ ಮುದ್ರಣ ಬೇಕೆ? ಶಾರದಾ ಪ್ರೆಸ್ ಮಂಗಳೂರು, ಇಲ್ಲಿ ವಿಚಾರಿಸಿ

[illegible]
ವಾದಂಥ ಅಮೋಘವಾದ ೩೦ ವಿನಸ್ಸೆಗಳಿಂದ ಸಿದ್ಧವಾಗಿ ತಯಾರಿಸಲ್ಪಟ್ಟಿದೆ.

ಶ್ರೀ ಮದನಮಸ್ತಪಾಕ — ರಿಜಿಸ್ಟರ್ಡ್.

ಬಾಲ್ಯದಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ಬಿಟ್ಟದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತಕ್ರಿಯೆಯಿಂದಲೂ, ಅತಿ ಸ್ತ್ರೀಸಂಭೋಗದಿಂದಲೂ, ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತಿ, ಕಾಮೋತ್ತೇಜನವಿಲ್ಲದ್ದು, ಶೀಘ್ರ ವೀರ್ಯಸ್ಖಲನವಾಗೋಣ, ಗರ್ಭಾಶಯ ಪರಿಣಾಮ, ಎಂಥದಾದರೂ ಪರಮ, ಮೈನೋವು, ಇತ್ಯಾದಿ ರೋಗಗಳು ನಾಶವಾಗಿ [illegible] ಸಾಧ್ಯವಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೪೮ ಗೋಳಿಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫. ವಿ. ಪಿ. ಖರ್ಚು ೧. ಹಳೆ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೦. ನಮೂನೆ ಡಬ್ಬಿಗೆ ರೂ ೧॥ ಮಾತ್ರ. ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್ ಆಯ್ ಬಿಚಟಿ, ಎಲ್. ಎಮ್ ಎಂಡ್. ಎಸ್, ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮ್, ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತಿ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ.

ಪತ್ತೆ.— ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ, S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣೆ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರ ಮಾಡಿ ಔಷಧಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ [illegible]:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ೧ ಕಿ ೪ ರೂ ವಿ ಪಿ ಖರ್ಚು ೦||೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು ಬಿಳಿ ಸೆರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ ಕ್ಲೇಶ ಮೈಯಲಿ ನೋವು ಉಷ್ಣತೆ ಕ್ಷೀಣತಾ ಗರ್ಭಾಶಯದಲ್ಲಿಯ ದೋಷ ಗರ್ಭಧಾರಣವಾಗದಿರೋಣ ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ. ಮುಖ್ಯ ಸರ್ಟಿಫಿಕೇಟ ಮೇ: ರಾ ಎ ಎಮ್ ಇನ್ಸಪೆಕ್ಟರ ಬೆಳಗಾಂವ — ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು. ನನ್ನ ಮಿತ್ರನ ಹೆಂಡತಿಯು ರಕ್ತ ಮತ್ತು ಬಿಳಿ ಸೆರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ ೩ ಟ ಖ ಆಣೆ ೮

ವಿಳಾಸ— ಸಂಜೀವಿನೀ ಔಷಧಾಲಯ. ಮು ಪೋ ಮಿರಜ, S. M C

FOETOGENE
A vigilant guard to the ailments of PREGNANCY
The remedy to neutralise the toxins of PREGNANCY thereby minimising the chances of Abortions & Miscarriages
Dose—Preventive 1 dr every morning Curative 2 drm. thrice a day

THROLOGE
for Sore throat Cough & Cold & other long affections

HYSTERINE
A Tried Remedy for Hysteria & Epilepsy very useful Brain sedative in Insomnia & Mental derangements
Dose—1 to 2 dram adult 10 drops child thrice daily

MONOCAFISPIN
A Nondepresant Nervine Sedative Magical cure for Headaches & Neutagia Found useful in all pains of whatever origin it may be
Dose—1 to 2 tablets.

THE EASTERN RESEARCH LABORATORY,
GHAZIPUR U P INDIA

ಬರೇ ರೂ. 3-6-0ಕ್ಕೆ ಈ 8 ವಾಚುಗಳೂ ಸಾಮಾನುಗಳೂ

ಆಶ್ಚರ್ಯಕರ ನಿಜ! ಆದರೆ ಸತ್ಯ!

ಒಟ್ಟೊ ಸುಗಂಧ ರಾಜಾ ಎಂಬುದು ೩ ದಿನಗಳ ತನಕ ಪರಿಮಳಿಸುವ ಸುಗಂಧ ದ್ರವ್ಯ — ಬಾಟ್ಲಿಗೆ ೩ ಆಣೆ. ಮುಟ್ಟಿಸಿದ ೧೨ ತಾಸುಗಳೊಳಗೆ ರಿಂಗ್‌ವರ್ಮನ್ನು ಗುಣಪಡಿಸುವ ಮುಲಾಂ ಡಬ್ಬಿಗೆ ೩ ಆಣೆ. ಮೇಲಿನ ೧೮ ಬಾಟ್ಲಿ ಅಥವಾ ಎರಡೂ ಕೂಡಿಗಳನ್ನು ತರಿಸುವವರಿಗೆ ಭಂಗಾರದ ನಿಬ್ ಇರುವ ಫೌಂಟನ್ ಪೆನ್, ೩೦೦ ಗಜಗಳ ದೂರಕ್ಕೆ ಪ್ರಕಾಶವನ್ನೀಸುವ ಟೋರ್ಚ್ ಲೈಟ್ ೧, ಫೇನ್ಸಿ ರಿಸ್ಟ್‌ವಾಚು ೧, ಬಮೂರ ಟೈಂಪೀಸ್ ಒಂದು, ಅಥವಾ ಕೈಲ್ಲೇ ಮ್ಯುರ್‌ಗಾರ್ಡ್ ಲಿವರ್ ಪೋಕೆಟ್ ವಾಚ್ ಒಂದು ಧರ್ಮಾರ್ಥ ಸಿಗುವುದು. ಪ್ರತಿಯೊಂದು ವಾಚಿಗೆ ೧೦ ವರ್ಷಗಳ ಗೇರಂಟಿ ಇದೆ. ಸಂತೋಷಿಯಾದವರ ಹಣ ವಾಪಾಸ್. ಟಪ್ಪಾಲ್ ಖರ್ಚು ಪ್ರತ್ಯೇಕ.

ವಿಳಾಸ — **Sharma Brothers & Co,**
Post Box 2418, section 46 CALCUTTA

FOR JOB WORK IN
Typewriting
at most Morderate Rates
consult
Bangra Ramanath Shanbhogue
Britto Building Upstairs,
HAMPANKATTA, MANGALORE

The Canara Bank, Ltd. Mangalore.
ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.
NOTICE

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡಕೊಂಡ ಮೊಬಲಗುಗಳನ್ನು ವ್ಯಾಜಗೆ ಕೊಡದೆ, ಸದ್ರಿಯವರಿಗೆ ಬಿಟ್ಟ ಟಪ್ಪಾಲು ರಿಜಿಸ್ಟ್ರಿ ನೋಟೀಸು ಸದ್ರಿಯವರು [illegible] ಟಪಾಲು ಬಂದಿರುವುದರಿಂದ, ಸದ್ರಿಯವರು ಅಡವಿಟ್ಟ ನಗನಗಳನ್ನು ಇದೇ ಬರುವ ಸೆಪ್ಟೆಂಬರ್ ತಿಂಗಳ ತಾರೀಕು 16ನೇ [illegible] ದಿವಸ ಮಧ್ಯಾಹ್ನ ಘಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಲೋನ್ ನಂ. 30/30 ದಿ [illegible], ಕ [illegible] ನವರ [illegible], ಹೆಡ್‌ಕೊನ್ಸ್‌ಟೆಬಲ್, ಅತ್ತಾವರ, ಮಂಗಳೂರು. ಅಸ್ಲ ರೂ —100/ ಏಲಂ ತಾ ವರೆಗೆ ಬಡ್ಡಿ ರೂ 1-8-1 ಖರ್ಚ 0—5—3

ಈ ನೋಟೀಸಿನ ಖರ್ಚು [illegible]

Office of the Bank
Mangalore
19 8—1932

M Mukund Kini,
ಅಸಿಸ್ಟೆಂಟ್ ಸೆಕ್ರೆಟರಿ

In the
High Court of Judicature Madras

(Ordinary Original Jurisdiction)

O P N 165 of 1932

The above petition for confirmation by the High Court of the alterations in the Memorandum of association of the Canara Bank Ltd Mangalore come on for hearing on or after the 26th instant Anybody interested and wishing to have a say in the matter may appear before the Chamber Court on that day Copy of the altered memorandum can be had either from the Registered Office of the Bank or from me at 46 Big Street, Triplicane

Madras
12—8 1932

K P Sarvotham Rao,
Advocate for Petitioner

ನೋಟೀಸು.

ಮದ್ರಾಸ್ ಹೈಕೋರ್ಟ್ ಒಫ್ ಜುಡಿಕೇಚರ್‌ನಲ್ಲಿ

(ಒರಿಜಿನಲ್ ಜುರಿಸ್ಡಿಕ್ಷನ್)

O P No 165 of 1932

ದಿ ಕೆನರಾ ಬೇಂಕ್ ಮಂಗಳೂರು ಇದರ ಮೆಮೋರಂಡಮ್ ಒಫ್ ಎಸ್ಸೋಸಿಯೇಶನ್‌ನಲ್ಲಿನ ಬದಲಾವಣೆಗಳನ್ನು ಕಾಯಂ ಮಾಡುವ ಬಗ್ಗೆ ಹೈಕೋರ್ಟಿನ ಮೇಲಿನ ಅರ್ಜಿಯು ಇದೇ ತಿಂಗಳ ತಾ 26ಕ್ಕೆ ಅಥವಾ ಆ ಮೇಲೆ ತನಿಖೆ ಬಗ್ಗೆ ಹಾಜರ್ ಆಗಿಯದೆ. ಈ ವಿಷಯದಲ್ಲಿ ಸಂಬಂಧಪಟ್ಟವರು ಮತ್ತು ಆಕ್ಷೇಪ ಮಾಡಲಿಕ್ಕೆ ಇಚ್ಛಿಸುವವರು ಸದರಿ ದಿನ ಹೈಕೋರ್ಟಿನ ಛೇಂಬರ್ ಕೋರ್ಟಿನ ಮುಂದೆ ಹಾಜರಾಗಬಹುದು. ಬದಲಾಯಿಸಲ್ಪಟ್ಟ ಮೆಮೋರಂಡಮಿನ ಪ್ರತಿಯನ್ನು ಬೇಂಕಿನ ರಿಜಿಸ್ಟರ್ಡ್ ಆಫೀಸಿನಲ್ಲಿಯಾಗಲೀ, 46 ಬಿಗ್ ಸ್ಟ್ರೀಟ್, ಟ್ರಿಪ್ಲಿಕೇನ್, ಈ ನನ್ನ ವಿಳಾಸಕ್ಕೆ ಬರೆದು ನನ್ನಿಂದಾಗಲೀ ಪಡಕೊಳ್ಳಬಹುದು.

ಮದ್ರಾಸು,
12-8-1932

K P Sarvotham Rao.
ಅರ್ಜಿದಾರರ ಎಡ್ವಕೇಟ್.

'ಸುಸಂಧಿ' ಕೆಲವೇ ಪ್ರತಿಗಳು!
ಶಾಲಾ ಕಾಲೇಜು, ಲೈಬ್ರರಿಗಳಿಗೂ, ಗ್ರಂಥಕರ್ತರಿಗೂ ನಮ್ಮ ಜಿಲ್ಲೆಯ ಅನುಭವವನ್ನು ಮೊದಲಿಚ್ಛಿಸುವವರಿಗೂ, ಬೇಕಾಗಿರುವ ಕ್ರೌನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ವೆಂಬ ಉದ್ಗ್ರಂಥ! ಬೆಲೆ ಪ್ರತಿಯೊಂದಕ್ಕೆ ಟಖ ಸಹಿತ ರೂ 2

ಶಾರದಾ ಛಾಪಖಾನೆ,
ಮಂಗಳೂರು

ಕಾಣೆಯಾದ ಮೂವರು ವೈಮಾನಿಕರು ಕಾಣಸಿಕ್ಕಿದರು!

ಊರಲ್ಲಿ ಇನ್ಸೂರ್'— ಇಂಗ್ಲಾಂಡಿನಲ್ಲಿ ಎಲ್ಲೆಡೆಗಳಲ್ಲಿಯೂ ರಿವಾಲ್ವರು —ಗ್ರೇಮಫೋನುಗಳ ಮೇಲೂ ಬಿದ್ದರು —ಭಂಗಾರದ ಓಟ!—ತರುಣಿಯ ಸಾಹಸ!—ಗುಟ್ಟು ಬಿಟ್ಟದ್ದಕ್ಕೆ ಕೊಂದ' ಇಬ್ಬರು ದಾಸರನ್ನು ನಂಬಿ ಕುರುಡುದಾಸ ಕೆಟ್ಟ'—ಡಾಕ್ಟರ್, ಆದರೆ ತಾಜಾ ಕಳ್ಳ— ಹಿಂದೂ ಮತದ ಮೇಲೆ ಆರೋಪ!—

ಡೆಕ್ಕಾದದಲ್ಲಿ ಪ್ರೋ. ಅಧಿಕಾರಿಗೆ ಗುಂಡು!

ವ್ಯಾಪಾರಸ್ಥರಿಗೆ ಸುಸಂಧಿ!
ದೀಪಾವಳಿಯು ಸಮೀಪಿಸಿತಲ್ಲವೇ? ನಿಮಗೆ ಬೇಕಾಗುವ ವರ್ಗ, ಊಳಿಗ ಪುಸ್ತಕಗಳೂ, ಆಮಂತ್ರಣ ಪತ್ರಿಕೆಗಳೂ ಅಗ್ಗದಲ್ಲಿ, ಅನುಕೂಲಾನುಸಾರವಾಗಿ, ಕ್ಲಪ್ತ ಸಮಯಕ್ಕೆ ಸಿಗಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬನ್ನಿರಿ ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ.

ಶಾರದಾ ಛಾಪಖಾನೆ,
ಮಂಗಳೂರು

ವಿಶೇಷ ವಾರ್ತೆ.

ಕಳೆದ ಎಪ್ರಿಲ್ ೩ನೇ ದಿನ ಇಲ್ಲಿಗೆ 'ಜಂಕರ್ಸ್ ಡಿ 1925 ಎಂಬ ಜರ್ಮನ್ ವಿಮಾನವು ಬಂದಿತ್ತಷ್ಟೆ! ಅದರ ಕೆಪ್ಟನ್ ಹೆನ್ಸ್ ಬೆರ್ಟ್ರಾಂ ಮತ್ತು ಹರ್ ಕ್ಲಾವುಸ್ಲರ್ ವೈಮಾನಿಕರು ಮೂವರು ಆಸ್ಟ್ರೇಲಿಯಾ ದೇಶದಲ್ಲಿ ಮೇ ತಿಂಗಳ ೧೫ನೇ ದಿನದಿಂದ ಕಾಣೆಯಾದರೆಂದು ಸುದ್ದಿಯು ಹರಡಿತ್ತಷ್ಟೆ. ಅವರ ಪತ್ತೆಯನ್ನು ಮಾಡಲು ಎಂತೆಂತಹ ಸಾಹಸವನ್ನು ಮಾಡಿದರೂ ಸಾಧ್ಯವಾಗಲಿಲ್ಲ. ಕೊನೆಗೆ ಅವರು ವ್ಯತ್ಯಸ್ತವಶವಾದರೆಂದು ಅವರ ಆಶೆಯನ್ನು ಬಿಟ್ಟರು. ಇತ್ತಲಾಗೆ ಅವರು ಮೂವರೂ ಆಸ್ಟ್ರೇಲಿಯದ ಒಂದು ಗೊಂಡಾರಣ್ಯದಲ್ಲಿ ಅಸ್ಥಿಪಂಜರರಾಗಿ ವನವಾಸಿಗಳ ಸಹಾಯದಿಂದ ಕಾಣಸಿಕ್ಕಿರುವರು. ಅವರನ್ನು ಕೊನ್ಸ್ಟೇಬಲ್ ಮಾರ್ಶಲ್ ಎಂಬವರು ಬಹು ಸಾಹಸಪಟ್ಟು ರಕ್ಷಿಸಿದರು. ಈ ದುರದೃಷ್ಟಶಾಲಿಗಳು ತಮ್ಮ ವಿಮಾನದ ಉಸ್ಪೋಯರಿನಲ್ಲಿದ್ದ ನೀರನ್ನು ಕುಡಿದೂ, ಹಲ್ಲಿ ಬಾವಲಿಗಳನ್ನು ತಿಂದೂ ಎರಡು ತಿಂಗಳುಗಳ ತನಕ ಬದುಕಿದರೆಂದೂ, ರಕ್ಷಣೆಗಾಗಿ ಬಾಂಧವರು ಬಂದೊಡನೆ "ಅನ್ನ! ಅನ್ನ!" ಎಂದು ಹಾಹಾ ತೋರಿಯುತ್ತಿದ್ದರೆಂದೂ ವಾರ್ತೆ ಬಂದಿದೆ. ಮೇ ೧೫ನೇ ದಿನ ಅವರು ಆ ವನವನ್ನು ಸೇರಿ ಕಂಗಾಲಾದರು. ತಾವು ಬದುಕುವ ಆಶೆಯನ್ನು ಅವರು ಸಂಪೂರ್ಣ ಬಿಟ್ಟಿದ್ದರು. ಆಕಾಶದಲ್ಲಿ ವಿಮಾನಗಳೂ, ವನದ್ವೀಪದ ಕಡಲಬಳಿ ಹಡಗುಗಳೂ ಸಂಚರಿಸುತ್ತಿದ್ದವಾದರೂ, ಅವುಗಳು ತಮ್ಮ ಸಂಜ್ಞೆಗಳನ್ನು ನೋಡಲಿಲ್ಲವೆಂದೂ ಅವರ ಹೇಳಿಕೆಯಾಗುತ್ತದೆ. ಅಂತೂ ರೂಬಿನ್ಸನ್ ಕ್ರೂಸೋನಂತೆ ವನದ್ವೀಪದಲ್ಲಿ ದಿನಗಳೆದರು. ಅವರ ರಕ್ಷಣೆಯ ವಾರ್ತೆಯು ಎಲ್ಲೆಲ್ಲೂ ಹರಡಿದೆ.

ಊರಲ್ಲಿ ಇನ್ಸೂರ
ಈ ಹಣ ಯಾರಿಗೆ'

ಜೋರ್ಜ್ ಬರ್ನಾರ್ಡ್ ಶಾ ಎಂಬವರು ಲೋಕವಿಖ್ಯಾತ ನಾಟಕಕಾರರು, ತತ್ವಪ್ರಸಾರಕರು. ಆಂಗ್ಲ ಲೇಖಕರಲ್ಲಿ ಇವರನ್ನು ಪ್ರತಿಭಾಶಾಲಿಗಳು. ಈಗ ಇಲ್ಲಿ—ಇವರು ಮೊನ್ನೆ ತನ್ನ ೭೩ನೇ ಜನ್ಮತಿಥಿ ಸಮಾರಂಭವನ್ನು ನೆರವೇರಿಸಿದರು. ಇಷ್ಟು ವೃದ್ಧರಾಗಿರುವಾಗಲೂ ಇವರ ದೃಢಾಕೃತಿಯು ಕೊನೆಗೊಂಡಿರುವುದಿಲ್ಲ. ತನಗೆ ಯಾರಾದರೂ ಒಂದು ಸಾವಿರ ಪೌಂಡುಗಳನ್ನೂ ಒಂದು ಬಿರುದನ್ನೂ ಕೊಟ್ಟರೆ ಅದನ್ನು ಸ್ವೀಕರಿಸುವೆನೆಂದಿರುವರು. ಈಗ ಒಂದು ಸುದ್ದಿ!—ಇವರು ೧೦,೦೦೦ ಪೌಂಡುಗಳಿಗೆ ತನ್ನ ಜೀವವಿಮೆಯನ್ನಿತ್ತಿರುವರಾಗಿಯೂ, ಇನ್ಸೂರೆನ್ಸು ಕಂಪೆನಿಯವರು ಇವರನ್ನು ಪ್ರಥಮ ತರಗತಿಯವರನ್ನಾಗಿ ಆರಿಸಿರುವರಾಗಿಯೂ, ಇವರ ಪೋಲಿಸಿಗೆ ಯಾರನ್ನೂ ಸಾಕ್ಷಿಯಾಗಿ ಕಂಪೆನಿಯವರು ತಗೆದುಕೊಂಡಿರುವುದಿಲ್ಲವೆಂದೂ ತಿಳಿದುಬಂದಿದೆ.

ಇಂಗ್ಲಾಂಡಿನಲ್ಲಿ ಎಲ್ಲಡೆಗಳಲ್ಲಿಯೂ ರಿವಾಲ್ವರು! ಇಲ್ಲಿಯಾಗುತ್ತಿದ್ದರ?

ಈಗೀಗ ಇಂಗ್ಲಾಂಡಿನಲ್ಲಿ ತುಪಾಕಿ ರಿವಾಲ್ವರುಗಳಿಂದ ಬಹಳ ಮರಣಗಳೂ ಅತ್ಯಾಚಾರಗಳೂ ಆಗುತ್ತಿವೆ. ಇಷ್ಟರ ತನಕವೂ ಅಲ್ಲಿಯ ಜನರ ಕೈಯಲ್ಲಿರುವುದು ಲೈಸನ್ಸ್ ಪಡೆದ ರಿವಾಲ್ವರು ಪಿಸ್ತೂಲುಗಳೆಂಬ ಭಾವನೆಯು ಅಧಿಕಾರಿಗಳಲ್ಲಿತ್ತು. ಆದರೆ ಈಗ ಗುಟ್ಟು ಹೊರಗೆ ಬಿದ್ದು ಇಂಗ್ಲಾಂಡಿನಲ್ಲಿ ಹೆಚ್ಚಿನ ಎಲ್ಲರ ಸ್ವಾಧೀನದಲ್ಲಿಯೂ ಲೈಸನ್ಸು ಇಲ್ಲದ ರಿವಾಲ್ವರು ಮೊದಲಾದ ಅಪಾಯಕರ ಶಸ್ತ್ರಗಳಿವೆಯೆಂದು ಪೋಲೀಸರು ಕಂಡುಹಿಡಿದಿರುತ್ತಾರೆ. ಈ ಸಂಬಂಧವಾಗಿ ಪೋಲೀಸರು ಸಾರ್ವತ್ರಿಕವಾದ ಶೋಧೆಯನ್ನು ನಡೆಸಲಿರುವರೆಂದೂ ಸಾವಿರಗಟ್ಟಲೆ ರಿವಾಲ್ವರುಗಳನ್ನು ಬೇಗನೇ ವಶೀಕರಿಸಲಿರುವರೆಂದೂ ಪ್ರಕಟವಾಗಿದೆ.

ಗ್ರೇಮಫೋನು ರಿಕಾರ್ಡುಗಳ ಮೇಲೂ ಬಿದ್ದರು! ಸ್ವರವು ಕ್ರಾಂತಿಯುತ್ಪಾದಕವೇ?

ಕಲ್ಕತ್ತದ ಎಚ್. ಎಂ. ವಿ. ಸಿಂಡಿಕೇಟ್ ಲಿಮಿಟೆಡ್ ಎಂಬ ಕಂಪೆನಿಯವರು ಪ್ರಚೋದನವಾದ ಬಂಗಾಳೀ ಹಾಡುಗಳನ್ನು ತಮ್ಮ ಗ್ರೇಮಫೋನುಗಳಿಗೆ ತೆಗೆದುಕೊಂಡರು. ವಿದೇಶೀಯ ರಿಕಾರ್ಡುಗಳಿಗಿಂತಲೂ ಅವುಗಳು ಉತ್ತಮವಾದುವು. ಆ ರಿಕಾರ್ಡುಗಳು ಪ್ರಕಟವಾಗಿ ಬಂದವು. ದಿನಗಳಾಗುತ್ತಲೇ ಅವುಗಳು ಮಾರಾಟಕ್ಕಿದ್ದ ಅಂಗಡಿಗಳಿಗೆ ಪೋಲೀಸರು ನುಗ್ಗಿ ಎಲ್ಲಾ ರಿಕಾರ್ಡುಗಳನ್ನು ವಶೀಕರಿಸಿಕೊಂಡರು. ಕಂಪೆನಿಯವರು ಏನು ಮಾಡುವರೆಂದು ತಿಳಿದುಬಂದಿಲ್ಲ.

ಭಂಗಾರದ ಓಟ!—ಇಂಗ್ಲಾಂಡಿಗೆ!

ಕಳೆದ ವಾರದಲ್ಲಿ ಮುಂಬಾಯಿಯ ಮೈಲ್ ಸ್ಟೀಮರ್ ಎಸ್. ಎಸ್. ವೆಲೋಜವು ರೂಪಾಯಿ [illegible] ಮೌಲ್ಯದ ಭಂಗಾರವನ್ನು ಇಂಗ್ಲಾಂಡಿಗೆ ಒಯ್ದಿತು. ಮುಂಚಿನ ವಾರದಲ್ಲಿ ರೂ [illegible] ಮೌಲ್ಯದ ಭಂಗಾರವು ಅತ್ತ ತೆರಳಿತ್ತು. ಎರಡನೆಯೇ ಹೊರೆದೊಂದ ರೂ [illegible] ಮೌಲ್ಯವು ಎಮ್ಸ್ಟರ್ಡೇಮಿಗೆ ಉರುಳಿತು. ಒಂದನೆ ಭಂಗಾರದ ಸ್ಟೇಂಡರ್ಡನ್ನು ಇಂಗ್ಲಾಂಡು ಬಿಟ್ಟಂದಿನಿಂದ ಇಂದಿನ ವರೆಗೆ ಒಟ್ಟು [illegible] ರೂಪಾಯಿ ಬೆಲೆಯ ಬಂಗಾರವು ಇಂಗ್ಲಾಂಡನ್ನು ಸುರಕ್ಷಿತವಾಗಿ ಮುಟ್ಟಿತು. ಆದರೆ ಈ ಭಂಗಾರದ ಯಾತ್ರೆಯು ಈಗೀಗ ಯಾವುದೋ ಒಂದು ಅಗೋಚರ ಶಕ್ತಿಯಿಂದಾಗಿ ಬಹಳ ನಿಧಾನವಾಗಿ ಆಗುತ್ತಿದೆಯೆಂದು ವಿದೇಶೀಯರು ಸಂತಾಪಪಡುತ್ತಿದ್ದಾರೆ.

ವಿವಾಹವಾದ ವಾರ್ತೆ ನನಗೆ ಗೊತ್ತೇ ಇಲ್ಲ!'
ತರುಣಿಯ ಸಾಹಸ

ಅಹ್ಮದಾಬಾದಿನಿಂದೊಂದು ವಾರ್ತೆ: ೧೮ ವರ್ಷ ಪ್ರಾಯದ ಪಾರ್ವತಿ ಎಂಬ ತರುಣಿಯು ಜಾತಿಗ್ರಹಸ್ಥನಾದ ರಂಚೋಡ್ ಎಂಬ ತರುಣನೊಬ್ಬನೊಡನೆ ಗಾಡಿಯಲ್ಲಿ ಸವಾರಿ ಬೆಳೆಸುತ್ತಿದ್ದಳು. ಪೋಲೀಸರು ಗಾಡಿಯನ್ನು ತಡೆದು ಅವನ್ಯಾರೆಂದು ಪ್ರಶ್ನಿಸಿದರು. 'ಇವನು ನನ್ನ ಗಂಡ' ನನ್ನನ್ನು ಇವರು ವಿವಾಹವಾಗುವುದೆಂದು ನಿಶ್ಚಯವಾಗಿದೆ ಎಂದು ತರುಣಿಯ ಉತ್ತರ. ಇಬ್ಬರನ್ನೂ ನ್ಯಾಯಸ್ಥಾನಕ್ಕೆ ಒಯ್ಯಲಾಯಿತು. ವಿಚಾರಣೆಯಲ್ಲಿ ಆ ತರುಣಿಗೆ ಮೊದಲೊಂದು ವಿವಾಹವಾಗಿದ್ದಿತೆಂದೂ ಅವಳು ಮುಂಚಿನ ಗಂಡನನ್ನು ಬಿಟ್ಟು ಓಡಿದ್ದಳೆಂದೂ ತಿಳಿದುಬಂತು. "ಮುಂಚೆ ವಿವಾಹವಾದುದು ನನಗೆ ಗೊತ್ತೇ ಇಲ್ಲ. ನಾನು ಇವನನ್ನು ಮದುವೆಯಾಗುವೆನು" ಎಂದು ತರುಣಿಯ ಖಂಡಿತ ಮಾತು.

ಗುಟ್ಟು ಬಿಟ್ಟದ್ದಕ್ಕೆ ಕೊಂದ!
ಕೊಂದದ್ದಕ್ಕೆ ಮರಣ.

ಕಲ್ಕತ್ತದಲ್ಲಿ ಸುಲ್ತಾನ್ ಅಹ್ಮದ್ ಎಂಬವನೊಬ್ಬನು ತನ್ನ ನಾದಿನಿಯನ್ನು ರಹಸ್ಯವಾಗಿ ಪ್ರೀತಿಸಿದ. ಬೇಗುನ್ನಿಸಳ ಗಂಡ ಪರ ಊರಿನಲ್ಲಿದ್ದ. ಅವನಿಗೆ ತನ್ನ ಪತ್ನಿ ಬೇಗುನ್ನಿಸಳು ನಡೆಸಿದ ಅತ್ಯಾಚಾರವು ಗೊತ್ತಿದ್ದಿಲ್ಲ. ಆದರೆ ಅವನ ಸತ್ಯತೆಯ ಫಲವೋ ಎಂಬಂತೆ ಈ ಪ್ರಣಯ ಪ್ರಣಯಿನಿಯರ ಗುಟ್ಟು ಅವರ ಮನೆಯಲ್ಲಿದ್ದ ಬದನ್ನಿಸ್ಸಾ ಎಂಬವಳಿಂದ ಕಂಡು ಹಿಡಿಯಲ್ಪಟ್ಟಿತು. ಹುಡುಗಿಯು ಬಾಲ್ಯೆಯಲ್ಲವೇ? ಸುದ್ದಿಯು ಮನೆಯ ಬಾಗಿಲಿನಿಂದ ಹೊರಬಿತ್ತು. ತಮ್ಮ ಈ ಗುಟ್ಟು ಹೊರಬಿದ್ದುದನ್ನು ನೋಡಿ ಪ್ರಣಯ ಪ್ರಣಯಿನಿಯರು ಆ ಹುಡುಗಿ ಬದನ್ನಿಸ್ಸಾಳನ್ನು ಕೊಲ್ಲುವ ನಿರ್ಧಾರ ಮಾಡಿದರು. ಆ ಹುಡುಗಿಯ ಚಿಕ್ಕತಾಯಿಯು ಅವಳನ್ನು ಒಂದೆರಡು ಮೈಲುಗಳ ದೂರದಲ್ಲಿರುವ ಮನೆಗೆ ಕರೆದುಕೊಂಡು ಹೋಗುವಂತೆ ನಟಿಸಿದಳು. ಹುಡುಗಿಯೂ ಅವಳ ಚಿಕ್ಕತಾಯಿಯೂ ಸಂಜೆ ಮಾರ್ಗದ ಮೇಲೆ ಹೋಗುತ್ತಿದ್ದಾಗ ಅಹ್ಮದನು ಒಂದು ಮರೆಯಲ್ಲಿ ನಿಂತುಕೊಂಡು ಧಾಳಿ ಮಾಡಿ ಪಕ್ಕನೆ ಹಾರಿ ಹುಡುಗಿಯನ್ನು ಕೊಂದನು. ಈಗ ಫಾಶಿಕಂಭಕ್ಕೆ ಏರಲಿದ್ದಾನೆ.

ದ್ವಿಪತ್ನೀವ್ರತ'
ಇಬ್ಬರು ದಾಸರನ್ನು ನಂಬಿ ಕುರುಡುದಾಸ ಕೆಟ್ಟ.

ಮುಂಬಾಯಿಯಲ್ಲಿ ಒಬ್ಬ ಹಿಂದೂವು ದ್ವಿಪತ್ನೀವ್ರತದಲ್ಲಿದ್ದ. ಇಬ್ಬರು ಪತ್ನಿಯರನ್ನೂ ಒಂದೇ ಮನೆಯಲ್ಲಿ ಬಿಟ್ಟಿದ್ದ. ಕಾಲಕ್ರಮೇಣ ಅವನಿಗೆ ಅವರಿಬ್ಬರ ಪಾತಿವ್ರತ್ಯದ ಶುದ್ಧತೆಯ ಮೇಲೆ ಸಂಶಯ ತೋರಿತು. ಪರಿಶೋಧನೆಯನ್ನು ಪ್ರಯಾಸಪಟ್ಟು ಮಾಡಿದ. ಅದರಲ್ಲಿ ಮುತ್ತೊಬ್ಬಳ ಸಹಾಯವೂ ಇಲ್ಲದಿಲ್ಲವೆಂದು ತಿಳಿದುಬಂತು. ರಾತ್ರಿ ಮನೆಗೆ ಹೋಗಿ ಕಬ್ಬಿಣದ ಸರಳನ್ನು ಒಲೆಯಲ್ಲಿ ಕಾಯಿಸಿ ಒಬ್ಬಳ ಅಸಂಬಂಧಕ್ಕಾಗಿಯೂ, ಇನ್ನೊಬ್ಬಳು ವಿಷಯವನ್ನು ಮರೆಮಾಚಿಸಿಟ್ಟುದಕ್ಕಾಗಿಯೂ ಚೆನ್ನಾಗಿ ಮುದ್ರೆಯೊತ್ತಿದ. ಈಗ ಪಾಪದ ಅವನಿಗೆ ೧೦೦ ರೂಪಾಯಿ ಜುಲ್ಮಾನೆ ಅಥವಾ ನಾಲ್ಕು ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ಡಾಕ್ಟರ್ – ಆದರೆ ತಾಜಾ ಕಳ್ಳ

ಅಹ್ಮದಾಬಾದಿನಲ್ಲಿ ಬಾಬೂಲಾಲ್ ಎಂಬ ಡಾಕ್ಟರನೊಬ್ಬನು ತಾನು ಮಹಾ ವೈದ್ಯನೆಂದು ಪ್ರಕಟಿಸಿದ್ದ. ಅನೇಕರು ಅವನಲ್ಲಿಗೆ ಹೋದರು. ಅನೇಕ ಅನಾಹುತಗಳನ್ನು ನಡೆಯಿಸಿದ್ದನು. ಇತ್ತಿತ್ತಲಾಗೆ ನೇತ್ರರೋಗ ಪರೀಕ್ಷಾರ್ಥವಾಗಿ ಒಬ್ಬಳು ತಾಯಿಯು ತನ್ನ ಮಗನನ್ನು ಅವನಲ್ಲಿಗೆ ಕಳುಹಿಸಿದಳು. ಡಾಕ್ಟರನು ಆ ಹುಡುಗನನ್ನು ಮಲಗಿಸಿ, ಮದ್ದುಕೊಡುವ ನೆಪದಿಂದ ವಿಷವನ್ನು ಸೇವಿಸ ಕೊಟ್ಟ. ತಾಯಿಯು ಬರುವಷ್ಟರೊಳಗೆ ಮಗನು ಪ್ರಾಣೋತ್ಕ್ರಮಣಕ್ಕೆ ತೊಡಗಿದ್ದನು. ನೋಡುತ್ತಲೇ! ಹುಡುಗನ ಮೈಮೇಲಿನ ಆಭರಣಗಳೆಲ್ಲವೂ ಕಾಣೆ! ಅವಳೇ ವಿಷಯವನ್ನು ಪೋಲೀಸರಿಗೆ ಮುಟ್ಟಿಸಿದಳು. ಬಾಬೂಲಾಲನನ್ನು ಸೆರೆಹಿಡಿಯಲಾಯಿತು. ವಿಚಾರಣೆಯಲ್ಲಿ, ಅವನು ಇದೇ ತರದ ಚಿಕಿತ್ಸನದಲ್ಲಿ ಧನಹರಣ ಮಾಡುತ್ತಿದ್ದನೆಂದು ತಿಳಿದುಬಂತು. ಅಂತಹ ಕ್ರೂರಾತ್ಮಕನನ್ನು ದೇಶದಲ್ಲಿ ಜೀವಿಸಬಿಟ್ಟರೆ ಮಹದನರ್ಥಗಳು ಸಂಭವಿಸುವುವೆಂದು ಜಡ್ಜರು ಅವನಿಗೆ ಗಲ್ಲಿಗೇರಲು ಆಜ್ಞಾಪಿಸಿದರು.

ಇನ್ನೊಬ್ಬಳು ಮೇಯೋ!
ಹಿಂದೂ ಮತದ ಮೇಲೆ ಆರೋಪ

ಅಮೇರಿಕದ ಮಿಸ್ ಮೇಯೋ ಎಂಬವಳು ಮದರ್ ಇಂಡಿಯಾವೆಂಬ ಪುಸ್ತಕವನ್ನು ಬರೆದು ಹಿಂದೂ ಮತವನ್ನೂ ಹಿಂದೂಗಳ ಆಚಾರ ವಿಚಾರಗಳನ್ನೂ ನಿಂದಿಸಿ ಹೀಯಾಳಿಸಿ ಹಣ ಘಳಿಸಿ ಕೀರ್ತಿಶೀಲ ರವೀಂದ್ರನಾಥ ಗಾಂಧಿ ಎಂತಹ [illegible] ಪ್ರತಿಯೊಬ್ಬ ಪ್ರಮುಖ [illegible] ರೀತಿಗೆ ಗುರಿಯಾಗಿ ಮೂಲೆ ಸೇರಾಗಿರುವಳಷ್ಟೆ! ಅವಳಂತಹ ಇನ್ನೊಬ್ಬ ಪ್ರಿಶಿಯಾ ಕೆಂಡಲ್ ಎಂಬವಳು ಈಗ ತಲೆಯೆತ್ತಿದ್ದಾಳೆ. ಇವಳು 'ಇಂಡಿಯಾ ಎಂಡ ದಿ ಬ್ರಿಟಿಷ್ ಎ ಕ್ವೆಸ್ಟ್ ಒಫ್ ಟ್ರುತ್' (India and the British A quest of Truth) ಎಂಬ ಪುಸ್ತಕವನ್ನು ಅಮೇರಿಕದಲ್ಲೂ ಇಂಗ್ಲಾಂಡಿನಲ್ಲೂ ಒಂದೇ ಸಲ ಬಹು ಭರದಿಂದ ಪ್ರಕಟಿಸಿದ್ದಾಳೆ. ಇಂಗ್ಲೀಷ್ ಪತ್ರಿಕೆಗಳು ಪ್ರಕಟವಾದ ಕೆಲವು ದಿನಗಳಲ್ಲೇ ಮಾರಿಹೋಯಿತಂತೆ. ಈ ಪುಸ್ತಕವನ್ನು ದೀನಬಂಧು ಸಿ. ಎಫ್. ಎಂಡ್ರೂಜರು ವಿಮರ್ಶಿಸುತ್ತಾ, 'ಹಿಂದೂ ಧರ್ಮದ ಮೇಲೊಂದು ಅವಮಾನದ ಗದೆಯನ್ನೇರಿಸಿದ್ದಾಳೆ. ಇಂತಹ ಸಂದರ್ಭದ ಪುಸ್ತಕಗಳು ಪ್ರೋತ್ಸಾಹನೀಯವಲ್ಲ. ಕ್ರೈಸ್ತರೂ ವೈಷ್ಣವರೂ ನಾವು ಹಾಕುವ ಅರ್ಥಕ್ಕೆ ಇವಳು ಅನರ್ಥವನ್ನು ತಂದೊಡ್ಡಿದ್ದಾಳೆ" ಎಂದಿತ್ಯಾದಿಯಾಗಿ ಬರೆದಿರುತ್ತಾರೆ.

Wanted.

For the Sun Rise Banking Company Limited Bangalore in the Districts of South Kanara, Malabar and Coorg three Superintendents of Branches and fifteen Taluk Branch Managers on a Monthly Salary of Rs 60 20-300 and Rs 35 10—150 plus Rs 30 and 22-8-0 respectively as Office and Conveyance Allowance Also 75 Village Agents on a salary of Rs 20—3—50 Only influential business men who can hold Savings Bank Deposit Certificate of this Company of Rs 500, Rs 150 and Rs 12—8—0 repectively need only apply personally or with six annas postage stamps to the Secretary now camping at the office of the Chairman,

Mr C Vedaji, Rao Sahib B. A. B. L.
First Class Hony, Magistrate,
Falnir, MANGALORE S K.

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಶಾಸ್ತ್ರಗಳಲ್ಲಿ ಮುಖ್ಯವಾಗಿ ನರರೋಗಚಿಕಿತ್ಸೆಯಲ್ಲಿಯೂ ಬಹಳ ಹೆಸರು ಪ್ರಸಿದ್ಧರಾದ 'ಧನ್ವಂತ್ರಿ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ' ಅವರ ಶಿಷ್ಯರೆನಿಸಿ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅವಸ್ಥೆಯವರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ತೈಲಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಗುತ್ತವೆ. [illegible] ಇರುವವು ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, [illegible] ಅಜೀರ್ಣದ ಕ್ರಮ, ನಿದ್ರೆ [illegible] ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಈ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದಿದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮತ್ತು ಒಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ [illegible] ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ [illegible] ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ರೋಗಿಗಳಿಗೆ ಅವರ ಅಗತ್ಯದ ಮಟ್ಟಿನ [illegible] ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ತಯಾರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸಹ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

[illegible] ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು,

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಖದ್ದರ್ ರೇಶ್ಮೆ ಮಡಿಗಳಿಗೆ ಗಮನ ಕೊಡಿರಿ.

S U N · & CO.

Choukhumba, Benares City

ಮೂರು ಇನಾಮುಗಳು.



ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1 ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ, ಕದಪಾಮ್ಸು, ಪೇಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಊಲ್ಲನ್ ಚೌಕ, ಧಾವಳಿ, ಸಾರ್ಮರಿ, ತರ ತರದ ರುದ್ರಾಕ್ಷಿಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಖದ್ದರ್ ಮಡಿ–6 ಮೊಳ, 2 ಮೊಳ ಅಗಲ ರೂ 2ರಿಂದ ರೂ 3 ಮೊಳ 8ರದ್ದು 2–12–0ರಿಂದ ರೂ 4 10 ಮೊಳ, 2½ ಅಗಲ ರೂ. 4ರಿಂದ ರೂ 5 ಮೊಳ 12 + 2½ ರೂ. 5ರಿಂದ 6–8–0 ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ, ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಕಂಬಾ, ಬನಾರಿಸ್ (ಕಾಶೀ)

ವಿದೇಶೀಯದ ಎಲ್ಲವನ್ನು ಬಹಿಷ್ಕರಿಸಿ ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಸ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ.
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಬಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ. ಆ. ದಾದರ್ ಮುಂಬಾಯಿ 14
Dr. H. L. Batliwalla, Sons & Co., Ltd.
Kadell Road, P O. Dadar, Bombay, 14.
ತಂತಿ ವಿಳಾಸ–"CAVASPUR" Bombay
ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ—ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಶೀಘ್ರಗುಣದ ಮೂರು ರತ್ನಗಳು.

ಲೋಧ್ರ —ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯೌಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ —ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ.—ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಶೇಠ ಜಂಡೂ
ಭಗ್ವಾನ್‌ಜೀ [illegible],
ಎಲ್ಲಾ ಔಷಧ ಮಾರುವವರಲ್ಲಿ ದೊರೆಯುತ್ತದೆ

The Zandu Pharmaceutical Works, Ltd., Bombay, 14.

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! **ಅಮೋಘ ಟಾನಿಕ್ಕು!!**

ಹಸಿ ಆಮಲಕ ಅನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಜ್ಞಾನಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದಾವರ್ತಿ ಉಪಯೋಗಿಸಿದರೆ ತಿಳಿಯುವುದು.

5 ಪಾ ಜಾಡಿ ರೂ. 10/– ಕ್ರಯ 1 ಪಾವು ಸೀಸೆ ರೂ. 2/8. ½ ಪಾ. ರೂ. 1/5 ¼ ಪಾ. ಆ. 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು.—ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು—ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು:—ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು.—ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು:—ಟಿ. ಸಿ. ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್,
ಬೆಂಗಳೂರು ಏಜಂಟರು:—ಫಿ. [illegible] ಕಂಪೆನಿ, ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ರಾಜಾರಾಮ ಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ.

ಲೇಖಕರು—ಗಂಗಾಪ್ರಸಾದ ಉಪಾಧ್ಯಾಯ, ಎಮ್ ಎ ಅಲ್ಲಾಹಾಬಾದ್

ಅನುವಾದಕರು:—ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ, ಮಂಗಳೂರು

— ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು —

ಅರ್ಥಾತ್ "ಶಕ್ತಿಶಾಲಿಯಾದ ಒಬ್ಬ ಚಕ್ರವರ್ತಿಯು ತನ್ನ ರಾಜ್ಯದಲ್ಲಿ ಪ್ರಜೆಗಳ ಉನ್ನತಿಗಾಗಿ ರೈತರ ವೇಷದಲ್ಲಿ ತಿರುಗಾಡುವಂತೆ ರಾಜರಿಗೆ ರಾಜನಾದ ಮತ್ತು ಜಗತ್ತಿನಲ್ಲಿ ವ್ಯಾಪಕನಾದವನೂ (ಪರಮಾತ್ಮನು) ಕೆಲವು ಸಾರಿ ದೇವತೆಗಳ ರೂಪವನ್ನೂ, ಒಂದೊಂದು ವೇಳೆಯಲ್ಲಿ ಮನುಷ್ಯರ ರೂಪವನ್ನೂ ಧರಿಸುತ್ತಾನೆ" ಎಂದು ಬರೆದಿದ್ದರು ಇದಕ್ಕೆ ರಾಮ ಮೋಹನರಾಯರು ಕ್ರಿ ಶ ೧೮೧೭ರಲ್ಲಿ ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ ಅದು ಹೇಗೆಂದರೆ —

"This comparison seems extremely objectionable and the inference from it totally inadmissible. For a king being ignorant of things out of the reach of his sight, and liable to be deceived respecting the secrets and private opinions of his subjects, may sometimes be obliged to travel through his kingdom to acquire knowledge of their welfare personally" (P. 129.)

"ಈ ತುಲನೆಯು ಅತ್ಯಂತ ಆಕ್ಷೇಪಕರವಾಗಿಯೂ ಇದರಿಂದ ತೆಗೆಯಲ್ಪಟ್ಟ ಪರಿಣಾಮವು ಸರ್ವಥಾ ಅನುಚಿತವಾಗಿಯೂ ಕಂಡುಬರುತ್ತದೆ ಹೇಗೆಂದರೆ—ರಾಜನು ತನ್ನ ದೃಷ್ಟಿಯ ಹೊರಗಿನ ವಿಚಾರಗಳನ್ನು ಸ್ವತಃ ತಿಳಿಯಲಾರನು ಇದರಿಂದಾಗಿ ಒಂದೊಂದು ವೇಳೆ ಅವನು ಪ್ರಜೆಗಳಿಂದ ಮೋಸ ಹೋಗುವ ಸಂದರ್ಭ ಬರುವುದುಂಟು ಆದ್ದರಿಂದ ಪ್ರಜೆಗಳ ಸ್ಥಿತಿಗತಿಗಳನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕಾಗಿ ಮತ್ತು ಅವರ ಸುಖಕ್ಕೆ ಬೇಕಾದ ಏರ್ಪಾಡುಗಳನ್ನು ಸ್ವತಃ ಕಂಡುಹಿಡಿಯುವುದಕ್ಕಾಗಿ ತನ್ನ ರಾಜ್ಯದಲ್ಲಿ ಸಂಚರಿಸಬೇಕಾಗುತ್ತದೆ"

ಪರಂತು ಪರಮಾತ್ಮನಾದರೋ ಸರ್ವಜ್ಞನೂ ಸರ್ವವ್ಯಾಪಕನೂ ಆಗಿರುವನು ಅಂಥವನಿಗೆ ಈ ತರದ ಕಾಲ್ಪನಿಕ ರೂಪಗಳ ಅಗತ್ಯವೇನು?

ಬ್ರಾಹ್ಮಣನ ಇನ್ನೊಂದು ಯುಕ್ತಿಯನ್ನು ನೋಡಿರಿ

"They are as pictures, which recall to the memory of a dear and absent friend, or like the worship of the moon, reflected in various waters"

"ಭಿನ್ನ ಭಿನ್ನ ಜಲರಾಶಿಯಲ್ಲಿ ಬೀಳುತ್ತಿರುವ ಚಂದ್ರನ ಪ್ರಕಾಶದಿಂದ ಚಂದ್ರನನ್ನು ಪೂಜಿಸುವ ಅಥವಾ ನಮ್ಮ ಎದುರಿಗೆ ಇಲ್ಲದ ನಮ್ಮ ಪ್ರೀತಿಗೆ ಪಾತ್ರರಾದವರ ಯಾ ಮಿತ್ರರ ನೆನಪಿಗಾಗಿ ಅವರ ನಕ್ಷೆಗಳನ್ನು ನಮ್ಮ ಮುಂದೆ ಇಟ್ಟುಕೊಂಡಿರುವ ಪದ್ಧತಿಗೆ ಮೂರ್ತಿ ಪೂಜೆಯ ಪದ್ಧತಿಯೂ ಸರಿಹೋಲುತ್ತದೆ"

ಇದಕ್ಕೆ ರಾಮ ಮೋಹನರಾಯರ ಉತ್ತರವೇನೆಂದರೆ:

"This observation of the learned Brahmin induces me to suppose that he must have formed a nation of the God head quite strange and contemptible, for it is almost impossible for a man, who has a becoming idea of God's superiority to all creatures, to represent Him, as the Hindoos very often do, in a form so shameful that a description of it is prohibited by common decency. (P. 129.)

ವಿದ್ವಾಂಸರಾದ ಬ್ರಾಹ್ಮಣರ ಅಭಿಪ್ರಾಯವನ್ನು ಆಲೋಚಿಸಿ ನೋಡುವಾಗ ಅವರು ಪರಮಾತ್ಮನಿಗೆ ವಿಚಿತ್ರ ಮತ್ತು ಅಶ್ಲೀಲ (ಕೆಟ್ಟದಾದ) ವಾದ ಆಕಾರವನ್ನು ಮಾಡಿರುವರೆಂಬದಾಗಿ ಕಂಡುಬರುತ್ತದೆ. ಯಾಕೆಂದರೆ ಪರಮಾತ್ಮನ ಶ್ರೇಷ್ಠತ್ವವನ್ನು ತಿಳಿದುಕೊಳ್ಳುವಂಥಾ ಶಕ್ತಿಯು ಇತರ ಪ್ರಾಣಿಗಳಿಗಿಂತಲೂ ಹೆಚ್ಚಾಗಿ ಯಾವ ಮನುಷ್ಯನಲ್ಲಿದೆಯೋ ಅಂಥ ಮನುಷ್ಯನು ಹಿಂದುಗಳು ಪ್ರಚಲಿತ ಕಾಲದಲ್ಲಿ ಅತ್ಯಂತ ನಿರ್ಲಜ್ಜಕಾರಕವಾಗಿ ಪೂಜಿಸುವಂಥಾ ಮೂರ್ತಿಯನ್ನು ದೇವರ ಮೂರ್ತಿಯಾಗಿ ಎಂದಿಗೂ ಮಾಡಲಿಕ್ಕಿಲ್ಲ. ಕೆಲವು ಮೂರ್ತಿಗಳ ವರ್ಣನೆಯಲ್ಲಿ ಲೇಖನಿಯಲ್ಲಿ ಬರೆಯುವ ಮೊದಲು ಮನಸ್ಸಿನಲ್ಲಿಯೇ ಅಸಹ್ಯವುಂಟಾಗುತ್ತದೆ. ಇನ್ನು ಕೆಲವು ವಿಗ್ರಹಗಳಂತೂ ಶಿಷ್ಟಾಚಾರಕ್ಕೆ ವಿರುದ್ಧವಾದ (ನಗ್ನ) ರೂಪದಲ್ಲಿವೆ"

ಬ್ರಾಹ್ಮಣನ ಪ್ರಶ್ನೆ—

"Is the sight of the image unpleasing?

"ವಿಗ್ರಹದ ಸಂದರ್ಶನವು ಅಪ್ರಿಯವೋ?

ರಾಜಾರಾಮ ಮೋಹನರ ಉತ್ತರ—

"A visit to kalighat or Burhnugur which are only four miles distant from Calcutta will sufficiently convince the reader of the unplesant nature of their beloved images.' (P. 131).

[ಸಶೇಷ]

ಒಗಟು ನಂ. ೨

ಕ	ಳೀ	ಬ	ರ	✿	ದೇ	ವಾ	ಲ	ಯ
ಲ	✿	ತ	ವ	ದ	ಹ	ನ	✿	ವ
ರ	ನ	ನೆ	✿	ಶ್	✿	ರ	ತ	ನ
ವ	ಹ	✿	ತ	ನ	ಕ	✿	ಪ	ಕ
✿	ಗ	ವಾ	ಕ್ಷ	✿	ದ	ಹ	ನ	✿
ತ	ವ	✿	ಸ	ವ	ನ	✿	ಷ	ವ
ವ	ನ	ಬ	✿	ಪ	✿	ವ	ತ	ನ
ಕ	✿	ನ	ಯ	ನ	ಕ	ರ್ಣ	✿	ರ
ಸು	ರ	ಪ	ತಿ	✿	ವಿ	ಜ	ಸಿ	ತ

ತಾರೀಕು ೨೬—೭—೩೨ರಲ್ಲಿ ಪ್ರಕಟೀಕೃತವಾದ ಮೇಲಿನ ನಂಬ್ರ ೨ನೇ ಒಗಟಿಗೆ ಸಮರ್ಪಕವಾದ ಉತ್ತರವನ್ನಿತ್ತವರು—

೧ ಶ್ರೀಗೋವಿಂದ ಕೊಳೂರು ವಾಸುದೇವ ನಾಯಕ್, ವಿಟ್ಲ್, ೨ ನಾರಾಯಣ ಹೆಗ್ಡೆ, ಕಟಪಾಡಿ, ೩ ಪಿ ನರಸಿಂಹ ಶೆಣೈ, ಸಿ. ಪಿ ಸಿ ಕಾರ್ಕಳ, ೪ ಜಿ ಆರ್ ಪೆಮೂರ್ಡೆ, ಸುರತ್ಕಲ್, ೫ ಕೆ ಪಿ ಶೆಣೈ, ಕೆನರಾ ಹೈಸ್ಕೂಲ್, ೬ ಬಿ ವಿಠ್ಠಲ್ ಲಕ್ಷ್ಮಣ ಬಾಳಿಗ, ಬಂಟ್ವಾಳ, ೭ ಬಿ ವಾಮನ ಲಕ್ಷ್ಮಣ ಬಾಳಿಗ, ಬಂಟ್ವಾಳ, ೮ ಬಿ ವಿ. ಮಾಧವ ರಾವ್, ಕ್ರಿ ಹೈಸ್ಕೂಲ್, ಉಡುಪಿ, ೯ ಪದ್ಮನಾಭ, ಕೆ ಹೈಸ್ಕೂಲ್, ೧೦ ಎನ್. ನಾರಾಯಣ ಶೆಣೈ, ಕಾರ್ಕಳ, ೧೧ ಕೆ ಅಚ್ಯುತ ಕಾಮತ್, ಕೆನರಾ ಹೈಸ್ಕೂಲ್ ಮಂಗಳೂರು, ೧೨ ನಾರಾಯಣ ಶೆಟ್ಟಿ, ಬೋಳೂರು, ೧೩ ಕೆ ವಿಠಲ್ ಶೆಣೈ, ಕ್ರಿ ಹೈಸ್ಕೂಲ್, ಉಡುಪಿ, ೧೪ ಕೆ ಆರ್ ಶೆಣೈ ಶ್ರೀ. ಪೆ ಸ್ವಾಮಿ El ಸ್ಕೂಲ್, ೧೫ ಕಾಡಿಪಟ್ಣ ಕಾಶೀರ್ ಕರ್ಕೇರ, ಮುಂಬಾಯಿ, ೧೬ ವಿ ಬಾಬು, ಸುರತ್ಕಲ್, ೧೭ ಕಾರ್ಕಳ ವೆಂಕಟ್ರಮಣ ಪ್ರಭು, ಮುಂಬಾಯಿ, ೧೮ ವಿಠ್ಠಲ್ ಶೆಟ್ಟಿ, ಮುಂಬಾಯಿ, ೧೯, ಎಸ್ ತಿಮ್ಮಪ್ಪ, ಮುಂಬಾಯಿ, ೨೦. ವೆಂಕ ಪಿ. ಕರ್ಕೇರ ಮುಂಬಾಯಿ, ೨೧ ಎನ್ ತಿಮ್ಮಪ್ಪ, ಮುಂಬಾಯಿ, ೨೨ ಕಾಡಿಪಟ್ಣ ಸಿದ್ದು, ಡಿ. ಪುತ್ರನ್, ಮುಂಬಾಯಿ, ೨೩ ಸೋಮಪ್ಪ, ಬಿ ಶೆಟ್ಟಿ, ಮುಂಬಾಯಿ, ೨೪ ಕಾಪು ಜಡರಪ್ಪ ನರಸಿಂಹ ಶೆಣೈ, ಮುಂಬಾಯಿ, ೨೫ ಉಚ್ಚಿಲ ರಾಮ, ಡಿ ಸಾಲಿಯಾನ್, ೨೬. ಶ್ರೀಮತಿ ರುಕ್ಮಬಾಯಿ, c/o ಕೆ ಟಿ ಕರ್ಕೇರ, ಮುಂಬಾಯಿ, ೨೭ ಶ್ರೀಮತಿ ಕಮಲಾ ಬಾ, ಮಂಜೇಶ್ವರ, ೨೮ ಶ್ರೀಮತಿ ಮ ಸುದತಿ ಬಾ,

---

ತುಣುಕು ಮಿಣುಕು

ಉಡುಪಿ ತಾಲೂಕುಬೋರ್ಡು ಚುನಾವಣೆ ಬಂತು. ಈ ಸಲದ ತಾಲೂಕುಬೋರ್ಡಿಗೆ ತಮ್ಮತಮ್ಮ ಜನರನ್ನೇ ಆರಿಸುವಂತೆ ಹಲವು ದೊಡ್ಡ ಮನುಷ್ಯರು ಸೇರಿ ಒಳಗೊಳಗೆ ಸಂಧಿಯಾಗುತ್ತದೆ ಕುಜರಾಕು ಸಂಧಿಯೋ? ಯಾರು ಬಲ್ಲ!

○ ○ ○ ○

ಚುನಾವಣೆಯ ಸುಲಭೋಪಾಯಗಳನ್ನು ತಿಳಿದ ಕಾಪಿನತ್ತ ಕಡೆಯ ಉಡುಪಿ ತಾಲೂಕುಬೋರ್ಡಿನ ಮೆಂಬರರೊಬ್ಬರು ತಮ್ಮ ಮತ್ತು ತಮ್ಮ ಸಂಬಂಧಿಕರ ವಕ್ಕಲುಗಳ ಚಾಲಗೇಣಿ ಚೀಟುಗಳನ್ನು ರಿಜಿಸ್ಟ್ರಿಮಾಡಿಸಿ ೪೦೦ ಓಟುಗಳನ್ನು ಮಾಡಿಟ್ಟು ಧೈರ್ಯದಿಂದಿರುವರಂತೆ! ಮೆಂಬರಿಕೆಯು ಯಾವ ಮಾನದಲ್ಲಿ ಅಳೆಯಲ್ಪಡುತ್ತದೆಂಬುದಕ್ಕೆ ಇದೀಗ ದೃಷ್ಟಾಂತ!

○ ○ ○ ○

ಓಟು ದೊರೆಯುವ ತನಕ ಅವರ ಆಶೆ ಅದು ದೊರೆತ ಮೇಲೆ ಉದಾಸೀನ ಅದು ದೊರೆಯಬೇಕೆಂದು ಭಾರಿ ತಾಪ! ದೊರೆತ ಮೇಲೆ ವಿನಿಯೋಗವಾದ ಹಣಕ್ಕಾಗಿ ಪಶ್ಚಾತ್ತಾಪ ಕೆಲವರು ಗೌರವಕ್ಕಾಗಿ ಉಮೇದ್ವಾರರಾಗುವರು ಕೆಲವರು ಕೆಲಸವಿಲ್ಲದ್ದಕ್ಕೆ ಮುಂದೆ ಬರುವರು ಕೆಲವರು ಹಣವ್ಯಯ ಮಾರ್ಗವನ್ನು ಕಾಣದೆ ಓಟಿಗೆ ನಿಲ್ಲುವರು ಕೆಲವರು ಪ್ರಖ್ಯಾತರಾಗಬೇಕೆಂಬ ಆಶೆಯಿಂದ ನಿಲ್ಲುವರು ಇಷ್ಟರಲ್ಲಿ ಮಾತ್ರ ನಿಜವಾದ ಕಾರ್ಯಧುರಂಧರತೆಯಿಂದ ಓಟಿಗೆ ನಿಲ್ಲುವರು

ಪುತ್ತೂರು — ಅಲ್ಲಲ್ಲಿ ಇಷ್ಟಿಷ್ಟು.

ಪುತ್ತೂರು ಪಂಚಾಯತ ಬೋರ್ಡು ಇಲೆಕ್ಷನ್ ಮುಗಿಯಿತು ಆದರೆ ತಾಲೂಕುಬೋರ್ಡು ಇಲೆಕ್ಷನ್ ಹಾಗೆಯೇ ಉಳಿದಿರುವುದು ಒಂದೇ ಒಂದು ಗ್ರಾಮಕ್ಕೆ ಸಂಬಂಧಿಸಿದ ಪಂಚಾಯತ ಬೋರ್ಡಿಗಿಂತ ಇಡೀ ತಾಲೂಕಿಗೆ ಸಂಬಂಧಿಸಿದ ತಾಲೂಕುಬೋರ್ಡು ಮಿಗಿಲೆಂದು ಬೇರೆ ಹೇಳಬೇಕೆ? ಅಂದ ಮೇಲೆ ಮೊದಲನೆ ಬೋರ್ಡಿನ ಮೆಂಬರಿಕೆಗಿಂತಲೂ ಎರಡನೇ ಬೋರ್ಡಿನ ಮೆಂಬರಿಕೆಯೇ ಹೆಚ್ಚಿನ ಭಾರದ್ದು ಆಗಿರಬೇಕು ಹೀಗಾಗಿರಲು ತಾಲೂಕುಬೋರ್ಡು ಇಲೆಕ್ಷನ್ ಇಷ್ಟು ವಿಳಂಬವಾಗುವುದೆಂತು? ಈಗಾಗಲೇ ಪಿಸಿಪಿಸಿ ಮಾತಿನ ಬಿಸಿ ಬಿಸಿ ವಾರ್ತೆಗೂ ಆರಂಭವಾಗಿರುವುದೆ ಇದೇ ತಿಂಗಳ ತಾರೀಕು ೨೬ಕ್ಕೆ ಉಮೇದ್ವಾರರು ನೊಮಿನೇಶನ್ ಪೇಪರು ಕೊಡಬೇಕಂತೆ ಪುತ್ತೂರು ಸರ್ಕಲಿಗೆ ಎಷ್ಟು ಮಂದಿ ನಿಲ್ಲುತ್ತಾರೋ—ನೋಡಬೇಕಿದೆ ಉಮೇದ್ವಾರರಾಗುವಂಥವರು, ವೋಟರರಿಗೆ ತಮ್ಮ ವಿಷಯದಲ್ಲಿ ಅವರ ವಿಶ್ವಾಸಗಳು ಉಂಟಾಗುವಂತೆ, ತಮ್ಮ [illegible] ಜಾಹೀರಾತನ್ನು (ಅಂದರೆ ತಾವು ಇದುವರೆಗೆ ನಡೆಸಿದ ಸಮಾಜೋದ್ಧರಣ ಕಾರ್ಯಕಲಾಪಗಳ ವಿವರವನ್ನು) ಪ್ರಕಟಗೊಳಿಸುವ ಮುಹೂರ್ತವು ಸಮೀಪಿಸುತ್ತಲಿದೆ ವೋಟರರೆ! ಆತ್ಮಕಥೆಗಳನ್ನು ಓದಲು ಸಿದ್ಧರಾಗಿರಿ!

○ ○ ○ ○

ಉಮೇದ್ವಾರ—"ಸ್ವಾಮೀ! ಇಕೊಳ್ಳಿ, ವೋಟರರಲ್ಲಿ ನನ್ನದೊಂದು ವಿಜ್ಞಾಪನೆಯನ್ನು ಓದಿನೋಡಿ! ನಾನು ಜಮೀನುದಾರನೆಂಬ ಮಾತ್ರ ಹಕ್ಕು ಆಯಿತಲ್ಲ. ನಮ್ಮ ಜಾತಿಯಲ್ಲಿ ಮೊತ್ತಮೊದಲು ಇಂಗ್ಲೀಷು ಕಲಿತವನೂ ನಾನೆ'

ವೋಟರ—"ಈ ವಿಜ್ಞಾಪನಾ ಪತ್ರಿಕೆಯಿಂದ ನನಗೆ ನಿಮ್ಮ ಪರಿಚಯವಾಗಬೇಕೆ? ನಾನು ನಿಮ್ಮನ್ನು ಅರಿಯೆನೆ? ಪ್ರಥಮತಃ ಇಂಗ್ಲೀಷು ಕಲಿತುದರಿಂದಲೇ ಜನರು ನಿಮ್ಮನ್ನು 'ಇಂಗ್ಲಿಷ್ ಪುಟ್ಟಪ್ಪ' ಎಂದು ಕರೆಯುವರಲ್ಲವೆ?

○ ○ ○ ○

ವರದಕ್ಷಿಣಾ ನಿಷೇಧ ಚಳವನ್ನು ಆರಂಭಿಸಲು ಇಲ್ಲಿಯ ಕೆಲ ಯುವಕರು ಅದೊಂದು ಸಂಘವನ್ನು ಸದ್ಯದಲ್ಲೇ ಸ್ಥಾಪಿಸುವರಂತೆ! ಅವಿವಾಹಿತ ತರುಣನಾದವನೂ, ವರದಕ್ಷಿಣೆಯಿಲ್ಲದೆ ಮದುವೆಯಾಗುವ ಶರ್ತಕ್ಕೊಳಪಟ್ಟು, ಇದಕ್ಕೆ ಮೆಂಬರನಾಗಬಹುದಂತೆ! ಅಂಥ ಮೆಂಬರರ ಹೆಸರು ವಿಳಾಸಗಳು ಎಲ್ಲರ ತಿಳುವಳಿಕೆಯ ಬಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುವುವಂತೆ! ನಿಶ್ಚಯವಾಗಿಯೂ ಇಂಥ ಸಂಘಗಳು ಎಲ್ಲೆಲ್ಲಿಯೂ ಸ್ಥಾಪಿಸಲ್ಪಡುವ ದಿನವೇ ಸುದಿನವು ಏಕೆಂದರೆ ಇವು ಅನಾಥ ಬಾಲೆಯರ ಕಣ್ಣೀರ ಧಾರೆಯನ್ನು ತಡೆಯಬಲ್ಲುವು, ಕನ್ಯಾಪಿತರ ದುರ್ಭರ ಕಷ್ಟಗಳನ್ನು ಹೋಗಲಾಡಿಸಬಲ್ಲುವು, ಅನುಕೂಲದಾಂಪತ್ಯವನ್ನು ಒದಗಿಸಬಲ್ಲುವು ತರುಣರೇ! "ಅಡಿಯ ಮುಂದಿದೆ ಸ್ವರ್ಗ" ಮುನ್ನ ನಡೆಯಿರಿ!

"ಅವಧೂತ"

ALLIANZ UND STUTTGARTER
Life Insurance Bank, Ltd.
ಆಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಸೂರೆನ್ಸ್ ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ [illegible]ರಲ್ಲಿ ಸ್ಥಾಪಿಸಲ್ಪಟ್ಟುದು)

ಒಟ್ಟು ವಿಮಾ ಹಣವು ೨೦೮ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೯.೯ ಕೋಟಿ ರೂ. ಗಳಿಂತ ಹೆಚ್ಚಿಗಿರುವುದು. ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಿಕೆಗಳ ಮೇಲಿನ ಕಾಯ್ದುಟ್ಟ ಕ್ಲೇಮುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು.

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು. ಹೆಚ್ಚಿನ ಮಾಹಿತಿಗಾಗಿ ಮೆರವಾನಜಿ ಆ್ಯಂಡ್ ಸನ್ಸ, ಧಾರವಾಡ, ಅಲಿಅನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಸ್ಯೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Bangalore, Kolar.

For terms and other particulars please apply to—

The Divisional Manager,
The South Indian General Assurance Co Ltd
64, 3rd Cross Road, Srirampur Extn
Malleswaram Post, BANGALORE

OR

The Managing Agents,
The S I. G A Co Ltd
55 Poonamllee High Road, Kilpauk MADRAS

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ, ನೆಗಡಿ ಕೆಮ್ಮು, ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಬಳ್ಳಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು.—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಹೋಂಡಾ ಫಾರ್ಮಸಿ
ಮಂಗಳೂರು [illegible] ಮಾತ್ರ.

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ. ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ. ೨—೦—೦.

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯುಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಲ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೨.

ವಿಳಾಸ — ಶಕ್ತಿಸುಧಾ ಕಾರ್ಯಾಲಯ.
23 ಕಾಂದಾರವಾಡಿ 4ನೇ ಗಲ್ಲಿ
ಮುಂಬಯಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಭ್ಯಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪಂಮೌಷಧ ೪೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೊಕಿಸ್ಟ್ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಪ್ಲೇಂಟರರಿಗೂ, ತೋಟದವರಿಗೂ
ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾಗರವ ಮಥಿಸಲು ಸುರರಿಂಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೨ನೇ ಶುಕ್ರವಾರ ಸಪ್ಟಂಬರ ೧೯೩೨ (2 – 9 – '32.) ಸಂಚಿಕೆ ೩೬.

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

ಹೆಡ್ ಆಫೀಸು. — ಉಡುಪಿ ಶಾಖೆ — ಕುಂದಾಪುರ, ಮಂಗಳೂರು ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF JULY 1932

	CAPITAL AND LIABILITIES			PROPERTY AND ASSETS	
1	Paid up Capital	Rs 2,25,000-0 0	1	Premises, Building, Furniture etc	Rs 64 460 6 6
2	Reserve and other funds	„ 2,22,705 0-0	2	Government securities	„ 3,30 788 4 0
3	Deposits	21,10,093 9 7	3	Authorised Investments	„ 20 33,156 15 6
4	Due to Bankers	„ 1 610 10 4	4	Bills for collection	6 486 0 0
5	Sundries	„ 73,971 1 0	5	Sundries	25 015 13 11
6	Bills for collection per contra	6 486 0 0	6	Cash in hand & with bankers	„ 1 79958 13 0
	Total	26 39,866 4 11		Total	26 39 866 4 11

UDIPI 20 – 8 – '32

N. ANANDA RAO
Secretary & Manager

(Regd

ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಣ್ಣುಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಥಂಡಿ, ಒಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನು ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ ಎಲ್ಲಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು – ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ [illegible] ಸಲವುಟ್ಟಿಸುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3–8–0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬ್ಯಾ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾ ೪
[illegible] – [illegible] ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office MANGALORE S India
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt!

MANAGEMENT PURELY INDIAN

Ensure the Absolute Safety, Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office

[illegible]

[illegible] ಪೋಲೀಸ್ [illegible] ಉಳುಕೊಳ್ಳಲಿಕ್ಕಾಗಿ ಕೆಲವು ಮನೆಗಳು ಸೂಚಿಸಲ್ಪಟ್ಟವು. ಅಲ್ಲಿಯ ಶ್ರೀ [illegible], [illegible], ಪ್ರಬೋಧಚಂದ್ರದಾಸ್ ಎಂಬ ಮುಖಂಡರು [illegible]ಗಳಿಗೆ ನೋಟೀಸು ಕೊಟ್ಟು ಸ್ಟೇಷನ್ನಿಗೆ ನಿಮ್ಮ ಮನೆಗಳು ಬೇಕಾಗಿವೆ, ಈ ನೋಟೀಸು ತಲಪಿದ ೫ ದಿವಸಗಳಲ್ಲಿ ಮನೆ ಬಿಟ್ಟು ಹೊರಡಬೇಕೆಂದು ಸರಕಾರದ ನೋಟೀಸು ಹೋಗಿದೆ! ಶ್ರೀ ಗಣೇಶಾಯ ನಮೋ ನಮಃ

× × × ×

ಅಮೃತಸರದಲ್ಲಿ ಡಾ। ಕಿಚಲೂರವರನ್ನು ಎರಡು ವರ್ಷ ಕಠಿಣ ಶಿಕ್ಷೆ ಮತ್ತು ೨೫೦ ರೂಪಾಯಿ ಜುಲುಮಾನೆಗೆ ಗುರಿಪಡಿಸಿದರು. ಕಿಚಲೂರವರ ಜೇಬಿನಲ್ಲಿದ್ದ ೧೦೦ ರೂಪಾಯಿ ನೋಟು, ಜುಲುಮಾನೆಯ ಪಟ್ಟಿಯ ಜಮಾ ಕಲಮಿನಲ್ಲಿ ಎಂಟರ್ ಮಾಡಿಕೊಳ್ಳಲ್ಪಟ್ಟಿತು ನಮೋ ನಮಃ

+ + + +

ಲಾಹೋರಿನಲ್ಲಿ ಮಹಮ್ಮದ್‌ಖಾನ್ ಎಂಬ ಪೋಲೀಸ್ ಕಾನ್ಸ್ಟೇಬಲನ ವಶ ಎರಡು ಚೀಲ ಬಂಗಿಯಿದ್ದುದಕ್ಕೆ ೬ ತಿಂಗಳ ಶಿಕ್ಷೆಯಾಯಿತು! ಸಮರ್ಪಕವಾದ ರೀತಿ ಮಾಡಿ ಕರ್ತವ್ಯ ಪಾಲಿಸಲು ಇದು ಒಳ್ಳೇ ಮದ್ದಲ್ಲವೇ? ನಮಸ್ತೇ

+ + × ×

ಲಾಹೋರಿನಲ್ಲಿ ನಾಲ್ಕು ಮಂದಿ ಸ್ತ್ರೀಯರು, ಓಡುತ್ತಾ ಇದ್ದ ರೈಲಿನ ಅಪಾಯಸೂಚಕ ಸರಪಣಿಯನ್ನೆಳೆದು ಅದನ್ನು ನಿಲ್ಲಿಸಿದರು. ಅವರಿಗೆ ಶಿಕ್ಷೆಯಾಯಿತು ಅವರು ನಿಲ್ಲಿಸಿದರೂ ರೈಲು ಏಕೆ ನಿಂತಿತು?

+ + + +

ಮೊನ್ನೆ ವೈಸರಾಯರು ತನ್ನ ಎಕ್ಸಿಕ್ಯೂಟಿವ್ ಕೌನ್ಸಿಲನ್ನು ಸೇರಿಸಿ ಸಭೆಮಾಡಿದರು ಗಾಂಧಿಯವರನ್ನು ಬಿಡುವ ಆಲೋಚನೆಗಲ್ಲವಷ್ಟೆ? ಒಳ್ಳೇದು!

+ + + +

೨೦೦೦ ಅತಿಥಿಗಳನ್ನು ಮನೆಗೆ ಬರಮಾಡಿ ವೈಸರಾಯರು ಒಂದು ಡಾನ್ಸ್ ಪಾರ್ಟಿಮಾಡಿಸಿ ಆನಂದಿಸಿದರು ಗೋ ಆನ್, ಗೋ ಓನ್, ಓನ್ ಎಂಡ್ ಓನ್ ಸರ್

× × × ×

ರವೀಂದ್ರನಾಥ ಠಾಗೂರರು ಇನ್ನೊಂದು ಅಪ್ಪೀಲನ್ನು ಮಾಡುತ್ತಾ ವಿಶ್ವಶಾಂತಿಗಾಗಿ, ಒಗ್ಗಟ್ಟಿಗಾಗಿ, ಮತಭೇದತ್ಯಾಗಕ್ಕಾಗಿ ಸೆರಗೊಡ್ಡಿದ್ದಾರೆ ಅಯ್ಯಾ ಠಾಗೂರರೇ, ಕವಿತ್ವವು ಸರ್ ಹೋರ್ ದೊರೆಗಳಿಗೆ ತಿಳಿಯುವುದಿಲ್ಲ, ಸುಮ್ಮಗೇಕೆ ಸೆರಗನ್ನು ಒಡ್ಡಿದ್ದೀರಿ?

× × × ×

ಕಳೆದ ಆದಿತ್ಯವಾರ ಬೆಳಗ್ಗೆ ಪಬ್ಲಿಕ್ ಮೈದಾನಿನ ಸುತ್ತಲೂ ಹೆಚ್ಚಿಗೊಟ್ಟ ಪೋಲೀಸರ ಠಾಣ್ಯ ಕಾಂಗ್ರೆಸ್‌ವಾಲರನ್ನು ಓಡಿಸಲಿಕ್ಕೆ'- ಕಾಂಗ್ರೆಸ್‌ವಾಲರು ಪೋಲೀಸ್ ಸ್ಟೇಶನಿನಲ್ಲಿ ಗಲಾಟೆಯನ್ನೆಬ್ಬಿಸಿ ರಾಷ್ಟ್ರ ಧ್ವಜವನ್ನು ಹಾರಿಸಿದರಂತೆ. ಏನಯ್ಯಾ ಇವರ ತಂಟೆ? ಕೇಳುವವರಿಲ್ಲವೇ?

+ × × ×

'ಪ್ರಪಂಚದಲ್ಲಿ ಮಿಲಿಯಗಟ್ಟಲೆ ಜನರು ನಿರುದ್ಯೋಗಿಗಳಾಗಲಿರುವರೆ'ಂದು ಅನೇಕ ವರ್ಷಗಳ ಮೊದಲು ಒಬ್ಬರು ಭವಿಷ್ಯವನ್ನು ನುಡಿದಿದ್ದರು ಈಗ ಇಡೀ ಪ್ರಪಂಚದಲ್ಲಿ ೨೦ ಮಿಲಿಯ ಜನರು ನಿರುದ್ಯೋಗಿಗಳೆಂದೂ ಖಾಯಂ ಕೆಲಸವಿಲ್ಲದವರು ಇದರ ದುಪ್ಪಟ್ಟಿಯಿದ್ದಾರೆಂದೂ ತಿಳಿದುಬಂದಿದೆ ಬರುವದೆಲ್ಲಾ ಬರಲಿ! ಗಣೇಶನ ದಯೆಯೊಂದಿರಲಿ!

× × × ×

ಸರಕಾರವು ಕೋಮುವಾರಿನ ವಿಷಯಕವಾಗಿ ಕೊಟ್ಟ ತೀರ್ಪನ್ನು ನೋಡಿ ಡಾ। ಅಂಬೆಡಕಾರರು ದಿಗಿಲು ಬಿದ್ದಿದ್ದಾರೆ ಪ್ರತ್ಯೇಕ ಪ್ರಾತಿನಿಧ್ಯದ ಸರ್ಪವು ಬುಸುಗುಟ್ಟಿದೆಯೆಂದು ಬೆಚ್ಚಿಬಿದ್ದು ಅವರೀಗ ರಕ್ಷಣೆಗಾಗಿ ಹಿಂದೂಗಳೆಂದೊಂದು ದೊಣ್ಣೆಯನ್ನು ಬೇಡುತ್ತಿದ್ದಾರೆ. ಅಬ್ಬಾ ಅಂಬೆಡೇಕಾರರೇ!

+ + + +

ಮುಂಬಾಯಿಯಲ್ಲಿ 'ಗೋವಿಂದ ಮೆರವಣಿಗೆ'ಯೊಂದು ನಡೆದು ವೈರತ್ವದ ಎರಡು ಸಂಗಡಗಳು ಹೊಡೆದಾಡಿಕೊಂಡುವು – ಕೊಂದುವು. ಬೊಂಬಾಯಿಯು ಬೋಂಬಿನ ಬಾಯಿ ಆಗದಿದ್ದರೆ ಸಾಕು! ಗೋವಿಂದಾಯ ನಮಃ

+ + + ×

ಲಂಕಶಯರಿನಲ್ಲಿ ಮೊದಲೇ ಕ್ಷಾಮ! ಅಲ್ಲಿ ನಡೆದ ಮುಷ್ಕರಗಳಿಂದಾಗಿ ಈಗ ಎಲ್ಲರಿಗೂ ನಾಮ! ನಿಗರ್ತಿಕರಿಗೆ ಪರಂಧಾಮ! ಲಂಕಶಯರ್‌ನವರೇ! ಹೆದರಬ್ಯಾಡಿ! ಬ್ಯಾಡಿ! ಬೇಡ!

+ + ×

ಮೂರನೇ ರೌಂಡ್ ಟೇಬಲ್ ಒಂದು ಪುನಃ ಜರಗುವುದಾಗಿ ನಿರ್ಧಾರವಾಗಿದೆ. ಬರೇ ೨೫ ಮಂದಿ ಮಾತ್ರ ಆಮಂತ್ರಿಸಲ್ಪಡುವರಂತೆ, ಇವರಲ್ಲಿ ಡಾ। ಅಂಬೆಡಕಾರರಿರುವರೇ?

× × × ×

'ಬ್ರಿಟಿಷರು ಕೋಮುವಾರು ತೀರ್ಪನ್ನು ಮಾಡುವಾಗ ನಮ್ಮ ಶೌಕತಾಲಿಯವರು ಅಫಘಾನಿಸ್ಥಾನಕ್ಕೆ ಹೋಗಿರುವರು. ಯಾವ ತೊಂದರೆಯೂ ಇಲ್ಲವಲ್ಲ!

ನಿಮ್ಮ ಮಕ್ಕಳನ್ನು ಸುಖದಿಂದಲೂ ಆರೋಗ್ಯದಿಂದಲೂ ಇಡುವುದಕ್ಕೆ ಮಾರ್ಗ.

ಆರೋಗ್ಯವು ಸಿಗಬೇಕಾದರೆ ಸರಿಯಾದ ಪರಿಪೋಷಣೆಯು ಅವಶ್ಯಕ. ಅದು ಕೂಡಾ ಮಕ್ಕಳ ಬೆಳವಣಿಗೆಯ ಸಮಯದಲ್ಲಿ ಇದು ಅಗತ್ಯದ ಸಂಗತಿ

ನಗುತ್ತಾ, ತಮಾಷೆಯೊಡನೆ ಆಸ್ವಾದಿಸುವ ಆರೋಗ್ಯವಂತ ಶಿಶುವು ಪ್ರತಿ ಹೆತ್ತವರಿಗೂ ಆನಂದವನ್ನುಂಟುಮಾಡುವಂತಹುದು ಮಕ್ಕಳ ಸುಖಸಂತೋಷವೂ ಭವಿಷತ್ತೂ ಯಾವುದರ ಮೇಲೆ ಹೊಂದಿಕೊಂಡಿರುವುದೋ, ಅಂತಹ ಆರೋಗ್ಯಕರ ಪೋಷಣೆಯ ವಿಷಯದಲ್ಲಿ ಅವರಿಗೆ ಸಾಕಷ್ಟು ಮತ್ತು ಸರಿಯಾದ ಪೋಷಣೆಯು ದೊರೆಯುವಂತೆ ಜಾಗರೂಕರಾಗಿರಬೇಕು

ನಿಮ್ಮ ಮಕ್ಕಳ ದೈನಿಕ ಪಾನೀಯವನ್ನಾಗಿ "ಓವಲ್‌ಟಿನ್ನ"ನ್ನು ಮಾಡಿರಿ ನಿಸರ್ಗದ ಅತ್ಯಮೂಲ್ಯವಾದ "ಟೋನಿಕ್" ಆಹಾರಗಳಿಂದಾಗಿ ಇದನ್ನು ತಯಾರಿಸಲಾಗಿದೆ ಮೆದುಳು ಮತ್ತು ದೇಹವನ್ನು ಬೆಳೆಸುವುದಕ್ಕಾಗಿ ಎಲ್ಲಾ ಬಗೆಯ ಪೋಷಣೆಯನ್ನಿದು ಒದಗಿಸಿಕೊಡುವಂತಹದ್ದಿದೆ. ಇದರಿಂದ ಚೈತನ್ಯವೂ ಶಕ್ತಿಯೂ ಉತ್ಪನ್ನವಾಗುತ್ತದೆ ರುಚಿಕರವಾದ 'ಓವಲ್‌ಟಿನ್ನ'ನ್ನು ಮಕ್ಕಳು ಪ್ರೀತಿಸುತ್ತಾರೆ ಅವರಲ್ಲಿ ಕ್ರಮವಾಗಿ ಉಂಟಾಗುವ ಬೆಳವಣಿಗೆಯನ್ನು ಪರೀಕ್ಷಿಸಿರಿ ರೋಗರುಜಿನಗಳಿಂದ ಅವರು ಎಷ್ಟು ವಿಮುಕ್ತರಾಗುತ್ತಾರೆಂದು ಕಾಣಿರಿ! "ಓವಲ್‌ಟಿನ್" ಎಂಬುದು ಅಸಮಾನ, ಅತ್ಯುತ್ತಮ, ಅತ್ಯಂತ ಶುದ್ಧ ಮತ್ತು ಬಹಳ ಸುಲಭದರದ ಪಾನೀಯವಾಗಿರುತ್ತದೆ

ಮಕ್ಕಳ ಆರೋಗ್ಯ, ಶಕ್ತಿ, ಮತ್ತು ಚೈತನ್ಯಗಳಿಗಾಗಿ ದಿನನಿತ್ಯದ ಪಾನೀಯ.

ಅತ್ಯುತ್ತಮವಾದ "ಓವಲ್‌ಟಿನ್ನ"ಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಅನುಕರಣೀಯವಾದ, ಬರೇ ಮಿಶ್ರಣವಾದ ಮತ್ತು ಸಪ್ರಮಾಣ ತೂಕದಿಂದಿರದ ಎಲ್ಲ ಆಹಾರಗಳನ್ನು ತಿರಸ್ಕರಿಸಿರಿ

OVALTINE

TONIC FOOD BEVERAGE

ಅತೀ ಶುದ್ಧ, ಅತ್ಯುತ್ತಮ— ಕರಸ್ಪರ್ಶವು ಇದಕ್ಕಾಗಿರುವುದಿಲ್ಲ

ಏಜಂಟರು
ಜೇಮ್ಸ್ ರೈಟ್, 85ಎ ರಿಪನ್‌ಸ್ಟ್ರೀಟ್, ಕಲ್ಕತ್ತಾ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ದೊರೆಯುತ್ತದೆ.
ಮತ್ತು ಮುಂಬಾಯಿ ಮದ್ರಾಸು, ರಂಗೂನುಗಳಲ್ಲಿ

ನೀವು "ಓವಲ್‌ಟಿನ್ನ"ನ್ನು ಪ್ರೀತಿಸುತ್ತೀರಲ್ಲವೇ? ಹಾಗಾದರೆ "ಓವಲ್‌ಟಿನ್" ರೊಟ್ಟಿಗಳನ್ನೂ ಏಕೆ ಪರೀಕ್ಷಿಸಬಾರದು? ಇವು ಬಹಳ ಒಳ್ಳೆಯದಿವೆ, ಮತ್ತು ಆರೋಗ್ಯಕರ ಪೋಷಣೆಯನ್ನೀಯುವಂತಹವುಗಳು ಸಾಮಾನ್ಯವಾದ ಬಿಸ್ಕತ್ತುಗಳಿಗಿಂತ ಇವು ಅತ್ಯುತ್ತಮ ನಿಮ್ಮ ಹಲ್ಲು ಮತ್ತು ಜೀರ್ಣಶಕ್ತಿಯ ಪುಷ್ಟಿಗಾಗಿ ಇವುಗಳನ್ನು ತಿನ್ನಿರಿ

OV/99

× × × ×

ಮುಸ್ಲಿಮ್ ಪಕ್ಷದ ಬೆನ್ನೆಲುಬು ಎಂದರೆ ಶೌಕತಾಲಿಯವರು ಈ ತೀರ್ಪಿನ ವೇಳೆಯಲ್ಲಿ ಅವರು ಊರಿನಲ್ಲಿಲ್ಲದಿದ್ದುದರಿಂದ ಗಾಳಿ ಕರುವಾಗ ಎತ್ತು ಓಡಿಹೋಯಿತೆಂಬಂತಾಗಿದೆ

× × + ×

ಮಿಸ್ಟರ್ ಜಿನ್ನಾರವರು ಲಂಡನಿನಲ್ಲಿ ಮಂಡಿಸಿದುದರಿಂದ ಅವರ ೧೪ ಪೈಂಟುಗಳು ಹೇಗೂ ಬ್ರಿಟಿಷರಿಂದ ಅನುಮೋದಿತವಾದುವು ಜಿನ್ನಾ ಸಾಹೇಬರೇ, ಇನ್ನಾದರೂ ಸ್ವದೇಶಕ್ಕೆ ಬರಬಹುದಲ್ಲವೇ?

× × × ×

ಸರ್ ಹೋರರು ಕೊನೆಗೆ ಹೇಗೂ ಬಗ್ಗಿದರು. ಮೊದಲು ಬಗ್ಗೆವೆಂದರೂ ಈಗ ಉಪಾಯವಿಲ್ಲದೆ ಬಹಳ ಕಷ್ಟದಿಂದ ಮೆಲ್ಲನೆ ಬಗ್ಗಿ "ರೌಂಡ್ ಟೇಬಲ್ ಧೋರಣೆಯನುಸಾರವಾಗಿ ನಡೆಯೋಣ" ಎಂದಿದ್ದಾರೆ! ಶಭಾಷ್!

+ + × ×

ಕಾಲು ನೂರು ರೌಂಡ್‌ಟೇಬಲ್ ಪ್ರತಿನಿಧಿಗಳು ಮುಂದಕ್ಕೆ [illegible] ಸುಧಾರಣೆಯನ್ನು ಮಾಡಲಿರುವರೆಂದು- ನೋಡಲಿರುತ್ತೇನೆ ಪ್ರಾಂತಿಕ ಸರಕಾರವನ್ನೋ ಕೇಂದ್ರ ಸರಕಾರವನ್ನೋ ಯಾವುದನ್ನನುಮೋದಿಸಲಿರುವರೆಂದು ಗೊತ್ತಿಲ್ಲ

× × × ×

ಸರ್ ಸಪ್ರೂಗಳು ಹೇಗೂ ವೈಸರಾಯರ ಇನ್ನೊಂದು ಬೇಟಿ ಮಾಡಿದರು ಭೇಷ್ಯಾ! ಹೇಗೆ ಸಪ್ರೂಗಳೇ, ಇಂಗ್ಲೆಂಡಿಗೆ ಹಟ್ಟಿಗೆಕಟ್ಟುವ ಇನ್ನೊಂದು ಚಾನ್ಸ್ ಒದಗಿತೇ?

× × × ×

ನೀವು ಅತ್ತ ತೆರಳುವಾಗ ನಿಮ್ಮ ಮಿತ್ರರಾದ ಜಯಕರ, ಶಾಸ್ತ್ರಿ, ಚಿಂತಾಮಣಿ, ಸೆತಲ್‌ವಾಡ, ಮಿಸೆಸ್ ಸುಬ್ಬರಾಯನ್ ಮೊದಲಾದವರನ್ನೂ ಕರೆದೊಯ್ಯುವಂತೆ ವ್ಯವಸ್ಥೆ ಮಾಡಿರಿ! ಇಂಗ್ಲೆಂಡಿನ ಗಾಳಿಯಲ್ಲವೇ? ಯಾರಿಗೆ ಬೇಡಾ? ಅಷ್ಟರೊಳಗೂ ನಿಮ್ಮನ್ನು ಆಮಂತ್ರಿಸಲು ಮರೆತಿದ್ದೆ ಗಣೇಶ ಚತುರ್ಥಿ ನಾಡದು! ದಯಮಾಡಿ ಬಂದುಹೋಗುವ ಕೃಪೆದೋರಬೇಕು.

+ + + + **'ಧೂಮಕೇತು'**

THE SOUTH INDIA
CO-OPERATIVE INSURANCE SOCIETY,
LIMITED, MADRAS.

LOCAL BOARD:—

THE SOUTH CANARA CENTRAL
CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvas business on behalf of the Local Board of the Society at Mangalore.

FOR TERMS APPLY TO—

The Secretary,
South Canara Central Co operative
Bank, Ltd., KODIALBAIL P O (Mangalore)
SOUTH CANARA

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ
(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ, ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ್

ಅಚ್ಚಿನಲ್ಲಿದೆ! ಅಚ್ಚಿನಲ್ಲಿದೆ!
ಇದೇ ತಿಂಗಳ ಮೂರನೆ ವಾರದಲ್ಲಿ ಹೊರಬೀಳುವುದು

ಅಭಿನಯಗೀತಾವಳಿ
(ಶ್ರೀ ಜಿ. ಎನ್ ಲಕ್ಷ್ಮಣಪೈ ವಿರಚಿತ)
ಕ್ರಯ ೦—೨—೬. ಕ್ರಯ ೦—೨—೬

ಚಿಕ್ಕ ಮಕ್ಕಳಲ್ಲಿ ವಿಷಯಜ್ಞಾನ, ಭಾಷಾಜ್ಞಾನ ಮತ್ತು ಸಂಗೀತಜ್ಞಾನವು ಏಕಕಾಲದಲ್ಲಿ ಉಂಟಾಗುವಂತೆ ಕಿಂಡರ್ ಗಾರ್ಟನ್ ಪಾಠವನ್ನು ಅನುಸರಿಸಿ ರಚಿಸಲ್ಪಟ್ಟ ಹಾಡುಗಳ ಪುಸ್ತಕ. ಇದರೊಳಗಿನ ಗೀತಗಳನ್ನು ಹಾಡಿ, ನಲಿಯುವುದೆಂದರೆ ಮಕ್ಕಳಿಗೊಂದು ಹಬ್ಬವೇ ಸರಿ

ನಮ್ಮ ಇತರ ಪುಸ್ತಕಗಳು—

ಸಚಿತ್ರ ಕನ್ನಡ ಪದ್ಯರತ್ನಾವಳಿ
3, 4, 5ನೆ ದರ್ಜೆಗಳ ಬಗ್ಗೆ ಪಠ್ಯಪುಸ್ತಕ } ೦—೩—೬
ಕೀರ್ತನಾಂಜಲಿ
(ಉತ್ತಮ ಭಜನಾಗೀತಗಳ ಕೈಪಿಡಿ) } ೦—೩—೦

ಹರಿಹರ ಛಾಪಖಾನೆ, ಮತ್ತು ಪುಸ್ತಕಾಲಯ,
ಪುತ್ತೂರು, ದ. ಕ.

ತುಂಬಾ
ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ?
ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿ
ಯನ್ನು ತೆಗೆದುಕೊಳ್ಳಿರಿ.
ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ
ಬರೆದುಕೊಳ್ಳಿರಿ.

Wanted.

Agents for 'Swadeshabhimani' throughout the South Kanara District and elsewhere.
Apply Sharp — You are sure to secure substantial Commission.

MANAGER,
Swadeshabhimani,
Mangalore.

Canara Bank Limited.
ಕೆನರಾ ಬ್ಯಾಂಕ್ ಲಿಮಿಟಡ್.
Head Office:— **MANGALORE.**

Established July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal, Kasargod, Cochin, Udipi, Gangolli, Coondapur, Bombay, Puttur, Calicut & Alleppey**
ಬ್ರ್ಯಾಂಚುಗಳು:—
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised Capital 10,00000—0—0,
Issued & paid up Capital. 300,000—0—0
Reserve and other sinking Funds Rs. 526,000—0—0
Amount invested on G. P. Notes Rs 1210,092—12—0
Rates of interest on fixed deposits at Head Office and Branches are 6% for 2 Years. 5½% „ 1 Year

ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ 10, 0000—0—0
ಚಂದಾ ಹಾಕಿದ ಮತ್ತು ವಸೂಲು ಆದ ಮೂಲಧನ ರೂ. 300,000 0—0
ರಿಸರ್ವು ಮತ್ತು ಇತರ ಫಂಡುಗಳು. 526,000—0—0
ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 1210,092—2—0
ಠಾಯಂ ಡಿಪಾಜಿಟುಗಳ ಮೇಲೆ ಕೊಡಲಾಗುವ ಬಡ್ಡಿ ದರ—ಎರಡು ವರುಷಗಳಿಗೆ ಸೇಕಡಾ 6%. 1 ವರುಷಕ್ಕೆ ಸೇಕಡಾ 5½.

Current Account Deposits received and interest allowed on daily balance of Rs 50 and above that on multiples of Rs 10/-@ 3% from Ist Janauary to 30th June and @ 2% from Ist July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Except by special arrangement, no interest is allowed on sums exceeding Rs. 10,000/ in the case of Head Office and Cochin Branch and on sums not exceeding Rs 15,000/ in the case of Bombay Branch and on sums exceeding Rs 3000 - in the case of other Branches.

For further particulars please apply to —

Office of the Bank,
Mangalore 17—6—1932

K. Venkat Rao.
Secretary & Treasurer.

The Pangal Nayak Bank, Ltd.

Head Office. Udipi, *Established 1920* **Branch Office Mangalore**

Authorised Capital Rs. 2,00,000-
Issued Capital: Rs. 1,75,000-
Paid up Capital: Rs. 1 75,000-
Reserve and other Funds Rs 1,80,000

NOTICE.

Advances on pledge of Gold are made at 8%.

Fixed deposits received at following rates

3 months 4½%, 6 and 9 months 5%,
1 year and above 5½%, 2 years 6 %.

(By order)

Office of the Bank,
Udipi, 1—7—'32

P. Laxman Nayak,
Secretary

ಪುತ್ತೂರಿನಲ್ಲಿ ಸ್ವದೇಶಾಭಿಮಾನಿಯ ಏಜಂಟರನ್ನಾಗಿ
ಶ್ರೀ ಜಿ. ಎನ್. ಲಕ್ಷ್ಮಣ ಪೈ ಇವರನ್ನು ನೇಮಿಸಲಾಗಿದೆ.
ಮೇನೇಜರ್

ನೀವು ಉಡುಪಿಗೆ ಬಂದಲ್ಲಿ, ಸೌಖ್ಯ ಮತ್ತು ಭದ್ರತೆಯನ್ನು ಪಡೆಯಲು
ಮರೆಯಬೇಡಿರಿ!!!
ಮೈಸೂರು ಕ್ಲಬ್, ಉಡುಪಿ.
ಯೋಗ್ಯವಾದ ಊಟ, ಸ್ನಾನ, ಟಿಫಿನ್, ಉಳಕೊಳ್ಳುವ, ನಸ್ಯಾಹಾರ ಏರ್ಪಾಡು, ಮೇಜು, ಮಂಚ, ದೀಪ ಇತ್ಯಾದಿ ಸಹಿತ.
Up-to-date Boarding and Lodging! When you visit Udipi, be at home
MYSORE CLUB, UDIPI.

ರಾಜಿಯಾಗುತ್ತದೆಯೇ?

ಇನ್ನೊಂದು ರೌಂಡ್‌ಟೇಬಲ್!

ಪ್ರಭುತ್ವದ ಯತ್ನ!

ಮುಂದಕ್ಕೆ?

ಎಲ್ಲರೂ ನಿರೀಕ್ಷಿಸುತ್ತಿರುವಂತಹ ರಾಜಿಯನ್ನು; ಪ್ರಭುತ್ವದವರಿಗೂ ಪ್ರಜೆಗಳಿಗೂ ಶಾಂತಿಯುಂಟಾಗುತ್ತದೆಯೋ ಎಂದು ಇಡೀ ಲೋಕವು ಆತಾತುರದಲ್ಲಿದೆ. ಕಷ್ಟವು ಯಾರಿಂದಲೂ ಸ್ವೀಕೃತವಾದುದಲ್ಲ. ಪ್ರತಿಯೊಬ್ಬರೂ ಸುಖಶಾಂತಿಗಳನ್ನೇ ಬಯಸುವವರು. ಕುಟುಂಬ, ದೇಶ, ಜನಾಂಗ, ಪ್ರಪಂಚಗಳಲ್ಲಿ ಶಾಂತಿಯು ನೆಲಸಿಕೊಂಡಿರಬೇಕೆಂದೇ ಸರ್ವರ ಮಹದಾಶೆಯುರುತ್ತದೆ— ಎಂದಾಗ ಈಗಿನ ಸ್ಥಿತಿಯಲ್ಲಿ ಜನಸಮುದಾಯವು ಶಾಂತಿಸಮಾಧಾನಗಳ ಕುರುಹುಗಳನ್ನು ಆತಾತುರತೆಯಿಂದ ಎದುರುನೋಡುತ್ತಿರುವುದು ವಿಶೇಷ ಸಂಗತಿಯೆಂದೆನ್ನಬಹುದೇ?

— ಯತ್ನ —

ಒಂದು ಕಡೆಯಿಂದ ಸರಕಾರವು ಶಾಂತಿಸ್ಥಾಪನೆಗಾಗಿ ಸರ್ವ ಪ್ರಯತ್ನವನ್ನು ಮಾಡುತ್ತಲಿದೆಯೆಂದು ಪ್ರಕಟವಾಗುತ್ತಿದೆ ಒಂದು ಕಡೆಯಲ್ಲಿ ಆ ಪ್ರತೀತಿಯು ತೀರ ಅಬದ್ಧವೆಂಬ ಎಚ್ಚರಿಕೆಯು ಹರಡುತ್ತಿದೆ ಒಂದು ಕಡೆಯಲ್ಲಿ ಸರಕಾರವು ತಾನು ವಿಜಯಿಯಾದೆನೆನ್ನುತ್ತದೆ ಒಂದು ಕಡೆಯಲ್ಲಿ ಕೊಂಗ್ರೆಸ್ಸು ತಾನು ದೃಢವಾಗಿದ್ದೇನೆ, ತನ್ನನ್ನು ಬಗ್ಗಿಸುವವರು ಇಲ್ಲವೆಂದು ಮರುತ್ತರವನ್ನು ಕೊಡುತ್ತಿದೆ ಒಂದು ಕಡೆಯಿಂದ ವೈಸರಾಯರು ಪ್ರಮುಖ ದೇಶಧುರೀಣರುಗಳಿಗೆ ಸಂದರ್ಶನವನ್ನು ಕೊಡುತ್ತಿದ್ದಾರೆ. ಒಂದು ಕಡೆಯಿಂದ ಗವರ್ನರರು ಮುಖ್ಯ ಮುಖ್ಯ ರಾಜಕಾರಣ ಪಟುಗಳೊಡನೆ ವ್ಯವಹಾರ ನಡೆಸುತ್ತಿರುವರು ಒಂದು ಕಡೆಯಿಂದ ಸೆರೆಮನೆಯ ಬಾಗಿಲು ಅಗಲವಾಗಿರಿಸಲ್ಪಟ್ಟು ಕೈದಿಗಳು ಸಾಲುಗಟ್ಟಿ ಒಳಹೋಗುತ್ತಿದ್ದಾರೆ

— ಭೇಟಿಗಳು —

ಕಳೆದ ಕೆಲವು ದಿನಗಳ ಹಿಂದೆ ಕೊಂಗ್ರೆಸ್ ಧುರೀಣರಾದ ಮದ್ರಾಸಿನ ಸಿ ರಾಜಗೋಪಾಲಾಚಾರ್ಯರು ಗವರ್ನರರನು ಸಂದರ್ಶಿಸಿದರು ಕಳೆದ ವಾರಾಂತ್ಯದಲ್ಲಿ ಕಲ್ಕತ್ತದ ಗವರ್ನರರು ಪಂಡಿತ ಮದನಮೋಹನ ಮಾಲವೀಯರಿಗೆ ಭೇಟಿ ಕೊಟ್ಟರು ಅನೇಕ ಸಲ ಬಂಧನದ ರುಚಿಯನ್ನರಿತು ಹೊರಗೆ ಬಂದ ಈ ಧುರೀಣರನ್ನು ಸರಕಾರದಧಿಪತಿಗಳು ಸ್ವಾಗತೀಕರಿಸಿ ಏನೇನೋ ವ್ಯವಹಾರಗಳನ್ನು ನಡೆಸುತ್ತಿರುವುದನ್ನು ಕಾಣುವಾಗ, ಏನೇನೋ ನಡೆಯಲಿದೆಯೆಂದು ಭಾಸವಾಗುತ್ತದೆ ಹೀಗೆಯೇ ಪ್ರತಿ ಪ್ರಾಂತ್ಯದ ಗವರ್ನರರು ಒಬ್ಬೊಬ್ಬ ಪ್ರಮುಖನನ್ನು ಸಂದರ್ಶಿಸುವ ಪ್ರಸಂಗವು ನಡೆಯುತ್ತಿದೆಯೆಂದೂ ಅಲ್ಲಲ್ಲಿ ವಾರ್ತೆ ಹರಡಿದೆ ಭೇಟಿಗಳ ತಾತ್ಪರ್ಯವೇನೆಂದು ಮಾತ್ರ ಯಾವ ಕಾರಣದಿಂದಲೋ ಹೊರಗೆ ಬೀಳುತ್ತಿಲ್ಲ

— ಕಷ್ಟ —

ಬ್ರಿಟಿಷ ಸರಕಾರದ ಮಂತ್ರಿವರ್ಯರಾದ ಮಿ ಮೆಕ್ ಡೊನಾಲ್ಡ್ ಸಾಹೇಬರೂ ಭಾರತ ಸಚಿವರಾದ ಸರ್ ಸಾಮುವೇಲ್ ಹೋರರೂ ಬಲು ವಿಚಕ್ಷಣತೆಯಿಂದ ರಾಜ್ಯಭಾರವನ್ನು ನಡೆಸುತ್ತಲಿದ್ದಾರೆ ಈ ಸಂದಿಗ್ಧತೆಯ ಕಡಲ ತರಂಗಗಳ ಮಧ್ಯೆ ಸಿಲುಕಿಬಿದ್ದ ಅವರು ತಮ್ಮ ಧ್ಯೇಯಸಾಧನೆಗಾಗಿ ಬಹಳವಾಗಿ ಹೆಣಗಾಡುತ್ತಿರುವರು, ಒಂದು ಕಡೆಯಿಂದ ತಮ್ಮ ರಾಜಕೀಯ ಸಮಸ್ಯಾ ಪ್ರಯೋಗಗಳನ್ನು ಗಾಢ ಮತ್ತು ಗೂಢ ವಿವೇಚನೆಯಿಂದ ಹೊರಹಾಕುತ್ತಿದ್ದಾರೆ ಒಂದು ದೆಸೆಯಿಂದ ಅವರಿಗೆ ಬ್ರಿಟಿಷ ರಾಜ್ಯವನ್ನು ನೆಮ್ಮದಿಯಿಂದಿರಿಸಬೇಕಾದ ಕರ್ತವ್ಯಭಾರವು ಕಾಣುತ್ತಿದೆ ಒಂದು ಕಡೆಯಿಂದ ಅವರಿಗೆ ಹಿಂದೂದೇಶದ ವಿವಿಧ ಸಮಸ್ಯೆಗಳನ್ನು ಬಿಡಿಸುವ ಕಾರ್ಯಭಾರವು ತೋರುತ್ತಿದೆ “ಅತ್ತ ಬಿದ್ದರೆ ಕೆರೆ, ಇತ್ತ ಬಿದ್ದರೆ ಬಾವಿ” ಎಂಬ ಕ್ಲೇಶದಾಯಕ ಬಿಕ್ಕಟ್ಟು ಮುಕ್ಕಟ್ಟಿನಲ್ಲಿ ಅವರು ಹೆಣಗಾಡುತ್ತಿರುವರು

ಸರಕಾರವು ಪ್ರಥಮದಲ್ಲಿ ಅಂದರೆ ೧೯೩೨ನೇ ಜನವರಿಯಲ್ಲಿ ಪ್ರಕಟಿಸಿದ್ದಂತೆ, ಅದು ತನ್ನ ದಮನಶಾಸನವನು ಮುಂದೆ ಸಾಗಿಸಬೇಕೆಂದೇ ಹೆಚ್ಚಿನ ಸರಕಾರೀ ಅಧಿಕಾರಿಗಳು ಅಂದರೆ ರಾಜ್ಯಭಾರಿಗಳ ಸೂಚನೆಯುರುತ್ತದೆ ಅಂತಹ ತೀಕ್ಷ್ಣ ನಿರ್ಬಂಧಗಳ ಮೂಲಕವಾಗಿಯೇ ಜನಾಂಗವನ್ನು ಮುಂದೆ ನಡೆಸಿಕೊಂಡು ಹೋಗಬೇಕೆಂದು ಮಂತ್ರಿಮಂಡಲವೂ ಹಿಂದೀಯ ಸರಕಾರವೂ ಆಲೋಚಿಸುತ್ತಿವೆಯಾದರೂ, ಕಾಲಸ್ಥಿತಿಯು ಮಾತ್ರ ಅವರಿಗೆ ಯಾವರೀತಿಯ ಅನುಕೂಲ್ಯಗಳನ್ನೊದಗಿಸಿಕೊಡುತ್ತಿಲ್ಲ. ಅವರು ಮಾಡಿದ ಕೆಲಸಕ್ಕೆ ಆರೋಪದ ಮಸಿಯು ಬಂದು ಅಂಟಿಕೊಳ್ಳುತ್ತಿದೆ ಅವರು ಇಟ್ಟ ಹೆಜ್ಜೆಯು ಅಡ್ಡದಾರಿಯನ್ನೇ ತೋರಿಸುತ್ತಿದೆಯೆಂಬ ಆಭಾಸವು ಅವರಿಗಾಗುತ್ತಿದೆ ಇಂತಹ ವಿಷಮಾವಸ್ಥೆಯಲ್ಲಿ ರಾಜ್ಯಭಾರವು ನಿಂತಿದೆ

ನಿಷೇಧ —

ಭಾರತ ಮಂತ್ರಿ ಸರ್ ಸಾಮುವೇಲ್ ಹೋರರ ಧೋರಣೆಯು ಕಠಿಣವಾಗಿದೆಯೆಂದು ಲಂಡನಿನಲ್ಲೂ ಹಿಂದೂದೇಶದಲ್ಲೂ ಅನೇಕ ದೇಶಪ್ರಭೃತಿಗಳೂ, ಮಂದಪಕ್ಷೀಯರೂ ಸಾರುತ್ತಿದ್ದಾರೆ “ತೀವ್ರದಮನಶಾಸನವು ಫಲಕಾರಿಯಾಗಲಿಕ್ಕಿಲ್ಲ”ವೆಂಬ ಸೂಚನೆಯು ಹೆಚ್ಚಿನ ಕಡೆಗಳಿಂದ ಬರುತ್ತಾ ಇದೆ ಅನೇಕರು ಹೋರರ ಧೋರಣೆಗಳನ್ನು ಹಲವು ಬಗೆಯಾಗಿ ನಿಷೇಧಿಸುತ್ತಿರುವರು ಇಂಗ್ಲಾಂಡಿನಲ್ಲಿ ಸಿ ಎಫ್, ಎಂಡ್ರೂಸ್, ವಿ ಜೆ ಪಟೇಲ್, ಮೊದಲಾದವರು ಪ್ರಸ್ತುತ ಕಾಲಸ್ಥಿತಿಯ ದೌಷ್ಟ್ಯವನ್ನು ಕಂಡು, ಎಚ್ಚೆತ್ತು ಜನಾಂಗದ ಸಹಾಯಾರ್ಥವಾಗಿ ತಂತಮ್ಮ ಆಶಾನುಗುಣವಾಗಿ ಕೆಲಸಗಳನ್ನು ಮಾಡುತ್ತಿರುವರು

— ವಿವಿಧ ಘಟನೆ —

ಒಂದೆರಡು ವರ್ಷಗಳಿಂದ ಹಿಂದೂದೇಶದಲ್ಲಿ ಹೊಸ ಹೊಸ ಪರಿವರ್ತನೆಗಳು ತಲೆದೋರುತ್ತಿವೆ ೧೯೩೦ರಲ್ಲಿ ಪ್ರಥಮ ರೌಂಡ್ ಟೇಬಲ್ ಪರಿಷತ್ತೊಂದು ಜರಗುವ ಸಂಭ್ರಮವು ಹೊರಬಂದು ಅನೇಕರು ಆತಾತುರರಾದರು ಆದರೆ ಅದು, ನೆನಸಿದ್ದಷ್ಟು ಫಲಕಾರಿಯಾಗಲಿಲ್ಲ, ಹಾಗಿದ್ದರೂ, ಮತ್ತೊಂದು ಪರಿಷತ್ತು ಜರಗಿದರೆ ಎಲ್ಲವೂ ವ್ಯವಸ್ಥಿತವಾದೀತೆಂಬ ದೃಢತೆಯು ತಲೆದೋರಿತು ನಿರೀಕ್ಷಿಸಲ್ಪಟ್ಟಂತೆ ದ್ವಿತೀಯ ರೌಂಡ್‌ಟೇಬಲ್ ಮಹಾಸಭೆಯೂ ಜರಗಿತು ನಿರಾಶಾವಾದಿಗಳಾದ ಮಹಾತ್ಮಾ ಗಾಂಧಿಯವರೂ ಕೂಡಾ ಅದರಲ್ಲಿ ಆಶೆಯ ನೆರಳನ್ನು ಕಂಡು ಭಾಗವಹಿಸಿದರು ಆ ಪರಿಷತ್ತೂ ಯಶಸ್ವಿಯಾಗಲಿಲ್ಲ ಇವೆರಡು ಧೋರಣೆಗಳು ಪರಿಣಾಮದಾಯಕವಾಗದಿದ್ದನ್ನು ನೋಡಿ ಭಾರತ ಮಂತ್ರಿ ಹೋರರು ತನ್ನದೇ ಆದ ಕೆಲವು ಸೂತ್ರಗಳನ್ನು ಪ್ರಕಟಿಸಿದರು ಅವರ ಈ ಸೂತ್ರಗಳಿಂದಾಗಿ ಮಿತವಾದಿಗಳೂ ಅವರ ಅನುಯಾಯಿಗಳಾಗಿದ್ದವರೂ ದಿಗಿಲುಗೊಂಡರು ಎರಡು ವರ್ಷಗಳಲ್ಲಿ ಲಭ್ಯವಾದ ಪ್ರೇಮವಾಹಿನಿಯ ನೀರು, ಹೋರರ ಆ ಒಂದು ಬಾಯಿಮಾತಿನಿಂದಾಗಿಯೇ ಬತ್ತಿಹೋಯಿತು ಬ್ರಿಟಿಷರೊಡನೆ ಇತ್ತೀಚೆಗಿನ ವರೆಗೂ ಸಹಕರಿಸಿಕೊಂಡು ನಡೆಯುತ್ತಿದ್ದ ಸಪ್ರೂ, ಜಯಕರ್, ಚಿಂತಾಮಣಿ, ಸೆತಲ್‌ವಾಡ್ ಮೊದಲಾದ ಎಲ್ಲಾ ಮಂದಪಕ್ಷೀಯರೂ ತಮ್ಮ ಜಿಗುಪ್ಸೆಯನ್ನು ಸೂಚಿಸಿ ರಾಜಕೀಯ ಸಮಸ್ಯಾ ಪೂರ್ಣತೆಯಲ್ಲಿ ಹಿಂದೆ ಬಿದ್ದುಬಿಟ್ಟರು ನಾಲ್ಕನೇ ಘಟನೆಯಾಗಿ ಪ್ರಧಾನಿಯವರು ಹಿಂದೂ ಮುಸಲ್ಮಾನ್ ಮತ್ತು ಅಲ್ಪಸಂಖ್ಯಾತರ ಸಮಸ್ಯೆಯ ಕುರಿತು ಬ್ರಿಟಿಷ ಸರಕಾರದ ಅಭಿಮತವನ್ನು ಪ್ರಕಟಿಸಿದರು ಇದು ಪ್ರಕಟವಾದೊಡನೆ ಸರ್ ಹೋರರ ನೀತಿಯ ಮೇಲೆ ಕೇಂದ್ರೀಕೃತವಾಗಿದ್ದ ಜನಸಮುದಾಯದ ಲಕ್ಷ್ಯವು ಇದರ ಮೇಲೆ ಬಿತ್ತು ಬ್ರಿಟಿಷ ಸರಕಾರದ ಕೋಮುವಾರು ತೀರ್ಪು ಹಿಂದೂ ದೇಶಿಗರಿಗೆ ತೀರ ಅಸಮರ್ಪಕವಾಗಿದೆಯೆಂದು ಎಲ್ಲೆಲ್ಲೂ ಪ್ರಚುರಪಡಿಸಲಾಯಿತು ಪ್ರಧಾನ ಮಂತ್ರಿಯವರ ಈ ಪ್ರಕಟಣೆಯು ಹೆಚ್ಚಿನ ತಪ್ಪಭಿಪ್ರಾಯಗಳಿಗೆಡೆಗೊಟ್ಟಿತು ಬ್ರಿಟಿಷ ಸರಕಾರವು ಮುಸಲ್ಮಾನರನ್ನು ಬಗಲೊಳಗೆ ಹಾಕಿಕೊಳ್ಳಬೇಕೆಂದು ಯತ್ನಿಸುತ್ತಿದೆಯೆಂದು ಎಲ್ಲೆಲ್ಲೂ ಬಹಿರಂಗರೂಪವಾಗಿ ಪ್ರಕಟಿಸಲಾಯಿತು. ಹೀಗೆಲ್ಲಾ ನಡೆದರೂ ಹಿಂದೂದೇಶದ ಸ್ಥಿತಿಗತಿಗಳು ಸುಧಾರಿತವಾಗುವಂತಾಗಲಿಲ್ಲ ಬ್ರಿಟಿಷ ಸರಕಾರವು ಹಿಂದೂದೇಶಕ್ಕೆ ಕ್ರಮೇಣ ಸ್ವಾತಂತ್ರ್ಯವನ್ನು ಕೊಡಲಿದೆಯೆಂದು ಮೊದಲು ಪ್ರಕಟೀಕೃತವಾಗುತ್ತಾ ಬರಲು, ಈ ಮತವಾರು ತೀರ್ಪಿನಿಂದಾಗಿ ಸಾಮ್ರಾಜ್ಯ ಸರಕಾರವು ತನ್ನ ಅಂತಹ ಅಭಿಲಾಷೆಯನ್ನು ಸದ್ಯಕ್ಕೆ ದೃಷ್ಟಿಪಥದಲ್ಲಿಟ್ಟುಕೊಂಡಿಲ್ಲವೆಂದೇ ತಿಳಿದುಬಂತು. ಹಿಂದೂಸ್ಥಾನಕ್ಕೆ ಒಂದೆರಡು ವರ್ಷಗಳ ನಂತರ ಪ್ರಾಂತಿಕ ಸ್ವಾತಂತ್ರ್ಯವು ಮಾತ್ರ ಸಿಗಬಹುದೆಂದೂ, ಕೇಂದ್ರಸರಕಾರವನ್ನು ಹಿಂದೂದೇಶಕ್ಕೆ ಕೊಡಲಾಗುವುದಿಲ್ಲವೆಂದೂ ತಿಳಿದ ಜನಾಂಗವು ತಳಮಳಗೊಂಡಿತು. ಆ ತಳಮಳದ ಚಿಹ್ನೆಯು ಇನ್ನೂ ಅಡಗಿಲ್ಲ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಈಗ ಒಂದು ಕುತೂಹಲ! ರಾಜಿಯಾಗುತ್ತಿದೆಯೇ?ಎಂದು ಹಿಂದೂದೇಶವು ಮುಂದೆಂದೂ ಕಾಣದ ತೀಕ್ಷ್ಣ ಶಾಸನಗಳಿಗೆ ತಲೆಬಗ್ಗಿಸಿದಂತಾಗಿದೆ. ಪ್ರಜೆಗಳು ಸ್ವಾಸ್ಥ್ಯದಲ್ಲಿಲ್ಲವೆಂದು ಆಳರಸರು ಕಂಡಿದ್ದಾರಾದರೂ ಈಗ ನಿರುಪಾಯರಾಗಿ ಕುಳಿತುಬಿಟ್ಟಿದ್ದಾರೆ ಓಡಿಹೋಗುತ್ತಿದ್ದ ಕ್ರೂರ ಮುಂಗುಸಿಯನ್ನು ತನ್ನ ಉಟ್ಟ ಕಚ್ಚೆಯಿಂದ ಹಿಡಿದುಬಿಟ್ಟವನಂತಹ ಸ್ಥಿತಿಯು ಅವರಿಗೊದಗಿದೆ ಶಸ್ತ್ರಗಳನ್ನು ಹಿಂದಕ್ಕೆಳೆಯಲೀ ಕೊಂಗ್ರೆಸ್ಸು ಓಡುತ್ತದೆ, ಶಸ್ತ್ರಗಳನ್ನು ಹೂಡಲೇ ತನ್ನ ಅಡಿಗಲ್ಲು ಅಲುಗಾಡುತ್ತಿದೆ ಇಂತಹ ದುಃಸ್ಥಿತಿಯು ಪ್ರಾಪ್ತವಾಗಿದೆ

— ನಿಶ್ಚಲತೆ —

ಯಾರು ಏನೆಂದರೂ ಈ ಸಲ ಬ್ರಿಟಿಷ ಸಾಮ್ರಾಜ್ಯವು ಕೊನೆಯ ತನಕ ಭದ್ರಮುಷ್ಟಿಯುಳ್ಳದಾಗುವುದೆಂದು ಇಂಗ್ಲೆಂಡಿನಲ್ಲಿ ಪ್ರಕಟವಾಗಿದೆ ಮಂತ್ರಿವರ್ಯರಿಗೆ ಹಿಂದೀಯರನ್ನು ಆದಷ್ಟು ಮಟ್ಟಿಗೆ ಸಮಾಧಾನಪಡಿಸಬೇಕೆಂದು ಆಶೆಯಿದೆಯಾದರೂ, ಅವರ ಸುತ್ತುಮುತ್ತಲಿನ ಬೆಂಬಲಿಗರು ಅವರನ್ನು ಕೈಗೊಂಬೆಯನ್ನಾಗಿರಿಸಿದ್ದಾರೆ. ತಮ್ಮ ಆಜ್ಞೆಯಿಲ್ಲದೆ ಯಾವುದೂ ಸಾಗಿಸಲ್ಪಡಬಾರದೆಂದು ಮಂತ್ರಿಯವರಿಗೆ ಎಚ್ಚರವನ್ನಿತ್ತಿದ್ದಾರೋ ಎಂದು ಒಂದು ಪತ್ರಿಕೆಯು ಸಂಶಯಿಸಿ ನುಡಿದಿರುತ್ತದೆ

— ಕೆಲವು ಅಭಿಪ್ರಾಯಗಳು —

ಬ್ರಿಟಿಷ ಸಾಮ್ರಾಜ್ಯದ ಈಗಿನ ನೀತಿಯನ್ನು ವಿಶ್ವಕವಿ ರವೀಂದ್ರನಾಥ ಠಾಗೂರರು ಕಂಡು ಪರಿತಪಿಸಿ ಆಶಾ ನಿರಾಶರಾಗಿ, ನೊಂದಿದ ಮನಸ್ಸುಳ್ಳವರಾಗಿ “ಪ್ರಭುತ್ವದ ವಿಷಮಾವಸ್ಥೆಯ ದೋಷೋದ್ಘಾಟನೆ ಮಾಡುವುದಕ್ಕ ನನಗೆ ಮನಸ್ಸಿಲ್ಲ ಸ್ವಾನುಕೂಲಪರರಾದ ವೈಸರಾಯರು, ತಮಗೆ ಅದರಿಂದ ಕೆಡುಕಬಂದುದನ್ನು ಕೂಡಾ ಬಗೆಯದೆ ನಮ್ಮ ನಮ್ಮಲ್ಲಿ ಅಂತಃಕಲಹವನ್ನು ಹುಟ್ಟಿಸುವರಲ್ಲದೆ, ನ್ಯಾಯವಾಗಿ ವರ್ತಿಸರು ಬುದ್ಧಿಹೀನರ ಕೂಡೆ ಚರ್ಚೆಯ ಫಲವಿಲ್ಲ ನಾವು ವಿರೋಧಾಭಿಪ್ರಾಯವನ್ನು ಸೂಚಿಸುವುದರಿಂದ ಪ್ರಯೋಜನವುಂಟೆಂದು ನಂ ಬಹುದೇ? ನನಗೆ ಆ ಭರವಸೆ ಇಲ್ಲ ಸದ್ಯಕ್ಕೆ ನಮ್ಮ ಹಸ್ತಗತವಾಗಿರುವಷ್ಟು ಸ್ವಾತಂತ್ರ್ಯವನ್ನೇ ನಾವು ಉಪಯೋಗಕ್ಕೆ ಹಾ ನಮ್ಮ ಮುಂದಿನ ಸಾಧನೆಯನ್ನು ಕೈಕೊಳ್ಳಬೇಕು ಜನಾಂ ವನ್ನು ಒಡೆಯಲೆತ್ತಿಸುತ್ತಿರುವ ಈ ಪ್ರಯತ್ನವನ್ನು ತಡೆಗ ತಕ್ಕ ಯೋಚನೆಮಾಡುವುದೇ ಇಂದಿನ ಭಾರತೀಯ ರಾ ಕಾರಣಜ್ಞರ ಪ್ರಥಮ ಕರ್ತವ್ಯ ಎಂದಿದ್ದಾರೆ ರವೀಂದ್ರ ಹಾಗೆಲ್ಲ ಆಶಾನಿರಾಶರಾಗುವವರಲ್ಲ, ಘೋರ ಬರ ಸಿಡಿಲ ಕೂಡಾ ಅವರನ್ನು ನಡುಗಿಸುವಷ್ಟು ಸಾಮರ್ಥ್ಯವುಳ್ಳದ್ದಾಗಿ ಅಂತಹ ನಿಶ್ಚಲ ವ್ಯಕ್ತಿಯು ಕೂಡಾ ಶಾಂತಿಸ್ಥಾಪನೆಗಾಗಿ ಆ ಸಲ ಅಂಗಲಾಚಿ ಬೇಡಿಕೊಂಡಿತು!

— ಹೊಸ ವಾರ್ತೆ —

ಈಗೀಗ ಒಂದು ಹೊಸ ವಾರ್ತೆಯು ಹರಡಿರುತ್ತ ಇದರ ಸತ್ಯತೆಯು ಮೊದಲು ಅಷ್ಟು ದೃಢವಾಗಿ ತಿಳಿದುಬಂ ಲ್ಲವಾದರೂ ಈಗ ಇದು ಸತ್ಯವೆಂದು ತಿಳಿದುಬಂದಿದೆ ಮೂರ ರೌಂಡ್‌ಟೇಬಲ್ ಪರಿಷತ್ತೊಂದನ್ನು ಸಣ್ಣ ರೀತಿಯಲ್ಲಿ ನೆರವೇರಿಸಬೇಕೆಂದು ಸರ್ ಸಾಮುವೇಲ್ ಹೋರರು ನಿಶ್ಚೈಸಿದ್ದಾ ಇದಕ್ಕೆ ಹಲಕೆಲವು ಹಿಂದೀಯ ಪ್ರತಿನಿಧಿಗಳನ್ನು ಆಮಂತ್ರಿಸಿರುವರು ಪ್ರತಿನಿಧಿಗಳ ಪಟ್ಟಿಯು ಸಿದ್ಧವಾಗುತ್ತಲಿ ಯೆಂದು ಜವಾಬ್ದಾರೀ ಪಕ್ಷದಿಂದ ತಿಳಿದುಬಂದಿದೆ, ಇದ ಜರಗುವಿಕೆಯಿಂದಾಗಿ ಸರ್ ತೇಜಬಹದ್ದೂರ್ ಸಪ್ರೂ ಶ್ರೀ ಎಮ್ ಆರ್ ಜಯಕರ್ ಮೊದಲಾದ ಮಂದ ಪಕ್ಷೀಯರ ಸಮಾಧಾನಗೊಳಿಸಬಹುದೆಂಬ ಆಶೆಯು ಪ್ರಭುತ್ವದವರಿಗೆ ಯುಂಟೆ ಸರಕಾರದ ಈ ಸಲಹೆಗಳಿಂದಾಗಿ ಈ ಮಂದಪ ದವರು ತೃತೀಯ ಪರಿಷತ್ತಿನಲ್ಲಿ ಭಾಗವಹಿಸಲೂ ಸಾಕೆಂ ಊಹಿಸಲ್ಪಟ್ಟಿದೆ.

೧೪ನೇ ಪುಟಕ್ಕೆ ಮುಂದರಿಸಿಯದೆ.

1. Good Riding Quality.
2. Gripping Tread.
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE
Seiberling's Exclusive Quality.



TRIED & PROVED.

USE A Seiberling Tube
IN
A Seiberling Tire.

You cannot find a better combination.



ಬ್ರಿಟಿಷ ಕನ್ಸರ್ವೇಟಿವ್ ಮೆಂಬರರೊಬ್ಬರು

ಈಗ ಭಾರತವರ್ಷದಲ್ಲಿ ಸಂಚಾರಮಾಡುತ್ತಿದ್ದಾರೆ. ಇವರು ೨೫ ವರ್ಷಗಳ ತನಕ ಈ ದೇಶದಲ್ಲಿ ವ್ಯಾಪಾರ ಮಾಡುತ್ತಿದ್ದು ದೇಶದ ಹಾಗೂ ಜನಗಳ ಪರಿಚಯವಿದ್ದವರು "ಬ್ರಿಟಿಷರು ಇತ್ತ ಕಾಲಿಟ್ಟಂದಿನಿಂದ ಇದುವರೆಗೆ ಎಂದೂ ಇಷ್ಟು ವಾತ್ಸಲ್ಯದಿಂದ ಹಿಂದೀಯರ ಕಡೆಗೆ ಒಲಿದುದಿಲ್ಲ' ಎಂದು ಬರೆದಿರುವರು ಈ ಮಾತಿನ ಉದಾಹರಣೆಗಾಗಿ ಒಂದೂ ಕೊಡಲು ಸಿಗುವುದಿಲ್ಲದ್ದರಿಂದ ಈ ವಿಷಯವನ್ನು ಅಂಗೀಕರಿಸಿಕೊಳ್ಳುವುದು ಕಷ್ಟವಾಗಿದೆ "ಪ್ರತ್ಯೇಕ ಪ್ರಾತಿನಿಧ್ಯ"ದ ಸೂತ್ರವನ್ನು ಹಾಕಿಕೊಟ್ಟು ಕೋಮುವಾರು ಸಮಸ್ಯೆಯನ್ನು ಮಾಡಿರುವುದು ಮಹತ್ವದ ಕಲಂಕ ಎಂದು ಅವರೇ ಹೇಳುತ್ತಿದ್ದಾರೆ ಆದರೆ "ಇಂಡಿಯವು ಬ್ರಿಟಿಷ ವ್ಯಾಪಾರದ ಮೂಲ ಭಿತ್ತಿಯಾಗಿದೆ. ಅದು ಕಳೆದುಹೋದರೆ, ವ್ಯಾಪಾರವೇ ಮಾತ್ರವಲ್ಲ, ಸಾಮ್ರಾಜ್ಯವೇ ಕುಸಿದುಬೀಳುವುದು" ಎನ್ನುವವರೂ ಅವರೇ ಈ ಕುಸಿದುಬೀಳುವುದನ್ನು ತಡೆಯಲು, ಈ ಜಾತಿವಾರು ಪ್ರಾತಿನಿಧ್ಯದ ಭೇದೋಪಾಯವನ್ನು ಕೈಕೊಂಡುದೇ ಎಂದೊಮ್ಮೆ ಇವರ ಪಕ್ಷದವರಿಗೆ ಇವರು ಪಾರ್ಲಿಮೆಂಟನಲ್ಲಿ ತಿಳಿಸಿದರೆ ಅನ್ಯಾಯವಾದೀತೆ? ನಮಗೆ ಹೇಳುವುದೇಕೆ?

ಬಂಗಾಳದಲ್ಲಿ ಒಕ್ಕಟ್ಟಿನ ಪ್ರಯತ್ನಗಳು

ನಡೆಯುತ್ತಿರುವಂತೆ ಮತ್ತೆಲ್ಲಿಯೂ ನಡೆವುದಿಲ್ಲ ಹಿಂದೂ ಮುಸ್ಲಿಮ ನೇಶನಲಿಸ್ಟ (ರಾಷ್ಟ್ರೀಯ) ಪಕ್ಷದ ಮುಖಂಡರುಗಳಲ್ಲಿ ಹಲವರು ಕೆಲ ದಿನಗಳಿಂದ ಅಂತರಂಗದಲ್ಲಿ ಆಲೋಚಿಸುತ್ತಿದ್ದು, ಜಂಟೀ ಪ್ರಾತಿನಿಧ್ಯವನ್ನೆ ಅಂಗೀಕರಿಸಿ ರೂಢಿಗೆ ತರುವ ವಿಚಾರವಾಗಿ ಕೆಲವು ನಿರ್ಣಯಗಳನ್ನು ಮಾಡಿಕೊಂಡಿರುವರೆಂದೂ, ಅವು ಇನ್ನು ಕೆಲದಿನಗಳೊಳಗೇ ಪ್ರಕಟಗೊಳ್ಳುವುವೆಂದೂ ತಿಳಿದುಬರುತ್ತಿದೆ ಬಂಗಾಳದ ಮುಸ್ಲಿಮ್ ಲೀಗ್ ಸಭೆಯು ಎಂದಿನಿಂದಲೂ ಈ ಬಗೆಯಾಗಿಯೇ ಮಾತ್ರ ಪ್ರಾತಿನಿಧ್ಯವು ಇರಬೇಕಾಗಿ ಶಿಫಾರಸು ಮಾಡಿದವರು ಎಂಬ ಕಾರಣದಿಂದ, ಈ ವರ್ತಮಾನದಲ್ಲಿ ಇನ್ನಷ್ಟು ವಿಶ್ವಾಸ ಉಂಟಾಗಿದೆ ಇನ್ನು ಇದು ಜಯಶೀಲವಾದಲ್ಲಿ, ಪಂಜಾಬು, ಸಿಕ್ಕ, ಮುಸ್ಲಿಮರಿಗೂ ಇವರ ಶಿಫಾರಸುಗಳು ಮಾರ್ಗದರ್ಶಕವಾಗುವುವಾಗಿ ಹೇಳಬಹುದು ಅಲ್ಲಿಂದ ಮುಂದೆ ಇಡೀ ದೇಶಕ್ಕೆ ಇದೇ ಮೇಲ್ಪಂಕ್ತಿಯಾಗುವುದು ಕೆಲವು ಮುಸ್ಲಿಮರು ಜಂಟೀ ಪ್ರಾತಿನಿಧ್ಯಕ್ಕೆ ಒಪ್ಪುವುದೆಂದರೆ ಅದೇ ಮಹತ್ವದ ತ್ಯಾಗ ಎಂದು ಭಾವಿಸಿದ್ದಾರೆ, ಮುಸ್ಲಿಮರು ದೇಶದ ಹಿತಕ್ಕಾಗಿ ಇಷ್ಟು ತ್ಯಾಗವನ್ನು ಕೈಕೊಳ್ಳುವುದು ತಪ್ಪಾಗದು ಜಂಟೀ ಪ್ರಾತಿನಿಧ್ಯದಲ್ಲಿ ಅಲ್ಪಸಂಖ್ಯಾಕರ ಹೇಳಿಕೆಯನ್ನು ಬಹುಸಂಖ್ಯಾಕರು ಕೇಳಲೇಬೇಕಾಗುವುದೆಂಬಷ್ಟು ತಿಳುವಳಿಕೆ ಹರಡಿದರೆ, ಕ್ಷೇಮವಾಗುವುದು

ಜಗತ್ತಿನ ಪ್ರತಿನಿಧಿಗಳು

ಹೊಲೆಂಡಿನಲ್ಲಿ ಸೇರಿ, ಯುದ್ಧವಾಗದಂತೆ ಏನು ಪ್ರಯತ್ನಿಸಬೇಕೋ ಅದಕ್ಕಾಗಿ ಆಲೋಚಿಸುತ್ತಿದ್ದಾರೆ ಈ ಆಲೋಚನೆಯಿಂದ ಮಾತ್ರ ಜಗತ್ತಿನ ಯುದ್ಧಕಾಂಕ್ಷೆಯುಳ್ಳ ರಾಷ್ಟ್ರಗಳು ಎಂದೂ ಯುದ್ಧವನ್ನು ನಿರ್ಮೂಲಿಸುವ ಹಾಗಿಲ್ಲ ಎಂದು ಸಾವಿರ ಪ್ರತಿನಿಧಿಗಳು ಸೇರಿ, ಯುದ್ಧ ಬೇಡ, ಮಾತ್ರವಲ್ಲ ಆಗಲೇ ಕೂಡದೆಂದು ಸಾಧಿಸುತ್ತಿದ್ದಾರೆಂದರೆ, ಯುದ್ಧ ನಿರ್ಮೂಲನದ ಬಗ್ಗೆ ಜನಾಂಗಗಳಲ್ಲಿ ವಿಶೇಷ ಜ್ಞಾನವು ಹರಡಿದೆಯೆಂದೇ ಹೇಳಬಹುದು ಮಾಡುವುದೇನು ? ಲೀಗ್ ಒಫ್ ನೇಶನ್ಸ್ ಸಂಘವು ಸಚೇತನವಾಗಿದ್ದು ತನ್ನ ಉದ್ದೇಶ ಧರ್ಮಗಳಿಗೆ ತಕ್ಕಂತೆ ನಡೆಯುತ್ತಿದ್ದರೆ, ಈಗ ಎಷ್ಟು ಅನುಕೂಲ್ಯವಾಗುತ್ತಿತ್ತು ! ಈ ಪ್ರತಿನಿಧಿಗಳ ಸಭೆಗಳಿಂದ ಹೊರಡುವ ಶಿಫಾರಸುಗಳಿಗೆ ಆಗ ಅಧಿಕಾರವಾಣಿಯ ಬೆಂಬಲವೂ ದೊರೆಯುತಿತ್ತು ಯುದ್ಧ ತೆರೆವುದಕ್ಕಾಗಿ ಸತ್ಯಾಗ್ರಹವನ್ನು ಅವಲಂಬಿಸುವುದುತ್ತಮವೆಂದೂ ಮಹಾತ್ಮಾಜಿಯವರ ಸೂತ್ರಗಳನ್ನು ಅಂಗೀಕರಿಸಬೇಕೆಂದೂ ಹಲವರ ಆಂದೋಳನವಿದೆ ಶ್ರೀ ವಿಠ್ಠಲಭಾಯಿ ಪಟೇಲರು ಆ ಸಭೆಯಲ್ಲಿ ಸತ್ಯಾಗ್ರಹದ ಅಹಿಂಸಾತ್ಮಕ ಚಳವಳವನ್ನು ಸವಿಸ್ತಾರವಾಗಿ ವಿವರಿಸಿ, ಕೊಂಗ್ರೆಸಿನ ಕಾರ್ಯಕ್ರಮದ ಮೂಲತತ್ವಗಳ ಕಡೆಗೆ ಈ ಜನಾಂಗವು ಪ್ರತಿನಿಧಿಗಳ ಮನಸ್ಸು ಸ್ಪಷ್ಟವಾಗಿ ಹರಿಯುವಂತೆ ಮಾಡಿದುದೂ ಒಂದು ಉಪಕಾರವೇ ಆಗಿದೆ.

ಮಧ್ಯಪ್ರಾಂತ್ಯಗಳಲ್ಲಿ ಸತ್ಯಾಗ್ರಹಿಗಳು

"ನಾಲ್ಕೈದು ದಿನಗಳ ತನಕ ಅನ್ನ-ನೀರುಗಳನ್ನೂ ಕೊಡದೆ ಹಿಂಸಿಸಿದರೆಂದು" ಅಲ್ಲಿನ ಕೌನ್ಸಿಲಿನಲ್ಲಿ ಮೆಂಬರರು ದೂರಿದರು. ಹಲವರನ್ನು "ಬಡಿದು, ಚಿಕಿತ್ಸೆಯೂ ಆಗದಂತೆ ತಡೆದರು" ಎಂದೂ ಸಾರಲಾಯಿತು. ಆಫೀಸರರು ಏನು ಬರೆದಿರುವರೆಂದು ಹೋಮ್‌ಮೆಂಬರರು ಅವರ ರಿಪೋರ್ಟನ್ನು ಓದಿದರು. ಸರಕಾರವು ಈ ವಿಷಯ ತನಿಖಿ ನಡೆಸುವುದಾಗಿ ಭರವಸೆ ಕೊಡಲಾಗಲಿಲ್ಲ. ಜೈಲ್‌ಕಾನೂನಿಗೆ ವಿರುದ್ಧವಾಗಿ, ಶಿಸ್ತನ್ನು ಮುರಿದ ಕೈದಿಗಳೇ ಅವರಿಗೆ ಉಂಟಾದ ಕಷ್ಟಗಳಿಗೆ ಕಾರಣರೆಂದು ಅಧಿಕಾರಿಗಳ ರಿಪೋರ್ಟು. ಶಿಸ್ತಿಗೆ ಮೀರಿದರೂ ಒಡೆದು ಚಿಕಿತ್ಸೆ ಮಾಡಲಾರದು ಎಂದೂ, ನಾಲ್ಕೈದು ದಿನ ಅನ್ನಾಹಾರ ಕೊಡದೆ ಇರಿಸಬೇಕೆಂದೂ ಕಾನೂನು ವಿಧಿಸಿರಲಾರದು

ವ್ಯಾಪಾರವು

ಜೂಲೈ ತಿಂಗಳಲ್ಲಿ ಎಷ್ಟು ಸಾಗಿತು ಎಂಬುದನ್ನು ನೋಡಿದರೆ, ಇನ್ನೂ ಸಚೇತನವಾಗಿಲ್ಲವೆಂದೇ ತಿಳಿದುಬರುತ್ತದೆ ಅಂಕೆಗಳನ್ನು ನೋಡಿದರೆ, 'ಭಲೆ!' ಎನ್ನುವಷ್ಟು ಚೆನ್ನಾಗಿ ಅಭಿವೃದ್ಧಿ ತೋರುವುದು ಆದರೆ, ಬಹಳವಾಗಿ ಚಿನ್ನವೇ ಪರವೂರಿಗೆ ಬಲು ಭರದಿಂದ ಸಾಗುತ್ತಿರುವ ಕಾರಣ, ಈ ಅಂಕೆಗಳು ಸ್ಥೂಲವಾಗಿ ತೋರುತ್ತಿವೆ ಇದೊಂದೇ ತಿಂಗಳಲ್ಲಿ ೧೭,೫೪,೦೦,೦೦೦ ರೂಪಾಯಿ ಮೌಲ್ಯದ ಚಿನ್ನವು ದ್ವೀಪಾಂತರವಾಸಕ್ಕೆ ಒಪ್ಪಿಸಲ್ಪಟ್ಟ ಕಾರಣ (ಇದುವರೆಗೇ ೯ ಕೋಟಿಯಾಯಿತು) ಅಂಕೆಗಳು ಬೆಳೆದುವು ಇದನ್ನು ಕಳೆದರೆ, ೧೯೩೦ರಲ್ಲಿ ೨೦ ಕೋಟಿ, ೧೯೩೧ರಲ್ಲಿ ೧೨ ಕೋಟಿ ರೂಪಾಯಿ ಬೆಲೆಯ ಜೀನಸುಗಳನ್ನು ರಫ್ತುಮಾಡಿದುದರ ಪ್ರತಿಯಾಗಿ, ಈ ತಿಂಗಳಲ್ಲಿ ೫ ಕೋಟಿಯಷ್ಟೆ ರಫ್ತಾಗಿದೆ.

ವಿದ್ಯಾರ್ಥಿಗಳೂ ಸ್ವದೇಶಿಯೂ

ಎಂಬ ವಿಷಯವಾಗಿ ಪಂಡಿತ ಮಾಲವೀಯರು ಬಂಗಾಳದಲ್ಲಿ ಭಾಷಣಮಾಡುತ್ತಾ, ವಿದ್ಯಾರ್ಥಿಗಳು ಸಮಾಜಸೇವಾ ಶಿಕ್ಷಣ ಪಡೆಯುವರೆ ಸ್ವದೇಶೀ ಪ್ರಚಾರದಷ್ಟು ಉತ್ತಮ ಸಾಧನವಿಲ್ಲವೆಂದರು. ರಾಜಕೀಯ ವಿಷಯಗಳಲ್ಲಿ ಅವರು ಕೈಯಿಕ್ಕುವ ವಿಚಾರವು ಚರ್ಚಾಸ್ಪದವಾಗಿದೆಯಾದರೂ, ಸ್ವದೇಶಿ ಪ್ರಚಾರದಲ್ಲಿ ಅವರು ಕೈಯಿಕ್ಕುವುದು ಚರ್ಚಾಸ್ಪದವಾಗಿಲ್ಲವೆಂದು ಅವರ ಅಭಿಪ್ರಾಯ ಬಂಗಾಳದ ಶಾಲೆಗಳಲ್ಲಿ ವಿದ್ಯಾರ್ಥಿಗಳು ಸ್ವದೇಶಿಯನ್ನು ಹರಡಿಸಿರುವರು ಅಂತೆಯೆ, ಅವರವರ ಊರು ನಿವಾಸ ನೆರಹೊರೆಗಳಲ್ಲೂ ಸ್ವದೇಶಿಯನ್ನು ಬಿತ್ತಿದವರೂ ಅವರೇ ಬಂಗಾಳದಲ್ಲಿ ಇನ್ನೊಂದು ವಿಶೇಷವೆಂದರೆ, —ಸ್ವದೇಶೀ ಸಾಮಾನನ್ನು ಮಾತ್ರವಲ್ಲ, ಕಂಪೆನಿಗಳು, ಬೇಂಕುಗಳು, ವಿಮಾಸಂಘಗಳು ಮೊದಲಾದುವುಗಳಿಗೆ ಬಹಳವಾದ ಆದರವಿದೆ ಬೊಂಬಾಯಿ ವಿದ್ಯಾರ್ಥಿಗಳೂ ಇದರಂತೆ ವರ್ತಿಸಲು ಸಂಘಗಳನ್ನು ಏರ್ಪಡಿಸಿಕೊಂಡಿದ್ದು, ಸ್ವದೇಶೀ ಸಪ್ತಾಹದಲ್ಲಿ ತುಂಬಾ ಕೆಲಸವನ್ನು ನಡೆಸಲು ವಹಿಸಿಕೊಂಡಿರುವರು

ಐರ್ಲೆಂಡಿನ ಸರಕಾರದ ಅಧ್ಯಕ್ಷರು

ಕೃಷಿ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆವಂತೆಯೂ, ಬಡಜನರಿಗೆ ಸಹಾಯವಾಗುವಂತೆಯೂ ಬೋಧಿಸುವುದನ್ನು ನೋಡಿದರೆ, ಮಹಾತ್ಮಾಜಿಯವರ ಕಾರ್ಯಕ್ರಮಗಳನ್ನು ಅವರು ಅಂಗೀಕರಿಸಿ ನಡೆವಂತೆ ಭಾಸವಾಗುವುದು "ದೇಶೀಯ (ಐರಿಷರು) ದೇಶೀಯ ಗಿರಾಕಿಗಳಿಗೆ ಬೇಕಾಗುವುದೇನಿದೆಯೋ ಅದನ್ನೆ ಬೆಳಸಲೂ ತಯಾರಿಸಲೂ ತೊಡಗಿ ಆಸಕ್ತಿ ತೋರಿಸಬೇಕೇ ವಿನಾ, ಇಂಗ್ಲಿಷ ಶ್ರೀಮಂತರ ಬಗ್ಗೆ ಒಳ್ಳೇ ಗೋಮಾಂಸವನ್ನು ತಯಾರಿಸಿ ಕೊಡಲು ಗೋವುಗಳನ್ನು ಸಾಕಬಾರದು ಏಕೆಂದರೆ, ದೇಶೀಯ ಗಿರಾಕಿಯು ದೇಶಿಯವಸ್ತುಗಳನ್ನೇ ಆಗ ಪ್ರೋತ್ಸಾಹಿಸುವನು, ಅದು ಅವನ ಕರ್ತವ್ಯ ಇದರಿಂದಾಗಿ ಅಮೇರಿಕದಲ್ಲಾಗುವ ಜಾತಿಯ ಗೋಧಿ ಬೆಳೆಸಲು ಈ ಶೀತವುಳ್ಳ ಹವೆಯಲ್ಲಿ ಸಾಧ್ಯವಿಲ್ಲವಾದಲ್ಲಿ, ಗಿರಾಕಿಯೂ ಇಲ್ಲಿ ಬೆಳೆವ ಜಾತಿಯ ಗೋಧಿಯನ್ನೆ ತನಗೆ ಪ್ರೀತಿಯದೆಂದುಕೊಳ್ಳುವನು, ಅಥವಾ ಇನ್ನಿತರ ಇಲ್ಲಿ ಬೆಳೆವ ಆಹಾರ ವಸ್ತುಗಳನ್ನೆ ಉಪಯೋಗಿಸುವನು ಐರ್ಲೆಂಡಿನಲ್ಲಾಗದ ಚಾ, ಕಿತ್ತಳೆ, ಬಾಳೆ, ಮೊದಲಾದುವುಗಳನ್ನು ತ್ಯಜಿಸಲಿ, ಒಂದೇ ಸಲ ಸಾಧ್ಯವಾಗದು ಇವನ್ನು ಪರದೇಶಗಳಿಂದ ತರಿಸುವ ಕಾರಣ, ನಮ್ಮೂರಿನ ಉತ್ತಮ ಬೆಳೆಯನ್ನು ನಾವು ರಫ್ತುಮಾಡಬೇಕಾಗುವುದೆಂಬುದನ್ನು ತಿಳಿಯಲಿ ನಾವು ನಮ್ಮ ಸರಕನ್ನು ಇತರ ದೇಶಗಳಿಗೆ ಕಳುಹುವುದು ಕಡಿಮೆಯಾಗುತ್ತ ಬರುವಂತೆ, ದೇಶೀಯರಿಗೆ ಸುಖವು ಹೆಚ್ಚುವುದು ಜಮೀನು ಹೆಚ್ಚಿಗೆ ಧಾನ್ಯ ಬೆಳೆಸುವುದು, ದನಗಳನ್ನೂ ಬೆಣ್ಣೆಯನ್ನೂ ಮಾರುವುದು ಕಡಿಮೆಯಾದರೆ, ಬೆಳೆಯನ್ನು ಹೆಚ್ಚಿಸಬಹುದು. ಜನರು ಖರ್ಚನ್ನು ಕಡಿಮೆಮಾಡುವರು ಈ ದೆಸೆಯಿಂದ, ನಮ್ಮ ಸರಕಿನ ಮೇಲೆ ಇಂಗ್ಲಿಷರು ಸುಂಕವನ್ನು ಹೆಚ್ಚಿಸಿರುವುದು 'ನನಗೆ ಸಂತೋಷವೇ" ಎಂದು ಇವರೆನ್ನುತ್ತಿರುವರು.

ನೋಟಗಳು.

NOTE .. S

ಎಲ್ಲಾ ಪ್ರಾಂತಿಕ ಕೌನ್ಸಿಲುಗಳಲ್ಲಿ ಇರಬೇಕಾದ ಮೆಂಬರರ ಸಂಖ್ಯೆ ೧೫೫೪; ಇವರೊಳಗೆ ೬೦೪ ಮಂದಿಗೆ ತಮ್ಮ ಸ್ಥಾನಮಾನಗಳು ಮೈನೋರಿಟಿಯವು ಎಂದೇ ಬೆದರಿಕೆಯಿದ್ದು ಸಂಯುಕ್ತ ಪ್ರಾತಿನಿಧ್ಯವಾಗಲಾರದು ಸರಕಾರವು 'ಪ್ರಜಾಸತ್ತೆ' ಎಂಬುದನ್ನು ಎಪೂರ್ವಿನಿಂದ ಹೀಗೆ ಬಣ್ಣಿಸಿರುವುದು

* * * *

ದೇಶದೊಳಗಣ ಪ್ರಜಾಸಂಖ್ಯೆಯಲ್ಲಿ ಸೇಕಡಾ ೬೮ ಹಿಂದುಗಳು, ಇವರಿಗೆ ಮೆಂಬರಿಕೆ ಮಾತ್ರ ೪೮ ಎಪ್ಪತ್ತರಲ್ಲಿ ಬರುವುದು ಇಪ್ಪತ್ತರಲ್ಲೇ ಹೋಯಿತು ಎಂದರೆ ಹೀಗಿರಬೇಕು

* * * *

ಮುಸಲ್ಮಾನರಿಗೆ ಅವರಿಗೆ ಸಿಗಬೇಕಾಗಿದ್ದ ಒಟ್ಟು ಸ್ಥಾನಗಳಿಗಿಂತ ೧೫೦ ಹೆಚ್ಚಾಗಿ ದೊರೆತಿವೆ, ೪೫೦ ಆಗಬೇಕೆಂದು ಅವರ ಅಂದಿನ ಹೇಳಿಕೆ, ಇಂದಿನ ಫಲ ೪೫೦ ಕೊಟ್ಟರೂ ಒಟ್ಟಿನ ತೃತೀಯಾಂಶವಾಗಲಿಲ್ಲವೆಂದ ಬಳಿಕ, ಸರಕಾರವು ದಯವಿಟ್ಟು ಅನುಗ್ರಹಿಸಬಾರದೇ?

* * * *

ನಮ್ಮ ದೇಶದಲ್ಲಿರುವ ನೂರು ಜನರಲ್ಲಿ ಒಬ್ಬನು ಕ್ರೈಸ್ತನು ಆದರೆ ಕೌನ್ಸಿಲಿಗೆ ಸೇರುವ ಮೆಂಬರುಗಳಲ್ಲಿ ನೂರಕ್ಕೆ ೭ ಮಂದಿ ಕ್ರೈಸ್ತರು ಕ್ರೈಸ್ತರು ಹೆಚ್ಚಿದಷ್ಟು ಶಾಂತಿ ಹೆಚ್ಚುವುದು

* * * *

ಎಂಗ್ಲೊ ಇಂಡಿಯನ್ ಮೆಂಬರರ ಸಂಖ್ಯೆ, ದಾಮಾಶಯದ ಮಾತೇ ಬೇಡ ಇವರ ಜನ ಸಂಖ್ಯೆಯ ದಾಮಾಶಯದಲ್ಲಿ ಇವರ ದೊರೆತ ಮೆಂಬರಿಕೆಗಳಂತೆ, ಯಾವತ್ತು ಜನರಿಗೆ ಅದೇ ದಾಮಾಶಯದಲ್ಲಿ ಸ್ಥಾನಗಳನ್ನು ಕೊಟ್ಟರೆ,—ಬರೇ ಒಂದು ಪ್ರಾಂತ್ಯವಾದ ಮದ್ರಾಸಿನ ಕೌನ್ಸಿಲು ೯,೦೦೦ ಮೆಂಬರರನ್ನುಳ್ಳದಾಗುವುದು ಅಂದರೆ, ಒಂಟಿವಾಳದಂತಹ ಒಂದು ಊರು ತುಂಬ ಜನರು ಮದ್ರಾಸ ಕೌನ್ಸಿಲು ಮೆಂಬರರೇ ಆಗುವರು!

* * * *

೩೦,೦೦೦ ಮಂದಿ ಮೆಂಬರರಾಗಲು ಅರ್ಹತೆ ಇರುವ ಇಂಗ್ಲಿಷರು ಈ ದೇಶದಲ್ಲಿರುವರು ಇವರಿಗೆ ೭೦ ಮೆಂಬರಿಕೆಗಳಿವೆ ಇದೇ ದಾಮಾಶಯದಲ್ಲಿ ಪ್ರಾಯಸ್ಥ ಹಿಂದೀಯರಿಗೆಲ್ಲ ಪ್ರಾತಿನಿಧ್ಯವನ್ನು ಕೌನ್ಸಿಲಿನಲ್ಲಿ ಕೊಟ್ಟರೆ,— ಮದ್ರಾಸು ಕೌನ್ಸಿಲು ಮೆಂಬರರ ಸಂಖ್ಯೆ ೪೭,೦೦೦ವಾಗುವುದು ಇಡೀ ಸಂಸ್ಥಾನದ ಜನಸಂಖ್ಯೆ ಲಕ್ಷ್ಯಮಾಡಲು ಇದ್ದ ಗಣತಿಯ ಸಿಬ್ಬಂದಿ ೨೬,೦೦೦ವಿತ್ತು

* * * *

'ಎಂಗ್ಲೊ ಇಂಡಿಯನರಲ್ಲಿ ಯಾವನಾದರೂ ತಾನು ಹಿಂದೀಯನಲ್ಲ ಎನ್ನುವುದಾದರೆ, ಅವನು ಊರು ಬಿಟ್ಟು ಹೋಗುವುದುತ್ತಮ' ಎಂದು ಅವರ ಪ್ರತಿನಿಧಿ ಪ್ರಮುಖರಾಗಿರುವ ಸರ್ ಹೆನ್ರಿ ಗಿಡ್ನೆಯವರೆನ್ನುವರು ಇಂಡಿಯದಿಂದ ಹೊರಟವೆನ್ನುವ, ಅವರೆಲ್ಲಿಗೆ ಹೋಗಲಿ? ಎಂದಾದರೂ ಇವರೇಕೆ ತಿಳಿಸಿಲ್ಲ?

* * * *

'ಇಂಗ್ಲಿಷ ಶಾಲೆಗಳಿಂದ ಅತ್ಯುತ್ತಮ ಮಹನೀಯರು ಬೆಳೆದುಬಂದಿಲ್ಲವೆಂಬುದು ಸುಳ್ಳು' ಎಂದು ಮಾಜೀ ಬೊಂಬಾಯಿ ಗವರ್ನರರ ಮಾತು ಈ 'ಅತ್ಯುತ್ತಮ ಮಹನೀಯರು' ಬೆಳೆದು ಹೊರಗೆ ಬಂದುದೇ ಇಂಗ್ಲಿಷ ಶಾಲೆಗಳನ್ನು ಇಂಗ್ಲೆಂಡಿನಲ್ಲಿ ಇಂಗ್ಲಿಷರೇ ದೂರಲು ಕಾರಣವಾಗಿದ್ದೆಯಲ್ಲ!

* * * *

ಕಳೆದ ಆದಿತ್ಯವಾರ ಗವರ್ನಮೆಂಟುಕೊಲೇಜಿನಲ್ಲಿ ಮಹನೀಯರು ಕೆಲವರಿಗೆ ಈ ಮೊದಲೇ ಬಂದು ಹಸ್ತಗತವಾದ ಸನ್ನದುಗಳನ್ನು ಮಾನ್ಯ ಜಿಲ್ಲಾ ಕಲೆಕ್ಟರ ದೊರೆಗಳವರು ದಯಪಾಲಿಸಿದರು

* * * *

ಈ ಸಂದರ್ಭದಲ್ಲಿ ಪೋಲೀಸು ಬಂದೋಬಸ್ತಿಯು ಬಹಳವಾಗಿತ್ತು

* * * *

ಹೀಗಿರುತ್ತಾ ವೊಲೆಂಟಿಯರನೊಬ್ಬನು ಹೇಗೊ ಹೋಲನ್ನು ಪ್ರವೇಶಿಸಿ ಕೆಲವರಿಗೆ ಕರಪತ್ರಗಳನ್ನು ಹಂಚಿ ಗುಲ್ಲನ್ನೆಬ್ಬಿಸಿದನು

* * * *

ಇಷ್ಟು ಕಾವಲಿದ್ದು ಬಂದ ಅತಿಥಿಗಳು ತಮ್ಮ ಸಮ್ಮಾನ ಪತ್ರವನ್ನು 'ಗೇಟಿನ ಬಳಿ ತೋರಿಸಿರಿ' ಎಂಬ ಶಿಸ್ತು ಇರುವಾಗ ಈತನು ಪ್ರವೇಶವಾದರೋ ಹೇಗಾಯಿತು?

ಕೆಲವು ಸುದ್ದಿಗಳು:

ಅಂಬೆಡ್ಕಾರರು ಲಂಡನಿನಲ್ಲಿ. ಯುದ್ಧದ ಕಾರ್ಮುಗಿಲು! ವೃತ್ತಪತ್ರಿಕೆಗಳನ್ನೇಕೆ ಓದಬೇಕು? ಬೈ ಬ್ರಿಟಿಷ್ ಚಳವಳವು ಏನು ಮಾಡಿದೆ? 'ಬೈ ಇಂಡಿಯನ್ ಲೀಗ್' ಬೇಕಾಗಿದೆ- ಐವತ್ತು ಮಿಲಿಯ ಪೌಂಡ್! 106!

ಪತ್ರವ್ಯವಹಾರ.

(ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ, ಸ್ವ)

ಕಳೆದ ೩-೪ ತಿಂಗಳುಗಳ ಹಿಂದೆ ಯಾರೋ ಒಬ್ಬರು - ಶರ್ಮಾರೆಂಬವರು ಉಡುಪಿಗೆ ಬಂದು, ಅಲ್ಲಿಂದ ಇಲ್ಲಿಯ ವರೆಗೂ ಕೆಲವು ಉಪನ್ಯಾಸಗಳನ್ನು ಆಗಾಗ-ಅಲ್ಲಿ ಅವರು ಕೊಟ್ಟಿರುವರೆಂಬ ಸಂಗತಿಯು ತಿಳಿಯದುದಲ್ಲ. ಅವರು ಯಾರು? ಎಲ್ಲಿಯವರು? ಯಾವ ಮನೆತನದವರು? ಯಾವ ಜಾತಿಯವರು? ಯಾವ ಮತದವರು? ಎಂತಹ ಯೋಗ್ಯತೆಯವರು? - ಎಂಬುದೊಂದು, ಅವರಿಂದಲೇ ಅಲ್ಲದೆ, ಬೇರೆ ಯಾರಿಂದಲೂ, ಯಾವ ಆಧಾರಗಳಿಂದಲೂ ತಿಳಿದುಕೊಳ್ಳಲು ಅನುಕೂಲವಿಲ್ಲದಿರುವುದು ಶೋಚನೀಯವಾಗಿದೆ. ಅವರು ಹಿಂದೆ ಉಪನ್ಯಾಸಕರಾಗಿದ್ದರೇ? ಅವರು ಉಪನ್ಯಾಸಗಳನ್ನು ಕೊಟ್ಟಿದ್ದೆಲ್ಲಿ? ಯಾವ ಉಪನ್ಯಾಸಗಳನ್ನು, ಎಲ್ಲಿ ಯಾವಾಗ ಕೊಟ್ಟರು? ಎಂಬ ಯಾವ ವಿವರವೂ ಯಾವ ಪತ್ರಿಕೆಯಲ್ಲಿಯೂ ಇದುವರೆಗೆ ಪ್ರಕಟಿಸಿರುವುದು ನನ್ನ ಕಣ್ಣಿಗೆ ಬಿದ್ದಿಲ್ಲ. ಇವರು ನಿಜವಾಗಿಯೂ ಹಿಂದೆ ಗಣನೀಯರಾದ ಒಬ್ಬ ಉಪನ್ಯಾಸಕರಾಗಿದ್ದರೆ, ಪತ್ರಿಕೆಗಳು ಇವರ ಹೆಸರೆತ್ತದೆ ಇರುತ್ತಿರಲಿಲ್ಲವೆಂದು ನನ್ನ ಪ್ರಬಲವಾದ ಊಹೆ.

ಶರ್ಮರು ತಾನೊಬ್ಬ "ಮಿಶನರಿ" ಎಂದು ಹೇಳಿಕೊಳ್ಳುತ್ತಾರೆ. ಈ "ಮಿಶನರಿ" ಯಾವುದಾದರೂ ಸಂಘಕ್ಕೆ ಸೇರಿದವರೇ? ಆ ಸಂಘವು ಯಾವುದು? ಸಂಘದಿಂದ ವೇತನ ಎಲೋವೆನ್ಸುಗಳೇನಾದರೂ ಉಂಟೇ? ಸಂಘಕ್ಕೂ ಇವರಿಗೂ ಸಂಬಂಧವೇ ಇಲ್ಲದಿದ್ದರೆ, ಈ ಮಿಶನರಿ ಎಂಬ ಹೆಸರನ್ನು ಇವರಿಗೆ ಕೊಟ್ಟವರಾರು? ಇಟ್ಟವರಾರು?

ಉಡುಪಿಯಲ್ಲಿ ಇವರ ಭಾಷಣಗಳನ್ನೂ ಭಾಷಣದ ರೀತಿಯನ್ನೂ ಕೇಳಿದ ನನಗೆ, 'ಮಿಶನರಿ'ಯ ಭಾಷಣಕ್ಕೂ ಇವರ ಭಾಷಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂದು ತೋರಿಬಂದಿದೆ. ಪ್ರಥಮತಃ ಇವರಿಗೆ ಸಂಸ್ಕೃತ ಜ್ಞಾನವು ಸಾಕಷ್ಟಿಲ್ಲ. ವಿಷಯಜ್ಞಾನವೂ ಅಷ್ಟಕ್ಕಷ್ಟೇ. ಇನ್ನು ಶುದ್ಧ ಶೈವರಂತೆ ತೋರುವ ಇವರಿಗೆ ಮಧ್ವಶಾಸ್ತ್ರದ, ಮಧ್ವಮತದ ತಿರುಳಾದರೂ ಏನು ಎಷ್ಟು ಗೊತ್ತಿರಬಹುದು? ಇವೆಲ್ಲಾ ವಿಷಯಗಳು ಒಂದಕ್ಕೊಂದು ಸಂಬಂಧವಿಲ್ಲದ ಅವರ ವಾಕ್ಸರಣಿಯಿಂದಲೂ, ಅಸಂಬದ್ಧವಾದ ವಿಷಯಪ್ರತಿಪಾದನದಿಂದಲೂ ಸ್ಪಷ್ಟವಾಗುವುದು.

ಮದ್ರಾಸ್ ಸಂಸ್ಥಾನದಲ್ಲಿ ಎಷ್ಟೋ ಮಠ, ಮತಸಂಸ್ಥೆಗಳಿರುವಾಗ, ಅಲ್ಲಿಯೂ ಪ್ರತಿಯೊಂದು ಕಡೆಯಲ್ಲಿಯೂ ಆಗಬೇಕಾದ ಸುಧಾರಣೆಗಳು ಹೇರಳವಾಗಿರುವಾಗ, ಈ ಶರ್ಮರೆಂಬವರು ತಿಂಗಳುಗಟ್ಟಲೆಯಿಂದ ಉಡುಪಿಯನ್ನೇ ಬಿಗಿಹಿಡಿದಿರುವುದು ಅವರ ಮಿಶನಿನ ಮತ್ತು 'ಮಿಶನರಿತನ'ದ ವಿಷಯದಲ್ಲಿ ಸಾಕಷ್ಟು ಸಂಶಯವನ್ನು ಹುಟ್ಟಿಸಲು ಕಾರಣವಾಗಿದೆ. ಇವರು ನಿಜವಾಗಿಯೂ ಮಿಶನರಿಗಳೇ? ಮಿಶನರಿಗಳೆಂಬವರಿಗೆ ರಾಗದ್ವೇಷಗಳಿರಬಹುದೇ? ಈ ಮಿಶನರಿಗಳ ವರ್ತನದಲ್ಲಿಯೂ, ಭಾಷಣಗಳಲ್ಲಿಯೂ ಅಂತಹ ರಾಗದ್ವೇಷಪರ್ವವು ಅವರ್ಣನೀಯವಾಗಿ ತುಂಬಿಹೋಗಿದೆ. ಮಿಶನರಿಗಳಾದ ಇವರು ವ್ಯಕ್ತಿದ್ವೇಷದಿಂದಲೋ ಎಂಬಂತೆ ವ್ಯಕ್ತಿಸಂಬಂಧವಾದ ಆಕ್ಷೇಪಗಳನ್ನು ಕೂಡ ಪ್ರತ್ಯಕ್ಷವಾಗಿ ಮಾಡಲು ಹೇಸುವುದಿಲ್ಲ. ಅಂದ ಬಳಿಕ ಇವರದು ಮಿಶನರಿಗಳ ವೇಷವಾಗಿರಬಹುದಲ್ಲವೇ?

ಯಾರೋ ಒಬ್ಬ, ಎಲ್ಲಿಂದಲೋ ಹಾರಿ ಬಂದು ಬಾಯಿಗೆ ಬಂದಂತೆ ಮಾತಾಡಬಲ್ಲನಾದರೆ, - ಅವನು ದೊಡ್ಡ 'ಮಿಶನರಿ' - ಉಡುಪಿಯಲ್ಲಿ ಏಕೆ? ಅವರು ಮಠಸಂಸ್ಥೆಗಳನ್ನು ದೂರುವ ಮುಖ್ಯ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅಷ್ಟೇ ಕೆಲವರಿಗೆ ಬೇಕು. ಅಂತಹ ದೂರುಗಳೇನಾದರೂ ಇದ್ದಲ್ಲಿ, ಇಷ್ಟು ದಿನ ಮಹಾಜನರು ಕಣ್ಣುಮುಚ್ಚಿಕೊಂಡು ಹೇಗೆ ಸುಮ್ಮನೆ ಕುಳಿತರು. ಪತ್ರಿಕೆಗಳಲ್ಲಿಯಾದರೂ ಆ ದೂರುಗಳ ಗದ್ದಲವಿರಲಿಲ್ಲವಲ್ಲ! ಶರ್ಮರು ತಮ್ಮ ಜ್ಞಾನದೃಷ್ಟಿಯಿಂದ ಉಡುಪಿಯ ಮಠಗಳ ಲೋಪದೋಷಗಳನ್ನು ಕಂಡುಹಿಡಿದರೇ? ಇಲ್ಲದಿದ್ದರೆ ಕಾಕ ಪೋಕ ಜನರ ಮಾತು ಕೇಳಿ, ನಂಬಿ ನಾಟ್ಯವಾಡುತ್ತಿರುವರೇ? ಮಠದವರನ್ನು ಬೆದರಿಸಿ ಕೊಂಚ ದುಡ್ಡು ಸುಲಿಯುವ ಉದ್ದೇಶವಾದರೂ ಇವರಲ್ಲಿಲ್ಲವೆಂದು ಏನು ಗೊತ್ತು?' ಇವರು ಹೊರಗಡೆ ಮಿಶನರಿಯಂತೆ ತೋರಿಸಿಕೊಂಡರೂ, ಒಳಗಡೆ ಯಾರು, ಯಾವ ರಾಜಕೀಯ ಪಂಗಡದ ಯಾವ ಕಾರ್ಯಗಳಿಗೆ ಸಾಹಾಯ್ಯಕರು ಎಂಬುದು ಯಾರಿಗೆ ಗೊತ್ತು?

ಮಂಗಳೂರಲ್ಲಿ ಇವರು ಕೊಂಚಕಾಲವಿದ್ದರು. ಉಡುಪಿಯ "ಕೃತಕ ಪ್ರಾಶಸ್ತ್ಯ"ವು ಇಲ್ಲಿ ಅವರಿಗೆ ದೊರೆಯಲಿಲ್ಲ. ಮಂಗಳೂರಲ್ಲಿ ಯೋಗ್ಯರೊಬ್ಬಿಬ್ಬರು ಇವರಿಗೆ ನಿಜವಾದ ಬೆಲೆ ಕಟ್ಟಿಯೇ ಇವರನ್ನು ಇಡಬೇಕಾದ ಸ್ಥಾನದಲ್ಲಿಟ್ಟರು. ಆದರೆ ಆ ಸ್ಥಾನವು ಶಿರಸ್ಸಾಗಿರಲಿಲ್ಲ! ಮತ್ತೆಲ್ಲಿಯೋ?

ಮಹಾನುಭಾವರಾದ ಶ್ರೀ ಧರ್ಮಸ್ಥಳದ ಹೆಗ್ಗಡೆಯವರು, ಸ್ಥಳದ ಮತ್ತು ತಮ್ಮ ಗೌರವಕ್ಕೆ ತಕ್ಕಂತೆ, ತಮ್ಮ ಬಳಿಗೆ ಬಂದವರನ್ನು ಮರ್ಯಾದಿಸಿ ಕಳುಹಿಸುವರು.. ಅದ್ದರಿಂದಲೇ 'ಮಿಶನರಿ'ಗಳಲ್ಲದವರು ಮಿಶನರಿಗಳಾಗಲಾರರು.

ಶರ್ಮರ ಈಗಿನ ಪತ್ರವ್ಯವಹಾರವೆಯು ಅನೇಕರ ಮನಸ್ಸಿನಲ್ಲಿ ಸಂದೇಹವನ್ನು ಉಂಟುಮಾಡಿದೆಯಂತೆ. ತಪ್ಪೇನು? [illegible]

ಡಾ। ಅಂಬೆಡ್ಕರರು ಲಂಡನಿನಲ್ಲಿ.

ಜಾತೀಯ ಪ್ರಶ್ನೆಯು ಬ್ರಿಟಿಷ ಸರಕಾರದವರಿಂದ ತೀರ್ಮಾನಿಸಲ್ಪಟ್ಟೊಡನೆ ಡಾ। ಅಂಬೆಡ್ಕರರು ಬೆಚ್ಚಿಬಿದ್ದರು. ತನ್ನದೇ ಅದ ಪತಿತವರ್ಗದವರ ಪಂಗಡದ ಸಲುವಾಗಿ ತಾನು ಇಷ್ಟು ಹೆಣಗಾಡಿದರೂ ಬ್ರಿಟಿಷ ಮುತ್ಸದ್ದಿಗಳು ಪತಿತವರ್ಗದವರಿಗೆ ಹೆಚ್ಚಿನ ರಿಯಾಯಿತಿ ತೋರಿಸದೆ ಅವರನ್ನು ಅಲಕ್ಷ್ಯಿಸಿಬಿಟ್ಟುದನ್ನು ನೋಡಿ ಅಂಬೆಡ್ಕಾರರು ದಿಗಿಲುಬಿದ್ದು, ಮೊದಲು ಹಸ್ತಲಾಘವವನ್ನು ಮಾಡಿ ಆನಂದಗೊಳಿಸಿದ ಬ್ರಿಟಿಷರನ್ನು ಬೇಸರಪಡಿಸಲು ಯತ್ನಮಾಡುತ್ತಿರುವರು. ಮಂತ್ರಿಯವರ ಏವಾರ್ಡನ್ನು ಟೀಕಿಸಲು ಅಂಬೆಡ್ಕಾರರು ತೊಡಗಿರುವುದನ್ನು ನೋಡಿ ಕೆಲವು ಪತ್ರಿಕೆಗಳು ಸಂತೋಷದಿಂದ ಕೈಚಪ್ಪಾಳೆ ಬಡೆಯುತ್ತಿವೆ. ಈಗ ಮಂತ್ರಿಯವರ ತೀರ್ಪನ್ನು ಡಾ। ಅಂಬೆಡ್ಕಾರರು ಉಲ್ಲಂಘಿಸಿ ಎಸೆದುಬಿಡಲಿರುವರೆಂದು ಸುದ್ದಿ! ಮುಂದಕ್ಕೆ?

ಯುದ್ಧದ ಕಾರ್ಮುಗಿಲು!

ಶಸ್ತ್ರಾಸ್ತ್ರಗಳನ್ನು ಎಲ್ಲಾ ರಾಷ್ಟ್ರಗಳೂ ಕಳಗಿಡಬೇಕೆಂದು ಜಿನೀವಾದಲ್ಲಿ ಸಿದ್ಧಾಂತವಾಗುತ್ತಲಿದೆ. ಅಮೇರಿಕಾ, ರಶ್ಯಾ, ಫ್ರಾನ್ಸ್, ಜರ್ಮನಿಗಳು ಶಸ್ತ್ರಸನ್ಯಾಸವ್ರತವನ್ನು ಕೈಕೊಳ್ಳಬೇಕೆಂದು ಇಂಗ್ಲೆಂಡು ಪ್ರಲಾಪಿಸುತ್ತಿದೆ. ಅಮೇರಿಕವು ಸೈಗುಟ್ಟುತ್ತಿದೆ, ಫ್ರಾನ್ಸ್ ಆಡೀಕೆನ್ನುತ್ತಿದೆ. ಜರ್ಮನಿಯು ಸುಮ್ಮಗಾಗುವದೆಂತಿದೆ. ಹಾಗಿದ್ದರೂ, ಇನ್ನೊಂದು ಮಹಾಯುದ್ಧವು ನಡೆಯಲಿದೆಯೆಂದು ಭವಿಷ್ಯಕಾರರೂ ರಾಜನೀತಿ ವಿಶಾರದರೂ ಉದ್ಘೋಷಿಸುತ್ತಿರುವರು. ರೋಮೈನ್ ರೋಲೆಂಡರೆಂದರೆ ಯೂರೋಪದ ಅಸಾಧಾರಣ ತತ್ವಶಾಲಿಗಳು. ಅವರೂ ಕೂಡ ಯುದ್ಧದ ಆಭಾಸವನ್ನು ಕಾಣುತ್ತಿರುವರು. ಅದುದರಿಂದ ಅಮೇರಿಕಕ್ಕೆ ಹೀಗೆ ಬರೆದಿರುವರು. ಯುದ್ಧವು ಸಮೀಪಿಸುತ್ತಿದೆ. ಎಲ್ಲಾ ಕಡೆಗಳವರೂ ಸಮರಸನ್ನದ್ಧರಾಗುತ್ತಿದ್ದಾರೆ. ಅದು ನಾಳೆ ಜನಿಸಬಹುದು. ಅದು ಒಮ್ಮೆ ಜ್ವಾಲೆಯನ್ನುತ್ಪನ್ನಮಾಡಿದರೆ ಮತ್ತೆ ಅನಿರ್ವಚನೀಯ ದುಃಖಪರಂಪರೆಗಳು ಬರಲಿವೆ. ಎದ್ದೇಳಿರಿ. ಎಲ್ಲಾ ಪಂಗಡಗಳವರೂ ಒಗ್ಗಟ್ಟಾಗಿ ಸನ್ನಿಹಿತವಾಗಲಿರುವ ಯುದ್ಧವನ್ನು ನಿಲ್ಲಿಸಿರಿ."

ವೃತ್ತ ಪತ್ರಿಕೆಗಳನ್ನೇಕೆ ಓದಬೇಕು?

ದೇಶದ ಜೀವಜೀವಾಳವು ಜನಸಮುದಾಯದ ಚೇತನವಾಗಿರುತ್ತದೆ. ಆ ಚೇತನವುಂಟಾಗಬೇಕಾದರೆ ಜ್ಞಾನಲಾಭವಾಗಬೇಕು, ಜ್ಞಾನಲಾಭವಾಗಬೇಕಾದರೆ ಜ್ಞಾನಸಂಪಾದನೆಗೆ ತೊಡಗಬೇಕು. ಜ್ಞಾನಸಂಪಾದನೆಗೆ ವಾಚನ, ಸಂಭಾಷಣ, ವಿವೇಕ, ಅನುಕರಣ ಅನುಭವಗಳು ಸಾಧಕಗಳು. ಇವುಗಳಲ್ಲಿ ಶ್ರೇಯಸ್ಕರವಾದುದು ಸ್ವಸ್ಥವಾಚನ. ಜನಸಾಮಾನ್ಯರು ಚೇತನಯುತರಾಗಬೇಕಾದರೆ ವ್ಯವಹಾರ ಜ್ಞಾನವೂ ಲೋಕಜ್ಞಾನವೂ ಬೇಕು. ರಾಜಕೀಯ, ಧಾರ್ಮಿಕ, ಆಧ್ಯಾತ್ಮಿಕ, ವೈಜ್ಞಾನಿಕ, ವ್ಯಾವಹಾರಿಕ ಜ್ಞಾನವಿರಬೇಕಾದರೆ ವೃತ್ತಪತ್ರಿಕೆಗಳನ್ನು ವಾಚಿಸಬೇಕು. "ಪಾಶ್ಚಾತ್ಯ ರಾಷ್ಟ್ರಗಳನ್ನು ನೋಡಿರಿ. ವೃತ್ತಪತ್ರವು ನಾಲ್ಕನೇಯ ಆಧಾರಸ್ತಂಭವೆಂದು ಅಲ್ಲಿಯವರು ಪರಿಗಣಿಸುತ್ತಾರೆ. ಪಾಶ್ಚಾತ್ಯ ರಾಷ್ಟ್ರಗಳ ಪ್ರತಿಯೊಂದು ಪಟ್ಟಣದಲ್ಲಿ ಪ್ರತಿ ದಿವಸ ಲೆಕ್ಕವಿಲ್ಲದಷ್ಟು ಪತ್ರಗಳು ಹೊರಡುತ್ತಿವೆ. ಲೋಕಪ್ರಿಯ ಪತ್ರಿಕೆಗಳು ದಿನಕ್ಕೆ ನಾಲ್ಕೈದು ಸಲ ಪ್ರಕಟವಾಗುವುವು. ಅಲ್ಲಿ ಬಡವರು ಬಲ್ಲಿದರು, ಸಣ್ಣವರು, ದೊಡ್ಡವರು, ಹೆಂಗಸರು ಗಂಡಸರು, ಪ್ರತಿನಿತ್ಯವೂ ಪತ್ರಗಳನ್ನೋದುತ್ತಾರೆ. ಅವರಿಗೆ ಅದೊಂದು ಚಟವಾಗಿ ಹೋಗಿದೆ. ಬರ್ಲಿನ್ ಒಂದರಲ್ಲಿಯೇ ವಾರಪತ್ರಗಳ ಪ್ರತಿಗಳು ೩೦ ಲಕ್ಷಕ್ಕೆ ಮಿಕ್ಕು ಮಾರಾಟವಾಗುತ್ತವೆ. ಲೋಕಾಧಾರಕ್ಕೆ ಪಾತ್ರವಾದ ಒಂದೆರಡು ಪತ್ರಗಳು ಪ್ರತಿ ದಿವಸ ಮೂರು ಮೂರು ಸಲ ಪ್ರಕಟವಾಗುವುವು" ಆದುದರಿಂದಲೇ ಅಲ್ಲಿಯವರು ಅಷ್ಟು ವ್ಯವಹಾರ ಚತುರರಿರುವರು.

ನಮ್ಮ ಸಂಸ್ಥೆಗಳ ದೋಷಗಳನ್ನು ನಾವೇ ಕಂಡುಹಿಡಿದು, ನಾವೇ ಸರಿಪಡಿಸಿಕೊಳ್ಳಲು ಯತ್ನಿಸಬೇಕಲ್ಲದೆ, ಅನಾಮಧೇಯರ ಕೈಗೊಪ್ಪಿಸುವುದು ಹೇಡಿತನವಾಗಿದೆ.

'ವಾಚಕ'

ಉಡುಪಿಯ ಗದ್ದಲದ ಶರ್ಮರ ಭಾಷಣಗಳು ವಿಷಯದ ಅವಶ್ಯಕತೆಗಳ ಮೇರೆ ಮೀರುವುದಕ್ಕಿಂತಲೂ ಸಭ್ಯತೆಯ ಅವಶ್ಯಕತೆಯ ಮೇರೆ ಮೀರುವುದೆಂದು ಹೇಳಬಹುದು. ಮೇಲಿನ ಲೇಖಕರ 'ಪತ್ರಿಕೆಗಳಲ್ಲಿ ಆ ದೂರುಗಳ ಗದ್ದಲವಿರಲಿಲ್ಲ' ವೆಂಬ ಮಾತು ಒಪ್ಪತಕ್ಕದ್ದಲ್ಲ. ಗದ್ದಲವಿದ್ದಿರಲಿಲ್ಲವಾದರೂ ದೂರುಗಳಿದ್ದುವು ಎಂದು ಹೇಳಬಹುದು. ಆದರೆ ಶರ್ಮರ ನಡತೆಯು ಒಳ್ಳೆಯದಿರಲಿ ಕೆಟ್ಟದಿರಲಿ, ಮಠಗಳ ಕಡೆಗೆ ಆ ಮಠಗಳ ಶಿಷ್ಯವೃಂದದವರ ಲಕ್ಷ್ಯ ಹೆಚ್ಚಾಗಿ ಮಠ ಸುಧಾರಣೆಯು ಆಗತಕ್ಕದೆಂಬುದರಲ್ಲಿ ನಮಗೆ ಸಂದೇಹ ತೋರುವುದಿಲ್ಲ. ಮಠಗಳೆಂದರೆ ಉಡುಪಿಯವು ಮಾತ್ರವೆಂದಲ್ಲ - ಎಲ್ಲಾ ಮಠಗಳೂ, ಉಡುಪಿಯಲ್ಲಿ ಮಾತ್ರ ಎಂಟು ಮಠಗಳು ಜತೆಯಾಗಿ ಕಾಣುವುದರಿಂದ ಅಲ್ಲಿನ ಲೋಪದೋಷಗಳು ಕಣ್ಣುಕುಕ್ಕುವಷ್ಟು ಮುಂದೆ ಬರಲು ಕಾರಣವಾದುದೆಂದು ನಮಗನ್ನಿಸುವುದು.

ಸಂಪಾದಕ

ಬೈ ಬ್ರಿಟಿಷ್ ಚಳವಳವೇನು ಮಾಡಿದೆ?

ಬ್ರಿಟಿಷ ವಸ್ತು ಪ್ರಚಾರಾರ್ಥವಾಗಿ ಪ್ರಿನ್ಸ್ ಒಫ್ ವೇಲ್ಸರು ಎಂಪಾಯರ್ ಮಾರ್ಕೆಟಿಂಗ್ ಬೋರ್ಡಿನ ನೇತೃತ್ವದಲ್ಲಿ 'ಬೈ ಬ್ರಿಟಿಷ' ಚಳವಳವನ್ನು ಕಳೆದ ನವಂಬರದಲ್ಲಿ ಪ್ರಾರಂಭಿಸಿದರಷ್ಟೆ! ಐದೇ ಆರು ತಿಂಗಳಲ್ಲಿ ಅದು ಎಂತೆಂತಹ ಕೆಲಸಗಳನ್ನು ಮಾಡಿತು?

'೨೦ ಲಕ್ಷ ಜಾಹೀರು ನೋಟೀಸುಗಳನ್ನು ಸಾರ್ವತ್ರಿಕವಾಗಿ ಪ್ರಕಟಿಸಿತು. ಈ ನೋಟೀಸುಗಳನ್ನು ವ್ಯಾಪಾರ ಕೇಂದ್ರಗಳಲ್ಲಿ, ಎಲ್ಲಾ ಅಂಗಡಿಗಳ ಗೋಡೆಗಳ ಮೇಲೆ, ಸರಕಾರೀ ಆಫೀಸುಗಳ ಗೋಡೆಗಳಿಗೆ, ಟಪ್ಪಾಲು ಆಫೀಸುಗಳ, ಬೇಂಕುಗಳ, ನಾಟಕ ಸಿನೆಮಾ ಮಂದಿರಗಳ ಗೋಡೆಗಳಿಗೆ ಅಚ್ಚಿಸಿ ಪ್ರಚುರಮಾಡಿತು. ಟ್ರಾಂ ಬಸ್ಸು, ರೈಲು ಇತ್ಯಾದಿ ವಾಹನಗಳ ಹೊರಪಾರ್ಶ್ವಗಳಲ್ಲಿ ಪ್ರದರ್ಶಿಸಲ್ಪಟ್ಟುವು. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ, ವಿಮಾನಸ್ಟೇಷನುಗಳಲ್ಲಿ, ಆಟಪಾಟಗಳ ಸ್ಥಳಗಳಲ್ಲಿ, ದೊಡ್ಡದೊಡ್ಡ ಜೂಜು ನಡೆವಲ್ಲಿ ಅವುಗಳು ಪ್ರದರ್ಶಿತವಾದುವು. ವೃತ್ತ ಪತ್ರಿಕೆಗಳಲ್ಲಿ ಬೈ ಬ್ರಿಟಿಷ ಪ್ರಚಾರವು ಸರ್ವತೋಮುಖವಾಯಿತು. ರೇಡಿಯೋ ಮೊದಲಾದುವುಗಳ ಮೂಲಕವೂ ಈ ಕಾರ್ಯವು ನಡೆಯಿತು. ಅಂತೂ ಬೈ ಬ್ರಿಟಿಷ ಪ್ರಚಾರಾರ್ಥವಾಗಿ ಲಕ್ಷ ಲಕ್ಷ ಪೌಂಡುಗಳು ವೆಚ್ಚವಾದುವು. ಬೈ ಇಂಡಿಯನ್ ಚಳವಳವೋ?

'ಬೈ ಇಂಡಿಯನ್ ಲೀಗ್'

'ಬೈ ಇಂಡಿಯನ್ ಲೀಗ್'ಗಳ ಕಾರ್ಯಕಲಾಪಗಳು ರಭಸದಿಂದ ಸಾಗುವ ಚಿಹ್ನೆಗಳು ಇಷ್ಟರ ತನಕ ಕಡಿಮೆಯಾದರೂ, ಈಗೀಗ ಹಲಕೆಲವು ಯತ್ನಗಳು ನಡೆಯುತ್ತಲಿವೆ. ಮುಂಬಾಯಿಯಲ್ಲಿ ಸ್ವದೇಶಿ ಲೀಗ್ ಎಂಬ ಪ್ರತ್ಯೇಕ ಕಾರ್ಯಕಾರಿ ಮಂಡಲಿಯೊಂದು ಹೊರಟಿದೆ. ತಾ। ೫ರಿಂದ ೧೨ನೇ ಸಪ್ಟಂಬರದ ವರೆಗೆ 'ಸ್ವದೇಶಿ ವಾರ'ವೊಂದನ್ನು ಸಂಭ್ರಮದಿಂದ ಜರುಗಿಸಬೇಕೆಂದು ನಿಶ್ಚಯಿಸಿದೆ. ಮೆರವಣಿಗೆಗಳೂ, ಖಾದಿ ಪ್ರಚಾರವೂ, ಲೀಗಿಗೆ ಹೊಸ ಸದಸ್ಯರನ್ನು ಚುನಾಯಿಸುವಿಕೆಯೂ ಜಾಹೀರಾತುಗಳೂ, ಸಭೆಗಳೂ, ಶಾಲಾ ಕಾಲೇಜು ಸಭೆಗಳೂ, ಸ್ವದೇಶಿ ಪ್ರದರ್ಶನವೂ ಸ್ವದೇಶಿ ಸೋದ್ರಿಯೂ, ಇನ್ನಿತರ ವಿವಿಧ ಪ್ರಚಾರ ಕಾರ್ಯಗಳೂ ನಡೆಯಲಿವೆ. ಇದರ ಮಾದರಿಯನ್ನು ಅಂಗೀಕರಿಸಿ ಬೈ ಇಂಡಿಯನ್ ಲೀಗಿನವರೂ ಬಲವಾದ ಪ್ರಚಾರಸೇವೆಯನ್ನೇಕೆ ಮಾಡಬಾರದು? ಪ್ರತಿ ನಗರದವರೂ ಇಂತಹ ಕಾರ್ಯದಲ್ಲಿ ಭಾಗವಹಿಸಿ, ಜನರಲ್ಲಿ ಸ್ವದೇಶೀ ಸ್ಫೂರ್ತಿಯನ್ನೇಕೆ ಉಂಟುಮಾಡಬಾರದು? ಸಮೀಪ ಪ್ರಾಂತ್ಯಗಳ ಮುಖಂಡರನ್ನು ಬರಮಾಡಿ, ಅವರ ಮೂಲಕವಾಗಿ ಒಂದೊಂದು ಸಭೆಯನ್ನು ಮಾಡಿ ಈ ಸ್ವದೇಶಿ ಪ್ರಚಾರವನ್ನು ಏಕೆ ಚೇತನಾಯುತವನ್ನು ಮಾಡಬಾರದು?

ಬೇಕಾಗಿದೆ! ೫೦ ಮಿಲಿಯ ಪೌಂಡ್!

ಕಳೆದ ವರ್ಷ ಸಪ್ಟಂಬರದಲ್ಲಿ ಬ್ರಿಟಿಷ ಸಾಮ್ರಾಜ್ಯವು ತೀವ್ರವಾಗಿ ಆರ್ಥಿಕ ದುಸ್ಥಿತಿಗೊಳಗಾಯ್ತು. ಇದೇ ಡಿಸೆಂಬರದೊಳಗೆ ಅದು ಅಮೇರಿಕ ಸರಕಾರಕ್ಕೆ ೫೦ ಮಿಲಿಯ ಪೌಂಡುಗಳನ್ನು ಸಾಲಪಾವತಿ ಕಂತನ್ನಾಗಿ ಕೊಡಲಿರುತ್ತದೆ. ಬ್ರಿಟನು ಇಷ್ಟು ದ್ರವ್ಯವನ್ನು ಎಲ್ಲಿಂದ ಸಂಪಾದಿಸಲಿರುತ್ತದೋ ತಿಳಿಯದು. ಒಂದೋ ಅದು ಅಮೇರಿಕನ್ ಸರಕಾರದೊಡನೆ ಏನಾದರೊಂದು ಬಗೆಯ ವ್ಯವಸ್ಥೆಯನ್ನು ಮಾಡಬೇಕು. ಒಟ್ಟಿನಾ ಪರಿಸ್ಥಿತಿ ವಿಜೃಂಭಣೆಯೊಂದಾಗಿ ಅದು ಮತ್ತೂ ಕಷ್ಟಕ್ಕೊಳಗಾಗಿದೆ. ಲೌಸೇನ್ ಪರಿಷತ್ತಿನಿಂದಾಗಿಯೂ ಬ್ರಿಟನು ಖಂಡದೊಳಗೆ ಬಿದ್ದ ಇಲಿಯಂತಾಗಿದೆ. ಈ ಸಾಲದ ಕಂತಿನ ಬಗ್ಗೆ ಏನೆಲ್ಲ ಏರ್ಪಾಡಾಗಲಿದೆಯೋ ನೋಡಲಿದೆ.

106!

ಒಸ್ಟ್ರೇಲಿಯಾದಲ್ಲಿ ವೃದ್ಧಪಿತಾಮಹನೆಂದೆನಿಸಲ್ಪಟ್ಟಿದ್ದ ಹಾಫೂ ಎಂಬ ಚೈನೀಯನೊಬ್ಬನು ಮೊನ್ನೆ ತನ್ನ ೧೦೬ನೇ ವಯಸ್ಸಿನಲ್ಲಿ ಮೃತನಾದನು. ದೇಶದಲ್ಲಿ ಅತಿ ವೃದ್ಧನಾಗಿದ್ದು ಅವನು ಅಷ್ಟು ಗೌರವಾನ್ವಿತನಾಗಿದ್ದನು. ಅವನ ಶವಸಂಸ್ಕಾರವು ಬಹು ಮಂದಿ ದೇಶಮುಖಂಡರ ಮೇಲ್ವಿಚಾರದಲ್ಲಿ ನಡೆಯಿತು. ೧೦೬ ವರ್ಷಗಳ ಕಾಲ ಬದುಕುವುದೆಂದರೆ ಅದೊಂದು ವಿಚಿತ್ರವೆಂದೇ ಅಲ್ಲಿಯವರ ಭಾವನೆ. ಹಾಫೂನು ಇಷ್ಟು ಕಾಲ ಬದುಕಲು ಕಾರಣವೇನೆಂದು ಅಲ್ಲಿಯವರು ವಿಚಾರಿಸಿ ತಿಳಿಯಲು, "ಅವನು ಮಾದಕ ಪದಾರ್ಥವನ್ನು ಸೇವಿಸುತ್ತಿದ್ದಿಲ್ಲವೆಂದೂ, ವಿಷಯೋಪಭೋಗಗಳಲ್ಲಿ ಮೇರೆ ಮೀರಿ ನಡೆದಿಲ್ಲವೆಂದೂ ಸಮಯಪ್ರತಿಷ್ಠೆ ಆಹಾರ ಸೇವನೆಗಳಲ್ಲಿ ಅವನು ಬಹಳ ಗಮನವನ್ನೀಯುತ್ತಿದ್ದನಾಗಿಯೂ ತಿಳಿದುಬಂತು. "ಮನುಷ್ಯನು ದೀರ್ಘಕಾಲ ಬಾಳುವುದು ವಿಚಿತ್ರವಲ್ಲ. ಪವಿತ್ರ ಮಾನಸಿಕ ಶಕ್ತಿಯು ಹತೋಟಿಯಲ್ಲಿರಬೇಕು" ಎಂದು ಅವನೊಮ್ಮೆ ಹೇಳಿದ್ದನಂತೆ.

'ಸ್ವದೇಶಾಭಿಮಾನಿ' ಪತ್ರಿಕೆಗೆ
ಚಂದಾದಾರರಾಗಿರಿ.

[illegible]

[illegible]
ಈ ಬಾರಿಯ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ
[illegible]
[illegible]
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೪
ಒಳದೇಶ ವರ್ತಮಾನ . . . . ,,
ದಕ್ಷಿಣ ಕನ್ನಡ— ಮಂಗಳೂರು, ಕಾಸರಗೋಡು, ಪುರಕಳ, ಉಡುಪಿ, ಬಂಟ್ವಾಳ, ಪಾಣೆಮಂಗಳೂರು, ಕಾರ್ಕಳ, ಕುಂಬಳೆ, ಪಣಂಬೂರು, ಮೂಲ್ಕಿ, ಕುಂದಾಪುರ, ಅಜೆಕಾರು . ೯-೧೫
ವಿವಿಧ ಸಮಾಚಾರಗಳು ೧೧
ಶ್ರೀ ಗಣೇಶಾಯ ನಮೋನಮಃ . . . ೨
ರಾಜಿಯಾಗುತ್ತದೆಯೇ? . ೪
ಕೆಲವು ಸುದ್ದಿಗಳು ೬
ಪತ್ರವ್ಯವಹಾರ . . ,,
ದಕ್ಷಿಣ ಕನ್ನಡದಲ್ಲಿ ಚುನಾವಣೆಯ ಗಡಿಬಿಡಿ ೧೨
ರಾಜಾರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ ೧೫

ಸ್ವದೇಶಾಭಿಮಾನಿ.

ತಾ. ೨ನೇ ಶುಕ್ರವಾರ ಸಪ್ಟಂಬರ ೧೯೩೨

ಈ ಬಾರಿಯ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ.

ಡಿಸ್ಟ್ರಿಕ್ಟ್ ಬೋರ್ಡಿನ ಸದಸ್ಯರ ಚುನಾವಣೆಯ ಕ್ರಮದಲ್ಲಿ ಹೊಸ ಮಾರ್ಪಾಟು ಆದ ನಂತರದ ಚುನಾವಣೆಯು ಇದೇ ಮೊದಲನೆಯ ಬಾರಿಯಾಗಿರುತ್ತದೆ ಈ ವರೆಗೆ ಡಿಸ್ಟ್ರಿಕ್ಟ್ ಬೋರ್ಡಿಗೆ ತಾಲೂಕು ಬೋರ್ಡಿನಲ್ಲಿ ತಾಲೂಕು ಬೋರ್ಡಿನ ಮೆಂಬರರೊಳಗಿಂದಲೇ ಚುನಾವಣೆಯಾಗಬೇಕಿತ್ತು ಈಗ ಈ ಚುನಾವಣೆಯ ಬಗ್ಗೆ ಪ್ರತ್ಯೇಕ ಮತದಾರ ವರ್ಗವು ರಚಿಸಲ್ಪಟ್ಟಿದೆ ತಾಲೂಕು ಬೋರ್ಡಿಗೆ ಮೆಂಬರರು ಹೇಗೆ ಚುನಾಯಿಸಲ್ಪಡುತ್ತಾರೊ ಹಾಗೆಯೇ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರರೂ ಚುನಾಯಿಸಲ್ಪಡಬೇಕಾಗಿದೆ.

ಕಳೆದ ಆಗೋಸ್ತು ತಿಂಗಳ ತಾ ೨೬ರಲ್ಲು ಈ ಚುನಾವಣೆಯ ಉಮೇದ್ವಾರರ ನೇಮಕವು ಆಯಿತು ಆದರೆ ಇಷ್ಟರ ವರೆಗಿನ ಹಲವು ಚುನಾವಣೆಗಳಂತೆ ಈ ಬಾರಿಯ ಚುನಾವಣೆಯಲ್ಲಿ ಅಷ್ಟೊಂದು ಚೇತನವು ಕಂಡುಬರುವುದಿಲ್ಲ ಹೆಚ್ಚಿನ ಕಡೆಗಳಲ್ಲಿ ವಿರೋಧವಿಲ್ಲದೇನೇ ಹಲವರು ಚುನಾಯಿಸಲ್ಪಟ್ಟು ಬಂದಿರುವರು ಇನ್ನು ಕೆಲವು ಕಡೆಗಳಲ್ಲಿ ರಾಜಿಪ್ರಸ್ತಾಪದಿಂದ ವಿರೋಧಿಗಳನ್ನು ತೆಗೆದುಹಾಕಿ ಕೆಲವರು ಚುನಾಯಿಸಲ್ಪಟ್ಟು ಬಂದಿರುವರು ಈಗ ಇದ್ದ ಕೆಲವೇ ಚುನಾವಣೆಗಳಲ್ಲಿ ರಾಜಿಯಿಂದಲೊ ಖರ್ಚಿನ ಕಾರಣದಿಂದಲೊ ಹಿಂದೆಗೆಯುವವರೂ ಹೆಚ್ಚಿನವರಿರಬಹುದು

ಲೋಕಲ್ ಬೋರ್ಡುಗಳ ಚುನಾವಣೆಗಳು ಇಷ್ಟು ಸುಲಭವಾದುದರಲ್ಲಿ ಕೆಲವು ಪ್ರಮುಖ ವಿಷಯಗಳನ್ನು ಕಾಣಬಹುದು. ಒಂದನೆಯದಾಗಿ, ಚುನಾವಣೆಗಳು ವಿರೋಧವಿಲ್ಲದೆ ಸಾಗಿದುದರಿಂದ ಜಾತಿ ವೈಷಮ್ಯಗಳೂ ಪಕ್ಷ ವೈಷಮ್ಯಗಳೂ ತತ್ಕಾಲದ ಮಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಅತೀವ ಕಡಿಮೆಯಿವೆಯೆಂದು ಹೇಳಬಹುದು ಇದು ಒಂದು ಸಂತೋಷದ ವಿಷಯ ಚುನಾವಣೆಗಳು ಈಗಿನ ಪ್ರಜಾಸತ್ತೆಯ ತತ್ವಗಳ ಪ್ರಮುಖ ಪರಿಣಾಮವಿರುವುವಾದರೂ, ಜನತೆಯ ಸಾಮಾಜಿಕ ಜೀವನದ ಮೇಲೆ ಈ ಚುನಾವಣೆಗಳ ಪರಿಣಾಮವು ಬಹಳ ಹಾನಿಕರವಾದುದಾಗಿದೆ ವೈಯಕ್ತಿಕ, ಸ್ವಾರ್ಥಮಯ, ಜಾತೀಯ ಪಕ್ಷೀಯ, ಇತ್ಯಾದಿ ದ್ವೇಷಾಸೂಯೆಗಳು ಹೊರಪಟ್ಟು ಬೆಳೆದು ಪ್ರಜ್ವಲಿಸುವುದು ಈ ಚುನಾವಣೆಗಳಿಂದಲೇ ಆಗಿದೆ ಆದುದರಿಂದ ಚುನಾವಣೆಗಳು ಕಡಿಮೆಯಾಗಿ ಹೋದುದರಿಂದ ಜನತೆಯ ಅನ್ಯೋನ್ಯತೆಯು ಬಹಳವಾಗಿ ಶಿಥಿಲ ಹೊಂದಿಲ್ಲವೆನ್ನ[illegible]

ಆದರೆ ಚುನಾವಣೆಗಳು ಕಡಿಮೆಯಾದುದರಲ್ಲಿ ಇನ್ನೊಂದು ಮುಖ್ಯ ಪರಿಸ್ಥಿತಿಯನ್ನು ಕಾಣಬಹುದು, ಲೋಕದ ದುಸ್ಥಿತಿಯೊಡನೆ ನಮ್ಮ ಜಿಲ್ಲೆಯ ಸಾಂಪತ್ತಿಕ ಸ್ಥಿತಿಯೂ ಬಹು ಮಟ್ಟಿಗೆ ಕೆಟ್ಟು ಹೋಗಿರುತ್ತದೆ. ಹಲವು ಪ್ರಮುಖ ವ್ಯಾಪಾರಿಗಳು ನಷ್ಟದ ಗೊಂದಲದಿಂದ ಹೊರಬಿದ್ದಿಲ್ಲ; ಅಡಿಕೆಗೆ ರೂಪಾಯಿ ೬–೫ರಿಂದ ರೂಪಾಯಿ ೪–೩ಕ್ಕೆ ಇಳಿದು, ಜಮೀನುದಾರರ ಉತ್ಪತ್ತಿಯು ಸಿರ್ವೆ ಇತ್ಯಾದಿ ಖರ್ಚು ಹೋಗುತ್ತಾ ಅರ್ಧಕ್ಕಿಂತ ಕಡಿಮೆಯಾಗಿ ಹೋಗಿರುತ್ತದೆ. ದವಸಧಾನ್ಯಗಳ ಕ್ರಯಗಳೆಲ್ಲಾ ಇಳಿದು ಹೋಗಿವೆ. ವ್ಯವಹಾರಗಳು ಕಡಿಮೆಯಾಗಿ ಆರ್ಥಿಕ ಸಂಚಲನೆಯು ಬಹಳ ಮಂದಗತಿಯನ್ನೈದಿದೆ. ಈ ಕಷ್ಟತರ ಪರಿಸ್ಥಿತಿಯಿಂದ ಜಿಲ್ಲೆಯ ಯಾವನೊಬ್ಬನೂ ಹೊರತಾಗಿಲ್ಲ. ಇತ್ತ ಬೋರ್ಡು ಚುನಾವಣೆಗಳ ಕ್ಷೇತ್ರವು ವಿಶಾಲವಾಗಿದ್ದು ೪–೫ ಸಾವಿರ ಮತದಾರರಿಂದ ಓಟುಗಳನ್ನು ಸಂಗ್ರಹಿಸಬೇಕಾಗಿದೆ ಖಾಸಗಿ ಸಾಂಪತ್ತಿಕ ಸ್ಥಿತಿಯು ಇಷ್ಟು ಕಷ್ಟತರದ್ದಿರುತ್ತಾ ಬೋರ್ಡು ಚುನಾವಣೆಯ ಸಂದೇಹಾತ್ಮಕ ಗೌರವದ ಬಗ್ಗೆ ಖರ್ಚು ಮಾಡಲು ತಯ್ಯಾರಿರುವ ಮಹನೀಯರ ಸಂಖ್ಯೆಯೂ ಬಹಳ ಕಡಿಮೆಯಾಗಿ ಹೋಗಿರಬೇಕು

ಚುನಾವಣೆಗಳು ಕಡಿಮೆಯಾದ ಬಗ್ಗೆ ನಮ್ಮ ಜಿಲ್ಲೆಯನ್ನು ನಾವು ಅಭಿನಂದಿಸುವೆವು, ಮತ್ತು ಇಷ್ಟು ಸುಲಭದಲ್ಲಿ ಚುನಾಯಿಸಲ್ಪಟ್ಟ ಬಗ್ಗೆ ಈ ಹೊಸ ಬೋರ್ಡು ಮೆಂಬರರನ್ನೂ ನಾವು ಅಭಿನಂದಿಸುವೆವು ಆದರೆ ಅದೇ ಸಮಯದಲ್ಲಿ, ಅವರು ಈಗ ಜಿಲ್ಲೆಯ ಆಡಳಿತದ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಂಡಿರುವರೆಂದೂ, ಅದನ್ನು ಸರಿಯಾಗಿ ನಿರ್ವಹಿಸುವ ಕರ್ತವ್ಯವು ಅವರದಾಗಿದೆಯೆಂದೂ ಅವರನ್ನು ಎಚ್ಚರಿಸದೆ ಇರಲಾರೆವು

ವಿದೇಶ ವರ್ತಮಾನ.

ಲಂಕಶಯರಿನಲ್ಲಿ ಗಿರಣಿ ಕೆಲಸಗಾರರಿಗೂ ಗಿರಣಿ ಮಾಲಿಕರಿಗೂ ಚರ್ಚೆ ನಡೆದು ೨ ಲಕ್ಷ ಕೆಲಸಗಾರರು ಮುಷ್ಕರ ಹಿಡಿದಿರುವರು ಚರಿತ್ರೆಯಲ್ಲೇ ಘೋರವಾದ ಮುಷ್ಕರವು ತಲೆದೋರಿದೆ

— ಎಮ್ಸ್ಟರ್‌ಡೇಮಿನಲ್ಲಿ ಯುದ್ಧವಿರೋಧ ಸಭೆಯೊಂದು ಜರಗಿತು ಅದರಲ್ಲಿ ವಿ ಜೆ ಪಟೇಲರು ಭಾಗವಹಿಸಿದರು ಎಲ್ಲಾ ಪ್ರತಿನಿಧಿಗಳಿಗಿಂತಲೂ ಅವರೇ ಹೆಚ್ಚಿನ ಕುತೂಹಲಕರರಾಗಿದ್ದು ಛಾಯಾಚಿತ್ರಗಾರರು ಅವರನ್ನು ಸುತ್ತುಗಟ್ಟಿದರು

— ಹಿಂದೂದೇಶದಿಂದ ಇಂಗ್ಲಾಂಡಿಗೆ ಮಾವಿನ ಹಣ್ಣುಗಳು ರಫ್ತಾಗುತ್ತಿವೆಯಷ್ಟೆ ಈಜಿಪ್ತಿನಿಂದಲೂ ರಾಶಿರಾಶಿ ಮಾವಿನ ಹಣ್ಣುಗಳು ಬರುತ್ತಿರುವುದರಿಂದ ಸ್ಪರ್ಧೆಯಿಂದ ಈಗ ಹಿಂದೂದೇಶದ ಮಾವಿನ ಹಣ್ಣಿಗೆ ಗಿರಾಕಿ ಕಡಿಮೆಯಾಗಿದೆಯೆಂದು ವಾರ್ತೆ.

— ಜರ್ಮನಿಯಲ್ಲಿ ವಾನ್ ಪಾಪೆನ್ ಪ್ರಭುತ್ವಪ್ರಭುಗಳು ರಾಷ್ಟ್ರೀಯವಾದಿಗಳಾದ ನಾಜಿಗಳಲ್ಲಿ ೫ ಮಂದಿಗಳಿಗೆ ಮರಣ ದಂಡನೆಯನ್ನು ವಿಧಿಸಲಿರುವುದರಿಂದ ಆ ಅಪಾದಿತರ ಪರವಾಗಿರುವ ನಾಜಿ ಮುಖಂಡರಾದ ಹರ್ ಹಿಟ್ಲರರು ಚಳವಳವನ್ನು ಹೂಡಲಿರುತ್ತಾರೆ.

— ರಷ್ಯಾದ ಕಾಮುಸ್ಕಾ ಎಂಬಲ್ಲಿ 'ಸ್ವಾತಂತ್ರ್ಯೋದ್ಧಾರು' ಎಂಬ ನಾಮವಿಶೇಷಣದವರು ನಗ್ನರಾಗಿ ಮೆರವಣಿಗೆಯೊಂದನ್ನು ಮಾಡಿದರು ಇದರಲ್ಲಿ ೩೧ ಜನ ಸ್ತ್ರೀಯರು ೧೫ ಜನ ಪುರುಷರು ಭಾಗವಹಿಸಿದರು ಎಲ್ಲರನ್ನೂ ಶಿಕ್ಷಿಸಲಾಯಿತು

ಒಳದೇಶ ವರ್ತಮಾನ

— ಮುಂದಿನ ರಾಜ್ಯಾಂಗರಚನೆಯ ಕುರಿತು ಡೆಹರಾಡೂನ್‌ನಲ್ಲಿ ವೈಸರಾಯರೂ ಸರ್ ಸಪ್ರೂಗಳೂ ಒಂದು ಗಂಟೆಯ ಕಾಲ ಮಾತಾಡಿದರು

— ಮುಂಬಾಯಿ ಪ್ರಾಂತಿಕ ಕೋಪರೇಟಿವ್ ಬ್ಯಾಂಕಿನ ಮೆನೇಜರ ಪುತ್ರರಾದ ಶ್ರೀ ವೈಕುಂಠ ಮೆಹ್ತಾರವರ ಮನೆಯು ಜಪ್ತಿಗೊಳಗಾಯಿತು, ೭ ಕೆಲವು ಕಾಗದ ಪತ್ರಗಳು ಕೈಸೆರೆಯಾಗಿವೆ.

— ಮೀರತ್ತಿನಲ್ಲಿ ಶ್ರೀ ಕೃಷ್ಣಾಷ್ಟಮಿ ಪೂಜೆಯು ನಡೆಯುತಿತ್ತು ಸಾವಿರಾರು ಜನರ ಮಧ್ಯೆ ಕೊಂಗ್ರೆಸ್‌ವಾಲರು ರಾಷ್ಟ್ರಧ್ವಜಗಳನ್ನೆತ್ತಿ ಹಿಡಿದರು ಅನೇಕರನ್ನು ಸ್ಟೇಷನಿಗೆ ಕರೆದೊಯ್ದರು

— ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕರಿಗೆ ಗುಂಡು ಹಾಕಿದ ಸಂಬಂಧವಾಗಿ ಕಲ್ಕತ್ತದಲ್ಲಿ ನಿರೋಧ ಚಂದ್ರದೇವ್ ಎಂಬವರನ್ನು ಕೈದುಮಾಡಿ, ಬಿಟ್ಟು, ಪುನಃ ಬಂಗಾಳ ಓರ್ಡಿನೆನ್ಸಿನ ಮೇರೆಗೆ ದಸ್ತಗಿರಿ ಮಾಡಿದರು.

[illegible]

— ಲಾಹೋರಿನಲ್ಲಿ ರೋಬರ್ಟ್ ಹೋಯರ್ ಎಂಬ ಸೈನಿಕನು ಸೈಕಲಿನಿಂದ ಬಿದ್ದು ಕೈಗೆ ಗಾಯವಾಯಿತು. ಮಧ್ಯಾಹ್ನವಾಗುತ್ತಲೇ ಅವನು ತೀರಿಕೊಂಡನು.

— ಕಲ್ಕತ್ತದಲ್ಲಿ ಸ್ವಯಂಸೇವಕರು ಒಂದು ಗುಪ್ತ ಸ್ಥಳದಲ್ಲಿ ತಮ್ಮ ಕೇಂದ್ರವನ್ನು ಮಾಡಿದ್ದರು. ಅದನ್ನು ಪೋಲೀಸರು ಕಂಡುಹಿಡಿದು ಜವಾಬ್ದಾರೀ ವ್ಯಕ್ತಿಗಳನ್ನು ದಸ್ತಗಿರಿಮಾಡಿದರು.

— ಸುಭಾಷ್‌ಚಂದ್ರಭೋಸರನ್ನು ಬೇಗನೆ ಬಿಡುಗಡೆ ಮಾಡಿ ಸ್ವಿಜರ್‌ಲೇಂಡಿಗೆ ಕಳುಹಿಸಿಕೊಡುವರಾಗಿ ತಿಳಿದುಬರುತ್ತದೆ, ಅವರ ಅಸ್ವಸ್ಥತೆ ಆತುರತೆಯನ್ನುಂಟುಮಾಡುತ್ತಿದೆ

— ಕಲ್ಕತ್ತದ ಸೆರೆಯಲ್ಲಿ ಬಾಬು ರಾಜೇಂದ್ರ ಪ್ರಸಾದರು ಅಸ್ವಸ್ಥರಾಗಿರುತ್ತಾರೆ ಅವರಿಗೆ ಆಗಾಗ ಜ್ವರವು ತಲೆದೋರುತ್ತದೆ.

— ಕರಾಚಿಯ ಮುನಿಸಿಪಾಲಿಟಿಯವರು ಸ್ಕೂಲ್ ಬೋರ್ಡಿನ ವಾರ್ಷಿಕ ವೆಚ್ಚದಿಂದ ೫೦೦೦೦ ರೂಪಾಯಿಗಳನ್ನು ರಿಟ್ರೆಂಚ್‌ಮೆಂಟಿನ ಕತ್ತಿಗೊಡ್ಡಿದರು.

— ಮುಂಬಾಯಿಯಲ್ಲಿ ಶ್ರೀ ವಾಮನ ಕಬಾಡಿಯವರನ್ನು ಒಮ್ಮೆ ಬಿಡುಗಡೆ ಮಾಡಿ ಇನ್ನೊಮ್ಮೆ ಹಿಡಿದು ೬ ತಿಂಗಳ ಬಂದಿವಾಸಕ್ಕೆ ಕಳುಹಿಸಿದರು

— ಜಬ್ಬಲ್‌ಪುರದಲ್ಲಿ ಡಾ ಕಿಚ್ಲೂರವರ ಬಂಧನದ ಸಂಬಂಧವಾಗಿ ಸಂಪೂರ್ಣ ಹರ್ತಾಳವಾಚರಿಸಲ್ಪಟ್ಟಿತು ಮುನಿಸಿಪಲ್ ಆಫೀಸಿಯೂ ಮುಚ್ಚಲ್ಪಟ್ಟಿತು.

— ಸಿಮ್ಲಾದ ನ್ಯಾಯವಿಧಾಯಕ ಸಭೆಯಲ್ಲಿ ಖಾದೀ ರಕ್ಷಣೆಯ ಬಿಲ್ ಒಂದು ಮುಂಬಂದು ಮಂಜೂರಾಗಲಿದೆಯಾಗಿ ತಿಳಿದುಬಂದಿದೆ.

— ಪೂನದಲ್ಲಿ ಬಂಟಿ ಲುಬಾಯಿಸಲೆತ್ನಿಸಿದ ಸತ್ಸುಕೆ, ಸಿಂಘ, ಅಬ್ದುಲ್ ಖಾದರ್ ಖಾನ್ ಎಂಬ ಮೂವರು ಮುನಿಸಿಪಲ್ ಕೌನ್ಸಿಲರುಗಳನ್ನು ಕೋರ್ಟಿಗೆಳೆಯಲಾಗಿದೆ.

— ನಾಗಪುರದಲ್ಲಿ ವಿದ್ಯಾಮಂತ್ರಿಗಳು 'ಪ್ರಾಥಮಿಕ ಶಾಲೆಗಳಲ್ಲಿ ಕೈನೂಲನ್ನು ತೆಗೆವ ಮತ್ತು ಕೈಮಗ್ಗ ಕೆಲಸವನ್ನು ಕಲಿಸುವ ಪ್ರಯೋಗವಾಗಬೇಕೆಂದು ನಿರ್ಧರಿಸಿರುವರು.

— ವೈಸರಾಯರನ್ನು ಸ್ವಾಗತೀಕರಿಸಿ ತಿರುವಾಂಕೂರು ಮಹಾರಾಜರು ಸಿಮ್ಲಾದಲ್ಲಿ ಸಂಭ್ರಮದಿಂದ ಒಂದು ಪಾರ್ಟಿ ಕೊಟ್ಟರು.

— ಕಳೆದ ವಾರ ಅಹ್ಮದಾಬಾದಿನಲ್ಲಿಯ ನಾದಿಯಾದ ತಾಲೂಕು ರಾಜಕೀಯ ಸಭೆಯು ಜರಗಿ ೬೦೦ ಮಂದಿಗಳು ಸೆರೆಹಿಡಿಯಲ್ಪಟ್ಟರು ಒಬ್ಬ ತರುಣನು ಪೋಲೀಸ್ ಸುಪರಿಂಟೆಂಡೆಂಟರ ಮನೆಗೆ ಹೋಗಿ ಅವರಿಗೆ ಕೊಂಗ್ರೆಸ್ ಬುಲ್ಲೆಟಿನನ್ನು ಅರ್ಪಿಸಿದನು ಕೆಲವರನ್ನು ಬಿಡುಗಡೆಮಾಡಿರುವರು!

— ಕಲ್ಕತ್ತದ ಇ ಪಿ ಡಬ್ಲ್ಯೂ ಸ್ಮೈಟ್ ಎಂಬ ಬಂಗಾಳನಾಗಪುರ ರೈಲ್ವೆ ಅಧಿಕಾರಿಯನ್ನು ರಾತ್ರಿ ಯಾರೋ ಹಣಸುಲಿಗೆಗಾಗಿ ಕೊಂದರು

— ಬರ್ಮಾದಲ್ಲಿನ ಚೀನಿಯ ಸ್ತ್ರೀಯೊಬ್ಬಳು ತನ್ನ ಗಂಡನ ರೋಗ ನಿವಾರಣೆಪಡಿಸಲು ತನ್ನ ದೇಹದ ಒಂದು ತುಂಡು ಮಾಂಸವನ್ನು ಕಡಿದು, ಪದಾರ್ಥ ಮಾಡಿ ಗಂಡನಿಗೆ ಬಡಿಸಿ ಅವನನ್ನು ಬದುಕಿಸಲೆತ್ನಿಸಿದ ವಾರ್ತೆ ಬಂದಿದೆ!

— ಜಬ್ಬಲ್‌ಪುರದಲ್ಲಿ ರೇಗೋ ಎಂಬವರನ್ನು ಯಾರೋ ಕೊಂದರಷ್ಟೆ! ಕೊಲೆ ನಡೆಯುವಾಗ ಸಿನೇಮ ಮಂದಿರದಲ್ಲಿದ್ದ ಅವರ ಹೆಂಡತಿಯನ್ನೂ ಕಾರ್ ಡ್ರೈವರನನ್ನೂ ಸೆರೆಹಿಡಿದಿರುವರು, 'ಆ ಸ್ತ್ರೀಯು ಡ್ರೈವರನಿಗೆ ೪೦,೦೦೦ದ ಆಸ್ತಿಯನ್ನು ಗುಟ್ಟಾಗಿ ಕೊಟ್ಟಿದ್ದರು

— ಮಾನ್ಯ ಮದ್ರಾಸ್ ಗವರ್ನರರು ಕಳೆದ ವಾರ ಬೇಟೆಯಾಡುವಾಗ ಕೊಂಚ ಗಾಯಗೊಂಡರು

ಬೆಂಗಳೂರಿನ 'ತಾಯ್ನಾಡು' ದೈನಂದಿನ ಪತ್ರಿಕೆಯು ತನ್ನ ಐದನೇ ವರ್ಷ ವರ್ಧಂತಿಯನ್ನು ತಾ. ೧೧ನೇ ದಿನ ಜರಗಿಸುವುದಾಗಿ ತಿಳಿದು ಬಂದಿದೆ ಇದರ ಅಭಿನಂದನೀಯ ಪ್ರಜಾಸೇವೆಯಲ್ಲಿ ಇದು ಮುಂದಕ್ಕೂ ಸಂಪೂರ್ಣ ಯಶಸ್ವಿಯಾಗಲೆಂದು ಹಾರೈಕೆ

— ಕಡಪಾದಲ್ಲಿ ಒಬ್ಬ ಸುಪ್ರಸಿದ್ಧ ಸನ್ಯಾಸಿಯು ರಾತ್ರಿ ಒಂದು ಅಂಗಡಿಗೆ ಕನ್ನ ಹಾಕಿ, ಎರಡು ಸಾವಿರ ರೂಪಾಯಿಗಳ ಒಡವೆಗಳನ್ನು ಕದ್ದೊಯ್ಯು ಸಿಕ್ಕಿಬಿದ್ದಿರುವನು

— ಡಿಲ್ಲಿಯಲ್ಲಿ ಪೋಲೀಸರ ತಲೆಗೆ ಕಲ್ಲಿನಿಂದ ದೊಣ್ಣೆಯಿಂದ ಹೊಡೆದರೆಂಬ ಆರೋಪದ ಮೇಲೆ ಕೆಲವರು ತರುಣರನ್ನು ಕೈದುಮಾಡಿರುವರು.

— ಪೊಂಡಿಚೇರಿಯ ವಿರಾಮವೆಂಬಲ್ಲಿ ಮಾರಿಯಮ್ಮನ ರಥೋತ್ಸವವು ನಡೆದು, ರಥದ ಅಡಿಗೆ ಒಬ್ಬ ಮಾರಿ ಭಕ್ತನು ಬಿದ್ದು [illegible]

Latest News.

ಈಗ ಬಂದ ಬಿಸಿ ಬಿಸಿ ವಾರ್ತೆ.

– ಅಹ್ಮದಾಬಾದಿನ ಬ್ರಾಹ್ಮಣಪುರವೆಂಬಲ್ಲಿ ತಯಾರಾಗುತ್ತಿದ್ದ ಸ್ಪಿರಿಟ್ಟು ರಾಶಿಗೆ ಬೆಂಕಿಬಿದ್ದು ಇಡೀ ಕಟ್ಟೋಣವು ಭಸ್ಮೀಭೂತವಾಯಿತು. ಅದರೊಡನೆ ೧೪ ಮಂದಿಗಳೂ ಸುಟ್ಟುಹೋದರು

– ಆರು ಮಂದಿ ಕಾನ್ಸ್ಟೇಬಲರು ಇನ್ನೊಬ್ಬ ಕಾನ್ಸ್ಟೇಬಲನನ್ನು ಕೊಂದು ಬಾವಿಯಲ್ಲಿ ಹಾಕಿ ಮೌನರಾಗಿದುದಕ್ಕಾಗಿ ಅವರನ್ನು ಕೋರ್ಟಿಗೆಳೆದು ಮಾತನಾಡಿಸುತ್ತಿದ್ದಾರೆ

– ಧೋರಾಬಾದಿನಲ್ಲಿ ವಿದೇಶಿ ವಸ್ತ್ರ ಪಹರೆ ನಡೆದು ೩೮೦ ಜನರು ದಸ್ತಗಿರ ಮಾಡಲ್ಪಟ್ಟರು.

ದಕ್ಷಿಣ ಕನ್ನಡ.

ಮಂಗಳೂರು:— ಈ ದಿನ ಸಂಜೆ ೫ ಘಂಟೆಗೆ ಕೆನರಾ ಬೇಂಕಿನ ಉಪಶಾಖೆಯೊಂದನ್ನು ಬಂದರದಲ್ಲಿ ತೆರೆಯುವ ಸಮಾರಂಭವು ಇಲ್ಲಿನ ಇಂಪೀರಿಯಲ್ ಬೇಂಕಿನ ಏಜಂಟರಾದ ಮಿ| ರೋಸ್ ದೊರೆಯವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು

ಕಳೆದ ಶನಿವಾರ ಸಂಜೆ ಗವರ್ನಮೆಂಟ್ ಕಾಲೇಜಿನಲ್ಲಿ ಜಿಲ್ಲಾ ಕಲೆಕ್ಟರರವರ ನೇತೃತ್ವದಲ್ಲಿ ದರಬಾರ್ ಒಂದು ನಡೆದು ಮಿ ಎಸ್ ಎಲ್. ಮಥಾಯಸ್ ಇವರಿಗೆ ದಿವಾನ್ ಬಹದೂರ್ ಮತ್ತು ರಾವ್ ಸಾಹೇಬ್ ನೆಲ್ಲಿಕಾ ವೆಂಕಟ್ರಾಯರಿಗೆ ರಾವ್ ಬಹದೂರ್ ಸನ್ನದುಗಳನ್ನು ದಯಪಾಲಿಸಿದರು. ಕಲೆಕ್ಟರವರ ಭಾಷಣವಾದ ನಂತರ ಸಭೆಯು ಮುಕ್ತಾಯವಾಯಿತು.

ಕಳೆದ ಆದಿತ್ಯವಾರವು ಮಾಸಾಂತ್ಯ ಆದಿತ್ಯವಾರವಾದುದರಿಂದ ಕಾಂಗ್ರೆಸ್ಸಿನವರ ರಾಷ್ಟ್ರಧ್ವಜಾರೋಹಣವು ನಡೆಯದಿರದೆಂಬ ಭಾವನೆಯಿಂದ ಮೈದಾನಿನ ಸುತ್ತಲೂ ಬೀದಿಗಳಲ್ಲಿ ಪ್ರತಿ ೫೦ ಗಜಗಳಿಗೊಬ್ಬ ಪೋಲೀಸನಂತೆ ಇರಿಸಿದ್ದರು ಪೋಲೀಸ್ ಸ್ಟೇಷನಿನಲ್ಲಿ ಸ್ವಯಂಸೇವಕರು ಧ್ವಜದ ಗಲಾಟೆಯನ್ನು ಮಾಡಿದರಾಗಿ ತಿಳಿದುಬರುತ್ತದೆ

ಇಲ್ಲಿಯ ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ಶೀಘ್ರದಲ್ಲಿಯೇ "ಬಿಲ್ವಮಂಗಲ್ ಅಥವಾ ಭಕ್ತ ಸೂರದಾಸ್" ಎಂಬ ಮಾತಾಡುವ ಮದನ್ ಕಂಪೆನಿಯ ಉಜ್ವಲ ಫುಲ್‌ಕಲರ್ ಚಲಚಿತ್ರವು ಪ್ರದರ್ಶಿಸಲ್ಪಡುವುದು ಈ ಚಿತ್ರವು ೩೮ ನಗರಗಳಲ್ಲಿ ಏಕಕಾಲದಲ್ಲೇ ಪ್ರದರ್ಶಿಸಲ್ಪಟ್ಟು ಖ್ಯಾತಿಗೊಂಡಿದೆ ಇದರಲ್ಲಿ ಪಿಸ್ಸಾರ್ ಮತ್ತು ಕಸಿನ್ ಎಂಬ ಸುಪ್ರಸಿದ್ಧ ಅಭಿನಯಗಾರರು ಮುಖ್ಯ ಪಾತ್ರವನ್ನು ವಹಿಸಿರುವರು ಇವರ ಸಂಗೀತವೂ ಅಭಿನಯವೂ ಮನಮುಗ್ಧಕರವಾಗಿವೆ ಚಿಂತಾಮಣಿಯನ್ನು ಸಂಪಾದಿಸಲು ಹೊರಟ ಸೂರ್‌ದಾಸನು ಪ್ರೇಮಾಂಧತೆಯಿಂದ ನದಿಯಲ್ಲಿ ತೇಲಾಡುವ ಮೃತಶರೀರವನ್ನು ಮರದ ತುಂಡೆಂದು ಭಾವಿಸಿ, ಬಿಗಿಹಿಡಿದು, ನದಿಯನ್ನು ದಾಟುವುದು, ಚಿಂತಾಮಣಿಯ ಮಾಳಿಗೆಯನ್ನೇರಲು ಅವನು ಹಗ್ಗವೆಂದು ಹಾವನ್ನು ಹಿಡಿದು ಮೇಲೇರಲು ಯತ್ನಿಸುವುದು ಅತ್ಯದ್ಭುತಕರವಾಗಿದೆ

ಇಲ್ಲಿಯ ಸಾಹುಕಾರ್ ಮೆಸರ್ಸ್ ಶ್ರೀನಿವಾಸ ರಂಗಪ್ಪೈ, ವಸ್ತ್ರ ಮತ್ತು ನೂಲಿನ ವ್ಯಾಪಾರಿಗಳು ಶುದ್ಧ ಸ್ವದೇಶಿ ವಸ್ತ್ರಗಳನ್ನು ವಿಕ್ರಯಿಸುವವರೆಂದು ವೈ ಇಂಡಿಯನ್ ಲೀಗಿನವರಿಂದ ಪ್ರಶಸ್ತಿಪತ್ರಿಕೆಯನ್ನು ಪಡೆದಿರುತ್ತಾರೆ

ತಾ. ೨೮ನೇ ಭಾನುವಾರ ಸಾಯಂಕಾಲ ಘಂಟೆ ೫ಕ್ಕೆ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ವಸಂತ ಮಹೋತ್ಸವದಲ್ಲಿ ಅದ್ವೈತ ಸಮಿತಿಯ ಕಾರ್ಯನಿರ್ವಾಹಕ ಮಂಡಳಿ ಮಹಾಧಿವೇಶನವು ಸಮಿತಿಯ ಅಧ್ಯಕ್ಷರಾದ ನ್ಯಾಯ ಮೀಮಾಂಸಾ ಶಿರೋಮಣಿಗಳಾದ ಬ್ರಹ್ಮ ಶ್ರೀ ಶ್ರೀ ಎಸ್ ಗಣಪತಿ ಶಾಸ್ತ್ರಿ ಮಹೋದಯರ ಅಧ್ಯಕ್ಷತೆಯಲ್ಲಿ ಜರಗಿತು

ತಾ ೨೧ನೇ ದಿನ ಮುಂಜಾನೆ ೭ ಘಂಟೆಗೆ ಮಂಗಳೂರು ನ್ಯಾಸಿಗುಡ್ಡೆಯಲ್ಲಿರುವ ಆರ್ಯ ಸಮಾಜ ಮಂದಿರದಲ್ಲಿ ಕೋಲಾರ ಗೋಲ್ಡ್ ಫೀಲ್ಡ್ ವೆಟರ್ನರಿ ಆಸ್ಪತ್ರೆಯ ಡಾ| ವ್ಯಾಲೆಟ್ ಆರ್ನೋಲ್ಡರೆಂಬ ೨೨ ವರ್ಷ ಪ್ರಾಯದ ಪ್ರೊಟೆಸ್ಟಾಂಟ ಕ್ರಿಶ್ಚಿಯನ್ ಆಗಿದ್ದ ತರುಣಿಯು ಶುದ್ಧಿ ಸಂಸ್ಕಾರದಿಂದ ವೈದಿಕಧರ್ಮವನ್ನು ಸ್ವೀಕರಿಸಿದರು ಈಕೆಯು ತನ್ನ ಕ್ರಿಶ್ಚಿಯನ್ ಧರ್ಮವನ್ನು ತ್ಯಜಿಸಿ ವೈದಿಕ ಧರ್ಮವನ್ನು ಸ್ವೀಕರಿಸಲು ಇಚ್ಛಿಸುವುದಕ್ಕೆ ಕಾರಣಗಳನ್ನು ಸೂಚಿಸಿ ಮುಂದಾಗಿಯೇ ಅರ್ಜಿಯನ್ನು ಸಮಾಜಕ್ಕೆ ಕಳುಹಿಸಿದ್ದರು ಶುದ್ಧಿ ಕಾರ್ಯವು ಮುಗಿದ ನಂತರ ಈಕೆಯು ಬೆಂಗಳೂರಿನ ಎಂಪ್ಯಾರ್ ಸ್ಟೋರ್ಸಿನ ಪ್ರೊಪ್ರೈಟರ್ ರಾ| ಎಂ. ಆರ್ ನಾಯ್ಡುರ ಪುತ್ರ ಶಿವಮೊಗ್ಗ ಸಿವಿಲ್ ಆಸ್ಪತ್ರೆಯ ಡಾಕ್ಟರ್ ಶ್ರೀ ಎಂ ಆರ್ ಪಾರ್ಥಸಾರಥಿ ಎಂಬವರನ್ನು ವರಿಸಿದರು, ವೈದಿಕಧರ್ಮದ ವಿಧಿ ಪ್ರಕಾರ ಸಮಾಜ ಸೆಕ್ರೆಟರಿಯವರ ಪೌರೋಹಿತ್ಯದಿಂದ ವಿವಾಹವು ಅತಿ ವಿಜೃಂಭಣೆಯಿಂದ ನಡೆಯಿತು.

ಕಾಸರಗೋಡು— ಕಾಡಿನ ಸತ್ಯಾಗ್ರಹ. ಈ ಮೊದಲು ಇಲ್ಲಿಂದ ಕಾರಡ್ಕಕ್ಕೆ ಹೋಗಿ ಜಂಗ್ಲಿ ಕಾನೂನನ್ನು ಉಲ್ಲಂಘಿಸಿ, ಬೆತ್ತದ ಬಾರಿಗೆ ಒಳಪಟ್ಟು, ಇಲ್ಲಿಯ ಠಾಣೆಯಿಂದ ಬಿಡುಗಡೆ ಮಾಡಲ್ಪಟ್ಟ ಸ್ವಯಂ ಸೇವಕರು ಪುನಃ ಮರುದಿನ ಕಾರಡ್ಕಕ್ಕೆ ಹೋಗಿ ಕಾನೂನನ್ನು ಉಲ್ಲಂಘಿಸಿದರು.

ಈ ವರ್ತಮಾನವನ್ನು ತಿಳಿದ ಕಾಸರಗೋಡು ಸ್ಟೇಷನ್ ಪೋಲೀಸ್ ಅಧಿಕಾರಿಗಳು ತಾ. ೨೦ಕ್ಕೆ ಹೋಗಿ ೫ ಜನ ಸ್ವಯಂ ಸೇವಕರನ್ನು ದಸ್ತಗಿರಿ ಮಾಡಿ ಕಾಸರಗೋಡಿಗೆ ತಂದು ಇಬ್ಬರನ್ನು ಅಲ್ಲಿಂದ ಖುಲಾಸೆ ಪಡಿಸಿ, ಮೂವರನ್ನು ತಮ್ಮ ಬಂದೋಬಸ್ತಿಯಲ್ಲಿಟ್ಟು ತಾ. ೨೭ರಲ್ಲು ಇಲ್ಲಿಯ ಸ್ಟೇಷನರಿ ಸಬ್ ಮೇಜಿಸ್ಟ್ರೇಟರವರ ಮುಂದೆ ಹಾಜರು ಪಡಿಸಿದರು ಸದ್ರಿ ಸ್ವಯಂ ಸೇವಕರಾದ ಕೃಷ್ಣನಾಯರ್, ಕುಂಞ್ಞಿ ಕಣ್ಣನಾಯರ್, ಕಣ್ಣನಾಯರು ಎಂಬವರನ್ನು ಡಿವಿಜನಲ್ ಮೇಜಿಸ್ಟ್ರೇಟರವರ ಮುಂದೆ ಹಾಜರು ಪಡಿಸುವರೆ ಜಾಮೀನು ಮೇಲೆ ಬಿಡಲಾಯಿತು.

ತಾ೨೯-೩-೩೧ಕ್ಕೆ ಡಿವಿಜನಲ್ ಮೇಜಿಸ್ಟ್ರೇಟರವರ ಮೊಕ್ಕಾಂ ತಾ ೨೭ರಲ್ಲು ಜಾಮೀನಿನಲ್ಲಿ ಬಿಡುಗಡೆ ಮಾಡಿದ ಸ್ವಯಂ ಸೇವಕರನ್ನು ಮ| ರಾ| ವಕೀಲ್ ಉಮೇಶರಾಯರ ನೇತೃತ್ವದಲ್ಲಿ ಹಾಜರುಪಡಿಸೋಣಾಯಿತು

ಮಾನ್ಯ ಡಿವಿಜನಲ್ ಆಫೀಸರವರು ಈ ಮೂವರ ಪೈಕಿ ಕೃಷ್ಣನಾಯರ್, ಕಣ್ಣನಾಯರು ಎಂಬವರಿಗೆ ನಾಲ್ಕು ನಾಲ್ಕು ತಿಂಗಳ ಕಠಿಣ ಸಜೆಯನ್ನೂ, ಕುಂಞಿಕಣ್ಣನ್ ನಾಯರ್ ಎಂಬ ಸ್ವಯಂ ಸೇವಕನು ಅಪ್ರಾಯಸ್ಥನೆಂಬ ಸಬಬಿನ ಮೇಲೆ ಕೋರ್ಟು ಬರಖಾಸ್ತು ವರೇಗೆ ಶಿಕ್ಷೆಯನ್ನೂ ವಿಧಿಸಿ ಖುಲಾಸೆಪಡಿಸಿದರು.

ಈ ತನ್ಮಧ್ಯ ಸದ್ರಿ ಕುಂಞಿಕಣ್ಣ ನಾಯರನು ತಾನು ಪ್ರಾಯಭರಿತನಾಗಿರುವೆನೆಂದೂ, ತನ್ನ ಮಿತ್ರರೊಂದಿಗೆ ತನಗೂ ಕಾರಾಗೃಹದ ಸುಖವನ್ನು ಅನುಭವಿಸುವರೆಗೆ ಬಿಡಬೇಕೆಂದೂ ಅಪ್ಪಣೆಯನ್ನು ಕೊಡಬೇಕೆಂದು ಪದೇ ಪದೇ ಬೇಡುತ್ತಿದ್ದನು.

೨೯ರಲ್ಲು ಇದೇ ಸತ್ಯಾಗ್ರಹ ಸಮರದ ಸಮಯದಲ್ಲಿ ಇತ್ತೀಚೆಗೆ ಈಗ ತಾನೇ ಸಬ್ ಜೈಲಿನಿಂದ ಬಿಡುಗಡೆ ಹೊಂದಿ, ಹೊರಗೆ ಬಂದು, ಅನೇಕ ಸರದ ಕಾನೂನುಗಳನ್ನು ಉಲ್ಲಂಘಿಸಿ ದಸ್ತಗಿರಿಯಾಗಿ ಬಿಡುಗಡೆ ಮಾಡಲ್ಪಟ್ಟ ಕೆ ಬಾಬು ಶೆಟ್ಟಿ ಎಂಬ ಸ್ವಯಂ ಸೇವಕನು ತಾ ೨೭ರಲ್ಲಿ ಕಾರಡ್ಕದಲ್ಲಿ ಕಾಡಿನ ಕಾನೂನು ಉಲ್ಲಂಘಿಸಿ, ಪೋಲೀಸರ ದಸ್ತಗಿರಿಗೆ ಒಳಗಾಗಿ, ಅದೇ ದಿನ ಕಾಸರಗೋಡಿಗೆ ಬಂದು ಮರುದಿನ ಆದಿತ್ಯವಾರವಾದುದರಿಂದ ಎರಡು ದಿನದ ರಿಮಾಂಡಿನಲ್ಲಿರಿಸಲ್ಪಟ್ಟು ತಾ ೨೯ರಲ್ಲು ಸ್ಟೇಷನರಿ ಮೆಜಿಸ್ಟ್ರೇಟರ ಮುಂದೆ ಹಾಜರು ಆಗಿ ೩ ತಿಂಗಳ ಕಠಿಣ ಶಿಕ್ಷೆಗೆ ಒಳಗಾಗಿರುತ್ತಾನೆ

ಇಂದು ತಾಲೂಕು ಬೋರ್ಡಿನ ಚುನಾವಣೆಯ ನಾಮಿನೇಶನ್ ಪೇಪರ್ ಕೊಟ್ಟ ಮೆಂಬರರ ಗಡಿಬಿಡಿ ಮಾನ್ಯ ಇಲೆಕ್ಷನ್ ಆಫೀಸರರವರು ಕೋರ್ಟಿನ ಮುಂಭಾಗ ತಲ್ಪುವಷ್ಟರಲ್ಲೇ ಕೋರ್ಟು ತಿಕ್ಕಿರಿದು ಹೋಗಿತ್ತು ಹೇಗೂ ಮೊದಲೇ ತಪ್ಪಿನಿಂದ ಪ್ರೆಸಿಡೆಂಟು ಸ್ಥಾನದ ಗೌರವದಿಂದ ಸರಿಪಡಿಸಿದ್ದು ಕೊಟ್ಟದ್ದು ಅಲ್ಪಸ್ವಲ್ಪ ವ್ಯತ್ಯಾಸ ಆದುದರಿಂದ ಅಷ್ಟೊಂದು ದೊಡ್ಡ ವಿಪತ್ತುಂಟಾಗಲಾರದು

ತಾ ೨೫ನೇ ಬೆಳಗ್ಗೆ ೯ ಘಂಟೆಗೆ ಕಾಸರಗೋಡು ಫೋರೆಸ್ಟ್ ರೇಂಜ್ ಆಫೀಸರರಿಂದ ಪಡ್ರೆಗ್ರಾಮದ ಕಾಯಂ ಪಟೇಲರಾದ ಶ್ರೀ ಪಂಬತಡ್ಕ ವಿಷ್ಣು ಕಡಂಬಳಿತ್ತಾಯರನ್ನು ದಸ್ತಗಿರಿಮಾಡಿದರು

ಪಣಂಬೂರು— ಇಲ್ಲಿಯ ಮೊಗವೀರ ಪಟ್ಟದ 'ಆರ್ಯ ಸಮಾಜ ಮಂದಿರದಲ್ಲಿ ಕಳೆದ ಗುರುವಾರ ಶ್ರೀ ಕೃಷ್ಣಜಯಂತಿ ದಿನಾಚರಣೆಯು ಮಂಗಳೂರಿನ ಶ್ರೀ ಮೋಹನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಿತು

ಮೂಲ್ಕಿ: ಸ್ಥಳೀಯ ಶ್ರೀ ದುರ್ಗಾದೇವಿ ಫ್ರೀ ರಾತ್ರಿ ಶಾಲೆಯಲ್ಲಿ ಎಂದಿನಂತೆ ಶ್ರೀ ಗೋಕುಲಾಷ್ಟಮಿ ಸಂಬಂಧ ತಾ ೨೪ರಲ್ಲಿ ರಾತ್ರಿ ೯-೩೦ರ ವರೆಗೆ ಉಪನ್ಯಾಸ, ಭಜನೆ, ಪೂಜೆ ಇತ್ಯಾದಿಗಳು ಯಥಾವಿಧಿಯಾಗಿ ನಡೆದುವು

ಇಲ್ಲಿಯ ಬೋರ್ಡು ಹಾ| ಎ| ಶಾಲೆಯ ವಿದ್ಯಾರ್ಥಿಗಳ ತರ್ಕ ಸಂಘದ ೩ನೇ ಸಭೆಯು ಇದೇ ಕಳೆದ ತಾ ೨೦ನೇ ದಿನ ಪೂರ್ವಾಹ್ನ ಘಂಟೆ ೮ ೩೦ಕ್ಕೆ ಶ್ರೀ ಎಂ. ರಮಾನಾಥ ಕಾಮತರವರ ಅಧ್ಯಕ್ಷತೆಯಲ್ಲಿ ಜರಗಿತು

ಕಟಪಾಡಿ: -- ಈ ಸರ್ಕಲಿನ ಪರವಾಗಿ ಉಡುಪಿ ತಾ ಬೋರ್ಡಿನ ಮೆಂಬರಿಕೆ ಸ್ಥಾನಕ್ಕೆ ತಮ್ಮೆಲ್ಲರ ಸಹಕಾರದಿಂದ ತನ್ನನ್ನು ಪ್ರತಿಕಕ್ಷಿಗಳಿಲ್ಲದೆ ಚುನಾಯಿಸಿದ ಬಗ್ಗೆ ತುಂಬಾ ಕೃತಜ್ಞನಾಗಿದ್ದೇನೆ ಎಂದು ಪಾಂಗಾಳ ರಾಮದಾಸ ನಾಯಕರು ವಿನಂತಿಮಾಡಿಕೊಳ್ಳುತ್ತಾರೆ

ಅಜೆಕಾರು: — ಗಂಧದ ವ್ಯಾಪಾರದಲ್ಲಿ ಪ್ರಸಿದ್ಧವಾದ ಈ ಪ್ರಾಂತ್ಯದಲ್ಲಿ ಕಳೆದ ವರ್ಷ ಕುಕ್ಕುಜೆ ಗ್ರಾಮದಲ್ಲಿ ಕಳ್ಳಟಕೆಯ ನಾಲ್ಕು ಮಣ ಗಂಧವನ್ನು ಹಿಡಿದು ನಂಬ್ರವನ್ನು ಯಶಸ್ವಿಯಾಗುವಂತೆ ಸರಕಾರಕ್ಕೆ ಸಹಾಯಮಾಡಿದ ರಾ ವಾಸುದೇವ ಕಿಣಿಯರಿಗೆ ರೂ ೩೦ ಗಿರಿಯ ಶೆಟ್ಟಿಗೆ ರೂ ೧೫ ಮತ್ತು ಬಾಬು ಸೆರೆಗಾರರಿಗೆ ರೂ ೧೦ರಂತೆ ಮ. ರಾ. ಮಂಗಳೂರು ಉತ್ತರ ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರವರು ಅಜೆಕಾರ ಶಾಲಾ ಮಂದಿರದಲ್ಲಿ ಸಭೆ ಸೇರಿಸಿ ಪುರಸ್ಕಾರವಾಗಿ ಕೊಟ್ಟು ಪ್ರೋತ್ಸಾಹಿಸಿದುದು ಅತಿ ಅಭಿನಂದನೀಯವೇ ಸರಿ. ಈ ಸಹಾಯಕರ ಮಾದರಿಯನ್ನು ಎಲ್ಲರೂ ಅನುಸರಿಸಿದರೆ, ಕಳ್ಳಟಕೆಯ ವ್ಯಾಪಾರವು ಅಡಗಿ ಹೋಗುವುದರಲ್ಲಿ ಏನೂ ಸಂಶಯವಿರಲಾರದು

ಕಾರ್ಕಳ ತಾಲೂಕು ಬೋರ್ಡಿಗೆ ಅಜೆಕಾರ ಸರ್ಕಲಿನಿಂದ ಪ್ರಮುಖ ಜಾಮೀನುದಾರರೂ, ವರಂಗ ಮಠದ ಅಡಳಿತೆದಾರರೂ, ವ್ಯಾಪಾರಿಯೂ ಆದ ಮ. ರಾ. ಮುದ್ರಾಡಿ ಶಾಂತಿರಾಜ ಅಧಿಕಾರಿಗಳವರೊಬ್ಬರೇ ನೋಮಿನೇಶನ್ ಹಾಕಿರುವುದರಿಂದ, ಶ್ರೀ ಅಧಿಕಾರಿಗಳವರೇ ಮೆಂಬರರಾಗಿರುವರೆಂಬ ವಾರ್ತೆಯು ಆನಂದದಾಯಕವಾಗಿದೆ.

ಉಡುಪಿ:— ಇಲ್ಲಿ ಸಿ ಪಿ ಸಿ ಮೋಟಾರು ಆಫೀಸಿನ ಬುಕ್ಕಿಂಗ್ ಆಫೀಸಿನಿಂದ ತಾ. ೧೭ನೇ ರಾತ್ರಿ ಸುಮಾರು ರೂ. ೩೫೦ರ ಕಳವಾಗಿದ್ದು ಆ ಬಗ್ಗೆ ಪೋಲೀಸ ಸ್ಟೇಷನಿಗೆ ಅರ್ಜಿ ಮಾಡಲಾಗಿತ್ತು. ಇಲ್ಲಿನ ಪೋಲೀಸ್ ಸಬ್ ಇನ್ಸಪೆಕ್ಟರ್ ಶ್ರೀ ಎನ್ ಸಂಜೀವರಾಯರ ಶೋಧ ಮತ್ತು ಪರಿಶ್ರಮದ ಫಲವಾಗಿ ಕಳವಿನ ಪತ್ತೆಯಾಗಿ, ಸದರಿ ಮೋಟಾರು ಕಂಪೆನಿಯಲ್ಲಿ ಸಬ್ ಏಜಂಟನಾಗಿದ್ದ ಶ್ರೀಕಂಠಬವನು ಕಳ್ಳನೆಂದಾಗಿ, ಅತಗೆ ಒಂದು ವರ್ಷದ ಜಾಮೀನು ಶಿಕ್ಷೆಯು ವಿಧಿಸಲಾಯಿತು, ಹಣ ಪೂರ್ತಿ ದೊರೆಯಿತು

ಕೆಲಕಾಲ ಹಿಂದಿನಿಂದ ಹಿಂದೂಮತ ಪ್ರಚಾರಕ ಹಾಗೂ ಸುಧಾರಣಾ ಕಾರ್ಯದಲ್ಲಿ ನ್ಯಾಯಾಸ್ಥಾನದ ವರೆಗೂ ಸೆಳೆಯಲ್ಪಟ್ಟು ವಿಮುಕ್ತರಾಗಿ ಯಶಸ್ವಿಯಾದ ಶ್ರೀ ಅಂಕುರಾಜ ಸುಬ್ರಾಯಶರ್ಮರು ಮಂಗಳೂರತ್ತ ಕಡೆ ಪ್ರವಾಸ ಮಾಡಿ, ತಿರಿಗಿ ಇಲ್ಲಿಗೆ ಚಿತ್ತೈಸಿರುತ್ತಾರೆ ಪುನಹ ಎಂದಿನಂತೆ ಮತಭಾಷಣಗಳನ್ನು ನಿರ್ಭೀತಿಯಿಂದ ಮಾಡುತ್ತಲಿದ್ದಾರೆ

ತಾ ೨೬ಕ್ಕೆ ಜಿಲ್ಲೆಯ ಇತರ ಕಡೆಗಳಲ್ಲೂ ಇದ್ದಂತೆ ಬೋರ್ಡು ಮೆಂಬರರ ಉಮೇದುವಾರಿಕೆ ಪತ್ರಗಳನ್ನು ಹಾಜರು ಮಾಡುವ ಬಾರಿ ಗದ್ದಲ ಕಚೇರಿ ಮಹಾಪವೆಂಬುದು ಭಾರಿ ಮಹಾನುಭಾವರ, ಮೋಟರು ವಾಹನಗಳ ಸಂದಣಿ ಮತ್ತು ಆವಸರದಿಂದ ಯಾರನ್ನೂ ಬೆರಗುಗೊಳಿಸುವುದಿತ್ತು ಈಗಿನ ಬೋರ್ಡು ಮೆಂಬರಿಕೆಯಲ್ಲಿ ಏನೋ ಭಾರಿಯ ವಿಷಯವಿದ್ದಿರಬೇಕೆಂದು ಭಾಸವಾಗುತ್ತಿತ್ತಲ್ಲದೆ ಆ ಸಂದರ್ಭವನ್ನು ಮುಂಚಿತವಾಗಿ ಅರಿಯದೆ ತಮ್ಮದೊಂದೂ ಉಮೇದ್ವಾರಿಕೆಯನ್ನು ಪ್ರಕಟಗೊಳಿಸಲಾರದವರ ಭಾರಿ ಪಶ್ಚಾತ್ತಾಪವೂ ವಿದಿತವಾಗುತ್ತಿತ್ತು. ಅಂತೂ ಅಂದು ಉಮೇದ್ವಾರಿಕೆಯನ್ನು ಹಾಜರುಮಾಡಿ, ಅನಂತರ ಕಾರಣಾಂತರಗಳಿಂದ ಹಿಂತೆಗೆಯಲ್ಪಟ್ಟ ಕೆಲವರ ಉಮೇದ್ವಾರಿಕೆಗಳನ್ನು ಬಿಟ್ಟಲ್ಲಿ ಉಳಿದವರ ಫಲಿತಾಂಶವು ಹೀಗಿರುತ್ತದೆ. ತಾಲೂಕು ಬೋರ್ಡು ಮೆಂಬರಿಕೆಗೆ ಕೋಟದಿಂದ ಶ್ರೀ ಎಚ್ ಅರ್ ಹಂದೆ, ಹಂಗಾರಕಟ್ಟೆಯಿಂದ ಶ್ರೀ. ತೇಜಪ್ಪ ಹೆಗ್ಗಡೆ, ಬಾರಕೂರಿನಿಂದ ಶ್ರೀ ಎಚ್ ರಾಮಯ್ಯಶೆಟ್ಟಿ (ಮಾಜಿ ತಾಲೂಕು ಬೋರ್ಡು ಪ್ರೆಸಿಡೆಂಟ್) ಶಿರಿಯಾರಿನಿಂದ ಶ್ರೀ ಅಂತಯ್ಯ ಹೆಗ್ಡೆ ಕೊಕ್ಕರ್ಣೆಯಿಂದ ಶ್ರೀ ವೈ ಎಂ ಎಂ ಹೆಗ್ಡೆ, ಕುಕ್ಕೆಹಳ್ಳಿಯಿಂದ ಶ್ರೀ ಬಿ ಕೃಷ್ಣಯ್ಯ ಹೆಗ್ಡೆ ಕೊಡವೂರಿನಿಂದ ಡಾ| ಯು ರಾಮಚಂದ್ರರಾವ್ ಕಟಪಾಡಿಯಿಂದ ಶ್ರೀ ಪಿ ರಾಮದಾಸ ನಾಯಕ್, ಶಿರ್ವದಿಂದ ಶ್ರೀ ಜಿನರಾಜ ಶೆಟ್ಟಿ ಕಾಪಿನಿಂದ ಶ್ರೀ ಕೆ ಮುದ್ದಣ್ಣ ಶೆಟ್ಟಿ ಮತ್ತು ಮಹಮದೀಯರ ಪರವಾಗಿ ಮಿ| ಅಬ್ದುಲ್ ಖಾದರ್ ಸಾಹೇಬರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿರುತ್ತಾರೆ. ಉಳಿದ ಸರ್ಕಲುಗಳಲ್ಲಿ ಬ್ರಹ್ಮಾವರಕ್ಕೆ ಶ್ರೀಗಳಾದ ಶಿವರಾಮ ಶೆಟ್ಟಿ ಮತ್ತು ಪಿ ವೆಂಕಟರಾವ್, ಕಲ್ಯಾಣಪುರಕ್ಕೆ ಶ್ರೀಗಳಾದ ಓ ಗಣಪಯ್ಯ ಶೆಟ್ಟಿ, ಮತ್ತು ಐ ದುಗ್ಗಪ್ಪ ಶೆಟ್ಟಿ ಉಡುಪಿಗೆ ಶ್ರೀಗಳಾದ ಎಂ ವಿಟ್ಠಲ ಕಾಮತ್ (ಮಾಜಿ ತಾ| ಬೋ| ಪ್ರೆಸಿಡೆಂಟ್) ಮತ್ತು ಕ್ರೈಸ್ತ ಮೆಂಬರಿಕೆಗೆ ಮಿ ರೂಡೋಲ್ಫ್ ಎ ಸ್ಯಾಮುನ್ಸ್ ಮತ್ತು ತೋಮಸ್ ಸಾಲ್ಡಾನ್ಹ ಹಿರಿಯಡ್ಕಕ್ಕೆ ಶ್ರೀಗಳಾದ ಪಿ ಜಗನ್ನಾಥ ಹೆಗ್ಡೆ ಮತ್ತು ಬಿ ಗೋಪಾಲ ಹೆಗ್ಡೆ, ಉದ್ಯಾವರಕ್ಕೆ ಶ್ರೀಗಳಾದ ಎಂ. ಸದಿಯ ಮರಕಾಲ ಮತ್ತು ಆರ್. ವೆಂಕಪ್ಪಯ್ಯ, ಪಡುಬಿದ್ರೆಗೆ ಶ್ರೀಗಳಾದ ಎಂ ಗುಂಡುರಾಯ ಕಿಣಿ, ಚಂದಯ್ಯಶೆಟ್ಟಿ, ಬ್ರಹ್ಮಾವರಕ್ಕೆ ಪಂಚಮರ ಮೆಂಬರಿಕೆಗೆ ಶ್ರೀ ಕೂಸಕೊರಗ, ಮತ್ತು ಸುಬ್ಬಪಂಚಮ ಎಂಬವರು ಒಂದೊಂದು ಮೆಂಬರಿಕೆ ಬಗ್ಗೆ ಪ್ರತಿಸ್ಪರ್ಧೆಗೆ ನಿಂತಿರುತ್ತಾರೆ ಉಡುಪಿಯಿಂದ ಶ್ರೀಮತಿ ಎಚ್ ಸುಂದರಿಬಾಯಿಯವರು ಪ್ರತಿಸ್ಪರ್ಧೆ ಇಲ್ಲದೆ ಚುನಾಯಿಸಲ್ಪಟ್ಟಿರುತ್ತಾರೆ

ತಾ ೨೬ರಲ್ಲಿ ಪರದೇಶಿ ಸಕ್ಕರೆಗಾಗಿ ಶ್ರೀ ಕೆ ವೆಂಕಟರಾಯ ಪೈಗಳ ಅಂಗಡಿ ಎದುರು ಪಹರೆ ಇತ್ತು, ಸ್ವಯಂಸೇವಕರನ್ನು ಕೈದು ಮಾಡಿ ಮರುದಿನ ಬಿಡುಗಡೆ ಮಾಡಿರುತ್ತಾರೆ

ಇಲ್ಲಿನ ರಖಂ ಮತ್ತು ಚಿಲ್ಲರೆ ಪ್ರಮುಖ ವಸ್ತ್ರವ್ಯಾಪಾರಿಗಳಾದ ಶ್ರೀ ವೆಲ್ಜಿ ಸೇಟರು ತಮ್ಮಲ್ಲಿನ ಪರದೇಶಿ ಜವಳಿಯನ್ನು ತಾ ೨೫ಕ್ಕೆ ಬೇರೆ ಮಾಡಿ ಮುದ್ರೆಯನ್ನು ಹಾಕಿಸಿರುತ್ತಾರೆ ಈ ಜವಳಿಯನ್ನು ಸ್ಟೀಮರು ಪ್ರಾರಂಭವಾದೊಡನೆ ಬೊಂಬಾಯಿಗೆ ರವಾನಿಸುವರಂತೆ

ಇಲ್ಲಿಯ ಪ್ರಖ್ಯಾತ ಜಮೀನುದಾರರಾದ ಶ್ರೀ ಎಸ್ ರಾಮಗೋಪಾಲ ಕೃಷ್ಣರಾಯರ ಜೇಷ್ಠ ಪುತ್ರ ಶ್ರೀ ಎಸ್ ನರಸಿಂಹಮೂರ್ತಿಯವರು ಲಂಡನಿನ ಪಿ ಎಚ್ ಡಿ ಪರೀಕ್ಷೆಯನ್ನು ಪಾಸುಮಾಡಿ, ಡಿ ಎಸ್ ಸಿ ಪದವಿಗೆ ಪ್ರಬಂಧ ಬರೆದುಕೊಟ್ಟು ಈಚೆಗೆ ಸ್ವಊರಿಗೆ ಹಿಂತಿರುಗಿರುತ್ತಾರೆ. ಪರದೇಶವಾಸ ನಿಮಿತ್ತದ ಪಾಪ ಪ್ರಾಯಶ್ಚಿತ್ತಾರ್ಥವಾಗಿ ಶಾಸ್ತ್ರರೀತಿಯ ಪರಿಹಾರ ಕಾರ್ಯಗಳನ್ನು ಮಾಡಿಸಿದರು

ನಮ್ಮ ಜಿಲ್ಲೆಯಲ್ಲಿ ಗೌಡ ಸಾರಸ್ವತ ವೃಂದದ ಹೆಸರುಗೊಂಡ ಮನೆತನದವರಾದ ಶ್ರೀ ಪಾಂಗಾಳ ಪಾಂಡುರಂಗ ನಾಯಕರ ದ್ವಿತೀಯ ಪುತ್ರರಾದ ಶ್ರೀ ರಮಾನಾಥ ನಾಯಕರು ಮದ್ರಾಸಿನ ಎಂ ಎ. ಪರೀಕ್ಷೆಯಲ್ಲಿ ಪಾಸಾಗಿ, ಸಕ್ಕರೆಯ ವಿಜ್ಞಾನಶಾಸ್ತ್ರದ ಅಭ್ಯಾಸಕ್ಕಾಗಿ, ತಾ. ೨೬ಕ್ಕೆ ಇಲ್ಲಿಂದ ಹೊರಟವರು ತಾ ೩೦ಕ್ಕೆ ಕೊಲೊಂಬೊದಿಂದ ಗ್ಲಾಸ್ಗೊ (ಸ್ಕೊಟ್ಲೆಂಡಿಗೆ) ಪ್ರಯಾಣ ಬೆಳೆಸಿರುವರು

(೧೫ನೇ ಪುಟವನ್ನು ನೋಡಿರಿ)

[illegible]

... ೬೦ ವನಸ್ಪತಿಗಳಿಂದ ಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಶ್ರೀ ಮದನಮಸ್ತಪಾಕ ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಸಂಭೋಗದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, [illegible] ಯಾವ ಕೆಲಸಕ್ಕೂ [illegible], ಗರ್ಮಿಯ ಪರಿಣಾಮ, ಎಂಥದಾದರೂ ಪರಮ, ಸ್ವಪ್ನದೋಷ, ಇತ್ಯಾದಿ ರೋಗಗಳು ನಾಶವಾಗಿ [illegible] ಸಾಧ್ಯವಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ಅರ್ಧ ತೊಲೆಯ ಪೂರ್ಣ ಗುಣಕಾರಿಸುವ ಡಬ್ಬಿಯು ಕಿಮ್ಮತ್ತು ರೂ. ೫. ವಿ. ಪಿ. ರೂ. ೧. ಹಳೇ ರೋಗದ ಸಲುವಾಗಿ ೬ ಡಬ್ಬಿಗೆ ಖರ್ಚ ಸಹಿತ ರೂ. ೧೦. ಮೂರು ಡಬ್ಬಿಗೆ ರೂ. ೧೫॥ ಮಾತ್ರ, ಕಪ್ಪವಿಲ್ಲ. ಅನುಪಾನವು ಡಬ್ಬಿಯೊಳಗೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್. ಆಯ್. ಬಟುಖಿ, ಎಲ್. ಎಮ್. ಎಂಡ್. ಎಸ್., ಜೆ. ಪಿ., ಮುಂಬಯಿ:— ಈ ಪಾಕು ಧಾತುಪುಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ. ಎನ್. ದತ್ತ, ಎಮ್. ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ:— ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಪತ್ತೆ:— ವೈದ್ಯ ಮೋಹನಲಾಲ ಎಸ್. ಔಷಧಾಲಯ, ಮು. ಪೋ. ಮಿರಜ, S. M. C.

ಗುಣಬಾರದ್ದಿದರೆ] ಸುಪ್ರಸಿದ್ಧ-ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳವಾಮಾಹಿಮ. ಹಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦||೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು, ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ, ಮೆ॥ ರಾ. ಎ. ಎಮ್. ಇನ್ನಪೆಕ್ಟರ ಬೆಳಗಾಂವ:— ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೪. ವಿ. ಪಿ. ಆಣೆ ೮.

ವಿಳಾಸ— ಸಂಜೀವಿನೀ ಔಷಧಾಲಯ. ಮು. ಪೊ. ಮಿರಜ, S. M. C

FOETOGENE.

A vigilant guard to the ailments of PREGNANCY The remedy te neutralise the toxins of PREGNANCY thereby minimising the chances of Abortions & Miscarriages.

Dose—Preventive 1 dr. every morning Curative 2 drm. thrice a day

THROLOGE

for Sore throat, Cough, & Cold & other long affections.

HYSTERINE.

A Tried Remedy for Hysteria & Epilepsy very useful Brain sedative in Insomnia & Mental derangements.

Dose—1 to 2 dram adult 10 drops child thrice daily.

MONOCAFISPIN

A Nondepresant Nervine Sedative Magical cure for Headaches & Neutagia Found useful in all pains of whatever origin it may be.

Dose—1 to 2 tablets.

THE EASTERN RESEARCH LABORATORY,
GHAZIPUR, U. P INDIA.

MORDERATE.

FOR JOB WORK IN
Typewriting
at most Morderate Rates.
consult
Bangra Ramanath Shanbhogue.
Britto Building Upstairs,
HAMPANKATTA, **MANGALORE.**

ಪ್ರಕಟಣೆ.

ಇದೇ ಸಪ್ಟಂಬರ ತಾ. 5ನೇ ಬಾದ್ರಪದ ಶು| ೫ಯು ಚಂದ್ರವಾರ ಲಾಗಾಯ್ತು ಮಂಗಳೂರು ಬಂದರದಲ್ಲಿ ಪಣಂಬೂರು ನಾರಾಯಣ ವೈಕಪ್ಪ ಭಂಡಾರಿ ಎಂಡ್ ಸನ್ಸ್ ಎಂಬ ಹೆಸರಿನಿಂದ ಬೆಳೆಗೋಟು, ಕಾಫಿ, ಏಲಕ್ಕಿ ವಗೈರೆ ಎಲ್ಲಾ ಕಾಡುತ್ಪತ್ತಿಯ ವಹಿವಾಟಿನ ದಲಾಲಿ. ಭಂಡಸಾಲೆಯು ತೆರೆಯಲ್ಪಡುತ್ತದೆ. ಸರ್ವರೂ ಪ್ರೋತ್ಸಾಹಕೊಟ್ಟು ನಡೆಸಬೇಕಾಗಿ ವಿನಂತಿ.

ಪಣಂಬೂರು ನಾರಾಯಣ ವೈಕಪ್ಪ ಭಂಡಾರಿ ಎಂಡ್ ಸನ್ಸ್.

ಬಂದರ, 2-೯-32

NOTICE.

Sealed Tenders are invited by the undersigned for the supply of Indian drugs and raw meterials required for Kasaragod Taluk Board Panathadi Ayurvedic Dispensary, The tenders will be opened on 10th September 1932 at 2 p. m. in the Dispensary. Apply for further particulars—

Camp: Panathadi,
P.O. Kanhangad,
S. K. 28—8—1932.

P. S. Venkatramana Bhatta,
Ayurveda Visharada, Physician

The Canara Bank, Ltd. Puttur.

ದಿ ಕೆನರಾ ಬೇಂಕ್ ಲಿಮಿಟೆಡ್, ಪುತ್ತೂರು.

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಡವು ಮೇಲೆ ಪಡೆದ ಮೊಬಲಗೆನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದ್ದೆ ಇರುವುದರಿಂದ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸನ್ನು ಸದ್ರಿಯವರು ಇನ್ಕಾರು ಮಾಡಿದ್ದರಿಂದ ಸದ್ರಿ ನಗಗಳನ್ನು ಇದೇ 1932ನೇ ಇಸವಿ ಸಪ್ಟಂಬರ ತಾ. 26ರ ಒಳಗೆ ಬಿಡಿಸಿ ಕೊಂಡು ಹೋಗದಿದ್ದ ಪಕ್ಷಕ್ಕೆ ಸದ್ರಿ ನಗಗಳನ್ನು ಇದೇ 1932ನೇ ಇಸವಿ ಸಪ್ಟಂಬರ ತಾ. 30ನೇ ಶುಕ್ರವಾರ ದಿನ ಮಧ್ಯಾಹ್ನ ಗಂಟೆ 12ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಲೋನ್ ನಂಬ್ರ 168/31, ಹೆಸರು— Cassimir Cunha, s/o Padru Kunha, Coovattu Grama, Guruvayanakere Post, ಅಸಲು ರೂ. 145—0—0. ತಾ. 29—10—31ರಿಂದ 20—8—32ರ ವರೆಗೆ ಬಡ್ಡಿ

ಈ ನೋಟೀಸು ಒಬ್ಬರ ವಿನಹಾ.

Office of the Bank
Puttur,
27—8—1932

U. Hari Shenoy,
ಏಜಂಟ್.

Wanted.

For the Sun Rise Banking Company Limited, Bangalore, in the Districts of South Kanara, Malabar and Coorg, three Superintendents of Branches and fifteen Taluk Branch Managers, on a Monthly Salary of Rs. 60—20—300 and Rs. 35—10—150 plus Rs. 50 and 22-8-0 respectively as Office and Conveyance Allowance. Also 75 Village Agents on a salary of Rs. 20—5—50. Only influential business men who can hold Savings Bank Deposit Certificate of this Company of Rs. 500, Rs. 150 and Rs. 12—8—0 repectively need only apply persoually or with six annas postage stamps to the Secretary now camping at the office of the Chairman,

Mr. C. Vedaji, Rao Sahib B. A. B. L.
First Class Hony, Magistrate,
Falnir, MANGALORE. S. K.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. 467/1931. *R. I. A.* 628/1932.

ಕೃಷ್ಣ ಭಟ್ಟ (ವಾದಿ) ಅರ್ಜಿದಾರ.

ಮತ್ತು

ಶ್ರೀನಿವಾಸ ಮಧ್ಯಸ್ಥ ಕೂಡಾ (ಪ್ರತಿವಾದಿರು) ಎದ್ರಿರು.

ಮೇಲೆ ಕಾಣಿಸಿದ ವ್ಯಾಜ್ಯದಲ್ಲಿ ಕೊಡೋಣಾದ ಪ್ರಿಲಿಮನರಿ ಡಿಕ್ರಿಯನ್ನು ಫೈನಲ ಮಾಡಿಸಿಕೊಡಬೇಕಾಗಿ ವಾದಿ ಅರ್ಜಿದಾರನು ಕೊಟ್ಟ ಅರ್ಜಿಯು ತಾ. ೧೯—೯—೧೯೩೨ಕ್ಕೆ ಮೇಲೆ ಕಾಣಿಸಿದ ಕೋರ್ಟು ಮುಂದೆ ತಪ್ಪಿಗೆಯಿಟ್ಟದೆ ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

೨೯—೮—'೩೨.
ಕುಂದಾಪುರ.

M. M. Urala, B. A. B. L.
Advocate for Petitioner

ಸುಸಂಧಿ! ಕೆಲವೇಪ್ರತಿಗಳು!
ಶಾಲಾ ಕಾಲೇಜು, ಲ್ಯಾಬ್ರರಿಗಳಿಗೂ, ಗ್ರಂಥಕರ್ತರಿಗೂ ನಮ್ಮ ಜಿಲ್ಲೆಯ ಅನುಭವವನ್ನು ಮಾಡಲಿಚ್ಛಿಸುವವರಿಗೂ, ಬೇಕಾಗಿರುವ ಕ್ರೌನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ವೆಂಬ ಉದ್ಗ್ರಂಥ! ಬೆಲೆ ಪ್ರತಿಯೊಂದಕ್ಕೆ ಟಪಾ ಸಹಿತ ರೂ 2
ಶಾರದಾ ಛಾಪಖಾನೆ,
ಮಂಗಳೂರು

ಎರವಾಡಾದಲ್ಲಿ
ಗಾಂಧಿಜೀಯವರು.

ವ್ಯಾಪಾರಸ್ಥರಿಗೆ ಸುಸಂಧಿ!
ದೀಪಾವಳಿಯು ಸಮೀಪಿಸಿತಲ್ಲವೇ? ನಿಮಗೆ ಬೇಕಾಗುವ ವರ್ಗ, ಊಳಿಗ ಪುಸ್ತಕಗಳೂ, ಆಮಂತ್ರಣ ಪತ್ರಿಕೆಗಳೂ ಅಗ್ಗದಲ್ಲಿ, ಅನುಕೂಲವಾಗಿ ಸಾಕವಾಗಿ, ಕ್ಲಪ್ತ ಸಮಯಕ್ಕೆ ಸಿಗಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬನ್ನಿರಿ ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ
ಶಾರದಾ ಛಾಪಖಾನೆ,
ಮಂಗಳೂರು.

ಭೋಪಾಲದ ನವಾಬರನ್ನು ಹುಡುಗರು ಬಂಧನದಲ್ಲಿಟ್ಟರು. ಮರಿಗಳನ್ನಿಟ್ಟ ಹಾವು. ಪುರುಷ ವೇಷಧಾರಿಣಿ ಬಟ್ಟೆಬರೆಗಳನ್ನೆತ್ತಿಕೊಂಡರು ಶೋಧನೆಗಾಗಿ ಪ್ರಾಣ ಬಿಟ್ಟುದು ಪಾರ್ಶಿ ತರುಣಿ ಮುಸ್ಲಿಮ ತರುಣ

ಮುಸ್ಲಿಮ ತರುಣ, ಪಾರ್ಶಿ ತರುಣಿ!
'ತಂದೆ ತಾಯಿಗಳು ಬೇಡ!'

ಮುಂಬಾಯಿಯಲ್ಲಿ ಈಗಿನ ಪಾರ್ಶಿ ಹುಡುಗಿಯರು ಮುಸ್ಲಿಮ ತರುಣರನ್ನು ವಿವಾಹವಾದ ಹಲಕೆಲವು ವಾರ್ತೆಗಳು ಬರುತ್ತವೆ ತರುಣ ತರುಣಿಯರ ಈ 'ಗಲಭೆ'ಯಿಂದಾಗಿ ಈಗ ಮುಂಬಾಯಿಯಲ್ಲಿ ಮುಸ್ಲಿಮರಿಗೂ ಪಾರ್ಶಿಗಳಿಗೂ ಹತ್ಯಾಹತ್ತಿಯು ನಡೆಯುವಂತಾಗಿದೆ ಕೆಲವು ದಿನಗಳ ಹಿಂದೆ ಇಲ್ಲಿ ಪಿ ಎ ಕುಲಕರ್ಣಿ ಎಂಬವನೊಬ್ಬನು ಒಬ್ಬಳು ಪಾರ್ಶಿ ತರುಣಿಯನ್ನು ಪ್ರೀತಿಸಿದ ಈ ಸಂಗತಿಯು ಪಾರ್ಶಿಗಳಿಗೆ ತಿಳಿದುಬಂದೊಡನೆ ಅವರು ಕುಲಕರ್ಣಿಯನ್ನು ಕಂಡಕಂಡಡೆ ಹಂಗಿಸಿಭಂಗಿಸಿದರು ಕೊನೆಗೆ ಕುಲಕರ್ಣಿಯು ಪ್ರಾಣತ್ಯಾಗವನ್ನೇ ಮಾಡಬೇಕಾಯಿತು ಇತ್ತೀಚೆಗೆ ಬಲರಾಮ್ ಸ್ಟ್ರೀಟನಲ್ಲಿರುವ ಒಂದು ಮನೆಯ ಪಾರ್ಶಿ ತರುಣಿಗೆ ನೆರೆಮನೆಯಲ್ಲಿರುವ ಮುಸ್ಲಿಮನ ಮೇಲೆ ಕಣ್ಣುಬಿತ್ತು. ಕಣ್ಣುಪ್ರೇಮದ ವೃದ್ಧಿಸಿಂದ ಮುಚ್ಚಿಹೋಗಲು ಅವಳು ನೆಟ್ಟಗೆ ಪೋಲೀಸರಲ್ಲಿಗೆ ಹೋಗಿ ತಾನು ೨೭ ವರ್ಷ ಪ್ರಾಯದವಳೆಂದೂ ತಾನು ತನ್ನ ಸ್ವೇಚ್ಛೆಯಿಂದಾಗಿಯೇ ಇಸ್ಲಾಮಿ ಧರ್ಮವನ್ನು ಅವಲಂಬಿಸುವೆನೆಂದೂ ಅರ್ಜಿಮಾಡಿದಳು ಅದೇ ರಾತ್ರಿ ಆ ಮುಸ್ಲಿಮ ಪುರುಷನನ್ನು ಸೇರಿದಳು ದೊಡ್ಡ ಕುಟುಂಬದವಳಾಗಿದ್ದುದರಿಂದ ಅವಳ ಹೆತ್ತವರು ಅವಳನ್ನು ಶುದ್ಧೀಕರಿಸಲೆತ್ನಿಸಿದರು ಅವಳನ್ನೂ ಅವಳ ಪುರುಷನನ್ನೂ ಕೋರ್ಟಿಗೆಳೆದರು. ತನಿಖೆ ನಡೆಯಿತು ತರುಣಿಯೆನ್ನುತ್ತಾಳೆ 'ನನ್ನ ಇಚ್ಛೆ ನನಗೆ ತಂದೆತಾಯಿಗಳ ರಕ್ಷಣೆಯೂ ಈಗ ಬೇಡ!', ಕೊನೆಗೆ ಅವರನ್ನು ಅವರಷ್ಟಕ್ಕೆ ಬಿಡಬೇಕಾಯಿತು ಆದರೆ ಪಾರ್ಶಿ ಮುಸ್ಲಿಮರೊಳಗಣ ದ್ವೇಷವು ಮಾತ್ರ ದಿನೇದಿನೇ ಬೆಳೆಯುತ್ತಲಿದೆ

ಔಷಧ ಶೋಧನೆಗಾಗಿ ಪ್ರಾಣವನ್ನೇ ಕಳಕೊಂಡ

ಟೋಕಿಯೋ ಇಂಪೀರಿಯಲ್ ಯುನಿವರ್ಸಿಟಿಯ ಡಾ ಕೊತಾರೋ ಶಿರಾಯಿ ಎಂಬವರು ರಸಾಯನ ಶಾಸ್ತ್ರದಲ್ಲಿ ನಿಪುಣರು ಅವರು ಅನೇಕ ಔಷಧಿಗಳನ್ನು ತನ್ನ ಸ್ವಸಾಮರ್ಥ್ಯದಿಂದಲೇ ಕಂಡುಹಿಡಿದವರು. ತನ್ನ ೬೫ನೇ ವರ್ಷ ಪ್ರಾಯದಲ್ಲಿ ಅವರಿಗೆ ತಾರುಣ್ಯಲಾಭವಾಗಬೇಕೆಂಬ ಆಶೆಯಾಯಿತು ಮನುಷ್ಯನ ತಾರುಣ್ಯವು ಕುಂದದಿರಬೇಕೆಂಬಾಶೆಯಿಂದ ಮಹದ್ಗ್ರಂಥಗಳನ್ನು ತಿರುವಿ ವಿಚಿತ್ರ ಔಷಧಿಗಳನ್ನು ತಯಾರಿಸಿದರು ಈ ಔಷಧಿಯನ್ನು ಕಂಡುಹಿಡಿಯಲು ಅವರಿಗೆ ಒಂದೆರಡು ವರ್ಷಗಳು ತಗಲಿದುವು ಒಂದು ದಿನ ಇದನ್ನು ತಾನೇ ಸೇವಿಸಿದರು ವೃದ್ಧಾಪ್ಯವು ಅದನ್ನು ಹಿಂದೆ ನಿಂತಂತೆ ಅವರಿಗೆ ಭಾಸವಾಯಿತು ಆ ಮದ್ದನ್ನು ದಿನಾಲೂ ಸೇವಿಸುತ್ತಿದ್ದರು ಕೊನೆಗೆ ಅದನ್ನು ಮೊನ್ನೆ ಸೇವಿಸಿದೊಡನೆ ಅವರು ಸ್ಮೃತಿತಪ್ಪಿ ಬಿದ್ದುಬಿಟ್ಟರು. ಮರುದಿನ ಹೇಗೋ ಎಚ್ಚತ್ತು ಈ ಮದ್ದಿನ ಒಳರಹಸ್ಯವನ್ನು ತಿಳಿಯಬೇಕೆಂದು ಪ್ರಾಣದ ಹಂಗು ತೊರೆದು ಅದನ್ನು ಪುನಹ ಸೇವಿಸಿದರು — ಮಲಗಿ ಸ್ವರ್ಗಸ್ಥರಾದರು ಅವರು ಈ ಶೋಧನೆಯಿಂದಾಗಿ ತೀರಿಕೊಂಡುದೆಂದು ಅವರ ಪತ್ನಿಗೆ ತಿಳಿದಿತ್ತಾದರೂ ಅವಳು ಅದನ್ನು ಬಹಿರಂಗಪಡಿಸಲಿಲ್ಲ ಇತ್ತಲಾಗೆ ಅವರ ಶ್ರಾದ್ಧವು ನಡೆಯಿತು ಅವರು ತೀರಿಕೊಂಡ ನಿಜಕಾರಣವನ್ನು ಹೆಂಡತಿಯು ಹೇಳಿದಳು ಡಾಕ್ಟರರು ಹೃದ್ರೋಗದಿಂದ ಮೃತರಾದುದೆಂದು ಅಷ್ಟರ ತನಕವೂ ನೆನೆಸಿದ್ದವರು ಆಶ್ಚರ್ಯಗೊಂಡರು

ಬಟ್ಟೆಬರೆಗಳನ್ನೆತ್ತಿಕೊಂಡರು

ಮದ್ರಾಸಿನ ಆಂಗ್ಲೋ ಇಂಡಿಯನ್ ಸ್ತ್ರೀಯಾದ ಮಿಸೆಸ್ ಎಂ ಹನ್ನಿನ್ ಅಂಗಿಲೋ ಎಂಬವರು ಪಿಕೆಟಿಂಗ್ ನಡಿಸಿ ೫೦ ರೂಪಾಯಿಗಳ ಜುರುಮಾನೆಗೊಳಗಾಗಿ ಅದನ್ನು ಪಾವತಿ ಮಾಡದಿದ್ದರು ಕಳೆದ ತಿಂಗಳಲ್ಲಿ ಆ ದಂಡದ ವಸೂಲಾತಿಯ ಬಗ್ಗೆ ಪೋಲೀಸರು ಆ ಹೆಂಗಸಿನ ಬಟ್ಟೆಬರೆಗಳನ್ನು ವಶೀಕರಿಸಿಕೊಂಡರು ಈಗ ಆ ಅಬಲೆಯು ಅರ್ಜಿಮಾಡಿಕೊಂಡಿದ್ದಾರೆ '೫೦ ರೂಪಾಯಿ ದಂಡವನ್ನು ಪಡೆಯುವುದಕ್ಕಾಗಿ ಸಬ್ ಇನ್ಸ್‌ಪೆಕ್ಟರ್ ಬ್ರಾನರು ತಾ ೧೯ನೇ ದಿನ ನನ್ನ ಫ್ರಾಕ್, ಕರವಸ್ತ್ರ, ಬೋಡಿಸ್, ಶಾಲು, ರಾತ್ರಿಯುಡುಪು ಪೆಟ್ಟಿಕೋಟ್, ತಲೆಗಿಂಬುವಸ್ತ್ರ, ಫೌಂಟನ್ ಪೆನ್, ಡ್ರೆಸ್ಸಿಂಗ್ ಜಾಕೆಟ್ಸ್, ಕಾಪಾಕ್ಸ್ ಬಾಕ್ಸ್, ಪಾದರಕ್ಷೆ, ಸ್ಟೋಕಿಂಗ್ ಸೋಕ್ಸ್, ಮತ್ತಿತರ ಬಟ್ಟೆಬರೆಗಳನ್ನೂ ಕೊಂಡೊಯ್ದರು ನನ್ನ ಮೈಯಲ್ಲಿರುವ ಅಡಿಗೆ ಕೆಲಸದ ಬಟ್ಟೆಯಲ್ಲದೆ, ನನಗೆ ಯಾವ ಉಡುಪೂ ಇಲ್ಲ. ಬದಲಾಯಿಸಿ ಉಡಲಿಕ್ಕೂ ವಸ್ತ್ರವಿಲ್ಲ ಉಡಿಗೆ ತೊಡಿಗೆಗಳು ನನಗೆ ಅತ್ಯಗತ್ಯವಿವೆ ಅವುಗಳನ್ನು ವಶೀಕರಿಸಬಾರದಿತ್ತು ಈಗ ನನ್ನ ಕಾಲು ಬರಿದಾಗಿದೆ ನನ್ನ ಪಾದಕ್ಕೆ ಪಾದರಕ್ಷೆಯಿಲ್ಲ ಆದುದರಿಂದ ಮೇಜಿಸ್ಟ್ರೇಟರು ಇವುಗಳನ್ನು ಹಿಂದಕ್ಕೆ ಕೊಡಬೇಕು"

ಭೋಪಾಲದ ನವಾಬರನ್ನು ಹುಡುಗರು 'ಬಂಧನ'ದಲ್ಲಿಟ್ಟರು!

ಭೋಪಾಲದ ನವಾಬರ ಮನೆಯೆದುರು ಕೆಲವು ದಿನಗಳ ಹಿಂದೆ ಹುಡುಗರ ತಂಡವೊಂದು ಆಡುತ್ತಿತ್ತು ಆ ಹುಡುಗರು ಅಲ್ಲಿಯ ಅಲೆಕ್ಸಾಂಡರ್ ಹೈಸ್ಕೂಲಿನವರೆಂದು ತಿಳಿದುಬಂತು ಆ ಹುಡುಗರೆಲ್ಲರೂ ನವಾಬರ ಅರಮನೆಯ ಅಂಗಳವನ್ನು ಸೇರಲು ಬಹಳ ಪ್ರಯತ್ನಗೈದರು ಆದರೆ ಕಾವಲುಗಾರರು ಅವರನ್ನು ಪದೇ ಪದೇ ಹೊರಗಟ್ಟಿದರು ಕಳೆದ ವಾರ ನವಾಬರು ತನ್ನ ಮೋಟಾರಿನಲ್ಲಿ ಕುಳಿತು ತನ್ನ ಸಂಜೆಯ ವಿಹಾರದಿಂದ ಅರಮನೆಗೆ ಹಿಂತಿರುಗುತ್ತಿದ್ದರು ೭ ೩೦ ಘಂಟೆಯಾಗಿದ್ದಿತು ಮೋಟರು ಅರಮನೆಯ ಮಾರ್ಗಕ್ಕೆ ಬರುತ್ತಲೇ ಎಲ್ಲಾ ಹುಡುಗರ ಒಟ್ಟಾಗಿ ನವಾಬರ ಮೋಟರಿನ ಎದುರು ನಿಂತುಬಿಟ್ಟರು ನವಾಬರಿಗೆ ಇದರ ಅರ್ಥವಾಗಲಿಲ್ಲ ಎದುರಿನಲ್ಲಿ ಹುಡುಗರ ತಂಡವಿರುವುದನ್ನು ಅವರು ಥಟ್ಟನೆ ಕಂಡು ಮೋಟರನ್ನು ಬ್ರೇಕಿನ ಮೂಲಕ ಕಟ್ಟನೆ ನಿಲ್ಲಿಸಿದರು ಅಷ್ಟರಲ್ಲಿ ಕೆಲವು ಹುಡುಗರು ಅವರ ಕಾರನ್ನು ಹತ್ತಿಬಿಟ್ಟರು ಸಂಗತಿಯೇನೆಂದು ವಿಚಾರಿಸಲು ಆ ಶಾಲೆಯ ಒಂದು ಹಾಕಿ ಟೀಮು ಸಂಯುಕ್ತ ಪ್ರಾಂತ್ಯಕ್ಕೆ ಇದೇ ನವಂಬರ ತಿಂಗಳಲ್ಲಿ ಹೋಗಲಿರುವುದೆಂದೂ, ಅದುದರಿಂದ ನವಾಬರು ತಮಗೆ ದ್ರವ್ಯ ಸಹಾಯವನ್ನು ಕೊಡಬೇಕೆಂದೂ ಹುಡುಗರ ಅರಿಕೆಯಾಯಿತು "ನೀವು ಹೀಗೇಕೆ ಮಾಡಿದಿರಿ" ಎಂದು ನವಾಬರು ಹುಡುಗರೊಡನೆ ಕೇಳಲು "ಅರಮನೆಯನ್ನು ಸಮೀಪಿಸಲು ನಮ್ಮನ್ನು ಕಾವಲುಗಾರರು ಪದೇ ಪದೇ ಓಡಿಸಿದರು, ತಾವು ಪ್ರಭುಗಳೆಂಬಾಶೆಯಿಂದ ನಾವು ವಂತಿಗೆಗೆ ಬಂದುದಲ್ಲ ಹಳೆಯ ವಿದ್ಯಾರ್ಥಿ ಎಂಬ ಆಶೆಯಿಂದ" ಎಂಬ ಉತ್ತರವು ದೊರೆಯಿತು. ಇದನ್ನು ಕೇಳಿ ನವಾಬರು ಅತ್ಯಂತ ಸಂತೋಷಭರಿತರಾಗಿ ನಿಂತಲ್ಲಿಂದಲೇ ೫೦೦ ರೂಪಾಯಿ ನಗದಿಯನ್ನು ಹುಡುಗರಿಗೆ ಕೊಟ್ಟರು.

ಮರಿಗಳನ್ನಿಟ್ಟ ಹಾವು

ಹಾವುಗಳು ಮೊಟ್ಟೆ ಇಟ್ಟು ಮರಿಗಳನ್ನು ಮಾಡುವುದು ನಿಸರ್ಗ ಸಿದ್ಧವೆಂದ ಸಂಗತಿ ಮನುಷ್ಯರು ಮೊಟ್ಟೆಗಳನ್ನಿಡುತ್ತಾರೆಯೋ? ಉರಗಗಳು ಮರಿಗಳನ್ನಿಡುತ್ತವೆಯೋ? ಆದರೆ ಬಂಗಾಳದ ಖುಲ್ನಾದ ಸಮೀಪ ಫುಲಂಗ್ರಾಮ ಎಂಬಲ್ಲಿಂದೊಂದು ವಿಚಿತ್ರ ವಾರ್ತೆಯು ಬಂದಿದೆ. ಅಲ್ಲಿ ಒಂದು ಹಾವು ಮೊಟ್ಟೆಗಳನ್ನಿಡುವ ಬದಲಿಗೆ ಕೆಲವು ಮರಿಗಳನ್ನಿಟ್ಟಿದೆ ಈ ಅದ್ಭುತವನ್ನು ಕಣ್ಣಾರೆ ಕಾಣಲು ಜನತಂಡವು ದಿನಂಪ್ರತಿ ಹೋಗುತ್ತಿದೆ

ಪುರುಷ ವೇಷಧಾರಿಣಿಯಾದ ಅಬಲೆಯ ಬಲ!

ಲಂಡನಿನಲ್ಲಿ ಮೆಡೆಲೈನ್ ಫಿಂಡಾಲೆ ಎಂಬೊಬ್ಬ ತರುಣಿ ಅವಳಿಗೆ ಗ್ರೇಂಜ್ ಮಾರ್ಶ್ ಎಂಬವನೊಡನೆ ವಿವಾಹವಾಯಿತು ಆದರೆ ಮದುವೆಯಾದ ಎರಡು ದಿನಗಳಲ್ಲೇ ಅವಳು ಗಂಡನನ್ನು ಬಿಟ್ಟು ಏಕಾಂಗಿಯಾಗಿ ಎತ್ತಲೋ ಪಲಾಯನ ಮಾಡಿದಳು ದೇಶಾಟನವನ್ನು ಮಾಡಿ (೧) ತಾನು ಸ್ತ್ರೀಯೆಂಬ ಗುಟ್ಟನ್ನು ಗೋಪ್ಯವಾಗಿರಿಸಿದಳು (೨) ಒಬ್ಬ ತರುಣಿಯನ್ನು ಪ್ರೀತಿಸಿದಳು (೩) ಮದ್ಯವನ್ನು ಸೇವಿಸಿ ತರುಣರೊಡನೆ ನರ್ತಿಸಿದಳು (೪) ಹುಡುಗರ ಕ್ಲಬ್ಬಿನ ಸದಸ್ಯಳಾದಳು ಇತ್ಯಾದಿ ಮೆಡೆಲೈನಳು ಸಂಗಾತಿಯವರೊಡನೆ ಸಂಭಾಷಿಸುತ್ತಾ ಪುರುಷವರ್ಗದವರ ಅನುಭವವನ್ನು ಹೇಳಿದಳು ಒಂದು ದೊಡ್ಡ ಗಿರಣಿಗೆ ಹೋಗಿ ತನ್ನ ಹೆಸರು ಜೇಕ್ ಮೆಕ್ಡೊನಾಲ್ಡ್ ಎಂದೂ ತನಗೆ ಕೆಲಸಬೇಕಾಗಿದೆಯೆಂದೂ ಕೇಳಿದಳು ಕೆಲಸವು ದೊರೆಯಿತು ಕನ್ನಡ್ಕ ಕೆಲವರ ಗಡಿಯಾರ ಹಣಕಾಸುಗಳು ಕಾಣೆಯಾದುವು ಜೇಕ್‌ನ ಮೇಲೆ ಸಿ ಐ ಡಿ ಯೊಬ್ಬನಿಗೆ ಶಂಕೆಯಾಯಿತು ಒಂದು ದಿನ ಜೇಕನನ್ನು ಹಿಡಿದು ತನಿಖೆ ನಡೆಸುವಾಗ ಅವಳಲ್ಲಿನ ಸ್ತ್ರೀ ಚಿಹ್ನೆಯು ತೋರಿಬಂದು, ಗುಟ್ಟು ರಟ್ಟಾಯಿತು ಅವಳ ತನಿಖೆಯು ನಡೆದು ಕಟ್ಟಕಡೆಗೆ ಮನೆಗೆ ಹಿಂತಿರುಗಿ ಕಳುಹಿಸಲ್ಪಟ್ಟಳು ಅವಳ ಒಡನಾಡಿಗಳು ಈಗ ಆಶ್ಚರ್ಯಗೊಳ್ಳುತ್ತಿದ್ದಾರೆ!

ಮಹಾತ್ಮಾಜೀಯವರ ದೇಹಸ್ಥಿತಿ

ಮಹಾತ್ಮಾ ಗಾಂಧಿಯವರು ಎರವಾಡಾ ಸೆರೆಮನೆಯಲ್ಲಿ ಸುಖದಿಂದಿರುವರೆಂದು ತಿಳಿದುಬಂದಿದೆ ಅವರು ಮೊದಲು ಕ್ಷೀರ ಸೇವನೆಯನ್ನು ಬಿಟ್ಟಿದ್ದರು ಅದರಿಂದಾಗಿ ಅವರ ತೂಕವು ಕಡಿಮೆಯಾಯಿತು ಈಗ ಪುನಹ ಅವರು ಹಾಲು ಸೇವಿಸುತ್ತಿದ್ದಾರೆ ದಿನೇ ದಿನೇ ಭಾರವು ಕೂಡುತ್ತಿದೆ ಅವರ ಬಲಗೈಯು ಶಕ್ತಿಯುತವಾಗಿರುವುದಿಲ್ಲ ಬರವಣಿಗೆಯ ಕೆಲಸವನ್ನು ಅದರಿಂದ ಮಾಡಬಾರದೆಂದು ವೈದ್ಯರ ಸೂಚನೆಯಿರುವುದರಿಂದ ಅವರು ಎಡಗೈಯಲ್ಲೇ ಬರೆಯುತ್ತಿರುವರು

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O P No 11/1932

ಟಪಾಡಿ ಶ್ರೀವೆಂಕಟ್ರಮಣದೇವರ ಅರ್ಜಿದಾರರು
ಮತ್ತು
ಕಟಪಾಡಿ ವಿಟ್ಠಲ ಭಟ್ಟ ಎದ್ರಿ
ಇವರೊಳಗೆ

ಈ ಮೂಲಕ ಸದ್ರಿ ಎದ್ರಿಗೆ ತಿಳಿಯಪಡಿಸುವದೇನೆಂದರೆ – ಸದ್ರಿ ವ್ಯವಹರಣೆಯಲ್ಲಿ ಎದ್ರಿಯ ತಂದೆ ಕಟಪಾಡಿ ೫೦ ವರ್ಣ ಭಟ್ಟರಿಗೆ ಕಾರ್ಕಳ ತಾಲೂಕು ಸೂಡಾ ಗ್ರಾಮದ ಒಂಬ ಭಟ್ಟರ ವಿಧವೆ ಚರ್ದವ್ವ ಯಾನೆ ಸೀವ [illegible] ಬರೆಕೊಟ್ಟ ತಾ [illegible] ಸ್ಥಿರಾಸ್ತಿ ಭೋಗ್ಯಾದಿ ಈಡು ದಸ್ತಾವೇಜಿನ ಪೂರ್ಣಸಂದಾಯಾರ್ಥ [illegible] ಮೂಲ ೭ ರನ್ನು ಅರ್ಜಿದಾರರು ಈ ಕೋರ್ಟಿನಲ್ಲಿ ಡಿಪೊಜಿಟ್ ಮಾಡಿ ಎದ್ರಿ [illegible] ಅರ್ಜಿದಾರರಿಗೆ ಸದ್ರಿ ಭೋಗ್ಯ [illegible] ಕನ್ವೆಯನ್ಸ್ ಡೀಡ್ ಸಹಿತ ಸದ್ರಿ ಆಸ್ತಿಗಳನ್ನು ಸ್ವಾಧೀನ ಬಿಡಿಸಿಕೊಟ್ಟು ಸದ್ರಿ ಐವಜನ್ನು ಎದ್ರಿಗೆ [illegible] ಬೇಕಾಗಿ ವ್ಯಾಜ ಅರ್ಜಿದಾರರು ಮಾಡಿದ ಸದ್ರಿ ಅರ್ಜಿಯು ೧೯೩೨ನೇ ಇಸವಿ ಸಪ್ಟಂಬರ ತಿಂಗಳ ತಾರೀಕು [illegible]ಕ್ಕೆ ಈ ಕೋರ್ಟಿನಲ್ಲಿ ತನಿಖೆಗೆ ಇಡಲ್ಪಟ್ಟಿದೆ ಆ ದಿವಸ ಸದ್ರಿ ಎದ್ರಿಯು ಕೋರ್ಟಿಗೆ ಹಾಜರಾಗದಿದ್ದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲಾಗುವದು ಎಂಬ ಸಂಗತಿ ಸದ್ರಿ ಎದ್ರಿಗೆ ತಿಳಿಸುವದಾಗಿಯದೆ

೩೧ ೮–೩೨
ಉಡುಪಿ

P Panduranga Nayak
Advocate for Petitioner

ನೋಟಿಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O P No 17 32

ಉಚ್ಚಿಲ ಸುಬ್ರಾಯ ಭಟ್ಟ–ದಾಸಭಟ್ಟರ ಮಗ, ಬಡಾ ಗ್ರಾಮದ ಉಚ್ಚಿಲ—ಅರ್ಜಿದಾರ
ಮತ್ತು
ಗೋಪಾಲ ಶ್ಯಾನಭಾಗ, ಹೆಮ್ಮಾಡಿ ಸುಬ್ರಾಯ ಶ್ಯಾನುಭಾಗರ ಮಗ ಹಾಲಿ ಬೊಂಬಾಯಿ ಶಹರ —ಎದ್ರಿ
ಇವರೊಳಗೆ

ಅರ್ಜಿದಾರನಿಂದ ಎದ್ರಿಗೆ ಸಲತಕ್ಕ ಈಡಿನ ಬಾಬ್ತು ರೂ 2607–9–0ನ್ನು ಎದ್ರಿಗೆ ಟೆಂಡರ್ ಮಾಡಿ ಅರ್ಜಿದಾರನು ಉಡ್ಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ ಮೇಲಿನ ಅರ್ಜಿ ದಾಖಲು ಮಾಡಿರುತ್ತಾನೆ ಸದರಿ ಅರ್ಜಿಯು ತಾರೀಕು 20–9–32ಕ್ಕೆ ತನಿಕೆ ಬಗ್ಗೆ ಇಟ್ಟಿರುತ್ತದೆ! ಈ ಅರ್ಜಿಗೆ ಆಕ್ಷೇಪವಿದ್ದರೆ ಎದ್ರಿಯು ತನ್ನ ಆಕ್ಷೇಪವನ್ನು ಆ ದಿವಸ ಸದರಿ ಕೋರ್ಟಿನಲ್ಲಿ ಹಾಜರು ಮಾಡತಕ್ಕದ್ದು

Udipi
29 – 8 – 1932

B Srinivasa Rao,
Advocate for Petitioner.

[illegible]

[illegible] ತಾರೀಖಿನಿಂದ ಅಂಗೀರಸ ಸಂವತ್ಸರದ [illegible] ಶು ೧ ನೆ ಶುಕ್ರವಾರದ ವರೆಗಿನ ಪಂಚಾಂಗ

([illegible] ಸಿಂಹ—ಸೂರ್ಯ)

[illegible]	[illegible]	[illegible]	[illegible]	[illegible]	[illegible]	[illegible]	ಸೂರ್ಯ.	
							ಉ	ಅಸ್ತ
3	ಶನಿ	೪	೪೭. ೦	ಹಸ್ತಾ	೪೮ ೧೪	೧೮	6.21	6.39
4	ರವಿ	೮	೪೧.೨	ಚಿತ್ತಾ	೪೧ ೧೬	೧೯	6 21	6.39
5	ಸೋಮ	೯	೨೫.೧	ಸ್ವಾತೀ	೨೭ ೨	೨೦	6.21	6 38
6	ಕುಜ	೧	೧೯ ೨	ವಿಶಾಖಾ	೨೪ ೧	೨೦	6.21	6.37
7	ಬುಧ	೭	೧೪ ೪	ಅನುರಾಧಾ	೧೯ ೨	೨೨	6,21	6 37
8	ಗುರು	೮	೭ ೪೦	ಜ್ಯೇಷ್ಠಾ	೧೫ ೪೧	೨೪	6 21	6 36
೯	ಶುಕ್ರ	೯	೨ ೨೦	ಮೂಲಾ	೧೨.೪೦	೨೫	6 21	6.36

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆ	ದಿನದ ಮಳೆ	ಜುಮಲಾ ಮಳೆ
25	86— 4	76— 6	0—17	—
26	89— 7	76— 8	0—20	—
27	86— 7	74— 3	0—32	—
28	85— 0	73— 1	0—45	—
29	85— 7	77— 7	0—05	—
30	85— 6	75- 1	0—30	—
31	84— 7	76— 2	0—11	81-35

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3— 9	4— 2
ಮುಷ್ಟಿ ...	4— 8	5— 0
ಗುಡ್ಡ ...	4— 0	4— 6
ಸಣ್ಣ ...	3—10	4— 2
ಊರ ಅವ್ವಲ್ ಬೆಳ್ತಿಗೆ	4—12	5— 9
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	8— 0	8— 4
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4—12	4—14
ಗೋದಿ ಗೋಣಿ ೧ಕ್ಕೆ	9— 8	12— 8
ತೊಗರಿ ಗೋಣಿ ೧ಕ್ಕೆ	10— 8	12— 0
ಹುರುಳಿ ಗೋಣಿ ೧ಕ್ಕೆ	6—12	7— 4
ಕಡಲೆ ಗೋಣಿ ೧ಕ್ಕೆ	8— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	13— 8	21— 0
ಉದ್ದು ಗೋಣಿ ೧ಕ್ಕೆ	11— 8	13— 0
ಹೆಸರು ಗೋಣಿ ೧ಕ್ಕೆ	10— 4	11—
ಊರುಬೆಲ್ಲ ಖಂಡಿ ೧ಕ್ಕೆ	33—12	36— 4
ಉಪ್ಪು ಗೋಣಿ ೧ಕ್ಕೆ	6— 0	6— 4
ಕೊಬ್ರಿ ಖಂಡಿ ೧ಕ್ಕೆ	65—	72—
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	32— 8	33—
ಎಳ್ಳಿಂಡಿ ಖಂಡಿ ೧ಕ್ಕೆ	22— 8	23—12
[illegible] ಮುಡಿ ೧ಕ್ಕೆ	5— 8	6— 8
ಎಳ್ಳಕ್ಕಿ ಮುಡಿ ೧ಕ್ಕೆ	6—12	7— 0
[illegible] ಸಕ್ಕರೆ ೧ಕ್ಕೆ	4— 7	8—12
[illegible] ಸಕ್ಕರೆ ಮಣ ೧ಕ್ಕೆ	4— 3	4— 4
ಹೊಸ ಮೆಣಸು	4— 0	5— 0
ಸಾಸಿವೆ ಮುಡಿ ೧ಕ್ಕೆ	5— 4	5— 8
[illegible] ಕಾಫಿ ಖಂಡಿ ೧ಕ್ಕೆ	275— 0	300—
ಕಾಳುಮೆಣಸು ಖಂಡಿ ೧ಕ್ಕೆ	170— 0	180—
ಯೇಲಕ್ಕಿ ಮಣ ೧ಕ್ಕೆ	27— 0	28—
ಗೇರುಬೀಜ ಮುಡಿ ೧ಕ್ಕೆ	3— 2	3— 4
[illegible] ಖಂಡಿ ೧ಕ್ಕೆ	25— 0	26— 8
[illegible] ಮಣ ೧ಕ್ಕೆ	11— 0	11— 8
[illegible] ಮಣ ೧ಕ್ಕೆ	15— 0	16—0
[illegible] ೧ಕ್ಕೆ	14— 4	14—12
[illegible] ತಗಡು ಮಣ ೧ಕ್ಕೆ	11— 8	12— 0
[illegible] ೧ಕ್ಕೆ	17—14	18— 0
[illegible] ಖಂಡಿ ೧ಕ್ಕೆ	40—	—
[illegible] ಕಾಫಿ ಖಂಡಿ ೧ಕ್ಕೆ	350—	355—
[illegible]	150—	205—
[illegible]	140—	145—

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೆಳಕು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣ**ಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಜ್ಯ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವವರು ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ [illegible] 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಕ[illegible]ಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಊರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು,

Secretary,

The Canara Public Conveyance Company Ltd Mangalore

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು(M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು, ಬೆಳ್ತಂಗಡಿ ಗುರುವಾಯನ ಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆ ಹರಕ್ಕೆ 10 30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪॥ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದುಗ್, ಪಂಡರಾಪೂರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಮಾಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಮಾಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, ಫ್ಯಾರಡೂನ್ ಶೊರಾಬ್, ಕೆ. ಸೂರಪ್ಪ ಶೆಟ್ಟಿ—ಪ್ರೊಪ್ರೈಟರ್.

ದಕ್ಷಿಣ ಕನ್ನಡದಲ್ಲಿ ಚುನಾವಣೆಯ ಗಡಿಬಿಡಿ!

ಮಂಗಳೂರು ತಾಲೂಕಿನಿಂದ ಡಿಸ್ಟ್ರಿಕ್ಟ್ ಬೋರ್ಡ್ ನಾವಣೆಗೆ ಪ್ರತಿಸ್ಪರ್ಧೆಯಿಲ್ಲದೆ ಈ ಕೆಳಗಿನಂತೆ ನೇಮಕಗ ಗಿವೆ —ಮೂಲ್ಕಿ ಸರ್ಕಲಿನಿಂದ ಮ॥ ರಾ ರಾಮಕೃಷ್ಣ ಂಜ, ಸುರತ್ಕಲ್ ಸರ್ಕಲಿನಿಂದ ಪಿ ಆರ್ ರಂಗನಾಥ ಪೂಂಜ, ರ್ಪುರ ಸರ್ಕಲಿನಿಂದ ಶ್ರೀ. ಕೆ ರಘುಚಂದ್ರ ಬಲ್ಲಾಳ್, ಮಂಗ ರು ಸರ್ಕಲಿನಿಂದ ಎಂ ಬಿ ಎಲ್ ಅಹಮ್ಮದ್, ಮಣೇಲ್ ಷ್ಣಪ್ಪ ನಾಯಕ್, ಎಸ್ ಎಲ್ ಮತಾಯಸ್, ಎನ್ ಜಿ ಕರ್ವನ್, ಶ್ರೀಮತಿ ಸುಂದರಿ ಬಾಯಿ (ಡಾ ಎಚ್ ಎ ಶವರ ಧರ್ಮಪತ್ನಿ,) ಡಾ ವಿಠಲ ಶೆಟ್ಟಿ, ಪಾಣೆಮಂಗಳೂರು ರ್ಕಲಿನಿಂದ ಶ್ರೀ ಎ ದಿ ಶೆಟ್ಟಿ, ಬಂಟವಾಳ ಸರ್ಕಲಿನಿಂದ ಶ್ರೀ ಶ್ರೀನಿವಾಸ್ ಬಾಳಿಗ

ಮಂಗಳೂರು ತಾಲೂಕು ಬೋರ್ಡಿಗೆ, ಪ್ರತಿಸ್ಪರ್ಧೆಯಿ ದೆ ಚುನಾವಣೆ ಹೊಂದಿದವರು —ಕಿನ್ನಿಗೋಳಿ ಸರ್ಕಲಿನಿಂದ ಬಾಬು ಹೆಗ್ಡೆರು, ಹಳೆಯಂಗಡಿ ಸರ್ಕಲಿನಿಂದ ಕೋಟಿ ಶೆಟ್ಟರು, ರತ್ಕಲ್ ಸರ್ಕಲಿನಿಂದ ದಾಮೋದರ ರಾಯರು, ಒಜ್ಜೆ ಸರ್ಕ ನಿಂದ ಮಿ ಗೊನ್ಸಾಲ್ವಿಸ್, ಎ ಸಿ (ಹಿಂದೀ ಕ್ರೈಸ್ತರ ರಿಸರ್ವ್ ಟಿಗೆ) ಮೂಡು ಪೆರಾರದಿಂದ ಕೆ ರಘುಚಂದ್ರ ಬಲ್ಲಾಳ್, ರ್ಪುರ ಸರ್ಕಲಿನಿಂದ ಕೆ ಮುತ್ತಯ್ಯ ಶೆಟ್ಟರು, ಮಂಗ ರು ಸರ್ಕಲಿನಿಂದ ಮಿ ಕುಂಞಾಮ್ಮು ಬ್ಯಾರಿ, ಮಿಸೆಸ್ ಸಿ ಶ್ರೀಷ್ಟ (ಹೆಂಗಸರ ಸೀಟಿಗೆ), ಎಸ್ ಎನ್ ಸಾಲ್ಡಾಂಞ (ಹಿಂದೀ ಕ್ರೈಸ್ತರ ರಿಸರ್ವ್ ಸೀಟಿಗೆ), ಉಳ್ಳಾಲ ಸರ್ಕಲಿನಿಂದ ಬು ಗೋವಿಂದ ಕಿಣಿಯವರು, ಮಿ॥ ಸೀದಿ ಬ್ಯಾರಿ (ಮುಸ್ಲಿಂ ರ್ವ್ ಸೀಟಿಗೆ), ಕಡಿಯಂಗಳ ಸರ್ಕಲಿನಿಂದ ರಾಮಯ್ಯ ಂಡಾರಿ ಪಿ, ಮಿ॥ ಪಿ ಎಲ್ ಅಹಮ್ಮದ್ (ಮುಸ್ಲಿಮರ ರಿಸರ್ವ್ ಟಿಗೆ), ಪಾಣೆಮಂಗಳೂರು ಸರ್ಕಲಿನಿಂದ ನರಿಕೊಂಬು ರಾಮ ಯರು, ಕುನ್ನರ್ಪಾಡು ಸರ್ಕಲಿನಿಂದ ವಕೀಲ ಟಿ ನಾರಾ ಯಣ ಭಂಡಾರಿ, ಬಂಟವಾಳ ಸರ್ಕಲಿನಿಂದ ಗಣಪತಿ ಕಮ್ತಿ

ಈ ಕೆಳಗಿನ ಜನರಲ್ ಸೀಟುಗಳಿಗೆ "ಪೋಲು ಇದೆ — ಮೂಲ್ಕಿ ಸರ್ಕಲಿನಿಂದ ಎಮ್ ರಾಮಕೃಷ್ಣ ಪೂಂಜ ಮತ್ತು ಕೀಲ ಪದ್ಮನಾಭ ಕಮ್ತಿ, ಆದಿ ದ್ರಾವಿಡರ ರಿಸರ್ವ್ ಸ್ಥಾನಕ್ಕೆ ಮಂಗಳೂರು ಐತಪ್ಪ ಮೇಸ್ತ್ರಿ ಮತ್ತು ಬಪ್ಪನಾಡು. ಮೇಸ್ತ್ರಿ ಮೂಯರ್, ಬಜಪೆಯಿಂದ ಮಾಜಿ ಶಿರಸ್ತೆದಾರ ಗಣೇಶ ರಾವ್, ಕೀಲ ಶ್ಯಾಂಪ ಉಡಾಲ, ಪಡುಬಿದ್ರಿನಿಂದ ಕುಳ್ಳಾ ಕೃಷ್ಣ ಣಿ ಮತ್ತು ಕೋಟೆಕಾರು ಸುಬ್ಬಣ್ಣಯ್ಯ, ಅಕರ್ಳೆವಿಂದ ಡ್ಯಾರಂ ಹಮ್ಮದೆ ಬ್ಯಾರಿ ಮತ್ತು ಅಕ್ತಾವರ ಸಾಂತಾಳ್ವ, ಕೋಟೆಕಾರ ಸರ್ಕಲಿಗೆ ಬಡಿಲಗುತ್ತು ಐತಪ್ಪ ಶೆಟ್ಟಿ ಮತ್ತು ಎಮ್ ಡಿ ಸೋಜ, ರಾಯಿಯಿಂದ ಅರಳ ಕಾಲಾ ಮನೇ ರ ಧರ್ಮಪಾಲ ಶೆಟ್ಟಿ ಮತ್ತು ವೈದ್ಯ ಜನಾರ್ಧನಯ್ಯ, ಗುವಳಕಟ್ಟೆಯಿಂದ ವಕೀಲ ರಾಮಭಟ್ಟ ಮತ್ತು ಬಿ ಎಚ್, ವಾಸುದೇವ ಪೈ

ಕಾರ್ಕಳ ತಾಲೂಕುಬೋರ್ಡಿಗೆ ಎಲ್ಲಾ ಸರ್ಕಲುಗ ಂದಲೂ ಪ್ರತಿಸ್ಪರ್ಧಿಗಳಿಲ್ಲದೆ ಚುನಾವಣೆಹೊಂದಿರುವರು

ಪುತ್ತೂರು--- ಅಲ್ಲಲ್ಲಿ ಇಷ್ಟಿಷ್ಟು!

ಪುತ್ತೂರು ತಾಲೂಕಿನ ತಾಲೂಕುಬೋರ್ಡು ವ ಡಿಸ್ಟ್ರಿಕ್ಟ್‌ಬೋರ್ಡು ಮೆಂಬರಿಕೆಯ ಮೇಲಾಟ

ಈ ಬಾರಿ ಪ್ರತಿಸ್ಪರ್ಧೆಯಿಲ್ಲದೇನೆ ತಾಲೂಕುಬೋರ್ಡು ವ ಡಿಸ್ಟ್ರಿಕ್ಟ್‌ಬೋರ್ಡು ಸ್ಥಾನಗಳು ನಿರ್ಣಯಿಸಲ್ಪಟ್ಟದ್ದು ಕುಂಬಾ ಸಂತೋಷದ ವಿಷಯವೇ ಸರಿ ಉಮೇದ್ವಾರರೆಲ್ಲರೂ ಸಭೆ ಸೇರಿ, ಕಕ್ಷಿಯಿರುವ ಸರ್ಕಲುಗಳ ಮಟ್ಟಿಗೆ ಯಾರು ಲ್ಲಬೇಕು ಮತ್ತು ಯಾರು ಉಮೇದ್ವಾರಿಕೆಯನ್ನು ಹಿಂತೆಗೆಯಬೇಕು ಎಂಬುದನ್ನು ರಾಜಿಯಿಂದ ನಿಷ್ಕರ್ಷಿಸಲು ಐವರ ಗೃಹಸ್ಥರನ್ನು ಪಂಚಾಯತರನ್ನಾಗಿ ನೇಮಿಸಿ, ಅವರ ಎವೋರ್ಡ್‌ನಂತೆ ನಡಕೊಂಡದ್ದೇ ಹೀಗಾಗಲು ಕಾರಣವಾಗಿದೆ. ಆದರೂ 'ಸ್ವಲ್ಪವಾದರೂ ಜಗಳವಿಲ್ಲದ ಮದುವೆಗೆ ಸ್ವಾರಸ್ಯವಿಲ್ಲ'' ಎಂದು ನೆನಸುವ ಬೀಗರಂತೆ, "ಸ್ವಲ್ಪಮಟ್ಟಿಗಾದರೂ ಇಲೆಕ್ಷನ್ ಗಡಿಬಿಡಿಯಿಲ್ಲದೆ ಉಮೇದ್ವಾರಿಕೆಗೆ ಮಜಾ ಇಲ್ಲ'' ಎಂದು ಒಬ್ಬಿಬ್ಬರು ಭಾವಿಸಿ ತಮ್ಮ ಉಮೇದ್ವಾರಿಕೆಯನ್ನು (ಎವೋರ್ಡನ್ನು ಅನುಸರಿಸಿ) ಹಿಂತೆಗೆಯದಿದ್ದುದು ಸೋಜಿಗವಾಗಿದೆ. ಅವಧೂತನ ನಿರೀಕ್ಷಣೆಯನ್ನು ಕೆಲಮಟ್ಟಿಗಾದರೂ ನಿಜವಾಗಿ ಮಾಡಿದುದಕ್ಕಾಗಿ ಆತನು ಅವರಿಗೆ ಚಿರಋಣಿಯಾಗಿರುವನು.

೦ ೦ ೦ ೦

ಮೋಟಾರು ಟಿಕೇಟು ದರಗಳಲ್ಲಿ ತುಂಬಾ ಕಾಂಪಿಟೇಶನು (ಸ್ಪರ್ಧೆ) "ನ್ಯಾಯವೋ ಅನ್ಯಾಯವೋ ಇದರಾಯತವ ನೀ ಬಲ್ಲೆ'' ಎಂದು ದಾಸರು ಹೇಳಿರುವಂತೆ ಈ ತರದ ಕಾಂಪಿಟೀಶನು ಯೋಗ್ಯವೋ ಅಯೋಗ್ಯವೋ—ಕಂಪೆನಿಗಳಿಗೇನೆ ಗೊತ್ತು

"ಅವಧೂತ"

ಸೋಡ್ತಿ ಎತ್ತಲಾಗಿ ನಮ್ಮ ಎರಡನೇ ಒಗಟಿನ ಮೂರು ಇನಾಮುಗಳು ಈ ಕೆಳಗಿನವರಿಗೆ ದೊರೆತಿವೆ.

ಮೊದಲನೇ ಬಹುಮಾನ—ಕೇತುಭಂಗ (ಗ್ರಂಥ) ಶ್ರೀ ನಾರಾಯಣ ಹಗ್ಡೆ, ಕಟ್ಪಾಡಿ ಎರಡನೇ ಬಹುಮಾನ—ಕುಮುದಾ (ಕಾದಂಬರಿ) ಶ್ರೀ ಕಟಪಾಡಿ ಸಿದ್ದು, ಟಿ ಪುತ್ರನ್ c/o ಶ್ರೀ ಕೆ ಟಿ ಕರ್ಕೇರ, ಮುಂಬಾಯಿ ಮೂರನೇ ಬಹುಮಾನ—(ಬೆಂಕಿ ಪೆಟ್ಟಿಗೆ ತಯಾರಿಸುವ ವಿಧಾನ) ಶ್ರೀ ವಿಠ್ಠಲ ಕೆ ಶೆಟ್ಟಿ, c/o ದಿ ಏಶಿಯಾನ್ ಎಶ್ಯೂರೆನ್ಸ್ ಕೊ ಮುಂಬಾಯಿ

ಒಗಟು ನಂ ೩

ಇದರ ಉತ್ತರವು ೧೬-೯-೧೯೩೨ರ ವರೆಗೆ ಸ್ವೀಕರಿಸಲ್ಪಟ್ಟು ೨೩-೯-೧೯೩೨ಕ್ಕೆ ಪ್ರಕಟಿಸಲ್ಪಡುವುದು ಉತ್ತರವನ್ನು ಅರ್ಧಾಣೆ ಸ್ಟ್ಯಾಂಪಿನೊಂದಿಗೆ ಕಳುಹಿಸತಕ್ಕದ್ದು

ಒಗಟುಗಾರ—ಎಮ್ ಜಿ ಅನಂತ ಪೈ

1	2		■	3	4	5
6		■	7	■	8	
	■	9		10	■	
■	11		■	12		■
13	■	14	15		■	16
17	18	■		■	19	
20			■	21		

ಸೂಚನೆಗಳು —

ಎಡದಿಂದ ಬಲಕ್ಕೆ —

೧ ಚತುರ್ದಶ ಭುವನಗಳಲ್ಲೊಂದು,
೩ ಪ್ರಸಿದ್ಧ ಪರ್ವತಗಳಲ್ಲೊಂದು
೬ ಅರಸು ೮ ಬರಗಾಲ.
೯ ಅಷ್ಟ ದಿಗ್ಗಜಗಳಲ್ಲೊಂದು.
೧೧ ಪ್ರಾಣ. ೧೨ ಮಾವನ ಹೆಂಡತಿ
೧೪ ಮನುಷ್ಯನ ಸಪ್ತಾವಸ್ಥೆಗಳಲ್ಲೊಂದು
೧೭ ದಂಡನೆ. ೧೯ ಸಾಹಸ
೨೦ ಸಪ್ತಸಮುದ್ರಗಳಲ್ಲೊಂದು
೨೧ ಸಂವತ್ಸರಗಳಲ್ಲೊಂದು.

ಮೇಲಿಂದ ಕೆಳಕ್ಕೆ —

೧ ಸುಖ. ೨ ತಪಸ್ಸು ೪ ಅರಗು. ೫ ಎಲ್ಲಾ
೭ ಪಕ್ಷ್ಯರಿಗಳಲ್ಲೊಂದು.
೯ ಅಷ್ಟ ಫಣಿಯರಲ್ಲೊಬ್ಬ
೧೦ ನಶಿಸುವ
೧೩ ಛಪ್ಪನ್ನಾರು ದೇಶಗಳಲ್ಲೊಂದು
೧೫ ದುಃಖ. ೧೬ ನವರತ್ನಗಳಲ್ಲೊಂದು.
೧೮ ಯಾಮ. ೧೯ ಎಯ್ಯ ಮೃಗದ ಮುಳ್ಳು (poroupeni)

ಇದರ ಬಿಡ್ಸುಗರೊಳಗೆ ಸೋಡ್ತಿ ತೆಗೆದು, ಸೋಡ್ತಿ ದೊರೆತವರಿಗೆ 'ದಕ್ಷಿಣ ಕನ್ನಡ ಪ್ರಾಚೀನ ಇತಿಹಾಸ'ವೆಂಬ ೪೪೪ ಪುಟಗಳ, ೨ ರೂಪಾಯಿ ಬೆಲೆಯ ಉತ್ಕೃಷ್ಟ ಸಚಿತ್ರ ಗ್ರಂಥವೊಂದನ್ನು ಬಹುಮಾನಿಸಲಾಗುವುದು

ಪುತ್ತೂರು ತಾಲೂಕುಬೋರ್ಡಿನ ಉಮೇದ್ವಾರರು— ಪುತ್ತೂರು ಸರ್ಕಲಿನಿಂದ ಎಚ್. ಪುಂಡ್ಲಿಕ ಭಟ್ ಮತ್ತು ಎಮ್ ಸದಾಶಿವ ರಾವ್, ವಿಟ್ಲ ಸರ್ಕಲಿನಿಂದ ಕೆ ಉಗ್ಗಪ್ಪ ಶೆಟ್ಟಿ ಸುಳ್ಯ ಸರ್ಕಲಿನಿಂದ ಎಮ್. ಐತಪ್ಪ ರೈ ಮತ್ತು ರಾಮಣ್ಣ ಗೌಡ, ನೇರಳಕಟ್ಟೆ ಸರ್ಕಲಿನಿಂದ ಕೆ. ರಾಮಣ್ಣ ರೈ ಮತ್ತು ದಿ ಮಂಗೇಶ ರಾವ್, ಕಾವು ಸರ್ಕಲಿನಿಂದ ಎ ಸುಬ್ಬಯ್ಯ ರೈ, ಬಾರೆಪಾಡಿ ಸರ್ಕಲಿನಿಂದ ವಿ ವೆಂಕಪ್ಪ ರೈ, ಬೆಳ್ಳಾರೆ ಸರ್ಕಲಿನಿಂದ ಎಮ್ ಚತ್ರಪ್ಪ ರೈ ಮತ್ತು ಕೆ ಸುಬ್ಬ ರಾವ್, ಬೆಳ್ತಂಗಡಿ ಸರ್ಕಲಿನಿಂದ ಎ ನಾಗಪ್ಪಯ್ಯ ಮತ್ತು ಮಚ್ಚ ಯಾನೆ ಇಂತ್ರು ಮಾನುಲ್, ಉಪ್ಪಿನಂಗಡಿ ಸರ್ಕಲಿನಿಂದ ಗೋವಿಂದ ಭಟ್ಟ, ಕಡಬ ಸರ್ಕಲಿನಿಂದ ಕುಶಲಪ್ಪ ಗೌಡ ಮತ್ತು ತಿಮ್ಮಯ್ಯ ಅರಿಗ, ಕನ್ಯಾಯನ ಸರ್ಕಲಿನಿಂದ ಎಚ್ ಹುಸ್ಸೇನ್ ಸಾಹೇಬ್, ಕೆ ಎಸ್ ರಾಮಶಾಸ್ತ್ರಿ ಮತ್ತು ಎಮ್ ರಾಮಕೃಷ್ಣ ಭಟ್ಟ, ಧರ್ಮಸ್ಥಳ ಸರ್ಕಲಿನಿಂದ ಎಚ್ ಪಿ ಎ ಜೈನ್, ಗುತ್ತಿಗಾರ್ ಸರ್ಕಲಿನಿಂದ ಎಮ್ ಸುಬ್ರಾಯ ಮತ್ತು ಸಣ್ಣಪ್ಪ ಗೌಡ, ಕೊಕ್ಕಡ ಸರ್ಕಲಿನಿಂದ ಎಮ್ ಶಿವ ರಾವ್ ಮತ್ತು ಕರಿಯ, ಪುತ್ತೂರು ಸರ್ಕಲಿನಿಂದ ಕೆ ಅನಂದ ಲಕ್ಷ್ಮಿ ಅಮ್ಮ, ಮುಂಡಾಜೆ ಸರ್ಕಲಿನಿಂದ ಮಂಜಪ್ಪ ಪಂಡ್ಯಾ, ಉಪ್ಪಿನಂಗಡಿ ಸರ್ಕಲಿನಿಂದ ಇಸ್ಮಾಯಿಲ್ ಸಾಹೇಬ್

ಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆಗೆ ಉಮೇದ್ವಾರರು— ಪುತ್ತೂರು ಸರ್ಕಲಿನಿಂದ ಎ ಮಹಾಬಲ ರೈ, ಬಿ ದಾಸ ರೈ, ಕೆ ವೆಂಕಟ್ರಾಯ ಪೈ, ಚೆನ್ನಮ್ಮ, ಕೆ ಅನಂದ ಲಕ್ಷ್ಮಿ ಅಮ್ಮ, ಸುಳ್ಯ ಸರ್ಕಲಿನಿಂದ ಎ ಸುಬ್ಬಯ್ಯ ರೈ, ಎಸ್ ಚೆನ್ನಪ್ಪ ಗೌಡ ಮತ್ತು ರಾಮಣ್ಣ ಗೌಡ, ವಿಟ್ಲ ಸರ್ಕಲಿನಿಂದ ಕೆ ನಾರಾಯಣ ರೈ ಮತ್ತು ಪದ್ಮನಾಭ ಪೈ, ಉಪ್ಪಂಗಾಡಿ ಸರ್ಕಲಿನಿಂದ ಬಿ ಪ್ರಭಾಕರ ರಾವ್, ಕೊಕ್ಕಡ ಸರ್ಕಲಿನಿಂದ ಎಮ್ ಶಿವ ರಾವ್, ಧರ್ಮಸ್ಥಳ ಸರ್ಕಲಿನಿಂದ ಬಿ ಮಂಜಯ್ಯ ಹೆಗ್ಡೆ

೪ನೇ ಪುಟದಿಂದ ಮುಂದರಿಸಿದ್ದು

ಇನ್ನೊಂದು ವಿಶೇಷ ವಾರ್ತೆಯೇನೆಂದರೆ ? ಡೆಹರಾಡೆನ್ನಿಗೆ ಸಪ್ರೂರವರು ಅಗತ್ಯ ಬಂದುಹೋಗಬೇಕೆಂದ ವೈಸರಾಯರ ಅವಸರದ ಅರಿಕೆಯೊಂದು ಬಂದಿದೆ ಇದರ ಮೇರೆಗೆ ಸಪ್ರೂರವರು ಒಡನೆ ದೆಹರಾಡೆನ್‌ಗೆ ಹೊರಟಿದ್ದಾರೆ ತೃತೀಯ ರೌಂಡ್‌ಟೇಬಲ್ ಪರಿಷತ್ತಿನ ಕುರಿತು ಮಾತುಕತೆ ನಡೆಯುತ್ತಿರುತ್ತದೆ ಇದರ ಪರಿಣಾಮವು ಮುಂದಕ್ಕೆ ಹೇಗೆ ನಿಂತೀತೆಂದು ತಿಳಿಯಲು ಅಸಾಧ್ಯವಿದೆ

— — ಮುಂದಕ್ಕೆ ? —

ಮೂರನೇ ರೌಂಡ್‌ಟೇಬಲ್ ಪರಿಷತ್ತು ಜರಗಿದರೂ ಅದರಿಂದ ಕೊಂಗ್ರೆಸ್ಸಿನ ವಿಮುಕ್ತತೆಯು ದೊರೆಯುವುದು ಅಸಂಭವನೀಯವೆಂದು ತಿಳಿಯಲಾಗುತ್ತದೆ ತೃತೀಯ ಪರಿಷತ್ತಿನಲ್ಲಿ ಜಾತೀಯ ಪ್ರಶ್ನೆಯ 'ಒಡಕುಗಳ ನಿವಾರಣಾ ಕೆಲಸಗಳು ನಡೆಯುವುವು, ೧೯೩೩ರಲ್ಲಿ ಹಿಂದೂದೇಶದಲ್ಲಿ ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡುವ ಆಲೋಚನೆಗಳೂ ಏರ್ಪಾಡುಗಳೂ ಆಗುವುವು ಅಲ್ಲದೆ ಹಿಂದೂದೇಶವು ಇಷ್ಟು ಕಾಲದಿಂದಲೂ ಕೇಳುತ್ತಿರುವ ಕೇಂದ್ರಸರಕಾರವು ದೊರೆಯಲಿಕ್ಕಿಲ್ಲ ಇದರ ಯೋಚನೆಯನ್ನು ಕೂಡಾ ಬ್ರಿಟಿಷ ಸರಕಾರವು ಸದ್ಯದಲ್ಲಿ ಮಾಡುತ್ತಿರುವ ಚಿಹ್ನೆಯು ಎಲ್ಲಿಯೂ ಕಂಡುಬರುವುದಿಲ್ಲ

— ರಾಜಿಯಾಗುತ್ತದೆಯೋ ? —

ಇಲ್ಲಿಗೆ ಬಂದಿಳಿದ ಇಂಡಿಯಾ ಲೀಗ್ ಡೆಲಿಗೇಶನ್ ಎಂಬ ನಾಲ್ವರು ಮಂದಿಗಳ ಪ್ರತಿನಿಧಿ ಸಭೆಯೊಂದು ಏನೆಲ್ಲಾ ಕೆಲಸಗಳನ್ನು ಮಾಡಲಿದೆಯೆಂದು ತಿಳಿದುಬಂದಿಲ್ಲ ಇಷ್ಟರಲ್ಲಿ ಅದೂ ಮುಂಬಾಯಿಯ ಅಧಿಕಾರಿಗಳನ್ನೂ ಇನ್ನಿತರ ದೇಶಮುಖಂಡರನ್ನೂ ಸಂದರ್ಶಿಸಿತು ವೈಸರಾಯರು, ಗಾಂಧಿ ಮೊದಲಾದವರನ್ನೂ ಭೇಟಿಯಾಗಬೇಕೆಂದು ಅದರ ಅಭಿಮತವಿದೆಯೆಂದು ತಿಳಿದುಬಂದಿದೆ ಶಾಂತಿಯ ಬಗ್ಗೆ ಇದು ಯತ್ನಿಸಬಹುದೆಂದು ಕೆಲವರೆನ್ನುತ್ತಿರುವರು ಹಾಗೂ ಹೀಗೂ ಕೊಂಗ್ರೆಸ್ಸು ಶರಣುಹೋಗುವ ಚಿಹ್ನೆಯು ತೋರಿಬರುವುದಿಲ್ಲ, ಸರಕಾರವೂ ಕೊಂಗ್ರೆಸ್ಸಿನೊಡನೆ ಮುಖಾಮುಖಿಯಾಗಿ ಸಂಧಿಯನ್ನು ಮಾಡಲೆಳಸುವ ಕುರುಹೂ ಕಂಡುಬರುವುದಿಲ್ಲ ಯಾರಾದರೂ ಮಧ್ಯಸ್ಥಿಕೆಯಿಂದಾಗಿ ಮತ್ತೇನು ನಡೆಯಲಿದೆಯೋ ಹೇಳಲಸಾಧ್ಯ ಪ್ರಥಮದಲ್ಲಿ ತಮ್ಮ ನವೀನ ರೀತಿನೀತಿಗಳಿಂದಾಗಿ ಸರಕಾರವು ರಾಜ್ಯಾಂಗರಚನೆಯನ್ನು ಬಲಪಡಿಸಿಕೊಳ್ಳುವಂತಿದ್ದರೆ ಹೊರಗಿನಿಂದ ಎಲ್ಲವೂ ಸುಮ್ಮನಸ್ಥಿತವಾದ ಮೇಲೆ ಕೆಲವು ಶರ್ತಗಳ ಮೇಲೆ ಒಳಗಿನ ರಾಜಕೀಯ ಕೈದಿಗಳ ಬಿಡುಗಡೆಯಾಗಬಹುದು.

ಅತ್ಯುತ್ಕೃಷ್ಟ ಮುದ್ರಣ ಬೇಕೆ? ಶಾರದಾ ಪ್ರೆಸ್ ಮಂಗಳೂರು, ಇಲ್ಲಿ ವಿಚಾರಿಸಿರಿ.

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ಯೆಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ್' ಅವರ ಶಿಷ್ಯರಿಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಾಸ್ತ್ರೀಯ ತಜ್ಞ ವೈದ್ಯರಿಂದ ನಡೆಯಲ್ಪಡುವ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ವಟಕ, ಅರಿಷ್ಟಾಸವಗಳು ಭಸ್ಮ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿದ್ಧತೆಯಲ್ಲಿ [illegible] ಇರುವವು ಅನುಕೂಲವುಳ್ಳವರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ಸಿಕ್ಕ ಆಹಾರದ ಕ್ರಮ, ವೃತ್ತಿ [illegible] ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಕಾಣದವರೂ ಎಂಬ [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗಿರಾಕಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ ಕ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಖದ್ದರ್ ರೇಶ್ಮೆ ಮಡಿಗಳಿಗೆ ಗಮನ ಕೊಡಿರಿ.

S U N & CO.

Choukhumba Benares City

ಮೂರು ಇನಾಮುಗಳು.



ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1 ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು ಸ್ಟ್ಯಾಂಪು ಬಾರದಿದ್ದರ್ರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ, ಕದಪಾಮ್ಡು, ಪೇಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಊಲ್ಲನ್ ಚೌಕ, ಧಾವಳಿ, ನ್ಯಾರ್ಮಡಿ, ತರ ತರದ ರುದ್ರಾಕ್ಷಿಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಖದ್ದರ್ ಮಡಿ—6 ಮೊಳ, 2 ಮೊಳ ಅಗಲ ರೂ 2ರಿಂದ ರೂ 3 ಮೊಳ 8ರಷ್ಟು 2-12-0ರಿಂದ ರೂ 4 10 ಮೊಳ, 2½ ಅಗಲ ರೂ. 4ರಿಂದ ರೂ 5 ಮೊಳ 12 + 2½ ರೂ. 5ರಿಂದ 6-8-0. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ, ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಕಂಬಾ, ಬನಾರಿಸ್ (ಕಾಶೀ)

ಮಿಶ್ರಿತದ ಎಲ್ಲವನ್ನು ಬಹಿಷ್ಕರಿಸಿ ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ.
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರಕಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ.
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ. ಆ. ದಾದರ್ ಮುಂಬಾಯಿ 14.

Dr H L. Batliwalla, Sons & Co., Ltd.
Kadell Road, P O. Dadar, Bombay, 14.
ತಂತಿ ವಿಳಾಸ— "CAVASPUR" Bombay
ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ—ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಕೇಸರಿಯವರ ಮೂರು ರತ್ನಗಳು.

ಲೋಧ್ರ —ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯೌಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಆರ್ಕ —ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ —ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಕೇಸರಿ ಕುಟೀರಂ
ಎಗ್ಮೋರ್, ಮದರಾಸು,
ಎಲ್ಲಾ ಔಷಧಿ ಮಾರಾಟದವರಲ್ಲಿ ದೊರೆಯುತ್ತದೆ

The Zandu Pharmaceutical Works, Ltd., Bombay, 14.
ದಿ ಝಾಂಡೂ ಪಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಾಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ವನಸ್ಪತಿಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ಅಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು **ಸ್ವಲ್ಪ ಕಾಲದಲ್ಲಿಯೇ** ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜೋಡಿ ರೂ 10/- ಕ್ರಯ 1ಪಾನು ಸೀಸೆ ರೂ. 2/8, ½ ಪಾ. ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು,
ತೀರ್ಥಹಳ್ಳಿ ಏಜಂಟರು.— ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು.— ಟಿ ಸಿ ನಟರಾಜ್ ಅಂಡ್‌ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು.— ಬಿ ಪೋಪಟ್‌ಲಾಲ್ ಕಂಪೆನಿ, ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ರಾಜಾರಾಮ ಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ.

ಲೇಖಕರು:—ಗಂಗಾಪ್ರಸಾದ ಉಪಾಧ್ಯಾಯ, ಎಮ್ ಎ ಅಲ್ಲಾಹಾಬಾದ್

ಅನುವಾದಕರು:—ಪಿ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ, ಮಂಗಳೂರು.

— ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು. —

ಅರ್ಥಾತ್ "ಕಾಳಿಘಾಟ್ ಅಥವಾ ಬಡಾನಗರ್ ಎಂಬಲ್ಲಿಗೆ ಹೋಗಿರಿ. ಇದು ಕಲ್ಕತ್ತೆಗೆ ಬರೇ ನಾಲ್ಕು ಮೈಲು ದೂರದಲ್ಲಿದೆ. ಇವರ (ವಿಗ್ರಹಾರಾಧಕರ ಅಥವಾ ಮೇಲಿನ ಪ್ರಶ್ನೆಮಾಡಿರುವ ಬ್ರಾಹ್ಮಣರು ನಂದಿರುವ) ಮೂರ್ತಿಯು ಎಷ್ಟು ಭಯಂಕರವಾಗಿರುತ್ತದೆಂಬುದು ವಾಚಕರಿಗೆ ಗೊತ್ತಾಗುವುದು."

ರೋಯಿಯವರ ಕಾಲದಲ್ಲಿ ಜನರು ವೇದಶಾಸ್ತ್ರಗಳ ಹೆಸರನ್ನು ಮಾತ್ರ ಕರೆಯುತ್ತಿದ್ದರು ಹೊರತು ಅದರಂತೆ ಒಬ್ಬರೂ ಆಚರಣೆಯಲ್ಲಿರಲಿಲ್ಲ ಈ ಕುರಿತು ರಾಜಾರಾಮ ಮೋಹನರಾಯರು ಅನೇಕ ಉದಾಹರಣೆಗಳನ್ನು ಕೊಟ್ಟಿರುವರು:—

(1) "Modern Brahmins, in direct opposition to their authority, allow her relations to bind the mournful and infatuated widow to the funeral pile with ropes and bamboos, as soon as she has expressed a wish to perform the dreadful sacrifice, to which the Brahmins lend ready assistance" (P 133)

"ಒಬ್ಬ ಸ್ತ್ರೀಯು ವಿಧವೆಯಾದ ಕೂಡಲೇ ಅವಳು ದುಃಖಿಸುತ್ತಿರುವ ಸಮಯದಲ್ಲಿಯೇ ಬ್ರಾಹ್ಮಣರು ಅವಳಿಂದ ತಾನು ಸಹಗಮನಮಾಡಿಸುತ್ತೇವೆ" ಎಂಬುದಾಗಿ ಹೇಳಿಸುತ್ತಾರೆ. ಈ ಮಾತು ಅವಳ ಬಾಯಿಂದ ಹೊರಟ ಕೂಡಲೇ ಅವಳ ಸಂಬಂಧಿಕರೊಡನೆ ಹೇಳಿ ಅವಳನ್ನು ಅವಳ ಪತಿಯ ಚಿತೆಯೊಡನೆ ಕಟ್ಟಿಬಿಡುತ್ತಾರೆ ಇದು ಸರ್ವಥಾ ಶಾಸ್ತ್ರವಿರುದ್ಧವಾಗಿರುತ್ತದೆ

(2) Yet the sale of female children under pretence of marriage is practised by nearly two thirds of the Brahmins of Bengal and Tripoot as well as by their followers generally (P 133)

ಕನ್ಯೆಯರ ವಿವಾಹ ಸಮಯದಲ್ಲಿ ಹಣ ತೆಗೆದುಕೊಳ್ಳುವಂಥಾದ್ದು ಶಾಸ್ತ್ರ ವಿರೋಧವಾಗಿರುವುದಾದರೂ ಬಂಗಾಲ ಮತ್ತು ತಿರುಪುತದ ಬ್ರಾಹ್ಮಣರಲ್ಲಿ ಮೂರರಲ್ಲಿ ಎರಡು ಪಾಲು ಜನರೂ ಮತ್ತು ಅವರ ಅನುಯಾಯಿಗಳೂ ವಿವಾಹದ ನೆವದಿಂದ ಕನ್ಯೆಯರನ್ನು ಮಾರಿಯೇ ಬಿಡುತ್ತಾರೆ (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೋಗವು "ವರದಕ್ಷಿಣೆ" ಎಂಬ ಹೆಸರಲ್ಲಿ ಪ್ರಬಲವಾಗಿದೆ ಈ ಕುರಿತು ಒಂದು ಪ್ರತ್ಯೇಕ ಪುಸ್ತಕವು ನಮ್ಮ ಗ್ರಂಥದ ಮಾಲೆಯಲ್ಲಿದೆ ಅನುವಾದಕ)

(3) Some of them marry thirty or forty women, either for the sake of money got with them at marriage or to gratify brutal inclinations. (P. 133)

ತಮ್ಮಲ್ಲಿರುವ ಪಾಶವಿಕ ವೃತ್ತಿಯಲ್ಲಿ ಸಂತೃಪ್ತರಾಗಲಿಕ್ಕೂ, ಧನ ಪಿಪಾಸೆಯನ್ನು ಪೂರ್ತಿಗೊಳಿಸಲಿಕ್ಕೆ ಕೆಲವರು ಮೂವತ್ತು ಯಾ ನಲ್ವತ್ತು ಮಂದಿ ಸ್ತ್ರೀಯರನ್ನು ಕೂಡಾ ಮದುವೆಮಾಡಿಕೊಳ್ಳುತ್ತಾರೆ.

(4) Honour is paid exclusively to certain families of Brahmins such as the Koslins etc, however void of knowledge and principle they may be. (P. 133).

ಶಾಸ್ತ್ರಗಳಲ್ಲಿಯಾದರೂ ಗುಣವಂತನಾದ ಬ್ರಾಹ್ಮಣನ ಪೂಜೆ (ಸತ್ಕಾರ)ಮಾಡಬೇಕೆಂದು ಬರೆದಿರುವುದು. ಆದರೆ ಈ ಜನರುಗಳು ಬ್ರಾಹ್ಮಣರ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ (ಬೇಕಾದರೆ ಅವನು ಅನ್ನದ ಹೋಟೇಲಿರಲಿ, ಯಾ ಇದಕ್ಕಿಂತಲೂ ಕೆಳತರಗತಿಯಲ್ಲಿದ್ದು ತುಚ್ಛ ಕರ್ಮಗಳನ್ನು ಮಾಡುತ್ತಿರಲಿ) ಬ್ರಾಹ್ಮಣರು! ನಮ್ಮ ಮಾರ್ಗದರ್ಶಕರು! ಎಂದು ಅವರಿಗೆ ಸತ್ಕಾರಮಾಡುತ್ತಾರೆ.

ಈ ಎಲ್ಲಾ ಅಭಿಪ್ರಾಯಗಳನ್ನು ನೋಡುವಲ್ಲಿ ರೋಯಿಗಳು ಅವೈದಿಕವಾದ ಮೂರ್ತಿಪೂಜೆಯನ್ನು ಮಾತ್ರ ಖಂಡಿಸದೆ ಸಮಾಜದ ಇತರ ಸುಧಾರಣೆಗಳಲ್ಲಿ ಚೆನ್ನಾಗಿ ಪ್ರಯತ್ನಮಾಡಿದ್ದರೆಂಬುದು ನಮ್ಮೆಲ್ಲರಿಗೆ ಖಚಿತವಾಗುತ್ತದೆ ಇವರು ಸರಕಾರದೊಡನೆ ಬಹಳವಾಗಿ ಪ್ರಯತ್ನಿಸಿ ಘನ ಘೋರವಾದ ಅದೊಂದು ಸಹಗಮನ ಪದ್ಧತಿಯನ್ನು ನಿಲ್ಲಿಸಿಬಿಟ್ಟರು. ಇವರು ಈ ಕಾರ್ಯಕ್ಕೆ ಬೇಕಾಗಿ ಮಾಡಿದ ಪ್ರಯತ್ನದಿಂದಾಗಿ, ಇದರ ವಿರೋಧಿಗಳು ಸಹಗಮನ ಪದ್ಧತಿಯನ್ನು ತೆಗೆಯಬಾರದಾಗಿ ಮಾಡಿಕೊಂಡ ಅರ್ಜಿಯು ವಿಲಾಯತಿಯಲ್ಲಿ ತಳ್ಳಿಹಾಕಲ್ಪಟ್ಟಿತು ಇದಕ್ಕಾಗಿ ರಾಮಮೋಹನರು ಇಂಗ್ಲೆಂಡಿಗೂ ಹೋಗಿ ಅಲ್ಲಿಯ ಸರಕಾರಕ್ಕೆ ಸಹಗಮನ ಪದ್ಧತಿಯು ದುಷ್ಟ ಪದ್ಧತಿಯೆಂಬುದನ್ನು ತೋರಿಸಿಕೊಟ್ಟರು

ರಾಮಮೋಹನ ರೋಯಿಗಳು ಕ್ರೈಸ್ತಮತವನ್ನೇ ಅನುಮೋದಿಸುತ್ತಾರೆಂದು ಕೆಲವರ ಅಂಬೋಣವಿದೆ ಆದರೆ ಇದು ಸರ್ವಥಾ ಸರಿಯಲ್ಲ ಅವರು ಕ್ರೈಸ್ತಮತಕ್ಕೆ ಎಷ್ಟು ವಿರೋಧಿಗಳಾಗಿದ್ದರೆಂಬುದಕ್ಕೆ ಇಲ್ಲಿಯೇ ಕೆಲವು ಉದಾಹರಣೆಗಳನ್ನು ಕೊಡೋಣ

"ಶ್ರೀರಾಮಪುರ ಎಂಬಲ್ಲಿ ಕ್ರೈಸ್ತರ ಒಂದು ಮಿಶನ್ ಛಾಪಖಾನೆ (ಮಂಗಳೂರಲ್ಲಿ ಬಾಸೆಲ್ ಮಿಶನ್ ಪ್ರೆಸ್ ಇದ್ದ ಹಾಗೆ) ಯು ತೆರೆಯಲ್ಪಟ್ಟು ಅಲ್ಲಿಂದ "ಸಮಾಚಾರ ದರ್ಪಣ" ಎಂಬ ಒಂದು ಪತ್ರಿಕೆಯು ಪ್ರಕಟವಾಗುತ್ತಿತ್ತು ಅದರ ೧೮೨೧ನೇ ಜುಲಾಯಿ ೧೪ನೇ ತಾರೀಕಿನ ಸಂಚಿಕೆಯಲ್ಲಿ ಯಾರೋ ಒಬ್ಬನು ಹಿಂದೂ ಶಾಸ್ತ್ರಗಳ ಕುರಿತು ಬಹಳ ಆಕ್ಷೇಪಗಳನ್ನು ಮಾಡಿದ್ದನು ರಾಮಮೋಹನರಾಯರಲ್ಲಿ ಹಿಂದೂ ಧರ್ಮ, ಹಿಂದೂ ಶಾಸ್ತ್ರ ಮತ್ತು ಹಿಂದೂ ಜಾತಿಯ ಮೇಲೆ ಪ್ರಬಲವಾದ ಪ್ರೇಮವಿದ್ದುದರಿಂದ ತನ್ನ ಧರ್ಮದ ಮೇಲೆ ಬರುತ್ತಿರುವ ಆಕ್ಷೇಪಗಳನ್ನು ಅವರು ಸಹಿಸುತ್ತಿದ್ದಿಲ್ಲ ಆದುದರಿಂದ ಆ ಪತ್ರದಲ್ಲಿ ಬಂದ ಆಕ್ಷೇಪಗಳಿಗೆಲ್ಲಾ ಅವರು (Brahmanical Magazine) ಎಂಬ ಪತ್ರದಲ್ಲಿ ಸರಿಯಾಗಿ ಉತ್ತರ ಕೊಟ್ಟಿದ್ದಲ್ಲದೆ ಮಳಲಲ್ಲಿ ಕಟ್ಟಿದ ದಂಡೆಯಂತಿರುವ ಕ್ರೈಸ್ತ ಧರ್ಮವನ್ನು ಬುಡ ಸಹಿತ ಖಂಡನೆ ಮಾಡಿದರು ಕ್ರೈಸ್ತರ ಕುರಿತು ರಾಮಮೋಹನರಾಯರು ಏನು ಬರೆಯುತ್ತಾರೆಂದರೆ "ಕೆಲವು ಸಮಯಗಳಿಂದ ಕ್ರೈಸ್ತರು ಹಿಂದೂ ಮತ್ತು ಮಹಮ್ಮದೀಯರನ್ನು ಕ್ರೈಸ್ತರನ್ನಾಗಿ ಮಾಡುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ ಇದಕ್ಕಾಗಿ ಅವರು ಮೂರು ವಿಧದ ಸಾಧನೆಗಳ ಅವಲಂಬನೆ ಮಾಡುತ್ತಾರೆ. ಮೊದಲನೆಯದಾಗಿ ಹಿಂದೂ ಮತ್ತು ಮಹಮ್ಮದೀಯ ಧರ್ಮಕ್ಕೆ ವಿರುದ್ಧವಾಗಿ ಪುಸ್ತಕಗಳನ್ನು ಪ್ರಕಟಿಸುವುದು. ಹಿಂದೂ ಜನರ ದೇವಿ ದೇವತೆಗಳಿಗೆ ಪರಿಹಾಸ್ಯ ಮಾಡುವುದು, ಎರಡನೆಯದಾಗಿ ಹಿಂದೂಸ್ಥಾನದ ಜನರ ಮನೆಬಾಗಿಲಲ್ಲಿ ನಿಂತುಕೊಂಡು ತಮ್ಮ ಧರ್ಮದ ಶ್ರೇಷ್ಠತೆಯನ್ನು ಹೊಗಳುವುದು ಮತ್ತು ಇತರ ಧರ್ಮಗಳನ್ನು ತಿರಸ್ಕಾರ ಮಾಡುವುದು. [ಸಶೇಷ.]

"ಸ್ವದೇಶಿ" ಸಂದೇಶ.

ಸ್ವಜನರನ್ನೂ, ಸ್ವಧರ್ಮವನ್ನೂ ಸ್ವ ಅರ್ಥವನ್ನೂ ಸ್ವಾಭಿಮಾನವನ್ನೂ ದೇಶಾಭಿಮಾನವನ್ನೂ, ದೇವಪ್ರೀತಿಯನ್ನೂ, ದೇಹರಕ್ಷಣೆಯನ್ನೂ ಶಿದ್ಧಿಯನ್ನೂ ಶೀಲವನ್ನೂ, ಶುದ್ಧಿಯಾಗಿರಿಸಿ ಅಭಿವೃದ್ಧಿಮಾಡುವುದೇ

ಸ್ವದೇಶಿಯು !

ಆದುದರಿಂದ ಹಿಡಿಕೂಳಿಗೂ ಗತಿಯಿಲ್ಲದ ನಮ್ಮ ಅನೇಕ ಮಂದಿ ದೇಶಬಾಂಧವರು ಹೊಟ್ಟೆ ಹಸಿವಿನಿಂದ ಬಾತೊರೆಯುತ್ತಿರುವಾಗ 'ಸ್ವದೇಶಿ'ಯನ್ನು ಮೂಲಮಂತ್ರವಾಗಿಟ್ಟು ಮನಃಪೂರ್ವಕವಾಗಿ ಜಪಿಸುತ್ತಿರುವುದು ಪ್ರತಿಯೊಬ್ಬನ ದಿನಚರಿಯಾಗಲಿ ಅದರಿಂದ ಬಡವರ ಉದ್ಧಾರವಾಗುವುದು, ಬಡವರು ಉದ್ಧಾರವಾದರೆ ಗ್ರಾಮೋದ್ಧಾರವಾಗುವುದು ಗ್ರಾಮೋದ್ಧಾರವಾದರೆ ದೇಶೋದ್ಧಾರವಾಗುವುದು

ಸ್ವದೇಶಿಯೇ ಸ್ವರಾಜ್ಯದ ಅಡಿಗಲ್ಲು !!!

ಕಾ ಮ ಶೆ

೯ನೇ ಪುಟದಿಂದ ಮುಂದುವರಿದುದು.

ಕುಂಬಳೆ:— ಹಲವು ವರ್ಷಗಳಲ್ಲಿ ಡಿಸ್ಟ್ರಿಕ್ಟ್ ಮತ್ತು ತಾಲೂಕುಬೋರ್ಡು ಮೆಂಬರರಾಗಿದ್ದು ಅನುಭವಶಾಲಿಗಳಾದ ಶ್ರೀಮಾನ್ ಮಹಮ್ಮದ್ ಶೆರೂಲ್ ಸಾಹೇಬ್ ಬಹದ್ದೂರ್‌ರವರು ಇದೇ ಬರುವ ತಾ. ೨೬—೯—೧೯೨೮ರಲ್ಲು ಜರಗುವ ಚುನಾವಣೆಯಲ್ಲಿ ಕುಂಬಳೆ ಸರ್ಕಲಿನಿಂದ ಡಿಸ್ಟ್ರಿಕ್ಟ್‌ಬೋರ್ಡಿಗೂ, ಪೆರಡಾಲ ಸರ್ಕಲಿನಿಂದ ತಾಲೂಕುಬೋರ್ಡಿಗೂ ಉಮೇದ್ವಾರರಾಗಿ ನಿಂತಿರುವರು, ದೇಶಹಿತದೃಷ್ಟಿಯಿಂದ ಸಾರ್ವಜನಿಕ ಸಂಸ್ಥೆಗಳಲ್ಲಿ ಸೇರಿ ಜನಸೇವೆಯನ್ನು ಮಾಡಿರುವ ಹಾಗೂ ಮಾಡಬೇಕೆಂದಿರುವ ಶ್ರೀಯುತ ಶೆರೂಲರವರಿಗೆ ಈ ಪ್ರಾಂತದ ಮತದಾರರೆಲ್ಲರೂ ತಮಗಿರುವ ಓಟನ್ನು ಕೊಟ್ಟು ಪ್ರೋತ್ಸಾಹಿಸಿ ಸತ್ಪಾತ್ರದಾನದ ಕೀರ್ತಿಭಾಜನರಾಗಬೇಕಾಗಿ ಈಳಂತೋಡಿ ಕೃಷ್ಣಭಟ್ಟ, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಪೆರ್ಮುಖ ಈಶ್ವರ ಭಟ್ಟ, ಪುತ್ತಿಗೆ ಪಟೇಲ್ ತ್ಯಾಂಪಣ್ಣ ರೈ, ಕೆ ಆಜಿಲ ರೈ, ಕಲ್ಲಕರಿಯ, ಜೆಡೆಯ ಕಲ್ಲು ಅಸನಾದೆ ಬ್ಯಾರಿ, ಇವರು ಸೂಚಿಸಿರುವರು

ಸುರತ್ಕಲ್ — ಇದೇ ತಾ ೨೫ನೇಯ ಗುರುವಾರ ೫ ಗಂಟೆಗೆ 'ಶ್ರೀ ಕೃಷ್ಣ ಲೈಬ್ರರಿ'ಯ ವರ್ಧಂತ್ಯುತ್ಸವ ಹಾಗೂ ಶ್ರೀ ಕೃಷ್ಣ ಜಯಂತೀ ದಿನಾಚರಣೆಯು ಸಮಾರಂಭವು ರಾ ಶ್ರೀ ಇಧ್ಯ ಪದ್ಮನಾಭಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ವರದಿ, ಭಾಷಣಗಳೂ, ಅಧ್ಯಕ್ಷರ ಭಾಷಣ, ಮಂಗಲಗೀತೆ, ತಾಂಬೂಲ ಸತ್ಕಾರಗಳ ಕಾರ್ಯಕ್ರಮಗಳೂ ಜರಗಿದುವು

ಕಾರ್ಕಳ: — ಕಾರ್ಕಳ ತಾಲೂಕುಬೋರ್ಡಿನ ಚುನಾವಣೆಗೆ ಶ್ರೀಯುತರಾದ ಕೆ ಲಕ್ಷ್ಮಣ ಕುಡ್ವ ಮತ್ತು ಎಸ್ ನಂಜಪ್ಪ ಶೆಟ್ಟರೂ, ಜಿಲ್ಲಾಬೋರ್ಡಿಗೆ ಮಂಜಪ್ಪ ಅಧ್ಯಂತಾಯ ಮತ್ತು ಅನಂತರಾಜ ಹೆಗ್ಡೆಯವರೂ ಕಾರ್ಕಳ ಸರ್ಕಲಿನ ಪರವಾಗಿ ನಿಂತಿರುವರು

ದಿವಂಗತ ಶಿವಪ್ಪ ಹೆಗ್ಡೆಯವರ ಆಡಳಿತೆಯಲ್ಲಿದ್ದ ಕುಕ್ಕುಂದೂರು ಶ್ರೀ ಕೃಷ್ಣ ದೇವಸ್ಥಾನದ ಕಡೆಯಿಂದ ಕೆಲವು ವರ್ಷಗಳಿಂದ ಅತ್ಯಂತ ವಿಜೃಂಭಣೆಯಿಂದ ಇಲ್ಲಿ ಆಗುತ್ತಿದ್ದ ವಿಟ್ಲಪಿಂಡಿ ಉತ್ಸವವು ಈ ವರ್ಷ ಮಾತ್ರ ಯಾವ ಕಾರಣದಿಂದಲೋ ನಡೆಯಲಿಲ್ಲ, ಬಹುಶಃ ಬರಕತ್ತ ಕಾಲದಲ್ಲಿ ಮಳೆಬಾರದೆ ಕಠಿಣ ಬಿಸಿಲು ಬಿದ್ದುದರ ಕಾರಣವಿರಬಹುದೇನೋ?

ಹಿಂದೆ ಪ್ರಕಟವಾದಂತೆ ಈ ತಾಲೂಕುಬೋರ್ಡಿನ ತರಬೇತು ಹೊಂದಿದ ಉಪಾಧ್ಯಾಯರ ಸಭೆಯೊಂದು ನಡೆದು ಸಂಬಳ ಕಡಿತವನ್ನು ವಿರೋಧಿಸಿ ಅರ್ಜಿ ದಫಾಲಿಗಳನ್ನು ಮಾಡಬೇಕೆಂದು ನಿರ್ಣಯಗಳಾದುವು

ಹಿಂದೆ ಪ್ರಕಟಿಸಿದ ಪ್ರಕಾರ ಕಾರ್ಕಳ ಹಿಂದೀ ಪುಸ್ತಕಾಲಯಕ್ಕೆ ೭—೮—೧೯೨೮ರ ವರೆಗೆ ಸಹಾಯವಾಗಿ ಬಂದ ೧೫-೧೪—೦ ಗಳಲ್ಲದೆ ಆ ದಿನದಿಂದ ೨೮ ೯ ೧೯೨೮ರ ವರೆಗೆ ಕೆಳಗಿನ ಸದ್ಗೃಹಸ್ಥರಿಂದ ಹಣ ಸಹಾಯ ಒದಗಿದೆ

೧ ಶ್ರೀ ಭವಾನಿಶಂಕರ ರಾಯರು ಒಂದು ರೂಪಾಯಿಯಂತೆಯೂ, (೧ ಕೆ ಗೋಪಾಲಕೃಷ್ಣ ರಾಯರು ೨ ಬಿ ರಾಮಕೃಷ್ಣ ನಾಯಕ, ೩ ಜನಾರ್ಧನ ವೈಕುಂಠ ಶೆಣೈಯವರು ಎಂಟಾಣೆಯಂತೆಯೂ,) ೧. ಕೆ ವೆಂಕಟೇಶ ಪೈ ೨ ಒಬ್ಬ ಹಿತಚಿಂತಕರು, ೩ ಕೆ ಮುತ್ತಯ ಶೆಟ್ಟಿಗಾರರು ನಾಲ್ಕಾಣೆಯಂತೆಯೂ, ೧ ಬಿ ರಾಮ ರಾವ್, ೨ ಅಜೆಕಾರಿನ ಒಬ್ಬ ಸ್ನೇಹಿತರು ಎರಡಾಣೆಯಂತೆಯೂ, ೧ ರಂಗಯ್ಯ ಶೆಣೈ ೨ ಸ್ನೇಹಿತರೊಬ್ಬರು ಒಂದಾಣೆಯಂತೆಯೂ ಹಣ ಸಹಾಯಮಾಡಿರುವರು. ಇವರಿಗೆ ನಮ್ಮ ಕೃತಜ್ಞತೆಗಳೆಂದೂ, ಉಳಿದ ಮಹನೀಯರೂ ಉದಾರ ಧನಸಹಾಯ ಮಾಡಬೇಕೆಂದೂ, ಒಟ್ಟು ವಸೂಲಾದ ಹಣವು ೧೬ ೭ ೦ ಎಂದೂ ಕಾರ್ಕಳ ಹಿಂದೀ ಪ್ರೇಮಿ ಮಂಡಲದ ಪರವಾಗಿ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

ಬಂಟ್ವಾಳ — ಮಂಗಳೂರು ತಾಲೂಕುಬೋರ್ಡು ಮೆಂಬರಿಕೆಗೆ ಉಮೇದ್ವಾರರಾಗಿದ್ದ ಇಬ್ಬರು ಉಮೇದ್ವಾರರಲ್ಲಿ ಬಂಟ್ವಾಳ ದೇವಸ್ಥಾನದ ಒಂದನೇ ಮೊಕ್ತೇಸರರಾದ ರಾ। ವೆಂಕಟೇಶ ಸರ್ವೋತ್ತಮ ಬಾಳಿಗರು ವಿರಕ್ತಭಾವವನ್ನು ತಾಳಿ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದುದರಿಂದ ರಾ ಗುಂಡಿಕೋಡಿ ಗಣಪತಿ ಕಮ್ತಿಯವರು ಪ್ರತಿಸ್ಪರ್ಧೆಯಿಲ್ಲದೆ ಚುನಾಯಿಸಲ್ಪಟ್ಟಿರುವರು

ಡಿಸ್ಟ್ರಿಕ್ಟ್‌ಬೋರ್ಡಿಗೆ ಬಂಟವಾಳದಿಂದ ಮಾಜಿ ಇಂಜನಿಯರ್ ರಾ। ಶ್ರೀನಿವಾಸ ಬಾಳಿಗರು ಪ್ರತಿಸ್ಪರ್ಧೆಯಿಲ್ಲದೆ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು.

ಪಾಣೆಮಂಗಳೂರು: — ರಾ। ನರಿಕೊಂಬು ರಾಮರಾಯರು ಈ ಸರ್ಕಲಿನ ಮಂಗಳೂರು ತಾಲೂಕುಬೋರ್ಡು ಮೆಂಬರರಾಗಿ ಪ್ರತಿಸ್ಪರ್ಧೆಯಿಲ್ಲದೆ ಚುನಾಯಿಸಲ್ಪಟ್ಟರು ರಾ। ಎ ಬಿ. ಶೆಟ್ಟಿ ಡಿಸ್ಟ್ರಿಕ್ಟ್‌ಬೋರ್ಡು ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು.

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್
ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೮೧ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ೩೦೯ ಕೋಟಿ ರೂ, ಗಳಿಗಿಂತ ಹೆಚ್ಚಿಗಿರುವದು, ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ. ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಕಗಳ ಮೇಲಿನ ಕಾಯ್ದೆಶೀರ ಕ್ಲೇಮುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ.

ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೆರವಾನಜಿ ಆ್ಯಂಡ್ ಸನ್ಸ, ಧಾರವಾಡ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager
The South Indian General Assurance Co Ltd
64, 3rd Cross Road Srirampur Extn
Malleswaram Post, BANGALORE
OR
The Mnaginga Agents,
The S I, G A Co Ltd
55 Poonamllee High Road, Kilpauk, MADRAS

Bhandary Damodhar Shanbhag & Co,
General Merchants, COONDAPOOR, S. K

ನಮ್ಮಲ್ಲಿ ಶಾಲಾ ಹುಡುಗರಿಗೆ ಬೇಕಾಗುವ ಎಕ್ಸರಸ್ಯಾಜು ಪುಸ್ತಕಗಳೂ, ಲೇಖನ ಸಾಮಾಗ್ರಿಗಳೂ, ಜ್ಞಾಪಕ ಪುಸ್ತಕಗಳೂ, ಇಂಡಿಯನ್ ಇಂಕ್ ಸ್ಟಿಕ್ ಮತ್ತು ವಾಟರ್ ಕಲರ್ ಬೋಕ್ಸ್‌ಗಳೂ ಕಡಿಮೆ ಕ್ರಯಕ್ಕೆ ಸಿಗುತ್ತವೆ

ಡೈರಿ, ಪಂಚಾಂಗ, ಎಲ್ಲಾ ತರದ ಕೋರ್ಟು ಫೋರ್ಮು, ಪರ್ಮಿಟು, ಜಾಲಗೇಣಿ ಎದುರ್ಮುರಿ ಫೋರ್ಮುಗಳೂ, ಗೇಣಿ ಪಾವತಿ ರಶೀದಿ, ಚಿಟ್ಟಿ ಫಂಡು ರಶೀದಿ, ವರ್ಗ ಊಳಿಗ ಪುಸ್ತಕಗಳೂ, ಮಿತವಾದ ಕ್ರಯಕ್ಕೆ ಮಾರಲ್ಪಡುವವು ಸೆಂಟ್ಸ್, ಹೇರ್ ಒಯಿಲ್ಸ್, ರೋಜವಾಟರ್ಸ್, ಸಾಜಾವ ನಕಲಿ ಗಂಧದ ಎಣ್ಣೆ, ಉತ್ತಮ ತರದ ಊದು ಬತ್ತಿಗಳು, ಎಲ್ಲಾ ನಮೂನೆ ಸಾಬೂನುಗಳು, ಒಳ್ಳೇ ತರದ ಕಾಬೂಲಿ ಹಿಂಗು, ಎಲ್ಲಾ ತರದ ಗ್ಲಾಸ್‌ವೇರ ಮತ್ತು ಕಟ್ಲರಿ ಸಾಮಾನುಗಳೂ, ಬ್ಲೇಕ್‌ಬರ್ಡ್, ಸ್ವಾನ್ ಮತ್ತು ನೆಪ್ಚೂನ್ ಪೇನುಗಳೂ, ಸಿಂಗರ್ ಹೊಲಿಯುವ ಯಂತ್ರಕ್ಕೆ ಉಪಯೋಗಿಸುವ ತರತರದ ಸೂಜಿಗಳು ವಗೈರೆ ಕಡಿಮೆ ದರಕ್ಕೇನೇ ಪಡೆಯಬಹುದು

ಮೆಟಲಮ್, ಟಿಲ್ಕೊ, ಓಸ್ರ, ಸಿಗ್ನಲ್, ಹಾಫ್ ಮೆಟಲಮ್, ಇಂಗ್ಲೀಷ್ ಮೇಕ್ ಯೆವರೆಡಿ, ಹೇಂಡ್ ಲೇಂಪ್ ಮುಂತಾದ ಅನೇಕ ನಮೂನೆಯ ಇಲೆಕ್ಟ್ರಿಕ್ ದೀಪಗಳೂ, ಅವಕ್ಕೆ ಉಪಯೋಗಿಸುವ, ಕೊಹಿನೂರ್, ಡ್ಯಾಮನ್, ಕಾಷಾ, ನೆಟಲಮ, ಡೇಫಾ, ಬ್ರಿಟೆನಿಯಾ, ಸೋಲಾರ್, ಸ್ಟ್ರೊ ಮೊದಲಾದ ನಮೂನೆವಾರು ಬೇಟ್ರಿಗಳೂ, ಎಲ್ಲಾ ತರಗತಿಯ ಬಲ್ಬುಗಳೂ, ಯಾವಾಗಲೂ ಸುಲಭ ಕ್ರಯಕ್ಕೆ ದೊರೆಯುತ್ತವೆ

ಪೆರಿ ಎಂಡ್ ಕಂಪೆನಿಯ ಪೆಪ್ಪರ್‌ಮೊಟುಗಳೂ, ಜೆಮ್ ಬಿಸ್ಕುಟುಗಳೂ, ರಖಮಾಗಿಯೂ, ಚಿಲ್ಲರೆಯಾಗಿಯೂ ಮಿತವಾದ ಕ್ರಯಕ್ಕೆ ಪಡೆಯಬಹುದು

ವೆಸ್ಟ್ ಎಂಡ್ ಕಂಪೆನಿಯ ಪೋಕೆಟ್ ವಾಚುಗಳೂ, ಇತರ ಕಂಪೆನಿಗಳ ಲೀವರ್ ಸಿಲಿಂಡರ್ ಮೂವೆಂಟಿನ ಪೋಕೇಟ್ ಮತ್ತು ರಿಷ್ಟ್ ವಾಚುಗಳೂ, ಎಲಾರಂ ಮತ್ತು 'ಬಿ' ಟ್ಯಾಂ ಪೀಸುಗಳೂ, ರೋಲ್ಡ್ ಗೋಲ್ಡ್ ಮತ್ತು ನಿಕ್ಕಲ್ ಗಿಲ್ಟಿನ ಪೋಕೇಟ್ ಮತ್ತು ರಿಷ್ಟ್ ವಾಚಿನ ಚೈನುಗಳೂ, ರಿಷ್ಟ್ ವಾಚಿನ ಛಾಬ್ಬು ಸಿಲ್ಕ ಮತ್ತು ಲೆದರ್ ಸ್ಟ್ರೇಪುಗಳೂ, ಅದರ ಎಲ್ಲಾ ತರದ ಉಪಕರಣಗಳೂ ಕಂಪೆನಿಯ ಕ್ರಯಕ್ಕೆ ಕಿಂಚಿತ್ ಮುನಾಫೆಯ ಮೇಲೆ ಮಾರಲ್ಪಡುತ್ತವೆ

ವಿಳಾಸ — **ಭಂಡಾರಿ ಧಾಮೋದರ ಶಾನುಭಾಗ ಎಂಡ್ ಕೋ.**
ಜನರಲ್ ಮರ್ಚೆಂಟ್ಸ್, ಕುಂದಾಪುರ, ದ ಕ.

ಮೂಲವ್ಯಾಧಿ.

ರಕ್ತ ಅಥವಾ ಕಣ್ಣಸ್ರವಾದ ಆಕ್ಷಂತ ತುರಿಯುದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಔಷಧಿ ಸೇವನೆಮಾಡುವುದರಿಂದ ಜಾದೂವಿನಂತೇ ಪರಿಣಾಮವಾಗುವುದು. ಮೂರು ದಿವಸಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ. ೨—೦—೦.

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ಧೀಪನ ತೇಲ ಅಮೋಘ ಅಸ್ತ್ರವಿದೆ. ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೨

ವಿಳಾಸ — **ಶಕ್ತಿಸುಧಾ ಕಾರ್ಯಾಲಯ.**
23 ಕಾಂಬಾರವಾಡ 4ನೇ ಗಲ್ಲಿ
ಮುಂಬಯಿ.

ಕೊ-ಒಪರೇಟಿವ್ ಸೊಸ್ಯಾಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ತ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ ಮತ್ತು ನೀತಿಬೋಧೆ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಚಿಕ್ಕ ಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಏಹಿಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್
ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಪ್ಲೇಂಟರರಿಗೂ, ತೋಟದವರಿಗೂ
ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ALLIANZ UND STUTTGARTER
Life Insurance Bank, Ltd.

ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಸೂರೆನ್ಸ್
ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ [illegible]ರಲ್ಲಿ ಸ್ಥಾಪಿಸಲ್ಪಟ್ಟಿದು.)

ಒಟ್ಟು ವಿಮಾ ಹಣವು ೨೦೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕಾಯ್ದುಪಟ್ಟಿ ಕೇವುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ. ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೆರವಾನಜಿ ಆ್ಯಂಡ್ ಸನ್ಸ, ಧಾರವಾಡ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್‌ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager
The South Indian General Assurance Co Ltd
64, 3rd Cross Road, Srirampur Extn
Malleswaram Post BANGALORE

OR

The Mnaginga Agents,
The S I, G A Co Ltd
55 Poonamllee High Road, Kilpauk MADRAS

Bhandary Damodhar Shanbhag & Co,
General Merchants, COONDAPOOR S K

ನಮ್ಮಲ್ಲಿ ಶಾಲಾ ಹುಡುಗರಿಗೆ ಬೇಕಾಗುವ ಎಕ್ಸರಸೈಜು ಪುಸ್ತಕಗಳೂ, ಲೇಖನ ಸಾಮಾಗ್ರಿಗಳೂ, ಜ್ಞಾಪಕ ಪುಸ್ತಕಗಳೂ, ಇಂಡಿಯನ್ ಇಂಕ್‌ಸ್ಟಿಕ್ ಮತ್ತು ವಾಟರ್ ಕಲರ್‌ಬೋಕ್ಸ್‌ಗಳೂ ಕಡಿಮೆ ಕ್ರಯಕ್ಕೆ ಸಿಗುತ್ತವೆ

ಡೈರಿ, ಪಂಚಾಂಗ, ಎಲ್ಲಾ ತರದ ಕೋರ್ಟು ಫೋರ್ಮು, ಪರ್ಮಿಟು, ಚಾಲಗೇಣಿ ಎದುರ್ನುಡಿ ಫೋರ್ಮುಗಳೂ, ಗೇಣಿ ಪಾವತಿ ರಶೀದಿ, ಚಿಟ್ಟಿ ಫಂಡು ರಶೀದಿ, ವರ್ಗ ಊಳಿಗ ಪುಸ್ತಕಗಳೂ, ಮಿತವಾದ ಕ್ರಯಕ್ಕೆ ಮಾರಲ್ಪಡುವವು ಸೆಂಟ್ಸ್, ಹೇರ್ ಒಯಿಲ್ಸ್, ರೋಜವಾಟರ್ಸ್, ಸಾಜಾವ ನಕಲಿ ಗಂಧದ ಎಣ್ಣೆ, ಉತ್ತಮ ತರದ ಊದುಬತ್ತಿಗಳು, ಎಲ್ಲಾ ನಮೂನೆ ಸಾಬೂನುಗಳು, ಒಳ್ಳೇ ತರದ ಕಾಬೂಲಿ ಹಿಂಗು, ಎಲ್ಲಾ ತರದ ಗ್ಲಾಸ್‌ವೇರ ಮತ್ತು ಕಟ್ಲರಿ ಸಾಮಾನುಗಳೂ, ಬ್ಲೇಕ್‌ಬರ್ಡ್, ಸ್ವಾನ್ ಮತ್ತು ನೆಪ್ಚೂನ್ ಪೇನುಗಳೂ, ಸಿಂಗರ್ ಹೊಲಿಯುವ ಯಂತ್ರಕ್ಕೆ ಉಪಯೋಗಿಸುವ ತರತರದ ಸೂಜಿಗಳು ವಗೈರೆ ಕಡಿಮೆ ದರಕ್ಕೇನೇ ಪಡೆಯಬಹುದು

ಪೆಟಲಮ್, ಟಿಲ್ಲೊ, ಟೊರ್ಚ, ಸಿಗ್ನೆಲ್, ಹಾಫ್ ಪೆಟಲಮ್, ಇಂಗ್ಲೀಷ್ ಮೇಕ್ ಯೆವರೆಡಿ, ಹೇಂಡ್ ಲೇಂಪ್ ಮುಂತಾದ ಅನೇಕ ನಮೂನೆಯ ಇಲೆಕ್ಟ್ರಿಕ್ ದೀಪಗಳೂ, ಅವಕ್ಕೆ ಉಪಯೋಗಿಸುವ, ಕೊಹಿನೂರ್, ಡ್ಯಾಮನ್, ಕಾಷಾ, ಪೆಟಲಮ, ಡೇಫಾ, ಬ್ರಿಟೆನಿಯಾ, ಸೋಲಾರ್, ನ್ಯೂ ಮೊದಲಾದ ನಮೂನೆವಾರು ಬೆಟ್ರಿಗಳೂ, ಎಲ್ಲಾ ತರಗತಿಯ ಬಲ್ಬುಗಳೂ, ಯಾವಾಗಲೂ ಸುಲಭ ಕ್ರಯಕ್ಕೆ ದೊರೆಯುತ್ತವೆ

ಪೆರಿ ಎಂಡ್ ಕಂಪೆನಿಯ ಪೆಪ್ಪರ್‌ಮಿಂಟುಗಳೂ, ಜಿಮ್ ಬಿಸ್ಕುಟುಗಳೂ, ರಖವಾಗಿಯೂ, ಚಿಲ್ಲರೆಯಾಗಿಯೂ ಮಿತವಾದ ಕ್ರಯಕ್ಕೆ ಪಡೆಯಬಹುದು

ವೆಸ್ಟ್ ಎಂಡ್ ಕಂಪೆನಿಯ ಪೋಕೆಟ್ ವಾಚುಗಳೂ, ಇತರ ಕಂಪೆನಿಗಳ ಲೀವರ್ ಸಿಲಿಂಡರ್ ಮೂವ್ಮೆಂಟಿನ ಪೋಕೇಟ್ ಮತ್ತು ರಿಷ್ಟ ವಾಚುಗಳೂ, ಎಲಾರಂ ಮತ್ತು ಟೈಂ ಪೀಸುಗಳೂ, ರೋಲ್ಡ ಗೋಲ್ಡ ಮತ್ತು ನಿಕ್ಕಲ್ ಗಿಲ್ಟಿನ ಪೋಕೇಟ್ ಮತ್ತು ರಿಷ್ಟ ವಾಚಿನ ಚೈನುಗಳೂ, ರಿಷ್ಟ ವಾಚಿನ ಛಾಬ್ಬು ಸಿಲ್ಕ ಮತ್ತು ಲೆದರ್ ಸ್ಟ್ರೇಪುಗಳೂ, ಅದರ ಎಲ್ಲಾ ತರದ ಉಪಕರಣಗಳೂ ಕಂಪೆನಿಯ ಕ್ರಯಕ್ಕೆ ಕಿಂಚಿತ್ ಮುನಾಫೆಯ ಮೇಲೆ ಮಾರಲ್ಪಡುತ್ತವೆ

ವಿಳಾಸ — **ಭಂಡಾರಿ ಧಾಮೋದರ ಶಾನುಭಾಗ ಎಂಡ್ ಕೋ.**
ಜನರಲ್ ಮರ್ಚೆಂಟ್ಸ್, ಕುಂದಾಪುರ, ದ ಕ.

ಮೂಲವ್ಯಾಧಿ

ರಕ್ತ ಅಥವಾ ಕಣ್ಣಸ್ವಾದ ಕಷ್ಟಂತ ಕೊಯ್ಯುದು ಮತ್ತು ತ್ರಾಸದಾಯಕವಿದ್ದರೂ ಶಕ್ತಿ ಹುತ್ತು ಸೇವನಮಾಡುವದರಿಂದ ಜಾದುವಿನಂತೀ ಪರಿಣಾಮವಾಗುವುದು ಮೂರು ದಿವಸಗಳಲ್ಲಿ ಬೇನ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ ಗುಣಕಾರಿಯಾದಿದ್ದರೆ ನಾಲ್ಕುಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦.

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯಾಡುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ಧೀಪನ ತೈಲ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ, ೨

ವಿಳಾಸ — **ಶಕ್ತಿಸುಧಾ ಕಾರ್ಯಾಲಯ.**
23 ಕಾಂಟ್ರಾರವಾಡ 4ನೇ ಗಳ್ಳಿ
ಮುಂಬಯಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಿಜಿಸ್ಟರಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ,

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಜ್ಜಿಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್
ಕೇಶವರವರ
ಫ್ಲೊಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ! ಮಾರಾಟಕ್ಕಿವೆ!!
ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಸೈಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.
ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಘೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರನಿಗದರಿಂ । ಹರುಷವಾಯಿತೆ ಮತ್ತೆ ವಿಷದ ಸುಡುತೆ ಬರುತಿರುವ ॥
ಗರಳಕವರಂಜಿದರೆ ಸುಧೆಯನು । ನುರಿತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೯ನೇ ಶುಕ್ರವಾರ ಸಪ್ಟಂಬರ ೧೯೩೨ (9 – 9 – '32.) ಸಂಚಿಕೆ ೩೭

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras.**
ಹೆಡ್ ಆಫೀಸು: — ಉಡುಪಿ ಶಾಖೆ – ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.
Authorised Capital Rs. 3,50,000 Subscribed & Called up Rs. 2,25,000
ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅರ್ಪಿಸಿದ ವಸೂಲಿ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF JULY, 1932.

	CAPITAL AND LIABILITIES.			PROPERTY AND ASSETS	
1	Paid up Capital	Rs. 2,25,000-0 0	1	Premises, Building, Furniture etc	Rs 64 460- 6- 9
2	Reserve and other funds	„ 2,22,705 0-0	2	Government securities	„ 3,30,788 4 0
3	Deposits	„ 21 10,093 9 7	3	Authorised Investments	„ 20 33,156 15 6
4	Due to Bankers	„ 1,610 10 4	4	Bills for collection	6,486 0 0
5	Sundries	„ 73,971- 1 0	5	Sundries	„ 25,015 13 11
6	Bills for collection per contra	6,486- 0 0	6	Cash in hand & with bankers.	„ 1 79958 13-0
	Total	26 39,866-4 11		Total	20,39,866-4 11

UDIPI 20–8–'32

N. ANANDA RAO,
Secretary & Manager

(Regd

ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಪ್ಪುಕೊಂಡಿನ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು – ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ

ಡಪ್ಪಿ 1ಕ್ಕೆ 6 ಆಣೆ ಡಜನಿಗೆ ರೂ 3–8–0 ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.
ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು
ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, [illegible]
ಏಜಂಟರು — [illegible] ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office -MANGALORE, S India
First of its kind in the West Coast

CHAIRMAN
Dewan Bahadur N Subba Rao.

STRIKING FEATURES

Policy Conditions Liberal!
Claims Settlement Prompt!

MANAGEMENT PURELY INDIAN

Ensure the Absolute Safety, Comfort and Happiness of your Dear Ones

WANTED INFLUENTIAL AGENTS.
LIBERAL TERMS TO COMPETENT MEN

For further particulars apply to the Head Office.

ಹುಶಾರ್! ಒಂದು ನರಿಯು ಕಾಡಿನಿಂದ ಊರಿಗೆ ಬಂದಿದೆ ಕೈಯಲ್ಲೊಂದು ಬಟ್ಟಲನ್ನು ಹಿಡಿದು ನಾಡಿನ ಕೋಳಿಗಳನ್ನು "ಬ್ಬಾ, ಬ್ಬಾ" ಎಂದು ಕರೆಯುತ್ತಿದೆ.

ಹುಶಾರ್! ಆ ನರಿಯ ಬಟ್ಟಲಲ್ಲಿ ಅಫೀಮು ಇದೆಯೋ ಅನ್ನವಿದೆಯೋ ಯಾರಿಗೆ ಗೊತ್ತು? ಎಲೋ ಕೋಳಿಗಳೇ! ಬಟ್ಟಲಿಗೆ ಕೊಕ್ಕು ಹಾಕುವ ಮೊದಲು ಆಲೋಚನೆ ಮಾಡಿಕೊಳ್ಳಿ ಸರ್ ನರಿಯಣ್ಣನನ್ನು ದೂರ ನಿಲ್ಲ ಹೇಳಿ!

× + +

ಹುಶಾರ್! ನಿಮಗೆ ಹಸಿವಾಗುತ್ತಿರಬಹುದು, ಆದರೆ, ಹಸಿವಿನ ತಾಪದಿಂದ ನರಿಯಣ್ಣನ ಬಾಯಿಗೆ ಬೀಳಬೇಡಿರಿ

× × × ×

ಹುಶಾರ್! ಆ ನರಿಯು ಮೊದಲನೆಯ ಕೆಂಪು ಬಟ್ಟಲನ್ನು ತೋರಿಸಿ ನಿಮ್ಮನ್ನು ಹಿಡಿಯಲೆತ್ನಿಸಿತು! ಹೇಗೂ ನೀವು ರಕ್ಷಿಸಲ್ಪಟ್ಟಿರಿ (ನಿಮಗೆ ನನ್ನ ವರವಿರಲಿ) ಅದು ಪುನಹ ಎರಡನೆ ಹಳದಿ ಬಟ್ಟಲನ್ನು ತೋರಿಸಿತು ಅದರಿಂದಲೂ ನೀವು ರಕ್ಷಿಸಲ್ಪಟ್ಟಿರಿ! ಈಗ ಮಾತ್ರ ಜೋಕೆ! ಮೂರನೇ ಹಸುರು ಬಟ್ಟಲನ್ನು ಆ ನರಿಯು ತಂದಿದೆ ಜೋಕೆ! ಜೋಕೆ!

+ + + +

ಹುಶಾರ್! ಎಲೋ ಕೋಳಿಗಳೇ ಆ ನರಿಗೆ ಬಹಳವಾಗಿ ಹಸಿವಾಗಿದೆ ನೀವು ಬಟ್ಟಲಿಗೆ ಕೊಕ್ಕನ್ನು ಹಾಕಿದೊಡನೆ ಆ ನರಿಯು ನಿಮ್ಮ ಕತ್ತನ್ನು ಕಸಕ್ಕನೆ ಹಿಡಿದುಕೊಂಡೀತು — ಕೊಂದೀತು — ತಿಂದೀತು

× × × ×

ಹುಶಾರ್! ದೂರ ನಿಲ್ಲಿ ಬಟ್ಟಲನ್ನು ಸಮೀಪಿಸಬೇಡಿ ಅಗಗೋ, ನರಿಯು ದೊಡ್ಡ ಉಗುರಿನ ತನ್ನ ತಂತ್ರಪಾದವನ್ನೆತ್ತುತ್ತಿದೆ

× × × +

ಹುಶಾರ್, ನರಿಯಣ್ಣ ಹುಶಾರ್! ನಿನ್ನ ಮಂತ್ರ ತಂತ್ರ ಕುತಂತ್ರ ದ್ವಿತಂತ್ರ ತ್ರಿತಂತ್ರಗಳೂ ಹುಶಾರ್! ನೀನೂ ಹುಶಾರ್ ನಿನ್ನ ಜನಾಂಗವೂ ಹುಶಾರ್! ನಿನ್ನ ಹಿರಿಯರು ಕಡಿಮೆಯಾಗಿದ್ದರಲ್ಲವೇ ನೀನು ಕಡಿಮೆಯಾಗುವುದು?

× × × ×

ಹುಶಾರ್! ನರಿಯಣ್ಣ ಹುಶಾರ್! ಈ ಸಾರಿ ಮಾತ್ರ ಇಂಡಿಯನ್ ಕೋಳಿ ಮೊಡರೇಟ್ ಕೋಳಿ ಲಿಬರಲ್ ಕೋಳಿ ಮುಸ್ಲಿಮ್ ಕೋಳಿ, ಪತಿತಕೋಳಿ, ಆ ಕೋಳಿ ಈ ಕೋಳಿ ಕಪ್ಪು ಕೋಳಿ ಬಿಳಿ ಕೋಳಿ, ಹೆಣ್ಣು ಕೋಳಿ ಗಂಡು ಕೋಳಿ ಮೊದಲಾದ ಎಲ್ಲಾ ಕೋಳಿಗಳನ್ನೂ ಹಿಡಿ! ಬಿಡಬೇಡಾ!

× × × ×

ಹುಶಾರ್! ಆದರೆ ಈ ಕೋಳಿಗಳನ್ನು ಹಿಡಿಯುವಾಗ ಕೊಂಗ್ರೆಸ್ ಕೋಳಿಯನ್ನೂ ಹಿಡಿಯಲು ಮರೆಯಬೇಡ. ನನ್ನ ವೈರಿ!

+ + + +

ಹುಶಾರ್! ಜಾಗ್ರತೆ! ಅದನ್ನೂ ಹಿಡಿ! ಹೇ ಅದರ ಮಾಂಸ ಎಷ್ಟು ರುಚಿಯಪ್ಪಾ? ನೀನು ಪುಷ್ಟಿಯಾಗಿ ಕೊಬ್ಬಿಕೊಂಡು ನಿನ್ನ ಕಾಯ ಘಟ್ಟಿಯಾಗಿ ನೀನು ಸ್ಥಿರ ವಾಸನಂತಾಗಬೇಕಾದರೆ ಅದನ್ನು ಖಂಡಿತ ತಿನ್ನಬೇಕು

+ + + +

ಹುಶಾರ್! ಅದನ್ನು ಹಿಡಿಯುವಾಗ ಜತನದಿಂದಿರು ಅದು ಪಕ್ಕನೆ ಸಿಗಲಾರದು ಅದಕ್ಕೆ ಮೊದಲು ಸ್ವಾತಂತ್ರ್ಯ ಗದ್ದೆಯ ಬತ್ತ ಹಾಕು ಇಲ್ಲದಿದ್ದರೆ ಅದು ಎರಡ ರೆಕ್ಕೆಗಳನ್ನು ಬಿಚ್ಚಿ ಬರ್ರ್ ಬರ್ರನೆ ಹಾರಿ ಹೋದೀತು

+ + × ×

ಹುಶಾರ್! ಮೊಡರೇಟ್ ಕೋಳಿ ಲಿಬರಲ್ ಕೋಳಿ ಮತ್ತು ಮುಸ್ಲಿಮ್ ಕೋಳಿಗಳು ಪಕ್ಕನೆ ಸಿಕ್ಕುತ್ತವೆ, ಅವುಗಳನ್ನು ಹಿಡಿಯಲು ಸುಲಭ! ಹೊಟ್ಟೆ ತುಂಬಿಸುವುದೇ ಅವುಗಳ ಧ್ಯೇಯ. ಅದು ಕೂಡ ನಿನ್ನ ಬಟ್ಟಲಲ್ಲಿ ಊಟಮಾಡುವುದೆಂದರೆ ಅವುಗಳಿಗೆ ಆನಂದದ ಮೇಲೊಂದು ಮಹದಾನಂದ!

+ + + +

ಆ ಕೋಳಿಗಳಿಗೆ ತಲೆಯಿಲ್ಲ ಎಲ್ಲಾ ಬೋಳು ತಲೆ! ಜುಟ್ಟೂ ಇಲ್ಲ, ಗರಿಗಳೂ ಇಲ್ಲ ಶಕ್ತಿಯಿಲ್ಲ — ಉಪಾಯವಿಲ್ಲ — ವಿವೇಕವಿಲ್ಲ

× × × ×

ಹುಶಾರ್! ಆದರೆ ಕೊಂಗ್ರೆಸ್ ಕೋಳಿ — ಅಬ್ಬಾ ಅದರ ತಲೆಯೋ! ಎಷ್ಟು ದೊಡ್ಡದು ನರಿಯಣ್ಣ! ಅದರ ತಲೆಯನ್ನು ತಿನ್ನಬೇಕು ಕರ್ ಕರ್ ಎಂದು! ವ್ಹ ವ್ಹ!

× × × ×

ಎಲೋ ಕೋಂಗ್ರೆಸ್ ಕೋಳಿ! ಸರ್ ನರಿಯಣ್ಣನವರು ನಿನ್ನನ್ನು ಹಿಡಿಯಲು ಸ್ವಾತಂತ್ರ್ಯ ಗದ್ದೆಯ ಬತ್ತವನ್ನು ಹಾಕುತ್ತಾರೆ ಆದರೂ ಬಂಗಾರದಂತಹ ಜನ ಕೋಳಿಯಣ್ಣ! ಅವರ ಬತ್ತವನ್ನು ತಿನ್ನಲಿಕ್ಕೆ ಮರೆಯಬೇಡ!

+ + × ×

ಕೊಂಗ್ರೆಸ್ ಕೋಳಿ! ಜೋಕೆ! ಈ ಸಲ ನಿನ್ನನ್ನು ನರಿಯಣ್ಣನು ತಿನ್ನದೆ ಬಿಡುವುದಿಲ್ಲ — ನಿನ್ನ ಮಾಂಸವನ್ನು ನರಿಯಣ್ಣನ ಸಂಗಾತಿಗಳು ಉಣ್ಣದೆ ಬಿಡುವುದಿಲ್ಲ ತಿಳಿಯಿತೇ

× × × ×

ನಿನಗೆ ಸ್ವಾತಂತ್ರ್ಯ ಗದ್ದೆಯ ಬತ್ತಬೇಕೆಂದು ಅರ್ಭಟಿಸುತ್ತಿದ್ದೆಯಲ್ಲ? ಈ ಸಲ ನಿನಗೆ ನರಿಯಣ್ಣನವರು ಕೊಡುತ್ತಾರೆ ತೆಗೆದುಕೋ!

× × × ×

ನರಿಯಣ್ಣನ ಕಾಲಿಗೆ ನಮಸ್ಕಾರ ಹೊಡೆದು ಅವರ ಬಟ್ಟಲಲ್ಲಿ ಬತ್ತವನ್ನೋ ಅನ್ನವನ್ನೋ ತಿನ್ನದೆ ನಿನ್ನ ಮದಾಂಧತೆಯನ್ನು ತೋರಿಸುತ್ತಿಯಲ್ಲ! ಹ! ಅದೇನು ಘುಟಿಯೋ ಆ ಬಟ್ಟಲ ಅನ್ನ

× × + ×

ಎಲೋ ಕೋಳಿಗಳೇ ನೀವು ಯಾರನ್ನೂ ನಂಬಬೇಡಿ ಯಾವ ಜಾತಿಯನ್ನೂ ನಂಬಬೇಡಿ ಗೊಂಡೆಯಂತಹ ಬಾಲವಿರುವ ನೀಲಿ ಕಣ್ಣಿನ, ಬಿಳಿಮುಖದ ನರಿಗಳನ್ನೇ ನಂಬಿರಿ ನಿಮಗೆ ಯಾವ ಮೋಸವೂ ಬರಲಾರದು

× × × ×

ಮೊದಲೇ ನೀವು ರೆಕ್ಕೆಯಿಲ್ಲದೆ, ಬಡತನದಿಂದ ಬಳಲಿದ್ದೀರಿ ನಿಮ್ಮ ಮಾಂಸವೂ ಗರಿಗಳೂ ಕರಗಿ ನೀವು ನೀರಾಗುತ್ತಿರುವಿರಿ ಆದರೂ ಕೂಡಾ ಆ ನರಿಯಣ್ಣನಿಗೆ ದಾಕ್ಷಿಣ್ಯ, ದಯೆ, ಪಾಪಪುಣ್ಯಗಳಿಲ್ಲವಲ್ಲ ದೇವರೆ!

'ಕೋಳೆಣ್ಣ'

+ + + +

ಪ್ರಪಂಚದಲ್ಲೇ ಅತ್ಯುತ್ತಮವೆನಿಸಿರುವ
ಈ ಆಹಾರವನ್ನು ತಯಾರಿಸುವುದು
ಬಹು ಸುಲಭ

ಓವಲ್‌ಟಿನ್ನನ್ನು ಬಹು ಬೇಗನೇ ಮತ್ತು ತೊಂದರೆಗಳಿಲ್ಲದೆ ತಯಾರಿಸಬಹುದು ಒಂದು ಚಮಚ 'ಓವಲ್‌ಟಿನ್ನನ್ನು ಬಿಸಿ ಹಾಲು ಅಥವಾ ಹಾಲು ಮತ್ತು ನೀರಿಗೆ ಹಾಕಿ ಕದಡಿ ಅಡಿಗೆಯವನೋ, ಹುಡುಗನೋ, ಕೆಲಸದವನೋ, ರುಚಿಕರವಾದ ಪಾನೀಯವನ್ನು ಬೇಗನೇ ಮಾಡಬಹುದು

ಓವಲ್‌ಟಿನ್ನು ಸೀಲು ಮಾಡಲ್ಪಟ್ಟ ಡಬ್ಬಿಗಳಲ್ಲಿ ಶುದ್ಧವಾಗಿಯೂ ಸಂಪೂರ್ಣವಾಗಿಯೂ ಬರುತ್ತದೆ ತಯಾರಿಯಾಗುವಾಗ ಅದು ಕೈಯಿಂದ ಮುಟ್ಟಲ್ಪಡುವುದಿಲ್ಲ ಮತ್ತು ನಿಸರ್ಗಸಿದ್ಧವಾಗಿಯೇ ಅದನ್ನು ಮಾಡಲಾಗುತ್ತದೆ ಆರೋಗ್ಯ ಶಕ್ತಿ ಧಾತುಪುಷ್ಟಿಗೆ ಬೇಕಾದ ಎಲ್ಲಾ ಶಕ್ತಿಯುತ ಆಹಾರಗಳು ಅದರಲ್ಲಿವೆ

ಓವಲ್‌ಟಿನ್ನು ಸಂಪೂರ್ಣ ಮತ್ತು ಸರಿಯಾದ ಆಹಾರವಾಗಿದೆ ಸರ್ವಸಾಮಾನ್ಯ ಪಾನೀಯವನ್ನು ಇದು ಮೀರಿಸಿ ಎಲ್ಲಾ ಹಿಂದೀಯ ಮನೆಗಳಲ್ಲೂ ಸಂಪೂರ್ಣ ಸ್ತ್ರೀಪುರುಷ ಬಾಲರಾದಿಗಳಿಗೆ ಆರೋಗ್ಯವನ್ನುಂಟುಮಾಡುತ್ತದೆ ಇಂತಹ ಅಮೋಘವಾದ ಟೋನಿಕ್ ಆಹಾರವನ್ನು ಈಗಲೇ ಕುಡಿಯಲುಪಕ್ರಮಿಸಿರಿ ಆರೋಗ್ಯ ಸಂಪಾದನೆಯನ್ನು ಮಾಡಿರಿ

ಉತ್ತಮವಾದ ಓವಲ್‌ಟಿನ್ನಿಗೆ ಸರಿಸಮಾನವಾದ ಪಾನೀಯವು ಬೇರೊಂದಿಲ್ಲ ಸಪ್ರಮಾಣದಿಂದ ತಯಾರಿಸಲ್ಪಡದ ಎಲ್ಲಾ ಮಿಶ್ರಣಗಳನ್ನು ತಿರಸ್ಕರಿಸಿರಿ



OV/102

OVALTINE

TONIC FOOD BEVERAGE

ಸ್ನಾಯು, ಮೆದುಳು, ದೇಹಗಳನ್ನು ಬಲಗೊಳಿಸುತ್ತದೆ
ಅತ್ಯುತ್ತಮ, ಅತೀ ಶುದ್ಧ — ಕರಸ್ಪರ್ಶವಾಗಿರುವುದಿಲ್ಲ

ಏಜಂಟರು — ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್ ರೈಟ್ 85ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬೈ ಮದ್ರಾಸ್ ರಂಗೂನ್‌ಗಳಲ್ಲಿ

ಓವಲ್‌ಟಿನ್ ರೊಟ್ಟಿಗಳನ್ನೂ ಪ್ರತಿ ಮನೆಗಳಲ್ಲಿಯೂ ಇಡಬೇಕು ಬಿಸ್ಕತ್ತುಗಳಿಗಿಂತಲೂ ಅವು ನಿಮಗೆ ಒಳ್ಳೆಯವು ಅವುಗಳು ಬಹು ರುಚಿಕರವಾಗಿವೆ ಮತ್ತು ಸುಲಭದಿಂದ ಜೀರ್ಣವಾಗುತ್ತವೆ ರುಚಿಕರ ಶುದ್ಧ ಮತ್ತು ಸಂಪೂರ್ಣ ಒಂದು ಗ್ಲಾಸ್ ಓವಲ್‌ಟಿನ್ನಿನೊಡನೆ ಬಹಳ ರುಚಿಕರ ಅಥವಾ ಟೀ, ಕಾಫಿ ಬೆಣ್ಣೆ ಹಣ್ಣುಗಳೊಡನೆಯೂ ಸ್ವೀಕರಿಸಬಹುದು

Wanted.

For the Sun Rise Banking Company Limited, Bangalore in the Districts of South Kanara Malabar and Coorg, three Superintendents of Branches and fifteen Taluk Branch Managers on a Monthly Salary of Rs 00-20-300 and Rs 35—10—150 plus Rs 50 and 22-8-0 respectively as Office and Conveyance Allowance Also 75 Village Agents on a salary of Rs 20-3-50. Only influential business men who can hold Savings Bank Deposit Certificate of this Company of Rs 500 Rs 150 and Rs 12-8-0 repectively need only apply personally or with six annas postage stamps to the Secretary now camping at the office of the Chairman,

Mr. C. Vedaji, Rao Sahib B A, B. L,
First Class Hony, Magistrate,
Falnir, MANGALORE. S K.

THE SOUTH INDIA CO-OPERATIVE INSURANCE SOCIETY, LIMITED, MADRAS.

LOCAL BOARD:—

THE SOUTH CANARA CENTRAL CO-OPERATIVE BANK, LTD, MANGALORE.

Applications are invited for 'Sub Agents' from capable and energetic persons and Co-operative Institutions to canvas business on behalf of the Local Board of the Society at Mangalore.

FOR TERMS APPLY TO—

The Secretary,
South Canara Central Co operative
Bank, Ltd, KODIALBAIL P O (Mangalore)
SOUTH CANARA

The Udipi Mutual Benefit Fund, UDIPI.

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಚಿಟಿಫಂಡುಗಳೂ ನಡೆಯುಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್

ಅಚ್ಚಿನಲ್ಲಿದೆ! **ಅಚ್ಚಿನಲ್ಲಿದೆ!**

ಇದೇ ತಿಂಗಳ ಮೂರನೆ ವಾರದಲ್ಲಿ ಹೊರಬೀಳುವುದು

ಅಭಿನಯಗೀತಾವಳಿ

(ಶ್ರೀ ಜಿ ಎನ್ ಲಕ್ಷ್ಮಣಪೈ ವಿರಚಿತ)

ಕ್ರಯ ೦—೨—೬ ಕ್ರಯ ೦—೨—೬

ಚಿಕ್ಕ ಮಕ್ಕಳಲ್ಲಿ ವಿಷಯಜ್ಞಾನ, ಭಾಷಾಜ್ಞಾನ ಮತ್ತು ಸಂಗೀತಜ್ಞಾನವು ಏಕಕಾಲದಲ್ಲಿ ಉಂಟಾಗುವಂತೆ ಕಿಂಡರ್ ಗಾರ್ಟನ್ ಪಾಠವನ್ನು ಅನುಸರಿಸಿ ರಚಿಸಲ್ಪಟ್ಟ ಹಾಡುಗಳ ಪುಸ್ತಕ ಇದರೊಳಗಿನ ಗೀತಗಳನ್ನು ಹಾಡಿ, ನಲಿಯುವುದೆಂದರೆ ಮಕ್ಕಳಿಗೊಂದು ಹಬ್ಬವೇ ಸರಿ

ನಮ್ಮ ಇತರ ಪುಸ್ತಕಗಳು—

ಸಚಿತ್ರ ಕನ್ನಡ ಪದ್ಯರತ್ನಾವಳಿ 3, 4, 5ನೆ ದರ್ಜೆಗಳ ಬಗ್ಗೆ ಪದ್ಯಪುಸ್ತಕ	೦—೩—೬
ಕೀರ್ತನಾಂಜಲಿ (ಉತ್ತಮ ಭಜನಾಗೀತಗಳ ಕೈಪಿಡಿ)	೦—೩—೦

ಹರಿಹರ ಛಾಪಖಾನೆ, ಮತ್ತು ಪುಸ್ತಕಾಲಯ,
ಪುತ್ತೂರು, ದ ಕ.

ತುಂಬಾ

ಲಾಭವನ್ನು ಪಡೆಯಬೇಕೆಂದು ಮನಸ್ಸಿದೆಯೋ?
ಹಾಗಾದರೆ 'ಸ್ವದೇಶಾಭಿಮಾನಿ'ಯ ಏಜನ್ಸಿಯನ್ನು ತೆಗೆದುಕೊಳ್ಳಿರಿ.
ಎಲ್ಲಾ ವ್ಯವಹಾರಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

Wanted.

Agents for 'Swadeshabhimani' throughout the South Kanara District and elsewhere.

Apply Sharp — You are sure to secure substantial Commission

MANAGER,
Swadeshabhimani,
Mangalore.

Canara Bank Limited.

ಕೆನರಾ ಬ್ಯಾಂಕ್ ಲಿಮಿಟೆಡ್.

Head Office.— **MANGALORE.**

Established July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal, Kasargod, Cochin, Udipi, Gangolli, Coondapur, Bombay, Puttur, Calicut & Alleppey**

ಬ್ರಾಂಚುಗಳು:—
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised Capital 10,00000—0—0	ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ. 10, 0000—0—0
Issued & paid up Capital 300,000—0—0	ಚಂದಾ ಹಾಕಿದ ಮತ್ತು ವಸೂಲಾತ ಮೂಲಧನ ರೂ. 300,000 0—0
Reserve and other sinking Funds Rs 526 000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 526, 00—0—0
Amount invested on G P Notes Rs 1210,092—12—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 1210,092—2—0
Rates of interest on fixed deposits at Head Office and Branches are 6% for 2 Years 5½%, 1 Year	ಕಾಯಂ ಠೇವಣಿಗಳ ಮೇಲೆ ಕೊಡುವಂಥ ಬಡ್ಡಿ ದರ— ಎರಡು ವರುಷಗಳಿಗೆ ಸೇಕಡಾ 6% 1 ವರುಷಕ್ಕೆ ಸೇಕಡಾ 5½.

Current Account Deposits received and interest allowed on daily balance of Rs 50 and above that on multiples of Rs 10/- @ 3% from 1st January to 30th June and @ 2% from 1st July to 31st December No interest will be allowed unless the depositor earns not less than Rs. 5/ during a period of 6 months ending either 30th June or 31st December in any year.

Except by special arrangement no interest is allowed on sums exceeding Rs. 10,000/ in the case of Head Office and Cochin Branch and on sums not exceeding Rs 15,000/ in the case of Bombay Branch and on sums exceeding Rs 3000/ in the case of other Branches

For further particulars please apply to

Office of the Bank,
Mangalore 17—6—1932

K. Venkat Rao,
Secretary & Treasurer

The Pangal Nayak Bank, Ltd.

Head Office. Udipi,

Established 1920

Branch Office Mangalore

Authorised Capital Rs 2,00,000	Paid up Capital Rs. 1 75 000-
Issued Capital Rs. 1,75,000-	Reserve and other Funds Rs 1,80 000

NOTICE.

Advances on pledge of Gold are made at 8%

Fixed deposits received at following rates

3 months 4½%,	6 and 9 months 5%,
1 year and above 5½%,	2 years 6 %.

(By order)

Office of the Bank,
Udipi, 1—7—'32

P Laxman Nayak,
Secretary

ಪುತ್ತೂರಿನಲ್ಲಿ ಸ್ವದೇಶಾಭಿಮಾನಿಯ ಏಜಂಟರನ್ನಾಗಿ

ಶ್ರೀ ಜಿ. ಎನ್. ಲಕ್ಷ್ಮಣ ಪೈ ಇವರನ್ನು ನೇಮಿಸಲಾಗಿದೆ.

ಮೇನೇಜರ್

ನೀವು ಉಡುಪಿಗೆ ಬಂದಲ್ಲಿ, ಸೌಖ್ಯ ಮತ್ತು ಭದ್ರತೆಯನ್ನು ಪಡೆಯಲು
ಮರೆಯಬೇಡಿರಿ!!!

ಮೈಸೂರು ಕ್ಲಬ್, ಉಡುಪಿ

ಯೋಗ್ಯವಾದ ಊಟ, ಸ್ನಾನ, ಟಿಫಿನ್, ಉಳಕೊಳ್ಳುವ, ಸಸ್ಯಾಹಾರ ಏರ್ಪಾಡು, ಮೇಜು, ಮಂಚ, ದೀಪ ಇತ್ಯಾದಿ ಸಹಿತ.

Up-to-date Boarding and Lodging. When you visit Udipi, be at home

MYSORE CLUB, UDIPI.

ಬಂಗಾಳಕ್ಕೆ ಹೊಸ ಕ್ರಿಮಿನಲ್ ಕಾನೂನು

ಅತ್ಯವಸರವಾಗಿ ಮಂಜೂರಾಯಿತು. ಆರ್ಡಿನೆನ್ಸುಗಳು ಒಂದು ಕಡೆ, ಇತರ ಈ ವಿಷಯಕ ತಿದ್ದುಪಡಿಯಾದ ಕಾನೂನುಗಳು ಮತ್ತೊಂದು ಕಡೆ ಇದ್ದರೂ, ಈ ಹೊಸ ಕಾನೂನು ಅತ್ಯಾವಶ್ಯಕವಾಗಿ ಸರಕಾರಕ್ಕೆ ತೋರಿಬಂದಿತು. ಕಾರಣವೇನೆಂದರೆ, ದಬ್ಬಾಳಿಕೆಯ ಕಾನೂನುಗಳು ಇದುವರೆಗೆ ಇದ್ದುದೆಲ್ಲವೂ ಕೃತಾರ್ಥವಾಗಿಲ್ಲವೆಂದೂ, ಇನ್ನಷ್ಟು ಭೀಕರ ದಂಡನೆಯ ಕಾನೂನು ಅಗತ್ಯವೆಂದೂ ಸರಕಾರಕ್ಕೆ ತೋರಿತು. ಎರಡು ವರ್ಷಗಳಿಂದಲೂ ಇರುತ್ತಿದ್ದ ಹಳೆಯ ಮತ್ತು ಕೆಲ ತಿಂಗಳಿಂದಲೂ ಇರುವ ಹೊಸ ಆರ್ಡಿನೆನ್ಸುಗಳಿಂದ ಕ್ರಾಂತಿಕಾರಕರನ್ನು ಅಡಗಿಸಲಾರದ ಕಾರಣವೇ ಈ ಕಾನೂನು. ಲೋರ್ಡ್ ಲೋಥಿಯಾನರು—"ಹಬೆಯಂತ್ರವನ್ನು ಕಾಯಿಸಿ, ಅದರ ಮುಚ್ಚಳ ಬಿಗಿದಿಟ್ಟರೆ ಅದು ಸಿಡಿಯುವ ಸಂಭವ" ಎಂದುದೂ ಮರೆತೇ ಹೋಯಿತು. ಕೊಲೆಮಾಡಲು ಯತ್ನಿಸಿದವರಿಗೆ ಫಾಸಿಶಿಕ್ಷೆ ಎಂಬುದು ಜಗತ್ತಿನ ಇತರ ಯಾವ ದೇಶದ ಕಾನೂನು ಪುಸ್ತಕಗಳಲ್ಲಿಯೂ ಇಲ್ಲ. ಆದರೆ ಒಂದು ಕೈಯಲ್ಲಿ ಪಿಸ್ತೂಲನ್ನೂ, ಮತ್ತೊಂದು ಕೈಯಲ್ಲಿ ವಿಷವನ್ನೂ ಹಿಡಿದೋಡುವವರನ್ನು ಹಿಡಿದು ಶಿಕ್ಷಿಸಲು ಈ ಕಾನೂನೇ ಎಂದೊಬ್ಬ ಮೆಂಬರರೂ ಕೇಳಿರುವರು. ಈಗಣ ಕೌನ್ಸಿಲೇನೂ ಅದನ್ನು ಮಂಜೂರ್ಮಾಡಿತಾದರೂ ಶಾಂತಿಸಾಧನೆಗೊಂದು ಆತಂಕವನ್ನೂ ಒಡ್ಡಿತು ಎಂದು ಪತ್ರಿಕೆಗಳನ್ನುತ್ತಿವೆ. ಅತಿ ಕಠಿಣ ಸಂದರ್ಭಕ್ಕಾಗಿ ಮಾತ್ರ ಉಪಯೋಗಿಸಬಹುದಾದ ದಂಡನಾ ಸನ್ನಾಹವೆಲ್ಲವೂ ಇನ್ನು ಶಾಶ್ವತವಾಗಿರುವರೆ ಅಘಟಿತಘಟನೆಗಳೇ ಕಾರಣವಲ್ಲವೇ?

ಸ್ಕೋಟ್ಲೆಂಡಿನ ವಿಪತ್ತು.

ವಿಸ್ಕಿಯನ್ನು ಬಟ್ಟಿ ಇಳಿಸಿ ತಯಾರಿಸುವ ೯೧ ಕಾರ್ಖಾನೆಗಳಲ್ಲಿ, ೭೮ ಕಾರ್ಖಾನೆಗಳ ಯಜಮಾನರು ಸಭೆಸೇರಿ, ಈ ವರ್ಷ ವಿಸ್ಕಿ ತಯಾರಿಸುವುದಿಲ್ಲವಾಗಿ ನಿರ್ಧಾರವ ಮಾಡಿಕೊಂಡರು. ಈ ಕೈಗಾರಿಕೆಗೆ ಸಂಬಂಧಪಟ್ಟ ಕೆಲಸಗಳನ್ನೆಲ್ಲ ಮಾಡುವ ಸಾವಿರಾರು ಜನರು ನಿರಾಧಾರಿಗಳಾಗುವರು. ಕಾರಣವೇನು? ಪ್ರತಿಯೊಂದು ಕಾರ್ಖಾನೆಯಲ್ಲೂ ಒಂದೆರಡು ಮಿಲ್ಲಿಯ ಗೆಲನು ಮದ್ಯ ದಾಸ್ತಾನಾಗಿ ಉಳಿದಿದೆ! ಮಾರಾಟವೇ ಇಲ್ಲ. ಒಂದು ಗೆಲನನ್ನು ತಯಾರಿಸಲು ಸುಮಾರು ಮೂರು ರೂಪಾಯಿಗೂ ಕಡಿಮೆ ವೆಚ್ಚ ತಗಲುವಾಗ, ಸರಕಾರವು ಅದರ ಮೇಲೆ ಅರ್ವತ್ತು ರೂಪಾಯಿ ಮೀರಿ ಸುಂಕ ಏರಿಸುವುದಾಗಿಯೂ ಇಂತಹ ಅಮೂಲ್ಯ ಮದ್ಯವನ್ನು ಕೊಂಡುಕೊಳ್ಳುವವರೇ ಇಲ್ಲವಾಗಿಯೂ ದೂರು. ಈ ವೃತ್ತಾಂತವನ್ನು ಓದಿದಾಗ, ಇಂಡಿಯದಲ್ಲೂ ಮದ್ಯದ ಮೇಲೆ ಸುಂಕವನ್ನು ಹೀಗಯೇ ಏರಿಸಬಾರದೇಕೆಂದು ಪ್ರಶ್ನೆ ಹುಟ್ಟಬಹುದು. ಆದರೆ, ಅಲ್ಲಿ ಸುಂಕದ ಸಂಕಟ ತಡೆದುಕೊಂಡೂ ಮದ್ಯ ಕೊಳ್ಳುವವರಿಲ್ಲವಾಗ, ಇಲ್ಲಿ ಹಾಗೆ ಮಾಡಿದರೆ, ಖಜಾನೆಗೆ ಹಿಡಿದ ಸಂಕಟಕಾಲದಲ್ಲಿ ಸುಂಕವೂ ತಪ್ಪುವುದಾಗಿ ಬೆದರಿಕೆ ಹುಟ್ಟದಿದ್ದೀತೆ?

ಕಗ್ಗತ್ತಲಲ್ಲಿ ಕಿರಣೋದಯ

ಎಂದರೆ ಮೌಲಾನಾ ಶೌಕತಾಲಿಯವರ ಭರವಸೆ "ಇತ್ತಂಡಗಳೂ ವಿಶ್ವಾಸದಿಂದ ಹಿತಸಾಧನೆಗಾಗಿ ಒಂದುಗೂಡಿ, ತಮ್ಮೊಳಗೇ ಉಭಯತರಿಗೂ ಸಮ್ಮತವಾಗುವಂತಹ ಒಪ್ಪಂದವನ್ನು ಮಾಡಿಕೊಳ್ಳಲು ಇನ್ನೂ ಆಗದೆ? ಹೊತ್ತು ಮೀರಿತೆ? ನಿಜವಾಗಿಯೂ ಇದಕ್ಕಾಗಿ ಪ್ರಯತ್ನಿಸುವುದು ಯೋಗ್ಯ ಕೆಲಸ. ಏಕೆಂದರೆ, ಅವಾರ್ಡನ್ನು ಅತ್ತ ಬಿಸುಟಿ, ನಮ್ಮ ಕರಾರನ್ನೆ,—ಹಿಂದೀಯರು ತಮ್ಮೊಳಗೆ ಮಾಡಿಕೊಂಡ ಕರಾರನ್ನೆ—ಸರಕಾರವು ಒಪ್ಪಿಕೊಳ್ಳುವಂತೆ ಮಾಡುವುದು ನಮಗೆ ಒಪ್ಪುವ ಕರ್ತವ್ಯವಲ್ಲವೆ?" ಇವು ಯಥಾರ್ಥವಾಗಿಯೂ ಒಪ್ಪತಕ್ಕ ಮಾತುಗಳು. ೧೯೧೬ರಲ್ಲಿ ಸಾಧ್ಯವಾಗಿದ್ದುದು ೧೯೩೪ರಲ್ಲಿ ಸಾಧ್ಯವಾಗಲಾರದೆ? ಪ್ರತಿಯೊಬ್ಬರೂ ತಮ್ಮ ಬಗ್ಗೆ ಬೇಕಾದುದನ್ನೆಲ್ಲ ಪಡೆವುದಕ್ಕಾಗಿ ಮಾತ್ರ ಕರಾರು ಮಾಡಿಕೊಳ್ಳಬಂದರೆ ಯಾವುದೂ ಸಾಧ್ಯವಾಗದು. ಎಲ್ಲರಲ್ಲೂ ಏಕಪ್ರಕಾರವಾಗಿ ಪರಸ್ಪರ ನಂಬಿಕೆ ಉಂಟಾಗಿ ದೇಶದ ಭಾಗ್ಯವನ್ನು ಕಾಪಾಡುವುದಕ್ಕೆ ಅವರು ಮುಂದೆ ಬಂದು ವಾತ್ಸಲ್ಯದಿಂದ ದುಡಿದರೆ, ಅಸಾಧ್ಯವಾದುದು ಯಾವುದು? ಆ ಭಾಗ್ಯವಿದೆಯೆ ಅಭಾಗ್ಯರಿಗೆ?

ಎರಡು ವರ್ಷಗಳೊಳಗೆ ನೂರಕ್ಕೆ ನಾನೂರಾಗಿದೆ! ಇದರಿಂದಾಗಿ, ಕರಾಚಿ ಬಂದರವೇ ಮುಂಬಾಯಿಗೂ ಎದುರಾಗಿ ಬೆಳೆಯುತ್ತ ಬರುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಯಾವ ತಿಂಗಳಲ್ಲೂ ಇದರಷ್ಟು ಹೆಚ್ಚಾಗಿ, ಕಳೆದ ಜುಲಾಯಿ ತಿಂಗಳಲ್ಲಿ ಜೂನ್ ತಿಂಗಳಿಗಿಂತಲೂ ಹತ್ತು ಮಿಲಿಯ ಯಾರ್ಡು ದೋತ್ರ ಮೊದಲಾದುವು ಈ ದೇಶಕ್ಕೆ ಬಂದುವು; ಇವುಗಳಲ್ಲಿ ಮುಂಬಾಯಿ ಕಲ್ಕತ್ತಾ ಬಂದರುಗಳೆರಡಕ್ಕೂ ಸಿಟ್ಟು ಬಂದ ಬಟ್ಟೆಗಿಂತ ಕರಾಚಿಗೆ ಬಂದುದೇ ಹೆಚ್ಚು. ಕೃತಕ ರೇಶ್ಮೆಯು ಜೂನ್ ತಿಂಗಳಲ್ಲಿ ೧೮ ಮಿಲಿಯ ಯಾರ್ಡು ಬಂದಿದ್ದಿತು; ಇದು ಹಿಂದೆ ಎಂದೂ ಯಾವುದೊಂದು ತಿಂಗಳಲ್ಲಿ ಬಂದುದಿಲ್ಲ. ಈಗ ಜುಲೈ ತಿಂಗಳಲ್ಲಿ ೧೯॥ ಮಿಲಿಯ ಯಾರ್ಡು ಬಂದಿದೆ! ಅದರಲ್ಲೂ ೧೭ ಮಿಲಿಯ ಜಪಾನಿನಿಂದ. ನಾಲ್ಕು ಮಿಲಿಯ ರಾತ್ಲು ಹತ್ತೀನೂಲು ಜುಲೈ ತಿಂಗಳಲ್ಲಿ ಬಂದುದರಲ್ಲಿ, ಅರ್ಧ ಅಂಶವು ಜಪಾನಿನಿಂದ ಬಂದುದು; ಉಳಿದುದು ಚೀನಾ ಇಂಗ್ಲೆಂಡುಗಳಿಂದ ನಾಲು ನಾಲು ಅಂಶ. ಇಂಗ್ಲೆಂಡಿನಿಂದ ಬಂದ ಬಟ್ಟೆ ೩ ಮಿಲಿಯ ಯಾರ್ಡು ಸರಾಸರಿಗೆ ಕಡಿಮೆಯಾಗಿರುವಾಗ, ಜಪಾನಿನಿಂದ ಬಂದುದು ೩॥ ಯಾರ್ಡು ಅಧಿಕವಾಗಿಯೇ ಬಂದಿದ್ದಿತು. ಒಟ್ಟಾಗಿ,—ಜಪಾನಿನಿಂದ ಜುಲೈಯಲ್ಲಿ (ಜೂನಿನಲ್ಲಿ ಬಂದುದಕ್ಕಿಂತ ೧೪ ಮಿಲಿಯ ಯಾರ್ಡು ಹೆಚ್ಚಾಗಿ) ೭೫ ಮಿಲಿಯ ಯಾರ್ಡು ಬಟ್ಟೆ ಬಂದಿದೆ. ೧೯೩೨ರಲ್ಲಿ ಜಪಾನು ಇಲ್ಲಿಗೆ ಅತ್ಯಧಿಕ ಪರಿಮಾಣದಲ್ಲಿ ಬಟ್ಟೆ ಕಳುಹಿಸಿತು. ಈಗ ೧೯೩೨ಕ್ಕಿಂತ ನೂರಕ್ಕೆ ೧೬ರಂತೆ ಹೆಚ್ಚಾಗಿಯೇ ಬಟ್ಟೆ ಕಳುಹಿಸಿದೆ. 'ಸ್ವದೇಶಿ' ಎಲ್ಲಿದೆ?

ಮುಂಬಾಯಿಯಲ್ಲಿ 'ಸ್ವದೇಶೀ ಸಪ್ತಾಹ'

ಇದೇ ತಾ ೫ರಿಂದ ೧೧ರ ತನಕ ಸ್ವದೇಶೀ ಸಪ್ತಾಹವು ಜರಗುವುದು. ಸ್ವದೇಶೀ ಪ್ರಚಾರ ಸಭಾದಿಗಳು, ಖಾದೀ ವಿಕ್ರಯ, ಪ್ರದರ್ಶನ ಮೊದಲಾದುವುಗಳಿಂದ ಸ್ವದೇಶೀ ಕೈಗಾರಿಕೆಗಳನ್ನು ಜನರ ದೃಷ್ಟಿಗೆ ತರುವ ಮತ್ತು ಹೃದಯಕ್ಕೆ ಗಮನೀಯವಾಗುವಂತೆ ಸಾಧಿಸುವ ಸಪ್ತಾಹವಿದು. ಸ್ತ್ರೀಯರಿಗೂ ವಿದ್ಯಾರ್ಥಿಯರಿಗೂ ಪ್ರತ್ಯೇಕ ಸಭೆಗಳವೆ. ಶಾಲಾ ಕಾಲೇಜುಗಳಲ್ಲಿ ಸ್ವದೇಶೀ ವಿಚಾರವಾಗಿ ಬೋಧನೆ ನಡೆವರೆ ಹಾರೈಸಲಾಗಿದೆ. ಇಂಗ್ಲೆಂಡಿನಂತಾದಲ್ಲಿ, ಸರಕಾರವೇ ಎಲ್ಲವೂ ತನ್ನ ಸಂಪೂರ್ಣ ಮೆಹನತ್ತಿನಿಂದ ನಡೆಸಿಕೊಡುತ್ತಿದ್ದಿತು, ಇಲ್ಲಿ ಪ್ರಜೆಗಳೇ ಸ್ವಾಭ್ಯುದಯವನ್ನು ಸಾಧಿಸಬೇಕಾಗಿದೆ. ದಂಗೆಯಾದಾಗ ಐವರಿಗಿಂತ ಹೆಚ್ಚು ಜನರು ಸೇರದಂತೆ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಕೊಟ್ಟ ಅಪ್ಪಣೆ ಇನ್ನೂ ಜ್ಯಾರಿಯಲ್ಲಿದೆಯಾದರೂ ಮೋಟರ ಲೋರಿಗಳಲ್ಲಿ ಪ್ರದರ್ಶನ ಇಟ್ಟು ಸಂಚರಿಸಲು ಅಪ್ಪಣೆ ಕೊಡಲಾಗಿದೆ. ಮುಂಬಾಯಿಯ ರೀತಿಯನ್ನು ಅನುಸರಿಸುವ ಕೆಲವು ನಗರಗಳಾದರೂ ಈ ದೇಶದಲ್ಲಿವೆಯಾದರೆ, ಸ್ವದೇಶೀ ಪ್ರಚಾರವು ಸಾಧ್ಯ.

ಮದ್ರಾಸಿನಲ್ಲಿ ಪ್ರತ್ಯಕ್ಷ ದರ್ಶನಕ್ಕಾಗಿ ಬಂದ

ಶ್ರೀಮತಿ ಎಲನ್ ವಿಲ್ಕಿನ್‌ಸನ್ ಎಂಬ ಪಾರ್ಲಿಮೆಂಟಿನ ಸದಸ್ಯೆಯು ಹಿಂದೀ ಕೂಲಿಗಳ ಸ್ಥಿತಿಯನ್ನು ಕಂಡು "ಇದು ಸಮಸ್ತ ಜನಾಂಗಗಳಿಗೂ ಒಂದು ಕಲಂಕ" ಎಂದಳು. ಕಲಂಕವಿದು ನಿಜ, ಆದರೆ ರುಜುವಾತೆಲ್ಲಿ? ಯಾವ ಬ್ರಿಟಿಷ ಮಜೂರ ಪಕ್ಷವು ಈ ಹಿಂದೀ ಮಜೂರರ ಪರವಾಗಿ ವಾದಿಸಬೇಕಾಗಿದ್ದಿತೋ, ಅದು ಮೌನವಾಗಿದೆ. ಇವರೆಲ್ಲ ಇಂಡಿಯಕ್ಕೆ ಒಂದೊಡನೆ, ಸ್ವತಃ ಅನುಭವ ಪಡೆದು ಸ್ಫುರಣ ಹೊಂದುತ್ತ ಕೂಡಲೇ ಕಠಿನವಾಗಿ ಟೀಕಿಸುವರು, ಇಂಗ್ಲೆಂಡಿಗೆ ತೆರಳುತ್ತಲೆ, ತಮ್ಮ ಕಾಪತ್ರಯಗಳಲ್ಲೆ ಮಗ್ನರಾಗಿ ಇದನ್ನು ಮರೆವರು. ೫ ವರ್ಷಗಳ ಹಿಂದೆ ಬ್ರಿಟಿಷ ಮಜೂರ ಸಂಘದ ಪ್ರತಿನಿಧಿಗಳೂ ಇಲ್ಲಿಗೆ ಬಂದು, ಇಲ್ಲಿನ ಮಜೂರರ ದುಃಸ್ಥಿತಿ ನೋಡಿ ದಿಗ್ಭ್ರಾಂತರಾಗಿದ್ದರು. ಇಂಗ್ಲೆಂಡಿಗೆ ಹೋದ ಬಳಿಕ, ಈ ವಿಷಯವಾಗಿ ತಮ್ಮ ಅನುಭವವನ್ನು ಜಗತ್ತಿನ ಜನಾಂಗಗಳಿಗೆ ತಿಳಿಸಲು ಇವರಿಗೆ ಅವಕಾಶವೇ ದೊರೆಯಲಾರದಾಯಿತು. ಆದರೆ ಶ್ರೀಮತಿ ಎಲನಳು ಹೀಗಿರಲಾರಳು. ಜೀವಂತ ವಿದ್ಯುಚ್ಛಕ್ತಿಯವಳು. ಊರಿಗೆ ಹೋಗಿ ಈ ಕಿಡಿಯು ಎಲ್ಲಿ ಎಷ್ಟು ಬೆಳಗಿಸುವುದೋ ನೋಡಬೇಕು.

ರಾಜಭಕ್ತಿ ಶಿಕ್ಷಣ.

ಮಿ| ಎಲ್ಲಿಸನ್ ಎಂಬವರನ್ನು ಯುವಕನಾರೋ ಗುಂಡು ಹೊಡೆದು ಓಡಿದನಲ್ಲವೆ? ಅವನು ಯಾವ ದಾರಿಯಾಗಿ ಓಡಿದ್ದನೋ, ಆ ರಸ್ತೆಯಲ್ಲಿ ವಾಸವಾಗಿರುವವರಲ್ಲಿ ಗೌರವಾನ್ವಿತರಾದ ಹದಿಮೂರು ಗೃಹಸ್ಥರನ್ನು ಸ್ಪೆಶಲ್ ಪೋಲೀಸರನ್ನಾಗಿ ಸರಕಾರವು ನೇಮಿಸಿದಿಟ್ಟಿದೆ. ಕೇಡಿಯು ಓಡಿಹೋಗುವಾಗ ಅವನನ್ನು ಹಿಡಿಯಲೂ ಇಲ್ಲ. ಅವನು ಯಾರೆಂದು ತಿಳಿಯಬಹುದಾಗಿದ್ದರೂ ತಿಳಿಯಲಿಲ್ಲ, ಇನ್ನೂ ಅವನ ಪತ್ತೆಯಿಲ್ಲ, ಆದಕಾರಣ ಇವರೇ, ಆ ರಸ್ತೆಯ ನಿವಾಸಿಗಳೇ ಸ್ಪೆಶಲ್ ಪೋಲೀಸರು! ಇವರಲ್ಲಿ ಕೆಲವರು ವಕೀಲರು. ಇವರು ಪ್ರತಿದಿನ ಬೆಳಗ್ಗೂ ಸಂಜೆಗೂ ಪೋಲೀಸ್ ಸ್ಟೇಶನಿನಲ್ಲಿ ಹಾಜರಿಗೆ ದಾಖಲಾಗಿ, ಬೀದಿಗಳಲ್ಲಿ 'ಬೀಟಿನ' ಕೆಲಸವನ್ನೂ ಮಾಡತಕ್ಕುದು. ಆರ್ಡಿನೆನ್ಸಿನ ಯಾವತ್ತು ಕಲಂಗಳನ್ನು ಜ್ಯಾರಿಗೆ ತಂದರೂ ಕೇಡಿಯು ಸಿಕ್ಕಿಲ್ಲ. "ಗೌರವವುಳ್ಳ ಗೃಹಸ್ಥರನ್ನು ಅವರ ಮಾನ ಕೆಡಿಸಲು ಪೋಲೀಸರನ್ನಾಗಿ ಮಾಡಬಾರದೆಂಬುದು ಹೈಕೋರ್ಟಿನ ಸೂಚನೆ; ಕಾನೂನು ಕ್ರಮಗಳನ್ನು ಜ್ಯಾರಿಗೆ ತರಲು ಅವರನ್ನು ನೇಮಿಸಬಹುದು. ಈ ಹದಿಮೂರರ ಕುಕರ್ಮವೇನು!" ಎಂಬುದೊಂದೇ ಕ್ರಾನಿಕಲಿನ ಪ್ರಶ್ನೆ.

ನೋಟಗಳು

NOTE....S

ನಮ್ಮೂರ ಮೈದಾನಿನ ಭಾಗ್ಯೋದಯವು! ಅಲ್ಲಿ ಶಾಲಾ ಕಾಲೇಜುಗಳ ಪಂದ್ಯಾಟಗಳು ಜರಗುತ್ತಿವೆ. ಅಷ್ಟು ಮಕ್ಕಳನ್ನೆ ಆಡಿಸುತ್ತಿದ್ದು, ಊರ ಯುವಕರ ದೇಹಗಳು ಬೆಳೆವಂತೆ ಸಹಾಯಕವಾದ ಮೈದಾನೇ,—ನಿನಗೆ ನಮಸ್ಕಾರವು!

* * * *

ಪಂದ್ಯಾಟಗಳಲ್ಲಿ ಆಡುವುದೂ ದೊಡ್ಡದಲ್ಲ. ಗೆಲ್ಲುವುದೂ ದೊಡ್ಡದಲ್ಲ. ಪರಬ್ರಹ್ಮನ ಅವತಾರವಾದ 'ಅಂಪಾಯರ್' ದೇವದೂತನ ದಯೆಯೊಂದೇ, ಬಲವೊಂದೇ ಮುಖ್ಯ. ಆದಕಾರಣ, ವಿಜಯ ಸಹಾಯಕ ಕೃಷ್ಣನಂತಹ ಅಂಪಾಯರನೇ,—ನಿನಗೆ ನಮಸ್ಕಾರವು!!

* * * *

'ಅಂಪಾಯರ' ವಿಮರ್ಶಕನ ಕಣ್ಣು ಕುರುಡಾಗಿರಬಾರದು, ಕೋಪುಗಣ್ಣಾಗಿರಬಾರದು, ಪಕ್ಷಪಾತವೂ ವಾತವೂ ಇದ್ದುದಾಗಬಾರದು. ಚೆಂಡು 'ಕೇಚ' ಮಾಡುವಾಗ, ಪುಟನೆಗೆದು ಹಿಡಿದವನ ಕೈಸೇರಿತೋ ಎಂದು ಗೊತ್ತು ಮಾಡಲೂ, ಚೆಂಡು ಬೀಟಿಗೆ ತಗಲಿ ವಿಕೆಟಿನ ಎದುರಿನ ಕಾಲಿಗೆ ಮುಟ್ಟಿತೋ ಎಂದು ಗೊತ್ತು ಮಾಡಲೂ ಸೂಕ್ಷ್ಮವಾಗಿ ನೋಡುವುದಾಗಬೇಕು. ಇಲ್ಲದಿದ್ದರೆ ಅಂಪಾಯರನ ಫೇಯರ್ ಮೋಸವಾದೀತು.

* * * *

ಅಂಪಾಯರನ ಕಿವಿಯೂ ಕಿವುಡಾಗಿರಬಾರದು. ಚಂಡಿನ ಉರುಳಾಟ ನೋಡ ಅವನಿಗೆ ಕೇಳುತ್ತಿರಬೇಕು. ಇಲ್ಲವಾದಲ್ಲಿ, ಅವನ 'ಯಸ್!' ನಿಂದ ಧ್ವಂಸವೇ ಆಗುವುದು.

* * * *

ಅಪರಾಧಿತನ ಮೇಲೆ ಸ್ವಲ್ಪವೂ ಸಂಶಯವಾದರೆ, ಮೊಕದ್ದಮೆ ಖುಲಾಸೆಯಾಗುವ ಹಾಗೆ, ಅಂಪಾಯರನಿಗೆ ಸ್ವಲ್ಪವೂ ಸಂದೇಹವಿದ್ದರೆ, ಆಡಲು ನಿಷೇಧ- ನಿಶ್ಚಯವಾಗಬೇಕು. Lenefit of the doubt ಆಡುವವನಿಗೆ ಇರಲೇ ಬೇಕು. ಇಲ್ಲದಿದ್ದಲ್ಲಿ ನ್ಯಾಯವಿಹೀನನಾಗುವನು.

* * * *

"How s that" ಎಂಬ ಪ್ರಶ್ನೆಗೆ "out" ಎಂಬುದೊಂದೇ ಉತ್ತರವಲ್ಲ. "Nothing" ಅಥವಾ "not out" ಎಂಬುದೂ ಒಂದು ಉತ್ತರವಿದೆ ಎಂಬುದನ್ನು ಅಂಪಾಯರನು ತಿಳಿದೇ ಇರಬೇಕು. [illegible] ut ಬಾಯಿಸಾರ [illegible] ಪ್ರಶ್ನೆಯು ಅಂಪಾಯರನಲ್ಲಿ, ಪಂಪಾಯರು

* * * *

ಕೂಡಿದ ಜನರೂ ಅಂಗನೆಗಳ ಪ್ರೋತ್ಸಾಹವೆಲ್ಲ ನೀವು ಹಿಡಿದ ಪಕ್ಷಕ್ಕೇ ಇರಲಿ. ಆದರೂ, ಸತ್ಯ ಸ್ಥಿತಿಯನ್ನು ತಿಳಿಯಲು ನೇಮಕಹೊಂದಿರುವ ಅಂಪಾಯರರ ತೀರ್ಮಾನವನ್ನು ಒಪ್ಪಿಕೊಂಡರೆ ನಷ್ಟವಿಲ್ಲ. ಒಮ್ಮೆ ಅವರ ತೀರ್ಮಾನ ಸರಿಯಲ್ಲವೆಂದು ಗೊತ್ತಾದರೆ, ಸರಿಯಾಗಿ ಚರ್ಚಿಸಿರಾಯಿತು. ಅದಕ್ಕಾಗಿ ಇತ್ತಂಡಗಳ ಕೇಳ್ವನಿರುವಾಗ, ದೂರದ ಮೇರೆಯ ಒಳ ಕೂತೂ ದೂರುವುದು ಸರಿಯಲ್ಲ.

* * * *

ಅನಾವಶ್ಯಕವಾದ ಧ್ವನಿಗಳನ್ನೆಬ್ಬಿಸಿ ಗುಲ್ಲುಹಾಕಿ, ಗಡಿಬಿಡಿಮಾಡಿದರೆ, ಅಂಪಾಯರು ದಿಗ್ಭ್ರಾಂತನಾಗುವನು. ಆಡುವವರು ಗಲಿಬಿಲಿ ಹೊಂದುವರು. ಆಟ ಕೆಡುವುದು. ಮೈನೂ ರೀತಿಗೆಡುವುದು. ಅದು ರಣರಂಗವಲ್ಲ.

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE
Seiberling's Exclusive Quality.



TRIED & PROVED.

USE A Seiberling Tube

A Seiberling Tire.

You, cannot find a better combination.

[illegible]

[illegible]
ಹೊಸ ಪಯಣ ೩
ಸ್ಫುಟವಿಚಾರಗಳು ೪
ಸೂಚನೆಗಳು ೫
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೪
ಒಳದೇಶ ವರ್ತಮಾನ ೪
ದಕ್ಷಿಣ ಕನ್ನಡ—ಮಂಗಳೂರು, ಕಾಸರಗೋಡು, ಉಡುಪಿ, ಬಂಟ್ವಾಳ, ಮೂಲ್ಕಿ, ಬೆಳ್ತಂಗಡಿ, ಪಂಜಿಕಲ್, ಪುತ್ತೂರು ೭
ವಿವಿಧ ಸಮಾಚಾರಗಳು ೧೧
ಹುಕಾರ್ ೩
ಪತ್ರವ್ಯವಹಾರ ೧೦
ರಾಜಾ ರಾಮಮೋಹನ ರೋಯ್ ಕೇಶವ ಚಂದ್ರಸೇನ ಮತ್ತು ಸ್ವಾಮಿ ದಯಾನಂದ ಸರಸ್ವತಿ ೧೪
ರಾಜ್ಯಭಾರದ ನವಸುಧಾರಣೆ' ವೈಸರಾಯರ ಧೋರಣೆ! ೯

ಸ್ವದೇಶಾಭಿಮಾನಿ.

ತಾ. ೯ನೇ ಶುಕ್ರವಾರ ಸಪ್ಟಂಬರ ೧೯೩೨

ಹೊಸ ಪಯಣ.

ಹಿಂದೂಸ್ಥಾನದ ಲಿಬರಲ್ ಪಕ್ಷದವರಷ್ಟು ಅಲ್ಪಾಭಿಲಾಷೆಯುಳ್ಳವರೂ ಅಲ್ಪತೃಪ್ತಿಯನ್ನು ಹೊಂದುವವರೂ ಯಾರೂ ಇಲ್ಲವೆನ್ನಬಹುದು. ಅವರು ತಮ್ಮ ಧೋರಣವನ್ನು ರಚಿಸುವಾಗ ದೇಶದ ಹಿತವನ್ನು ಉದ್ದೇಶಿಸುತ್ತಾರೊ ಎಂಬುದು ಬಹಳ ಸಂದೇಹವಾಗುತ್ತದೆ. ದೇಶದ ವಿಶಾಲ ಪ್ರಶ್ನೆಗಳನ್ನು ಅಲಕ್ಷಿಸಿ ಕೇವಲ ಚಿಕಪ್ಪುದರಲ್ಲಿ ಮಾತಿನ ಅಪವ್ಯಯವನ್ನು ಮಾಡುವುದೆಂದರೆ ಅವರಿಗೆ ಪ್ರೀತಿ. ಇಲ್ಲವಾದರೆ ಇಡೀ ದೇಶವು ಈಗಿನ ದಬ್ಬಾಳಿಕೆಯಲ್ಲಿ ಇಷ್ಟು ಪ್ರಕ್ಷುಬ್ಧವಾಗಿರುವಾಗ ಲಿಬರಲ್ ಪಕ್ಷದವರು ಚಿಲ್ಲರೆ ಸಂಗತಿಗಳನ್ನೆತ್ತಿ ಸರಕಾರದೊಡನೆ ಹೆಣಗಾಡಿ ಅವರ ತೀವ್ರ ರಾಜತಂತ್ರಕ್ಕೆ ಬಲಿಯಾಗುತ್ತಿರಲಿಲ್ಲ

ಮಜೂರಪಕ್ಷವು ಅಧಿಕಾರದಲ್ಲಿದ್ದಾಗ ಅದರ ಪ್ರೇರಣೆಯಲ್ಲಿ ರೌಂಡ್‌ಟೇಬಲ್ ಪರಿಷತ್ತು ಕೂಡಿ, ಮಜೂರಪಕ್ಷವು ಅಧಿಕಾರಚ್ಯುತವಾದ ಮೇಲೆ ಸೇರಿದ ರೌಂಡ್‌ಟೇಬಲ್ ಪರಿಷತ್ತಿನಲ್ಲಿ, ಮೊದಲಿನ ಉದಾರ ಧೋರಣವನ್ನೇ ಆಗ ತಾನೆ ಅಧಿಕಾರಕ್ಕೆ ಬಂದ ನಶನಲ್ ಸರಕಾರವು ಮಾತಿನಲ್ಲೂ, ಕಾರ್ಯದಲ್ಲೂ ನಿರಾಕರಿಸಿ, ಅದರ ಮರುದಿನದಲ್ಲೇ ಪ್ರಚಂಡ ದಬ್ಬಾಳಿಕೆಯನ್ನು ಪ್ರಾರಂಭಿಸಿರುವಾಗ, ಈ ಲಿಬರಲ್ ಪಕ್ಷವು ಅದರ ಮಾತಿನ ಮೋಹದಲ್ಲೇ ಮುಂದರಿದುದು ಆಶ್ಚರ್ಯ

ಆ ವೇಳೆ ಬ್ರಿಟಿಷ ರಾಜತಂತ್ರಜ್ಞರ ಕಡೆಯಿಂದ ಬಂದಿರುವ ಮಾತುಗಳು ಹಿಂದಿನ ವಾಗ್ದಾನವನ್ನು ಮರೆಯಿಸುವಂತಹವುಗಳೇ ಆಗಿದ್ದುವು. ಲೊರ್ಡ್ ಇರ್ವಿನರು ಹಿಂದೂಸ್ಥಾನಕ್ಕೆ ಡೊಮಿನಿಯನ್ ಸ್ಟೇಟ್ಸ್ ಕೊಡುವುದಾಗಿ ವಚನವಿತ್ತರು; ಮತ್ತು ಆಗಿನ ಮಜೂರ ಮಂತ್ರಿಮಂಡಲವು ಅವರನ್ನು ಪುಷ್ಟೀಕರಿಸಿತು. ಆ ಮೇಲೆ ಡೊಮಿನಿಯನ್ ಸ್ಟೇಟ್ಸ್ ಶಬ್ದವು ಫೆಡರೇಶನ್ ಶಬ್ದದಿಂದ ಅಡಗಿಸಲ್ಪಟ್ಟಿತು. ಈ ಡೊಮಿನಿಯನ್ ಸ್ಟೇಟ್ಸಿನ ಮಾತೇ ಕೇಳಬರುವುದಿಲ್ಲ. ಮಾತ್ರವಲ್ಲದೆ ಫೆಡರೇಶನ್ ಯಾವಾಗ ಬರುವಂತಹುದು? ಎಷ್ಟು ಆಶ್ರಿತ ರಾಜರು ಇದರಿಂದ ಹೊರಗಾಗಬೇಕು? ಎಂಬ ಪ್ರಶ್ನೆಗಳು ಹುಟ್ಟಲಾರಂಭಿಸಿವೆ. ಅಷ್ಟಲ್ಲದೆ, ಹಾಗೆ ಕೊಡಲ್ಪಡುವ ಫೆಡರೇಶನ್ ಸರಕಾರದಲ್ಲಿ ತತ್ಕಾಲದ ಮಟ್ಟಿಗೆ ಸ್ವಾತಂತ್ರ್ಯ (Responsibility at the Centre) ಇರಬಾರದೆಂಬ ಮಾತು ಬಂದಿದೆ. ಮೊದಲು ಹಿಂದೂಸ್ಥಾನಕ್ಕೆ ಪ್ರಯೋಜನಕರವಾದ (Safe guards) ಅಂದರೆ ಒಂದೇ ಬಾರಿ ಸಂಪೂರ್ಣಸ್ವಾತಂತ್ರ್ಯ ಕೊಟ್ಟರೆ, ಥಕ್ಕನೆ ಉಂಟಾಗುವ ಈ ಬದಲಾವಣೆಯಿಂದ ದೇಶಕ್ಕೆ ಉಂಟಾಗಬಹುದಾದ ಹಾನಿ ತಪ್ಪಿಸುವ ಬಗ್ಗೆ ಬ್ರಿಟಿಷ 'ರಕ್ಷಣೆಯ ಕೆಲವು ಅಧಿಕಾರವನ್ನು ಮಾತ್ರ ಬ್ರಿಟಿಷರು ಇಟ್ಟುಳಿದ ಪೂರ್ಣಸ್ವಾತಂತ್ರ್ಯ ಕೊಡುವುದೆಂಬ ಮಾತಿದ್ದಿತು. ಆದರೆ ಕಾಲ ಕ್ರಮೇಣ, ಹಿಂದೂಸ್ಥಾನದ ಹಿತವೆಂಬ ಮಾತು ಹೋಗಿ ಬ್ರಿಟಿಷ ಹಿತ, ಯುರೋಪೀಯ ವ್ಯಾಪಾರಿಗಳ ಹಿತ, ಮುಸ್ಲಿಮ್ ಹಿತ, ಅಸ್ಪೃಶ್ಯರ ಹಿತ ಎಂದು ಹಿತಗಳೆಲ್ಲಾ ಎಂಗಡಿ

[illegible] ಸ್ವಾತಂತ್ರ್ಯ [illegible]

ಇಷ್ಟಾದರೂ ಲಿಬರಲ್ ಪಕ್ಷದವರಿಗೆ ಬ್ರಿಟಿಷರ ಮೇಲೆ ವಿಶ್ವಾಸ. ಆ ವಿಶ್ವಾಸಕ್ಕೆ ಸರ್ ಸಾಮುವೇಲ್ ಹೋರರು ಒಂದು ಧಕ್ಕೆ ಕೊಟ್ಟರು—ಇನ್ನು ರೌಂಡ್‌ಟೇಬಲ್ ಪರಿಷತ್ತು ಸೇರುವುದಿಲ್ಲವೆಂದು. ಕೊಂಗ್ರೆಸ್ಸು ಜೈಲಿಗೆ ಸೇರಿ ಅಳಿದು ಹೋಗಿರುವಾಗ ಉಳಿದವರು ತಾವೇ ಗೌಡರೆಂದುಕೊಂಡವರಿಗೆ ಇದೊಂದು ದೊಡ್ಡ ಅಪಮಾನವಾಯಿತು. ಬ್ರಿಟಿಷ ಧೋರಣದ ಬದಲಾವಣೆಯಿಂದಲೂ, ವಾಗ್ದಾನದ ಮುರಿಯುವಿಕೆಯಿಂದಲೂ ರೌಂಡ್‌ಟೇಬಲ್ ಪರಿಷತ್ತಿಗೇನ ಅಪಮಾನವಾದುದು ಅವರನ್ನು ವಿಚಲಿಸಲಿಲ್ಲ. ಇದನ್ನು ಮಾತ್ರ ಅವರು ಸಹಿಸಲಾರರಾದರು. ಇದೇ ಅವರ ಆಶ್ಚರ್ಯಕರ ಮಾನಸಿಕತೆ!

ಚಾಣಾಕ್ಷರಾದ ಬ್ರಿಟಿಷರು ತಮ್ಮ ಈಗಿನ ಪರಿಸ್ಥಿತಿಯಲ್ಲಿ, ತಮಗೆ ಯಾವುದೊಂದು ಬಾಧೆಯಿಲ್ಲವಾದರೆ, ಲಿಬರಲ್ ಪಕ್ಷವನ್ನೂ ತಮ್ಮ ವಿರೋಧ ಪಂಗಡಕ್ಕೆ ಸೇರಿಸುವುದು ಅನಾವಶ್ಯಕ ತೊಂದರೆಯೆಂದು ತಿಳಿದುಕೊಂಡರು. ಮತ್ತು ಈ ಲಿಬರಲ್ ಪಕ್ಷವನ್ನು ಒಲಿಸಲಿಕ್ಕೆ ಸರ್ ಸಪ್ರೂಗಳೊಡನೆ ಪ್ರಣಯವನ್ನು ಬೆಳೆಸಿದರು. ಲೊರ್ಡ್ ವಿಲ್ಲಿಂಗ್ಡನ್ನರು ಕೆಲವು ದಿನಗಳ ಹಿಂದೆ ಅವರನ್ನು ಕರೆಯಿಸಿ ಬೆನ್ನು ತಟ್ಟಿ ತುಂಟ ಮಗನನ್ನು ಗೊಂಬೆ ತೋರಿಸಿ ಸಮಾಧಾನ ಮಾಡುವಂತೆ ಮಾಡಿದರೆಂದು ತೋರುವುದು. ಅಂತೂ ಪ್ರಾಯಶಃ ಆ ಬೆನ್ನು ತಟ್ಟುವಿಕೆಯ ಫಲವಾಗಿ ಹಿಂದೂಸ್ಥಾನಕ್ಕೆ ಒಂದು ಗೊಂಬೆ ಕೊಡಲ್ಪಟ್ಟಿದೆ—ನಿಜವಾದ ರೌಂಡ್‌ಟೇಬಲ್ ಪರಿಷತ್ತಲ್ಲ—ಅದರದೊಂದು ಗೊಂಬೆ. ಇದರಿಂದ ಅಳುಮುಖರಾದ ಲಿಬರಲ್ ಪಕ್ಷವು ಸಮಾಧಾನ ಹೊಂದುವುದರಲ್ಲಿ ಸಂದೇಹವಿಲ್ಲ.

ವ್ಯಾಸರಾಯಿಯವರು ಮೊನ್ನೆ ತೆರೆದ ಎಸೆಂಬ್ಲಿ ಅಧಿವೇಶನದಲ್ಲಿ ಈ ಗೊಂಬೆಯ ರೂಪವನ್ನು ವರ್ಣಿಸಿದರು. ಬರುವ ನವಂಬರ್ ಮಧ್ಯದಲ್ಲಿ ಲಂಡನ್ನಿನಲ್ಲಿ ಒಂದು ಸಣ್ಣ ಪರಿಷತ್ತು ಸೇರಿಸಲ್ಪಡುವುದು. ಅದು ಪೂರ್ವನಿರ್ಣಿತ ಪ್ರಶ್ನೆಗಳನ್ನು ಚರ್ಚಿಸಿ ಆ ಪ್ರಶ್ನೆಗಳ ತೀರ್ಮಾನವು ಹೊಂದಲ್ಪಡುವುದು.

ಲಿಬರಲರ ಈ ಹೊಸ ಪಯಣದಲ್ಲಿ ಅವರಿಗೆ ನಾವು ಸುಖಪ್ರವಾಸವನ್ನು ಬಯಸುತ್ತೇವೆ.

ಕೆನರಾ ಬೇಂಕ್ ಲಿಮಿಟೆಡ್, ಚಿಕ್ಕಮಗಳೂರು.

ಇಲ್ಲಿನ ಕೆನರಾ ಬೇಂಕಿನ ಶಾಖೆಯನ್ನು ಈ ತಿಂಗಳ ತಾ ೭ನೆ ಇಲ್ಲಿನ ಭವ್ಯವಾದ ಒಂದು ಕಟ್ಟೋಣದಲ್ಲಿ ತೆರೆಯಲಾಯಿತು. ಬೆಳಗ್ಗೆ ಘಂಟೆ ೧೦ರಿಂದ ೧೨ರ ವರೆಗೆ ಕಟ್ಟೋಣದಲ್ಲಿ ಹೋಮ ವಗೈರೆ ಇದ್ದು ಪೂಜಾವಿಧಿಗಳು ಪೂರೈಸಲ್ಪಟ್ಟುವು. ಸಾಯಂಕಾಲ ೫ ಘಂಟೆಗೆ ಮಹಾಜನ ಸಭೆ ಸೇರಿಸಲ್ಪಟ್ಟಿತು. ಡೆಪ್ಯುಟಿ ಕಮಿಶನರರಾದ ಮಿ. ಕುಪ್ಪುಸ್ವಾಮಿಯ್ಯಂಗಾರರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಮುನ್ಸಿಪಲ್ ಚೆಯರ್ಮನರು, ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರು ಮೊದಲಾದ ಪ್ರಮುಖ ಆಫೀಸರರೂ, ಊರಿನ ಪ್ರಸಿದ್ಧ ವ್ಯಾಪಾರಿಗಳೂ ಹಾಜರಿದ್ದರು. ಬೇಂಕಿನ ಪರವಾಗಿ, ಮ। ರಾ। ಅಮ್ಮೆಂಬಳ ಶ್ರೀನಿವಾಸ ಪೈ, ಪಾಂಗಾಳ ಗೋಪಾಲ ನಾಯಕ್, ನಗರ ನರ್ಸಿಂಹ ಕಾಮತ್, ಉಳ್ಳಾಲ ಶ್ರೀನಿವಾಸ ಮಲ್ಯರೂ ಹಾಜರಿದ್ದರು. ಮ। ರಾ। ರಾ। ಅಮ್ಮೆಂಬಳ ಉಪೇಂದ್ರ ಪೈ, ರಿಟಾಯರ್ಡ್ ಡಿಸ್ಟ್ರಿಕ್ಟ್ ಕಲೆಕ್ಟರರೂ ಬಂದಿದ್ದರು. ಸಭಾಕಾರ್ಯವು ಉಪಾಹಾರದಿಂದ ಆರಂಭವಾಯಿತು. ಆ ಮೇಲೆ ಮ್ಯುನಿಸಿಪಲ್ ಚೆಯರ್ಮನರು ಬೇಂಕನ್ನು ಸ್ವಾಗತೀಕರಿಸಿದರು. ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳು ಬೇಂಕಿನ ಹಿಂದಿನ ಚರಿತ್ರೆಯನ್ನು ಹೇಳಿ, ಚಿಕ್ಕಮಗಳೂರಿಗೂ ಮಂಗಳೂರಿಗೂ ಇರುವ ಅವಿಚ್ಛಿನ್ನ ಸಂಬಂಧವನ್ನು ವಿವರಿಸಿ ಬೇಂಕಿನ ಆವಶ್ಯಕತೆಯನ್ನು ಪ್ರತಿಪಾದಿಸಿ, ಇತರ ಬೇಂಕುಗಳೊಡನೆ ಸಹಕರಿಸಿ ಹೇಗೆ ಈ ಬೇಂಕು ತನ್ನ ಕೆಲಸವನ್ನು ಜನರಿಗೆ ಉಪಯೋಗಕರವಾಗುವಂತೆಯೂ, ಬೇಂಕಿಗೆ ನಷ್ಟವಾಗದಂತೆಯೂ ನಿರ್ವಹಿಸುವುದೆಂಬುದನ್ನು ಹೇಳಿದರು. ಮಿ। ಕುಪ್ಪುಸ್ವಾಮಯ್ಯಂಗಾರರು ಬೇಂಕು ಬಂದುದರಿಂದಾಗುವ ಉಪಕಾರವನ್ನು ಒಪ್ಪಿ, ಬೇಂಕಿನ ಡೈರೆಕ್ಟರರನ್ನು ಅಭಿನಂದಿಸಿ ತಮ್ಮ ಅಧ್ಯಕ್ಷ ಭಾಷಣವನ್ನು ಕೊನೆಗೊಳಿಸಿದರು. ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳು ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿದ ಮೇಲೆ, ಶ್ರೀಮನ್ಮಹಾರಾಜರಿಗೆ ಶ್ರೇಯಸ್ಸನ್ನು ಬಯಸಿ ಸಭೆಯು ಮುಕ್ತಾಯವಾಯಿತು.

* * *

ವಿದೇಶ ವರ್ತಮಾನ

ಲಿಂಡ್‌ಬರ್ಗ್ ಮಗುವನ್ನು ಕೊಂದ ಸಂಬಂಧವಾಗಿ ಜೋನ್ಸ್ ಟೌನಿನಲ್ಲಿ ಕ್ಲೇರೆನ್ಸ್ ಸ್ಪೆಂಕ್ ಎಂಬವನನ್ನು ಸೆರೆ ಹಿಡಿದಿರುವರು.

— ವಿಸ್ಕಿಯ ಮೇಲೆ ಭಾರವಾದ ತೆರಿಗೆಯನ್ನು ಹೊರಿಸಿದುದರಿಂದ ಸ್ಕಾಟಿಷ ವಿಸ್ಕಿ ಕಾರ್ಖಾನೆಗಳು ತಮ್ಮ ಪ್ರವೃತ್ತಿಯನ್ನೇ ನಿವೃತ್ತಿಪಡಿಸಿರುತ್ತವೆ.

— ಜಪಾನಿಗೂ ಅಮೇರಿಕಕ್ಕೂ ವೈಷಮ್ಯವು ಬೆಳೆದಿವೆ. ಜಪಾನು ಮಂಚೂರಿಯದಲ್ಲಿ ನಡೆಸುವ ಹಾವಳಿಯಿಂದಾಗಿ ಅಮೇರಿಕವು ಕಿಡಿಕಿಡಿಯಾಗುತ್ತಿದೆ.

— ಮಂಚೂರಿಯದ ಸ್ಥಿತಿಗತಿಗಳ ಕುರಿತು ಲಿಟನ್ ದೊರೆಯವರು ಒಂದು ರಿಪೋರ್ಟನ್ನು ಬರೆದಿರುವರು. ಅದು ಸರಿಯಾಗಿ ೧೦೦,೦೦೦ ಶಬ್ದಗಳಿಂದ ಕೂಡಿದೆ.

—ಜಿನೆವಾದಲ್ಲಿ ಲೀಗ್ ಒಫ್ ನೇಶನ್ಸಿನ ಒಂದು ಭವ್ಯ ಮಂದಿರವು ರಚಿಸಲ್ಪಡುತ್ತಿದೆ. ಅದರ ಕೆಲಸಗಾರರು ಮುಷ್ಟಿಯುದ್ಧಕ್ಕಿಳಿದು ಕಲ್ಲು ಕಬ್ಬಿಣಗಳಿಂದ ಹೊಡೆದಾಡಿಕೊಂಡು ಘಾಯಗೊಂಡರು. ಹತ್ತು ಮಂದಿಗಳನ್ನು ಸೆರೆಹಿಡಿದಿರುತ್ತಾರೆ. ಇದು ಮುಂಬರುವ ಯುದ್ಧದ ಚಿಹ್ನೆಯೆಂದು ಕೆಲವರೆನ್ನುತ್ತಿರುವರು

ಒಳದೇಶ ವರ್ತಮಾನ

— ಮೈಲಾರ ಗುಡ್ಡದಿಂದ ಬರುವ ದಾರಿಯಲ್ಲಿ ಹೊಳೆಯ ಪ್ರವಾಹದ ಮೇಲೆ ಒಬ್ಬ ವ್ಯಕ್ತಿಯು ಚೌಕಾಗಿ ಕೂತು ತೇಲುತ್ತ ಒಂದು ಫರ್ಲಾಂಗಿನ ವರೆಗೆ ಮುಳುಗದೆ ಹೋದುದನ್ನು ಎಷ್ಟೋ ಜನರು ಕಂಡು ಆಶ್ಚರ್ಯಚಕಿತರಾಗಿ ಅವರನ್ನು ಹಿಂಬಾಲಿಸಿ ಅವರ ಸಮಾಚಾರವನ್ನು ಕೇಳಿದರು. ಅವರು ಜನರಿಗೆ ಕೂಡಲಿಕ್ಕೆ ಹೇಳಿ, ಜಯರಾಮಯೋಗಿ ಎಂದು ಕೂಗಲು ಪ್ರತಿಯೊಬ್ಬರ ಮುಂದೆ ಪಕ್ವಾನ್ನಭರಿತ ಬಾಳೆ ಎಲೆಗಳು ಇಡಲ್ಪಟ್ಟುವು. ಭೋಜನವಾದ ನಂತರ ಒಂದು ನಾಗರ ಹಾವನ್ನು ಕರೆದು ಅದಕ್ಕೆ ಶ್ರಾವಣ ಬಳಿಕ್ಕೆ ಹಾಜರಿರು ಎಂದು ಹೇಳಿ ಕಳುಹಿಸಿದರು. ಹಾಗೆ ಅಲ್ಲಿ ಕೂಡಿದ ಪ್ರತಿಯೊಬ್ಬರ ಮನದೊಳಗಿನ ಆಲೋಚನೆಗಳನ್ನೂ ಅವರವರ ಸ್ಥಿತಿಗಳನ್ನೂ ಹೇಳಿ ಎಲ್ಲರೂ ದುರ್ಗುಣಗಳಿರುವರು ಎಂಬು ಹೇಳಿ ಮುಂದೆ ಹೋಗಿ ಮಾಯವಾದರು. ಈ ಮಹಾತ್ಮನನ್ನು ಹುಡುಕಲು ನೂರಾರು ಜನರು ತಿರುಗುತ್ತಿರುವರು. ಈ ಮಹಾಮಹಿಮನು ಹುಲ್ಲಾಳ ವೈದ್ಯಪಂಡಿತನಿದ್ದನೆಂದೂ ಯೋಗಸಾಧನೆಯಿಂದ ಲೋಕೋದ್ಧಾರದ ಸಲುವಾಗಿ ಸಂಚರಿಸುತ್ತಿರುವನೆಂದೂ ಈ ಮೊದಲು ನೋಡಿದ ಜನರು ಹೇಳುತ್ತಿರುವರಂತೆ. ಇವರು ಕೆಲವು ದಿನ ಸಿಗ್ಗಾವಿಯಲ್ಲಿದ್ದರೆಂದೂ ಸುದ್ದಿಯಿದೆ ಎಂದು ದೇವರ ಗುಡ್ಡದ ಯಾತ್ರಕಮಂಡಳಿಯಿಂದ ತರುಣ ಕರ್ನಾಟಕಕ್ಕೆ ತಿಳಿಸಲ್ಪಟ್ಟಿದೆ

ಬೆನಾರೆಸ್ಸಿನಲ್ಲಿ ತನ್ನ ಎರಡು ಮೋಟರ್ ಕಾರುಗಳ ನಂಬ್ರ ಬೋರ್ಡನ್ನು ಹಿಂದೀಯಿಂದ ಬರೆದಿಟ್ಟುದಕ್ಕೆ ಶ್ರೀ ಶಿವಪ್ರಸಾದ ಗುಪ್ತರಿಗೆ ೫ ರೂಪಾಯಿ, ಜುಲ್ಮಾನೆಯಾಗಿದೆ

— ಶ್ರೀ ಸುಭಾಷಚಂದ್ರ ಬೋಸರನ್ನು ಸೆನಟೋರಿಯೊಂಗೆ ಕಳುಹಿಸದಿದ್ದರೆ ಅಪಾಯವಿದೆಯೆಂದು ವೈದ್ಯರ ಅಭಿಪ್ರಾಯ.

— ಬೆಂಗಳೂರು ಮೈಸೂರುಗಳ ಮಧ್ಯೆ ಓಡುತ್ತಿದ್ದ ರೈಲುಕಂಬಿಗಳ ಬಳಿ ತನ್ನ ನಾಯಿಯು ಹೋಯಿತೆಂದು ಅದನ್ನು ರಕ್ಷಿಸಹೋದ ಲೆಫ್ಟನೆಂಟ್ ಫೀರ್‌ಕ್ರೋಫ್ಟ್ ಎಂಬ ದೊರೆಯವರು ಇಂಜಿನಿನ ಅಡಿಗೆ ಬಿದ್ದು ಪ್ರಾಣವನ್ನು ಕಳೆದುಕೊಂಡರಂತೆ

— ತಿರುವಾಂಕೂರಿನ ಮಹಾರಾಣಿಯವರು ಯೂರೋಪ್ ಪ್ರವಾಸವನ್ನು ಸುಖದಿಂದ ಮಾಡಿ ಹಿಂತಿರುಗಿ ಬಂದಿರುವರು. ಅವರನ್ನು ಜನರು ಸ್ವಾಗತೀಕರಿಸಿದರು

— ಕಲ್ಕತ್ತದ ಕೋರ್ಟಿನಲ್ಲಿ ಕಾಳೀಶಂಕರ ಮುಜುಂದಾರ್ ಎಂಬವನ ನ್ಯಾಯವಿಚಾರಣೆಯು ನಡೆಯಿತು. ನ್ಯಾಯಾಧೀಶರು 'ಸಾಕ್ಷಿ ತಾ'' ಎಂದರು ಅದಕ್ಕೆ ಆರೋಪಿತನು ''ನಾನು ಇಂಗ್ಲಂಡಿನ ಪ್ರಧಾನಮಂತ್ರಿ' ನನಗೆ ಸಾಕ್ಷಿ ಇಲ್ಲ'' ಎಂದನು

— ಪಂಡಿತ ಮಾಲವೀಯರು ಕಲ್ಕತ್ತದಿಂದ ಬೆನಾರಿಸಿಗೆ ಹಿಂತಿರುಗಿರುವರು. ಅವರು ಬೇಗನೇ ಪಂಜಾಬಿಗೆ ಹೋಗಿ ಅಲ್ಲಿಯ ಹಿಂದೂ ಮುಸ್ಲಿಮ್ ಒಗ್ಗಟ್ಟಿನ ಸತ್ಯವನ್ನು ತಿಳಿಯಲಿರುವರು.

— ಲಾಹೋರಿನ ಒಂದು ಮಾರ್ಗದಲ್ಲಿ ಮೂವರು ತರುಣರು ನಡೆಯುತ್ತಿದ್ದರು. ಪೋಲೀಸರು ಅವರನ್ನು ನಿಲ್ಲಿಸಿದರು. ಅವರು ಓಡಿದರು. ಅವರನ್ನು ಹಿಡಿಯಲಾಗಿ ಒಂದೆರಡು ರಿವಾಲ್ವರುಗಳು ದೊರಕುವು.

— ಯೂರೋಪ್ ಪ್ರವಾಸದಿಂದ ಡಾ। ಮುಂಜೆಯವರು ಹಿಂತಿರುಗಿರುತ್ತಾರೆ. 'ಜಾತೀಯ ತೀರ್ಮಾನವು ಅಹಿತ, ನಾನು ಸಹಕರಿಸುವುದಿಲ್ಲ' ಎಂದಿದ್ದಾರೆ.

Latest News.
ಈಗ ಬಂದ ಬಿಸಿ ಬಿಸಿ ವಾರ್ತೆ.

ಮುಂಬಾಯಿಯ ಗ್ರೇಟ್ ರೋಡಿನಲ್ಲಿ ಸಿ ಐ ಡಿ ಗಳು ಒಂದು ಶೋಧೆ ನಡೆಸಿದ್ದರು. ಈ ಶೋಧೆಯು ಪ್ರಾಮುಖ್ಯವಾದುದೆಂದೂ, ಇದರಿಂದಾಗಿ ಕಾಂಗ್ರೆಸ್ಸಿನವರು ಇಷ್ಟರ ತನಕವೂ ನಡೆಸುತ್ತಿದ್ದ ಚಟುವಟಿಕೆಗಳೂ ನಾಶವಾಗುವುವೆಂದೂ ಊಹಿಸಲ್ಪಟ್ಟಿದೆ. ಹಿಂದೂಸ್ಥಾನೀ ಸೇವಾದಳದ ಪರವಾಗಿ ಕೆಲಸಮಾಡುತ್ತಿದ್ದ ಅನೇಕರನ್ನು ರಿಕಾರ್ಡುಗಳ ಸಮೇತ ಬಂಧಿಸಿರುವರು.

ಸಿಮ್ಲಾದ ನ್ಯಾಯವಿಧಾಯಕ ಸಭೆಯಲ್ಲಿ "ಶೌಕತಾಲಿಯವರಿಗೆ ಸರಕಾರಗಳು ಸಹಾಯವನ್ನೀಯುತ್ತವೆಯೋ?" ಎಂಬ ಪ್ರಶ್ನೆಯು ಬಂದಾಗ ಹೋಮ್ ಮೆಂಬರರು ಇಲ್ಲವೆಂದರು.

ದಕ್ಷಿಣ ಕನ್ನಡ.

ಮಂಗಳೂರು:— ಕಳೆದ ಗುರುವಾರ ಇಲ್ಲಿಯ ಗವರ್ನಮೆಂಟು ಕಾಲೇಜು ಮತ್ತು ಸ್ಯಾಂಟ್ ಎಲೋಶಿಯಸ್ ಕಾಲೇಜಿನ ಮಿಡ್ ಸೀನಿಯರ್‌ಗಳೊಳಗೆ ಪಂದ್ಯಾಟವು ನಡೆದು ಎಲೋಶಿಯಸ್ ಕಾಲೇಜಿನವರು ಗೆದ್ದರು. ಶ್ರೀ ಶಿವನಾಥರು ನೂರು ಚಿಲ್ಲರೆ ರನ್ನುಗಳನ್ನು ತೆಗೆದು, 'ಔಟ' ಆಗದೆ ಆಟವನ್ನು ಬಿಟ್ಟುಕೊಟ್ಟರು.

ಮುನಿಸಿಪಾಲಿಟಿಯ ಪಬ್ಲಿಕ್ ಲೈಬ್ರರಿಯೊಂದು ಕಳೆದ ಶನಿವಾರ ದಿನ ಬಾವಟಕಟ್ಟೆಯ ಮಂದಿರದಲ್ಲಿ ತೆರೆಯಲ್ಪಟ್ಟಿತು. ಸದ್ಯ ಒಳ್ಳೊಳ್ಳೆ ಗ್ರಂಥಗಳ ಅಭಾವವಿದೆಯಾದರೂ ಕ್ರಮೇಣ ಪುಸ್ತಕ ಭಂಡಾರವು ಸಾಹಿತ್ಯದ ಕೇಂದ್ರವಾಗಬಹುದು.

ಇಲ್ಲಿಯ ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ ಬರುವ ಮಾರ್ಚ ತಿಂಗಳ ವರೆಗೆ ತಿಂಗಳಿಗೆ ೨೫ ರೂಪಾಯಿಯಂತೆ ಸಹಾಯವನ್ನು ಮಾಡುವ ಏರ್ಪಾಡು ಮುನಿಸಿಪಾಲಿಟಿಯಿಂದಾಗಿದೆ.

ಕಳೆದ ಮಂಗಳವಾರ ಸೋಮೇಶ್ವರದ ತೀರ್ಥಸ್ನಾನವಷ್ಟೆ. ಸ್ನಾನ ಮಾಡಲು ಶ್ರೀ ಕುತ್ಯಾರು ಶಾಂತುಭಂಡಾರಿ ಎಂಬವನು ಸಮುದ್ರಕ್ಕೆ ಇಳಿದು ಈಜುತ್ತಿದ್ದಾಗ ತೆರೆಯು ಅವನನ್ನು ಸೆಳೆಯಿತು. ಇದನ್ನು ಕಂಡ ಗಣಪತಿ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ ಉಚ್ಚಿಲ ಸೋಮನೆಂಬವನು ನೀರಿಗೆ ಹಾರಿ ಮುಳುಗುತ್ತಿದ್ದವನನ್ನು ರಕ್ಷಿಸಲೆತ್ನಿಸಿದನು. ಇವನನ್ನೂ ತೆರೆಯು ಸೆಳೆಗೊಂಡಿತು. ಇದನ್ನು ನೋಡಿ ಇನ್ನಿಬ್ಬರು ಅವರನ್ನು ರಕ್ಷಿಸ ಹೋದರು. ಇವರೂ ನೀರಿಗಾಹುತಿಯಾದರು. ಹೀಗೆ ಈ ನಾಲ್ವರೂ ಪೇಚಾಟಕ್ಕೊಳಗಾಗಲು ಶ್ರೀ ಉಚ್ಚಿಲ ಪಿಟ್ಟನ ಗುಂಡಾದನೆಂಬವನು ತನ್ನ ದೋಣಿಯನ್ನು ತಟ್ಟನೆ ತಂದು ತನ್ನ ಒಡನಾಡಿಗಳೊಡಗೂಡಿ ನಾಲ್ವರನ್ನೂ ರಕ್ಷಿಸಿದನು. ಈ ರಕ್ಷಣೆಯಲ್ಲಿ 'ನಾಗಸೇನೆ'ಯ ಕೆಲವು ಸ್ವಯಂಸೇವಕರೂ ಸಹಾಯ ಮಾಡಿದರು. ನಾಲ್ವರೂ ಸುರಕ್ಷಿತವಾಗಿರುವರು.

ಇಲ್ಲಿಯ ವಿವೇಕಾನಂದ ಸೊಸೈಟಿಯ ಆಶ್ರಯದಲ್ಲಿ ಕೆನರಾ ಹೈಸ್ಕೂಲಿನಲ್ಲಿ ಶ್ರೀ ಅಚ್ಯುತಲಿಂಗರು ನಡೆಸುತ್ತಿದ್ದ ಭಗವದ್ಗೀತಾ ಕ್ಲಾಸು ಇದೇ ತಾ ೧೧ನೇ ಬೆಳಗ್ಗೆ ಘಂಟೆ ೮ರಿಂದ ಆರಂಭವಾಗುವುದು. ಈ ದಿನ ಅವರು ಗೀತೆಯ ೧೧ನೇ ಅಧ್ಯಾಯದ ಕುರಿತು ವ್ಯಾಖ್ಯಾನ ಮಾಡಲಿರುವರು.

ಉದಾರ ದಾನ— ಇಲ್ಲಿಯ ಮೆಸರ್ಸ್ ಕಿನ್ನಿ ಬ್ರದರ್ಸ್ ಮತ್ತು ಕಂಪೆನಿಯ ಪಾಲುಗಾರರೂ ಕೆನರಾ ಹೈಸ್ಕೂಲಿನ ಅಧ್ಯಾಪಕರೂ ಆದ ಶ್ರೀ ಬೆರ್ಡಪ್ಪ ಭಂಡಾರಿಯವರು ಸದ್ರಿ ಶಾಲೆಗೆ ರೂಪಾಯಿ ೫೦೦/ನ್ನು ಸಹಾಯಧನವಾಗಿ ಕೊಟ್ಟಿರುವರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ.

ಇನ್ನೊಂದು ಉದಾರ ದಾನ.

ಇಲ್ಲಿಯ ಸಾಹುಕಾರ ದಿವಂಗತ ಕುಂಬ್ಳೆ ಕೃಷ್ಣಪೈಯವರ ಪತ್ನಿ ಶ್ರೀಮತಿ ಯಮುನಮ್ಮ ಇವರು ತಾ ೩-೯-೩೨ರಲ್ಲಿ ಕೆನರಾ ಹೈಸ್ಕೂಲಿಗೆ ರೂ ೩೦೦೦/ನ್ನು ಧರ್ಮಸಹಾಯ ಮಾಡಿರುವರಾಗಿ ತಿಳಿಸಲು ತುಂಬಾ ಸಂತೋಷಪಡುತ್ತೇವೆ. ದಾ ಕೃಷ್ಣಪೈಯವರು ತನ್ನ ಸ್ವಹಸ್ತದಿಂದಲೇ ರೂ. ೭೦೦/ನ್ನು ಈ ಮೊದಲೇ ದಾನ ಮಾಡಿರುವರು.

ಇಲ್ಲಿಯ ಶ್ರೀಕೃಷ್ಣ ಸಿನೆಮಾದಲ್ಲಿ ನಿರಂತರವಾದ ಮಾತನಾಡುವ ಚಲಚಿತ್ರ ಪ್ರದರ್ಶನಾಲಯವು ಮಾನ್ಯ ಜಿಲ್ಲಾ ಕಲೆಕ್ಟರರಾದ ಖಾನ್ ಬಹದ್ದೂರ್ ಜಾವದ್ ಹುಸೇನ್ ಬಾರಾ ಎಟ್ ಲಾ ಇವರ ನೇತೃತ್ವದಲ್ಲಿ ನಿನ್ನೆ ಸಂಜೆ ೫-೩೦ಕ್ಕೆ ಅತಿ ಸಂಭ್ರಮದಿಂದ ತೆರೆಯಲ್ಪಟ್ಟಿತು. 'ಬಿಲ್ವಮಂಗಲ್' ಎಂಬ ಪ್ರಥಮ ಮಾತನಾಡುವ ಚಲಚಿತ್ರವು ಪ್ರದರ್ಶಿಸಲ್ಪಟ್ಟಿತು. ಈ ಚಿತ್ರದ ನಂತರ ಭೂಲೋಕದ ಎಂಟನೇಯ ವಿಚಿತ್ರವೆಂದು ಪ್ರಖ್ಯಾತಿಪಟ್ಟ, ಸಂಪೂರ್ಣ ಟಾಕಿ, ಕಲರಿನಿಂದ ಕಂಗೊಳಿಸುತ್ತಿರುವ "ರಿಯೊರಿಟ" ಎಂಬ ಮಾತಾಡುವ ಚಿತ್ರವನ್ನು ಪ್ರದರ್ಶಿಸುವರು. ಜೋನ್ ಬೋಲ್ಸ್ ಮತ್ತು ಬೀಬೀ ಡೇನಿಯಲ್ಸ್ ಎಂಬವರೇ ಇದರ ಮುಖ್ಯ ನಟನಟಿಯರು. ಉತ್ಕೃಷ್ಟವೂ ಬೋಧಪ್ರದವೂ ಆದ ಚಿತ್ರಗಳನ್ನು ಪ್ರದರ್ಶಿಸಿ ಈ ಕಂಪೆನಿಯು ಯಶಸ್ವಿಯಾಗಲೆಂದು ನಾವು ಕೋರುವೆವು.

ಇಲ್ಲಿಯ ಗಣಪತಿ ಹೈಸ್ಕೂಲಿನ ನಾಟಕ ಸಂಘದವರು ಇದೇ ತಾ. ೧೭ನೇ ಶನಿವಾರ ರಾತ್ರಿ ೯-೩೦ಕ್ಕೆ ಶಾಲೆಯ ಮಂದಿರದಲ್ಲಿ ಶ್ರೀ. ಕೆ ಎಸ್. ಕಾರಂತರಿಂದ ರಚಿಸಲ್ಪಟ್ಟ 'ಹೋಹೆಯಾರು?' ಎಂಬ ನಾಟಕವನ್ನೂ ಶ್ರೀ ಕೈಲಾಸಂರವರಿಂದ ರಚಿಸಲ್ಪಟ್ಟ 'ಗಂಡಸ್ಕತ್ರಿ' ಎಂಬ ನಾಟಕವನ್ನೂ ಅಭಿನಯಿಸಲಿರುವರು. ಮೇಲಿನ ಎರಡೂ ನಾಟಕಗಳೂ ನವರಸಭರಿತವಾದುವುಗಳು. ನುರಿತ, ಸುಶಿಕ್ಷಿತ ನಾಟಕಕಾರರ ಮೇಲ್ವಿಚಾರದಲ್ಲಿ ನಡೆವ ಈ ಉಜ್ವಲ ನಾಟಕಗಳಲ್ಲಿ ಸಾರ್ವಜನಿಕರು ಸಂಘದವರನ್ನು ಧಾರಾಳವಾಗಿ ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಸ್ಥಳೀಕ ಗಣಪತಿ ಹೈಸ್ಕೂಲು ಮತ್ತು ಗವರ್ನಮೆಂಟು ಕಾಲೇಜಿನ ಜ್ಯೂನಿಯರ್ಸ್ ಕ್ರಿಕೇಟು ಪಂದ್ಯಾಟವು ಮೊನ್ನೆ ನಡೆದು ಎರಡನೇಯವರು ಗೆದ್ದರು.

ಕೆನರಾ ಹೈಸ್ಕೂಲ್ ಮತ್ತು ಗಣಪತಿ ಹೈಸ್ಕೂಲಿನ ಸೀನಿಯರ್ಸರೊಳಗೆ ಕ್ರಿಕೇಟು ಪಂದ್ಯಾಟವು ನಡೆದು ಎರಡನೇಯವರು ಗೆದ್ದರು.

ಉಡುಪಿ — ಉಡುಪಿ ತಾಲೂಕು ಬೋರ್ಡು ಮೆಂಬರಿಕೆಯ ನೋಮಿನೇಷನುಗಳ ಪೈಕಿ, ಉಡುಪಿ ಸರ್ಕಲಿನ ಒಂದು ಸಾಮಾನ್ಯ ಸೀಟಿಗೆ ರಾ ಎಂ ವಿಟ್ಟಲ ಕಾಮತ್ ಅಲ್ಲದೆ ರಾ ಕೆ ಪರಮಯ್ಯ ಹೆಬ್ಬಾರರೂ, ಕ್ರಿಶ್ಚಿಯನ್ ಒಂದು ಸೀಟಿಗೆ ಮಿ ತೋಮಸ್ ಸಾಲ್ಡಾಂಞಾ ಮಿ ರೊಡೊಲ್ಫ ಸ್ಯಾಮುನ್ಸರಲ್ಲದೆ ಮಿ ಪಿ ಫೆರ್ನಾಂಡಿಸರೂ ನೋಮಿನೇಷನುಗಳನ್ನು ಹಾಕಿರುತ್ತಾರೆ.

ತಾ ೧೬ಕ್ಕೆ ರಾಮಬಾಣ ಪತ್ರಿಕೆಗಳನ್ನು ಕೋರ್ಟು ಕಚೇರಿಗಳಲ್ಲಿ ಶ್ರೀ ಪಾಂಡುರಂಗ ಭಟ್ಟ ದೇವರಾಯ ಭಂಡಾರಿ ಗಣಪತಿ ಶೆಣೈ ಮತ್ತು ರಾಘವೇಂದ್ರರಾವ್ ಇವರು ಹಂಚಿದರು. ಅಲ್ಲಿ ಅವರನ್ನು ಹೊರದೊಡ್ಡಿಬಿಟ್ಟರು. ಇವರೇ ಸದ್ರಿ ಪತ್ರಿಕೆಗಳನ್ನು ಪೇಟೆಯಲ್ಲೆಲ್ಲಾ ಬಹಿರಂಗವಾಗಿ ಮಾರಾಟಮಾಡಿರುವರು.

ಸತ್ಯಾಗ್ರಹಕ್ಕಾಗಿ ಶಿಕ್ಷೆಗೊಳಗಾಗಿದ್ದ ಶ್ರೀ ಬಿ ದೇವಪ್ಪ ಶೆಟ್ಟಿ ಬಿಡುಗಡೆ ಹೊಂದಿ ತಾ ೫ಕ್ಕೆ ಇಲ್ಲಿಗೆ ಮರಳಿಬಂದಿರುತ್ತಾರೆ. ಶ್ರೀಯುತರು ಆರೋಗ್ಯವಂತರಾಗಿಯೂ ಉತ್ಸಾಹಿಗಳಾಗಿಯೂ ಇರುವರು.

ಕಳೆದ ತಾ, ೨೮ನೆಗೆ ಮೆರವಣಿಗೆ ನಡೆಸಿದರೆಂಬ ತಕ್ಷೀರಿಗಾಗಿ, ಇದೇ ತಾ ೬ನೇಗೆ ಶ್ರೀ ರಾಮರಾಯ ಪುರಾಣಿಕರು ಸ್ಪೆಶಲ್ ಸಬ್ ಮೇಜಿಸ್ಟ್ರೇಟರ ಮುಂದೆ ಹಾಜರಾಗಬೇಕೆಂದು ನೋಟೀಸು ಕೊಡಲಾಗಿದೆ. ಅಂದೇ ಅವರ ವಿಚಾರಣೆಯಾಗಿ ೪ ತಿಂಗಳ ಕಠಿಣ ಸಜೆಯು ವಿಧಿಸಲಾಯಿತು. 'ಬಿ' ತರಗತಿ.

ಮೂಲ್ಕಿ: — ಇಲ್ಲಿಂದ ಒಂದು ವಾರಪತ್ರಿಕೆಯನ್ನು ಹೊರಡಿಸಬೇಕೆಂದು ಸ್ಥಳೀಕ ರಾಧಾಕಾಂತ ಪ್ರೆಸ್ಸಿನ ಮ್ಯಾನೇಜರು ಹೆಚ್ಚಿನ ಉತ್ಸಾಹಭರಿತರಾಗಿ ಪ್ರಯತ್ನಿಸುತ್ತಿರುವರೆಂದೂ ಸದ್ರಿ ಪತ್ರಿಗೆ 'ಭಾರತಿ' ಎಂದು ನಾಮಕರಣ ಮಾಡಲಿರುವರೆಂದೂ ತಿಳಿದುಬರುತ್ತದೆ. 'ಭಾರತಿ'ಯು ಸಮಗ್ರ ಭಾರತದಲ್ಲಿ ಸರ್ವತ್ರ ಮೆರೆಯಲಿ!

ಸ್ಥಳೀಕ ಶ್ರೀ ದುರ್ಗಾದೇವಿ ರಾತ್ರಿ ಶಾಲೆಯ ಆರ್ಥಿಕ ಸಂಕಷ್ಟ ನಿವಾರಣೆಗಾಗಿ ಆಡಳಿತ ಮಂಡಳಿಯು ಮುಂಬೈಯಲ್ಲಿರುವ ಶ್ರೀ ಕೇಶಪ್ಪನವರನ್ನು ವಿನಂತಿಮಾಡಿಕೊಂಡಿರುವರೆಂದೂ ಸದ್ರಿ ಮಹಾಶಯರು ಒಂದು ದೇಣಿಗೆಯನ್ನು ಸದ್ಯದಲ್ಲೇ ಕೊಡಲಿರುವರೆಂದೂ ತಿಳಿದುಬರುತ್ತದೆ. ಶ್ರೀ ದೇವಿಯ ದಯದಿಂದ ಈ ಯೋಜನೆಯು ಯಶಸ್ವಿಯಾಗಿ ಕೈಗೂಡಲೆಂದು ಕೋರುವೆವು.

ಬಂಟ್ವಾಳ — ಇದೇ ಸಪ್ಟಂಬರ ತಿಂಗಳ ತಾರೀಕು ೧೭ನೇ ಶನಿವಾರ ಮಧ್ಯಾಹ್ನ ೩ ಗಂಟೆಗೆ ಬಂಟವಾಳ ಬೋರ್ಡು ಹುಡುಗಿಯರ ಶಾಲೆಯಲ್ಲಿ ಬಂಟವಾಳ ಉಪಾಧ್ಯಾಯ ಉಪಾಧ್ಯಾಯಿನಿಯರ ಕಡೆಯಿಂದ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರಾದ ರಾ ಕೆ ಸದಾಶಿವ ಅಡಿಗರವರಿಗೆ ಒಂದು ಮಾನಪತ್ರವನ್ನು ಒಪ್ಪಿಸಬೇಕೆಂದು ನಿರ್ಣಯಿಸಿಯದೆ.

ಪುಂಜಾಲಕಟ್ಟೆ: — ಕಳೆದ ಕಂಠೀರವದ ಸಂಚಿಕೆಯಲ್ಲಿ ಪುಂಜಾಲಕಟ್ಟೆಯ ಆಸ್ಪತ್ರೆಯನ್ನು ತೆಗೆಯಬೇಕೆಂದು ಬರೆದ ವಾರ್ತೆಯನ್ನು ನೋಡುವಾಗ ಇದನ್ನು ಬರೆದವರು ಪುಂಜಾಲಕಟ್ಟೆಯವರಲ್ಲವೆಂದೇ ಹೇಳಬೇಕಾಗಿದೆ. ಇದರ ಪ್ರಯೋಜನ ಉಪ್ಪಿನಂಗಡಿ ತಾಲೂಕಿನ ಗ್ರಾಮಗಳಲ್ಲಿರುವವರಿಗಂತೆ. ಅವರೂ ದೇಶದ ಪ್ರಜೆಗಳಲ್ಲವೇ? ಮಂಗಳೂರು ತಾಲೂಕು ಬೋರ್ಡಿನವರು ಆಸ್ಪತ್ರೆಯಿಟ್ಟಿದ್ದರೆ ಪುತ್ತೂರು ತಾಲೂಕು ಬೋರ್ಡಿನವರು ಶಾಲೆಯಿಟ್ಟಿರುವರು. ಇದರ ಪ್ರಯೋಜನ ಮಂಗಳೂರು ತಾಲೂಕಿನ ನಿವಾಸಿಕರಿಗೆ ಸಿಕ್ಕುವುದಿಲ್ಲವೇ? ಇಲ್ಲಿಯ ಕಾಯಂ ಡಾಕ್ಟರರಾಗಿದ್ದ ವಾಸುದೇವ ಪೈಗಳು ತಾಲೂಕು ಬೋರ್ಡ ಮೆಂಬರಿಕೆಗೆ ಉಮೇದುವಾರರಾಗಿ ನಿಲ್ಲುವುದಕ್ಕಾಗಿ ತನ್ನ ಕೆಲಸಕ್ಕೆ ರಾಜಿನಾಮೆ ಕೊಟ್ಟ ಕೂಡಲೇ ಪುಂಜಾಲಕಟ್ಟೆಯ ಆಸ್ಪತ್ರೆಯನ್ನು ತೆಗೆಯಬೇಕೇ? ಆಸ್ಪತ್ರೆಯು ಯಾವನಾದರೊಬ್ಬ ಡಾಕ್ಟರರಿಗೆ ಹುದ್ದೆ ಸಿಕ್ಕುವುದಕ್ಕಾಗಿ ಇರುವುದಲ್ಲ. ಊರಿನ ಮತ್ತು ಅದರ ಸುತ್ತಮುತ್ತಲಿನ ನಿವಾಸಿಕರಿಗಾಗಿ ಆಗಿರುತ್ತದೆ ಎಂದೊಂದು ಬಾತ್ಮಿ.

ಪಂಜಿಕಲ್ — ಈ ಗ್ರಾಮದ ಸರಹದ್ದಿನಲ್ಲಿರುವ ಬಾರೆಕಾಡು ನಡುಗೋಡು ಕುರಿಯಾಳ ಮುಂತಾದ ಗ್ರಾಮಗಳ ಕಾಡುಗಳಲ್ಲಿ ಹುಲಿಗಳ ಬಾಧೆಯು ವಿಪರೀತವಾಗಿದೆ. ಹಗಲಲ್ಲೇ ದನಗಳನ್ನು ಹಿಡಿಯುತ್ತಿವೆ. ಶಿಕಾರಿಗಳಿಗಿದೊಂದು ಒಳ್ಳೇ ಸಂದರ್ಭ!!!

ಕಾಸರಗೋಡು— (ತಾ. ೩ರಲ್ಲು) ಸ್ವಯಂಸೇವಕರಾದ ಮಂಜಪ್ಪ ಶೆಟ್ಟಿ, ರಾಮರಾಯ ಪೈ ಎಂಬಿಬ್ಬರು ಇಂದು ಅಪರಾಹ್ನ ೧-೪೫ ಗಂಟೆಗೆ ಇಲ್ಲಿಂದ ಹೊರಡುವ ರೈಲ್ವೇ ಬಂಡಿಯಲ್ಲಿ ಪ್ರಯಾಣಿಸಿದ್ದು ಉದ್ಯ ಎಂಬಲ್ಲಿ ಅಪಾಯಸೂಚಕ ಸರಪಣಿಯನ್ನು ಎಳೆದು ರೈಲನ್ನು ನಿಲ್ಲಿಸಿದರು. ರೈಲು ನಿಂತ ಕೂಡಲೇ ಅವರು ಕೆಳಗಿಳಿದು ಕರಪತ್ರಗಳನ್ನು ಹಂಚಿದರೆಂದು ಅವರನ್ನು ದಸ್ತಗಿರಿ ಮಾಡಿ ಮಂಗಳೂರಿಗೆ ಕೊಂಡೊಯ್ದಿರುವರೆಂದು ತಿಳಿದುಬರುತ್ತದೆ.

(ತಾ. ೪) ಇಲ್ಲಿಂದ ಸುಮಾರು ೧೩ ಮೈಲು ದೂರದ ಬದಿಯಡ್ಕ ಎಂಬ ಹಳ್ಳಿ ನಿವಾಸಿಕರ ಅಪೇಕ್ಷೆಯಂತೆ ಕಾಸರಗೋಡಿನ ಶ್ರೀ ಯಂ ಉಮೇಶರಾವ್, ಕೆ ಸುಂದರರಾಮಶೆಟ್ಟಿ, ಸೀತಾರಾಮಯ್ಯ ಮೊದಲಾದ ವಕೀಲರು ಸದ್ರಿ ಸ್ಥಳದಲ್ಲಿ ಒಂದು ಸಭೆಯನ್ನು ಜರಗಿಸಿ, 'ಬೈ ಇಂಡಿಯನ್ ಲೀಗಿನ ಉಪಸಂಸ್ಥೆಯನ್ನು ಏರ್ಪಡಿಸಿ, ಹಳ್ಳಿನಿವಾಸಿಗಳು ಆದಷ್ಟು ಹೆಚ್ಚು ಸ್ವದೇಶಿಗೆ ಪ್ರೋತ್ಸಾಹಕೊಟ್ಟುಕೊಳ್ಳುವುದೇ ಧರ್ಮವೆಂದು ಬೋಧಿಸಿದರಾಗಿ ತಿಳಿದುಬಂದಿದೆ.

(ತಾ ೫) ಉಕ್ಕಿನಡ್ಕದ ಸಮೀಪದಲ್ಲಿರುವ ಬಂಟಾಜೆ ಕಾಡಿನಲ್ಲಿ ಕಾಡಿನ ಸತ್ಯಾಗ್ರಹವು ಪ್ರಾರಂಭವಾಗಿರುವುದರಿಂದ ಇಂದು ಇಲ್ಲಿಂದ ಒಬ್ಬ ಪೋಲೀಸ ಕೋನ್ಸ್ಟೇಬಲನೂ, ಒಬ್ಬ ಹೆಡ್ ಕೋನ್ಸ್ಟೇಬಲನೂ ಅಲ್ಲಿಗೆ ಸ್ಪೆಶಲ್ ಡ್ಯೂಟಿಗಾಗಿ ಪ್ರಯಾಣ ಬೆಳೆಸಿರುವರಾಗಿ ತಿಳಿದುಬಂದಿದೆ.

ಪುತ್ತೂರು— ಅಲ್ಲಲ್ಲಿ ಇಷ್ಟಿಷ್ಟು

ಪ್ರತಿಸ್ಪರ್ಧೆಯಿಲ್ಲದೆ ತಾಲೂಕು ಬೋರ್ಡು ಡಿಸ್ಟ್ರಿಕ್ಟ್ ಬೋರ್ಡು ಸ್ಥಾನಗಳು ನಿರ್ಣಯಿಸಲ್ಪಟ್ಟದ್ದು ಅಯೋಗ್ಯವೆಂದು "ಕುತರ್ಕ ವಾಚಸ್ಪತಿ"ಯು "ರಾಷ್ಟ್ರಬಂಧು"ವಿನಲ್ಲಿ ಬಹಳವಾಗಿ ಟೀಕಿಸಿರುವನಂತೆ. ಹೊಸ ಮೆಂಬರರೇ! ಟೀಕೆಯಿಂದ ಅಸಮಾಧಾನ ಹೊಂದಬೇಡಿರಿ. ಏಕೆಂದರೆ ಅಸಮಾಧಾನಗೊಂಡೇ ಹೊಸ ಆಡಳಿತವನ್ನು ವಹಿಸಿಕೊಳ್ಳುವಂಥಾದ್ದು ತಪ್ಪಾದೀತು.

+ × × ×

ಪರ್ಬೆ ವಾರ್ಡಿನಲ್ಲಿ ಲಾಟಾನು ಕಂಭಗಳೇ ಇಲ್ಲ. ಆದರಲ್ಲೂ ಯೇಳ್ಮುಡಿ ಸಂಕದ ಬಳಿ ಹಾವುಗಳ ಕಾಟವು ಹೆಚ್ಚಾಗಿರುವುದರಿಂದ ಅಲ್ಲಿ ಒಂದು ದೀಪವನ್ನಿಡಬೇಕಾದ್ದು ಅತೀ ಅಗತ್ಯ. ಎಲೊಟ್ ಆದ ಕಂಭಗಳಲ್ಲಿ ಒಂದು ಹೆಚ್ಚಿಗೆಯಿದ್ದು, ಅದನ್ನು ಎಲ್ಲಿ ಇರಿಸಬೇಕೆಂಬುದನ್ನು ಪಂಚಾಯತ ಬೋರ್ಡಿನವರು ಇನ್ನೂ ನಿಷ್ಕರ್ಷಿಸಲಿಲ್ಲ. ಅಂದ ಮೇಲೆ ಮೇಲೆ ಸೂಚಿತವಾದ ಸ್ಥಳದಲ್ಲಿ ಒಂದು ಕಂಭವನ್ನಿಡುವ ವ್ಯವಸ್ಥೆಯನ್ನು ಬೋರ್ಡಿನವರು ಮಾಡಬಾರದೇಕೆ?

× × × ×

ವರದಕ್ಷಿಣಾ ನಿಷೇಧ ಚಳವಳಿ ಸಂಘವನ್ನು ಸ್ಥಾಪಿಸಲು ಶ್ರಮಪಡುತ್ತಿರುವ ಇಲ್ಲಿಯ ಶ್ರೀ ಪಾಣೆಮಂಗಳೂರು ರಾಮನಾಯ್ಕರು ತಮ್ಮ ಸಂಘಸ್ಥಾಪನೆಯ ಉದ್ದೇಶ ಅದರ ಧ್ಯೇಯ ಮತ್ತು ಕ್ರಮಗಳನ್ನು ಶೀಘ್ರದಲ್ಲೇ "ಸ್ವದೇಶಾಭಿಮಾನಿ"ಯಲ್ಲಿ ಪ್ರಕಟಿಸುವರಂತೆ. ನಾಯಕರೇ! "ಶುಭಸ್ಯ ಶೀಘ್ರಂ". ನೀವು ಸ್ಥಾಪಿಸಲಿರುವ ಸಂಘದ ಧ್ಯೇಯವು ಉಚ್ಚತರದ್ದು ಮಾತ್ರವಲ್ಲ, ಉದ್ದೇಶವು ಮಹತ್ವಪೂರ್ಣವಾಗಿದೆ. ಅದು ಕಾರಣ ನಿಮ್ಮ ಸಂಘವು ಜಯವನ್ನೂ ಯಶಸ್ಸನ್ನೂ ಹೊಂದಲೇ ಬೇಕು. ಸಮಾಜೋನ್ನತಿಯನ್ನು ಬಯಸುವ ಆಢ್ಯಮನುಷ್ಯರೆಲ್ಲರೂ ವರದಕ್ಷಿಣಾ ಪಿಶಾಚವು ಸಮಾಜದಲ್ಲಿನ್ನು ಬೇರನ್ನೇ ಕೀಳಲೆಳಸುವ ಮಾರ್ಗವನ್ನು ಪರ್ಯಾಲೋಚಿಸಿ ನಿಮ್ಮ ಸಂಘಕ್ಕೆ ಸಹಾನುಭೂತಿಯನ್ನು ತೋರಲಿ. ರಾಷ್ಟ್ರದ ಅಡಿಗಲ್ಲುಗಳಂತಿರುವ ನವಯುವಕರು ದೇಶಾಭ್ಯುದಯವನ್ನು ಚಿಂತಿಸಿ ಅತೀ ಸುಲಭದ ಆತ್ಮಯಜ್ಞಕ್ಕೆ ಸಿದ್ಧರಾಗಿ ಮುಂಬರಿದು ಬಂದು ನಿಮ್ಮ ಸಂಘಕ್ಕೆ ಸದಸ್ಯರಾಗಲಿ. ಅಂದರೆ ಇದೊಂದು ಅತ್ಯಗತ್ಯದ ಮತ್ತು ಮಹತ್ವದ ಸುಧಾರಣೆಯು ಸುಲಭದಲ್ಲಿ ಆಗಿಹೋಗುವುದು.

× × × ×

ಈ ಕೆಳಗಿನ ಮಾತುಗಳಲ್ಲಿ ಮಜಾ ಇದೆಯೇ?

ಸೋತ ಉಮೇದ್ವಾರ — ಏನು ಸರ್ ಇಂದಿಗೆ ಹದಿನೈದು ವರ್ಷಗಳಿಂದ ಬೋರ್ಡು ಮೆಂಬರನಾಗಿ ಹೆಚ್ಚಿಗೆ ಸರ್ವಿಸು ಹೊಂದಿದ ನನ್ನನ್ನು ನೀವು ಬಿಟ್ಟು ಹಾಕಿದಿರಲ್ಲವೇ?

ಪಂಚಾಯತ — ಹೌದು ಸರ್ ಹೆಚ್ಚಿಗೆ ಸರ್ವಿಸು ಆದವರು ರಿಟಾಯರ್ ಆಗಬೇಕಾದ್ದು ನ್ಯಾಯವಲ್ಲವೇ?

'ಅವಧೂತ'

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S No 218/1932

ಮುಕ್ಕಾಟ ಕುಟ್ಟಿಪ್ಪ—ವಾದಿ.
ಮ್ಯಾಳ ಯಾನೆ ಅಂಗು ಪೂಜಾರಿ ಸಹಾ—ಪ್ರತಿವಾದಿಯು.
೨ನೇ ಪ್ರತಿವಾದಿ— ಕೇಸಮ್ಮ 1ನೇ ಪ್ರತಿವಾದಿ ಮಗಳು, ಕೊಳ್ತಿಗೆ ಗ್ರಾಮದ ಕುಂಟಿಕಾನ ಎಂಬಲ್ಲಿ

ಸದ್ರಿ ೨ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ— ವಾದಿಯು ನಿನ್ನ ಮೇಲೆ ಕೂಡಾ ಸ್ಥಿರಾಸ್ತಿ ಹಿಕೆ ಬಗ್ಗೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ 13—೮—3೨ಕ್ಕೆ ತಸ್ಖಿಗೆ ಇಡಲ್ಪಟ್ಟಿರುತ್ತದೆ. ಆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ನೀನು ಕೋರ್ಟು ಮುಂದೆ ಹಾಜರಾಗದಿದ್ದರೆ, ಸದ್ರಿ ದಾವೆಯು ನಿನ್ನ ಗೈರಹಾಜ್ರಾತಿಯಲ್ಲಿ ತೀರ್ಮಾನ ಮಾಡಲ್ಪಡುವುದು.

ಪುತ್ತೂರು, }
೫-೯-'೩೨ }

S. Narsappaya,
Vakil for Plaintiff.

[illegible] ಸೆಪ್ಟಂಬರ [illegible] ಶುಕ್ರವಾರದ ವರೆಗಿನ ಪಂಚಾಂಗ

([illegible])

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ F. ಉ	ಅಸ್ತ
10	ಶನಿ	೧೧	[illegible]	ಪೂ. ಷಾ.	[illegible]	[illegible]	6 21	6.36
11	ರವಿ	೧೨	[illegible]	ಉ. ಷಾ.	[illegible]	[illegible]	6 21	6.34
12	ಸೋಮ	೧೩	[illegible]	ಶ್ರವಣ	[illegible]	[illegible]	6.21	6 34
13	ಕುಜ	೧೪	[illegible]	ಧನಿಷ್ಠಾ	[illegible]	[illegible]	6.22	6.33
14	ಬುಧ	○	[illegible]	ಶತಭಿಷಾ	[illegible]	[illegible]	6.22	6 32
15	ಗುರು	೧	[illegible]	ಪೂ. ಭಾ	[illegible]	[illegible]	6 22	6 32
16	ಶುಕ್ರ	೨	[illegible]	ಉ. ಭಾ.	[illegible]	[illegible]	6 22	6 33

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಅಧಿಕವಾದ	Minimum ಅಲ್ಪವಾದ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
1	84— 0	75— 2	0—15	—
2	81 — 4	74— 6	1—10	—
3	80— 2	73— 7	0—92	—
4	79— 8	74— 0	1—88	—
5	84— 6	75— 5	0—15	—
6	83— 3	74- 9	0—28	—
7	84 — 1	77— 9	—	84-83

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ..	3— 4	4 0
ಮುಷ್ಟಿ ..	4 — 0	5— 0
ಗುಡ್ಡ ...	3 — 8	4 — 2
ಸುಗ್ಗಿ ..	3 — 6	4 — 0
ಊರ ಅಪ್ಪಲ್ ಬೆಳ್ತಿಗೆ ...	4--12	6 — 8
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ .	8 — 0	8— 4
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4 —12	4 — 14
ಗೋಧಿ ಗೋಣಿ ೧ಕ್ಕೆ ...	11 — 8	12 — 8
ತೊಗರಿ ಗೋಣಿ ೧ಕ್ಕೆ ..	11 — 8	12 —
ಹುರುಳಿ ಗೋಣಿ ೧ಕ್ಕೆ .	6 — 12	7 4
ಕಡಲೆ ಗೋಣಿ ೧ಕ್ಕೆ	8 8	11 — 0
ತೊಗರಿ ಬೇಳೆ ಗೋಣಿ ೧ಕ್ಕೆ	13 8	[illegible]1 — 0
ಉದ್ದು ಗೋಣಿ ೧ಕ್ಕೆ	11 — 8	13 —
ಹೆಸರು ಗೋಣಿ ೧ಕ್ಕೆ .	10 — 4	1 —
ಊರುಬೆಲ್ಲ ಖಂಡಿ ೧ಕ್ಕೆ .	33 — 12	36 - 4
ಉಪ್ಪು ಗೋಣಿ ೧ಕ್ಕೆ .	6 — 0	6 — 4
ಕೊಬ್ರಿ ಖಂಡಿ ೧ಕ್ಕೆ	65—	7--
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	32 — 8	33 —
ಎಳ್ಳಿಂಡಿ ಖಂಡಿ ೧ಕ್ಕೆ	22 — 8	23 — 12
ಕೊಬ್ರಿ ಎಣ್ಣೆ ಮಣ ೧ಕ್ಕೆ .	5 — 8	6 — 8
ಎಳ್ಳೆಣ್ಣೆ ಮಣ ೧ಕ್ಕೆ	6 — 12	7 — 0
[illegible] ೧ಕ್ಕೆ	4 — 7	8 — 12
[illegible] ಸಕ್ಕರೆ ಮಣ ೧ಕ್ಕೆ .	4 — 2	4 — 3
ಹಸಿ ಮೆಣಸು .	4 — 0	5 — 0
[illegible] ೧ಕ್ಕೆ	6 — 4	6 — 8
[illegible] ಖಂಡಿ ೧ಕ್ಕೆ	275— 0	300 —
ಕಾಳುಮೆಣಸು ಖಂಡಿ ೧ಕ್ಕೆ	170 — 0	180 —
[illegible] ಮಣ ೧ಕ್ಕೆ	27 — 0	28 —
ಗೇರುಬೀಜ ಮುಡಿ ೧ಕ್ಕೆ .	3 — 2	3 — 4
[illegible] ಮುಡಿ ೧ಕ್ಕೆ	25 — 0	26 — 8
[illegible] ಮಣ ೧ಕ್ಕೆ ..	11 - 0	11 — 8
[illegible] ಮಣ ೧ಕ್ಕೆ	15 — 0	16 — 0
[illegible] ೧ಕ್ಕೆ ..	14 — 4	14 — 12
[illegible] ಮಣ ೧ಕ್ಕೆ	11 — 8	12 — 0
[illegible] ೧ಕ್ಕೆ ..	17—14	18 — 0
[illegible] ಖಂಡಿ ೧ಕ್ಕೆ ...	40 —	—
[illegible] ಖಂಡಿ ೧ಕ್ಕೆ ...	350 —	355 —
ಹಳೆ ಅಡಿಕೆ ...	180 —	205 —
ಹೊಸ ಅಡಿಕೆ ...	140 —	145 —

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲಿಕ್ಕೆ ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರಿನ ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary
The Canara Public Conveyance Company Ltd, Mangalore

Chikmagalur Public Conveyance Motor Service
CHIKMAGALUR
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು, ಬೆಳ್ತಂಗಡಿ ಗುರುವಾಯನಕೆರೆ, ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರು ಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಿಗೆರೆಗೂ, ೪॥ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, [illegible], ಕೆ. ಸೂರಪ್ಪ ಶೆಟ್ಟಿ—ಪ್ರೊಪ್ರೈಟರ್.

ರಾಜ್ಯಭಾರದ ನವಸುಧಾರಣೆ! ವೈಸರಾಯರ ಧೋರಣೆ!

ಗಾಂಧಿಜೀಯವರನ್ನು "ಪೆರೋಲ್"ನ ಮೇಲೆ ಬಿಡಲಿರುವರು!!!

ಗಾಂಧಿ, ಮಾಲವೀಯ, ಸರೋಜಿನಿ ನಾಯಡುರವರನ್ನು ತೃತೀಯ ಪರಿಷತ್ತಿಗೆ ಕರೆಯಲಿರುವರು.

ಕಾಂಗ್ರೆಸ್ಸಿನೊಡನೆ ರಾಜಿಯಿಲ್ಲ! ಹಿಂದೂದೇಶಕ್ಕೆ ಕೇಂದ್ರಸರಕಾರವು ಕೊಡಲ್ಪಡುವುದು –
ಓರ್ಡಿನೆನ್ಸುಗಳ ಸಮರ್ಥನೆ ವಿಲ್ಲಿಂಗ್ಡನ್ ಸೂತ್ರದ ಪರಿಪಾಲನೆ ಎಲ್ಲರೂ ಐಕ್ಯರಾಗಿ
ಕೆಲಸಮಾಡಬೇಕಂತೆ ಮೂರನೇ ಉಪಪರಿಷತ್ತು ಒಂದು ಲಂಡನಿನಲ್ಲಿ ಜರಗ
ಲಿರುವುದು ಅದಕ್ಕೆ ಗಾಂಧಿ, ಮಾಲವೀಯ, ಸರೋಜಿನಿ ದೇವಿ
ಯವರನ್ನು ಪುನಃ ಕರೆಯುತ್ತಾರಂತೆ — ಮುಂದಕ್ಕೆ?

ವೈಸರಾಯರ ಭಾಷಣ.

ಕಳೆದ ವಾರ ತಿಳಿಸಿದಂತೆ ರಾಜಕೀಯ ರಂಗದಲ್ಲಿ ಸರ್ವ ಪಕ್ಷೀಯರೂ ಅಸಮಾಧಾನಗೊಂಡಿರುವರಷ್ಟೆ! ಅಂತಹ ಅಸಮಾಧಾನವನ್ನು ಹೋಗಲಾಡಿಸುವುದಕ್ಕಾಗಿ ಪ್ರಭುತ್ವದವರು ಒಳಗಿಂದೊಳಗೆ ಯತ್ನಿಸುತ್ತಲೇ ಇರುವರು. ವೈಸರಾಯರೊಳಗೂ ಲಂಡನಿನ ಸಾಮ್ರಾಜ್ಯಾಧಿಪತಿಗಳೊಳಗೂ ಒಳಗಿಂದೊಳಗೆ ವ್ಯವಹಾರಗಳು ನಡೆಯುತ್ತಿದ್ದುವು. ಲಂಡನಿನ ಪ್ರಭುತ್ವದವರ ಹೇಳಿಕೆಯ ಮೇರೆಗೆ ವೈಸರಾಯರು ಸಪ್ರೂ ಜಯಕರ ಚಿಂತಾಮಣಿ ಮೊದಲಾದ ಮಂದಪಕ್ಷೀಯರನ್ನು ತನ್ನಲ್ಲಿಗೆ ಬರಮಾಡಿ ಮಾತುಕತೆಗಳನ್ನಾಡಿದರು. ಅವರು ತರ್ಕಿಸಿದ ವಿಷಯವು ರಾಜಕೀಯ ನವಸುಧಾರಣೆದ್ದೇ ಆಗಿತ್ತೆಂದು ಈಗೀಗ ಊಹಿಸಲ್ಪಟ್ಟಿದೆ

ಬ್ರಿಟಿಷ ಸರಕಾರವು ಮುಂದಕ್ಕೆ ರಾಜ್ಯಭಾರವನ್ನು ಹೇಗೆ ನಡೆಸುವುದೆಂದು ವೈಸರಾಯರು ಇದೇ ತಾ ೫ನೇ ಸೋಮವಾರ ದಿನ ಸಿಮ್ಲಾದ ನ್ಯಾಯವಿಧಾಯಕ ಎಸೆಂಬ್ಲಿಯಲ್ಲಿ ಹೇಳಿದರು. ಮುಂದಿರುವ ಜನಸಮೂಹದಿಂದ ಕಿಕ್ಕಿರಿದು ಹೋಗಿತ್ತು. ವೈಸರಾಯರು ಮುಂದಿನ ರಾಜ್ಯಭಾರದಲ್ಲಿ ಬ್ರಿಟಿಷ ಸಾಮ್ರಾಜ್ಯದವರ ಆಲೋಚನೆ, ವರ್ತನೆ, ಕಾರ್ಯಕ್ರಮಗಳೆಂತಿರುವುವೆಂದು ಹೇಳಿದರು. ಅವರು ಈಗಿನ ಸ್ಥಿತಿಗತಿಗಳ ಕಷ್ಟಪರಂಪರೆಗಳನ್ನು ವಿಮರ್ಶಿಸುತ್ತಾ "ಕಳೆದ ೧೮ ತಿಂಗಳುಗಳು ಬಹಳ ಕ್ಲೇಶದಾಯಕ ದಿನಗಳಾದವು. ನಾನು ಪದಗ್ರಹಣದ ದಿನದಿಂದ ಇಂದಿನ ವರೆಗೆ ಅರ್ಧ [illegible] ರಾಜ್ಯಭಾರದ [illegible] ಬಂತು. ಹೀಗಿದ್ದರೂ ಆಳರಸರು **ಹಿಂದೂದೇಶವನ್ನು ಸ್ವಾತಂತ್ರ್ಯಪಥದಲ್ಲಿ ಮುಂದೆ ಮುಂದೆ ಕೊಂಡ್ಯೊಯ್ಯುವುದರಲ್ಲೇ ಮಗ್ನರಾಗಿರುವರು. ಕೇಂದ್ರ ಸರಕಾರವನ್ನು ಹಿಂದೀಯರಿಗೆ ಕೊಡಬೇಕೆಂಬುದೇ ಸರಕಾರದ ದೃಷ್ಟಿಪಥದ ಅಂತಿಮೋದ್ದೇಶವಾಗಿದೆ.** ಮುಂದಿನ ರಾಜ್ಯಭಾರ ಕ್ರಮವು ಹೇಗಿರುವುದೆಂದು ನಾನು ಇಂದು ನಿಮಗೆ [illegible] ಸ್ಥೂಲ ರೀತಿಯಿಂದ ಹೇಳುವುದಕ್ಕಿದ್ದೇನೆ

"ಹಿಂದೀಯರಿಗೆ ಕೇಂದ್ರದಲ್ಲಿ ಸ್ವಾತಂತ್ರ್ಯವನ್ನು ಕೊಡುವುದೇ ಬ್ರಿಟಿಷ ಸರಕಾರದ ಬ್ರಿಟಿಷ ಜನರ ಅಂತಿಮೋದ್ದೇಶವಾಗಿರುತ್ತದೆ. ಈ ವಿಷಯಕವಾಗಿ ಸಾಮ್ರಾಜ್ಯ ಸರಕಾರವು ಅವಿಶ್ರಾಂತವಾಗಿ ದುಡಿಯುತ್ತಿದೆ. ಮುಂದಿನ ರಾಜ್ಯಾಂಗರಚನೆಯ ಸಂಧಾನಗಳನ್ನು ನಾವು ವಿಮರ್ಶಿಸಿ ಕೆಲವು ರೀತಿನೀತಿಗಳನ್ನು ನಿರ್ಧರಿಸಿರುವೆವು. ನಾವು ಅನುಸರಿಸುತ್ತಿರುವ ಪಥದಲ್ಲಿ ನಮಗೆ ಅವಿಶ್ವಾಸವು ಇರುವುದೇ ಇಲ್ಲ. ಅಂತು ನನ್ನೊಳ್ಳಿರುವ ಒಂದು ಅಭಿಪ್ರಾಯವೇನೆಂದರೆ, ಮುಂದಿನ ರಾಜ್ಯಾಂಗರಚನೆಯು ಸುಧಾರಿತ ರೀತಿಯಲ್ಲಿ ಮುಂದೆ ಮುಂದೆ ಹೋಗಬೇಕಾದರೆ ಸರ್ವ ಪಕ್ಷೀಯರೂ ತಮ್ಮ ಸೌಹಾರ್ದ ವೃತ್ತಿಯನ್ನೂ ಪರಸ್ಪರ ವಿಶ್ವಾಸವನ್ನೂ ಮೊದಲು ನೆಲೆಗೊಳಿಸಬೇಕು. ಅನ್ಯೋನ್ಯತೆಯೇ ಈಗ ಪ್ರಮುಖ್ಯ ವಿಷಯವು. ನಮ್ಮ ಕಾರ್ಯಕಲಾಪಗಳು ಪರಿಣಾಮಕಾರಿಗಳಾಗಬೇಕಾದರೆ, ನಾವು ನಮ್ಮ ಪ್ರಯತ್ನದಲ್ಲಿ ವಿಜಯಿಗಳಾಗಬೇಕಾದರೆ ಇವುಗಳು ಅತ್ಯಗತ್ಯವಾಗಿವೆ. ಇನ್ನು ಆಲೋಚನಾ ಮಂಡಳಿಯೊಂದು ಕೂಡುವುದರಲ್ಲಿಲ್ಲ. ಇಂದು ಭಾರತಮಂತ್ರಿಗಳು ಪ್ರಕಟಿಸಿದಂತೆ ಲಂಡನಿನಲ್ಲಿ ಇನ್ನೊಂದು ಸಣ್ಣ ಸಭೆಯನ್ನು ಕೂಡಿಸಲಾಗುವುದು. ಈ ಪರಿಷತ್ತು ನವಂಬರ ಮಧ್ಯದಲ್ಲಿ ಪ್ರಾರಂಭವಾಗುವುದು. ಈ ಸಭೆ ಜರಗುವಿಕೆಯಿಂದಾಗಿ ಚರ್ಚೆಮಾಡಲ್ಪಡದೆ ಹಾಗೆಯೇ ಬಾಕಿಯುಳಿದಿರುವ ಕೆಲವು ಅಮೂಲ್ಯ ಸಮಸ್ಯೆಗಳು ತೀರ್ಮಾನಿಸಲ್ಪಡುವುವು

"ಹಿಂದೀಯ ಪ್ರತಿನಿಧಿಗಳಿಗೆ ಮೊದಲಿನ ರೌಂಡ್‌ಟೇಬಲ್‌ನಲ್ಲಿದ್ದಂತಹ ಸ್ಥಾನಮಾನಗಳೇ ಸಿಗುವುವು. ಆದರೆ ಚರ್ಚೆಯು ಆದಷ್ಟು [illegible]ದಲ್ಲಾಗುವುದು. ಇದರಿಂದಾಗಿ ಅಸಂಬದ್ಧ ವಾದ ವಿವಾದಗಳು ಕಡಿಮೆಯಾಗುವುವು

'ಈ ಉಪಪರಿಷತ್ತಿನ ಮುಖ್ಯೋದ್ದೇಶವೆಂದರೆ—ಹೌಸ್ ಒಫ್ ಕೊಮನ್ಸಿನಲ್ಲಿ ಭಾರತ ಸಚಿವರು ಸೂಚಿಸಿದಂತೆ ಆದಷ್ಟು ಹೆಚ್ಚು ಸಮಸ್ಯೆಗಳನ್ನು ಬಿಡಿಸಿಕೊಂಡು ಹೋಗುವಂತಹ [illegible] ಎಲ್ಲಾ ತೀರ್ಮಾನಗಳಾದ ಮೇಲೆ ಅವುಗಳು ಜ್ಯೊಯಿಂಟ್ ಸಿಲೆಕ್ಟ್ ಕಮಿಟಿಯ ಮತ್ತು ಪಾರ್ಲಿಮೆಂಟಿನ ಮುಂದೆ ಇಡಲ್ಪಡುವುವು. ಅಲ್ಲಿಯೇ ತೀರ್ಮಾನಿಸಲ್ಪಟ್ಟ ವಿಷಯಗಳು ಶಿಫಾರಸು ಮಾಡಲ್ಪಡುವುವು

"ನಾವೆಲ್ಲರೂ ಪರಸ್ಪರ ಐಕ್ಯರಾಗಿ ಕೆಲಸಕ್ಕೆ ತೊಡಗೋಣ. ಹಿಂದೂದೇಶದ [illegible] ರಾಷ್ಟ್ರೀಯತೆಯನ್ನು ವಿಸ್ತರಿಸುವ ಧ್ಯೇಯದಿಂದ ಸಮ್ಮಿಳಿತರಾಗಿ ಕಾರ್ಯರಂಗಕ್ಕಿಳಿಯೋಣ. ಆಗ ಮಾತ್ರ ಹಿಂದೂದೇಶವು ಪ್ರಪಂಚದ ಇತರ ರಾಷ್ಟ್ರಗಳಂತೆ ರಾರಾಜಿಸುವ [illegible]ವಂತಹುದಾಗುವುದು" ಎಂದರು.

ತನ್ನ ಪ್ರಕೃತ ಧೋರಣೆಯು ತೀರ ನ್ಯಾಯವಾದುದೆಂದೂ, ಆ ಧೋರಣೆಯಲ್ಲದೆ ಯಾವ ಸರಕಾರವೂ ಪ್ರಗತಿಯಲ್ಲಿ ಪದಾರ್ಪಣಮಾಡಲು ಅಸಾಧ್ಯವೆಂದೂ ಹೇಳಿದರು. ಅಲ್ಲದೆ ಕಾಂಗ್ರೆಸ್ಸಿನೊಡನೆ ಎಷ್ಟುಮಾತ್ರಕ್ಕೂ ರಾಜಿಯಿಲ್ಲವೆಂದೇ ವೈಸರಾಯರು ಒತ್ತಿ ಒತ್ತಿ ಹೇಳಿದರು. ತಾನು ಜಾರಿ ಮಾಡಿದ ಓರ್ಡಿನೆನ್ಸುಗಳು ಸತ್ಪರಿಣಾಮದ [illegible]ವೆಂದೂ, ಅವುಗಳು ದೇಶದ ನೆಮ್ಮದಿಯನ್ನು ಕಾಯಲು ಅತ್ಯಂತ ಸಹಾಯ[illegible]ವೆಂದೂ ಹೇಳಿ ತನ್ನ ಉದ್ದವಾದ ಭಾಷಣವನ್ನು ಅಂತ್ಯಗೊಳಿಸಿದರು.

ವೈಸರಾಯರು ಈ ಭಾಷಣಮಾಡುವ ಮೊದಲು ಮಂದಪಕ್ಷದವರನ್ನು ತನ್ನ ಬಳಿಗೆ ಬರಮಾಡಿ ರಾಜಕೀಯದ ವಿಷಯವಾಗಿ ಮಾತನಾಡಿದರಷ್ಟೆ! ಸಪ್ರೂ ಜಯ[illegible] ವಿಶ್ವಾಸಪೂರಿತರಾಗಿ ಈ ಕೆಳಗಿನ ಅಂಶಗಳು ಸಿದ್ಧಾಂತವಾಗಬೇಕೆಂದು ಹೇಳಿ[illegible] ತಿಳಿದು ಬರುತ್ತದೆ (೧) "ಬ್ರಿಟಿಷ್ ಪಾರ್ಲಿಮೆಂಟಿನ ಪ್ರತಿನಿಧಿಗಳಿಗೂ ಭಾರತೀಯ ಪ್ರತಿನಿಧಿಗಳಿಗೂ ಸಮಾನ ಸ್ಥಾನಮಾನಗಳಿರಬೇಕು. ಆಂಗ್ಲರೂ ಸಂಸ್ಥಾನ ಪ್ರತಿನಿಧಿಗಳೂ ಹಿಂದೆ ಹೇಗೆ ಕಲೆತು ವಿಚಾರ ವಿಮರ್ಶೆ ಮಾಡಿದರೋ ಈಗಲೂ ಹಾಗೆಯೇ ನಡೆಯತಕ್ಕದ್ದು (೨) ಇದುವರೆಗೆ ಎಲ್ಲರ ಒಪ್ಪಿಗೆಯೂ ಆಗಿ ಆದರಂತೆ ತೀರ್ಮಾನಗಳಾಗುತ್ತ ಬಂದಿವೆ ಮುಂದೆಯೂ ಹಾಗೆಯೇ ಆಗತಕ್ಕದ್ದು (೩) ನಮ್ಮ ನಮ್ಮಲ್ಲಿ ತೀರ್ಮಾನವಾಗಿ ನಿರ್ಣಯಕ್ಕೆ ಬಂದ ಒಪ್ಪಂದದ ಮೇಲೆ ಸಾರ್ವಭೌಮ ಸರಕಾರದವರು ಒಂದು ಮಸೂದೆಯನ್ನು ಸ್ಥಾಪಿಸತಕ್ಕದ್ದು.

ಪತ್ರಿಕಾ ಸಾಮರ್ಥ್ಯ.

ಜನಾಂಗದ ಶಕ್ತಿಯು ಅದಕ್ಕಿರುವ ವಾರ್ತಾಪತ್ರಿಕೆಗಳ ಶಕ್ತಿಯಿಂದಾಗಿ ಹೊರ ಹೊಮ್ಮುತ್ತದೆ. ಪ್ರಜಾಮತವನ್ನು ಸ್ಪಷ್ಟವಾಗಿ ಹೊರ ಚೆಲ್ಲಲು ಪತ್ರಿಕೆಗಳಿಗಿದ್ದಷ್ಟು ಸಾಮರ್ಥ್ಯವು ವ್ಯಕ್ತಿಗಿಲ್ಲ. ಸ್ವಸಾಮರ್ಥ್ಯ, ಸ್ವಜನಸಾಮರ್ಥ್ಯ ಸ್ವದೇಶ ಸಾಮರ್ಥ್ಯಗಳನ್ನು ಅರಿತುಕೊಂಡಿರಬೇಕಾದರೆ ಜನಾಂಗವು ಸ್ವಭಾಷೆಯಿಂದ ಪ್ರಕಟವಾಗುವ ವಿವಿಧ ಪತ್ರಿಕೆಗಳನ್ನು ಓದಲೇಬೇಕು. ಲೋಕವ್ಯವಹಾರಜ್ಞಾನವನ್ನು ಸಂಪಾದಿಸಲೇ ಬೇಕು. ವ್ಯಾವಹಾರಿಕ ಜ್ಞಾನರಹಿತನಾಗಿರುವವನು ಬಾವಿಯೊಳಗಿನ ಕಪ್ಪೆಯಂತೆಯೇ ಸರಿ. ಸಂಕುಚಿತ ಮನೋಭಾವದ ಅಜ್ಞಾನಿಯೇ ಸರಿ! ಪಾಶ್ಚಾತ್ಯ ರಾಷ್ಟ್ರಗಳಂತೆ ನಮ್ಮ ಕನ್ನಡಿಗರು ಸುಸಂಸ್ಕೃತರಾಗಬೇಕಾದರೆ ಪತ್ರಿಕಾ ವಾಚನಾಭಿರುಚಿಯನ್ನರಿಯಬೇಕು. ಬಡವರು ಬಲ್ಲಿದರು, ವಿದ್ಯೆಯುಳ್ಳವರು, ಇಲ್ಲದವರು ಪತ್ರಿಕೆಗಳನ್ನು ಓದಿ ಓದಿಸಿ ಜ್ಞಾನಾರ್ಜನೆಯನ್ನು ಮಾಡಬೇಕು. ಸ್ವಜನಾಂಗ ಶಕ್ತಿಯ ಪ್ರವರ್ಧನೆಯನ್ನು ಪರಿಕಿಸಬೇಕು.

ವಿಶೇಷ ವಾರ್ತೆ!

ಪ್ರಭುತ್ವವು ಮಂದಪಕ್ಷೀಯರ ಈ ತರದ ಹೇಳಿಕೆಗಳಿಂದ ಸಂತೋಷಗೊಂಡಿಲ್ಲ. ಇವುಗಳು ಕೇಂದ್ರ ಸರಕಾರದ ಪ್ರಧಾನ ಸೋಪಾನವಾಗಿಯೂ ಬ್ರಿಟಿಷರ ಭದ್ರತೆಗೆ ಹಾನಿಕರವಾಗಿಯೂ ಇರುವುವೆಂದು ಮಂತ್ರಿಮಂಡಲದವರು ಇಂತಹ ಆತ್ಮಘಾತವನ್ನು ಮಾಡಿಕೊಳ್ಳುವರೆ ಸಿದ್ಧರಿಲ್ಲವೆಂದು ಒಂದು ಕಡೆಯಿಂದ ಊಹಿಸಲಾಗುತ್ತದೆ

ಇನ್ನೊಂದು ಕಡೆಯಿಂದ ರೌಂಡ್‌ಟೇಬಲ್ ಉಪಪರಿಷತ್ತಿನ ಸಮಸ್ಯೆ[illegible] ಆ ಪರಿಷದೊಳಗೆ ಪ್ರಕಟವಾಗುವುದು. ಇದರಲ್ಲಿ ಮಂದಪಕ್ಷದವರು ಭಾಗವಹಿಸುವರೆಂದು ಸುದ್ದಿ. ಅವರ ಹೇಳಿಕೆಗಳು ಸ್ವೀಕೃತವಾಗುವುವು. ಉಪಪರಿಷತ್ತಿನ ಎಲ್ಲಾ [illegible] ಪ್ರಯೋಗಮೋ ಇದುವು. ವೈಟ್‌ಹೋಲ್ ಕಾಂಗ್ರೆಸ್ಸಿನೊಡನೆ ಸಂಧಿಮಾಡುವುದರಲ್ಲಿ [illegible] ಇಲ್ಲ. ಆದರೂ ಉಪಪರಿಷತ್ತಿಗೆ ಮಹಾತ್ಮ ಗಾಂಧಿ, ಪಂಡಿತ ಮಾಲವೀಯ, ಶ್ರೀಮತಿ ಸರೋಜಿನಿ ನಾಯಡುರವರನ್ನು ಕರೆಯಲಾಗುವುದು. ಅವರು ಈ ಧೋರಣೆಗೆ ಸಮ್ಮತಿಸಿ ಬರುವುದಾದರೆ [illegible] ಗಾಂಧಿ ಸರೋಜಿನಿಯವರನ್ನು 'ಪೆರೋಲ್'ನ ಮೇಲೆ ಬಿಡಲಾಗುವುದು

[illegible] ದೊಡನೆ ಕಾಂಗ್ರೆಸ್ಸಿನ ಸಂಪೂರ್ಣವಾಗಿ [illegible] ಮಾತ್ರ ನವಂಬರದ [illegible] ಬಿಡುಗಡೆಮಾಡ [illegible] ಕಾಂಗ್ರೆಸ್ಸಿನ ಮಾತ್ರ [illegible] ಈ ಕಳಕಳಿಗೆ ಒಪ್ಪುತ್ತದೆಯೋ ತಿಳಿದಿಲ್ಲ. ಅಂತೂ ಗಾಂಧಿಜೀಯವರು [illegible] ಅನೇಕ [illegible] ಈ [illegible] ಪರಿಷತ್ತು [illegible] ಹಿಂದೀಯರಿಗೆ ಯಾವ [illegible] ಸ್ವಾತಂತ್ರ್ಯವನ್ನು ಕೊಡಲು ಸಾಧ್ಯವಾಗಲ್ಲ, ಅಲ್ಪಸ್ವಲ್ಪ ನವಸುಧಾರಣೆಗಳನ್ನೋ [illegible], ಅವುಗಳಿಂದ ಹೆಚ್ಚಿನ ಪ್ರಯೋಜನವಿದ್ದೀತೆಂದು ಭಾವಿಸುವುದಿಲ್ಲ

ವೈಸರಾಯರ ಭಾಷಣದಿಂದ ಅನೇಕರು ಅಶಾಮಯರಾಗಿದ್ದಾರೆ. ಅವರ ಹೇಳಿಕೆಯಂತೆ ಬ್ರಿಟಿಷ ಸರಕಾರವು ಮುಂದೆ ನಡೆಯುವುದು [illegible] ಹಿಂದೂಸ್ಥಾನವು ಎಷ್ಟು [illegible] ಸಂದೇಹವಿಲ್ಲವೆನ್ನುತ್ತಾರೆ. ಸರ್ [illegible] ಕೇಳಲು ಅವರು ಅಸಂತೋಷವನ್ನೇ ಸೂಚಿಸಿ ವೈಸರಾಯರ ಭಾಷಣ [illegible] ನನಗೆ ಬೇಸರ [illegible] ಎಂದರು. ಸರ್ ಪಿ ಎಸ್ ಶಿವಸ್ವಾಮಿ ಅಯ್ಯರವರೊಡನೆ ಈ [illegible] ಕೇಳಲು "ಸರಕಾ[illegible] ಎಂದರೇನು? ಸಂಸ್ಥಾನಾಧಿಪರು [illegible] ರಾಜ್ಯದಿಂದ [illegible] ಅವರ ಒಪ್ಪಿಗೆಗಾಗಿ ಹಿಂದೂದೇಶವು ಎಷ್ಟು ಕಾಲ ಕಾಯಬೇಕು? ಕೇಂದ್ರ ಸರಕಾರವು ಎಷ್ಟು ವರ್ಷಗಳಿಗೆ ಸಿಗುವುದು? ನಮ್ಮ ರಕ್ಷಣೆಯು ನಮಗಿರುವುದೇ? ಮಿಲಿಟರಿಯನ್ನು ಹಿಂದೀಯರಿಗೆ ಬಿಟ್ಟು ಕೊಡುವುದು ಹೇಗೆ? ಯಾವಾಗ?" ಎಂದು ಕೇಳಿದರು. ಮುಂದಿನ ಹೆಜ್ಜೆಯೆಂತೋ ನೋಡಬೇಕು.-

ಅತ್ಯುತ್ಕೃಷ್ಟ ಮುದ್ರಣ ಬೇಕೆ? ಶಾರದಾ ಪ್ರೆಸ್ ಮಂಗಳೂರು, ಇಲ್ಲಿ ವಿಚಾರಿಸಿರಿ.

[illegible]
... ೬೦ ವರುಷಗಳಿಂದ ಸರ್ವತ್ರವಾಗಿ ಉಪಯೋಗಿಸಲ್ಪಟ್ಟಿದೆ.

ಶ್ರೀ ಮದನಮಸ್ತಪಾಕ ರಿಜಿಸ್ಟರ್ಡ್.

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯೊಡನೆ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ, ಸ್ವಪ್ನದೋಷ, ಇತ್ಯಾದಿ ರೋಗಗಳು ನಾಶವಾಗಿ ದೇಹಕ್ಕೆ ಸಾಹಸ ಬರುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫, ಟ ಖ ರೂ ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ. ೧೧. ಮೂರ ಡಬ್ಬಿಗೆ ರೂ ೧೫೦ ಮಾತ್ರ ಪಥ್ಯವಿಲ್ಲ. ಅನುಭವವು ಪಡೆಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್. ಆಯ್. ಖಟಖಟೆ, ಎಲ್ ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್. ದತ್ತ, ಎಮ್. ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ, ಮಿರಜ, S M C

ಗುಣಬಾರದ್ದಿದರೆ] ಸುಪ್ರಸಿದ್ಧ ವೈದ್ಯರಾದ ಎಸ್. ಕೆ ರಜಪೂತ ಇವರ **[ಹಣವಾಪಾಸು**

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ದಾರಿದ್ರ್ಯದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಗರ್ಭವಾಗುವದಿಲ್ಲ ಮೊದಲ ಪೂರಾ ವಿಚಾರ ಮಾಡಿ ಔಷಧಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಏ ಎ ವೈದ್ಯ ಎಲ್ ಸಿ ಪಿ ಎಸ್ ಕೆಕವಾಮಾಹಿಮ ರಾಣೇ — ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕೆ ೪ ರೂ ವಿ ಪಿ ಖರ್ಚ ೦|೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು ಬಿಳಿ ಸೆರಗಿಗೆ ಶತ್ರುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ ಕ್ಲೇಶ ಮೈಯಲ್ಲಿ ನೋವು ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿಯ ದೋಷ ಗರ್ಭಧಾರಣವಾಗದಿರೋಣ ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ ಮುಖ್ಯ ಸರ್ಟಿಫಿಕೇಟ ಮೆ. ರಾ ಎ ಎಮ್ ಅನ್ನಪೆಕ್ಟರ ಬೆಳಗಾಂವ — ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ಗುಣವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಸೆರಗು ಇಲ್ಲದಂತಾದವು ೨ ದಿವಸದ ಡಬ್ಬಿಯ ಕಿಮ್ಮತ್ತು ರೂ ೩ ಟ ಖ ಆಣೆ ೮

ವಿಳಾಸ — ಸಂಜೀವಿನೀ ಔಷಧಾಲಯ. ಮು ಪೋ ಮಿರಜ, S· M O

FOETOGENE
A vigilant guard to the ailments of PREGNANCY
The remedy to neutralise the toxins of PREGNANCY thereby minimising the chances of Abortions & Miscarriages
Dose Preventive 1 dr every mornin Cura i e 2 drm thri e a day

THROLOGE
for Sore throat Cough & Cold & other long affections

HYSTERINE
A Tried Remedy for Hysteria & Epilepsy very useful Brain sedative in Insomnia & Mental derangements
Dose 1 to 2 dram adu t 0 drops child thrice daily

MONOCAFISPIN
A Nondepressant Nervine Sedative Magical cure for Headaches & Neutagia Found useful in all pains of whatever origin it may be
Dose 1 to 2 ta lets

THE EASTERN RESEARCH LABORATORY,
GHAZIPUR U P INDIA

MODERATE

FOR JOB WORK IN
Typewriting
at most Moderate Rates
consult
Bangra Ramanath Shanbhogue
Britto Building Upstairs,
HAMPANKATTA, **MANGALORE.**

ಪ್ರಕಟಣೆ.

ಇದೇ ಸಪ್ಟಂಬರ ತಾ ೫ನೇ ಭಾದ್ರಪದ ಶು। ೫ಯು ಚಂದ್ರವಾರ ಲಾಗಾಯ್ತು ಮಂಗಳೂರು ಬಂದರದಲ್ಲಿ ಪಣಂಬೂರು ನಾರಾಯಣ ವೈಜಪ್ಪ ಭಂಡಾರಿ ಎಂಡ್ ಸನ್ಸ್ ಎಂಬ ಹೆಸರಿನಿಂದ ಬೆಳಗೋಟು, ಕಾಫಿ, ಏಲಕ್ಕಿ ವಗೈರೆ ಎಲ್ಲಾ ಕಾಡುತ್ಪತ್ತಿಯ ವಹಿವಾಟಿನ ದಲಾಲಿ ಭಂಡಸಾಲೆಯು ತೆರೆಯಲ್ಪಡುತ್ತದೆ ಸರ್ವರೂ ಪ್ರೋತ್ಸಾಹಕೊಟ್ಟು ನಡೆಸಬೇಕಾಗಿ ವಿನಂತಿ

ಪಣಂಬೂರು ನಾರಾಯಣ ವೈಜಪ್ಪ ಭಂಡಾರಿ
ಎಂಡ್ ಸನ್ಸ್.

ಬಂದರ 2-9-'32

ಪತ್ರವ್ಯವಹಾರ

(ಪತ್ರದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ, ಸ್ವ)

ಲೋಕಲ್ ಬೋರ್ಡುಗಳ ಚುನಾವಣೆ.

ತಾಲೂಕು ಬೋರ್ಡುಗಳಿಗೆ ಮೆಂಬರರೂ ಪ್ರೆಸಿಡೆಂಟರೂ ವ್ಹಾಯಿಸ್ ಪ್ರೆಸಿಡೆಂಟರೂ ಆಗುವರು. ಆಯಾ ತಾಲೂಕು ಬೋರ್ಡುಗಳ ಸರಹದ್ದಿನಲ್ಲಿ ಜನರಿಗೆ ವೈದ್ಯ ಸಹಾಯ ಒದಗಿಸುವುದು, ಶಾಲೆಗಳನ್ನು ಇಡುವುದು, ಒಳ್ಳೇ ಅಭಿವೃದ್ಧಿ ಸ್ಥಿತಿಯಲ್ಲಿರುವ ಲೋವರ್ ಎಲಿಮೆಂಟರಿ ಶಾಲೆಗಳನ್ನು ಹಾಯರ್ ಎಲಿಮೆಂಟರಿ ಶಾಲೆಗಳಾಗಿ ಮಾಡುವುದು, ಶಾಲಾಕಟ್ಟಡಗಳು ಇಲ್ಲದ್ದಲ್ಲಿ ಗ್ರಾಮದವರ ಸಹಾನುಭೂತಿ ಪಡೆದು ಶಾಲಾಕಟ್ಟಡಗಳನ್ನೂ, ಅದಕ್ಕೆ ಬೇಕಾಗುವ ಬೆಂಚು ಮೇಜು, ಕುರ್ಚಿಗಳನ್ನೂ ಒದಗಿಸುವುದು, ಉಪಾಧ್ಯಾಯರ ಕಡೆಗೆ ಸಹಾನುಭೂತಿಯನ್ನು ತೋರಿಸಿ ಅವರು ಮನಃಪೂರ್ವಕವಾಗಿ ಕೆಲಸಮಾಡುವಂತೆ ಮಾಡುವುದು, ಗ್ರಾಮಸ್ಥರ ಸಹಾಯವನ್ನು ಪಡೆದು ಗ್ರಾಮಗಳಲ್ಲಿ ಮಾರ್ಗಗಳನ್ನು ಬೀದಿಗಳನ್ನು ಸಣ್ಣ ಸಣ್ಣ ಸೇತುವೆಗಳನ್ನು ಮಾಡಿಸುವುದು, ನೀರಿನ ಅಭಾವ ಇರುವಲ್ಲಿ ಶುದ್ಧವಾದ ನೀರು ಗ್ರಾಮಸ್ಥರಿಗೆ ಒದಗಿಸುವಂತೆ ಮಾಡುವುದು ಎಲ್ಲಾ ವಿಧಗಳಲ್ಲಿಯೂ ಗ್ರಾಮಾಭಿವೃದ್ಧಿಯನ್ನು ಮಾಡುವುದು ಇವೇ ಇವರ ಮುಖ್ಯವಾದ ಕೆಲಸಗಳಾಗಿವೆ

ಆದರೆ ಪರಿಸ್ಥಿತಿಯನ್ನು ನೋಡಿದರೆ ಯಾವ ಯಾವ ಸರ್ಕಲಿನಲ್ಲಿ ವಾಸಿಸುವವರು ಯಾವ ಯಾವ ಸರ್ಕಲಿಗೆ ಹೋಗಿ ಮೆಂಬರರಾಗುವರು ವೋಟಿನ ಸಮಯ ಸ್ವತಃ ಆಗಲಿ ಏಜಂಟರ ಮುಖಾಂತರವಾಗಿ ಆಗಲಿ ವೋಟು ಸಂಪಾದನೆ ಮಾಡುವರು ನಂತರ ಗ್ರಾಮ ಎಲ್ಲಿದೆ ಆಯಾ ಗ್ರಾಮಕ್ಕೆ ಯಾವ ಯಾವ ವಿಷಯಗಳು ಅಗತ್ಯವಿದೆಯೆಂಬುದನ್ನು ವಿಚಾರಿಸುವುದಾಗಲೀ ಅಥವಾ ಸಂಚರಿಸಿ ಗ್ರಾಮದವರನ್ನು ಸಭೆ ಕೂಡಿಸಿ ಕೇಳುವುದಾಗಲಿ ಪದ್ಧತಿಯೇ ಇಲ್ಲ ಗ್ರಾಮದವರ ನೆನಪಾಗುವುದು ನಂತರ ಬರುವ ಚುನಾವಣೆಯ ಸಮಯ ಅಲ್ಲದೆ ಅದರ ಮೊದಲಲ್ಲ

ಮೇಲಿನ ರೀತಿಯಲ್ಲಿ ಮೆಂಬರರೂ ಪ್ರೆಸಿಡೆಂಟರೂ ವರ್ತಿಸುತ್ತಿದ್ದರೆ ಗ್ರಾಮಗಳೆಲ್ಲ ಈ ಮೊದಲೇ ಉದ್ಧಾರವಾಗುತ್ತಿದ್ದುವು ಹಣವಿಲ್ಲವೆಂದು ನೆವನದಿಂದ ಸುಮ್ಮನೆ ಕುಳಿತುಕೊಳ್ಳುವುದು ಒಂದು ದೊಡ್ಡ ಕಾರ್ಯವಲ್ಲ ಗ್ರಾಮಸ್ಥ ಸಹಾನುಭೂತಿಯಿಂದ ಕೆಲಸಗಳನ್ನು ಮಾಡಿದರೆ ಹೇರಳ ಹಣದಿಂದ ಆಗುವ ಕಾರ್ಯಗಳು ಅಲ್ಪಸ್ವಲ್ಪ ಹಣದಿಂದ ಆಗುವುದರಲ್ಲಿ ಸಂದೇಹವಿಲ್ಲ ಜನರ ಮನವಿಗಳು ಹೋದೊಡನೆ ನೋ ಫಂಡ್ಸ್ ಎಂಬ ಶಬ್ದಗಳು ಮೊದಲೇ ತಯಾರಿ ಮಾಡಿಟ್ಟಿದ್ದ ಪತ್ರಿಕೆಗಳಲ್ಲಿ ಗ್ರಾಮಸ್ಥರಿಗೆ ಅಗತ್ಯವಿದ್ದ ಸಂಗತಿಗಳು ಬಂದರೆ ಹೂ ಕೇರ್ಸ್ ಫೋರ್ ಒಲ್ ದಿಸ್ ಬೋಶ್ ಎಂದಾಗುತ್ತ ಈ ರೀತಿಯಲ್ಲಿ ಗ್ರಾಮನಿವಾಸಿಗಳ ಸಲಹೆಗಳಿಗೆ ಪ್ರತಿಫಲವು ಸಿಗುತ್ತಲಿದೆ

ಒಬ್ಬೊಬ್ಬ ತಾಲೂಕು ಬೋರ್ಡುಗಳಲ್ಲಿ ಆಗ ನಡೆಯುವ ಕೆಲಸವೆಂದರೆ ಮುಖ್ಯವಾಗಿ ತಿಂಗಳಿಗೊಂದು ಸಭೆಮಾಡುವುದು ಇದಕ್ಕೆ ಮೆಂಬರರು ಬರುವ ಸಮಯದ ವಿಷಯ ಹೇಳಿ ಪ್ರಯೋಜನವಿಲ್ಲ ೩ ಗಂಟೆಗೆ ಮೀಟಿಂಗಿಟ್ಟರೆ ಮೀಟಿಂಗು ಮುಗಿಯುವ ವರೆಗೂ ಮೆಂಬರರು ಬರುತ್ತಲೂ ಹೋಗುತ್ತಲೂ ಇರುವರು ಇದೇ ಮೀಟಿಂಗಿಗೆ ಕೂತುಕೊಳ್ಳುವ ಸಮಯ ಇರುವ ಮೆಂಬರರು ಬಹಳ ಕಡಿಮೆ ಇನ್ನು ಒಂದು ತಿಂಗಳು ಎರಡು ತಿಂಗಳು ಮೀಟಿಂಗಿಗೆ ಬಾರದೆ ೩ನೇ ತಿಂಗಳಲ್ಲಿ ಬಾರದಿದ್ದರೆ ಮೆಂಬರಿಕೆ ಹೋದೀತೆಂದು ೩ ತಿಂಗಳಿಗೊಮ್ಮೆ ಬರುವ ಮೆಂಬರರು ಕೆಲವರೆ ಇರುವರು ಇನ್ನು ೩ ತಿಂಗಳಿಗೊಮ್ಮೆ ಸಹ ಬಾರದ ೬ನೇ ತಿಂಗಳಲ್ಲಿ ಬಂದು ಮೀಟಿಂಗಿಗೆ ಬಂದ ಮೆಂಬರರೊಡನೆ ಸುಖದುಃಖ ಮಾತಾಡಿ ತಿರುಗಿ ಚುನಾವಣೆ ಸಮಯದ ಗಲಾಟೆ ಮಾಡಿ ಕೂತುಕೊಳ್ಳುವ ಬದಲಿಗೆ ಬ್ಯಾಲೋ ಹುಡುಕಿ ಅವರನ್ನೇ ತಿರುಗಿ ಮೆಂಬರರಾಗಿ ಮಾಡುವ ರೀತಿಯು ಮೆಂಬರರೂ ಇರುವರು ಹೀಗೆ ನಡೆಯುವುದರಿಂದ ಅಲ್ಲಿ ಕೂಡಿದ ಕೋರಮಿನ ಮೆಂಬರರು ತಮ್ಮ ಆಲೋಚನೆಯಿದ್ದಂತೆ ಆ ದಿವಸದ ಎಜೆಂಡಾ ಪೇಪರಿನ ಐಟಮುಗಳನು ಪಟಾಪಟಿ ಮಾಡುವರು ಈ ರೀತಿ ಇರುವುದರಿಂದ ಗ್ರಾಮೋದ್ಧಾರವು ಯಾವ ರೀತಿ ಆದೀತೆಂದು ವಾಚಕರೆ ಊಹಿಸಬೇಕು ವೋಟರರ ಗುರುತು ಮೆಂಬರರಿಗಿಲ್ಲ ಮೆಂಬರರ ಗುರುತು ವೋಟರರಿಗಿಲ್ಲ

ಆದುದರಿಂದ ಉಮೇದುವಾರ್ರು ಮೆಂಬರರು ವೋಟು ಕೇಳಲಿಕ್ಕೆ ಬಂದಾಗ ಅವರ ಹಸನ್ಮುಖಗಳಿಗೂ ನಮಸ್ಕಾರಗಳಿಗೂ, ಕಾಫಿ, ತಿಂಡಿ, ಮೋಟಾರ್ ಕಾರ್, ಟಿಕ್ಕಿ ಮುಂತಾದವುಗಳ ಕಡೆಗೂ ಗಮನಕೊಡದೆ ಅವರು ಗ್ರಾಮೋದ್ಧಾರ ಮಾಡಲಿಕ್ಕೆ ಮನಃಪೂರ್ವಕ ಮಾತು ಕೊಟ್ಟ ಮಾತ್ರವೇ ಅವರಿಗೆ ವೋಟನ್ನು ಕೊಟ್ಟು ಅವರನ್ನು ಮೆಂಬರರಾಗಿ ಕಳುಹಿಸುವುದು ಉತ್ತಮ ಆಯಾ ಸರ್ಕಲಿನಲ್ಲಿ ವಾಸವಾಗಿರದೆ ಇತರ ಸರ್ಕಲುಗಳಿಂದಲೂ ದೊಡ್ಡದೊಡ್ಡ ಊರುಗಳಿಂದಲೂ ಬಂದು ಉಮೇದುವಾರರಾಗಿ ನಿಲ್ಲುವ ಮೆಂಬರರಿಗೆ ಸಹಾನುಭೂತಿಯನ್ನು ತೋರಿಸದೆ ತಮ್ಮ ಸರ್ಕಲಿನ ಮೆಂಬರರನ್ನೇ ಚುನಾಯಿಸಿ ಕಳುಹಿಸುವ ಭಾರವು ವೋಟರರ ಮೇಲೆ ಇರುವುದು ಆದ ಕಾರಣ, ವೋಟರರು ಚೆನ್ನಾಗಿ ಆಲೋಚಿಸಿ ತಮ್ಮ ವೋಟಿನ ಸದುಪಯೋಗ ಮಾಡುವರಾಗಿ ನಂಬಿದ್ದೇನೆ

ವೋಟರ

ಸುಸಂಧಿ! ಕೆಲವೇ ಪ್ರತಿಗಳು!
ಶಾಲಾ ಕಾಲೇಜು, ಲೈಬ್ರರಿಗಳಿಗೂ,
ಗ್ರಂಥಕರ್ತರಿಗೂ ನಮ್ಮ ಜಿಲ್ಲೆಯ ಅನು
ಭವವನ್ನು ಮಾಡಲಿಚ್ಛಿಸುವವರಿಗೂ,
ಬೇಕಾಗಿರುವ ಕ್ರೌನ್ 444 ಪುಟಗಳು
ಳ್ಳ ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸವೆಂಬ
ಉದ್ಗ್ರಂಥ! ಬೆಲೆ ಪ್ರತಿಯೊಂದಕ್ಕೆ ೬.
ಈಗ ಸಡಿಲ ರೂ. 2.

ಶಾರದಾ ಛಾಪಖಾನೆ,
ಮಂಗಳೂರು.

ಕೋರ್ಟುಗಳಲ್ಲಿ ವಿವಿಧ ತೀರ್ಮಾನಗಳು.

ಎಷ್ಟು ಮಂದಿ ಸ್ತ್ರೀಯರನ್ನು ಕದ್ದೊಯ್ದರು? ಭಗತ್‍ಸಿಂಗನ ಪಿತೃಗೆ ಹೊಡೆದುದು.
ಡೆಕ್ಕಾ ಗುಂಡಿನ ಪ್ರತಿಧ್ವನಿ'. ೭೦೦ ಬಗೆಯ ವಿಷ' ಮೂಗುಗಳಾಹುತಿ!
ಗಂಡನಲ್ಲ—? ಪೋಲೀಸರ 'ಮಿಸ್ಟೇಕ್'! ಅರುವತ್ತರಲ್ಲೂ ಆಶೆ—ಭಾವನ
ಮೋಸ' ಕಳ್ಳ. ಗಂಡನ ದಗೆ' ರಾಣೀತನವನ್ನು ಬಿಟ್ಟಳು.

ವ್ಯಾಪಾರಸ್ಥರಿಗೆ ಸುಸಂಧಿ!
ದೀಪಾವಳಿಯು ಸಮೀಪಿಸುತ್ತಲ್ಲವೇ?
ನಿಮಗೆ ಬೇಕಾಗುವ ವರ್ಗ, ಊಳಿಗ
ಪುಸ್ತಕಗಳೂ, ಆಮಂತ್ರಣ ಪತ್ರಿಕೆ
ಗಳೂ ಅಗ್ಗದಲ್ಲಿ, ಅನುಕೂಲಾನು
ಸಾರವಾಗಿ, ಕ್ಲಪ್ತ ಸಮಯಕ್ಕೆ ಸಿಗ
ಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬನ್ನಿರಿ.
ಹೆಚ್ಚಿನ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ

ಶಾರದಾ ಛಾಪಖಾನೆ,
ಮಂಗಳೂರು.

ಎಷ್ಟು ಮಂದಿ ಸ್ತ್ರೀಯರನ್ನು ಕದ್ದೊಯ್ದರು?

ಬಂಗಾಳದ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ। ಕಿಶೋರಿ ಮೋಹನ ಚೌಧುರಿಯವರೊಂದು ಪ್ರಶ್ನೆಯನ್ನು ಹಾಕುತ್ತಾ, "ಬಂಗಾಳದಲ್ಲಿ ೧೯೨೨ರಿಂದ ೨೭ರ ವರೆಗೆ ಎಷ್ಟು ಮಂದಿ ಸ್ತ್ರೀಯರು ಕದ್ದೊಯ್ಯಲ್ಪಟ್ಟರು?" ಎಂದರು. ಉತ್ತರ ೧೯೨೨ರಲ್ಲಿ ೮೪೦ ಸ್ತ್ರೀಯರ ಅಪಹರಣ, ೧೯೨೩ರಲ್ಲಿ ೮೭೮; ೧೯೨೪ರಲ್ಲಿ ೯೭೬, ೧೯೨೫ರಲ್ಲಿ ೯೫೧, ೧೯೨೬ರಲ್ಲಿ ೯೯೯. ಇವರಲ್ಲಿ ಪ್ರತಿ ವರ್ಷ ೮೦೦ರಿಂದ ೬೫೦ ಮಂದಿ ಹಿಂದೂಸ್ತ್ರೀಯರು ಎತ್ತಿಕೊಳ್ಳಲ್ಪಟ್ಟರು. ಮುಸಲ್ಮಾನರು ಹಿಂದೂ ಸ್ತ್ರೀಯರನ್ನು ಎತ್ತುವುದೇ ಹೆಚ್ಚಲ್ಲದೆ ಹಿಂದೂಗಳು ಮುಸಲ್ಮಾನ ಸ್ತ್ರೀಯರನ್ನೊಯ್ದ ಘಟನೆಗಳು ಸರಾಸರಿ ೫. ಈ ಸ್ತ್ರೀ ಚೋರಿಯನ್ನು ನಿಲ್ಲಿಸುವುದಕ್ಕಾಗಿ ಸರಕಾರವು ತಕ್ಕ ವ್ಯವಸ್ಥೆಯನ್ನು ಮಾಡಲಿರುವುದು

ಭಗತ್‍ಸಿಂಗನ ಪಿತೃಗೆ ಹೊಡೆದುದು!

ಸೊಂಡರ್ಸ್ ಕೇಸಿನಲ್ಲಿ ಗಲ್ಲಿಗೇರಿಸಲ್ಪಟ್ಟ ಭಗತ್‍ಸಿಂಗನ ತಂದೆಯವರಾದ ಸರ್ದಾರ್ ಕಿಶನ್ ಸಿಂಗರಿಗೂ, ಅವನ ಸಣ್ಣ ತಮ್ಮನಿಗೂ ಮತ್ತೊಬ್ಬ ಮಾವನಿಗೂ ೪೦ ಮಂದಿಗಳು ಕೂಡಿ ಲಾಹೋರಿನಲ್ಲಿ ಕತ್ತಿಕಠಾರಿಗಳಿಂದ ಹೊಡೆದರ. ದನಕರುಗಳು ಹೊಲಗದ್ದೆಗಳನ್ನು ಹಾಳುಗೈದ ಕೆಲವು ಪ್ರಸಂಗಗಳು ಇದಕ್ಕೆ ಕಾರಣವೆಂದು ತಿಳಿದುಬರುತ್ತದೆ.

ಡೆಕ್ಕಾ ಗುಂಡಿನ ಪ್ರತಿಧ್ವನಿ!

ಕಳೆದ ಸಲ ಡೆಕ್ಕಾದಲ್ಲಿ ಗ್ರೇಸ್‍ಬಿಯವರ ಮೇಲೆ ಗುಂಡು ಬಿತ್ತಷ್ಟೆ! ಅದರ ಪ್ರತಿಧ್ವನಿಯಾಗಿ ಈಗ ಅಲ್ಲಿ ತನಿಖೆಯೂ ಶೋಧೆಯೂ ನಡೆಯುತ್ತಿದೆ. ಒಟ್ಟು ೩೫ ತರುಣರನ್ನು ಸೆರೆಹಿಡಿದಿರುತ್ತಾರೆ. ಅಲ್ಲಿಯ ಶ್ರೀ ಜೆ. ಸಿ. ಗುಪ್ತ ಬಾರ್ ಅಟ್ ಲಾ ಇವರ ಮನೆಯೂ ಶೋಧೆಗೊಳಗಾಯಿತು. ಅವರ ಮನೆಯಲ್ಲಿದ್ದ ಇಬ್ಬರು ತರುಣರು ಕೈಸೆರೆಗೊಳಗಾದರು. ಢಕೇಶ್ವರಿ ಹತ್ತಿ ಮಿಲ್ಲಿನ ಸೂರ್ಯಕುಮಾರ ಬಾಸು ಎಂಬವರೂ ಸ್ಟೇಷನಿಗೆ ಹೋಗಿ ಹಿಂದೆ ಬರಬೇಕಾಯಿತು.

೭೦೦ ಬಗೆಯ ವಿಷ'

ಕಳೆದ ಮಹಾಯುದ್ಧದಲ್ಲಿ ೭೦೦ ಬಗೆಯ ವಿಷ ಗಾಳಿಯು ಉಪಯೋಗದಲ್ಲಿತ್ತು. ಅವುಗಳಲ್ಲಿ ೭೦ ಬಗೆಯವುಗಳು ಹೆಚ್ಚಿನ ಕೆಲಸ ಮಾಡಿದುವು. ೧೩ ಬಗೆಯವುಗಳು ಪ್ರತಿ ದಿನ ಉಪಯೋಗಿಸಲ್ಪಟ್ಟುವು. ಈಗ ಹೊಸತಾಗಿ (ಒಕ್ಸೈಡ್ ಒಫ್ ಕಾರ್ಬನ್) ಎಂಬ ವಿಚಿತ್ರ ಮತ್ತು ಅಪಾಯಕಾರಕ ವಿಷಗಾಳಿಯು ಕಂಡುಹಿಡಿಯಲ್ಪಟ್ಟಿದೆ. ಇದು ಕಣ್ಣಿಗೆ ಕಾಣುವುದಿಲ್ಲ. ಯಾವ ರೀತಿಯ ವಾಸನೆಯುಳ್ಳದೂ ಅಲ್ಲ. ಗಾಳಿಯಂತೆಯೇ ಇದೆ. ಎಷ್ಟು ನವೀನ ರಕ್ಷಣಾ ಕವಚವನ್ನು ಹಾಕಿಕೊಂಡರೂ ಇದು ಮೂಗಿನೊಳಗೆ ಹೊಕ್ಕೇ ಬಿಡುತ್ತದೆ. ಒಂದು ನಿಮಿಷಕ್ಕೆ ಒಂದು ಸಾವಿರ ಜನರನ್ನು ಕೆಡಹಬಲ್ಲುದು. ಮುಂದಕ್ಕೆ ಯುದ್ಧವು ನಡೆದರೆ ಇದು ಸರ್ವತೋಮುಖವಾದ ಉಪಯೋಗಕ್ಕೆ ಬೀಳುವುದೆಂದು ತಿಳಿಯಲಾಗಿದೆ. ಮಾನವನ ವಿಜ್ಞಾನಪ್ರವೃತ್ತಿಯು ಮುಂದೆಮುಂದಕ್ಕೆ ಹೋದಂತೆ ಅವನ ಮರಣ ಸಾಧನೆಯು ಸಮೀಪಕ್ಕೆ ಸಾರುತ್ತಿದೆ

ಮೂಗುಗಳ ಆಹುತಿ.

ಮುಂಬಾಯಿಯ ಕಾಲ್ಬಾದೇವಿಯಲ್ಲಿ ವಾಸಿಸುತ್ತಿದ್ದ ಒಬ್ಬಳು ಸ್ತ್ರೀಯು ಒಬ್ಬ ತರುಣನನ್ನು ಪ್ರೇಮಿಸಿದಳು. ತನ್ನ ಗಂಡನಿಗೆ ಈ ಸಂಗತಿಯು ತಿಳಿಯಬಾರದೆಂದು ಅವಳು ಯತ್ನಿಸಿದರೂ ಹೇಗೋ ಆ ಗುಟ್ಟು ಹೊರಬಿತ್ತು. ಗಂಡನು ಅಸಹನೀಯವಾದ ಕೋಪದಿಂದ ಹೆಂಡತಿಯ ಅಷ್ಟು ಚಂದ ಮೂಗನ್ನು ಕೊಯ್ದು ಬಿಸಾಡಿದನು. ಅಂದಿನಿಂದ ಆ ಸ್ತ್ರೀಯು ಗಂಡನ ಮನೆಬಿಟ್ಟು ತರುಣನ ಮನೆಯಲ್ಲಿ ಬಿದ್ದುಕೊಂಡಳು. ಮೂಗಿನ ತುಂಡು ಹೋಯಿತಾದರೂ ನೋವು ಗುಣವಾಯಿತು. ಆದರೆ ಪ್ರೇಮಪಿಪಾಸೆಗೆ ಸೌಂದರ್ಯದ ಬೆಳಕು ತೋರದಿದ್ದರೆ ಆ ಪ್ರೇಮವು ನಿಂತಕಾಲೇ ಇಲ್ಲ. ಆ ಸ್ತ್ರೀಯು ಮೂಗು ಕಳೆದುಕೊಂಡವಳಾಗಿ ಕುರೂಪಿಯಾದುದನ್ನು ನೋಡಿ ಆ ತರುಣನಿಗೆ ಅವಳ ಮೇಲೆ ಅಸಹ್ಯವುಂಟಾಯಿತು. ಅವನ ಮೊದಲಿನ [illegible] ಅಸಹ್ಯವೃತ್ತಿಯ ದೀಪದಿಂದಾಗಿ ಮಾಯವಾಯಿತು. ಪ್ರಿಯನು ತನ್ನನ್ನು ಅಸಡ್ಡೆಮಾಡುತ್ತಿರುವುದನ್ನು ನೋಡಿ ಆ ಸ್ತ್ರೀಯ ಪ್ರೇಮವು ರೋಷದ ವೇಷವನ್ನು ತಾಳಿತು. ಕಳೆದ ವಾರ ಆ ತರುಣನು ಗಾಢನಿದ್ರೆಮಾಡುತ್ತಿದ್ದ ಕೊಠಡಿಗೆ ಹೋಗಿ ಸೊಂಟದಿಂದ ಚೂರಿಯನ್ನು ತಟ್ಟನೆ ತೆಗೆದು ಅವನ ಮೂಗಿನ ತುದಿಯನ್ನು ಕರಕ್ಕನೆ ಕತ್ತರಿಸಿದಳು. ಈ ಮೂಗಿನ ಯುದ್ಧದ ವ್ಯವಹರಣೆಯು ಕೋರ್ಟಿನಲ್ಲಿ ನಡೆಯುತ್ತಲಿದೆ

ಗಂಡನಲ್ಲ ?

ಪಾಟ್ನಾದ ಸೆಶನ್ಸ್ ಜಡ್ಜರ ಬಳಿ ಒಂದು ವ್ಯವಹರಣೆಯು ಬಂದಿದೆ. ಧಾನ್‍ಕೂರ್ ಎಂಬವಳು ಅಡಿಗೆ ಕೋಣೆಯಲ್ಲಿ ನಿತ್ಯದಂತೆ ಮಲಗಿದ್ದಳು. ಯಾರೋ ಸ್ಪರ್ಶಿಸಿದಂತಾಗಲು, ಆ ರಾತ್ರಿ ಇನ್ನೊಂದು ಕೋಣೆಯಲ್ಲಿ ಮಲಗಿದ್ದ ತನ್ನ ಪತಿಯೆಂದು ಭಾವಿಸಿದಳು. ಆದರೆ ಆವಳ ಗಂಡನಿಗೆ ಮೀಸೆ ಇಲ್ಲವೆಂದು ಆವಳಿಗೆ ಗೊತ್ತು. ಅವಳು ಆ ಪುರುಷನ ಮೀಸೆಗೆ ಕೈಯಿಕ್ಕಿದಳು — ಗಲ್ಲಮೀಸೆ! ಯಾರೋ ಪರಪುರುಷನಾಗಿರಬೇಕೆಂದು ಉಸಿರುಗಟ್ಟಿ ಬೊಬ್ಬಿಟ್ಟಳು. ಅಚೆ ಈಚೆ ಕೋಣೆಯಲ್ಲಿ ಮಲಗಿದ್ದವರು ಎದ್ದುಕೊಂಡು ಓಡಿಬಂದರು. ನೋಡುತ್ತಾರೇನನ್ನು? ಸಂಬಂಧಿಕನಾದ ನಥುನಿಸಿಂಗ್ ಎಂಬ ಗಲ್ಲಮೀಸೆಯ ಮಲ್ಲಪೋರನು ಕಳ್ಳನಂತೆ ನಿಂತಿದ್ದನು. ಅವನನ್ನು ಪೋಲೀಸರ ಬೇಡಿಗೆ ಕೊಡಲಾಯಿತು.

ಪೋಲೀಸರ 'ಮಿಸ್ಟೇಕ್'

ಡೆಕ್ಕಾದಲ್ಲಿನ ಕ್ರಾಂತಿಕಾರನಾದ ಸೂರ್ಯಕುಮಾರ ಸೇನ್ ಎಂಬ ತರುಣನನ್ನು ಪೋಲೀಸರು ಹುಡುಕುತ್ತಿದ್ದರು. ಆದರೆ ಅವನು ಸಿಗಲಿಲ್ಲ. ಕೆಲವು ದಿನಗಳ ಮೇಲೆ ಆ ಕ್ರಾಂತಿಕಾರನ ಮನೆಯ ಬಳಿ ಸೂರ್ಯಕುಮಾರ ಬಾಬು ಎಂಬವನಿರುವನೆಂಬ ಸುದ್ದಿಯು ಪೋಲೀಸರಿಗೆ ದೊರೆಯಿತು. ಡೆಕ್ಕಾ ನಗರದ ಸುಪ್ರಸಿದ್ಧ ವ್ಯಕ್ತಿಯೂ ಢಕೇಶ್ವರಿ ಹತ್ತಿ ಮಿಲ್ಸ್ ಲಿಮಿಟೆಡ್ ಇದರ ಮೆನೇಜಿಂಗ್ ಡೈರೆಕ್ಟರರೂ, ಇನ್ನಿತರ ವ್ಯಾಪಾರೀ ಸಂಸ್ಥೆಗಳ ಆಡಳಿತ ಮೆಂಬರರೂ ಆದ ಸೂರ್ಯಕುಮಾರ ಬಾಬು ಎಂಬ ವೃದ್ಧರವರನ್ನು ಬೇಡಿಹಾಕಿ ಹಿಡಿದರು. ಅವರನ್ನು ಪೋಲೀಸ್ ಸ್ಟೇಶನಿಗೆ ಕೊಂಡೊಯ್ಯಲಾಯಿತು. ಪರಿಚಿತಸ್ವರೂಪದ ಬಾಬುಗಳು ಸ್ಟೇಶನಿಗೆ ಬಂದೊಡನೆ ಸುಪರಿಂಟೆಂಡೆಂಟರಿಗೆ ಆಶ್ಚರ್ಯವಾಯಿತು. 'ನೀವೇಕೆ ಬಂದಿರಿ?' ಎಂದು ಪ್ರಶ್ನಿಸಲು, ಬಾಬುಗಳು ನಡೆದ ಸಂಗತಿಯನ್ನು ತಿಳಿಸಿದರು. ಕೊನೆಗೆ, ಪೋಲೀಸರು 'ಮಿಸ್ಟೇಕ್'ನಿಂದ ಸೂರ್ಯಕುಮಾರ ಕ್ರಾಂತಿಕಾರನ ಬದಲಿಗೆ ಬಾಬುಗಳನ್ನು ಸೆರೆಹಿಡಿದುದಕ್ಕಾಗಿ ಸುಪರಿಂಟೆಂಡೆಂಟರು ಕ್ಷಮೆಬೇಡಿ ಅವರನ್ನು ಹಿಂದೆ ಕಳುಹಿಸಿದರು

ಅರುವತ್ತರಲ್ಲೂ ಆಶೆ—ಭಾವನ ಮೋಸ.

ಕಲ್ಕತ್ತೆಯ ಸೈಲೇಂದ್ರನಾಥ ಸರ್ಕಾರ್ ಎಂಬ ಅರುವತ್ತು ವರ್ಷ ಪ್ರಾಯದ ಮಹನೀಯರೊಬ್ಬರ ಧರ್ಮಪತ್ನಿಯು ತನ್ನ ಧರ್ಮಪಂತೆ ತೀರಿಕೊಂಡಳು. ಸೈಲೇಂದ್ರರಿಗೆ ಮಹಾ ವ್ಯಸನವುಂಟಾಯಿತು. ಆದರೂ ಕೆಲವು ದಿನಗಳಲ್ಲಿ ಅವರ ವ್ಯಸನವು ಮಾಯವಾಯಿತು. ಎರಡನೇ ವಿವಾಹದ ಆಶೆಯು ಅವರಲ್ಲಿ ತುಂಬಿಕೊಂಡಿತು. ಅನೇಕ ಕಡೆಗಳಲ್ಲಿ ಹೆಣ್ಣಿಗಾಗಿ ಯತ್ನಿಸಿದರು. ಬಹಳ 'ಸಣ್ಣ' ಪ್ರಾಯದವರಾದುದರಿಂದ ಹೆಣ್ಣು ಸಿಗಲಿಲ್ಲ. ಅಷ್ಟರಲ್ಲಿ ಅಮೂಲ್ಯ ಭೂಷಣ ಬೋಸ್ ಎಂಬವನು ಅವರಿಗೆ ಗಂಟುಬಿದ್ದು ತನ್ನ ಸ್ವಂತ ತಂಗಿ ಶ್ರೀಮತಿ ಸಾವಿತ್ರಿ ಬೋಸಳನ್ನು ಅವರಿಗೆ ಧಾರೆಯೆರೆದು ಕೊಡುವೆನೆಂದು ಭಾಷೆಕೊಟ್ಟನು. ಸೈಲೇಂದ್ರರು [illegible] — ಆನಂದದಿಂದ ಉಬ್ಬಿದರು. ಹುಡುಗಿಗೆ ಬರೇ ೧೫ ವರ್ಷ. ತನಗೆ ತಕ್ಕ ಜೋಡಿ ಎಂದು ನೆನೆದರು. ಅಮೂಲ್ಯ ಭೂಷಣನ ಅಮೂಲ್ಯ ಭಾಷಣಕ್ಕೆ ಮೆಚ್ಚಿ ೧೦೦೦ ರೂಪಾಯಿಗಳನ್ನು ಸದ್ಯದ ವೆಚ್ಚಕ್ಕೆ ಕೊಟ್ಟರು. ಬೇಗನೆ ವಿವಾಹವನ್ನು ನೆರವೇರಿಸುವೆನೆಂದು ಬೆನ್ನು ಹಾಕಿದ ಅಮೂಲ್ಯನು ಹಿಂತಿರುಗಲೇ ಇಲ್ಲ. ಸೈಲೇಂದ್ರನಾಥರು ಸ್ಮರಿಸಿದರು. ಎಷ್ಟು ಸಹಿಸುವರು? ಅಮೂಲ್ಯನನ್ನು ಸಂದರ್ಶಿಸಿ ವಿವಾಹ ಪ್ರಸ್ತಾಪವೇಕೆ ಇಷ್ಟು ಸಮಯದಿಂದಲೂ ಇಲ್ಲ? ಎಂದು ಕೇಳಿದರು. ಉತ್ತರವಾಗಿ ಅಪಹಾಸ್ಯದ "ನನಗೆ ಗೊತ್ತೇ ಇಲ್ಲ" ಎಂಬ ತಿರಸ್ಕಾರವು ದೊರೆಯಿತು. ಪಾಪ! ಮಹನೀಯರು ಈಗ ಭಾವೀ ಭಾವನ ಮೇಲೆ ದಾವೆ ಹೂಡಿದ್ದಾರೆ.– ಕಲ್ಕತ್ತೆಯ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ಈ ನ್ಯಾಯದ ತೀರ್ಪು ನಡೆಯುತ್ತಿದೆ.

ಕಳ್ಳ—ತಾತ್ವಿಕ ಪುರುಷ.

ಮುಂಬಾಯಿಯಲ್ಲಿ ಒಂದು ಹತ್ತಿಯ ಗಿರಣಿಯಲ್ಲಿ ಕೆಲಸಗಾರನಾಗಿದ್ದ ಒಬ್ಬ ತರುಣ ಗುಮಾಸ್ತನು ೧೮೦೦೦ ರೂಪಾಯಿಗಳ ದುರ್ವಿನಿಯೋಗ ನಡೆಸಿ ತಕ್ಸೀರಿಗೊಳಗಾದನು. ಕೋರ್ಟಿನಲ್ಲಿ ಅವನು — "ಖಾವಂದರವರೇ! ಏಳು ವರ್ಷಗಳ ತನಕ ನನಗೆ ಶನಿದೆಸೆ ಹಿಡಿಯುವುದೆಂದು ನನ್ನ ಜಾತಕದಲ್ಲಿದೆ. ಅದರ ಫಲದಿಂದಾಗಿಯೇ ನಾನು ಜುಗಾರಿ ಕುದುರೆ ಜೂಜು, ವ್ಯಭಿಚಾರಕ್ಕೆಂದು ಇಷ್ಟು ಹಣವನ್ನು ಹಾಳುಗೈದೆನಲ್ಲದೆ ಮತ್ತೆ ಬೇರೆಯಲ್ಲ. ನಾನು ಇನ್ನೊಂದು ಜನ್ಮದಲ್ಲಿ ನನ್ನ ಈ ಯಜಮಾನರ ಮಗನಾಗಿ ಜನಿಸಿ ಅವರ ಈ ಋಣವನ್ನು ತೀರಿಸದಿರೆನು" ಎಂದನು. ಎಲ್ಲರೂ ನಕ್ಕರು. ಕಳ್ಳನ ಈ ತತ್ವಗಳನ್ನು ಕೇಳಿ ಮೇಜಿಸ್ಟ್ರೇಟರಿಗೆ ಕರುಣೆ ಹುಟ್ಟಿತೋ ಏನೋ! ಶನಿದೆಸೆಯಿಂದ ೭ ವರ್ಷಗಳ ತನಕ ಬಳಲುವುದು ಬೇಡವೆಂದು ಒಂದು ವರ್ಷದ ಕಠಿಣ ಸಜೆಯನ್ನೂ ೧೦೦೦ ರೂಪಾಯಿಗಳ ಜುಲುಮಾನೆಯನ್ನೂ ವಿಧಿಸಿದರು. ಶನಿಗಿಂತಲೂ ಮೆಜಿಸ್ಟ್ರೇಟರು ಕರುಣಾಳುಗಳಾದುದಕ್ಕೆ ಅಪರಾಧಿತನು ಸಂತೋಷಗೊಳ್ಳದಿರನಂತೆ

ಹೆಂಡತಿಗೂ ದಗೆಯಿತ್ತ ಪ್ರಿಯಗಂಡ.

ಕಲ್ಕತ್ತೆಯಲ್ಲಿ ಮಿಸ್ ಗ್ಲೇಡಿಸ್ ಜೆಂಟ್‍ಲ್ ಎಂಬವಳಿಗೆ ಬಂಗಾಳ ಟೆಲಿಫೋನ್ ಕಂಪೆನಿಯಲ್ಲಿ ೧೪೬ ರೂಪಾಯಿ ತಲಬಿನ ಮೇಲೆ ಒಪರೇಟರ್ ಕೆಲಸ ದೊರೆಯಿತು. ಇದಾದ ಕೆಲವು ದಿನಗಳಲ್ಲಿ ಅವಳಿಗೆ ಒಬ್ಬ ಪ್ರಿಯನ ಲಾಭವು ದೊರೆಯಿತು. ವಿವಾಹವಾಯಿತು. ವಿವಾಹವಾದ ಕೆಲವು ದಿನಗಳಲ್ಲಿ ಮಿಸ್ಟರ್ ಜಂಟ್‍ಲನು ನಿರುದ್ಯೋಗಿಯೆಂದೂ ಮಹಾ ಠಕ್ಕನೆಂದೂ ತಿಳಿದು ಬಂತು. ಇದು ತಿಳಿದು ಬರುವಷ್ಟರೊಳಗೆ ಗ್ಲೇಡಿಸಳ ಅರ್ಧಕ್ಕರ್ಧ ಸಂಪಾದನೆಯು ನಾಶವಾಯಿತು. ಒಂದು ದಿನ ಅವಳ ಗಂಡನು ತನಗೆ ಪೂನದಲ್ಲಿ ಒಂದು ಉದ್ಯೋಗ ಲಭಿಸಿದೆಯೆಂದು ಅವಳನ್ನು ಕರೆದೊಯ್ದನು. ಅವಳು ಕೆಲಸಕ್ಕೆ ರಾಜಿನಾಮೆ ಕೊಟ್ಟು ಹೊರಟಳು. ದಾರಿಯಲ್ಲಿ ಅವನು ಅವಳಲ್ಲಿದ್ದ ಹಣವನ್ನೆಲ್ಲಾ ಕಸಗೊಂಡು ಎತ್ತಲೋ ಮಾಯವಾದನು. ಗ್ಲೇಡಿಸಳು ಈಗ ಸರ್ಚ್ ವಾರಂಟು ಒಂದನ್ನು ಗಂಡನಿಗೆ ಬಿಟ್ಟಿರುವಳು!

'ಮಾವನ' ಅಪವಾದಕ್ಕಾಗಿ ರಾಣೀತನವನ್ನೇ ಬಿಟ್ಟಳು

ಸಯಾಂ ದೇಶದ ರಾಜಕುಮಾರನಾದ ನೆಡ್ ಸುಖಾಸ್‍ವಸ್ತಿ ಎಂಬವನು ಮಿಸ್ ಚಿಕ್‍ಬೇಕರ್ ಎಂಬ ಸಿನೆಮಾನಟಿಯನ್ನು ವಿವಾಹವಾಗಲಿಚ್ಛಿಸಿ, ಅದಕ್ಕವಳು ಒಪ್ಪುವಳಾದರೆ ತನ್ನ ರಾಜ್ಯವನ್ನೇ ಬಿಟ್ಟುಬಿಡುವೆನೆಂದಿದ್ದಾನೆ. ಇದನ್ನು ತಿಳಿದ ಬೇಕರಳು ಮಾತ್ರ, "ನಾನು ಅವನನ್ನು ವಿವಾಹಮಾಡಿದರೆ ಅವನ ಹಿರಿಯರಿಂದ ಸಯಾಂ ದೇಶದ ಪ್ರಜಾಧಿಪೋಷಕರ ಅಪವಾದಕ್ಕೆ ಬಲಿಯಾಗಬೇಕಾಗುತ್ತದಲ್ಲ! ಅದಕ್ಕಾಗಿ ನಾನು ಈ ವಿವಾಹಕ್ಕೆ ಒಪ್ಪಲಾರೆ" ಎಂದಿರುವಳು. ನರ್ತನದಿಂದ ಹಣ ಸಂಪಾದಿಸುವ ಸ್ವಾತಂತ್ರ್ಯ ವೃತ್ತಿಯು ರಾಣಿತನದ ಸೌಭಾಗ್ಯಕ್ಕಿಂತಲೂ ಮೇಲಾಗಿರುವುದಂತೆ!

ಗಾಂಧಿಜೀಯವರ ಅಪ್ಪಣೆ.

ಢಿಲ್ಲಿಯ ಡಾ। ಎಚ್. ಎಲ್. ಶರ್ಮರೆಂಬವರು ತನ್ನ ಪ್ರೌಢ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ತೆರಳಲು ಆ ವಿಷಯಕವಾಗಿ ಮಹಾತ್ಮಾ ಗಾಂಧಿಯವರ ಅಭಿಮತವೇನಿರಬಹುದೆಂದು ಎರವಾಡಕ್ಕೆ ಕಾಗದ ಬರೆದರು. ಗಾಂಧಿಜೀಯವರು "ಊರಲ್ಲೇ ಕಲಿಯಬಹುದು, ಇದಕ್ಕಾಗಿ ನೀವು ವಿದೇಶಕ್ಕೆ ಹೋಗುವುದರಲ್ಲಿ ನನ್ನ ಸಹಾನುಭೂತಿಯಿಲ್ಲ" ಎಂದರು. ಶರ್ಮರು ತನ್ನ ಪ್ರಯಾಣವನ್ನು ನಿಲ್ಲಿಸಿದರು

ಮುರಲಿ! ಮುರಲಿ!
ಚಿಕ್ಕ ಕವಿತಾಗುಚ್ಛ!
ಬೆಲೆ ೩ ಆಣೆ ಬೆಲೆ ೨ ಆಣೆ
ಅಂದವಾದ ಮುದ್ರಣ!!!
(ಅಂಚೆವೆಚ್ಚ ಅರ್ಧಾಣೆ ಪ್ರತ್ಯೇಕ)
ಕರ್ತೃ:— ಕಾಪು ಮಂಜುನಾಥ ಶೆಣೈ.
ಪೋಷ್ಟ್ಮಾಸ್ತರು ಬಳಿ, ಕಾಪು, ದ. ಕ.

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಮಲಯಾಳದ ವೈದ್ಯ ಜಗತ್ತಿನಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ಎಂಬ ಬಿರುದು ಪಡೆದು ಪ್ರಸಿದ್ಧರಾದ 'ಕೃಷ್ಣ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ್' ಅವರ ಕೈಕೆಳಗೆ ವಿದ್ಯಾಭ್ಯಾಸ ಮಾಡಿ ಅನುಭವಶಾಲಿಯಾದ [illegible] ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಷ್ಟಾಂಗವೈದ್ಯರ ರೀತಿ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, [illegible], ಅರಿಷ್ಟಾಸವಗಳು ಮುಂತಾದ ಸಿದ್ಧೌಷಧಗಳು ನಮ್ಮಲ್ಲಿ ಯೋಗ್ಯವಾಗಿಯೂ [illegible] ತಯಾರ ಇರುತ್ತವೆ. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ರೋಗದ ಕಾಲ, ಪ್ರಾಯ, [illegible] ಆಹಾರದ ಕ್ರಮ, ವೃತ್ತಿ [illegible] ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಹಿಡಿದು [illegible] ಎಂಬ ಇವೇ ಮೊದಲಾದ ಸಂಗತಿಗಳಲ್ಲಿ ಎಷ್ಟು ಸ್ಪಷ್ಟವಾಗಿ ಬರೆದರೆ ಅಂಥಾ ವಿವರಗಳು ಸಹಿತ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವದರಿಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಬೇಡ ಕೆಳಗಿನ ವಿಳಾಸಕ್ಕೆ ತಪ್ಪದೆ [illegible] ಕೊಡಲಾಗುವದಲ್ಲದೆ ಅನಾನುಕೂಲವಾದ ರೋಗಿಗಳಿಗೆ ಅವರ ಅಗತ್ಯದ ಮದ್ದಿನ ಮಾಹಿತಿಗಳನ್ನು ಕೊಡುವದರಿಯೂ ರೋಗಿಗಳಿಗೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವದರಿಯೂ ಸದಾ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಬೇಕಾದ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಖದ್ದರ್ ರೇಶ್ಮೆ ಮಡಿಗಳಿಗೆ ಗಮನ ಕೊಡಿರಿ.

S U N & CO.

Choukhumba, Benares City

ಮೂರು ಇನಾಮುಗಳು.



ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1 ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು ಪಸಂತು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ, ಕದಪಾವ್ಡು, ಪೇಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಉಲ್ಲನ್ ಚೌಕ, ಧಾವಳಿ, ಸೌಮರ್ಣಿ, ತರತರದ ರುದ್ರಾಕ್ಷಿಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಮ. ಖದ್ದರ್ ಮಡಿ–6 ಮೊಳ, 2 ಮೊಳ ಅಗಲ ರೂ 2ರಿಂದ ರೂ. 3. ಮೊಳ 8ರದ್ದು 2–12–0ರಿಂದ ರೂ. 4 10 ಮೊಳ, 2¼ ಅಗಲ ರೂ. 4ರಿಂದ ರೂ. 5. ಮೊಳ 12 + 2¼ ರೂ. 5ರಿಂದ 6–8–0. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ, ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಕಂಬಾ, ಬನಾರಸ್ (ಕಾಶಿ)

[illegible] ಎಲ್ಲವನ್ನು [illegible] ಬಾಟ್ಲಿವಾಲ
ಅತ್ಯುತ್ತಮವನ್ನೇ ಪಡೆಯಿರಿ.
ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.
ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ.
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು,
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ. ಆ. ದಾದರ್ ಮುಂಬಾಯಿ 14.

Dr. H. L. Batliwalla, Sons & Co., Ltd.
Kadell Road, P. O, Dadar, Bombay, 14.

ತಂತಿ ವಿಳಾಸ – "CAVASPUR" Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಕೇಸರಿಯವರ ಮೂರು ರತ್ನಗಳು.

ಲೋಧ್ರ—ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಪಥ್ಯಯು. ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ.

ಅರ್ಕ:—ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ—ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು.

ಕೇಸರಿ ಕುಟೀರ.
ಎಗ್ಮೋರ್, ಮದರಾಸು,
[illegible]

The Zandu Pharmaceutical Works, Ltd., Bombay, 14.
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! **ಅಮೋಘ ಟಾನಿಕ್ಕು!!**

ಹಸಿ ಆಮ್ಲಕಿ ಹಣ್ಣು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ, ನಾನಾ ವಿಧವಾದ [illegible], ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ದೃಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ.ಜಾಡಿ ರೂ. 10/– ಕ್ರಯ 1ಪಾನು ಸೀಸೆ ರೂ. 2/8. ½ ಪಾ. ರೂ. 1/5 ¼ ಪಾ. ಆ. 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:—ದಾಮೋದರ್ ಅಂಡ್ ಕಂಪೆನಿ, 78 ಕೃಷ್ಣಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು:—ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು:—ಎಸ್. ಎಲ್. ಧಾರಕಪ್ಪಾ ಎಂಡ್ ಬ್ರದರ್ಸ್.
ಸ್ಟಾಕಿಸ್ಟ್ ಏಜಂಟರು—ಮೈಸೂರು ಏಜಂಟರು:—ಟಿ. ಸಿ. ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು:—ಬಿ. ಪೋಪಟ್‌ಲಾಲ್ ಕಂಪೆನಿ, ಚಿಕ್ಕಪೇಟೆ—
ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ರಾಜಾರಾಮ್ ಮೋಹನ್ ರೋಯ್ ಕೇಶವ್ ಚಂದ್ರಸೇನ್ ಮತ್ತು ಸ್ವಾಮಿ ದಯಾನಂದ ಸರಸ್ವತಿ.

ಲೇಖಕರು:—ಗಂಗಾಪ್ರಸಾದ ಉಪಾಧ್ಯಾಯ, ಎಮ್. ಎ. ಅಲ್ಲಾಹಾಬಾದ್.
ಅನುವಾದಕರು:—ಪಿ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಆರ್ಯಸಮಾಜ,
ಮಂಗಳೂರು

ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು.

ಮೂರನೆಯದಾಗಿ ಕೆಳತರಗತಿಯವನಿಗೆ ಹಣಕಾಸು ಕೊಟ್ಟು ಇಲ್ಲವೆ ಯಾವುದಾದರೊಂದು ಕೆಲಸಮಾಡಿಸಿ ಕೊಟ್ಟು, ಇನ್ನು ಕೆಲವರಿಗೆ ರೂಪವತಿಯರಾದ ಕನ್ಯೆಯರನ್ನು ಕೊಟ್ಟು ಮತಾಂತರಗೊಳಿಸುತ್ತಾರೆ. ಒಂದು ವೇಳೆ ಈ ಕ್ರೈಸ್ತ ಪಾದರಿಗಳು ಯಾ ಇಂಗ್ಲಿಷರು ಹಿಂದೂಸ್ಥಾನಕ್ಕೆ ಬರುವ ಮೊದಲು ಅವರ ದೇಶಕ್ಕೆ ಸಮೀಪವರ್ತಿಯಾದ ಟರ್ಕಿ, ಇರಾಣ ಮುಂತಾದ ದೇಶಗಳಿಗೆ ಹೋಗಿ ತಮ್ಮಲ್ಲಿದ್ದ ಶೂರತೆಯನ್ನೂ ಧರ್ಮಾಭಿಮಾನವನ್ನೂ ತೋರಿಸಿ ಕ್ರೈಸ್ತಧರ್ಮದ ಪ್ರಚಾರವನ್ನು ಮಾಡುತ್ತಿದ್ದರು. ಇವರ ಪರಾಕ್ರಮವೂ ಕಾರ್ಯಕುಶಲತೆಯೂ ಸರ್ವ ಜನಾದರಣೀಯವೆನಿಸಲ್ಪಡುತ್ತಿತ್ತು ಆದರೆ—

In Bengal, where the English are the sole rulers, and where the mere name of Englishman is sufficient to frighten people an encroachment upon the rights of her poor timid and humble inhabitants and upon their religion, cannot be viewed in the eyes of God or the public as a justifiable act; (P. 160)

"ಬಂಗಾಲದಲ್ಲಿ ಯಾವ ಕಡೆಯಲ್ಲಿ ಬ್ರಿಟಿಷರ ಸರ್ವಾಧಿಪತ್ಯವಿದೆಯೋ, ಇಂಗ್ಲಿಷರ ಹೆಸರನ್ನು ಕೇಳಿದ ಮಾತ್ರಕ್ಕೆ ಎಲ್ಲಿಯ ಜನರು ಹೆದರುತ್ತಿದ್ದರೋ, ಎಲ್ಲಿಯವರು ದರಿದ್ರರೂ, ಪ್ರತಿಯೊಂದು ವಿಷಯಗಳಲ್ಲಿಯೂ ಭಯಪೀಡಿತರೂ ಆಗಿರುವ ಜನರು ಎಲ್ಲಿ ಇರುತ್ತಿದ್ದರೋ ಅಂಥವರ ಅಧಿಕಾರ ಧರ್ಮ ಇತ್ಯಾದಿಗಳ ಮೇಲೆ ಆಕ್ರಮಣ ಮಾಡುವದೆಂದರೆ ದೇವರ ಮತ್ತು ಜನಾಂಗದ ಮುಂದೆ ನ್ಯಾಯಯುಕ್ತವಾದ ಕಾರ್ಯವೆನಿಸಲ್ಪಡಲಾರದು" ಹಿಂದೂ ಜಾತಿಯ ಭಯಂಕರ ಸಂಸ್ಥಿತಿಯ ಕುರಿತು ರಾಮಮೋಹನರ ಹೃದಯದಲ್ಲಿ ಯಾವ ತರದ ವೇದನೆಯುತ್ತೆಂಬುದಕ್ಕೆ ಇಲ್ಲಿ ಒಂದು ಪ್ರಮಾಣವನ್ನು ಉದ್ಧರಿಸುತ್ತೇವೆ.

"We have been subjected to such insults for about nine centuries, and the cause of such degradation has been our excess in civilization and abstinence from the slaughter even of animals as well as our division into castes which has been the source of want of unity among" (P 160)

"ಹೆಚ್ಚು ಕಡಿಮೆ ಒಂಬೈನೂರು ವರ್ಷಗಳಿಂದ ನಾವು ನಮ್ಮ ಸಭ್ಯತೆಯ ಮೇರೆಯನ್ನು ಕೆಡಿಸಿ ಅನೇಕ ಜಾತಿಗಳಾಗಿ ವಿಂಗಡಿಸಲ್ಪಟ್ಟೆವು ಮೃಗಗಳನ್ನು ಕೂಡಾ ಕೊಲ್ಲದಂಥಾ ಅಹಿಂಸಾತ್ಮಕರೆಂದು ಹೇಳತೊಡಗಿದೆವು ಬೇರಾದುಕ್ಕಿಂತಲೂ ವಿಶೇಷ ರೀತಿಯ ಸಭ್ಯತೆಗಳನ್ನು ಆಚರಿಸತೊಡಗಿದೆವು ಆದುದರಿಂದಲೇ ನಾವು ಇಷ್ಟು ವರ್ಷಗಳಿಂದ ಅವಮಾನಿಸಲ್ಪಡುತ್ತಿದ್ದೇವೆ

"It seems almost natural that when one nation succeeds in conquering another, the former, thought their religion may be quite ridiculous laugh at and despise the religion and manners of those that are fallen into their power For example, Mussalman's, upon their conquest of India, proved highly inimical to the religious exercises of Hindus. When the generals of Chungazkhan, who denied God and were like wild beasts in their manners, invaded the western part of Hindustan, they universally mocked at the profession of god and of futurity expressed to them by the natives of India." (P. 160.)

"ಒಂದು ಜಾತಿಯು ಇನ್ನೊಂದು ಜಾತಿಯನ್ನು ಜಯಿಸಿತೆಂದರೆ ಅದು ಸೋತ ಜಾತಿಯಲ್ಲಿ ತನ್ನ ಹಾಸ್ಯಾಸ್ಪದವಾದ ಸಭ್ಯತೆ, ಆಚಾರ ವಿಚಾರವನ್ನು ಪ್ರಚುರಗೊಳಿಸುವುದು. ಆಗ ಅದು ತನ್ನ ಸಭ್ಯತೆಯೇ ಶ್ರೇಷ್ಠವಾದುದೆಂದೂ ಇತರ ಸಭ್ಯತೆಯು ನೀಚತರದ್ದೆಂದೂ ಹೇಳುತ್ತದೆ. ದೃಷ್ಟಾಂತವಾಗಿ ಮುಸಲ್ಮಾನರು ಭಾರತವರ್ಷವನ್ನು ಜಯಿಸಿದ ಕೂಡಲೇ ಅವರು ಹಿಂದೂಗಳ ಧರ್ಮಕ್ಕೆ ಬದ್ಧ ವಿರೋಧಿಗಳಾದರು. ದೇವರಿದ್ದಾನೆಂಬುದನ್ನು ನಂಬದಂಥಾ "ಚಂಗೇಜಖಾನ"ನ ಅನುಯಾಯಿಗಳ ಆಚಾರ ವಿಚಾರವು ಕೇವಲ ಕಾಡುನಿವಾಸಿಗಳಂತಿತ್ತು ಇಂಥವರೆದುರು ಹಿಂದೂಗಳು ದೇವರ ಮತ್ತು ಪುನರ್ಜನ್ಮದ ಕುರಿತು ಹೇಳುತ್ತಿರಲು ಇವರೆಲ್ಲರೂ ಹಿಂದೂಗಳಿಗೆ ಪರಿಹಾಸ್ಯಮಾಡಿದರು

ಆ ಮೇಲೆ ರಾಮಮೋಹನರು ಇಂಗ್ಲಿಷರಿಗೆ ತನ್ನ ಅಭಿಪ್ರಾಯವನ್ನು ಕೊಡುವಾಗ "ನೀವು ಕ್ರೈಸ್ತ ಧರ್ಮವನ್ನು ಪ್ರಚಾರಮಾಡಲಿಕ್ಕೆ ಪ್ರಯತ್ನಮಾಡಬೇಡಿರಿ."

'For truth and true religion do not always belong to wealth and power, high names or lofty palaces"

"ಯಾಕಂದರೆ ಸತ್ಯಧರ್ಮವು, ಸದಾಸಮಯ ಧನ ಸಂಪತ್ತು, ಶಕ್ತಿ ದೊಡ್ಡ ಹೆಸರು, ಘನವಾದ ಮಂದಿರ ಯಾ ಅರಮನೆ ಇತ್ಯಾದಿಗಳಲ್ಲಿಯೇ ಎಂದಿಗೂ ಸಂಬಂಧವಿರುವುದಿಲ್ಲ" ಅಂದರೆ ಸತ್ಯಧರ್ಮಕ್ಕೆ ಯಾವ ತರದ ಬೆಡಗು ವೈಯ್ಯಾರಗಳೂ ಯಾವ ವಿಧದ ಪ್ರಲೋಭನಗಳೂ ಬೇಕಾಗಿಲ್ಲ ಅದು ಸದಾ ಸಮಯ ತನ್ನ ಸತ್ಯತೆಯನ್ನು ಅಚಲವಾಗಿಟ್ಟುಕೊಳ್ಳುವುದು

ವೇದ ಮತ್ತು ಶಾಸ್ತ್ರಗಳ ವಿರುದ್ಧವಾಗಿ ಕ್ರೈಸ್ತರು ಪ್ರಕಟಿಸಿದ ಉತ್ತರವನ್ನು ರಾಮಮೋಹನ ರೋಯರು "ಬ್ರಾಹ್ಮನೀಕಲ್ ಮೆಗಜಿನ್" ಪತ್ರಿಕೆಯ ಮೊದಲಿನ ಅಂಗಗಳಲ್ಲಿ ಕೊಟ್ಟರು. ಪುರಾಣ ಮತ್ತು ತಂತ್ರಗಳಲ್ಲಿರುವ ವಿಷಯಗಳು ಕ್ರೈಸ್ತ ಧರ್ಮಕ್ಕಿಂತ ಬಹಳ ಯುಕ್ತಿಯುಕ್ತವಾಗಿದೆಯೆಂಬುದನ್ನು ಎರಡನೇ ಅಂಕದಲ್ಲಿ ಪ್ರಕಟಿಸಿದರು. ಇದಕ್ಕೆ ಕ್ರೈಸ್ತರು (Friend of India) ಎಂಬ ಪುಸ್ತಕದಲ್ಲಿ ಕೊಟ್ಟರು ಇದರ ಪ್ರತ್ಯುತ್ತರವನ್ನು ರೋಯರು ಮೇಲೆ ಹೆಸರು ಕಾಣಿಸಿದ ಪತ್ರಿಕೆಯ ಮೂರನೇ ಅಂಕದಲ್ಲಿ ಪ್ರಕಟಿಸಿದರು, ಇದರ ಪರಿಣಾಮವಾಗಿ ಕ್ರೈಸ್ತ ಮಿಶನರಿಗಳು ತಮ್ಮ ಬಾಯಿಗೆ ಬೀಗ ಹಾಕಿ ತಣ್ಣಗೆ ಕುಳಿತರು. ಎರಡು ವರ್ಷದ ನಂತರ ಈ ಎಲ್ಲಾ ಆಕ್ಷೇಪಗಳನ್ನೂ ಅವುಗಳಿಗೆ ಸರಿಯಾದ ಉತ್ತರಗಳನ್ನೂ ಪುಸ್ತಕ ರೂಪದಲ್ಲಿ ಮುದ್ರಿಸಿ ಪ್ರಕಟಿಸಿದರು. ಇದರಿಂದ ಧರ್ಮ ಜಿಜ್ಞಾಸುಗಳಿಗೆ ಧಾರ್ಮಿಕ ವಿಷಯದ ಸಂಶೋಧನೆಗೆ ಅನುಕೂಲವಾಯಿತು. ಆ ಪುಸ್ತಕದ ಭೂಮಿಕೆಯಲ್ಲಿ ರಾಮ ಮೋಹನರು ಏನು ಬರೆದಿದ್ದಾರೆಂದರೆ

"If while he deserves that God is not man, He again professes to believe in a God man or man-God, under whatever sophistry and can such a person have a just claim to enjoy respect in the intellectual world? and does he not expose himself to censure should he, at the same time describe unreasonableness to others (P. 164.)

ಈ ವಾಕ್ಯದ ತಾತ್ಪರ್ಯವೇನಂದರೆ, ಕ್ರೈಸ್ತರು ಹಿಂದುಗಳ ಅವತಾರವನ್ನು ಖಂಡಿಸುತ್ತಾರೆ, ಪರಂತು ಯೇಸುಕ್ರಿಸ್ತನನ್ನು ಮನುಷ್ಯ ರೂಪದಲ್ಲಿ ಬಂದ ದೇವರೆಂದೇ ನಂಬುತ್ತಾರೆ ಈ ಎರಡಭಿಪ್ರಾಯಗಳೂ ಯುಕ್ತಿ ಸಂಗತವಾದವುಗಳೆಂದು ಹೇಗೆ ನಂಬುವಧು?

ಕ್ರೈಸ್ತರಿಗೂ ರಾಮ ಮೋಹನರಿಗೂ ನಡೆದ ಎಲ್ಲಾ ಪ್ರಶ್ನೋತ್ತರಗಳನ್ನು ಇಲ್ಲಿ ವಿವರಿಸುವುದೆಂದರೆ ವೃಥಾಲೇಖವನ್ನು ಉದ್ದಗೊಳಿಸುದಂತಾಗುವುದು ಆದುದರಿಂದ ವಿಷಯದ ತಿಳುವಳಿಕೆಯನ್ನು ಮಾಡಿಕೊಳ್ಳುವಷ್ಟು ಕೆಲವನ್ನು ಮಾತ್ರ ಇಲ್ಲಿ ವಿವರಿಸುವೆವು

ಕ್ರೈಸ್ತರು ವೇದಾಂತದಲ್ಲಿ, ದೇವರು ನಿತ್ಯನೂ ಕಾಲಾತೀತನೂ, ನಿರಾಕಾರನೂ, ಅಗೋಚರನೂ, ಇಚ್ಛಾರಹಿತನೂ, ಚೇತನನೂ, ನಿರ್ವಿಕಾರನೂ ಮತ್ತು ಪರಿಪೂರ್ಣನೂ ಆಗಿರುವನೆಂದೂ, ಪರಮಾತ್ಮ ಜೀವಾತ್ಮರಲ್ಲಿ ಭೇದವಿಲ್ಲವೆಂದೂ, ತೋರುವ ಜಗತ್ತು ಮಾಯೆಯಿಂದ ಉಂಟಾಗಿರುವುದೆಂದೂ, ಅಂತಃಕರಣ ಮತ್ತು ಜಗತ್ತು ಮಿಥ್ಯೆ, ಬ್ರಹ್ಮ ಸ್ವರೂಪದ ಯಥಾರ್ಥ ಜ್ಞಾನವಿಲ್ಲದ್ದರಿಂದಲೇ ಈ ಎರಡು ವಸ್ತುಗಳೂ ಸತ್ಯವೆಂದು ತೋರಿಸುವ ಈ ಸಿದ್ಧಾಂತದಿಂದ ಬ್ರಹ್ಮನಿಗೆ ದೋಷವು ತಗಲುತ್ತದೆ! ಅಥವಾ ಬ್ರಹ್ಮ ಮತ್ತು ಮಾಯೆ ಇವೆರಡಕ್ಕೂ ಉತ್ಕೃಷ್ಟತೆ (ಸ್ವತಂತ್ರತೆ) ಮತ್ತು ನಿತ್ಯತೆ ಕಂಡುಬರುತ್ತದೆ

ರೋಯ್:— ತಾವು, ಕೇವಲ, "ಬ್ರಹ್ಮನಿಗೆ ದೋಷವು ತಗಲುತ್ತದೆ" ಎಂದು ಹೇಳಿದ್ದು ಹೊರತು, ಯಾವ ದೋಷವು ಹೇಗೆ ತಗಲುತ್ತದೆ ಎಂಬುದನ್ನು ವಿವರಿಸಲಿಲ್ಲ. ಈ ರೀತಿ ವಿವರಿಸದಿದ್ದಲ್ಲಿ ಉತ್ತರ ಕೊಡುವವರು ಹೇಗೆ ಕೊಡುವರು? ಎರಡನೆಯ ಆಕ್ಷೇಪದ ವಿಷಯವೇನಂದರೆ, ಕ್ರೈಸ್ತರು ಮತ್ತು ಮುಸಲ್ಮಾನರು ಯಾವ ಪ್ರಕಾರ ಪರಮಾತ್ಮನೂ ಆತನ ಗುಣವೂ ನಿತ್ಯವೆಂದು ನಂಬುತ್ತಾರೋ, ಹಾಗೆಯೇ ವೇದಾಂತವು ಸಹ ನಂಬುತ್ತದೆ ನಿತ್ಯ ಬ್ರಹ್ಮನ ಉತ್ಪಾದಕ ಶಕ್ತಿಯ ಹೆಸರೇ ಮಾಯೆಯೆಂದಿದೆ ಆದುದರಿಂದ ವೇದಾಂತವು ಬ್ರಹ್ಮನನ್ನು ನಿತ್ಯವೆಂದು ಹೇಳಿದೆ ಬ್ರಹ್ಮನ ಶಕ್ತಿಯೇ ಮಾಯೆಯೆಂದ ಮೇಲೆ ಆ ಶಕ್ತಿಯ ಸ್ವತಂತ್ರತೆಯು ಹೇಗೆ ಕಂಡುಬರುತ್ತದೆ? ಹ್ಯಾಗೆ ಬೆಂಕಿಯನ್ನು ಬಿಟ್ಟರೆ ಬಿಸಿ ಎಂಬುದು ಸ್ವತಂತ್ರವಲ್ಲವೋ ಹಾಗೆಯೇ ಮಾಯೆಯೂ ಸ್ವತಂತ್ರವಲ್ಲ ವೇದಾಂತದಲ್ಲಿ ಮತ್ತು ಇತರ ಶಾಸ್ತ್ರಗಳಲ್ಲಿಯೂ ಗುಣಕ್ಕಿಂತ ವಸ್ತುವು ಶ್ರೇಷ್ಠವೆಂದು ಹೇಳಲ್ಪಟ್ಟಿದೆ.

* * *

ಪತ್ರವ್ಯವಹಾರ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.
ಸಂ. ಸ್ವ.

ಸ್ವದೇಶಾಭಿಮಾನಿಯ "ವಾಚಕ"ರಿಗೆ ಕೆಲವು ಪ್ರಶ್ನೆಗಳು:-

(೧) ಉಪನ್ಯಾಸಕರಾಗಬೇಕಾದರೆ ಯಾವ ಜಾತಿಯವರಾಗಬೇಕು? ಯಾವ ಮತದವರಾಗಬೇಕು? ಎಂತಹ ನಡತೆಯವರಿರಬೇಕು?

(೨) ಹಿಂದೆ ಗಣನೀಯ ಉಪನ್ಯಾಸಕರಾಗಿರದವರು ಮುಂದೆ ಗಣನೀಯ ಉಪನ್ಯಾಸಕರಾಗಲು ಸಾಧ್ಯವಿಲ್ಲವೇ? ಶರ್ಮರು ಗಣನೀಯ ಉಪನ್ಯಾಸಕರೆಂದು ನಿಮಗೆ ಯಾರು ಎಲ್ಲಿ ಹೇಳಿದರು? ಅಥವಾ ಹಾಗೆಂದು ಯಾವಾಗ ಯಾವ ಪತ್ರಿಕೆಯಲ್ಲಿ ಪ್ರಕಟವಾಗಿರುವುದು?

(೩) "ಮಿಶನರಿ"ಯ ಭಾಷಣ ಸ್ವರೂಪವೇನು? ನೀವು ಉಡುಪಿಯಲ್ಲಿ ಶರ್ಮರ ಎಷ್ಟು ಭಾಷಣಗಳನ್ನು ಕೇಳಿರುವಿರಿ? ಅದು ಯಾವಾಗ? ಎಲ್ಲಿ? ಮತ್ತು ಯಾವ ಸಮಯಕ್ಕೆ? ಅಂದು ಶರ್ಮರು ಮಾತನಾಡಿದ ವಿಷಯ ಅದರಲ್ಲಿ ಹೊರ ಹೊಮ್ಮಿದ ಅಸಂಬದ್ಧಗಳು ಯಾವುವು?

(೪) ಮದ್ರಾಸು ಸಂಸ್ಥಾನದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಮಠಗಳಿವೆ? ಅಲ್ಲಿ ಯಾವ ಯಾವ ಸುಧಾರಣೆಗಳು ಆಗಬೇಕಾಗಿವೆ?

(೫) "ವ್ಯಕ್ತಿಪರವಾದ ಆಕ್ಷೇಪ"ಗಳನ್ನು ಪ್ರತ್ಯಕ್ಷವಾಗಿ ಮಾಡಲು ಹೇಸದ ಶರ್ಮರಿಗೆ ಅಂತಹುದನ್ನು ನೀವು ಅವರಿಗೆ ಮಾಡುವುದರ ಒಳಗುಟ್ಟೇನು?

(೬) ಉಡುಪಿಯ ಮಠಗಳಲ್ಲಿ ದೋಷಗಳಿಲ್ಲವೆಂದು ನಿಮ್ಮ ಅಭಿಮತವಿದೆಯೋ?

(೭) "ಲೋಪ ದೋಷ"ಗಳನ್ನು ಕಂಡುಹಿಡಿಯಲು "ಜ್ಞಾನದೃಷ್ಟಿ"ಯೇ ಬೇಕೆ? ಇಲ್ಲದಿದ್ದರೆ "ಕಾಕಪೋಕ"ರ ಮಾತನ್ನೇ ಕೇಳಬೇಕ? ಶರ್ಮರು "ಲೋಪ ದೋಷ" ಸಾರಲು ಇವೆರಡರಲ್ಲಿ ನೀವು ಯಾವುದನ್ನು ಅನುಸರಿಸಿರುವಿರಿ?

(೮) ಪರಿಕರು ಬಡವರ ಹಣ ಸುಲಿಯುವಷ್ಟು ಭೀರು ಸ್ವಭಾವದವರೇ? ಈ ವರೆಗೆ ಹಾಗೆ ನಡೆದಿದೆಯೋ? ಅಥವಾ ಹಾಗೆ ಬೆದರಿಸಿ ಅವರನ್ನು ಯಾರ್ಯಾರು ಎಷ್ಟು ಸಲ "ಸುಲಿದಿರುವರು"? ಮಠದವರನ್ನು ಮೆಚ್ಚಿಸಲು ಶರ್ಮರನ್ನು ಬೆದರಿಸಿಯೋ ದಂಡಿಸಿಯೋ ಎರಡೂ ಕಡೆಯಿಂದ ಸುಲಿಯುವ ಉದ್ದೇಶವು ನಿಮ್ಮಲ್ಲಿ ಇಲ್ಲವೆಂಬುವುದಕ್ಕೆ ಸಿದ್ಧಾಂತಗಳಿವೆಯೋ?

ನಿಮ್ಮ ಬಿರುದಿನ
"ಕಾಕ ಪೋಕ"ರಲ್ಲೊಬ್ಬ.

[illegible]

ಬೇಕಾಗಿದೆ.

[illegible] ಯೋಜಿಸಲ್ಪಡುವುವು. ಧಾರವಾಡ, ವಿಜಾಪುರ, ಬೆಳಗಾಂವಿ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ [illegible] ಬೇಕು. ಹೆಚ್ಚಿನ ಮಾಹಿತಿಗಾಗಿ ಮುಖ್ಯ ಶಾಖೆ [illegible], ಧಾರವಾಡ, [illegible] ಗಾರ್ಡನ್ ಬ್ಯಾಂಕ್ [illegible] ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ [illegible] ಇವರಿಗೆ ಬರೆಯುವುದು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg (3) Kadur Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager
The South Indian General Assurance Co Ltd
64 3rd Cross Road S[illegible]ampur Extn
Malleswaram Post BANGALORE
OR
The Mnagingn Agents
The S I. G A Co Ltd
55 Poonamllee High Road Kilpauk MADRAS

Bhandary Damodhar Shanbhag & Co.
General Merchants, COONDAPOOR S K

ನಮ್ಮಲ್ಲಿ ಶಾಲಾ ಹುಡುಗರಿಗೆ ಬೇಕಾಗುವ [illegible] ಪುಸ್ತಕಗಳೂ, [illegible] ಪುಸ್ತಕಗಳೂ, ಇಂಡಿಯನ್ ಇಂಕ್ ಸ್ಟಿಕ್ ಮತ್ತು ವಾಟರ್ ಕಲರ್ ಬೋರ್ಡ್‌ಗಳೂ [illegible] ಡೈರಿ, ಪಂಚಾಂಗ, ಎಲ್ಲಾ ತರದ ಕೋರ್ಟ್ ಫೋರ್ಮು [illegible] ಫೋರ್ಮುಗಳೂ, ಗೇಣಿ ಪಾವತಿ ರಶೀದಿ, ಚಿಟ್ಟಿ ಫಂಡು ರಶೀದಿ [illegible] ಪುಸ್ತಕಗಳೂ ಉಚಿತವಾದ ಕ್ರಯಕ್ಕೆ ಮಾರಲ್ಪಡುವವು ಸೆಂಟ್ಸ್, ಹೇರ್ ಒಯಿಲ್ಸ್, ರೋಜ ವಾಟರ್ಸ್, [illegible] ಎಣ್ಣೆ, ಉತ್ತಮ ತರದ ಊದು ಬತ್ತಿಗಳು, ಎಲ್ಲಾ ನಮೂನೆ ಸಾಬೂನುಗಳು, ಒಳ್ಳೇ ತರದ [illegible] ಎಲ್ಲಾ ತರದ ಗ್ಲಾಸ್‌ವೇರ್ ಮತ್ತು ಕಟ್ಲರಿ ಸಾಮಾನುಗಳೂ, ಬ್ಲೇಕ್‌ಬರ್ಡ್, ಸ್ವಾನ್ ಮತ್ತು ನೆಪ್ಚ್ಯೂನ್ ಪೇನುಗಳೂ, ಸಿಂಗರ್ ಹೊಲಿಯುವ ಯಂತ್ರಕ್ಕೆ ಉಪಯೋಗಿಸುವ ತರತರದ ಸೂಜಿಗಳ ವಗ್ಯೆರೆ ಕಡಿಮೆ ದರಕ್ಕೇನೇ ಪಡೆಯಬಹುದು

ಮೆಟಲ್ ಟೆಲ್ಕು, ಟೊರ್ಚ್, ಸಿಗ್ನಲ್ [illegible] ಮೆಟಲ್, ಇಂಗ್ಲೀಷ್ ಮೇಕ್ ಯೆವರೆಡಿ ಹೇಂಡ್ ಲೇಂಪ್ ಮುಂತಾದ ಅನೇಕ ನಮೂನೆಯ ಇಲೆಕ್ಟ್ರಿಕ್ ದೀಪಗಳೂ, ಅವಕ್ಕೆ ಉಪಯೋಗಿಸುವ, ಕೊಹಿನೂರ್ ಡ್ಯಾಮನ್ [illegible], ಮೆಟಲು, ಡೇಫಾ, ಪ್ರಿಸಿಸಿಯಾ, ಸೂಪರ್ [illegible] ಮೊದಲಾದ ನಮೂನೆವಾರು ಬೆಟ್ರಿಗಳೂ, ಎಲ್ಲಾ ತರದ [illegible] ಬಲ್ಬುಗಳೂ, ಯಾವಾಗಲೂ ಸುಲಭ ಕ್ರಯಕ್ಕೆ ದೊರೆಯುತ್ತವೆ

ಪೆರಿ ಎಂಡ್ ಕಂಪೆನಿಯ ಪೆನ್ಸಿಲ್ [illegible], ಜೇಕ್ [illegible] ಬಿಸ್ಕುಟುಗಳೂ, ರಖಮಾಗಿಯೂ, ಚಿಲ್ಲರೆಯಾಗಿಯೂ ಮಿತವಾದ ಕ್ರಯಕ್ಕೆ ಪಡೆಯಬಹುದು

ವೆಸ್ಟ್ ಎಂಡ್ ಕಂಪೆನಿಯ ಪೋಕೆಟ್ ವಾಚುಗಳೂ, ಇತರ ಕಂಪೆನಿಗಳ ಲೀವರ್ ಸಿಲಿಂಡರ್ ಮೂವ್ಮೆಂಟಿನ ಪೋಕೆಟ್ ಮತ್ತು ರಿಷ್ಟ್ ವಾಚುಗಳೂ, ಎಲಾರಂ ಮತ್ತು 'ಟಿ ಪೀಸು' ಗಳೂ, ರೋಲ್ಡ್ ಗೋಲ್ಡ್ ಮತ್ತು ನಿಕ್ಕಲ್ [illegible] ಪೋಕೆಟ್ ಮತ್ತು ರಿಷ್ಟ್ ವಾಚಿನ [illegible] ಗಳೂ, ರಿಷ್ಟ್ ವಾಚಿನ ಬ್ಯಾಂಡ್, ಸಿಲ್ಕ್ ಮತ್ತು ಲೆದರ್ ಸ್ಟ್ರೇಪುಗಳೂ, ಇದರ ಎಲ್ಲಾ ತರದ ಉಪಕರಣಗಳೂ ಕಂಪೆನಿಯ ಕ್ರಯಕ್ಕೆ ಕಿಂಚಿತ್ ಮುನಾಫೆಯ ಮೇಲೆ ಮಾರಲ್ಪಡುತ್ತವೆ

ವಿಳಾಸ:— ಭಂಡಾರಿ ದಾಮೋದರ ಶಾನುಭಾಗ ಎಂಡ್ ಕೋ.
ಜನರಲ್ ಮರ್ಚೆಂಟ್ಸ್, ಕುಂದಾಪುರ, ದ. ಕ.

ಕಿವುಡುತನ

'ಕಿವಿಯೊಳಗಿಂದ [illegible] ಬರುವುದು [illegible] ಭಯಂಕರ ಸೋಲ್ಪು, ಮತ್ತು ಕಿವುಡುತನ [illegible] ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ [illegible] ಪರೀಕ್ಷಿಸಿದ [illegible]. [illegible] ದರು ಹೆಚ್ಚಾಗಿರುವರು. ಫಾಯದೆಯಾಗದಿದ್ದರೆ [illegible] ಬೆಲೆ ರು. ೨

ವಿಳಾಸ — [illegible]
23 [illegible]

ಕೋ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

* * *

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

[illegible] ತಯಾರಿಸಿದ ಹೊಸ [illegible] ರಾವ್ [illegible] ಪಠ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ ಐದನೇ ದರ್ಜೆಯ [illegible] ಮತ್ತು ನೀತಿಬೋಧೆ

ಎರಡನೇ ಮೂರನೇ ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ [illegible]

[illegible] ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ

[illegible] ಚರಿತ್ರೆ ಮತ್ತು [illegible] ಅಷ್ಟಕಥೆ [illegible] ವ್ಯಾಕರಣ [illegible]

ಪುಸ್ತಕ ದೊರೆಯುವ ಸ್ಥಳ —
ಶಾರದಾ ಭಾಷಾ[illegible],
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



[illegible] ಸಾರ್ಸಪರಿಲ್ಲಾ

ಶ್ರೇಷ್ಠ [illegible] ಔಷಧ [illegible] ಉಪಯೋಗಿಸು [illegible]

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
[illegible] ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
[illegible] ಕೆಮಿಸ್ಟ್ಸ್ [illegible] ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ [illegible]] ಮುಂಬಯಿ.

ಮಾರಾಟಕ್ಕಿವೆ! ಮಾರಾಟಕ್ಕಿವೆ!!

[illegible] ಕೋರ್ಟಿನವರಿಗೂ ಬೇಕಾಗುವಂತಹ

ಚರ್ ರೋಲ್ ಗಳು
ಮೂರು ಸ್ವಾಚೆನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ [illegible]
[illegible]

ಮ್ಯನೇಜರ್
[illegible]

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

REEL-11

SWADESHABHIMANI

CONTD FROM:

16 MAY - 1930

TO

9 SEPTEMBER-1932

D.V.
27.3.80

CONTD IN NEXT REEL

MICROFILMED BY
NEHRU MEMORIAL MUSEU
AND LIBRARY
TEEN MURTI HOUSE
NEW DELHI